ಬ್ರಾಹ್ಮೀ ಲಿಪಿ ಮತ್ತು ಸಿಂಧೂ ಸಂಸ್ಕೃತಿ



ಬ್ರಾಹ್ಮೀಲಿಪಿ ಮತ್ತು ಸಿಂಧೂ ಸಂಸ್ಕೃತಿ

ಕೇಂದ್ರ ಸರಕಾರದ ನಿವೃತ್ತ ಪ್ರಧಾನ ಶಾಸನತಜ್ಞ

ಡಾಕ್ಟರ್ ಜಿ. ಎಸ್. ಗಾಈ, ಎಮ್. ಎ. ಪಿಎಚ್. ಡಿ.

ಅವರ

ಮುನ್ನುಡಿ ಸಹಿತ

ಲೇಖಕ:

ಬಸ್ತಿ ಪುಂಡಲೀಕ ವೆಂಕಟೇಶ ಶೇಣೈ

ರಾಷ್ಟ್ರಭಾಷಾ ವಿಶಾರದ

ಉರ್ವ ಚಿಲಿಂಬಿ, ಮಂಗಳೂರು - ೫೭೫ ೦೦೬

ಶಕವರ್ಷ ೧೮೯೯

★

ಪ್ರಕಾಶಕರು:

ಶ್ರೀ ಲಲಿತಾ ಪ್ರಾಚ್ಯ ಸಂಶೋಧನಾಲಯ

ಉರ್ವ ಚಿಲಿಂಬಿ, ಮಂಗಳೂರು - ೫೭೫ ೦೦೬

ಬೆಲೆ: ರೂ. 15-00

22.50

ಮೊದಲನೆಯ ಆವೃತ್ತಿ ೧೦೦೦ ಪ್ರತಿಗಳು

ಮುದ್ರಕರು:

ಶ್ರೀ ಗಣೇಶ್ ಪ್ರಿಂಟರ್ಸ್,
ಅಳಕೆ, ಮಂಗಳೂರು–575 003
ಫೋನ್: 3326 (ಆಫೀಸು)
6478 (ನಿವಾಸ)

ಸಮರ್ಪಣೆ

ಬ್ರಾಹ್ಮೀ ವರ್ಣಮಾಲೆಯ ಮೂಲವನ್ನು ಮತ್ತು ಸಿಂಧೂ ಸಂಸ್ಕೃತಿಯ ವಾಸ್ತವಿಕ ಇತಿಹಾಸವನ್ನು ಅನ್ವೇಷಿಸುವುದರಲ್ಲಿ ಶ್ರಮಿಸಿದ ಸಕಲ ವಿದ್ವಾಂಸರಿಗೆ ನನ್ನ ಈ ಕೃತಿಯನ್ನು ಶ್ರದ್ಧಾಭಾವದಿಂದ ಸಮರ್ಪಿಸಿದ್ದೇನೆ.

—ಬಸ್ತಿ ಪುಂಡಲೀಕ ವೆಂಕಟೇಶ ಶೆಣಾಯ್.

ಮುನ್ನುಡಿ

"ಬ್ರಾಹ್ಮೀ ಲಿಪಿ ಮತ್ತು ಸಿಂಧೂ ಸಂಸ್ಕೃತಿ" ಎಂಬ ಈ ಗ್ರಂಥದಲ್ಲಿ ಶ್ರೀ ಬಸ್ತಿ ಪುಂಡಲೀಕ ಶೇಣಾಇ ಅವರು ಅನೇಕ ಮಹತ್ವದ ವಿಚಾರಗಳನ್ನು ಮಂಡಿಸಿದ್ದಾರೆ. ಸಿಂಧೂ ಕಣಿವೆಯ ಸಂಸ್ಕೃತಿ ಹಾಗೂ ವೈದಿಕ ಸಂಸ್ಕೃತಿಯ ಕುರಿತು ಪಾಶ್ಚಾತ್ಯ ವಿದ್ವಾಂಸರು ಮತ್ತು ಅವರನ್ನು ಅನುಸರಿಸಿದ ಭಾರತೀಯ ವಿದ್ವಾಂಸರು ಅನೇಕ ವರ್ಷಗಳಿಂದ ಪ್ರತಿಪಾದಿಸುತ್ತ ಬಂದಿರುವ ಸಿದ್ಧಾಂತಗಳು ಸರಿಯಿಲ್ಲವೆಂದು ತೋರಿಸಿಕೊಡುವ ಪ್ರಯತ್ನವನ್ನು ಈ ಗ್ರಂಥದಲ್ಲಿ ಮಾಡಿದ್ದಾರೆ. ಆರ್ಯರು ಮಧ್ಯ ಆಶಿಯಾದಿಂದ ಭಾರತಕ್ಕೆ ಸುಮಾರು ಕ್ರಿಸ್ತಪೂರ್ವ ೧೫೦೦ರಲ್ಲಿ ಆಗಮಿಸಿದರೆಂದೂ ಅವರು ಭಾರತದಲ್ಲಿ ಮೊದಲು ನೆಲೆಸಿದ್ದ ದ್ರಾವಿಡ ಜನರನ್ನು ಜಯಿಸಿ ದಕ್ಷಿಣಕ್ಕೆ ಅಟ್ಟಿದರೆಂದೂ ಭಾರತಕ್ಕೆ ಬಂದ ನಂತರ ವೇದಮಂತ್ರಗಳನ್ನು ರಚಿಸಿದರೆಂದೂ ವೈದಿಕ ಜನರಿಗೆ ಲಿಪಿಯು ಪರಿಚಯವಿರಲಿಲ್ಲವೆಂದೂ ವೇದಮಂತ್ರಗಳು ತಲೆತಲಾಂತರಗಳಿಂದ ಕಂಠಪಾಠವಾಗಿ ಸಾಗುತ್ತಾ ಬಂದಿವೆಯೆಂದೂ ಬ್ರಾಹ್ಮೀ ಲಿಪಿಯು ಸೆಮಿಟಿಕ್ ಲಿಪಿಗಳ ಮೂಲದಿಂದ ಉಗಮವಾಗಿ ಹಿಂದಿನಿಂದ ಭಾರತದಲ್ಲಿ ಮಾರ್ಪಾಟು ಹೊಂದಿ ಉಪಯೋಗಿಸಲ್ಪಟ್ಟಿತೆಂದೂ ಸಿಂಧೂ ಕಣಿವೆಯ ಸಂಸ್ಕೃತಿಯು ಆರ್ಯರಿಗೆ ಸಂಬಂಧಪಟ್ಟಿದ್ದಲ್ಲವೆಂದೂ ಅದು ಆರ್ಯರು ಭಾರತಕ್ಕೆ ಬರುವ ಮೊದಲೇ ಸ್ಥಾಪಿತವಾದದ್ದೆಂದೂ ಅನೇಕ ಪಾಶ್ಚಾತ್ಯ ಹಾಗೂ ಭಾರತೀಯ ವಿದ್ವಾಂಸರು ಅಭಿಪ್ರಾಯಪಟ್ಟಿದ್ದಾರೆ. ವೈದಿಕ ಸಾಹಿತ್ಯ ಸಂಸ್ಕೃತಿ ಕುರಿತು ಆಳವಾಗಿ ಅಭ್ಯಸಿಸಿದ ಶ್ರೀ ಪುಂಡಲೀಕ ಶೆಣಾಇ ಅವರು ಈ ಅಭಿಪ್ರಾಯಗಳು ಆಧಾರರಹಿತವೆಂದೂ ಪೂರ್ವಗ್ರಹಪೀಡಿತವಾದುವೆಂದೂ ಈ ಗ್ರಂಥದಲ್ಲಿ ತೋರಿಸಿ ಕೊಟ್ಟಿದ್ದಾರೆ. ಆರ್ಯರ ಮೂಲಸ್ಥಾನವು ಉತ್ತರ ಧ್ರುವ ಪ್ರದೇಶವಾಗಿದ್ದಿತೆಂಬ ಲೋಕಮಾನ್ಯ ಟಿಳಕ ಅವರ ಸಿದ್ಧಾಂತವನ್ನು ಸಮರ್ಥಿಸಿ ಅವರು ವೈದಿಕ ಗ್ರಂಥಗಳಿಂದ ಅನೇಕ ಆಧಾರಗಳನ್ನು ಒದಗಿಸಿದ್ದಾರೆ. ಲೋಕಮಾನ್ಯ ಟಿಳಕರು ವೇದಗಳಲ್ಲಿಯ ಕೆಲವು ಐತಿಹ್ಯಗಳು ಕ್ರಿ. ಶ. ಪೂರ್ವ ೬೦೦೦ ವರ್ಷಗಳಷ್ಟು ಪ್ರಾಚೀನವೆಂದು ಹೇಳಿದರೆ ಶ್ರೀ ಪುಂಡಲೀಕ ಶೆಣಾಇ ಅವರು ಬೇರೆ ಕೆಲವು ಐತಿಹ್ಯಗಳು ಅದಕ್ಕಿಂತಲೂ ಪ್ರಾಚೀನಕಾಲದ್ದೆಂದು ತೋರಿಸಿಕೊಡಲು ಯತ್ನಿಸಿದ್ದಾರೆ. ಅಗ್ನಿಯೇ ಆರ್ಯಜನರ ಪ್ರಧಾನ ದೇವರು. ಈ ಅಗ್ನಿಯನ್ನು ಕಂಡುಕೊಂಡ ನಂತರ ಅವನನ್ನು ಆರಾಧಿಸುವದಕ್ಕಾಗಿ ಮತ್ತು ಸ್ತುತಿಸುವದಕ್ಕಾಗಿ ಆರ್ಯರು ಪದ್ಯಗಳನ್ನು ರಚಿಸತೊಡಗಿದರು. ಹಿಂದಿನಿಂದ ಈ ಪದ್ಯಗಳನ್ನು ನೆನಪಿನಲ್ಲಿಟ್ಟುಕೊಳ್ಳುವದಕ್ಕಾಗಿ ಮೊದಲು ಚಿತ್ರಸಂಕೇತಗಳನ್ನು ನಿರ್ಮಿಸಿ ಆ ಮೇಲೆ ಪ್ರತಿಯೊಂದು ಧ್ವನಿಗೆ ಒಂದು ನಿಶ್ಚಿತವಾದ ಚಿಹ್ನೆಯಿರುವಂಥ ಬ್ರಾಹ್ಮೀಲಿಪಿಯನ್ನು ನಿರ್ಮಿಸಿದರೆಂದು ಶ್ರೀ ಪುಂಡ

ಲೀಕ ಶೆಣಾಇ ಅವರು ಪ್ರತಿಪಾದಿಸಿದ್ದಾರೆ. ಮತ್ತು ವೇದಕಾಲದ ಆರ್ಯಜನರು ತಾವು ಪ್ರತಿದಿನ ಉಪಯೋಗಿಸುತ್ತಿದ್ದ ದೇವರ ಪ್ರತೀಕಗಳ, ಯಜ್ಞಚಿತಿಗಳ ಮತ್ತು ಯಜ್ಞದ ಉಪಕರಣಗಳ ಆಕೃತಿಗಳಿಂದಲೇ ಈ ಬ್ರಾಹ್ಮೀಲಿಪಿಯ ವರ್ಣಮಾಲೆಯನ್ನು ನಿರ್ಮಿಸಿದರೆಂದು ಸೋದಾಹರಣವಾಗಿ ಸಿದ್ಧಪಡಿಸಲು ಯತ್ನಿಸಿದ್ದಾರೆ. ಅಂದರೆ ಬ್ರಾಹ್ಮೀಲಿಪಿಯು ಆರ್ಯರಿಂದಲೇ ನಿರ್ಮಿತವಾದುದೆಂದೂ ಸೆಮಿಟಿಕ್‌ದಂಥ ಬೇರೆ ಲಿಪಿಯ ಪ್ರಭಾವದಿಂದ ಹುಟ್ಟಿದುದಲ್ಲವೆಂದೂ ಅಭಿಪ್ರಾಯಪಟ್ಟಿದ್ದಾರೆ. ಅಷ್ಟೇ ಅಲ್ಲದೆ ಈ ಬ್ರಾಹ್ಮೀಲಿಪಿಯ ಚಿಹ್ನೆಗಳಿಂದಲೇ ಪ್ರಾಚೀನ ಯವನಾನಿ (ಗ್ರೀಕ್) ಲಿಪಿಯು ಉದ್ಭವಿಸಿದೆಯೆಂದೂ ತೋರಿಸಿಕೊಟ್ಟಿದ್ದಾರೆ.

ವೇದ ಮಂತ್ರಗಳನ್ನು ಬ್ರಾಹ್ಮೀಲಿಪಿಯಲ್ಲಿ ಬರೆದ ಆರ್ಯರು ಸಿಂಧೂ ಸಂಸ್ಕೃತಿಯ ಬಿಲ್ಲೆಗಳನ್ನು ಕಣ್ಣಾರೆ ಕಂಡಿದ್ದರೆಂದೂ ಆ ಬಿಲ್ಲೆಗಳ ಮೇಲಿರುವ ಚಿತ್ರ ಸಂಕೇತಗಳ ಯಥಾವತ್ತಾದ ವರ್ಣನೆಯು ವೇದಗಳಲ್ಲಿರುವುದಾಗಿಯೂ ಶ್ರೀ ಪುಂಡಲೀಕ ಶೆಣಾಇ ಅವರು ಸೋದಾಹರಣವಾಗಿ ಪ್ರತಿಪಾದಿಸಿದ್ದಾರೆ. ಆದುದರಿಂದ ಸಿಂಧೂ ಸಂಸ್ಕೃತಿಯು ಸಂಪೂರ್ಣವಾಗಿ ಆರ್ಯ ಜನರಿಗೆ ಸೇರಿದುದೆಂದು ತೋರಿಸಿಕೊಟ್ಟಿದ್ದಾರೆ. ಅಂತು ಶ್ರೀಮಾನ್ ಪುಂಡಲೀಕ ಶೆಣಾಇ ಅವರು ವಿಶಾಲವಾದ ವೈದಿಕ ಸಾಹಿತ್ಯವನ್ನು ಹೊಸ ದೃಷ್ಟಿಯಿಂದ ಕೂಲಂಕಷವಾಗಿಯೂ ಆಳವಾಗಿಯೂ ಅಭ್ಯಸಿಸಿ ಆರ್ಯರಿಂದಲೇ ಬ್ರಾಹ್ಮೀಲಿಪಿಯೂ ಸಿಂಧೂ ಸಂಸ್ಕೃತಿ ಮತ್ತು ಲಿಪಿಯೂ ನಿರ್ಮಿಸಲ್ಪಟ್ಟಿವೆಯೆಂಬ ಸಿದ್ಧಾಂತವನ್ನು ಈ ಗ್ರಂಥದಲ್ಲಿ ಮಂಡಿಸಿದ್ದಾರೆ. ಈ ಸಿದ್ಧಾಂತವನ್ನು ಕೆಲವು ವಿದ್ವಾಂಸರು ಒಪ್ಪಿಕೊಳ್ಳದಿದ್ದರೂ ಶ್ರೀ ಪುಂಡಲೀಕ ಶೆಣಾಇ ಅವರ ಪ್ರಯತ್ನವು ಸ್ತುತ್ಯವಾಗಿದ್ದು ಅವರ ಅಭಿಪ್ರಾಯ-ವಿಚಾರಗಳು ಗಮನಾರ್ಹವಾಗಿದೆಯೆಂದು ಹೇಳಬಹುದು. ಅದಕ್ಕಾಗಿ ಅವರನ್ನು ಅಭಿನಂದಿಸಿ ಸಹೃದಯ ವಾಚಕರು ಈ ಗ್ರಂಥವನ್ನು ಸ್ವಾಗತಿಸುವರೆಂದು ಹಾರೈಸುತ್ತೇನೆ.

ಮೈಸೂರು,
೨೮-೪-೧೯೭೭

—ಜಿ. ಎಸ್ ಗಾಯಿ,
ಕೇಂದ್ರ ಸರ್ಕಾರದ ನಿವೃತ್ತ ಪ್ರಧಾನ ಶಾಸನ ತಜ್ಞರು.

ಪ್ರಸ್ತಾವನೆ


ನನಗೆ ತಿಳಿದು ಬಂದ ಕೆಲವು ಐತಿಹಾಸಿಕ ತಥ್ಯಗಳನ್ನು ನನ್ನ ದೇಶಬಾಂಧವರಿಗೂ ತಿಳಿಸಬೇಕೆಂಬ ಹಂಬಲವು ನನ್ನನ್ನು ಈ ಗುರುತರವಾದ ಗ್ರಂಥ ಲೇಖನದ ಕಾರ್ಯದಲ್ಲಿ ತೊಡಗುವಂತೆ ಮಾಡಿದೆ. ಆದರೆ ನಾನು ಪದವೀಧರ ವಿದ್ವಾಂಸನೂ ಅಲ್ಲ, ನುರಿತ ಲೇಖಕನೂ ಅಲ್ಲ. ಆದುದರಿಂದ ನನ್ನ ಈ ಕೃತಿಯಲ್ಲಿ ಹಲವು ಲೋಪ-ದೋಷಗಳೂ ಕೊಂಚ ಪಾರುಷ್ಯವೂ ಇರಬಹುದಾಗಿದೆ. ಸುಜ್ಞರಾದ ವಾಚಕರು ನನ್ನ ಆ ನ್ಯೂನತೆಯನ್ನು ಸ್ಮರಣೆಯಲ್ಲಿಟ್ಟು ಅಂಥ ದೋಷಗಳನ್ನು ಕಡೆಗಣಿಸಬೇಕಾಗಿಯೂ, ಸಾರವುಳ್ಳುದೇನಾದರೂ ಇದ್ದಲ್ಲಿ ಅದನ್ನು ಮಾತ್ರ ಗ್ರಹಿಸಬೇಕಾಗಿಯೂ ಮೊತ್ತಮೊದಲು ಪ್ರಾರ್ಥಿಸುತ್ತೇನೆ.

ನನ್ನ ಈ ಅನ್ವೇಷಣಾತ್ಮಕ ಕೃತಿಯು ಒಂದು ಆಕಸ್ಮಿಕ ಘಟನೆಯಾಗಿರುತ್ತದೆ. ನಾನು ಮೂಲತ: ಅನ್ವೇಷಕನೂ ಅಲ್ಲ ಲೇಖಕನೂ ಅಲ್ಲ. ವ್ಯಾಪಾರದಲ್ಲಿ ತೊಡಗಿರುತಿದ್ದ ನನಗೆ ಸಮಯಾವಕಾಶ ದೊರೆತಾಗ ನಾನಾ ವಿಷಯಗಳಿಗೆ ಸಂಬಂಧಿಸಿದ ಗ್ರಂಥಗಳನ್ನೋದುವ ಹವ್ಯಾಸವಿದ್ದುದರಿಂದ ಪಾಶ್ಚಾತ್ಯ ವಿದ್ವಾಂಸರು ಪ್ರಾಚೀನ ಭಾರತೀಯರಲ್ಲಿ ಮುಖ್ಯವಾಗಿ ವೈದಿಕ ಜನರಲ್ಲಿ ಲಿಪಿಯು ಪ್ರಚಲಿತವಿರಲಿಲ್ಲವೆಂತಲೂ, ಚಕ್ರವರ್ತಿ ಅಶೋಕನು ತನ್ನ ಧರ್ಮಶಾಸನಗಳನ್ನು ಬರೆಯಿಸಲು ಉಪಯೋಗಿಸಿದ ಬ್ರಾಹ್ಮೀ ಎಂಬ ಹೆಸರಿನ ವರ್ಣಮಾಲೆಯು ಮೂಲದಲ್ಲಿ ಭಾರತೀಯರಿಂದ ಸ್ವತಂತ್ರವಾಗಿ ನಿರ್ಮಿಸಲ್ಪಟ್ಟುದಲ್ಲವೆಂತಲೂ ಆದರ ಮೂಲವು ಸೆಮಿಟಿಕ್ ವರ್ಗದ ವರ್ಣಮಾಲೆಯಾಗಿದ್ದಿತೆಂತಲೂ, ಋಗ್ವೇದದ ಮಂತ್ರಗಳು ಸಾಧಾರಣ ಶಕಪೂರ್ವ ೧೨೦೦ ವರ್ಷಗಳ ಈಚೆ ಕಡೆಯಿಂದ ನಿರ್ಮಿಸಲ್ಪಡತೊಡಗಿದ್ದುವೆಂತಲೂ ವೈದಿಕ ಜನರು ಜ್ಯೋತಿಷವನ್ನು ಪರರಿಂದ ಕಲಿತಿದ್ದರೆಂತಲೂ ವಾದಿಸಿದುದು ಗೊತ್ತಾಗಿತ್ತು. ಹಾಗಾಗಿ, ನನ್ನಲ್ಲಿ ಪಾಶ್ಚಾತ್ಯ ವಿದ್ವಾಂಸರ ಅಂಥ ವಾದಗಳು ಸತ್ಯವೇ? ಎಂಬುದನ್ನು ಕಂಡುಕೊಳ್ಳಬೇಕೆಂಬ ಕುತೂಹಲವು ಕೆರಳಿದ್ದಿತು. ಅಂಥ ಕುತೂಹಲದ ಪರಿಣಾಮ-ಫಲವೇ ಈ ಗ್ರಂಥವಾಗಿದೆ. ಅಂದರೆ ಸತ್ಯದ ಅನ್ವೇಷಣವೇ ಈ ಗ್ರಂಥದ ಉದಿಷ್ಟ ಲಕ್ಷ್ಯವಾಗಿದೆ.



ಹಾಗೆ ನಾನು ನನ್ನ ಅನ್ವೇಷಣದ ಮೊದಲ ಹಂತದಲ್ಲಿ ಬ್ರಾಹ್ಮೀಲಿಪಿಯ ಮೂಲಕ್ಕೆ ಸಂಬಂಧಿಸಿದ ಉಲ್ಲೇಖಗಳು ವೈದಿಕ ಗ್ರಂಥಗಳಲ್ಲಿ ಇರಬಹುದೆಂಬ ನಂಬಿಕೆಯಿಂದ ವೈದಿಕ ಸಾಹಿತ್ಯದ ಅಧ್ಯಯನದಲ್ಲಿ ತೊಡಗಿದ್ದಾಗ ಮುಂಡಕೋಪ-ನಿಷತ್ತಿನಲ್ಲಿ ಓಂಕಾರದ ಕುರಿತಾಗಿ ಬಂದಿರುವ ವ್ಯಾಖ್ಯಾನದ ಮೇಲಿಂದ ಓಂಕಾರದ ಚಿಹ್ನೆಯು ನಾಲ್ಕು ಕಾಲುಗಳಿರುವ ಬ್ರಹ್ಮದಿಂದ ಅಥವಾ ಬ್ರಹ್ಮ ಎಂದು ಕರೆಯ

ಲ್ಪಡುತಿದ್ದ ಯಾವುದೋ ಒಂದು ನಾಲ್ಕು ಕಾಲುಗಳ ಆಕೃತಿಯಿಂದ ಹುಟ್ಟಿದ್ದಿತೆಂಬ ಅಂಶವು ಗೊತ್ತಾಯಿತು. ತರುವಾಯ ನಾನು ರಾವ್ ಬಹಾದ್ದೂರ್ ಗೌರೀಶಂಕರ ಹೀರಾಚಂದ ಓರ್ಝಾ ಎಂಬ ವಿದ್ವಾಂಸರು ರಚಿಸಿದ "ಭಾರತೀಯ ಪ್ರಾಚೀನ ಲಿಪಿ ಮಾಲಾ" ಎಂಬ ಗ್ರಂಥವನ್ನು ತರಿಸಿ ಅದರೊಳಗಿನ ಬ್ರಾಹ್ಮೀ ವರ್ಣಮಾಲೆಯನ್ನು ಪರಿಶೀಲಿಸುತಿದ್ದಾಗ ಅದರೊಳಗಿನ "ಕ" ವರ್ಣದ ಚಿಹ್ನೆಯು + ಹೀಗೆ ನಾಲ್ಕು ಕಾಲುಗಳಿರುವುದಾಗಿ ಕಂಡು ಬಂತು. ಮತ್ತು ಸಂಸ್ಕೃತ ಶಬ್ದಕೋಶ ಗಳಲ್ಲಿ "ಕ" ಎಂಬುದಕ್ಕೆ ಬೇರೆ ಹಲವು ಅರ್ಥಗಳೊಂದಿಗೆ "ಪ್ರಜಾಪತಿ ಮತ್ತು ಬ್ರಹ್ಮ" ಎಂಬ ಅರ್ಥಗಳೂ ಇದ್ದುದರ ಮೇಲಿಂದ ಮುಂಡಕೋಪನಿಷತ್ತಿನಲ್ಲಿ ವರ್ಣಿಸಲಾದ ನಾಲ್ಕು ಕಾಲುಗಳ ಬ್ರಹ್ಮವು + ಇದೇ ಎಂದು ಸ್ಪಷ್ಟವಾಯಿತು.

ಪಂಡಿತ ಓರ್ಝಾ ಅವರ ಗ್ರಂಥದ ಅಧ್ಯಯನದಿಂದ ನನಗೆ ಬ್ರಾಹ್ಮೀ ವರ್ಣಮಾಲೆಯ ಮೂಲದ ಸಂಬಂಧದಲ್ಲಿ ಆ ಕಾಲದ ತನಕ ಯಾವ ಯಾವ ವಿದ್ವಾಂಸರು ಯಾವ ಯಾವ ಅಭಿಪ್ರಾಯಗಳನ್ನು ವ್ಯಕ್ತಗೊಳಿಸಿದ್ದಾರೆಂಬುದು ಗೊತ್ತಾಯಿತಲ್ಲದೇ ನಾನು ಯಾವ ಬಗೆಯ ಪ್ರಶ್ನೆಗಳನ್ನು ಬಗೆಹರಿಸಬೇಕಾಗಿದೆ ಯೆಂಬುದರ ಅರಿವೂ ಆಯಿತು.

ನಾನು ಈ ಗ್ರಂಥದಲ್ಲಿ ಬ್ರಾಹ್ಮೀವರ್ಣಮಾಲೆಯ ಮೂಲ ಚಿಹ್ನೆಗಳೆಂದು ಸೂಚಿಸಿರುವ  ಈ ಆಕೃತಿಗಳು ಚಕ್ರ ವರ್ತಿ ಅಶೋಕನ ಧರ್ಮಶಾಸನಗಳಲ್ಲಿ ಸ್ವಲ್ಪವೂ ರೂಪಾಂತರವಾಗದೇ ಬಂದಿವೆ ಯಾದುದರಿಂದ ಬ್ರಾಹ್ಮೀವರ್ಣಮಾಲೆಯು ಆ ಆಕೃತಿಗಳಿಂದಲೇ ಹುಟ್ಟಿದ್ದಿತೆಂದು ಸಿದ್ಧಪಡಿಸುವುದು ಹೆಚ್ಚು ಶ್ರಮದ ಕಾರ್ಯವಾಗಿರಲಿಲ್ಲ. ಆದರೆ ಬ್ರಾಹ್ಮೀಲಿಪಿಯ ಹುಟ್ಟಿನ ಮತ್ತು ಪ್ರಚಲನದ ಸಂಬಂಧದಲ್ಲಿ ಪಾಶ್ಚಾತ್ಯ ವಿದ್ವಾಂಸರು ಮುಂದೊಡ್ಡಿದ್ದ ವಾದಗಳನ್ನು ಸಮರ್ಪಕವಾದ ರೀತಿಯಲ್ಲಿ ಖಂಡಿಸುವುದು ಮಾತ್ರ ಕೊಂಚ ಶ್ರಮದ ಕಾರ್ಯವಾಗಿತ್ತು. ಹೇಗೆಂದರೆ "ಶಕಪೂರ್ವ ಎಂಟನೆಯ ಶತ ಮಾನಕ್ಕಿಂತ ಮೊದಲು ಭಾರತೀಯರಲ್ಲಿ ಲಿಪಿಯು ಪ್ರಚಲಿತವಿರಲಿಲ್ಲ" ಎಂಬುದು ಪಾಶ್ಚಾತ್ಯ ವಿದ್ವಾಂಸರ ಪ್ರಮುಖ "ವಾದ"ವಾಗಿತ್ತು. ಆದುದರಿಂದ ನಾನು ಸೂಚಿಸಿರುವ ಆಕೃತಿಗಳು ಪಾಶ್ಚಾತ್ಯ ವಿದ್ವಾಂಸರು ನಿರ್ಧರಿಸಿದ ಕಾಲಮಾನಕ್ಕಿಂತ ಸಾವಿರಾರು ವರ್ಷಗಳಿಗೆ ಪ್ರಾಚೀನವಾದವುಗಳೆಂದು ಮಾತ್ರವಲ್ಲದೇ ಪ್ರಾಚೀನ ಕಾಲದ ಭಾರತೀಯರು ಆ ಆಕೃತಿಗಳನ್ನು ಉಪಯೋಗಿಸುತಿದ್ದರೆಂಬುದನ್ನೂ, ವೇದಪೂರ್ವಕಾಲದ ಜನರಲ್ಲಿ ಲಿಪಿಯು ಪ್ರಚಲಿತವಿದ್ದಿತೆಂಬುದನ್ನೂ ವೈದಿಕ ಪ್ರಮಾಣಗಳ ಆಧಾರದಿಂದ ಸಿದ್ಧಪಡಿಸಬೇಕಾಗಿತ್ತು.

ಹಾಗಾಗಿ ನಾನು ಜಗತ್ತಿನ ಲಿಖಿತ ಸಾಹಿತ್ಯದಲ್ಲಿ ಪ್ರಾಚೀನತಮವೆಂದು

ಸಿದ್ಧವಾಗಿರುವ ಋಗ್ವೇದದಲ್ಲಿ ಮತ್ತು ಅಷ್ಟೇ ಪ್ರಾಚೀನವೆನ್ನಬಹುದಾದ ಯಜುರ್ವೇದದ ತೈತ್ತಿರೀಯ ಸಂಹಿತೆಯಲ್ಲಿ ಲಿಪಿಗೆ ಸಂಬಂಧಪಟ್ಟ ಉಲ್ಲೇಖಗಳಿವೆಯೋ ಎಂಬುದನ್ನು ಕಂಡುಕೊಳ್ಳುವ ಉದ್ದೇಶದಿಂದ ಆ ಎರಡು ವೇದಗಳ ಅಧ್ಯಯನದಲ್ಲಿ ತೊಡಗಿದೆನು. ಆ ಅಧ್ಯಯನದ ಫಲವಾಗಿ ಋಗ್ವೇದದ ನಾಲ್ಕು ಋಚೆಗಳಲ್ಲಿ "ಅಕ್ಷರ" ಎಂಬ ಶಬ್ದವು "ಧ್ವನಿಸೂಚಕ ಚಿಹ್ನೆ ಅಥವಾ ವರ್ಣ" (=Letter) ಎಂಬರ್ಥದಲ್ಲಿ ಪ್ರಯೋಗಿಸಲ್ಪಟ್ಟಿರುವುದೂ ಬೇರೊಂದು ಋಚೆಯಲ್ಲಿ "ಅಷ್ಟ" ಎಂಬ ಶಬ್ದವು "ಎಂಟರ ಅಂಕೆ" ಎಂಬರ್ಥದಲ್ಲಿ ಪ್ರಯೋಗಿಸಲ್ಪಟ್ಟಿರುವುದೂ, ಯಜುರ್ವೇದದ ಒಂದು ಅನುವಾಕದಲ್ಲಿ ನಾನು ಸೂಚಿಸಿರುವ ಆಕೃತಿಗಳು ಯಜ್ಞ ಚಿತಿಗಳಿಗಾಗಿ ವಿಧಿಸಿರುವುದೂ ಗೊತ್ತಾಯಿತು. ಮಾತ್ರವಲ್ಲದೇ ಯಜ್ಞಗಳು ಮಂತ್ರಗಳಿಗಿಂತ ಪ್ರಾಚೀನಗಳೆಂಬುದೂ ಗೊತ್ತಾಯಿತು. ಅಂದರೆ  ಈ ಮೂರು ಆಕೃತಿಗಳ ಉಲ್ಲೇಖವು ತೈತ್ತಿರೀಯ ಬ್ರಾಹ್ಮಣದಲ್ಲಿಯೂ  ಈ ಐದು ಆಕೃತಿಗಳ ಉಲ್ಲೇಖವು ತೈತ್ತಿರೀಯ ಸಂಹಿತೆಯಲ್ಲಿಯೂ ಇರುವುದು ಗೊತ್ತಾಯಿತು. ಹಾಗಾಗಿ ಆ ಆಕೃತಿಗಳ ಪ್ರಾಚೀನತೆಯ ಮತ್ತು ಉಪಯೋಗದ ಪ್ರಶ್ನೆಯು ಹೆಚ್ಚಿನ ಕಷ್ಟವಿಲ್ಲದೇ ಬಗೆಹರಿಯಿತು.

ಹಾಗಾದರೂ ನಾನು ಯಜ್ಞಚಿತಿಗಳ ಉಪಯೋಗವನ್ನು ಮತ್ತು ಯಜ್ಞಗಳ ನಿರ್ವಹಣ ಕ್ರಮವನ್ನು ಸರಿಯಾಗಿ ಅರಿತುಕೊಳ್ಳುವುದು ಉಚಿತವೆಂದೆಣಿಸಿ ವೈದಿಕಸಾಹಿತ್ಯದ ವಿವರವಾದ ಅಧ್ಯಯನವನ್ನು ಮುಂದುವರಿಸಿದುದರಿಂದ ಆರ್ಯಜನರ ಪ್ರಾಚೀನ ಸಂಸ್ಕೃತಿಯ ಮತ್ತು ವೈದಿಕ ಧರ್ಮದ ಸಾಮಾನ್ಯ ಪರಿಚಯವೂ ಆಯಿತು. ಮುಂದೆ ಬ್ರಾಹ್ಮೀವರ್ಣಮಾಲೆಯಲ್ಲಿರುವ ವೈದಿಕ ಯಜ್ಞಚಿತಿಗಳ ಆಕೃತಿಗಳು ಸಿಂಧೂ ಕಣಿವೆಯ ಅಗೆತಗಳಲ್ಲಿ ದೊರಕಿದ ಹಾಲುಗಲ್ಲಿನ ಬಿಲ್ಲೆಗಳ ಮೇಲೂ ಇವೆಯೆಂದು ತಿಳಿದು ಬಂದುದರಿಂದ ಸಿಂಧೂ ಕಣಿವೆಯಲ್ಲಿ ಜರುಗಿದ ಅಗೆತಗಳಿಗೆ ಸಂಬಂಧಿಸಿದ ಸಾಹಿತ್ಯವನ್ನೂ ಓದಬೇಕಾಯಿತು. ಅದಕ್ಕಿಂತ ಮೊದಲು ನಾನು ವೈದಿಕ ಸಾಹಿತ್ಯದ ಅಧ್ಯಯನವನ್ನು ಮುಗಿಸಿದುದರಿಂದ ಸಿಂಧೂ ಕಣಿವೆಯ ಅಗೆತಗಳಲ್ಲಿ ಬೆಳಕಿಗೆ ಬಂದಿದ್ದ ಅವಶೇಷಗಳನ್ನು ಮತ್ತು ಬಿಲ್ಲೆಗಳ ಮೇಲಿನ ಚಿತ್ರ ಸಂಕೇತಗಳನ್ನು ಸರಿಯಾಗಿ ಗುರುತಿಸಿ ಅವುಗಳ ರಹಸ್ಯವನ್ನು ತಿಳಿದುಕೊಳ್ಳಲು ಸಾಧ್ಯವಾಯಿತು. ಅಂದರೆ ಸಿಂಧೂ ಬಿಲ್ಲೆಗಳ ಮೇಲಿನ ಚಿತ್ರಗಳು ವೇದಮಂತ್ರಗಳ ಸಾಂಕೇತಿಕ ನಿರೂಪಣಗಳೆಂದು ಸ್ಪಷ್ಟವಾಗಿ ಗೊತ್ತಾಯಿತು. ಹಾಗಾಗಿ ಆ ಮೊದಲು ಕೆಲವು ವಿದ್ವಾಂಸರು—ಸಿಂಧೂ ಸಂಸ್ಕೃತಿಯು ಆರ್ಯ ಜನರಿಗೆ ಸೇರಿದುದೆಂದು ಮಾಡಿದ ಊಹೆಯು ಸರಿಯೆಂದು ದೃಢಪಡಿಸಲು ಯೋಗ್ಯವಾದ ಪ್ರಮಾಣಗಳು ದೊರೆತಂತಾಯಿತು.

ಆದರೆ ನನ್ನ ಮೂಲ ಉದ್ದೇಶವು ಬ್ರಾಹ್ಮೀವರ್ಣಮಾಲೆಯ ವಾಸ್ತವಿಕ

ಮೂಲವಾವುದೆಂಬುದನ್ನು ಕಂಡು ಹಿಡಿಯುವುದಾಗಿದ್ದಿತೇ ಹೊರತು ಸಿಂಧೂ ಸಂಸ್ಕೃತಿಯು ಯಾವ ಜನಾಂಗಕ್ಕೆ ಸೇರಿದುದೆಂದು ಕಂಡು ಹಿಡಿಯುವುದಾಗಿರಲಿಲ್ಲ. ಪರಂತು ನನ್ನ ಅಧ್ಯಯನ ಮತ್ತು ಅನ್ವೇಷಣಗಳು ಮುಂದುವರಿದಂತೆ-ಪಾಶ್ಚಾತ್ಯ ವಿದ್ವಾಂಸರು ಉದ್ದೇಶಪೂರ್ವಕವಾಗಿ ಸಿಂಧೂ ಸಂಸ್ಕೃತಿಯನ್ನು ಆರ್ಯ ಪೂರ್ವ ಸಂಸ್ಕೃತಿಯೆಂದು ಸಾಧಿಸಲು ಹೆಣಗಾಡುತಿದ್ದರೆಂಬುದು ನಿಚ್ಚಳವಾಗಿ ಗೊತ್ತಾಯಿತು. ಆದುದರಿಂದ ಪಾಶ್ಚಾತ್ಯ ವಿದ್ವಾಂಸರ ಆ ಬಗೆಯ ಮಿಥ್ಯಾಪ್ರಚಾರವನ್ನು ಯೋಗ್ಯಪ್ರಮಾಣಗಳ ಆಧಾರದಿಂದ ಖಂಡಿಸಲು ನಾನು ಸಜ್ಜಾಗಬೇಕಾಯಿತು. ಮತ್ತು ಆ ಪ್ರಮಾಣಗಳ ಆಧಾರದಿಂದ ಸಿಂಧೂ ಸಂಸ್ಕೃತಿಯು ಆರ್ಯ ಜನರಿಗೆ ಸೇರಿದುದೆಂದು ನಿರ್ಣಯಿಸಬೇಕಾಯಿತು.

ಈ ಗ್ರಂಥದೊಳಗಿನ "ಆರ್ಯ ಜನರ ವೈದಿಕ ಸಂಸ್ಕೃತಿ" ಎಂಬ ಅಧ್ಯಾಯವು ಸಿಂಧೂ ಕಣಿವೆಯ ಅಗೆತಗಳಲ್ಲಿ ಬೆಳಕಿಗೆ ಬಂದಿರುವ ಪ್ರಾಚೀನ ಅವಶೇಷಗಳನ್ನು ಗುರುತಿಸಿ ಅರಿತುಕೊಳ್ಳಲು ನೆರವಾಗಬೇಕೆಂಬ ಉದ್ದೇಶದಿಂದ ಬರೆಯಲ್ಪಟ್ಟುದಾದುದರಿಂದ ಅದರಲ್ಲಿ ಆರ್ಯ ಸಂಸ್ಕೃತಿಯ ಎಲ್ಲ ಅಂಗಗಳು ಬಂದಿಲ್ಲ. ಮುಖ್ಯವಾಗಿ ವಿಜ್ಞಾನಕ್ಕೆ ಸಂಬಂಧಪಟ್ಟ ಅಂಶಗಳು ಬಂದಿಲ್ಲ. ಆದೇ ರೀತಿಯಲ್ಲಿ ಇತರ ಅಧ್ಯಾಯಗಳು ಕೂಡ ಪಾಶ್ಚಾತ್ಯ ವಿದ್ವಾಂಸರು ಪ್ರಚಾರ ಮಾಡಿದ ಮಿಥ್ಯಾಕಲ್ಪನೆಗಳನ್ನು ನಿರಾಕರಿಸುವ ಉದ್ದೇಶದಿಂದ ಬರಯಲ್ಪಟ್ಟವುಗಳಾಗಿರುವುದರಿಂದ ಅವುಗಳಲ್ಲಿ ಕೂಡ ವಿಸ್ತಾರವಾದ ವಿವರಗಳನ್ನು ಕೊಡಲು ಸಾಧ್ಯವಾಗಿಲ್ಲ. ಹಾಗಿದ್ದರೂ ಅವುಗಳಲ್ಲಿ ಕೊಟ್ಟಿರುವ ಸಂಕ್ಷಿಪ್ತ ವಿವರಗಳು ಪ್ರಮಾಣಯುಕ್ತಗಳಾಗಿರುವುದರಿಂದ ಅನ್ವೇಷಣದಲ್ಲಿ ಅಭಿರುಚಿಯುಳ್ಳವರಿಗೆ ಅವುಗಳಿಂದ ಕೊಂಚವಾದರೂ ಪ್ರಯೋಜನವಾದೀತೆಂದು ನಂಬಿದ್ದೇನೆ.

ವೇದಮಂತ್ರಗಳಲ್ಲಿ ಉಲ್ಲೇಖಿಸಲ್ಪಟ್ಟಿರುವ ಕೆಲವು ಐತಿಹ್ಯಗಳ ಪ್ರಾಚೀನ ಕಾಲಮಿತಿಯು ಶಕಪೂರ್ವ ಏಳುಸಾವಿರ ವರ್ಷಗಳಿಗಿಂತ ಹಿಂದೆ ಎಂದು ನಿರ್ಧರಿಸಲಾಗಿದೆಯಾದರೂ ಆ ಉಲ್ಲೇಖಗಳಿರುವ ಮಂತ್ರಗಳಾಗಲೀ, ಅವುಗಳ ಭಾಷೆಯಾಗಲೀ ಇತರ ಎಲ್ಲ ಮಂತ್ರಗಳಾಗಲೀ ಅಷ್ಟೇ ಪ್ರಾಚೀನವೆಂದು ನನ್ನ ಅಭಿಮತವಲ್ಲ. ಅರ್ಥಾತ್ ಈಗ ನಮಗೆ ದೊರೆಯುವ ಋಗ್ವೇದದ ಮಂತ್ರಗಳಲ್ಲಿ ಶಕಪೂರ್ವ ಮೂರು ಸಾವಿರ ವರ್ಷಗಳಿಂದ–ಶಕಪೂರ್ವ ಎಂಟುನೂರು ವರ್ಷಗಳ ತನಕದ ಭಾಷೆಯ ಮಾದರಿಗಳಿವೆಯೆಂಬುದರಲ್ಲಿ ಸಂದೇಹವಿಲ್ಲ.

ನಾನು ಈ ಗ್ರಂಥಲೇಖನದ ಪೂರ್ವಸಿದ್ಧತೆಗಾಗಿ ಮತ್ತು ಜ್ಞಾನಾರ್ಜನೆಗಾಗಿ ನೂರಾರು ಲೇಖಕರ ನೂರಾರು ಗ್ರಂಥಗಳನ್ನು ಉಪಯೋಗಿಸಿದ್ದೇನೆ. ಮತ್ತು ಅವುಗಳಲ್ಲಿ ಅಧಿಕಾಂಶ ಗ್ರಂಥಗಳ ಹೆಸರುಗಳನ್ನು ಈ ಗ್ರಂಥದಲ್ಲಿ ಕೊಟ್ಟಿದ್ದೇನೆ.

ಆ ಎಲ್ಲ ಗ್ರಂಥಗಳಿಂದ ನನಗೆ ತುಂಬಾ ಸಹಾಯವಾಗಿದೆ. ಆದುದರಿಂದ ನಾನು ಆ ಎಲ್ಲ ಗ್ರಂಥಕರ್ತರಿಗೆ ಋಣಿಯಾಗಿದ್ದೇನೆ.

ನಾನು ಓದಿದ ಅನ್ವೇಷಣಾತ್ಮಕ ಗ್ರಂಥಗಳಲ್ಲಿ ಮೊತ್ತಮೊದಲನೆಯದು ದಿವಂಗತ ಲೋಕಮಾನ್ಯ ಬಾಲಗಂಗಾಧರ ತಿಲಕ ಅವರು ಬರೆದ "The Arctic Home in the Vedas" ಎಂಬುದಾಗಿತ್ತು. ನಾನು ಆ ಗ್ರಂಥವನ್ನು ನನ್ನ ಚಿಕ್ಕಂದಿನಲ್ಲಿಯೇ ಮನನ ಮಾಡಿದುದರಿಂದ ಋಗ್ವೇದದ ಮಂತ್ರಗಳಲ್ಲಿ ಅಡಗಿದ್ದ ರಹಸ್ಯಗಳನ್ನು ಅರಿತುಕೊಳ್ಳುವುದು ಸುಲಭವಾಯಿತಲ್ಲದೇ ಸಿಂಧೂ-ಬಿಲ್ಲೆಗಳ ಮೇಲಿನ ಚಿತ್ರಸಂಕೇತಗಳನ್ನು ಸರಿಯಾಗಿ ಗುರುತಿಸುವುದು ಕೂಡ ಸಾಧ್ಯವಾಯಿತು. ಅಂದರೆ ಸಿಂಧೂ ಸಂಸ್ಕೃತಿಯು ಆರ್ಯ ಜನರಿಗೆ ಸೇರಿದುದೆಂದು ಸಂದೇಹಕ್ಕೆಡೆ ಯಿಲ್ಲದ ರೀತಿಯಲ್ಲಿ ನಿರ್ಧರಿಸಲಾಗುವಂತೆ ವೇದಮಂತ್ರಗಳಲ್ಲಿ ಅಡಗಿರುವ ರಹಸ್ಯಗಳನ್ನು ಅರಿತುಕೊಳ್ಳುವುದರಲ್ಲಿ ನನಗೆ ಲೋಕಮಾನ್ಯರ ಆ ಗ್ರಂಥದಿಂದಾದ ಸಹಾಯವು ಅಪರಿಮಿತವಾಗಿದೆ. ಆದುದರಿಂದ ನಾನು ದಿವಂಗತ ಲೋಕಮಾನ್ಯರ ಆತ್ಮಕ್ಕೆ ವಿನೀತ ಭಾವದಿಂದ ಶ್ರದ್ಧಾಂಜಲಿಗಳನ್ನು ಅರ್ಪಿಸುತಿದ್ದೇನೆ.

ಹಾಗೆಯೇ ವೇದಮಂತ್ರಗಳನ್ನು ಇಂಗ್ಲೀಷಿಗೆ ಭಾಷಾಂತರಿಸಿ ಸಂಸ್ಕೃತ ಭಾಷೆ ತಿಳಿಯದ ಜನರಿಗೂ ವೇದಜ್ಞಾನವು ಲಭಿಸುವಂತೆ ಮಾಡಿದ ಪ್ರೊ. ರಾಲ್ಫ್ ಡಿ. ಎಚ್. ಗ್ರಿಫಿಥ್ ಎಂಬ ವಿದ್ವಾಂಸರಿಗೆ ನಾನು ಮಾತ್ರವಲ್ಲ ವೇದಾಭಿಮಾನಿ ಗಳಾದ ಭಾರತೀಯರೆಲ್ಲರೂ ಕೃತಜ್ಞತಾಪೂರ್ವಕ ಧನ್ಯವಾದಗಳನ್ನು ಅರ್ಪಿಸ ಬೇಕಾಗಿದೆ. ಏಕೆಂದರೆ ಯಾವ ಬಗೆಯ ಪೂರ್ವಗ್ರಹಕ್ಕೂ ಒಳಗಾಗದೇ ವೇದ ಮಂತ್ರಗಳಿಗೆ ಸಾಧ್ಯವಿದ್ದಷ್ಟು ಸರಿಯಾದ ಅರ್ಥಗಳನ್ನು ಹೇಳುವಲ್ಲಿ ಅವರು ತುಂಬಾ ಶ್ರಮವಹಿಸಿದ್ದಾರೆ.

ಹಾಗೆಯೇ ಸಿಂಧೂ ಕಣಿವೆಯ ಅಗೆತಗಳು ಪ್ರಾರಂಭವಾದ ತರುವಾಯ ಆ ಅಗೆತಗಳಲ್ಲಿ ಬೆಳಕಿಗೆ ಬಂದಿದ್ದ ಅವಶೇಷಗಳ ಮತ್ತು ಸಿಂಧೂ ಸಂಸ್ಕೃತಿಯ ಸಂಬಂಧದಲ್ಲಿ ಬೇರೆ ಬೇರೆ ವರ್ತಮಾನ ಪತ್ರಿಕೆಗಳಲ್ಲಿ ಪ್ರಕಟವಾದ ಲೇಖನಗಳನ್ನು ಆಯಾ ಪತ್ರಿಕೆಯಿಂದ ಕತ್ತರಿಸಿ ತೆಗೆದು ಮಾಡಿದ ಇಡೀ ಸಂಗ್ರಹವನ್ನು ನನಗೆ ಕೊಟ್ಟು ಸಹಾಯಮಾಡಿದ ಬಾಂಬೇಕ್ರಾನಿಕಲ್ ಪತ್ರಿಕೆಯ ಸಂಪಾದಕರಾಗಿದ್ದು ನಿವೃತ್ತರಾದ ತರುವಾಯ ಮಂಗಳೂರಲ್ಲಿ ನೆಲಸಿದ್ದ ದಿವಂಗತ ಆರ್. ಕೆ. ಪ್ರಭು ಅವರ ಋಣದ ಭಾರವು ನನ್ನ ಮೇಲೆ ಬಹಳವಾಗಿದೆ. ಅವರ ಸಂಗ್ರಹವು ನನಗೆ ದೊರೆತುದಲ್ಲವಾದರೆ ಸಿಂಧೂ ಕಣಿವೆಯಲ್ಲಿ ಬೆಳಕಿಗೆ ಬಂದಿದ್ದ ಎಲ್ಲ ಅವಶೇಷಗಳ ಪರಿಚಯವು ನನಗೆ ಆಗುತಿರಲಿಲ್ಲ. ಅವರ ಸಂಗ್ರಹದಲ್ಲಿ ಸಾಮಾನ್ಯ ಪತ್ರವ್ಯವಹಾರ ದಿಂದ ಮೊದಲುಗೊಂಡು ವಿಸ್ತಾರವಾದ ವಾದಪ್ರತಿವಾದಗಳೂ, ಸಾಧಾರಣ

ಮೂವತ್ತೈದು ಮಂದಿ ವಿದ್ವಾಂಸರ ಲೇಖಗಳೂ ಇದ್ದುವು. ಆ ವಿದ್ವಾಂಸರ ಹೆಸರುಗಳು ಮುಂದಿನಂತಿವೆ–

1. Dr. Sukumar Dutt M. A.
2. Dr. S. Srikanta Sastri M. A.
3. Dr. S. V. Venkateswara M. A.
4. Sri C. R. Roy M.A.B.L
5. Sri A. D. Pusalkar M. A. LL. B,
6. Dr. Atul K. Sur M. A.
7. Dr. Surendra Kisor Chakravarti M. A.
8. Dr. R. D. Banerji M. A.
9. Prof. V. Rangacharya M. A.
10. Sri V, N. M. Kurve
11. Dr. Radhakumud Mukerji M. A.
12. Justice A. S. P. Aiyer
13. Sri Nanimadhav Chakravarti M. A.
14. Dr. N. P Chakravarti M. A.
15. Sri U C Chopra
16. Sri S. N. Chakravarti
17. Sri A. Aippan
18. Prof. P. K. Acharya M. A.
19. Sri G S. Dutt I. C. S.
20. Sri G. S. Dwivedi
21. Sri N, C. Choudhuri
22. Sri Daji Nagesh Apte
23. Sri P. G. Kulakarni
24. Sri Pothan Joseph
25. Srimati Wahida Aziz
26. Dr. H. P. Mirza
27. Gerald C. Cooke
28. Sir Aurel Stein
29. Sir John Marshall
30. Dr. E. J. H. Mackay
31. Sir Arthur B Keith
32. Mr. John Fr. Shiplay
33. Mr. Paul Levy
34. Prof. H. J. Fleure D.Sc.,
35. Rev. H. Heras

ಇನ್ನು ಈ ಗ್ರಂಥದಲ್ಲಿ ಮುದ್ರಿಸಲ್ಪಟ್ಟಿರುವ ಸಿಂಧೂ ಬಿಲ್ಲೆಗಳ ಪಡಿಯಚ್ಚುಗಳನ್ನು ಚೆಲೋ ರೀತಿಯಲ್ಲಿ ಚಿತ್ರಿಸಿ ಕೊಟ್ಟ ಶ್ರೀಮಾನ್ ವಿ. ಪಿ. ಸುಜೀರ್ ಅವರಿಗೂ ಈ ಗ್ರಂಥವನ್ನು ಅಚ್ಚುಕಟ್ಟಾಗಿ ಮುದ್ರಿಸಿ ಕೊಟ್ಟ ಶ್ರೀ ಗಣೇಶ್ ಪ್ರಿಂಟರ್ಸ್ ಸಂಸ್ಥೆಯ ಮಾಲೀಕರಾದ ಶ್ರೀಯುತ ಕೆ. ಗಣೇಶ ಪೈ ಅವರಿಗೂ ನನ್ನ ಧನ್ಯವಾದಗಳು ಸಲ್ಲಬೇಕಾಗಿವೆ.

ಕೊನೆಯದಾಗಿ ನನ್ನ ಪ್ರಾರ್ಥನೆಯನ್ನು ಮನ್ನಿಸಿ ಈ ಗ್ರಂಥವನ್ನು ಓದಿ ನೋಡಿದ ತರುವಾಯ ಚೆಲೋ ಮುನ್ನುಡಿಯನ್ನು ಬರೆದುಕೊಟ್ಟು ನನ್ನನ್ನು ಅನುಗ್ರಹಿಸಿದ ಭಾರತ ಸರಕಾರದ ಪ್ರಧಾನ ಶಾಸನತಜ್ಞರಾಗಿದ್ದ ಡಾಕ್ಟರ್ ಜಿ. ಎಸ್. ಗಾಈ (ಗೋವಿಂದ ರಾವ್, ಸ್ವಾಮಿ ರಾವ್ ಗಾಈ) ಅವರನ್ನು ನಾನು ಕೃತಜ್ಞತಾ ಭಾವದಿಂದ ಅಭಿನಂದಿಸಬೇಕಾಗಿದೆ.

—ಬಸ್ತಿ ಪುಂಡಲೀಕ ಶೆಣಾಈ.

ಶುದ್ಧಿ - ಪತ್ರಿಕೆ

ಪುಟ	ಪಂಕ್ತಿ	ಅಶುದ್ಧ	ಶುದ್ಧ
3	30	A Coperative	A Comparative
4	10	ಶಕದ	ಶಕಪೂರ್ವದ
5	6	ಪ್ರಚುರ	ಪ್ರಚಾರ
8	4	ಸಿಂದೂ	ಸಿಂಧೂ
18	11	ತೆತ್ತಿ	ತೈತ್ತಿ
18	26	ಮೂಲೆಗಳಿರುತ್ತವೆಂದೂ	ಮೂತಿಗಳಿರುತ್ತವೆಂದು
22	20	ವಿಪ್ಟಾಪ್ಪ	ವಿಷ್ಟಾಷ್ಟ
23	30	ಚಂದ್ರಽ	ಚಂದ್ರಂ
24	4	ಚಂದಾವಲೋಕನ	ಚಂದ್ರಾವಲೋಕನ
25	1	ತರುವಾಯ	ತರುವಾಯದ
28	27	Maucasus	Caucasus
29	23	Surs	Susa
31	31	were there	here there
32	33	Eupprates	Euphrates
35	17	ಪ್ರಮಾಣಪೂ	ಪ್ರಮಾಣವೂ
35	23	ಮಾರ್ಚಿಮರ್	ಮಾರ್ಟಿಮರ್
39	10	ಶಕಪೂರ್ದ	ಶಕಪೂರ್ವ
44	13	ಹೇಲಿಮಂದ್	ಹೇಲ್‌ಮಂದ್
45	1	ತೂಣರ್ೂಶ	ತೂಣಾರ್ಶ
45	21	ಅಫಗಾನಿಸ್ಥಾನವ	ಅಫಗಾನಿಸ್ಥಾನದ
47	2	ಬಂದಿವ್ದ	ಬಂದಿದ್ದ
48	7	ಶಕಪೂರ್ವ ೯೫೧	ಶಕಪೂರ್ವ ೬೪೫
58	15	ದಾಹವನೀಯಾಸ್ಯಾ	ದಾಹವನೀಯಸ್ಯಾ
63	30	ಕ್ವಿಯಂತಂ	ಕ್ಷಿಯಂತಂ
64	4	ಬಿಷುವ	ವಿಷುವ
64	20	ಶರದೃತುವಿಸ	ಶರದೃತುವಿನ
68	19	ವರ್ಷವ	ವರ್ಷದ
69	5	ಯಾಂಸ್ತ್ವೇತದ್ದೇವಾ ಇತ್ಯಾಚಕ್ಷತೇ	ಯಾಂಸ್ತ್ವೇತದ್ದೇವಾ ಆದಿತ್ಯಾ ಇತ್ಯಾಚಕ್ಷತೇ
69	6	ತೇಽವಿಕೃತ	ತೇಽವಿಕೃತಂ
70	14	ಸೈಬಿಂದ	ಸೃಬಿಂದ


ಪುಟ	ಪಂಕ್ತಿ	ಅಶುದ್ಧ	ಶುದ್ಧ
76	25	ಅಹದು	ಅಹುದು
76	25	ಕೃತ್ತಿಕಾ ಸಂಪಾತ ಕಾಲದಲ್ಲಿ,	ಸೂರ್ಯನು ಕೃತ್ತಿಕಾ ಸಂಪಾತ ಕಾಲದಲ್ಲಿ
77	18	ಪೂವಾಭಿಮುಖನಾಗಿ	ಪೂರ್ವಾಭಿಮುಖನಾಗಿ
78	5	ವಿಭಜಿನ್	ವಿಭಜನ್
84	21	ಪುತ್ತನೆನ್ನುತ್ತಾರೆ	ಪುತ್ರನೆನ್ನುತ್ತಾರೆ
88	28	ಯೋಗ್ಯನಾದ ಒಡೆಯನಾಗಿರುತ್ತೀ	ಯೋಗ್ಯನಾದ ಒಡನಾಡಿಯಾಗಿರುತ್ತೀ
90	13	ಅಂಗಿರಸ	ಆಂಗಿರಸ
98	4	ದೇವತೆಗಳೆಗೆ	ದೇವತೆಗಳಿಗೆ
98	23	ಸೂರ್ಯಾಸ್ತದ	ಸೂರ್ಯಾಸ್ತದ
100	2	ಕಾತ್ಯಾಯನ ಶ್ರೌತ	ಕಾತ್ಯಾಯನ ಶ್ರೌತಸೂತ್ರ
104	20	ಒಯುವಂಥದ್ದಾಗಿ	ಒಯ್ಯುವಂಥದ್ದಾಗಿ
109	8	ವತ್ತು	ಮತ್ತು
110	10	ಮತು	ಮತ್ತು
112	25	ಅಯುಷ್	ಆಯುಷ್
123	31	ಅದಿತ್ಯಾಃ	ಆದಿತ್ಯಾಃ
127	17	ಅವರ ಬೇರೆ	ಅವರ ಬೇರೆ ಬೇರೆ
134	9	ಪಿತೃನ್	ಪಿತೄನ್
143	27	ಅಘಯವಯಾನ್ನೀವಕಾಭಿಃ	ಅಘಂ ಮೇ ಯವಯಾನೀತ್ಯವಕಾಭಿಃ
158	25	ನಕ್ಷತ್ರಗಳಾಗಿ	ನಕ್ಷತ್ರಗಳಿಗಾಗಿ
158	29	ಪರಿನಶ್ರೀ	ಪರಿವಕ್ರೀ
163	23	ಹಸರುಗಳು	ಹೆಸರುಗಳು
165	25	ಜ್ಞಾನಪದ	ಜ್ಞಾನಪರ
167	1	ಜೋತಿಷ	ಜ್ಯೋತಿಷ
189	17	ಸಂಪಾತಚಲನವ	ಸಂಪಾತ ಚಲನದ
192	11	ಸಿ ಋತಮುವಿಾತ್	ಸ ಋತಮುವಿಾತ್
203	3	ತಲಪು ತಿಳಿದವರಾದ	ತಿಳಿದವರಾದ ಪಿತೃಗಳ ಬಳಿಗೆ ತಲಪು
207	25	ದ್ಯೊತ್ಯಾಂ	ದೂತ್ಯಾಂ
208	14	ಹಿರಣಯಿೊ	ಹಿರಣ್ಯಯಿೊ
214	22	ವೇವಭಾಷ್ಯಕಾರರು	ವೇದಭಾಷ್ಯಕಾರರು
231	30	ಕಿಂ ಪುನರ್ವೈವವಿದ್	ಕಿಂ ಪುನರ್ದೈವವಿದ್

ಪುಟ	ಪಂಕ್ತಿ	ಅಶುದ್ಧ	ಶುದ್ಧ
238	11	ವ್ಯಾಖ್ಯಾಸಿದ್ದಾರೆ	ವ್ಯಾಖ್ಯಾನಿಸಿದ್ದಾರೆ
239	15	ಕೃತವು	ಕೃತವು
242	5	ಮೂಲವ	ಮಾಲವ
,,	8	ಮೂಲವಾನಾಂ	ಮಾಲವಾನಾಂ
252	19	ಸಂಬಂದ್ಧ	ಸಂಬದ್ಧ
268	15	"ಮೃತ್ಯು" ಎಂದು	"ಮೃತ್ಯು" ಎಂದ
269	28	ಅರ್ಥಾತ್ ಅವರು ವಸಂತ	ಅರ್ಥಾತ್ ವಸಂತ
270	15	ಧನಸಂಪನ್ನನಾಗಿ	ಧನಸಂಪನ್ನರಾಗಿ
271	12	ವಸಂತಾಯಗ್ಗಿಮಾಧತ್ತೇ	ವಸಂತಾಯಗ್ನಿಮಾಧತ್ತೇ
275	14	ಹಿಂದಿನ ಆಖ್ಯಾಯಿಕೆಯ	ಹಿಂದಿನ ಆಖ್ಯಾಯಿಕೆಯು
,,	27	ತವಭ್ಯಾಯತ್ಯಾ	ತಮಭ್ಯಾಯತ್ಯಾ
276	19	ಅದೇ ಆಖ್ಯಾಯಿಕೆಯ	ಅದೇ ಆಖ್ಯಾಯಿಕೆಯು
284	27	ರೂಪುಗೊಂಡು	ರೂಪುಗೊಂಡ
309	5	ಕ್ಷೋಭೆವನ್ನು	ಕ್ಷೋಭವನ್ನು
320	30	ತಿಳಿದು ಬಂದಿವೆ	ತಿಳಿದು ಬಂದಿದೆ
323	22	ವೇದ ಮಂತ್ರಗಳಲ್ಲಿದೆ	ವೇದ ಮಂತ್ರಗಳಲ್ಲಿವೆ
328	23	ಅಷ್ಟ ಕರ್ಣ್ಯಃ	ಅಷ್ಟಕರ್ಣ್ಯಃ
339	18	ಮೂರು ಬಿಂದುಗಳಿದ	ಮೂರು ಬಿಂದುಗಳಿಂದ
360	20	ಮೂರು ವರ್ಷಗಳಿಗಾಗಿ	ಮೂರು ವರ್ಣಗಳಿಗಾಗಿ
366	1	ವಥವಾ	ಅಥವಾ
367	4	ಗಳು ಬಂದಿಲ್ಲನೆಂದು	ಗಳು ಕಂಡು ಬಂದಿಲ್ಲವೆಂದು
,,	28	ಅದರೆ ಒಂದು	ಅದರ ಒಂದು
371	27	prito-Dravidian	proto-Dravidian
,,	31	when Hindu	when Hindus
382	14	ಕಾಲದದನು	ಕಾಲದವನು
393	8	ಅಗಿಲ್ಲ	ಆಗಿಲ್ಲ
408	6	ಸ ಬಂಧದಲ್ಲಿ	ಸಂಬಂಧದಲ್ಲಿ
,,	12	ತಳಿಯು ತಬ್ಬು	ತಳಿಯ ತಟ್ಟು
,,	17	f equency	frequency
,,	30	equis cabalus	eqqus caballus
436	12	ವ್ಯವಹರಿಸದ	ವ್ಯವಹರಿಸಿದ

ಪುಟ	ಪಂಕ್ತಿ	ಅಶುದ್ಧ	ಶುದ್ಧ
437	5	ಪಾರಂಭಿಕ	ಪ್ರಾರಂಭಿಕ
440	28	ವಿಶ್ವಾಮಿತ್ತನು	ವಿಶ್ವಾಮಿತ್ರನು
441	19	ಶ್ರೇಷ್ಠನಾದನು	ಶ್ರೇಷ್ಠನಾದವನು
442	1	(ಅಗ್ಗಿಯು)	(ಅಗ್ನಿಯು)
444	19	ಯಜ್ಞಾಗ್ನಿಯು	ಯಜ್ಞಾಗ್ನಿಯು
445	25	ಕ್ರುದ್ಧನಾದ	ಕ್ರುದ್ಧನಾದ
448	27	ಸರ್ವಾತಃ	ಸರ್ವತಃ
450	21	ಆ ಸೂಕ್ತದಲ್ಲಿ	ಆ ಸೂಕ್ತದ
450	21	ಮೊದಲನೆಯ ಋಚೆಯು	ಮೊದಲನೆಯ ಋಚೆಯಲ್ಲಿ
,,	24	ಸಂಭಾರಾರ್ಭಿಷೇಕಾ	ಸಂಭಾರಾನಭಿಷೇಕಾ
451	26	ವೃಷ್ಟಿವನಿಂ	ವೃಷ್ಟಿವನಿಂ
452	27	ಆಷ್ಟಿಷೇಣಸ್ತು	ಆರ್ಷ್ಟಿಷೇಣಸ್ತು
456	26	ಪ್ರಚ್ಯಾತ್	ಪುಚ್ಛಾತ್
457	22	ಸಿಂಧೂನಗರದ	ಸಿಂಧೂಸದದ
459	26	Bhagavata the	Bhagavata of the
,,	29	Meliodorus	Heliodorus

ಬ್ರಾಹ್ಮೀ ಲೇಖದ ಮಾದರಿ

ನೇಪಾಳದ ತಪ್ಪಲಲ್ಲಿರುವ ಲುಂಬಿನಿ ಗ್ರಾಮದಲ್ಲಿನ ಶಿಲಾಸ್ತಂಭದ ಮೇಲಿನ ಚಕ್ರವರ್ತಿ ಅಶೋಕನ ಲೇಖದ ಯಥಾಪ್ರತಿ.



೧. ದೇವಾನ ಪಿಯೇನ ಪಿಯದಸಿನ ಲಾಜಿನ ವೀಸತಿ ವಸಾಭಿಸಿತೇನ

೨. ಅತನ ಆಗಾಚ ಮಹೀಯಿತೇ ಹಿದ ಬುಧೇ ಜಾತೇ ಸಕ್ಯಮುನೀತಿ


೩. ಸಿಲಾವಿಗಡಭೀಚಾ ಕಾಲಾಪಿತ ಸಿಲಾಥಭೇಚ ಉಸಪಾಪಿತೇ

೪. ಹಿದ ಭಗವಂ ಜಾತೇತಿ ಲುಂಮಿನಿಗಾಮೇ ಉಬಲಿಕೇ ಕಟೇ

೫. ಅಠಭಾಗಿಯೇಚ

ದೇವತೆಗಳಿಗೆ ಪ್ರಿಯನಾದ ಪ್ರಿಯದರ್ಶಿ ರಾಜನು ಪಟ್ಟಾಭಿಷಿಕ್ತನಾಗಿ ಇಪ್ಪತ್ತು ವರ್ಷಗಳಾಗಲು ಸ್ವಯಂ ಬಂದು ಇಲ್ಲಿ ಶಾಕ್ಯ ಮುನಿ ಬುದ್ಧನು ಜನ್ಮ ತಳೆದಿದ್ದನೆಂದು (ಈ ಸ್ಥಳವನ್ನು) ಪೂಜಿಸಿದನು. ಮತ್ತು ಶಿಲೆಯ ಪ್ರಾಕಾರವನ್ನು ಕಟ್ಟಿಸಿ ಒಂದು ಶಿಲಾಸ್ತಂಭವನ್ನು ನಿಲ್ಲಿಸಿದನು. ಇಲ್ಲಿ ಭಗವಂತನು ಜನ್ಮ ತಳೆದಿದ್ದನೆಂದು ಲುಂಬಿನಿ ಗ್ರಾಮವನ್ನು ಉಂಬಳಿಯಾಗಿ ಮಾಡಿ (ರಾಜಕರ ವಾದ) ಎಂಟನೆಯ ಭಾಗವನ್ನು ಬಿಟ್ಟನು.

ಬ್ರಾಹ್ಮೀ ವರ್ಣಮಾಲೆ


= ಓಮ್
ಅ ಆ ಇ ಈ ಉ ಊ ಋ ೠ ಌ ೡ
ಏ ಐ ಓ ಔ ಅಂ ಅಃ ँ
ಕ ಖ ಗ ಘ ಙ ಚ ಛ ಜ ಝ ಞ
ಟ ಠ ಡ ಢ ಣ ತ ಥ ದ ಧ ನ
ಪ ಫ ಬ ಭ ಮ
ಯ ರ ಲ ವ ಶ ಷ ಸ ಹ ಳ
ಕ ಕಾ ಕಿ ಕೀ ಕು ಕೂ ಕೃ ಕೄ
ಕೢ ಕೇ ಕೈ ಕೋ ಕೌ ಕಂ ಕಃ
೧ ೨ ೩ ೪ ೫ ೬ ೭ ೮ ೯ ೧೦

ಅನುಕ್ರಮಣಿಕೆ

ವಿಷಯ ಪರಿಚಯ

ಬ್ರಿಟಿಷರು ಭಾರತವರ್ಷದಲ್ಲಿ ಸ್ಥಾಪಿಸಿದ ಪಾಠಶಾಲೆಗಳಲ್ಲಿ ವಿದ್ಯಾರ್ಥಿಗಳ ಅಧ್ಯಯನಕ್ಕಾಗಿ ನಿಯೋಜಿಸಿದ ಇತಿಹಾಸ ಗ್ರಂಥಗಳು ಭಾರತ ವರ್ಷಕ್ಕೆ ಸಂಬಂಧಿಸಿದ ಎಲ್ಲ ಐತಿಹಾಸಿಕ ಪ್ರಶ್ನೆಗಳು ಸಮರ್ಪಕವಾಗಿ ಬಗೆಹರಿಯುವ ಮೊದಲೇ ಬರೆಯಲ್ಪಟ್ಟವುಗಳಾದುದರಿಂದ ಅವುಗಳಲ್ಲಿ ಹಲವು ಕೊರತೆಗಳು ಮತ್ತು ದೋಷಗಳು ಇವೆಯಲ್ಲದೇ ಅನೇಕ ಪ್ರಮಾಣರಹಿತ ಕಲ್ಪನೆಗಳೂ ವಿಪರ್ಯಸ್ತ ಕಥನಗಳೂ ಸೇರಿವೆ. ಕೊರತೆಗಳ ಕುರಿತು ಹೇಳುವುದಾದರೆ ಭಾರತೀಯ ಇತಿಹಾಸವನ್ನು ಬರೆದ ಯಾವನೊಬ್ಬ ಬ್ರಿಟಿಷ್ ವಿದ್ವಾಂಸನಾದರೂ ಭಾರತೀಯ ಇತಿಹಾಸದಲ್ಲಿ ಪ್ರಥಮ ಸ್ಥಾನವನ್ನು ಪಡೆಯಬೇಕಾಗಿದ್ದ ಹಾಗೂ ಭಾರತೀಯ ಇತಿಹಾಸದ ಮುಖ್ಯ ಹಾಗೂ ಅವಶ್ಯಕ ಅಂಗವಾಗಿರಬೇಕಾಗಿದ್ದ ಮುಂಡ ಜನಾಂಗದ ಮತ್ತು ಬ್ರಿಟಿಷ್ ಪಾದ್ರಿ ಡಾಕ್ಟರ್ ರಾಬರ್ಟ್ ಕಾಲ್ಡವೆಲ್ ಅವರು "ದ್ರಾವಿಡ" ಎಂದು ಹೆಸರಿಸಿದ ದಕ್ಷಿಣ ಭಾರತದ ಮೂಲನಿವಾಸಿಗಳ ಪ್ರಾಚೀನ ಸಂಸ್ಕೃತಿಯ ಮತ್ತು ಇತಿಹಾಸದ ಅನ್ವೇಷಣದ ಕಡೆಗೆ ಅವಶ್ಯಕವಿದ್ದಷ್ಟು ಲಕ್ಷವನ್ನು ಕೊಟ್ಟಿಲ್ಲವೆನ್ನಬೇಕಾಗಿದೆ. ಅಂದರೆ ಆ ಜನಾಂಗಗಳ ವಿಶ್ವಾಸಾರ್ಹವಾದ ಇತಿಹಾಸವು ಎಂದಿನಿಂದ ಪ್ರಾರಂಭವಾಗುತ್ತದೆ? ಆ ಜನಾಂಗಗಳ ಸಂಸ್ಕೃತಿಯ ವೈಶಿಷ್ಟ್ಯಗಳಾವುವು? ಮುಂತಾದ ಪ್ರಶ್ನೆಗಳನ್ನು ಬಗೆಹರಿಸುವ ಗೋಜಿಗೆನೇ ಹೋಗಿಲ್ಲ. ಅದಕ್ಕೆ ಪ್ರತಿಯಾಗಿ ಆ ಜನಾಂಗಗಳಲ್ಲಿ ಪ್ರಕೃತ ಪ್ರಚಲಿತವಿರುವ ಧಾರ್ಮಿಕ ವಿಶ್ವಾಸಗಳ ಮತ್ತು ಆರಾಧನೆಗಳ ಮೇಲುಮೇಲಿನ ನೋಟದ ಆಧಾರದಿಂದಲೇ ಅವರ ಕುರಿತು ಹಲವು ಪ್ರಮಾಣ ರಹಿತ ಕಲ್ಪನೆಗಳನ್ನು ಭಾರತೀಯ ಇತಿಹಾಸ ಗ್ರಂಥಗಳಲ್ಲಿ ಸೇರಿಸಿದ್ದಾರೆ. ಅದೇ ರೀತಿಯಲ್ಲಿ ಬ್ರಿಟಿಷ್ ವಿದ್ವಾಂಸರು ತಾವು ಬರೆದ ಇತಿಹಾಸಗಳಲ್ಲಿ ಕೊಂಚ ಪ್ರಾಧಾನ್ಯ ಕೊಟ್ಟಿರುವ ಭಾರತೀಯ ಆರ್ಯಜನರ ಸಂಬಂಧದಲ್ಲಿಯೂ ಸರಿಯಾದ ಅನ್ವೇಷಣ ಮಾಡಿದ್ದಾರೆನ್ನಲಾಗುವುದಿಲ್ಲ. ಉದಾಹರಣೆಗಾಗಿ ಹೇಳುವುದಾದರೆ-ಅವರು ಆರ್ಯ ಜನರು ಭಾರತ ವರ್ಷದೊಳಗೆ ಪ್ರವೇಶಿಸಿದ ಸಂಬಂಧದಲ್ಲಿ ಮಾಡಿದ ವರ್ಣನೆ ಹಾಗೂ ಸ್ವೀಕರಿಸಿದ ಕಾಲಮಾನವು ಯಾವುದೊಂದು ಪ್ರಮಾಣದ ಆಧಾರದಿಂದ ನಿರ್ಧರಿಸಿದ್ದಾಗಿರದೇ ಸಂಪೂರ್ಣ ಕಲ್ಪಿತವಾಗಿದೆ.

ವಸ್ತುತಃ ಬ್ರಿಟಿಷರಿಗೆ ಭಾರತೀಯರ ಇತಿಹಾಸದ ಸಂಬಂಧದಲ್ಲಿ ಆಳವಾದ ಅನ್ವೇಷಣ ಮಾಡುವ ಉದ್ದೇಶವಾಗಲೀ ಆವಶ್ಯಕತೆಯಾಗಲೀ ಇರಲಿಲ್ಲ. ಅವರು

ಭಾರತ ವರ್ಷದಲ್ಲಿ ಪಾಠಶಾಲೆಗಳನ್ನು ಸ್ಥಾಪಿಸಿದುದರ ಮುಖ್ಯ ಉದ್ದೇಶವು ತಾವು ಗೆದ್ದ ದೇಶವನ್ನು ಸುಸೂತ್ರವಾಗಿ ಆಳಲು ಅನುಕೂಲವಾಗುವಂತೆ ತಾವು ಬರೆದುದೆಲ್ಲವನ್ನು ಪ್ರತಿವಾದ ಮಾಡದೇ ಸ್ವೀಕರಿಸುವಂಥ ನೌಕರ ವರ್ಗವನ್ನು ಸಿದ್ಧಗೊಳಿಸುವುದಾಗಿತ್ತು. ಮತ್ತು ತಮ್ಮ ಕಲ್ಪನೆಗಳ ಪ್ರಚಾರದ ಮೂಲಕ ಹಿಂದುಗಳನ್ನು ಆರ್ಯ ಮತ್ತು ದ್ರಾವಿಡ ಎಂದು ಒಡೆದು ಆರ್ಯಜನರದ್ದಾಗಿದ್ದುದನ್ನು ದ್ರಾವಿಡರದ್ದೆಂದು ಹೇಳಿ ಅವರೊಳಗೆ ಕಲಹ ಹುಟ್ಟಿಸುವುದು ಮತ್ತು ಅವರಲ್ಲಿ ಬೇರೂರಿದ್ದ ವೈದಿಕ ಧರ್ಮದ ಮೇಲಿನ ಶ್ರದ್ಧೆಯನ್ನು ಶಿಥಿಲಗೊಳಿಸಿ ಅವರನ್ನು ಕ್ರೈಸ್ತರನ್ನಾಗಿ ಮಾಡುವುದು ಹಾಗೂ ಭಾರತ ವರ್ಷವು ಸದಾ ಕಾಲ ತಮ್ಮ ಹಿಡಿತದಲ್ಲಿಯೇ ಇರುವಂತೆ ಮಾಡುವುದಾಗಿದ್ದಿತು. ಅದನ್ನು ಬ್ರಿಟಿಷರ ಬರಹಗಳಿಂದಲೇ ಸಿದ್ಧಪಡಿಸಬಹುದು.

ಮೊದಲನೆಯದಾಗಿ ಸರ್ ಮೋನಿಯರ್ ಎಮ್. ವಿಲಿಯಮ್ಸ್ ಎಂಬ ಬೋಡೆನ್ ವಿದ್ವಾಂಸರು ತಾನು ಸಂಪಾದಿಸಿದ "ಸಂಸ್ಕೃತ ಇಂಗ್ಲೀಷು ಶಬ್ದಕೋಶದ" ಪ್ರಸ್ತಾವನೆಯಲ್ಲಿ ಮುಂದಿನ ವಿವರಣೆ ಇದೆ—**'ಕರ್ನಲ್ ಬೋಡೆನ್ ಅವರು ಆಕ್ಸ್‌ಫರ್ಡ್ ವಿಶ್ವವಿದ್ಯಾಲಯದಲ್ಲಿ ಸಂಸ್ಕೃತದ ಛಾತ್ರ ಸ್ಥಾನವನ್ನು ಸ್ಥಾಪಿಸುವ ಸಲುವಾಗಿ ತನ್ನ ಸಂಪತ್ತನ್ನೆಲ್ಲ ದಾನ ಮಾಡಿದುದರ ಮುಖ್ಯ ಉದ್ದೇಶವು ತನ್ನ ದೇಶದ ಜನರು ಸಂಸ್ಕೃತ ಕಲಿತು ಕ್ರೈಸ್ತ ಧರ್ಮಗ್ರಂಥಗಳನ್ನು ಸಂಸ್ಕೃತಕ್ಕೆ ಭಾಷಾಂತರಿಸಿ ಭಾರತೀಯರನ್ನು ಕ್ರೈಸ್ತರನ್ನಾಗಿ ಮಾಡುವುದರಲ್ಲಿ ಸಮರ್ಥರಾಗುವಂತೆ ಮಾಡುವುದೇ ಆಗಿತ್ತು.**[1]

ಎರಡನೆಯದಾಗಿ ಬ್ರಿಟಿಷ್ ಪಾದ್ರಿ ಡಾ. ರಾಬರ್ಟ್ ಕಾಲ್ಡವೆಲ್ ಅವರು ರಚಿಸಿದ "ದ್ರಾವಿಡ ಭಾಷೆಗಳ ತುಲನಾತ್ಮಕ ವ್ಯಾಕರಣವಲ್ಲಿ" ದ್ರಾವಿಡ ಭಾಷೆಗಳು ಆರ್ಯ ಭಾಷೆಗಳೊಂದಿಗೆ ಸಾಮ್ಯ ಹೊಂದಿರದೇ – ಸಿಥಿಕ್ ಭಾಷೆಗಳೊಂದಿಗೆ ಸಾಮ್ಯ ಹೊಂದಿವೆಯೆಂದು ಪ್ರತಿಪಾದಿಸಿದ್ದಾರೆ. ಆದರೆ ಮಿ. ಗೋವರ್ ಅವರು ಡಾ ಕಾಲ್ಡವೆಲ್ಲರ "ದ್ರಾವಿಡ ಸಿಥಿಕ್" ಉಪಪತ್ತಿಯನ್ನು ಖಂಡಿಸಿ ಸಿಥಿಕ್ ಭಾಷೆಗಳು ಆರ್ಯ ಭಾಷಾವರ್ಗಕ್ಕೆ ಸೇರಿದವುಗಳೆಂದು ವಾದಿಸಿದ್ದರು. ಆಗ ಡಾ। ಕಾಲ್ಡ್‌ವೆಲ್ ಅವರು ತನ್ನ ವ್ಯಾಕರಣದ ಪರಿಶಿಷ್ಟದಲ್ಲಿ ಕೊಟ್ಟ ವಿವರಣೆಯಲ್ಲಿ ಮುಂದಿನ ಮಾತುಗಳಿವೆ—"**ಮಿ। ಗೋವರ್ ಅವರು ಡಾ। ಕಾಲ್ಡವೆಲ್ಲರ ದ್ರಾವಿಡ ಸಿಥಿಕ್ ಉಪ**

---

[1] In explanation I must draw attention to the fact that I am only the second occupant of the Boden Chair, and that its founder Colonel Boden stated most explicitly in his will (dated August 15, 1811) that the special object of his munificent bequest was to promote the translation of the Scriptures into Sanskrit so as "to enable his countrymen" to proceed in the conversion of the natives of India to christian Religion. Page IX

ಪತ್ತಿಯನ್ನು ಖಂಡಿಸಿ ಅದರ ಸ್ಥಾನದಲ್ಲಿ ತನ್ನ ಆರ್ಯ-ಸಿಥಿಕ್ ಉಪಪತ್ತಿಯನ್ನು ಸ್ಥಾಪಿಸುವ ಮೊದಲು ತಾನು ಡಾ। ಕಾಲ್ಡ್‌ವೆಲ್ಲರ ದ್ರಾವಿಡ ಸಿಥಿಕ್ ಉಪಪತ್ತಿಯು ಬರಿಯ ಭಾಷಾ ಶಾಸ್ತ್ರದ ದೃಷ್ಟಿಯಿಂದಷ್ಟೇ ಅಲ್ಲ ಪರಂತು ವಿಶಾಲವಾದ ನೈತಿಕ (=ಧಾರ್ಮಿಕ?) ಹಾಗೂ ರಾಜಕೀಯ ದೃಷ್ಟಿಯಿಂದ ಕೂಡ ಬಹಳ ಮಹತ್ವವುಳ್ಳದಾಗಿದ್ದಿತೆಂಬುದನ್ನು ಸರಿಯಾಗಿ ಅರಿತುಕೊಂಡಿರುವೆನೋ ಎಂದು ದೃಢಪಡಿಸಿಕೊಂಡಿದ್ದರೆ ಬಹಳ ಒಳ್ಳೆಯದಿತ್ತು.

ಹಿಂದಿನ ಎರಡು ಉದ್ಧರಣಗಳಿಂದ ಬ್ರಿಟಿಷರ ಹಾಗೂ ಅವರಿಂದ ವೇತನ ಪಡೆದು ಅನ್ವೇಷಣ ಸಾಗಿಸುತ್ತಿದ್ದ ಇತರ ಎಲ್ಲ ಪಾಶ್ಚಾತ್ಯ ವಿದ್ವಾಂಸರ ಉದ್ದೇಶವು ಧಾರ್ಮಿಕ ಮತ್ತು ರಾಜಕೀಯ ಸ್ವಾರ್ಥವಾಗಿದ್ದಿತೆಂದು ಸ್ಪಷ್ಟವಾಗಿ ಸಿದ್ಧವಾಗುತ್ತದೆ. ಹಾಗಾಗಿ ಅವರು ತಾವು ಮಾಡಿದ ಅನ್ವೇಷಣದ ಫಲವೆಂಬಂತೆ ಆರ್ಯ ಜನರು ಬರಿಯ ಬರ್ಬರರಾಗಿದ್ದರೆಂತಲೂ, ಅವರ ವೇದಗಳಲ್ಲಿ ಮತ್ತು ವೈಧಿಕ ಧರ್ಮದಲ್ಲಿ ಯಾವ ಬಗೆಯ ವಿಶೇಷತೆಯೂ ಇಲ್ಲವೆಂತಲೂ ವೈದಿಕ ಜನರು ವೈಜ್ಞಾನಿಕ ವಿಷಯಗಳನ್ನು ಅರಿತಿರಲಿಲ್ಲವೆಂತಲೂ ಸಾಧಿಸಲು ಮತ್ತು ಕ್ರೈಸ್ತ ಧರ್ಮಕ್ಕೆ ಜನ್ಮವಿತ್ತಿದ್ದ ಸೆಮಿಟಿಕ್ ಸಂಸ್ಕೃತಿಯು ಜಗತ್ತಿನ ಇತರ ಸಂಸ್ಕೃತಿಗಳಿಗಿಂತ ಪ್ರಾಚೀನ ಹಾಗೂ ಶ್ರೇಷ್ಠ ಎಂತಲೂ ಸಾಧಿಸಲು ಬಗೆಬಗೆಯ ಕಲ್ಪನೆಗಳನ್ನು ವಾಸ್ತವಿಕ ಇತಿಹಾಸದಂತೆ ಪ್ರಚಾರ ಮಾಡುತ್ತ ಬಂದಿದ್ದಾರೆ. ಮತ್ತು ಅವುಗಳನ್ನು ಐತಿಹಾಸಿಕ ಗ್ರಂಥಗಳಲ್ಲಿಯೂ ಸೇರಿಸಿದ್ದಾರೆ. ಅವರು ಪ್ರಚಾರ ಮಾಡಿದ ಅಂಥ ಕಲ್ಪನೆಗಳಲ್ಲಿ ಮುಖ್ಯವಾದ ಕೆಲವು ಕಲ್ಪನೆಗಳ ಸಾರಾಂಶಗಳು ಮುಂದಿನಂತಿವೆ-

೧. **ಈಜಿಪ್ತ ದೇಶದ ಸಂಸ್ಕೃತಿ ಮತ್ತು ಇತಿಹಾಸಗಳು ಜಗತ್ತಿನ ಇತರ ದೇಶಗಳ ಸಂಸ್ಕೃತಿ ಮತ್ತು ಇತಿಹಾಸಗಳಿಗಿಂತ ಪ್ರಾಚೀನವಾಗಿವೆ. ಮತ್ತು ಅವುಗಳು ಸೆಮಿಟಿಕ್ ಜನರಿಗೆ ಸೇರಿದವುಗಳಾಗಿವೆ.**

೨. **ಆರ್ಯ ಜನರು ಯಾವುದೋ ಒಂದು ಮೂಲ ನೆಲೆಯಿಂದ ಹೊರಟವರು ಜಗತ್ತಿನ ನಾನಾ ಭಾಗಗಳಲ್ಲಿ ಚದರಿಹೋಗಿದ್ದರು. ಅವರು ಯಾವುದೊಂದು ಪ್ರದೇಶದಲ್ಲಿ ಸ್ಥಿರವಾಗಿ ನೆಲಸದೇ ಒಂದು ಪ್ರದೇಶದಿಂದ**

---

[1] It would have been well, if Mr. Gover had made himself quite sure of perfectly apprehending Dr. Caldwell's Scythic theory before regarding its refutation and establishment of his own Aryan theory in its place; as not only of considerable moment from a philological point of view but as of vast moral and political importance. A Coperative Grammar of the Dravidian Family of Languages. P. 525

ಬೇರೊಂದು ಪ್ರದೇಶಕ್ಕೆ ವಲಸೆ ಹೋಗುವಂಥ ಯಾಯಾವರ ಅಂದರೆ ಅಲೆಮಾರಿ ಜನಾಂಗವಾಗಿದ್ದರು. ಕುದುರೆಗಳನ್ನು ಪಳಗಿಸಿ ಮಾರುವುದು ಅವರ ಮುಖ್ಯ ವ್ಯವಸಾಯವಾಗಿತ್ತು. ಆದುದರಿಂದ ಅವರು ತಮ್ಮ ಕುದುರೆಗಳಿಗೆ ಹೇರಳ ಮೇವು ದೊರೆಯಬಹುದಾದ ಹುಲ್ಲುಗಾವಲುಗಳನ್ನು ಅರಸುತ್ತ ಸಾಗುತಿದ್ದರು.

೩. ಅಂಥ ಆ ಆರ್ಯಜನರು ಸಾಧಾರಣ ಶಕಪೂರ್ವ ೧೫೦೦ ವರ್ಷಗಳ ಸುಮಾರಿಗೆ ಪಶ್ಚಿಮ ಆಸ್ಯದಿಂದ ಮುಂದುವರಿದು ಭಾರತ ವರ್ಷವನ್ನು ಆಕ್ರಮಿಸಿ ಉತ್ತರ ಭಾರತದಲ್ಲಿ ನೆಲಸಿದ್ದ ದ್ರಾವಿಡ ಜನರನ್ನು ದಕ್ಷಿಣ ಭಾರತಕ್ಕೆ ಅಟ್ಟಿದ್ದರು.

೪. ವೇದಗಳಲ್ಲಿ ಪ್ರಾಚೀನತಮವಾದ ಋಗ್ವೇದದ ಮಂತ್ರಗಳು ಆರ್ಯ ಜನರು ಭಾರತ ವರ್ಷದಲ್ಲಿ ನೆಲಸಿದ ತರುವಾಯ ರಚಿಸಲ್ಪಟ್ಟಿದ್ದುವು.

೫. ಶಕದ ೮ನೆಯ ಶತಮಾನಕ್ಕಿಂತ ಮೊದಲು ಭಾರತೀಯರಲ್ಲಿ ಇಲ್ಲವೇ ವೈದಿಕ ಜನರಲ್ಲಿ ಲಿಪಿಯು ಪ್ರಚಲಿತವಿರಲಿಲ್ಲ. ಆದುದರಿಂದ ವೇದಮಂತ್ರಗಳು ಬರೆಯಲ್ಪಟ್ಟಿರದೇ ಕಂಠಪಾಠವಾಗಿ ಮುಂದೆ ಸಾಗುತ್ತ ಬಂದಿದ್ದುವು. ಭಾರತೀಯ ರಲ್ಲಿ ಪ್ರಚಲಿತವಾದ ಹಾಗೂ ತರುವಾಯದ ಎಲ್ಲ ಭಾರತೀಯ ಲಿಪಿಗಳ ಮೂಲ ವಾಗಿದ್ದ "ಬ್ರಾಹ್ಮೀವರ್ಣಮಾಲೆಯು" ಸೆಮಿಟಿಕ್ ಮೂಲದ ಫಿಸಿಶ್ಯನ್ ಜನರು ಉಪಯೋಗಿಸುತಿದ್ದ ವರ್ಣಮಾಲೆಯಿಂದ ರೂಪಾಂತರಿಸಲ್ಪಟ್ಟಿತ್ತು.

೬. ಋಗ್ವೇದ ಕಾಲದ ಜನರಿಗೆ ಜ್ಯೋತಿಷದ ಜ್ಞಾನವಿರಲಿಲ್ಲ. ಋಗ್ವೇದ ದಲ್ಲಿ ಎರಡಕ್ಕಿಂತ ಹೆಚ್ಚು ನಕ್ಷತ್ರಗಳ ಹೆಸರುಗಳಿಲ್ಲ. ಭಾರತೀಯರು ಗ್ರಹಗಣಿತ ವನ್ನು ಯವನರಿಂದ ಕಲಿತಿದ್ದರು. ಮತ್ತು ಇಪ್ಪತ್ತೇಳು ಚಾಂದ್ರನಕ್ಷತ್ರಗಳ ಗಣನಾಕ್ರಮವನ್ನು ಬೆಬಿಲೋನೀ ಜನರಿಂದ ಅಲ್ಲದಿದ್ದರೆ ಚೀನೀಯರಿಂದ ಕಲಿತಿದ್ದರು.

೭. ಭಾರತ ವರ್ಷದ ಮೂಲನಿವಾಸಿಗಳಲ್ಲಿ ಶಿವನ ಲಿಂಗರೂಪದ ಆರಾಧನೆಯೂ, ನಾಗಾರಾಧನೆಯೂ ಆರ್ಯಜನರು ಭಾರತ ವರ್ಷವನ್ನು ಪ್ರವೇಶಿಸುವ ಮೊದಲಿನಿಂದಲೂ ಪ್ರಚಲಿತವಿದ್ದಿತು. ಮತ್ತು ಆರ್ಯಜನರು ಶಿವನ ಮತ್ತು ನಾಗನ ಆರಾಧನೆಯನ್ನು ಭಾರತವರ್ಷದ ಮೂಲನಿವಾಸಿಗಳಿಂದ ಅಂದರೆ ದ್ರಾವಿಡರಿಂದ ಸ್ವೀಕರಿಸಿದ್ದರು. ಅರ್ಥಾತ್ ಆರ್ಯಜನರಲ್ಲಿ ಶಿವನ ಆರಾಧನೆಯು ಋಗ್ವೇದೋತ್ತರಕಾಲದ ಬೆಳವಣಿಗೆಯಾಗಿದೆ.

೮. ಆರ್ಯಜನರಲ್ಲಿ ಸ್ವಸ್ತಿಕದ ಚಿಹ್ನೆಗಳು ಪ್ರಚಲಿತವಿರಲಿಲ್ಲ. ಆರ್ಯ ಜನರು ಸ್ವಸ್ತಿಕದ ವಿರೋಧಿಗಳಾಗಿದ್ದರು. ಅಂದರೆ ಸ್ವಸ್ತಿಕದ ಚಿಹ್ನೆಗಳು ಆರ್ಯ ಜನರಿಗೆ ಸೇರಿದವುಗಳಲ್ಲ.

೯. ಸಿಂಧೂ ಕಣಿವೆಯ ಅಗೆತಗಳಲ್ಲಿ ಬೆಳಕಿಗೆ ಬಂದಿರುವ ಪ್ರಾಚೀನ ಅವಶೇಷಗಳಿಂದ ವ್ಯಕ್ತವಾಗುವ ಸಂಸ್ಕೃತಿಯು ಆರ್ಯರದ್ದಲ್ಲ. ಆರ್ಯರು ಭಾರತವರ್ಷಕ್ಕೆ ಬರುವ ಮೊದಲೇ ಆ ಸಂಸ್ಕೃತಿಯು ಸಿಂಧೂ ಕಣಿವೆಯಲ್ಲಿ ಸ್ಥಾಪಿತವಾಗಿತ್ತು. ಆರ್ಯ ಜನರು ಬಂದು ಅದನ್ನು ನಾಶಗೊಳಿಸಿದರು.

ಹಿಂದೆ ಉದಹರಿಸಿದ ಮತ್ತು ಅವುಗಳಂಥ ಬೇರೆ ಹಲವು ಕಲ್ಪನೆಗಳನ್ನು ಪ್ರಚುರಪಡಿಸತೊಡಗಿದ ಪಾಶ್ಚಾತ್ಯ ವಿದ್ವಾಂಸರು ಮುಖ್ಯವಾಗಿ ಬ್ರಿಟಿಷ್, ಅಮೇರಿಕನ್ ಮತ್ತು ಫ್ರೆಂಚ್ ವಿದ್ವಾಂಸರು ಆ ಕಲ್ಪನೆಗಳನ್ನು ಐತಿಹಾಸಿಕ ಸತ್ಯಗಳೆಂದು ಸಾಧಿಸಲು ಸಂಘಟಿತರಾಗಿ ಪ್ರಯತ್ನಿಸುತ್ತಿದ್ದರೆಂದು ಅವರು ಬರೆದ ಲೇಖನಗಳಿಂದ ಮತ್ತು ಪ್ರಕಟಿಸಿದ ಪುಸ್ತಕಗಳ ಅಧ್ಯಯನದಿಂದ ಸ್ಪಷ್ಟವಾಗಿ ಸಿದ್ಧವಾಗುತ್ತದೆ. ಇತ್ತೀಚಿನ ಕೆಲವು ವರ್ಷಗಳಿಂದ ಹಲವು ರೂಸೀ ವಿದ್ವಾಂಸರು ಕೂಡ ಸಿಂಧೂ ಸಂಸ್ಕೃತಿಯ ಸಂಬಂಧದಲ್ಲಿ ಇತರ ಪಾಶ್ಚಾತ್ಯ ವಿದ್ವಾಂಸರಂತೆಯೇ ನುಡಿಯತೊಡಗಿದ್ದಾರೆ. ಆದರೆ ಆ ಪಾಶ್ಚಾತ್ಯ ವಿದ್ವಾಂಸರಲ್ಲಿ ಒಬ್ಬನೇ ಒಬ್ಬನಾದರೂ ತನ್ನ ಕಲ್ಪನೆಯನ್ನು ಸತ್ಯವೆಂದು ಸಿದ್ಧಪಡಿಸಲು ವಿಶ್ವಾಸಾರ್ಹವಾದ ಅಂದರೆ ಪ್ರಾಚೀನ ಲಿಖಿತಪ್ರಮಾಣಗಳನ್ನು ಉದಹರಿಸುವ ಗೋಜಿಗೆ ಹೋಗದೇ ಒಬ್ಬ ವಿದ್ವಾಂಸನು ತನ್ನ ಬುಡವಿಲ್ಲದ ಕಲ್ಪನೆಯನ್ನು ಸರಿಯೆಂದು ಸಿದ್ಧಪಡಿಸಲು ಬೇರೊಬ್ಬ ವಿದ್ವಾಂಸನ ಅಂಥದೇ ಪ್ರಮಾಣವಿಲ್ಲದ ಬೇರೊಂದು ಕಲ್ಪನೆಯನ್ನು ಪ್ರಮಾಣವನ್ನಾಗಿ ಉದಹರಿಸುತ್ತ ಸಾಗಿದ್ದಾನೆ. ಅದರ ಮೇಲಿಂದ ಆ ಪಾಶ್ಚಾತ್ಯ ವಿದ್ವಾಂಸರು ಉದ್ದೇಶಪೂರ್ವಕ ಅಂಥ ಕಲ್ಪನೆಗಳನ್ನು ಪ್ರಚಾರ ಮಾಡುತ್ತಿದ್ದರೆಂದು ಸಿದ್ಧವಾಗುತ್ತದೆ. ಭಾರತ ವರ್ಷದಲ್ಲಿ ತಮ್ಮ ಆಳ್ವಿಕೆಯನ್ನು ಸ್ಥಿರಗೊಳಿಸುವುದು ಮತ್ತು ಭಾರತೀಯರನ್ನು ಕ್ರೈಸ್ತರನ್ನಾಗಿ ಮತಾಂತರಿಸುವುದು ಇವಿಷ್ಟೇ ಅವರ ಉದ್ದೇಶಗಳಾಗಿರಲಿಲ್ಲ. ಪಾಶ್ಚಾತ್ಯರು ಭಾರತೀಯರಿಂದ ವೈಜ್ಞಾನಿಕ ವಿಷಯಗಳಲ್ಲಿ ಏನನ್ನೂ ಪಡೆದಿಲ್ಲವೆಂದು ಸಾಧಿಸುವುದೂ ಅವರ ಉದ್ದೇಶಗಳಲ್ಲಿ ಸೇರಿದ್ದಿತೆಂದು ಅವರ ಲೇಖನಗಳ ಮೇಲಿಂದ ಹೇಳಬಹುದಾಗಿದೆ. ಪಾಶ್ಚಾತ್ಯರು ಭಾರತ ವರ್ಷಕ್ಕೆ ಬರುವುದಕ್ಕಿಂತ ಮೊದಲಿನ ಅವರ ಇತಿಹಾಸವು ಅವರ ಆ ಉದ್ದೇಶವನ್ನು ನೆರವೇರಗೊಡುವಂತಿರಲಿಲ್ಲವಾದರೂ ಅವರು ತಮ್ಮ ಆ ಪ್ರಯತ್ನವನ್ನು ಬಿಟ್ಟಿರಲಿಲ್ಲ. ಆದುದರಿಂದಲೇ ಅವರು ವೇದಕಾಲದ ಭಾರತೀಯ ಆರ್ಯ ಜನರಲ್ಲಿ ಲಿಪಿಯು ಪ್ರಚಲಿತವಿರಲಿಲ್ಲವೆಂಬ ಪ್ರಮಾಣವಿರುದ್ಧ ಕಲ್ಪನೆಯನ್ನು ಪ್ರಚಾರ ಮಾಡಿದ್ದರು. ಮತ್ತು ಆ ಮೂಲಕ ಸಿಂಧೂ ಸಂಸ್ಕೃತಿಯು ಆರ್ಯ ಜನರದ್ದಲ್ಲವೆಂದು ಸಾಧಿಸಲು ಅನುಕೂಲವಾದ ಹಿನ್ನೆಲೆಯನ್ನು ಸಿದ್ಧಗೊಳಿಸಿದ್ದರು. ಅದನ್ನು ಮುಂದಿನ ವಿವರಗಳಿಂದ ಸರಿಯಾಗಿ ತಿಳಿಯಬಹುದು.

ಶಕವರ್ಷ ೧೮೪೪ರಲ್ಲಿ ಅಂದರೆ 1922ನೆಯ ಇಸವಿಯಲ್ಲಿ ಬ್ರಿಟಿಷ್

ಸರಕಾರದ ಪುರಾತತ್ತ್ವ ವಿಭಾಗದ ಜನರು (Archealogical Survey) ಪಂಜಾಬದ ರಾವೀ ನದಿಯ ದಡದಲ್ಲಿ ಹಳಪ್ಪಾ (Harappa) ಎಂಬ ಹಳ್ಳಿಯಲ್ಲಿ ಕಂಡು ಬಂದ ಕೆಲವು ಪ್ರಾಚೀನ ಹಾಳು ದಿನ್ನೆಗಳನ್ನು ಅಗೆಯಿಸತೊಡಗಿದ ತರುವಾಯದಿಂದ ಭಾರತೀಯರಿಗೆ ಆ ಮೊದಲು ಗೊತ್ತಿಲ್ಲದ ಬೇರೆ ಹಲವು ಅಗೆತಗಳ ವೃತ್ತಾಂತವು ಕೊಂಚಕೊಂಚವಾಗಿ ಗೊತ್ತಾಗತೊಡಗಿತು. ಮೊದಲನೆಯದಾಗಿ ಶಕದ ಹದಿನೇಳನೆಯ ಶತಮಾನದ ಆದಿಭಾಗದಲ್ಲಿ ಹಲವು ಪಾಶ್ಚಾತ್ಯ ದೇಶಗಳ ಅನ್ವೇಷಕರ ತಂಡಗಳು ಸಾಇಪ್ರಸ್, ಮತ್ತು ಕ್ರೀಟ ದ್ವೀಪಗಳಿಂದ ಮೊದಲುಗೊಂಡು ಕಿರಿಯ ಆಸ್ಯದಲ್ಲಿ, ಆರ್ಮೀನಿಯಾದಲ್ಲಿ. ಮೆಸಪೊಟೇಮಿಯಾದಲ್ಲಿ ಬೇಬಿಲೋನಿಯಾದಲ್ಲಿ, ಈರಾನಿನಲ್ಲಿ, ಅಫಗಾನಿಸ್ಥಾನದಲ್ಲಿ, ಬಲೂಚೀಸ್ಥಾನದಲ್ಲಿ ಮತ್ತು ಪಂಜಾಬದಲ್ಲಿ ಕಂಡು ಬಂದಿದ್ದ ಹಲವು ಹಾಳು ದಿನ್ನೆಗಳನ್ನು ಅಗೆದಿದ್ದುವೆಂದು ಮತ್ತು ಅಲ್ಲಿನ ಅಗೆತಗಳಲ್ಲಿ ನಾನಾ ಬಗೆಯ ಕುಂಭಗಳು. ಗಾಜಿನ ಬಳೆಗಳು, ಮಣಿಗಳು, ಪರಾತಗಳು ಹಲವು ಬಗೆಯ ಉಪಕರಣಗಳು ಮತ್ತು ಹಾಲುಗಲ್ಲಿನ ಬಿಲ್ಲೆಗಳು ದೊರೆತಿದ್ದುವೆಂದು ಹಾಗೂ ಅವುಗಳ ಮೇಲೆ ಸಿಂಧೂ ಬಿಲ್ಲೆಗಳ ಮೇಲಿರುವಂಥ ಬರಹ ಮತ್ತು ಚಿತ್ರಸಂಕೇತಗಳಿದ್ದುವೆಂದು ಗೊತ್ತಾಯಿತು.

ಎರಡನೆಯದಾಗಿ ಶಕವರ್ಷ ೧೭೭೫ರಲ್ಲಿ ಅಂದರೆ ಹಳಪ್ಪಾ ಹಳ್ಳಿಯಲ್ಲಿ ವ್ಯವಸ್ಥಿತವಾದ ಅಗೆತಗಳು ಪ್ರಾರಂಭವಾಗುವುದಕ್ಕಿಂತ ಅರುವತ್ತೆಂಟು ವರ್ಷಗಳ ಮೊದಲೊಮ್ಮೆ, ಮತ್ತು ೧೭೭೮ರಲ್ಲಿ ಒಮ್ಮೆ ಹಾಗೆ ಎರಡು ಸರ್ತಿ, ಆಗ ಪುರಾತತ್ತ್ವ ವಿಭಾಗದ ಮುಖ್ಯ ಅಧಿಕಾರಿಯಾಗಿದ್ದ ಜನರಲ್ ಅಲೆಕ್ಸಾಂಡರ್ ಕನಿಂಘಾಮ್ ಎಂಬ ಬ್ರಿಟಿಷ್ ಅಧಿಕಾರಿಯೊಬ್ಬರು ಹಳಪ್ಪಾದಲ್ಲಿ ಉಗಿಬಂಡಿಯ ಹಾದಿಯನ್ನು ಅಗೆಯುತಿದ್ದ ಕೂಲಿಯಾಳುಗಳಿಂದ ನೂರಾರು ಹಾಲುಗಲ್ಲಿನ ಬಿಲ್ಲೆಗಳನ್ನೂ ಬೇರೆ ಹಲವು ಬಗೆಯ ವಸ್ತುಗಳನ್ನೂ ಸಂಗ್ರಹಿಸಿ ಇಂಗ್ಲಂಡಿಗೆ ಕಳುಹಿಸಿದ್ದರೆಂಬುದು ಗೊತ್ತಾಯಿತು.

ಪಾಶ್ಚಾತ್ಯ ವಿದ್ವಾಂಸರು ಆರ್ಯಜನರ ಸಂಬಂಧದಲ್ಲಿ ತಮ್ಮ ಪ್ರಮಾಣ ರಹಿತ ಕಲ್ಪನೆಗಳನ್ನು ಪ್ರಕಟಿಸಿ ಪ್ರಚಾರಮಾಡತೊಡಗಿದ ಕಾಲದೊಂದಿಗೆ—ಹಿಂದೆ ಉದಹರಿಸಿದ ಎರಡು ಘಟನೆಗಳ ಕಾಲವನ್ನು ಹೊಂದಿಸಿ ವಿಮರ್ಶಿಸಿದರೆ ಮುಂದೆ ಕೊಡಲಾಗುವ ಮೂರು ಮುಖ್ಯ ವಿಷಯಗಳು ಸ್ಪಷ್ಟವಾಗಿ ನಿಷ್ಪನ್ನವಾಗುತ್ತವೆ-ಅವುಗಳಲ್ಲಿ ಮೊದಲನೆಯದು-ಪಂಜಾಬದ ಹಳಪ್ಪಾ ಹಳ್ಳಿಯಲ್ಲಿ ವ್ಯವಸ್ಥಿತವಾದ ಅಗೆತಗಳು ಪ್ರಾರಂಭವಾಗುವುದರ ನೂರೈವತ್ತು ವರ್ಷಗಳ ಮೊದಲಿನಿಂದಲೇ ಬ್ರಿಟಿಷ್ ಮತ್ತು ಅಮೇರಿಕನ್ ವಿದ್ವಾಂಸರಿಗೆ ಹಳಪ್ಪಾದ ಮತ್ತು ಮೆಸಪೊಟೇಮಿಯಾದ (=ಸುಮೇರದ) ಅಗೆತಗಳಲ್ಲಿ ಯಾವ ಬಗೆಯ ಸಂಸ್ಕೃತಿಯು ಬೆಳಕಿಗೆ ಬರಲಿರುವುದೆಂದು ಸರಿಯಾಗಿ ಗೊತ್ತಿದ್ದಿತೆಂಬುದಾಗಿದೆ. ಎರಡನೆಯದು—ಬ್ರಿಟಿಷ್ ಮತ್ತು ಅಮೇರಿಕನ್ ವಿದ್ವಾಂಸರು ಪಶ್ಚಿಮ ಆಸ್ಯದಲ್ಲಿ ಮತ್ತು ಭಾರತವರ್ಷದಲ್ಲಿ

ದೊರೆತ ಬಿಲ್ಲೆಗಳ ಮೇಲಿನ ಬರಹವನ್ನು ಓದಲು ಸಾಧ್ಯವಿಲ್ಲವೆಂದು ಕಂಡು-ಕೊಂಡುದರಿಂದ ಮತ್ತು ಅವರ ಒಲವು ಸೆಮಿಟಿಕ್ ಸಂಸ್ಕೃತಿಯು ಪ್ರಾಚೀನವೆಂದು ಸಾಧಿಸುವುದರ ಕಡೆಗಿದ್ದುದರಿಂದ-ಆ ಬಿಲ್ಲೆಗಳ ಮೇಲಿನ ಚಿತ್ರಸಂಕೇತಗಳಿಂದ ಸೂಚಿತವಾಗುವ ಪ್ರಾಚೀನ ಸಂಸ್ಕೃತಿಯು ಆರ್ಯ ಜನರಿಗೆ ಸೇರಿದುದಲ್ಲವೆಂಬ ನಿರ್ಣಯವನ್ನು ಕೈಗೊಂಡರೆಂಬುದಾಗಿದೆ. ಮೂರನೆಯದು–ಅವರು ಆ ಸಂಸ್ಕೃತಿಯನ್ನು ಆರ್ಯಜನರದ್ದಲ್ಲವೆಂಬ ನಿರ್ಣಯವನ್ನು ಕೈಗೊಂಡುದರಿಂದಲೇ ಆ ಬಿಲ್ಲೆಗಳ ಮೇಲಿನ ಸ್ವಸ್ತಿಕದ ಚಿಹ್ನೆಗಳು, ಶಿವನ ಅಥವಾ ಅಗ್ನಿಯ ಪ್ರತೀಕಗಳು. ಮತ್ತು ನಾಗನ ಚಿತ್ರಗಳು ಆರ್ಯ ಜನರದ್ದಲ್ಲವೆಂದು ಸಾಧಿಸಲು ಅನುಕೂಲವಾಗುವಂತೆ–ಹಿಂದೆ ಉದಹರಿಸಿದ ಹಲವು ಅವಾಸ್ತವ ಕಲ್ಪನೆಗಳನ್ನು ಮುಂದೆ ತಂದಿದ್ದರೆಂಬುದಾಗಿದೆ. ಅರ್ಥಾತ್ ಪಾಶ್ಚಾತ್ಯ ವಿದ್ವಾಂಸರ ಎಲ್ಲ ಕಲ್ಪನೆಗಳು ಪೂರ್ವಗ್ರಹೀತ ನಿರ್ಣಯದ ಹಿನ್ನೆಲೆಯಿಂದಲೇ ಮುಂದೆ ಬಂದಿದ್ದುವೆಂದು ನಿಷ್ಪನ್ನವಾಗುತ್ತದೆ.

ಸಂಸ್ಕೃತದ ವಿದ್ವಾಂಸರೂ ಸಂಸ್ಕೃತ ಸಾಹಿತ್ಯದ ಪ್ರೇಮಿಗಳೂ ಆಗಿದ್ದ ಸರ್ ವಿಲಿಯಮ್ ಜೋನ್ಸ್ ಎಂಬ ಬ್ರಿಟಿಷ್ ಅಧಿಕಾರಿಯೊಬ್ಬರು ಶಕ ವರ್ಷ ೧೭೭೮ರಲ್ಲಿ ಮೊತ್ತಮೊದಲು ಬ್ರಾಹ್ಮೀವರ್ಣಮಾಲೆಯು ಅಂದರೆ ಚಕ್ರವರ್ತಿ ಅಶೋಕ ಮಹಾರಾಜನು ತನ್ನ ಧರ್ಮಶಾಸನಗಳನ್ನು ಬರೆಯಿಸಲು ಉಪಯೋಗಿಸಿದ ವರ್ಣಮಾಲೆಯು ಸೆಮಿಟಿಕ್ ಮೂಲದ ವರ್ಣಮಾಲೆಯಿಂದ ರೂಪಾಂತರವಾದುದೆಂಬ ಅಭಿಪ್ರಾಯವನ್ನು ವ್ಯಕ್ತಗೊಳಿಸಿದರು. ತರುವಾಯ ಹಲವು ಮಂದಿ ಪಾಶ್ಚಾತ್ಯ ವಿದ್ವಾಂಸರು ಅವರ ಆ ಅಭಿಪ್ರಾಯವನ್ನು ತಮ್ಮ ಲೇಖನಗಳಿಂದ ಸಮರ್ಥಿಸಿದರಲ್ಲದೇ ಶಕಪೂರ್ವ ಎಂಟನೆಯ ಶತಮಾನಕ್ಕಿಂತ ಮೊದಲು ಭಾರತ ವರ್ಷದ ವೈದಿಕ ಜನರಿಗೆ ಲಿಪಿಯು ಪರಿಚಯವಿರಲಿಲ್ಲವೆಂದು ಮತ್ತು ಆ ಕಾರಣದಿಂದ ವೇದ ಮಂತ್ರಗಳು ಬರೆಯಲ್ಪಟ್ಟಿರಲಿಲ್ಲವೆಂದು ವಾದಿಸತೊಡಗಿದರು. ಅವರು ವೈದಿಕ ಜನರಲ್ಲಿ ಲಿಪಿಯು ಪ್ರಚಲಿತವಿರಲಿಲ್ಲವೆಂದು ವಾದಿಸುತ್ತಿದ್ದುದರ ಅರ್ಥವು ಅತ್ಯಂತ ಸ್ಪಷ್ಟವಿದ್ದಿತು. ಮೊದಲನೆಯದಾಗಿ ಪಾಶ್ಚಾತ್ಯರ ಸಿದ್ಧಾಂತದ ಪ್ರಕಾರ ಯಾವುದೊಂದು ದೇಶದ ಇತಿಹಾಸವು ಆ ದೇಶದಲ್ಲಿ ಸಂಭವಿಸಿದ ಘಟನೆಗಳ ಲಿಖಿತ ಪ್ರಮಾಣಗಳು ದೊರೆಯುವ ಕಾಲದಿಂದ ಪ್ರಾರಂಭವಾಗುತ್ತದೆ. ಮತ್ತು ಲಿಖಿತ ಪ್ರಮಾಣಗಳ ಕಾಲವು "ಇತಿಹಾಸ ಕಾಲ"ವೆಂದೂ, ಅದಕ್ಕಿಂತ ಮೊದಲಿನ ಕಾಲವು "ಇತಿಹಾಸ ಪೂರ್ವಕಾಲ"ವೆಂದೂ ಅನಿಸಿಕೊಳ್ಳುತ್ತದೆ. ಆದುದರಿಂದ ಶಕಪೂರ್ವ ಎಂಟನೆಯ ಶತಮಾನಕ್ಕಿಂತ ಮೊದಲು ಭಾರತೀಯರಲ್ಲಿ ಅಥವಾ ವೈದಿಕ ಆರ್ಯ ಜನರಲ್ಲಿ ಲಿಪಿಯು ಪ್ರಚಲಿತವಿರಲಿಲ್ಲವೆಂದು ಸಾಧಿಸಿದರೆ ಭಾರತೀಯರಿಗೆ ಪ್ರಾಚೀನ ಇತಿಹಾಸವಿಲ್ಲವೆಂದಾಗುವುದರೊಂದಿಗೆ ವೈದಿಕಧರ್ಮದ ಮೂಲಾಧಾರವಾಗಿರುವ ವೇದಗಳಿಗೆ ಐತಿಹಾಸಿಕ ಮೂಲ್ಯವೂ

ಇಲ್ಲವಾಗುವುದು. ಮಾತ್ರವಲ್ಲ ಆರ್ಯ ಜನರಲ್ಲಿ ಶಕಪೂರ್ವ ಎಂಟನೆಯ ಶತಮಾನಕ್ಕಿಂತ ಮೊದಲು ಲಿಪಿಯು ಪ್ರಚಲಿತವಿರಲಿಲ್ಲವೆಂದು ಮತ್ತು ಆರ್ಯ ಜನರು ಶಕಪೂರ್ವ ೧೫೦೦ ವರ್ಷಗಳ ಹಿಂದೆ ಭಾರತವರ್ಷವನ್ನು ಪ್ರವೇಶಿಸಿದ್ದರೆಂದು ಸಾಧಿಸಿದರೆ ಸಿಂಧೂ ಕಣಿವೆಯ ಅಗೆತಗಳಲ್ಲಿ ಬೆಳಕಿಗೆ ಬರಲಿದ್ದ ಪ್ರಾಚೀನ ಸಂಸ್ಕೃತಿಯು ಆರ್ಯಜನರದ್ದಲ್ಲವೆಂದು ಮೊದಲೇ ಸಿದ್ಧಪಡಿಸಿಟ್ಟಂತೆಯೂ ಆಗುವುದು.

ಆದರೆ ಆರ್ಯ ಜನರಲ್ಲಿ ಋಗ್ವೇದ ಕಾಲಕ್ಕಿಂತ ಮೊದಲಿನಿಂದಲೂ ಲಿಪಿಯು ಪ್ರಚಲಿತವಿದ್ದಿತೆಂದು ಸಂದೇಹಕ್ಕೆಡೆಯಿಲ್ಲದಂತೆ ಸಿದ್ಧಪಡಿಸುವ ಉಲ್ಲೇಖಗಳೂ, ಸಿಂಧೂ ಕಣಿವೆಯ ಸಂಸ್ಕೃತಿಯು ಸಂಪೂರ್ಣವಾಗಿ ಆರ್ಯ ಜನರಿಗೆ ಸೇರಿದುದೆಂದು ಸಿದ್ಧಪಡಿಸುವ ನೂರಾರು ಪ್ರಮಾಣಗಳೂ ಋಗ್ವೇದದಲ್ಲಿ ಮತ್ತು ಇತರ ವೈದಿಕ ಗ್ರಂಥಗಳಲ್ಲಿ ಇವೆ. ಅಂದರೆ ಸಿಂಧೂ ಬಿಲ್ಲೆಗಳ ಮೇಲಿರುವ

+ 卐 卍 ○ □ D △ ಈ ಎಲ್ಲ ಆಕೃತಿಗಳ ಉಲ್ಲೇಖಗಳು ಯಜುರ್ವೇದದ ತೈತ್ತಿರೀಯ ಸಂಹಿತೆಯಲ್ಲಿವೆಯಲ್ಲದೇ ಆ ಎಲ್ಲ ಆಕೃತಿಗಳು ಬ್ರಾಹ್ಮೀವರ್ಣಮಾಲೆಯಲ್ಲಿ ವರ್ಣಚಿಹ್ನೆಗಳೂ ಆಗಿವೆ. ಹಾಗೆಯೇ ಸಿಂಧೂ ಬಿಲ್ಲೆಗಳ ಮೇಲಿರುವ ಹೋರಿಗಳ ಮತ್ತು ಇತರ ದೇವತೆಗಳ ಯಥಾವತ್ತಾದ ವರ್ಣನೆಗಳು ಋಗ್ವೇದದಲ್ಲಿವೆ. ಅದರ ಮೇಲಿಂದ ಆರ್ಯ ಜನರಲ್ಲಿ ಅತ್ಯಂತ ಪ್ರಾಚೀನ ಕಾಲದಿಂದಲೂ ಲಿಪಿಯು ಪ್ರಚಲಿತವಿದ್ದಿತೆಂದು ಮತ್ತು ಕಾಲ ಕಾಲಕ್ಕೆ ಅವರಲ್ಲಿ ಪರಿವರ್ತನಗಳು ಜರುಗುತಿದ್ದುವೆಂದು ಸ್ಪಷ್ಟವಾಗಿ ಸಿದ್ಧವಾಗುತ್ತದೆ. ಲಿಪಿಯು ಕುರಿತಾದ ವಿಸ್ತೃತ ವಿವರಗಳು ಮುಂದೆ "ಬ್ರಾಹ್ಮೀ ಲಿಪಿಯ ಮೂಲ" ಎಂಬ ಅಧ್ಯಾಯವಲ್ಲಿಯೂ, ಚಿತ್ರಸಂಕೇತಗಳ" ವಿವರಗಳು "ಸಿಂಧೂ ಸಂಸ್ಕೃತಿ" ಎಂಬ ಅಧ್ಯಾಯದಲ್ಲಿಯೂ ಬರುವುವು.

ಪಾಶ್ಚಾತ್ಯ ವಿದ್ವಾಂಸರು ಮುಖ್ಯವಾಗಿ ಬ್ರಿಟಿಷ್ ಮತ್ತು ಅಮೇರಿಕನ್ ವಿದ್ವಾಂಸರು ಭಾರತೀಯರ ಅಥವಾ ಆರ್ಯಜನರ ಸಂಬಂಧದಲ್ಲಿ ಪ್ರಚಾರ ಮಾಡಿದ ಕಲ್ಪನೆಗಳಲ್ಲಿ ಸ್ವಸ್ತಿಕದ ಚಿಹ್ನೆಗಳು ಆರ್ಯಜನರಿಗೆ ಸೇರಿದವುಗಳಲ್ಲವೆಂದು ಸಾಧಿಸಲು ಮುಂದೆ ತಂದ ಕಲ್ಪನೆಗಳು ಅತ್ಯಂತ ಮುಖ್ಯವೂ ಮಹತ್ವದವುಗಳೂ ಆಗಿವೆ. ಏಕೆಂದರೆ ಸಿಂಧೂ ಸಂಸ್ಕೃತಿಯು ಯಾವ ಜನಾಂಗಕ್ಕೆ ಸೇರಿದುದೆಂದು ಪ್ರತಿವಾದಕ್ಕೆಡೆಯಿಲ್ಲದಂತೆ ಸಿದ್ಧಪಡಿಸುವ ಶಕ್ತಿಯು ಆ ಚಿಹ್ನೆಗಳಲ್ಲಿ ಅಡಗಿದೆ. ಆ ಚಿಹ್ನೆಗಳು ಭೂಮಿಯ ಉತ್ತರ ಗೋಲಾರ್ಧದಲ್ಲಿರುವ ಸಕಲ ದೇಶಗಳಲ್ಲಿಯೂ, ಸಿಂಧೂ ಕಣಿವೆಯಲ್ಲಿಯೂ ದೊರಕಿವೆ. ಸಿಂಧೂ ಕಣಿವೆಯಲ್ಲಿ ಬೆಳಕಿಗೆ ಬಂದಿರುವ ಹಲವು ಬಿಲ್ಲೆಗಳ ಮೇಲೆ ಸ್ವಸ್ತಿಕದ ಚಿಹ್ನೆಗಳಿರುವುದರಿಂದ ಸಿಂಧೂ ಕಣಿವೆಯಲ್ಲಿ ನೆಲಸಿದ್ದ

ಜನರು ಸ್ವಸ್ತಿಕಗಳನ್ನು ಉಪಯೋಗಿಸುತ್ತಿದ್ದ ಜನಾಂಗಕ್ಕೆ ಸೇರಿದವರಾಗಿದ್ದರೆಂಬುದು ಸ್ಪಷ್ಟವಾಗಿ ಸಿದ್ಧವಾಗುತ್ತದೆ.

ಸಾಧಾರಣ ತೊಂಭತ್ತು ವರ್ಷಗಳ ಹಿಂದೆ ಅಂದರೆ ಶಕದ ಹತ್ತೊಂಭತ್ತನೆಯ ಶತಮಾನದ ಅಂತಿಮ ಭಾಗದಲ್ಲಿ ಹಲವು ಮಂದಿ ಪಾಶ್ಚಾತ್ಯ ವಿದ್ವಾಂಸರು ಸ್ವಸ್ತಿಕದ ಮೂಲದ ಸಂಬಂಧದಲ್ಲಿ ಮತ್ತು ಅದು ಯಾವ ಜನಾಂಗಕ್ಕೆ ಸೇರಿದುದೆಂಬುದರ ಸಂಬಂಧದಲ್ಲಿ ವರ್ತಮಾನ ಪತ್ರಿಕೆಗಳಲ್ಲಿ ಲೇಖನಗಳ ಮೂಲಕ ಬಿರುಸಾದ ಚರ್ಚೆಯನ್ನು ಪ್ರಾರಂಭಿಸಿದ್ದರು. ಆ ಚರ್ಚೆಯಲ್ಲಿ ಭಾಗವಹಿಸಿದ ಕೆಲವು ಮಂದಿ ವಿದ್ವಾಂಸರು ಸ್ವಸ್ತಿಕಗಳು ಆರ್ಯ ಜನರ ಕುರುಹುಗಳೆಂದು ವಾದಿಸುತ್ತಿದ್ದರಾದರೆ ಬೇರೆ ಕೆಲವರು ಆ ವಾದವನ್ನು ವಿರೋಧಿಸಿ ಸ್ವಸ್ತಿಕಗಳು ಆರ್ಯ ಜನರ ಕುರುಹುಗಳಲ್ಲವೆಂತಲೂ, ಆರ್ಯ ಜನರು ಸ್ವಸ್ತಿಕದ ವಿರೋಧಿಗಳೆಂತಲೂ ವಾದಿಸುತ್ತಿದ್ದರು. ಕಡೆಗೂ ಅವರೊಳಗೆ ಒಮ್ಮತವಾಗಲಿಲ್ಲ. ಕಾರಣವೇನೆಂದರೆ ಯಾರೊಬ್ಬರ ವಾದಕ್ಕೂ ಪ್ರಾಚೀನ ಲಿಖಿತ ಪ್ರಮಾಣಗಳ ಆಧಾರವಿರಲಿಲ್ಲ. ಅಲ್ಲದೇ ಆ ಚಿಹ್ನೆಗಳು ದೊರಕಿದ ಯುರೋಪಿನ ಎಲ್ಲ ದೇಶಗಳ ಜನರು ಕ್ರೈಸ್ತಮತಕ್ಕೆ ಸೇರಿದುದರಿಂದ ಅವರಿಗೆ ಆ ಚಿಹ್ನೆಗಳಿಗೆ ಸಂಬಂಧಿಸಿದ ಪ್ರಾಚೀನ ಐತಿಹ್ಯಗಳೂ ಅವುಗಳ ಉಪಯೋಗಗಳೂ ಮರೆತು ಹೋಗಿದ್ದುವು. ಆದರೆ 卐 ಈ ಚಿಹ್ನೆಯು ಸೂರ್ಯನ ಪ್ರತೀಕ ವೆಂಬುದರಲ್ಲಿ ಅವರೊಳಗೆ ಬಹುಮತವಿತ್ತು. ಮತ್ತು ಭಾರತವರ್ಷದಲ್ಲಿ ಅದರ ಉಪಯೋಗವು ಅವ್ಯಾಹತವಾಗಿ ಸಾಗಿ ಬಂದಿದ್ದುದರಿಂದ ಎಲ್ಲ ಪಾಶ್ಚಾತ್ಯರು ಒಮ್ಮತದಿಂದ ಆ ಚಿಹ್ನೆಗೆ ಭಾರತವರ್ಷದಲ್ಲಿ ಪ್ರಚಲಿತವಿದ್ದ **"ಸ್ವಸ್ತಿಕ"** ವೆಂಬ ಸಂಸ್ಕೃತ ಭಾಷೆಯ ಹೆಸರನ್ನು ಅಂತಾರಾಷ್ಟ್ರೀಯ ಉಪಯೋಗದ ಶಬ್ದವನ್ನಾಗಿ ಸ್ವೀಕರಿಸಿದರು. ಅದರ ತರುವಾಯವೂ ಸ್ವಸ್ತಿಕವು ಭಾರತವರ್ಷದ ಮೂಲ ನಿವಾಸಿಗಳಿಗೆ ಸೇರಿದುದೆಂದು ವಾದಿಸುವ ಬ್ರಿಟಿಷ್ ಪಾದ್ರಿಗಳು ಇದ್ದರು.

ಸ್ವಸ್ತಿಕದ ಚಿಹ್ನೆಗಳು 卐 ಹೀಗೆ ಬಲಗಡೆಗೆ ಮೋರೆಯಾಗಿಯೂ, 卍 ಹೀಗೆ ಎಡಗಡೆಗೆ ಮೋರೆಯಾಗಿಯೂ + ಹೀಗೆ ನಾಲ್ಕು ದಿಕ್ಕುಗಳಿಗೆ ನಾಲ್ಕು ಕಾಲುಗಳಾಗಿಯೂ ಮೂರು ಬಗೆಯಾಗಿದ್ದು ಮೊದಲಿನ ಎರಡು ಬಗೆಯ ಸ್ವಸ್ತಿಕಗಳು ಭೂಮಿಯ ಉತ್ತರ ಗೋಲಾರ್ಧದಲ್ಲಿರುವ ಸಕಲ ದೇಶಗಳಲ್ಲಿ ದೊರೆತಿವೆ. ಸಿಂಧೂ ಕಣಿವೆಯ ಅಗೆತಗಳಲ್ಲಿ ಮತ್ತು ಬೇರೆ ಕೆಲವು ದೇಶಗಳಲ್ಲಿ ಮೂರೂ ಬಗೆಯ ಸ್ವಸ್ತಿಕಗಳು ದೊರೆತಿವೆ. ಅಧಿಕಾಂಶ ಪಾಶ್ಚಾತ್ಯ ವಿದ್ವಾಂಸರು ಬಲಗಡೆಗೆ ಮೋರೆಯಾಗಿರುವ ಸ್ವಸ್ತಿಕವನ್ನು ಸೂರ್ಯನ ಪ್ರತೀಕವೆಂದು ಒಪ್ಪಿದ್ದಾರಾದರೂ ಅದು

ಸೂರ್ಯನ ಪ್ರತೀಕವಾಗಲು ಕಾರಣವೇನೆಂದು ಹೇಳಲು ಶಕ್ತರಾಗಿಲ್ಲ. ಅವರ ಅಭಿಪ್ರಾಯದಲ್ಲಿ ಸ್ವಸ್ತಿಕದ ಚಿಹ್ನೆಗಳು ಅತ್ಯಂತ ಪ್ರಾಚೀನವಾಗಿದ್ದು ಅವುಗಳ ಇತಿಹಾಸವು ಭೂತಕಾಲದ ಕತ್ತಲೆಯಲ್ಲಿ ಅಡಗಿದೆಯೆಂದಿದೆ. ಆದರೆ ವೈದಿಕ ಸಾಹಿತ್ಯದ ನೆರವಿನಿಂದ ಮತ್ತು ಆರ್ಯ ಜನರ ಉತ್ತರ ಧ್ರುವಪ್ರದೇಶದ ವಸತಿಯ ಆಧಾರದಿಂದ ಆ ಚಿಹ್ನೆಗಳ ಇತಿಹಾಸವನ್ನು ಮತ್ತು ಉಪಯೋಗವನ್ನು ಕಂಡು ಹಿಡಿಯಲು ಸಾಧ್ಯವಿದೆ.

ವಾಸ್ತವವಾಗಿ ಆ ಮೂರು ಚಿಹ್ನೆಗಳ ಇತಿಹಾಸವು ಹತ್ತು ಸಾವಿರ ವರ್ಷಗಳಿಗಿಂತ ಪ್ರಾಚೀನವಾಗಿದೆಯಲ್ಲದೇ ಆರ್ಯಜನರ ಉತ್ತರಧ್ರುವದ ಬಳಿಯಲ್ಲಿನ ವಸತಿಯೊಂದಿಗೆ ಸಂಬಂಧಪಟ್ಟುದಾಗಿದೆ. ಆ ಮೂರು ಚಿಹ್ನೆಗಳಲ್ಲಿ + ಈ ಚಿಹ್ನೆಯು ಮೊದಲು ರೂಪತಳೆದುದಾಗಿದ್ದು ಅದರ ಕಾಲುಗಳನ್ನು ಬಲಕ್ಕೂ, ಎಡಕ್ಕೂ ಬಗ್ಗಿಸಿದುದರಿಂದ ಇತರ ಎರಡು ಚಿಹ್ನೆಗಳು ಹುಟ್ಟಿದವುಗಳಾಗಿವೆ. ಉತ್ತರ ಧ್ರುವಪ್ರದೇಶದಲ್ಲಿ ನೆಲಸಿದ್ದ ಆರ್ಯಜನರು ಕಾಡುಗಳಲ್ಲಿ ಸಂಚರಿಸುತಿದ್ದಾಗ ಅಲ್ಲಿ ಮರಗಳು ಸುಟ್ಟು ಉಳಿದ ಕೆಂಡಗಳ ರೂಪದಲ್ಲಿ ಅಗ್ನಿಯನ್ನು ಕಂಡಿದ್ದರು. ಆದರೆ ಮರಗಳು ಹೇಗೆ ಸುಟ್ಟವು ಎಂಬುದು ಅವರಿಗೆ ಹೊಳೆದಿರಲಿಲ್ಲ. ಅವರು ಅಗ್ನಿಯು ಮರಗಳ ಒಳಗೆನೇ ಇರುತ್ತಾನೆಂದು ಮತ್ತು ಗಾಳಿಯು ಬಲವಾಗಿ ಬೀಸಿದಾಗ ಮರಗಳು ಒಂದಕ್ಕೊಂದು ತಾಗಿ ಅಗ್ನಿಯು ಹುಟ್ಟುತ್ತಾನೆಂದು ಭಾವಿಸಿದ್ದರು. ಹಾಗಾಗಿ ಅವರು ಚೆನ್ನಾಗಿ ಒಣಗಿದ ಅಶ್ವತ್ಥವೃಕ್ಷದ ಎರಡು ಕಟ್ಟಿಗೆಗಳನ್ನು ತಿಕ್ಕಿ ಅಗ್ನಿಯನ್ನು ಉತ್ಪಾದಿಸುವುದರಲ್ಲಿ ಸಫಲರಾಗಿದ್ದರು. ಅವರು ಆ ಕಟ್ಟಿಗೆಗಳನ್ನು ಅರಣಿ ಎನ್ನುತಿದ್ದರು. ಮತ್ತು ಅವುಗಳನ್ನು ತಿಕ್ಕಿ ಅಗ್ನಿಯನ್ನು ಉತ್ಪಾದಿಸುವ ಕಾರ್ಯವನ್ನು "ಅಗ್ನಿಮಂಥನ" ಅಂದರೆ "ಬೆಂಕಿ ಕಡೆಯುವಿಕೆ" ಎನ್ನುತಿದ್ದರು,

ಅವರು ಒಂದು ಅರಣಿಯನ್ನು ನೆಲದ ಮೇಲೆ ಹಾಸಿದ ದರ್ಭೆಗಳ ಮೇಲೆ ಪೂರ್ವದಿಂದ ಪಶ್ಚಿಮಕ್ಕೆ ಲಂಬವಾಗಿರುವಂತೆ | ಹೀಗಿಡುತಿದ್ದರು. ಅದು ಅಧರಾರಣಿ ಎನಿಸಿಕೊಳ್ಳುತಿತ್ತು. ತರುವಾಯ ಎರಡನೆಯ ಅರಣಿಯನ್ನು ಅಧರಾರಣಿಯ ಮಧ್ಯದಲ್ಲಿ ಉತ್ತರದಿಂದ ದಕ್ಷಿಣಕ್ಕೆ ಲಂಬವಾಗಿರುವಂತೆ + ಹೀಗಿಡುತಿದ್ದರು. ಅದು ಉತ್ತರಾರಣಿ ಎನಿಸಿಕೊಳ್ಳುತಿತ್ತು. ಅವರು ಆ ಎರಡು ಅರಣಿಗಳಿಂದ ರೂಪುಗೊಳ್ಳುತಿದ್ದ ಆಕೃತಿಯನ್ನು "ಕ" ಎಂದು ಹೆಸರಿಸಿದ್ದರು. ಮತ್ತು ಆ ಆಕೃತಿಯು ಅಗ್ನಿಯ ಹುಟ್ಟಿಗೆ ಕಾರಣವಾಗಿದ್ದುದರಿಂದ ಅದನ್ನು ಅಗ್ನಿಯ ಪ್ರತೀಕವೆಂದು ನಿರ್ಧರಿಸಿದ್ದರು. ಅವರು ಉತ್ತರಾರಣಿಯ ಎರಡು ತುದಿ

ಗಳನ್ನು ಎರಡು ಕೈಗಳಿಂದ ಹಿಡಿದುಕೊಂಡು ಅದನ್ನು ಅಧರಾರಣಿಯ ಮೇಲೆ ಬಲವಾಗಿ ಒತ್ತಿ ಒಮ್ಮೆ ಬಲದ ತುದಿಯನ್ನೂ ಮತ್ತೊಮ್ಮೆ ಎಡದ ತುದಿಯನ್ನೂ ಮುಂದಕ್ಕೆ ತಳ್ಳುತ್ತಿದ್ದರು. ಹಾಗೆ ಬಹಳ ಹೊತ್ತಿನ ತನಕ ಮುಂದಕ್ಕೂ ಹಿಂದಕ್ಕೂ ತಳ್ಳುತ್ತ ಕಡೆಯುತ್ತಿರಲಾಗಿ ಅರಣಿಗಳಲ್ಲಿ ಕಾವೇರಿ ಹೊಗೆ ಹೊರಡುತ್ತಿತ್ತು ಮತ್ತು ಕೊನೆಗೆ ಯಾವುದಾದರೊಂದು ಅರಣಿಯು ಸುಟ್ಟು ಕೆಂಡವಾಗುತ್ತಿತ್ತು.

ಮುಂದೆ ಅವರು ಆ "ಕ" ಎಂಬ ಆಕೃತಿಯ ನಾಲ್ಕು ಕಾಲುಗಳಿಂದ ಕ್ರಾಂತಿಪಥದ ನಾಲ್ಕು ದಿಕ್ಕುಗಳನ್ನು ಸೂಚಿಸತೊಡಗಿದರಲ್ಲದೇ ಆ ನಾಲ್ಕು ಕಾಲುಗಳ ನೆರವಿನಿಂದ ಕ್ರಾಂತಿಪಥದಲ್ಲಿ ಕಾಣಬರುವ ನಕ್ಷತ್ರಗಳ ಗತಿಯನ್ನೂ ನಿರೀಕ್ಷಿಸತೊಡಗಿದರು. ಅವರು ನಕ್ಷತ್ರಗಳನ್ನು ಪ್ರಜೆ ಅನ್ನುತ್ತಿದ್ದರು. ಆದುದರಿಂದ ಆ "ಕ" ಎಂಬ ಆಕೃತಿಯನ್ನು ಪ್ರಜಾಪತಿ ಎನ್ನತೊಡಗಿದರು. ಅವರು ಸೂರ್ಯನ ಗತಿಗೆ ಅನುಸಾರವಾಗಿ ಜರುಗಿಸುತ್ತಿದ್ದ ಯಜ್ಞವು ಇಡೀ ವರ್ಷ ಸಾಗುತ್ತಿತ್ತು. ಹಾಗಾಗಿ ಪ್ರಜಾಪತಿಯು ಸಂವತ್ಸರ ಎಂಬ ಹೆಸರನ್ನೂ ಪಡೆದನು. ಅಂದರೆ "ಪ್ರಜಾಪತಿಯು ಸಂವತ್ಸರ ರೂಪದ ಕ" ಎಂಬ ಹೆಸರನ್ನು ಪಡೆದನು. ಆದರೆ ಪ್ರಜಾಪತಿಯು ಅಗ್ನಿಯಿಂದ ಭಿನ್ನನಾಗಿರಲಿಲ್ಲ. ಆ ಎಲ್ಲ ವಿವರಗಳನ್ನು ಮುಂದೆ ಕೊಡಲಾಗುವ ವೇದವಾಕ್ಯಗಳಿಂದ ಸರಿಯಾಗಿ ತಿಳಿದುಕೊಳ್ಳಬಹುದು.

ಪ್ರಜಾಪತಿರ್ವಾ ಏಷಯದಗ್ನಿಃ । ಸಂವತ್ಸರೋ ವಾ ಏಷಯದಗ್ನಿಃ॥ ॥ತೈ. ಸಂ. ೫-೬-೯ ॥ ಅಂದರೆ—ಈ ಅಗ್ನಿಯು ಪ್ರಜಾಪತಿಯಾಗಿದ್ದಾನೆ. ಈ ಅಗ್ನಿಯೇ ಸಂವತ್ಸರವಾಗಿದ್ದಾನೆ.

ಪ್ರಜಾಪತಿರ್ವೈಕಃ ॥ ತೈ. ಸಂ. ೧-೭-೬-೬ ॥ ಅಂದರೆ-ಪ್ರಜಾಪತಿಯೇ ಕ ಆಗಿದ್ದಾನೆ.

ಯಜ್ಞೋ ವೈ ಪ್ರಜಾಪತಿಃ ॥ ತೈ. ಸಂ. ೫-೧-೮-೩॥ ಅಂದರೆ-ಯಜ್ಞವೇ ಪ್ರಜಾಪತಿಯಾಗಿದ್ದಾನೆ.

ಸಂವತ್ಸರೋಽಗ್ನಿರ್ವೈಶ್ವಾನರಃ ॥ ತೈ. ಸಂ. ೫-೧-೮-೫ ॥ ಅಂದರೆ-ವೈಶ್ವಾನರ ಅಗ್ನಿಯೇ ಸಂವತ್ಸರವಾಗಿದ್ದಾನೆ.

ಕೋ ವೈ ನಾಮ ಪ್ರಜಾಪತಿಃ ॥ ಐ. ಬ್ರಾ. ೩-೨-೨೧ ॥ ಅಂದರೆ-ಪ್ರಜಾಪತಿಯು "ಕ" ಎಂಬ ಹೆಸರಿನವನಾಗಿದ್ದಾನೆ.


ಪ್ರಜಾಪತಿರೇಷೋಽಗ್ನಿಃ ॥ ಸಂವತ್ಸರ ಉ ಪ್ರಜಾಪತಿಃ ॥ ಶ. ಬ್ರಾ. ೮-೩-೨-೮ ॥ ಅಂದರೆ-ಈ ಅಗ್ನಿಯು ಪ್ರಜಾಪತಿಯಾಗಿದ್ದಾನೆ ಮತ್ತು ಆ ಪ್ರಜಾಪತಿಯು ಸಂವತ್ಸರವಾಗಿದ್ದಾನೆ. ಅರ್ಥಾತ್ "ಪ್ರಜಾಪತಿಯು ಸಂವತ್ಸರ ರೂಪದ ಕ"

ಆಗಿದ್ದಾನೆ. ಅದನ್ನು ತೈತ್ತಿರೀಯ ಬ್ರಾಹ್ಮಣದೊಳಗಿನ "ಒಂದೇ ವಾಕ್ಯದಿಂದ" ಸರಿಯಾಗಿ ತಿಳಿದುಕೊಳ್ಳಬಹುದು.

"ಪ್ರಜಾಪತಿಃ ಸಂವತ್ಸರೋ ಮಹಾನ್ ಕಃ" । ತಸ್ಯ ತೇ ವಸಂತಃ ಶಿರಃ। ಗ್ರೀಷ್ಮೋ ದಕ್ಷಿಣಃ ಪಕ್ಷಃ । ವರ್ಷಾಪುಚ್ಛಮ್ । ಶರದುತ್ತರಃ ಪಕ್ಷಃ ॥ ಹೇಮಂತೋ ಮಧ್ಯಮ್ ॥ ತೈ. ಬ್ರಾ. ೩-೧೦-೨-೪ ॥

ಅಂದರೆ-"ಪ್ರಜಾಪತಿ ಎಂಬ ನೀನು ಸಂವತ್ಸರ ರೂಪದ ದೊಡ್ಡ "ಕ" ಆಗಿರುತ್ತೀ" ಅಂಥ ನಿನಗೆ ವಸಂತ ಋತುವು ತಲೆಯಾಗಿರುತ್ತದೆ. ಗ್ರೀಷ್ಮ ಋತುವು ಬಲದ ರೆಕ್ಕೆಯಾಗಿರುತ್ತದೆ. ವರ್ಷಾಋತುವು ಬಾಲವಾಗಿರುತ್ತದೆ, ಶರದೃತುವು ಎಡದ ರೆಕ್ಕೆಯಾಗಿರುತ್ತದೆ. ಮತ್ತು ಹೇಮಂತ ಋತುವು ಮಧ್ಯ ಅಥವಾ ಹೊಟ್ಟೆಯಾಗಿರುತ್ತದೆ.

ಹಿಂದಿನ ವರ್ಣನೆಯಲ್ಲಿ ಕ ಪ್ರಜಾಪತಿಯ ಆಕೃತಿಯ ಯಜ್ಞಚಿತಿಯನ್ನು ಒಂದು ಪಕ್ಷಿಗೆ ಹೋಲಿಸಿದೆ. ಅಂದರೆ ಅದರ ನಾಲ್ಕು ಕಾಲುಗಳನ್ನು ಮತ್ತು ಮಧ್ಯದ ಗುಳಿಯನ್ನು ಪಕ್ಷಿಯ ತಲೆ, ಬಾಲ, ಎರಡು ರೆಕ್ಕೆ ಮತ್ತು ಹೊಟ್ಟೆಗಳಿಗೆ ಹೋಲಿಸಿದೆ. ಆ ವರ್ಣನೆಯಲ್ಲಿ ಬಂದಿರುವ ಕ ಪ್ರಜಾಪತಿ ಎಂಬ ಹೆಸರಿನ ಯಜ್ಞಚಿತಿಯು ಹಿಂದೆ ಕೊಟ್ಟಿರುವ ಆಕೃತಿಯಲ್ಲಿಯೇ ಇರುತಿದ್ದಿತೆಂಬುದರ ಪ್ರತ್ಯಕ್ಷ ಪ್ರಮಾಣವು ಒಂದು ಚಿಕ್ಕ ಬಿಲ್ಲೆಯ ರೂಪದಿಂದ ಹಳಪ್ಪಾ (Harappa) ಎಂಬಲ್ಲಿ ನಡೆಸಿದ ಅಗೆತಗಳಲ್ಲಿ ಬೆಳಕಿಗೆ ಬಂದಿದೆ. ಅದರ ಪಡಿಯಚ್ಚನ್ನು ಇಲ್ಲಿ ಕೊಡಲಾಗಿದೆ–




ಈ ಪಡಿಯಚ್ಚು ಪಂಜಾಬದ ಹಳಪ್ಪಾ ಎಂಬಲ್ಲಿನ ಅಗೆತಗಳಲ್ಲಿ ನಾಯಕನಾಗಿ ಕೆಲಸ ನಿರ್ವಹಿಸಿದ ಶ್ರೀಮಾನ್ ಮಾಧೋಸರೂಪ ವತ್ಸ ಅವರು ಬರೆದು ಪ್ರಕಟಿಸಿದ "Excavation at Harappa" ಎಂಬ ಪುಸ್ತಕದ ಎರಡನೆಯ ಭಾಗದ XCI ಪತ್ರದಲ್ಲಿ ಕ್ರಮಸಂಖ್ಯೆ ೨೫೫ನೆಯದಾಗಿದೆ. ಆ ಬಿಲ್ಲೆಯು ಒಂದು

ಪಾರ್ಶ್ವದಲ್ಲಿ ಯಜ್ಞಚಿತಿಯ ಆಕೃತಿಯೂ ಇನ್ನೊಂದು ಪಾರ್ಶ್ವದಲ್ಲಿ ಪಕ್ಷಿಯ ಚಿತ್ರವೂ ಇದೆ.

ಕ ಪ್ರಜಾಪತಿಯ ಕಾಲುಗಳು ದಿಕ್ಕುಗಳನ್ನು ಸೂಚಿಸುತ್ತಿದ್ದುವೆಂಬ ಆಖ್ಯಾಯಿಕೆಯು ತೈತ್ತಿರೀಯ ಸಂಹಿತೆಯಲ್ಲಿ ಮುಂದಿನಂತೆ ಬಂದಿದೆ—

‹ಆಪೋ ವಾ ಇದಮಗ್ರೇ ಸಲಿಲಮಾಸೀತ್ । ಸ ಪ್ರಜಾಪತಿಃ ಪುಷ್ಕರ ಪರ್ಣೇವಾತೋ ಭೂತೋಽಲೇಲಾಯತ್ । ಸ ಪ್ರತಿಷ್ಠಾಂ ನಾವಿಂದತ । ಸ ಏತ-ದಪಾಂ ಕುಲಾಯಮಪಶ್ಯತ್ । ತಸ್ಮಿನ್ನಗ್ನಿಮಚಿನುತ । ತದೀಯಮಭವತ್ । ತತೋ ವೈಸ ಪ್ರತ್ಯತಿಷ್ಠದ್ಯಾಂ ಪುರಸ್ತಾದುಪಾದಧಾತ್ ತಚ್ಛಿರೋಽಭವತ್ ಸಾ ಪ್ರಾಚೀದಿಗ್ । ಯಾಂ ದಕ್ಷಿಣತ ಉಪಾದಧಾತ್ ಸ ದಕ್ಷಿಣಃ ಪಕ್ಷೋಽಭವತ್ ಸಾ ದಕ್ಷಿಣಾ ದಿಗ್ । ಯಾಂ ಪಶ್ಚಾದುಪಾದಧಾತ್ ತತ್ ಪುಚ್ಛಮಭವತ್ ಸಾ ಪ್ರತೀಚೀದಿಗ್ । ಯಾಮುತ್ತರತ ಉಪಾದಧಾತ್ ಸ ಉತ್ತರಃ ಪಕ್ಷೋಽಭವತ್ ಸೋದೀಚೀದಿಗ್ । ಯಾಮುಪರಿಷ್ಟಾದುಪಾದಧಾತ್ ತತ್ ಪೃಷ್ಠಮಭವತ್ । ಸೋರ್ಧ್ವಾದಿಗ್ । ಇಯಂ ವಾ ಅಗ್ನಿಃ ಪಂಚೇಷ್ಟಕಃ ॥ ತೈ. ಸಂ. ೫-೬-೪-೨ ॥

ಅಂದರೆ—ಮೊದಲು ಇದು ಪ್ರವಹಿಸುತ್ತಿದ್ದ ದಿವ್ಯ ಜಲವಾಗಿತ್ತು. ಮತ್ತು ಪ್ರಜಾಪತಿಯು ಗಾಳಿಯಾಗಿದ್ದವನು ತಾವರೆಯ ಎಲೆಯಲ್ಲಿ ತೂಗುತ್ತಿದ್ದನು. ಅವನಿಗೆ ನಿಲ್ಲಲು ನೆಲೆ ಇರಲಿಲ್ಲ. ಅವನು ದಿವ್ಯ ಜಲಗಳ ಈ ಗೂಡನ್ನು ಕಂಡನು. ಮತ್ತು ಅದರಲ್ಲಿ ಅಗ್ನಿ (ಚಿತಿ)ಯನ್ನು ಪೇರಿದನು. ಅದು ನೆಲೆಯಾಯಿತು, ಅದರಿಂದ ಅವನು ಸ್ಥಿರವಾಗಿ ನಿಂತನು. ಅವನು ಮುಂದಿನಿಂದಿಟ್ಟ ಇಟ್ಟಿಗೆಯು ತಲೆಯಾಯಿತು. ಅದು ಪೂರ್ವ ದಿಕ್ಕು. ದಕ್ಷಿಣದಲ್ಲಿಟ್ಟ ಇಟ್ಟಿಗೆಯು ಬಲದ ರೆಕ್ಕೆಯಾಯಿತು. ಅದು ದಕ್ಷಿಣ ದಿಕ್ಕು. ಹಿಂದುಗಡೆಯಲ್ಲಿಟ್ಟ ಇಟ್ಟಿಗೆಯು ಬಾಲವಾಯಿತು. ಅದು ಪಶ್ಚಿಮ ದಿಕ್ಕು. ಉತ್ತರದಲ್ಲಿಟ್ಟ ಇಟ್ಟಿಗೆಯು ಎಡದ ರೆಕ್ಕೆಯಾಯಿತು. ಅದು ಉತ್ತರ ದಿಕ್ಕು. ಮೇಲ್ಗಡೆಯಲ್ಲಿಟ್ಟ ಇಟ್ಟಿಗೆಯು ಬೆನ್ನಾಯಿತು. ಅದು ಊರ್ಧ್ವ ದಿಕ್ಕು. ಹಾಗೆ ನಿರ್ಮಿತವಾದ ಐದು ಇಟ್ಟಿಗೆಗಳ

ಅಗ್ನಿ (=ಚಿತಿ)ಯೇ ಇದು  ಅಂದರೆ ಪ್ರಜಾಪತಿಯ ನೆಲೆಯಾದ ಯಜ್ಞದ ಚಿತಿಯಾಗಿದೆ. ಹಿಂದೆ ಉದಹರಿಸಿದ ಎರಡು ಆಖ್ಯಾಯಿಕೆಗಳೂ ಪರಸ್ಪರ ಪೂರಕಗಳಾಗಿವೆಯೆಂಬುದು ಅತ್ಯಂತ ಸ್ಪಷ್ಟವಿದೆ. ಅಂದರೆ ಈ + ಕ ಎಂಬ ಹೆಸರಿನ ಯಜ್ಞ ಚಿತಿಯು ಪ್ರಜಾಪತಿಯ ಪ್ರತೀಕವಾಗಿದ್ದಿತೆಂದು ಮತ್ತು ಅದರ ನಾಲ್ಕು ಕಾಲುಗಳು ನಾಲ್ಕು ದಿಕ್ಕುಗಳನ್ನು ಸೂಚಿಸುತ್ತಿದ್ದುವೆಂದು ಹಾಗೂ ಹಳಪ್ಪಾದ ಅಗೆತಗಳಲ್ಲಿ ದೊರಕಿದ ಆ ಬಿಲ್ಲೆಯ ಮೇಲಿನ ಚಿತ್ರದ ವರ್ಣನೆಯು

ವೈದಿಕ ಗ್ರಂಥಗಳಲ್ಲಿ ಇದೆಯೆಂದು ಸ್ಪಷ್ಟವಾಗಿ ಸಿದ್ಧವಾಗುತ್ತದೆ. ಅದರಂತೆಯೇ ಹದಿಮೂರು ಇಟ್ಟಿಗೆಗಳಿಂದ "ಕ" ಎಂಬ ಆಕೃತಿಯನ್ನು ನಿರ್ಮಿಸುತಿದ್ದರೆಂಬ ಬೇರೊಂದು ಪ್ರಮಾಣವು ಮುಂದೆ ಆರ್ಯಜನರ ವೈದಿಕ ಸಂಸ್ಕೃತಿ ಎಂಬ ಅಧ್ಯಾಯದ ಕೊನೆಯಲ್ಲಿ ಬರುವುದು.

ಆ ಕ ಎಂಬ ಆಕೃತಿಯ ಚಿತಿಯನ್ನು "ಶ್ಯೇನ" ಎಂಬ ಪಕ್ಷಿಯ ಹೆಸರಿನಿಂದ ಕರೆದ ಉಲ್ಲೇಖಗಳು ವೈದಿಕ ಸಾಹಿತ್ಯದಲ್ಲಿ ಇವೆಯಾದರೂ ಅದನ್ನು ಆ ಪಕ್ಷಿಯ ಹೆಸರಿನಿಂದ ಕರೆಯಲು ಕಾರಣವೇನೆಂಬುದನ್ನು ತಿಳಿಸುವ ಒಂದಾದರೂ ಉಲ್ಲೇಖ ವಿಲ್ಲ. ಅಂಥ ಉಲ್ಲೇಖವಿರದಿರುವ ಮುಖ್ಯ ಕಾರಣವು ಅದರ ಐತಿಹ್ಯವು ಆರ್ಯ ಜನರ ಉತ್ತರಧ್ರುವ ಪ್ರದೇಶದ ವಸತಿಗೆ ಸಂಬಂಧಪಟ್ಟಿದ್ದುದರಿಂದ ಅದು ಭೂತ ಕಾಲದ ಗರ್ಭದಲ್ಲಡಗಿ ಮರೆತು ಹೋದುದೇ ಆಗಿದೆಯೆಂಬುದರಲ್ಲಿ ಸಂದೇಹವಿಲ್ಲ. ಹಾಗಿದ್ದರೂ ಅರ್ವಾಚೀನ ಪಾಶ್ಚಾತ್ಯ ಅನ್ವೇಷಕರು ಉತ್ತರಧ್ರುವ ಪ್ರದೇಶಕ್ಕೆ ಹೋಗಿ ಕಂಡುಕೊಂಡ ಕೆಲವು ವೈಶಿಷ್ಟ್ಯಗಳ ಆಧಾರದಿಂದ ಅದರ ಕಾರಣವನ್ನು ತಿಳಿಯಲು ಸಾಧ್ಯವಿದೆ.

ಉತ್ತರಧ್ರುವ ಪ್ರದೇಶದಲ್ಲಿ ದೀರ್ಘ ರಾತ್ರಿಯು ಕೊನೆಗೊಳ್ಳುವ ಸಮಯಕ್ಕೆ ಸರಿಯಾಗಿ ಚಿಲೋರೆಕ್ಕೆಗಳ ಒಂದು ಬಿಳಿ ಪಕ್ಷಿಯು ಕ್ಷಿತಿಜದ ಕೆಳಗಿನಿಂದ ಫಕ್ಕನೇ ಮೇಲಕ್ಕೆ ಹಾರಿ ಬರುತ್ತದೆಂತಲೂ, ಅದು ಬಹಳ ಮೇಲೆ ಹಾರುತ್ತಿರುವು ದರಿಂದ ಕ್ಷಿತಿಜದ ಕೆಳಗಿರುವ ಸೂರ್ಯನ ಕಿರಣಗಳ ಪ್ರಕಾಶವು ಅದರ ರೆಕ್ಕೆಗಳ ಮೇಲೆ ಹೊಳೆಯುತ್ತದೆಂತಲೂ, ಆ ಪಕ್ಷಿಯಿಂದಾಗಿ ಅಲ್ಲಿನ ಜನರಿಗೆ ಸೂರ್ಯೋ ದಯದ ಸೂಚನೆ ದೊರಕುತ್ತದೆಂತಲೂ, ಆ ಪಕ್ಷಿಯನ್ನು ಕಂಡೊಡನೆ ಅಲ್ಲಿನ ಜನರು ಸಂತೋಷದಿಂದ ಮುಜ್ಜೀಳುತ್ತಾರೆಂತಲೂ. ಅವರು ಆ ಪಕ್ಷಿಯನ್ನು ಶ್ರೇಷ್ಠ ದೇವನೆಂದು ಭಾವಿಸಿ ಕೈಗಳನ್ನೆತ್ತಿ ವಂದಿಸುತ್ತಾರೆಂತಲೂ ಆ ಪಕ್ಷಿಯು ಬಂದ ಕೆಲವು ದಿನಗಳ ತರುವಾಯ ಅಲ್ಲಿ ಸೂರ್ಯೋದಯವಾಗುತ್ತದೆಂತಲೂ ಗೊತ್ತಾಗಿದೆ. ಆ ಪಕ್ಷಿಯ ಆ ಬಗೆಯ ಹಾರಾಟವು ಆದಿಕಾಲದಿಂದ ಸಾಗುತ್ತ ಬಂದಿದೆಯೆಂಬು ದರಲ್ಲಿ ಸಂದೇಹವಿಲ್ಲ.[1] ಆದುದರಿಂದ ನಾವು ಆ ವೈಶಿಷ್ಟ್ಯದ ಆಧಾರದಿಂದ

---

[1] In the memoirs of Jan Welzl, Czech adventurer and trader in the New Siberian Isles (75° 3o′ N.), occurs the passage:-From the peaks of the snow-covered rocks we kept our eyes fixed on the horizon to see when the Arctic bird would appear. The Arctic bird is a white bird like a pigeon, which makes a sudden appearance from the south and flies due north towards the Pole. It is supposed to fiy as far as the 89th degree, and then it turns back - This strange bird always flies

ಪ್ರಾಚೀನ ಆರ್ಯಜನರು ತಮ್ಮ ಯಜ್ಞಚಿತಿಗೆ ಶ್ಯೇನ ಎಂಬ ಪಕ್ಷಿಯ ಹೆಸರನ್ನು ಏಕೆ ಕೊಟ್ಟಿದ್ದರೆಂಬುವದನ್ನು ಅನುಮಾನಿಸಬಹುದು.

ಉತ್ತರ ಧ್ರುವ ಪ್ರದೇಶದಲ್ಲಿ ನೆಲಸಿದ್ದ ಆರ್ಯಜನರು ಮೊದಲು ತಮ್ಮ ಸಂವತ್ಸರ ಸತ್ರವನ್ನು ದೀರ್ಘರಾತ್ರಿಯು ಕಳೆದ ತರುವಾಯ ಮೊದಲನೆಯ ಸೂರ್ಯೋದಯದೊಂದಿಗೆ ಪ್ರಾರಂಭಿಸುತ್ತಿದ್ದರು. ಅಂದರೆ ಅವರು ಸೂರ್ಯನ ಉದಯಕ್ಕೆ ಸರಿಯಾಗಿ ಯಜ್ಞಚಿತಿಯಲ್ಲಿ ಅಗ್ನಿಯನ್ನು ಆಧಾನಮಾಡುತ್ತಿದ್ದರು. ಆದರೆ ಯಜ್ಞದ ಅಗ್ನಿಯನ್ನು ಅರಣಿಗಳಿಂದಲೇ ಉತ್ಪಾದಿಸಬೇಕಾಗಿದ್ದುದರಿಂದ ಮತ್ತು ಅರಣಿಗಳಿಂದ ಅಗ್ನಿಯನ್ನು ಉತ್ಪಾದಿಸಲು ಹೆಚ್ಚು ಸಮಯ ತಗಲುತ್ತಿದ್ದುದರಿಂದ ಅವರು ಸೂರ್ಯೋದಯದ ಮೊದಲೇ ಅಗ್ನಿಮಂಥನವನ್ನು ಪ್ರಾರಂಭಿಸಬೇಕಾಗುತ್ತಿದ್ದಿತು. ಆದರೆ ಅವರಿಗೆ ಮೊದಲು ಸೂರ್ಯೋದಯವು ಯಾವಾಗ ಆಗುವುದೆಂದು ಗೊತ್ತಿರಲಿಲ್ಲ. ಹಾಗೆಯೇ ಅವರು—ಹಿಂದೆ ವರ್ಣಿಸಿದ ಪಕ್ಷಿಯನ್ನು ಕಂಡು ಅದು ಹಾರಿ ಬರುವುದಕ್ಕೂ ಸೂರ್ಯನ ಉದಯಕ್ಕೂ ಸಂಬಂಧವಿರಬಹುದೆಂದು ಅನುಮಾನಿಸಿದ ತರುವಾಯ ಅದರ ಹಾರಾಟವನ್ನು ನಿರೀಕ್ಷಿಸುತ್ತಿದ್ದು ಆ ಪಕ್ಷಿಯು ಹಾರಿ ಬಂದ ಎಷ್ಟು ದಿನಗಳ ತರುವಾಯ ಸೂರ್ಯೋದಯವಾಗುವುದೆಂಬುದನ್ನು ಕಂಡುಕೊಂಡರು. ಮತ್ತು ಅದು ಹಾರಿ ಬಂದೊಡನೆಯೇ ತಮ್ಮ ಹಳೆಯ ಯಜ್ಞದ ಉದ್ಯಾಪನೆ ಮಾಡಿ, ಅವಭೃತಸ್ನಾನ ಮಾಡತೊಡಗಿದರು. ಮತ್ತು ಯಜ್ಞಚಿತಿಯೊಳಗಿನ ಬೂದಿ ಮೊದಲಾದುವುಗಳನ್ನು ತೆಗೆದು ಅದನ್ನು ಹೊಸವರ್ಷದ ಯಜ್ಞಕ್ಕಾಗಿ ಅಣಿಗೊಳಿಸತೊಡಗಿದರು. ಮತ್ತು ಅದರ ತರುವಾಯ ಅಗ್ನಿಮಂಥನವನ್ನು ಪ್ರಾರಂಭಿಸತೊಡಗಿದರು. ಅಂದರೆ

---

entirely alone, never in flocks. It flies very high and makes no noise, and the sun shines on it, although we down below still have no sun. And so we see the first rays of the spring time sun on the wings of this bird, which shines clearly into our twilight. The natives behave like mad when this shining bird appears from below the dark horizon. They regard it as the greatest of the gods which is in the North, because it brings the sun with it. And right enough, when it returns a few days later, the sun is already on the horizon, and we, bearded and hard-bitten old stagers, stand silently on the rock and watch it vanishing, and we understand why the Eskimos raise their hands to it and rejoice Daylight, Twilight, Darkness and Time. Pages 5o—51.

ಧ್ರುವಪ್ರದೇಶವಲ್ಲಿ ನೆಲಸಿದ್ದ ಆರ್ಯಜನರಿಗೆ ಮೊತ್ತಮೊದಲು ಸೂರ್ಯೋದಯದ ಕಾಲವನ್ನು ತಿಳಿಯಲು ಆ ಧ್ರುವಪಕ್ಷಿಯ ಆಗಮನವೇ ಮುಖ್ಯ ಸಾಧನವಾಗಿದ್ದಿತು. ಆದುದರಿಂದ ಅವರು ತಮ್ಮ ಯಜ್ಞಚಿತಿಗೆ ಆ ಹಕ್ಕಿಯ ಹೆಸರನ್ನಿಟ್ಟು ಅದನ್ನು ಗೌರವಿಸಿದ್ದರು. ಅರ್ಥಾತ್ ಮೊದಲು ಆರ್ಯಜನರ ಯಜ್ಞಕ್ಕೂ ಧ್ರುವಪಕ್ಷಿಗೂ ನೇರವಾದ ಸಂಬಂಧವಿದ್ದಿತು-ಎಂಬುದರಲ್ಲಿ ಸಂದೇಹವಿಲ್ಲ.

ಉತ್ತರಧ್ರುವ ಪ್ರದೇಶದಲ್ಲಿ ನೆಲಸಿರುವ ಜನರಿಗೆ ಸೂರ್ಯನು ಅವರ ಎಡಗಡೆಯಲ್ಲಿ ಮೂಡಿ ಕ್ಷಿತಿಜದ ಸಮಾಂತರವಾಗಿ ಚಲಿಸುತ್ತ ಅವರ ಮೋರೆಯ ಎದುರಿಗೆ ಬಂದು ಬಲಗಡೆಗೆ ಸಾಗಿ ಮುಳುಗುವುದು ಕಾಣಿಸುತ್ತದೆ. ಹಾಗಾಗಿ ಅಲ್ಲಿ ನೆಲಸಿದ್ದ ಆರ್ಯಜನರು ಸೂರ್ಯನು ಮೂಡುವ ದಿಕ್ಕನ್ನು ಉತ್ತರ ಎಂತಲೂ, ಮುಳುಗುವ ದಿಕ್ಕನ್ನು ಅಧರ ಇಲ್ಲವೇ ದಕ್ಷಿಣ ಎಂತಲೂ ಹೆಸರಿಸಿದ್ದರು. ವಸಂತ ಋತುವು ಪ್ರಾರಂಭವಾದ ತರುವಾಯ ಅಲ್ಲಿ ಮೂಡಿದ ಸೂರ್ಯನು ಬಹಳ ದಿನಗಳ ತನಕ ಮುಳುಗದೇ ಒಂದೇ ಸವನೆ ಎಡಗಡೆಯಿಂದ ಬಲಗಡೆಗೆ ಸಾಗುತ್ತ ಭೂಮಿಯನ್ನು ಸುತ್ತಿಬರುವುದು ಕಾಣಿಸುತ್ತದೆ. ಪ್ರಾಚೀನ ಕಾಲದ ಆರ್ಯಜನರು ಸೂರ್ಯನ ಅಂಥ ಸುತ್ತನ್ನು **"ಸೂರ್ಯನ ಆವೃತ"** ಎಂತಲೂ **"ಪ್ರದಕ್ಷಿಣ"** ಎಂತಲೂ ಕರೆದಿದ್ದರು.[1] ಅದೇ ರೀತಿಯಲ್ಲಿ ಉತ್ತರಧ್ರುವ ಪ್ರದೇಶದಲ್ಲಿ ನೆಲಸಿದವರು ರಾತ್ರಿ ಕಾಲದಲ್ಲಿ ಕ್ಷಿತಿಜವನ್ನು ಈಕ್ಷಿಸುತಿದ್ದರೆ ಚಂದ್ರನು ಕೂಡ ಸೂರ್ಯನಂತೆಯೇ ಎಡಗಡೆಯಿಂದ ಬಲಗಡೆಗೆ ಸಾಗಿ ಭೂಮಿಯನ್ನು ಸುತ್ತಿಬರುವುದು ಕಾಣಿಸುತ್ತದಾದರೂ ಅವನು ಹಾಗೆ ಸುತ್ತಿ ಬರುತ್ತಿರುವಾಗಲೇ ಬಲಗಡೆಯ ನಕ್ಷತ್ರಪುಂಜದಿಂದ ಎಡಗಡೆಯ ನಕ್ಷತ್ರಪುಂಜದ ಬಳಿಗೆ ಬಂದಿರುವುದು ಗೊತ್ತಾಗುತ್ತದೆ. ಹಾಗೆ ಚಂದ್ರನು ಬಲಗಡೆಯಿಂದ ಎಡಗಡೆಗೆ ಸಾಗುವುದನ್ನು ಆರ್ಯಜನರು **"ಅಪದಕ್ಷಿಣ"** ಎಂತಲೂ **"ಅಪಸಲವಿ"** ಎಂತಲೂ ಅನ್ನುತಿದ್ದರು.

ಪ್ರಾಚೀನ ಕಾಲದಲ್ಲಿ ಉತ್ತರಧ್ರುವ ಪ್ರದೇಶದಲ್ಲಿ ನೆಲಸಿದ್ದ ಆರ್ಯಜನರು ಸೂರ್ಯನು ಎಡಗಡೆಯಿಂದ ಬಲಗಡೆಗೆ ಸಾಗುವುದನ್ನು ಸೂಚಿಸಲು ಕ ಪ್ರಜಾಪತಿಯ ನಾಲ್ಕು ಕಾಲುಗಳನ್ನೂ ಬಲಗಡೆಗೆ ಬಗ್ಗಿಸಿ 卐 ಇಂಥ ಆಕೃತಿಯನ್ನು ನಿರ್ಮಿಸಿದ್ದರು ಮತ್ತು ಅದನ್ನು ಸೂರ್ಯನ ಪ್ರತೀಕವೆಂದು ನಿರ್ಧರಿಸಿದ್ದರು ಹಾಗೆಯೇ ಚಂದ್ರನು ಬಲಗಡೆಯಿಂದ ಎಡಗಡೆಗೆ ಸಾಗುತ್ತಾನೆಂಬುದನ್ನು ಸೂಚಿಸಲು ಅದೇ ಪ್ರಜಾಪತಿಯ ಕಾಲುಗಳನ್ನು ಎಡಗಡೆಗೆ ಬಗ್ಗಿಸಿ 卍

---

[1] ಸೂಯಸ್ಯಾವೃತಮನ್ವಾವರ್ತೇ ॥ ವಾ. ಸಂ. ೨-೨೬॥ ಅಥಾವರ್ತತೇ। ಸೂರ್ಯಸ್ಯಾವೃತಮನ್ವಾವರ್ತೇ ॥ ಶ. ಬ್ರಾ. ೧-೯-೩.೧೭॥

ಇಂಥ ಆಕೃತಿಯನ್ನು ನಿರ್ಮಿಸಿದ್ದರು. ಮತ್ತು ಅವನ್ನು ಚಂದ್ರನ ಪ್ರತೀಕವೆಂದು ನಿರ್ಧರಿಸಿದ್ದರು. ಅವರು ಅಗ್ನಿಯನ್ನು ಸೂರ್ಯನನ್ನು ಮತ್ತು ಚಂದ್ರನನ್ನು ಋತು ಎನ್ನುತ್ತಿದ್ದರು. **॥"ಅಗ್ನಿರ್ಋತುಃ ಸೂರ್ಯ ಋತುಶ್ಚಂದ್ರಮಾ ಋತುಃ॥ ತೈ. ಬ್ರಾ. ೩-೧೦-೨-೪॥** ಆದುದರಿಂದ ಅವರು ಸೂರ್ಯನ ಮತ್ತು ಚಂದ್ರನ ಪ್ರತೀಕಗಳನ್ನು **"ಋತುಪಾತ್ರ"** ಅಂದರೆ "ಋತುಗಳನ್ನು ನಿರೀಕ್ಷಿಸುವ ಉಪಕರಣ" ಎನ್ನುತ್ತಿದ್ದರು. ಋತುಪಾತ್ರಗಳು ಪ್ರಜಾಪತಿಯ ಕಾಲುಗಳಿಂದ ಹುಟ್ಟಿದ್ದುವೆಂಬುದನ್ನು ಸೂಚಿಸುವ ಆಖ್ಯಾಯಿಕೆಯು ತೈತ್ತಿರೀಯ ಬ್ರಾಹ್ಮಣದಲ್ಲಿ ಮುಂದಿನಂತೆ ಬಂದಿದೆ—

॥ಬ್ರಹ್ಮವಾದಿನೋ ವದಂತಿ ಕತಿ ಪಾತ್ರಾಣಿ ಯಜ್ಞಂ ವಹಂತೀತಿ । ತ್ರಯೋದಶೇತಿ ಬ್ರೂಯಾತ್ । ಕಸ್ತಾನಿ ನಿರಮಿಮೀತೇತಿ । ಪ್ರಜಾಪತಿರಿತಿ ಬ್ರೂಯಾತ್ । ಸ ಯದ್ ಬ್ರೂಯಾತ್ ಕುತಸ್ತಾನಿ ನಿರಮಿಮೀತೇತಿ । ಆತ್ಮನ ಇತಿ । ಪ್ರಾಣಾಪಾನಾಭ್ಯಾಮೇವೋಪಾಂಶ್ವಂತರ್ಯಾಮೌ ನಿರಮಿಮೀತ । ವ್ಯಾನಾದುಪಾಂಶು ಸವನಮ್ । ವಾಚ ಇಂದ್ರಾವಾಯವಮ್ । ದಕ್ಷಕ್ರತುಭ್ಯಾಂ ಮೈತ್ರಾವರುಣಮ್ । ಶ್ರೋತ್ರಾದಾಶ್ವಿನಮ್ । ಚಕ್ಷುಷಃ ಶುಕ್ರಾಮಂಥಿನೌ । ಆತ್ಮನ ಆಗ್ರಯಣಮ್ । ಅಂಗೇಭ್ಯ ಉಕ್ಥ್ಯಮ್ ॥ ಆಯುಷೋಧ್ರುವಮ್ । ಪ್ರತಿಷ್ಠಾಯಾ ಋತುಪಾತ್ರೇ ॥ ತೈ. ಬ್ರಾ. ೧-೫-೪-೧ ॥

ಅರ್ಥ—ಯಾಜ್ಞಿಕರು ಯಜ್ಞದ ನಿರ್ವಹಣೆಗೆ ಎಷ್ಟು ಪಾತ್ರಗಳು ಬೇಕಾಗುತ್ತವೆ – ಎಂದರೆ ಹದಿಮೂರು ಎನ್ನಬೇಕು. ಯಾವನು ಅವುಗಳನ್ನು ನಿರ್ಮಿಸಿದನು – ಎಂದರೆ ಪ್ರಜಾಪತಿಯೆನ್ನಬೇಕು. ಯಾವುದರಿಂದ ನಿರ್ಮಿಸಿದನು – ಎಂದರೆ ತನ್ನ ಶರೀರದಿಂದಲೇ ಅನ್ನಬೇಕು. ಅವನು ಪ್ರಾಣ ಮತ್ತು ಅಪಾನಗಳಿಂದ (೧) ಉಪಾಂಶು; ಮತ್ತು (೨) ಅಂತರ್ಯಾಮ ಎಂಬವುಗಳನ್ನೂ ವ್ಯಾನದಿಂದ (೩) ಉಪಾಂಶು ಸವನವನ್ನೂ ವಾಕ್ಕಿನಿಂದ (೪) ಇಂದ್ರವಾಯುವವನ್ನೂ. ದಕ್ಷ ಕ್ರತುಗಳಿಂದ (೫) ಮೈತ್ರಾವರುಣವನ್ನೂ; ಕಿವಿಗಳಿಂದ (೬) ಆಶ್ವಿನವನ್ನೂ ಕಣ್ಣುಗಳಿಂದ (೭) ಶುಕ್ರ ಮತ್ತು (೮) ಮಂಥಿ ಎಂಬವುಗಳನ್ನೂ ಒಡಲಿನಿಂದ (೯) ಆಗ್ರಯಣವನ್ನೂ; ಅಂಗಗಳಿಂದ (೧೦) ಉಕ್ಥ್ಯವನ್ನೂ ಆಯುಷ್ಯದಿಂದ (೧೧) ಧ್ರುವವನ್ನೂ; ನಿಲ್ಲಲು ಆಧಾರವಾಗಿರುವ ಕಾಲುಗಳಿಂದ ಎರಡು ಋತು ಪಾತ್ರಗಳನ್ನೂ ನಿರ್ಮಿಸಿದನು.

ಹಿಂದಿನ ಆಖ್ಯಾಯಿಕೆಯು ಪ್ರಾಚೀನ ಯಾಜ್ಞಿಕ ಪುರೋಹಿತರು ಯಜ್ಞಕ್ಕೆ ಸಂಬಂಧಪಟ್ಟ ಯಾವುದೊಂದು ರಹಸ್ಯವನ್ನು ಯಾವ ರೀತಿಯಲ್ಲಿ ಅಡಗಿಸುತ್ತಿದ್ದರೆಂಬುದರ ಒಂದು ಮಾದರಿಯಾಗಿದೆ. ಅಂದರೆ ಅದರ ಉದ್ದೇಶವು ಯಜ್ಞನಿರ್ವಹಣಕ್ಕೆ ಯಾವ ಯಾವ ಪಾತ್ರಗಳು ಬೇಕಾಗುತ್ತವೆಂಬುದನ್ನು ವಿವರಿಸುವುದಾಗಿದೆಯೆಂದು ತೋರಿದರೂ ಅದರಲ್ಲಿ ಋತು ಪಾತ್ರಗಳು ಹೇಗೆ ಹುಟ್ಟಿದುವು? ಎಂಬ

ರಹಸ್ಯವೂ ಅಡಗಿದೆ. ಅಂದರೆ ಆ ಆಖ್ಯಾಯಿಕೆಯಲ್ಲಿ ನಮಗೆ ಬೇಕಾದ ಅಂಶವು **"ಪ್ರಜಾಪತಿಯು ತನ್ನ ಕಾಲುಗಳಿಂದ ಎರಡು ಋತುಃಪಾತ್ರಗಳನ್ನು ನಿರ್ಮಿಸಿದನು"** ಎಂಬುದಾಗಿದೆ. ಈ ಆಖ್ಯಾಯಿಕೆಯು ಬಂದಿರುವ ಬ್ರಾಹ್ಮಣದಪ್ರಕಾರ ಪ್ರಜಾಪತಿ ಎಂದರೆ ಕ ಎಂಬ ನಾಲ್ಕು ಕಾಲುಗಳ ಆಕೃತಿಯಾಗಿದೆಯೇ ಹೊರತು ಶರೀರಧಾರೀ ವ್ಯಕ್ತಿಯಲ್ಲ. ಆದುದರಿಂದ ಪ್ರಜಾಪತಿಯು ಏನನ್ನೂ ನಿರ್ಮಿಸಲು ಸಾಧ್ಯವಿಲ್ಲ. ಆದುದರಿಂದ ನಾವು "ಪ್ರಜಾಪತಿಯು ತನ್ನ ಕಾಲುಗಳಿಂದ ಎರಡು ಋತುಪಾತ್ರಗಳನ್ನು ನಿರ್ಮಿಸಿದನು" ಎಂಬ ಅಂಶವನ್ನು **"ಬ್ರಹ್ಮಾ ಎಂಬ ಯಜ್ಞದ ಪುರೋಹಿತನು ಪ್ರಜಾಪತಿಯ ಕಾಲುಗಳನ್ನು ಬಲಗಡೆಗೂ, ಎಡಗಡೆಗೂ ಬಗ್ಗಿಸಿ ಋತುಗಳನ್ನು ಅಂದರೆ ಸೂರ್ಯಚಂದ್ರರ ಗತಿಗಳನ್ನು ಸೂಚಿಸುವ ಎರಡು ಉಪಕರಣಗಳನ್ನು ನಿರ್ಮಿಸಿದನು"** ಎಂಬುದಾಗಿ ಪರಿವರ್ತಿಸಿದರೆ ಆ ರಹಸ್ಯದ ಅರ್ಥವು ಸ್ಪಷ್ಟವಾಗುತ್ತದೆ. ಹಿಂದೆ ಅಗ್ನಿಯನ್ನು. ಸೂರ್ಯನನ್ನು ಮತ್ತು ಚಂದ್ರನನ್ನು ಋತು ಎಂದು ಕರೆದಿರುವ ತೈತ್ತಿರೀಯ ಬ್ರಾಹ್ಮಣದ ವಾಕ್ಯವನ್ನು ಉದಹರಿಸಿದೆ. ಅದರ ಪ್ರಕಾರ ಈ ವಾಕ್ಯದೊಳಗಿನ "ಎರಡು ಋತುಪಾತ್ರಗಳು" ಎಂಬುದರ ಅರ್ಥವು "ಸೂರ್ಯನಿಗೆ ಮತ್ತು ಚಂದ್ರನಿಗೆ ಸಂಬಂಧಿಸಿದ ಪಾತ್ರಗಳು" ಎಂದು ಸಿದ್ಧವಾಗುತ್ತದೆ. ಮತ್ತು ಕ ಪ್ರಜಾಪತಿಯ ಆಕೃತಿಯು ಅಗ್ನಿಗೆ ಸಂಬಂಧಿಸಿದ ಋತುಪಾತ್ರವೆಂದು ಸಿದ್ಧವಾಗುತ್ತದೆ, ಮತ್ತು ಅಗ್ನಿಗೆ ಸಂಬಂಧಿಸಿದ ಋತುಪಾತ್ರಕ್ಕೆನೇ ಎರಡು ಕಡೆಗಳಿಂದ ಮೋರೆಗಳನ್ನು ಮಾಡಿದುದರಿಂದ ಸೂರ್ಯಚಂದ್ರರಿಗೆ ಸಂಬಂಧಿಸಿದ ಋತುಪಾತ್ರಗಳು ಹುಟ್ಟಿವೆ. ಆದುದರಿಂದಲೇ ಯಜುರ್ವೇದದ ತೈತ್ತಿರೀಯ ಸಂಹಿತೆಯಲ್ಲಿ –**"ಉಭಯತೋಃ ಮುಖಮ್ ಋತುಪಾತ್ರಂ ಭವತಿ । ಕೋಹಿ ತದ್ವೇದ ಯತಃ ಋತೂನಾಂಮುಖಮ್ ॥ ೬–೫–೩–೪ ॥** ಅಂದರೆ – ಋತುಪಾತ್ರವು (ಕ ಪ್ರಜಾಪತಿಯು) ಎರಡು ಕಡೆಗಳಿಂದ ಮೋರೆ ಇರುವಂಥದ್ದಾಗಿದೆ. ಆ ಎರಡು ಮೋರೆಗಳಲ್ಲಿ ಋತುಗಳ ಮೋರೆಯು ಯಾವ ಕಡೆಯಿಂದ (ಇರುವಂಥದ್ದು) ಎಂಬುದನ್ನು ಕ ಪ್ರಜಾಪತಿಯೇ ಬಲ್ಲನು ಎಂದು ಹೇಳಿದೆ,

ಯಜುರ್ವೇದಕ್ಕೆ ಭಾಷ್ಯವನ್ನು ಮತ್ತು ಅರ್ಥವನ್ನು ಹೇಳಿದವರು–ಋತುಪಾತ್ರ ಎಂಬುದಕ್ಕೆ ಸೋಮರಸವನ್ನು ಹಿಡಿಯುವ ಕುಡಿಕೆ (cup) ಎಂಬರ್ಥವನ್ನು ಗ್ರಹಿಸಿ ಒಂದೇ ಕುಡಿಕೆಗೆ ಎರಡು ಮೂಲೆಗಳಿರುತ್ತವೆಂದು ಹೇಳಿದ್ದಾರಲ್ಲದೇ ಕಃ ಎಂಬುದು ಪ್ರಜಾಪತಿಯ ಹೆಸರೆಂಬುದನ್ನು ಅಲಕ್ಷಿಸಿದ್ದಾರೆ. ತೈತ್ತಿರೀಯ ಬ್ರಾಹ್ಮಣವಲ್ಲಿ ಅಗ್ನಿಯನ್ನು, ಸೂರ್ಯನನ್ನು ಮತ್ತು ಚಂದ್ರನನ್ನು ಋತು ಎಂದು ಕರೆದಿದ್ದರೂ-ವಾಸ್ತವವಾಗಿ. ಸೂರ್ಯನೇ ಋತುಗಳಿಗೆ ಕಾರಣನಾಗಿರುವುದರಿಂದ-ಹಿಂದೆ ಉದಹರಿಸಿದ ತೈತ್ತಿರೀಯ ಸಂಹಿತೆಯೊಳಗಿನ ವಾಕ್ಯದಲ್ಲಿ ಬಂದಿರುವ "ಋತುಗಳ ಮೋರೆ" ಎಂಬುದರಅರ್ಥವು – "ಸೂರ್ಯನಿಗೆ ಸಂಬಂಧಿಸಿದ ಮೋರೆ" ಎಂದಿರುತ್ತದೆಂಬುದರಲ್ಲಿ. ಸಂದೇಹವಿಲ್ಲ. ಅರ್ಥಾತ್ ಯಜುರ್ವೇದದ ಆ ವಾಕ್ಯವನ್ನು ರಚಿಸಿದ

ಅಧ್ವರ್ಯುವಿಗೆ ಎರಡು ಋತುಪಾತ್ರಗಳಲ್ಲಿ ಸೂರ್ಯನಿಗೆ ಸಂಬಂಧಿಸಿದ ಋತುಪಾತ್ರವಾವುದೆಂದು ಗೊತ್ತಿರಲಿಲ್ಲವೆಂದು ಆ ವಾಕ್ಯದಿಂದ ಸಿದ್ಧವಾಗುತ್ತದೆ. ತರುವಾಯದವರಾದರೋ ಋತುಪಾತ್ರಗಳೆಂದರೆ ಋತುಗಳಿಗೆ ಅರ್ಪಿಸುವ ಸಲುವಾಗಿ ಸೋಮರಸವನ್ನು ಹಿಡಿಯುವ ಕುಡಿಕೆಗಳೆಂದೇ ತಿಳಿಯುತ್ತ ಬಂದಿದ್ದಾರೆ.

ಪಾತ್ರ ಎಂಬ ಶಬ್ದವು – ಕುಡಿ ಎಂಬರ್ಥದ 'ಪಾ' ಧಾತುವಿನಿಂದಲೂ ನೋಡು, ನಿರೀಕ್ಷಿಸು ಮತ್ತು ಕಾಪಾಡು ಎಂಬರ್ಥದ 'ಪಾ' ಧಾತುವಿನಿಂದಲೂ ಸಿದ್ಧವಾಗುತ್ತದೆ. ಆದುದರಿಂದ ಅದಕ್ಕೆ ೧. ಕುಡಿಯುವ ಬಟ್ಟಲು ಅಥವಾ ಕುಡಿಕೆ. ಎಂಬ ಅರ್ಥ ಒಂದೇ ಅಲ್ಲದೇ ೨. ನಿರೀಕ್ಷಿಸುವ ಉಪಕರಣ ಮತ್ತು ೩. ರಕ್ಷಾಕವಚ ಎಂಬರ್ಥಗಳೂ ಇವೆ. ಅಂದರೆ ಪ್ರಾಚೀನ ಕಾಲದ ಯಜ್ಞಗಳಲ್ಲಿ ಎರಡು ಬಗೆಯ ಋತುಪಾತ್ರಗಳು ಅಂದರೆ ಸೂರ್ಯಚಂದ್ರರ ಗತಿಗಳನ್ನು ಸೂಚಿಸುವ ಮತ್ತು ನಿರೀಕ್ಷಿಸುವ ಈ  ಎರಡು ಉಪಕರಣಗಳು ಮತ್ತು ಋತುಗಳಿಗೆ ಅರ್ಪಿಸುವ ಸಲುವಾಗಿ ಸೋಮರಸವನ್ನು ಹಿಡಿಯುವ ಎರಡು ಬಟ್ಟಲುಗಳು ಉಪಯೋಗಿಸಲ್ಪಡುತಿದ್ದುವು. ಆದರೆ ತರುವಾಯದ ಕಾಲದ ಜನರಿಗೆ ಸೂರ್ಯಚಂದ್ರರ ಪ್ರತೀಕಗಳ ಪರಿಚಯ ಮತ್ತು ಉಪಯೋಗ ಗೊತ್ತಿಲ್ಲದುದರಿಂದ ಅವುಗಳ ಹೆಸರುಗಳು ಕೂಡ ಮರೆತು ಹೋಗಿದ್ದುವು. ಹಾಗಾಗಿ ಋತುಪಾತ್ರಗಳೆಂದರೆ ಋತುಗಳಿಗೆ ಅರ್ಪಿಸುವ ಸೋಮರಸವನ್ನು ಹಿಡಿಯುವ ಬಟ್ಟಲುಗಳೆಂದೇ ತಿಳಿಯತೊಡಗಿದ್ದರು.

ಆದರೆ ಋತುಪಾತ್ರಗಳಿಂದ ಸೂರ್ಯಚಂದ್ರರ ಗತಿಯನ್ನು ನಿರೀಕ್ಷಿಸಿ ಋತುಗಳನ್ನು ನಿರ್ಧರಿಸುತಿದ್ದರೆಂಬ ಐತಿಹ್ಯವು ತರುವಾಯದ ಕಾಲದ ಜನರಿಗೂ ತಿಳಿದಿದ್ದಿತೆಂದು ಯಜುರ್ವೇದದ ತೈತ್ತಿರೀಯ ಸಂಹಿತೆಯಲ್ಲಿ ಬಂದಿರುವ ಒಂದು ಆಖ್ಯಾಯಿಕೆಯಿಂದ ಗೊತ್ತಾಗುತ್ತದೆ. ಆ ಆಖ್ಯಾಯಿಕೆಯು ಮುಂದಿನಂತಿದೆ.

“ಇಂದ್ರೋ ಮರುದ್ಭಿಃ ಸಾಂವಿದ್ಯೇನ ಮಾಧ್ಯಂದಿನೇ ಸವನೇ ವೃತ್ರ-ಮಹನ್ ಯನ್ಮಾಧ್ಯಂದಿನೇ ಸವನೇ ಮರುತ್ವತೀಯಾ ಗೃಹ್ಯಂತೇ ವೃತ್ರಘ್ನಾ ಏವತೇ ಯಜಮಾನಸ್ಯ ಗೃಹ್ಯಂತೇ: ತಸ್ಯ ವೃತ್ರಂ ಜಘ್ನುಷ ಋತವೋಽ-ಮುಹ್ಯನ್ತ್ಸ ಋತುಪಾತ್ರೇಣ ಮರುತ್ವತೀಯಾನಗೃಹ್ಣಾತ್, ತತೋ ವೈ ಸ ಋತೂನ್ ಪ್ರಾಜಾನಾದ್ ಯದೃತುಪಾತ್ರೇಣ ಮರುತ್ವತೀಯಾ ಗೃಹ್ಯಂತ ಋತೂನಾಂ ಪ್ರಜ್ಞಾತ್ಯೈ ॥ತೈ. ಸಂ. ೬–೫–೫–೧॥

ಅರ್ಥ–ಇಂದ್ರನು ಮರುತ್ತುಗಳೊಂದಿಗೆ ಒಪ್ಪಂದ ಮಾಡಿಕೊಂಡು ಮಾಧ್ಯಂದಿನ ಸವನ ಕಾಲದಲ್ಲಿ ವೃತ್ರನನ್ನು ಕೊಂದನು. ಮಾಧ್ಯಂದಿನ ಸವನ ಕಾಲದಲ್ಲಿ ಮರುತ್ತುಗಳಿಗಾಗಿ ಹಿಡಿಯಲಾಗುವ ಸೋಮರಸದ ಕುಡಿಕೆಗಳು ವೃತ್ರನನ್ನು ಕೊಂದಂಥವುಗಳೆಂದು ಯಜಮಾನನಿಗಾಗಿ ಹಿಡಿಯಲ್ಪಡುತ್ತವೆ. ವೃತ್ರನನ್ನು

ಕೊಂದ ಅವನಿಗೆ ಋತುಗಳು ತಿಳಿಯದಾದುವು. ಆಗ ಅವನು ಋತುಪಾತ್ರದಿಂದ ಮರುತ್ವತೀಯಗಳನ್ನು ಹಿಡಿದನು. ಆಗ ಅವನಿಗೆ ಋತುಗಳು ಗೊತ್ತಾದುವು. ಋತುಪಾತ್ರದಿಂದ ಮರುತ್ವತೀಯಗಳನ್ನು ಹಿಡಿಯುವುದು—ಋತುಗಳನ್ನು ಗೊತ್ತು ಮಾಡಲಿಕ್ಕಾಗಿಯೇ ಆಗಿರುತ್ತದೆ.

ಯಜ್ಞ ಕಾಲದಲ್ಲಿ ಪ್ರಜಾಪತಿಗೂ, ಋತುಗಳಿಗೂ ಸೋಮರಸದ ಆಹುತಿಗಳನ್ನು ಅರ್ಪಿಸಲಿಕ್ಕಿದೆ. ಆಗ ಯಜ್ಞವೇದಿಯ ಬಳಿಯಲ್ಲಿ ಪ್ರಜಾಪತಿಯ ಮತ್ತು ಸೂರ್ಯಚಂದ್ರರ ಪ್ರತೀಕಗಳನ್ನು ಇರಿಸಬೇಕಾಗುತ್ತದೆ. ಮತ್ತು ಆಹುತಿಗಳನ್ನು ಆಯಾ ಪ್ರತೀಕಕ್ಕೆ ತೋರಿಸಿ ಇದು ನಿನಗೆ ಎಂದು ಉಚ್ಚರಿಸಿದ ತರುವಾಯ ಚಿತಿಯೊಳಗಿನ ಅಗ್ನಿಯಲ್ಲಿ ಹಾಕಬೇಕಾಗುತ್ತದೆ. ಅದನ್ನು ಮುಂದಿನ ವಾಕ್ಯಗಳಿಂದ ತಿಳಿದುಕೊಳ್ಳಬಹುದು—

ಪ್ರಜಾಪತಯೇ ಸ್ವಾಹಾ: ಕಾಯಸ್ವಾಹಾ॥ ತೈ. ಸಂ. ೭-೧೩-೫॥ ಅಂದರೆ ಪ್ರಜಾಪತಿಗೆ ಸ್ವಾಹಾ: ಕಗೆ ಸ್ವಾಹಾ । ಈ ಉದಾಹರಣೆಯಲ್ಲಿ "ಕ" ಎಂಬುದು ಪ್ರಜಾಪತಿಯ ಪ್ರತೀಕವಾಗಿದೆಯೆಂಬುದರಲ್ಲಿ ಸಂದೇಹವಿಲ್ಲ.

ಕೋऽಸಿ ಕತಮೋऽಸಿ ಕಸ್ಮೈತ್ವಾ: ಕಾಯತ್ವಾ, ಸುಶ್ಲೋಕ, ಸುಮಂಗಲ ಸತ್ಯರಾಜನ್ ॥ ತೈ. ಬ್ರಾ. ೨-೬-೫-೩; ವಾ. ಸಂ. ೨೦-೪॥

ಅಂದರೆ—ಹೇ ಸುಮಂಗಲನೇ, ಹೇ ಸತ್ಯರಾಜನೇ ನೀನು ಕ ಆಗಿರುತ್ತೀ: ಕ ಶ್ರೇಷ್ಠನಾಗಿರುತ್ತೀ. ಅಂಥ ಕ ಎಂಬ ನಿನಗೆ, ಕ ರೂಪದ ನಿನಗೆ (ಈ ಆಹುತಿ)

ಕೋऽಸಿ, ಕೋನಾಮ: ಕಸ್ಮೈ ತ್ವಾ, ಕಾಯ ತ್ವಾ ಯಂತ್ವಾ ಸೋಮೇನಾತೀತೃಪಂ, ಯಂತ್ವಾ ಸೋಮೇನಾಮೀಮದಮ್ ॥ತೈ. ಸಂ. ೩-೨-೩॥

ಅರ್ಥ—ನಾನು ಯಾವ ನಿನ್ನನ್ನು ಸೋಮರಸದ ಆಹುತಿಗಳಿಂದ ತೃಪ್ತಿಪಡಿಸಿದೆನೋ, ಯಾವ ನಿನ್ನನ್ನು ಸೋಮರಸದ ಆಹುತಿಗಳಿಂದ ಸಂತೋಷಭರಿತನನ್ನಾಗಿ ಮಾಡಿದೆನೋ ಅಂಥ ನೀನು ಕ ಆಗಿರುತ್ತೀ. ಕ ಎಂಬ ಹೆಸರಿನವನಾಗಿರುತ್ತೀ. ಅಂಥ ಕ ಎಂಬ ನಿನಗೆ, ಕ ರೂಪದ ನಿನಗೆ (ಈ ಆಹುತಿ.)

ಹಿಂದಿನ ಉದಾಹರಣೆಗಳಲ್ಲಿ ಬಂದಿರುವ 'ಕ' ಎಂಬುದು ಪ್ರಜಾಪತಿಯ ಪ್ರತೀಕವಾದ ಈ + ಆಕೃತಿಯೇ ಆಗಿದೆಯೆಂಬುದರಲ್ಲಿ ಏನೂ ಸಂದೇಹವಿಲ್ಲ. ಇನ್ನು ಪ್ರಜಾಪತಿಯ ಪ್ರತೀಕವಾದ ಕ ಎಂಬುದು ಅದೇ ಆಕೃತಿಯಾಗಿದ್ದಿತೆಂಬುದರ ಇನ್ನೊಂದು ದೃಢತರ ಪ್ರಮಾಣವೆಂದರೆ ಆ ಆಕೃತಿಯು ಬ್ರಾಹ್ಮೀ ವರ್ಣಮಾಲೆಯಲ್ಲಿ **"ಕ" ವ್ಯಂಜನವಾಗಿರುವುದಾಗಿದೆ.**

ಋಗ್ವೇದದ ಹತ್ತನೆಯ ಮಂಡಲದ ೧೨೧ನೆಯ ಸೂಕ್ತದ ದೇವತೆಯು

ಕಃ ಪ್ರಜಾಪತಿಯಾಗಿದ್ದಾನೆ. ಮತ್ತು ಆ ಸೂಕ್ತದಲ್ಲಿ ಕಃ ಪ್ರಜಾಪತಿಯ ಪ್ರಶಸ್ತಿ ಮತ್ತು ಸ್ತುತಿ ಇದೆ. ಆ ಸೂಕ್ತದೊಳಗಿನ ಋಚೆಗಳ ಕೊನೆಯಲ್ಲಿ **"ಕಸ್ಮೈ ದೇವಾಯ ಹವಿಷಾ ವಿಧೇಮ"** ಅಂದರೆ "ನಾವು ಆ ಕ ಎಂಬ ದೇವನನ್ನು ಹವಿಸ್ಸಿನಿಂದ ಆರಾಧಿಸುವ" ಎಂಬ ಅಂಶವು ಬರುತ್ತದೆ.

ಹಿಂದೆ ಉಪಹರಿಸಿದ ಪ್ರಮಾಣಗಳಿಂದ ಮತ್ತು ಕೊಟ್ಟಿರುವ ವಿವರಗಳಿಂದ ಈ + 卐 卍 ಮೂರು ಚಿಹ್ನೆಗಳು ಆರ್ಯ ಜನರಲ್ಲಿ ಬಹಳ ಪ್ರಾಚೀನ ಕಾಲದಿಂದ ಉಪಯೊಗಿಸಲ್ಪಡುತಿದ್ದುವೆಂತಲೂ ಅವುಗಳು ಆರ್ಯ ಜನರಿಗೆನೇ ಸೇರಿದವುಗಳೆಂತಲೂ ಸಂದೇಹಕ್ಕೆಡೆಯಿಲ್ಲದಂತೆ ಸಿದ್ಧವಾಗುತ್ತದೆ. ಇನ್ನು ಆ ಚಿಹ್ನೆಗಳ ಅಥವಾ ಕುರುಹುಗಳ ಋತುಪಾತ್ರ ಎಂಬ ಹೆಸರು ಮರೆಯಾಗಿ ಸ್ವಸ್ತಿಕ ಎಂಬ ಹೆಸರು ಹೇಗೆ ಮತ್ತು ಎಂದಿನಿಂದ ಪ್ರಚಲಿತವಾಯಿತೆಂಬುವನ್ನು ಕಂಡುಕೊಂಡರೆ ಅವುಗಳ ಇತಿಹಾಸವು ಪೂರ್ಣವಾಗುವುದು.

ಋತುಪಾತ್ರಗಳು ಅಥವಾ ಈಗ ಸ್ವಸ್ತಿಕ ಎಂದು ಕರೆಯಲ್ಪಡುತ್ತಿರುವ ಚಿಹ್ನೆಗಳು ಆರ್ಯ ಜನರ ಉತ್ತರಧ್ರುವ ಪ್ರದೇಶದ ವಸತಿಗೆ ಸಂಬಂಧಿಸಿದವುಗಳೆಂದು ಹಿಂದೆ ಹೇಳಿದೆ. ಮತ್ತು ಆ ಮೂಲಕ ಆರ್ಯ ಜನರು ಮೊದಲು ಉತ್ತರ ಧ್ರುವ ಪ್ರದೇಶದಲ್ಲಿ ನೆಲಸಿದ್ದರೆಂದು ಸೂಚಿಸಿದೆ. ಕಾಲಾಂತರದಲ್ಲಿ ಅಲ್ಲಿನ ವಾಯುಗುಣವು ಅಥವಾ ಪ್ರಾಕೃತಿಕ ಪರಿಸ್ಥಿತಿಯು ಕೆಟ್ಟು ಹಿಮಪಾತವಾಗತೊಡಗಿದುದರಿಂದ ಆರ್ಯಜನರು ಆ ಪ್ರದೇಶವನ್ನು ತೊರೆದು ಕೆಳಗಿನ ಅಕ್ಷಾಂಶಗಳ ಪ್ರದೇಶಗಳಿಗೆ ಬಂದು ಅಲ್ಲಿ ನೆಲಸಬೇಕಾಯಿತು. ಆ ಹೊಸ ಪ್ರದೇಶದ ಭೌಗೋಲಿಕ ಹಾಗೂ ಖಗೋಲಿಕ ಸ್ಥಿತಿ–ಗತಿಗಳು ಉತ್ತರ ಧ್ರುವ ಪ್ರದೇಶದ ಸ್ಥಿತಿ–ಗತಿಗಳಿಂದ ಭಿನ್ನವಾಗಿದ್ದುದರಿಂದ ಅವರು ಮೊದಲು ಋತುಗಳನ್ನು ಮತ್ತು ಪರ್ವಗಳನ್ನು ನಿರ್ಧರಿಸಲು ಉಪಯೋಗಿಸುತಿದ್ದ ಋತುಪಾತ್ರಗಳು ಆ ಹೊಸ ಪ್ರದೇಶಗಳಲ್ಲಿ ಉಪಯೋಗಕ್ಕೆ ಬಾರದಾಗಿದ್ದುವು. ಹಾಗಾದರೂ ಅವುಗಳು ಅವರ ದೇವರ ಪ್ರತೀಕಗಳಾಗಿದ್ದುದರಿಂದ, ಅವರು ಅವುಗಳನ್ನು ತೊರೆಯಲಾರದೇ ಅವುಗಳ ಸಂಬಂಧವಲ್ಲಿ ಬಗಬಗೆಯ ಕಲ್ಪನೆಗಳನ್ನು ಮಾಡತೊಡಗಿದ್ದರು.

ಪ್ರಾಚೀನ ಆರ್ಯಜನರು ಒಬ್ಬರನ್ನೊಬ್ಬರು ಅಭಿವಾದಿಸುತಿದ್ದಾಗ ಬಾಯಿಯಿಂದ ಸ್ವಸ್ತಿ ತೇ ಎಂದಾಗಲೀ ಸ್ವಸ್ತಿ ಭವತೇ ಎಂದಾಗಲೀ ನುಡಿಯುತ್ತ ತಮ್ಮ ಎರಡು ಕೈಗಳನ್ನೂ ಎದೆಯ ಮುಂದಕ್ಕೊಯ್ದು ಅವುಗಳನ್ನು ಒಂದರ ಮೇಲೆ ಇನ್ನೊಂದನ್ನು ✕ ಹೀಗೆ ಹಾಯಿಸಿ ತಲೆಯನ್ನು ಬಗ್ಗಿಸುತಿದ್ದರು. ಹಾಗೆ ಸ್ವಸ್ತಿ ಎಂದು ನುಡಿಯುವಾಗ ಉಂಟಾಗುತಿದ್ದ ಆಕೃತಿಯ "ಪ್ರತಿಕೃತಿ" ಎಂಬ ಅರ್ಥದಲ್ಲಿ ಆ ಆಕೃತಿಯ ಹೆಸರು **"ಸ್ವಸ್ತಿಕ"** ಎಂದಾಗಿದ್ದಿತೆಂಬುದರಲ್ಲಿ ಸಂದೇಹವಿಲ್ಲ.

ಹಾಗಾದುದರಿಂದಲೇ ತರುವಾಯದ ಕಾಲದಲ್ಲಿ ನೆಟ್ಟಗೆ ಸಾಗಿದ ಒಂದು ಮಾರ್ಗದ ಮಧ್ಯದಿಂದ ಬೇರೊಂದು ಮಾರ್ಗವು ಅಡ್ಡ ಸಾಗಿದ್ದ ಸ್ಥಾನವನ್ನು ಸ್ವಸ್ತಿಕ ಎನ್ನು ತಿದ್ದರೆನ್ನಬಹುದು. ಆ ಆಕೃತಿಯನ್ನು ಸ್ವಸ್ತಿಕವೆಂದು ಕರೆದುದರಿಂದಾಗಿ ಅದರಂತೆಯೇ ಇದ್ದ ಋತುಪಾತ್ರಗಳು ಕೂಡ ಸ್ವಸ್ತಿಕ ಎಂಬ ಹೆಸರಿನಿಂದ ಕರೆಯಲ್ಪಡತೊಡಗಿದುವೆನ್ನಬಹುದು.

ಆದರೆ ಸ್ವಸ್ತಿಕ ಎಂಬ ಶಬ್ದವು ಆಚಾರ್ಯ ಪಾಣಿನಿಯು ರಚಿಸಿದ ಅಷ್ಟಾಧ್ಯಾಯಿ ಎಂಬ ಸಂಸ್ಕೃತ ವ್ಯಾಕರಣ ಸೂತ್ರಗಳ ಗ್ರಂಥಕ್ಕಿಂತ ಪ್ರಾಚೀನವಾದ ಬೇರೆ ಯಾವುದೊಂದು ಗ್ರಂಥದಲ್ಲಿಯೂ ಇಲ್ಲ.

ಪ್ರಾಚೀನ ಕಾಲದ ಆರ್ಯ ಜನರು ದನಕರುಗಳ ದೊಡ್ಡ ದೊಡ್ಡ ಹಿಂಡು ಗಳನ್ನು ಸಾಕುತಿದ್ದರು. ಮತ್ತು ತಮ್ಮ ದನಕರುಗಳು ಅನ್ಯರ ದನಕರುಗಳ ಹಿಂಡಿನಲ್ಲಿ ಬೆರೆತರೆ ಅವುಗಳನ್ನು ಬೇರ್ಪಡಿಸಲು ಸುಲಭವಾಗುವಂತೆ ಅವುಗಳ ಕಿವಿ ಯಲ್ಲಿ ತಮ್ಮದೇ ಆದ ಒಂದು ಕುರುಹನ್ನು ಅಂಕಿಸುತಿದ್ದರು. ಹಾಗೆ ದನಕರುಗಳ ಕಿವಿಯಲ್ಲಿ ಅಂಕಿಸಲ್ಪಡುತಿದ್ದ ಕೆಲವು ಚಿಹ್ನೆಗಳ ಹೆಸರುಗಳು ಯಜುರ್ವೇದದ ಮೈತ್ರಾಯಣೀ ಸಂಹಿತೆಯ ೪-೨-೯ರಲ್ಲಿ-ಸ್ಥೂಣಾ, ಕರ್ಕರೀ, ಪುಚ್ಛಿಂದ್ಯಾ ಮತ್ತು ದಾತ್ರ ಎಂಬುದಾಗಿ ಅಥರ್ವವೇದದ ೬-೧೪೨-೨ರಲ್ಲಿ ಮಿಥುನ ಎಂಬುದಾಗಿ, ಋಕ್‌ತಂತ್ರದ ೨೧೭ನೆಯ ಸೂತ್ರದಲ್ಲಿ- ಪ್ಲೀಹಾ, ಅಂಕುಶ, ಕುಂಡಲ, ಉಪರಿಷ್ಟ, ಅಧಿ, ಅಕ್ಷತ, ಬಾಣ ಮತ್ತು ಶಂಕು ಎಂಬುದಾಗಿ ಬಂದಿವೆ. ಅಂದರೆ ಅವು ಗಳಲ್ಲೊಂದರಲ್ಲಾದರೂ ಸ್ವಸ್ತಿಕ ಶಬ್ದದ ಉಲ್ಲೇಖವಿಲ್ಲ. ಸ್ವಸ್ತಿಕ ಶಬ್ದದ ಉಲ್ಲೇಖವು ಮುಂದೆ ಕೊಡಲಾಗುವ ಆಚಾರ್ಯ ಪಾಣಿನಿಯ ವ್ಯಾಕರಣ ಸೂತ್ರ ದಲ್ಲಿ ಮಾತ್ರ ಮೊತ್ತಮೊದಲು ಕಾಣಸಿಗುತ್ತದೆ- **“ಕರ್ಣೇ ಲಕ್ಷಣಸ್ಯಾವಿಷ್ಟಾಷ್ಟ ಪಂಚಮಣಿ ಭಿನ್ನಚ್ಛಿನ್ನಚ್ಛಿದ್ರಸ್ರುವ ಸ್ವಸ್ತಿಕಸ್ಯ ॥ ೬-೩-೧೧೫ ॥** ಈ ಸೂತ್ರದಲ್ಲಿ ಕಿವಿಯಲ್ಲಿ ಕುರುಹಿನ ಎಂಬುದಾಗಿ ವಿಷ್ಟ, ಅಷ್ಟ, ಪಂಚ, ಮಣಿ, ಭಿನ್ನ, ಛಿನ್ನ, ಛಿದ್ರ, ಸ್ರುವ ಮತ್ತು ಸ್ವಸ್ತಿಕ ಎಂಬ ಒಂಭತ್ತು ಶಬ್ದಗಳ ಉಲ್ಲೇಖವಿದೆ. ಅರ್ಥಾತ್ ಸ್ವಸ್ತಿಕ ಶಬ್ದದ ಮೊತ್ತಮೊದಲಿನ ಉಲ್ಲೇಖವು ಆಚಾರ್ಯ ಪಾಣಿನಿಯ ವ್ಯಾಕರಣ ಸೂತ್ರಗಳಲ್ಲಿ ಮಾತ್ರ ಇದೆ, ಅದರ ಮೇಲಿಂದ ಸ್ವಸ್ತಿಕ ಎಂಬ ಶಬ್ದವು ಆಚಾರ್ಯ ಪಾಣಿನಿಯ ಜನ್ಮಕಾಲಕ್ಕಿಂತ ಒಂದು ಶತಮಾನದ ಮೊದಲು ಪ್ರಚಲಿತವಾಗಿದ್ದಿತೆನ್ನ ಬಹುದು. ಏಕೆಂದರೆ ಆ ಕಾಲಕ್ಕಿಂತ ಹಿಂದಿನ ಯಾವುದೊಂದು ವ್ಯಾಕರಣ ಗ್ರಂಥ ದಲ್ಲಿಯೂ ಆ ಶಬ್ದವು ಬಂದಿಲ್ಲ.

ಅರ್ವಾಚೀನವಾದ ಕೆಲವು ಪ್ರಯೋಗ ಗ್ರಂಥಗಳು ಚೌಲ, ವಿವಾಹ ಮೊದಲಾದ ಗೃಹ್ಯ ಸಂಸ್ಕಾರಗಳಲ್ಲಿ ಸ್ವಸ್ತಿಕದ ಉಪಯೋಗವನ್ನು ಹೇಳುತ್ತವೆ. ಆದರೆ ಭಾರತವರ್ಷದೊಳಗಿನ ಬೇರೆ ಬೇರೆ ವೇದಶಾಖೆಗಳ ಬ್ರಾಹ್ಮಣರು ಬೇರೆ

ಬೇರೆ ಗೃಹ್ಯ ಸೂತ್ರಗಳನ್ನು ಅನುಸರಿಸುತ್ತಿರುವುದರಿಂದ ಅವರ ಗೃಹ್ಯ ಪ್ರಯೋಗಗಳಲ್ಲಿ ಕೂಡ ಹಲವು ಭೇದಗಳು ಉಂಟಾಗಿವೆ. ಬ್ರಾಹ್ಮಣರಲ್ಲಿ ಮಗುವು ಹುಟ್ಟಿದ ಮೂರನೆಯ ಇಲ್ಲವೇ ನಾಲ್ಕನೆಯ ತಿಂಗಳಲ್ಲಿ ಅದನ್ನು ವಿಧಿಪೂರ್ವಕ ಮನೆಯ ಹೊರಗೆ ಒಯ್ಯುವ ಸಂಸ್ಕಾರವು ನಿಷ್ಕ್ರಮಣ ಎಂದು ಹೆಸರಾಗಿದೆ. ಆ ದಿನ ಋಗ್ವೇದಿಗಳು ಮಗುವಿಗೆ ಹೋಮಕುಂಡದೊಳಗಿನ ಅಗ್ನಿಯನ್ನು ತೋರಿಸುತಿದ್ದರು. ಯಜುರ್ವೇದಿಗಳು ಸೂರ್ಯನನ್ನೂ, ಸಾಮವೇದಿಗಳು ಚಂದ್ರನನ್ನೂ ತೋರಿಸುತಿದ್ದರು. ಆದರೆ ಅರ್ವಾಚೀನವಾದ "ಪ್ರಯೋಗರತ್ನ" ಎಂಬ ಗ್ರಂಥದಲ್ಲಿ ಅವುಗಳು ಬೆರೆತು ಒಂದಾಗಿವೆ. ಅಂದರೆ ಅದರಲ್ಲಿ ಮಗುವು ಹುಟ್ಟಿದ ಮೂರನೆಯ ತಿಂಗಳಲ್ಲಿ ಅದರ ತಂದೆತಾಯಿಗಳು ಇಷ್ಟದೇವನನ್ನು ಪೂಜಿಸಿದ ತರುವಾಯ ಮಗುವನ್ನು ಅಲಂಕರಿಸಿ ಮನೆಯ ಹೊರಗೆ ತಂದು ಅದಕ್ಕೆ ಸೂರ್ಯನನ್ನು ತೋರಿಸಬೇಕೆಂತಲೂ, ನಾಲ್ಕನೆಯ ತಿಂಗಳಲ್ಲಿ ಅದಕ್ಕೆ ಅಗ್ನಿಯನ್ನು, ಚಂದ್ರನನ್ನು ಮತ್ತು ಧೇನುವನ್ನು ತೋರಿಸಬೇಕೆಂತಲೂ ಹೇಳಿದೆ.

ಋಗ್ವೇದದ ಶಾಕಲ ಮತ್ತು ಬಾಷ್ಕಲ ಶಾಖೆಗಳಿಗೆ ಸೇರಿದ ಆಶ್ವಲಾಯನ ಮತ್ತು ಶಾಂಖಾಯನ ಗೃಹ್ಯಸೂತ್ರಗಳಲ್ಲಿ ನಿಷ್ಕ್ರಮಣ ಸಂಸ್ಕಾರದ ಉಲ್ಲೇಖವಿಲ್ಲ. ಆದರೆ ಶುಕ್ಲ ಯಜುರ್ವೇದದ ಶಾಖೆಗೆ ಸೇರಿದ ಪಾರಸ್ಕರ ಗೃಹ್ಯ ಸೂತ್ರಗಳಲ್ಲಿ (೧-೧೭-೫ ಮತ್ತು ೬) ನಿಷ್ಕ್ರಮಣ ಸಂಸ್ಕಾರದ ಉಲ್ಲೇಖವಿದೆ ಮತ್ತು ಅದರಲ್ಲಿ ಮಗುವಿನ ನಾಲ್ಕನೆಯ ತಿಂಗಳಲ್ಲಿ ಅದನ್ನು ಮನೆಯಿಂದ ಹೊರಗೆ ತಂದು ಅದಕ್ಕೆ ಸೂರ್ಯನನ್ನು ತೋರಿಸಬೇಕೆಂದು ಹೇಳಿದೆ. ಸಾಮವೇದದ ಶಾಖೆಗಳಿಗೆ ಸೇರಿದ ಗೋಭಿಲ (೨-೮-೧ ರಿಂದ ೭) ಮತ್ತು ಖಾದಿರ (೨-೩-೧ ರಿಂದ ೫) ಗೃಹ್ಯ ಸೂತ್ರಗಳಲ್ಲಿ ಮಗುವು ಹುಟ್ಟಿದ ಮೂರನೆಯ ಶುಕ್ಲಪಕ್ಷದಲ್ಲಿ ತದಿಗೆಯ ದಿನ ಮಗುವಿನ ತಂದೆಯು ಬೆಳಗಾತ ಮಗುವಿಗೆ ಸ್ನಾನ ಮಾಡಿಸಬೇಕೆಂದೂ ಸೂರ್ಯಾಸ್ತದ ತರುವಾಯ ಚಂದ್ರನ ಕಡೆಗೆ ಮುಗಿದ ಕೈಗಳನ್ನೆತ್ತಿ ಚಂದ್ರನನ್ನು ಆರಾಧಿಸಬೇಕೆಂದೂ ಆ ಸಮಯದಲ್ಲಿ ಮಗುವಿನ ತಾಯಿಯು ಮಗುವನ್ನು ಅಲಂಕರಿಸಿ ತಂದು ಗಂಡನ ಕೈಯಲ್ಲಿ ಕೊಡಬೇಕೆಂದೂ ಅವನು ಮಗುವನ್ನು ಹಿಡಿದುಕೊಂಡು ವೇದಮಂತ್ರಗಳ ಮೂಲಕ ಚಂದ್ರನನ್ನು ಸ್ತುತಿಸಬೇಕೆಂದೂ ಹೇಳಿದೆ, ಇದು ಚಂದ್ರದರ್ಶನವೆಂತಲೂ ನಿಷ್ಕ್ರಮಣ ಎಂತಲೂ ಹೆಸರಾಗಿದೆ,

ನಿಷ್ಕ್ರಮಣ ಸಂಸ್ಕಾರದಲ್ಲಿ ಸೂರ್ಯಚಂದ್ರರ ಪ್ರತೀಕಗಳಾಗಿರುವ ಸ್ವಸ್ತಿಕ

---

[1] ಅಥ ಸೂರ್ಯಾವಲೋಕನಮ್ । ಜನನಾತ್ ತೃತೀಯೇಮಾಸಿ ಜನ್ಮದಿನೇ ಜನ್ಮನಕ್ಷತ್ರೇ ವಾ ಇಷ್ಟ ದೇವತಾ ಪೂಜನಪೂರ್ವಕಂ, ಅಲಂಕೃತೇನ ಶಿಶುನಾಸೋತ್ಸವಂ ಸೂರ್ಯದರ್ಶನಂಕಾರಯಿತ್ವಾ ಚತುರ್ಥೇಮಾಸೇ ಶುಭಕಾಲೇ ಅಗ್ನಿಂ, ಚಂದ್ರಂಧೇನುಂಚ ದರ್ಶಯೇತ್॥ ಪತ್ರ ೭೫॥

ಗಳ ಉಪಯೋಗವನ್ನು ಹೇಳಿಲ್ಲವಾದರೂ ಸೌರಾಷ್ಟ್ರದ ನಾಗರ ಬ್ರಾಹ್ಮಣರಲ್ಲಿ ಪ್ರಾಚೀನ ಕಾಲದಿಂದ ಸಾಗಿ ಬಂದಿರುವ ರೂಢಿಯ ಮೇಲಿಂದ ಪ್ರಾಚೀನ ಕಾಲದ ಆರ್ಯ ಜನರು ಸೂರ್ಯಾವಲೋಕನದ ಕಾಲದಲ್ಲಿ ಬಲಗಡೆಗೆ ಮೋರೆಯಾಗಿರುವ ಸ್ವಸ್ತಿಕವನ್ನೂ, ಚಂದ್ರಾವಲೋಕನ ಕಾಲದಲ್ಲಿ ಎಡಗಡೆಗೆ ಮೋರೆಯಾಗಿರುವ ಸ್ವಸ್ತಿಕವನ್ನೂ ಉಪಯೋಗಿಸುತ್ತಿದ್ದರೆಂದು ತಿಳಿಯಬಹುದಾಗಿದೆ. ಅಂದರೆ ನಾಗರ ಬ್ರಾಹ್ಮಣರಲ್ಲಿ ನಿಷ್ಕ್ರಮಣದ ದಿನ ಮಗುವಿನ ತಾಯಿಯು ಮನೆಯ ಅಂಗಳದಲ್ಲಿ ಒಂದು ಚಿಕ್ಕ ಚೌಕದ ಸ್ಥಳಕ್ಕೆ ಗೋಮಯವನ್ನು ಬಳಿಯುತ್ತಾಳೆ, ಅದು ಒಣಗಿದ ತರುವಾಯ ಅದರ ಮೇಲೆ ಸೂರ್ಯನ ಪ್ರತೀಕವಾಗಿ ಬಲಗಡೆ ಮೋರೆಯ ಸ್ವಸ್ತಿಕವನ್ನು ಚಿತ್ರಿಸುತ್ತಾಳೆ. ತರುವಾಯ ಮಗುವನ್ನು ಅಲಂಕರಿಸಿ, ಅದನ್ನು ಉಡಿಯಲ್ಲಿ ಎತ್ತಿಕೊಂಡು ಮನೆಯಿಂದ ಹೊರಗೆ ಬಂದು ಅಂಗಳದಲ್ಲಿ ಚಿತ್ರಿಸಿದ ಸ್ವಸ್ತಿಕವನ್ನು ಪ್ರದಕ್ಷಿಣೆ ಬರುತ್ತ ಅದರ ಮೇಲೆ ಅಕ್ಷತೆಗಳನ್ನು ಎರಚುತ್ತಾಳೆ. ತರುವಾಯ ಮಗುವಿಗೆ ಸೂರ್ಯನನ್ನು ತೋರಿಸಿ ಕೈಮುಗಿದು ಸ್ತುತಿಸುತ್ತಾಳೆ.

ಕೆಲವರು ಚೌಲ ಸಂಸ್ಕಾರದಲ್ಲಿ ಕೇಶವಪನದ ತರುವಾಯ ಮಕ್ಕಳ ತಲೆಯ ಮೇಲೆ ಸ್ವಸ್ತಿಕವನ್ನು ಬರೆಯುತ್ತಾರೆ: ಉಪನಯನ, ವಿವಾಹ ಮೊದಲಾದ ಶುಭ ಕಾರ್ಯಗಳ ಪ್ರಾರಂಭದಲ್ಲಿ ದೇವರ ಕಲಶವನ್ನು ಸ್ಥಾಪಿಸುವಲ್ಲಿ ಗೋಡೆಯ ಮೇಲೆ ಬಲಗಡೆ ಮೋರೆಯ ಸ್ವಸ್ತಿಕವನ್ನೂ ಕಲಶವಿಡುವ ಮಣೆಯ ಮೇಲೆ  ಇಂಥ ಸ್ವಸ್ತಿಕವನ್ನೂ ಬರೆಯುತ್ತಾರೆ, ವಿವಾಹ ಕಾಲದಲ್ಲಿ ವಧೂವರರ ಹಸೆಯ ಮೇಲೆ  ಇಂಥ ಜೋಡು ಸ್ವಸ್ತಿಕವನ್ನು ಬರೆಯುತ್ತಾರೆ. ಹಾಗೆಯೇ ವಿವಾಹ ಕಾಲದಲ್ಲಿ ವಧೂವರರ ನಡುವೆ ಹಿಡಿಯಲಾಗುವ ತೆರೆಯ ಮೇಲೆ ಕುಂಕುಮಾದಿಗಳಿಂದ ಸ್ವಸ್ತಿಕವನ್ನು ಚಿತ್ರಿಸುತ್ತಾರೆ.[1] ಹೊಸ ಮನೆಯನ್ನು ಕಟ್ಟಿಸುವವರು ಅಡಿಗಟ್ಟಿಗೆ ಇಡುವ ಮೊದಲನೆಯ ಕಲ್ಲಿನ ಮೇಲೆ ಸ್ವಸ್ತಿಕವನ್ನು ಬರೆದು ಅದನ್ನು ಪೂಜಿಸುತ್ತಾರೆ. ವ್ಯಾಪಾರಿಗಳು ಪ್ರತಿವರ್ಷ ಹೊಸ ಲೆಕ್ಕದ ಪುಸ್ತಕಗಳನ್ನು ಉಪಯೋಗಿಸುವ ಮೊದಲು ಆ ಪುಸ್ತಕಗಳ ಮೊದಲನೆಯ ಹಾಳೆಯ ಮೇಲೆ ಪುರೋಹಿತರ ಕೈಯಿಂದ ಕುಂಕುಮದ ಸ್ವಸ್ತಿಕವನ್ನು ಮತ್ತು ಓಂಕಾರವನ್ನು ಬರೆಯಿಸುತ್ತಾರೆ, ಸ್ವಸ್ತಿಕವನ್ನು ಮಂಗಲಕರವೆಂದು ನಂಬುವ ಸಕಲ ಭಾರತೀಯರು ತಮ್ಮ ಮನೆಯ ಬಾಗಿಲಿನ ಚೌಕಟ್ಟಿನ ಮೇಲ್ಗಡೆಯಲ್ಲಿಯೂ ಗೋಡೆಗಳಲ್ಲಿಯೂ ಸ್ವಸ್ತಿಕವನ್ನು

---

[1] ಬ್ರಾಹ್ಮಣಾಃ ಸ್ವಲಂಕೃತೇ ವೇಶ್ಮನಿ ಸುಮಂಗಲ ಗೀತತೂರ್ಯಾದಿ ನಿರ್ಘೋಷೇಕ್ರಿಯಮಾಣೇಪೂರ್ವಾಪರ ಭಾಗಯೋರ್ಹಸ್ತಾಂತರಾಲಂ ವಿಹಾಯ.ಪ್ರತ್ಯೇಕಂಪ್ರಸ್ಥಮಿತ ತಂಡುಲೈರ್ದ್ವಾರಾಶೀಕೃತ್ವಾ ಮಧ್ಯೇ ಕುಂಕುಮಾದಿಕೃತ ಸ್ವಸ್ತಿಕಾಂಕಿತಮಂತಃಪಟಂ ರಾಶ್ಯೋರ್ಮಧ್ಯೇ ಧಾರಯೇಯುಃ ॥ ಪ್ರಯೋಗರತ್ನ. ಪತ್ರ. ೧೧೪ ॥

ಚಿತ್ರಿಸುತ್ತಾರೆ. ಕೆಲವರ ಅಭಿಪ್ರಾಯದಲ್ಲಿ ಮೊದಲಿನ ಸ್ವಸ್ತಿಕವೇ. ತರುವಾಯ ಕಾಲದಲ್ಲಿ ಗಣಪತಿಯಾಗಿದ್ದಿತೆಂದಿದೆ. ಹಿಂದೆ ವಿವರಿಸಿದಂತೆ ಯಜ್ಞಧರ್ಮಿಯ ರಾದ ಪ್ರಾಚೀನ ಆರ್ಯಜನರು ತಮ್ಮ ಯಜ್ಞಗಳಲ್ಲಿಯೂ ತರುವಾಯದ ಬ್ರಾಹ್ಮಣರು ಗೃಹ್ಯಸಂಸ್ಕಾರಗಳಲ್ಲಿಯೂ ಸ್ವಸ್ತಿಕಗಳನ್ನು ಉಪಯೋಗಿಸುತ್ತ ಬಂದಿದ್ದಾರೆ. ಮತ್ತು ವೈದಿಕ ಧರ್ಮಾನುಯಾಯಿಗಳಾಗಿರುವ ಸಕಲ ಭಾರತೀಯರು ಸ್ವಸ್ತಿಕವನ್ನು ಪವಿತ್ರ ಹಾಗೂ ಮಂಗಲಕರದೆಂದು ನಂಬಿಕೊಂಡು ಅದನ್ನು ನಾನಾ ರೀತಿಗಳಲ್ಲಿ ಉಪಯೋಗಿಸುತ್ತ ಬಂದಿದ್ದಾರೆ.

ಸಾರಾಂಶವೇನೆಂದರೆ ಅತ್ಯಂತ ಪ್ರಾಚೀನ ಕಾಲದ ಆರ್ಯಜನರು ಸೂರ್ಯ ಚಂದ್ರರ ಪ್ರತೀಕಗಳನ್ನಾಗಿಯೂ, ಅವರ ಗತಿಗಳನ್ನು ಕಂಡುಕೊಳ್ಳುವ ವೇಧಯಂತ್ರ ಗಳನ್ನಾಗಿಯೂ ಉಪಯೋಗಿಸುತಲಿದ್ದ ಋತುಪಾತ್ರಗಳ ಅಥವಾ ತರುವಾಯದ ಕಾಲದಲ್ಲಿ ಸ್ವಸ್ತಿಕಗಳೆಂದು ಕರೆಯಲ್ಪಟ್ಟ ಆಕೃತಿಗಳ ಉಪಯೋಗವು ವೈದಿಕ ಧರ್ಮಾನುಯಾಯಿಗಳಾದ ಸಕಲ ಭಾರತೀಯರಲ್ಲಿ ಅವ್ಯಾಹತವಾಗಿ ಸಾಗಿ ಬಂದಿದೆ. ಮತ್ತು ಅವುಗಳ ಉಲ್ಲೇಖಗಳು ಆರ್ಯಜನರ ವೈದಿಕ ಗ್ರಂಥಗಳಲ್ಲಿ ಹೊರತು ಇತ ರರ ಗ್ರಂಥಗಳಲ್ಲಿ ಇಲ್ಲ. ಆದುದರಿಂದ ಅವುಗಳು ಮೂಲದಿಂದಲೂ ಆರ್ಯಜನರ ಕುರುಹುಗಳಾಗಿದ್ದುವೆಂಬುದರಲ್ಲಿ ಸಂದೇಹವುಳಿಯುವುದಿಲ್ಲ. ಹಾಗಾಗಿ ಅವುಗಳು ಆರ್ಯಜನರಿಗೆ ಸೇರಿದವುಗಳೆಂದು ಸಿದ್ಧಪಡಿಸಲು ಹಿಂದೆ ಉದಹರಿಸಿದ ಪ್ರಮಾಣ ಗಳು ಪರ್ಯಾಪ್ತವಾಗಿವೆ ಎನ್ನಬಹುದು.

ಇನ್ನು ಸ್ವಸ್ತಿಕವು ಆರ್ಯಜನರಿಗೆ ಸೇರಿದುದಲ್ಲವೆಂಬ ತಮ್ಮ ಕಲ್ಪನೆಯನ್ನು ಸಮರ್ಥಿಸಲು ಬ್ರಿಟಿಷ್ ವಿದ್ವಾಂಸರು ಅನುಸರಿಸಿದ ವಾದಸರಣಿಯ ಒಂದು ಮಾದರಿಯನ್ನು ಇಲ್ಲಿ ಮುಂದೆ ಉದಹರಿಸಲಾಗುವುದು.

ಸ್ವಸ್ತಿಕವು ಆರ್ಯಜನರದ್ದಲ್ಲವೆಂದು ಬಹಳ ಬಲವಾಗಿ ವಾದಿಸುತಿದ್ದ ಹಾಗೂ ತನ್ನ ಕಲ್ಪನೆಯನ್ನು ಸರಿಯೆಂದು ಸಿದ್ಧಪಡಿಸಲು ಹಲವು ಪ್ರಮಾಣವಿರುದ್ಧ ಅಭಿಪ್ರಾಯಗಳನ್ನು ಮುಂದಿಟ್ಟ ಬ್ರಿಟಿಷ್ ಪಾದ್ರಿ ನಾರ್ಮನ್ ವಾಕರ್ ಅವರು ಬರೆದ "ಸ್ವಸ್ತಿಕದ ವಾಸ್ತವಿಕ ಇತಿಹಾಸ. [1] ಎಂಬ ಪುಸ್ತಕದಲ್ಲಿ ಅವರು–" ಯೂರೋಪು ಮತ್ತು ಪಶ್ಚಿಮ ಆಸ್ಯದಲ್ಲಿ ಸ್ವಸ್ತಿಕದ ಉಪಯೋಗವು ನಿಂತು ಹೋಗಲು ಆರ್ಯ ಜನರೇ ಕಾರಣರೆಂದು ಹೇಳಿದ್ದಾರೆ. ಅಂದರೆ ಅವರು ಶಕಪೂರ್ವ ೧೭೦೦ ವರ್ಷಗಳ ಈಚಿನಿಂದ ಸ್ಕ್ಯಾಂಡಿನೇವಿಯದ ಆರ್ಯಯೋದ್ಧರ ತಂಡಗಳು ಯುರೋಪನ್ನು ಆಕ್ರಮಿಸಿ ಅಲ್ಲಿನ ಪ್ರಾಚೀನ ಸಂಸ್ಕೃತಿಯನ್ನು ನಾಶಗೊಳಿಸಿದುದರಿಂದ ಅಲ್ಲಿ ಸ್ವಸ್ತಿ ಕದ ಉಪಯೋಗವು ನಿಂತುಹೋಯಿತೆಂದೂ, ಆ ಯೋದ್ಧರ ತಂಡಗಳು ಶಕಪೂರ್ವ ಹದಿನಾಲ್ಕನೆಯ ಶತಮಾನದಲ್ಲಿ ಯೂರೋಪಿನಿಂದ ಮುಂದುವರಿದು ಕಿರಿಯ ಆಸ್ಯ ವನ್ನು ಗೆದ್ದುಕೊಂಡರೆಂದೂ, ಶಕಪೂರ್ವ ಹನ್ನೊಂದನೆಯ ಶತಮಾನದಲ್ಲಿ ಕಿರಿಯ

[1] Real History of the Swastika.

ಆಸ್ಯದಿಂದ ಮುಂದುವರಿದು ಪರ್ಶಿಯವನ್ನು ಮತ್ತು ಭಾರತವರ್ಷವನ್ನು ಆಕ್ರಮಿಸಿದರೆಂದೂ, ಅವರು ಭಾರತವರ್ಷದ ಮೂಲ ಸಂಸ್ಕೃತಿಯನ್ನು ನಾಶಗೊಳಿಸಲಿಲ್ಲವೆಂದೂ ಆದುವರಿಂದಲೇ ಭಾರತವರ್ಷದಲ್ಲಿ ಸ್ವಸ್ತಿಕದ ಉಪಯೋಗವು ಉಳಿದುಕೊಂಡಿತೆಂದೂ ಅಂದಿದ್ದಾರೆ. [1]

ಆದರೆ ನಾರ್ಮನ್ ವಾಕರ್ ಅವರು ಆ ವಾದವನ್ನು ಹುಸಿಗೊಳಿಸುವ ಐತಿಹಾಸಿಕ ಪ್ರಮಾಣಗಳು ಅವರ ಆ ಪುಸ್ತಕದಲ್ಲಿಯೇ ಇವೆ, ಅಂದರೆ ಅವರು ತನ್ನ ಪುಸ್ತಕದ ಇಪ್ಪತ್ತಾರನೆಯ ಮತ್ತು ಇಪ್ಪತ್ತೇಳನೆಯ ಪುಟಗಳಲ್ಲಿ ಸ್ವಸ್ತಿಕದ ಕುರಿತು ಇತರ ಹಲವು ವಿದ್ವಾಂಸರು ವ್ಯಕ್ತಗೊಳಿಸಿದ ಅಭಿಪ್ರಾಯಗಳನ್ನು ಐತಿಹಾಸಿಕ ಪ್ರಮಾಣಗಳೊಂದಿಗೆ ಉದಹರಿಸಿದ್ದಾರೆ. ಆ ಅಭಿಪ್ರಾಯಗಳ ಒಟ್ಟು ಸಾರಾಂಶವು– "ಶಕಪೂರ್ವ ೨೦೫೦ ವರ್ಷಗಳಷ್ಟು ಹಿಂದೆಯೇ ಆರ್ಯವರ್ಗದ ಹಿತ್ತೀ ಪಂಗಡದ ಜನರು ಕಿರಿಯ ಆಸ್ಯದಲ್ಲಿ ರಾಜ್ಯಗಳನ್ನು ಸ್ಥಾಪಿಸಿ ನೆಲಸಿದ್ದರು. ಮತ್ತು ಅವರಿಂದಾಗಿಯೇ ಅಲ್ಲಿ ಸ್ವಸ್ತಿಕದ ಉಪಯೋಗವು ಪ್ರಜಲಿತವಾಗಿತ್ತು" ಎಂಬುದಾಗಿದೆ." ಆ ವಿದ್ವಾಂಸರು ಹಿತ್ತೀ ಜನರನ್ನು ಆರ್ಯವರ್ಗದವರೆಂದು ನಿರ್ಧರಿಸಲು ಆಧಾರವಾಗಿ ಸ್ವೀಕರಿಸಿದ ಪ್ರಮಾಣಗಳಲ್ಲಿ ಮುಖ್ಯವಾದುದೆಂದರೆ– "ಶಕವರ್ಷ ೧೮೨೯ರಲ್ಲಿ ಪ್ರೊ ಹ್ಯೂಗೋ ವಿಂಕ್ಲರ್ ಎಂಬವರಿಗೆ ಕಿರಿಯ ಆಸ್ಯದ ಬೋಗಾಝ್‌ಕೋಈ ಎಂಬ ಹಳ್ಳಿಯಲ್ಲಿ ದೊರೆತ ಕೆಲವು ಫಲಕಗಳ ಮೇಲಿನ ಲೇಖನವಾಗಿರುತ್ತದೆ. ಆ ಫಲಕಗಳಲ್ಲಿ ಕಿರಿಯ ಆಸ್ಯದಲ್ಲಿ ರಾಜ್ಯಗಳನ್ನು ಸ್ಥಾಪಿಸಿ ಆಳುತಿದ್ದ ಮಿತ್ತಾನಿ ಮತ್ತು ಹಿತ್ತೀ ಎಂಬ ಎರಡು ಕುಲಗಳ ಆರ್ಯ ಆರಸರೊಳಗೆ ಯುದ್ಧವಾಗಿ ತರುವಾಯ ಜರುಗಿದ ಸಂಧಿಯ ನಿಬಂಧನೆಗಳು ಕೀಲಲಿಪಿ (cuneiform)ಯಿಂದ ಆರ್ಯವರ್ಗದ ಭಾಷೆಯಲ್ಲಿ ಬರೆಯಲ್ಪಟ್ಟಿವೆ. ಅದರಲ್ಲಿ ಎರಡೂ ಪಕ್ಷದವರು ಸಂಧಿಯ ನಿಬಂಧನೆಗಳನ್ನು ತಪ್ಪದೆ ಪಾಲಿಸುವರಾಗಿ **"ಮಿತ್ರ,**

---

[1] What was the cause of the disuse of the Swastika in these regions? I suggest it was the coming of the Aryan warrior races from their ancestral home in scandinavia from 1600 BC. onwards. These races over ran Europe and gradually wiped out the old Minoan, Mycenaen, and Anatolian civilizations, they occupied the north - west corner of Asia Minor, in the thirteenth century and overran Etruria. In their onward course they poured down intb Persia and India, about 1000 B. C. In India the Aryan conquerers did not destroy the native culture and the Swastika was preserved in use. The Real History of the Swastika page-20.

ವರುಣ, ಇಂದ್ರ ಮಿತ್ರ ನಾಸತ್ಯ” ಎಂಬ ವೈದಿಕ ದೇವತೆಗಳನ್ನು ಸಾಕ್ಷಿ ಮಾಡಿದ್ದಾರೆ. ಆ ಲೇಖದ ಕಾಲವು ಶಕಪೂರ್ವ ೧೪೫೮ನೆಯ ವರ್ಷವಾಗಿದೆ.

ಆದರೆ ಆ ಕಾಲದಲ್ಲಿ ಆರ್ಯಜನರು ಅಲ್ಲಿ ರಾಜ್ಯಗಳನ್ನು ಸ್ಥಾಪಿಸಿ ಆಳುತಿದ್ದರೆಂಬುದನ್ನು ಒಪ್ಪಲು ಸಿದ್ಧರಿಲ್ಲದ ಪಾದ್ರಿ ನಾರ್ಮನ್ ವಾಕರರು “ಬೋಗಾರ್ಝ್ ಕೋಈ ಲೇಖದ ಭಾಷೆಯು ಆರ್ಯ ವರ್ಗದ್ದಾಗಿದೆಯೆಂದೊಡನೆ ಆ ಭಾಷೆಯನ್ನು ಉಪಯೋಗಿಸಿದ ಜನರು ಕೂಡ ಆರ್ಯರಾಗಿದ್ದರೆಂದು ಸಿದ್ಧವಾಗುವುದಿಲ್ಲವೆಂತಲೂ ಅವರು ಆರ್ಯ ಭಾಷೆಯನ್ನು ಮಾತ್ರ ಸ್ವೀಕರಿಸಿದ್ದರೆಂದು ಸಿದ್ಧವಾಗುತ್ತದೆಂತಲೂ ಪ್ರತಿಪಾದ ಹೂಡಿದ್ಧಾರೆ. [1]

ಪರಂತು ನಾರ್ಮನ್ ವಾಕರರು ಶಕಪೂರ್ವ ಹದಿನೈದು ಶತಮಾನಗಳ ಮೊದಲು ಕಿರಿಯ ಆಸ್ಯದಲ್ಲಿ ಆರ್ಯಜನರ ವಸತಿ ಇರಲಿಲ್ಲವೆಂದು ಸಾಧಿಸುವ ಭರದಲ್ಲಿ ಹೆಚ್ಚಿನ ವಿವೇಚನೆಯನ್ನು ಮಾಡದೆನೇ ಅಂಥ ಪ್ರತಿಪಾದವನ್ನು ಹೂಡಿದ್ದಾರೆನ್ನಬೇಕಾಗಿದೆ, ಏಕೆಂದರೆ ಮೊದಲನೆಯದಾಗಿ–ಆ ಲೇಖದಿಂದ ಕಿರಿಯ ಆಸ್ಯದಲ್ಲಿ ಆಗ ವೈದಿಕ ಧರ್ಮವು ಪ್ರಚಲಿತವಿದ್ದಿತೆಂದು ಸ್ಪಷ್ಟವಾಗಿ ಸಿದ್ಧವಾಗುತ್ತದೆ: ಆದುದರಿಂದ ಆ ಲೇಖದ ಬಹುಕಾಲ ಮೊದಲಿನಿಂದಲೇ ಕಿರಿಯ ಆಸ್ಯದಲ್ಲಿ ಆರ್ಯಜನರ ವಸತಿಯಿದ್ದಿತೆಂದು ತಾನಾಗಿ ಸಿದ್ಧವಾಗುತ್ತದೆ. ಎರಡನೆಯದಾಗಿ ಶಕಪೂರ್ವ ೨೬೦೦ ವರ್ಷಗಳ ಹಿಂದೆ–ಬೆಬಿಲೋನದ ಅರಸನಾಗಿದ್ದ ನರಮ್‌ಸಿನ್ ಎಂಬವನ ಒಂದು ಲೇಖನದಲ್ಲಿ ಪಾರಸದ ಉರೂಮಿಯಾ ತಟಾಕದ ಬಲದಂಡೆಯಲ್ಲಿ ಆರ್ಯಜನರ ವಸತಿ ಇದ್ದಿತೆಂಬ ಉಲ್ಲೇಖವಿದೆ.[2] ಮಾತ್ರವಲ್ಲ ಶಕಪೂರ್ವ ಎರಡು ಸಾವಿರ ವರ್ಷಗಳ ಮೊದಲೇ ಕಿರಿಯ ಆಸ್ಯದಲ್ಲಿ ಆರ್ಯವರ್ಗದ ಮಿತ್ತಾನಿ ಮತ್ತು ಹಿತ್ತೀ ಕುಲದ ಜನರು ರಾಜ್ಯಗಳನ್ನು ಸ್ಥಾಪಿಸಿ ಆಳುತಿದ್ದರೆಂಬ ಉಲ್ಲೇಖಗಳಿರುವ ಲಿಖಿತಪ್ರಮಾಣಗಳೂ ಇವೆ. ಆದುದರಿಂದ ಪಾದ್ರಿ ನಾರ್ಮನ್‌ವಾಕರ್ ಹಾಗೂ ಇತರ ಪಾಶ್ಚಾತ್ಯ ವಿದ್ವಾಂಸರು ಆರ್ಯಜನರ ಮತ್ತು ಅವರ ಕುರುಹಾದ

---

[1] The fact that the Hittite tabelets of winkler are in a Indo-European tongue written in cuneiform does not prove that the Hittiters were Aryans; but only they had adopted an Indo-European tongue. p. 27.

[2] Evidence has been discovered of the existence of another Aryan colony on the eastern bank of Lake Urumia in Persia. These people are called the Manda in the inscription of Naram - Sin one of the kings of Babylon, who ruled two thousand six hundred years before Christ. A student's History of India p. 15 by R. D. Banerji M. A.

ಸ್ವಸ್ತಿಕದ ಸಂಬಂಧದಲ್ಲಿ ಮುಂದೆ ತಂದಿರುವ ಸಕಲ ವಾದಗಳು ಅಥವಾ ಕಲ್ಪನೆಗಳು ವ್ಯರ್ಥವಾಗುತ್ತದೆ.

ಹಾಗಾದರೂ ಬ್ರಿಟಿಷ್ ಮತ್ತು ಇತರ ಪಾಶ್ಚಾತ್ಯ ವಿದ್ವಾಂಸರು ಸ್ವಸ್ತಿಕಗಳು ದೊರೆತ ದೇಶಗಳ, ಪಟ್ಟಣಗಳ ಮತ್ತು ಅವುಗಳ ಕಾಲಗಳ ಸಂಬಂಧದಲ್ಲಿ ಉದಹರಿಸಿದ ಹಾಗೂ ಆ ಮೂಲಕ ಒದಗಿಸಿಕೊಟ್ಟ ಲಿಖಿತ ಪ್ರಮಾಣಗಳ ಆಧಾರದಿಂದ ಆರ್ಯಜನರು ಪ್ರಾಚೀನ ಕಾಲದಲ್ಲಿ ಸ್ಥಾಪಿಸಿದ ವಸಾಹತುಗಳು ಯಾವುವೆಂಬುದನ್ನು ನಿರ್ಧರಿಸಬಹುದಾಗಿದೆಯಲ್ಲದೇ ಆರ್ಯ ಜನರು ದಿಕ್ಕು ದಿಕ್ಕುಗಳಿಗೆ ಚದರಿ ಮುಂದುವರಿದು ಸಾಗಿದ ಹಾದಿಯನ್ನನುಸರಿಸಿ ಅವರ ಪ್ರಾಚೀನ ಇತಿಹಾಸವನ್ನು ಬಹಳ ಚೆಲೋ ರೀತಿಯಲ್ಲಿ ರೂಪಿಸಬಹುದಾಗಿದೆ. ಆದುದರಿಂದ ಪಾಶ್ಚಾತ್ಯ ವಿದ್ವಾಂಸರು ಆ ಸಂಬಂಧದಲ್ಲಿ ಮಾಡಿದ ಪರಿಶ್ರಮಕ್ಕಾಗಿ ನಾವು ಅವರನ್ನು ಅಭಿನಂದಿಸಲೇ ಬೇಕಾಗಿದೆ.

ಬ್ರಿಟಿಷ್ ಪಾದ್ರಿ ನಾರ್ಮನ್‌ವಾಕರ್ ಅವರು ಬರೆದು ಪ್ರಕಟಿಸಿದ "ಸ್ವಸ್ತಿಕದ ವಾಸ್ತವಿಕ ಇತಿಹಾಸ" ಎಂಬ ಪುಸ್ತಕವು ಗಾತ್ರದಲ್ಲಿ ಚಿಕ್ಕದಾಗಿದ್ದರೂ ಅದರಲ್ಲಿ ಸ್ವಸ್ತಿಕದ ಚಿಹ್ನೆಗಳು ದೊರೆತ ಪ್ರಾಚೀನ ಪಟ್ಟಣಗಳ ಮತ್ತು ದೇಶಗಳ ಹೆಸರುಗಳೊಂದಿಗೆ ಆಯಾ ಪಟ್ಟಣವು ಮತ್ತು ಪ್ರದೇಶವು ಉತ್ಕರ್ಷ ಸ್ಥಿತಿಯಲ್ಲಿದ್ದ ಕಾಲವೂ ಇದೆ. ಅದು ಅತ್ಯಂತ ಮೌಲಿಕವಾಗಿದೆ. ಅವರು ಆ ಪುಸ್ತಕದಲ್ಲಿ ಪಶ್ಚಿಮ ಆಸ್ಯದ ಆರ್ಮೆನಿಯಾದಲ್ಲಿ ಮತ್ತು ಕಾಕಸಸ್ ಪ್ರದೇಶದಲ್ಲಿಯೂ, ಅತ್ತ ಈಜಿಪ್ತದಲ್ಲಿ ದೊರಕಿದ ಅತ್ಯಂತ ಪ್ರಾಚೀನ ಮಾದರಿಯ ಸಾಇಪ್ರಸ್ ಗಡಿಗೆಗಳ ಮೇಲೂ ಸ್ವಸ್ತಿಕಗಳು ಕಂಡು ಬಂದಿವೆ ಎಂದಿದ್ದಾರೆ, [1] ಹಾಗೆಯೇ ಶಕಪೂರ್ವ ೩೪೦೦–೨೮೫೦ ವರ್ಷಗಳ ಕಾಲದ ಮಧ್ಯ ಆಸ್ಯದ ತುರ್ಕಸ್ಥಾನದೊಳಗಿನ ಅನಾಉ II ಎಂಬ ಹಳ್ಳಿಯಲ್ಲಿಯೂ [2] ಶಕಪೂರ್ವ ನಾಲ್ಕನೆಯ ಸಹಾಸ್ರಾಬ್ದದ ಪೂರ್ವಾರ್ಧಕ್ಕೆ ಸೇರಿದ ಪಶ್ಚಿಮ ಆಸ್ಯದ ಶೂಸ Ia ಎಂಬಲ್ಲಿ ಮತ್ತು ಏಲಾಮ್ ಎಂಬಲ್ಲಿ ದೊರೆತ ಪ್ರೇತಸಂಸ್ಕಾರದ ಕುಂಭಗಳ ಮತ್ತು ಬೇರೆ ಗಡಿಗೆಗಳ ಮೇಲೂ ಶೂಸ IIb ಎಂಬಲ್ಲಿ ದೊರೆತ ಬಿಲ್ಲೆಗಳ ಮೇಲೂ ಸಮಾರಾ I ಮತ್ತು ನಿನ್ವೇವೇ II b ಎಂಬಲ್ಲಿ ದೊರೆತ ಗಡಿಗೆಗಳ ಮೇಲೂ ಭಾರತ ವರ್ಷದೊಳಗಿನ ಬಲೂಚೀ

---

[1] The Swastika has also been found in Armenia and Maucasus. It occurs on very ancient Cyprian pottery, the oldest specimen of which was found in Egypt. p. 17.

[2] In Turkestan we find no Swastika in Anau I, a village of grain growers and pottery painters dated 3900-3300 B. C; but we find it in the village Anau II dated 3300-2700 B. C. p. 21.

ಸ್ತಾನದ ಶಾಹೀತುಂಪ್ ಎಂಬಲ್ಲಿ ದೊರೆತ ಗಡಿಗೆಗಳ ಮೇಲೂ, ಹಳಪ್ಪಾ ಮತ್ತು
ಮೊಹೆಂಜೋದಳೋ ಅಗೆತಗಳಲ್ಲಿ ಬೆಳಕಿಗೆ ಬಂದ ಆರ್ಯಪೂರ್ವ ಕಾಲದ ಸಿಂಧೂ
ಸಂಸ್ಕೃತಿಯ ಬಿಲ್ಲೆಗಳ ಹಾಗೂ ಅಲಂಕಾರ ಫಲಕಗಳ ಮೇಲೂ ಸ್ವಸ್ತಿಕಗಳು ಕಂಡು
ಬಂದಿವೆಯೆಂದಿದ್ದಾರೆ. ಅಷ್ಟು ಮಾತ್ರವಲ್ಲದೇ ಶೂಸ Ia ಎಂಬಲ್ಲಿ ಶಕಪೂರ್ವ
೩೦೦೦ ವರ್ಷಗಳಷ್ಟು ಹಿಂದೆಯೇ ಸ್ವಸ್ತಿಕವು ಪ್ರಚಲಿತವಿದ್ದಿತೆಂದು ತೀರ್ಮಾನಿಸಿ
ದ್ದಾರೆ.[1] ಹಾಗೆಯೇ ಸುಮೇರಿಯಾದಲ್ಲಿ ಮತ್ತು ಬೆಬಿಲೋನಿಯಾದಲ್ಲಿ ಸಿಂಧೂ
ಕಣಿವೆಯಲ್ಲಿ ದೊರೆತಂಥ ಬಿಲ್ಲೆಗಳು ದೊರೆತಿವೆಯೆಂತಲೂ, ಆ ಬಿಲ್ಲೆಗಳ ಮೇಲೆ
ನಾಗನ ಮತ್ತು ಬಸವನ ಚಿತ್ರಗಳೊಂದಿಗೆ ಬರಹದ ಸಾಲುಗಳು ಕೂಡ ಇವೆ
ಯೆಂತಲೂ ವಿಲ್‌ಡುರ್‍ಯಾಂಟ್ ಎಂಬ ಅಮೇರಿಕನ್ ವಿದ್ವಾಂಸರ ಪುಸ್ತಕದಿಂದ ತಿಳಿದು
ಬರುತ್ತದೆ.[2] ಆ ರೀತಿಯಲ್ಲಿ ಬ್ರಿಟಿಷ್ ಪಾದ್ರಿ ನಾರ್ಮನ್ ವಾಕರ್ ಮತ್ತು
ಇತರ ಪಾಶ್ಚಾತ್ಯ ವಿದ್ವಾಂಸರು ಸ್ವಸ್ತಿಕದ ಸಂಬಂಧದಲ್ಲಿ ಮತ್ತು ಪಶ್ಚಿಮ ಆಸ್ಯದಲ್ಲಿ
ದೊರೆತ ಹಾಲುಗಲ್ಲಿನ ಬಿಲ್ಲೆಗಳ ಸಂಬಂಧದಲ್ಲಿ ಒದಗಿಸಿಕೊಟ್ಟ ಪ್ರಮಾಣಗಳು
ಆರ್ಯ ಜನರ ಪ್ರಾಚೀನ ಇತಿಹಾಸದ ರಚನೆಗೆ ಮತ್ತು ಹೆಚ್ಚಿನ ಅನ್ವೇಷಣಕ್ಕೆ

---

[1] Archaeological research has now shown that the Swastika was in use in first half of fourth millenium B C., at Susa I a, in Elam on funerary vases and bowls. It was also found on seals at Susa I b, on pottery of Samara I. and Nineveh II b; on pottery of the identical but later dated culture of Shahi-Tump in Baluchistan and stamps and plaques of the pre-Aryan and non-Aryan Indus culture found at Mohenjo-daro and Harappa, a fact which explains the continuous religious use of the sign in India throughout the ages.

We thus find the Swastika in use at Surs I a as early as 3700 B. C., page 22.

[2] The indications are that Mohenjo-daro was at it's height when Chepos built the first great pyramid, that had commercial, religious and artistic connections with Sumeria and Babylonia.

Our Oriental Heritage page 395.

Note: – These connections are suggested by similar seals found at Mohenjo-daro and Sumeria (especially at Kish) and by the appearance of the Naga or hooded serpent among the early Sumerian Seals.

ತುಂಬಾ ನೆರವು ನೀಡುತ್ತದೆಂಬುದರಲ್ಲಿ ಸಂದೇಹವಿಲ್ಲ, ಅಂದರೆ ಅವರು ಒದಗಿಸಿ ಕೊಟ್ಟ ಪ್ರಮಾಣಗಳ ಆಧಾರದಿಂದ ಶಕಪೂರ್ವ ನಾಲ್ಕು ಸಾವಿರ ವರ್ಷಗಳಷ್ಟು ಹಿಂದೆ ಆರ್ಯ ಜನರು ಮಧ್ಯ ಆಸ್ಯದಿಂದ ಕಿರಿಯ ಆಸ್ಯದ ಜಲ ಸಂಧಿಯ ತನಕವೂ ಅಲ್ಲಿಂದ ಭೂಮಧ್ಯ ಸಮುದ್ರದ ತೀರವಾಗಿ ಈಜಿಪ್ತದ ತನಕವೂ ಕಿರಿಯ ಆಸ್ಯದಿಂದ ಪೂರ್ವಕ್ಕೆ ಆರ್ಮಿನಿಯಾ, ಮೆಸಪೊಟೇಮಿಯಾ, ಈರಾನ್, ಅಫಘಾನಿಸ್ಥಾನ ಮೊದಲಾದ ಪ್ರದೇಶಗಳನ್ನೊಳಗೊಂಡು ಉತ್ತರ ಭಾರತದ ಪಶ್ಚಿಮ ಭಾಗದ ತನಕವೂ ಬೆಬಿಲೋನಿಯಾವನ್ನೊಳಗೊಂಡು ಅರಬದ ತನಕವೂ ದೂರಪೂರ್ವದಲ್ಲಿ ಮಂಗೋಲಿಯಾ, ಮಂಚೂರಿಯಾ ಮೊದಲಾದುವುಗಳನ್ನೊಳಗೊಂಡು ಉತ್ತರ ಅಮೇರಿಕದ ತನಕವೂ ಹರಡಿ ನೆಲಸಿದ್ದರೆಂದು ಸಂದೇಹವಿಲ್ಲದೇ ಹೇಳಬಹುದಾಗಿದೆ.

ಆದರೆ ಸುಮೇರೀ ಮತ್ತು ಸಿಂಧೂ ಸಂಸ್ಕೃತಿಗಳು ಒಂದೇಯಾಗಿದ್ದು ಅವುಗಳು ಆರ್ಯಜನರಿಗೆ ಸೇರಿದವುಗಳೆಂಬುದನ್ನೊಪ್ಪಲು ಸಿದ್ಧರಿಲ್ಲದ ಪಾಶ್ಚಾತ್ಯ ವಿದ್ವಾಂಸರು, ಮುಖ್ಯವಾಗಿ, ತಮಗಾಗಿ ಒಂದು ಪ್ರಾಚೀನ ಸಂಸ್ಕೃತಿಯ ಮೂಲ ವನ್ನು ಹುಡುಕಲು ಹೊರಟ ಅಮೇರಿಕದ ವಿದ್ವಾಂಸರು ಸಿಂಧೂ ಮತ್ತು ಸುಮೇರೀ ಸಂಸ್ಕೃತಿಗಳು ಮೊದಲು ಭಾವಿಸಿದಂತೆ ಒಂದೇ ಅಲ್ಲವೆಂತಲೂ, ಸುಮೇರದಲ್ಲಿ ದೊರೆತ ಸಿಂಧೂ ಮಾದರಿಯ ಬಿಲ್ಲೆಗಳು ಸಿಂಧೂ ಕಣಿವೆಯ ವ್ಯಾಪಾರಿಗಳು ಅಲ್ಲಿಗೆ ಕಳುಹಿಸಿದ ವ್ಯಾಪಾರದ ಸರಕುಗಳೊಂದಿಗೆ ತಮ್ಮ ಗುರುತಿನ ಮುದ್ರೆಗಳ ರೂಪದಿಂದ ಅಲ್ಲಿಗೆ ತಲುಪಿದ್ದುವೆಂತಲೂ ವಾದಿಸಿದ್ದಾರೆ.

ಹಾಲುಗಲ್ಲಿನ ಆ ಬಿಲ್ಲೆಗಳು ವ್ಯಾಪಾರಿಗಳ ಗುರುತಿನ ಮುದ್ರೆಗಳೆಂಬ ಆ ವಿಚಿತ್ರ ಕಲ್ಪನೆಯು ಮೊತ್ತಮೊದಲು ಯಾವನ ಮಸ್ತಿಷ್ಕದಲ್ಲಿ ಉದ್ಭವಿಸಿದ್ದಿತೆಂದು ನಿಖರವಾಗಿ ಹೇಳಲಾಗದಿದ್ದರೂ ಆ ಕಲ್ಪನೆಗೆ ದೃಢರೂಪವನ್ನು ಕೊಡಲು ಪ್ರಯ ತ್ನಿಸಿದವರು ಪ್ರೊ. ಲೆನಾರ್ಡ್ ವೂಲೀ ಎಂಬವರೆಂದು ಸಂದೇಹವಿಲ್ಲದೇ ಹೇಳ ಬಹುದು. ಹೇಗೆಂದರೆ—ಪ್ರೊ: ವೂಲೀ ಅವರು— ಸಿಂಧೂ ಕಣಿವೆಯ ಮೊಹೆಂಜೋ ದಳೋ ಎಂಬಲ್ಲಿ ಅಗತೆಗಳು ಪ್ರಾರಂಭವಾದ ಹಾಗೆಯೇ ಅಮೇರಿಕದ ಕೆಲವು ಅನ್ವೇಷಕರೊಂದಿಗೆ ಕೂಡಿ ಸುಮೇರದ "ಉರ್" ಎಂಬಲ್ಲಿ ಅಗೆತಗಳನ್ನು ಪ್ರಾರಂಭಿ ಸಿದ್ದರು, ಅವರು ಆ ಅಗೆತಗಳ ಸಂಬಂಧದಲ್ಲಿ ಪ್ರಕಟಿಸಿದ ‹‘Excavation at Ur’’ ಎಂಬ ಪುಸ್ತಕದಲ್ಲಿ ವ್ಯಕ್ತಗೊಳಿಸಿದ ಅಭಿಪ್ರಾಯಗಳಿಂದ ಅವರು ಅಲ್ಲಿನ ಅಗೆತ ಗಳ ಕೆಲಸವನ್ನು ಕೈಗೊಂಡುದರ ಮುಖ್ಯ ಉದ್ದೇಶವು ಸುಮೇರೀ ಜನರು ಆರ್ಯ ಮತ್ತು ಸೆಮಿಟಿಕ್ ವರ್ಗದ ಜನರಿಂದ ಭಿನ್ನರೆಂದು ಮತ್ತು ಸುಮೇರೀ ಹಾಗೂ ಸಿಂಧೂ ಸಂಸ್ಕೃತಿಗಳು ಒಂದೇ ಅಲ್ಲವೆಂದು ಸಾಧಿಸುವುದಾಗಿದ್ದಿತೆಂದು ಸ್ಪಷ್ಟವಾಗಿ ಸಿದ್ಧವಾಗುತ್ತದೆ.

ಆದರ ಒಂದು ಉದಾಹರಣೆಯೆಂದರೆ – ಅವರು ಸುಮೇರೀ ಬಿಲ್ಲೆಗಳ ಮೇಲಿನ ಬರವಣಿಗೆಯ ಭಾಷೆಯು ಸುಮೇರದಲ್ಲಿ ಮೊದಲು ಪ್ರಚಲಿತವಿದ್ದ ಇತರ

ಭಾಷೆಗಳಿಂದ ಭಿನ್ನವಾಗಿದ್ದು ಅದು ಯಾವ ಭಾಷಾವರ್ಗಕ್ಕೆ ಸೇರಿದುದೆಂದು ನಿರ್ಧರಿಸಲ್ಪಟ್ಟಿಲ್ಲವಾದುದರಿಂದ ಸುಮೇರೀ ಜನರು ಯಾರು? ಎಂಬ ಸಮಸ್ಯೆಯು ಹಾಗೆಯೇ ಉಳಿದಿದೆ. [1] ಎಂದುದಾಗಿದೆ. ಅಂದರೆ ಅದು ಅವರು ಸ್ವತಂತ್ರವಾಗಿ ಹುಟ್ಟಿಸಿದ ಹೊಸ ಸಮಸ್ಯೆಯಾಗಿದೆ. ಅಥವಾ ಅವರ ಸ್ವಂತದ ಕಲ್ಪನೆಯಾಗಿದೆ. ಏಕೆಂದರೆ ಅವರ ಕಲ್ಪನೆಗೆ ಯಾವುದೊಂದು ಪ್ರಮಾಣದ ಆಧಾರವೂ ಇಲ್ಲ. ಹಾಗೆಯೇ ಸುಮೇರದಲ್ಲಿ ದೊರಕಿದ ಸಿಂಧೂ ಮಾದರಿಯ ಬಿಲ್ಲೆಗಳು ಸಿಂಧೂ ಕಣಿವೆಯಿಂದ ವ್ಯಾಪಾರಿಗಳ ಗುರುತಿನ ಮುದ್ರೆಯ ರೂಪದಿಂದ ಅಲ್ಲಿನ ಸರಕಿನೊಂದಿಗೆ ಸಾಗಿದ್ದುವೆಂಬ ಕಲ್ಪನೆಗೂ ಈ ತನಕ ಯಾವುದೊಂದು ಪ್ರಮಾಣವು ದೊರೆತಿಲ್ಲ. ಯಾವನೋ ಒಬ್ಬನು ಒಂದು ತೆಳ್ಳನ ಬಟ್ಟೆಯ ಚೂರಿನಲ್ಲಿ ಒಂದು ಬಿಲ್ಲೆಯ ಅಚ್ಚನ್ನು ಕಂಡಿದ್ದನೆಂಬ ಒಂದು ಹೇಳಿಕೆಯನ್ನು ಆ ಪಾಶ್ಚಾತ್ಯ ವಿದ್ವಾಂಸರು ದೊಡ್ಡ ಪ್ರಮಾಣದಂತೆ ಉಪಹರಿಸುತಿದ್ದಾರೆ. ಆದರೆ ಇಲ್ಲಿ ಪರಿಶೀಲಿಸಬೇಕಾದ ಮುಖ್ಯ ವಿಷಯವೆಂದರೆ, ಸುಮೇರದಲ್ಲಾಗಲೀ, ಪಶ್ಚಿಮ ಆಸ್ಯದಲ್ಲಾಗಲೀ ಸೆಮಿಟಿಕ್ ಮತ್ತು ಆರ್ಯ ಎಂಬ ಎರಡು ವರ್ಗದ ಜನಾಂಗಗಳ ಹೊರತು ಮೂರನೆಯ ಒಂದು ಜನಾಂಗದ ಜನರು ನೆಲಸಿದ್ದರೆಂದು ಇಂದಿನ ತನಕ ಸಿದ್ಧವಾಗಿಲ್ಲ – ಎಂಬುದಾಗಿದೆ.

ಎರಡನೆಯ ಉದಾಹರಣೆಯೆಂದರೆ – "ಅಲ್ಲಿನ ಒಂದು ಶವದ ಸಮಾಧಿಯಲ್ಲಿ ಸಿಂಧೂ ಮಾದರಿಯ ಬರಹ ಮತ್ತು ಓಣಿಲುಳ್ಳ ಹೋರಿಯ ಚಿತ್ರವಿರುವ ಬಿಲ್ಲೆಯು ದೊರಕಿದ್ದರೂ, ಅವರು ಆ ಸಮಾಧಿ ಸಳ್ಳದಲ್ಲಿ ಕೊಂಚ ಗಲಿಬಿಲಿಯಾಗಿರುವಂತೆ ತೋರುವುದರಿಂದ ಆ ಬಿಲ್ಲೆಯನ್ನು ಶವದ ಸಮಾಧಿಗೆ ಸೇರಿದುದೆಂದು ನಿಖರವಾಗಿ ಹೇಳುವುದು ಕಷ್ಟ" [2] ಎಂದುದಾಗಿದೆ. ಇಲ್ಲಿ ಲಕ್ಷಿಸಬೇಕಾದ ವಿಷಯ

---

[1] For the modern historian the invention of the adjective "Sumerian" was convenient for distinguishing a particular language, a particular people and a particular civilization. The language of the tablets is entirely different from any other ever used in Mesopotamia (but to what family of languages it belongs has not been determined) and thanks to the rich harvest of excavation we know exactly what we mean by "Sumerian Civilization". But the problem "Who were the Sumerians?" remains; page. 50.

[2] One objeet of quite extraordinary interest was found in the upper fillings of one of the multiple graves; were there had been some disturbance and it was difficult to be sure whether the

ವೆಂದರೆ – "ಆ ಬಿಲ್ಲೆಯು ಶವದ ಸಮಾಧಿಗೆ ಸೇರಿದುದೆಂದಾರೆ – ಸುಮೇರೀ ಜನರು ಅಂಥ ಬಿಲ್ಲೆಗಳನ್ನು ಉಪಯೋಗಿಸುವ ವರ್ಗದ ಜನರೆಂದೂ, ಅವರೂ, ಸಿಂಧೂ ಕಣಿವೆಯ ಜನರೂ ಒಂದೇ ವರ್ಗದ ಜನರೆಂದೂ ಸಿದ್ಧವಾಗುವುದು" – ಎಂಬುದಾಗಿದೆ, ಆದರೆ ಹಾಗಾಗುವುದು, ಪ್ರೊ, ವೂಲೀ ಅವರಿಗೆ ಇಷ್ಟವಿಲ್ಲದುದರಿಂದ ಅವರು ಅಲ್ಲಿನ ವಸ್ತುಸ್ಥಿತಿಯನ್ನು ತನ್ನ ಕಲ್ಪನೆಗೆ ಅನುಕೂಲವಾಗುವಂತೆ ಪರಿವರ್ತಿಸಿದ್ದಾರೆ.

ಮೂರನೆಯ ಉದಾಹರಣೆಯೆಂದರೆ - ಅವರು "ಸಾರ್ಗನ್ ಕಾಲದಿಂದ ಸುಮೇರದಲ್ಲಿ ಸಿಂಧೂ ಮಾದರಿಯ ಬಿಲ್ಲೆಗಳು ಅಧಿಕ ಸಂಖ್ಯೆಯಲ್ಲಿ ಕಂಡುಬರುವುದರಿಂದ ಅವನ ಕಾಲದಲ್ಲಿ ಸುಮೇರದೊಂದಿಗೆ ಭಾರತೀಯರ ವ್ಯಾಪಾರವು ಬಹಳ ಅಭಿವೃದ್ಧಿ ಹೊಂದಿದ್ದಿತೆಂತಲೂ, ಆ ಕಾರಣದಿಂದ ಭಾರತೀಯ ವ್ಯಾಪಾರಿಗಳು ಸುಮೇರದಲ್ಲಿ ತಮ್ಮ ನಿಯೋಗಿಗಳನ್ನು ಸ್ಥಾಪಿಸಿದ್ದರೆಂತಲೂ, ಅಲ್ಲಿ ಕಂಡು ಬಂದ ಕೆಲವು ಬಿಲ್ಲೆಗಳು ಭಾರತ ವರ್ಷದಿಂದ ಬಂದವುಗಳಾಗಿದ್ದು ಕೆಲವು ಬಿಲ್ಲೆಗಳು ಸುಮೇರದ ಶಿಲ್ಪಿಗಳ ಕೃತಿಗಳೆಂತಲೂ ನಿಖರವಾಗಿ ತೀರ್ಮಾನಿಸಬಹುದು. [1] ಅಂದಿದ್ದಾರೆ.

ಆದರೆ ಅವರ ಆ ಹೇಳಿಕೆಗೆ – ಅವರ ಸ್ವಂತ ಕಲ್ಪನೆಯ ಹೊರತು ಬೇರೆ ಯಾವುದೊಂದು ದೃಢವಾದ ಅಥವಾ ವಿಶ್ವಾಸಾರ್ಹವಾದ ಪ್ರಮಾಣದ ಆಧಾರವಿಲ್ಲ. ಮೊದಲನೆಯದಾಗಿ ಆ ಬಿಲ್ಲೆಗಳು ವ್ಯಾಪಾರಿಗಳ ಗುರುತಿನ ಮುದ್ರೆಗಳೆಂಬ ಕಲ್ಪನೆ

---

object in question belonged to the grave or must be associated with later rubbish, introduced at the time of the disturbance, in which case it would be Sargonid date. It was a steatite seal, circular engraved with a figure of a humped bull done in the style of Mohenjo-daro and with an inscription in the characters of the Indus Valley. page 112.

[1] But it is different with a thing so strictly personal as a seal; and when we find, as we do, that from the Sargonid period on quite a number of them occur, sometimes real imports from India, sometimes imitation of Indian seals made by Sumerian craftsmen, then the conclusion is certain. By Sargons time, if not before (as the seal from the tomb suggests) trade between Sumer and the Indus Valley had attaimed such proportion that Indian firms at Mohenjo-daro or other towns there found it worthwhile to have their Indian agents in residence in the towns of Eupprates Valley. page. 113.

ಗೆನೇ ಆಧಾರವಿಲ್ಲ. ಹಾಗೆಯೇ ಆ ಬಿಲ್ಲೆಗಳು ಭಾರತವರ್ಷದಿಂದ ಸುಮೇರಕ್ಕೆ ಹೋದವುಗಳೆಂದು ಸಿದ್ಧಪಡಿಸುವ ಪ್ರಮಾಣಗಳೂ ಇಲ್ಲ. ಹಾಗಿರುವಾಗ ಆ ಬಿಲ್ಲೆಗಳು ಸುಮೇರದಿಂದಲೇ ಭಾರತವರ್ಷಕ್ಕೆ ಬಂದಿದ್ದುವೆಂದು ಏಕೆ ಹೇಳಬಾರದು? ಅಂದರೆ ಸುಮೇರದಲ್ಲಿ ನೆಲಸಿದ್ದ ಜನರು ಆ ಬಿಲ್ಲೆಗಳನ್ನು ತಮ್ಮ ಧಾರ್ಮಿಕ ಕರ್ಮಗಳಲ್ಲಿ ಉಪಯೋಗಿಸುತ್ತಿದ್ದರೆಂದು ಮತ್ತು ಅವರು ಸುಮೇರದಿಂದ ಮುಂದು ವರಿದು ಬಂದು ಭಾರತವರ್ಷದಲ್ಲಿ ನೆಲಸಿದ್ದುದರಿಂದಲೇ ಆ ಬಿಲ್ಲೆಗಳು ಸಿಂಧೂ ಕಣಿವೆಯ ಪಟ್ಟಣಗಳಲ್ಲಿ ದೊರಕಲು ಕಾರಣವೆಂದು ಏಕೆ ಹೇಳಬಾರದು? ಅರ್ಥಾತ್ ಪ್ರೊ: ಮೂಲಿ ಅವರ ಎಲ್ಲ ಕಲ್ಪನೆಗಳು ಸುಮೇರೀ ಮತ್ತು ಸಿಂಧೂ ಸಂಸ್ಕೃತಿಯು ಒಂದೇ ಅಲ್ಲ ಎಂಬ ಪೂರ್ವಗೃಹೀತ ನಿರ್ಣಯದ ಹಿನ್ನೆಲೆಯಿಂದ ಮುಂದೆ ಬಂದವುಗಳೆಂದು ಹೇಳಬೇಕಾಗಿದೆ.

ಪ್ರೊ: ಮೂಲೀ ಅವರಂತೆಯೇ ಸುಮೇರೀ ಸಂಸ್ಕೃತಿಯು ಆರ್ಯ ಜನರದ್ದಲ್ಲವೆಂದು ವಾದಿಸುವವರಲ್ಲೊಬ್ಬರಾಗಿರುವ ಅಮೇರಿಕದ ವಿಲ್‌ಡುರ್ಯಾಂಟ್ ಎಂಬ ವಿದ್ವಾಂಸರು ತಾನು ಬರೆದ "ಸಂಸ್ಕೃತಿಯ ಕಥೆ" ಎಂಬ ಮಹದ್ ಗ್ರಂಥದ ಮೊದಲನೆಯ ಭಾಗವಾದ ನಮ್ಮ ಪೌರಸ್ತ್ಯದಾಯ ಭಾಗ (=Our Oriental Heritage) ದಲ್ಲಿ ಆರ್ಯ ಜನರು ಅಲ್ಲಿಯ ಸಂಸ್ಕೃತಿಯನ್ನು ಸ್ಥಾಪಿಸಿರಲಿಲ್ಲವೆಂತಲೂ, ಅವರು ಬೆಬಿಲೋನಿಯದಿಂದ ಮತ್ತು ಈಜಿಪ್ತದಿಂದ ಸಂಸ್ಕೃತಿಯನ್ನು ಪಡೆದವರೆಂತಲೂ, ಯವನರು ಸಂಸ್ಕೃತಿಯನ್ನು ಪ್ರಾರಂಭಿಸಿದವರಾಗಿರದೇ ಅನ್ಯರಿಂದ ದಾಯವಾಗಿ ಪಡದವರೆಂತಲೂ ಹೇಳಿದ್ದಾರೆ.[1] ಅವರ ಆ ಹೇಳಿಕೆಯನ್ನು ನಾವು ನಮ್ಮ ದೃಷ್ಟಿ ಕೋನದಿಂದ ವಿಮರ್ಶಿಸಿದರೆ, ಅದರಿಂದ ನಿಷ್ಪನ್ನವಾಗುವ ಸಿದ್ಧಾಂತವು–ಬೆಬಿಲೋನಿಯಾದ, ಈಜಿಪ್ತದ ಮತ್ತು ಆರ್ಯ ಜನರ ಸಂಸ್ಕೃತಿಯಲ್ಲಿ ಕೆಲವು ಸಾಮ್ಯಗಳಿವೆಯೆಂತಲೂ ಅಂಥ ಸಾಮ್ಯಗಳೇ ವಿಲ್ ಡುರ್ಯಾಂಟ್ ಅವರ ಹೇಳಿಕೆಗೆ ಆಧಾರವೆಂತಲೂ- ಆಗುವುದು. ಹಾಗಿರುವಾಗ ನಾವು ಕೂಡ ಅದೇ ಸಾಮ್ಯಗಳ ಆಧಾರದಿಂದ ಈಜಿಪ್ತದ ಜನರು ಮತ್ತು ಬೆಬಿಲೋನಿಯಾದ ಜನರು ಆರ್ಯ ಜನರಿಂದಲೇ ಸಂಸ್ಕೃತಿಯನ್ನು ಪಡೆದಿದ್ದರೆಂದು ಹೇಳಿದರೆ ತಪ್ಪಾಗದು.

ವಿಚಿತ್ರವೆಂದರೆ- ಕೆಲವೇ ವರ್ಷಗಳ ಹಿಂದಿನ ತನಕ "ಗ್ರೀಕರು ತಮ್ಮ ಪಾಶ್ಚಾತ್ಯ ಸಂಸ್ಕೃತಿಯ ಜನಕರು" ಎಂಬುದಾಗಿ ಬಹಳ ಹೆಮ್ಮೆಯಿಂದ ಹೇಳಿಕೊಳ್ಳುತ್ತಿದ್ದ ಪಾಶ್ಚಾತ್ಯ ವಿದ್ವಾಂಸರು ಇತ್ತೀಚಿನ ಕೆಲವು ವರ್ಷಗಳಿಂದ ಅದನ್ನು ಅಲ್ಲಗಳೆಯತೊಡಗಿದ್ದಾರೆ. ಮತ್ತು ತಮ್ಮ ಸಂಸ್ಕೃತಿಯ ಮೂಲಕ್ಕಾಗಿ ಒಂದು ಹೊಸ

---

[1] The "Aryans" did not establish civilization, they took it from Babilonia and Egypt. Greece did not begin civilization, it inherited far more civilization than it began, page 116.

ವರ್ಗದ ಜನಾಂಗವನ್ನು ಕಲ್ಪಿಸತೊಡಗಿದ್ದಾರೆ. ಮತ್ತು ಮೊದಲು ಸುಮೇರಿಯಾ ದಿಂದ ಮುಂದುವರಿದು ಭಾರತ ವರ್ಷವನ್ನು ಪ್ರವೇಶಿಸಿ ಸಿಂಧೂ ಸಂಸ್ಕೃತಿಯನ್ನು ಸ್ಥಾಪಿಸಿದ ಸುಮೇರೀ ಜನರೇ ದ್ರಾವಿಡರು, ಮತ್ತು ಬಲೂಚೀಸ್ಥಾನದ ಗುಡ್ಡ ಗಾಡುಗಳಲ್ಲಿ ನೆಲಸಿರುವ ಬ್ರಾಹುಈ ಜನರು ಅವರ ವಂಶಜರೆಂದು ವಾದಿಸುತಿದ್ದ ಪಾಶ್ಚಾತ್ಯ ವಿದ್ವಾಂಸರು ಈಗ "ಬಹಳ ಅನ್ವೇಷಣದ ತರುವಾಯವೂ ನಾವು ಸುಮೇರೀ ಜನರು ಯಾವ ವರ್ಗದವರೆಂದಾಗಲೀ, ಅವರು ಯಾವ ಹಾದಿಯಿಂದ ಸುಮೇರಿಯಾವನ್ನು ಪ್ರವೇಶಿಸಿದ್ದರೆಂದಾಗಲೀ ಹೇಳಲಾರದಾಗಿದ್ದೇವೆ," [1] ಅನ್ನ ತೊಡಗಿದ್ದಾರೆ. ಅದಕ್ಕಿಂತ ವಿಚಿತ್ರವೆಂದರೆ—ಹಾಗೆ ಕುಲಗೋತ್ರಗಳು ತಿಳಿದು ಬಂದಿಲ್ಲದ ಆ ಸುಮೇರೀ ಜನರೇ ಯೂರೋಪಿನ ಹಾಗೂ ಅಮೇರಿಕದ ಸಂಸ್ಕೃತಿಯ ಸ್ಥಾಪಕರೆಂದು ಆ ವಿಲ್‌ಡುರ್ರ್ಯಾಂಟ್ ಎಂಬ ಅಮೇರಿಕದ ವಿದ್ವಾಂಸರು ಹೇಳುವುದಾಗಿದೆ. [2]

ಅದೇ ರೀತಿಯಲ್ಲಿ ಸಿಂಧೂ ಸಂಸ್ಕೃತಿಯನ್ನು ಆರ್ಯ ಪೂರ್ವ ಸಂಸ್ಕೃತಿ ಯೆಂತಲೂ ಅದು ದ್ರಾವಿಡ ಸಂಸ್ಕೃತಿಯೆಂತಲೂ—ಮೇಲಿಂದ ಮೇಲೆ ವಾದಿಸುತಿದ್ದ ಸರ್‌ಜಾನ್ ಮಾರ್ಶಲರು ಮೊಹೆಂಜೋದಳೋದ ಅಗೆತಗಳ ಸಂಬಂಧದಲ್ಲಿ ವರ್ತಮಾನ ಪತ್ರಿಕೆಗಳಲ್ಲಿ ಪ್ರಕಟಿಸಲು ಕೊಟ್ಟಿದ್ದ ಲಿಖಿತ ಹೇಳಿಕೆಯಲ್ಲಿ ಸಿಂಧೂ ಸಂಸ್ಕೃತಿಯ ಪೂರ್ಣ ಶ್ರೇಯಸ್ಸನ್ನು ದ್ರಾವಿಡ ಜನರಿಗೆ ಕೊಡಲು ಇಷ್ಟಪಟ್ಟಿಲ್ಲ ವೆಂಬುದು ಮುಂದೆ ಕೊಡಲಾಗುವ ಮಾತುಗಳಿಂದ ಗೊತ್ತಾಗುತ್ತದೆ—"ಲೇಖಕನ ಅಭಿಪ್ರಾಯದಲ್ಲಿ ಹೆಚ್ಚು ವಿವೇಕಯುತವಾದ ಊಹೆಯೆಂದರೆ ಯಾವುದಾದರೂ ಒಂದೇ ದೇಶವು ಈ ಸಂಸ್ಕೃತಿಯ ಮೂಲನೆಲೆಯಾಗಿದ್ದಿತೆಂದು ಗಣಿಸಲಾಗದೆಂದು ಮತ್ತು ಪ್ರತಿಯೊಂದು ಹಾಗೂ ಎಲ್ಲ ದೇಶಗಳು ಅಥವಾ ಜನರು ತಮ್ಮ ತಮ್ಮ ಶಕ್ತಿಗನುಸಾರವಾಗಿ ಈ ಸಾರ್ವಜನೀನ ಸಂಸ್ಕೃತಿ ಮೂಲಕ್ಕೆ ತಮ್ಮ ತಮ್ಮ ಪಾಲನ್ನು ಸಲ್ಲಿಸಿದ್ದಾರೆಂಬುದಾಗಿದೆ. [3]

ಅಷ್ಟೇ ಅಲ್ಲ ಸರ್ ಜಾನ್‌ಮಾರ್ಶಲರು ಮೊಹೆಂಜೋದಳೋದ ಅಗೆತ

---

[1] Despite much research we cannot tell of what race the Sumerians were, nor by what route they entered Sumeria p. 118

[2] In studying and honouring the Near East we shall be acknowledging a debt long due to the real founders of European and American civilization. p. 116

[3] A more reasonable supposition, in the opinion of the writer is that no one country can be regarded as the home of this civilization but that each and all contributed in varying degrees to the common stock of culture. The Forward June 1928

ಗಳಲ್ಲಿ ಅಗ್ನಿಯ ಆರಾಧನೆಯ ಕುರುಹುಗಳಾದ ಯಜ್ಞಚಿತಿಗಳು ಬೆಳಕಿಗೆ ಬಂದಿದ್ದರೂ ಸಿಂಧೂ ಕಣಿವೆಯ ಅಗೆತಗಳಲ್ಲಿ ಆರ್ಯಜನರ ಮುಖ್ಯ ಕುರುಹಾದ ಗಾರ್ಹಪತ್ಯ ಚಿತಿಯು ಕಂಡು ಬಂದಿಲ್ಲವೆಂದು ವ್ಯತ್ಯಸ್ತವಾಗಿ ನುಡಿದುದು ಅವರ ಸತ್ಯವಾದಿತ್ವ ದಲ್ಲಿ ಸಂದೇಹ ಹುಟ್ಟಿಸುತ್ತದೆ. ಮೊಹೆಂಜೋದಡೋದಲ್ಲಿ ಯಜ್ಞಚಿತಿಗಳು ಕಂಡು ಬಂದಿದ್ದುವೆಂಬುದರ ಲಿಖಿತ ಪ್ರಮಾಣಗಳು ಮುಂದೆ "ಸಿಂಧೂ ಸಂಸ್ಕೃತಿಯ ವಾಸ್ತವಿಕ ಇತಿಹಾಸ" ಎಂಬ ಅಧ್ಯಾಯದಲ್ಲಿ ಬರುವುವು. ಸಾರಾಂಶವೇನೆಂದರೆ– ಪಾಶ್ಚಾತ್ಯ ವಿದ್ವಾಂಸರ ಅನ್ವೇಷಣಗಳ ಹಾಗೂ ಅವುಗಳ ಕುರಿತು ಲೇಖನಗಳ ಮೂಲಕ ಸಾಗಿಸಿದ ಪ್ರಚಾರದ ಉದ್ದೇಶವು ಸಿಂಧೂ ಅಥವಾ ಸುಮೇರೀ ಸಂಸ್ಕೃತಿಯು ಆರ್ಯ ಜನರಿಗೆ ಸೇರಿದುದಲ್ಲವೆಂದು ಸಾಧಿಸುವುದು. ಹಾಗಾಗ ದಿದ್ದರೆ ಆ ಸಂಸ್ಕೃತಿಯು ಯಾವ ಜನಾಂಗಕ್ಕೆ ಸೇರಿದುದೆಂದು ನಿರ್ಧರಿಸಲು ದುಃಸಾಧ್ಯವಾಗುವಂತೆ ಗಲಿಬಿಲಿಯನ್ನೂ, ಗೊಂದಲವನ್ನೂ ನಿರ್ಮಿಸುವುದಾಗಿದ್ದಿ ತೆಂದು ಅವರು ತಮ್ಮ ಲೇಖನಗಳ ಮೂಲಕ ವ್ಯಕ್ತಗೊಳಿಸಿದ ಅಭಿಪ್ರಾಯಗಳಿಂದ ಅಥವಾ ಮುಂದೆ ತಂದ ಪ್ರಮಾಣ ರಹಿತ ಕಲ್ಪನೆಗಳಿಂದ ಸ್ಪಷ್ಟವಾಗಿ ಸಿದ್ಧವಾಗುತ್ತದೆ.

ಹೇಗಿದ್ದರೂ ಸುಮೇರಿಯಾದಲ್ಲಿ ದೊರೆತ ಸಿಂಧೂ ಮಾದರಿಯ ಮೂವತ್ತಾರು ಬಿಲ್ಲೆಗಳು ವ್ಯಾಪಾರಿಗಳ ಗುರುತಿನ ಮುದ್ರೆಗಳ ರೂಪದಿಂದ ಅಲ್ಲಿಗೆ ತಲುಪಿದ್ದುವೆಂಬ ಕಲ್ಪನೆಗೆ ಯಾವುದೊಂದು ಪ್ರಮಾಣವೂ ಇಲ್ಲದಿರುವುದರಿಂದಲೂ, ಅಲ್ಲಿನ ಪ್ರಾಚೀನ ಪಟ್ಟಣಗಳ ಅವಶೇಷಗಳಲ್ಲಿ ಆರ್ಯಜನರ ಕುರುಹುಗಳಾದ ಸ್ವಸ್ತಿಕಗಳು ದೊರಕಿರುವುದರಿಂದಲೂ, ಚಿತ್ರಸಂಕೇತಗಳಿರುವ ಆ ಬಿಲ್ಲೆಗಳು, ಆರ್ಯ ಜನರ ಯಜ್ಞಗಳಲ್ಲಿ ದೇವತೆಗಳ ಪ್ರತೀಕಗಳಾಗಿ ಉಪಯೋಗಿಸಲ್ಪಡು ತಿದ್ದುವೆಂಬ ಪ್ರಮಾಣಗಳು ವೈದಿಕ ಸಾಹಿತ್ಯದಲ್ಲಿ ಇರುವುದರಿಂದಲೂ ಆ ಬಿಲ್ಲೆಗಳ ಹಾಗೂ ಸುಮೇರೀ ಜನರ ಸಂಬಂಧದಲ್ಲಿ ಪ್ರೊ: ಲೆನಾರ್ಡ್‌ವೂಲೀ, ಸರ್ ಜಾನ್ ಮಾರ್ಶಲ್, ಸರ್ ಮಾರ್ಟಿಮರ್ ವ್ಹೀಲರ್, ವಿಲ್ ಡುರಾಂಟ್ ಮೊದಲಾದ ವಿದ್ವಾಂಸರು ಯಾವ ಬಗೆಯ ಕಲ್ಪನೆಗಳನ್ನು ಮಂಡಿಸಿದರೂ ಆ ಬಿಲ್ಲೆಗಳು ಆರ್ಯ ಜನರವಲ್ಲವೆಂದಾಗಲೀ, ಸುಮೇರೀ ಜನರು ಆರ್ಯರಲ್ಲವೆಂದಾಗಲೀ ಸಿದ್ಧವಾಗುವುದಿಲ್ಲ,

ವಾಸ್ತವ ವಿಷಯವೆಂದರೆ, ಮೆಸಪೊಟೇಮಿಯಾದಲ್ಲಿ ಮತ್ತು ಬೆಬಿ ಲೋನಿಯಾದಲ್ಲಿ ನಡೆಸಿದ ಅಗೆತಗಳಲ್ಲಿ ದೊರಕಿದ ಸಕಲ ವಸ್ತುಗಳನ್ನು ಮತ್ತು ಕುರುಹುಗಳನ್ನು ಆ ಅಗೆತಗಳನ್ನು ನಡೆಸಿದ ಪಾಶ್ಚಾತ್ಯ ಜನರು ತಮ್ಮ ತಮ್ಮ ದೇಶಗಳಿಗೆ ಸಾಗಿಸಿದ್ದಾರೆ. ಮತ್ತು ಅದರ ತರುವಾಯದಿಂದ ಸುಮೇರಿಯಾದ ಮತ್ತು ಬೆಬಿಲೋನಿಯಾದ ಸಂಬಂಧದಲ್ಲಿ–ತಮ್ಮ ಪೂರ್ವಗೃಹೀತ ನಿರ್ಣಯಕ್ಕನು ಕೂಲವಾಗುವಂಥ ಕಲ್ಪನೆಗಳನ್ನು ಪ್ರಚಾರಮಾಡತೊಡಗಿದ್ದಾರೆ. ಆದರೆ ಯಾವ

ನೊಬ್ಬ ಪೌರಸ್ತ್ಯ ವಿದ್ವಾಂಸನಾದರೂ ಅವರು ಒಯ್ದು ಎಲ್ಲ ವಸ್ತುಗಳನ್ನು ಪ್ರತ್ಯಕ್ಷ ವಾಗಿ ಕಂಡಿಲ್ಲ. ಮತ್ತು ಅವುಗಳನ್ನು ಪ್ರತ್ಯಕ್ಷವಾಗಿ ಕಂಡು ಪಾಶ್ಚಾತ್ಯ ವಿದ್ವಾಂಸರ ಕಲ್ಪನೆಗಳನ್ನು ವಿಮರ್ಶಿಸುವ ಅವಕಾಶವು ಯಾವನೊಬ್ಬ ಪೌರಸ್ತ್ಯ ವಿದ್ವಾಂಸನಿಗೂ ದೊರಕಿಲ್ಲ. ಹಾಗಾಗಿ ಅವರು ಪ್ರಕಟಿಸಿದಷ್ಟು ಸಾಹಿತ್ಯದ ಆಧಾರದಿಂದಲೇ. ಅಥವಾ ಏಕಪಕ್ಷೀಯವಾದ ಅಭಿಪ್ರಾಯಗಳ ಮೇಲಿಂದಲೇ ಭಾರತೀಯರು ತಮ್ಮ ಅಭಿಪ್ರಾಯಗಳನ್ನು ರೂಪಿಸಬೇಕಾಗಿದೆ.

೧. ಈಜಿಪ್ತದ ಸಂಸ್ಕೃತಿ ಮತ್ತು ಇತಿಹಾಸ

ಪಾಶ್ಚಾತ್ಯ ವಿದ್ವಾಂಸರು ತಾವು ಬರೆದ ಇತಿಹಾಸ ಗ್ರಂಥಗಳಲ್ಲಿ ಈಜಿಪ್ತದ ಸಂಸ್ಕೃತಿ ಮತ್ತು ಇತಿಹಾಸಗಳು ಜಗತ್ತಿನ ಇತರ ದೇಶಗಳ ಸಂಸ್ಕೃತಿ ಮತ್ತು ಇತಿಹಾಸಗಳಿಗಿಂತ ಪ್ರಾಚೀನವೆಂದು ಪ್ರತಿಪಾತಿಸಿದ್ದಾರೆ. ಮತ್ತು ಅಲ್ಲಿನ ಸಂಸ್ಕೃತಿಯು ಸೆಮಿಟಿಕ್ ವರ್ಗದ್ದೆಂದು ಸಾಧಿಸಲು ಪ್ರಯತ್ನಿಸಿದ್ದಾರೆ. ಅವರು ಈಜಿಪ್ತದ ನಾಇಲ್ ನದೀಮುಖ ರೊಜೆಟ ಎಂಬಲ್ಲಿ ಫ್ರೆಂಚ್ ಸೇನಾಧಿಕಾರಿಗಳಿಗೆ ದೊರೆತ ಒಂದು ಶಿಲಾಖಂಡವ ಮೇಲೆ ಶಕಪೂರ್ವ ೨೮೧ರಿಂದ ೨೦೫ನೆಯ ವರ್ಷದ ತನಕ ಈಜಿಪ್ತವನ್ನಾಳಿದ ಐದನೆಯ ಪ್ತೊಲೆಮಿ ಎಂಬ ಅರಸನ ಕುರಿತಾದ ಒಂದು ತೀರ್ಮಾನವು ಈಜಿಪ್ತದ ಪ್ರಾಚೀನ ಚಿತ್ರಲಿಪಿಯಿಂದಲೂ, ತಾತ್ಕಾಲಿಕ ಲಿಪಿಯಿಂದಲೂ, ಗ್ರೀಕ್‌ಲಿಪಿಯಿಂದಲೂ ಬರೆಯಲ್ಪಟ್ಟಿದ್ದುದರಿಂದ ಈಜಿಪ್ತದ ಪ್ರಾಚೀನ ಚಿತ್ರಲಿಪಿಯ ಲೇಖಗಳನ್ನು ಸೆಮಿಟಿಕ್ ಭಾಷೆಯಿಂದ ಓದಲು ಸಾಧ್ಯವಾಯಿತೆಂಬುವನ್ನು ತಮ್ಮ ಪ್ರತಿಪಾದನೆಗೆ ಆಧಾರವನ್ನಾಗಿ ಉದಹರಿಸಿದ್ದಾರೆ.

ಆದರೆ ಅವರ ಆ ಓದು ಈಜಿಪ್ತದ ಪ್ರಾಚೀನ ಸಂಸ್ಕೃತಿಯು ಸೆಮಿಟಿಕ್ ವರ್ಗಕ್ಕೆ ಸೇರಿದುದೆಂಬ ಪೂರ್ವಗ್ರಹೀತ ಕಲ್ಪನೆಯಿಂದ ಕೂಡಿದ್ದುದರಿಂದ ಅದು ಸಂಪೂರ್ಣ ಕಾಲ್ಪನಿಕವಾಗಿದ್ದಿತೆಂದು ತರುವಾಯದ ಅನ್ವೇಷಣಗಳಿಂದ ಮತ್ತು ತುಲನಾತ್ಮಕ ಭಾಷಾ ವಿಜ್ಞಾನವಲ್ಲಾದ ಪ್ರಗತಿಯಿಂದ ಸಿದ್ಧವಾಗಿದೆ. ಅಂದರೆ ಈಜಿಪ್ತದ ಪ್ರಾಚೀನ ಲೇಖಗಳು ಸೆಮಿಟಿಕ್ ಭಾಷೆಯಲ್ಲಿವೆಯೆಂಬುದು ಸರಿಯಲ್ಲವೆಂದು ಗೊತ್ತಾಗಿದೆ. ಆದುದರಿಂದ ಪಾಶ್ಚಾತ್ಯ ವಿದ್ವಾಂಸರು ಈಜಿಪ್ತದ ಪ್ರಾಚೀನ ಸಂಸ್ಕೃತಿಯ, ಇತಿಹಾಸದ ಮತ್ತು ಭಾಷೆಯ ಸಂಬಂಧದಲ್ಲಿ ಮಾಡಿದ ತೀರ್ಮಾನವನ್ನು ಕೊನೆಯ ಮಾತೆಂದು ಸ್ವೀಕರಿಸಲು ಸಾಧ್ಯವಿಲ್ಲವಾಗಿದೆ.

ಏಕೆಂದರೆ ಈಜಿಪ್ತದ ಇತಿಹಾಸದ ಮತ್ತು ಸಂಸ್ಕೃತಿಯ ಸಂಬಂಧದಲ್ಲಿ ಬ್ರಿಟಾನಿಕಾ ವಿಶ್ವಕೋಶದಲ್ಲಿ —**"ಈಜಿಪ್ತದ ಅವ್ಯಾಹತವಾದ ಇತಿಹಾಸವು ಸಾಧಾರಣ ಶಕಪೂರ್ವ ೫೦೦೦ ವರ್ಷಗಳ ಹಿಂದಕ್ಕೆ ತಲಪುತ್ತದೆ. ಮತ್ತು ನಾವು ತಿಳಿದ ಮಟ್ಟಿಗೆ ಅದರ ಪ್ರಾಗೈತಿಹಾಸಿಕ ಸಂಸ್ಕೃತಿಯ ಕಾಲವು ಇನ್ನೂ ಎರಡು ಸಾವಿರ ವರ್ಷಗಳನ್ನು ಆವರಿಸುತ್ತದೆ. ಆದುದರಿಂದ ಈಜಿಪ್ತದ ಕುರಿತಾದ ನಮ್ಮ ಜ್ಞಾನವು ನಿರಂತರವಾಗಿ ಶಕಪೂರ್ವ ಏಳು ಸಾವಿರ ವರ್ಷಗಳ ಹಿಂದಕ್ಕೆ ತಲಪುತ್ತದೆನ್ನಬಹುದು.** [1] ಎಂದು ಹೇಳಿದೆಯಾದರೆ ಅಮೇರಿಕದ "ಜಾಗತಿಕ ಪುಸ್ತಕ

---

[1] The continuous history of Egypt extends to about 5000

ವಿಶ್ವಕೋಶವು–"**ಈಜಿಪ್ತವು ಆದರ ಇತಿಹಾಸವನ್ನು ಬರೆಯುವುದಕ್ಕಿಂತ ಬಹಳ ಪ್ರಾಚೀನ ಕಾಲದಿಂದ ಇತ್ತು. ಆದರ ಲಿಖಿತ ಇತಿಹಾಸವು ಶಕಪೂರ್ವ ೩೨೦೦ ವರ್ಷಗಳ ಹಿಂದಕ್ಕೆ ತಲುಪುತ್ತದೆ. ಆದುದರಿಂದ ಅದು ಜಗತ್ತಿನ ಇತರ ಆಧುನಿಕ ದೇಶಗಳ ಇತಿಹಾಸಕ್ಕಿಂತ ಪ್ರಾಚೀನವಾಗಿದೆ. ಈಜಿಪ್ತದ ಚಿತ್ರಲಿಪಿಯು ಶಕ ಪೂರ್ವ ೩೧೦೦ ವರ್ಷಗಳ ಸುಮಾರಿಗೆ ಪ್ರಚಲಿತವಾಗಿದ್ದಿತೆನ್ನಬಹುದು. ಈಜಿಪ್ತದ ಜನರು ಬರೆಯಲು ತೊಡಗಿದಂತೆಯೇ ಅವರು ತಮ್ಮ ವಿಚಾರಗಳನ್ನು ತಿಳಿಸಲು ಸರಳವಾದ ಚಿತ್ರಗಳನ್ನು ಉಪಯೋಗಿಸುತಿದ್ದರು.**" [1] ಅನ್ನುತ್ತದೆ, ಅಂದರೆ ಅಮೇರಿಕದ ವಿಶ್ವಕೋಶವು ಬ್ರಿಟಾನಿಕಾ ವಿಶ್ವಕೋಶದಲ್ಲಿ ಈಜಿಪ್ತದ ಇತಿಹಾಸದ ಪ್ರಾಚೀನತೆಗಾಗಿ ನಿರ್ಧರಿಸಿದ ಕಾಲಮಾನದಿಂದ ಒಂದೇ ನೆಗೆತಕ್ಕೆ ಎರಡು ಸಾವಿರ ವರ್ಷಗಳನ್ನು ಕಡಿಮೆ ಮಾಡುತ್ತದೆ.

ಅದೇ ರೀತಿಯಲ್ಲಿ-ಬ್ರಿಟಿಷ್ ಮತ್ತು ಫ್ರೆಂಚ್ ವಿದ್ವಾಂಸರು ಈಜಿಪ್ತದ ಚಿತ್ರಲಿಪಿಯ ಲೇಖಗಳ ಭಾಷೆಯು ಸೆಮಿಟಿಕ್ ವರ್ಗಕ್ಕೆ ಸೇರಿದುದೆಂದು ಹೇಳಿದ್ದಾರಾದರೂ, ಪ್ರೊ. ಫ್ರೆಡ್ರಿಕ್ ಮೆಕ್ಸ್‌ಮುಲ್ಲರ್ ಅವರು ತನ್ನ "ಭಾಷಾ ಶಾಸ್ತ್ರದ ಮೇಲಿನ ಉಪನ್ಯಾಸಗಳು ಎಂಬ ಪುಸ್ತಕದಲ್ಲಿ "**ಈಜಿಪ್ತದ ಚಿತ್ರಲಿಪಿಯ ಲೇಖಗಳ ಭಾಷೆಯು ವ್ಯಾಕರಣದ ದೃಷ್ಟಿಯಿಂದ ಸೆಮಿಟಿಕ್ ಭಾಷೆಯಂತೆ ತೋರಿದರೂ ಅದು ಕೆಲವು ವಿಷಯಗಳಲ್ಲಿ ಆರ್ಯ ಭಾಷೆಯೊಂದಿಗೆ ಸಾಮ್ಯವನ್ನು ಹೊಂದಿದೆ, ಅಂಥ ಸಾಮ್ಯದ ಮೇಲಿಂದ ಕೆಲವರು ಆ ಭಾಷೆಯು ಆರ್ಯ ಮತ್ತು ಸೆಮಿಟಿಕ್ ಎಂದು ಬೇರ್ಪಡುವ ಮೊದಲಿನ ಸ್ಥಿತಿಯಲ್ಲಿದೆಯೆಂಬ ಅಭಿಪ್ರಾಯವನ್ನು ತಳೆದಿದ್ದಾರೆ.**" [2] ಎಂದಿದ್ದಾರೆ. ಅವರ ಆ ಹೇಳಿಕೆಯು ಈಜಿಪ್ತದಲ್ಲಿ ಚಿತ್ರ

B. C. and prehistoric age of continuous culture known to us covers probably 2000 years more hence our continuous knowledge extends back to about 7000 B. C.

[1] Ancient Egypt existed long before its history was written down. The recorded history of Egypt which dates back to about 3100 B. C., is older than that of any other modern country. Heiroglyphic writing in Egypt probably began about 3000 B C. As Egyptions began to write they used simple pictures to convey their ideas. ''World Book Encyctopedia''

[2] ಪ್ರೊ. ಮೆಕ್ಸ್‌ಮುಲ್ಲರರ 'Lectures on the Science of Language'' ಎಂಬ ಪುಸ್ತಕದ ತಿದ್ದಿದ ಕೊನೆಯ ಆವೃತ್ತಿಯ ಹಿಂದೀ ಭಾಷಾಂತರ "ಭಾಷಾ ವಿಜ್ಞಾನ" ಪುಟ ೨೪೦.

ಲಿಪಿಯು ಪ್ರಚಲಿತವಾಗುವ ಮೊದಲಿನಿಂದಲೂ ಅಲ್ಲಿ ಆರ್ಯ ಜನರು ನೆಲಸಿದ್ದರೆಂಬುದನ್ನು ಸ್ಪಷ್ಟವಾಗಿ ಸಿದ್ಧಪಡಿಸುತ್ತದೆ.

ಅಷ್ಟೇ ಅಲ್ಲ; ಸ್ಕಾಟ್‌ಲಂಡದ ಲಾರ್ಡ್‌ಮೊನಬೊಡೊ ಅವರು ತನ್ನ ಒಂದು ಪುಸ್ತಕದಲ್ಲಿ “ಈಜಿಪ್ತದ ಪ್ರಾಚೀನ ಭಾಷೆಯು ಸಂಸ್ಕೃತವಾಗಿದ್ದಿತೆಂದೂ, ಸಂಸ್ಕೃತದಿಂದಲೇ ಗ್ರೀಕ್ ಭಾಷೆಯು ಹುಟ್ಟಿದ್ದಿತೆಂತಲೂ, ಈಜಿಪ್ತದ ಜನರಿಂದಲೇ ಸಂಸ್ಕೃತ ಮತ್ತು ಇತರ ಕಲೆಗಳು ಭಾರತ ವರ್ಷಕ್ಕೆ ಒಯ್ಯಲ್ಪಟ್ಟಿದ್ದುವೆಂತಲೂ, ತಾನದನ್ನು ದೃಢವಾದ ಪ್ರಮಾಣಗಳಿಂದ ಸಿದ್ಧಪಡಿಸಬಲ್ಲೆನೆಂತಲೂ ಅಂದಿದ್ದಾರೆ.” ಎಂಬುದಾಗಿ ಪ್ರೊ. ಫ್ರೆಡ್ರಿಕ್ ಮೆಕ್ಸ್‌ಮುಲ್ಲರರು ತನ್ನ “ಭಾಷಾ ಶಾಸ್ತ್ರದ ಮೇಲಿನ ಉಪನ್ಯಾಸಗಳು” ಎಂಬ ಪುಸ್ತಕದಲ್ಲಿ ತಿಳಿಸಿದ್ದಾರೆ.[1] ಅದರ ಮೇಲಿಂದ ಶಕಪೂರ್ವ ೩೨೦೦ ವರ್ಷಗಳಿಗಿಂತ ಹಿಂದಿನಿಂದಲೇ ಆರ್ಯ ಜನರು ಈಜಿಪ್ತದಲ್ಲಿ ನೆಲಸಿದ್ದರೆಂಬುದು ದೃಢಪಡುತ್ತದೆ,

ಅದೇ ರೀತಿಯಲ್ಲಿ ಈಜಿಪ್ತದಲ್ಲಿ ದೊರಕಿದ ಅತ್ಯಂತ ಪ್ರಾಚೀನ ಮಾದರಿಯು

---

[1] Lord Monboddo had just finished his great work (Of the Origin and Progress of Language) in which he derives all mankind from a couple of apes and all dialects of the world from a language originally formed by some Egyption gods, when the discovery of Sanskrit came on him like a thunderbolt. It must be said, however, to his credit, that he at once perceived the immence importance of the discovery. He could not be expected to sacrifies his primeaval monkeys or his Egyption idols; but, with that reservation, the conclusions he drew from the new evidence placed before him by his friend wilkins, the author of one of our first Sanskrit grammars, are highly creditable to the acuteness of the Scotch judge. "There is a language" he writes still existing and preserved among the Brahmins of India, which is a richer and in every respect a finer language than even the Greek of Homer. All the other languages of India have resemblance to this language, which is called Sanskrit. But those languages are dialects of it and formed from it, not the Sanskrit from them. Of this and other particulars concerning this language, I have got such certain information from India, that if I live to finish my history of man which I have begun in my third volume of "Ancient Metaphysics" I shall be able to clearly to prove that the Greek

ಗಡಿಗೆಗಳ ಮೇಲೆ ಸ್ವಸ್ತಿಕದ ಚಿಹ್ನೆಗಳಿದ್ದ ಪ್ರಮಾಣವೂ, ನಾಇಲ್ ನದೀ ತೀರದ ಕರ್ನಾಕ್ ಎಂಬ ಹಳ್ಳಿಯಲ್ಲಿನ ಒಂದು ಅತ್ಯಂತ ಪ್ರಾಚೀನ ದೇವಾಲಯದ ಭಗ್ನಾವಶೇಷಗಳಲ್ಲಿ ಕಂಡು ಬಂದ ಹಲವು ಚಿಹ್ನೆಗಳಲ್ಲಿ ಸ್ವಸ್ತಿಕ ಕೂಡ ಇದ್ದಿತೆಂಬ ಪ್ರಮಾಣವೂ ಬಹಳ ಪ್ರಾಚೀನ ಕಾಲದಿಂದಲೂ ಆರ್ಯಜನರು ಈಜಿಪ್ತದಲ್ಲಿ ನೆಲಸಿದ್ದರೆಂಬುದನ್ನು ಸಂದೇಹಕ್ಕೆಡೆಯಿಲ್ಲದಂತೆ ಸಿದ್ಧಪಡಿಸುತ್ತದೆ.

ಬ್ರಿಟಾನಿಕಾ ವಿಶ್ವಕೋಶದಲ್ಲಿ ಈಜಿಪ್ತದ ಪ್ರಾಚೀನ ಜನರ ಭಾಷೆಯು ಸೆಮಿಟಿಕ್ ರೂಪದ್ದಾಗಿದ್ದಿತೆಂತಲೂ ಅವರ ಸಂಸ್ಕೃತಿಯು ಬಹುಮಟ್ಟಿಗೆ ಬೆಬಿಲೋನೀ ಸಂಸ್ಕೃತಿಯನ್ನು ಹೋಲುತಿದ್ದಿತೆಂತಲೂ ಅವರ ಧರ್ಮವು ಕೆಳಮಟ್ಟದ ಆಫ್ರಿಕದ ಹಾಗೂ ಮೇಲ್ಮಟ್ಟದ ಆಸ್ಯದ ವಿಚಾರಗಳ ಸಂಮಿಶ್ರಣವಾಗಿದ್ದಿತೆಂತಲೂ ಹೇಳಿದೆ.[1] ಹಾಗೆಯೇ ಈಜಿಪ್ತದಲ್ಲಿ ಆಫ್ರಿಕದ ಜನರೊಂದಿಗೆ ಯೂರೋಪದ ಮತ್ತು ಆಸ್ಯದ ಜನರು ಕೂಡ ನೆಲಸಿದ್ದರೆಂದು ಹೇಳಿದೆ. ಆದರೆ ಆಸ್ಯದ ಜನರು ಯಾರು? ಎಲ್ಲಿಯವರು? ಎಂಬುದನ್ನು ಮಾತ್ರ ವಿವರಿಸಿಲ್ಲ. ಹೇಗಿದ್ದರೂ ಪ್ರಾಚೀನ ಈಜಿಪ್ತದಲ್ಲಿ ಅನ್ಯ ವರ್ಗದ ಜನರೊಂದಿಗೆ ಸೆಮಿಟಿಕ್ ವರ್ಗದ ಜನರು ಕೂಡ ಒಂದು ಸಣ್ಣ ಸಂಖ್ಯೆಯಲ್ಲಿ ನೆಲಸಿದ್ದರೆಂದು ಒಪ್ಪಬಹುದಾದರೂ—ಈಜಿಪ್ತದ ಜನರ ಧರ್ಮವು ಬೆಬಿಲೋನೀ ಜನರ ಅಂದರೆ ಸೆಮಿಟಿಕ್ ಜನರ ಧರ್ಮದಿಂದ ಪ್ರಭಾವಿತವಾಗಿದ್ದಿತೆಂದು ಒಪ್ಪಲು ಸಾಧ್ಯವಿಲ್ಲ. ಏಕೆಂದರೆ ಈಗ ಉಪಲಬ್ಧವಿರುವ ಪ್ರಮಾಣಗಳ ಆಧಾರದಿಂದ ಪ್ರಾಚೀನ ಈಜಿಪ್ತದ ಜನರಲ್ಲಿ ರೂಢವಾಗಿದ್ದ ಧಾರ್ಮಿಕ ವಿಶ್ವಾಸಗಳು ಮತ್ತು ಪ್ರಚಲಿತವಿದ್ದ ಕಟ್ಟಳೆಗಳು, ಮತ್ತು ಸಂಸ್ಕೃತಿಯು ಆರ್ಯ ಜನರ ವೈದಿಕ ಸಂಸ್ಕೃತಿ ಮತ್ತು ಧರ್ಮದಂತೆಯೇ ಇದ್ದುವೆಂದು ಸಂದೇಹಪಡದೇ ಹೇಳಬಹುದಾಗಿದೆ. ಅಂದರೆ ಈಜಿಪ್ತದ ಪ್ರಾಚೀನ ಜನರ ಧಾರ್ಮಿಕ ವಿಶ್ವಾಸಗಳು ಮತ್ತು ಕಟ್ಟಳೆಗಳು ಸೆಮಿಟಿಕ್ ಜನರ ಧರ್ಮ ಮತ್ತು ಕಟ್ಟಳೆಗಳೊಂದಿಗೆ ಯಾವ ಬಗೆಯ ಸಂಬಂಧವನ್ನೂ ಸೂಚಿಸದೇ ಆರ್ಯ ಜನರ ವೈದಿಕ ಧರ್ಮ ಮತ್ತು ಕಟ್ಟಳೆಗಳೊಂದಿಗೆ ಪೂರ್ಣ ಸಂಬಂಧವನ್ನು ಸೂಚಿಸುತಿದ್ದುವು.

---

is derived from Sanskrit which was the ancient language of Egypt and was carried by the Egyptions into India, with their other arts and into Greece by the colonies which they settled.

Lectures on the science of Language. I Vol. p. 184-85. VII Edition.

[1] The early civilization of Egypt shows remarkable coincidences with that of Babylonia, the language is of a semitic type, the religion may well be a compound of a lower African and higher Asiatic order of ideas.

ಉದಾಹರಣೆಗಾಗಿ ಹೇಳುವುದಾದರೆ– ಬ್ರಿಟಾನಿಕಾ ವಿಶ್ವಕೋಶದಲ್ಲಿ ಈಜಿಪ್ತದ ಪ್ರಾಚೀನ ಜನರು ಸೂರ್ಯನನ್ನು, ಚಂದ್ರನನ್ನು ಮತ್ತು ನಕ್ಷತ್ರಗಳನ್ನು ದೇವರೆಂದು ನಂಬುತಿದ್ದರೆಂತಲೂ, ಸತ್ತ ಮನುಷ್ಯನು ಸ್ವರ್ಗವನ್ನು ಸೇರಿ ಅಲ್ಲಿ ನಕ್ಷತ್ರರೂಪದಿಂದ ಜೀವಿಸುತ್ತಾನೆಂಬ ಕಾರಣದಿಂದ ಅವನ ಸಂತತಿಯವರು ಅವನ ತೃಪ್ತಿಗಾಗಿ ಕಾಲಕಾಲಕ್ಕೆ ಶ್ರಾದ್ಧಗಳನ್ನು ಜರುಗಿಸುತಿದ್ದರೆಂತಲೂ ಹೇಳಿದೆ. [1]

ಸೂರ್ಯನನ್ನು, ಚಂದ್ರನನ್ನು ಮತ್ತು ನಕ್ಷತ್ರಗಳನ್ನು ದೇವರೆಂದು ಆರಾಧಿಸುವ ಜನರು ಅಗ್ನಿಯನ್ನೂ ದೇವರೆಂದು ಆರಾಧಿಸುತ್ತಾರೆಂದು ಹೇಳಬಹುದು. ಅಂದರೆ ಈಜಿಪ್ತದ ಪ್ರಾಚೀನ ಜನರು ಅಗ್ನಿಯನ್ನೂ–ದೇವರೆಂದು ಆರಾಧಿಸುತಿದ್ದರೆಂದು ಹೇಳಬಹುದು. ಆದರೆ ಪಾಶ್ಚಾತ್ಯ ವಿದ್ವಾಂಸರು ಈಜಿಪ್ತದ ಜನರ ಕುರಿತು ಬರೆದ ಪುಸ್ತಕಗಳಲ್ಲಿ ಈಜಿಪ್ತದ ಜನರು ಅಗ್ನಿಯನ್ನು ಆರಾಧಿಸುತಿದ್ದರೆಂಬ ಉಲ್ಲೇಖಗಳಿಲ್ಲ. ಆದುದರಿಂದ ಆ ಸಂಬಂಧದಲ್ಲಿ ಸರಿಯಾದ ಅನ್ವೇಷಣವನ್ನು ಮಾಡಬೇಕಾಗಿದೆ. ಏಕೆಂದರೆ ಆರ್ಯಜನರ ವೇದಗಳಲ್ಲಿ ಅಗ್ನಿ, ಚಂದ್ರ ಮತ್ತು ಸೂರ್ಯ ಎಂಬ ದೇವತ್ರಯಿ ಅಥವಾ ತ್ರಿಮೂರ್ತಿಗಳು ಇದ್ದಂತೆಯೇ ಈಜಿಪ್ತದ ಪ್ರಾಚೀನ ಜನರಲ್ಲಿಯೂ ತ್ರಿಮೂರ್ತಿಗಳಿದ್ದರು. ಆದರೆ ಈಜಿಪ್ತದ ತ್ರಿಮೂರ್ತಿಗಳಲ್ಲಿ ಸೂರ್ಯ ಮತ್ತು ಚಂದ್ರರಿದ್ದರೂ ಅಗ್ನಿಯಿಲ್ಲ, ಅಗ್ನಿಗೆ ಪ್ರತಿಯಾಗಿ ಒಂದು ಕೃಷಿ ದೇವತೆ ಇದೆ. ಹೇಗಿದ್ದರೂ ಹಿಂದೆ ವಿವರಿಸಿದ ಈಜಿಪ್ತದ ಜನರ ಧಾರ್ಮಿಕ ವಿಶ್ವಾಸಗಳು ಮತ್ತು ಕಟ್ಟಳೆಗಳು ಆರ್ಯ ಜನರಲ್ಲಿ ಪ್ರಚಲಿತವಿದ್ದವುಗಳೇ ಆಗಿವೆ. ಮತ್ತು ಅವುಗಳ ಉಲ್ಲೇಖವು ಋಗ್ವೇದದಲ್ಲಿಯೂ ಇದೆ. ಅದರ ವಿಸ್ತೃತವಾದ ವಿವರಗಳು ಮುಂದೆ ಆರ್ಯಜನರ ವೈದಿಕ ಸಂಸ್ಕೃತಿ ಎಂಬ ಅಧ್ಯಾಯದಲ್ಲಿ ಬರುವುವು.

ಸಾರಾಂಶವೇನೆಂದರೆ ಈಜಿಪ್ತದ ಪ್ರಾಚೀನ ಜನರಲ್ಲಿ ಸೂರ್ಯನ,

---

[1] Cosmic deities-The chief among these cosmic deities was the sun god Re; The ibis god Thoth was early indentified with moon. The stars and planets were likewise gods.

The soul-he was as dependent on continuous cult on the part of the surviving members of his family as the gods were dependent on the continuous attendence of their priest. That portion of a man's individuality which required even after death food and drink and the satisfaction of sensuous needs was called by Egiptions the ka. According to a widely spread doctrine of great age the deceased Egyptian was translated to the heaven, where he lived on in the form of a star.

ಚಂದ್ರನ ನಕ್ಷತ್ರಗಳ ಮತ್ತು ಪಿತೃಗಳ ಸಂಬಂಧದಲ್ಲಿ ಪ್ರಚಲಿತವಿದ್ದ ವಿಶ್ವಾಸಗಳು ಮತ್ತು ವೈದಿಕ ಆರ್ಯ ಜನರ ವಿಶ್ವಾಸಗಳು ಏಕಪ್ರಕಾರದವುಗಳಾಗಿದ್ದುದರಿಂದಲೂ, ಈಜಿಪ್ತದ ಚಿತ್ರಲಿಪಿಯ ಲೇಖಗಳ ಭಾಷೆಯು ಆರ್ಯ ಭಾಷೆಯೊಂದಿಗೆ ಸಾಮ್ಯವನ್ನು ಸೂಚಿಸುತ್ತಿರುವುದರಿಂದಲೂ ಈಜಿಪ್ತದ ಪ್ರಾಚೀನ ಸಂಸ್ಕೃತಿಯು ಆರ್ಯಜನರ ವೈದಿಕ ಸಂಸ್ಕೃತಿಯಾಗಿದ್ದಿತೆಂಬ ನಿರ್ಣಯಕ್ಕೆ ಬರಬೇಕಾಗುತ್ತದೆ.

೨.

ಭಾರತ ವರ್ಷದೊಳಗೆ ಆರ್ಯಜನರ ಆಗಮನ

ಐತಿಹಾಸಿಕ ಸಂಶೋಧನೆಗಳನ್ನು ಮತ್ತು ಭಾರತೀಯ ಭಾಷೆಗಳ ವೈಜ್ಞಾನಿಕ ರೀತಿಯ ಅಧ್ಯಯನವನ್ನು ಕೈಗೊಂಡ ಪಾಶ್ಚಾತ್ಯ ವಿದ್ವಾಂಸರು, ಭಾರತ ವರ್ಷದಲ್ಲಿ ನೆಲಸಿರುವ ಆರ್ಯವರ್ಗದ ಜನರು ಪಶ್ಚಿಮ ಆಸ್ಯದಿಂದ ಬಂದು ಭಾರತ ವರ್ಷದಲ್ಲಿ ನೆಲಸಿದ್ದರೆಂದು ಹೇಳುವ ಮೊದಲು ಭಾರತೀಯ ವಿದ್ವಾಂಸರು ಆರ್ಯ ಜನರನ್ನು ಭಾರತ ವರ್ಷದ ಮೂಲ ನಿವಾಸಿಗಳೆಂದೇ ಭಾವಿಸಿದ್ದರಲ್ಲದೇ, ಭಾರತೀಯರೆಲ್ಲರೂ ಒಂದೇ ಮೂಲದ ಜನರೆಂತಲೂ ಅವರಾಡುವ ಭಾಷೆಗಳೆಲ್ಲವೂ ಸಂಸ್ಕೃತದಿಂದಲೇ ರೂಪಾಂತರವಾದವುಗಳೆಂತಲೂ ನಂಬಿದ್ದರು. ಆದರೆ ಪಾಶ್ಚಾತ್ಯ ವಿದ್ವಾಂಸರು ಭಾರತೀಯರು ನುಡಿಯುವ ಭಾಷೆಗಳಲ್ಲಿ ಮತ್ತು ಭಾರತವರ್ಷದಲ್ಲಿ ನೆಲಸಿರುವ ಜನರಲ್ಲಿ ಆರ್ಯ, ಮುಂಡ, ಬುರುಷಸ್ಕಿ ಮತ್ತು ದ್ರಾವಿಡ ಎಂಬ ನಾಲ್ಕು ಮುಖ್ಯ ವರ್ಗಗಳಿವೆಯೆಂದು ಭಾಷೆಗಳ ತುಲನೆಯ ಮೇಲಿಂದ ಸಿದ್ಧ ಪಡಿಸಿದರು. ಹಾಗೆಯೇ ಭಾರತೀಯ ಆರ್ಯ ಭಾಷೆಗಳಿಗೆ ಮೂಲವಾಗಿದ್ದ ಸಂಸ್ಕೃತ ಭಾಷೆಗೂ, ಯೂರೋಪಿನಲ್ಲಿ ಬಳಕೆಯಲ್ಲಿರುವ ಯಾವನೀ, ಲತೀನ ಜರ್ಮನ್, ಇಂಗ್ಲಿಷ್ ಮೊದಲಾದ ಹಲವು ಭಾಷೆಗಳಿಗೂ ನಿಕಟವಾದ ಸಂಬಂಧ ವಿದೆಯೆಂತಲೂ, ಅವುಗಳೆಲ್ಲವೂ ಒಂದೇ ಮೂಲ ಭಾಷೆಯ ರೂಪಾಂತರ ಗಳೆಂತಲೂ, ಸಿದ್ಧಪಡಿಸಿದರಲ್ಲದೇ ಆ ಭಾಷೆಗಳ ಮತ್ತು ಭಾಷೆಗಳನ್ನಾಡುವ ಜನರ ವರ್ಗವನ್ನು "Indo European" ಅಂದರೆ "ಭಾರೋಪೀಯ" ಎಂದು ಹೆಸರಿಸಿದರು.

ಆರ್ಯ ಜನರು ಹೊರಗಿನಿಂದ ಬಂದು ಭಾರತವರ್ಷದಲ್ಲಿ ನೆಲಸಿದ್ದ ರೆಂಬುದಕ್ಕೆ ಹಲವು ಭೌಗೋಲಿಕ ಹಾಗೂ ಐತಿಹಾಸಿಕ ಪ್ರಮಾಣಗಳಿವೆ. ಭಾರತ ವರ್ಷದೊಳಗಿನ ಕೆಲವು ಪ್ರದೇಶಗಳಿಗೆ ಮತ್ತು ನದಿಗಳಿಗೆ ಇತಿಹಾಸ ಕಾಲದಲ್ಲಿದ್ದ ಕೆಲವು ಹೆಸರುಗಳು ಬಹಳ ಪ್ರಾಚೀನ ಕಾಲದಲ್ಲಿ ಭಾರತ ವರ್ಷದ ಹೊರಗೆ ಪಶ್ಚಿಮ ಆಸ್ಯದ ನದಿಗಳಿಗೆ ಮತ್ತು ಪ್ರದೇಶಗಳಿಗೆ ಇದ್ದುವೆಂಬ ಲಿಖಿತ ಪ್ರಮಾಣ ಗಳಿವೆಯಾದರೂ ಭಾರತೀಯರು ಅಥವಾ ಆರ್ಯ ಜನರು ಭಾರತ ವರ್ಷದಿಂದ ಹೊರಗಿನ ದೇಶಗಳಿಗೆ ವಲಸೆ ಹೋಗಿದ್ದರೆಂಬುದಕ್ಕೆ ಯಾವ ಪ್ರಾಚೀನ ಪ್ರಮಾಣವೂ ಇಲ್ಲ. ಪಾರಸಿಗಳ ಪ್ರಾಚೀನ ಧರ್ಮಗ್ರಂಥ ಅವೆಸ್ತಾದಲ್ಲಿಯೂ, ಶಕಪೂರ್ವ ಏಳನೆಯ ಶತಮಾನದವನಾದ ಪಾರಸದ ಚಕ್ರವರ್ತಿ ದಾರಯುವುಸ್ (Darias I)

ಎಂಬವನು ಬರೆಸಿದ ಶಾಸನಗಳಲ್ಲಿಯೂ ಹರಕ್ವಿತಿ ಮತ್ತು ಹರೈವ ಎಂಬ ನದಿಗಳ ಉಲ್ಲೇಖವಿದ್ದು, ಅವುಗಳು ಪಶ್ಚಿಮ ಅಫಗಾನಿಸ್ಥಾನದಲ್ಲಿದ್ದವೆಂದು ತಿಳಿದು ಬಂದಿದೆ. ಮತ್ತು ಅವುಗಳು ಸರಸ್ವತೀ ಮತ್ತು ಸರಯೂ ಎಂಬ ಹೆಸರುಗಳಾಗಿದ್ದುವೆಂದು ನಿರ್ಧರಿಸಲಾಗಿದೆ.

ಶುಕ್ಲ ಯಜುರ್ವೇದದ ವಾಜಸನೇಯಿ ಸಂಹಿತೆಯಲ್ಲಿ ಸರಸ್ವತೀ ನದಿಯ ಕುರಿತಾದ ಒಂದು ಉಲ್ಲೇಖವು ಮುಂದಿನಂತಿದೆ–

ಪಂಚನದ್ಯ: ಸರಸ್ವತೀಮಪಿ ಯಂತಿ ಸಸ್ರೋತಸಃ ಸರಸ್ವತೀ ತು ಪಂಚಧಾ ಸೋ ದೇಶೇಽಭವತ್ಸರಿತ್ ॥೩೪–೧೧॥

ಅರ್ಥ:–"ಪ್ರವಾಹಗಳಿಂದ ಕೂಡಿದ ಐದು ನದಿಗಳು ಸರಸ್ವತಿಯನ್ನು ಸೇರುತ್ತವೆ. ಹಾಗಾಗಿ ಆ ಸರಸ್ವತಿಯು ದೇಶದಲ್ಲಿ ಐದು ಪಟ್ಟಾಗಿ ಬೆಳದಿದೆ."

ವಾಜಸನೇಯಿ ಸಂಹಿತೆಯೊಳಗಿನ ಆ ವರ್ಣನೆಯು ಭಾರತ ವರ್ಷದೊಳಗಿದ್ದಿತೆಂದು ಉಲ್ಲೇಖಿಸಲಾಗಿರುವ ಸರಸ್ವತೀ ನದಿಯೊಂದಿಗೆ ಹೊಂದಿಕೊಳ್ಳದೇ ಅಫಗಾನಿಸ್ಥಾನದಲ್ಲಿ ಪೂರ್ವದಿಂದ ಪಶ್ಚಿಮಕ್ಕೆ ಹರಿದು ಹೇಲಿಮಂದ್ ನದಿಯನ್ನು ಕೂಡಿದ ನದಿಯೊಂದಿಗೆ ಮಾತ್ರ ಸರಿಯಾಗಿ ಹೊಂದಿಕೆಯಾಗುತ್ತದೆ. ಏಕೆಂದರೆ ಉತ್ತರ ದಿಕ್ಕಿನಿಂದ ಹರಿದು ಬಂದ ಐದು ನದಿಗಳು ಆ ನದಿಯನ್ನು ಮಾತ್ರ ಕೂಡಿವೆ. ಮತ್ತು ಅದುವೇ ಭಾರತ ವರ್ಷದೊಳಗಿನ ನದಿಗಿಂತ ಮೊದಲು ಸರಸ್ವತೀ ಎಂದು ಕರೆಯಲ್ಪಟ್ಟ ನದಿಯಾಗಿದೆ. ಅದರಂತೆಯೇ ಮಹಾಭಾರತದಲ್ಲಿ ಉಲ್ಲೇಖಿಸಲ್ಪಟ್ಟಿರುವ ಕುರುಕ್ಷೇತ್ರ, ಕುರುಜನಪದ. ಮದ್ರಜನಪದ ಮೊದಲಾದ ಹೆಸರುಗಳು ಬಹಳ ಹಿಂದೆ ಭಾರತವರ್ಷದ ಹೊರಗಿನ ಪ್ರದೇಶಗಳಿಗಿದ್ದ ಹೆಸರುಗಳಾಗಿದ್ದುವು. ಆರ್ಯ ಜನರು ಅಲ್ಲಿಂದ ಬಂದು ಭಾರತ ವರ್ಷದೊಳಗೆ ನೆಲಸಿದ ತರುವಾಯ ಭಾರತವರ್ಷದೊಳಗಿನ ಪ್ರದೇಶಗಳಿಗೆ ಆ ಹೆಸರುಗಳನ್ನು ಕೊಟ್ಟಿದ್ದರು. ಋಗ್ವೇದದ ಗದ್ಯಭಾಗವಾಗಿರುವ ಐತರೇಯ ಬ್ರಾಹ್ಮಣದಲ್ಲಿ **"ಉತ್ತರ ಕುರವ:"** ಮತ್ತು **"ಉತ್ತರ ಮದ್ರಾ:"** ಎಂಬ ಜನಪದಗಳು ಭಾರತ ವರ್ಷದ ಹೊರಗೆ ಹಿಮವತ್ಪರ್ವತದ ಆಚೆಕಡೆ ಉತ್ತರ ದಿಕ್ಕಿನಲ್ಲಿವೆಯೆಂದು ಹೇಳಿದೆ.[1] ಹಾಗೆಯೇ ಋಗ್ವೇದದಲ್ಲಿ ಮುಂದೆ ಕೊಡಲಾಗುವ ಮೂವತ್ತಮೂರು ನದಿಗಳ ಹೆಸರುಗಳಿವೆ–

೧. ಅಂಶುಮತಿ ೨. ಅನಿತಭಾ ೩. ಅಸಿಕ್ನೀ ೪. ಆಪಯಾ ೫. ಆರ್ಜೀಕೀಯಾ ೬. ಊರ್ಣಾವತೀ ೭. ಕುಭಾ ೮. ಕ್ರುಮು ೯. ಗಂಗಾ

[1] ಉದೀಚ್ಯಾಂ ದಿಶಿ ಯೇ ಕೇ ಚ ಪರೇಣ ಹಿಮವಂತಂ ಜನಪದಾ ಉತ್ತರಕುರವ ಉತ್ತರ ಮದ್ರಾ ಇತಿ ॥೮–೧೪॥

೧೦. ಗೋಮತಿ ೧೧. ತೂರ್ಣೂರ್ಶ ೧೨. ತೃಷ್ಟಾಮಾ ೧೩. ದೃಷದ್ವತೀ ೧೪. ಪರುಷ್ಣೀ ೧೫. ಪುರೀಷಿಣೀ ೧೬. ಮರುದ್ವೃಧಾ ೧೭. ಮೇಹತ್ನು ೧೮. ಯಮುನಾ ೧೯. ಯವ್ಯಾವತೀ ೨೦. ರಸಾ ೨೧. ವಿತಸ್ತಾ ೨೨. ವಿಪಾಶಾ ೨೩. ವಿಬಾಲೀ ೨೪. ಶಿಫಾ ೨೫. ಶುತುದ್ರೀ ೨೬. ಶ್ವೇತ್ಯಾ ೨೭. ಸರಯೂ ೨೮. ಸರಸ್ವತೀ ೨೯. ಸೀಲಮಾವತೀ ೩೦. ಸುವಾಸ್ತು ೩೧. ಸುಷೋಮಾ ೩೨. ಸುಸರ್ತು ೩೩. ಹರಿಯೂಪೀಯಾ.

"ಸಿಂಧು" ಎಂಬುದು ಮೂಲದಲ್ಲಿ "ನದಿ" ಎಂಬರ್ಥದ ಶಬ್ದವಾಗಿದ್ದಿತೇ ಹೊರತು ಯಾವುದೊಂದು ನದಿಯ ಹೆಸರಾಗಿರಲಿಲ್ಲ. ಆ ಮೂವತ್ತಮೂರು ನದಿಗಳಲ್ಲದೇ ಬ್ರಾಹ್ಮಣ ಗ್ರಂಥಗಳಲ್ಲಿ "ಕಾರೋತಿ, ಸುದಾಮಾ" ಮೊದಲಾದ ಬೇರೆ ನದಿಗಳ ಹೆಸರುಗಳು ಕೂಡ ಇವೆ. ಆದರೆ ಆ ಎಲ್ಲ ನದಿಗಳು ಭಾರತವರ್ಷದಲ್ಲಿ ಯಾವ ಕಾಲದಲ್ಲಿಯೂ ಇರಲಿಲ್ಲ. ಅಥವಾ ಇದ್ದುವೆಂಬ ಪ್ರಮಾಣವಿಲ್ಲ. ಮತ್ತು ಈಗಲೂ ಭಾರತವರ್ಷದಲ್ಲಿ ಇಲ್ಲ. ಆದುದರಿಂದ ಭಾರತವರ್ಷದಲ್ಲಿ ಇರದ ಹಲವು ನದಿಗಳನ್ನು ಭಾರತವರ್ಷದ ಹೊರಗೆ ಪಶ್ಚಿಮ ಆಸ್ಯದಲ್ಲಿ ಮತ್ತು ಮಧ್ಯ ಆಸ್ಯದಲ್ಲಿ ಕಂಡುಕೊಳ್ಳಬೇಕಾಗಿದೆ.

ಋಗ್ವೇದದೊಳಗಿನ ಉಲ್ಲೇಖಗಳ ಪ್ರಕಾರ ಸರಸ್ವತೀ ನದಿಯು ಇತರ ಎಲ್ಲ ನದಿಗಳಿಗಿಂತ ಶ್ರೇಷ್ಠವಾಗಿದ್ದು ಆರ್ಯ ಜನರ ಆರಾಧನೆಗೂ ಪೂಜ್ಯತೆಗೂ ಪಾತ್ರವಾಗಿದ್ದಿತು. ಹಾಗಿದ್ದುದರಿಂದಲೇ ಆರ್ಯ ಜನರು ತಾವು ವಲಸೆ ಹೋಗಿ ನೆಲಸಿದ ಪ್ರತಿಯೊಂದು ಪ್ರದೇಶದಲ್ಲಿ ಹರಿಯುತ್ತಿದ್ದ ಯಾವುದೊಂದು ನದಿಗೆ ಸರಸ್ವತೀ ಎಂಬ ಹೆಸರನ್ನಿಡುತಿದ್ದರೆಂಬುದರಲ್ಲಿ ಸಂದೇಹವಿಲ್ಲ. ಅವರು ಅಫಗಾನಿಸ್ಥಾನದಲ್ಲಿ ನೆಲಸಿದ್ದಾಗ ಅಲ್ಲಿನ ಒಂದು ನದಿಗೆ ಸರಸ್ವತೀ ಎಂಬ ಹೆಸರನ್ನೂ, ಅಫಗಾನಿಸ್ಥಾನದ ವಾಯುವ್ಯ ದಿಕ್ಕಿನಲ್ಲಿದ್ದ ಬೇರೊಂದು ನದಿಗೆ ಸರಯೂ ಎಂಬ ಹೆಸರನ್ನೂ ಕೊಟ್ಟಿದ್ದರು. ಅವರು ಅಫಗಾನಿಸ್ಥಾನದಿಂದ ಸರಸ್ವತೀ ನದಿಯ ತೀರದಿಂದಾಗಿ ಪೂರ್ವಕ್ಕೆ ಮುಂದುವರಿದು ಭಾರತವರ್ಷವನ್ನು ಪ್ರವೇಶಿಸಿದ ತರುವಾಯ ಪಂಜಾಬದಲ್ಲಿ ಹರಿಯುತಿದ್ದ ಒಂದು ನದಿಗೆ ಸರಸ್ವತೀ ಎಂಬ ಹೆಸರನ್ನು ಕೊಟ್ಟಿದ್ದರು. ಆದರೆ ಆ ನದಿಯು ಈಗ ಇಲ್ಲವಾಗಿದೆ. ತರುವಾಯ ಅವರು ಪಂಜಾಬದಿಂದ ದಕ್ಷಿಣಕ್ಕಿಳಿದು ಮುಂದುವರಿದವರು ಪ್ರಾಚೀನ ಗುಜರಾತವನ್ನು ತಲಪಿ ಅಲ್ಲಿ ನೆಲಸಿದ್ದಾಗ ಅಬೂ ಬೆಟ್ಟದಿಂದ ದಕ್ಷಿಣಕ್ಕೆ ಹರಿಯುತಿದ್ದ ಒಂದು ನದಿಗೆ ಸರಸ್ವತೀ ಎಂಬ ಹೆಸರನ್ನು ಕೊಟ್ಟಿದ್ದರು. ಚಾಲುಕ್ಯರ ರಾಜಧಾನಿಯಾಗಿದ್ದ ಅಣಹಿಲವಾಡ ಪಟ್ಟಣವು ಇದೇ ಸರಸ್ವತೀ ನದಿಯ ತೀರದಲ್ಲಿತ್ತು. ಮತ್ತು ಸರಸ್ವತೀ ನದೀ ತೀರದ ಪ್ರದೇಶವು ಸಾರಸ್ವತ ಮಂಡಲವೆಂದು ಹೆಸರಾಗಿತ್ತು. ಹಾಗೆಯೇ ಅವರು ಉತ್ತರ ಗುಜರಾತದಿಂದ ಹೊರಟು ದಕ್ಷಿಣದಲ್ಲಿರುವ

ಸೌರಾಷ್ಟ್ರಕ್ಕೆ ಸಾಗುತಿದ್ದಾಗ ಗಿರ್ ಕಾಡಿನಿಂದ ಹರಿದು ಪ್ರಭಾಸಕ್ಷೇತ್ರದ ಬಳಿಯಲ್ಲಿ ಸಮುದ್ರವನ್ನು ಕೂಡಿದ ನದಿಗೂ ಸರಸ್ವತೀ ಎಂಬ ಹೆಸರನ್ನು ಕೊಟ್ಟಿದ್ದರು. ತಾತ್ಪರ್ಯವೇನೆಂದರೆ ಋಗ್ವೇದದಲ್ಲಿ ಉಲ್ಲೇಖಿಸಲ್ಪಟ್ಟಿರುವ ಹಲವು ಹೆಸರುಗಳು ಭಾರತವರ್ಷದಲ್ಲಿ ಹರಿಯುತ್ತಿರುವ ನದಿಗಳಿಗೆ ಇವೆಯಾದರೂ ಅವುಗಳು ಆ ನದಿಗಳ ಮೂಲ ಹೆಸರುಗಳಾಗಿರಲಿಲ್ಲವೆಂಬುದರಲ್ಲಿ ಸಂದೇಹವುಳಿಯುವುದಿಲ್ಲ.

ಆರ್ಯಜನರಲ್ಲಿ ಯಜ್ಞಗಳನ್ನು ಜರುಗಿಸುತ್ತ ವಲಸೆ ಹೋಗುವಂಥ ಒಂದು ಪಂಗಡವಿದ್ದಿತೆಂದೂ, ಆ ಪಂಗಡದ ಜನರು ಸಾಮಾನ್ಯವಾಗಿ ನದೀ ತೀರದಲ್ಲಿ ತಂಗುತಿದ್ದರೆಂದೂ, ತಾವು ತಂಗಿದಲ್ಲಿನ ನದಿಗೆ ಸರಸ್ವತೀ ಎಂಬ ಹೆಸರನ್ನಿಡುತ್ತಿದ್ದರೆಂದೂ, ಅವರು ವಲಸೆ ಹೋಗುತಿದ್ದಾಗ ಜರಗಿಸುತಿದ್ದ ಯಜ್ಞದ ಮತ್ತು ಅದನ್ನು ಜರಗಿಸುತ್ತ ಸಾಗುತಿದ್ದ ಜನರ ಹೆಸರು ಸಾರಸ್ವತ ಎಂದಿರುತಿದ್ದಿತೆಂದೂ ಆಶ್ವಲಾಯನ ಶ್ರೌತಸೂತ್ರಗಳಲ್ಲಿ ಉಲ್ಲೇಖಿಸಲ್ಪಟ್ಟಿರುವ ಸಾರಸ್ವತ ಯಜ್ಞದ ವಿವರಗಳಿಂದ ತಿಳಿದು ಬರುತ್ತದೆ. ಆ ವಿವರಗಳು ಈ ಅಧ್ಯಾಯದ ಕೊನೆಯಲ್ಲಿ ಬರುವುವು.

ಪ್ರೊ. ಫ್ರೆಡ್ರಿಕ್ ಮೆಕ್ಸ್‌ಮುಲ್ಲರರ ಕಲ್ಪನೆಯಂತೆ ಆರ್ಯ ಜನರು ಸಾಧಾರಣ ಶಕಪೂರ್ವ ೧೬೦೦ ವರ್ಷಗಳ ಹಿಂದೆ ಪಶ್ಚಿಮ ಆಸ್ಯದಿಂದ ಮುಂದುವರಿದು ಭಾರತವರ್ಷವನ್ನು ಪ್ರವೇಶಿಸಿದ್ದರೆಂದಿದೆ. ಆದರೆ ಅವರ ಆ ಕಲ್ಪನೆಗೆ ಯಾವುದೊಂದು ಪ್ರಮಾಣವಿಲ್ಲವೆಂಬುದನ್ನು ಅಲಕ್ಷಿಸಲಾಗುವುದಿಲ್ಲ. ಹಾಗಿದ್ದರೂ ಭಾರತೀಯರ ಪ್ರಾಚೀನ ಇತಿಹಾಸಕ್ಕೆ ಸಂಬಂಧಪಟ್ಟ ಯಾವುದೊಂದು ಲಿಖಿತ ಪ್ರಮಾಣವಿಲ್ಲವೆಂಬ ಕಾರಣದಿಂದ ಅಧಿಕಾಂಶ ಪಾಶ್ಚಾತ್ಯ ವಿದ್ವಾಂಸರು ಮೆಕ್ಸ್ ಮುಲ್ಲರರ ಪ್ರಮಾಣರಹಿತ ಕಲ್ಪನೆಯನ್ನು ಸಿದ್ಧಾಂತವೆಂಬಂತೆ ಗ್ರಹಿಸಿ ತರುವಾಯದ ಇಡೀ ಭಾರತೀಯ ಇತಿಹಾಸವನ್ನು ರೂಪಿಸಿದ್ದಾರೆ. ಮತ್ತು ಬರಿಯ ಊಹಾಪೋಹಗಳ ಮೇಲಿಂದ ಹಲವು ನಿರ್ಣಯಗಳನ್ನು ಕೈಗೊಂಡಿದ್ದಾರೆ. ಆದುದರಿಂದ ಅವರ ಆ ನಿರ್ಣಯಗಳಲ್ಲಿ ಹಲವು ಲೋಪಗಳೂ, ದೋಷಗಳೂ ಇರುವುದು ಸ್ವಭಾವ–ಸಹಜವಾಗಿದೆ. ಅಂಥ ಎರಡು ದೋಷಗಳ ಅಥವಾ ತಪ್ಪುಗಳ ಸಂಬಂಧದಲ್ಲಿ ಇಲ್ಲಿ ಮುಂದೆ ಸಂಕ್ಷಿಪ್ತವಾಗಿ ಚರ್ಚಿಸಲಾಗುವುದು.

ಬ್ರಿಟಿಷ್ ವಿದ್ವಾಂಸರ ಅಭಿಪ್ರಾಯದಲ್ಲಿ ಶಕಜನರ ಮೊತ್ತಮೊದಲನೆಯ ತಂಡವು ಶಕಪೂರ್ವ ಎರಡನೆಯ ಶತಮಾನದಲ್ಲಿ ಭಾರತವರ್ಷದೊಳಗೆ ಬಂದು ನೆಲಸಿತೆಂದಿದೆ. ಆದರೆ ಅವರ ಆ ಅಭಿಪ್ರಾಯವು ಸರ್ವಥಾ ಸರಿಯಲ್ಲವೆಂದು ಮುಂದಿನ ವಿವರಗಳಿಂದ ಸಿದ್ಧವಾಗುವುದು– ೧. ಮೊದಲನೆಯದಾಗಿ ಆಚಾರ್ಯ ಪಾಣಿನಿಯು ತನ್ನ ವ್ಯಾಕರಣ ಸೂತ್ರಗಳನ್ನು ರಚಿಸುವ ಬಹುಕಾಲ ಮೊದಲೇ ಶಕ ಜನರು ಭಾರತವರ್ಷವನ್ನು ಪ್ರವೇಶಿಸಿ ಕಂದಹಾರದಿಂದ ಪಂಜಾಬದ ರಾವೀನದಿಯ

ತನಕ ಹರಡಿ ನೆಲಸಿದ್ದರೆಂಬುದರ ಪ್ರಮಾಣವಾಗಿ ಶಕಜನರ ಪ್ರಭಾವದಿಂದ ಬಳಕೆಗೆ ಬಂದಿವ್ವ ಹಲವು ನಗರಗಳ ಹೆಸರುಗಳು ಆಚಾರ್ಯ ಪಾಣಿನಿಯ ವ್ಯಾಕರಣ ಸೂತ್ರಗಳಲ್ಲಿ ಉಲ್ಲೇಖಿಸಲ್ಪಟ್ಟಿವೆ. ಅಂದರೆ ಆ ಹೆಸರುಗಳ ರೂಪಸಿದ್ಧಿಯನ್ನು ವಿವರಿಸುವ ಹಲವು ಸೂತ್ರಗಳು ಪಾಣಿನಿಯ ವ್ಯಾಕರಣ ಗ್ರಂಥವಲ್ಲಿವೆ. ಶಕಜನರು **"ನಗರ"** ಎಂಬರ್ಥವನ್ನು **ಸೂಚಿಸಲು** ಊರುಗಳ ಹೆಸರುಗಳ ಕೊನೆಯಲ್ಲಿ **"ಕಂಥ"** ಎಂಬ ಶಬ್ದವನ್ನು ಕೂಡಿಸುತಿದ್ದರು. ಮತ್ತು ಆ "ಕಂಥ" ಕೂಡಿದ ನಾಮಪದವು ಸಂದರ್ಭಾನುಸಾರವಾಗಿ ನಪುಂಸಕಲಿಂಗ ರೂಪವನ್ನಾಗಲೀ ಸ್ತ್ರೀಲಿಂಗ ರೂಪವನ್ನಾಗಲೀ ತಳೆಯುತಿತ್ತು. ಆ ಕಂಥ ಎಂಬ ಶಬ್ದವನ್ನು ಸೇರಿಸಿ ರೂಪವನ್ನು ಸಾಧಿಸುವ ಒಂದು ಸೂತ್ರವು ಮುಂದಿನಂತಿದೆ– **"ಸಂಜ್ಞಾಯಾಂ ಕಂಥೋಶೀನರೇಷು" ॥ ೨–೪–೨೦॥** [1] ಅಂದರೆ ಉಶೀನರದೇಶದಲ್ಲಿ "ಕಂಥ" ಶಬ್ದದಿಂದ ಕೂಡಿದ ಸ್ಥಾನನಾಮಗಳು ನಪುಂಸಕ ಲಿಂಗವಾಗುವುವು– **"ಸೌಶಮಿಕಂಥಮ್; ಆಹ್ವರಕಂಥಮ್; ಚಪ್ಯಕಂಥಮ್"** ಇತ್ಯಾದಿ. ಚಿಹಣಾದಿಗಣದಲ್ಲಿ ಅಂಥ ಹಲವು ಹೆಸರುಗಳಿವೆ **ಚಿಹಣಕಂಥಮ್; ಮದುರಕಂಥಮ್; ವೈತುಲಕಂಥಮ; ಪಟತ್ಕಂಥಮ್; ವೈಡಾಲಿಕರ್ಣಕಂಥಮ್; ಕುಕ್ಕುಟಕಂಥಮ್; ಚಿತ್ಕಣಕಂತಮ್॥** ಸ್ತ್ರೀ ಲಿಂಗರೂಪಗಳು ಮುಂದಿನಂತಿವೆ-**ದಾಕ್ಷೀಕಂಥಾ: ವೀರಣಕಂಥಾ;** ಇತ್ಯಾದಿ ಇವುಗಳಲ್ಲದೇ ಇನ್ನೂ ಹಲವು ಹೆಸರುಗಳಿವೆ. ಭಾರತವರ್ಷದ ಹೊರಗೆ ಅಫಗಾನಿಸ್ಥಾನದ ಮತ್ತು ಈರಾನದ ಉತ್ತರದಲ್ಲಿ ಅಂದರೆ ಮಧ್ಯ ಆಸ್ಯಕ್ಕೆ ಸೇರಿದ ಹಲವು ನಗರಗಳಲ್ಲಿ ಹಿಂದೆ ಶಕಜನರು ನೆಲಸಿದ್ದರೆಂಬುದರ ಪ್ರಮಾಣವಾಗಿ "ಕಂಥ" ಶಬ್ದದಿಂದ ಕೊನೆಗೊಳ್ಳುವ ಹಲವು ಹೆಸರುಗಳು ಇಂದಿಗೂ ಉಳಿದಿವೆ. ಆದರೆ ಪ್ರಾಚೀನ ಕಂಥ ಶಬ್ದವು ತರುವಾಯದ ಸುಗ್ದೀ ಭಾಷೆಯ ಪ್ರಭಾವದಿಂದ "ಕಂದ" ಆಗಿ ಮಾರ್ಪಟ್ಟಿದೆ–**"ಸಮರಕಂದ, ತಾಶಕಂದ, ಚಿಮಕಂದ, ಯಾರಕಂದ, ಪಾಯಕಂದ"** ಇತ್ಯಾದಿ.

ಇತ್ತೀಚಿಗಿನ ಇತಿಹಾಸ ಸಂಶೋಧಕರು ಆಚಾರ್ಯ ಪಾಣಿನಿಯ ಜೀವಿತ ಕಾಲವನ್ನು ಶಕಪೂರ್ವ ೫೬೮ರಿಂದ ೪೮೮ನೆಯ ವರ್ಷಗಳೆಂದು ನಿರ್ಧರಿಸಿದ್ದಾರೆ. ಆಚಾರ್ಯ ಪಾಣಿನಿಯ ವ್ಯಾಕರಣ ಸೂತ್ರಗಳಲ್ಲಿ ಶಕಜನರಿಂದಾಗಿ ಪ್ರಚಲಿತವಾದ ಅಷ್ಟು ಹೆಚ್ಚು ಹೆಸರುಗಳು ಉಲ್ಲೇಖಿಸಲ್ಪಟ್ಟಿರುವುದರ ಮೇಲಿಂದ ಶಕ ಜನರು ಆಚಾರ್ಯ ಪಾಣಿನಿಯ ಜನ್ಮ ಕಾಲಕ್ಕಿಂತ ಎಷ್ಟು ಕಡಿಮೆಯೆಂದರೂ ಎರಡು ಶತಮಾನಗಳ ಮೊದಲೇ ಪಶ್ಚಿಮ ಭಾರತದಲ್ಲಿ ನೆಲಸಿದ್ದು ತಮ್ಮ ಆಳ್ವಿಕೆಯನ್ನು ಸ್ಥಾಪಿಸಿದ್ದ

---

1 ಕಂಥಾಯಾಷ್ಠಕ್ ॥ ೪-೨_೧೦೨॥ ವರ್ಣೌವುಕ್ ॥ ೪-೨-೧೦೩॥ **ಕಂಥಾಪಲದನಗರಗ್ರಾಮಹ್ರದೋತ್ತರಪದಾತ್** ॥ ೪-೨-೧೪೨ ॥ **ಕಂಥಾಚ** ॥ ೬-೨-೧೨೪ **ಆದಿಶ್ಚಿಹಣಾದೀನಾಮ್** ॥ ೬-೨-೧೨೫ ॥

ರೆನ್ನಬೇಕಾಗುತ್ತದೆ. ಆದುದರಿಂದ ಶಕಜನರು ಭಾರತ ವರ್ಷವನ್ನು ಪ್ರವೇಸಿದ ಸಂಬಂಧವಲ್ಲಿ ಬ್ರಿಟಿಷ್ ವಿದ್ವಾಂಸರು ನಿರ್ಧರಿಸಿದ ಶಕಪೂರ್ವ ಎರಡನೆಯ ಶತಮಾನ ವೆಂಬ ಕಾಲಮಿತಿಯನ್ನು ತ್ಯಜಿಸಿ ಶಕಪೂರ್ವ ಎಂಟನೆಯ ಶತಮಾನವೆಂಬ ಕಾಲಮಾನ ವನ್ನು ಸ್ವೀಕರಿಸಬೇಕಾಗುತ್ತದೆ.

೨, ಎರಡನೆಯದಾಗಿ ಭಗವಾನ್ ಬುದ್ಧನು ಐತಿಹಾಸಿಕ•ವ್ಯಕ್ತಿಯಾಗಿರುವು ದರಿಂದ ಅವನ ಜನ್ಮಕಾಲದ ಆಧಾರದಿಂದಲೂ ಶಕಜನರ ಭಾರತ-ಪ್ರವೇಶದ ಕಾಲವನ್ನು ನಿರ್ಧರಿಸಲು ಸಾಧ್ಯವಾಗುತ್ತದೆ. ಬುದ್ಧದೇವನು ಶಕಪೂರ್ವ ೬೫೧ನೆಯ ವರ್ಷದಲ್ಲಿ ಜನಿಸಿದ್ದನೆಂದು ವಿದ್ವಾಂಸರು ನಿರ್ಣಯಿಸಿದ್ದಾರೆ. ಬುದ್ಧದೇವನ ಹೆಸರುಗಳಲ್ಲಿ **"ಅರ್ಕಬಂಧು"** ಮತ್ತು **"ಶಾಕ್ಯಮುನಿ"** ಎಂಬ ಎರಡು ಹೆಸರುಗಳು ಬುದ್ಧದೇವನು ಸೂರ್ಯಪೂಜಕರಾಗಿದ್ದ ಶಕಜನರ ಪಂಗಡಕ್ಕೆ ಸೇರಿದವನೆಂಬುದನ್ನು ಸ್ಪಷ್ಟವಾಗಿ ಸಿದ್ಧಪಡಿಸುತ್ತವೆ. ಶಕಜನರು ಆರ್ಯಜನರೊಳಗಿನ ಅಗ್ನಿಪೂಜಕ, ಸೂರ್ಯಪೂಜಕ ಮತ್ತು ಚಂದ್ರಪೂಜಕ ಎಂಬ ಮೂರು ಶಾಖೆಗಳಲ್ಲಿ ಸೂರ್ಯ ಪೂಜಕರ ಶಾಖೆಗೆ ಸೇರಿದವರಾಗಿದ್ದರು. ಅವರಲ್ಲಿ ಮಕ, ಕರ್ಕ, ಮತ್ತು ವರ್ಕ ಎಂಬ ಮೂರು ಮುಖ್ಯ ತಂಡಗಳಿದ್ಧವು.[1] ಮುಂದೆ ಮಕಶಬ್ದವು "ಮಗ" ಎಂದು ಮಾರ್ಪಟ್ಟಿತು. ಹಾಗೂ ಋಗ್ವೇದದ ಕಾಲದಲ್ಲಿ ಕೀಕಟ ಎಂಬ ಹೆಸರಿನಿಂದ ಕರೆಯಲ್ಪಡುತಿದ್ದ ಪೂರ್ವ ಭಾರತದ ಪ್ರದೇಶವು ಮಗಜನರು ನೆಲಸಿದುದರಿಂದಾಗಿ "ಮಗಧ" ಎಂದು ಕರೆಯಲ್ಪಡತೊಡಗಿತು. ಮಗಧ ಎಂಬುದರ ಅರ್ಥವು ಮಗ ಜನರ ನೆಲೆ ಎಂದಾಗುತ್ತದೆ.[2] ಮಗಜನರಲ್ಲಿ ಬ್ರಾಹ್ಮಣರೂ ಇದ್ದರು. ಮತ್ತು ಅವರು ಸೂರ್ಯನ ದೇವಾಲಯಗಳಲ್ಲಿ ಅರ್ಚಕರಾಗುತಿದ್ದರು. ಅವರು ಈಗ ಮಗಬ್ರಾಹ್ಮಣರೆಂದೂ ಶಕದ್ವೀಪೀ ಬ್ರಾಹ್ಮಣರೆಂದೂ ಹೆಸರಾಗಿದ್ದಾರೆ.

ಶಕವರ್ಗಕ್ಕೆ ಸೇರಿದ ಬುದ್ಧದೇವನು ನೇಪಾಲದ ತಪ್ಪಲಲ್ಲಿರುವ ಲುಂಬಿನಿ ಗ್ರಾಮದಲ್ಲಿ ಜನ್ಮ ತಳೆದಿದ್ದನು. ಆದುದರಿಂದ ಶಕಜನರು ಬುದ್ಧದೇವನ ಜನ್ಮ ಕಾಲಕ್ಕಿಂತ ಮೊದಲಿನಿಂದಲೂ, ನೇಪಾಳದಲ್ಲಿ ಮತ್ತು ಅದರ ಸುತ್ತುಮುತ್ತಲಿನ ಪ್ರದೇಶಗಳಲ್ಲಿ ನೆಲಸಿದ್ದರೆಂದು ತಿಳಿಯಬೇಕಾಗುತ್ತದೆ. ಅಷ್ಟು ಮಾತ್ರವಲ್ಲದೇ ಮಗಧ ಎಂಬ ಹೆಸರು ಬುದ್ಧದೇವನ ಜನ್ಮಕಾಲಕ್ಕಿಂತ ಮೊದಲೇ ಪ್ರಸಿದ್ಧ ವಾಗಿದ್ದಿತೆಂಬ ಪ್ರಮಾಣಗಳಿರುವುದರಿಂದ ಶಕಜನರು ಅವನ ಜನ್ಮಕಾಲಕ್ಕಿಂತ ಬಹಳ ಮೊದಲಿನಿಂದಲೂ ಪೂರ್ವಭಾರತದಲ್ಲಿ ನೆಲಸಿದ್ದರೆಂದು ಸ್ಪಷ್ಟವಾಗಿ ಸಿದ್ಧವಾಗುತ್ತದೆ. ಹಾಗೆಯೇ ನೇಪಾಳದಲ್ಲಿ ಮತ್ತು ತಿಬ್ಬತದಲ್ಲಿ ನೆಲಸಿದ್ದ ಶಕಜನರೊಳಗೆ ಝಲ್ಲ,

---

[1] ಪಾಣಿನಿ ಕಾಲೀನ ಭಾರತ ವರ್ಷ ಪುಟ ೮೨ ಮತ್ತು ೪೭೬.

[2] The word "Maga" seems to have retained itself in the name "Magadha" "Abode of Magas". Foreign connection of Buddha page 47.

ಮಲ್ಲ, ವೃಜ್ಜಿ, ಲಿಚ್ಛವಿ ಮೊದಲಾದ ಹಲವು ಕುಲಗಳಿದ್ದವೆಂತಲೂ, ಅವರಲ್ಲಿ ಗಣರಾಜ್ಯ ಪದ್ಧತಿಯು ಪ್ರಚಲಿತವಿದ್ದಿತೆಂತಲೂ ತಿಳಿದು ಬರುತ್ತದೆ. ಇತಿಹಾಸ ಲೇಖಕರು ಲಿಚ್ಛವಿಗಳ ಗಣರಾಜ್ಯವು ಶಕಪೂರ್ವ ೮೩೦ನೆಯ ವರ್ಷದಲ್ಲಿ ಸ್ಥಾಪಿಸಲ್ಪಟ್ಟಿರಬಹುದೆಂದೂಹಿಸಿದ್ದಾರೆ.[1] ಆದುದರಿಂದ ಶಕಜನರು ಅವರ ಗಣ ರಾಜ್ಯ ಸ್ಥಾಪನೆಯಾಗುವ ನೂರು ವರ್ಷಗಳ ಮೊದಲಿನಿಂದಾದರೂ, ಪೂರ್ವ ಭಾರತದಲ್ಲಿ ನೆಲಸಿದ್ದಿರಲೇ ಬೇಕೆಂಬುದನ್ನು ಒಪ್ಪಬೇಕಾಗುತ್ತದೆ. ಅರ್ಥಾತ್ ಶಕ ಜನರು ಎಷ್ಟು ಕಡಿಮೆಯೆಂದರೂ ಶಕಪೂರ್ವ ಪತ್ತನೆಯ ಶತಮಾನದಲ್ಲಿಯೇ ಮಧ್ಯ ಆಸ್ಯದಿಂದ ಪೂರ್ವಕ್ಕೆ ಮುಂದುವರಿದವರು ಚೀನ ಮತ್ತು ತಿಬ್ಬತದ ಹಾದಿಯಾಗಿ ಅಂದರೆ ಈಶಾನ್ಯ ದಿಕ್ಕಿನಿಂದ ಭಾರತ ವರ್ಷವನ್ನು ಪ್ರವೇಶಿಸಿ ಮಗಧದಲ್ಲಿ ನೆಲಸಿದ್ದ ರೆಂಬ ತಥ್ಯವನ್ನು ಸ್ವೀಕರಿಸಬೇಕಾಗುತ್ತದೆ. ಹಾಗಾಗಿ ಶಕಜನರ ಭಾರತ ಪ್ರವೇಶ ಕಾಲವು ಬ್ರಿಟಿಷ್ ವಿದ್ವಾಂಸರು ನಿರ್ಧರಿಸಿದ ಕಾಲಕ್ಕಿಂತ ಎಂಟು ಶತಮಾನಗಳಷ್ಟು ಹೆಚ್ಚು ಹಿಂದಕ್ಕೆ ಸರಿಯುತ್ತದೆ.

ಆದರೆ ಯಾವನೊಬ್ಬ ಬ್ರಿಟಿಷ್ ವಿದ್ವಾಂಸನಾದರೂ ಶಕಜನರನ್ನು ಆರ್ಯ ವರ್ಗದವರೆಂದು ತಿಳಿಯದಿದ್ದುದು ಇಲ್ಲವೇ ಹೇಳದಿದ್ದುದು ಆಶ್ಚರ್ಯಕರವಾಗಿದೆ. ಅಥವಾ ಮೊದಲ ಮೊದಲಿನ ಬ್ರಿಟಿಷ್ ವಿದ್ವಾಂಸರು ಸಿಥಿಯನ್ ಮತ್ತು ಶಕ ಎಂದರೆ ಒಂದೇ ಜನಾಂಗವೆಂಬುದನ್ನು ಅರಿತಿರಲಿಲ್ಲವೆನ್ನಬಹುದು. ಹಲವು ಚಿಕ್ಕ ಮತ್ತು ದೊಡ್ಡ ಇತಿಹಾಸ ಗ್ರಂಥಗಳನ್ನು ಬರೆದ ಬ್ರಿಟಿಷ್ ವಿದ್ವಾಂಸ ವಿನ್ಸೆಂಟ್ ಸ್ಮಿತ್ ಅವರು ಬುದ್ಧದೇವನನ್ನು ಶಾಕ್ಯಮುನಿ ಎಂದು ವರ್ಣಿಸಿದ್ದರೂ ಬುದ್ಧ ದೇವನು ಜನ್ಮತಃ ಮಂಗೋಲ ಇಲ್ಲವೇ ಸಿಥಿಯನ್ ಅಥವಾ ತುರೇನಿಯನ್ ವರ್ಗದವನಾಗಿರಬಹುದೆಂದಿದ್ದಾರೆಯೇ ಹೊರತು ಆರ್ಯವರ್ಗದವನೆಂದು ತಿಳಿದಿಲ್ಲ.[2] ಆದುದರಿಂದ ಅವರು ಮತ್ತು ಇತರ ಬ್ರಿಟಿಷ್ ವಿದ್ವಾಂಸರು ಬುದ್ಧದೇವನ ಅಥವಾ ಶಕಜನರ ಭಾಷೆಯು ಆರ್ಯವರ್ಗದ್ದಾಗಿದ್ದಿತೆಂಬುದನ್ನು ಪರಿಶೀಲಿಸುವ ಗೋಜಿಗೆ

---

1 The tentative date assigned to the establishment of the Lichchvai Repub'ic is about 750 BC. Ancient India page 191 by V. D. Mahajan.

2 I think it highly probable that Gautama Buddha, the sage of Sakyas, and the founder of the historical Buddhism, was a Mongolian by birth that is to say a hillman like a Gurkha, with Mongolian features and a kin to the Tibetans. Similar views were expressed long ago by Beal and Ferguson who used the term Seythian or Turanian in the sense in which I use Mongolian. The Oxford History of India page 47.

ಹೋಗಿಲ್ಲವೆಂತಲೂ, ಶಕಜನರು ಕೂಡ ಯವನರಂತೆಯೇ ಆರ್ಯವರ್ಗದವರೆಂಬು ದನ್ನು ಕಡೆಗಣಿಸಿದ್ದಾರೆಂತಲೂ ಅನ್ನಬಹುದು.

ಅದೇ ರೀತಿಯಲ್ಲಿ ಬ್ರಿಟಿಷ್ ಪಾದ್ರಿ ಡಾಕ್ಟರ್ ರಾಬರ್ಟ್ ಕಾಲ್ಡವೆಲ್ ಅವರು ತಾನು ರಚಿಸಿದ "ದ್ರಾವಿಡ ಭಾಷೆಗಳ ತುಲನಾತ್ಮಕ ವ್ಯಾಕರಣ" ಎಂಬ ಗ್ರಂಥದಲ್ಲಿ ದ್ರಾವಿಡ ಜನರು ಮತ್ತು ಅವರ ಭಾಷೆಗಳು-ಅವರು ಅನಾರ್ಯವೆಂದು ಗಣಿಸಿದ ಸಿಥಿಯನ್ ವರ್ಗಕ್ಕೆ ಸಮೀಪವಾದವುಗಳೆಂಬ ತನ್ನ ಉಪಪತ್ತಿಯನ್ನು ಪ್ರತಿಪಾದಿಸುವ ಭರದಲ್ಲಿ–ಅಸಂಗತ ಅಥವಾ ಪರಸ್ಪರ ವಿರುದ್ಧವೆನ್ನಬಹುದಾದ-ಹಲವು ಪ್ರಮಾಣರಹಿತ ಕಲ್ಪನೆಗಳನ್ನು ಸೇರಿಸಿದ್ದಾರೆ. ಉದಾಹರಣೆಗಾಗಿ ಹೇಳುವುದಾದರೆ ಅವರು ಆ ಗ್ರಂಥದ ೫೭ನೆಯ ಪುಟದಲ್ಲಿ ಆರ್ಯಜನರು ಭಾರತ ವರ್ಷದೊಳಗೆ ಬರುವ ಮೊದಲು ಉತ್ತರ ಭಾರತದಲ್ಲಿ ಸಿಥಿಯನ್ ಜನರ ಪಂಗಡಗಳು ನೆಲಸಿದ್ದವೆಂತಲೂ, ತರುವಾಯ ಬಂದ ಆರ್ಯಜನರು ಅವರನ್ನು ಸೋಲಿಸಿ ಅಧೀನರನ್ನಾಗಿ ಮಾಡಿದರೆಂತಲೂ, ಸಿಥಿಯನ್ ಜನರು ಸಂಖ್ಯೆಯಲ್ಲಿ ಆರ್ಯಜನರಿಗಿಂತ ಅಧಿಕರಾಗಿದ್ದುದರಿಂದ ಅವರು ನಾಶ ಹೊಂದಲಿಲ್ಲವೆಂತಲೂ, ಅವರು ಕೊನೆಗೆ ಆರ್ಯ ಜನರಲ್ಲಿ ವಿಲೀನರಾದರೆಂತಲೂ ಅಂದಿದ್ದರೆ [1] ೬೩ನೆಯ ಪುಟದಲ್ಲಿ ಆರ್ಯಜನರು ಗಂಗಾ ಕಣಿವೆಯಿಂದ ದಕ್ಷಿಣ ದೇಶಗಳಿಗೆ ಅಟ್ಟಿದ ಜನರು ಕೋಲರಾಗಿದ್ದರೆಂತಲೂ ಅಂದಿದ್ದಾರೆ. [2] ಹಾಗೆಯೇ ೭೦ನೆಯ ಪುಟದಲ್ಲಿ ದ್ರಾವಿಡ ಜನರು ಇತಿಹಾಸ ಕಾಲದ ಬಹಳ ಮೊದಲಿನಿಂದ ಭಾರತ ವರ್ಷದಲ್ಲಿ ನೆಲಸಿದ್ದರಾದರೂ ಅವರು ಮೂಲದಲ್ಲಿ ಮಧ್ಯ ಆಸ್ಯದ ನಿವಾಸಿಗಳಾಗಿದ್ದರೆಂತಲೂ, ಅವರು ಅಲ್ಲಿ ನೆಲಸಿದ್ದ ಆರ್ಯ ಜನರ ಮತ್ತು ತುರೇನಿಯನ್ ಜನರ ಸಹವಾಸವನ್ನು ತೊರೆದು ಬಂದವರು ಬಲೂಚಿಸ್ಥಾನದಲ್ಲಿ ತಂಗಿ ಆಲ್ಲಿಂದ ಸಿಂಧೂನದದ ಮೂಲಕ ಭಾರತ

---

[1] It is admitted that before the arrival of the Aryans... the greater part of Northern India was peopled by rude aboriginal tribes...and it is the received opinion that those aboriginal tribes were of Scythian or at least of non Aryan origin .. and as the pre Aryan tribes, who were more numerous than the Aryans, were not annihilated, but only reduced to a dependent position, and eventually, in most instances, incorporated in the Aryan community.

[2] The tribes driven out of the Valley of the Ganges by the Aryans were almost certainly Kols to the south and the semi-Tibetans to the north.

ವರ್ಷವನ್ನು ಪ್ರವೇಶಿಸಿದ್ದರೆಂತಲೂ ಅಂದಿದ್ದಾರೆ. [1] ಮುಂದೆ ೧೦೮ನೆಯ ಮತ್ತು ೧೦೯ನೆಯ ಪುಟಗಳಲ್ಲಿ ದ್ರಾವಿಡ ಜನರನ್ನು ಉತ್ತರ ಭಾರತದಿಂದ ದಕ್ಷಿಣ ಪ್ರದೇಶ ಗಳಿಗೆ ಅಟ್ಟಿದವರು ಆರ್ಯ ಜನರಾಗಿರದೇ ಹೊಸ ಪಂಗಡದ ಸಿಥಿಯನ್ ಜನರಾಗಿದ್ದರೆಂದಿದ್ದಾರೆ. [2] ಪರಂತು ಅವರು ಆ ಗ್ರಂಥದಲ್ಲಿ ಮುಂದೆ ತಂದ ಯೂಪ್ರದೊಂದು ಕಲ್ಪನೆಗೂ ದೃಢವಾದ ಲಿಖಿತ ಪ್ರಮಾಣವಿಲ್ಲವಾದುದರಿಂದಲೂ ಅವರು ಆ ವ್ಯಾಕರಣ ಗ್ರಂಥದ ಪರಿಶಿಷ್ಟ ವಿಭಾಗದಲ್ಲಿ ದ್ರಾವಿಡ ಭಾಷೆಯ ಶಬ್ದಗಳು ಸಿಥಿಯನ್ ಮೂಲದವುಗಳೆಂದು ಉದಹರಿಸಿದ ಎಲ್ಲ ಶಬ್ದಗಳು ಈಗ ಆರ್ಯ ವರ್ಗದವುಗಳೆಂದು ಸಿದ್ಧವಾಗಿರುವುದರಿಂದಲೂ [3] ಡಾಕ್ಟರ್ ಕಾಲ್ಡವೆಲ್

---

[1] From the discovery of these analogies, we are led to conclude that the Dravidian race, though resident in India from a period long prior to the commencement of history, originated in the central tracts of Asia, the seed bed of nations; and that from thence after parting company with the Aryans and Ugro-Turenians, and leaving a colony in Beluchistan, they entered India by way of the Indus.

[2] It is not therefore so improbable as it might at first sight appear that after the Dravidians had been driven across the Vindhyas into the Dekhan, by a newer race of Scythians, this new race, conquered in its turn by the Aryans and reduced to a dependent position, sooner sank beneath the level of the tribes which it had expelled.

[3] As an interesting example both of the true character of language and the linguistic progress made since the publication of Dr. Caldwell's book it may be noted that the learned Doctor gives an appendix containing a considerable number of Dravidian words which, he asserts, to be Scythian, as the most efficient witness to prove the Turenian origin of the language. It is now known that every word in this list is distincty Aryan, although some of them have representatives in the Finnish group of Turenian tongues-the group which has been most constantly exposed to Aryan influences. The greater portion of them are included in Fick's "Indo-Germanioches Grundsprache" as Aryan roots, although Fick does not appear to have seen Dr. Caldwell's book History of Pre-Musalman India-Vol I page-79.

ಅವರು ಕಟ್ಟಿದ ದ್ರಾವಿಡ ಸಿಥಿಕ್ ಉಪಪತ್ತಿಯು ಇಡೀ ಕಟ್ಟಡವು ಕುಸಿದು ಬಿದ್ದಿದೆ. ಹಾಗಾಗಿ ಅವರು ಬಲೂಚಿಸ್ಥಾನದ ಗುಡ್ಡಗಾಡುಗಳಲ್ಲಿ ನೆಲಸಿರುವ ಬ್ರಾಹುಈ ಜನರು ಪ್ರಾಚೀನ ಕಾಲದಲ್ಲಿ ಮಧ್ಯ ಆಸ್ಯದಿಂದ ಭಾರತವರ್ಷಕ್ಕೆ ಬಂದಿದ್ದ ದ್ರಾವಿಡ ಜನರ ಸಂತತಿಯುವವೆಂದು ಮುಂದೆ ತಂದ ಕಲ್ಪನೆಯನ್ನಾಗಲೀ ಸಿಥಿಕ್ ಜನರ ಸಂಬಂಧದಲ್ಲಿ ಉಲ್ಲೇಖಿಸಿದ ಇತರ ಕಲ್ಪನೆಗಳನ್ನಾಗಲೀ ವಾಸ್ತವವೆಂದು ಸ್ವೀಕರಿಸಲು ಸಾಧ್ಯವಿಲ್ಲವಾಗಿದೆ. ಇತಿಹಾಸ ಲೇಖಕ ಶ್ರೀಮಾನ್ ಕೆ. ನೀಲಕಂಠ ಶಾಸ್ತ್ರಿ ಎಮ್. ಏ. ಅವರ ಅಭಿಪ್ರಾಯದಲ್ಲಿ ಬ್ರಾಹುಈ ಜನರು ದಕ್ಷಿಣ ಭಾರತದಿಂದ ಅರ್ವಾಚೀನ ಕಾಲದಲ್ಲಿ ಅಲ್ಲಿಗೆ ವಲಸೆ ಹೋದವರೆಂದಿದೆ.[1] ಮತ್ತು ಅವರ ಅಭಿಪ್ರಾಯವನ್ನು ಸರಿಯೆಂದು ಸ್ವೀಕರಿಸಬಹುದಾಗಿದೆ. ಏಕೆಂದರೆ ಬ್ರಾಹುಈ ಜನರ ಬಲೂಚಿ ಸ್ಥಾನದೊಳಗಿನ ವಸತಿಯು ಡಾ। ಕಾಲ್ಡವೆಲ್ ಅವರು ಕಲ್ಪಿಸಿದಂತೆ ಇತಿಹಾಸಪೂರ್ವಕಾಲದ್ದಾಗಿದ್ದುದಾದರೆ ಅವರ ನುಡಿಯು ಸುತ್ತಮುತ್ತಲಿನ ಆರ್ಯ ಭಾಷೆಗಳ ನಡುವೆ ಇಂದಿನ ತನಕ ಉಳಿದಿರುತ್ತಿರಲಿಲ್ಲ. ಬ್ರಾಹುಈ ಭಾಷೆಯು ಇಂದಿನ ತನಕ ಉಳಿದಿದ್ದು ಅದು ಗೋಂಡೀ ಮತ್ತು ಕನ್ನಡಗಳಿಗೆ ಸಮೀಪವಾಗಿರುವ ಪ್ರಮಾಣವು ಬ್ರಾಹುಈ ಜನರ ಬಲೂಚೀಸ್ಥಾನದ ವಲಸೆಯು ಬಹಳ ಅರ್ವಾಚೀನವಾದುದೆಂದು ಸ್ಪಷ್ಟವಾಗಿ ಸಿದ್ಧಪಡಿಸುತ್ತದೆ, ಅಷ್ಟು ಮಾತ್ರವಲ್ಲದೇ ಉತ್ತರ ಭಾರತದ ಆರ್ಯ ಜನರೊಂದಿಗೆ ಮೊತ್ತಮೊದಲು ಸ್ನೇಹಸಂಬಂಧಗಳನ್ನು ಸ್ಥಾಪಿಸಿದ ದಾಕ್ಷಿಣಾತ್ಯರು ಕನ್ನಡಿಗರಾಗಿದ್ದರೇ ಹೊರತು ಪೂರ್ವಕರಾವಳಿಯ ತಮಿಳರಾಗಿರಲಿಲ್ಲ. ಆದುದರಿಂದ ಮಧ್ಯಪ್ರದೇಶದ ಗೋಂಡರು ಮತ್ತು ಬಲೂಚಿಸ್ಥಾನದ ಬ್ರಾಹುಈಗಳು ಮೂಲದಲ್ಲಿ ಕನ್ನಡಿಗರಾಗಿದ್ದು ಕರ್ನಾಟಕದಿಂದಲೇ ಆ ಪ್ರದೇಶಗಳಿಗೆ ವಲಸೆ ಹೋದವರೆನ್ನಬಹುದು. ಅದೇ ರೀತಿಯಲ್ಲಿ ಕೊಂಕಣ ಕರಾವಳಿಯಿಂದ ಅಥವಾ ಉತ್ತರ ಕನ್ನಡದಿಂದ ಶಕದ ಹತ್ತನೆಯ ಶತಮಾನದಲ್ಲಿ ಸೇನವಂಶದ ಅರಸುಕುಮಾರರೊಂದಿಗೆ ಸೈನಿಕರಾಗಿ ಬಂಗಾಲಕ್ಕೆ ಹೋದ ಕನ್ನಡಿಗರ ಸಂತತಿಯು ಈಗ ಛೋಟಾನಾಗಪುರ ಮೊದಲಾದೆಡೆಗಳಲ್ಲಿ ನೆಲಸಿದ್ದು ಅವರಾಡುವ ನುಡಿಯು ಕುರುಖ್ ಎಂಬ ಹೆಸರನ್ನು ಪಡೆದಿದೆ. ಆದುದರಿಂದ ಬ್ರಾಹುಈ ಭಾಷೆಯ ಶಬ್ದಗಳನ್ನು ಕುರುಖ್, ಗೋಂಡೀ ಮತ್ತು ಕನ್ನಡ ಶಬ್ದಗಳೊದಿಗೆ ತುಲನೆ ಮಾಡಿ ಬ್ರಾಹುಈ ಭಾಷೆಯ ಪ್ರಾಚೀನತೆಯನ್ನು ನಿರ್ಧರಿಸಲು ಸಾಧ್ಯವಿದೆ. ಅರ್ಥಾತ್ ಬ್ರಾಹುಈ ಜನರ ಬಲೂಚೀಸ್ಥಾನದ ವಲಸೆಯ ಸಂಬಂಧದಲ್ಲಿ ನಾವು ಬ್ರಿಟಿಷ್ ವಿದ್ವಾಂಸರ ಪ್ರಮಾಣರಹಿತ ಕಲ್ಪನೆಗಳನ್ನು ಅವಲಂಬಿಸಬೇಕಾಗಿಲ್ಲ.

---

[1] In the other case, the Brahui language which presents resemblances to Kannada and Gondi must be looked upon as the relic of relatively later migration. History of India page 8.

ಇನ್ನು ಪೂರ್ವಭಾರತದಲ್ಲಿ ನೆಲಸಿದ್ದ ಶಕಜನರ ಶಾರೀರಿಕ ಆಕಾರಗಳು ಪಶ್ಚಿಮಭಾರತದ ಆರ್ಯಜನರ ಆಕಾರಗಳಿಂದ ಭಿನ್ನವಾಗಿವೆಯೆಂಬ ಒಂದೇ ಕಾರಣದಿಂದ ಶಕಜನರನ್ನು ಆರ್ಯರಿಂದ ಭಿನ್ನರು—ಎನ್ನುವುದು ಎಷ್ಟು ಮಾತ್ರಕ್ಕೂ ಸರಿಯಾಗದು. ಏಕೆಂದರೆ ಒಂದೇ ಮೂಲದ ಜನರು ಬಹುಕಾಲದ ತನಕ ಭಿನ್ನ ಭಿನ್ನ ಭೌಗೋಲಿಕ ಹಾಗೂ ಪ್ರಾಕೃತಿಕ ಪರಿಸ್ಥಿತಿಗಳ ಪ್ರದೇಶಗಳಲ್ಲಿ ನೆಲಸಿದರೆಂದಾದರೆ ಕಾಲಕ್ರಮೇಣ ಅವರ ಮೋರೆಯ ಆಕೃತಿಯಲ್ಲಿ ಕಪಾಲದ ಗಾತ್ರದಲ್ಲಿ, ಕಣ್ಣು, ಕೂದಲು ಮೊದಲಾದುವುಗಳಲ್ಲಿ ಭೇದ ಹುಟ್ಟುವುದು ಪ್ರಾಕೃತಿಕ ನಿಯಮವಾಗಿದೆ. ಆದುದರಿಂದ ಮೋರೆಯ ಆಕೃತಿಯ ಮೇಲಿಂದ ಮತ್ತು ಕಪಾಲಗಳ ಗಾತ್ರದ ಮೇಲಿಂದ ಇಲ್ಲವೇ ಅವಯವಗಳ ಮೇಲಿಂದ ಜನರ ವರ್ಗವನ್ನು ನಿರ್ಧರಿಸುವುದು ಸಾಧುವೆನ್ನಲಾಗದು. ಬಹುತರವಾಗಿ ಪೂರ್ವಭಾರತದಲ್ಲಿ ನೆಲಸಿದ ಶಕಜನರು ಭಾರತವರ್ಷವನ್ನು ಪ್ರವೇಶಿಸುವ ಮೊದಲು ಬಹಳ ಕಾಲದ ತನಕ ಮಂಗೋಲಿಯದ ಸಮೀಪದಲ್ಲಿ ನೆಲಸಿದ್ದಿರಬಹುದು. ಮತ್ತು ಅಲ್ಲಿಂದ ಹೊರಟವರು ಚೀನದ ಹಾಗೂ ತಿಬ್ಬತದ ಹಾದಿಯಾಗಿ ಮೆಲ್ಲ ಮೆಲ್ಲನೆ ಮುಂದುವರಿದು ಭಾರತವರ್ಷವನ್ನು ಪ್ರವೇಶಿಸಿ ಮಗಧದಲ್ಲಿ ನೆಲಸಿರಬಹುದು. ಒಂದು ವಿಷಯವು ಮಾತ್ರ ಅತ್ಯಂತ ಸ್ಪಷ್ಟವಿದೆ—ಅದೆಂದರೆ ಉತ್ತರ ಭಾರತದ ಪಶ್ಚಿಮ ಪ್ರದೇಶದಿಂದ ಪೂರ್ವಪ್ರದೇಶಕ್ಕೆ ಸಾಗಿದಂತೆ ಹಾಗೂ ಈಶಾನ್ಯಕ್ಕೆ ಮುಂದುವರಿದಂತೆ ಜನರ ಮೋರೆಯ ಆಕೃತಿಯು ಉದ್ದವಿದ್ದುದು ಗಿಡ್ಡವಾಗುತ್ತ ಸಾಗುತ್ತದೆಂಬುದಾಗಿದೆ.

ಹಿಂದಿನ ವಿವರಗಳಿಂದ ಬ್ರಿಟಿಷ್ ವಿದ್ವಾಂಸರು ಶಕಜನರ ಭಾರತ ಪ್ರವೇಶದ ಸಂಬಂಧದಲ್ಲಿ ನಿರ್ಧರಿಸಿದ ಕಾಲಮಾನವು ಸರ್ವಥಾ ಸರಿಯಾದುದಲ್ಲವೆಂದು ಸಿದ್ಧವಾಗುವುದರಿಂದ ಅವರು ಇತರ ಆರ್ಯಪಂಗಡಗಳ ಭಾರತ ಪ್ರವೇಶದ ಸಂಬಂಧದಲ್ಲಿ ನಿರ್ಧರಿಸಿದ ಕಾಲಮಾನಗಳು ಕೂಡ ಸರಿಯಲ್ಲವೆಂದು ತಾನಾಗಿ ಸಿದ್ಧವಾಗುತ್ತದೆ. ಹಾಗಾಗಿ ಅವುಗಳಿಗನುಸಾರವಾಗಿ ಹಲವು ಕಾಲಮಾನಗಳು ಪರಿವರ್ತನ ಹೊಂದಬೇಕಾಗುತ್ತವೆ. ಅಂದರೆ ಬ್ರಿಟಿಷ್ ವಿದ್ವಾಂಸರು ಸಿಂಧೂ ಕಣಿವೆಯ ಅಗೆತಗಳಲ್ಲಿ ಬೆಳಕಿಗೆ ಬಂದಿರುವ ಪ್ರಾಚೀನ ಅವಶೇಷಗಳ ಸಂಸ್ಕೃತಿಯು ಆರ್ಯಜನರಿಗೆ ಸೇರಿದವುಗಳಲ್ಲವೆಂದು ಎಷ್ಟು ಗಟ್ಟಿಯಾಗಿ ವಾದಿಸಿದರೂ, ಆ ಸಂಸ್ಕೃತಿಯು ಆರ್ಯಜನರ ವೈದಿಕ ಧರ್ಮಕ್ಕೆ ಸೇರಿದುದೆಂದು ಸಿದ್ಧಪಡಿಸುವ ಹಲವು ಸ್ಪಷ್ಟಪ್ರಮಾಣಗಳಿರುವುದರಿಂದ ಆರ್ಯಜನರ ಮೊತ್ತಮೊದಲಿನ ತಂಡವು ಭಾರತವರ್ಷದೊಳಗೆ ಬಂದ ಕಾಲವು ಸಿಂಧೂಪಟ್ಟಣಗಳ ನಿರ್ಮಾಣ ಕಾಲಕ್ಕಿಂತ ಬಹಳ ಮೊದಲೆಂದು ತಾನಾಗಿ ಸಿದ್ಧವಾಗುತ್ತದೆ. ಅರ್ಥಾತ್ ಆರ್ಯಜನರು ಎಷ್ಟು ಕಡಿಮೆಯೆಂದರೂ ಶಕಪೂರ್ವ ೩೨೦೦ ವರ್ಷಗಳ ಮೊದಲೇ ಭಾರತವರ್ಷವನ್ನು ಪ್ರವೇಶಿಸಿ ಅಲ್ಲಿ ನೆಲಸಿದ್ದರೆಂದು ಹೇಳಬೇಕಾಗುತ್ತದೆ.

ಸಿಂಧೂ ಕಣಿವೆಯ ಅಗೆತಗಳಲ್ಲಿ ದೊರಕಿದ ಹಾಲುಗಲ್ಲಿನ ಬಿಲ್ಲೆಗಳ ಮೇಲೆ + 卐 卍 ಈ ಮೂರು ಚಿಹ್ನೆಗಳಿವೆಯೆಂದು ಹಿಂದೆ ಹೇಳಿದೆಯಲ್ಲದೇ ಅವುಗಳು ಆರ್ಯಜನರಿಗೆ ಸೇರಿದವುಗಳೆಂದು ಪ್ರಮಾಣ ಸಹಿತವಾಗಿ ಸಿದ್ಧಪಡಿಸಿದೆ. ಸಿಂಧೂ ಬಿಲ್ಲೆಗಳ ಮೇಲೆ ಆ ಮೂರು ಆಕೃತಿಗಳು ಮಾತ್ರವಲ್ಲದೇ ಬಿಲ್ಲೆಗಳ ಮೇಲಿರುವ ಬರಹದ ಸಾಲುಗಳಲ್ಲಿ ○ □ D △ ⋈ ಇಂಥ ಆಕೃತಿಗಳು ಕೂಡ ಇವೆ. ಅವುಗಳು ಆರ್ಯಜನರು ಜರುಗಿಸುತಿದ್ದ ಕಾಮ್ಯೇಷ್ಟಿಗಳ ಚಿತಿಗಳ ಆಕೃತಿಗಳಾಗಿವೆ. ಮತ್ತು ಅವುಗಳ ಉಲ್ಲೇಖವು ಯಜುರ್ವೇದದ ತೈತ್ತಿರೀಯ ಸಂಹಿತೆಯಲ್ಲಿ, ಶತಪಥ ಬ್ರಾಹ್ಮಣದಲ್ಲಿ ಮತ್ತು ಕಾತ್ಯಾಯನ ಮೊದಲಾದ ಹಲವು ಶ್ರೌತಸೂತ್ರಗಳಲ್ಲಿ ಹಾಗೂ ಶುಲ್ಬಸೂತ್ರಗಳಲ್ಲಿ ಬಂದಿದೆ. ಅಷ್ಟೇ ಅಲ್ಲ ಆ ಎಲ್ಲ ಆಕೃತಿಗಳು ಬ್ರಾಹ್ಮೀವರ್ಣಮಾಲೆಯಲ್ಲಿವೆ. ಆದುದರಿಂದ ಸಿಂಧೂ ಬಿಲ್ಲೆಗಳ ಮೇಲಿನ ಬರಹದ ಸಾಲುಗಳಲ್ಲಿರುವ ಆಕೃತಿಗಳಿಗೂ, ಆರ್ಯಜನರ ಯಜ್ಞಚಿತಿಗಳಿಗೂ ಬ್ರಾಹ್ಮೀವರ್ಣಮಾಲೆಗೂ ನೇರವಾದ ಸಂಬಂಧವಿದೆಯೆಂದು ಸಂದೇಹಕ್ಕೆಡೆಯಿಲ್ಲದಂತೆ ಸಿದ್ಧವಾಗುತ್ತದೆ.

ಸಿಂಧೂಬಿಲ್ಲೆಗಳ ಮೇಲಿನ ಬರಹದ ಸಾಲುಗಳಲ್ಲಿರುವ ಕೆಲವು ಆಕೃತಿಗಳ ಉಲ್ಲೇಖವು ಹಿಂದೆ ಹೇಳಿದ ವೈದಿಕ ಗ್ರಂಥಗಳಲ್ಲಿ ಮತ್ತು ಬ್ರಾಹ್ಮೀವರ್ಣಮಾಲೆಯಲ್ಲಿರುವಂತೆಯೇ, ಸಿಂಧೂ ಬಿಲ್ಲೆಗಳ ಮೇಲಿನ ಚಿತ್ರಸಂಕೇತಗಳ ವರ್ಣನೆಯೂ ವೇದಮಂತ್ರಗಳಲ್ಲಿವೆ. ಹಾಗೆಯೇ ಸಿಂಧೂ ಕಣಿವೆಯ ಅಗೆತಗಳಲ್ಲಿ ಬೆಳಕಿಗೆ ಬಂದಿರುವ ಮನೆಗಳಲ್ಲಿ ಮಂಡಲಾಕಾರದ ○ ಗಾರ್ಹಪತ್ಯಾಗ್ನಿಯ ಚಿತಿಯೂ, ಆಯತಾಕಾರದ ▭ ದರ್ಶಪೂರ್ಣಮಾಸೇಷ್ಟಿಯ ಚಿತಿಯೂ ಕಂಡುಬಂದಿದೆ. ಕೆಲವು ಮನೆಗಳ ಅಂಗಳದಲ್ಲಿ ರಥದ ಚಕ್ರದಂತಿರುವ–ಸಾಲಿಗೆ ಆರರಂತೆ ಹದಿನೆರಡು ಚಿತಿಗಳು ಕಂಡು ಬಂದಿದ್ದು ಅವುಗಳಲ್ಲಿ ಯಜ್ಞಗಳನ್ನು ಜರಗಿಸಿದುದರ ಪ್ರಮಾಣವಾಗಿ ಅವುಗಳ ಒಳಗಡೆಯ ಹೊಂಡದಲ್ಲಿ ಪಶುಗಳ ಎಲುಬುಗಳೂ ಸುಟ್ಟ ಗೋದಿಯ ಮತ್ತು ಜವೆಗೋದಿಯ ಕಾಳುಗಳೂ ದೊರಕಿವೆ. ಆ ಎಲ್ಲ ಪ್ರಮಾಣಗಳು ಸಿಂಧೂಸಂಸ್ಕೃತಿಯು ಆರ್ಯಜನರಿಗೆ ಸೇರಿದುದೆಂದು ಸಂದೇಹಕ್ಕೆಡೆಯಿಲ್ಲದಂತೆ ಸಿದ್ಧಪಡಿಸುತ್ತವೆ. ಆದರೆ ಸಿಂಧೂಸಂಸ್ಕೃತಿಯು ಆರ್ಯರದಲ್ಲವೆಂದು ವಾದಿಸಿದ ಸರ್ ಜಾನ್ ಮಾರ್ಶಲ್ ಮತ್ತು ಸರ್ ಮಾರ್ಟಿಮರ್ ವ್ಹೀಲರ್ ಎಂಬ ಇಬ್ಬರು ಬ್ರಿಟಿಷ್ ವಿದ್ವಾಂಸರೂ ಅಲ್ಲಿ ಯಜ್ಞಚಿತಿಗಳು ಕಂಡುಬಂದುದನ್ನು ಮರೆಮಾಜಿದ್ದಾರಲ್ಲದೇ – ಯಜ್ಞಚಿತಿಗಳು ಕಂಡುಬಂದಿಲ್ಲವೆಂದು ನುಡಿದಿದ್ದಾರೆ. ಅದರ ಸಂಪೂರ್ಣ ವಿವರಗಳು ಮುಂದಿನ ಅಧ್ಯಾಯಗಳಲ್ಲಿ ಬರುವುವು.

ಆರ್ಯಜನರ ತಂಡಗಳು ಯಾವ ರೀತಿಯಿಂದ ಭಾರತವರ್ಷದೊಳಗೆ

ಪ್ರವೇಶಿಸಿದುವು ಎಂಬುದನ್ನು ಸ್ಪಷ್ಟವಾಗಿ ಸೂಚಿಸುವ ಯಾವುದೊಂದು ಲಿಖಿತ ಪ್ರಮಾಣವು ಇಂದಿನ ತನಕ ದೊರೆತಿಲ್ಲ. ಅಂದರೆ ಬ್ರಿಟಿಷ್ ವಿದ್ವಾಂಸರು ಕಲ್ಪಿಸಿ ಹೇಳಿರುವಂತೆ –ಆರ್ಯಜನರ ತಂಡಗಳು ಭಾರತವರ್ಷದ ಮೂಲ ನಿವಾಸಿಗಳೊಡನೆ ಕಾದಾಡುತ್ತ ಅವರು ನೆಲಸಿದ್ದ ಪ್ರದೇಶಗಳನ್ನು ಕಸಿದುಕೊಂಡು ಅಲ್ಲಿ ನೆಲಸಿದ್ದ ರೆಂಬುದಕ್ಕಾಗಲೀ, ಆರ್ಯಜನರು ಭಾರತವರ್ಷದ ಮೂಲನಿವಾಸಿಗಳನ್ನು, ಇಲ್ಲವೇ ತಾವು ಸೋಲಿಸಿದ ಜನರನ್ನು ದಾಸ ಮತ್ತು ದಸ್ಯು ಎನ್ನುತಿದ್ದರೆಂಬುದಕ್ಕಾಗಲೀ ಯಾವುದೊಂದು ಪ್ರಾಚೀನ ಪ್ರಮಾಣವೂ ಇಲ್ಲ. ಅರ್ಥಾತ್ ಋಗ್ವೇದದಲ್ಲಿ ದಾಸ, ದಸ್ಯು, ಮೊದಲಾದ ಶಬ್ದಗಳ ಉಲ್ಲೇಖವಿದೆಯೆಂಬ ಒಂದೇ ಕಾರಣದಿಂದ, ಆರ್ಯಜನರು ಆ ಶಬ್ದಗಳನ್ನು ಭಾರತವರ್ಷದ ಮೂಲನಿವಾಸಿಗಳಿಗಾಗಿ ಬಳಸು ತಿದ್ದರೆನ್ನಲಾಗುವುದಿಲ್ಲ. ಏಕೆಂದರೆ ಋಗ್ವೇದದಲ್ಲಿ ಆರ್ಯಜನರು ದಸ್ಯುಗಳೊಡನೆ ಕಾದಾಡಿದ್ದರೆಂದು ಸೂಚಿಸುವ ಒಂದೇ ಒಂದು ಉಲ್ಲೇಖವಾದರೂ ಇಲ್ಲ. ಪ್ರತಿ ಯಾಗಿ ಅಗ್ನಿಯು, ಇಂದ್ರನು ಅಲ್ಲದಿದ್ದರೆ ಸೂರ್ಯನು ದಸ್ಯುಗಳನ್ನು ಕೊಂದನು ಎಂಬ ಸ್ಪಷ್ಟ ಉಲ್ಲೇಖಗಳಿವೆ. ಆದುದರಿಂದ ಋಗ್ವೇದದಲ್ಲಿ ದಸ್ಯು, ದಾಸ ಮೊದಲಾದ ಶಬ್ದಗಳು ಸಂಕೇತಾರ್ಥದಲ್ಲಿ ಅಂದರೆ ರಾತ್ರಿ ಕಾಲದಲ್ಲಿ ಕಾಣಿಸುತಿದ್ದ ನಕ್ಷತ್ರ ಪುಂಜಗಳಿಗಾಗಿ ಪ್ರಯೋಗಿಸಲ್ಪಟ್ಟವೆಯೆಂದು ಹೇಳಬೇಕಾಗುತ್ತದೆ.[1] ಅಗ್ನಿಯು ದಸ್ಯುಗಳನ್ನು ಕೊಂದನೆಂಬ ಉಲ್ಲೇಖವಿರುವ ಮಂತ್ರವು ಮುಂದಿನಂತಿದೆ–

ಅಗ್ನಿರ್ಜಾತೋ ಅರೋಚತ ಘ್ನನ್ ದಸ್ಯೂಞ್ ಜ್ಯೋತಿಷಾ ತಮಃ ।
ಅವಿಂದದ್ ಗಾ ಅಪಃ ಸ್ವಃ ॥ ಋ. ೫–೧೪–೪ ॥

ಅರ್ಥ – ಅಗ್ನಿಯು ಹುಟ್ಟಿದವನೇ ಬೆಳಗಿದನು. ಮತ್ತು ತನ್ನ ಪ್ರಕಾಶ ದಿಂದ ದಸ್ಯುಗಳನ್ನು ಮತ್ತು ಕತ್ತಲೆಯನ್ನು ನಾಶಮಾಡಿದನು. ತರುವಾಯ ಗೋವುಗಳನ್ನು, ದಿವ್ಯ ಜಲಗಳನ್ನು ಮತ್ತು ಸೂರ್ಯನನ್ನು ಪಡೆದನು,

---

1 European scholars appear to have been misled, in this instance by the words Arya and Dasa, which they are accustomed to interprete as meaning the Aryan and non-Aryan race. But though the words may be interpreted in this way in some passages, such is not the case everywhere. The word Dasa is applied to Indra's enemies in a number of places. Thus Sambara is called Dasa (IV-30-14) and the same adjective is applied to Pipru in VIII-32-2. and to Namuchi in V-30-7. Indra is said to inspire fear into Dasa in X, 120, 2 and in II, 11, 2. he is described as having rent the Dasa, who considered himself immortal.

Arctic Home in the Vedas— Pages 142 — 143.

ಮುಂದಿನ ಮಂತ್ರದಲ್ಲಿ ಇಂದ್ರನು ದ್ಯುಲೋಕಕ್ಕೇರುತ್ತಿರುವ ದಸ್ಯುಗಳನ್ನು ಮರಳಿ ಕೆಳಕ್ಕೆ ತಳ್ಳಿದನೆಂದು ಹೇಳಿದೆ:—

ಮಾಯಾಭಿರುತ್ಸಿಸೃಪ್ಸತ ಇಂದ್ರ ದ್ಯಾಮಾರುರುಕ್ಷತಃ ।
ಅವ ದಸ್ಯೂಂ ರಧೂನುಥಾಃ ॥ ಋ. ೮–೧೪–೧೪ ।

ಅರ್ಥ – ಹೇ ಇಂದ್ರನೇ ನೀನು ತಮ್ಮ ಮಾಯೆಗಳಿಂದ ಮೇಲಕ್ಕೆ ಸರಿಯುತ್ತ ದ್ಯುಲೋಕಕ್ಕೇರಲು ಹವಣಿಸುತಿದ್ದ ದಸ್ಯುಗಳನ್ನು ಕೆಳಕ್ಕೆ ತಳ್ಳಿದೆ.

ಮುಂದಿನ ಮಂತ್ರದಲ್ಲಿ ಸೂರ್ಯನು ದಸ್ಯುಗಳನ್ನು ಸಂಪೂರ್ಣವಾಗಿ ಇಲ್ಲದಂತೆ ಮಾಡುವ ಪ್ರಕಾಶವನ್ನು ಹುಟ್ಟಿಸಿದನೆಂದು ಹೇಳಿದೆ—

ವಿಭ್ರಾಡ್, ಬೃಹತ್ ಸುಭೃತಂ ವಾಜಸಾತಮಂ
ಧರ್ಮನ್ ದಿವೋ ಧರುಣೇ ಸತ್ಯಮ್ ಅರ್ಪಿತಮ್ ।
ಅಮಿತ್ರಹಾ, ವೃತ್ರಹಾ, ದಸ್ಯುಹಂತಮಂ ।
ಜ್ಯೋತಿ ರ್ಜಜ್ಞೇ ಅಸುರಹಾ, ಸಪತ್ನಹಾ ॥ ಋ. ೧೦–೧೭೦–೨॥

ಅರ್ಥ – ವೈರಿಗಳನ್ನು, ವೃತ್ರನನ್ನು, ಅಸುರರನ್ನು ಮತ್ತು ದ್ವೇಷಿಗಳನ್ನು ಕೊಲ್ಲುವಂಥ ಸೂರ್ಯನು ಬಹಳ ದೊಡ್ಡ ಹಾಗೂ ಬಹಳ ಬೆಳಗುವಂಥ, ದ್ಯುಲೋಕದ ತಳದಲ್ಲಿ ಚೆಲೋ ರೀತಿಯಲ್ಲಿ ಭರಿಸಲ್ಪಟ್ಟಂಥ, ಧರ್ಮ ಹಾಗೂ ಸತ್ಯರೂಪದಿಂದ ನೆಲೆಯಾದಂಥ, ಯುದ್ಧದಲ್ಲಿ ನಿಶ್ಚಯವಾಗಿ ಗೆಲ್ಲುವಂಥ ಹಾಗೂ ದಸ್ಯುಗಳನ್ನು ಸಂಪೂರ್ಣವಾಗಿ ಇಲ್ಲದಂತೆ ಮಾಡುವಂಥ ಜ್ಯೋತಿಯನ್ನು ಹುಟ್ಟಿಸಿದನು.

ಅಗ್ನಿಯು ಮತ್ತು ಇಂದ್ರನು ದಸ್ಯುಗಳನ್ನು ಕೊಂದರೆಂಬ ಬೇರೆ ಹಲವು ಉಲ್ಲೇಖಗಳು ಋಗ್ವೇದದಲ್ಲಿವೆ, ಹೇಗಿದ್ದರೂ ಹಿಂದಿನ ಮೂರು ಉದಾಹರಣೆಗಳಲ್ಲಿ ದಸ್ಯು ಎಂಬ ಶಬ್ದವು ಮನುಷ್ಯರಿಗಾಗಿ ಉಪಯೋಗಿಸಲ್ಪಟ್ಟಿಲ್ಲವೆಂಬುದು ಸ್ಪಷ್ಟವಾಗಿ ಗೊತ್ತಾಗುತ್ತದೆ. ಅದೇ ರೀತಿಯಲ್ಲಿ ಋಗ್ವೇದದ ಬೇರೆ ಅನೇಕ ಮಂತ್ರಗಳಲ್ಲಿ ಇಂದ್ರನು ದಾಸರನ್ನು ಮತ್ತು ಆರ್ಯರನ್ನು ಕೊಂದನೆಂದು[1] ಹೇಳಿದೆಯಲ್ಲದೇ ಕೆಲವು ಮಂತ್ರಗಳಲ್ಲಿ ದಾಸ ಮತ್ತು ಆರ್ಯ ಶಬ್ದಗಳು ನಪುಂಸಕ ಲಿಂಗದಲ್ಲಿ ಪ್ರಯೋಗಿಸಿದ ಉದಾಹರಣೆಗಳೂ ಇವೆ.[2] ಅರ್ಥಾತ್ ಅಂಥ

---

[1] ತ್ವಂತಾಂ ಇಂದ್ರೋಭಯಾಂ ಅಮಿತ್ರಾನ್ ದಾಸಾವೃತ್ರಾಣ್ಯಾರ್ಯಾಚ ಶೂರ ।
ವಧೀರ್ವನೇವ ಸುಧಿತೆಭಿರತ್ಕೈರಾಪತ್ಸುದರ್ಷಿ ನೃಣಾಂ ನೃತಮ ॥ ೬-೩೩-೩ ॥

[2] ಹತೋ ವೃತ್ರಾಣ್ಯಾರ್ಯಾ ಹತೋ ದಾಸಾನಿ ಸತ್ಪತೀ ।
ಹತೋ ವಿಶ್ವಾ ಅಪ ದ್ವಿಷಃ ॥ ೬ ೬೦ ೬ ॥

ಯುವಾ ನರಾಪಶ್ಯಮಾನಾಸ ಆಪ್ಯಂ ಪ್ರಾಚಾಗವ್ಯಂತಃ ಪೃಥು ಪರ್ಶವೋ ಯಯುಃ ॥
ದಾಸಾಚ ವೃತ್ರಾ ಹತಮಾರ್ಯಾಣಿ ಚ ಸುದಾಸಮಿಂದ್ರಾವರುಣಾ ವಸಾವತಮ್ ।-೮-೮೩-೧ ॥

ಸಂದರ್ಭಗಳಲ್ಲಿ ಆ ಶಬ್ದಗಳು ಮನುಷ್ಯರಿಗಾಗಿ ಪ್ರಯೋಗಿಸಲ್ಪಟ್ಟಿಲ್ಲವೆಂಬುದು ಅತ್ಯಂತ ಸ್ಪಷ್ಟವಿದೆ.

ತಾತ್ಪರ್ಯವೇನೆಂದರೆ ಆರ್ಯಜನರು ಭಾರತವರ್ಷದ ಮೂಲನಿವಾಸಿಗಳೊಂದಿಗೆ ಕಾದಾಡುತ್ತ ಭಾರತವರ್ಷದೊಳಗೆ ನುಗ್ಗಿದರು ಅಥವಾ ಆರ್ಯರು ಭಾರತವರ್ಷದ ಮೇಲೆ ಸೈನಿಕ ಆಕ್ರಮಣವನ್ನೆಸಗಿದರು ಎಂಬ ಪಾಶ್ಚಾತ್ಯ ವಿದ್ವಾಂಸರ ಕಲ್ಪನೆಯನ್ನು ಸಮರ್ಥಿಸುವಂಥ ಯಾವುದೊಂದು ಪ್ರಮಾಣವೂ ವೈದಿಕ ಸಾಹಿತ್ಯದಲ್ಲಿ ಇಲ್ಲ. ಹಾಗೆಯೇ ಆರ್ಯಜನರು ಭಾರತವರ್ಷವನ್ನು ಪ್ರವೇಶಿಸುವ ಕಾಲದಲ್ಲಿ ಉತ್ತರ ಭಾರತದ ಪಶ್ಚಿಮ ಭಾಗದಲ್ಲಿ ಮತ್ತು ವಾಯವ್ಯ ಪ್ರದೇಶದಲ್ಲಿ ಈಗಿನಂತೆ ಜನವಸತಿಯಿದ್ದಿತೆಂಬುವದಕ್ಕಾಗಲೀ ಉತ್ತರ ಭಾರತದಲ್ಲಿ ಈಗಿನಂತೆ ನಿಬಿಡವಾದ ಜನವಸತಿಯಿದ್ದಿತೆಂಬದಕ್ಕಾಗಲೀ ಯಾವುದೊಂದು ಪ್ರಮಾಣವೂ ಇಲ್ಲ. ಆದುದರಿಂದ ಈಗಿನ ಜನವಸತಿಯ ಆಧಾರದಿಂದ ಮತ್ತು ಪಾಶ್ಚಾತ್ಯರ ಆಕ್ರಾಮಕ ದೃಷ್ಟಿಕೋನದಿಂದ ಹಿಂದಿನ ಕಾಲದ ಇತಿಹಾಸವನ್ನು ಊಹಿಸುವುದು ಇಲ್ಲವೇ ನಿರ್ಧರಿಸುವುದು ಸರ್ವಥಾ ಸರಿಯಾಗದು, ಏಕೆಂದರೆ ಆರ್ಯಜನರು ಭಾರತವರ್ಷವನ್ನು ಪ್ರವೇಶಿಸುವ ಕಾಲದಲ್ಲಿ ಉತ್ತರ ಭಾರತದ ಪಶ್ಚಿಮ ಭಾಗದಲ್ಲಿ ಮತ್ತು ವಾಯವ್ಯ ಪ್ರಾಂತದಲ್ಲಿ ಜನವಸತಿ ಇರಲಾರದು. ಇದ್ದಿತೆಂದು ಗ್ರಹಿಸಿದರೂ, ಈಗಿನಂತೆ ನಿಬಿಡವಾಗಿರದೇ ವಿರಳ ವಿರಳವಾಗಿರಬಹುದು. ಮತ್ತು ಬಂಜರುಪ್ರದೇಶವು ಬಹಳ ವಿಶಾಲವಾಗಿರಬಹುದು. ಹಾಗಾಗಿ ಅಲ್ಲಿನ ಮೂಲನಿವಾಸಿಗಳು ಹೊಸ ವಲಸೆಗಾರರನ್ನು ವಿರೋಧಿಸದೇ ಇದ್ದಿರಬಹುದು. ಬಹುತರವಾಗಿ ಆರ್ಯಜನರು ದೊಡ್ಡ ದೊಡ್ಡ ಹಿಂಡುಗಳಾಗಿ ಭಾರತವರ್ಷವನ್ನು ಪ್ರವೇಶಿಸುವ ಮೊದಲು ಪರೀಕ್ಷಾರ್ಥವಾಗಿ ಒಬ್ಬಿಬ್ಬರು ಅಲ್ಲಿಗೆ ಬಂದು ಅಲ್ಲಿನ ಮೂಲನಿವಾಸಿಗಳೊಂದಿಗೆ ಪರಿಚಯ ಬೆಳೆಸಿ ಹಾಗೂ ಅವರ ಮನೋಭಾವವನ್ನು ಸರಿಯಾಗಿ ಅರಿತುಕೊಂಡ ತರುವಾಯ ವಾಸಯೋಗ್ಯವಾದ ಬಂಜರುಪ್ರದೇಶವನ್ನು ಗುರುತಿಸಿ ಯಾವ ಬಗೆಯ ಕಾದಾಟವೂ ಇಲ್ಲದೇ ಸಾಮೂಹಿಕವಾಗಿ ಭಾರತವರ್ಷದೊಳಗೆ ಬಂದು ನೆಲಸಿರಬಹುದು. ಅರ್ಥಾತ್ ಆರ್ಯಜನರ ಭಾರತವರ್ಷಪ್ರವೇಶವು ಶಾಂತರೀತಿಯ ಹಾಗೂ ಸ್ನೇಹಪೂರ್ಣವಾದ ವಲಸೆಯಾಗಿರಬಹುದೇ ಹೊರತು ಸೈನಿಕ ಆಕ್ರಮಣವಾಗಿರಲಾರದು. ಮತ್ತು ಸೈನಿಕ ಆಕ್ರಮಣವಾಗಿದ್ದಿತೆನ್ನಲು ಆಧಾರವೂ ಸಾಲದು, ಅಲ್ಲದೇ ಆರ್ಯಜನರ ಭಾರತವರ್ಷ ಪ್ರವೇಶವು ಶಾಂತರೀತಿಯ ವಲಸೆಯಾಗಿದ್ದಿತೆನ್ನಲು ಒಂದು ಬೆಲೆಯ ಪ್ರಮಾಣವೂ ಇದೆ. ಅಂದರೆ ಅಶ್ವಲಾಯನ ಶ್ರೌತಸೂತ್ರಗಳಲ್ಲಿ ಹೇಳಿರುವ ಸಾರಸ್ವತಯಜ್ಞದ ನಿರ್ವಹಣಕ್ರಮವು ಅಂಥ ಒಂದು ಪ್ರಮಾಣವನ್ನು ಒದಗಿಸುತ್ತದೆ. ಸಾರಸ್ವತಯಜ್ಞವು ದಿನಕ್ಕೊಂದು ಮಜಲಿನಂತೆ ಮುಂದೆ ಸಾಗುತ್ತ ಜರಗಿಸುವ ಯಜ್ಞವಾಗಿದೆ. ಹಾಗಾಗಿ ಕಾತ್ಯಾಯನ ಶ್ರೌತಸೂತ್ರಗಳಲ್ಲಿ – **«ಯಾತ್ ಸತ್ರಾಣಿ ಸಾರಸ್ವತಾನಿ"**

ಅಂದರೆ– "ಮುಂದೆ ಸಾಗುತ್ತ ಸಾಗುತ್ತ ಜರಗಿಸಲ್ಪಡುವ ಸತ್ರಗಳೇ ಸಾರಸ್ವತಗಳು" ಅಂದಿವೆ. ಅರ್ಥಾತ್ ಆಶ್ವಲಾಯನ ಶ್ರೌತಸೂತ್ರಗಳಲ್ಲಿ ಉಲ್ಲೇಖಿಸಲ್ಪಟ್ಟಿರುವ ವಿವರಗಳು ಅಫಗಾನಿಸ್ಥಾನದಲ್ಲಿ ನೆಲಸಿದ್ದ ಆರ್ಯಜನರು ಸರಸ್ವತೀ ನದಿಯ ದಕ್ಷಿಣ ತೀರದಲ್ಲಿ ಸಾರಸ್ವತ ಯಜ್ಞವನ್ನು ಜರಗಿಸುತ್ತ ಪೂರ್ವಾಭಿಮುಖರಾಗಿ ಮುಂದು ವರಿದುದನ್ನು ಸೂಚಿಸುತ್ತವೆ. ದಕ್ಷಿಣ ಅಫಗಾನಿಸ್ಥಾನದ ಕಂದಹಾರದಲ್ಲಿ ಪೂರ್ವದಿಂದ ಪಶ್ಚಿಮಕ್ಕೆ ಹರಿದು ಹೇಲಮಂದ್ ನದಿಯನ್ನು ಕೂಡಿ ಕೊನೆಗೊಂಡ ನದಿಯ ಪ್ರಾಚೀನ ಹೆಸರು ಸರಸ್ವತೀ ಎಂದಿತ್ತು. ಮತ್ತು ಸರಸ್ವತೀ ನದಿಯ ತೀರ ದಲ್ಲಿ ವಲಸೆ ಹೋಗುವ ಸಲುವಾಗಿ ಜರುಗಿಸಲಾಗುತಿದ್ದ ಯಜ್ಞದ ಹೆಸರು ಸಾರ ಸ್ವತ ಎಂದಿತ್ತು. ಅಶ್ವಲಾಯನ ಶ್ರೌತ ಸೂತ್ರಗಳಲ್ಲಿ ಸಾರಸ್ವತ ಯಜ್ಞದ ವಿವರ ಗಳು ಮುಂದಿನಂತಿವೆ.

'ಅಥ ಸಾರಸ್ವತಾ ನಿಸರಸ್ವತ್ಯಾ: ಪಶ್ಚಿಮ ಉದಕಾಂತೇ ದೀಕ್ಷೆರಂಸ್ತತ್ರೈವ ದೀಕ್ಷೋಪಸದಃ ಕೃತ್ವಾ ಪ್ರಾಯಣೀಯಂ ಚ ಸರಸ್ವತೀಂ ದಕ್ಷಿಣೇನ ತೀರೇಣ ಶಮ್ಯಾಪ್ರಾಸೇ ಶಮ್ಯಾಪ್ರಾಸೇಽಹರಹರ್ಯಜಮಾನಾ ಅನುವ್ರಜೇಯುಃ ಸಂಹಾ ರ್ಯ ಉಲೂಖಲಬುಧ್ನೋ ಯೂಪಶ್ಚಕ್ರೀವಂತಿಸದೋ ಹವಿರ್ಧಾನಾನ್ಯಾಗ್ನೀ ಧ್ರೀಯಂ ಪತ್ನೀಶಾಲಂಚ ದಕ್ಷಿಣಪುರಸ್ತಾದಾಹವನೀಯಾಸ್ಯಾವಸ್ಥಾಯ ಬ್ರಹ್ಮಾ ಶಮ್ಯಾಂ ಪ್ರಹರೇತ್ ಸಾ ಯತ್ರ ನಿಪತೇತ್ತದ್ಗಾರ್ಹಪತ್ಯಸ್ಯಾಯತನಂ. ತತೋಽಧಿ ವಿಹಾರೋ ವಿಷಮೋ ಚೇನ್ನಿಪತೇದುದ್ಧೃತ್ಯ ಸಮೋ ವಿಹರೇಯುರಪ್ಸು ಚೇದ್ವಾ ರುಣಂ ಪುರೋಡಾಶಂ ನಿರ್ವಪೇಯುಃ ॥ ೧೭-೬ ॥

ಆದರ ಅರ್ಥವನ್ನು ಸಂಕ್ಷೇಪಿಸಿ ಮುಂದಿನಂತೆ ಹೇಳಬಹುದು– ॥ ಸಾರ ಸ್ವತರು ಅಂದರೆ ಸಾರಸ್ವತ ಯಜ್ಞವನ್ನು ಜರಗಿಸಲಿರುವವರು ಸರಸ್ವತಿಯ ಕೆಳಗಡೆ ಪಶ್ಚಿಮಕ್ಕೆ ಹರಿಯುವ ನೀರಿನ ಕೊನೆಯಲ್ಲಿ ಯಜ್ಞದೀಕ್ಷೆಯನ್ನು ಕೈಗೊಳ್ಳಬೇಕು. ಮತ್ತು ಅಲ್ಲಿಯೇ ದೀಕ್ಷಾಹೋಮವನ್ನು ಜರುಗಿಸಿ ಪ್ರಾರಂಭಿಕ ಆಹುತಿಗಳನ್ನು ಅರ್ಪಿಸಬೇಕು. ತರುವಾಯ ಬ್ರಹ್ಮನು ಅಂದರೆ ಯಜ್ಞದ ಮುಖ್ಯ ಪುರೋಹಿ ತನು ಸರಸ್ವತೀ ನದಿಯ ದಕ್ಷಿಣ ತೀರದಲ್ಲಿ ಆಹವನೀಯಾಗ್ನಿಯ ದಕ್ಷಿಣ ಪೂರ್ವದಲ್ಲಿ ನಿಂತು ಶಮ್ಯಾ ಎಂಬ ಚಿಕ್ಕಗೂಟವನ್ನು ದಂಡದಿಂದ ಹೊಡೆದು ಎಸೆಯಬೇಕು. ಮತ್ತು ಎಲ್ಲ ಯಜಮಾನರು ಪ್ರತಿದಿನ ಎಸೆದ ಆ ಗೂಟವನ್ನು ಹಿಂಬಾಲಿಸಿ ಸಾಗ ಬೇಕು. ಗೂಟವು ಬಿದ್ದ ಸ್ಥಳಕ್ಕೆ ತಲುಪಿದೊಡನೆ ಬ್ರಹ್ಮನು ಅದನ್ನು ಎತ್ತಿ ಮರಳಿ ಎಸೆಯಬೇಕು. ಹಾಗೆ ಸಂಜೆಯ ತನಕ ಎಸೆಯುತ್ತ ಎಲ್ಲರೂ ಮುಂದೆ ಸಾಗಬೇಕು. ಹೋಗುವಾಗ ಯಜ್ಞಕ್ಕೆ ಆವಶ್ಯಕವಿರುವ ಎಲ್ಲ ಸಾಮಾಗ್ರಿಗಳನ್ನೂ, ಹೆಂಗಸರ ನಿವಾಸಕ್ಕೆ ಬೇಕಾಗುವ ಡೇರೆಯ ಸಾಮಾನನ್ನೂ ಗಾಡಿಗಳಲ್ಲಿ ಹೇರಿ ಒಯ್ಯಬೇಕು. ಹೆಂಗಸರನ್ನು ಗಾಡಿಗಳಲ್ಲಿ ಕೂಡ್ರಿಸಬೇಕು. ಯೂಪಸ್ತಂಭವನ್ನು ಹೊತ್ತುಕೊಂಡು ಹೋಗಲಾಗುವಂತೆ ಒಂದು ಒರಳಲ್ಲಿ ನೆಡಬೇಕು. ಸಂಜೆ ಸಮಯದಲ್ಲಿ ಎಸೆದ ಗೂಟವು

ಯಾವ ಸ್ಥಳದಲ್ಲಿ ಬೀಳುವುದೋ ಅಲ್ಲಿ ಗಾರ್ಹಪತ್ಯ ಕುಂಡವನ್ನು ನಿರ್ಮಿಸಬೇಕು. ಗೂಟವು ವಿಷಮ ಸ್ಥಳದಲ್ಲಿ ಬಿದ್ದಿದ್ದರೆ ಅದನ್ನು ಎತ್ತಿ ತಂದು ಸಮಸ್ಥಳದಲ್ಲಿಡಬೇಕು. ನೀರಿನಲ್ಲಿ ಬಿದ್ದಿದ್ದರೆ ಅದನ್ನು ಎತ್ತಿ ತಂದ ತರುವಾಯ ವರುಣನಿಗೆ ಪುರೋಡಾಶವನ್ನು ಅರ್ಪಿಸಬೇಕು. ಮತ್ತು, ಆ ರಾತ್ರಿ ಅಲ್ಲಿ ತಂಗಿ ವಿಶ್ರಮಿಸಬೇಕು. ಮರುದಿನ ಮುಂಜಾವಿನಲ್ಲಿ ಯಥಾವಿಧಿ ಹೋಮಾದಿಗಳನ್ನು ನೆರವೇರಿಸಿದ ತರುವಾಯ ಮೊದಲಿನ ದಿನದಂತೆಯೇ ಚಿಣಿಗೋಲನ್ನು ಎಸೆಯುತ್ತಲೂ, ಸಂಜೆಯಾದಲ್ಲಿ ತಂಗುತ್ತಲೂ, ಮುಂದೆ ಸಾಗಬೇಕು.

ಹಿಂದಿನ ವಿವರಗಳಿಂದ ಸ್ಪಷ್ಟವಾಗಿ ನಿಷ್ಪನ್ನವಾಗುವುದೇನೆಂದರೆ ಮೊದಲನೆಯದಾಗಿ ಸಾರಸ್ವತ ಯಜ್ಞದಲ್ಲಿ ಭಾಗವಹಿಸಿದವರು ಅಫಗಾನಿಸ್ಥಾನದೊಳಗಿನ ಸರಸ್ವತೀ ನದಿಯ ದಕ್ಷಿಣ ತೀರದಲ್ಲಿ ಯಜ್ಞಗಳನ್ನು ಜರುಗಿಸುತ್ತ ಪೂರ್ವ ದಿಕ್ಕಿಗೆ ಮುಂದುವರಿದು ಸಾಗಿದರೆ ಅವರು ಭಾರತ ವರ್ಷದೊಳಗೆ ಪ್ರವೇಶಿಸುತಿದ್ದರೆಂಬುದಾಗಿದೆ. ಎರಡನೆಯದಾಗಿ ಯಜಮಾನರ ಪತ್ನಿಯರು ಕೂಡ ಅವರೊಂದಿಗೆ ಗಾಡಿಯಲ್ಲಿ ಕೂತು ಬರುತಿದ್ದರೆಂಬುದರ ಮೇಲಿಂದ ಆರ್ಯ ಜನರು ಪರಿವಾರ ಸಹಿತ ವಲಸೆ ಹೋಗುವ ಸಲುವಾಗಿಯೇ ಸಾರಸ್ವತ ಯಜ್ಞವನ್ನು ಜರಗಿಸುತಿದ್ದರೆಂಬುದಾಗಿದೆ. ಆದುದರಿಂದ ಆರ್ಯ ಜನರು ಸಾರಸ್ವತ ಯಜ್ಞವನ್ನು ಜರುಗಿಸುತ್ತ ದಿನಕ್ಕೊಂದು ಮಜಲಿನಂತೆ ಮುಂದುವರಿಯುತ್ತ ಶಾಂತ ರೀತಿಯಿಂದ ಭಾರತ ವರ್ಷವನ್ನು ಪ್ರವೇಶಿಸಿದ್ದರೆಂದು ಹೇಳಬೇಕಾಗುತ್ತದೆ.

೩. ಆರ್ಯಜನರ ಮೂಲಸ್ಥಾನ

ಆರ್ಯಜನರ ಮೂಲಸ್ಥಾನವು ಯಾವುದಾಗಿದ್ದಿತ್ತೆಂಬುದರ ಸಂಬಂಧದಲ್ಲಿ ವಿದ್ವಾಂಸರೊಳಗೆ ತುಂಬಾ ಮತಭೇದವಿದೆಯಾದರೂ ಆರ್ಯಜನರು ಒಂದೇ ಮೂಲಸ್ಥಾನದಿಂದ ಚದರಿ ಹೋಗಿ ಜಗತ್ತಿನ ನಾನಾ ಭಾಗಗಳಲ್ಲಿ ನೆಲಸಿದ್ದರೆಂಬುದರಲ್ಲಿ ಮತ ಭೇದವಿಲ್ಲ. ಕೆಲವು ವಿದ್ವಾಂಸರ ಅಭಿಪ್ರಾಯದಲ್ಲಿ ಉತ್ತರ ಯೂರೋಪು ಆರ್ಯಜನರ ಮೂಲಸ್ಥಾನವಾಗಿದ್ದಿತೆಂದಿದೆಯಾದರೂ ಹೆಚ್ಚಿನ ವಿದ್ವಾಂಸರ ಅಭಿಪ್ರಾಯದಲ್ಲಿ ಮಧ್ಯ ಆಸ್ಯವು ಅಂದರೆ ಉತ್ತರದ ೩೦ ರಿಂದ ೪೦ನೆಯ ಅಕ್ಷಾಂಶಗಳ ಮತ್ತು ಪೂರ್ವದ ೫೫ ರಿಂದ ೮೫ ನೆಯ ರೇಖಾಂಶಗಳ ನಡುವಣ ಭೂಪ್ರದೇಶವು ಆರ್ಯಜನರ ಮೂಲಸ್ಥಾನವಾಗಿದ್ದಿತ್ತೆಂದಿದೆ. ಆರ್ಯಜನರು ಮಧ್ಯ ಆಸ್ಯದಲ್ಲಿ ದೀರ್ಘಕಾಲದ ತನಕ ಒಟ್ಟಿಗೆ ನೆಲಸಿದ್ದರೆಂಬುದರಲ್ಲಿ ಸಂದೇಹವಿಲ್ಲವಾದರೂ ಮಧ್ಯ ಆಸ್ಯವೇ ಅವರ ಮೂಲಸ್ಥಾನವಾಗಿದ್ದಿತೆನ್ನಲಾಗುವುದಿಲ್ಲ. ಏಕೆಂದರೆ ಜಗತ್ತಿನಲ್ಲಿಯೇ ಪ್ರಾಚೀನತಮ ಲಿಖಿತ ಪ್ರಮಾಣವಾಗಿರುವ ಋಗ್ವೇದದಲ್ಲಿ ಆರ್ಯಜನರ ಪೂರ್ವಜರು ಉತ್ತರ ಧ್ರುವ ಪ್ರದೇಶದಲ್ಲಿ ನೆಲೆಸಿದ್ದರೆಂಬುದನ್ನು ಸೂಚಿಸುವ ಕೆಲವು ಉಲ್ಲೇಖಗಳಿವೆ. ಮತ್ತು ಅಂಥ ಉಲ್ಲೇಖಗಳ ಆಧಾರದಿಂದ ದಿವಂಗತ ಲೋಕಮಾನ್ಯ ಬಾಲಗಂಗಾಧರ ತಿಲಕ ಅವರು ಆರ್ಯಜನರ ಮೂಲಸ್ಥಾನವು ಉತ್ತರ ಧ್ರುವಪ್ರದೇಶವಾಗಿದ್ದಿತೆಂದು ಪ್ರತಿಪಾದಿಸಿ "The Arctic Home in the Vedas" ಅಂದರೆ "ವೇದಗಳಲ್ಲಿ ಉತ್ತರ ಧ್ರುವಪ್ರದೇಶದವಸತಿ" ಎಂಬ ಗ್ರಂಥವನ್ನು ಬರೆದು ಪ್ರಕಟಿಸಿದ್ದಾರೆ. ಅವರು ಅದರಲ್ಲಿ ಹಲವು ಪಾಶ್ಚಾತ್ಯ ವಿಜ್ಞಾನಿಗಳ ಶೋಧಗಳ ಆಧಾರದಿಂದ ಸಾಧಾರಣ ಹತ್ತು ಸಾವಿರ ವರ್ಷಗಳ ಹಿಂದೆ ಉತ್ತರಧ್ರುವ ಪ್ರದೇಶದ ಪ್ರಾಕೃತಿಕ ಪರಿಸ್ಥಿತಿ ಮತ್ತು ವಾಯುಗುಣವು ಈಗಿನಂತಿರದೇ ಮನುಷ್ಯನ ಮತ್ತು ಮೃಗ–ಪಕ್ಷಿಗಳ ಜೀವನಕ್ಕೆ ಹಾಗೂ ನಿವಾಸಕ್ಕೆ ಹಾಗೂ ಗಿಡ–ಮರಗಳ ಬೆಳವಣಿಗೆಗೆ ಅನುಕೂಲವಾಗಿದ್ದಿತೆಂದು ಸಿದ್ಧಪಡಿಸಿದ್ದಾರಲ್ಲದೇ ಆರ್ಯಜನರ ಪೂರ್ವಜರು ಬಹಳ ಪ್ರಾಚೀನ ಕಾಲದಲ್ಲಿ ಉತ್ತರಧ್ರುವದ ಬಳಿಯ ಪ್ರದೇಶಗಳಲ್ಲಿ ನೆಲಸಿದ್ದರೆಂತಲೂ ಬಳಿಕ ಆಕಸ್ಮಿಕವಾಗಿ ಅಲ್ಲಿನ ವಾಯುಗುಣವು ಪರಿವರ್ತನ ಹೊಂದಿ ಒಂದೇಸವನೆ ಹಿಮ ಬೀಳತೊಡಗಿತೆಂತಲೂ ಹಿಮವು ಕರಗಿ ನೀರಾದುದರಿಂದ ಪ್ರಲಯಭಯಂಕರವಾದ ನೆರೆ ಬಂದಿತೆಂತಲೂ, ಆ ನೆರೆಯ ಪ್ರವಾಹದಿಂದಾಗಿ ಅಲ್ಲಿ ನೆಲಸಿದ ಆರ್ಯಜನರು ತಮ್ಮ ಮನೆಮಾರುಗಳನ್ನು ಕಳೆದುಕೊಂಡರೆಂತಲೂ, ತರುವಾಯ ಅಲ್ಲಿ ನೆಲಸಲು ಸಾಧ್ಯವಾಗದೇ ಆ ಪ್ರದೇಶವನ್ನು ತೊರೆದು ಕೆಳಗಿನ ಅಕ್ಷಾಂಶಗಳಲ್ಲಿದ್ದ ಪ್ರದೇಶಗಳಿಗೆ ಬಂದು ಅಲ್ಲಿ ನೆಲಸಿದರೆಂತಲೂ ಪ್ರತಿಪಾದಿಸಿದ್ದಾರೆ. ಅವರು ತನ್ನ ಪ್ರತಿಪಾದನೆಯನ್ನು ಸಮರ್ಥಿಸಲು ಋಗ್ವೇದದೊಳಗಿನ ಹಲವು ಋಚೆಗಳನ್ನೂ,

ಇತರ ವೈದಿಕ ಸಾಹಿತ್ಯದೊಳಗಿನ ಮತ್ತು ಆರ್ಯ ವರ್ಗದ ಪಾರಸಿಗಳ ಮತ್ತು ಯವನರ ಪ್ರಾಚೀನ ಸಾಹಿತ್ಯದಿಂದ ಹಲವು ಐತಿಹ್ಯಗಳನ್ನೂ ಪ್ರಮಾಣ ರೂಪದಿಂದ ಉದಹರಿಸಿದ್ದಾರೆ. ಅವರು ಪ್ರತಿಪಾದಿಸಿದ ಉತ್ತರ ಧ್ರುವ ಪ್ರದೇಶದ ವಸತಿ ಯೆಂಬ ಉಪಪತ್ತಿಯನ್ನು ಹಿನ್ನೆಲೆಯಾಗಿಟ್ಟುಕೊಂಡು ವೇದ ಮಂತ್ರಗಳ ಅಧ್ಯಯನ ವನ್ನು ನಡಿಸಿದರೆ ಈ ತನಕ ತಿಳಿಯಲು ಸಾಧ್ಯವಾಗದೇ ಉಳಿದಿರುವ ಹಲವು ಐತಿಹಾಸಿಕ ತಥ್ಯಗಳನ್ನು ತಿಳಿದುಕೊಳ್ಳಬಹುದಾಗಿದೆ.

ಉತ್ತರಧ್ರುವ ಪ್ರದೇಶದಲ್ಲಿ ನೆಲಸಿದ್ದವರು ಸಾಮಾನ್ಯ ದಿನಗಳಲ್ಲಿ ಪೂರ್ವಕ್ಕೆ ಮೋರೆ ಮಾಡಿ ನಿಂತು ಕ್ಷಿತಿಜವನ್ನು ಈಕ್ಷಿಸುತ್ತಿದ್ದರೆ ಹಗಲಲ್ಲಿ ಸೂರ್ಯನೂ, ರಾತ್ರಿ ಕಾಲದಲ್ಲಿ ಚಂದ್ರನು ಮತ್ತು ನಕ್ಷತ್ರಗಳೂ ಅವನ ಎಡಗಡೆಯಲ್ಲಿ ಅಂದರೆ ಉತ್ತರ ದಿಕ್ಕಿನಲ್ಲಿ ಮೇಲೆ ಬಂದು ಅಥವಾ ಮೂಡಿ ಕ್ಷಿತಿಜಕ್ಕೆ ಸಮಾಂತರವಾಗಿ ಚಲಿಸುತ್ತ ಅವನ ಮೋರೆಯ ಎದುರಿಗೆ ಬಂದು ಬಲಗಡೆಗೆ ಅಂದರೆ ದಕ್ಷಿಣ ದಿಕ್ಕಿಗೆ ಸಾಗಿ ಅಲ್ಲಿ ಕೆಳಗಿಳಿಯುವುದು ಅಥವಾ ಮುಳುಗುವುದು ಕಾಣಿಸುತ್ತದೆ. ಸೂರ್ಯನ ಉತ್ತರಾ ಯಣದ ಕಾಲದಲ್ಲಿ ವಸಂತ ಋತುವು ಆರಂಭವಾದ ತರುವಾಯ ಮೂಡಿದ ಸೂರ್ಯನು ಮುಳುಗದೇ ೨೪ ಗಂಟೆಗಳಿಗೆ ಒಂದು ಸುತ್ತಿನಂತೆ ಭೂಮಿಯನ್ನು ಬಹಳ ದಿನಗಳ ತನಕ ಸುತ್ತುತ್ತಲೇ ಇರುತ್ತಾನೆ. ಹಾಗೆಯೇ ಸೂರ್ಯನ ದಕ್ಷಿಣಾಯನದ ಕಾಲದಲ್ಲಿ ಹೇಮಂತ ಋತುವು ಆರಂಭವಾದ ತರುವಾಯ ಮುಳುಗಿದ ಸೂರ್ಯನು ಬಹಳ ದಿನಗಳ ತನಕ ಮೂಡುವುದಿಲ್ಲ. ಆಗ ಚಂದ್ರನು ಮತ್ತು ಚಾಂದ್ರನಕ್ಷತ್ರ ಗಳು ೨೪ ಗಂಟೆಗಳಿಗೆ ಒಂದು ಸುತ್ತಿನಂತೆ ಭೂಮಿಯನ್ನು ಬಹಳ ದಿನಗಳ ತನಕ ಸುತ್ತುತ್ತಿರುತ್ತವೆ. ಅಂತಹ ಪ್ರತಿಯೊಂದು ಸುತ್ತಿನಲ್ಲಿಯೂ, ಸೂರ್ಯ, ಚಂದ್ರ ಮತ್ತು ನಕ್ಷತ್ರಗಳು ಈಕ್ಷಿಸುವವನ ಎಡಗಡೆಯಿಂದ ಬಲಗಡೆಗೆ ಸಾಗುತ್ತಿರುತ್ತವೆ, ಅಂದರೆ ಅಲ್ಲಿ ಭೂಮಧ್ಯ ರೇಖೆಯ ಅಥವಾ ವಿಷುವ ವೃತ್ತದ ಸಮೀಪದ ಪ್ರದೇಶ ಗಳಲ್ಲಿ ನೆಲಸಿರುವ ಜನರಿಗೆ ಕಾಣಿಸುವಂತೆ ಸೂರ್ಯ ಚಂದ್ರಾದಿಗಳು ಪೂರ್ವ ದಿಕ್ಕಿನಲ್ಲಿ ಮೂಡಿದ ತರುವಾಯ ಮೇಲೇರುತ್ತ ನೆತ್ತಿಯ ಮೇಲಕ್ಕೆ ಬಂದು ಪಶ್ಚಿಮ ದಿಕ್ಕಿಗೆ ಇಳಿದು ಮುಳುಗುವುದು ಕಾಣಿಸುವುದಿಲ್ಲ ಹಾಗೆಯೇ ಅಲ್ಲಿ ಸಪ್ತರ್ಷಿ–ನಕ್ಷತ್ರ ಪುಂಜವು ಅಲ್ಲಿರುವವರ ತಲೆಯ ಮೇಲ್ಗಡೆ ಎತ್ತರದಲ್ಲಿ ಕಾಣಿಸುತ್ತದೆ. ಅಲ್ಲಿನ ಹಗಲಿರುಳುಗಳು ತುಂಬಾ ವಿಲಕ್ಷಣ ಹಾಗೂ ವಿಚಿತ್ರವಾಗಿರುತ್ತವೆ. ಅದೆಲ್ಲವನ್ನು ಮುಂದಿನ ವಿವರಗಳಿಂದ ಸರಿಯಾಗಿ ತಿಳಿದುಕೊಳ್ಳಬಹುದು.

ಋಗ್ವೇದದಲ್ಲಿ ಅಗ್ನಿಯು ಅಥವಾ ಇಂದ್ರನು ತೊಂಭತ್ತೊಂಭತ್ತು ವೃತ್ರ ಗಳನ್ನು ಕೊಂದನೆಂಬ ಹಲವು ಉಲ್ಲೇಖಗಳಿವೆ. ಋಗ್ವೇದದಲ್ಲಿ ವೃತ್ರ ಎಂಬ ಶಬ್ದವು, ಹೇಮಂತ ಋತುವಿನಲ್ಲಿ ಸೂರ್ಯನು ಮುಳುಗಿದ ತರುವಾಯ ಭೂಮಿಗೆ ಬೀಳುವ ಕತ್ತಲೆಯ ಆವರಣ ಅಥವಾ ಭೂಮಿಯನ್ನು ಸುತ್ತುತ್ತಿರುವ ಕತ್ತಲೆ

ಎಂಬರ್ಥದಲ್ಲಿ ಪ್ರಯೋಗಿಸಲ್ಪಟ್ಟಿದೆ. ಸೂರ್ಯ-ಚಂದ್ರಾದಿಗಳ ಒಂದು ಸುತ್ತೆಂದರೆ ೨೪ ಗಂಟೆಗಳ ಕಾಲ ಅಥವಾ ಒಂದು ದಿನವೆಂದು ಹಿಂದೆ ಹೇಳಿದೆ. ಆದುದರಿಂದ ಪ್ರಾಚೀನ ಆರ್ಯ ಜನರು ಭೂಮಿಯ ಉತ್ತರ ಗೋಲಾರ್ಧದಲ್ಲಿ ತೊಂಭತ್ತೊಂಭತ್ತು ದಿನಗಳಷ್ಟು ದೀರ್ಘ ಅವಧಿಯ ಒಂದೇ ಅಖಂಡ ರಾತ್ರಿಯಿದ್ದಂಥ ಪ್ರದೇಶದಲ್ಲಿ ಅಥವಾ ಸಾಧಾರಣ ಉತ್ತರದ ಎಪ್ಪತ್ತೇಳನೆಯ ಅಕ್ಷಾಂಶದ ಪ್ರದೇಶದಲ್ಲಿ ನೆಲಸಿದ್ದರೆಂದು ಹೇಳಬಹುದು. ಅಂಥ ದೀರ್ಘ ರಾತ್ರಿಯ ಕಾಲದಲ್ಲಿ ಚಂದ್ರನ ಮತ್ತು ನಕ್ಷತ್ರಗಳ ಬೆಳಕು ಇರುತಿದ್ದಿತು ಮತ್ತು ಚಂದ್ರ ಹಾಗೂ ಚಾಂದ್ರ ನಕ್ಷತ್ರಗಳು ಎಡಗಡೆಯಿಂದ ಬಲಗಡೆಗೆ ಸಾಗುತ್ತ ಇಪ್ಪತ್ತು ನಾಲ್ಕು ಗಂಟೆಗಳಲ್ಲಿ ಭೂಮಿಗೆ ಒಂದು ಸುತ್ತು ಬರುತ್ತಿದ್ದವು. ಅಂಥ ತೊಂಭತ್ತೊಂಭತ್ತು ಸುತ್ತುಗಳು ಮುಗಿಯುವ ಹೊತ್ತಿಗೆ ಸರಿಯಾಗಿ ಉತ್ತರ ಮತ್ತು ಪೂರ್ವ ದಿಕ್ಕುಗಳ ಮಧ್ಯಸ್ಥಾನದಲ್ಲಿ ಬಹಳ ಮಂದತರದ ಬೆಳಕು ಕಾಣಿಸುತಿದ್ದಿತು ಮತ್ತು ಅದು ಅಲ್ಲಿಂದ ಚಲಿಸುತ್ತ ಪೂರ್ವಕ್ಕೆ ಬಂದು ದಕ್ಷಿಣಕ್ಕೆ ಸಾಗುತ್ತಿರುವಾಗ ಮಧ್ಯದಲ್ಲಿ ಮರೆಯಾಗುತಿತ್ತು. ಮರುದಿನ ಪ್ರಕಾಶವು ಹೆಚ್ಚು ಉತ್ತರದಲ್ಲಿ ಮೊದಲಿನ ದಿನಕ್ಕಿಂತ ಹೆಚ್ಚು ಉಜ್ವಲವಾಗಿ ಕಾಣಿಸಿಕೊಂಡು ಪೂರ್ವಕ್ಕೆ ಚಲಿಸುತ್ತ ಬಂದು ಹೆಚ್ಚು ದಕ್ಷಿಣಕ್ಕೆ ಸಾಗಿ ಮರೆಯಾಗುತಿತ್ತು, ಹಾಗೆ ಇಪ್ಪತ್ತೈದು ದಿನಗಳ ತನಕ ಆ ಪ್ರಕಾಶವು ದಿನದಿಂದ ದಿನಕ್ಕೆ ಹೆಚ್ಚುತ್ತ ಸಾಗುತಿತ್ತು ಮತ್ತು ಇಪ್ಪತ್ತಾರನೆಯ ದಿನ ಮೊತ್ತಮೊದಲು ಬೆಳಕು ಕಂಡುಬಂದ ಸ್ಥಳದಲ್ಲಿ ಸೂರ್ಯಬಿಂಬದ ಚಿಕ್ಕ ಬದಿಯು ಕಾಸಿದ ಚಿನ್ನದಂತೆ ಹೊಳೆಯುತ್ತ ಮೂಡುತಿತ್ತು ಮತ್ತು ಅದು ಅಲ್ಲಿಂದ ಚಲಿಸುತ್ತ ಪೂರ್ವಕ್ಕೆ ಬಂದು ದಕ್ಷಿಣಕ್ಕೆ ಸಾಗುತ್ತಿರುವಾಗ ಮಧ್ಯದಲ್ಲಿ ಮುಳುಗುತಿತ್ತು. ಆ ದಿನ ಸೂರ್ಯಬಿಂಬದ ಬದಿಯು ಬರೇ ಆರು ಗಂಟೆಗಳ ಕಾಲಮಾತ್ರ ಕಾಣಿಸುತಿತ್ತು. ಮರುದಿನ ಸೂರ್ಯಬಿಂಬದ ಕೊಂಚ ದೊಡ್ಡ ಅಂಶವು ಹೆಚ್ಚು ಉತ್ತರದಲ್ಲಿ ಮೂಡಿ ಅಲ್ಲಿಂದ ಚಲಿಸುತ್ತ ಪೂರ್ವಕ್ಕೆ ಬಂದು ಹೆಚ್ಚು ದಕ್ಷಿಣಕ್ಕ ಸಾಗಿ ಮುಳುಗುತಿತ್ತು. ಆ ಪ್ರಕಾರವಾಗಿ ದಿನದಿಂದ ದಿನಕ್ಕೆ ಹಗಲಿನ ಅವಧಿಯು ಹೆಚ್ಚುತ್ತ ಮತ್ತು ಇರುಳಿನ ಅವಧಿಯು ಕಡಿಮೆಯಾಗುತ್ತ ಸಾಗಿ ಐವತ್ತೊಂದನೆಯ ದಿನ ಹಗಲಿನ ಅವಧಿಯು ಇಪ್ಪತ್ತನಾಲ್ಕು ಗಂಟೆಗಳಿಗೆ ತಲುಪುತಿತ್ತು. ಮತ್ತು ಐವತ್ತೊಂದನೆಯ ದಿನ ಮೂಡಿದ ಸೂರ್ಯನು ಮುಳುಗದೇ ದಿನದ ಇಪ್ಪತ್ತನಾಲ್ಕು ಗಂಟೆಗಳ ಕಾಲವೂ ಭೂಮಿಗೆ ಪ್ರದಕ್ಷಿಣೆ ಬರುತ್ತ ಕ್ಷಿತಿಜದ ಮೇಲೆಯೇ ಇರುತಿದ್ದ ಹಾಗೂ ಅಂದಿನಿಂದ ಐವತ್ತೆಂಟು ದಿನಗಳ ತನಕ ಪ್ರತಿಪ್ರದಕ್ಷಿಣೆಯಲ್ಲಿ ಕೊಂಚ ಕೊಂಚವಾಗಿ ಮೇಲೇರುತ್ತ ಸಾಗುತಿದ್ದ; ಮತ್ತು ಆ ದಿನ ಕೊಂಚ ಸ್ಥಿರನಾದಂತೆ ತೋರಿ ಐವತ್ತೊಂಭತ್ತನೆಯ ದಿನದಿಂದ ಮೇಲೇರಿದ ರೀತಿಯಲ್ಲಿಯೇ ಕೊಂಚ ಕೊಂಚವಾಗಿ ಕೆಳಕ್ಕಿಳಿಯುತ್ತ ನೂರಹದಿನೇಳನೆಯ ದಿನ ಕ್ಷಿತಿಜದ ಕೆಳಗೆ ಹೋಗುತಿದ್ದ. ಅಂದಿನಿಂದ ಮರಳಿ ಹಗಲಿರುಳುಗಳ ಪರ್ಯಾಯಗಳು ಪ್ರಾರಂಭವಾಗುತಿದ್ದುವು. ಮತ್ತು ದಿನದಿಂದ ದಿನಕ್ಕೆ ಹಗಲಿನ ಅವಧಿಯು ಕಡಿಮೆಯಾಗಿ ಇರುಳಿನ ಅವಧಿಯು

ಹೆಚ್ಚುತಿತ್ತು ಹಾಗೂ ಐವತ್ತೊಂದನೆಯ ದಿನ ಮುಳುಗಿದ ಸೂರ್ಯನು ಮರಳಿ ಮೂಡುತ್ತಿರಲಿಲ್ಲ. ಅಂದರೆ ಐವತ್ತೊಂದನೆಯ ದಿನದಿಂದ ಇಪ್ಪತ್ತೈದು ದಿನಗಳ ತನಕ ಸಂಧ್ಯಾಪ್ರಕಾಶ ಹಾಗೂ ಕತ್ತಲೆಯ ಪರ್ಯಾಯಗಳಿರುತಿದ್ದವು. ಸಂಧ್ಯಾ ಪ್ರಕಾಶವು ಮರೆಯಾದ ತರುವಾಯ ತೊಂಭತ್ತೊಂಭತ್ತು ದಿನಗಳ ಅವಧಿಯ ಅಖಂಡ ಹಾಗೂ ಕಡು ಕತ್ತಲೆಯ ರಾತ್ರಿಯು ಪ್ರಾರಂಭವಾಗುತಿತ್ತು. ಆ ಪ್ರಕಾರವಾಗಿ ಉತ್ತರಧ್ರುವಪ್ರದೇಶದಲ್ಲಿ ನೆಲಸಿದ್ದ ಪ್ರಾಚೀನ ಆರ್ಯಜನರ ವರ್ಷದಲ್ಲಿ ಇಪ್ಪತ್ತೈದು ದಿನಗಳ ಉಷಃಪ್ರಕಾಶ, ಐವತ್ತು ದಿನಗಳ ಹಗಲಿರುಳುಗಳ ಪರ್ಯಾಯಗಳು ನೂರಹದಿನಾರು ದಿನಗಳ ಅವಧಿಯ ಅಖಂಡವಾದ ಹಗಲು ತರುವಾಯ ಮರಳಿ ಐವತ್ತು ದಿನಗಳ ಹಗಲಿರುಳುಗಳ ಪರ್ಯಾಯಗಳು ಹಾಗೂ ಇಪ್ಪತ್ತೈದು ದಿನಗಳ ಸಂಧ್ಯಾಪ್ರಕಾಶ ಮತ್ತು ಕತ್ತಲೆಯ ಪರ್ಯಾಯಗಳು ಹಾಗೂ ಕೊನೆಗೆ ತೊಂಭತೊಂಭತ್ತು ದಿನಗಳ ಅವಧಿಯ ಅಖಂಡ ರಾತ್ರಿಯು ಇರುತಿತ್ತು. ಅಂದರೆ ಅವರಿಗೆ ವರ್ಷದ ಮುನ್ನೂರಅರುವತ್ತೈದು ದಿನಗಳಲ್ಲಿ ಇನ್ನೂರಹದಿನಾರು ದಿನ ಸೂರ್ಯನು ಕಾಣಿಸುತಿದ್ದ ಮತ್ತು ನೂರನಾಲ್ವತ್ತೊಂಭತ್ತು ದಿನ ಸೂರ್ಯನು ಕಾಣಿಸುತ್ತಿರಲಿಲ್ಲ. ಅವರು ಚಂದ್ರನ ಗತಿಗನುಸಾರವಾಗಿ ಕಾಲದ ಗಣನೆಯನ್ನು ಮಾಡುತ್ತಿದ್ದರು. ಚಂದ್ರನು ಸಾಧಾರಣ ಇಪ್ಪತ್ತೊಂಭತ್ತುವರೆ ದಿನಗಳಲ್ಲಿ ಭೂಮಿಯನ್ನು ಸುತ್ತಿ ಮರಳಿ ಮೊದಲಿನ ಸ್ಥಾನಕ್ಕೆ ಬರುತ್ತಾನೆಂದು ಅವರು ಕಂಡುಹಿಡಿದಿದ್ದರು. ಹಾಗಾಗಿ ಅವರು ಒಂದು ತಿಂಗಳಲ್ಲಿ ಮೂವತ್ತು ದಿನಗಳನ್ನೂ ಮತ್ತೊಂದು ತಿಂಗಳಲ್ಲಿ ಇಪ್ಪತ್ತೊಂಭತ್ತು ದಿನಗಳನ್ನೂ ಎಣಿಸುತ್ತಿದ್ದರು. ಅರ್ಥಾತ್ ಅವರಿಗೆ ಚಾಂದ್ರಮಾನದ ಗಣನೆಯಂತೆ ವರ್ಷದಲ್ಲಿ ಏಳು ತಿಂಗಳು ಮತ್ತು ಎಂಟನೆಯ ತಿಂಗಳಲ್ಲಿ ಒಂಭತ್ತು ದಿನಗಳ ತನಕ ಸೂರ್ಯನು ಕಾಣಿಸುತ್ತಿದ್ದ. ಋಗ್ವೇದದ ಒಂದು ಮಂತ್ರದಲ್ಲಿ ಇಂದ್ರನು ಶರದೃತುವಿನ ನಾಲ್ವತ್ತನೆಯ ದಿನ ಪರ್ವತಗಳಲ್ಲಿ ವಾಸಿಸುತಿದ್ದ ಶಂಬರನನ್ನು ಕಂಡುಹಿಡಿದನೆಂದು[1] ಹೇಳಿದುದು ಶರದೃತುವಿನ ನಾಲ್ವತ್ತನೆಯ ದಿನದಂದು ಉತ್ತರಧ್ರುವ ಪ್ರದೇಶವಲ್ಲಿ ಕತ್ತಲೆ ಕವಿಯುತಿದ್ದಿತೆಂಬುದನ್ನು ಸಿದ್ಧಪಡಿಸುತ್ತದೆ.

ಋಗ್ವೇದದ ಕೆಲವು ಸೂಕ್ತಗಳಲ್ಲಿ ಬಂದಿರುವ ವರ್ಣನೆಗಳಿಂದ ಉತ್ತರಾಯಣದ ದಿನಗಳಲ್ಲಿ ಉತ್ತರ ಧ್ರುವ ಪ್ರದೇಶದ ಜನರಿಗೆ ಸತತವಾಗಿ ಕಾಣಿಸುತಿದ್ದ ಸೂರ್ಯನೇ "ವಿಷ್ಣುಃ" ವೆನಿಸಿಕೊಳ್ಳುತಿದ್ದನೆಂದು ತಿಳಿದುಬರುತ್ತದೆ. ಅಂದರೆ ವಸಂತ ಋತುವಿನ ಮೊದಲನೆಯ ದಿನ ಸೂರ್ಯನು ಭೂಮಿಯ ವಿಷುವ ರೇಖೆಯ ನೇರಿನಲ್ಲಿರುತ್ತಾನೆ. ಮತ್ತು ಅಂದಿನಿಂದ ೧೧೬ ದಿನಗಳ ತನಕ ಉತ್ತರಧ್ರುವ

---

1 ಯಃ ಶಂಬರಂ ಪರ್ವತೇಷುಕ್ಷಿಯಂತಂ ಚತ್ವಾರಿಂಶ್ಯಾಂ ಶರದ್ಯನ್ವವಿಂದತ್ ।
ಓಜಾಯಮಾನಂ ಯೋ ಅಹಿಂ ಜಘಾನದಾನುಂ ಶಯಾನಂ ಸ ಜನಾಸ ಇಂದ್ರಃ ॥
ಋ. ೨-೧೨-೧೧ ॥

ಪ್ರದೇಶದ ೮೦ ನೆಯ ಅಕ್ಷಾಂಶದ ಪ್ರದೇಶಗಳಲ್ಲಿ ಸತತವಾದ ಹಗಲಿರುವುದರಿಂದ ಸೂರ್ಯನ ಪ್ರಕಾಶವು ಸರ್ವತ್ರ ಹಬ್ಬಿರುತ್ತದೆ. ಆದುದರಿಂದ ಆ ಕಾಲದ ಸೂರ್ಯನ ಹೆಸರು **"ವಿಷ್ಣು ಅಥವಾ ಸರ್ವವ್ಯಾಪಿ"** ಎಂದಾಗಿದೆ. ವಸಂತ ಋತುವಿನ ಮೊದಲನೆಯ ದಿನ ಸೂರ್ಯನು ಬಿಷುವ ವೃತ್ತದ ನೇರಿನಲ್ಲಿರುವುದು ವಿಷ್ಣುವಿನ ಮೊದಲನೆಯ ಹೆಜ್ಜೆಯಾಗಿರುತ್ತದೆ. ಅಂದಿನಿಂದ ಅವನು ಮರಳಿ ಕ್ಷಿತಿಜದ ಕೆಳಗೆ ಹೋಗುವ ತನಕ ಭೂಮಿಯ ಪೂರ್ಣ ಪ್ರದಕ್ಷಿಣೆ ತೆಗೆಯುವುದರಿಂದ ಅವನು **"ಉರುಕ್ರಮ ಇಲ್ಲವೇ ಉರುಗಾಯ"** ಅಂದರೆ ಅಗಲವಾಗಿ ಅಥವಾ ವಿಶಾಲವಾಗಿ ಸಾಗುವವನು ಎನಿಸಿಕೊಳ್ಳುತ್ತಾನೆ. ವಸಂತ ಋತುವಿನ ಮೊದಲನೆಯ ದಿನದಿಂದ ೩೮ ದಿನಗಳ ತನಕ ಅವನು ಮೆಲ್ಲ ಮೆಲ್ಲನೇ ಉತ್ತರ ಆಕಾಶವನ್ನೇರುತ್ತ ಉಚ್ಚಸ್ಥಾನಕ್ಕೆ ತಲಪುತ್ತಾನೆ. ಅದು ಅವನ ಎರಡನೆಯ ಹೆಜ್ಜೆಯಾಗಿರುತ್ತದೆ ಹಾಗಾಗಿ ಋಗ್ವೇದದಲ್ಲಿ ಆಸ್ಥಾನವನ್ನು "ವಿಷ್ಣುವಿನ ಪರಮಪದ" ಎಂದಿದೆ. **"ತದ್ವಿಷ್ಣೋಃ ಪರಮಂ ಪದಂ ಸದಾ ಪಶ್ಯಂತಿ ಸೂರಯಃ"** ಅಂದರೆ-ಋಷಿಗಳು ವಿಷ್ಣುವಿನ ಆ ಎತ್ತರದ ಹೆಜ್ಜೆಯನ್ನು ಸದಾಕಾಲ ನೋಡುತ್ತಿರುತ್ತಾರೆ. ಹಾಗೆ ಮೇಲೇರಿದ ಸೂರ್ಯನು ಮೆಲ್ಲ ಮೆಲ್ಲನೇ ಕೆಳಗಿಳಿದು ಕೊನೆಗೆ ಮುಳುಗಿ ಕಾಣದಾಗುತ್ತಾನೆ. ಅದು ವಿಷ್ಣುವಿನ ಮೂರನೆಯ ಹೆಜ್ಜೆಯಾಗಿರುತ್ತದೆ. ಆ ಹೆಜ್ಜೆಯು ಯಾರಿಗೂ ಕಾಣಿಸುವುದಿಲ್ಲ.

ಹಿಂದೆ ವಿವರಿಸಿದ ಪ್ರಕಾರ ಉತ್ತರ ಧ್ರುವ ಪ್ರದೇಶದಲ್ಲಿ ನೆಲಸಿದ್ದ ಆರ್ಯ ಜನರಿಗೆ ಸೂರ್ಯನು ವರ್ಷದ ೩೬೫ ದಿನಗಳಲ್ಲಿ ೨೧೬ ದಿನಗಳ ತನಕ ಅಂದರೆ ಚಾಂದ್ರಮಾನದ ಗಣನೆಯಂತೆ ಏಳು ತಿಂಗಳು ಮತ್ತು ಎಂಟನೆಯ ತಿಂಗಳಲ್ಲಿ ಒಂಭತ್ತು ದಿನಗಳ ತನಕ ಅಥವಾ ವಸಂತ, ಗ್ರೀಷ್ಮ, ವರ್ಷಾ ಎಂಬ ಮೂರು ಋತುಗಳ ಮತ್ತು ಶರದೃತುವಿನ ನಾಲ್ವತ್ತನೆಯ ದಿನ ಮುಳುಗಿ ಕಾಣದಾಗುತ್ತಿದ್ದ. ಅರ್ಥಾತ್ ಸ್ಥೂಲಗಣನೆಯಂತೆ ಸೂರ್ಯನು ಅವರಿಗೆ ವರ್ಷದಲ್ಲಿ ಏಳು ತಿಂಗಳು ಕಾಣಿಸುತ್ತಿದ್ದು ಐದು ತಿಂಗಳು ಕಾಣಿಸುತ್ತಿರಲಿಲ್ಲ.

ಮುಂದೆ ಕೊಡಲಾಗುವ ಕೆಲವು ಋಚೆಗಳು ಉತ್ತರಧ್ರುವ ಪ್ರದೇಶದ ಪ್ರಾಕೃತಿಕ ವೈಶಿಷ್ಟ್ಯಗಳನ್ನು ಅಲಂಕಾರಿಕರೂಪದಿಂದ ವರ್ಣಿಸುತ್ತವೆ. ಮುಂದಿನ ಋಚೆಯಲ್ಲಿ ವೃತ್ರನ ದೂತರು ನಕ್ಷತ್ರಗಳಿಂದ ಅಲಂಕೃತರಾಗಿ ಭೂಮಿಯ ನಡುಪಟ್ಟಿಯಂತೆ ಸುತ್ತು ಬರುತಿದ್ದರೆಂದು ವರ್ಣಿಸಿದೆ.

ಚಕ್ರಾಣಾಸಃ ಪರೀಣಹಂ ಪೃಥಿವ್ಯಾ
ಹಿರಣ್ಯೇನ ಮಣಿನಾ ಶುಂಭಮಾನಾಃ ।
ನ ಹಿನ್ವಾನಾಸ್ತಿತಿರುಸ್ತ ಇಂದ್ರಂ
ಪರಿ ಸ್ಪಶೋ ಅದಧಾತ್ ಸೂರ್ಯೇಣ ॥ ಋ. ೧-೩೩-೮।

ಅರ್ಥ – ವೃತ್ರನ ದೂತರು ಅಥವಾ ಗುಪ್ತಚರರು ಚಿನ್ನದ ಮಣಿಗಳಿಂದ ಶೋಭಿಸುವಂಥವರಾಗಿ ಮತ್ತು ಭೂಮಿಗೆ ನಡುಪಟ್ಟಿಯನ್ನು ಮಾಡುವಂಥರಾಗಿ

ಭೂಮಿಯ ಸುತ್ತ ಓಡುತಿದ್ದರೂ ಇಂದ್ರನನ್ನು ಸೋಲಿಸಲು ಶಕ್ತರಾಗಲಿಲ್ಲ. ಪ್ರತಿಯಾಗಿ ಇಂದ್ರನೇ ಅವರನ್ನು ಸೂರ್ಯನ ಪ್ರಕಾಶದಿಂದ ಅಡಗಿಸಿಬಿಟ್ಟನು.

ಅಮೀ ಯ ಋಕ್ಷಾ ನಿಹಿತಾಸ ಉಚ್ಚಾ
ನಕ್ತಂ ದದೃಶ್ರೇ ಕುಹ ಚಿದ್ದಿವೇ ಯುಃ ।
ಅದಬ್ಧಾನಿ ವರುಣಸ್ಯ ವ್ರತಾನಿ
ವಿಚಾಕಶಚ್ಚಂದ್ರಮಾ ನಕ್ತಮೇತಿ ॥ ಋ. ೧–೨೪–೧೦ ॥

ಅರ್ಥ– ಬಹಳ ಎತ್ತರದಲ್ಲಿಟ್ಟಿರುವ ಈ ಕರಡಿಗಳು ರಾತ್ರಿ ಕಾಲದಲ್ಲಿ ಕಾಣಿಸುತ್ತವಾದರೂ ಹಗಲಲ್ಲಿ ಎಲ್ಲಿಗೋ ಹೋಗಿರುತ್ತವೆ. ವರುಣನ ಕಟ್ಟಳೆಗಳು ಅನತಿಕ್ರಮಣೀಯವಾಗಿವೆ. ಆದುದರಿಂದಲೇ ಚಂದ್ರನು ರಾತ್ರಿಕಾಲದಲ್ಲಿ ಬೆಳಗುತ್ತ ಸಾಗುತ್ತಾನೆ.

ಕೆಲವು ಮಂದಿ ವಿದ್ವಾಂಸರು, ಕರಡಿಗಳು ಅಥವಾ ಸಪ್ತರ್ಷಿಗಳು ಭಾರತ ವರ್ಷದಲ್ಲಿ ತಲೆಯ ಮೇಲ್ಗಡೆಯಲ್ಲಿ ಅಥವಾ ಎತ್ತರದಲ್ಲಿ ಕಾಣಿಸುವುದಿಲ್ಲವಾದುದರಿಂದ ಋಕ್ಷಾಃ ಎಂಬುದರ ಅರ್ಥವು "ನಕ್ಷತ್ರಗಳೇ" ಹೊರತು ಸಪ್ತರ್ಷಿಗಳಲ್ಲವೆಂದು ವಾದಿಸಿದ್ದಾರೆ. ಆದರೆ ಶತಪಥ ಬ್ರಾಹ್ಮಣದಲ್ಲಿ "ಸಪ್ತರ್ಷಿಗಳನ್ನು ಮೊದಲು ಕರಡಿಗಳೆನ್ನುತಿದ್ದರೆಂದು" ಸ್ಪಷ್ಟವಾಗಿ ಹೇಳಿದೆ— **"ಸಪ್ತರ್ಷೀನು ಹ ವೈಸ್ಮ ಪುರಕ್ಷಾ ಇತ್ಯಾಚಕ್ಷತೇ ॥ ಶ. ಬ್ರಾ. ೨–೧–೨–೪ ॥** ಸೂರ್ಯನು ಉದಯಿಸುವ ಮೊದಲು ಬಹಳ ದಿನಗಳ ಅವಧಿಯ ಉಷಃ ಪ್ರಕಾಶವಿರುತಿದ್ದಿತೆಂಬ ಉಲ್ಲೇಖವು ಮುಂದಿನ ಋಚೆಯಲ್ಲಿದೆ.

ತಾನೀದಹಾನಿ ಬಹುಲಾನ್ಯಾಸನ್
ಯಾ ಪ್ರಾಚೀನಮುದಿತಾ ಸೂರ್ಯಸ್ಯ ।
ಯತಃ ಪರಿ ಜಾರ ಇವಾಚರಂತ್ಯುಷೋ
ದದೃಕ್ಷೇ ನ ಪುನರ್ಯತೀವ॥ ಋ ೭-೭೬-೩॥

ಅರ್ಥ–ಹೇ ಉಷಯೇ, ನೀನು ಸೂರ್ಯನ ಮೊದಲೇ ಉದಯಿಸಿ ಬಹಳ ದಿನಗಳಾದುವು. ಹಾಗಿದ್ದರೂ, ನೀನು ಪ್ರಿಯವಲ್ಲಭನಲ್ಲಿ ಆಚರಿಸುವಂತೆ ಅಂದರೆ ಪ್ರಿಯನನ್ನು ಅಗಲಲು ಇಚ್ಛೆಯಿಲ್ಲದೇ ಅವನ ಸುತ್ತು ಬರುವಂತೆ ತೋರುತ್ತೀಯೇ ಹೊರತು ಮರಳಿ ಹೋಗುವವಳಂತೆ ತೋರುವುದಿಲ್ಲ.

ಆರ್ಯ ಜನರು ನೆಲಸಿದ್ದ ಉತ್ತರ ಧ್ರುವ ಪ್ರದೇಶದ ಅಕ್ಷಾಂಶಗಳಲ್ಲಿ ಅವರಿಗೆ ಸೂರ್ಯನು ವರ್ಷದಲ್ಲಿ ಏಳು ತಿಂಗಳು ಮತ್ತು ಎಂಟನೆಯ ತಿಂಗಳಲ್ಲಿ ಕೆಲವು ದಿನಗಳ ತನಕ ಮಾತ್ರ ಕಾಣಿಸುತಿದ್ದನೆಂಬ ಸೂಚನೆಯು ಮುಂದಿನ ಋಚೆಯಲ್ಲಿದೆ.

ಅಷ್ಟೌ ಪುತ್ರಾಸೋ ಅದಿತೇರ್ಯೇ ಜಾತಾಸ್ತನ್ವಸ್ಪರಿ ।
ದೇವಾಂ ಉಪ ಪ್ರೈತ್ ಸಪ್ತಭಿಃ ಪರಾ ಮಾರ್ತಾಂಡಮಾಸ್ಯತ್
॥ ೧೦-೭೨-೮ ॥

ಅರ್ಥ – ಅದಿತಿಯ ಶರೀರದ ಸುತ್ತಲೂ ಯಾವ ಎಂಟು ಮಂದಿ ಪುತ್ರರು ಹುಟ್ಟಿದರೋ ಅವರಲ್ಲಿ ಏಳ್ವರೊಂದಿಗೆ ಅವಳು ದೇವತೆಗಳ ಬಳಿಗೆ ಹೋದಳು ಮತ್ತು ಎಂಟನೆಯ ಮಾರ್ತಾಂಡನನ್ನು ದೂರಕ್ಕೆ ಎಸೆದಳು.

ಹಿಂದೆ ಉದಹರಿಸಿದ ಋಚೆಯ ಸರಿಯಾದ ಆಶಯವು ಮುಂದಿನ ವಿವರಗಳಿಂದ ಸ್ಪಷ್ಟವಾಗುವುದು. ಋಗ್ವೇದದೊಳಗಿನ ಹಾಗೂ ಇತರ ವೈದಿಕ ಸಾಹಿತ್ಯದೊಳಗಿನ ಕೆಲವು ಉಲ್ಲೇಖಗಳು ಭೂಮಿಯ ಉತ್ತರ ಗೋಲಾರ್ಧವನ್ನು ಅದರಲ್ಲಿಯೂ ಉತ್ತರಧ್ರುವ ಪ್ರದೇಶವನ್ನು **"ದೇವಲೋಕ"** ಅಂದರೆ ದೇವತೆಗಳ ಬೀಡು ಎಂತಲೂ ದಕ್ಷಿಣ ಗೋಲಾರ್ಧವನ್ನು **"ಪಿತೃಲೋಕ"** ಅಂದರೆ ಪಿತೃಗಳ ಬೀಡು ಎಂತಲೂ ಸೂಚಿಸುತ್ತವೆ. ಹಾಗೆಯೇ ಸೂರ್ಯನ ಉತ್ತರಾಯಣವನ್ನು **"ದೇವಯಾನ"** ಎಂತಲೂ ದಕ್ಷಿಣಾಯನವನ್ನು **"ಪಿತೃಯಾಣ"** ಎಂತಲೂ ಸೂಚಿಸುತ್ತವೆ.[1] ಮಾತ್ರವಲ್ಲದೇ ಪ್ರಾಚೀನ ಆರ್ಯಜನರು ನಕ್ಷತ್ರಗಳನ್ನು ದೇವತೆಗಳ ಹೆಸರುಗಳಿಂದ ಕರೆಯುತಿದ್ದರೆಂಬುದನ್ನು ಕೂಡ ತಿಳಿಸುತ್ತವೆ. ಅಲ್ಲಿ ತೊಂಭತ್ತೊಂಭತ್ತು ದಿನಗಳ ರಾತ್ರಿಯು ಕೊನೆಗೊಳ್ಳುವಾಗ ಉತ್ತರಪೂರ್ವ ದಿಕ್ಕಿನಲ್ಲಿ ಬಹಳ ಮಂದವಾದ ಪ್ರಕಾಶವು ಅಥವಾ ನಸಿಕು ಮೇಲೇರುತಿತ್ತು. ಆ ನಸಿಕಿನಲ್ಲಿ ದೂರದ ವಸ್ತುಗಳು ಸ್ಪಷ್ಟವಾಗಿ ಕಾಣಿಸುತ್ತಿರಲಿಲ್ಲ. ಮತ್ತು ಆಕಾಶದಲ್ಲಿ ನಕ್ಷತ್ರಗಳು ಕಾಣಿಸುತಿದ್ದುವು, ಪ್ರಾಚೀನ ಕಾಲದ ಆರ್ಯಜನರು ಆ ನಸಿಕನ್ನು **"ಉಷಸ್"** ಎಂತಲೂ ಆ ನಸಿಕು ಮೇಲೇರಿ ಬರುವ ಹಾದಿಯನ್ನು **"ಸ್ವಸ್ತಿ ಪಥ್ಯಾ"** ಅಂದರೆ ಮಂಗಲಕರ ಹಾದಿ ಎಂತಲೂ ಕರೆಯುತಿದ್ದರು. ಆ ನಸಿಕು ಕಾಣತೊಡಗಿದ ಏಳು ದಿನಗಳ ತರುವಾಯ ಸರಿಯಾದ ಬೆಳಕು ಹರಿಯುತಿತ್ತು. ಮತ್ತು ಆ ಬೆಳಕು ವಿಶಾಲವಾದ ಪ್ರದೇಶಗಳಲ್ಲಿ ಹಬ್ಬಿರುತಿತ್ತು. ಆಗ ನಕ್ಷತ್ರಗಳು ಕಾಣಿಸುತ್ತಿರಲಿಲ್ಲ. ಆರ್ಯಜನರು ಆ ಬೆಳಕನ್ನು **"ಅದಿತಿ"** ಎಂದು ಕರೆದಿದ್ದರು. ಅದಿತಿಯು ಕಾಣಿಸಿದ ಏಳು ದಿನಗಳಲ್ಲಿ ಸೂರ್ಯನ ಕಿರಣಗಳಿಂದ ರಂಜಿತವಾದ ಹಾಗೂ ಉಜ್ವಲವಾದ ಹೊಂಬೆಳಕು ಕಾಣಿಸತೊಡಗುತಿತ್ತು. ಆರ್ಯಜನರು ಆ ಹೊಂಬೆಳಕನ್ನು **"ಸರಸ್ವತೀ"** ಅಂದರ **ಸರಸ್ವಾನ್ ಎಂಬವನ ಪ್ರಕಾಶದ ಪ್ರವಾಹ"** ಎಂದು ಕರೆದಿದ್ದರು. ಸರಸ್ವತಿಯು ಕಾಣಿಸಿದ ಏಳುದಿನಗಳಲ್ಲಿ ಸೂರ್ಯನ ಕಿರಣಗಳು ಕಾಣಿಸುತಿದ್ದುವು

---

[1] ಅಂತರ್ವಿದ್ವಾನ್ ಅಧ್ವನೋ ದೇವಯಾನಾನ್ ॥ ಋ. ೧-೭೨-೭ ॥
ವಿದ್ವಾನ್ ಪಥ ಋತು ಶೋ ದೇವಯಾನಾನ್ ॥ ಋ. ೧೦-೯೮-೧೧ ॥
ಪಂಥಾಮನು ಪ್ರವಿದ್ವಾನ್ ಪಿತೃಯಾಣಮ್ ॥ ಋ. ೧೦-೨-೭ ॥

ಮತ್ತು ನಾಲ್ಕೇ ದಿನಗಳಲ್ಲಿ ಉತ್ತರ ಮತ್ತು ಪೂರ್ವದಿಕ್ಕುಗಳ ಮಧ್ಯದಲ್ಲಿ ಸೂರ್ಯ ಬಿಂಬದ ಒಂದು ಚಿಕ್ಕ ಅಂಶವು ಕಾಣಿಸತೊಡಗುತಿತ್ತು. ಆ ಪ್ರಕಾರವಾಗಿ ಅದಿತಿಯ ಉದಯದ ತರುವಾಯವೇ ಸೂರ್ಯನ ಪ್ರಕಾಶವೂ ಸೂರ್ಯನ ಬಿಂಬವೂ ಕಾಣಿಸುತಿದ್ದುದರಿಂದ ಅಲ್ಲಿ ನೆಲಸಿದ್ದ ಆರ್ಯಜನರು ಸೂರ್ಯನನ್ನು ಆದಿತ್ಯ ಅಂದರೆ ಅದಿತಿಯ ಪುತ್ರ ಎಂದು ಕರೆದಿದ್ದರು. ಸಾಧಾರಣ ಒಂಭತ್ತು ಸಾವಿರ ವರ್ಷಗಳ ಹಿಂದೆ ಉತ್ತರ ಧ್ರುವ ಪ್ರದೇಶದ ಜನರಿಗೆ ಉತ್ತರ ಪೂರ್ವದಲ್ಲಿ ನಸಿಕು ಕಾಣಿಸುವಾಗ ತಿಷ್ಯ ಎಂಬ ನಕ್ಷತ್ರವು ಕಾಣಿಸುತಿತ್ತು. ಬಹಳ ವರ್ಷಗಳ ತರುವಾಯ ಅದೇ ಸ್ಥಳದಲ್ಲಿ ಅವರಿಗೆ ಪುನರ್ವಸೂ ನಕ್ಷತ್ರ ಪುಂಜವು ಕಾಣಿಸತೊಡಗಿತ್ತು. ಮುಂದೆ ನಕ್ಷತ್ರ ಪುಂಜಗಳಿಗೆ ದೇವತೆಗಳನ್ನು ನಿರ್ಧರಿಸುವಾಗ ಅದಿತಿಯನ್ನು ಪುನರ್ವಸೂ ನಕ್ಷತ್ರದ ದೇವತೆಯನ್ನಾಗಿ ಮಾಡಿದರು, ಅದರ ತರುವಾಯದಿಂದ ಅದಿತಿ ಶಬ್ದದಿಂದ ಪುನರ್ವಸೂ ನಕ್ಷತ್ರವೂ ಸೂಚಿತವಾಗತೊಡಗಿತು.

ಅಲ್ಲಿ ಸೂರ್ಯನು ಉದಯಿಸಿದ ತರುವಾಯ ಅವನು ಅವರಿಗೆ ಹಿಂದೆ ವಿವರಿಸಿದಂತೆ ಚಾಂದ್ರಮಾನ ಗಣನೆಯ ಪ್ರಕಾರ ಏಳು ತಿಂಗಳು ಮತ್ತು ಎಂಟನೆಯ ತಿಂಗಳಲ್ಲಿ ಒಂಭತ್ತು ದಿನಗಳ ತನಕ ಕಾಣಿಸುತಿದ್ದುದರಿಂದ ಅವರು ತಮ್ಮ ವರ್ಷವನ್ನು ಸ್ಥೂಲವಾಗಿ **""ಸೂರ್ಯನು ಕಾಣಬರುವ ಏಳು ತಿಂಗಳು"** ಮತ್ತು **"ಸೂರ್ಯನು ಕಾಣಬರದ ಐದು ತಿಂಗಳು"** ಎಂಬುದಾಗಿ ಎರಡು ವಿಭಾಗಗಳನ್ನಾಗಿ ಮಾಡಿದ್ದರು. ಋಗ್ವೇದದ ಮಂತ್ರಗಳಲ್ಲಿ ಸೂರ್ಯನ ಸಂಬಂಧದಲ್ಲಿ ಉಲ್ಲೇಖಿಸಲ್ಪಟ್ಟಿರುವ—**"ಸಪ್ತ ತ್ವಾ ಹರಿತೋ ರಥೇ ವಹಂತಿ ದೇವ ಸೂರ್ಯ । ಶೋಚಿಷ್ಕೇಶಂ ವಿಚಕ್ಷಣ ॥೧–೫೦–೮॥** ಅಂದರೆ–"ಸರ್ವ ನಿರೀಕ್ಷಕನಾಗಿರುವ ಹೇ ಸೂರ್ಯ ದೇವನೇ, ಕಪಿಲವರ್ಣದ ಏಳು ಕುದುರೆಗಳು ಪ್ರಕಾಶದ ಕಿರಣಗಳೇ ಕೂದಲಾಗಿರುವ ನಿನ್ನನ್ನು ರಥದಲ್ಲಿ ಒಯ್ಯುತ್ತವೆ", **"ಸಪ್ತಯುಂಜಂತಿ ರಥಮೇಕಚಕ್ರಮೇಕೋ ಅಶ್ವೋ ವಹತಿ ಸಪ್ತನಾಮಾ ॥ ೧-೧೬೪-೨"**. ಅಂದರೆ—"ಏಳ್ವರು ಒಂದೇ ಚಕ್ರದ ರಥವನ್ನು ಹೂಡುತ್ತಾರೆ ಮತ್ತು ಏಳು ಹೆಸರುಗಳ ಒಂದು ಕುದುರೆಯು ಆ ರಥವನ್ನು ಹೊತ್ತುಕೊಂಡು ಸಾಗುತ್ತದೆ, **"ಇಮಂ ರಥಮಧಿ ಯೇ ಸಪ್ತ ತಸ್ಥುಃ ಸಪ್ತ ಚಕ್ರಂ ಸಪ್ತವಹಂತ್ಯಶ್ವಾಃ ೧-೧೬೪-೩॥** ಅಂದರೆ "ಏಳು ಚಕ್ರಗಳ ರಥವನ್ನು ಏಳ್ವರು ಹತ್ತಿ ಕೂತಿದ್ದಾರೆ, ಮತ್ತು ಏಳು ಕುದುರೆಗಳು ಆ ರಥವನ್ನು ಹೊತ್ತುಕೊಂಡು ಸಾಗುತ್ತವೆ. **"ತಂ ಸೂರ್ಯಂ ಹರಿತಃ ಸಪ್ತ ಯಹ್ವೀ ಸ್ಪೃಶಂ ವಿಶ್ವಸ್ಯ ಜಗತೋ ವಹಂತಿ" ॥೪–೧೩–೩॥** ಅಂದರೆ–"ಹರೆಯದ ಬಲಶಾಲಿಗಳಾದ ಹಾಗೂ ಕಪಿಲ ವರ್ಣದ ಏಳು ಕುದುರೆಗಳು ಇಡೀ ಜಗತ್ತನ್ನು ನೋಡುವ ಆ ಸೂರ್ಯನನ್ನು ಹೊತ್ತುಕೊಂಡು ಸಾಗುತ್ತವೆ–ಮುಂತಾದ ಕಲ್ಪನೆಗಳ ಮೂಲವು ಉತ್ತರ ಧ್ರುವ ಪ್ರದೇಶದಲ್ಲಿ ನೆಲಸಿದ್ದ ಆರ್ಯಜನರಿಗೆ ಸೂರ್ಯನು ವರ್ಷದಲ್ಲಿ ಏಳು ತಿಂಗಳ ಕಾಲ ಕಾಣಿಸುತಿದ್ದು ಎಂಟನೆಯ ತಿಂಗಳಲ್ಲಿ ಮುಳುಗಿ ಕಾಣದಾಗತಿದ್ದುದೇ ಆಗಿದ್ದಿತೆಂಬು

ದರಲ್ಲಿ ಸಂದೇಹವಿಲ್ಲ, ಅದಿತಿಯ ಏಳ್ವರು ಪುತ್ರರೆಂದರೆ, ಏಳ್ವರು ಆದಿತ್ಯರೆಂಬು ದನ್ನೂ, ಆದಿತ್ಯ ಎಂಬ ಶಬ್ದವು ತಿಂಗಳು ಎಂಬರ್ಥದಲ್ಲಿ ಪ್ರಯೋಗಿಸಲ್ಪಡುತಿದ್ದಿ ತೆಂಬುದನ್ನೂ ಸ್ಪಷ್ಟವಾಗಿ ತಿಳಿಸುವ ಉಲ್ಲೇಖಗಳು ವೈದಿಕ ಸಾಹಿತ್ಯದಲ್ಲಿವೆ, ಹಾಗೆಯೇ ಆರ್ಯಜನರು ಉತ್ತರ ಧ್ರುವ ಪ್ರದೇಶವನ್ನು ತೊರೆದು ಕೆಳಗಿನ ಅಕ್ಷಾಂಶಗಳಲ್ಲಿರುವ ಪ್ರದೇಶಗಳಿಗೆ ಬಂದು ನೆಲಸಿದ ತರುವಾಯ ಆಯಾ ಪ್ರದೇಶದ ಅಕ್ಷಾಂಶಕ್ಕನುಸಾರವಾಗಿ ಆದಿತ್ಯರ ಸಂಖ್ಯೆಯು ಏಳರಿಂದ, ಎಂಟು, ಒಂಭತ್ತು, ಹತ್ತು ಮುಂತಾಗಿ ಏರುತ್ತ ಕಟ್ಟಕಡೆಗೆ ಹದಿನೆರಡಾದ ಉಲ್ಲೇಖಗಳೂ ವೈದಿಕ ಸಾಹಿತ್ಯದಲ್ಲಿವೆ. ಮುಂದಿನ ಋಚೆಯಲ್ಲಿ ಏಳ್ವರು ಆದಿತ್ಯರ ಉಲ್ಲೇಖವಿದೆ.

ಸಪ್ತದಿಶೋ ನಾನಾ ಸೂರ್ಯಾಃ ಸಪ್ತ ಹೋತಾರ ಋತ್ವಿಜಃ ।
ದೇವಾ ಆದಿತ್ಯ ಯೇ ಸಪ್ತ ತೇಭಿಃ ಸೋಮಾಭಿರಕ್ಷನಃ
ಇಂದ್ರಾಯೇಂದೋ ಪರಿಸ್ರವ ॥ ಋ ೯-೧೧೪-೩॥

ಅರ್ಥ—ಏಳು ದಿಕ್ಕುಗಳು, ನಾನಾ ಸೂರ್ಯರು ಮತ್ತು ಋತ್ವಿಜರಾದ ಏಳ್ವರು ಹೋತೃಗಳಿದ್ದಾರೆ. ಹೇ ಸೋಮನೇ, ನೀನು ಅವರೊಂದಿಗೂ, ದೇವರಾದ ಯಾವ ಏಳ್ವರು ಆದಿತ್ಯರಿದ್ದಾರೋ ಅವರೊಂದಿಗೂ ಕೂಡಿ ನಮ್ಮನ್ನು ಕಾಪಾಡು, ಹೇ ಇಂದುವೇ, ನೀನು ಇಂದ್ರನಿಗಾಗಿ ಹೊರಸೂಸು.

ಆದಿತ್ಯ ಶಬ್ದವು ತಿಂಗಳು ಎಂಬರ್ಥವಲ್ಲಿ ಬಳಸಲ್ಪಡುತಿದ್ದಿತೆಂಬುವರ ಪ್ರಮಾಣವು ಮುಂದಿನಂತಿದೆ.— **"ಕತಮ ಆದಿತ್ಯಾ ಇತಿ॥ ದ್ವಾದಶ ಮಾಸಾಃ ಸಂವತ್ಸರಸ್ಯ ಏತ ಆದಿತ್ಯಾಃ ॥ಶ. ಬ್ರಾ. ೧೧—೬—೩—೮॥** ಅಂದರೆ—"ಆದಿತ್ಯರೆಂದರೆ ಯಾರು? ವರ್ಷವ ಹದಿನೆರಡು ಮಾಸಗಳು, ಇವರೇ ಆದಿತ್ಯರು. ಅದಿತಿಯ ಪುತ್ರರಿಗೆ ಸಂಬಂಧಪಟ್ಟ ಬೇರೊದು ಋಚೆಯು ಮುಂದಿನಂತಿದೆ—

ಸಪ್ತಭಿಃ ಪುತ್ರೈರದಿತಿರುಪಪ್ರೈತ್ ಪೂರ್ವ್ಯಂ ಯುಗಮ್ ।
ಪ್ರಜಾಯೈ ಮೃತ್ಯವೇ ತ್ವತ್ ಪುನರ್ ಮಾರ್ತಾಂಡಮಾಭರತ್॥
೧೦—೭೨—೯॥

ಅರ್ಥ—ಅದಿತಿಯು ತನ್ನ ಏಳ್ವರು ಪುತ್ರರೊಂದಿಗೆ ಮೊದಲಿನ ಕಾಲಗಣನೆ ಯನ್ನು ಸಮಿಾಪಿಸಿದಳು ಅಥವಾ ಪ್ರಾರಂಭಿಸಿದಳು, ಮತ್ತು ಎಂಟನೆಯ ಮಾರ್ತಾಂಡನನ್ನು ಕೂಡ ಹುಟ್ಟಲಿಕ್ಕಾಗಿ ಮತ್ತು (ಒಡನೆಯೇ) ಸಾಯುಲಿಕ್ಕಾಗಿ ಅಲ್ಲಿಗೆ ಹೊತ್ತು ತಂದಳು. ಅಂದರೆ ಅದಿತಿಯು ತನ್ನ ಎಂಟನೆಯ ಪುತ್ರ ಮಾರ್ತಾಂಡ ನನ್ನು ಕೂಡ ಅಲ್ಲಿಗೆ ತಂದು ಕಾಲಗಣನೆಯಲ್ಲಿ ಸೇರಿಸಿದ್ದಳು. ಆದರೆ ಅವನು ಮೃತ ಅಂಡದಿಂದ ಹುಟ್ಟಿದವನಾದುದರಿಂದ ಹೆಚ್ಚು ದಿನ ಬದುಕದೇ ಸತ್ತು ಹೋದನು.

ಅದಿತಿಯ ಪುತ್ರ ಮಾರ್ತಾಂಡನ ಸಂಬಂಧದಲ್ಲಿ ಹಲವು ಬಗೆಯ ಆಖ್ಯಾ ಯಿಕೆಗಳಿವೆಯಾದರೂ ಅವುಗಳು ಅಷ್ಟು ಸ್ಪಷ್ಟವಿಲ್ಲ, ಆದರೆ ಶತಪಥ ಬ್ರಾಹ್ಮಣದ

೩-೧ ೩-೩ರಲ್ಲಿ ಬಂದಿರುವ ಆಖ್ಯಾಯಿಕೆಯು ಮಾತ್ರ ಕೊಂಚ ಸ್ಪಷ್ಟವಿದೆ, ಅವರಲ್ಲಿ ಅದಿತಿಗೆ ಹುಟ್ಟಿದ ಎಂಟು ಮಂದಿ ಪುತ್ರರಲ್ಲಿ ಏಳ್ವರನ್ನು ಮಾತ್ರ ಆದಿತ್ಯರು ಮತ್ತು ದೇವರು ಎನ್ನುತಿದ್ದರೆಂದೂ ಅದಿತಿಯು ಎಂಟನೆಯ ಮಾರ್ತಾಂಡನನ್ನು ಪೂರ್ಣ ರೂಪುಗೊಳ್ಳದ ಮಾಂಸದ ಮುದ್ದೆಯಂತೆ ಹೆತ್ತಿದ್ದಳೆಂದೂ ಹೇಳಿದೆ— **"ಅಷ್ಟೌ ಹ ವೈಪುತ್ರಾ ಅದಿತೇಃ । ಯಾಂಸ್ತ್ವೇತದ್ದೇವಾ ಇತ್ಯಾಚಕ್ಷತೇ ಸಪ್ತ ಹೈವ ತೇಽವಿಕೃತ ಹಾಷ್ಟಮಂ ಜನಯಾಂ ಚಕಾರ ಮಾರ್ತಾಂಡಂ ಸಂದೇಘೋಹೈವಾಸ॥** ತಾತ್ಪರ್ಯವೇನೆಂದರೆ ಉತ್ತರ ಧ್ರುವಪ್ರದೇಶದಲ್ಲಿ ನೆಲಸಿದ್ದ ಆರ್ಯ ಜನರಿಗೆ ಸೂರ್ಯನು ಎಂಟನೆಯ ತಿಂಗಳಲ್ಲಿ ಒಂಭತ್ತು ದಿನಗಳಿಗಿಂತ ಹೆಚ್ಚು ಕಾಲ ಕಾಣಿಸುತಿದ್ದಿಲ್ಲವಾದುದರಿಂದ ಅವರು ಆ ಎಂಟನೆಯ ತಿಂಗಳನ್ನು ಸೂರ್ಯನು ಕಾಣ ಬರುವ ತಿಂಗಳಲ್ಲಿ ಎಣಿಸುತಿದ್ದಿಲ್ಲ,

ಅವರ ಕಾಲಗಣನೆಯು ಮಾಸವು ಚಂದ್ರನಾಗಿದ್ದನೆಂಬುದು ಮುಂದಿನ ಅಂಶದಿಂದ ಗೊತ್ತಾಗುತ್ತದೆ— **ಸಮಾನಾಂ ಮಾಸ ಆಕೃತಿಃ ॥ಋ ೧೦-೮೫-೫॥** ಅಂದರೆ—ವರ್ಷಗಳಿಗೆ ಚಂದ್ರನೇ ಮಾಸವಾಗಿದ್ದಾನೆ.

ಹಿಂದೆ ಉದಹರಿಸಿದ ಪ್ರಮಾಣಗಳು ಋಗ್ವೇದದ ಮಂತ್ರಗಳಲ್ಲಿ ಮತ್ತು ಇತರ ವೈದಿಕ ಸಾಹಿತ್ಯದಲ್ಲಿ ಉತ್ತರ ಧ್ರುವಪ್ರದೇಶದ ಭೌಗೋಲಿಕ ಮತ್ತು ಪ್ರಾಕೃತಿಕ ಪರಿಸ್ಥಿತಿಗೆ ಸಂಬಂಧಪಟ್ಟ ಹಲವು ಐತಿಹ್ಯಗಳು ಅಡಕವಾಗಿವೆಯೆಂಬುದನ್ನು ಸಿದ್ಧಪಡಿಸುತ್ತವೆ, ಅವರೆ ಸಾವಿರಾರು ಮಂತ್ರಗಳಲ್ಲಿ ಅಡಗಿರುವ ಐತಿಹ್ಯಗಳನ್ನು ಯಥಾಸ್ಥಿತಿಯಲ್ಲಿ ಕಂಡುಹಿಡಿಯುವುದು ಮಾತ್ರ ಬಹಳ ಶ್ರಮಸಾಧ್ಯವಾಗಿದೆ. ಕಾರಣವೇನೆಂದರೆ ಅಂಥ ಆ ಮಂತ್ರಗಳು ಧ್ವನ್ಯಾತ್ಮಕಲಿಪಿಯು ನಿರ್ಮಿಸಲ್ಪಡುವ ಬಹುಕಾಲ ಮೊದಲು ರಚಿಸಲ್ಪಟ್ಟವುಗಳಾಗಿದ್ದುದರಿಂದ ಅವುಗಳಲ್ಲಿ ಬೆಳಕು, ಕತ್ತಲೆ, ಆಕಾಶ, ಕ್ಷಿತಿಜ, ಮೊದಲಾದ ಆಕಾರರಹಿತ ವಿಷಯಗಳು ಮೂರ್ತೀಕರಿಸಲ್ಪಟ್ಟು ರೂಪವುಳ್ಳ ವಿಷಯಗಳ ಮತ್ತು ಪ್ರಾಣಿಗಳ ಹೆಸರುಗಳಿಂದ ಉಲ್ಲೇಖಿಸಲ್ಪಟ್ಟಿವೆ. ಆದುದರಿಂದ ಆ ಮಂತ್ರಗಳು ಯಾವ ಪೃಷ್ಠಭೂಮಿಯಲ್ಲಿ ಅಥವಾ ಹಿನ್ನೆಲೆಯಲ್ಲಿ ರಚಿಸಲ್ಪಟ್ಟಿದ್ದವೆಂಬುದರ ಅರಿವಿಲ್ಲದೇ ಅವುಗಳ ಅರ್ಥವನ್ನು ಕಂಡುಕೊಳ್ಳಲು ಸಾಧ್ಯವಿಲ್ಲ. ಪರಂತು ದಿವಂಗತ ಲೋಕಮಾನ್ಯರು "ವೇದಗಳಲ್ಲಿ ಉತ್ತರ ಧ್ರುವ ಪ್ರದೇಶದ ವಸತಿ" ಎಂಬ ಒಂದು ಪೃಷ್ಠಭೂಮಿಯನ್ನು ಒದಗಿಸಿಕೊಟ್ಟಿರುವುದರಿಂದ ಹಲವು ಮಂತ್ರಗಳ ತಾತ್ಪರ್ಯವನ್ನು ತಿಳಿದುಕೊಳ್ಳುವುದು ಸುಲಭ(?)ವಾಗಿದೆ.

ಋಗ್ವೇದ ಮಂತ್ರಗಳ ಒಂದು ಮುಖ್ಯ ವೈಶಿಷ್ಟ್ಯವೆಂದರೆ ಅವುಗಳಲ್ಲಿ ಪ್ರಯೋಗಿಸಲ್ಪಟ್ಟ ನೂರಾರು ನಾಮಪದಗಳು ಅವುಗಳ ವಾಚ್ಯಾರ್ಥವನ್ನು ಅಥವಾ ವಾಸ್ತವಿಕ ಅರ್ಥವನ್ನು ಬಿಟ್ಟು ಬೇರೆಯೇ ಅರ್ಥಗಳಲ್ಲಿ ಸಂಕೇತಗಳಾಗಿ ಪ್ರಯೋಗಿಸಲ್ಪಟ್ಟಿರುವುದಾಗಿದೆ. ಉದಾಹರಣೆಗಾಗಿ ಹೇಳುವುದಾದರೆ **"ಗಾವಃ"** ಎಂಬುವರ

ವಾಚ್ಯಾರ್ಥವು **"ದಿನಗಳು"** ಎಂದಿದ್ದರೂ ಆ ಶಬ್ದವು ಋಗ್ವೇದದಲ್ಲಿ ಸರ್ವತ್ರ **"ಸೂರ್ಯ ಪ್ರಕಾಶ"** ಎಂಬರ್ಥದಲ್ಲಿ ಪ್ರಯೋಗಿಸಲ್ಪಟ್ಟಿದೆ. ಹಾಗೆಯೇ **"ಆಪಃ"** ಎಂಬುದರ ಅರ್ಥವು ನೀರುಗಳು ಮತ್ತು **"ಸಿಂಧು"** ಎಂಬುದರ ಅರ್ಥವು ನದಿ ಎಂದಿದ್ದರೂ ಆ ಶಬ್ದಗಳು "ಪ್ರಕಾಶದ ಪ್ರವಾಹ" ಇಲ್ಲವೇ "ಬೆಳಕು ಹರಿಯುವಿಕೆ" ಎಂಬರ್ಥದಲ್ಲಿಯೂ, ಕಡಲು ಎಂಬರ್ಥದ **"ಸಮುದ್ರ, ಅರ್ಣವ"** ಮೊದಲಾದ ಶಬ್ದಗಳು "ಆಕಾಶ, ಕ್ಷಿತಿಜ, ಮತ್ತು ಕ್ಷಿತಿಜದ ಕೆಳಭಾಗ" ಎಂಬರ್ಥದಲ್ಲಿಯೂ ಪ್ರಯೋಗಿಸಲ್ಪಟ್ಟಿವೆ. ಮತ್ತು ಬೆಟ್ಟ ಎಂಬರ್ಥದ **"ಅದ್ರಿ, ಗಿರಿ, ಪರ್ವತ"** ಮೊದಲಾದ ಶಬ್ದಗಳು ದಟ್ಟವಾದ ಕತ್ತಲೆ ಎಂಬರ್ಥದಲ್ಲಿಯೂ, ಸುತ್ತು ಅಥವಾ ಆವರಣ ಎಂಬರ್ಥದ **"ವೃತ್ರ, ಪುರ ಮತ್ತು ಗೋತ್ರ"** ಎಂಬ ಶಬ್ದಗಳು ಕತ್ತಲೆಯ ಆವರಣ ಎಂಬರ್ಥದಲ್ಲಿಯೂ ಗೋವುಗಳನ್ನು ಅಥವಾ ಸೂರ್ಯ ಪ್ರಕಾಶವನ್ನು ತಡೆದಿಟ್ಟ ಸುತ್ತು ಗೋಡೆ ಎಂಬರ್ಥದಲ್ಲಿಯೂ ಪ್ರಯೋಗಿಸಲ್ಪಟ್ಟಿವೆ ಹಾಗೆಯೇ ದೀರ್ಘ ರಾತ್ರಿಯ ಕಾಲದಲ್ಲಿ ಕಾಣಿಸುವ ನಕ್ಷತ್ರ ಪುಂಜಗಳನ್ನು, ಅಸುರ, ದಸ್ಯು, ದಾಸ ಮುಂತಾದ ಸಾಮಾನ್ಯ ನಾಮಗಳಿಂದಲೂ ಅನರ್ಶನಿ, ಅಹಿ, ಅಹೀಶುವ, ನಮುಚಿ, ಪಣಿ, ಪಿಪ್ರು, ವಲ, ವೃಕ, ಶಂಬರ, ಶುಷ್ಣ, ಸೃಬಿಂದ ಮೊದಲಾದ ವಿಶಿಷ್ಟನಾಮಗಳಿಂದಲೂ ಕರೆದಿದೆ. ಮತ್ತು ಇಂದ್ರನು ಅವರೊಂದಿಗೆ ಕಾದಾಡಿ, ಅವರು ಬಂಧಿಸಿಟ್ಟ ಗೋವುಗಳನ್ನು ಬಿಡಿಸುತ್ತಾನೆಂದೂ, ಜಲಗಳನ್ನು ಪ್ರವಹಿಸುವಂತೆ ಮಾಡುತ್ತಾನೆಂದೂ ಸೂರ್ಯನನ್ನು ಆಕಾಶಕ್ಕೇರಿಸುತ್ತಾನೆಂದೂ ವರ್ಣಿಸಿದೆ.

ಋಗ್ವೇದದಲ್ಲಿ ವಿಶ್ವೇ ದೇವರ ಸಂಖ್ಯೆಯು ಮೂವತ್ತಮೂರಾಗಿದೆ. ಮತ್ತು ಋಗ್ವೇದದ ವಿಶ್ವೇದೇವಸೂಕ್ತಗಳಲ್ಲಿ ಸ್ತುತಿಸಲ್ಪಟ್ಟ ಅಧಿಕಾಂಶ ಹೆಸರುಗಳು ನಕ್ಷತ್ರಪುಂಜಗಳಿಗಾಗಿ ನಿರ್ಧರಿಸಿದ ದೇವತೆಗಳ ಹೆಸರುಗಳೇ ಆಗಿವೆ. ಹಾಗೆಯೇ ಯಜುರ್ವೇದದ ತೈತ್ತಿರೀಯ ಸಂಹಿತೆಯಲ್ಲಿ ಪ್ರಜಾಪತಿಗೆ ಮೂವತ್ತಮೂರು ಹೆಣ್ಣುಮಕ್ಕಳಿದ್ದರೆಂದೂ, ಅವನು ಅವರನ್ನು ಚಂದ್ರನಿಗೆ ಕೊಟ್ಟನೆಂದೂ ಹೇಳಿದೆ. ಅರ್ಥಾತ್ ಋಗ್ವೇದದೊಳಗಿನ ವಿಶ್ವೇ ದೇವರುಗಳೆಂದರೆ ನಕ್ಷತ್ರಗಳೇ ಎಂಬುದರಲ್ಲಿ ಸಂದೇಹವುಳಿಯುವುದಿಲ್ಲ. ಆದರೆ ಬ್ರಾಹ್ಮಣ ಗ್ರಂಥಗಳಲ್ಲಿ ಅವುಗಳ ವರ್ಣನೆಯು ಬೇರೆ ರೀತಿಯಲ್ಲಿದೆ. ಅಂದರೆ ದೇವತೆಗಳು ಮತ್ತು ಅಸುರರು ಪ್ರಜಾಪತಿಯ ಮಕ್ಕಳೆಂತಲೂ, 1 ಅಸುರರು ಸ್ವರ್ಗಲೋಕಕ್ಕೇರಲು ದೇವತೆಗಳೊಂದಿಗೆ ಸ್ಪರ್ಧಿಸುತಿದ್ದರೆಂತಲೂ, ದೇವತೆಗಳು ಹಗಲನ್ನು ಮತ್ತು ಅಸುರರು ರಾತ್ರಿಯನ್ನು ಆಶ್ರಯಿಸಿ

---

1. ದೇವಾಶ್ಚ ವಾ ಅಸುರಾಶ್ಚ । ಉಭಯೇ ಪ್ರಾಜಾಪತ್ಯಾಃ ಪಸ್ಪೃಧಿರೇ ॥ ಶ. ಬ್ರಾ. 1. ೩-೪-೪-೩ ॥

ಪ್ರಜಾಪತಿರ್ದೇವಾಸುರಾನಸೃಜತ ॥ ತೈ. ಬ್ರಾ. ೨-೨-೩-೩ ॥

ದರೆಂತಲೂ, ಅವರು ಸಮಾನ ಬಲವೀರ್ಯಗಳಿಂದ ಕೂಡಿದ್ದರೆಂತಲೂ, [1] ಪ್ರಜಾಪತಿಯು ಸೃಷ್ಟಿಸಿದ ದೇವಾಸುರರು ಸಮಾನರಾಗಿದ್ದುದರಿಂದ ಅವರಲ್ಲಿ ದೇವತೆಗಳಾರು ಅಸುರರಾರು ಎಂಬುದನ್ನು ತಿಳಿಯಲಾಗುತಿದ್ದಿಲ್ಲವೆಂದೂ ಹೇಳಿದೆ [2] ಅರ್ಥಾತ್ ದೇವತೆಗಳೆಂದರೆ ಉತ್ತರಧ್ರುವ ಪ್ರದೇಶದಲ್ಲಿ ಸೂರ್ಯನ ಉತ್ತರಾಯಣದ ರಾತ್ರಿಗಳಲ್ಲಿ ಕಾಣಿಸುತ್ತಿದ್ದ ನಕ್ಷತ್ರಪುಂಜಗಳೆಂತಲೂ, ಅಸುರರೆಂದರೆ ಸೂರ್ಯನ ದಕ್ಷಿಣಾಯನ ಕಾಲದ ದೀರ್ಘರಾತ್ರಿಯಲ್ಲಿ ಕಾಣಿಸುತಿದ್ದ ನಕ್ಷತ್ರಗಳೆಂತಲೂ ಸಂದೇಹವಿಲ್ಲದೇ ಹೇಳಬಹುದು.

ಋಗ್ವೇದದಲ್ಲಿ ಉತ್ತರ ಎಂಬ ಶಬ್ದವು ಎತ್ತರ ಮತ್ತು ಮೇಲು ಎಂಬರ್ಥಗಳಲ್ಲಿ ಉಪಯೋಗಿಸಲಾಗಿದೆ. ಮತ್ತು ಅದು ಉತ್ತರಧ್ರುವ ಪ್ರದೇಶದ ಮಟ್ಟಿಗೆ ಸೂರ್ಯನು ಮೇಲೆ ಬರುವ ಅಥವಾ ಮೂಡುವ ದಿಕ್ಕಾಗಿರುತ್ತದೆ. ಹಾಗೆಯೇ ಅಧರ ಎಂಬ ಶಬ್ದವು ಕೆಳಗು ಮತ್ತು ದಕ್ಷಿಣ ಎಂಬರ್ಥದಲ್ಲಿ ಉಪಯೋಗಿಸಲ್ಪಟ್ಟಿದೆ. ಮತ್ತು ಅದು ಉತ್ತರಧ್ರುವ ಪ್ರದೇಶದಲ್ಲಿ ಸೂರ್ಯನು ಕೆಳಗಿಳಿಯುವ ಅಥವಾ ಕಂತುವ ದಿಕ್ಕಾಗಿರುತ್ತದೆ. ಆದುದರಿಂದ ಉತ್ತರಧ್ರುವ ಪ್ರದೇಶದಲ್ಲಿರುವವರಿಗೆ ಸೂರ್ಯನು ಮೂಡುವ ಮತ್ತು ಕಂತುವ ಬಿಂದುಗಳ ಸರಿಮಧ್ಯ ಬಿಂದುವು ಪೂರ್ವ ದಿಕ್ಕಾಗಿರುತ್ತದೆ. ಆರ್ಯಜನರು ಸೂರ್ಯೋದಯದ ಮೊದಲಿನ ಪ್ರಕಾಶವನ್ನು ಅಥವಾ ಸೂರ್ಯನ ಕಿರಣಗಳನ್ನು "ಗಾವಃ" ಎಂದೂ ಪ್ರಕಾಶದ ಪ್ರವಾಹವನ್ನು ಅಥವಾ ಬೆಳಕು ಸುತ್ತಿ ಬರುವುದನ್ನು "ಸಿಂಧುಃ" ಅಂದರೆ ನದಿಯೆಂದು ಏಕೆ ಕರೆದಿದ್ದರೆಂದು ಊಹಿಸುವುದು ತುಂಬಾ ಕಠಿಣವಾಗಿದೆ. ಹಾಗೆಯೇ ಋಗ್ವೇದದಲ್ಲಿ ಉಲ್ಲೇಖಿಸಲ್ಪಟ್ಟಿರುವ ಮೂವತ್ತಮೂರು ನದಿಗಳಲ್ಲಿ ದಿವ್ಯ ನದಿಗಳಾವುವು, ವಾಸ್ತವವಾದ ಪಾರ್ಥಿವ ನದಿಗಳಾವುವು ಎಂಬುದನ್ನು ಹೇಳುವುದು ಕೂಡ ಸುಲಭವಲ್ಲ. ಕೆಲವು ನದಿಗಳ ವರ್ಣನೆಯ ಮೇಲಿಂದ ಅವುಗಳು ದಿವ್ಯನದಿಗಳೆಂದು ತಿಳಿಯಲು ಸಾಧ್ಯವಿದೆ. ಮತ್ತು ಅಂಥ ದಿವ್ಯನದಿಗಳಲ್ಲಿ ಸರಸ್ವತಿಯು ಶ್ರೇಷ್ಠಳಾಗಿದ್ದು ಹೆಚ್ಚು ಪ್ರಕಾಶವುಳ್ಳವಳಾಗಿದ್ದಾಳೆಂದು ಗೊತ್ತಾಗುತ್ತದೆ. ಹಾಗಾಗಿ ಅವಳು ಬಹಳ ಪ್ರಾಚೀನಕಾಲದಲ್ಲಿಯೇ ದೇವಿಯೆಂದು ಕರೆಯಲ್ಪಟ್ಟು ಪ್ರತಿಮಾರೂಪದಿಂದ ಆರಾಧಿಸಲ್ಪಡುತಿದ್ದಳೆಂದು ಋಗ್ವೇದದ ಮಂತ್ರಗಳಿಂದ ತಿಳಿದುಬರುತ್ತದೆ. ಋಗ್ವೇದದಲ್ಲಿ—ಮೂರು ಇಡೀ ಸೂಕ್ತಗಳು (= ೫–೬೧; ೭–೯೫ ಮತ್ತು ೯೬) ಸರಸ್ವತೀ ದೇವಿಗೆ ಅರ್ಪಿಸಲ್ಪಟ್ಟಿವೆಯಲ್ಲದೇ ಬೇರೆ ಹಲವು ಸೂಕ್ತಗಳಲ್ಲಿ ಕೂಡ

---

1 ಅಹರ್ವೈ ದೇವಾ ಅಶ್ರಯಂತ ರಾತ್ರೀಮಸುರಾಸ್ತೇ ಸಮಾವದ್ವೀರ್ಯಾ ಏವಾಸನ್ ॥ ಐ. ಬ್ರಾ. ೪–೧–೫ ॥

2 ಉಭಯೇ ವಾ ಏತೇ ಪ್ರಜಾಪತೇ ರಧ್ಯಸೃಜಂತ । ದೇವಾಶ್ಚಾಸುರಾಶ್ಚ । ತಾನ್ನ ವ್ಯಜಾನಾತ್ । ಇಮೇಽನ್ಯ ಇಮೇನ್ಯ ಇತಿ ॥ ತೈ. ಬ್ರಾ. ೧–೪–೧–೧ ॥

ಅವಳ ಸ್ತುತಿಯಿದೆ. ಆಪ್ರೀ ಸೂಕ್ತಗಳಲ್ಲಿ ಸರಸ್ವತೀ ದೇವಿಯೊಂದಿಗೆ ಇಳಾ ಮತ್ತು ಭಾರತಿ ಎಂಬ ಬೇರೆ ಇಬ್ಬರು ದೇವಿಯರು ಹವಿಸ್ಸನ್ನುಣ್ಣುವ ಸಲುವಾಗಿ ಆಹ್ವಾನಿಸಲ್ಪಟ್ಟಿದ್ದಾರೆ:—

ಆ ಭಾರತೀ ಭಾರತೀಭಿಃ ಸ ಜೋಷಾ
ಇಳಾ ದೇವೈರ್ಮನುಷ್ಯೇಭಿರಗ್ನಿಃ ।
ಸರಸ್ವತೀ ಸಾರಸ್ವತೇಭಿರರ್ವಾಕ್
ತಿಸ್ರೋ ದೇವೀರ್ಬರ್ಹಿರೇದಂ ಸದಂತು ॥ ಋ. ೩–೪–೮ = ೭–೨–೮ ॥

ಅರ್ಥ – ಭಾರತಿ ಎಂಬ ಹೆಸರಿನ ಸಹೋದರಿಯರೊಂದಿಗೆ ಭಾರತಿ ಎಂಬ, ದೇವತೆಗಳೊಂದಿಗೆ ಇಳಾ ಎಂಬ ಸಾರಸ್ವತ ಎಂಬ ಪ್ರಕಾಶದ ಪ್ರವಾಹಗಳೊಂದಿಗೆ ಸರಸ್ವತಿಯೆಂಬ ಮೂವರು ದೇವಿಯರೂ ಮನುಷ್ಯರೊಂದಿಗೆ ಅಗ್ನಿದೇವನೂ ಪ್ರೀತಿಯಿಂದ ಬಂದು (ಯಜ್ಞಕುಂಡದ ಬಳಿಯಲ್ಲಿ ಅವರಿಗಾಗಿ ಹಾಸಿದ) ದರ್ಭೆಗಳ ಮೇಲೆ ಕುಳಿತುಕೊಳ್ಳಲಿ.

ಹಿಂದಿನ ಮಂತ್ರದೊಳಗಿನ ವರ್ಣನೆಯ ಮೇಲಿಂದ, ಯಜ್ಞಕಾಲದಲ್ಲಿ ದೇವದೇವಿಯರ ಪ್ರತೀಕಗಳನ್ನು ಅಥವಾ ಪ್ರತಿಮಾರೂಪಗಳನ್ನು ತಂದು ಯಜ್ಞಕುಂಡದ ಬಳಿಯಲ್ಲಿ ಹಾಸಿದ ದರ್ಭೆಗಳ ಮೇಲೆ ಇಡುತಿದ್ದರೆಂತಲೂ, ಭಾರತೀ ದೇವಿಯ ಪ್ರತೀಕದಲ್ಲಿ ಅವಳ ಸೋದರಿಯರ ಚಿತ್ರಗಳೂ ಇಳಾದೇವಿಯ ಚಿತ್ರ ಪ್ರತೀಕದಲ್ಲಿ ದೇವರ ಚಿತ್ರಗಳೂ, ಸರಸ್ವತೀದೇವಿಯ ಪ್ರತೀಕದಲ್ಲಿ ಪ್ರವಾಹಗಳ ಸಂಕೇತಗಳೂ, ಅಗ್ನಿದೇವನ ಪ್ರತೀಕದಲ್ಲಿ ಮನುಷ್ಯರ ಚಿತ್ರಗಳೂ ಇರುತಿದ್ದುವೆಂದು ಸಿದ್ಧವಾಗುತ್ತದೆ. ಅದಕ್ಕೆ ಪ್ರತ್ಯಕ್ಷ ಪ್ರಮಾಣವೂ ಇದೆ. ಅದೆಂದರೆ ಮೊಹೆಂಜೋದಲೋ ಎಂಬಲ್ಲಿನ ಅಗೆತಗಳಲ್ಲಿ ದೊರಕಿದ ಕೆಲವು ಬಿಲ್ಲೆಗಳ ಮೇಲೆ ಅಗ್ನಿದೇವನ ಚಿತ್ರವಿದೆಯಲ್ಲದೇ ಅವನ ಎದುರುಗಡೆಯಲ್ಲಿ ಸಾಲಾಗಿ ನಿಂತಿರುವ ಏಳ್ವರು ಮನುಷ್ಯರ ಚಿತ್ರಗಳೂ ಇವೆ. ಮತ್ತು ಋಗ್ವೇದದ ೮–೩೯ ೮ರ ಋಚೆಯಲ್ಲಿ ಅಗ್ನಿಯನ್ನು **"ಸಪ್ತಮಾನುಷಃ"** ಅಂದರೆ "ಏಳ್ವರು ಮನುಷ್ಯರೊಂದಿಗಿರುವವನು" ಎಂದ ಉಲ್ಲೇಖವೂ ಇದೆ.

ಋಗ್ವೇದದ ೧–೧೬೪–೫೨ನೆಯ ಋಚೆಯಲ್ಲಿ ಸೂರ್ಯನನ್ನು **"ಸರಸ್ವಾನ್" (–ಸರಸ್ವತ್")** 1 ಎಂದಿದೆ. ಆ ಶಬ್ದದ ಸ್ತ್ರೀಲಿಂಗ ರೂಪವು **"ಸರಸ್ವತೀ"** ಎಂದಾಗುತ್ತದೆ. ಆದುದರಿಂದ ಸರಸ್ವತೀ ಎಂದರೆ ಉತ್ತರಧ್ರುವ ಪ್ರದೇಶದಲ್ಲಿ ದೀರ್ಘ ರಾತ್ರಿಯ ತರುವಾಯದ ಸೂರ್ಯೋದಯದ ಮೊದಲು ಹರಿಯುತಿದ್ದ ಉಜ್ವಲ ಪ್ರಕಾಶದ ಪ್ರವಾಹವಾಗಿದ್ದಿತೆಂದು ಹೇಳಬಹುದು. ಮತ್ತು

1. ದಿವ್ಯಂ ಸುಪರ್ಣಂ ವಾಯಸಂಬೃಹಂತಮಪಾಂ ಗರ್ಭಂ ದರ್ಶತಮೋಷಧೀನಾಮ್ ।
ಅಭಿಪತೋವೃಷ್ಟಿಭಿಸ್ತರ್ಪಯಂತಂ ಸರಸ್ವಂತಮವಸೇ ಜೋಹವೀಮಿ ॥ ಋ. ೧–೧೬೪–೫೨ ॥

ಆ ಕಾರಣದಿಂದಲೇ ಸರಸ್ವತಿಯನ್ನು **"ವೃತ್ರಘ್ನೀ"** ಅಂದರೆ ವೃತ್ರನನ್ನು ಕೊಲ್ಲುವವಳು ಎಂದಿದ್ದರೆನ್ನಬಹುದು.

ಉತ ಸ್ಯಾ ನಃ ಸರಸ್ವತೀ ಘೋರಾ ಹಿರಣ್ಯವರ್ತನಿಃ ।
ವೃತ್ರಘ್ನೀ ವಷ್ಟಿ ಸುಷ್ಟುತಿಮ್ ॥ ಋ. ೬-೬೧-೭ ॥

ಅರ್ಥ-ಚಿನ್ನದ ಸುತ್ತುಗಳುಳ್ಳವಳೂ ಅಥವಾ ಚಿನ್ನದಂತೆ ಹೊಳೆಯುವ ಹಾದಿಯುಳ್ಳವಳೂ, ಘೋರಳೂ, ವೃತ್ರನನ್ನು ನಾಶಮಾಡುವವಳೂ ಆದ ಸರಸ್ವತಿಯು ನಮ್ಮ ಚಲೋಸ್ತುತಿಗಳನ್ನು ಬಯಸಲು ಅರ್ಹಳಾಗಿದ್ದಾಳೆ.

ಸರಸ್ವತಿಯು ದಿವ್ಯಪ್ರಕಾಶದ ಪ್ರತೀಕವಾಗಿದ್ದಳೆಂಬುದು ಮುಂದಿನ ಋಚೆಯಿಂದ ಸ್ಪಷ್ಟವಾಗಿ ಸಿದ್ಧವಾಗುತ್ತದೆ.

ಆ ಪಪ್ರುಷೀ ಪಾರ್ಥಿವಾನ್ಯುರು ರಜೋ ಅಂತರಿಕ್ಷಮ್ ।
ಸರಸ್ವತೀ ನಿದಸ್ಪಾತು ॥ ಋ. ೬-೬೧-೧೧ ॥

ಅರ್ಥ- ಪೃಥ್ವಿಯ ವಿಶಾಲ ಪ್ರದೇಶವನ್ನೂ ಅಂತರಿಕ್ಷದ ರಜ ಪ್ರದೇಶವನ್ನೂ ತುಂಬಿ ಬಿಡುವ ಸರಸ್ವತಿಯು ನಮ್ಮನ್ನು ದ್ವೇಷಿಗಳಿಂದ ರಕ್ಷಿಸಲಿ.

ಉತ್ತರಧ್ರುವ ಪ್ರದೇಶದಲ್ಲಿ ನೆಲಸಿದ್ದ ಪ್ರಾಚೀನ ಆರ್ಯಜನರು ಸೂರ್ಯನು ಕಾಣಿಸದ ಕಾಲದಲ್ಲಿ ಭೂಮಿಯನ್ನು ಸುತ್ತಿ ಬರುವ ಪ್ರಕಾಶದ ಮತ್ತು ಅಂಧಕಾರದ ಸುತ್ತುಗಳನ್ನು ಅವುಗಳ ಗಾಢತೆಗೆ ಮತ್ತು ಅವಧಿಗೆ ಅನುಸಾರವಾಗಿ ಏಳೇಳರ ಗುಂಪುಗಳನ್ನಾಗಿ ಮಾಡಿ ಬೇರೆ ಬೇರೆ ಹೆಸರುಗಳಿಂದ ಕರೆಯುತಿದ್ದರೆಂದು ವೃತ್ರ, ನಕ್ತ, ದೋಷಾ, ಉಷಾ, ಸೂರ್ಯಾ ಸರಸ್ವತೀ, ಸಪ್ತಸ್ವಸಾ, ಸಪ್ತಸಿಂಧು ಮೊದಲಾದ ಶಬ್ದಗಳಿಂದ ಸಿದ್ಧವಾಗುತ್ತದೆ. ಹಾಗೆಯೇ ಸಿಂಧು ಎಂಬ ಶಬ್ದವು ಯಾವುದೊಂದು ವಿಶಿಷ್ಟ ನದಿಯ ಹೆಸರಾಗಿರದೇ "ನದಿ" ಎಂಬ ಸಾಮಾನ್ಯ ಅರ್ಥದ ಶಬ್ದವಾಗಿದ್ದಿತೆಂದು ಮುಂದೆ ಕೊಡಲಾಗುವ ಋಚೆಯಿಂದ ಸಿದ್ಧವಾಗುತ್ತದೆ,

ಯೋ ಹತ್ವಾಹಿಮರಿಣಾತ್ ಸಪ್ತಸಿಂಧೂನ್
ಯೋ ಗಾ ಉದಾಜದಪಧಾ ವಲಸ್ಯ ।
ಯೋ ಅಶ್ಮನೋರಂತರಗ್ನಿಂ ಜಜಾನ
ಸಂವೃಕ್ ಸಮತ್ಸು ಸ ಜನಾಸ ಇಂದ್ರಃ ॥ ಋ. ೨-೧೨-೩ ॥

ಅರ್ಥ ಯಾವನು ಅಹಿಯನ್ನು (-ಹಾವನ್ನು) ಕೊಂದು ಏಳು ನದಿಗಳನ್ನು ಪ್ರವಹಿಸುವಂತೆ ಮಾಡಿದನೋ, ಯಾವನು ವಲನ ಗುಪ್ತಸ್ಥಾನದಿಂದ ಗೋವುಗಳನ್ನು ಹೊರಗೆ ಬಿಟ್ಟನೋ, ಯಾವನು ಎರಡು ಬಂಡೆಗಳ ನಡುವೆ ಅಗ್ನಿಯನ್ನು ಹುಟ್ಟಿಸಿದನೋ, ಯಾವನು ಯುದ್ಧಗಳಲ್ಲಿ ಸದಾ ವಿಜಯಿಯಾಗುವನೋ, ಹೇ ಜನರೇ, ಅವನೇ ಇಂದ್ರನು.

ಯಾಃ ಸೂರ್ಯೋ ರಶ್ಮಿಭಿರಾತತಾನ
ಯಾಭ್ಯ ಇಂದ್ರೋ ಅರದದ್ ಗಾತುಮೂರ್ಮಿಮ್ ।
ತೇ ಸಿಂಧವೋ ವರಿವೋ ಧಾತನಾ ನೋ
ಯೂಯಂ ಪಾತ ಸ್ವಸ್ತಿಭಿಃ ಸದಾ ನಃ ॥ ಋ. ೭–೪೭–೪ ॥

ಅರ್ಥ– ಸೂರ್ಯನು ತನ್ನ ಕಿರಣಗಳಿಂದ ಯಾವ ನದಿಗಳನ್ನು ವಿಸ್ತರಿಸಿದನೋ ಇಂದ್ರನು ಯಾವ ನದಿಗಳ ಪ್ರವಹಣಕ್ಕಾಗಿ ಹಾದಿಯನ್ನು ತೋಡಿದನೋ ಅಂಥ ಆ ನದಿಗಳೇ (=ಸಿಂಧುಗಳೇ) ನೀವು ನಮಗೆ ತುಂಬಾ ಅವಕಾಶವನ್ನೂ ಅನುಕೂಲತೆಯನ್ನೂ ಕರುಣಿಸಿರಿ, ಮತ್ತು ಸದಾ ನಿಮ್ಮ ಶುಭಾಶೀರ್ವಾದಗಳಿಂದ ನಮ್ಮನ್ನು ಕಾಪಾಡಿರಿ.

ಆರ್ಯಜನರು ಉತ್ತರಧ್ರುವ ಪ್ರದೇಶವನ್ನು ತೊರೆದು ಕೆಳಗಿನ ಅಕ್ಷಾಂಶಗಳಲ್ಲಿರುವ ಪ್ರದೇಶಗಳಿಗೆ ಬಂದ ತರುವಾಯ ಭಾರತ ವರ್ಷವನ್ನು ಪ್ರವೇಶಿಸುವ ತನಕ ಯಾವ ಯಾವ ಪ್ರದೇಶಗಳಲ್ಲಿ ನೆಲಸಿದ್ದರೋ ಆ ಎಲ್ಲ ಪ್ರದೇಶಗಳಲ್ಲಿ ಪ್ರವಹಿಸುತ್ತಿದ್ದ ನದಿಗಳಿಗೆ ತಮ್ಮ ಮೂಲಸ್ಥಾನದಲ್ಲಿ ಪ್ರವಹಿಸುತ್ತಿದ್ದ ಹಾಗೂ ಅವರು ದಿವ್ಯ ಎಂದು ಭಾವಿಸಿದ ನದಿಗಳ ಹೆಸರುಗಳನ್ನು ಕೊಟ್ಟಿದ್ದರೆಂಬುದರಲ್ಲಿ ಸಂದೇಹವಿಲ್ಲ. ಭಾರತವರ್ಷದ ಹೊರಗಿನ ದೇಶಗಳಲ್ಲಿ ಹರಿಯುತ್ತಿರುವ ನದಿಗಳ ಪ್ರಾಚೀನ ಹೆಸರುಗಳು ಈಗ ಮೂಲರೂಪದಲ್ಲಿ ಉಳಿದಿಲ್ಲವೆಂಬುದು ಸತ್ಯವಾದರೂ ಪರಿಶ್ರಮಪಟ್ಟು ಅನ್ವೇಷಣ ಮಾಡಿದರೆ ಮೂಲ ಹೆಸರುಗಳ ಸುಳಿವು ಹತ್ತುವುದರಲ್ಲಿ ಸಂದೇಹವಿಲ್ಲ,

ಉತ್ತರ ಧ್ರುವಪ್ರದೇಶದ ಮಟ್ಟಿಗೆ ಸೂರ್ಯನ ಉದಯವೆಂದರೆ ಭೂಮಿಯ ದಕ್ಷಿಣ ಗೋಲಾರ್ಧದಲ್ಲಿದ್ದ ಸೂರ್ಯನು ಉತ್ತರ ಗೋಲಾರ್ಧಕ್ಕೇರುವುದಾಗಿದೆ. ಹಾಗೆಯೇ ಸೂರ್ಯನ ಅಸ್ತವೆಂದರೆ ಉತ್ತರ ಗೋಲಾರ್ಧದಲ್ಲಿದ್ದ ಸೂರ್ಯನು ದಕ್ಷಿಣ ಗೋಲಾರ್ಧಕ್ಕೆ ಇಳಿಯುವುದಾಗಿದೆ. ಅರ್ಥಾತ್ ಅಲ್ಲಿ ಸೂರ್ಯನು ಉತ್ತರ ದಿಕ್ಕಿನಲ್ಲಿ ಉದಯಿಸಿ ದಕ್ಷಿಣ ದಿಕ್ಕಿನಲ್ಲಿ ಅಸ್ತನಾಗುತ್ತಾನೆ, ಆ ಪ್ರಾಚೀನ ಐತಿಹ್ಯವು ತರುವಾಯದ ಜನರಲ್ಲಿ ಪಾರಂಪರ್ಯವಾಗಿ ಸಾಗಿ ಬಂದಿದ್ದಿತೆಂಬುದರ ಸೂಚನೆಗಳು ವೈದಿಕ ಸಾಹಿತ್ಯದಲ್ಲಿ ದೊರೆಯುತ್ತವೆ.

ಶತಪಥ ಬ್ರಾಹ್ಮಣದಲ್ಲಿ ಪ್ರಜಾಪತಿಯು ಉತ್ತರ ಪೂರ್ವಕ್ಕೆ (ಈಶಾನ್ಯಕ್ಕೆ) ಮೋರೆಮಾಡಿ ನಿಂತು ಪ್ರಜೆಗಳನ್ನು ಸೃಷ್ಟಿಸಿದನೆಂತಲೂ, ಉತ್ತರ ಪೂರ್ವವು ದೇವತೆಗಳ ಮತ್ತು ಮನುಷ್ಯರ ದಿಕ್ಕೆಂತಲೂ, ಅದು ಸ್ವರ್ಗಲೋಕದ ಬಾಗಿಲೆಂತಲೂ

ಹೇಳಿದೆ[1], ಹಾಗೆಯೇ ದಕ್ಷಿಣ ಪೂರ್ವವು (ಆಗ್ನೇಯವು) ಪಿತೃಲೋಕದ ಬಾಗಿಲೆಂತಲೂ ಹೇಳಿದೆ[2]. ಇಲ್ಲಿ ಪ್ರಜಾಪತಿಯು ಸೃಷ್ಟಿಸಿದ ಪ್ರಜೆಗಳೆಂದರೆ ನಕ್ಷತ್ರಗಳೆಂಬುದನ್ನು ತಿಳಿದುಕೊಳ್ಳಬೇಕು.

ಉತ್ತರ ಧ್ರುವ ಪ್ರದೇಶದಲ್ಲಿ ನೆಲಸಿದ್ದವರಿಗೆ ಕೆಲವು ರಾತ್ರಿಗಳಲ್ಲಿ ಭೂಮಿಯ ಸುತ್ತಲಿನ ಕ್ಷಿತಿಜದಲ್ಲಿ ಹರಡಿರುವ ಎಲ್ಲಾ ಚಾಂದ್ರನಕ್ಷತ್ರಗಳು ಕಾಣಿಸುತ್ತವೆ. ಮತ್ತು ಅಲ್ಲಿದ್ದವರು ಪೂರ್ವಕ್ಕೆ ಮೋರೆ ಮಾಡಿ ನಿಂತರೆ ನಕ್ಷತ್ರಗಳೂ ಚಂದ್ರನೂ, ಅವರ ಎಡಗಡೆಯಿಂದ ಅಂದರೆ ಉತ್ತರ ದಿಕ್ಕಿನಿಂದ ಪೂರ್ವಕ್ಕೆ ಚಲಿಸುತ್ತ ಬಂದು ದಕ್ಷಿಣಕ್ಕೆ ಸಾಗುವುದೂ, ಪಶ್ಚಿಮಕ್ಕೆ ಮೋರೆ ಮಾಡಿ ನಿಂತರೆ ದಕ್ಷಿಣದಿಂದ ಚಲಿಸುತ್ತ ಪಶ್ಚಿಮಕ್ಕೆ ಬಂದು ಉತ್ತರ ದಿಕ್ಕಿಗೆ ಸಾಗುವುದೂ ಕಾಣಿಸುತ್ತದೆ. ಆದರೆ ಚಂದ್ರನು ಈಕ್ಷಿಸುವವನ ಎಡಗಡೆಯಿಂದ ಚಲಿಸುತ್ತ ಮೋರೆಯ ಎದುರಿಗೆ ಬಂದು ಬಲಗಡೆಗೆ ಸಾಗುವಂತೆ ಕಂಡರೂ, ಅವನು ಹಾಗೆ ಸಾಗುತಿದ್ದಂತೆಯೇ ಬಲಗಡೆಯ ನಕ್ಷತ್ರ ಪುಂಜದಿಂದ ಚಲಿಸಿ ಎಡಗಡೆಯ ನಕ್ಷತ್ರ ಪುಂಜದ ಸಮೀಪಕ್ಕೆ ಬಂದಿರುವುದು ಕೂಡ ಸ್ಪಷ್ಟವಾಗಿ ಗೊತ್ತಾಗುತ್ತದೆ. ಹಾಗೆ ಚಂದ್ರನು ಪ್ರತಿದಿನ ಬಲಗಡೆಯ ನಕ್ಷತ್ರದಿಂದ ಎಡಗಡೆಯ ನಕ್ಷತ್ರದಲ್ಲಿ ಬರುತ್ತಿರುವುದು ಸ್ಪಷ್ಟವಾಗಿ ಗೊತ್ತಾಗುತಿದ್ದುದರಿಂದ ಅಲ್ಲಿ ನೆಲಸಿದ್ದ ಜನರಿಗೆ ಚಂದ್ರನ ದೈನಿಕ ಗತಿಯನ್ನು ಸ್ವಲ್ಪವೂ ತಪ್ಪಿಲ್ಲದಂತೆ ನಿರ್ಧರಿಸಲು ಸಾಧ್ಯವಿತ್ತು. ಆದುದರಿಂದಲೇ ಪ್ರಾಚೀನ ಆರ್ಯಜನರು ಚಂದ್ರನ ಗತಿಯನ್ನನುಸರಿಸಿ ಕಾಲದ ಗಣನೆಯನ್ನು ಮಾಡತೊಡಗಿದ್ದರೆಂಬುದರಲ್ಲಿ ಸಂದೇಹವಿಲ್ಲ.

ಉತ್ತರಧ್ರುವ ಪ್ರದೇಶವನ್ನು ತೊರೆದು ಕೆಳಗಿನ ಪ್ರದೇಶಗಳಿಗೆ ಬಂದು ಅಲ್ಲಿ ನೆಲಸಿದ್ದ ಆರ್ಯಜನರ ವಂಶಜರು ತಮ್ಮ ಪೂರ್ವಜರ ಮೂಲಸ್ಥಾನವನ್ನು ಸಂದರ್ಶಿಸುವ ಉದ್ದೇಶದಿಂದ ಉತ್ತರಧ್ರುವ ಪ್ರದೇಶದ ಸಮೀಪಕ್ಕೆ ಹೋಗಿ ಅಲ್ಲಿನ ವೈಚಿತ್ರ್ಯಗಳನ್ನು ಕಣ್ಣಾರೆ ಕಂಡು ಬರುತಿದ್ದರೆಂದು ಅನುಮಾನಿಸ ಬಹುದಾದ ಕೆಲವು ಉಲ್ಲೇಖಗಳು ವೈದಿಕ ಸಾಹಿತ್ಯದಲ್ಲಿವೆ. ಅದಕ್ಕೆ ಉದಾಹರಣೆಯಾಗಿ ತೈತ್ತಿರೀಯ ಬ್ರಾಹ್ಮಣದೊಳಗಿನ ಒಂದು ಅಂಶವನ್ನು ಕೊಡಬಹುದು—

---

1 ಉದಜ ವೈ ಪ್ರಾಜ ತಿಷ್ಠನ್ ಪ್ರಜಾಪತಿಃ ಪ್ರಜಾ ಅಸೃಜತ್ । ಏಷಾ ಹ್ಯೋಭಯೇಷಾಂ ದೇವ ಮನುಷ್ಯಾಣಾಂ ದಿಗ್ ಯದುದೀಚೀ ಪ್ರಾಚೀ । ಏತಸ್ಯಾಂ ಹದಿಶಿ ಸ್ವರ್ಗಸ್ಯ ಲೋಕಸ್ಯ ದ್ವಾರಮ್ । ಶ. ಬ್ರಾ. ೬-೬-೨-೨ರಿಂದ ೬॥

2 ಪ್ರಾಚೀಚ ದಕ್ಷಿಣಾ ಚೈತಸ್ಯಾಂ ಪದಿಶಿ ಪಿತೃಲೋಕಸ್ಯ ದ್ವಾರಮ್

॥ ಶ. ಬ್ರಾ, ೧೩-೮-೧-೫ ॥

ಕೃತ್ತಿಕಾ ಪ್ರಥಮಮ್। ವಿಶಾಖೇ ಉತ್ತಮಮ್। ತಾನಿ ದೇವನಕ್ಷತ್ರಾಣಿ। ಅನುರಾಧಾ ಪ್ರಥಮಮ್। ಅಪಭರಣೀರುತ್ತಮಮ್। ತಾನಿ ಯಮನಕ್ಷತ್ರಾಣಿ। ಯಾನಿ ದೇವನಕ್ಷತ್ರಾಣಿ ತಾನಿ ದಕ್ಷಿಣೇನ ಪರಿಯಂತಿ। ಯಾನಿ ಯಮನಕ್ಷತ್ರಾಣಿ ತಾನ್ಯುತ್ತರೇಣ ॥ ತೈ. ಬ್ರಾ. ೧-೫-೨-೭ ॥

ಅರ್ಥ-ಕೃತ್ತಿಕೆಯಿಂದ ಮೊದಲುಗೊಂಡು ವಿಶಾಖೆಯಲ್ಲಿ ಕೊನೆಗೊಳ್ಳುವ ನಕ್ಷತ್ರಗಳು ದೇವನಕ್ಷತ್ರಗಳಾಗಿವೆ. ಅನುರಾಧಾದಿಂದ ಮೊದಲಗೊಂಡು ಭರಣಿಯಲ್ಲಿ ಕೊನೆಗೊಳ್ಳುವ ನಕ್ಷತ್ರಗಳು ಯಮನಕ್ಷತ್ರಗಳಾಗಿವೆ. ದೇವನಕ್ಷತ್ರಗಳು ದಕ್ಷಿಣದಿಂದ ಸುತ್ತು ತೆಗೆಯುತ್ತವೆ. ಮತ್ತು ಯಮನಕ್ಷತ್ರಗಳು ಉತ್ತರದಿಂದ (ಸುತ್ತು ತೆಗೆಯುತ್ತವೆ.)

ಹಿಂದಿನ ವರ್ಣನೆಯು ಉತ್ತರಧ್ರುವ ಪ್ರದೇಶದ ಭೌಗೋಲಿಕ ಸ್ಥಿತಿಯೊಂದಿಗೆ ಮಾತ್ರ ಸರಿಯಾಗಿ ಹೊಂದಿಕೊಳ್ಳುತ್ತದೆಯೇ ಹೊರತು ಭಾರತ ವರ್ಷದ ಭೌಗೋಲಿಕ ಸ್ಥಿತಿಯೊಂದಿಗೆ ಹೊಂದಿಕೊಳ್ಳುವುದಿಲ್ಲ. ಏಕೆಂದರೆ ಭಾರತ ವರ್ಷದ ನಿವಾಸಿಗಳು ಪೂರ್ವದಿಕ್ಕಿನಲ್ಲಿ ಮೂಡಿದ ನಕ್ಷತ್ರಗಳು ಮೇಲೇರಿ ನೆತ್ತಿಯ ಮೇಲಿಂದ ಸಾಗಿ ಪಶ್ಚಿಮಕ್ಕಿಳಿದು ಮುಳುಗುವುದನ್ನು ಅಥವಾ ನಕ್ಷತ್ರಗಳ ಅರ್ಧಸುತ್ತನ್ನು ಮಾತ್ರ ಕಾಣಬಹುದೇ ಹೊರತು ದಕ್ಷಿಣದಿಂದಾಗಲೀ, ಉತ್ತರದಿಂದಾಗಲೀ ಸಾಗುವ ಪೂರ್ಣ ಸುತ್ತನ್ನು ಕಾಣಲು ಸಾಧ್ಯವಿಲ್ಲ. ಹಿಂದೆ ಸಾಧಾರಣ ಶಕಪೂರ್ವ ೨೫೦೦ ವರ್ಷಗಳಿಂದ ೧೫೦೦ ವರ್ಷಗಳ ತನಕ ವಸಂತ ಸಂಪಾತವು ಕೃತ್ತಿಕಾ ನಕ್ಷತ್ರದಲ್ಲಾಗುತಿತ್ತು. ಮತ್ತು ಕೃತ್ತಿಕಾ ನಕ್ಷತ್ರದಿಂದ ನಕ್ಷತ್ರಮಾಲೆಯ ಗಣನೆಯು ಪ್ರಾರಂಭವಾಗುತಿತ್ತು. ಆ ಕಾಲದಲ್ಲಿ ಉತ್ತರಧ್ರುವ ಪ್ರದೇಶಕ್ಕೆ ಹೋಗಿದ್ದ ಪುಣ್ಯಾತ್ಮನೊಬ್ಬನು ತಾನು ಅಲ್ಲಿ ಕಂಡಿದ್ದ ವೈಚಿತ್ರ್ಯವನ್ನು ಆ ರೀತಿಯಾಗಿ ತೈತ್ತಿರೀಯ ಬ್ರಾಹ್ಮಣದಲ್ಲಿ ರಕ್ಷಿಸಿಟ್ಟಿದ್ದಾನೆನ್ನಬಹುದು.

ವೈದಿಕ ಸಾಹಿತ್ಯದಲ್ಲಿನ ಉಲ್ಲೇಖಗಳಿಗನುಸಾರವಾಗಿ ಭೂಮಿಯ ಉತ್ತರ ಧ್ರುವ ಪ್ರದೇಶವು ದೇವಲೋಕವಾಗಿರುತ್ತದೆ. ಮತ್ತು ದಕ್ಷಿಣ ಗೋಲಾರ್ಧವು ಪಿತೃಲೋಕವಾಗಿರುತ್ತದೆ. ಪಿತೃಲೋಕದ ಅಧಿಪತಿಯು ಯಮನಾಗಿರುವುದರಿಂದ ಅದು ಯಮಲೋಕವೂ ಅಹದು. ಕೃತ್ತಿಕಾ ಸಂಪಾತ ಕಾಲದಲ್ಲಿ ಉತ್ತರಧ್ರುವ ಪ್ರದೇಶಕ್ಕೆ ಅಥವಾ ದೇವಲೋಕಕ್ಕೆ ಪ್ರಕಾಶ ನೀಡುತಿದ್ದನಾದುದರಿಂದ ಕೃತ್ತಿಕೆಯಿಂದ ವಿಶಾಖೆಯ ತನಕದ ನಕ್ಷತ್ರಗಳು ದೇವ ನಕ್ಷತ್ರಗಳೆನಿಸಿ ಕೊಂಡಿದ್ದುವು. ಅದೇ ರೀತಿಯಲ್ಲಿ ದಕ್ಷಿಣಾಯನವು ಪ್ರಾರಂಭವಾದಂದಿನಿಂದ ಉತ್ತರಾಯಣವು ಪ್ರಾರಂಭವಾಗುವ ತನಕ ಅಥವಾ ಅನುರಾಧಾ ನಕ್ಷತ್ರದಿಂದ ಭರಣೀ ನಕ್ಷತ್ರದ ತನಕ ಆರು ತಿಂಗಳ ಕಾಲ ಸೂರ್ಯನು ದಕ್ಷಿಣ ಧ್ರುವಕ್ಕೆ ಅಥವಾ ಪಿತೃಲೋಕಕ್ಕೆ ಅಂದರೆ ಯಮಲೋಕಕ್ಕೆ ಪ್ರಕಾಶ ನೀಡುತಿದ್ದನಾದುದರಿಂದ ಅನುರಾಧದಿಂದ ಭರಣೀ ತನಕದ ನಕ್ಷತ್ರಗಳು ಯಮನಕ್ಷತ್ರಗಳೆನಿಸಿಕೊಂಡಿದ್ದುವು.

ಹಿಂದೆ ವಿವರಿಸಿದ ವಸ್ತು ಸ್ಥಿತಿಯನ್ನು ಅರಿತಿಲ್ಲದ ಅಥವಾ ಲೋಕಮಾನ್ಯ ಬಾಲಗಂಗಾಧರ ತಿಲಕ ಅವರ "ಆರ್ಯ ಜನರ ಉತ್ತರ ಧ್ರುವ ಪ್ರದೇಶದ ವಸತಿ" ಯ ಪ್ರತಿಪಾದನೆಯನ್ನು ಒಪ್ಪಲು ಇಷ್ಟವಿಲ್ಲದ ಜೊಡೆನ್ ಸಂಸ್ಕೃತ ವಿದ್ವಾಂಸ ಏ. ಏ. ಮೆಕ್‌ಡೊನೆಲ್ ಅವರು ತನ್ನ "ವೇದಿಕ್ ಇಂಡೆಕ್ಸ್" ಎಂಬ ಗ್ರಂಥದಲ್ಲಿ ತೈತ್ತೀರಿಯ ಬ್ರಾಹ್ಮಣದೊಳಗಿನ "ದೇವನಕ್ಷತ್ರಗಳು ದಕ್ಷಿಣ ದಿಕ್ಕಿನಿಂದ ಸುತ್ತು ಬರುತ್ತವೆ ಮತ್ತು ಯಮನಕ್ಷತ್ರಗಳು ಉತ್ತರದಿಂದ ಸುತ್ತು ಬರುತ್ತವೆ" ಎಂಬ ಹೇಳಿಕೆಯನ್ನು "ಸಾಂಸ್ಕಾರಿಕ ನಿರರ್ಥಕತೆಯೆನ್ನಬಹುದೇ ಹೊರತು ಅದರಲ್ಲಿ ಹುರುಳಿದೆ ಎನ್ನಲಾಗುವುದಿಲ್ಲ" ಎಂದಿದ್ದಾರೆ. ಆದರೆ ತೈತ್ತಿರೀಯ ಬ್ರಾಹ್ಮಣದೊಳಗಿನ ಆ ಅಂಶವು ಪ್ರತ್ಯಕ್ಷದರ್ಶಿಯ ಹೇಳಿಕೆಯೆಂಬುದನ್ನು ಅವರು ಪರಿಶೀಲಿಸುವ ಗೋಜಿಗೆ ಹೋಗಿಲ್ಲ.

ಉತ್ತರಧ್ರುವ ಪ್ರದೇಶದ ಸ್ವಲ್ಪ ಸ್ವಲ್ಪ ಐತಿಹ್ಯವು ಮಹಾಭಾರತಕಾರನಿಗೂ ತಿಳಿದಿದ್ದಿತೆಂದು ವನಪರ್ವದ ೧೬೩ನೆಯ ಅಧ್ಯಾಯದಲ್ಲಿ ಬಂದಿರುವ ಮೇರು ಪರ್ವತದ ವರ್ಣನೆಯ ಮೇಲಿಂದ ಹೇಳಬಹುದು. ಆ ಅಧ್ಯಾಯದಲ್ಲಿ ಧೌಮ್ಯ ಋಷಿಯು ಯುಧಿಷ್ಠಿರನಿಗೆ ಮೇರುಪರ್ವತವನ್ನು ವರ್ಣಿಸಿ ಹೇಳಿದ ವಿವರಗಳಿವೆ, ಅದರಲ್ಲಿ ಸೂರ್ಯ, ಚಂದ್ರ, ನಕ್ಷತ್ರ ಮೊದಲಾದ ಜ್ಯೋತಿಗಳು ಮೇರು ಪರ್ವತದ ಪ್ರದಕ್ಷಿಣೆ ತೆಗೆಯುತ್ತವೆಂತಲೂ, ಸೂರ್ಯನು ಮೇರುಪರ್ವತದ ಸುತ್ತು ತೆಗೆಯುವಾಗ ಮುಳುಗಿದವನು ಸಂಧ್ಯಾಕಾಲದ ತರುವಾಯ ಉತ್ತರ ದಿಕ್ಕನ್ನು ಆಶ್ರಯಿಸುತ್ತಾನೆಂತಲೂ ಅಲ್ಲಿಂದ ಮರಳಿ ಪೂರ್ವಾಭಿಮುಖನಾಗಿ ಸಾಗುತ್ತ ಶಿಶಿರವನ್ನು ಸೃಷ್ಟಿಸುತ್ತ ದಕ್ಷಿಣ ದಿಕ್ಕನ್ನು ಆಶ್ರಯಿಸುತ್ತಾನೆಂತಲೂ ಹೇಳಿದೆ. ಅಂದರೆ ಉತ್ತರಧ್ರುವ ಪ್ರದೇಶದ ಐತಿಹ್ಯವು ಪಾರಂಪರ್ಯವಾಗಿ ಮುಂದೆ ಸಾಗುತ್ತ ಮಹಾಭಾರತ ಗ್ರಂಥದ ರಚನಾ ಕಾಲಕ್ಕೆ ಬಂದು ತಲುಪುವಾಗ ಆ ಐತಿಹ್ಯದ ಮೂಲರೂಪವು ಸಂಪೂರ್ಣ ವಿಕೃತವಾಗಿದ್ದಿತೆನ್ನಬಹುದು.[1] ಹೇಗಿದ್ದರೂ ಆರ್ಯಜನರಿಗೆ ತಮ್ಮ ಪೂರ್ವಜರ ಉತ್ತರಧ್ರುವ ಪ್ರದೇಶದ ವಸತಿಯ ಅಸ್ಪಷ್ಟ ಜ್ಞಾನವು ಬಹುಕಾಲದ ತನಕ ಇದ್ದಿತೆಂಬುದರಲ್ಲಿ ಸಂದೇಹವಿಲ್ಲ. ಆದುದರಿಂದ ಲೋಕಮಾನ್ಯರು ಪ್ರತಿಪಾದಿಸಿದ– ಆರ್ಯಜನರ ಮೂಲಸ್ಥಾನವು ಉತ್ತರಧ್ರುವ ಪ್ರದೇಶವಾಗಿದ್ದಿತೆಂಬ ಉಪಪತ್ತಿಯು ವಾಸ್ತವಿಕ ಸತ್ಯವಾಗಿದ್ದಿತೆನ್ನಬಹುದು.

---

[1] ಏನಂ ತ್ವಹರಹರ್ಮೇರುಂ ಸೂರ್ಯಾಚಂದ್ರಮಸೌ ಧ್ರುವಮ್ ॥
ಪ್ರದಕ್ಷಿಣಮುಪಾವೃತ್ಯ ಕುರುತಃ ಕುರುನಂದನ ॥ ೧೬೩–೨೭ ॥
ಜ್ಯೋತೀಂಷಿ ಚಾಪ್ಯಶೇಷೇಣ ಸರ್ವಾಣ್ಯನಘ ಸರ್ವತಃ
ಪರಿಯಾಂತಿ ಮಹಾರಾಜ ಗಿರಿರಾಜಂ ಪ್ರದಕ್ಷಿಣಮ್ ॥ ೨೮ ॥
ಏನಂ ಜ್ಯೋತೀಂಷಿ ಸರ್ವಾಣಿ ಪ್ರಕರ್ಷನ್ ಭಗವಾನಪಿ ।
ಕುರುತೇ ವಿತಮಸ್ಕರ್ಮಾ ಆದಿತ್ಯೋಽಪಿ ಪ್ರದಕ್ಷಿಣಮ್ ॥ ೨೯ ॥

ಅಸ್ತಂ ಪ್ರಾಪ್ಯ ತತಃ ಸಂಧ್ಯಾಮತಿ ಕ್ರಮ್ಯ ದಿವಾಕರಃ
ಉದೀಚೀಂ ಭಜತೇ ಕಾಷ್ಠಾಂ ದಿಶಮೇಷ ವಿಭಾವಸುಃ ॥ ೩೦ ॥

ಸುಮೇರುಮನುವೃತ್ತಃ ಸನ್ ಪುನರ್ಗಚ್ಛತಿ ಪಾಂಡವ ।
ಪ್ರಾಙ್ ಮುಖಃ ಸವಿತಾ ದೇವಃ ಸರ್ವ ಭೂತ ಹಿತೇ ರತಃ ॥ ೩೧ ॥

ಸ ಮಾಸಾನ್ ವಿಭಜನ್ ಕಾಲೇ ಬಹುಧಾ ಪರ್ವಸಂಧಿಷು ।
ತಥೈವ ಭಗವಾನ್ ಸೋಮೋ ನಕ್ಷತ್ರೈಃ ಸಹ ಗಚ್ಛತಿ ॥ ೩೨ ॥

ಏವಮೇತಂ ತ್ವತಿಕ್ರಮ್ಯ ಮಹಾಮೇರುಮತಂದ್ರಿತಃ ।
ಭಾವಯನ್ ಸರ್ವ ಭೂತಾನಿ ಪುನರ್ಗಚ್ಛತಿ ಮಂದರಮ್ ॥ ೩೩ ॥

ತಥಾ ತಮಿಸ್ರಹಾ ದೇವೋ ಮಯೂಖೈರ್ಭಾವಯನ್ ಜಗತ್ ।
ಮಾರ್ಗಮೇತದಸಂಬಾಧಮಾದಿತ್ಯಃ ಪರಿವರ್ತತೇ ॥ ೩೪ ॥

ಸಿಸೃಕ್ಷುಃ ಶಿಶಿರಾಣ್ಯೇಷ ದಕ್ಷಿಣಾಂ ಭಜತೇ ದಿಶಮ್ ।
ತತಃ ಸರ್ವಾಣಿ ಭೂತಾನಿ ಕಾಲೋಽಭ್ಯರ್ಚ್ಛತಿ ಶೈಶಿರಃ ॥ ೩೫ ॥

೪. ಆರ್ಯಜನರ ವೈದಿಕ ಸಂಸ್ಕೃತಿ

ಸಂಸ್ಕೃತಿ ಎಂದರೆ ಸಾಮಾನ್ಯವಾಗಿ ಯಾವುದೊಂದು ಜನಾಂಗವು ತನ್ನ ಆಚಾರ-ವಿಚಾರಗಳಲ್ಲಿ, ಕೃಷಿ-ಕೈಗಾರಿಕೆಗಳಲ್ಲಿ, ವ್ಯಾಪಾರ-ವ್ಯವಹಾರಗಳಲ್ಲಿ, ವಾಸ್ತು-ಶಿಲ್ಪಗಳಲ್ಲಿ, ಜ್ಞಾನ-ವಿಜ್ಞಾನಗಳಲ್ಲಿ, ಸಾಹಿತ್ಯ-ಸಂಗೀತಗಳಲ್ಲಿ, ನೃತ್ಯ-ಅಭಿನಯು ಗಳಲ್ಲಿ ಮತ್ತು ಕುಶಲ-ಕಲೆಗಳಲ್ಲಿ ಸಾಧಿಸಿದ ಪ್ರಗತಿ ಮತ್ತು ಉನ್ನತಿ ಎಂದು ಹೇಳ ಬಹುದು. ಭೂಲೋಕದ ಜನರು ಭೂಗೋಲದ ಬೇರೆ ಬೇರೆ ಭಾಗಗಳಲ್ಲಿ ಪರಸ್ಪರ ಸಂಪರ್ಕ-ಸಂಬಂಧಗಳಿಲ್ಲದೇ ದೂರ ದೂರದಲ್ಲಿ ನೆಲಸಿದ್ದುದರಿಂದ ಅವರಲ್ಲಿ ಹಲವು ವರ್ಗಗಳಾಗಿವೆ. ಮತ್ತು ಅವರ ಭಾಷೆಗಳಲ್ಲಿ ಹಾಗೂ ಆಚಾರ-ವ್ಯವಹಾರಗಳಲ್ಲಿ ಭೇದಗಳು ಹುಟ್ಟಿವೆ. ಆದರೆ ಭೂಮಿಯ ಯಾವುದೇ ಭಾಗದಲ್ಲಿ ನೆಲಸಿದ್ದ ಯಾವ ದೊಂದು ವರ್ಗದ ಜನರು ಆದಿಮ ಜನ್ಮಕಾಲದಿಂದಲೇ ಸುಸಂಸ್ಕೃತರೂ, ಜ್ಞಾನಿ ಗಳೂ ಆಗಿರಲಿಲ್ಲ ಮತ್ತು ಆಗಿದ್ದರೆಂದು ಹೇಳಲೂ ಆಗುವುದಿಲ್ಲ. ಅಂದರೆ ಪ್ರತಿ ಯೊಂದು ವರ್ಗದ ಜನರು ಆದಿಯಲ್ಲಿ ಶುದ್ಧ ಕಾಡಾಡಿಗಳಾಗಿದ್ದು ಕಾಲಕ್ರಮೇಣ ತಮ್ಮ ನಿವಾಸ ಸ್ಥಾನದ ಭೌಗೋಲಿಕ ಮತ್ತು ಪ್ರಾಕೃತಿಕ ಪರಿಸ್ಥಿತಿಗನುಸಾರವಾಗಿ ತಮ್ಮ ಆಚಾರ-ವಿಚಾರಗಳನ್ನು ಮತ್ತು ಧಾರ್ಮಿಕ ಮನೋಭಾವಗಳನ್ನು ರೂಪಿಸಿ ಕೊಂಡಿದ್ದರೆನ್ನಬಹುದು. ಅರ್ಥಾತ್ ಯಾವುದೊಂದು ಜನಾಂಗದ ಸಂಸ್ಕೃತಿಯು ರೂಪುಗೊಳ್ಳಲು ಆ ಜನಾಂಗವು ನೆಲಸಿದ್ದ ಪ್ರದೇಶದ ಭೌಗೋಲಿಕ ಮತ್ತು ಪ್ರಾಕೃತಿಕ ಪರಿಸ್ಥಿತಿಯು ಕಾರಣವಾಗುತ್ತದೆಯೇ ಹೊರತು ಜನ್ಮ ಅಥವಾ ಮೂಲವು ಕಾರಣವಾಗುವುದಿಲ್ಲ. ಆದುದರಿಂದ ಯಾವುದೊಂದು ಜನಾಂಗದ ಸಂಸ್ಕೃತಿಯು ಬೇರೊಂದು ಜನಾಂಗದ ಸಂಸ್ಕೃತಿಗಿಂತ ಮೇಲು ಇಲ್ಲವೇ ಕೀಳು ಎಂದಾಗಲೀ ಒಂದು ಜನಾಂಗವು ಇನ್ನೊಂದು ಜನಾಂಗಕ್ಕಿಂತ ಶ್ರೇಷ್ಠ ಎಂದಾಗಲೀ ಅನ್ನಲಾಗುವುದಿಲ್ಲ. ಒಂದು ಜನಾಂಗವು ಪರಿಸ್ಥಿತಿಯ ಒತ್ತಡದಿಂದ ಕೆಲವು ವಿಷಯಗಳಲ್ಲಿ ಬಹಳ ಬೇಗನೇ ಪ್ರಗತಿಯನ್ನು ಮತ್ತು ಉನ್ನತಿಯನ್ನು ಪಡೆದಿರಬಹುದು. ಮತ್ತು ಬೇರೊಂದು ಜನಾಂಗವು ತುಸು ಹಿಂದುಳಿದಿರಬಹುದು ಅಷ್ಟೆ.

ಯಾವುದೊಂದು ಜನಾಂಗದ ಸಂಸ್ಕೃತಿಯಲ್ಲಿ ಆ ಜನಾಂಗದ ಧರ್ಮವು ಪ್ರಥಮ ಸ್ಥಾನವನ್ನು ಪಡೆದಿರುತ್ತದೆ. ಧರ್ಮ ಎಂಬ ಪರಿಭಾಷೆಯೊಳಗೆ ಸಾಮಾನ್ಯ ವಾಗಿ ಮನುಷ್ಯವರ್ಗದಲ್ಲಿ, ಅವರವರು ದಿವ್ಯ ಎಂದು ತಿಳಿದ ಶಕ್ತಿಗಳ ಕುರಿತು ಬೆಳೆದು ಬಂದ ನಂಬಿಕೆಗಳು ಮತ್ತು ತಮ್ಮ ಕಲ್ಯಾಣಾಪೇಕ್ಷೆಯಿಂದ ಆ ದಿವ್ಯಶಕ್ತಿಗಳನ್ನು ಅನುಲಕ್ಷಿಸಿ ಪಾರಂಪರ್ಯವಾಗಿ ಸಾಗಿಸಿಕೊಂಡು ಬಂದ ಅಥವಾ ರೂಢಿಸಿಕೊಂಡ

ಆರಾಧನೆಗಳ ಇಲ್ಲವೇ ಉಪಾಸನೆಗಳ ಮೂಲಕ ವ್ಯಕ್ತಗೊಳಿಸುವ ಭಾವನೆಗಳು ಜಗತ್ತಿನ ಉತ್ಪತ್ತಿ, ಸ್ಥಿತಿ, ಲಯ, ಜೀವಿಯ ಜನನ, ಮರಣ ಮತ್ತು ಮರಣೋತ್ತರ ಸ್ಥಿತಿ ಮೊದಲಾದುವುಗಳ ಕುರಿತು ಪ್ರಚಲಿತವಿರುವ ಕಲ್ಪನೆಗಳು, ಅವುಗಳ ಸಂಬಂಧ ದಲ್ಲಿ ಪ್ರಾಚೀನ ಕಾಲದಿಂದ ಸಾಗಿ ಬಂದ ಐತಿಹ್ಯಗಳು ಮತ್ತು ಅವುಗಳಿಂದಾಗಿ ರೂಢವಾದ ಸಂಪ್ರದಾಯಗಳು ಬರುತ್ತವೆ. ಹಾಗೆಯೇ ಐತಿಹ್ಯವೆಂಬ ಪರಿಭಾಷೆ ಯೊಳಗೆ ಮನುಷ್ಯನ ಪೂರ್ವಜರಿಗೆ ಸಂಬಂಧಿಸಿದ ವಾಸ್ತವಿಕ ಘಟನೆಗಳ ವರ್ಣನೆಗಳು ಮಾತ್ರವಲ್ಲದೇ ಮನುಷ್ಯನು ತಾನು ದಿವ್ಯ ಎಂದು ನಂಬಿದ ಶಕ್ತಿಗಳಿಗೆ ತನ್ನಂತೆಯೇ ಮೂರ್ತರೂಪಗಳನ್ನು ಕೊಟ್ಟು ತನ್ನ ಕಲ್ಪನಾಶಕ್ತಿಯಿಂದ ಅವುಗಳ ಕುರಿತು ರಚಿಸಿದ ನಾನಾ ಬಗೆಯ ಆಖ್ಯಾಯಿಕೆಗಳು ಕೂಡ ಬರುತ್ತವೆ. ಅಂದರೆ ಐತಿಹ್ಯಗಳಲ್ಲಿ ವಾಸ್ತವಿಕ ಶರೀರಧಾರೀ ವ್ಯಕ್ತಿಗಳ ಚರಿತ್ರಾತ್ಮಕ ಕಥೆಗಳಿರುವಂತೆಯೇ ಮೂರ್ತೀಕೃತ ದೇವತೆಗಳ ಅಥವಾ ಕಲ್ಪಿತ ರೂಪಗಳ ಆಖ್ಯಾಯಿಕೆಗಳೂ ಬರುತ್ತವೆ.

ಆರ್ಯಜನರ ವೈದಿಕ ಸಾಹಿತ್ಯದ ಅಧ್ಯಯನದಿಂದ ತಿಳಿದುಬರುವಂತೆ ಮನುಷ್ಯನ ಸುಖದುಃಖಗಳಿಗೆ ಮತ್ತು ಕಷ್ಟಕಾರ್ಪಣ್ಯಗಳಿಗೆ ಕಾರಣರಾಗಿರಬಹುದೆಂದು ಭಾವಿಸಲಾದ ದಿವ್ಯಶಕ್ತಿಗಳು ಅಂದರೆ ಸೂರ್ಯ, ಚಂದ್ರ, ನಕ್ಷತ್ರಗಳು, ಅಗ್ನಿ, ಉಷಾ, ರಾತ್ರಿ ಮೊದಲಾದುವುಗಳು ಅವನ ಉಪಯೋಗಕ್ಕೆ ಬೀಳುವ ವೃಕ್ಷಗಳು, ನದಿಗಳು, ದಿವ್ಯಜಲಗಳು, ಪಿತೃಗಳು, ಅನ್ನ ಮೊದಲಾದುವುಗಳು ಆರ್ಯಜನರ ಆರಾಧನೆಯ ಲಕ್ಷ್ಯಗಳಾಗಿವೆ. ಆದುದರಿಂದ ಅವುಗಳೆಲ್ಲವೂ ವೈದಿಕ ಸಾಹಿತ್ಯದಲ್ಲಿ ಆರ್ಯಜನರ ದೇವತೆಗಳಾಗಿ ಮಾರ್ಪಟ್ಟು ಮೂರ್ತರೂಪ ಧರಿಸಿವೆ. ಆರ್ಯಜನರ ಆರಾಧನೆಯ ಉದ್ದೇಶವು ಜೀವಿತ ಕಾಲದಲ್ಲಿ ಹೆಚ್ಚಿನ ಕಷ್ಟಗಳು ಬರದೇ ದೇವತೆಗಳ ಅನುಗ್ರಹದಿಂದ ತಮ್ಮ ಜೀವನವು ಸುಖಮಯವಾಗಿ ಸಾಗಬೇಕೆಂಬುದು ಮತ್ತು ಮರಣಾನಂತರ ತಮ್ಮ ಆರಾಧನೆಯ ಫಲವಾಗಿ ಸ್ವರ್ಗಲೋಕವನ್ನು ಸೇರಿ ಅಲ್ಲಿ ದೇವತೆಗಳೊಂದಿಗೆ ಇಲ್ಲವೇ ತಮ್ಮ ಪಿತೃಗಳೊಂದಿಗೆ ವಾಸಿಸಬೇಕೆಂಬುದಾಗಿತ್ತು.

ಆದುದರಿಂದ ಯಜ್ಞಕಾಲದಲ್ಲಿ ದೇವತೆಗಳ ಪ್ರತೀಕಗಳನ್ನು ಯಜ್ಞ ಕುಂಡದ ಬಳಿಯಲ್ಲಿ ಹಾಸಿದ ದರ್ಭೆಗಳ ಮೇಲಿರಿಸಿ ಅವುಗಳಿಗಾಗಿ ಅಗ್ನಿಯಲ್ಲಿ ಆಹುತಿಗಳನ್ನು ಅರ್ಪಿಸುವಂಥ ಮತ್ತು ಪಶುಗಳ ಬಲಿಯ ಮೂಲಕ ದೇವತೆಗಳನ್ನು ತೃಪ್ತಿಪಡಿಸುವಂಥ ಹಿಂಸಾಮಯ ಯಜ್ಞಗಳೊಂದಿಗೆ ಪ್ರಾರಂಭವಾಗಿದ್ದ ಅವರ ಆರಾಧನಾ ಪದ್ಧತಿಯು ತರುವಾಯದ ಉಪನಿಷತ್ತುಗಳಲ್ಲಿ ಚರ್ಚಿಸಲ್ಪಟ್ಟಿರುವ ನಿರಾಕಾರ, ಸರ್ವವ್ಯಾಪಕ, ಸರ್ವಾಂತರ್ಯಾಮಿ, ಸರ್ವಶಕ್ತ, ಸರ್ವಜ್ಞ, ಸರ್ವ ಪ್ರೇರಕ, ಏಕಮೇವಾದ್ವಿತೀಯ, ನಿತ್ಯ, ಸತ್ಯ ಪರಮಾತ್ಮನ ಉಪಾಸನೆಯಲ್ಲಿ ಅಥವಾ ಸ್ವರ್ಗಪ್ರಾಪ್ತಿಗೆ ಇಲ್ಲವೇ ಮುಕ್ತಿಗೆ ಕರ್ಮಮಾರ್ಗಕ್ಕಿಂತ ಪರಮಾತ್ಮನನ್ನು ಅರಿತು ಕೊಳ್ಳಲಾಗುವ ಜ್ಞಾನಮಾರ್ಗವು ಯೋಗ್ಯವಾದುದೆಂಬ ಸಿದ್ಧಾಂತದಲ್ಲಿ ಪರ್ಯ ವಸಾನಹೊಂದಿದೆ.

ಆರ್ಯಜನರ ವೈದಿಕ ಸಂಸ್ಕೃತಿಯು ಮೂಲತಃ ಉತ್ತರಧ್ರುವದ ಬಳಿಯ ಶೀತಪ್ರದೇಶದಲ್ಲಿ ರೂಪುತಳೆದಿದ್ದುದರಿಂದ ಅದು ಭೂಗೋಲದ ಉಷ್ಣಪ್ರದೇಶಗಳಲ್ಲಿ ನೆಲಸಿದ್ದ ಅನ್ಯ ಜನಾಂಗಗಳ ಸಂಸ್ಕೃತಿಯಿಂದ ಕೆಲವು ಅಂಶಗಳಲ್ಲಿ ಭಿನ್ನವಾಗಿದ್ದಿತಲ್ಲದೇ ಇತರ ಸಂಸ್ಕೃತಿಗಳಲ್ಲಿ ಇಲ್ಲದ ಮತ್ತು ಇರಲು ಕಾರಣವಿಲ್ಲದ ಅಗ್ನಿಯ ಆರಾಧನೆಯಿಂದ ಕೂಡಿದ್ದಿತು. ಅಂದರೆ ಒಂದು ಕುಂಡದಲ್ಲಿ ಅಗ್ನಿಯನ್ನು ಹೊತ್ತಿಸಿ ಯಜ್ಞಗಳ ರೂಪದಿಂದ ಅಗ್ನಿಯನ್ನು ಆರಾಧಿಸುವುದು ವೈದಿಕ ಸಂಸ್ಕೃತಿಯ ಮುಖ್ಯ ವೈಶಿಷ್ಟ್ಯವಾಗಿದ್ದಿತು, ಸಾಮಾನ್ಯವಾಗಿ ಎಲ್ಲ ಆರ್ಯಜನರ ಮನೆಯಲ್ಲಿ ಅಗ್ನಿಯನ್ನು ಆರಾಧಿಸುವ ಸಲುವಾಗಿ ನಿರ್ಮಿಸಿದ ಒಂದು ಕುಂಡವು ಇರುತಿದ್ದಿತು. ಮತ್ತು ಆ ಕುಂಡದಲ್ಲಿ ಅಗ್ನಿಯು ಸದಾಕಾಲ ಉರಿಯುತಿದ್ದ. ಮತ್ತು ಮನೆಯೊಳಗಿನ ಹಿರಿಯ ದಂಪತಿಯರು ಅಗ್ನಿಯನ್ನು ಆರಾಧಿಸಿ ತಾವು ತಿನ್ನುವ ಆಹಾರದ ಮೊದಲ ಅಂಶವನ್ನು ಅಗ್ನಿಗೆ ಆಹುತಿಯಾಗಿ ಅರ್ಪಿಸದೇ ತಾವು ಆಹಾರವನ್ನು ಸ್ವೀಕರಿಸುತ್ತಿರಲಿಲ್ಲ. ಏಕೆಂದರೆ ಧ್ರುವಪ್ರದೇಶದಲ್ಲಿನ ತೊಂಭತ್ತೊಂಭತ್ತು ದಿನಗಳಷ್ಟು ದೀರ್ಘಕಾಲದ ಅಖಂಡ ರಾತ್ರಿಯ ಅಂಧಕಾರದಿಂದ, ಮೈಕೊರೆಯುವ ಚಳಿಯಿಂದ ಮತ್ತು ಬೇರೆ ಹಲವು ಬಗೆಯ ಪೀಡೆಗಳಿಂದ ಬಳಲುತಿದ್ದ ಅವರಿಗೆ ಅಗ್ನಿಯು ರಕ್ಷಕದೇವನಾಗಿದ್ದ. ಅಂದರೆ ಅವನು ಅಲ್ಲಿನ ಗಾಢಾಂಧಕಾರವನ್ನು ಕಡಿಮೆ ಮಾಡುವ ಇಂದ್ರನಾಗಿದ್ದ. ಚಳಿಯಿಂದ ಕಾಪಾಡುವ ರುದ್ರನಾಗಿದ್ದ.

ಅವರು ಅಗ್ನಿಯನ್ನು ಕಂಡುಕೊಳ್ಳುವ ಮೊದಲು ಸೂರ್ಯನನ್ನು ಚಂದ್ರನನ್ನು ಮತ್ತು ನಕ್ಷತ್ರಗಳನ್ನು "ದೇವರು" ಅಂದರೆ "ಪ್ರಕಾಶವನ್ನು ಬೀರುವವರು" ಮತ್ತು "ದಿವದಲ್ಲಿ ಇರುವವರು" ಎಂದು ಕರೆಯುತಿದ್ದರು. ಮತ್ತು ಬಹಳ ಭಯ-ಭಕ್ತಿಗಳಿಂದ ಆರಾಧಿಸುತಿದ್ದರು" ಆದರೆ ಅವರು ಅಗ್ನಿಯನ್ನು ಕಂಡುಕೊಳ್ಳುವ ಮೊದಲು ಬಾಳುತಿದ್ದ ಬಾಳು ಬಾಳಾಗಿರಲಿಲ್ಲವೆನ್ನಬಹುದು. ಸೂರ್ಯನ ದಕ್ಷಿಣಾಯನವು ಆರಂಭವಾದ ಕೆಲವು ದಿನಗಳ ತರುವಾಯ ಸೂರ್ಯನು ಮುಳುಗಿ ದೀರ್ಘರಾತ್ರಿಯು ಪ್ರಾರಂಭವಾಯಿತೆಂದರೆ ಅಲ್ಲಿ ಗಾಢವಾದ ಅಂಧಕಾರವು ಕವಿಯುತಿದ್ದಿತು. ಮತ್ತು ಸೂರ್ಯನು ಕಾಣಿಸುತಿದ್ದ ಕಾಲದಲ್ಲಿ ಕೂಡ ಚಳಿಯಿರುತಿದ್ದ ಆ ಪ್ರದೇಶದಲ್ಲಿ ದೀರ್ಘರಾತ್ರಿಯ ಪ್ರಾರಂಭದೊಂದಿಗೆ ಚಳಿಯ ಕೊರೆತವೂ ಪ್ರಾರಂಭವಾಗುತಿದ್ದಿತು. ಮತ್ತು ಚಳಿಯನ್ನು ತಾಳಲಾರದೇ ಹಲವು ಜನರು ಮಲಗಿದ್ದಂತೆಯೇ ಮೃತ್ಯುವನ್ನಪ್ಪುತಿದ್ದರು. ಹಾಗಾಗಿ ಅವರು ಕತ್ತಲೆಯನ್ನು ಮೃತ್ಯುವೆಂತಲೂ ಬೆಳಕನ್ನು ಅಮೃತವೆಂತಲೂ- ಕರೆಯುತಿದ್ದರು. ಏಕೆಂದರೆ ಚಳಿಗೆ ಕಾರಣವಾದ ಆ ದೀರ್ಘರಾತ್ರಿಯ ಕತ್ತಲೆಯ ಕಾಲವನ್ನು ಕಳೆಯುವುದೆಂದರೆ ಅಲ್ಲಿನ ಜನರಿಗೆ ಮೃತ್ಯುವಿನೊಡನೆ ಹೋರಾಡುವಂತಿತ್ತು,

ಉತ್ತರ ಧ್ರುವಪ್ರದೇಶದಲ್ಲಿ ನೆಲಸಿದ್ದ ಆದಿಕಾಲದ ಆರ್ಯಜನರಿಗೆ ಮೊದಲು ಮೊದಲು ಸೂರ್ಯನು ಬಹಳ ದಿನಗಳ ತನಕ ಏಕೆ ಮರೆಯಾಗಿರುತ್ತಾನೆಂದಾಗಲೀ, ಮರೆಯಾದ ಅವನು ಮರಳಿ ಯಾವಾಗ ಕಾಣಬರುವನೆಂದಾಗಲೀ ನಿಶ್ಚಿತವಾಗಿ ಗೊತ್ತಿರಲಿಲ್ಲ. ಹಾಗಾಗಿ ಅವರು ಸೂರ್ಯನು ಮರಳಿ ಯಾವಾಗ ಮೂಡುವನೋ ಎಂದು ಬಹಳ ಕಾತರ ಭಾವದಿಂದ ಮತ್ತು ಉತ್ಸುಕತೆಯಿಂದ ಕಾಯುತಿದ್ದರು. ಮತ್ತು ಬೇಗನೇ ಮರಳಿ ಮೂಡಿ ಬಾ ಎಂಬುದಾಗಿ ಸೂರ್ಯನನ್ನು ಮೊರೆಯಿಟ್ಟು ಕರೆಯುತಿದ್ದರು.

ಯೇ ತೇ ಪಂಥಾಃ ಸವಿತಃ ಪೂರ್ವ್ಯಾಸೋ
ಅರೇಣವಃ ಸುಕೃತಾ ಅಂತರಿಕ್ಷೇ ।
ತೇಭಿರ್ನೋಽದ್ಯ ದೇವ ಪಥಿಭಿಃ ಸುಗೇಭಿಃ
ರಕ್ಷಾ ನೋ ಅಧಿ ಚ ಬ್ರೂಹಿ ದೇವ ॥ ಋ. ೧–೩೫–೧೧ ॥

ಅರ್ಥ ಹೇ ಸವಿತೃ ದೇವನೇ, ಅಂತರಿಕ್ಷದಲ್ಲಿ ಸ್ವಲ್ಪವೂ ಧೂಳಿಲ್ಲದಂತೆ, ಚೆಲೋ ರೀತಿಯಲ್ಲಿ ನಿರ್ಮಿಸಲ್ಪಟ್ಟ ಯಾವ ಪ್ರಾಚೀನ ಮಾರ್ಗಗಳಿವೆಯೋ ಅಂಥ ಸುಗಮವಾದ ಮಾರ್ಗಗಳಿಂದ (ಮರಳಿ ಬಂದು) ಇಂದು ನಮ್ಮನ್ನು ಕಾಪಾಡು. ಮತ್ತು ಹೇ ದೇವನೇ (ನಿನ್ನ ದರ್ಶನದಿಂದ) ನಮ್ಮನ್ನು ಆಶೀರ್ವದಿಸು.

ಉದ್ಯನ್ನದ್ಯ ಮಿತ್ರಮಹ ಆರೋಹನ್ನುತ್ತರಾಂ ದಿವಮ್ ।
ಹೃದ್ರೋಗಂ ಮಮ ಸೂರ್ಯ ಹರಿಮಾಣಂ ಚ ನಾಶಯ॥ಋ. ೧-೫೦-೧೧॥

ಅರ್ಥ–ಮಹಾಮಿತ್ರನಾದ ಹೇ ಸೂರ್ಯದೇವನೇ, ನೀನಿಂದು ಉತ್ತರದ ಅಥವಾ ಎತ್ತರದ ದಿವವನ್ನು ಏರುತ್ತ ಉದಯಿಸುವಂಥವನಾಗಿ ನನ್ನ ಹೃದಯದ ರೋಗವನ್ನೂ (ನೀನಿಲ್ಲದುದರಿಂದ ನನ್ನಲ್ಲಿ ಉಂಟಾದ) ಅರಸಿನತನವನ್ನೂ ನಿವಾರಿಸು.

ಉತ್ತರ ಧ್ರುವಪ್ರದೇಶದ ಪ್ರಾಕೃತಿಕ ಪರಿಸ್ಥಿತಿಯು ಮತ್ತು ಆದಿಕಾಲದ ಆರ್ಯಜನರ ಅರಣ್ಯವಾಸವು ಅವರನ್ನು ದೊಡ್ಡ ದೊಡ್ಡ ಕುಟುಂಬಗಳಾಗಿ ಇರುವಂತೆಯೂ, ಎಲ್ಲ ಕುಟುಂಬಗಳು ಒಗ್ಗಟ್ಟಿನಿಂದ, ಪ್ರೀತಿಯಿಂದ ಮತ್ತು ಸಹಕಾರದಿಂದ ವ್ಯವಹರಿಸುವಂತೆಯೂ ಮಾಡಿತ್ತು. ಅಲ್ಲಿನ ಪರಿಸ್ಥಿತಿಯಿಂದ ಉದ್ಭೂತವಾಗುತಿದ್ದ ಸಂಕಟಗಳನ್ನು ಮತ್ತು ಆಪತ್ತುಗಳನ್ನು ಮತ್ತು ಹಿಂಸ್ರ ಮೃಗಗಳ ಆಕ್ರಮಣಗಳನ್ನು ಅವರ ಎಲ್ಲ ಕುಟುಂಬಗಳು ಒಟ್ಟಾಗಿಯೇ ಎದುರಿಸಬೇಕಾಗುತಿತ್ತು. ಅಂಥ ಸಂದರ್ಭಗಳಲ್ಲಿ ಸ್ತ್ರೀಯರು ಕೂಡ ಪುರುಷರ ಹೋರಾಟಗಳಲ್ಲಿ ಪುರುಷರಿಗೆ ಸರಿಸಮರಾಗಿ ಸಹಕರಿಸುತಿದ್ದರು,

ಉತ್ತರಧ್ರುವ ಪ್ರದೇಶದ ಭೌಗೋಲಿಕ ಹಾಗೂ ಪ್ರಾಕೃತಿಕ ಪರಿಸ್ಥಿತಿಯಿಂದಾಗಿ ಅಲ್ಲಿ ವರ್ಷದ ಕೆಲವು ಋತುಗಳಲ್ಲಿ ಕಾಯಿಪಲ್ಯಗಳಾಗಲೀ, ಹಣ್ಣು

ಹಂಪಲುಗಳಾಗಲೀ, ದವಸಧಾನ್ಯಗಳಾಗಲೀ ಸಮೃದ್ಧವಾಗಿ ಬೆಳೆಯುತ್ತಿರಲಿಲ್ಲ. ಆದುದರಿಂದ ಅಲ್ಲಿ ನೆಲಸಿದ್ದ ಆರ್ಯಜನರು ಪಾರ್ಥಿವ ಶಾಕಾಹಾರಗಳು ದೊರೆಯು ದಿದ್ದ ಕಾಲದಲ್ಲಿ ಜಲಚರಗಳಾದ ಮೀನುಗಳನ್ನು ಮತ್ತು ಆಮೆಗಳನ್ನು ಹಿಡಿದು ಇಲ್ಲವೇ ಕಾಡಿನ ಮೊಲ, ಹಂದಿ ಮೊದಲಾದುವುಗಳನ್ನು ಅಲ್ಲದಿದ್ದರೆ ಕಾಡುಹೋರಿ, ಕಡವೆ ಮೊದಲಾದುವುಗಳನ್ನು ಬೇಟೆಯಾಡಿ ಕೊಂದು ಅವುಗಳ ಮಾಂಸವನ್ನು ತಿಂದು ಹೊಟ್ಟೆ ತುಂಬುತಿದ್ದರು. ಅವುಗಳ ಚರ್ಮವನ್ನು ಸುಲಿದು ಹದಮಾಡಿದ ತರುವಾಯ ಹೊದ್ದುಕೊಳ್ಳಲು ಮತ್ತು ನೆಲದ ಮೇಲೆ ಹಾಸಲು ಉಪಯೋಗಿಸು ತಿದ್ದರು. ಮಣ್ಣಿನ ಪಾತ್ರೆಗಳನ್ನು ನಿರ್ಮಿಸಲು ಗೊತ್ತಿಲ್ಲದ ಆ ಕಾಲದಲ್ಲಿ ಅವರು ನೀರನ್ನು ಕುಡಿಯಲು ಮತ್ತು ದ್ರವಪದಾರ್ಥಗಳನ್ನು ಇಡಲು ಆಮೆಯ ಚಿಪ್ಪು ಗಳನ್ನು ಮತ್ತು ಸತ್ತ ಮನುಷ್ಯರ ತಲೆಬುರುಡೆಯ ಕಪಾಲಗಳನ್ನು ಉಪಯೋ ಗಿಸುತಿದ್ದರು.

ಹಾಗೆಯೇ ಅಸ್ತ್ರಶಸ್ತ್ರಗಳನ್ನು ನಿರ್ಮಿಸಲು ಸಾಧ್ಯವಿಲ್ಲದ ಆ ಪ್ರಾಚೀನ ಕಾಲ ದಲ್ಲಿ ದಂಡವೇ ಅವರ ಆಯುಧವಾಗಿತ್ತು. ಅವರು ಗುಂಪುಗಟ್ಟಿ ಕಾಡುಗಳಲ್ಲಿ ಸಂಚರಿ ಸುತ್ತ ದಂಡಗಳಿಂದಲೇ ಮೃಗಗಳನ್ನು ಹೊಡೆದು ಕೆಡವುತಿದ್ದರು. ಮತ್ತು ದಂಡ ಗಳಿಂದಲೇ ಆತ್ಮರಕ್ಷಣೆಯನ್ನು ಮಾಡಿಕೊಳ್ಳುತಿದ್ದರು. ಹಾಗಾಗಿ ಚರ್ಮ ಉಡು ವುದು ಮತ್ತು ದಂಡವನ್ನು ಧರಿಸುವುದು ಅವರಲ್ಲಿ ಒಂದು ಧಾರ್ಮಿಕ ಸಂಸ್ಕಾರ ಅಥವಾ ಕಟ್ಟಳೆಯಾಗಿತ್ತು. ಅತ್ಯಂತ ಪ್ರಾಚೀನ ಕಾಲದಲ್ಲಿ ಆರ್ಯಜನರ ವೇಷ ಭೂಷೆಗಳು ಯಾವ ಪ್ರಕಾರದಲ್ಲಿರುತಿದ್ದುವೆಂಬುದನ್ನು ವೈದಿಕ ಗೃಹ್ಯಸೂತ್ರಗಳಲ್ಲಿ ಬ್ರಾಹ್ಮಣ ಬ್ರಹ್ಮಚಾರಿಗಳಿಗಾಗಿ ವಿಧಿಸಿರುವ ವೇಷಭೂಷೆಗಳ ಮೇಲಿಂದಲೂ ಯಜುರ್ವೇದ ಸಂಹಿತೆಗಳಲ್ಲಿ ವರ್ಣಿಸಿರುವ ಶಿವನ ಅಥವಾ ರುದ್ರನ ವೇಷಭೂಷೆಗಳ ಮೇಲಿಂದಲೂ ಸರಿಯಾಗಿ ಅರಿತುಕೊಳ್ಳಬಹುದು. ಆಶ್ವಲಾಯನ ಗೃಹ್ಯ ಸೂತ್ರಗಳಲ್ಲಿ ಬ್ರಾಹ್ಮಣ ಬ್ರಹ್ಮಚಾರಿಯು ಕೃಷ್ಣಾಜಿನವನ್ನುಟ್ಟು ಅದರ ಮೇಲೆ ಮುಂಜಹುಲ್ಲಿನ ನಡುದಾರವನ್ನು ಸುತ್ತಬೇಕೆಂದು ಹಾಗೂ ಪಲಾಶದ ದಂಡವನ್ನು ಧರಿಸಬೇಕೆಂದು ವಿಧಿಸಿದೆ. [1] ಮತ್ತು ಯಜುರ್ವೇದ ಸಂಹಿತೆಗಳಲ್ಲಿ ರುದ್ರನನ್ನು **"ಪಿನಾಕ ಹಸ್ತ"** ಮತ್ತು **ಕೃತ್ತಿವಾಸಸ್"** [2] ಅಂದರೆ "ದಂಡ ಕೈಯಲ್ಲಿದ್ದವನು" ಮತ್ತು "ತೊಗಲನ್ನುಟ್ಟವನು" ಎಂದು ಕರೆದಿದೆ.

ಆದಿಕಾಲದ ಆರ್ಯಜನರು ಅಗ್ನಿಯನ್ನು ಕಂಡಿರಲಿಲ್ಲವೆಂದು ಹಿಂದೆ ಸೂಚಿಸಿದೆ. ಅವರು ಗುಂಪುಗಟ್ಟಿ ಕಾಡುಗಳಲ್ಲಿ ಸಂಚರಿಸುತಿದ್ದಾಗ ಅವರೊಳಗಿನ

---

1 ಅಪತೇನ ವಾಸಸಾ ಸಂವೀತ ಮೈಣೇಯೇನ ವಾಜಿನೇನ ಬ್ರಾಹ್ಮಣಮ್ ಮೇಖಲಾ ಮೌಂಜೀ, ದಂಡಃ ಪಾಲಾಶೋ ಬ್ರಾಹ್ಮಣಸ್ಯ ॥ ಆಶ್ವ. ಗೃಹ್ಯ. ೧-೧೯ ॥

2 ತೈಸಂ. ೧-೮-೬-೧೨ । ೪-೫-೧೦-೧೧, ವಾ. ಸಂ. ३-೬೧.

ಕೆಲವರು, ಅಲ್ಲಿ ಮರಗಳು ಸುಟ್ಟ ತರುವಾಯ ಬೂದಿ ಮುಸುಕಿ ಮರೆಯಾಗಿದ್ದ ಕೆಂಡಗಳನ್ನು ಆಕಸ್ಮಿಕವಾಗಿ ತುಳಿದುದರಿಂದ ಮೊತ್ತಮೊದಲು ಅವರಿಗೆ ಅಗ್ನಿಯ ಪರಿಚಯುವಾಗಿದ್ದಿತೆನ್ನಬಹುದು. ಆಗ ಅವರು ತಮ್ಮ ಕಾಲ್ತಳದ ಚರ್ಮವು ಸುಟ್ಟು ಬೊಕ್ಕೆ ಎದ್ದಿರುವುದನ್ನು ಕಂಡು ಬೆಚ್ಚಿದ್ದರು. ಅದು ಅವರಿಗೆ ಹೊಸ ಅನುಭವ ವಾಗಿತ್ತು. ಹಾಗಾಗಿ ಅವರು ತಮ್ಮ ದಂಡಗಳಿಂದ ಬೂದಿಯನ್ನು ಕೆದರಿದಾಗ ಕೆಂಪಗೆ ಮಿನುಗುವ ಕೆಂಡಗಳನ್ನು ಕಂಡು ತುಂಬಾ ಆಶ್ಚರ್ಯಪಟ್ಟಿದ್ದರು. ಹಾಗೂ ತರುವಾಯ ಅವರು ಆ ಕೆಂಡಗಳಲ್ಲಿ ತರಗೆಲೆಗಳನ್ನೂ, ಕಸಕಡ್ಡಿಗಳನ್ನೂ ಒಟ್ಟಿದಾಗ ಅವೆಲ್ಲ ಹೊತ್ತಿಕೊಂಡು ಬೆಳಕನ್ನೂ ಬಿಸುಪನ್ನೂ ಕೊಡುತ್ತವೆಂದು ತಿಳಿದಾಗ ಬಹಳ ಸಂತೋಷಪಟ್ಟಿದ್ದರಲ್ಲದೇ ಆ ಕೆಂಡಗಳನ್ನು ಕಪಾಲಗಳಲ್ಲಿ ತೆಗೆದುಕೊಂಡು ತಮ್ಮ ನಿವಾಸಸ್ಥಾನಕ್ಕೆ ತಂದಿದ್ದರು. ಹಾಗೆ ಕಾಡುಗಳಲ್ಲಿ ಸಂಚರಿಸುತಿದ್ದಾಗ ಕೆಂಡಗಳ ರೂಪದಲ್ಲಿ ಅಗ್ನಿಯನ್ನು ಕಂಡುಕೊಂಡವರು **"ಅಂಗಿರಸ"** ಕುಲದ ಜನರಾಗಿದ್ದ ರೆಂಬುದನ್ನು ಸೂಚಿಸುವ ಉಲ್ಲೇಖವು ಋಗ್ವೇದದಲ್ಲಿ ಮುಂದಿನಂತೆ ಬಂದಿದೆ–

ತ್ವಾಮಗ್ನೇಽ ಅಂಗಿರಸೋ ಗುಹಾಹಿತಮ್
ಅನ್ವವಿಂದಞ್ ಛಿಶ್ರಿಯಾಣಂ ವನೇ ವನೇ
ಸ ಜಾಯಸೇ ಮಥ್ಯಮಾನಃ ಸಹೋ ಮಹತ್
ತ್ವಾಮಾಹುಃ ಸಹಸಸ್ಪುತ್ರಮಂಗಿರಃ ॥ ಋ. ೫–೧೧–೬ ॥

ಅರ್ಥ – ಹೇ ಅಗ್ನಿದೇವನೇ, ಕಾಡುಗಳಲ್ಲಿ ಆಶ್ರಯಪಡೆದಂಥವನಾಗಿ ಗುಳಿಗಳಲ್ಲಿ ಅಡಗಿದ್ದ ನಿನ್ನನ್ನು ಅಂಗಿರಸರು ಕಂಡುಹಿಡಿದರು. ಹೇ ಮಹಾ ಬಲ ಶಾಲಿಯೇ ಅಂಥ ನೀನು (ಬಹಳ ಬಲಹಾಕಿ ಅರಣಿಗಳಿಂದ) ಕಡೆಯಲ್ಪಡುವಂಥವ ನಾಗಿ ಹುಟ್ಟುತ್ತೀ. ಆದುದರಿಂದ ಹೇ ಅಂಗೀರನೇ, ಜನರು ನಿನ್ನನ್ನು ಬಲದ ಪುತ್ರನೆನ್ನುತ್ತಾರೆ.

ಅಂಗಿರಸರು ತಾವು ಕಂಡಿದ್ದ ಕೆಂಡಗಳನ್ನು **"ಅಂಗಾರಾಃ"** ಎಂತಲೂ, ಅವುಗಳಿಂದ ಹೊತ್ತಿದ ಬೆಂಕಿಯನ್ನು **"ಅಗ್ನಿಃ"** ಎಂತಲೂ ಕರೆದಿದ್ದರು. ಮಾತ್ರವಲ್ಲ ತಾವೇ ಅಗ್ನಿಯನ್ನು ಕಂಡುಹಿಡಿದವರೆಂದು ಸೂಚಿಸುವ ಸಲುವಾಗಿ ಅವರು ಅಗ್ನಿಗೆ **"ಅಂಗಿರಸ್"** ಎಂಬ ಹೆಸರನ್ನು ಇಟ್ಟಿದ್ದರು. ಋಗ್ವೇದದಲ್ಲಿ ಅಗ್ನಿಯನ್ನು ಕಂಡು ಹಿಡಿದುದರ ಮತ್ತು ಅಗ್ನಿಯನ್ನು ತಂದುದರ ಸಂಬಂಧದಲ್ಲಿ ಅಂಗಿರಸರ ಮಾತ್ರ ವಲ್ಲದೇ **"ಅಗಸ್ತ್ಯ ಭೃಗು, ಮಾತರಿಶ್ವನ್, ಭರತ"** ಮೊದಲಾದವರ ಹೆಸರುಗಳು ಬಂದಿವೆಯಲ್ಲದೇ ಅಗ್ನಿಯನ್ನು ಆ ಹೆಸರುಗಳಿಂದ ಕರೆದ ಉಲ್ಲೇಖಗಳೂ ಇವೆ. ಆದರೆ ಋಗ್ವೇದದಲ್ಲಿ **"ತ್ವಮಗ್ನೇ ಪ್ರಥಮೋಽಂಗಿರಾಋಷಿರ್ದೇವೋ ದೇವಾನಾಮ ಭವಃ ಶಿವಃಸಖಾ** ॥ ೧-೩೧-೧ ॥ ಅಂದರೆ– "ಹೇ ಅಗ್ನಿದೇವನೇ, ನೀನು ಮೊತ್ತ ಮೊದಲು ಅಂಗಿರಾ ಋಷಿಯೂ, ದೇವರದೇವನೂ, ಶಿವರೂಪದ ಗೆಳೆಯನೂ

ಆದಿ" ಎಂತಲೂ, ಐತರೇಯ ಬ್ರಾಹ್ಮಣದಲ್ಲಿ **"ಯೇ ಅಂಗಾರಾ ಆಸಂಸ್ತೇ ಅಂಗಿರಸೋsಭವನ್" ॥ ೩-೩೪ ॥** ಅಂದರೆ "ಅಂಗಾರ (ಕೆಂಡ) ಇದ್ದವುಗಳೇ ಅಂಗಿರಸರಾದರು" ಎಂತಲೂ ಹೇಳಿರುವುದರಿಂದ, ಮೊತ್ತಮೊದಲು ಅಂಗಿರಸ ಕುಲದವರೇ ಕಾಡುಗಳಲ್ಲಿ ಸಂಚರಿಸುತಿದ್ದಾಗ ಕೆಂಡಗಳ ರೂಪದಲ್ಲಿ ಅಗ್ನಿಯನ್ನು ಕಂಡುಕೊಂಡಿದ್ದರೆಂದು ಸಿದ್ಧವಾಗುತ್ತದೆ.

ಆದರೆ ಕೆಂಡಗಳನ್ನು ಕಂಡುಕೊಂಡ ಅಂಗಿರಸರಿಗೆ ಕೆಂಡಗಳ ಉತ್ಪತ್ತಿ ಕಾರಣವು ಗೊತ್ತಾಗದುದರಿಂದ ಅವರು ಮರಗಳು ತಮ್ಮಷ್ಟಕ್ಕೇ ಉರಿದು ಕೆಂಡಗಳಾಗಿದ್ದಿರಬಹುದೆಂದು ಭಾವಿಸಿದ್ದರಲ್ಲದೇ ಅಗ್ನಿಯು ಮರಗಳ ಒಳಗೆನೇ ಇರುತ್ತಾನೆಂದು, ದೃಢವಾಗಿ ನಂಬಿದರು. ಹಾಗಾಗಿ ಅವರು ಕಟ್ಟಿಗೆಗಳ ಒಳಗಿರುವ ಅಗ್ನಿಯನ್ನು ಹೊರಗೆ ತರುವ ಸಲುವಾಗಿ ಒಂದು ಕಟ್ಟಿಗೆಗೆ ಇನೊಂದು ಕಟ್ಟಿಗೆಯನ್ನು ಬಲವಾಗಿ ತಿಕ್ಕತೊಡಗಿದರು ಮತ್ತು ಆ ತಿಕ್ಕಾಟದಿಂದ ಕಟ್ಟಿಗೆಗಳು ಬಿಸಿಯಾಗಿರುವುದನ್ನು ಕಂಡು ತಮ್ಮ ನಂಬಿಕೆಯು ಸರಿಯೆಂದು ನಿರ್ಧರಿಸಿದರು, ಮತ್ತು ಅವರೊಳಗಿನ ಅಥರ್ವನ್ ಎಂಬವನು ಕಟ್ಟಿಗೆಗೆ ಕಟ್ಟಿಗೆಯನ್ನು ತಿಕ್ಕಿ ಅಗ್ನಿಯನ್ನು ಉತ್ಪಾದಿಸುವುದರಲ್ಲಿ ಜಯಪಡೆದನು. ಅದು ಮುಂದಿನ ಋಚೆಯಿಂದ ಸೂಚಿತವಾಗುತ್ತದೆ.

ತ್ವಾಮಗ್ನೇ ಪುಷ್ಕರಾದಧ್ಯಥರ್ವಾ ನಿರಮಂಥತ॥ ಋ. ೬-೧೬-೧೩ ॥

ಅಂದರೆ – ಹೇ ಅಗ್ನಿದೇವನೇ, ಅಥರ್ವನು ನಿನ್ನನ್ನು ಪುಷ್ಕರದ ಮೇಲಿಂದ ಕಡೆದು ಹೊರಡಿಸಿದನು ಅಂದರೆ ಹುಟ್ಟಿಸಿದನು. ಹಾಗೆಯೇ ಮೊತ್ತಮೊದಲು ಕಟ್ಟಿಗೆಗಳಿಂದ ಕಡೆದು ಅಗ್ನಿಯನ್ನು ಹುಟ್ಟಿಸಿದವನು ಅಥರ್ವನೇ ಎಂಬುದು ಮುಂದಿನ ಋಚೆಯಿಂದ ಸೂಚಿತವಾಗುತ್ತದೆ.

ಇಮಮುತ್ಯಮಥರ್ವವದಗ್ನಿಂ ಮಂಥಂತಿ ವೇದಸಃ ।
ಯಮಂಕೂಯಂತಮಾನಯನ್ನಮೂರಂ ಶ್ಯಾವ್ಯಾಭ್ಯಃ ॥ ಋ. ೬-೧೫-೧೭॥

ಅರ್ಥ – ಋತ್ವಿಜರು ಅಂಥ ಈ ಅಗ್ನಿಯನ್ನು ಅಥರ್ವನಂತೆಯೇ ಕಡೆಯುತ್ತಾರೆ. ಅಥರ್ವ ಮೊದಲಾದವರು ಕತ್ತಲೆಯ ರಾತ್ರಿಗಳಿಗಾಗಿ ಅಂದರೆ ರಾತ್ರಿಯ ಕತ್ತಲೆಯನ್ನು ಕಡಿಮೆಮಾಡುವ ಸಲುವಾಗಿ ಜಾಣನೂ ಅಡ್ಡತಿಡ್ಡವಾಗಿ ಓಡುವಂಥವನೂ ಆದ ಅಗ್ನಿಯನ್ನು ತಂದಿದ್ದರು.

ಮುಂದೆ ಮಿತ್ರ ಮತ್ತು ವರುಣ ಎಂಬವರು ಆಕಾಶದಲ್ಲಿ ಸಂಚರಿಸುವ ಮೋಡಗಳಲ್ಲಿ ಮಿನುಗುತಿದ್ದ ಮಿಂಚಿನಿಂದ ಸಿಡಿದ ಸೆಳೆಯನ್ನು ಕಂಡು ಅದನ್ನೂ, ಆ ಸೆಳೆಯು ಭೂಮಿಯ ಮೇಲಿನ ಮರಗಳಿಗೆ ಬಡಿದುದರಿಂದ ಮರಗಳು ಸುಟ್ಟು ಹುಟ್ಟಿದ ಅಗ್ನಿಯನ್ನೂ "ವಸಿಷ್ಠ" ಎಂದು ಕರೆದಿದ್ದರು. ಅದು ಮುಂದಿನ ಋಚೆಯಿಂದ ಸೂಚಿತವಾಗುತ್ತದೆ.

ವಿದ್ಯುತೋ ಜ್ಯೋತಿಃ ಪರಿ ಸಂಜಿ ಹಾನಂ
ಮಿತ್ರಾ ವರುಣಾ ಯದಪಶ್ಯತಾಂ ತ್ವಾ ।
ತತ್ತೇ ಜನ್ಮೋತೈಕಂ ವಸಿಷ್ಠ
ಅಗಸ್ತ್ಯೋ ಯತ್ ತ್ವಾ ವಿಶ ಆ ಜಭಾರ ॥ ಋ. ೭–೩೩–೧೦ ॥

ಅರ್ಥ – ಹೇ ವಸಿಷ್ಠನೇ, ಮಿತ್ರ ಮತ್ತು ವರುಣ ಎಂಬವರು ನಿನ್ನನ್ನು ನೋಡುತಿದ್ದಾಗ ನೀನು ವಿದ್ಯುತ್ತಿನಿಂದ ಸಿಡಿಯುತಿದ್ದಂಥ ಜ್ಯೋತಿಯಾಗಿದ್ದೆ. ಅಂದರೆ ಆಕಾಶದಲ್ಲಿನ ಮೋಡಗಳ ಜಲಗಳಲ್ಲಿ ಹುಟ್ಟಿ ಧರೆಗಿಳಿಯುತ್ತಿದ್ದ ಮಿಂಚಿನ ಬಳ್ಳಿಯಾಗಿದ್ದೆ ಮತ್ತು ಅಗಸ್ತ್ಯನು ನಿನ್ನನ್ನು ನಿನ್ನ ನೆಲೆಯಿಂದ ತರುವಾಗ ನಿನ್ನ ಒಂದು ಜನ್ಮವಾಗಿತ್ತು. ಅಂದರೆ ನೀನು ಮಿಂಚಿನ ರೂಪದಿಂದ ಧರೆಗಿಳಿದವನು ಅಲ್ಲಿನ ಗಿಡಮರಗಳನ್ನು ಸುಟ್ಟು ಕೆಂಡಗಳಾಗಿ ಮಾರ್ಪಟ್ಟಿದ್ದೆ. ಮತ್ತು ಆ ಪ್ರಕಾರವಾಗಿ ನಿನ್ನ ಒಂದು ಅಥವಾ ಮೊದಲನೆಯ ಒಂದು ಜನ್ಮವಾಗಿತ್ತು. [1]

"ವಸಿಷ್ಠ" ಶಬ್ದದ ಮೂಲಾರ್ಥವು "ವಸುಗಳಲ್ಲಿ ಅಥವಾ ಪ್ರಕಾಶಗಳಲ್ಲಿ ಶ್ರೇಷ್ಠನಾದವನು" ಎಂದಿದೆ. ವಿದ್ಯುತ್ತು ಪ್ರಕಾಶಗಳಲ್ಲಿ ಮಿಗಿಲಾದುದಾಗಿದೆ. ಆದುದರಿಂದ ಹಿಂದೆ ಉದಹರಿಸಿದ ಋಚೆಯಲ್ಲಿ "ವಸಿಷ್ಠ" ಎಂಬ ಶಬ್ದವು "ವಿದ್ಯುತ್ತು" ಮತ್ತು "ಅದರಿಂದ ಹುಟ್ಟಿದ "ಅಗ್ನಿ" ಎಂಬ ಅರ್ಥಗಳಲ್ಲಿ ಪ್ರಯೋಗಿಸಲ್ಪಟ್ಟಿದೆ. ಇಲ್ಲಿ ಅಗ್ನಿಯನ್ನು "ವಸು" ಎಂದು ಕರೆದ ಉಲ್ಲೇಖಗಳು ಋಗ್ವೇದದಲ್ಲಿವೆಯೆಂಬುದನ್ನು ತಿಳಿದಿರಬೇಕು. ಹಿಂದೆ ವಿವರಿಸಿದಂತೆ ಅಗ್ನಿಯು ಆಕಾಶದಿಂದ ಎರಗುವ ಸಿಡಿಲಿನಿಂದ ಹುಟ್ಟುತ್ತಾನೆಂದು ತಿಳಿದ ತರುವಾಯದಿಂದ ಪ್ರಾಚೀನ ಕಾಲದ ಆರ್ಯಜನರು ಅಗ್ನಿಯು ಆಕಾಶದಲ್ಲಿನ ಅಥವಾ ದಿವ್ಯ ಜಲಗಳಲ್ಲಿರುತ್ತಾನೆಂದೂ, ದಿವ್ಯ ಜಲಗಳಿಂದಲೇ ಅವನು ಹುಟ್ಟುತ್ತಾನೆಂದೂ ತಿಳಿದು ಅಗ್ನಿಯನ್ನು "ಅಪಾಂನಪಾತ್" ಅಂದರೆ "ಜಲಗಳ ಪುತ್ರ" ಎಂದು ಕರೆಯತೊಡಗಿದರು. ಆ ಕಾಲದಲ್ಲಿ ಅವರು ಅಗ್ನಿಯ ಸಂಬಂಧದಲ್ಲಿ ಮಾಡಿದ ಕಲ್ಪನೆಗಳಲ್ಲಿ ಕೆಲವು ಮುಂದಿನಂತಿವೆ.

ತಮೋಷಧೀರ್ದಧಿರೇಗರ್ಭಮೃತ್ವಿಯಂ
ತಮಾಪೋ ಅಗ್ನಿಂ ಜನಯಂತ ಮಾತರಃ ।
ತಮಿತ್ಸಮಾನಂ ವನಿನಶ್ಚ ವೀರುಧೋ
ಅಂತರ್ವತೀಶ್ಚ ಸುವತೇಚ ವಿಶ್ವ ಹಾ ॥ ಋ ೧೦-೯೧-೬ ॥

---

[1] ಅರಣಿಗಳಿಂದ ಕಡೆಯಲ್ಪಟ್ಟು ಹುಟ್ಟುವುದು ಅಗ್ನಿಯ ಎರಡನೆಯ ಜನ್ಮವಾಗಿರುತ್ತದೆ ಹಾಗೆ ಅಗ್ನಿಯು ಎರಡು ಪ್ರಕಾರವಾಗಿ ಹುಟ್ಟಿದುದರಿಂದ ಋಗ್ವೇದದಲ್ಲಿ ಅಗ್ನಿಯನು "ದ್ವಿಜನ್ಮಾ" ಎಂದು ಕರೆದಿದೆ. ॥ ಋ. ೧–೬೦–೧ ಮತ್ತು ೧–೧೪೦ ೨॥

ಅರ್ಥ– ಓಷಧಿಗಳು ಯೋಗ್ಯ ಋತುವಿನಲ್ಲಿ ಹುಟ್ಟುವ ಆ ಅಗ್ನಿಯನ್ನು ಗರ್ಭರೂಪದಿಂದ ತಮ್ಮ ಒಡಲಲ್ಲಿ ಧರಿಸಿರುತ್ತವೆ. ದಿವ್ಯ ಜಲರೂಪದ ತಾಯಂದಿರು ಆ ಅಗ್ನಿಯನ್ನು ಪ್ರಸವಿಸುತ್ತವೆ. ಅದೇ ರೀತಿಯಲ್ಲಿ ಕಾಡಿನ ಗಿಡ ಮರಗಳು ಎಲ್ಲ ಕಾಲಗಳಲ್ಲಿ ಅವನನ್ನು ಹೊರಸೂಸುತ್ತವೆ.

ಯಮಾಪೋ ಅದ್ರಯೋ ವನಾ ಗರ್ಭಮೃತಸ್ಯ ಪಿಪ್ರತಿ ।
ಸಹಸಾ ಯೋ ಮಥಿತೋ ಜಾಯತೇ ನೃಭಿಃ
ಪೃಥಿವ್ಯಾ ಅಧಿ ಸಾನವಿ ॥ ಋ ೬-೪೮-೫ ॥

ಅರ್ಥ– ಯಜ್ಞದ ಗರ್ಭವಾಗಿರುವ ಯಾವ ಅಗ್ನಿಯನ್ನು ದಿವ್ಯ ಜಲಗಳು ಬಂಡೆಕಲ್ಲುಗಳು ಮತ್ತು ಮರಗಳು ತಮ್ಮ ಒಡಲೊಳಗೆ ಧರಿಸಿಕೊಂಡು ಪೋಷಿಸುತ್ತವೋ ಆ ಅಗ್ನಿಯು ಭೂಮಿಯ ಉನ್ನತ ಪ್ರದೇಶದಲ್ಲಿ ಮನುಷ್ಯರಿಂದ ಬಹಳ ಬಲಪೂರ್ವಕ ಕಡೆಯಲ್ಪಟ್ಟು ಹುಟ್ಟುತ್ತಾನೆ.

ಅಗ್ನಿಯು ಮೊತ್ತಮೊದಲು ಆಕಾಶದಲ್ಲಿ ಹುಟ್ಟಿದ್ದನೆಂಬ ಉಲ್ಲೇಖವು ಮುಂದಿನ ಋಚೆಯಲ್ಲಿದೆ.

ದಿವಸ್ಪರಿ ಪ್ರಥಮಂ ಜಜ್ಞೇ ಅಗ್ನಿರಸ್ಮದ್
ದ್ವಿತೀಯಂ ಪರಿ ಜಾತವೇದಾಃ ॥
ತೃತೀಯಮಪ್ಸು ನೃಮಣಾ
ಅಜಸ್ರಮಿಂಧಾನ ಏನಂ ಜರತೇ ಸ್ವಾಧೀಃ ॥ ಋ ೧೦–೪೫-೧॥

ಅರ್ಥ–ಅಗ್ನಿಯು ಮೊತ್ತಮೊದಲು ದಿವದಲ್ಲಿ ಹುಟ್ಟಿದನು. ಎರಡನೆಯ ಸರ್ತಿ ನಮ್ಮಿಂದಾಗಿ (= ಅರಣಿಗಳಲ್ಲಿ) ಜಾತವೇದನಾಗಿ ಹುಟ್ಟಿದನು. ಮತ್ತು ಮೂರನೆಯ ಸರ್ತಿ ತನ್ನ ಪುರುಷ ಶಕ್ತಿಯಿಂದ ದಿವ್ಯಜಲಗಳಲ್ಲಿ ಹುಟ್ಟಿದನು. ಜನರು ಅಂಥ ಆ ಅಗ್ನಿಯನ್ನು ನಿರಂತರವಾಗಿ ಸ್ತುತಿಸುತ್ತ ಹೊತ್ತಿಸುತ್ತಾರೆ.

ದೀರ್ಘರಾತ್ರಿಯ ಕತ್ತಲೆಯಿಂದ ಮತ್ತು ಅತಿಶಯವಾದ ಚಳಿಯಿಂದ ಕಷ್ಟಪಡುತ್ತಿದ್ದ ಉತ್ತರ ಧ್ರುವಪ್ರದೇಶವಾಸಿಗಳಾದ ಆರ್ಯಜನರಿಗೆ ಕತ್ತಲೆಯನ್ನು ಕಡಿಮೆ ಮಾಡುವಂಥ ಹಾಗೂ ತನ್ನ ಬಿಸುಪಿನಿಂದ ಚಳಿಯನ್ನು ನಿವಾರಿಸುವಂಥ ಅಗ್ನಿಯು ದೊರೆತುದರಿಂದ ಮಿತಿಮೀರಿದ ಆನಂದವೂ ಹರ್ಷವೂ ಆಗಿದ್ದಿತೆಂಬುದರಲ್ಲಿ ಸಂದೇಹವಿಲ್ಲ. ಅವರು ಅಗ್ನಿಯ ಬೆಳಕಿನಿಂದ ಕತ್ತಲೆಯೂ, ಬಿಸುಪಿನಿಂದ ಚಳಿಯೂ ದೂರವಾಗುತ್ತದೆಂಬುದನ್ನು ಮಾತ್ರವಲ್ಲದೇ ಅಗ್ನಿಯ ಬೇಗೆಗೆ ಆಹಾರ ಪದಾರ್ಥಗಳು ಬೆಂದು ಭುಂಜಿಸಲು ಅನುಕೂಲವೂ ರುಚಿಕರವೂ ಆಗುತ್ತವೆಂಬುದನ್ನೂ ಬೇಯಿಸಿದ ಆಹಾರವನ್ನು ಭುಂಜಿಸಲಾಗಿ ಅದು ಬೇಗನೇ ಅರಗಿ ಶರೀರದ ಚಟುವಟಿಕೆಯು ಹೆಚ್ಚುತ್ತದೆಂಬುದನ್ನೂ ರೋಗರುಜಿನಗಳು ಕಡಿಮೆಯಾಗುತ್ತವೆಂಬುದನ್ನೂ ಅರಿತುಕೊಳ್ಳತೊಡಗಿದ್ದರು. ಹಾಗೆಯೇ ಅಗ್ನಿಯನ್ನು ದೊಡ್ಡದಾಗಿ ಹೊತ್ತಿಸಿದರೆ

ರಾತ್ರಿ ಕಾಲದಲ್ಲಿ ಅವರನ್ನು ಪೀಡಿಸುತಿದ್ದ ಕ್ರಿಮಿಕೀಟಗಳು ಹಿಂಡು ಹಿಂಡಾಗಿ ಅಗ್ನಿಯಲ್ಲಿ ಬಿದ್ದು ಸಾಯುವುದನ್ನೂ, ಹುಲಿ, ಕರಡಿ, ತೋಳ ಮೊದಲಾದ ಹಿಂಸ್ರಮೃಗಗಳು ಅಗ್ನಿಯ ಜ್ವಾಲೆಗೆ ಬೆದರಿ ಪಲಾಯನ ಮಾಡುವುದನ್ನೂ ಕಂಡಿದ್ದರು. ಹಾಗೆ ಅಗ್ನಿಯಿಂದ ತಮಗಾಗುವ ಉಪಕಾರಗಳಿಂದ ಪ್ರಭಾವಿತರಾದ ಅವರು ಅಗ್ನಿಯನ್ನು ತಮ್ಮ ರಕ್ಷಕನೆಂದು ಭಾವಿಸತೊಡಗಿದ್ದರಲ್ಲದೇ ಅವನನ್ನು ಸರ್ವ ಶ್ರೇಷ್ಠ ದೇವನೆಂದು ತಿಳಿದು ಅತ್ಯಂತ ಪ್ರೀತಿಯಿಂದ, ಭಕ್ತಿಯಿಂದ ಮತ್ತು ಶ್ರದ್ಧೆಯಿಂದ ಆರಾಧಿಸತೊಡಗಿದ್ದರು ಅಂದರೆ ಅವರು ಮೊದಲು ಸೂರ್ಯನಿಗೆ ಕೊಡುತಿದ್ದುದಕ್ಕಿಂತ ಹೆಚ್ಚಿನ ಮಹತ್ವವನ್ನು ಅಗ್ನಿಗೆ ಕೊಡತೊಡಗಿದ್ದರು.

ಕಾರಣವೇನೆಂದರೆ ಸೂರ್ಯನು ಅವರಿಂದ ಬಹಳ ದೂರವಿರುತಿದ್ದ ಮತ್ತು ವರ್ಷದಲ್ಲಿ ಐದು ತಿಂಗಳ ಕಾಲ ಸಂಪೂರ್ಣವಾಗಿ ಮರೆಯಾಗಿರುತಿದ್ದ; ಅಗ್ನಿಯಾದರೋ ಸದಾಕಾಲ ಅವರ ಬಳಿಯಲ್ಲಿಯೇ ಇರುತಿದ್ದ. ಅವರಿಗೆ ಬೇಕಾದಷ್ಟು ಕಾವನ್ನು ಕೊಡುತಿದ್ದ, ಚಳಿಯನ್ನು ನಿವಾರಿಸುತಿದ್ದ, ಅಂಧಕಾರದ ಗಾಢತೆಯನ್ನು ಕಡಮೆಮಾಡುತಿದ್ದ. ಹಿಂಸ್ರಮೃಗಗಳನ್ನು ಸನಿಯಕ್ಕೆ ಬರದಂತೆ ಮಾಡುತಿದ್ದ. ತಿನ್ನುವ ಆಹಾರವನ್ನು ಬೇಯಿಸುತಿದ್ದ. ಒಡನಾಡಿಯಂತೆ ಅವರೊಂದಿಗೆ ಬರುತಿದ್ದ ಹಾಗಾಗಿ ಅವರು ಅಗ್ನಿಯನ್ನು ತಮ್ಮ ತಂದೆಯೆಂದು, ತಾಯಿಯೆಂದು, ಬಂಧು-ಭಗಿನಿಯೆಂದು, ಆಪ್ತ ಮಿತ್ರನೆಂದು ಮತ್ತು ಒಡನಾಡಿಯೆಂದು ಭಾವಿಸುತಿದ್ದರು. ಹಾಗೆ ಅವರು ತಮ್ಮ ಭಾವನೆಗಳನ್ನು ವ್ಯಕ್ತಗೊಳಿಸಿದ ಹಲವು ಋಚೆಗಳು ಋಗ್ವೇದದಲ್ಲಿವೆ—

ಸ ನಃ ಪಿತೇವ ಸೂನವೇऽಗ್ನೇ ಸೂಪಾಯನೋ ಭವ ।
ಸಚಸ್ವಾ ನಃ ಸ್ವಸ್ತಯೇ ॥ ಋ. ೧ ೧-೯ ॥

ಅರ್ಥ – ಹೇ ಅಗ್ನಿದೇವನೇ, ಅಂಥ ನೀನು ಒಬ್ಬ ತಂದೆಯಂತೆ ನಮ್ಮನ್ನು ಸಲಿಗೆಯಿಂದ ನಿನ್ನ ಬಳಿಗೆ ಬರಗೊಡುವವನಾಗು. ಮತ್ತು ನಮ್ಮ ಕಲ್ಯಾಣಕ್ಕಾಗಿ ನಮ್ಮ ಜೊತೆಯಲ್ಲಿಯೇ ಇರುವವನಾಗು,

ತ್ವಂ ಜಾಮಿರ್ಜನಾನಾಮಗ್ನೇ ಮಿತ್ರೋ ಅಸಿ ಪ್ರಿಯಃ
ಸಖಾ ಸಖಿಭ್ಯ ಈಡ್ಯಃ ॥ ಋ. ೧-೭೫-೪ ॥

ಅರ್ಥ – ಹೇ ಅಗ್ನಿದೇವನೇ ನೀನು ಜನರ ಬಂಧು-ಭಗಿನಿಯಾಗಿರುತ್ತೀ. ನೆಚ್ಚಿನ ಗೆಳೆಯನಾಗಿರುತ್ತೀ, ಮತ್ತು ಒಡನಾಡಿಗಳಿಂದ ಕೂಡ ಆರಾಧಿಸಲ್ಪಡಲು ಯೋಗ್ಯನಾದ ಒಡೆಯನಾಗಿರುತ್ತೀ.

ತ್ವಾಂ ವರ್ಧಂತಿ ಕ್ಷಿತಯಃ ಪೃಥಿವ್ಯಾಂ
ತ್ವಾ ರಾಯ ಉಭಯಾಸೋ ಜನಾನಾಮ್ ।
ತ್ವಂ ತ್ರಾತಾ ತರಣೇ ಚೇತ್ಯೋ ಭೂಃ
ಪಿತಾ ಮಾತಾ ಸದಮಿನ್ಮಾನುಷಾಣಾಮ್. ॥ ಋ ೬-೧-೫ ॥

ಅರ್ಥ – ಭೂಮಿಯಲ್ಲಿ ಜನರು ನಿನ್ನನ್ನು ಬಹಳ ದೊಡ್ಡವನನ್ನಾಗಿ ಮಾಡುತ್ತಾರೆ. ಮತ್ತು ಅವರ ಎರಡು ಬಗೆಯ ಐಶ್ವರ್ಯಗಳೂ ನಿನ್ನನ್ನು ಬೆಳಿಸುತ್ತವೆ. ಹೇ ಪರಮ ಸಹಾಯಕನೇ, ನೀನು ಸದಾಕಾಲ ಮನುಷ್ಯರ ರಕ್ಷಕನೂ, ತಂದೆಯೂ ತಾಯಿಯೂ ಆಗಿ ಕಾಣಬರುವಂಥವನಾಗು.

ಅಗ್ನಿಂ ಮನ್ಯೇ ಪಿತರಮಗ್ನಿಮಾಪಿಮ್ ।
ಅಗ್ನಿಂ ಭ್ರಾತರಂ ಸದಮಿತ್ಸಖಾಯಮ್ ॥ ಋ. ೧೦–೭–೩ ॥

ಅರ್ಥ – ನಾನು ಸದಾಕಾಲವೂ ಅಗ್ನಿಯನ್ನು ತಂದೆಯನ್ನಾಗಿಯೂ, ಸಹಕಾರಿಯನ್ನಾಗಿಯೂ, ಸೋದರನನ್ನಾಗಿಯೂ, ಒಡನಾಡಿಯನ್ನಾಗಿಯೂ ಭಾವಿಸುವೆನು.

ಮಾತ್ರವಲ್ಲ ಅಗ್ನಿಯು ಉರಿದು ಸುಡುತಿದ್ದುದರಿಂದ ಅವನಲ್ಲಿ ಜೀವಶಕ್ತಿಯಿದೆಯೆಂದು ಕೂಡ ಎಣಿಸಿದ್ದರು.

ಆದಿತ್ ತೇ ವಿಶ್ವೇ ಕ್ರತುಂ ಜುಷಂತ
ಶುಷ್ಕಾದ್ ಯದ್ ದೇವ ಜೀವೋ ಜನಿಷ್ಠಾಃ ।
ಭಜಂತ ವಿಶ್ವೇ ದೇವತ್ವಂ ನಾಮ
ಋತಂ ಸಪಂತೋ ಅಮೃತಮೇವೈಃ ॥ ಋ. ೧–೬೮–೨ ॥

ಅರ್ಥ– ಹೇ ಅಗ್ನಿದೇವನೇ, ನೀನು ಒಣಗಲು ಕಟ್ಟಿಗೆಯೊಳಗಿನಿಂದ ಜೀವಂತ ಶಕ್ತಿಯುಳ್ಳವನಾಗಿ ಹುಟ್ಟಿದ ತರುವಾಯ ಎಲ್ಲರೂ ನಿನ್ನ ಕಾರ್ಯವನ್ನು ಮೆಚ್ಚುತ್ತಾರೆ. ಅಥವಾ ಶಕ್ತಿಯನ್ನು ಉಪಭೋಗಿಸುತ್ತಾರೆ. ಮತ್ತು ಎಲ್ಲರೂ ಒಳ್ಳೆಯ ಮಾರ್ಗಗಳಿಂದ ಅಮೃತವಾದ ಋತವನ್ನು ಅನುಸರಿಸುವಂಥವರಾಗಿ ನಿನ್ನ ದೇವತ್ವವನ್ನು ಪಡೆಯುತ್ತಾರೆ.

ಆ ಪ್ರಕಾರವಾಗಿ ಅವರು ಅಗ್ನಿಗೆ ಜೀವಶಕ್ತಿಯಿದೆಯೆಂದು ತಿಳಿಯುತಿದ್ದುದರಿಂದ, ಅವರು ಅಗ್ನಿಯನ್ನು ಬಹಳವಾಗಿ ಪ್ರೀತಿಸುತಿದ್ದರು. ಮತ್ತು ತಮ್ಮ ಪ್ರೀತಿಯನ್ನು ಅಗ್ನಿಗೆ ತಿಳಿಸುವುದಕ್ಕಾಗಿ ನಾನಾ ರೀತಿಗಳಿಂದ ಪ್ರಯತ್ನಿಸುತಿದ್ದರು. ಆದುದರಿಂದ ಅವರು ಅಗ್ನಿಯನ್ನು ಒಂದು ಕುಂಡದಲ್ಲಿಟ್ಟು ಅವನು ನೊಂದದಂತೆ ಆ ಕುಂಡದಲ್ಲಿ ಕಾಲಕಾಲಕ್ಕೆ ಸಮಿತ್ತುಗಳನ್ನು ಹಾಕಿ ಅಗ್ನಿಯನ್ನು ದೊಡ್ಡದಾಗಿ ಹೊತ್ತಿಸುತಿದ್ದರಲ್ಲದೇ, ತಾವು ಆಹಾರವನ್ನು ಸ್ವೀಕರಿಸುವ ಮೊದಲು ತಮ್ಮ ಆಹಾರದ ಒಂದು ಅಂಶವನ್ನು ಅಗ್ನಿಗೆ ಆಹುತಿಯ ರೂಪದಿಂದ ಅರ್ಪಿಸುತಿದ್ದರು.

ಆರ್ಯಜನರು ಅಗ್ನಿಯನ್ನು ಕಂಡುಕೊಂಡು ಅವನನ್ನು ಉಪಯೋಗಿಸ ತೊಡಗಿದಂದಿನಿಂದ ಅವರ ಕಷ್ಟಗಳು ಮತ್ತು ಸಂಕಟಗಳು ಒಂದೊಂದಾಗಿ ದೂರವಾಗಿದ್ದುವು. ಮತ್ತು ಅವರ ಜೀವನ ಕ್ರಮದಲ್ಲಿ ಮೆಲ್ಲ ಮೆಲ್ಲನೆ ಪರಿವರ್ತನಗಳಾಗ ತೊಡಗಿದ್ದುವು. ಮೊದಲು ಮರಗಳ ಬುಡದಲ್ಲಿ ಮತ್ತು ಗುಡ್ಡಗಳಲ್ಲಿ ಕೊರೆದ

ಗವಿಗಳಲ್ಲಿ ವಾಸಿಸುತ್ತಿದ್ದ ಅವರು ಪರ್ಣಕುಟಿಗಳನ್ನು ನಿರ್ಮಿಸಿ ಅವುಗಳೊಳಗೆ ವಾಸಿಸತೊಡಗಿದ್ದರು. ಮತ್ತು ಕಾಡಿನ ಹೋರಿಗಳನ್ನೂ, ದನಗಳನ್ನೂ ಹಿಡಿದು ಪಳಗಿಸಿ ಸಾಕತೊಡಗಿದ್ದರು. ಅವುಗಳು ಸಮೃದ್ಧವಾಗಿ ದೊಡ್ಡ ದೊಡ್ಡ ಹಿಂಡು ಗಳಾದಾಗ ರಾತ್ರಿಕಾಲದಲ್ಲಿ ಅವುಗಳು ತಪ್ಪಿಸಿ ಹೋಗದಂತೆ ಮತ್ತು ಹಿಂಸ್ರಮೃಗ ಗಳು ಬಂದು ಅವುಗಳನ್ನು ಎತ್ತಿಕೊಂಡು ಹೋಗದಂತೆ ತಡೆಯಲು ತಮ್ಮ ಪರ್ಣ ಕುಟಿಗಳ ಸುತ್ತಲೂ ವಿಶಾಲವಾದ ಸ್ಥಳವನ್ನು ಒಳಗೂಡಿಸಿ ಬಲವಾದ ವೃತಿಗಳನ್ನು ಅಥವಾ ಬೇಲಿಗಳನ್ನು ಕಟ್ಟತೊಡಗಿದ್ದರು, ಆ ವೃತಿಗಳು ಗೋವುಗಳನ್ನು ಹೊರಗೆ ಹೋಗದಂತೆ ತಡೆಯುತ್ತಿದ್ದುದರಿಂದ ಅವರು ಅವುಗಳನ್ನು **"ಗೋತ್ರ"** ಅಂದರೆ "ಗೋವುಗಳ ರಕ್ಷಕ ಅಥವಾ ಗೋವುಗಳ ತಡೆ" ಅನ್ನುತ್ತಿದ್ದರು. ಗೋತ್ರಗಳಿಗೆ ಅವುಗಳೊಳಗೆ ನೆಲಸಿರುವ ಜನರ ಹಿರಿಯನ ಹೆಸರು ಬರುತ್ತಿದ್ದಿತು. ಅಂದರೆ ಗೋತ್ರ ದೊಳಗೆ ನೆಲಸಿರುವ ಜನರ ಹಿರಿಯನ ಹೆಸರು ಅಂಗಿರಸ ಎಂದಿದ್ದರೆ ಅದು ಅಂಗಿರಸನ ಗೋತ್ರ ಎನಿಸಿಕೊಳ್ಳುತ್ತಿತ್ತು. ಮತ್ತು ಅಂಗಿರಸನ ಗೋತ್ರದೊಳಗಿನ ಇತರ ಕಿರಿಯರೆಲ್ಲರೂ ಅಂಗಿರಸ ಎನಿಸಿಕೊಳ್ಳುತ್ತಿದ್ದರು.

ಅವರು ಕುಂಡದಲ್ಲಿ ಅಗ್ನಿಯನ್ನು ಸ್ಥಾಪಿಸಿ ಆ ಸಮಿತ್ತುಗಳನ್ನು ಹಾಕುವ ಮತ್ತು ಆಹಾರದ ಆಹುತಿಗಳನ್ನು ಅರ್ಪಿಸುವ ಕಾರ್ಯವು ಕಾಲಕ್ರಮೇಣ ಯಜ್ಞದ ರೂಪವನ್ನು ತಳೆಯಿತು. ಅಂದರೆ ಅಗ್ನಿಕುಂಡದಲ್ಲಿ ಸಮಿತ್ತುಗಳನ್ನು ಹಾಕಲಿಕ್ಕೂ ಆಹುತಿಗಳನ್ನು ಅರ್ಪಿಸಲಿಕ್ಕೂ ಕಾಲಗಳು ಮತ್ತು ಕ್ರಮಗಳು ನಿರ್ಧರಿಸಲ್ಪಟ್ಟುವು. ಮತ್ತು ಆ ಯಜ್ಞ ಪದ್ಧತಿಯು ಕೂಡ ಮೊತ್ತಮೊದಲು ಅಗ್ನಿಯನ್ನು ಕಂಡುಹಿಡಿದ ಅಂಗಿರಸ ಕುಲದ ಅಥರ್ವನಿಂದಲೇ–ಪ್ರಾರಂಭವಾಯಿತು–

ಯಜ್ಞೈರಥರ್ವಾ ಪ್ರಥಮಃ ಪಥಸ್ತತೇ
ತತಃ ಸೂರ್ಯೋವ್ರತಪಾ ವೇನ ಆ ಜನಿ ॥ ಋ. ೧-೮೩-೫ ॥

ಅರ್ಥ– ಅಥರ್ವನು ಮೊತ್ತಮೊದಲು ಯಜ್ಞಗಳ ಮೂಲಕ ಹಾದಿ ಗಳನ್ನುಹಾಕಿಕೊಟ್ಟನು. ತರುವಾಯ ವ್ರತಗಳ (ಕಟ್ಟಳೆಗಳ) ಪಾಲಕನೂ, ಎಲ್ಲರಿಂದ ಪ್ರೀತಿಸಲ್ಪಡುವಂಥವನೂ ಆಗಿದ್ದ ಸೂರ್ಯನು ಹುಟ್ಟಿದನು. ಹಿಂದಿನ ಋಚೆಯಲ್ಲಿ ಯಜ್ಞಗಳೊಂದಿಗೆ ಸೂರ್ಯನ ಉದಯದ ಸಂಬಂಧವು ಬಂದಿರುವುದರಿಂದ ಆ ಯಜ್ಞಗಳು ಉತ್ತರ ಧ್ರುವ ಪ್ರದೇಶದ ದೀರ್ಘ ರಾತ್ರಿಯಲ್ಲಿ ಜರಗಿಸಲ್ಪಡುತ್ತಿದ್ದು ವೆಂದು ಸಿದ್ಧವಾಗುತ್ತದೆ. ಅಂದರೆ ಆ ಕಾಲದ ಆರ್ಯಜನರು ತಮ್ಮ ಗೋತ್ರಗಳ ಒಳಗೆ ಅಗ್ನಿಕುಂಡಗಳನ್ನು ನಿರ್ಮಿಸಿ, ದೀರ್ಘರಾತ್ರಿಯ ಕಾಲದಲ್ಲಿ ಅಗ್ನಿಕುಂಡಗಳ ಸುತ್ತಲೂ ಕುಳಿತು ಅಗ್ನಿಯ ಗುಣಗಳನ್ನು ಹಾಡಿ ಹೊಗಳುತ್ತಿದ್ದರು. ಮತ್ತು ಮರಳಿ ಸೂರ್ಯೋದಯವು ಯಾವಾಗ ಆಗಬಹುದೆಂಬುದನ್ನು ಕಂಡು ಹಿಡಿಯುವ ಸಲುವಾಗಿ ಆಕಾಶದಲ್ಲಿ ಮಿನುಗುತ್ತ ಭೂಮಿಯನ್ನು ಸುತ್ತಿಬರುವ ಸಾವಿರಾರು ನಕ್ಷತ್ರ ಗಳನ್ನು ನಿರೀಕ್ಷಿಸುತ್ತಿದ್ದರು. ಮತ್ತು ಆ ನಿರೀಕ್ಷಣದ ಫಲವಾಗಿ ತಿಷ್ಯ ಎಂಬ ನಕ್ಷತ್ರವು

ಉತ್ತರ ದಿಕ್ಕಿನಲ್ಲಿ ಕಾಣಬರತೊಡಗಿದೊಡನೆಯೇ ಬೆಳಕು ಹರಿಯುತ್ತದೆಂಬುವನ್ನು ಕಂಡುಹಿಡಿದಿದ್ದರು.

ಆ ಪ್ರಕಾರವಾಗಿ ಅವರು ರಾತ್ರಿ ಕಾಲದಲ್ಲಿ ನಕ್ಷತ್ರಗಳನ್ನು ನಿರೀಕ್ಷಿಸುತ್ತಲೇ ಇದ್ದುದರಿಂದ ದಕ್ಷಿಣಾಯನದ ಕಾಲದಲ್ಲಿ ಮುಳುಗಿದ ಸೂರ್ಯನು ದೀರ್ಘರಾತ್ರಿಯು ಮುಗಿದ ತರುವಾಯ ಯಾವ ಕಾಲದಲ್ಲಿ ಮತ್ತು ಯಾವ ನಕ್ಷತ್ರದ ಬಳಿಯಲ್ಲಿ ಮರಳಿ ಮೂಡುತ್ತಾನೆಂಬುವನ್ನು ಕಂಡು ಹಿಡಿದಿದ್ದರು. ಹಾಗೆ ಅವರು ಅಲ್ಲಿ ಮೊತ್ತ ಮೊದಲು ಸರಿಯಾಗಿ ಗುರುತಿಸಿದ ನಕ್ಷತ್ರವನ್ನು ಅವರು ತಿಷ್ಯ ಎಂದು ಹೆಸರಿಸಿದ್ದರು ಅದರ ತರುವಾಯ ಅವರು ಸಾಧಾರಣ ನಾಲ್ವತ್ತೊಂದು ನಕ್ಷತ್ರಪುಂಜಗಳನ್ನು ಗುರುತಿಸಿದ್ದರು . ಮತ್ತು ತಿಷ್ಯ ಸಹಿತವಾಗಿ. ಒಂದರಿಂದ ಮತ್ತೊಂದು ಸಾಧಾರಣ ಸಮಾನ ದೂರದಲ್ಲಿರುವ ಮೂವತ್ತಮೂರು ನಕ್ಷತ್ರಗಳನ್ನು ಚಂದ್ರನ ಗತಿಯನ್ನು ನಿರ್ಧರಿಸುವ ಸಲುವಾಗಿ ಜೋಪಾಡಿಸಿದ್ದರು. ಅವರು ತಮ್ಮ ವರ್ಷವನ್ನು ಮೂರು ಚಾತುರ್ಮಾಸ್ಯಗಳಲ್ಲಿ ವಿಭಜಿಸಿದ್ದರು. ಆದುದರಿಂದ ಅವರು ನಕ್ಷತ್ರ ಪುಂಜಗಳನ್ನು ಹನ್ನೊಂದರ ಮೂರು ಗುಂಪುಗಳನ್ನಾಗಿ ಮಾಡಿದ್ದರು. ಅವರು ಸಾಮಾನ್ಯವಾಗಿ ಎಲ್ಲ ನಕ್ಷತ್ರಗಳನ್ನು "ದೇವತೆಗಳೆನ್ನುತ್ತಿದ್ದರಾದರೂ ಆಲ್ಲಿ ಪ್ರಕಾಶಿಸುತ್ತಿದ್ದ ಎಂಟು ತಿಂಗಳ ಕಾಲ ಪೂರ್ವ ಕ್ಷಿತಿಜದಲ್ಲಿ ಕಾಣಿಸುತ್ತಿದ್ದ ಇಪ್ಪತ್ತೆರಡು ನಕ್ಷತ್ರಗಳನ್ನು ದೇವಾಃ ಎಂತಲೂ ಪ್ರಕಾಶವಿಲ್ಲದ ನಾಲ್ಕು ತಿಂಗಳ ಕಾಲದಲ್ಲಿ ಮತ್ತು ರಾತ್ರಿ ಕಾಲದಲ್ಲಿ ಕಾಣಿಸುತಿದ್ದ ಹನ್ನೊಂದು ನಕ್ಷತ್ರಗಳನ್ನು ಅಸುರರೆಂತಲೂ ಕರೆಯುತಿದ್ದರು. ಯಜುರ್ವೇದದ ಬ್ರಾಹ್ಮಣಗಳಲ್ಲಿ ದೇವತೆಗಳು, ಮತ್ತು ಅಸುರರು-ಉಭಯರೂ ಪ್ರಜಾಪತಿಯ ಮಕ್ಕಳೆಂದು [1] ಹೇಳಿದೆಯಾದರೆ ಯಜುರ್ವೇದದ ತೈತ್ತಿರೀಯ ಸಂಹಿತೆಯಲ್ಲಿ ಮೂವತ್ತಮೂರು ನಕ್ಷತ್ರಗಳನ್ನು ಪ್ರಜಾಪತಿಯ ಹೆಣ್ಣುಮಕ್ಕಳೆಂತಲೂ, ಅವನು ಅವರನ್ನು ಸೋಮರಾಜನಿಗೆ ಕೊಟ್ಟನೆಂತಲೂ ಹೇಳಿದೆ. ಅದರ ವಿವರಗಳು ಮುಂದೆ ಭಾರತೀಯ ಜ್ಯೋತಿಷ ಎಂಬ ಅಧ್ಯಾಯದಲ್ಲಿ ಬರುವುವು. ಹಾಗೆಯೇ ಐತರೇಯ ಬ್ರಾಹ್ಮಣದಲ್ಲಿ **"ಅಹರ್ ವೈ ದೇವಾ ಆಶ್ರಯಂತ ರಾತ್ರೀಮಸುರಾಸ್ತೇ ಸಮಾವದ್ವೀರ್ಯಾ ಏವಾಸನ್ ॥೪-೧-೫॥** ಅಂದರೆ ದೇವತೆಗಳು ಹಗಲನ್ನೂ ಅಸುರರು ಇರುಳನ್ನೂ ಆಶ್ರಯಿಸಿದರು. ಅವರು ಸಮಾನ ಬಲವೀರ್ಯವುಳ್ಳವರಾಗಿದ್ದರು ಎಂದು ಹೇಳಿದೆ. ತರುವಾಯದ ಜನರು ಸೂರ್ಯೋದಯದ ಮೊದಲು ತಿಷ್ಯ ನಕ್ಷತ್ರವು ಕಾಣಿಸುತಿದ್ದ ಸ್ಥಳದಲ್ಲಿ ಕಾಣಿಸತೊಡಗಿದ ಒಂದು ನಕ್ಷತ್ರ ಪುಂಜವನ್ನು **"ಪುನರ್ವಸೂ"** ಅಂದರೆ 'ಮರಳಿ ಬೆಳಕು ತರುವ ಎರಡು ನಕ್ಷತ್ರಗಳು' ಎಂದು ಕರೆದಿದ್ದರು. ಮುಂದೆ ಅವರ ಸಂತತಿಯವರು ಜ್ಯೋತಿಷದಲ್ಲಿ ಹಚ್ಚಿನ ಪ್ರಗತಿಯನ್ನು ಸಾಧಿಸಿ ಕ್ರಾಂತಿಪಥವನ್ನು ಸಮಾನ ವಿಸ್ತಾರದ ಇಪ್ಪತ್ತೇಳು ವಿಭಾಗಗಳನ್ನಾಗಿ ಮಾಡಿದರು. ಮತ್ತು ಆ ವಿಭಾಗಗಳಲ್ಲಿ

---

1 ದೇವಾಶ್ಚಾಸುರಾಶ್ಚ-ಉಭಯೇ ಪ್ರಾಜಾಪತ್ಯಾಃ ।

ಬರುವ ನಕ್ಷತ್ರಪುಂಜಗಳಿಗೆ ನಿಶ್ಚಿತವಾದ ಹೆಸರುಗಳನ್ನು ಕೊಟ್ಟು ಅವುಗಳಿಗೆ ಬೇರೆ ಬೇರೆ ದೇವತೆಗಳನ್ನು ನಿರ್ಧರಿಸಿದರು, ಮತ್ತು ಆ ದೇವತೆಗಳ ಗುಂಪಿಗೆ ವಿಶ್ವೇ ದೇವಾಃ ಎಂಬ ಹೆಸರನ್ನು ಕೊಟ್ಟರು. ಆ ಕಾಲದಲ್ಲಿ ಅವರು ಪುನರ್ವಸೂ ನಕ್ಷತ್ರಕ್ಕೆ ಅದಿತಿಯನ್ನು ದೇವತೆಯಾಗಿ ನಿರ್ಧರಿಸಿದುದರಿಂದ ತರುವಾಯದ ಕಾಲದಲ್ಲಿ ಅದಿತಿ ಶಬ್ದವು ಪುನರ್ವಸೂ ನಕ್ಷತ್ರವಾಚಕವಾಗಿ ಪರಿಣಮಿಸಿತು. ಉತ್ತರ ದಿಕ್ಕಿನಲ್ಲಿ ಪುನರ್ವಸೂ ಪುಂಜವು ಕಾಣಿಸುತ್ತಿದ್ದಾಗ ಪೂರ್ವದಿಕ್ಕಿನಲ್ಲಿ ಅಶ್ವಿನೀ ಪುಂಜವು ಕಾಣಿಸುತ್ತಿತ್ತು. ಮುಂದೆ ಉತ್ತರ ದಿಕ್ಕಿನಲ್ಲಿ ಪುನರ್ವಸೂ ನಕ್ಷತ್ರದ ಸ್ಥಾನದಲ್ಲಿ ಆರ್ದ್ರಾ ನಕ್ಷತ್ರವು ಕಾಣಿಸತೊಡಗಿದಾಗ ಪೂರ್ವದಿಕ್ಕಿನಲ್ಲಿ ರೇವತೀ ಪುಂಜವು ಕಾಣಿಸುತಿತ್ತು.

ಆರ್ಯ ಜನರು ಚಂದ್ರನ ಗತಿಯ ನಿರ್ಧರಣಕ್ಕೆ ಇಪ್ಪತ್ತೇಳು ನಾಕ್ಷತ್ರಿಕ ವಿಭಾಗಗಳನ್ನು ಸ್ವೀಕರಿಸಿ ನಕ್ಷತ್ರಗಳಿಗೆ ವಿಶಿಷ್ಟ ಹೆಸರುಗಳನ್ನೂ, ದೇವತೆಗಳನ್ನೂ ನಿರ್ಧರಿಸುವ ಹಂತಕ್ಕೆ ತಲುಪುವಾಗ ಅವರ ಹಳೆಯ ಜೀವನ ಕ್ರಮದಲ್ಲಿ, ನಡೆ ನುಡಿ ಗಳಲ್ಲಿ ಆಚಾರ-ವ್ಯವಹಾರಗಳಲ್ಲಿ ಅವರ ವೇಷ ಭೂಷೆಗಳಲ್ಲಿ ತುಂಬಾ ಸುಧಾರಣೆ ಯಾಗಿತ್ತು. ಅವರ ಪ್ರತಿಯೊಂದು ಕಾರ್ಯದಲ್ಲಿ ಒಂದು ಬಗೆಯ ಶಿಸ್ತು ಮತ್ತು ನಿಯಮಿತತನ ಬಂದಿತ್ತು. ಮೊದಲು ಯಜ್ಞಗಳಲ್ಲಿ ಹೆಚ್ಚಿನ ಬಿಗಿತವಿರಲಿಲ್ಲ. ಈಗಲಾದರೋ ಯಜ್ಞಕುಂಡದ ಇಲ್ಲವೇ ಚಿತಿಯ ನಿರ್ಮಾಣದಿಂದ ಮೊದಲು ಗೊಂಡು, ಸಮಿತ್ತುಗಳನ್ನು ಇಡಲಿಕ್ಕೂ, ಅರಣಿಗಳನ್ನಿಟ್ಟು ಅಗ್ನಿಮಂಥನ ಮಾಡ ಲಿಕ್ಕೂ, ಹುಟ್ಟಿದ ಅಗ್ನಿಯನ್ನು ಆಧಾನ ಮಾಡಲಿಕ್ಕೂ, ಅಗ್ನಿಯನ್ನು ಪ್ರಜ್ವಲಿತ ನನ್ನಾಗಿ ಮಾಡಲಿಕ್ಕೂ ಆಹುತಿಗಳನ್ನು ಅರ್ಪಿಸಲಿಕ್ಕೂ ಬೇರೆ ಬೇರೆ ಕಾಲಗಳೂ, ವಿಧಿಗಳೂ, ಮಂತ್ರಗಳೂ ನಿರ್ಧರಿಸಲ್ಪಟ್ಟಿದ್ದುವು. ಯಜ್ಞಗಳು ಗೃಹ್ಯ ಮತ್ತು ಶ್ರೌತ ಎಂಬುದಾಗಿಯೂ, ನಿತ್ಯ ನೈಮಿತ್ತಿಕ ಮತ್ತು ಕಾಮ್ಯ ಎಂಬುದಾಗಿಯೂ, ಪಾಕ ಯಜ್ಞ, ಹವಿರ್ಯಜ್ಞ, ಸೋಮಯಜ್ಞ ಎಂಬುದಾಗಿಯೂ ವಿಭಜಿಸಲ್ಪಟ್ಟಿದ್ದುವು. ಮತ್ತು ಅವರ ಮೆಚ್ಚಿನ ದೇವ ದೇವಿಯುವರಾದ, ಅಗ್ನಿ, ಇಂದ್ರ, ರುದ್ರ, ಇಳಾ, ಸರಸ್ವತಿ, ಭಾರತಿ ಮೊದಲಾದವರ ಪ್ರತೀಕಗಳೂ, ಪ್ರತಿಮಾರೂಪಗಳೂ ನಿರ್ಮಿ ಸಲ್ಪಟ್ಟಿದ್ದುವು. ಪ್ರತಿಯೊಬ್ಬ ಗೃಹಸ್ಥನು ಎಲ್ಲ ಯಜ್ಞಗಳನ್ನು ಮಾಡಬೇಕಾಗಿರ ಲಿಲ್ಲವಾದರೂ ನಿತ್ಯಕರ್ಮಗಳಾದ ಅಗ್ನಿಹೋತ್ರ, ದರ್ಶಪೂರ್ಣಮಾಸೇಷ್ಟಿ, ಪಾರ್ವಣ ಶ್ರಾದ್ಧ, ಶ್ರವಣಾಕರ್ಮ ಮತ್ತು ಅಷ್ಟಕಾ ಹೋಮಗಳನ್ನು ಮಾಡಲೇಬೇಕಾಗಿತ್ತು.

ಯಜ್ಞಕುಂಡದೊಳಗಿನ ಅಗ್ನಿಯಿಂದ ಹೊರಡುತಿದ್ದ ಹೊಗೆಯು ಆಕಾಶ ಕ್ಕೇರಿ ಅಂತರಿಕ್ಷದ ವಾಯುವಿನಲ್ಲಿ ಲೀನವಾಗುವುದನ್ನು ಕಂಡ ಅವರು ತಾವು ತಿನ್ನುವ ಆಹಾರವನ್ನು ಯಜ್ಞಾಗ್ನಿಯಲ್ಲಿ ಹಾಕಿ ಸುಟ್ಟರೆ ಅದು ಹೊಗೆಯ ರೂಪ ದಿಂದ ನಕ್ಷತ್ರಲೋಕಕ್ಕೆ ತಲುಪಿ ನಕ್ಷತ್ರದೇವತೆಗಳಿಗೂ, ಸತ್ತುನಕ್ಷತ್ರಗಳಾಗಿ ಮಾರ್ಪಟ್ಟ ಋಷಿಗಳಿಗೂ, ಪಿತೃಲೋಕದಲ್ಲಿರುವ ಪಿತೃಗಳಿಗೂ ದೊರೆಯುವುದೆಂದು

ನಂಬತೊಡಗಿದ್ದರು. ಹಾಗೆಯೇ ಯಜ್ಞಗಳನ್ನು ಜರುಗಿಸಿದವರು ಸತ್ತಾಗ ಅವರ ಶವವನ್ನು, ಅವರು ಸ್ಥಾಪಿಸಿದ ಅಗ್ನಿಗಳಿಂದ ಸುಟ್ಟರೆ–ಅವುಗಳ ಹೊಗೆಯೊಂದಿಗೆ ಅವರು ಸ್ವರ್ಗಲೋಕಕ್ಕೆ ತಲುಪುತ್ತಾರೆಂತಲೂ, ಅವರು ಅಲ್ಲಿ ಮರಳಿ ಶರೀರ ಪಡೆಯುತ್ತಾರೆಂತಲೂ ಭಾವಿಸತೊಡಗಿದ್ದರು. ಮತ್ತು ಅತ್ಯಂತ ಪ್ರಾಚೀನ ಕಾಲದಲ್ಲಿ **"ಋಕ್ಷಾಃ"** ಅಂದರೆ "ಕರಡಿಗಳು" ಎಂಬುದಾಗಿ ಕರೆಯಲ್ಪಡುತಿದ್ದ ಏಳು ನಕ್ಷತ್ರ ಗಳನ್ನು ತಮ್ಮ ಪೂರ್ವಜರಾದ ಏಳ್ವರು ಋಷಿಗಳೆಂದು ಕರೆಯತೊಡಗಿದ್ದರು. ಕಾಲಕ್ರಮೇಣ ಯಜ್ಞಗಳ ಮೂಲಕ ದೇವತೆಗಳನ್ನೂ, ಶ್ರಾದ್ಧಗಳ ಮೂಲಕ ಪಿತೃಗಳನ್ನೂ ತೃಪ್ತಿಪಡಿಸಿದವರು ಇಹದಲ್ಲಿ ತಮ್ಮ ಕಾಮನೆಗಳನ್ನು ಪಡೆಯುವರೆಂಬ ಮತ್ತು ಸತ್ತ ತರುವಾಯ ಸ್ವರ್ಗವನ್ನು ಸೇರಿ ಅಲ್ಲಿ ಮರಳಿ ಶರೀರವನ್ನು ಪಡೆದು ತಮ್ಮ ಪಿತೃಗಳೊಂದಿಗೆ ಕೂಡಿ ಪರಲೋಕದ ಸುಖವನ್ನು ಭೋಗಿಸುವರೆಂಬ ನಂಬಿಕೆಯು ದೃಢಮೂಲವಾಯಿತು. ಮತ್ತು ಪ್ರಾಚೀನ ಕಾಲದಿಂದ ಸಾಗಿ ಬಂದಿದ್ದ ಕೆಲವು ಪಾರಿವಾರಿಕ ಆಚರಣೆಗಳು ಮತ್ತು ಕಟ್ಟಳೆಗಳು ಸ್ಥಿರರೂಪವನ್ನು ಪಡೆದುವು.

ಮೊದಲು ಪತಿಪತ್ನಿಯರಿಬ್ಬರೇ ತಮ್ಮ ಗಾರ್ಹಪತ್ಯಕುಂಡದಲ್ಲಿ ಸಮಿತ್ತು ಗಳನ್ನು ಹಾಕಿ ಹೊತ್ತಿಸಿದ ಅಗ್ನಿಯಲ್ಲಿ ತಮ್ಮ ಆಹಾರದ ಆಹುತಿಗಳನ್ನು ಅರ್ಪಿಸಿ ಅಗ್ನಿಯನ್ನು ಆರಾಧಿಸುತಿದ್ದಂಥ ಅಗ್ನಿಕಾರ್ಯವು ಮುಂದೆ "ಅಗ್ನಿಹೋತ್ರ" ಎಂಬ ಹೆಸರಿನಿಂದ ಆಂಗಿರಸ ಗೋತ್ರದ "ಅಧ್ವರ್ಯು" ಎಂಬ ಒಬ್ಬ ಋತ್ವಿಜನ ನೆರವಿನಿಂದ ಜರುಗಿಸಬೇಕಾದಂಥ ಚಿಕ್ಕ ಯಜ್ಞದ ರೂಪವನ್ನು ತಳೆಯಿತು. ತರುವಾಯ ಅಗ್ನಿಯಲ್ಲಿ ಆಹುತಿಯಾಗಿ ಅರ್ಪಿಸಿದ ಆಹಾರವು ಹೊಗೆಯೊಂದಿಗೆ ಸೇರಿ ದ್ಯುಲೋಕಕ್ಕೆ ತಲುಪಿ ಅಲ್ಲಿರುವ ದೇವತೆಗಳಿಗೂ, ಪಿತೃಲೋಕದಲ್ಲಿರುವ ಪಿತೃಗಳಿಗೂ ದೊರೆಯ ಬಹುದೆಂಬ ನಂಬಿಕೆಯಿಂದ "ದರ್ಶಪೂರ್ಣಮಾಸೇಷ್ಟಿ" ಅಂದರೆ ಅಮಾವಾಸ್ಯೆ ಮತ್ತು ಹುಣ್ಣಿಮೆ ಎಂಬ ಪರ್ವದಿನಗಳಲ್ಲಿ ಜರುಗಿಸುವ ಯಜ್ಞ ಎಂಬ ಹೆಸರಿನಿಂದ ೧. ಅಧ್ವರ್ಯು; ೨. ವಸಿಷ್ಠ ಗೋತ್ರದ ಬ್ರಹ್ಮಾ; ೩. ವಿಶ್ವಾಮಿತ್ರಗೋತ್ರದ ಹೋತಾ ಮತ್ತು ೪. ಭೃಗು ಇಲ್ಲವೇ ಆಂಗಿರಸ ಗೋತ್ರದ ಅಗ್ನೀಧ್ ಎಂಬ ನಾಲ್ವರು ಋತ್ವಿಜರ ನೆರವಿನಿಂದ ಜರುಗಿಸಬೇಕಾದಂಥ ಸ್ವಲ್ಪ ದೊಡ್ಡ ಯಜ್ಞ ವಾಯಿತು. ಅದರ ತರುವಾಯ ಹಿಂದಿನ ನಾಲ್ವರು ಋತ್ವಿಜರೊಂದಿಗೆ ಐದನೆಯವ ನಾಗಿ "ಭೃಗು ಇಲ್ಲವೇ ಆಂಗಿರಸ ಗೋತ್ರದ "ಪ್ರತಿಪ್ರಸ್ಥಾತಾ" ಎಂಬ ಋತ್ವಿಜನ ನೆರವಿನಿಂದ ಜರುಗಿಸಬೇಕಾದಂಥ "ಚಾತುರ್ಮಾಸ್ಯೇಷ್ಟಿಯ ರೂಪವನ್ನು ತಳೆಯಿತು. ಆ ತರುವಾಯ "ಪಶುಬಂಧ" ಎಂಬ ಯಜ್ಞಗಳು ಪ್ರಚಲಿತವಾಗಿ ಅವುಗಳ ನಿರ್ವ ಹಣಕ್ಕೆ ಹೋತೃವಿನ ಸಹಾಯಕನಾಗಿ ಭೃಗು ಇಲ್ಲವೇ ಆಂಗೀರಸ ಗೋತ್ರದ "ಮೈತ್ರಾ ವರುಣ" ಎಂಬ ಆರನೆಯ ಋತ್ವಿಜನ ಆವಶ್ಯಕತೆಯುಂಟಾಯಿತು. ಮುಂದೆ "ಸೋಮಯಜ್ಞಗಳು" ಪ್ರಚಲಿತವಾಗಿ ಅವುಗಳ ನಿರ್ವಹಣಕ್ಕೆ ಹಿಂದೆ ಹೆಸರಿಸಿದ

ಆರ್ಯರು ಋತ್ವಿಜರೊಂದಿಗೆ ಅಧ್ವರ್ಯುವಿನ ಸಹಾಯಕರಾಗಿ ಅಂಗಿರಸ ಗೋತ್ರದ "ನೇಷ್ಟೃ" (೭) ಮತ್ತು ಉನ್ನೇತೃ (೮) ಎಂಬ ಇಬ್ಬರ, ಬ್ರಹ್ಮನ ಸಹಾಯಕರಾಗಿ (೯) ಬ್ರಾಹ್ಮಣಾಚ್ಛಂಸಿ ಮತ್ತು (೧೦) ಪೋತೃ ಎಂಬ ಇಬ್ಬರ; ಹೋತೃವಿನ ಸಹಾಯಕರಾಗಿ (೧೧) ಅಚ್ಛಾವಾಕ ಮತ್ತು (೧೨) "ಗ್ರಾವಸ್ತುತ್" ಎಂಬ ಇಬ್ಬರ ಹಾಗೂ ಸಾಮಗಳನ್ನು ಹಾಡಲು ಅಯಾಸ್ಯಗೋತ್ರದ (೧೩) ಉದ್ಗಾತೃ ಎಂಬವನ ಮತ್ತು ಅವನ ಸಹಾಯಕರಾಗಿ (೧೪) ಪ್ರಸ್ತೋತೃ (೧೫) ಪ್ರತಿಹರ್ತೃ ಮತ್ತು (೧೬) ಸುಬ್ರಹ್ಮಣ್ಯ ಎಂಬವನ– ಆ ಪ್ರಕಾರವಾಗಿ ಹದಿನಾರು ಮಂದಿ ಋತ್ವಿಜರ ಆವಶ್ಯಕತೆಯುಂಟಾಯಿತು. ಅಂದರೆ ಋಗ್ವೇದದ ಹಲವು ಸೂಕ್ತಗಳು ರಚಿಸಲ್ಪಡುವ ಮೊದಲೇ ಆರ್ಯಜನರಲ್ಲಿ ಹಿಂದೆ ಹೆಸರಿಸಿದಂಥ ಹದಿನಾರು ಮಂದಿ ಋತ್ವಿಜರ ಸಹಾಯವಿಲ್ಲದೇ ಜರುಗಿಸಲು ಸಾಧ್ಯವಿಲ್ಲದಂಥ ಅತ್ಯಂತ ಕ್ಲಿಷ್ಟವೂ, ವಿಶಾಲವೂ, ಆಗಿದ್ದ ವ್ಯವಸ್ಥಿತವಾದ ಯಜ್ಞಸಂಸ್ಥೆಯು ಪ್ರಸ್ಥಾಪಿತವಾಗಿದ್ದಿತೆಂದು ಋಗ್ವೇದದ ಮಂತ್ರಗಳಿಂದ ಸ್ಪಷ್ಟವಾಗಿ ಸಿದ್ಧವಾಗುತ್ತದೆ. ಮುಂದೆ ಕಾಲ ಸಂದಂತೆ ಸೋಮ ಯಜ್ಞಗಳು ಇನ್ನೂ ವಿಶಾಲವಾಗಿ ಬೆಳೆದು ರಾಜಸೂಯ, ಅಶ್ವಮೇಧ ಮೊದಲಾದ ವುಗಳ ನಿರ್ವಹಣಕ್ಕೆ ಹಿಂದೆ ಹೆಸರಿಸಿದ ಹದಿನಾರು ಮಂದಿ ಋತ್ವಿಜರು ಮಾತ್ರವಲ್ಲದೇ ಯಜ್ಞಕಾರ್ಯಗಳ ನಿರೀಕ್ಷೆಗಾಗಿ ಅಥವಾ ಉಸ್ತುವಾರಿಗಾಗಿ ಕೌಷೀತಕ ಗೋತ್ರದ (೧೭) "ಸದಸ್ಯ" ಎಂಬವನ ಮತ್ತು ಅವನ ಸಹಾಯಕರಾಗಿ (೧೮) ಅಭಿಗರ (೧೯) ಧ್ರುವಗೋಪ ಮತ್ತು (೨೦) ಸಂಶ್ರಾವ ಎಂಬ ಮೂವರ ಹಾಗೂ ಸೋಮ ರಸದ ಚಮಸಗಳ ವ್ಯವಸ್ಥೆಗಾಗಿ ಹನ್ನೊಂದು ಮಂದಿ ಚಮಸಾಧ್ವರ್ಯುಗಳ ಆವಶ್ಯಕತೆಯುಂಟಾಯಿತು. ಆದರೆ ಆ ಮೂವತ್ತೊಂದು ಮಂದಿ ಋತ್ವಿಜರಲ್ಲಿ ೧. ಹೋತೃ, ೨. ಅಧ್ವರ್ಯು, ೩. ಬ್ರಹ್ಮ, ಮತ್ತು ೪. ಉದ್ಗಾತೃ ಎಂಬ ನಾಲ್ವರು ಮಾತ್ರ ಮುಖ್ಯರಾಗಿದ್ದರು. ಇತರ ಎಲ್ಲ ಋತ್ವಿಜರು ಆ ನಾಲ್ವರ ಸಹಾಯಕರಾಗಿ ಅವರ ನಿರ್ದೇಶದಂತೆ ಕಾರ್ಯಮಾಡುವವರಾಗಿದ್ದರು.

ಹೋತೃವು ಯಜ್ಞಕಾಲದಲ್ಲಿ ಋಗ್ವೇದದ ಮಂತ್ರಗಳಿಂದ ದೇವತೆಗಳನ್ನು ಆಹ್ವಾನಿಸಿ ಅವರಿಗೆ ಆಹುತಿಗಳನ್ನು ಕೊಡಿಸುವನು. ಅವನು ಸಾಮಾನ್ಯವಾಗಿ ಆಯಾ ದೇವತೆಗೆ ಸಂಬಂಧಪಟ್ಟ ಎರಡು ಋಚೆಗಳನ್ನು ಪಠಿಸುವನು. ಆ ಋಚೆ ಗಳಿಗೆ ಪುರೋನುವಾಕ್ಯಾಃ ಮತ್ತು ಯಾಜ್ಯಾಃ ಎಂಬ ಹೆಸರುಗಳಿವೆ. ಪುರೋನು ವಾಕ್ಯವೆಂಬ ಮಂತ್ರದಿಂದ ಅವನು ದೇವತೆಗಳನ್ನು ಆಹ್ವಾನಿಸುವನು ಮತ್ತು ಯಾಜ್ಯ ಮಂತ್ರಗಳಿಂದ ಆ ದೇವತೆಗಳಿಗೆ ಹವಿಸ್ಸುಗಳ ಆಹುತಿಗಳನ್ನು ಕೊಡಿಸುವನು. ಅಂದರೆ ಹೋತೃವು ಕೇವಲ ಮಂತ್ರಪಠನವನ್ನು ಮಾಡುವನೇ ಹೊರತು ತಾನೇ ಅಗ್ನಿಯ ಬಳಿಗೆ ಹೋಗಿ ಹೋಮ ಮಾಡುವುದಿಲ್ಲ. ಹೋಮ ಮುಂತಾದ ಕಾರ್ಯಗಳನ್ನು ಅಧ್ವರ್ಯು ಎಂಬ ಋತ್ವಿಜನು ಮಾಡುವನು. ಅಂದರೆ ಯಜ್ಞಚಿತಿಗಳನ್ನು ಸಿದ್ಧ ಗೊಳಿಸುವುದರಿಂದ ಮೊದಲುಗೊಂಡು ಜಲಪ್ರೋಕ್ಷಣ, ಅಗ್ನ್ಯಾಧಾನ, ಅಗ್ನಿಪ್ರದೀ

ಪನ, ಹವನ ಮೊದಲಾದ ಸಕಲ ಕಾರ್ಯಗಳನ್ನು ಅಧ್ವರ್ಯುವೇ ಮಾಡುವನು. ಅವನು ಯಜ್ಞಗಳಿಗೆ ಸಂಬಂಧಪಟ್ಟ ಯಜುರ್ವೇದದ ಅಧ್ಯಯನ ಮಾಡಿದವನಾಗಿದ್ದು ಯಜ್ಞಕ್ರಿಯೆಗಳನ್ನು ಸಂಪೂರ್ಣವಾಗಿ ಬಲ್ಲವನಾಗಿರಬೇಕು. ಉದ್ಗಾತೃ ಎಂಬ ಋತ್ವಿಜನು ಸೋಮಯಜ್ಞಗಳಲ್ಲಿ ಸಾಮವೇದದ ಮಂತ್ರಗಳನ್ನು ಸಾಮಗಾನಕ್ಕನುಸಾರವಾಗಿ ಹಾಡುವನು. ಅವನು ಸಾಮಗಾನಕ್ಕೆ ಸಂಬಂಧಪಟ್ಟ ಶಿಕ್ಷಾ ಶಾಸ್ತ್ರಗಳನ್ನು ಓದಿದವನೂ ಸಾಮಗಾನ ನಿಪುಣನೂ ಆಗಿರಬೇಕು. ಬ್ರಹ್ಮ ಎಂಬ ಋತ್ವಿಜನು ಯಜ್ಞಕರ್ಮಗಳೆಲ್ಲ ವಿಧಿವತ್ತಾಗಿ ನಡೆಯುತ್ತಿರುವವೇ ಎಂಬುದನ್ನು ನೋಡಿಕೊಳ್ಳುವನು. ಮತ್ತು ತಪ್ಪುಗಳಾದಲ್ಲಿ ತೋರಿಸಿಕೊಟ್ಟು ಸರಿಮಾಡಿಸುವನು. ಅವನಿಗೆ ಎಲ್ಲ ಕೆಲಸಗಳ ಅನುಭವವಿರಬೇಕು. ಮತ್ತು ಅವನು ನಾಲ್ಕು ವೇದಗಳನ್ನೂ ಅಧ್ಯಯನ ಮಾಡಿದವನಾಗಿರಬೇಕು.

ಯಜ್ಞಗಳನ್ನು ಜರಗಿಸಲಿರುವ ಯಜಮಾನನು, ಯಜ್ಞದ ಸಂಕಲ್ಪವನ್ನು ಮಾಡಿದ ತರುವಾಯ ಯಜ್ಞದ ನಿರ್ವಹಣಕ್ಕೆ ಆವಶ್ಯಕರಾದ ಋತ್ವಿಜರನ್ನು ಆರಿಸುವ ಕಾರ್ಯವು "ಋತ್ವಿಜರ ವರಣ" ಎಂದು ಹೆಸರಾಗಿದೆ. ಅವನು ತನ್ನ ಗೋತ್ರದಿಂದ ಭಿನ್ನ ಗೋತ್ರಗಳ ಜನರಲ್ಲಿ ವೇದವಿದರೂ, ಯಜಕರ್ಮ ನಿಪುಣರೂ, ವಿನಯಶೀಲರೂ, ಸದಾಚಾರಿಗಳೂ, ರೋಗರಹಿತರೂ, ಅಂಗ ಊನವಿಲ್ಲದವರೂ, ಮೈಯಲ್ಲಿ ಕಲೆಗಳಿಲ್ಲದವರೂ, ಸುಂದರ ರೂಪದವರೂ ಆದವರನ್ನು ಮಾತ್ರ ವರಿಸಬೇಕು. ಮತ್ತು ಅವನು ತಾನು ವರಿಸಲಿರುವ ಋತ್ವಿಜನ ಮುಂದೆ ಕೈಮುಗಿದು ನಿಂತು ಇಂಥ ಗೋತ್ರದ, ಇಂಥ ಹೆಸರಿನ ನಾನು, ಇಂಥ ಗೋತ್ರದ ಇಂಥ ಹೆಸರಿನ ನಿನ್ನನ್ನು ಅಧ್ವರ್ಯುವನ್ನಾಗಿ, ಇಲ್ಲವೇ ಹೋತೃವನ್ನಾಗಿ ಇಲ್ಲವೇ ಬ್ರಹ್ಮನನ್ನಾಗಿ ವರಿಸುತ್ತೇನೆ. ನೀನು ನನ್ನ ಯಜ್ಞವನ್ನು ಸುಸೂತ್ರವಾಗಿ ನೆರವೇರಿಸಿಕೊಡಬೇಕು ಎಂಬುದಾಗಿ ಪ್ರಾರ್ಥಿಸಿದ ತರುವಾಯ ಅವನ ಪಾದಗಳನ್ನು ಸ್ಪರ್ಶಿಸಬೇಕು. ಆ ತರುವಾಯ ಅವನ ಕೈಯನ್ನು ಹಿಡಿದು ಕರತಂದು ಅವನಿಗಾಗಿ ನಿರ್ಧರಿಸಿದ ಸ್ಥಾನದಲ್ಲಿ ಕುಳ್ಳಿರಿಸಬೇಕು. ಹಾಗೆ ತನ್ನಲ್ಲಿ ಜರಗುವ ಯಜ್ಞಕಾರ್ಯಗಳಿಗಾಗಿ ಯಜಮಾನನು ತನ್ನಿಂದ ಭಿನ್ನಗೋತ್ರಗಳ ಜನರು ಅಥವಾ ಅವರ ಗೋತ್ರಗಳು ಯಜಮಾನನ ಗೋತ್ರದ ಪ್ರವರಗಳೆನಿಸಿಕೊಳ್ಳುತ್ತಿದ್ದುವು. ಮತ್ತು ಆ ಗೋತ್ರ ಹಾಗೂ ಪ್ರವರಗಳ ಸಂಬಂಧವು ವಂಶಪಾರಂಪರ್ಯವಾಗಿ ಮುಂದೆ ಸಾಗುತ್ತಿದ್ದಿತು. ಮತ್ತು ಪ್ರತಿಯೊಂದು ಗೋತ್ರದವರು ತಮ್ಮ ಪ್ರವರಗಳ ಹೆಸರುಗಳು ಮರೆತುಹೋಗದಂತೆ ತಮ್ಮ ಗೋತ್ರಗಳನ್ನು ಉಚ್ಚರಿಸುವ ಸಂದರ್ಭದಲ್ಲಿ ಪ್ರವರಗಳನ್ನು ಕೂಡ ಉಚ್ಚರಿಸಬೇಕಾಗುತಿತ್ತು.

ಋಗ್ವೇದದ ಮಂತ್ರಗಳ ಪ್ರಕಾರ ಯಜಮಾನನೂ, ಋತ್ವಿಜರೂ ಅಗ್ನಿಯೇ ಆಗಿದ್ದಾನೆ. ಆದುದರಿಂದ ಯಜ್ಞಕಾಲದಲ್ಲಿ ಯಜಮಾನನು ಪ್ರಜಾಪತಿ

ಯಾಗಿರುತ್ತಾನೆ ಮತ್ತು ಋತ್ವಿಜರು ಅಗ್ನಿಯ ಪ್ರತಿನಿಧಿಗಳಾಗಿರುತ್ತಾರೆ. ಉದಾ:- ಋಗ್ವೇದದ ೧-೧-೧ರಲ್ಲಿ ಅಗ್ನಿಯನ್ನು "ಪುರೋಹಿತ, ಋತ್ವಿಜ ಮತ್ತು ಹೋತೃ ಎಂದಿದೆ. ೧-೯೪-೬ರಲ್ಲಿ ಅಧ್ವರ್ಯು, ಪ್ರಶಾಸ್ತೃ ಅಂದರೆ ಮೈತ್ರಾವರುಣ, ಮತ್ತು ಪೋತೃ ಎಂದಿದೆ. ೨-೧-೨ ರಲ್ಲಿ ನೇಷ್ಟೃ ಗೃಹಪತಿ, ಮತ್ತು ಬ್ರಹ್ಮಾ ಎಂದಿದೆ. ೯-೬೬-೨೦ರಲ್ಲಿ ಅಗ್ನಿಯನ್ನು ಋಷಿ ಎಂದಿದೆ.

ಆರ್ಯಜನರು ತಮ್ಮ ಯಜ್ಞಗಳಲ್ಲಿ ಉಪಯೋಗಿಸುವ ಉಪಕರಣ ಗಳನ್ನು, ಪಾತ್ರಗಳನ್ನು ಮತ್ತು ಯೂಪಸ್ತಂಭಗಳನ್ನು ನಿರ್ಮಿಸುವ ಸಲುವಾಗಿ, ಅರಣಿಗಳಿಗಾಗಿ, ಮತ್ತು ಸಮಿತ್ತುಗಳಿಗಾಗಿ ಆರಿಸಿದ ೧. **ಅಶ್ವತ್ಥ, ೨. ಶಮಿ, ೩. ಉದುಂಬರ, ೪. ಪಲಾಶ, ೫. ಬಿಲ್ವ, ೬, ಖದಿರ, ೭. ವಿಕಂಕತ, ೮. ನ್ಯಗ್ರೋಧ, ೯. ಕಾಶ್ಮರಿ, ೧೦. ವರಣ, ೧೧. ಪೀತದಾರು, ೧೨. ರಾಜ್ಜುದಾಲ** ಎಂಬ ಹದಿ ನೆರಡು ವೃಕ್ಷಗಳನ್ನು "ಯಜ್ಞಿಯವೃಕ್ಷಗಳೆಂದು ಹೆಸರಿಸಿದ್ದರು. ಅಗ್ನಿಯನ್ನು ಉತ್ಪಾದಿಸುವ ಅರಣಿಗಳು ಅಶ್ವತ್ಥದವುಗಳಾಗಿರುತಿದ್ದುವಾದುದರಿಂದ ಅಶ್ವತ್ಥವು ಇತರ ವೃಕ್ಷಗಳಿಗಿಂತ ಶ್ರೇಷ್ಠವೆಂತಲೂ ದೇವತೆಗಳ ಸದನವೆಂತಲೂ ಭಾವಿಸ ಲ್ಪಡುತಿತ್ತು.

ಯಜ್ಞಗಳು ಪ್ರಾರಂಭವಾಗುವ ಮೊದಲು ಯಜ್ಞಶಾಲೆಯಲ್ಲಿ ಯೂಪ ಎಂಬ ಸ್ತಂಭವು ನೆಡಲ್ಪಡುತಿದ್ದಿತು. ಮತ್ತು ಯಜ್ಞಪಶುಗಳು ಅದಕ್ಕೆ ಕಟ್ಟಲ್ಪಡು ತಿದ್ದುವು. ಸಾಮಾನ್ಯ ಯಜ್ಞಗಳಲ್ಲಿ ಯೂಪವು ಶಮಿವೃಕ್ಷದ್ದಾಗಿರುತಿತ್ತು. ಆದರೆ ನೂರಾರು ಪಶುಗಳ ಆಲಂಭನವಿರುತಿದ್ದ ಅಶ್ವಮೇಧದಲ್ಲಿ ಬೇರೆ ಬೇರೆ ವೃಕ್ಷ ಗಳಿಂದ ನಿರ್ಮಿಸಿದ ಇಪ್ಪತ್ತೊಂದು ಯೂಪಗಳಿರುತಿದ್ದುವು. ರಾಜ್ಜುದಾಲವೃಕ್ಷದ ಯೂಪವು ಆಹವನೀಯ ಕುಂಡದ ಸರಿ ಎದುರುಗಡೆಯಲ್ಲಿರುತಿದ್ದಿತು. ಮತ್ತು ಅದರ ಎರಡು ಪಾರ್ಶ್ವಗಳಲ್ಲಿ ಪೀತದಾರುವಿನ ಎರಡು ಯೂಪಗಳೂ ಬಿಲ್ವದ ಆರು ಯೂಪ ಗಳೂ ಖದಿರದ ಆರು ಯೂಪಗಳೂ ಪಲಾಶದ ಆರು ಯೂಪಗಳೂ ಇರುತಿದ್ದುವು. ಮತ್ತು ಎಲ್ಲ ಯೂಪಗಳು ಇಪ್ಪತ್ತೊಂದು ಮೊಳ ಉದ್ದವಿರುತಿದ್ದುವು.[1] ಇತರ ಯಜ್ಞಗಳ ಯೂಪವು ಹದಿನೇಳು ಮೊಳ ಉದ್ದವಿರುತಿತ್ತು. ಯೂಪದ ಅಡಿಭಾಗವು ಚತುಷ್ಕೋಣ ಅಲ್ಲದಿದ್ದರೆ ಅಷ್ಟಕೋಣವಾಗಿರುತ್ತಿತ್ತು. ಮತ್ತು ಮೇಲ್ಭಾಗವು ಅಥವಾ ತಲೆಯು ಬೋಳಾಗಿರುತಿತ್ತು. ಹಾಗೂ ತಲೆಯಲ್ಲಿ ಟೋಪಿಯಂತೆ ಗೋದಿಯ ಹಿಟ್ಟನ್ನು ಮೆತ್ತಲಾಗುತಿತ್ತು.[2] ಅದನ್ನು ಚಷಾಲವೆನ್ನು ತ್ತಿದ್ದರು.[3]

---

[1] ಏಕವಿಂಶತಿರ್ಯೂಪಾಃ ಃ ಸರ್ವ ಏಕವಿಂಶತ್ಯರತ್ನಯೋ ರಾಜ್ಜುದಾಲೋಽಗ್ನಿಷ್ಠೋ ಭವತಿ ಪೈತದಾರವಾಭಿತಃ ಷಡ್ ಬೈಲ್ವಾಸ್ತ್ರಯ ಇತ್ಥಾತ್, ತ್ರಯ ಇತ್ಥಾತ್ । ಷಟ್ ಖಾದಿರೆ ಸ್ತ್ರಯ ಇತ್ರಾತ್ ತ್ರಯ ಇತ್ಥಾತ್ ಷಟ್ ಪಾಲಾಶಾಸ್ತ್ರಯ ಇತ್ಥಾತ್ ತ್ರಯ ಇತ್ಥಾತ್ ॥ ಶ. ಬ್ರಾ. ೧೩-೪-೪-೫ ॥

[2] ಅಷ್ಟಾಶ್ರಿರ್ಯೂಪೋ ಭವತಿ ॥ ಶ. ಬ್ರಾ. ೫-೨-೧-೫ ॥ ಸಪ್ತದ ಶಾರತ್ನಿರ್ಯೂಪೋ ಭವತಿ ॥ ತೂ ಪರಶ್ಚತುರಶ್ರಿರ್ಭವತಿ ॥ ತೈ. ಬ್ರಾ. ೧-೩-೭-೨ ॥

[3] ಗೌಧೂಮಶ್ಚಷಾಲಂ ಭವತಿ ॥ ಶ ಬ್ರಾ. ೫-೨-೧-೬ ॥

ಯಜ್ಞದೀಕ್ಷಿತನಾದ ಯಜಮಾನನು ಉದುಂಬರದ ದಂಡವನ್ನು ಧರಿಸುತ್ತಿದ್ದ. ಅಗ್ನಿಹೋತ್ರದ ಹಾಲನ್ನು ಕರೆಯುವಾಗ ದನದ ಕರುವನ್ನು ಅಟ್ಟಲು ಎಲೆಗಳ ಸಹಿತವಾದ ಪಲಾಶದ ಟೊಂಗೆಯು ಉಪಯೋಗಿಸಲ್ಪಡುತಿತ್ತು. ಅಗ್ನಿಕುಂಡದೊಳಗಿನ ಕೆಂಡಗಳನ್ನು ಕೆಣಕಲು ಪಲಾಶದ ಅಲ್ಲದಿದ್ದರೆ ವರಣದ  ಉಪವೇಶ ಅಥವಾ ಚುಚ್ಚಿಯು ಉಪಯೋಗಿಸಲ್ಪಡುತಿತ್ತು. ಯಜ್ಞದ ಅಗ್ನಿಯಲ್ಲಿ ಪಶುವಿನ ವಪೆಯನ್ನು ಸುಟ್ಟು ತೆಗೆಯಲು ಕಾಶ್ಮರಿಯ  ವಪಾಶ್ರಪಣಿಯು ಉಪಯೋಗಿಸಲ್ಪಡುತಿತ್ತು.

ಯಜ್ಞಕಾರ್ಯಗಳಲ್ಲಿ ಉಪಯೋಗಿಸಲ್ಪಡುತಿದ್ದ ಕೆಲವು ವಸ್ತುಗಳು ಉಪಕರಣಗಳು ಮತ್ತು ಪಾತ್ರಗಳು "ಯಜ್ಞಾಯುಧ"ಗಳೆನಿಸಿಕೊಳ್ಳುತಿದ್ದುವು, ಮತ್ತು ಅವುಗಳು ಯಜ್ಞಕುಂಡದ ಬಳಿಯಲ್ಲಿ ಹಾಸಿದ ದರ್ಭೆಗಳ ಮೇಲೆ ಮುಂದೆ ಹೇಳಲಾಗುವಂತೆ ಒಂದೊಂದು ಜೊತೆಯಾಗಿ ಇರಿಸಲ್ಪಡುತಿದ್ದುವು. ೧. "ಸ್ಫ್ಯ" ಎಂಬ ಮರದ ಖಡ್ಗ ಮತ್ತು ಕಪಾಲಗಳು, ಅಥವಾ ಒಡೆದ ಮಣ್ಣಿನ ಮಡಕೆಯ ತುಂಡುಗಳು. ೨. ಅಗ್ನಿಹೋತ್ರ ಹವಣೀ ಅಂದರೆ ಅಗ್ನಿಹೋತ್ರದಲ್ಲಿ ಹಾಲನ್ನು ಅರ್ಪಿಸುವ ಸವುಟು ಮತ್ತು ಶೂರ್ಪ ಅಂದರೆ ಮೊರ. ೩. ಕೃಷ್ಣಾಜಿನ ಮತ್ತು ಶಮ್ಯಾ, ಅಂದರೆ ಮರದ ಚಿಕ್ಕ ಗೂಟ. ೪. ಉಲೂಖಲ ಅಂದರೆ ಒರಳು, ಮತ್ತು ಮುಸಲ ಅಂದರೆ ಒನಕೆ. ೫. ದೃಷದ ಅಂದರೆ ಧಾನ್ಯವನ್ನು ಅರೆಯುವ ಅಡಿಗಲ್ಲು ಮತ್ತು ಉಪಲ ಅಂದರೆ ಮೇಲ್ಗಲ್ಲು. ೬. ಜುಹೂ ಅಂದರೆ ತುಪ್ಪ ಅಲ್ಲದಿದ್ದರೆ ಆಜ್ಯವನ್ನು ಎರೆಯುವ ಸವುಟು ಮತ್ತು ಉಪಭೃತ್ ಅಂದರೆ ದೊಡ್ಡ ಸವುಟು. ೭. ಸ್ರುವ ಅಂದರೆ ಚೌಕಾಕಾರವಾಗಿದ್ದು ಒಂದು ಬದಿಯಲ್ಲಿ ಚಿಕ್ಕ ಮೂತಿಯಿರುವ ಸವುಟು ಮತ್ತು ಧ್ರುವಾ ಅಂದರೆ ಸೋಮರಸವನ್ನು ಹಾಕಿಡುವ ಪಾತ್ರೆ. ೮. ಪ್ರಾಶಿತ್ರಹರಣ ಅಂದರೆ ಹವಿಸ್ಸಿನ ಪಾತ್ರೆ ಮತ್ತು ಇಡಾ ಅಂದರೆ ಮಡಕೆ. ೯. ವೇಕ್ಷಣ ಅಂದರೆ ಚರುವನ್ನು ಕದಡುವ ಕೋಲು ಮತ್ತು ಪಿಷ್ಟೋದ್ವಪನಿ ಅಂದರೆ ಹಿಟ್ಟಿನ ಪಾತ್ರೆ. ೧೦. ಪ್ರಣೀತಾ ಹರಣ ಅಂದರೆ ಜಲಪಾತ್ರ ಮತ್ತು ಆಜ್ಯದ ಪಾತ್ರೆ. ೧೧. ವೇದ ಅಂದರೆ ದರ್ಭೆ ಹುಲ್ಲಿನ ಪೊರಕೆ ಮತ್ತು ದಾರುಪಾತ್ರೀ ಅಂದರೆ ಮರಿಗೆ. ೧೨. ಯೋಕ್ತ್ರ ಅಂದರೆ (ನೊಗದ)ಹಗ್ಗ ಮತ್ತು ದರ್ಭೆ ಹುಲ್ಲಿನ ತುಂಡುಗಳು. ೧೩. ಧೃಷ್ಟಿ ಅಂದರೆ ಕೆಂಡವನ್ನೆತ್ತುವ ಇಕ್ಕಳ. ಮತ್ತು ಇಧ್ಮಪ್ರವ್ರಶ್ಚನ ಅಂದರೆ ಸೌದೆ ಒಡೆಯುವ ಚಿಕ್ಕ ಕೊಡಲಿ. ೧೪. ಅನ್ವಾಹಾರ್ಯಸ್ಥಾಲೀ ಅಂದರೆ ಅನ್ನ ಬೇಯಿಸುವ ಚರಿಗೆ ಮತ್ತು ಮದಂತೀ ಅಂದರೆ ನೀರಿನ ಮಡಕೆ.

ಮೊದಲು ಯಜ್ಞಕಾರ್ಯಗಳಲ್ಲಿ ಉಪಯೋಗಿಸಲ್ಪಡುತಿದ್ದ ಎಲ್ಲ ಪಾತ್ರೆ-ಪಡಗಗಳು ಮಣ್ಣಿನವುಗಳಾಗಿದ್ದುವು, ಮುಂದೆ ಮರಕೆತ್ತುವ ಉಪಕರಣಗಳು

ನಿರ್ಮಿಸಲ್ಪಟ್ಟ ತರುವಾಯ ಹೆಚ್ಚಿನ ಯಜ್ಞಾಯುಧಗಳು ಮತ್ತು ಪಾತ್ರಗಳು ಮರದಿಂದ ನಿರ್ಮಿಸಲ್ಪಡತೊಡಗಿದುವು.[1]

ಯಜ್ಞಾಯುಧಗಳಲ್ಲಿ ಮತ್ತು ಯಜ್ಞಗಳಲ್ಲಿ ಕಪಾಲಗಳು ಅತ್ಯಂತ ಮುಖ್ಯವಾಗಿದ್ದುವು. ಏಕೆಂದರೆ ದೇವತೆಗಳಿಗೆ ಪುರೋಡಾಶವನ್ನು ಕಪಾಲಗಳಲ್ಲಿಯೇ ಅರ್ಪಿಸಬೇಕಾಗಿತ್ತು. ಮತ್ತು ಅದು ಪ್ರಾಚೀನ ಕಾಲದಿಂದ ಸಾಗಿ ಬಂದಿದ್ದ ಕಟ್ಟಳೆಯಾಗಿತ್ತು. ಕೆಲವು ಯಜ್ಞಗಳಲ್ಲಿ ಒಂದು ಸರ್ತಿಗೆ ನೂರಾರು ಕಪಾಲಗಳು ಬೇಕಾಗುತ್ತಿದ್ದುವು. ಯಜ್ಞವು ಮುಗಿದ ತರುವಾಯ ಆ ಕಪಾಲಗಳನ್ನು ಹೊರಗೊಯ್ದು ಒಂದು ಗೊತ್ತುಪಡಿಸಿದ ಸ್ಥಳದಲ್ಲಿ ಒಗೆಯುತ್ತಿದ್ದರು. ಹಾಗಾಗಿ ಅಲ್ಲಿ ಕಪಾಲಗಳ ದೊಡ್ಡ ರಾಶಿಯಾಗುತ್ತಿತ್ತು.

ಯಜ್ಞಕಾರ್ಯಗಳಿಗೆ ಹಿಂದೆ ಹೇಳಿದ ವಸ್ತುಗಳು ಮಾತ್ರವಲ್ಲದೇ ಋತ್ವಿಜರ ಊಟಕ್ಕೆ ಬೇಕಾಗುವ ಅಕ್ಕಿಯನ್ನು ತಯಾರಿಸಲು ಭತ್ತ; ಆ ಭತ್ತವನ್ನು ಅಳೆದು ಹಾಕಲು ಕೆಂಪು ಬಣ್ಣದ ಎತ್ತಿನ ಚರ್ಮ, ಎರಡು ಅರಣಿಗಳು, ಮುಂಜಹುಲ್ಲು, ತಾವರೆಯ ಎಲೆ, ರಥದ ಚಕ್ರ, ಕುದುರೆ, ಸಮಿತ್ತು, ಬೆಳ್ಳಿಯ ಮತ್ತು ಚಿನ್ನದ ಮೂರು ಮೂರು ತುಂಡುಗಳು, ತುಪ್ಪ (=ಆಜ್ಯ) ಮರದ ಕೆತ್ತೆಗಳು ಮತ್ತು ದರ್ಭೆಹುಲ್ಲು ಬೇಕಾಗುತ್ತಿದ್ದುವು.

ಯಾವನೊಬ್ಬ ಆರ್ಯಮನುಷ್ಯನ ಗೃಹ್ಯ ಮತ್ತು ಶ್ರೌತಕರ್ಮಗಳು ಸಾಮಾನ್ಯವಾಗಿ ಅವನು ಗುರುಕುಲದಿಂದ ವಿದ್ಯಾಭ್ಯಾಸವನ್ನು ಮುಗಿಸಿ ಹಿಂದೆ ಬಂದ ತರುವಾಯ ವಧುವನ್ನು ವರಿಸಿ ಪಾಣಿಗ್ರಹಣ ಮಾಡುವ ಕಾಲದಲ್ಲಿ ಸ್ಥಾಪಿಸಿದ ಅಗ್ನಿಯನ್ನು ಮದುವೆ ಮುಗಿಸಿ ಪತ್ನಿಯನ್ನು ತನ್ನ ಮನೆಗೆ ಕರೆದುಕೊಂಡು ಬರುವಾಗ ಒಂದು ಪಾತ್ರೆಯಲ್ಲಿಟ್ಟು ಪತ್ನಿಯೊಂದಿಗೆನೇ ತಂದು ಮನೆಯಲ್ಲಿನ ಗಾರ್ಹಪತ್ಯ ಕುಂಡದಲ್ಲಿ ವಿಧಿಪೂರ್ವಕ ಆಧಾನಮಾಡಿದ ಕಾಲದಿಂದ ಪ್ರಾರಂಭವಾಗುತ್ತಿದ್ದುವು, ಮತ್ತು ಹಾಗೆ ಆಧಾನ ಮಾಡಿದ ಅಗ್ನಿಯನ್ನು ಅವನಾಗಲೀ, ಅವನ ಪತ್ನಿಯಾಗಲೀ, ಮಗನಾಗಲೀ, ಮಗಳಾಗಲೀ, ಶಿಷ್ಯನಾಗಲೀ ಪ್ರತಿದಿನ ತಪ್ಪದೇ ಸಂಜೆ ಸೂರ್ಯಾಸ್ತದ ತರುವಾಯ ಮತ್ತು ಬೆಳಗಾತ ಸೂರ್ಯೋದಯದ ಮೊದಲು ಅಗ್ನಿಕುಂಡದಲ್ಲಿ ಸಮಿತ್ತುಗಳನ್ನು ಹಾಕಿ ಹೊತ್ತಿಸಿ ಆರಾಧಿಸಬೇಕಾಗಿತ್ತು — **"ಪಾಣಿಗ್ರಹಣಾದಿ ಗೃಹ್ಯಂ ಚರೇತ್। ಸ್ವಯಂ, ಪತ್ನ್ಯಪಿ ವಾ ಪುತ್ರಃ, ಕುಮಾರ್ಯಂತೇ ವಾಸೀ ವಾ॥ ಆಶ್ವ; ಗೃಹ್ಯ. ೧-೯-೧ ॥** ಆ ಅಗ್ನಿಯು ನಿತ್ಯವೂ ಉರಿಯುತ್ತಲೇ ಇರಬೇಕಾ

---

[1] ಕಿಂ ಸ್ವಿತದಗ್ರ ಆಸೀದಿತ್ಯಾಹುಃ । ಯತ್ಪಾತ್ರಾಣೀತಿ । ಇಯಂವಾ ಏತದಗ್ರ ಆಸೀತ್ । ಮೃನ್ಮಯಾನಿ ವಾ ಏತಾಸ್ಯಸನ್ । ತೈರ್ದೇವಾ ನ ವ್ಯಾವೃತಮಗಚ್ಛನ್ । ತ ಏತಾನಿ ದಾರುಮಯಾಣಿ ಪಾತ್ರಾಣ್ಯಪಶ್ಯನ್ । ತಾನ್ಯಕುರ್ವತ । ತೈರ್ವೈ ದೇವಾ ವ್ಯಾವೃತಮಗಚ್ಛನ್ । ಯದ್ದಾರುಮಯಾಣಿ ಪಾತ್ರಾಣಿ ಭವಂತಿ । ವ್ಯಾವೃತಮೇವ ತೈರ್ಯಜಮಾನೋಗಚ್ಛತಿ ॥ ತೈ. ಬ್ರಾ. ೧-೪-೧-೩ ॥

ಗಿದ್ದಿತು – **"ನಿತ್ಯಾನುಗೃಹೀತಸ್ಯಾತ್ ॥ ೧–೯–೨ ॥** ಅದು ನಂದಿ ಹೋದರೆ ಪತ್ನಿಯು ಉಪವಾಸವಿರಬೇಕಾಗುತ್ತಿದ್ದಿತು – **"ಯದಿ ತೂಪಶಾಮ್ಯೇತ್ ಪತ್ನ್ಯುಪವಸೇತ್ ॥ ೧–೯–೩ ॥**

ಗೃಹಪತಿಯು ತನ್ನ ನಿತ್ಯ ಕರ್ಮಗಳಿಗೆ ಉಪಯೋಗಿಸುವ ಅಗ್ನಿಯ ಹೆಸರು "ಗಾರ್ಹಪತ್ಯಃ" ಎಂದಿದ್ದು ಅದರ ಚಿತಿಯು  ಮಂಡಲಾಕೃತಿಯಲ್ಲಿ ಇರುತ್ತಿತ್ತು. ಶ್ರೌತಕರ್ಮಗಳಲ್ಲಿ ದೇವತೆಗಳಿಗೆ ಆಹುತಿಗಳನ್ನರ್ಪಿಸುವ ಅಗ್ನಿಯ ಹೆಸರು "ಆಹವನೀಯ" ಎಂದಿದ್ದು ಅದರ ಚಿತಿಯು  ಚೌಕಾಕೃತಿಯಲ್ಲಿರುತಿದ್ದಿತು. ಯಜ್ಞಕಾಲದಲ್ಲಿ ಋತ್ವಿಜರಿಗೆ ಬಡಿಸುವ ಇಲ್ಲವೇ ಪಿತೃಗಳಿಗೆ ಅರ್ಪಿಸುವ ಪಿಂಡಗಳ ಅನ್ನವನ್ನು ಬೇಯಿಸುವ ಅಗ್ನಿಯ ಹೆಸರು "ಅನ್ವಾಹಾರ್ಯ ಪಚನ" ಇಲ್ಲವೇ "ದಕ್ಷಿಣ" ಎಂದಿದ್ದು ಅದರ ಚಿತಿಯು  ಅರ್ಧಚಂದ್ರಾಕೃತಿಯಲ್ಲಿರುತಿದ್ದಿತು. ಅತ್ಯಂತ ಪ್ರಾಚೀನ ಕಾಲದಲ್ಲಿ ಅಂದರೆ ಯಜ್ಞಗಳು ಪ್ರಾರಂಭವಾದ ಕಾಲದಲ್ಲಿ ಮಂಡಲಾಕೃತಿಯ ಅಲ್ಲದಿದ್ದರೆ ಚೌಕಾಕೃತಿಯ ಚಿತಿಯಲ್ಲಿಯೇ ಗೃಹ್ಯ ಮತ್ತು ಶ್ರೌತ ಎಂಬ ಎರಡು ಬಗೆಯ ಕರ್ಮಗಳೂ ಜರುಗುತಿದ್ದುವು. ಮುಂದೆ ವ್ಯವಸ್ಥಿತವಾದ ಯಜ್ಞಸಂಸ್ಥೆಯು ಸ್ಥಾಪಿತವಾದ ತರುವಾಯ ಬೇರೆ ಬೇರೆ ಕರ್ಮಗಳಿಗೆ ಬೇರೆ ಬೇರೆ ಆಕೃತಿಯ ಚಿತಿಗಳಿರಬೇಕೆಂದು ನಿರ್ಧರಿಸಲಾಯಿತು. ಮತ್ತು ದರ್ಶಪೂರ್ಣ ಮಾಸೇಷ್ಟಿಗಳ ಚಿತಿಯು ಆಯತಾಕಾರದಲ್ಲಿರಬೇಕೆಂದು ನಿರ್ಧರಿಸಲಾಯಿತು, ಮನೆಯ ಇತರ ಜನರ ಆರಾಧನೆಗಾಗಿ ಮತ್ತು ಬೇರೆ ಕಾರ್ಯಗಳಿಗಾಗಿ ಉಪಯೋಗಿಸಲ್ಪಡುತಿದ್ದ ಅಗ್ನಿಯ ಹೆಸರು ಆವಸಥ್ಯಃ ಎಂದಿರುತಿತ್ತು, ಮತ್ತು ಯಜ್ಞ ಸಮಾರಂಭಕ್ಕಾಗಿ ಬರುವ ಜನರಿಗಾಗಿ ಸ್ಥಾಪಿಸಲಾಗುತಿದ್ದ ಅಗ್ನಿಯ ಹೆಸರು "ಸಭ್ಯಃ" ಎಂದಿರುತಿತ್ತು, ಮತ್ತು ಆ ಎರಡೂ ಅಗ್ನಿಗಳ ಚಿತಿಗಳು ಮಂಡಲಾಕೃತಿಯಲ್ಲಿರುತಿದ್ದುವು.

ಯಜ್ಞಚಿತಿಗಳಲಿ ಅಗ್ನಿಯನ್ನು ಆಧಾನ ಮಾಡುವ ಮೊದಲು ಅವುಗಳ ತಳದಲ್ಲಿ ೧. "ಊಷ" ಅಂದರೆ "ಚವುಗು ಮಣ್ಣನ್ನು" ೨. "ಸಿಕತ" ಅಂದರೆ ಮಳಲನ್ನು, ೩. "ಆಖೋತ್ಕರ" ಅಂದರೆ ಹೆಗ್ಗಣವು ಬಿಲ ತೋಡಿ ಹೊರಗೆ ಹಾಕಿದ ಮಣ್ಣನ್ನು ೪. "ವಲ್ಮೀಕವಪಾ" ಅಂದರೆ ಗೆದ್ದಲು ಹುತ್ತದ ಮಣ್ಣನ್ನು ೫. ಸೂದ ಅಂದರೆ ನೀರು ಬತ್ತಿದ ಕೊಳದ ಗೋಡು ಮಣ್ಣನ್ನು ೬. ವರಾಹವಿಹತ ಅಂದರೆ ಕಾಡುಹಂದಿಯು ತನ್ನ ಕೋರೆಯಿಂದ ಅಗೆದು ಹಾಕಿದ ಮಣ್ಣನ್ನು ಮತ್ತು ೭. "ಶರ್ಕರಾ" ಅಂದರೆ ಹರಳುಗಲ್ಲುಗಳನ್ನು ಹಾಸಬೇಕಾಗುತಿತ್ತು.

ಹಿಂದೆ ವಿವರಿಸಿದ ಚಿತಿಗಳು ಮಾತ್ರವಲ್ಲದೇ ಕಾಮ್ಯ ಯಜ್ಞಗಳಲ್ಲಿ ಕಾಮನೆಗೆ

ಅನುಸಾರವಾಗಿ ಬೇರೆ ಬೇರೆ ಆಕೃತಿಯ ಚಿತಿಗಳು ನಿರ್ಮಿಸಲ್ಪಡುತ್ತಿದ್ದುವು. ಕೆಲವು ಕಾಮ್ಯ ಚಿತಿಗಳ ಉಲ್ಲೇಖವು ಶತಪಥ ಬ್ರಾಹ್ಮಣದಲ್ಲಿ ಮತ್ತು ಕಾತ್ಯಾಯನ ಶ್ರೌತ ಗಳಲ್ಲಿ ಇದೆಯಾದರೂ ಯಜುರ್ವೇದದ ತೈತ್ತಿರೀಯ ಸಂಹಿತೆಯಲ್ಲಿ ಎಲ್ಲ ಕಾಮ್ಯ ಚಿತಿಗಳ ಉಲ್ಲೇಖವಿದೆ.

೧. **ಛಂದಶ್ಚಿತಂ ಚಿನ್ವೀತ ಪಶುಕಾಮಃ ಪಶವೋ ವೈಛಂದಾಂಸಿ ಪಶು ಮಾನೇವ ಭವತಿ ॥ ೫-೪-೧೧॥.**

ಅಂದರೆ- ಪಶುಗಳನ್ನು ಬಯಸುವವನು ಛಂದಸ್ಸುಗಳ ಹೆಸರಿನ ಇಟ್ಟಿಗೆ ಗಳನ್ನು ಆಯಾ ಛಂದಸ್ಸಿನ ಋಚೆಗಳನ್ನು ಪಠಿಸುತ್ತ ಇಟ್ಟು ಚಿತಿಯನ್ನು ಪೇರಬೇಕು. (=ಕಟ್ಟಬೇಕು) ಛಂದಸ್ಸುಗಳು ಪಶುಗಳಾಗಿರುತ್ತವೆ. ಆದುದರಿಂದ ಅವನು ಪಶುಸಂಪತ್ತುಳ್ಳವನಾಗುತ್ತಾನೆ. ಈ ಚಿತಿಯು ಶ್ಯೇನಪಕ್ಷಿಯ ಆಕಾರದಲ್ಲಿರಬೇಕು,

ತೈತ್ತಿರೀಯ ಸಂಹಿತೆಯ ೪-೪-೪ರಲ್ಲಿ ಛಂದಶ್ಚಿತಿಯ ಇಟ್ಟಿಗೆಗಳನ್ನಿಡು ವಾಗ ಪಠಿಸಲಾಗುವ ಹನ್ನೊಂದು ಛಂದಸ್ಸುಗಳ ಇಪ್ಪತ್ತೊಂಭತ್ತು ಋಚೆಗಳಿವೆ. ಅವುಗಳ ವಿವರವು ಮುಂದಿನಂತಿದೆ- ೧. **ಗಾಯತ್ರೀ:** ೮-೧೬-೩: ೮-೪೪-೧೬: ೮-೭೫-೪: ೨. **ತ್ರಿಷ್ಟುಪ್:** ೫-೧-೧: ೫-೧-೧೨: ೧೦-೮-೬, ೩. **ಜಗತೀ**- ೫-೧೧-೧: ೫-೧೧-೬: ೫-೧೧-೨. ೪. **ಅನುಷ್ಟುಪ್** ೧-೪೫-೬. ೫-೭-೧. ೧೦-೯೧-೧. ೫. **ಬೃಹತೀ** - ೭-೧೬-೧; ೭-೧೬-೩: ೬. **ಸತೋ ಬೃಹತೀ**- ೭-೧೬-೨, ೭. **ಉಷ್ಣಿಕ್** - ೧-೭೯-೪; ೧-೭೯-೫; ೧-೭೯-೬, ೮. **ಪಂಕ್ತಿ**- ೫-೬-೪; ೫-೬-೫. ೫-೬-೯; ೯. **ಅಕ್ಷರಪಂಕ್ತಿ** - ೪-೧೦-೧: ೪-೧೦-೨ ೪-೧೦-೪. ೪-೧೦-೩, ೧೦. **ಅತ್ಯಷ್ಟಿ** - ೧-೧೨೭-೧. ೧೧. **ದ್ವಿಪದಾ**- ೫-೨೪-೪. ೫-೨೪-೪: ೫-೨೪-೨.

೨. **ಶ್ಯೇನಚಿತಂ ಚಿನ್ವೀತ ಸುವರ್ಗಕಾಮಃ ಶ್ಯೇನೋ ವೈ ವಯಸಾಂ ಪ್ರತಿಷ್ಠಃ ಶ್ಯೇನಏವ ಭೂತ್ವಾ ಸುವರ್ಗಂ ಲೋಕಂ ಪತತಿ ॥**

ಅಂದರೆ-ಸ್ವರ್ಗವನ್ನು ಬಯಸುವವನು ಶ್ಯೇನಪಕ್ಷಿಯ  ಆಕೃತಿ ಯಲ್ಲಿ ಚಿತಿಯನ್ನು ನಿರ್ಮಿಸಬೇಕು. ಶ್ಯೇನವು ಪಕ್ಷಿಗಳಲ್ಲಿ ಉತ್ಕೃಷ್ಟವಾದುದು. ಆದುದರಿಂದ ಅವನು (ಸತ್ತ ತರುವಾಯ) ಶ್ಯೇನಪಕ್ಷಿಯಾಗಿ ಸ್ವರ್ಗಕ್ಕೆ ಹಾರಿ ಹೋಗುತ್ತಾನೆ,

೩. **ಕಂಕಚಿತಂ ಚಿನ್ವೀತ ಯಃ ಕಾಮಯೇತ ಶೀರ್ಷಣ್ವಾನಮುಷ್ಮಿಂಲ್ಲೋ ಕೇ ಸ್ಯಾಮಿತಿ ಶೀರ್ಷಣ್ವಾನೇವ ಭವತಿ ॥**

ಅಂದರೆ-ತಾನು ಪರಲೋಕದಲ್ಲಿ ತಲೆಯುಳ್ಳವನಾಗಬೇಕೆಂದು ಬಯಸು

ವವನು ಕಂಕಪಕ್ಷಿಯ ಆಕೃತಿಯಲ್ಲಿ ಚಿತಿಯನ್ನು ನಿರ್ಮಿಸಬೇಕು ಆಗ ಸೇನೆಯುಳ್ಳವನಾಗುವನು.

೪. ಅಲಜಚಿತಂ ಚಿನ್ವೀತ ಚತುಸ್ಸೀತಂ ಪ್ರತಿಷ್ಠಾಕಾಮಶ್ಚತಸ್ರೋದಿಶೋ ದಿಕ್ಷ್ವೇವ ಪ್ರತಿತಿಷ್ಠತಿ ॥

ಅಂದರೆ–ಪ್ರತಿಷ್ಠೆಯನ್ನು ಬಯಸುವವನು ನೇಗಿಲಿನಿಂದ ನಾಲ್ಕು ದಿಕ್ಕುಗಳಲ್ಲಿ ನಾಲ್ಕು ಸಾಲು ಉತ್ತು ಮಧ್ಯದಲ್ಲಿ ಅಲಜಪಕ್ಷಿಯ ಆಕೃತಿಯಲ್ಲಿ ಚಿತಿಯನ್ನು ಕಟ್ಟಬೇಕು. ಆಗ ನಾಲ್ಕು ದಿಕ್ಕುಗಳಲ್ಲಿಯೂ ಪ್ರತಿಷ್ಠಿತನಾಗುತ್ತಾನೆ.

೫. ಪ್ರಉಗಚಿತಂ ಚಿನ್ವೀತಃ ಭ್ರಾತೃವ್ಯವಾನ್ ಪ್ರೈವಭ್ರಾತೃವ್ಯಾನ್ನುದತೇ ॥

ಅಂದರೆ-ವೈರಿಗಳುಳ್ಳವನು ಗಾಡಿಯ ಮೂಕಿಯ ಆಕೃತಿಯಲ್ಲಿ △ ಚಿತಿಯನ್ನು ಕಟ್ಟಬೇಕು. ಅದು ವೈರಿಗಳನ್ನು ದೂರಕ್ಕೆ ಅಟ್ಟುತ್ತದೆ.

೬. ಉಭಯತಃ ಪ್ರಉಗಂ ಚಿನ್ವೀತ; ಯಃ ಕಾಮಯೇತ ಪ್ರಜಾತಾನ್ ಭ್ರಾತೃವ್ಯಾನ್ನುದೇಯ ಪ್ರತಿಜನಿಷ್ಯಮಾಣಾನಿತಿಃ ಪ್ರೈವ ಜಾತಾನ್ನುದತೇಃ ಪ್ರತಿಜನಿಷ್ಯಮಾಣಾನ್ ॥

ಅಂದರೆ–ಹುಟ್ಟಿರುವ ಮತ್ತು ಹುಟ್ಟಲಿರುವ ವೈರಿಗಳನ್ನು ನಿವಾರಿಸ ಬಯಸುವವನು ಜೋಡು ಮೂಕಿಯ ⧖ ಆಕೃತಿಯ ಚಿತಿಯನ್ನು ಕಟ್ಟಬೇಕು. ಅದು ಹುಟ್ಟಿದ ಹಾಗೂ ಹುಟ್ಟಲಿರುವ ವೈರಿಗಳನ್ನು ನಿವಾರಿಸುತ್ತದೆ.

೭. ರಥಚಕ್ರಚಿತಂ ಚಿನ್ವೀತ ಭ್ರಾತೃವ್ಯವಾನ್ ವಜ್ರೋ ವೈ ರಥೋ ವಜ್ರಮೇವ ಭ್ರಾತೃವ್ಯಾನ್ ಪ್ರಹರತಿ ॥

ಅಂದರೆ-ವೈರಿಗಳುಳ್ಳವನು ರಥದ ಚಕ್ರದ ಆಕೃತಿಯಲ್ಲಿ ಚಿತಿಯನ್ನು ಕಟ್ಟಬೇಕು. ರಥವು ವಜ್ರವಾಗಿದೆ. ಆದುದರಿಂದ ಅವನು ವೈರಿಗಳಿಗೆ ವಜ್ರವನ್ನು ಪ್ರಹರಿಸುತ್ತಾನೆ.

೮. ದ್ರೋಣಚಿತಂ ಚಿನ್ವೀತಾನ್ನಕಾಮೋ ದ್ರೋಣೇ ವಾ ಅನ್ನಂ ಭ್ರಿಯತೇ ಸಯೋನ್ಯೇವಾನ್ನಮವರುಂಧೇ ॥

ಅಂದರೆ–ದವಸಧಾನ್ಯಗಳನ್ನು ಬಯಸುವವನು ಧಾನ್ಯವನ್ನು ಅಳೆಯುವ □ ಕೊಳಗದ ಆಕೃತಿಯಲ್ಲಿ ಚಿತಿಯನ್ನು ಕಟ್ಟಬೇಕು, ಧಾನ್ಯವು ಕೊಳಗದಲ್ಲಿ ತುಂಬಿಸಲ್ಪಡುತ್ತದೆ. ಆದುದರಿಂದ ಅವನು ಧಾನ್ಯಬೆಳೆಯುವ ಕ್ಷೇತ್ರಸಹಿತವಾಗಿ ಧಾನ್ಯವುಳ್ಳವನಾಗುತ್ತಾನೆ.


೯ ಸಮೂಹ್ಯಂ ಚಿನ್ವೀತ ಪಶುಕಾಮಃ ಪಶುಮಾನೇವ ಭವತಿ ॥

ಅಂದರೆ–ಹೇರಳ ಪಶುಗಳನ್ನು ಬಯಸುವವನು ಯಜ್ಞಾಗ್ನಿಯನ್ನು ಗುಡಿಸಿ, ಒಟ್ಟು ರಾಶಿಯನ್ನಾಗಿ  ಮಾಡಿ ಅದರ ಸುತ್ತಲೂ ಇಟ್ಟಿಗೆಗಳನ್ನಿಡಬೇಕು. ಅವನು ಪಶುಸಂಪತ್ತುಳ್ಳವನಾಗುತ್ತಾನೆ.

೧೦. ಪರಿಚಾಯ್ಯಂ ಚಿನ್ವೀತ ಗ್ರಾಮಕಾಮೋ ಗ್ರಾಮ್ಯೇವ ಭವತಿ।

ಅಂದರೆ – ಗ್ರಾಮವನ್ನು ಬಯಸುವವನು ಮಂಡಲಾಕೃತಿಯ  ಚಿತಿಯನ್ನು ಕಟ್ಟಿಸಬೇಕು. ಆಗ ಅವನು ಗ್ರಾಮವುಳ್ಳವನಾಗುತ್ತಾನೆ

೧೧. ಶ್ಮಶಾನ ಚಿತಂ ಚಿನ್ವೀತ ಯಃ ಕಾಮಯೇತ ಪಿತೃಲೋಕ ಋಧ್ನುಯಾಮಿತಿ, ಪಿತೃಲೋಕ ಏವರ್ಧ್ನೋತಿ।

ಅಂದರೆ – ಪಿತೃಲೋಕದಲ್ಲಿ ಸಕಲ ಸಮೃದ್ಧಿಯನ್ನು ಅನುಭೋಗಿಸಬೇಕೆಂದಿರುವವನು ಶವದ ಸಮಾಧಿಯ  ಆಕೃತಿಯಲ್ಲಿ ಚಿತೆಯನ್ನು ಕಟ್ಟಬೇಕು. ಆಗ ಅವನು ಪಿತೃಲೋಕದಲ್ಲಿ ಸಮೃದ್ಧಿಯನ್ನು ಪಡೆಯುತ್ತಾನೆ.

ಅಗ್ನಿ ಮಥನದೊಂದಿಗೆ ಯಜ್ಞವು ಪ್ರಾರಂಭವಾಗುತ್ತಿತ್ತು. ಅಂದರೆ ಯಜ್ಞಯೋಗ್ಯವಾದ ನಕ್ಷತ್ರದ ಉದಯವಾದೊಡನೆ ಯಜಮಾನನು ಹಾಸಿದ ದರ್ಭೆಗಳ ಮೇಲಿರುವ ತಾವರೆಯ ಎಲೆಯ ಮೇಲೆ ಅಧರಾರಣಿಯನ್ನು ಇಡುತಿದ್ದನು. ಮತ್ತು ಋತ್ವಿಜರು ಅಗ್ನಿಮಂಥನದ ಮಂತ್ರಗಳನ್ನು ಪಠಿಸುತ್ತಿದ್ದರು ಮತ್ತು ಯಜಮಾನನು ಆ ಮಂತ್ರ ಪಠನದೊಂದಿಗೆ ಉತ್ತರಾರಣಿಯನ್ನು ಅಧರಾರಣಿಯ ಮೇಲಿಟ್ಟು ಮಂಥನವನ್ನು ಪ್ರಾರಂಭಿಸುತಿದ್ದನು. ಅವನು ಅಗ್ನಿಮಂಥನ ಮಾಡುವಾಗ ಒಂದು ಕುದುರೆಯು ಗಾರ್ಹಪತ್ಯಚಿತಿಯ ಉತ್ತರಪಾರ್ಶ್ವದಲ್ಲಿ ಪಶ್ಚಿಮಕ್ಕೆ ಮೋರೆಮಾಡಿ ನಿಂತು ಅಗ್ನಿಮಂಥನವನ್ನು ನೋಡುತಿತ್ತು. ಯಜಮಾನನು ಬಹಳ ಹೊತ್ತಿನ ತನಕ ಅರಣಿಗಳಿಂದ ಕಡೆಯುತ್ತಿರಲಾಗಿ ಅರಣಿಗಳ ಎಡೆಯಲ್ಲಿ ಸಿಲುಕಿದ ಕೆತ್ತೆಯು ಸುಟ್ಟು ಕೆಂಡವಾಗುತಿತ್ತು. ಒಡನೆಯೇ ಅಧ್ವರ್ಯುವು ಆ ಕೆಂಡವನ್ನು ಒಂದು ತವೆಯ ಮೇಲೆ ತೆಗೆದು ಅದರ ಮೇಲೆ ಒಣಗಲು ಸೆಗಣಿಯ ಹುಡಿಯನ್ನು ಹಾಕಿ ಯಜಮಾನನಿಗೆ ಅದನ್ನು ಬಾಯಿಯಿಂದ ಊದಲು ಹೇಳುತಿದ್ದ. ಅದು ಕೊಂಚ ಪ್ರಜ್ವಲಿತವಾದ ತರುವಾಯ ಅದನ್ನೊಯ್ದು ಮಂತ್ರಪಠನದೊಂದಿಗೆ ಗಾರ್ಹಪತ್ಯಕುಂಡದಲ್ಲಿ ಆಧಾನಮಾಡಿ ಅದರಲ್ಲಿ ಸಮಿತ್ತುಗಳನ್ನು ಹಾಕುತಿದ್ದ. ಹಾಗೂ ಅಗ್ನಿಯನ್ನು ಪ್ರದೀಪ್ತಮಾಡುತಿದ್ದ. ಆಗ ಹೋತೃವು ಮಂತ್ರಗಳನ್ನು ಪಠಿಸುತ್ತ ಅಧ್ವರ್ಯುವಿನಿಂದ ಆಹುತಿಗಳನ್ನು ಕೊಡಿಸುತಿದ್ದ.

ತರುವಾಯ ಅಧ್ವರ್ಯುವು ಗಾರ್ಹಪತ್ಯಕುಂಡದೊಳಗಿನ ಅಗ್ನಿಯ ಮೂರನೆಯ ಒಂದಂಶವನ್ನು ತವೆಯ ಮೇಲೆ ತೆಗೆದು ಕೈಯಲ್ಲಿ ಹಿಡಿದುಕೊಳ್ಳುತಿದ್ದ. ಆಗ ಅಗ್ನೀಧ್ ಎಂಬ ಋತ್ವಿಜನು ಪಶ್ಚಿಮಕ್ಕೆ ಮೋರೆಮಾಡಿ ನಿಂತ ಕುದುರೆಯನ್ನು

ತಿರುಗಿಸಿ ಪೂರ್ವದಿಕ್ಕಿಗೆ ಒಯ್ಯುತ್ತಿದ್ದ ಮತ್ತು ಬ್ರಹ್ಮ ಎಂಬ ಋತ್ವಿಜನು ರಥದ ಒಂದು ಚಕ್ರವನ್ನು ಕುದುರೆಯ ಹಿಂದಿನಿಂದ ಉರುಳಿಸುತ್ತ ಹೋಗುತ್ತಿದ್ದ ಮತ್ತು ಅಧ್ವರ್ಯುವು ಅಗ್ನಿಯನ್ನು ಹಿಡಿದುಕೊಂಡು ಆ ಚಕ್ರದ ಹಿಂದೆಯೇ ಹೋಗುತ್ತಿದ್ದ. ಕುದುರೆಯು ಆಹವನೀಯ ಕುಂಡದ ಬಳಿಗೆ ಹೋಗಿ ಮರಳಿ ತಿರುಗಿ ಪಶ್ಚಿಮಕ್ಕೆ ಮೋರೆ ಮಾಡಿ ನಿಲ್ಲುತ್ತಿತ್ತು. ಮತ್ತು ಅಧ್ವರ್ಯುವು ತನ್ನ ಕೈಯಲ್ಲಿದ್ದ ಅಗ್ನಿಯನ್ನು ವಿಧಿಪೂರ್ವಕ ಆಹವನೀಯ ಕುಂಡದಲ್ಲಿ ಆಧಾನಮಾಡಿ ಯಜಮಾನನಿಂದ ಆಹುತಿಗಳನ್ನು ಕೊಡಿಸುತ್ತಿದ್ದ. ತರುವಾಯ ಕುದುರೆಯಿಂದ ಆಹವನೀಯ ಕುಂಡದ ಪ್ರದಕ್ಷಿಣೆ ತೆಗಿಸಿ ಅದನ್ನು ಬಿಚ್ಚಿ ಉತ್ತರದಿಕ್ಕಿನಲ್ಲಿ ಬಿಡುತ್ತಿದ್ದರು. ಅದು ಅಧ್ವರ್ಯುವಿಗೆ ಸಲ್ಲುತ್ತಿತ್ತು.

ಅಗ್ನಿಗಳಿಗೆ, ಕುದುರೆಗೆ, ಅಗ್ನಿಚಿತಿಗಳಿಗೆ, ರಥದ ಚಕ್ರಕ್ಕೆ ಮತ್ತು ಅಗ್ನಿ ಮಂಥನಕ್ಕೆ ಸಂಬಂಧಪಟ್ಟ ಹಲವು ಆಖ್ಯಾಯಿಕೆಗಳು ವೈದಿಕ ಸಾಹಿತ್ಯದಲ್ಲಿ ಇವೆ. ಅವುಗಳಲ್ಲಿ ಕೆಲವು ಇಲ್ಲಿ ಮುಂದೆ ಕೊಡಲಾಗುವುವು.

"ಗಾರೋ ವಾ ಏಷೋಽಗ್ನೀನಾಂ ಯದ್ಗಾರ್ಹಪತ್ಯಃ । ತಸ್ಯ ಯೋಽಗ್ನೇಸ್ತೃತೀಯೋ ಭಾಗಸ್ತಂ ದೇವಾಃ ಶ್ವೋಭೂತೇ ಪ್ರಾಂಚಮನಯನ್ । ಸ ದೇವೇಭ್ಯಃ ಆಹವನೀಯೋ ಅಭವತ್ । ತಸ್ಮಾಚ್ಛ್ವಃ ಶ್ವಃ ಪ್ರಾಙ್ ಪ್ರಣೀಯತೇ । ತಸ್ಯ ಯೋ ಅಗ್ನೇಸ್ತೃತೀಯೋ ಭಾಗಸ್ತಂ ದೇವಪಿತರಃ ಪರ್ಯಗೃಹ್ಣನ್ । ಸ ದಕ್ಷಿಣಾಗ್ನಿರಭವತ್ ॥ ಕಾತಕ ಸಂಕಲನ. ೧–೧–೧೧ ॥

ಅರ್ಥ – ಗಾರ್ಹಪತ್ಯವು ಅಗ್ನಿಗಳ ಆಗಾರವಾಗಿದೆ. ದೇವತೆಗಳು ರಾತ್ರಿಯು ಕಳೆದೊಡನೆಯೇ ಗಾರ್ಹಪತ್ಯಾಗ್ನಿಯ ಮೂರನೆಯ ಒಂದಂಶವನ್ನು ತೆಗೆದುಕೊಂಡು ಪೂರ್ವದಿಕ್ಕಿಗೆ ಒಯ್ದರು. ಅದು ದೇವತೆಗಳಿಗೆ ಆಹವನೀಯವಾಯಿತು. ಆದುದರಿಂದ ಅದು ಬೆಳಗಾತವೇ ಪೂರ್ವದಿಕ್ಕಿಗೆ ಒಯ್ಯಲ್ಪಡುತ್ತದೆ. ಗಾರ್ಹಪತ್ಯಾಗ್ನಿಯ ಇನ್ನೊಂದು ಮೂರನೆಯ ಅಂಶವನ್ನು ದೇವಪಿತೃಗಳು ತೆಗೆದುಕೊಂಡರು. ಅದು ದಕ್ಷಿಣಾಗ್ನಿಯಾಯಿತು.

ಪ್ರಜಾಪತೇರಕ್ಷ್ಯಶ್ವಯತ್ । ತತ್ಪರಾಪತತ್ । ತದಶ್ವೋಽಭವತ್ । ತದಶ್ವಸ್ಯಾಶ್ವತ್ವಮ್ ॥ ತೈ. ಬ್ರಾ. ೧–೧–೫–೪ ॥ ಏಷ ವೈ ಪ್ರಜಾಪತಿರ್ಯದಗ್ನಿಃ । ಪ್ರಾಜಾಪತ್ಯೋಽಶ್ವಃ । ಯದಶ್ವಂ ಪುರಸ್ತಾನ್ನಯತಿ ಸ್ವಮೇವ ಚಕ್ಷುಃ ಪಶ್ಯನ್ ಪ್ರಜಾಪತಿರನೂದೇತಿ ॥ ೫ ॥

ಅರ್ಥ – ಪ್ರಜಾಪತಿಯ ಕಣ್ಣು ಬಾತಿತು. ಮತ್ತು ಅದು ಕಿತ್ತು ದೂರಕ್ಕೆ ಹೋಗಿ ಬಿತ್ತು. ಅದು ಕುದುರೆಯಾಯಿತು. ಅದುವೇ ಕುದುರೆಯ ಕುದುರೆತನವಾಗಿದೆ. ಈ ಅಗ್ನಿಯು ಪ್ರಜಾಪತಿಯಾಗಿದ್ದಾನೆ. ಮತ್ತು ಕುದುರೆಯು ಪ್ರಜಾಪತಿಯದೇ ಆಗಿದೆ. ಆದುದರಿಂದ ಕುದುರೆಯನ್ನು ಮುಂದಿನಿಂದ ಒಯ್ಯು

ಹಾಗ ಪ್ರಜಾಪತಿಯಾಗಿರುವ ಅಗ್ನಿಯು ತನ್ನ ಕಣ್ಣಾಗಿರುವ ಕುದುರೆಯನ್ನು ಹಿಂಬಾಲಿಸಿ ಹೋಗುತ್ತಾನೆ.

- **ರಥಚಕ್ರಂ ಪ್ರವರ್ತಯತಿ । ಮನುಷ್ಯರಥೇನೈವ ದೇವರಥಂ ಪ್ರತ್ಯವ ರೋಹತಿ ॥ ತೈ. ಬ್ರಾ. ೧ ೧-೬-೮ ॥**

ಅರ್ಥ - ಬ್ರಹ್ಮಾ ಎಂಬ ಋತ್ವಿಜನು ರಥದ ಚಕ್ರವನ್ನು ಉರುಳಿಸುತ್ತಾನೆ. ಆ ಚಕ್ರವು ರಥದ ಪ್ರತೀಕವಾಗಿದೆ. ಅದು ಮನುಷ್ಯರಥವಾಗಿದ್ದರೂ, ಅಗ್ನಿ ದೇವನಿಗಾಗಿ ಉಪಯೋಗಿಸಲ್ಪಡುತ್ತಿರುವುದರಿಂದ ಅದು ದೇವರಥವೆನಿಸಿಕೊಳ್ಳುತ್ತದೆ. ಮತ್ತು ಅಗ್ನಿಯು ದೇವರಥವನ್ನೇರಿ ಹೋಗುತಿದ್ದಾನೆಂದು ಎಣಿಸಲಾಗುತ್ತದೆ.

ನ್ಯಾಹವನೀಯೋ ಗಾರ್ಹಪತ್ಯಮಕಾಮಯತ । ನಿಗಾರ್ಹಪತ್ಯ ಆಹವನೀಯಮ : ತೌ ವಿಭಾಜಂ ನಾಶಕ್ನೋತ್ ಸೋ ಶ್ವಃ ಪೂರ್ವವಾಡ್ ಭೂತ್ವಾ ಪ್ರಾಂಚಂ ಪೂರ್ವಮುದವಹತ್ । ತತ್ಪೂರ್ವವಾಹಃ ಪೂರ್ವವಾಟ್‌ತ್ವಮ್ । ಯದಶ್ವಂ ಪುರಸ್ತಾನ್ನಯತಿ ವಿಭಕ್ತಿರೇವೈನಯೋಃಸಾ । ಅಥೋ ನಾನಾವೀರ್ಯಾವೇವೈನೌ ಕುರುತೇ ॥ ತೈ. ಬ್ರಾ ೧-೧ ೫-೬ ॥

ಅರ್ಥ -ಹಿಂದೆ ಆಹವನೀಯವು ಗಾರ್ಹಪತ್ಯವನ್ನು ಕಾಮಿಸಿತ್ತು. ಮತ್ತು ಗಾರ್ಹಪತ್ಯವು ಆಹವನೀಯವನ್ನು; ಅಂದರೆ ಗಾರ್ಹಪತ್ಯದಲ್ಲಿ ಜರಗುವ ಕಾರ್ಯಗಳು ತನ್ನಲ್ಲಿ ಜರುಗಬೇಕೆಂದು ಆಹವನೀಯವೂ, ಆಹವನೀಯದಲ್ಲಿ ಜರುಗುವ ಕಾರ್ಯವು ತನ್ನಲ್ಲಿ ಜರುಗಬೇಕೆಂದು ಗಾರ್ಹಪತ್ಯವೂ ಬಯಸಿದ್ದುವು, (ಅರ್ಥಾತ್ ಯಾವುದಾದರೂ ಒಂದೇ ಕುಂಡದಲ್ಲಿ ಗೃಹ್ಯ ಮತ್ತು ಶ್ರೌತ ಎಂಬ ಎರಡು ಕರ್ಮಗಳೂ ಜರುಗುತಿದ್ದುವು.) ಹಾಗಾಗಿ ಅವುಗಳನ್ನು ವಿಭಜಿಸಲು ಶಕ್ಯವಿರಲಿಲ್ಲ. ಅಂಥ ಸಮಯದಲ್ಲಿ ಕುದುರೆಯು ಪೂರ್ವಕ್ಕೆ ಒಯ್ಯುವಂಥದ್ದಾಗಿ ಹುಟ್ಟಿತು. ಮತ್ತು ಪೂರ್ವದಲ್ಲಿರಬೇಕಾದುದನ್ನು ಹೊತ್ತು ಕೊಂಡು ಪೂರ್ವಕ್ಕೆ ಹೋಯಿತು. ಅದುವೇ ಅದರ ಪೂರ್ವವಾಹಕತ್ವವಾಗಿದೆ. ಹಾಗೆ ಕುದುರೆಯನ್ನು ಅಗ್ನಿಯ ಮುಂದಿನಿಂದ ಪೂರ್ವದಿಕ್ಕಿಗೆ ನಡೆಯಿಸುವುದೆಂದರೆ ಗಾರ್ಹಪತ್ಯ ಬೇರೆ ಆಹವನೀಯ ಬೇರೆ ಎಂದು ಅವುಗಳನ್ನು ವಿಭಜಿಸುವುದಾಗಿದೆ. ಮತ್ತು ಅವುಗಳನ್ನು ಬೇರೆ ಬೇರೆ ಶಕ್ತಿಯುವುಗಳನ್ನಾಗಿ ಮಾಡುವುದಾಗಿದೆ.

ಹಿಂದಿನ ಆಖ್ಯಾಯಿಕೆಯ ಆಶಯವನ್ನು ಮುಂದಿನಂತೆ ವಿವರಿಸಬಹುದು. ಯಜ್ಞಗಳು ಪ್ರಾರಂಭವಾದ ಮೊದಲ ಹಂತದಲ್ಲಿ ಗೃಹ್ಯ ಮತ್ತು ಶ್ರೌತ ಕರ್ಮಗಳೆಂಬ ಭೇದವಿರಲಿಲ್ಲ, ಆದುದರಿಂದ ಎಲ್ಲ ಯಜ್ಞಕರ್ಮಗಳು ಒಂದೇ ಚಿತಿಯಲ್ಲಿ ಜರುಗಿಸಲ್ಪಡುತಿದ್ದುವು. ಅಂದರೆ ಕೆಲವರು ಮಂಡಲಾಕೃತಿಯ ಚಿತಿಯನ್ನು ಉಪಯೋಗಿಸುತಿದ್ದರಾದರೆ ಬೇರೆ ಕೆಲವರು ಚೌಕಾಕಾರದ ಚಿತಿಯನು ಉಪಯೋಗಿಸುತಿದ್ದರು. ಮುಂದೆ ವ್ಯವಸ್ಥಿತವಾದ ಯಜ್ಞಸಂಸ್ಥೆಯು ಸ್ಥಾಪಿತವಾದ

ತರುವಾಯ ಗೃಹ್ಯಕರ್ಮಗಳಿಗೆ ಗಾರ್ಹಪತ್ಯ ಎಂಬ ಮಂಡಲಾಕಾರದ ಚಿತಿಯೆಂದು, ಶ್ರೌತಕರ್ಮಗಳಿಗೆ ಆಹವನೀಯವೆಂಬ ಚೌಕಾಕಾರದ ಚಿತಿಯೆಂದು, ಅನ್ವಾಹಾರ್ಯ ಪಚನಕ್ಕೆ ದಕ್ಷಿಣ ಎಂಬ ಅರ್ಧಚಂದ್ರಾಕಾರದ ಚಿತಿಯೆಂದು ಮತ್ತು ದರ್ಶಪೂರ್ಣ ಮಾಸೇಷ್ಟಿಗಳಿಗೆ ಆಯತಾಕಾರದ ಚಿತಿಯೆಂದು ನಿರ್ಧರಿಸಲ್ಪಟ್ಟಿತು. ಮತ್ತು ಆಹವನೀಯದ ಚಿತಿಯು ಗಾರ್ಹಪತ್ಯ ಚಿತಿಯ ಪೂರ್ವಕ್ಕೂ ಅನ್ವಾಹಾರ್ಯ ಚಿತಿಯು ಗಾರ್ಹಪತ್ಯ ಚಿತಿಯ ದಕ್ಷಿಣಕ್ಕೂ ಇರತಕ್ಕುದೆಂದು ನಿರ್ಧರಿಸಲ್ಪಟ್ಟಿತು.

ಹಾಗೆಯೇ ಅಗ್ನಿಮಂಥನದಲ್ಲಿ ಕೂಡ ಆರ್ಯರ ಬೇರೆ ಬೇರೆ ಪಂಗಡದ ಜನರು ಬೇರೆ ಬೇರೆ ಕ್ರಮವನ್ನು ಅನುಸರಿಸುತ್ತಿದ್ದರು. ಸಾಮಾನ್ಯವಾಗಿ ಯಜ್ಞಕ್ಕಾಗಿ ಅಗ್ನಿಮಂಥನ ಮಾಡುತ್ತಿದ್ದಾಗ ಗಾರ್ಹಪತ್ಯಚಿತಿಯ ಪಶ್ಚಿಮದಲ್ಲಿ ಮುಂಜ ಹುಲ್ಲನ್ನು ಹಾಸಿ ಅದರ ಮೇಲೆ ಎರಡು ದರ್ಭೆಗಳನ್ನು ತುದಿಗಳು ಪೂರ್ವದಿಕ್ಕಿಗಿರುವಂತೆ ಇಟ್ಟು ಅವುಗಳ ಮೇಲೆ ತಾವರೆಯ ಎಲೆಯನ್ನಿಟ್ಟು ತರುವಾಯ ಅದರ ಮೇಲೆ ಅಧರಾಣಿಯನ್ನಿಡುತ್ತಿದ್ದರು. ಮತ್ತು ಅದರ ನಡುವಿನ ತಗ್ಗಿನಲ್ಲಿ ಉತ್ತರಾರಣಿಯನ್ನಿಟ್ಟು ಅಗ್ನಿಯನ್ನು ಕಡೆಯುತ್ತಿದ್ದರು. ಕೆಲವರು ಕೃಷ್ಣಾಜಿನವನ್ನು ಹಾಸಿ ಅದರ ಮೇಲೆ ಮುಂಜ ಹುಲ್ಲಿನ ಕಡ್ಡಿಗಳನ್ನಿಟ್ಟು ಅವುಗಳ ಮೇಲೆ ಅಧರಾರಣಿಯನ್ನಿಡುತ್ತಿದ್ದರು. ಬೇರೆ ಕೆಲವರು ಕೃಷ್ಣಾಜಿನದ ಮೇಲೆ ತಾವರೆಯ ಎಲೆಯನ್ನಿಟ್ಟು ಅದರ ಮೇಲೆ ಎರಡು ದರ್ಭೆಗಳನ್ನಿಟ್ಟು ತರುವಾಯ ಅಧರಾರಣಿಯನ್ನಿಡುತ್ತಿದ್ದರು. ಮತ್ತು ಉತ್ತರಾರಣಿಯಿಂದ ಅಗ್ನಿಯನ್ನು ಕಡೆಯುತ್ತಿದ್ದರು.

ಸೋಮಯಜ್ಞಗಳಲ್ಲಿ ಇಂದ್ರನಿಗೆ ಅರ್ಪಿಸುವ ಸಲುವಾಗಿಯೂ ಋತ್ವಿಜರಿಗೆ ಕುಡಿಯಲಿಕ್ಕಾಗಿಯೂ "ಸೋಮ" ಎಂಬ ಔಷಧಿಯ ಬಳ್ಳಿಯನ್ನು ಕುಟ್ಟಿ ಅದರ ರಸವನ್ನು ಹಿಂಡಲಿಕ್ಕಿದೆ, ಸೋಮಬಳ್ಳಿಯ ರಸ ಹಿಂಡುವುದನ್ನು ವೈದಿಕ ಸಾಹಿತ್ಯದಲ್ಲಿ ಸೋಮದ "ಸವನ" ಅಲ್ಲದಿದ್ದರೆ "ಅಭಿಷವಣ" ಎನ್ನಲಾಗಿದೆ. ಸಾಮಾನ್ಯವಾಗಿ ಅಶ್ವತ್ಥದ ಎಲೆಯ ಆಕೃತಿಯ ಉಲೂಖಲದಲ್ಲಿ ಅಂದರೆ ಒರಳಲ್ಲಿ ಚಿಕ್ಕ ಅಗಲ ಅಡಿಯ ಮುಸಲದಿಂದ ಸೋಮವು ಕುಟ್ಟಲ್ಪಡುತ್ತಿತ್ತು, ಉಲೂಖಲ ಮುಸಲಗಳು ಅತ್ತೀ ಮರದವುಗಳಾಗಿರುತ್ತಿದ್ದುವು. ಮತ್ತು ಒಂದು ಗೇಣು ಪ್ರಮಾಣದವುಗಳಾಗಿರುತ್ತಿದ್ದುವು,[1] ಉಲೂಖಲವು ಯೋನಿಯೆಂತಲೂ ಮುಸಲವು ದುಂಡಗಿರುತ್ತದೆಂಬ ಕಾರಣದಿಂದ ಶಿಶ್ನವೆಂತಲೂ ಕರೆಯಲ್ಪಡುತ್ತಿತ್ತು[2]. ಕೆಲವರು ಒರಳಿನ ಬದಲಿಗೆ ಹಲಗೆಯ ಎರಡು ತುಂಡುಗಳನ್ನು ಹೊಂದಿಸಿಡುತ್ತಿದ್ದರು; ಅಲ್ಲದಿದ್ದರೆ ಚೌಕದ

---

1. ಅಥೋಲೂಖಲ ಮುಸಲೇ ಉಪದಧಾತಿ ॥ ಶ. ಬಾ. ೭-೫-೧-೧೨ ॥ ಪ್ರಾದೇಶ ಮಾತ್ರೇ ಭವತಃ ॥ ೧೪ ॥ ಔದುಂಬರೇ ಭವತಃ ॥ ೧೫ ॥.

2. ಯೋನಿರುಲೂಖಲಮ್ । ಶಿಶ್ನಂ ಮುಸಲಮ್ । ತದ್ ವೃತ್ತಮಿವ ಭವತಿ ॥ ಶ. ಬ್ರಾ. ೭-೫-೧-೩೮ ॥

ಒಂದೇ ಹಲಗೆಯನ್ನಿಡುತಿದ್ದರು. ಮತ್ತು ಅದರ ನಾಲ್ಕು ಬದಿಗಳಲ್ಲಿ ನಾಲ್ವರು ಎದುರುಬದಿರಾಗಿ ಕುಳಿತು[1] ನಾಲ್ಕು ಮುಸಲಗಳನ್ನು ಹಿಡಿದು ಸೋಮವನ್ನು ಕುಟ್ಟುತಿದ್ದರು. ಹಲಗೆಗೆ ಹೊಂದಿಕೊಂಡು ಒಂದು ಪಾತ್ರೆಯಿರುತಿತ್ತು. ಆ ಪಾತ್ರೆಯ ಬಾಯಿಯು ದರ್ಭೆಯ ಹಾಸಿನಿಂದ ಇಲ್ಲವೇ ಉಣ್ಣೆಯಿಂದ ಮುಚ್ಚಿರುತಿತ್ತು. ಆ ಮುಚ್ಚನ್ನು ಪವಿತ್ರ ಅನ್ನುತಿದ್ದರು. ಕುಟ್ಟಿದ ಸೋಮವನ್ನು ಬಲವಾಗಿ ಒತ್ತಿದಾಗ ಅವರಿಂದ ರಸವು ಒಸರಿ ಪವಿತ್ರದೊಳಗಿಂದ ಪಾತ್ರೆಗೆ ಇಳಿಯುತಿತ್ತು. ಆ ಮುಸಲಗಳು ಕಲ್ಲಿನವುಗಳಾಗಿರುತಿದ್ದುವು. ಆದುದರಿಂದ ಅವುಗಳನ್ನು "ಗ್ರಾವಾಣ"[2] ಅನ್ನುತಿದ್ದರು.

ಯಜ್ಞದ ಪ್ರಾರಂಭ ಕಾಲದಲ್ಲಿ ಉಲೂಖಲಮುಸಲಗಳು ಸ್ತುತಿಸಲ್ಪಡುತಿದ್ದುವು. ಋಗ್ವೇದದ ಒಂದು ಮಂತ್ರದಲ್ಲಿ ಮುಸಲವನ್ನು ಅಗಲಬುಡದ ಕಲ್ಲು "ಪೃಥುಬುಧ್ನಗ್ರಾವಾ" ಎಂದಿದೆ. ಅಂದರೆ ಮುಸಲವು ಅಡಿಭಾಗದಲ್ಲಿ ಕೊಂಚ ಅಗಲವಾಗಿಯೂ, ತಲೆಕಡೆಯಲ್ಲಿ ಕೊಂಚ ಅಗಲ ಕಿರಿದಾಗಿಯೂ ಇರುತಿತ್ತು.

ಯತ್ರ ಗ್ರಾವಾ ಪೃಥುಬುಧ್ನ ಊರ್ಧ್ವೋ ಭವತಿ ಸೋತವೇ ।
ಉಲೂಖಲ ಸುತಾನಾಮವೇದ್ವಿಂದ್ರ ಜಲ್ಗುಲಃ ॥ ಋ ೧-೨೮-೧ ॥

ಅರ್ಥ– ಹೇ ದೇವ ಇಂದ್ರನೇ, ಯಾವುದರಲ್ಲಿ ಸೋಮರಸವನ್ನು ಹಿಂಡಲು ಅಗಲ ಬುಡದ ಕಲ್ಲು ನೆಟ್ಟಗೆ ನಿಂತಿರುವುದೋ ಅಂಥ ಒರಳಲ್ಲಿ ಹಿಂಡಲ್ಪಟ್ಟಿರುವ ಸೋಮರಸವನ್ನು ಬಹಳ ರುಚಿಯಿಂದ ಕುಡಿ.

ಸೋಮವನ್ನು ಕುಟ್ಟುವಾಗ ಉಲೂಖಲ ಮತ್ತು ಮುಸಲಗಳ ತಾಕಲಾಟದಿಂದ ಹೊರಡುತಿದ್ದ ಶಬ್ದವನ್ನು ಒಂದು ಮಂತ್ರದಲ್ಲಿ ಮುಂದಿನಂತೆ ವರ್ಣಿಸಿದೆ–

ಯಚ್ಚಿದ್ಧಿ ತ್ವಂ ಗೃಹೇಗೃಹ ಉಲೂಖಲ ಯುಜ್ಯಸೇ ।
ಇಹ ದ್ಯುಮತ್ತಮಂ ವದ ಜಯತಾಮಿವ ದುಂದುಭಿಃ ॥ ಋ. ೧-೨೮-೫॥

ಅರ್ಥ–ಎಲೈ ಉಲೂಖಲವೇ, ನೀನು ಮನೆಮನೆಗಳಲ್ಲಿ ಉಪಯೋಗಿಸಲ್ಪಡುವಿಯಾದರೆ ಆಗ ನೀನು ವಿಜಯಿೂ ಜನರ ದುಂದುಭಿಯಂತೆ ಸ್ಪಷ್ಟವಾದ ಹಾಗೂ ದೊಡ್ಡದಾದ ಶಬ್ದವನ್ನು ಹೊರಡಿಸು.

ಉಲೂಖಲ ಮುಸಲಗಳು ಸ್ತುತಿಸಲ್ಪಡುವಾಗ ಹಾಗೂ ಅವುಗಳಿಗೆ ಆಹುತಿಗಳನ್ನು ಅರ್ಪಿಸುವಾಗ ಮುಸಲವು ಉಲೂಖಲದಲ್ಲಿ ನೆಟ್ಟಗೆ ನಿಂತಿರುತ್ತಿತ್ತು. ಉಲೂಖಲ–ಮುಸಲಗಳನ್ನು ಉಪಯೋಗಿಸಿ ಸೋಮರಸವನ್ನು ಹಿಂಡುವ ವರ್ಣನೆಯು ಋಗ್ವೇದದ ೧–೮ನೆಯ ಸೂಕ್ತದಲ್ಲಿಯೂ ಗ್ರಾವನ್ ಎಂಬ ಕಲ್ಲುಗಳ

---

1. ಅಥಾಧಿಷವಣೇಪರ್ಯುಪವಿಶಂತಿ ॥ ಶ. ಬ್ರಾ. ೩ ೮-೪-೧ ॥ ಅಥ ಗ್ರಾವಾಣಮಾಧತ್ತೇ । ತೇವಾ ಏತೇ ಅಶ್ಮಮಯಾ ಗ್ರಾವಾಣೋ ಭವಂತಿ ॥ ೨ ॥

ಸ್ತುತಿಯು ಹತ್ತನೆಯ ಮಂಡಲದ ೭೫ನೆಯ, ೯೪ನೆಯ ಮತ್ತು ೧೭೫ನೆಯ ಸೂಕ್ತಗಳಲ್ಲಿಯೂ ಇದೆ.

ಸಾಮಾನ್ಯವಾಗಿ ಸೋಮಯಜ್ಞಗಳು ರಾತ್ರಿ ಕಾಲದಲ್ಲಿ ಜರುಗಿಸಲ್ಪಡುತಿದ್ದುವು. ಆದುದರಿಂದ ಋಗ್ವೇದದಲ್ಲಿ "ಸೋಮ" ಎಂಬ ಶಬ್ದವು ದ್ವಯಾರ್ಥದಲ್ಲಿ ಅಂದರೆ "ಚಂದ್ರ" ಮತ್ತು "ಮಾದಕರಸವನ್ನು ಸೂಸುವ ಒಂದು ಬಳ್ಳಿ" ಎಂಬ ಎರಡು ಅರ್ಥಗಳಲ್ಲಿ ಪ್ರಯೋಗಿಸಲ್ಪಟ್ಟಿದೆ. ಋಗ್ವೇದದ ಇಡೀ ಒಂಭತ್ತನೆಯ ಸೂಕ್ತವು ಸೋಮನಿಗೆ ಸಂದಿದೆ.

ಅಧ್ವರ್ಯುವು ಗಾರ್ಹಪತ್ಯ ಚಿತಿಯಿಂದ ತೆಗೆದ ಅಗ್ನಿಯನ್ನು ಆಹವನೀಯ ಚಿತಿಯಲ್ಲಿ ಸ್ಥಾಪಿಸಿ ಅದನ್ನು ಸಮಿತ್ತುಗಳಿಂದ ಹೊತ್ತಿಸುವಾಗ ಹೋತೃವು ಅಗ್ನಿಯನ್ನು ಹೊಗಳುತ್ತ ನೀನು ಯಜ್ಞಸ್ಥಳಕ್ಕೆ ಎಲ್ಲ ದೇವತೆಗಳನ್ನು ಹೊತ್ತುಕೊಂಡು ಬಾ ಎಂದು ಪ್ರಾರ್ಥಿಸುತಿದ್ದನು. ಆಗ ಅಧ್ವರ್ಯುವು ಹೋತೃವು ಆಹ್ವಾನಿಸಿದ ದೇವತೆಗಳ ಪ್ರತೀಕಗಳನ್ನು ಮತ್ತು ಪ್ರತಿಮಾ ರೂಪಗಳನ್ನು ಒಂದೊಂದನ್ನಾಗಿ ತಂದು ಯಜ್ಞಕುಂಡದ ಬಳಿಯಲ್ಲಿ ಹಾಸಿದ ದರ್ಭೆಗಳ ಮೇಲಿರಿಸುತಿದ್ದನು. ತರುವಾಯ ಹೋತೃವು ಆಹುತಿಗಳನ್ನು ಸ್ವೀಕರಿಸುವಂತೆ ಆ ದೇವತೆಗಳನ್ನು ಪ್ರಾರ್ಥಿಸುತಿದ್ದನು–

ಈಳಿತೋ ಅಗ್ನೇ ಮನಸಾ ನೋ ಅರ್ಹನ್
ದೇವಾನ್ ಯಕ್ಷಿ ಮಾನುಷಾತ್ ಪೂರ್ವೋ ಅದ್ಯ ।

ಸ ಆ ವಹ ಮರುತಾಂ ಶರ್ಧೋ ಅಚ್ಯುತಮ್
ಇಂದ್ರಂ ನರೋ ಬರ್ಹಿಷದಂ ಯಜಧ್ವಮ್ ॥ ಋ ೨–೩.೩ ॥

ಅರ್ಥ–ಹೇ ಅಗ್ನಿದೇವನೇ, ಇಂದು ನೀನು ನಿನ್ನ ಯೋಗ್ಯತೆಗೆ ತಕ್ಕಂತೆ ನಮ್ಮ ಮನಸ್ಸಿನ ಆಳದಿಂದ ಆರಾಧಿಸಲ್ಪಟ್ಟಿದ್ದೀ ಅಂಥ ನೀನು ಮಾನುಷ (=ಸೂರ್ಯ) ನಿಗಿಂತ ಮೊದಲು ದೇವತೆ (=ನಕ್ಷತ್ರ)ಗಳನ್ನು ಯಜಿಸು. ಮತ್ತು ಮರುತ್ತುಗಳ ಪಡೆಯನ್ನು ಹೊತ್ತುಕೊಂಡು ಬಾ. ಹೇ ಋತ್ವಿಜರೇ, ನೀವು ಕುಶಾಸನದಲ್ಲಿ ಕೂತಿರುವ ಹಾಗೂ ತನ್ನ ಸ್ಥಾನದಿಂದ ಕದಲದ ಇಂದ್ರನನ್ನು ಯಜ್ಞದ ಮೂಲಕ ಆರಾಧಿಸಿರಿ.

ಆ ನೋ ಬರ್ಹೀರಿಶಾದಸೋ ವರುಣೋ ಮಿತ್ರೋ ಅರ್ಯಮಾ ।
ಸೀದಂತು ಮನುಷೋಯಥಾ ॥ ಋ. ೧–೨೬–೪ ॥

ಅರ್ಥ–ವೈರಿಗಳನ್ನು ನಾಶಮಾಡುವಂಥ ವರುಣ, ಮಿತ್ರ ಮತ್ತು ಅರ್ಯಮಾ ಎಂಬ ದೇವರು ನಮ್ಮ ಈ ಕುಶಾಶನದಲ್ಲಿ ಮನುಷ್ಯರಂತೆಯೇ ಕುಳಿತುಕೊಳ್ಳಲಿ.

ಹೋತೃವು ಬೇರೆ ಬೇರೆ ದೇವತೆಗಳನ್ನು ಆಹ್ವಾನಿಸಿ ಕುಶಾಸನದಲ್ಲಿ ಕುಳಿತು ಕೊಳ್ಳುವಂತೆ ಮತ್ತು ಆಹುತಿಗಳನ್ನು ಸ್ವೀಕರಿಸುವಂತೆ ಪ್ರಾರ್ಥಿಸಿದ ಕೆಲವು ಮಂತ್ರಗಳು ಇಲ್ಲಿ ಮುಂದೆ ಕೊಡಲಾಗುವುವು-

ಇಮಾ ಬ್ರಹ್ಮ ಬ್ರಹ್ಮವಾಹಃ ಕ್ರಿಯಂತ ಆ ಬರ್ಹಿಃ ಸೀದ ।
ವೀಹಿ ಶೂರ ಪುರೋಳಾಶಮಃ ॥ ಋ ೩–೪೧–೩ ॥

ಅರ್ಥ—ಋಕ್‌ಸ್ತೋತ್ರಗಳ ಸ್ವಾಮಿಯಾಗಿರುವ ಹೇ ಇಂದ್ರದೇವನೇ, ಈ ಸ್ತೋತ್ರಗಳು ನಿನಗೆ ಅರ್ಪಿಸಲ್ಪಡುತ್ತಿವೆ. ಹೇ ಶೂರನೇ, ನೀನು ಈ ಕುಶಾಸನದಲ್ಲಿ ಕುಳಿತುಕೋ ಮತ್ತು ಈ ಪುರೋಡಾಶವನ್ನು ಸ್ವೀಕರಿಸು.

ಜುಷಸ್ವಾಗ್ನೇ ಇಳಯಾ ಸಜೋಷಾ
ಯತಮಾನೋ ರಶ್ಮಿಭಿಃ ಸೂರ್ಯಸ್ಯ ।
ಜುಷಸ್ವ ನಃ ಸಮಿಧಂ ಜಾತವೇದ
ಆ ಚ ದೇವಾನ್ ಹವಿರದ್ಯಾಯ ವಕ್ಷಿ ॥ಋ. ೫-೪-೪॥

ಅರ್ಥ—ಹೇ ಅಗ್ನಿದೇವನೇ, ನಿನ್ನ ರಶ್ಮಿಗಳಿಂದ ಸೂರ್ಯನ ರಶ್ಮಿಗಳೊಂದಿಗೆ ಸ್ಪರ್ಧಿಸುವ ನೀನು ಇಳಾದೇವಿಯೊಂದಿಗೆ ಕೂಡಿ ನಮ್ಮ ಸಮಿತ್ತನ್ನು ಮತ್ತು ಹವಿಸ್ಸನ್ನು ಸ್ವೀಕರಿಸು. ಮತ್ತು ಇತರ ದೇವತೆಗಳನ್ನು ಕೂಡ ಹವಿಸ್ಸನ್ನುಣ್ಣುವ ಸಲುವಾಗಿ ಹೊತ್ತುಕೊಂಡು ಬಾ.

ಆ ಭಾರತೀ ಭಾರತೀಭಿಃ ಸಜೋಷಾ
ಇಳಾ ದೇವೈರ್ಮನುಷ್ಯೇಭಿರಗ್ನಿಃ ।
ಸರಸ್ವತೀ ಸಾರಸ್ವತೇಭಿರರ್ವಾಕ್
ತಿಸ್ರೋದೇವೀರ್ಬರ್ಹಿರೇದಂ ಸದಂತು ॥ಋ ೩-೪-೮ ॥

ಅರ್ಥ—ಭಾರತಿ ದೇವಿಯು ತನ್ನ ಸಹೋದರಿಯರೊಂದಿಗೂ, ಇಳಾ ದೇವಿಯು ದೇವರೊಂದಿಗೂ ಅಗ್ನಿದೇವನು ಮನುಷ್ಯರೊಂದಿಗೂ ಸರಸ್ವತಿಯು ಸಾರಸ್ವತರೊಂದಿಗೆ ಅಂದರೆ ಸೂರ್ಯನ ಕಿರಣಗಳೊಂದಿಗೂ ಇಲ್ಲಿಗೆ ಬಂದು ಈ ಕುಶಾಸನದಲ್ಲಿ ಕುಳಿತುಕೊಳ್ಳಲಿ.

ಕೆಲವು ವಿದ್ವಾಂಸರು ಹಿಂದಿನ ಮಂತ್ರದಲ್ಲಿ ಬಂದಿರುವ "ಭಾರತಿ" ಎಂಬವಳು ಭರತಕುಲದವರ ಆರಾಧ್ಯದೇವಿಯೆಂದೂ "ಭಾರತೀಭಿಃ" ಎಂದುದರ ಅಥವನ್ನು ಭಾರತಿದೇವಿಗೆ ಅರ್ಪಿಸಲಾಗುವ ಹವಿಸ್ಸುಗಳೊಂದಿಗೆ ಎಂದೂ "ಸಾರಸ್ವತೇಭಿಃ" ಎಂಬುದರ ಅರ್ಥವನ್ನು ಸರಸ್ವತೀ ದೇವಿಗೆ ಅರ್ಪಿಸಲಾಗುವ ಚರುಗಳೊಂದಿಗೆ ಎಂದೂ ಹೇಳಿದ್ದಾರೆ.

ಮುಂದೆ ಕೊಡಲಾಗುವ ತೈತ್ತಿರೀಯ ಬ್ರಾಹ್ಮಣದೊಳಗಿನ ಅಂಶವು ಭಾರತೀ ಮೊದಲಾದ ದೇವಿಯರ ಪ್ರತಿಮೆಗಳು ಹಿರಣ್ಮಯವುಗಳಾಗಿರುತ್ತಿದ್ದುವೆಂದು ಸೂಚಿಸುತ್ತದೆ.

ಹೋತಾ ಯಕ್ಷತ್ ಪೇಶಸ್ವತೀಃ । ತಿಸ್ರೋದೇವಿ ಹಿರಣ್ಯಯೀಃ । ಭಾರತೀರ್ಬೃಹತೀ ರ್ಮಹೀ ॥ ೨-೬-೧೭-೫ ॥

ಅರ್ಥ ರೂಪವತಿಯರೂ, ಆಕೃತಿಯಲ್ಲಿ ದೊಡ್ಡವರೂ, ಹಿರಣ್ಯದಿಂದ ನಿರ್ಮಿಸಲ್ಪಟ್ಟವರೂ ಆದ ಮೂವರು ದೇವಿಯರನ್ನು ಅಂದರೆ ಭಾರತಿಯನ್ನು, ಇಳೆಯನ್ನು ಮತ್ತು ಸರಸ್ವತಿಯನ್ನು ಹೋತೃವು ಯಜಿಸಲಿ.

ಹಿಂದೆ ಉದಹರಿಸಿದ ಋಗ್ವೇದದ (೩-೪-೮) ಮಂತ್ರದಲ್ಲಿ ಅಗ್ನಿಯನ್ನು ಮನುಷ್ಯರೊಂದಿಗೆ ಬರುವಂತೆ ಪ್ರಾರ್ಥಿಸಿರುವುದರಿಂದ ಅಗ್ನಿಯ ಪ್ರತೀಕದಲ್ಲಿ ಅಗ್ನಿಯೊಂದಿಗೆ ಮನುಷ್ಯರ ಪ್ರತೀಕಗಳೂ ಇರುತ್ತಿದ್ದುವೆಂದು ಸಿದ್ಧವಾಗುತ್ತದೆ. ಮತ್ತು ಋಗ್ವೇದದ ೮-೩೯-೮ನೆಯ ಋಚೆಯಲ್ಲಿ ಅಗ್ನಿಯನ್ನು "ಸಪ್ತಮಾನುಷಃ" ಎಂದಿರುವುದರಿಂದ ಅಗ್ನಿಯ ಪ್ರತೀಕದೊಂದಿಗಿರುವ ಮನುಷ್ಯರ ಸಂಖ್ಯೆಯು ಏಳಾಗಿತ್ತೆಂದು ಮತ್ತು ಸಿಂಧೂ ಕಣಿವೆಯ ಅಗೆತಗಳಲ್ಲಿ ಬೆಳಕಿಗೆ ಬಂದ ಒಂದು ಹಾಲುಗಲ್ಲಿನ ಬಿಲ್ಲೆಯ[1] ಮೇಲೆ ಅಗ್ನಿದೇವನೊಂದಿಗೆ ಏಳ್ವರು ಮನುಷ್ಯರ ಚಿತ್ರಗಳಿರುವುದರಿಂದ ಆ ಬಿಲ್ಲೆಯು ಪ್ರಾಚೀನ ಕಾಲದ ಯಜ್ಞಗಳಲ್ಲಿ ಪ್ರತಿಮಾರೂಪದಿಂದ ಉಪಯೋಗಿಸಲ್ಪಡುತಿದ್ದಿತೆಂದು ಸಿದ್ಧವಾಗುತ್ತದೆ.

ಆರ್ಯಜನರು ಆದಿಕಾಲದಿಂದಲೂ ಮಾಂಸಾಹಾರಿಗಳಾಗಿದ್ದುದರಿಂದ. ಅವರು ಯಜ್ಞಗಳಲ್ಲಿ ದೇವತೆಗಳಿಗೆ ಕೂಡ ತಾವು ತಿನ್ನುತ್ತಿದ್ದಂಥ ಪ್ರಾಣಿಗಳ ಮಾಂಸವನ್ನು ಆಹುತಿಯಾಗಿ ಅರ್ಪಿಸುತಿದ್ದರೆಂದು ವೈದಿಕ ಸಾಹಿತ್ಯದಿಂದ ತಿಳಿದುಬರುತ್ತದೆ.

ಯಸ್ಮಿನ್ನಶ್ವಾಸ ಋಷಭಾಸ ಉಕ್ಷಣೋ
ವಶಾ ಮೇಷಾ ಅವಸೃಷ್ಟಾಸ ಆಹುತಾಃ ।
ಕೀಲಾಲಪೇ ಸೋಮಪೃಷ್ಠಾಯ ವೇಧಸೇ
ಹೃದಾಮತಿಂ ಜನಯೇ ಚಾರುಮಗ್ನಯೇ॥

ಅರ್ಥ–ಯಾವ ಅಗ್ನಿಯಲ್ಲಿ ಮೀಸಲುಮಾಡಿದ ಕುದುರೆಗಳು, ಹೋರಿಗಳು ಎತ್ತುಗಳು, ಗೊಡ್ಡು ಆವುಗಳು, ಮತ್ತು ಕುರಿಗಳು ಆಹುತವಾದುವೋ ಯಾವನು ಕೀಲಾಲವೆಂಬ ರಸವನ್ನು ಕುಡಿಯುವನೋ ಯಾವನ ಬೆನ್ನಿನಲ್ಲಿ ಸೋಮರಸವಿರುತ್ತದೋ, ಯಾವನು ಆರಾಧನೆಗೆ ಯೋಗ್ಯನೋ ಅಂಥ ಅಗ್ನಿದೇವನಿಗಾಗಿ ನಾನು ಹೃದಯದಾಳದಿಂದ ಚೆಲೋಸ್ತುತಿಯನ್ನು ಹುಟ್ಟಿಸುತ್ತೇನೆ.

---

1. ಅಂಥ ಒಂದೇ ಪ್ರಕಾರದ ಹಲವು ಬಿಲ್ಲೆಗಳು ದೊರಕಿವೆ.

ಋಗ್ವೇದದ ಒಂದು ಮಂತ್ರವು ಪ್ರಾಚೀನ ಆರ್ಯಜನರು ಕುದುರೆಯ ಮಾಂಸವನ್ನು ಕೂಡ ತಿನ್ನುತಿದ್ದರೆಂಬುದನ್ನು ಸೂಚಿಸುತ್ತದೆ.

ಯೇ ವಾಜಿನಂ ಪರಿಪಶ್ಯಂತಿ ಪಕ್ವಂ
ಯ ಈಮಾಹುಃ ಸುರಭಿರ್ನಿರ್ಹರೇತಿ ।
ಯೇ ಚಾರ್ವತೋ ಮಾಂಸಭಿಕ್ಷಾಮುಪಾಸತೇ
ಉತೋ ತೇಷಾಮಭಿಗೂರ್ತಿರ್ನ ಇನ್ವತು ॥ ಋ. ೧–೧೬೨-೧೨ ॥

ಅರ್ಥ—ಯಾರು ಕುದುರೆಯು (=ಮಾಂಸವು) ಬೇಯುತ್ತಿರುವುದನ್ನು ಬಹಳ ಆಸಕ್ತಿಯಿಂದ ನೋಡುತ್ತಿರುವರೋ, ಮತ್ತು ಮಾಂಸವು ಬೆಂದು ಸುವಾಸನೆಯನ್ನು ಬೀರುತ್ತಿದೆಯಾದುದರಿಂದ ಅದನ್ನು ಬೆಂಕಿಯಿಂದ ಕೆಳಗಿಳಿಸಲು ಹೇಳುತ್ತಾರೋ ಮತು ಯಾರು (ಆ ಮಾಂಸವ ಆಹುತಿಗಳನ್ನು ದೇವತೆಗಳಿಗೆ ಅರ್ಪಿಸಿದ ತರುವಾಯ ಉಳಿಯುವ) ಆ ಕುದುರೆಯ ಮಾಂಸದ ಭಿಕ್ಷೆಯನ್ನು ಅಂದರೆ ಹಂಚುವಿಕೆಯ ಪಾಲನ್ನು ಅಪೇಕ್ಷಿಸುತ್ತಾರೋ ಅಂಥವರ ಆ ಕೋರಿಕೆಯು ನಮ್ಮ ಕಾರ್ಯಕ್ಕೆ ಸಹಾಯಕವಾಗಲಿ.

ವೇದ ಸಂಹಿತೆಗಳ ಗದ್ಯ ಭಾಗಗಳಾಗಿರುವ ಬ್ರಾಹ್ಮಣಗಳಲ್ಲಿ ಮತ್ತು ಯಜ್ಞವಿಧಿಗಳಿರುವ ಶ್ರೌತ ಸೂತ್ರಗಳಲ್ಲಿ ಯಜ್ಞದ ಸಲುವಾಗಿ ಪಶುಗಳನ್ನು ಆಲಂಭನ ಮಾಡುವ ಅಂದರೆ ಮಂತ್ರಪಠನದೊಂದಿಗೆ ಕೊಲ್ಲುವ ಮತ್ತು ಯಜ್ಞಾನಂತರ ಆ ಪಶುವಿನ ಯಾವ ಯಾವ ಭಾಗವು ಯಾವ ಯಾವ ಋತ್ವಿಜನಿಗೆ ಸಲ್ಲಬೇಕೆಂಬುವರ ವಿವರಗಳಿವೆ. 1

ಹಾಗೆಯೇ ಆರ್ಯಜನರು ತಮ್ಮ ಮನೆಗೆ ಅತಿಥಿಗಳಾಗಿ ಬಂದ ಗೌರವಾನ್ವಿತ ಜನರಿಗೆ ಭೋಜನದಲ್ಲಿ ಗೋಮಾಂಸದ ವ್ಯಂಜನಗಳನ್ನು ಬಡಿಸಿ ಸತ್ಕರಿಸುತಿದ್ದರೆಂದು ಬ್ರಾಹ್ಮಣಗಳಿಂದ ತಿಳಿದು ಬರುತ್ತದೆ.

ಯಾವಂತಿ ಖಲುವೈ ರಾಜಾನಮನುಯಂತಿ ತೇಭ್ಯಃ ಸರ್ವೇಭ್ಯ ಆತಿಥ್ಯಂ ಕ್ರಿಯತೇ ಅಗ್ನಿಂಮಂಥಂತಿ ಸೋಮೇ ರಾಜನ್ಯಾಗತೇ ತಥೈವಾದೋ ಮನುಷ್ಯ ರಾಜೇ ಆಗತೇ ಅನ್ಯಸ್ಮಿನ್ ವಾರ್ಹತ್ಯುಕ್ಷಾಣಂ ವೇಹತುಂ ವಾಕ್ಷದಂತೇ ಏವಮೇವಾಸ್ಮಾ ಏತತ್ ಕ್ಷದಂತೇ: ಯದಗ್ನಿಂ ಮಂಥಂತ್ಯಗ್ನಿರ್ಹಿ ದೇವಾನಾಂಪಶುಃ ॥ ಐ. ಬ್ರಾ. ೧–೧೫ ॥

ಅರ್ಥ ಯಾವನೊಬ್ಬ ಅರಸನು ಅತಿಥಿಯಾಗಿ ಬಂದಾಗ ಅವನಿಗೂ ಅವನೊಂದಿಗೆ ಬಂದಿರುವ ಸಕಲ ಜನರಿಗೂ ಅತಿಥಿ ಸತ್ಕಾರವು ಮಾಡಲಾಗುತ್ತದೆ. ಅವರಿಗಾಗಿ ಅಗ್ನಿಮಂಥನವು ಜರಗುತ್ತದೆ. ಅಂದರೆ ಒಂದು ಚಿಕ್ಕ ಯಜ್ಞವು ಜರ

1 ಐತರೇಯ ಬ್ರಾಹ್ಮಣ ೨-೬।೪-೨೬ಃ ಮತ್ತು ೭-೧

ಗುತ್ತದೆ. ಆಗ ಒಂದು ಎತ್ತಾಗಲೀ ಗೊಡ್ಡು ಆಕಳಾಗಲೀ ಕಡಿಯಲ್ಪಡುತ್ತದೆ. ಹಾಗೆಯೇ ಸೋಮರಾಜನು ಬಂದಾಗಲೂ ಪಾಲಲಾಗುತ್ತದೆ. ಅಂದರೆ ಯಜ್ಞಕ್ಕಾಗಿ ಸೋಮ ಬಳ್ಳಿಯನ್ನು ತಂದ ಜನರ ಆತಿಥ್ಯಕ್ಕಾಗಿಯೂ ಮನುಷ್ಯರಾಜನಿಗಾಗಿ ಮಾಡಿದಂಥ ಆತಿಥ್ಯವು ಮಾಡಲಾಗುತ್ತದೆ.

ಅಥಯಸ್ಮಾದಾತಿಥ್ಯಂ ನಾಮ। ಅತಿಥಿರ್ವಾಏಷಃ ಏತಸ್ಯಾಗಚ್ಛತಿಯತ್ ಸೋಮಃ ಕ್ರೀತಸ್ತಸ್ಮಾ ಏತದ್ಯಥಾ ರಾಜ್ಞೇವಾ ಬ್ರಾಹ್ಮಣಾಯ ವಾ ಮಹೋಕ್ಷಂ ಮಹಾಜಂ ವಾ ಪಚೇತ್ತದಹ ಮಾನುಷಂ ಹವಿರ್ದೇವಾನಾಮೇವಮಸ್ಮಾ ಏತದಾತಿಥ್ಯಂ ಕರೋತಿ ॥ ಶ. ಬ್ರಾ. ೩-೪-೧-೨ ॥

ಅರ್ಥ—ಅದನ್ನು ಏಕೆ ಆತಿಥ್ಯವೆನ್ನುತ್ತಾರೆಂದರೆ ಯಜ್ಞಕ್ಕಾಗಿ ಕೊಂಡು ಕೊಂಡ ಸೋಮನು ಯಜಮಾನನ ಅತಿಥಿಯಾಗಿ ಬರುತ್ತಾನೆ. ಮತ್ತು ಅವನಿಗೆ ಆತಿಥ್ಯವು ಸಲ್ಲುತ್ತದೆ. ಅತಿಥಿಯಾಗಿ ಬಂದ ಒಬ್ಬ ಅರಸನಿಗಾಗಿ ಇಲ್ಲವೇ ಬ್ರಾಹ್ಮಣನಿಗಾಗಿ ಹೇಗೆ ಒಂದು ದೊಡ್ಡ ಎತ್ತನ್ನಾಗಲೀ, ಕೊಬ್ಬಿದ ಹೋತವನ್ನಾಗಲೀ ಕಡಿದು ಅಡುತ್ತಾರೋ ಹಾಗೆಯೇ ಸೋಮನಿಗಾಗಿಯೂ ಅಡುತ್ತಾರೆ. ಅದು ಮನುಷ್ಯನಿಗೆ ಸಲಬೇಕಾದ ಹವಿಸ್ಸಾಗಿದೆ. ಆದುದರಿಂದ ದೇವತೆಗಳಿಗೂ ಅಂಥ ಆತಿಥ್ಯವನ್ನು ಮಾಡುತ್ತಾನೆ.

ಕಲ್ಪಸೂತ್ರಗಳು ಯಜ್ಞಕಾಲದಲ್ಲಿ ಆಲಂಭನ ಮಾಡಿದ ಪಶುವಿನ ಯಾವ ಭಾಗದಿಂದ ತಯಾರಿಸಿದ ಪುರೋಡಾಶವನ್ನು ಯಾವ ದೇವನಿಗೆ ಅರ್ಪಿಸಬೇಕೆಂಬುದನ್ನು ವಿವರಿಸುತ್ತವೆ. ಮತ್ತು ಅವುಗಳೊಳಗಿನ ಧರ್ಮಸೂತ್ರಗಳು ವೈದಿಕ ಜನರು ಯಾವ ಪ್ರಾಣಿಯ ಮಾಂಸವನ್ನು ತಿನ್ನಬಹುದು ಯಾವುದರ ಮಾಂಸವನ್ನು ತಿನ್ನಬಾರದು ಎಂಬುದರ ವಿಧಿಗಳನ್ನು ಮತ್ತು ನಿಷೇಧಗಳನ್ನು ಹೇಳುತ್ತವೆ. ಆ ಸಂಬಂಧವಲ್ಲಿ ಗೌತಮ ಧರ್ಮಸೂತ್ರಗಳು ಮುಂದಿನಂತಿವೆ–

ಪಂಚನಖಾಶ್ಚಾಶಲ್ಯಕಶಶಶ್ಯಾವಿದ್ಗೋಧಾಖಡ್ಗಕಚ್ಛಪಾಃ॥ ೨-೮-೨೭ ॥

ಅರ್ಥ – ಐದು ಉಗುರುಗಳ ಪ್ರಾಣಿಗಳಲ್ಲಿ ಏದನ್ನು ಬಿಟ್ಟು, ಮೊಲದ, ಶ್ಯಾವಿದ್ ಎಂಬ ಹಂದಿಯ, ಉಡದ, ಖಡ್ಗಮೃಗದ ಮತ್ತು ಆಮೆಯ ಮಾಂಸವನ್ನು ತಿನ್ನಬಹುದು.

ಭಕ್ಷ್ಯಾಪ್ರತುದವಿಷ್ಕಿರ ಜಾಲಪಾದಾಃ॥ ೨-೮-೩೫ ॥

ಅರ್ಥ - ಹಕ್ಕಿಗಳಲ್ಲಿ ಕುಕ್ಕಿ ತಿನ್ನುವ ಮತ್ತು ಕಾಲಿನಿಂದ ಕೆದರಿ ಹಕ್ಕಿ ತಿನ್ನುವ ಕಾಡುಕೋಳಿ, ನವಿಲು, ಜಾಲಪಾದಿಗಳಾದ ಬಾತು, ಹಂಸ ಮೊದಲಾದುವುಗಳ ಮಾಂಸವನ್ನು ತಿನ್ನಬಹುದು.

ಮತ್ಸ್ಯಾಶ್ಚಾವಿಕೃತಾಃ॥ ೨-೮-೩೭ ॥

ಅರ್ಥ – ವಿಕೃತರೂಪದವುಗಳನ್ನು ಬಿಟ್ಟು ಜಲೋ ರೂಪದ ಎಲ್ಲ ಮೀನುಗಳನ್ನು ತಿನ್ನಬಹುದು.

ಆಪಸ್ತಂಬ ಋಷಿಯು ತನ್ನ ಧರ್ಮಸೂತ್ರಗಳಲ್ಲಿ ಗೌತಮನು ತಿನ್ನಬಹುದೆಂದು ಹೇಳಿದ ಎಲ್ಲಾ ಬಗೆಯ ಮಾಂಸವನ್ನು ತಿನ್ನಬಹುದೆಂದು ಹೇಳಿದ್ದಾನಲ್ಲದೇ ಗೌತಮ ಧರ್ಮಸೂತ್ರಗಳಲ್ಲಿ ಅಭಕ್ಷ್ಯ ವರ್ಗದಲ್ಲಿ ಸೇರಿಸಿದ ಗೋ ಮಾಂಸವನ್ನು ಭಕ್ಷ್ಯವೆಂದು ಹೇಳಿದ್ದಾನೆ–

ಧೇನ್ವಡು ಹೋರ್ಭಕ್ಷ್ಯಮ್ ॥ ೧-೧೭-೩೦ ॥

ಅಂದರೆ – ಆಕಳಿನ ಮತ್ತು ಎತ್ತಿನ ಮಾಂಸವು ಭಕ್ಷ್ಯವಾಗಿದೆ.

ಸಾಮಾನ್ಯವಾಗಿ ಎಲ್ಲ ವೈದಿಕ ಗೃಹ್ಯಸೂತ್ರಗಳು ಮಗುವಿನ ಅನ್ನಪ್ರಾಶನ ಸಂಸ್ಕಾರದಲ್ಲಿ ಮಗುವಿಗೆ ದಧಿ, ಘೃತ ಮತ್ತು ಮಧು ಮಿಶ್ರಿತ ಅನ್ನದೊಂದಿಗೆ ಬೇರೆ ಬೇರೆ ಕಾಮನೆಗಳ ಪೂರ್ತಿಗಾಗಿ ಬೇರೆ ಬೇರೆ ಹಕ್ಕಿಗಳ ಮತ್ತು ಪ್ರಾಣಿಗಳ ಮಾಂಸವನ್ನು ತಿನ್ನಿಸಬೇಕೆಂದು ಹೇಳುತ್ತವೆ–

ಷಷ್ಠೇಮಾಸ್ಯನ್ನಪ್ರಾಶನಮ್। ಆಜಮನ್ನಾದ್ಯಕಾಮಃ। ತೈತ್ತಿರಂ ಬ್ರಹ್ಮವರ್ಚಸ್ಕಾಮಃ। ಘೃತೌದನಂ ತೇಜಸ್ಕಾಮಃ। ದಧಿ, ಮಧು, ಘೃತಮಿಶ್ರ-ಮನ್ನಂ ಪ್ರಾಶಯೇತ್ ॥ಆಶ್ವ. ಗೃಹ್ಯ. ೧-೧೬ ॥

ಅರ್ಥ – ಮಗುವು ಹುಟ್ಟಿದ ಆರನೆಯ ತಿಂಗಳಲ್ಲಿ ಆದಕ್ಕೆ ಅನ್ನ ಉಣ್ಣಿಸುವ ಸಂಸ್ಕಾರ। ಮಗುವಿಗೆ ತನ್ನ ಜೀವಮಾನ ಕಾಲದಲ್ಲಿ ಪುಷ್ಟಿಕರವಾದ ಆಹಾರಾದಿಗಳು ದೊರೆಯಬೇಕೆಂದು ಬಯಸುವವನು ಆ ಸಮಯದಲ್ಲಿ ಮಗುವಿಗೆ ಮೊಸರು, ಜೇನು ಮತ್ತು ತುಪ್ಪ ಬೆರಸಿದ ಅನ್ನದೊಂದಿಗೆ ಆಡಿನ ಮಾಂಸವನ್ನೂ ಮಗುವು ಬ್ರಹ್ಮವರ್ಚಸ್ಸುಳ್ಳುದಾಗ ಬೇಕೆಂದಿದ್ದರೆ ತಿತ್ತಿರಿ ಹಕ್ಕಿಯ ಮಾಂಸವನ್ನೂ, ತೇಜಸ್ಸುಳ್ಳುದಾಗ ಬೇಕೆಂದಿದ್ದರೆ ತುಪ್ಪದಲ್ಲಿ ಬೇಯಿಸಿದ ಅನ್ನವನ್ನೂ ತಿನ್ನಿಸಬೇಕು.

ಷಷ್ಠೇಮಾಸೇಽನ್ನಪ್ರಾಶನಮ್ ॥ ೧–೧೯–೧ ॥ ಭಾರದ್ವಾಜ್ಯಾಮಾಂ-ಸೇನವಾಕ್ಪ್ರಸಾರಕಾಮಸ್ಯ॥೩॥ ಕಪಿಂಜಲಮಾಂಸೇನಾನ್ನಾದ್ಯಕಾಮಸ್ಯ ॥೮॥ ಮತ್ಸ್ಯೈರ್ಜವನಕಾಮಸ್ಯ ॥ ೯ ॥ ಕೃಕಷಾಯಾ ಆಯುಷ್ ಕಾಮಸ್ಯ ॥೧೦ ॥ ಆಟ್ಯಾಬ್ರಹ್ಮವರ್ಚಸ್ಕಾಮಸ್ಯ॥ಪಾರಸ್ಕರ. ಗೃಹ್ಯ. ೧–೧೯॥

ಅರ್ಥ (೧) ಮಗುವು ಹುಟ್ಟಿದ ಆರನೇ ತಿಂಗಳಲ್ಲಿ ಅನ್ನಪ್ರಾಶನ ಸಂಸ್ಕಾರ, (೨) ಮಗುವು ನಿರರ್ಗಲವಾಗಿ ಮಾತಾಡುವಂಥದ್ದಾಗ ಬೇಕೆಂದಿರುವವನು ಅದಕ್ಕೆ ಭಾರದ್ವಾಜಿ ಹಕ್ಕಿಯ ಮಾಂಸವನ್ನು (೮) ಆಹಾರ ಸಮೃದ್ಧಿಯನ್ನು ಬಯಸುವವನು ಕಪಿಂಜಲ ಹಕ್ಕಿಯ ಮಾಂಸವನ್ನು; (೯) ಚುರುಕುತನವನ್ನು ಬಯಸು

ವವನು ಮೀನಿನ ಮಾಂಸವನ್ನು (೧೦) ಆಯುಸ್ಸನ್ನು ಬಯಸುವವನು ಕೃಕಷಾ ಹಕ್ಕಿಯ ಮಾಂಸವನ್ನು ಮತ್ತು (೧೧) ಬ್ರಹ್ಮವರ್ಚಸ್ಸನ್ನು ಬಯಸುವವನು ಆಟಿ ಹಕ್ಕಿಯ ಮಾಂಸವನ್ನು ತಿನ್ನಿಸಬೇಕು.

ಹಿಂದಿನ ವಿವರಗಳಿಂದ ಆರ್ಯಜನರು ಆದಿಕಾಲದಿಂದಲೇ ಮಾಂಸಾಹಾರಿಗಳಾಗಿದ್ದರೆಂಬುದು ಮತ್ತು ಅವರ ವಂಶಜರಾದ ತರುವಾಯದ ವೈದಿಕ ಬ್ರಾಹ್ಮಣರು ತಮ್ಮ ನಿತ್ಯದ ಆಹಾರದಲ್ಲಿ ಎಲ್ಲ ಬಗೆಯ ಅಂದರೆ ಖೇಚರ, ಭೂಚರ ಮತ್ತು ಜಲಚರ ಪ್ರಾಣಿಗಳ ಮಾಂಸವನ್ನು ತಿನ್ನುತಿದ್ದರೆಂಬುದು ಸಿದ್ಧವಾಗುತ್ತದೆ. ಹಾಗೆ ಅವರು ಮೊದಲಿನಿಂದಲೂ ಮಾಂಸಾಹಾರಿಗಳಾಗಿದ್ದುದರಿಂದಲೇ ಯಜ್ಞಕಾಲದಲ್ಲಿ ಪ್ರಾಣಿಗಳನ್ನು ಕೊಂದು ಅವುಗಳ ಮಾಂಸವನ್ನು ದೇವತೆಗಳಿಗೆ ಆಹುತಿಯಾಗಿ ಅರ್ಪಿಸುತಿದ್ದರೆನ್ನಬೇಕಾಗುತ್ತದೆ. ಹಾಗೆ ಅವರು ಯಜ್ಞಗಳಲ್ಲಿ ದೇವತೆಗಳಿಗೆ ಪ್ರಾಣಿಗಳ ಮಾಂಸವನ್ನು ಆಹುತಿಯಾಗಿ ಅರ್ಪಿಸುತಿದ್ದುದರಿಂದ ಆ ಕಾರ್ಯಕ್ಕೊಂದು ಧಾರ್ಮಿಕ ರೂಪವು ಪ್ರಾಪ್ತವಾಗಿತ್ತು. ಮತ್ತು ಅದು ಪ್ರಾಚೀನ ಕಾಲದಿಂದ ಸಾಗಿ ಬಂದ ಧರ್ಮವಾಗಿದ್ದುದರಿಂದ ಜನರು ಆ ಧರ್ಮವನ್ನು ತಪ್ಪದೇ ಪಾಲಿಸುವುದು ತಮ್ಮ ಕರ್ತವ್ಯವೆಂದು ಭಾವಿಸುತಿದ್ದರು. ಹಾಗಿದ್ದುದರಿಂದಲೇ ಧರ್ಮಸೂತ್ರಗಳು ಮತ್ತು ಮೀಮಾಂಸಾ ಶಾಸ್ತ್ರವು ಯಜ್ಞಗಳನ್ನು ಕರ್ತವ್ಯ ಕರ್ಮಗಳೆಂದು ವಿಧಿಸುತ್ತಿವೆ.

ಅಷ್ಟುಮಾತ್ರವಲ್ಲದೇ ಪ್ರಾಚೀನ ಕಾಲದ ಆರ್ಯಜನರು ಪ್ರಾಣಿಗಳನ್ನು ಕೊಲ್ಲುವುದು ಹಿಂಸೆಯೆಂದಾಗಲೀ, ಪಾಪವೆಂದಾಗಲೀ ತಿಳಿಯುತ್ತಿರಲಿಲ್ಲ. ಮತ್ತು ಆಗ ಪಾಪ ಮತ್ತು ಪುಣ್ಯ ಎಂಬ ಶಬ್ದಗಳಿಗೆ ಈಗಿನ ಅರ್ಥಗಳೂ ಇರಲಿಲ್ಲ. ಅಂದರೆ ಆ ಕಾಲದಲ್ಲಿ ಈಗಿನ ಅರ್ಥದ ಪಾಪ ಪುಣ್ಯಗಳ ವಿವೇಚನೆಯಾಗಲೀ, ಹಿಂಸೆಯ ಕಲ್ಪನೆಯಾಗಲೀ ಇರಲಿಲ್ಲ. ಮತ್ತು ಅವರು ಯಾವುದೊಂದು ಪ್ರಾಣಿಯನ್ನು ಪೂಜ್ಯವೆಂದಾಗಲೀ, ಅವಧ್ಯವೆಂದಾಗಲೀ ಭಾವಿಸುತ್ತಿರಲಿಲ್ಲ. ಪಾಪ–ಪುಣ್ಯ ಮತ್ತು ಹಿಂಸೆ ಎಂಬ ವಿವೇಚನೆಯು ಭಾರತ ವರ್ಷದಲ್ಲಿ ಅಹಿಂಸಾ ತತ್ವದ ಪ್ರಚಾರದೊಂದಿಗೆ ಪ್ರಚಲಿತವಾಯಿತೆನ್ನಬಹುದು. ಹೇಗಿದ್ದರೂ ಯಜ್ಞಗಳು ಪ್ರಚಲಿತವಿದ್ದಷ್ಟು ಕಾಲ ಬ್ರಾಹ್ಮಣರಲ್ಲಿ ಮಾಂಸಭಕ್ಷಣವು ನಿತ್ಯವೂ ಸಾಮಾನ್ಯವೂ ಆಗಿದ್ದಿತು, ಆದುದರಿಂದಲೇ ಉತ್ತರ ಭಾರತದಲ್ಲಿ ಜೈನಧರ್ಮದ ಪ್ರಭಾವವಿರುವ ಪ್ರಾಂತಗಳನ್ನು ಬಿಟ್ಟರೆ ಇತರ ಪ್ರಾಂತಗಳ ಅಧಿಕಾಂಶ ಬ್ರಾಹ್ಮಣರು ಇಂದಿಗೂ ಮೀನು, ಮೇಲ ಇತ್ಯಾದಿಗಳ ಮಾಂಸವನ್ನು ತಿನ್ನುತ್ತಾರೆ. ಬಂಗಾಲದ ಮತ್ತು ಬಿಹಾರದ ಬ್ರಾಹ್ಮಣರಲ್ಲಾದರೋ ಮೀನು ನಿತ್ಯದ ಆಹಾರದಲ್ಲಿ ಸೇರಿದೆ.

ಮೊತ್ತಮೊದಲು ಗೋತ್ರಗಳನ್ನು ಕಟ್ಟಿ ನೆಲಸಿದ ಋಷಿಗಳು ಯಾರು? ಮತ್ತು ಎಷ್ಟು ಮಂದಿ? ಎಂಬುವನ್ನು ತಿಳಿಸುವ ಸರಿಯಾದ ವಿವರಗಳು ದೊರೆಯುವುದಿಲ್ಲ. ಆದರೆ ಮೂಲ ಗೋತ್ರಗಳಲ್ಲಿ ನೆಲಸಿದ ಋಷಿಗಳ ಸಂತತಿಯು ಅಭಿವೃದ್ಧಿ

ಯಾಗಿ ಎಲ್ಲ ಜನರ ನಿವಾಸಕ್ಕೆ ಗೋತ್ರದೊಳಗಿನ ಸ್ಥಳಾವಕಾಶವು ಸಾಲದಾದಾಗ ಆ ಗೋತ್ರದೊಳಗಿನ ಕೆಲವು ಜನರು ತಮ್ಮ ಪಾಲಿಗೆ ಬಂದ ಗೋವುಗಳೊಂದಿಗೆ ಆ ಗೋತ್ರದಿಂದ ಹೊರಗೆ ಹೋಗಿ ಹೊಸ ಗೋತ್ರಗಳನ್ನು ಕಟ್ಟಿ ನೆಲಸಿದುದರಿಂದ ಕಾಲಕ್ರಮೇಣ ಗೋತ್ರಗಳ ಸಂಖ್ಯೆಯು ಸಾವಿರಕ್ಕೂ ಮಿಕ್ಕಿದ್ದಿತೆಂಬುದರಲ್ಲಿ ಸಂದೇಹವಿಲ್ಲ, ಅಂಥ ಗೋತ್ರಗಳ ಹೆಸರುಗಳಿರುವ ಪಟ್ಟಿಗಳು ಕೆಲವು ಶ್ರೌತಸೂತ್ರ ಗಳಲ್ಲಿ "ಪ್ರವರ ಸೂತ್ರಗಳು" ಎಂಬ ಹೆಸರಿನಲ್ಲಿ ಬಂದಿವೆ. ಅವುಗಳಲ್ಲಿ "ಬೋಧಾಯ ನೀಯ ಪ್ರವರ ಸೂತ್ರಗಳು ಕಟ್ಟಕಡೆಯವುಗಳಾಗಿದ್ದು ವಿಸ್ತಾರವಾದವುಗಳೂ ಆಗಿವೆ, ಅವುಗಳಲ್ಲಿ ಸಾಧಾರಣ ಎಂಟು ನೂರ ಹತ್ತು ಗೋತ್ರಗಳ ಹೆಸರು ಗಳಿದ್ದು ಆ ಎಲ್ಲ ಗೋತ್ರಗಳು ನಾಲ್ವತ್ತೊಂಭತ್ತು ಪ್ರವರಗಳಲ್ಲಿ ಹಂಚಲ್ಪಟ್ಟಿವೆ.

ಆ ಸೂತ್ರಗಳಲ್ಲಿ ಗೋತ್ರಗಳೆಂದರೆ ಸಪ್ತಋಷಿಗಳ ಮತ್ತು ಎಂಟನೆಯವ ನಾದ ಅಗಸ್ತ್ಯನ ಸಂತತಿ ಎಂದು ಹೇಳಿದೆ. ಮತ್ತು ವಿಶ್ವಾಮಿತ್ರ, ಜಮದಗ್ನಿ, ಭರದ್ವಾಜ, ಗೌತಮ, ಅತ್ರಿ, ವಸಿಷ್ಠ ಕಶ್ಯಪ ಎಂಬವರು ಆ ಸಪ್ತಋಷಿಗಳು ಎಂದು ಹೇಳಿದೆ, ಸಪ್ತಋಷಿಗಳ ಹೆಸರುಗಳು ಶತಪಥ ಬ್ರಾಹ್ಮಣದ ೧೪–೫–೨–೬ ರಲ್ಲಿ ಬಂದಿವೆ. ಆದರೆ ಅಲ್ಲಿ ಗೌತಮ ಎಂಬುದರ ಬದಲಿಗೆ ಗೋತಮ ಎಂಬ ಶಬ್ದವಿದೆ. ಆದರೆ ಗೋತ್ರ ಎಂಬುದರ ಅರ್ಥವು ಸಂತತಿ ಎಂಬುದಲ್ಲ, ಮತ್ತು ಹಿಂದೆ ಹೆಸರಿಸಿದ ಎಲ್ಲ ಋಷಿಗಳನ್ನು ಗೋತ್ರಗಳನ್ನು ಕಟ್ಟಿದ ಆದಿಪುರುಷರೆನ್ನ ಲಾಗುವುದಿಲ್ಲ. ಏಕೆಂದರೆ ಋಗ್ವೇದದ ಮೊದಲನೆಯ ಮಂಡಲದ ೭೮ನೆಯ ಸೂಕ್ತದೊಳಗಿನ ಉಲ್ಲೇಖಗಳಿಂದ ಗೋತಮಕುಲದ ಪೂರ್ವಜನು ರಹೂಗಣ ಎಂಬವನೆಂದು ತಿಳಿಯಬೇಕಾಗುತ್ತದೆ. ಮತ್ತು ಎಂಭತ್ತೊಂಭತ್ತನೆಯ ಸೂಕ್ತದ ೮ನೆಯ ಋಚೆಯಲ್ಲಿ ಅಗಸ್ತ್ಯನು ತನ್ನನ್ನು **"ಮಾನಸ್ಯ ಸೂನುಃ"** ಅಂದರೆ "ಮಾನನ ಪುತ್ರ" ಎಂದು ಹೇಳಿಕೊಂಡಿದ್ದಾನೆ. ಹಾಗೆಯೇ ಮೂರನೆಯ ಮಂಡಲ ಮೂವತ್ತಮೂರನೆಯ ಸೂಕ್ತದ ೫ನೆಯ ಋಚೆಯಲ್ಲಿ ವಿಶ್ವಾಮಿತ್ರನು ತನ್ನನ್ನು **"ಕುಶಿಕಸ್ಯಸೂನುಃ"** ಅಂದರ "ಕುಶಿಕನಪುತ್ರ" ಅಂದಿದ್ದಾನೆ, ಮತ್ತು ಜಮದಗ್ನಿಯು ಭೃಗುಕುಲದವನಾಗಿದ್ದಾನೆ. ಆದುದರಿಂದ ಅಗಸ್ತ್ಯನನ್ನು, ಗೋತಮನನ್ನು, ಜಮದಗ್ನಿಯನ್ನು ಮತ್ತು ವಿಶ್ವಾಮಿತ್ರನನ್ನು ಮೂಲಗೋತ್ರ ನಿರ್ಮಾಪಕರೆನ್ನ ಲಾಗುವುದಿಲ್ಲ, ಮತ್ತು ಕಶ್ಯಪನು ಬಹಳ ಅರ್ವಾಚೀನನಾಗಿದ್ದಾನೆ, ಅಂದರೆ ಆ ಎಂಟು ಋಷಿಗಳನ್ನು ಒಂದೇ ಕಾಲದವರೆನ್ನಲಾಗುವುದಿಲ್ಲ.

ಅಷ್ಟೇ ಅಲ್ಲ ಆ ಸಪ್ತಋಷಿಗಳ ಕಲ್ಪನೆಯೇ ಬಹಳ ಅರ್ವಾಚೀನವಾದು ದಾಗಿದೆ. ಅಂದರೆ ಈಗ ಯಾವ ನಕ್ಷತ್ರಪುಂಜವನ್ನು "ಸಪ್ತರ್ಷಿಮಂಡಲ"ವೆಂದು ಕರೆಯಲಾಗುತ್ತಿದೆಯೋ ಅದರ ಪ್ರಾಚೀನ ಹೆಸರು "ಋಕ್ಷಾಃ" ಅಂದರೆ "ಕರಡಿಗಳು" ಎಂದಿತ್ತು. ಮತ್ತು ಪಾಶ್ಚಾತ್ಯ ಆರ್ಯಪಂಗಡಗಳಲ್ಲಿ ಈಗಲೂ ಆ ನಕ್ಷತ್ರಪುಂಜದ

ಹೆಸರು "Ursa Major" ಅಥವಾ "Great Bear" ಎಂದಿದೆ. ಋಗ್ವೇದ ದಲ್ಲಿ "ಸಪ್ತಋಷಯಃ" ಎಂಬ ಶಬ್ದದ ಉಲ್ಲೇಖವು ಸಾಧಾರಣ ಮೂರು ಸರ್ತಿ ಬಂದಿದೆಯಾದರೂ ಆ ಸಪ್ತಋಷಿಗಳು ಯಾರು ಎಂಬ ಅಥವಾ ಅವರ ಹೆಸರು ಗಳಾವುವು ಎಂಬುದನ್ನು ಎಲ್ಲಿಯೂ ಹೇಳಿಲ್ಲ. ಆದುದರಿಂದ ಶತಪಥ ಬ್ರಾಹ್ಮಣದಲ್ಲಿ ಬಂದಿರುವ ಹೆಸರುಗಳೇ ಋಗ್ವೇದದೊಳಗಿನ ಸಪ್ತಋಷಿಗಳ ಹೆಸರುಗಳಾಗಿದ್ದು ವೆನ್ನಲಾಗುವುದಿಲ್ಲ, ಏಕೆಂದರೆ ಋಗ್ವೇದ ಮಂತ್ರಗಳ ಪ್ರಕಾರ ಅಂಗಿರಸ್, ಅತ್ರಿ, ಕಕ್ಷಿವತ್, ಕಣ್ವ, ಭೃಗು, ಮಾತರಿಶ್ವನ್ ಮೊದಲಾದ ಮತ್ತು ಬೇರೆ ಹಲವು ಋಷಿಗಳು ಅತ್ಯಂತ ಪ್ರಾಚೀನರಾಗಿದ್ದಾರೆ. ಮಾತ್ರವಲ್ಲ ಅವರ ಹಿರಿಯರು ಯಾರೆಂದು ಕೂಡ ತಿಳಿಯುವುದಿಲ್ಲ, ಆದುದರಿಂದ ಮೂಲ ಗೋತ್ರ ನಿರ್ಮಾಪಕರು ಯಾರು ಎಂದು ನಿರ್ಧರಿಸಲು ಸಾಧ್ಯವಿಲ್ಲ, ಅಂದರೆ—ಆರ್ಯಜನರ ಮೂಲ ಪುರುಷರಾರು ಎಂದು ನಿಖರವಾಗಿ ಹೇಳುವುದು ಸಾಧ್ಯವಿಲ್ಲ. ಅರ್ಥಾತ್ ಆ ಎಲ್ಲ ವಿವರಗಳು ಭೂತಕಾಲದ ಗರ್ಭದಲ್ಲಿ ಅಡಗಿವೆ.

ಆರ್ಯಜನರಲ್ಲಿ ಕಾಲಕ್ರಮೇಣ ಹಲವು ಗೋತ್ರಗಳು ಅಥವಾ ಪಂಗಡಗಳು ಹುಟ್ಟಿದ್ದುವಾದರೂ ಅವರು ಭಾರತ ವರ್ಷದಲ್ಲಿ ನೆಲಸಿದ ಬಹುಕಾಲದ ತನಕ ಅವರಲ್ಲಿ ವರ್ಣಭೇದವಾಗಲೀ ಮೇಲು ಕೀಳೆಂಬ ಭಾವನೆಯಾಗಲೀ ತಲೆದೋರಿರಲಿಲ್ಲ, ಅಂದರೆ ಬ್ರಾಹ್ಮಣ, ರಾಜನ್ಯ, ವೈಶ್ಯ ಮತ್ತು ಶೂದ್ರ ಎಂಬ ನಾಲ್ಕು ವರ್ಣಗಳು ಬಹಳ ಅರ್ವಾಚೀನ ಕಾಲದಲ್ಲಿ ಪ್ರಚಲಿತವಾದವುಗಳಾಗಿವೆ. ಆರ್ಯಜನರ ಎಲ್ಲ ಪಂಗಡಗಳ ಮತ್ತು ಅವರ ಸಂಪರ್ಕದೊಳಗೆ ಬಂದಿದ್ದ ಅನ್ಯ ಜನಾಂಗಗಳ ಆಹಾರ–ಪಾನೀಯಗಳು ಮತ್ತು ಕೆಲವು ಆಚಾರ–ವ್ಯವಹಾರಗಳು ಸಮಾನವಾಗಿದ್ದುದರಿಂದ ಆರ್ಯವರ್ಗದ ಜನರು ಅನ್ಯವರ್ಗದ ಜನರೊಂದಿಗೆ ಬೆರೆಯಲು ಇಲ್ಲವೇ ಅನ್ಯವರ್ಗದ ಜನರನ್ನು ತಮ್ಮಲ್ಲಿ ಸೇರಿಸಿಕೊಳ್ಳಲು ಯಾವ ಅಭ್ಯಂತರವೂ ಇರಲಿಲ್ಲ. ಆದುದ ರಿಂದಲೇ ಅವರು ಭಾರತ ವರ್ಷದ ಮೂಲ ನಿವಾಸಿಗಳನ್ನು ತಮ್ಮ ವೈದಿಕ ಧರ್ಮದ ಅಳವಿನೊಳಗೆ ತರಲು ಶಕ್ತರಾಗಿದ್ದರು. ಆದರೆ ಅವರು ಭಾರತ ವರ್ಷದಲ್ಲಿ ನೆಲಸಿದ ಬಹುಕಾಲ ತರುವಾಯ ಅಲ್ಲಿನ ಜನರಲ್ಲಿ ಮೊದಲಿನಿಂದ ಪ್ರಚಲಿತವಿದ್ದ ಜಾತಿ ಭೇದದಿಂದಾಗಿ ಅವರಲ್ಲಿಯೂ ಜಾತಿಭೇದವು ತಲೆದೋರಿತೆನ್ನಬಹುದು. ಅಂದರೆ ಅವರಲ್ಲಿ ಪ್ರಾಚೀನ ಕಾಲದಿಂದ ಹಲವು ವೃತ್ತಿಗಳ ಜನರಿದ್ದರೂ-ಜಾತಿಗಳಿರಲಿಲ್ಲ. ಎಲ್ಲ ಜನರು ಎಲ್ಲ ವೃತ್ತಿಗಳನ್ನು ಮಾಡಬಹುದಿತ್ತು.

ಕೆಲವರು ಆವೆಮಣ್ಣಿನಿಂದ ಗಡಿಗೆಗಳನ್ನು ಮತ್ತು ಇಟ್ಟಿಗೆಗಳನ್ನು ನಿರ್ಮಿಸಿದರೆ ಬೇರೆ ಕೆಲವರು ಗಾರೆಯಿಂದ ಕುಂಭಗಳನ್ನು, ಹೂಜಿಗಳನ್ನು ಮತ್ತು ಪರಾತಗಳನ್ನು ನಿರ್ಮಿಸುತಿದ್ದರು. ಕೆಲವರು ಬಗೆಬಗೆಯ ಉಪಕರಣಗಳನ್ನು ನಿರ್ಮಿಸಿದರೆ ಬೇರೆ ಕೆಲವರು ಆ ಉಪಕರಣಗಳ ನೆರವಿನಿಂದ ಚಕ್ರಗಳನ್ನು, ರಥ

ಗಳನ್ನು, ನೊಗಗಳನ್ನು, ನೇಗಿಲುಗಳನ್ನು, ಪುಗ್ಗಗಳನ್ನು, ಮರಿಗೆಗಳನ್ನು, ತೊಟ್ಟಿಗಳನ್ನು ಮತ್ತು ಗಾಣಗಳನ್ನು ನಿರ್ಮಿಸುತಿದ್ದರು, ಕೆಲವರು ವೈದ್ಯಕದಲ್ಲಿ ಬೇರೆ ಕೆಲವರು ಗಣಿತದಲ್ಲಿ ಇನ್ನು ಕೆಲವರು ಜ್ಯೋತಿಷದಲ್ಲಿ ಬೇರೆ ಕೆಲವರು. ಗಾಯನ, ನರ್ತನ, ವಾದನ. ಅಭಿನಯ ಮೊದಲಾದ ಕಲೆಗಳಲ್ಲಿಯೂ, ಶಿಲ್ಪ, ವಾಸ್ತು, ಮೊದಲಾದ ಕುಶಲ ಕಲೆಗಳಲ್ಲಿಯೂ ನೈಪುಣ್ಯವನ್ನು ಸಾಧಿಸುತಿದ್ದರು. ಕೆಲವರು ಚಿತ್ರಗಳನ್ನೂ, ಪ್ರತಿಮೆಗಳನ್ನೂ ನಿರ್ಮಿಸುತಿದ್ದರು, ಮತ್ತು ಯಜ್ಞಸಮಾರಂಭಗಳಲ್ಲಿ ಆ ಎಲ್ಲ ವೃತ್ತಿಕಾರರ ಸಹಕಾರವು ಬೇಕಾಗುತಿತ್ತು. ಆದುದರಿಂದ ಎಲ್ಲ ವೃತ್ತಿಕಾರರು ಯಜ್ಞ ಸಮಾರಂಭಗಳಲ್ಲಿ ಭಾಗವಹಿಸಿ ತಮ್ಮ ನೈಪುಣ್ಯವನ್ನು ಪ್ರದರ್ಶಿಸುತಿದ್ದರು. ಅರ್ಥಾತ್ ಆಗಿನ ಕಾಲದಲ್ಲಿ ಯಜ್ಞಗಳು ಆರ್ಯಜನರ ಎಲ್ಲ ಬಗೆಯ ಸಾಂಸ್ಕೃತಿಕ ಕಾರ್ಯಕ್ರಮಗಳ ಕೇಂದ್ರಗಳಾಗಿರುತಿದ್ದುವು. ಮಾತ್ರವಲ್ಲ ಕೆಲವು ಕಾರ್ಯಕ್ರಮಗಳು ಯಜ್ಞದ ಅಂಗಗಳೇ ಆಗಿದ್ದುವು.

ವ್ಯವಸ್ಥಿತವಾದ ಯಜ್ಞಸಂಸ್ಥೆಯು ಸ್ಥಾಪಿತವಾದ ತರುವಾಯ ಅವರು ತಮ್ಮಲ್ಲಿ ಪ್ರಚಲಿತವಿದ್ದ ಮನೋರಂಜಕ ಕ್ರೀಡೆಗಳನ್ನು ಮತ್ತು ಗಾಯನ, ನರ್ತನ, ವಾದನ, ಅಭಿನಯ ಮೊದಲಾದ ಕಲೆಗಳನ್ನು ಯಜ್ಞದ ಅಂಗಗಳನ್ನಾಗಿ ಸೇರಿಸಿಕೊಂಡಿದ್ದರು. ಅಂದರೆ ರಾಜಸೂಯ ಯಾಗದ ಪ್ರಾರಂಭದಲ್ಲಿ ರಾಜನು ತನ್ನ ತಮ್ಮನೊಂದಿಗೆ ಮತ್ತು ಪರಿವಾರದ ಕೆಲವು ಜನರೊಂದಿಗೆ ಅಕ್ಷರಾಜ, ಕೃತ, ತ್ರೇತಾ, ದ್ವಾಪರ, ಮತ್ತು ಕಲಿ ಎಂಬ ಹೆಸರಿನ ಐದು ಲೆತ್ತಗಳಿಂದ ದ್ಯೂತವಾಡಿ ಒಂದು ಆಕಳನ್ನು ಯಜ್ಞಪಶುವಾಗಿ ಗೆದ್ದುಕೊಳ್ಳಬೇಕಾಗಿತ್ತು. ಹಾಗೆಯೇ ವಾಜಪೇಯ ಯಜ್ಞದ ಯಜಮಾನನು ಮತ್ತು ರಾಜಸೂಯ ಯಜ್ಞದ ಯಜಮಾನನಾದ ರಾಜನು ಹದಿನೇಳು ಮಂದಿ ರಥಿಕರೊಂದಿಗೆ ಕುದುರೆಗಳನ್ನು ಹೂಡಿದ ರಥಗಳ ಓಟದಲ್ಲಿ ಜಯಿಸಬೇಕಾಗುತಿತ್ತು. ವಾಜಪೇಯ ಯಜ್ಞದಲ್ಲಿ ಸಾಮಗಳನ್ನು ಹಾಡುವಾಗ ಒಂದೊಂದಾಗಿ ಹದಿನೇಳು ದುಂದುಭಿಗಳನ್ನು (ದೋಲುಗಳನು) ಬಾರಿಸಬೇಕಾಗಿತ್ತು. ಅಶ್ವಮೇಧದಲ್ಲಿ ಇಬ್ಬರು ಬ್ರಾಹ್ಮಣರು ವೀಣೆಯನ್ನು ಬಾರಿಸುತ್ತ ಅರಸನ ಯಶೋಗಾನವನ್ನು ಹಾಡಬೇಕಾಗಿತ್ತು. ಋಗ್ವೇದದ ೧-೯೨-೪ರಲ್ಲಿ "ನೃತೂ" ಅಂದರೆ "ನರ್ತಕಿ" ಎಂಬ ಶಬ್ದದ ಮತ್ತು ೧೦-೧೮-೩ರಲ್ಲಿ "ನೃತಿ" ಅಂದರೆ ನೃತ್ಯ" ಎಂಬ ಶಬ್ದದ ಉಲ್ಲೇಖಗಳಿರುವುದರಿಂದ ಕೆಲವು ಸಮಾರಂಭಗಳಲ್ಲಿ ನರ್ತನ ಗಾಯನಗಳೂ ಸೇರಿದ್ದುವೆಂದು ತಿಳಿಯಬಹುದಾಗಿದೆ. ಹಾಗೆಯೇ ಋಗ್ವೇದದ ೧-೧೦-೧ರಲ್ಲಿ "ಗಾಯಂತಿ ತ್ವಾ ಗಾಯತ್ರಿಣಃ" ಅಂದರೆ "ಗಾಯಕರು ನಿನ್ನ ಸ್ತುತಿಯನ್ನು ಹಾಡುತ್ತಾರೆ" ಎಂಬ ಪ್ರಯೋಗವಿರುವುದರಿಂದ ಋತ್ವಿಜರಾಗುವ ಕೆಲವರಿಗೆ ಗಾಯನ ಕಲೆಯು ತಿಳಿದಿರಬೇಕಾಗಿದ್ದಿತೆಂಬುದು ಸಿದ್ಧವಾಗುತ್ತದೆ.

ಸಂಕ್ಷಿಪ್ತವಾಗಿ ಹೇಳುವುದಾದರೆ ಆರ್ಯಜನರು ಅಗ್ನಿಯನ್ನು ಕಂಡುಕೊಂಡು ಅವನನ್ನು ಉಪಯೋಗಿಸ ತೊಡಗಿದ ತರುವಾಯವೇ ಅವರು ಆವೆ ಮಣ್ಣಿನಿಂದ ಮಡಿಕೆ–ಕುಡಿಕೆಗಳನ್ನೂ ಇಟ್ಟಿಗೆಗಳನ್ನೂ ನಿರ್ಮಿಸತೊಡಗಿದ್ದರು. ಚಪ್ಪರಗಳನ್ನು ತೊರೆದು ಇಟ್ಟಿಗೆಗಳಿಂದ ದೃಢವಾದ ಮನೆಗಳನ್ನು ಕಟ್ಟಿ ವಾಸಿಸತೊಡಗಿದ್ದರು, ಆಡು, ಕುರಿ, ಆಕಳು, ಎಮ್ಮೆ, ಕುದುರೆ ಮೊದಲಾದ ಪ್ರಾಣಿಗಳನ್ನು ಪಳಗಿಸಿ ಸಾಕತೊಡಗಿದ್ದರು. ತಾಮ್ರದಿಂದ ಮತ್ತು ಹಿತ್ತಾಳಿಯಿಂದ ಬೇಕುಬೇಕಾದ ಉಪಕರಣಗಳನ್ನು ನಿರ್ಮಿಸಿ, ರಾಟೆ, ಮಗ್ಗ, ಗಾಣ, ಬೀಸುಗಲ್ಲು ಚಕ್ರ ಮೊದಲಾದ ಯಂತ್ರಗಳನ್ನೂ, ಗಾಡಿ, ರಥ, ಮೊದಲಾದ ವಾಹನಗಳನ್ನೂ, ನೇಗಿಲು, ನೊಗ, ಒನಕೆ, ಒರಳು ಮೊದಲಾದ ಕೃಷಿಯ ಸಲಕರಣೆಗಳನ್ನೂ ನಿರ್ಮಿಸಿದ್ದರು. ಭೂಮಿಯನ್ನು ಉತ್ತು, ಬೀಜವನ್ನು ಬಿತ್ತಿ ಗೋದಿ, ಜವೆಗೋದಿ, ಭತ್ತ, ಎಳ್ಳು, ಮೆಣಸು ಮೊದಲಾದುವುಗಳನ್ನು ಬೆಳಿಸತೊಡಗಿದ್ದರು. ಕುರಿಯ ತುಪ್ಪಟದಿಂದ ಮತ್ತು ಅರಳೆಯಿಂದ ನೂಲನ್ನು ನೂತು ವಸ್ತ್ರವನ್ನು ನೇಯತೊಡಗಿದ್ದರು. ಮತ್ತು ವಸ್ತ್ರದಿಂದ ಅಂಗಿ, ಕವಚ, ಟೋಪಿ ಮೊದಲಾದುವುಗಳನ್ನು ಹೊಲಿಯತೊಡಗಿದ್ದರು. ನದಿಗಳನ್ನು ದಾಟಲು ದೋಣಿಗಳನ್ನೂ, ಸರಕುಗಳನ್ನು ಸಾಗಿಸಲು ಹಡಗುಗಳನ್ನೂ ಕಟ್ಟಿದ್ದರು. ನಗರಗಳನ್ನು ಕಟ್ಟಿ ನಾಗರಿಕರಾಗಿದ್ದರು. ರಾಜ್ಯಗಳನ್ನು ಸ್ಥಾಪಿಸಿ ಆಳತೊಡಗಿದ್ದರು. ಅಂದರೆ ಆರ್ಯಜನರು ಅಗ್ನಿಯಿಂದಲೇ ಸಕಲ ಬಗೆಯ ಉನ್ನತಿಯನ್ನೂ ಪ್ರಗತಿಯನ್ನೂ ಸಾಧಿಸಿದ್ದರು. ಮತ್ತು ಅಗ್ನಿಯಿಂದಲೇ ಅವರ ಇಡೀ ಸಂಸ್ಕೃತಿಯು ರೂಪುಗೊಂಡಿತ್ತು. ಆರ್ಯವರ್ಗದ ಎಲ್ಲ ಭಾಷೆಗಳಲ್ಲಿ ಹಿಂದೆ ವಿವರಿಸಿದ ವಿಷಯಗಳಿಗಾಗಿ ಉಪಯೋಗಿಸಲ್ಪಡುವ ಅಧಿಕಾಂಶ ಶಬ್ದಗಳು ಒಂದೇ ಮೂಲ ಶಬ್ದದ ರೂಪಾಂತರಗಳಾಗಿರುವುದರಿಂದ ಆರ್ಯಜನರ ಎಲ್ಲ ಪಂಗಡಗಳು ಒಂದೇ ಪ್ರದೇಶದಲ್ಲಿ ನೆಲಸಿರುವಾಗಲೇ ಅವರೆಲ್ಲರು ಆ ಎಲ್ಲ ವಿಷಯಗಳನ್ನು ತಿಳಿದಿದ್ದರೆಂದು ಸ್ಪಷ್ಟವಾಗಿ ಸಿದ್ಧವಾಗುತ್ತದೆ,[1]

---

1. It can be proved by the evidence of language, that before their separation the Aryans led the life of agricultural nomads—a life as Tacitus describes that of Germans. They knew the arts of ploughing, of making roads, of building ships, of weaving and sewing, of erecting houses, they had counted at least as far as one hundred They had domesticated the most important animals, the cow, the horse, the sheep, the dog, they were aquainted with the most useful metals and armed with hatchets whether for peaceful or warlike purposes They had recognised bonds of blood, and laws of marriage, they followed their leaders and kings and distinction between right and wrong

ಅರ್ಥಾತ್ ವೇದಮಂತ್ರಗಳಿಂದ ತಿಳಿದು ಬರುವಂತೆ ಅಗ್ನಿಯು ಆರ್ಯ ಜನರ ಪ್ರಧಾನ ದೇವನಾಗಿದ್ದಾನೆ. ಮತ್ತು ಅಗ್ನಿಯ ಆರಾಧನೆಯು ವೈದಿಕ ಧರ್ಮದ ಮುಖ್ಯ ಲಕ್ಷಣವೂ ಪ್ರಧಾನ ಅಂಗವೂ ಆಗಿದೆ. ಆದುದರಿಂದಲೇ ಋಗ್ವೇದವು **"ಓಮ್। ಅಗ್ನಿಮೀಳೇ"** ಎಂಬುದಾಗಿ ಅಗ್ನಿಯ ಸ್ತುತಿಯಿಂದ ಪ್ರಾರಂಭವಾಗಿದೆ. ಋಗ್ವೇದದಲ್ಲಿ ಅಶ್ವಿನೌ, ಆಪಃ. ಉಷಾ, ಋಭು, ಸರಸ್ವತೀ, ಸೂರ್ಯ, ಸೋಮ ಮೊದಲಾದ ಇನ್ನೂ ಹಲವು ದೇವತೆಗಳ ಸ್ತುತಿಗಳಿದ್ದರೂ ಋಗ್ವೇದದಲ್ಲಿರುವ ಒಟ್ಟು ೧೦೨೮ ಸೂಕ್ತಗಳಲ್ಲಿ ಅಗ್ನಿಯೊಬ್ಬನಿಗೇ **"ಅಗ್ನಿ ಅಪಾಂನಪಾತ್, ಇಂದ್ರ, ಪೂಷಾ, ಬೃಹಸ್ಪತಿ, ಮಿತ್ರ, ಯಮ, ರುದ್ರ, ವರುಣ, ವಾಯು, ವಾಸ್ತೋಷ್ಪತಿ"** ಮೊದಲಾದ ಹೆಸರುಗಳಲ್ಲಿ ಅರ್ಧಕ್ಕಿಂತ ಹೆಚ್ಚು ಸೂಕ್ತಗಳು ಸಂದಿವೆ ಅಂದರೆ ಋಗ್ವೇದದಲ್ಲಿ ತೋರಿಕೆಯ ಮಟ್ಟಿಗೆ ಹಲವು ದೇವತೆಗಳಿದ್ದರೂ ಅವರೆಲ್ಲರೂ ಅಗ್ನಿಯ ಬೇರೆ ಬೇರೆ ರೂಪಗಳೇ ಹೊರತು ಅಗ್ನಿಯಿಂದ ಭಿನ್ನ ರಾದ ಸ್ವತಂತ್ರ ದೇವತೆಗಳಲ್ಲ. ಅದನ್ನು ಮುಂದೆ ಕೊಡಲಾಗುವ ಮಂತ್ರಗಳಿಂದ ಸರಿಯಾಗಿ ತಿಳಿದುಕೊಳ್ಳಬಹುದು.

ಇಂದ್ರಂ ಮಿತ್ರಂ ವರುಣಮಗ್ನಿಮಾಹುರಥೋ
ದಿವ್ಯಃ ಸ ಸುಪರ್ಣೋಗರುತ್ಮಾನ್।
ಏಕಂ ಸದ್ವಿಪ್ರಾ ಬಹುಧಾ ವದಂತಿ
ಅಗ್ನಿಂ ಯಮಂ ಮಾತರಿಶ್ವಾನಮಾಹುಃ ॥ಋ. ೧-೧೬೪-೪೬॥

ಅರ್ಥ – ಸತ್ಯವನ್ನರಿತ ವಿಪ್ರರು ಒಬ್ಬ ಅಗ್ನಿಯನ್ನೇ ಇಂದ್ರನೆಂತಲೂ, ಮಿತ್ರನೆಂತಲೂ, ವರುಣನೆಂತಲೂ, ಚೆಲೋ ರೆಕ್ಕೆಗಳ ಗರುಡನೆಂತಲೂ, ಯಮ ನೆಂತಲೂ ಮಾತರಿಶ್ವನೆಂತಲೂ ಅನ್ನುತ್ತಾರೆ.

ತ್ವಮಗ್ನ ಇಂದ್ರೋ ವೃಷಭಃ ಸತಾಮಸಿ
ತ್ವಂ ವಿಷ್ಣುರುರುಗಾಯೋ ನಮಸ್ಯ।
ತ್ವಂ ಬ್ರಹ್ಮಾ ರಯಿವಿದ್ ಬ್ರಹ್ಮಣಸ್ಪತೇ
ತ್ವಂ ವಿಧರ್ತಃ ಸಚಸೇ ಪುರಂಧ್ಯಾ॥ಋ. ೨-೧-೩॥

ಅರ್ಥ – ಹೇ ಅಗ್ನಿದೇವನೇ, ನೀನು ಸತ್ಪುರುಷರಿಗೆ ಇಂದ್ರನೂ, ಬಲಶಾಲಿಯಾದ ವೃಷಭನೂ, ಅಗಲವಾಗಿ ಸಾಗುವ ಮತ್ತು ನಮಸ್ಕಾರ ಯೋಗ್ಯ

---

was fixed by customs and laws. They were impressed with the idea of a divine being and they innovated it by various names.

Lectures on the Science of language p. 273 by F. Max-Muller M. A.

ನಾದ ವಿಷ್ಣುವೂ, ಆಗಿರುತ್ತೀ: ಹೇ ಬ್ರಹ್ಮಣಸ್ಪತಿಯೇ, ನೀನು ಧನಸಂಪಾದಕನಾದ ಬ್ರಹ್ಮನೂ ನಮ್ಮನ್ನು ರಕ್ಷಿಸುವಂಥವನೂ ಆಗಿ ನಮ್ಮ ಬಳಿಯಲ್ಲಿಯೇ ಇರುತ್ತೀ.

ಆ ಪ್ರಕಾರವಾಗಿ ಆರ್ಯಜನರು ಅಗ್ನಿಯನ್ನು ಸರ್ವಪ್ರಧಾನ ದೇವನನ್ನಾಗಿಯೂ, ಎಲ್ಲ ದೇವತೆಗಳೂ ಅವನೇ ಎಂಬುದಾಗಿಯೂ, ಭಾವಿಸುತ್ತಿದ್ದರೂ ಆವನಂತೆಯೇ ಪ್ರತ್ಯಕ್ಷವಾಗಿ ಕಾಣಬರುತ್ತಿದ್ದ ಸೂರ್ಯನನ್ನು ಮತ್ತು ಚಂದ್ರನನ್ನು ಕಡೆಗಣಿಸದೇ ಅವರಿಬ್ಬರನ್ನೂ ಅಗ್ನಿಯೊಂದಿಗೆ ಸೇರಿಸಿ ದೇವತ್ರಯಿಯನ್ನಾಗಿ ಅಥವಾ ತ್ರಿಮೂರ್ತಿಗಳನ್ನಾಗಿ ಮಾಡಿದ್ದರು. ಹಾಗಾಗಿ ತರುವಾಯದ ಕಾಲದಲ್ಲಿ ಆ ಮೂವರೊಳಗಿನ ಯಾವನಾದರೂ ಒಬ್ಬನನ್ನೇ ಪ್ರಧಾನದೇವನಾಗಿ ಆರಾಧಿಸುವ ಬೇರೆ ಬೇರೆ ಪಂಗಡಗಳು ತಲೆದೋರಿದ್ದುವು.

ಅದೇ ರೀತಿಯಲ್ಲಿ ಅರ್ವಾಚೀನರಾದ ಕೆಲವು ಜನರಿಗೆ ಅಗ್ನಿಯೇ ಇಂದ್ರನೆಂಬ ಸತ್ಯವು ಗೊತ್ತಿಲ್ಲದುದರಿಂದ ಅಂಥವರು ರಚಿಸಿದ ಕೆಲವು ಸೂಕ್ತಗಳಲ್ಲಿ ಇಂದ್ರನು ಅಗ್ನಿಯಿಂದ ಭಿನ್ನದೇವನೆಂದು ತೋರುವಂಥ ವರ್ಣನೆಗಳು ಕಂಡುಬರುತ್ತವೆ. ಉದಾಹರಣೆಗಾಗಿ ಹೇಳುವುದಾದರೆ ಇಂದ್ರನು ವಾಸ್ತವವಾಗಿ ಅಗ್ನಿಯೇ ಎಂದು ಅಥವಾ ಉತ್ತರ ಧ್ರುವ ಪ್ರದೇಶದಲ್ಲಿ ಸೂರ್ಯನು ಕಾಣಿಸದ ಐದು ತಿಂಗಳ ಕಾಲದ ಯಜ್ಞಾಗ್ನಿಯೆಂದು ಸ್ಪಷ್ಟವಾಗಿ ಸೂಚಿಸುವ ಹಲವು ಪ್ರಾಚೀನ ಐತಿಹ್ಯಗಳು ಋಗ್ವೇದದ ಸೂಕ್ತಗಳಲ್ಲಿ ಇದ್ದರೂ ಆ ಪ್ರಾಚೀನ ಐತಿಹ್ಯಗಳನ್ನು ತಿಳಿದುಕೊಳ್ಳಲಾಗದ ತರುವಾಯದ ಕೆಲವು ಕವಿಗಳು ಅಥವಾ ಋಷಿಗಳು ರಚಿಸಿದ ಸೂಕ್ತಗಳಲ್ಲಿ ಇಂದ್ರನನ್ನು ಅಗ್ನಿಯಿಂದ ಭಿನ್ನದೇವನೆಂದು ಅಥವಾ ಸಂಪೂರ್ಣ ಸ್ವತಂತ್ರದೇವನೆಂದು ತೋರುವಂತೆ ಆವನನ್ನು ವಾಯುವೋ, ಸೂರ್ಯನೋ ಇಲ್ಲವೇ ಪರ್ಜನ್ಯದೇವನೋ ಎಂಬಂತೆ ವರ್ಣಿಸಿದ್ದಾರೆ. ವಾಮದೇವನೆಂಬವನಾದರೋ—ಭಗವದ್ಗೀತೆಯ ವಿಭೂತಿಯೋಗ ಎಂಬ ಅಧ್ಯಾಯದಲ್ಲಿ ಶ್ರೀಕೃಷ್ಣನು—ಎಲ್ಲವೂ ನಾನೇ ಎಂದು ನುಡಿದಿರುವಂತೆ—ಇಂದ್ರನ ಬಾಯಿಯಿಂದ ತನ್ನನ್ನು ಮನುವೆಂತಲೂ, ಸೂರ್ಯನೆಂತಲೂ, ಕಕ್ಷೀವಾನ್ ಋಷಿಯೆಂತಲೂ, ವೃಷ್ಟಿದಾತನೆಂತಲೂ ನುಡಿಸಿದ್ದಾನೆ.[1] ಇಂದ್ರನೆಂದರೆ ದೊಡ್ಡದಾಗಿ ಉರಿಯುತ್ತಿರುವ ಅಗ್ನಿಯಾಗಿದ್ದುದರಿಂದ ಅವನು ಹಾಗೆಲ್ಲ ನುಡಿಯಲು ಸಾಧ್ಯವೇ ಇಲ್ಲ. ಆದುದರಿಂದ ಅಂಥ ಹಲವು ಸೂಕ್ತಗಳನ್ನು ರಚಿಸಿದ ವಾಮದೇವನೆಂಬವನು ಬಹಳ ಅರ್ವಾಚೀನ ಕವಿಯೆಂದು ಹೇಳಬೇಕಾಗುತ್ತದೆ. ಋಗ್ವೇದದೊಳಗಿನ ಯಾವನೊಬ್ಬ ದೇವನಾಗಲೀ ಅಸುರನಾಗಲೀ ದಸ್ಯುವಾಗಲೀ ಶರೀರಧಾರೀ ವ್ಯಕ್ತಿಯಲ್ಲವೆಂದು ಮತ್ತು ಋಗ್ವೇದದೊಳಗಿನ

---

[1] ಅಹಂ ಮನುರಭವಂ ಸೂರ್ಯಶ್ಚಾಹಂ ಕಕ್ಷೀವಾಁ ಋಷಿರಸ್ಮಿ ವಿಪ್ರಃ।
ಅಹಂ ಕುತ್ಸಮಾರ್ಜುನೇಯಂ ನ್ಯೃಂಜೇ ಕವಿರುಶನಾ ಪಶ್ಯತಾ ಮಾ ॥ಋ. ೪-೨೬-೧॥
ಅಹಂ ಭೂಮಿಮದದಾಮಾರ್ಯಾಯಾಹಂ ವೃಷ್ಟಿಂ ದಾಶುಷೇ ಮರ್ತ್ಯಾಯ।
ಅಹಮಪೋ ಅನಯಂ ವಾವಶಾನಾ ಮಮ ದೇವಾಸೋ ಅನು ಕೇತಮಾಯನ್ ॥೨॥

ಅಧಿಕಾಂಶ ದೇವತೆಗಳು ಮತ್ತು ಅಸುರರು ನಕ್ಷತ್ರಪುಂಜಗಳ ಪ್ರತಿನಿಧಿಗಳೆಂದು_ ವೇದಗಳ ಅಧ್ಯಯನ ಮಾಡುವವರು ಸರಿಯಾಗಿ ನೆನಪಿನಲ್ಲಿಟ್ಟುಕೊಳ್ಳಬೇಕಾಗಿದೆ.

ವಾಸ್ತವವಾಗಿ ಋಗ್ವೇದದಲ್ಲಿ ಇಂದ್ರನ ಕೆಲಸವೆಂದರೆ ಉತ್ತರಧ್ರುವ ಪ್ರದೇಶದ ತೊಂಭತ್ತೊಂಭತ್ತು ದಿನಗಳಷ್ಟು ಧೀರ್ಘಕಾಲದ ರಾತ್ರಿಯಲ್ಲಿ ಘೃತ ಮತ್ತು ಸೋಮರಸದ ಬಲದಿಂದ ದೊಡ್ಡದಾಗಿ ಉರಿದು ಕತ್ತಲೆಯನ್ನು ಕಡಿಮೆ ಮಾಡುವುದು ಚಳಿಯನ್ನು ನಿವಾರಿಸುವುದು, ಮತ್ತು ಜನರನ್ನು ಹಿಂಸ್ರಮೃಗಗಳ ಆಕ್ರಮಣದಿಂದ ರಕ್ಷಿಸುವುದು, ಹಾಗೂ ರಾತ್ರಿಯ ಕೊನೆಯಲ್ಲಿ ಬೆಳಕಾಗುವಂತೆಯೂ ಸೂರ್ಯನನ್ನು ಉದಯಿಸುವಂತೆಯೂ ಮಾಡುವುದಾಗಿದೆ. ಅದನ್ನು ಮುಂದೆ ಕೊಡಲಾಗುವ ಋಚೆಯಿಂದ ಸರಿಯಾಗಿ ಅರಿತುಕೊಳ್ಳಬಹುದು. ಅದರಲ್ಲಿ ಇಂದ್ರನು ವೃತ್ರನನ್ನು ಕೊಂದು ಸೂರ್ಯನನ್ನು ಆಕಾಶಕ್ಕೇರಿಸಿದನೆಂದು ವರ್ಣಿಸಿರುವುದರಿಂದ ಇಂದ್ರನೆಂದರೆ ಸೂರ್ಯನಲ್ಲವೆಂದು ತಾನಾಗಿ ಸಿದ್ಧವಾಗುತ್ತದೆ.

ತ್ವಮಪಾಮಪಿಧಾನಾವೃಣೋರಪಾಧಾರಯಃ
ಪರ್ವತೇ ದಾನುಮದ್ ವಸು।
ವೃತ್ರಂ ಯದಿಂದ್ರ ಶವಸಾವಧೀರಹಿಮ್
ಆದಿತ್ ಸೂರ್ಯಂ ದಿವ್ಯಾರೋಹಯೋದೃಶೇ ॥ ಋ ೧-೫೧-೪॥

ಅರ್ಥ—ಹೇ ಇಂದ್ರನೇ, ನೀನು ದಿವ್ಯಜಲಗಳ ಆವರಣವನ್ನು ತೆಗೆಯುವುದರೊಂದಿಗೆ ಪರ್ವತದೊಳಗಿದ್ದ ಅಂದರೆ ಕತ್ತಲೆಯಲ್ಲಿ ಅಡಗಿದ್ದ ದ್ರವರೂಪೀ ಪ್ರಕಾಶವನ್ನು ಹಿಡಿದೆ. ಹಾಗೆಯೇ ನಿನ್ನ ಬಲದಿಂದ ಅಹಿರೂಪದ ವೃತ್ರನನ್ನು ಕೊಂದೆ. ಮತ್ತು ಕೂಡಲೇ ಕಣ್ಣುಗಳು ಕಾಣಿಸುವಂತೆ ಸೂರ್ಯನನ್ನು ಗಗನಕ್ಕೇರಿಸಿದೆ.

ಮುಂದಿನ ಋಚೆಯಲ್ಲಿ ಅಗ್ನಿಯೇ ಇಂದ್ರನೆಂದು ಹೇಳಿದೆ—

ತ್ವಮಗ್ನೇ ವರುಣೋ ಜಾಯಸೇ.
ಯತ್ವಂ ಮಿತ್ರೋ ಭವಸಿ ಯತ್ಸಮಿದ್ಧಃ ।
ತ್ವೇ ವಿಶ್ವೇ ಸಹಸಸ್ಪುತ್ರ ದೇವಾಃ
ತ್ವಮಿಂದ್ರೋ ದಾಶುಷೇ ಮರ್ತ್ಯಾಯ ॥ ಋ ೫-೩-೧ ॥

ಅರ್ಥ- ಹೇ ಅಗ್ನಿದೇವನೇ, ನೀನು ಹುಟ್ಟುವಾಗ ವರುಣನಾಗಿರುತ್ತಿ, ಮತ್ತು ಸಮಿತ್ತುಗಳಿಂದ ಹೊತ್ತಿಸಿದಾಗ ಮಿತ್ರನಾಗುತ್ತೀ. ಹೇ ಬಲದ ಪುತ್ರನೇ, ಎಲ್ಲ ದೇವತೆಗಳು ನಿನ್ನೊಳಗೆನೇ ಇದ್ದಾರೆ. ನಿನಗೆ ಹವಿಸ್ಸುಗಳನ್ನು ಅರ್ಪಿಸುವವರಿಗೆ ನೀನು ಪ್ರಕಾಶದಾಯಕನಾದ ಇಂದ್ರನಾಗಿರುತ್ತೀ.

ಇಂದ್ರೋ ದಧೀಚೋಽಸ್ಥಭಿರ್ವೃತ್ರಾಣ್ಯಪ್ರತಿಷ್ಕುತಃ ।
ಜಘಾನ ನವತೀರ್ನವ ॥ ಋ ೧-೧೮೪-೧೩ ॥

ಅರ್ಥ—ಅಪ್ರತಿಮ ವೀರನಾದ ಇಂದ್ರನು ದಧೀಚಿಯ ಎಲುಬುಗಳಿಂದ ತೊಂಭತ್ತೊಂಭತ್ತು ವೃತ್ರಗಳನ್ನು ಕೊಂದನು.

ಈ ಋಚೆಯಲ್ಲಿ ವೃತ್ರಗಳನ್ನು ಕೊಂದವನು ಇಂದ್ರನೆಂದು ಹೇಳಿದೆ ಯಾದರೆ ಮುಂದೆ ಕೊಡಲಾಗುವ ಋಚೆಯಲ್ಲಿ ವೃತ್ರಗಳನ್ನು ಕೊಲ್ಲುವವನು ಅಗ್ನಿಯಾಗಿದ್ದಾನೆ—

ಅಗ್ನಿರ್ವೃತ್ರಾಣಿ ಜಂಘನದ್ ದ್ರವಿಣಸ್ಯುರ್ವಿಪನ್ಯಯಾ ।
ಸಮಿದ್ಧಃ ಶುಕ್ರ ಆಹುತಃ ॥ ಋ ೬-೧೬-೩೪ ॥

ಅರ್ಥ—ಸಮಿತ್ತುಗಳಿಂದ ಹೊತ್ತಿಸಲ್ಪಟ್ಟ ಮತ್ತು ಆಹುತಿಗಳನ್ನು ಪಡೆದು ಉಜ್ವಲನಾಗಿ ಬೆಳಗತೊಡಗಿದ ಅಗ್ನಿಯು ಸಂತೋಷದಿಂದ ಧನಕೊಡುವಂಥವನಾಗಿ ವೃತ್ರಗಳನ್ನು ಕೊಲ್ಲಲಿ,

ಅಗ್ನಿರ್ಜಾತೋ ಅರೋಚತ ಘ್ನನ್ದಸ್ಯೂಞ್ಜ್ಯೋತಿಷಾತಮಃ ।
ಅವಿಂದದ್ ಗಾ ಅಪಃ ಸ್ವಃ ॥ ಋ ೫–೧೪–೪ ॥

ಅರ್ಥ—ಅಗ್ನಿಯು ಹುಟ್ಟಿದವನೇ ಉಜ್ವಲನಾಗಿ ಬೆಳಗಿದನು ಮತ್ತು ತನ್ನ ಪ್ರಕಾಶದಿಂದ ದಸ್ಯುಗಳನ್ನು ಮತ್ತು ಕತ್ತಲೆಯನ್ನು ನಾಶಗೊಳಿಸಿದನ್ನು, ಗೋವು ಗಳನ್ನು ಅಂದರೆ ಸೂರ್ಯನ ಪ್ರಕಾಶವನ್ನು, ದಿವ್ಯಜಲಗಳನ್ನು ಅಂದರ ಪ್ರಕಾಶದ ಪ್ರವಾಹವನ್ನು ಮತ್ತು ಕೊನೆಗೆ ಸೂರ್ಯನನ್ನು ಪಡೆದನು.

ಮುಂದೆ ಕೊಡಲಾಗುವ ಋಚೆಯಲ್ಲಿ ಬರುವ ಅಗ್ನಿಯ ವಿಶೇಷಣಗಳು ಅಗ್ನಿ ಮತ್ತು ಇಂದ್ರ ಅಂದರೆ ಒಬ್ಬನೇ ಎಂಬುದನ್ನು ಮಾತ್ರವಲ್ಲದೇ ಇಂದ್ರನು ಮಳೆಯ ದೇವನಲ್ಲವೆಂಬುದನ್ನು ಕೂಡ ಸಿದ್ಧಪಡಿಸುತ್ತವೆ.

ತಮುತ್ವಾ ದಧ್ಯಜ್ ಋಷಿಃ ಪುತ್ರ ಈಧೇ ಅಥರ್ವಣಃ :
ವೃತ್ರಹಣಂ ಪುರಂದರಮ್ ॥ ಋ ೬-೧೬-೧೪

ಅರ್ಥ—ಹೇ ಅಗ್ನಿದೇವನೇ, ಅಥರ್ವ ಋಷಿಯ ಪುತ್ರನಾದ ದಧೀಚಿಯು ವೃತ್ರಗಳನ್ನು ಕೊಲ್ಲುವಂಥವನೂ, ಪುರಗಳನ್ನು ಅಂದರೆ ಸುತ್ತಲಿನ ಆವರಣಗಳನ್ನು ಸೀಳುವಂಥವನೂ ಆದಂಥ ನಿನ್ನನ್ನು ಉಜ್ವಲವಾಗಿ ಹೊತ್ತಿಸಿದನು.

ಹಿಂದಿನ ವಿವರಗಳಿಂದ ಅಗ್ನಿಯೇ ಇಂದ್ರನೆಂಬುದು ಸ್ಪಷ್ಟವಾಗಿ ಸಿದ್ಧ ವಾಗುತ್ತದಾದರೂ ಮುಂದೆ ಕೊಡಲಾಗುವ ಶತಪಥ ಬ್ರಾಹ್ಮಣದೊಳಗಿನ ಅಂಶವು ಅದನ್ನು ಇನ್ನಷ್ಟು ದೃಢಪಡಿಸುತ್ತದೆ—

"ಅಥ ಯತ್ರೈತತ್ ಪ್ರದೀಪ್ತೋ ಭವತಿ । ಉಚ್ಚೈರ್ಧೂಮಃ ಪರಮ-ಯಾ ಜೂತ್ಯಾ ಬಲ್ಬಲೀತಿ ತರ್ಹಿ ಹೈಷ ಭವತೀಂದ್ರ ॥ ೨-೩-೨-೧೧ ॥

ಅಂದರೆ ಅಗ್ನಿಯು ಪ್ರದೀಪ್ತನಾಗಿ ಅವನ ಹೊಗೆಯು ಬಹಳ ವೇಗದಿಂದ ಸುಳಿಸುಳಿಯಾಗಿ ಎತ್ತರಕ್ಕೇರತೊಡಗಿದಾಗ ಅವನು ಇಂದ್ರನಾಗುತ್ತಾನೆ. ಅರ್ಥಾತ್

ಬಹಳ ದೊಡ್ಡದಾಗಿ ಹಾಗೂ ಉಜ್ವಲನಾಗಿ ಉರಿಯುವ ಅಗ್ನಿಯೇ ಇಂದ್ರನೆಂಬುದು ಆದರಿಂದ ಸ್ಪಷ್ಟವಾಗುತ್ತದೆ.

ಋಗ್ವೇದದೊಳಗಿನ ಉಲ್ಲೇಖಗಳ ಆಧಾರದಿಂದ ಮತ್ತು ಉತ್ತರ ಧ್ರುವ ಪ್ರದೇಶದ ಹಿನ್ನೆಲೆಯ ಸಹಾಯದಿಂದ ಇಂದ್ರನ ಸಂಬಂಧದಲ್ಲಿ ಮುಂದಿನಂತೆ ವಿವರಿಸಬಹುದು.

ಉತ್ತರ ಧ್ರುವ ಪ್ರದೇಶದಲ್ಲಿ ನೆಲಸಿದ್ದ ಪ್ರಾಚೀನ ಆರ್ಯಜನರು ಒಂದು ದಿನದಲ್ಲಿ ಹಗಲು ಮತ್ತು ಇರುಳು ಎಂಬ ಎರಡು ವಿಭಾಗಗಳಿವೆಯೆಂಬ ಕಾರಣದಿಂದ ದಿನಗಳನ್ನೂ ಚಂದ್ರನ ತಿಂಗಳಲ್ಲಿ ಶುಕ್ಲಪಕ್ಷ ಮತ್ತು ಕೃಷ್ಣಪಕ್ಷ ಎಂಬ ಎರಡು ವಿಭಾಗಗಳಿವೆಯೆಂಬ ಕಾರಣದಿಂದ ತಿಂಗಳನ್ನೂ 'ಯುಗ'ವೆನ್ನುತಿದ್ದರು. ಅದೇ ರೀತಿಯಲ್ಲಿ ಅವರು ತಮ್ಮ ವರ್ಷವನ್ನು "ಸೂರ್ಯನು ಕಾಣಬರುವ ಏಳು ತಿಂಗಳು" ಮತ್ತು "ಸೂರ್ಯನು ಕಾಣಿಸದಿರುವ ಐದು ತಿಂಗಳು" ಎಂಬುದಾಗಿ ಎರಡು ವಿಭಾಗ ಗಳನ್ನಾಗಿ ಮಾಡಿದ್ದರು. ಇದನ್ನು ಹಿಂದೆ "ಆರ್ಯಜನರ ಮೂಲಸ್ಥಾನ" ಎಂಬ ಅಧ್ಯಾಯದಲ್ಲಿ ವಿವರಿಸಿದೆ. ಆ ತಥ್ಯಕ್ಕನುಸಾರವಾಗಿಯೇ ಋಗ್ವೇದದ ೮-೩೯-೮ನೆಯ ಋಚೆಯಲ್ಲಿ ಅಗ್ನಿಯನ್ನು "ಸಪ್ತಮಾನುಷಃ" ಅಂದರೆ "ಏಳ್ವರು ಮನುಷ್ಯರುಳ್ಳವನು, ಅಥವಾ ಏಳ್ವರು ಮನುಷ್ಯರಿಗೆ ಸೇರಿದವನು" ಎಂದು ಕರೆಯಲಾಗಿದೆಯೆಂಬುದರಲ್ಲಿ ಸಂದೇಹವಿಲ್ಲ. ಅಂದರೆ ಉತ್ತರ ಧ್ರುವಪ್ರದೇಶದಲ್ಲಿ ಸೂರ್ಯನು ಕಾಣಿಸುತಿದ್ದ ಏಳು ತಿಂಗಳ ಕಾಲ ಉರಿಯುತಿದ್ದ ಯಜ್ಞಾಗ್ನಿಯೇ ಸಪ್ತಮಾನುಷನಾಗಿದ್ದ.

ದಿವಂಗತ ಲೋಕಮಾನ್ಯ ಬಾಲಗಂಗಾಧರ ತಿಲಕ ಅವರು ತಾನು ಬರೆದ ಆರ್ಯಜನರ ಮೂಲಸ್ಥಾನ ಎಂಬ ಪುಸ್ತಕದಲ್ಲಿ ಸಪ್ತಮಾನುಷ ಎಂಬ ಪ್ರಯೋಗವನ್ನು ಚರ್ಚಿಸಿಲ್ಲವಾದರೂ ಋಗ್ವೇದದ ಬೇರೆ ಬೇರೆ ಋಚೆಗಳಲ್ಲಿ ಬಂದಿರುವ "ಮಾನುಷಾ ಯುಗಾಃ ಕ್ಷಪಃ [1]" ಎಂಬ ಮತ್ತು "ಮನುಷೋಯುಗೇಷು[2]" ಎಂಬುದರ ಅರ್ಥವನ್ನು "ಉತ್ತರ ಧ್ರುವಪ್ರದೇಶದಲ್ಲಿ ಸೂರ್ಯನ ಪ್ರಕಾಶವಿರುತಿದ್ದ ಕಾಲ" ಎಂತಲೂ "ಕ್ಷಪಃ" ಎಂಬುದರ ಅರ್ಥವನ್ನು "ದೀರ್ಘರಾತ್ರಿ" ಎಂತಲೂ ಪ್ರತಿಪಾದಿ ಸಿದ್ದಾರೆ.[1]

---

1. ಅಭಿತ್ವಾನಕ್ತೀರುಷಸೋ ವವಾಶಿರೇ ಅಗ್ನೇ ವತ್ಸಂ ನ ಸ್ವಸರೇಷುಧೇನವಃ ।
ದಿವಇವೇದರತಿರ್ಮಾನುಷಾಯುಗಾಃ ಕ್ಷಪೋಭಾಸಿ ಪುರುವಾರ ಸಂಯತಃ ॥ ೨-೨-೨ ॥

2. ಈಳೇನ್ಯೋ ವೋ ಮನುಷೋ ಯುಗೇಷು ಸಮನಗಾ ಅಶುಚಜ್ಜಾತವೇದಾಃ ।
ಸುಸಂದೃಶಾ ಭಾನುನಾ ಯೋ ವಿಭಾತಿ ಪ್ರತಿಗಾವಃ ಸಮಿಧಾನಂ ಬುಧಂತ ॥ ೭-೮-೪ ॥

1. Rig-Veda II; 2.2 Here Agni is said to shine for Manusha Yuga and Kshapah Now Kshapah means nights, and the most natural interpretation would be to take Manusha Yuga and Kshapah as allied expressions, denoting a period of time.

ಋಗ್ವೇದದೊಳಗಿನ ಕೆಲವು ಪ್ರಯೋಗಗಳನ್ನು ಆಳವಾಗಿ ಪರಿಶೀಲಿಸಿದರೆ **"ವಿವಸ್ವತ್, ಸರಸ್ವತ್, ಮನು, ಮನುಷ್, ಮಾನುಷ"** ಮೊದಲಾದ ಶಬ್ದಗಳು ಪರ್ಯಾಯವಾಚಿಗಳಾಗಿವೆಯೆಂದು ಅಥವಾ ಆ ಶಬ್ದಗಳು ಒಂದೇ ಅರ್ಥವನ್ನು ಸೂಚಿಸುವಂಥವುಗಳಾಗಿವೆಯೆಂದು ತಿಳಿದುಬರುವುದು. ಅಲ್ಲದೇ ಯಜುರ್ವೇದ ಸಂಹಿತೆಗಳು ಮತ್ತು ಶತಪಥ ಬ್ರಾಹ್ಮಣವು ವಿವಸ್ವತನೆಂದರೆ "ಆದಿತ್ಯ"[2] ಎಂದು ಹೇಳುತ್ತವೆ. ಆದುದರಿಂದ ಪ್ರಾಚೀನ ಕಾಲದಲ್ಲಿ "ಆದಿತ್ಯ" ಶಬ್ದವು "ತಿಂಗಳು" ಎಂಬರ್ಥದಲ್ಲಿ ಪ್ರಯೋಗಿಸಲ್ಪಡುತಿದ್ದಂತೆಯೇ[1] ವಿವಸ್ವತ್. ಮನು, ಮನುಷ್, ಮತ್ತು ಮಾನುಷ ಎಂಬ ಶಬ್ದಗಳು ಋಗ್ವೇದದಲ್ಲಿ ಸೂರ್ಯ ಶಬ್ದದ ಪರ್ಯಾಯ ವಾಚಿಗಳಾಗಿದ್ದು "ತಿಂಗಳು" ಎಂಬರ್ಥದಲ್ಲಿ ಪ್ರಯೋಗಿಸಲ್ಪಟ್ಟಿವೆಯೆನ್ನಬಹುದು. ತಾತ್ಪರ್ಯವೇನೆಂದರೆ ಋಗ್ವೇದದಲ್ಲಿ "ಅಗ್ನಿಃಸಪ್ತಮಾನುಷಃ" ಎಂಬ ಅಂಶವು ಉತ್ತರ ಧ್ರುವಪ್ರದೇಶದಲ್ಲಿ "ಸೂರ್ಯನು ಕಾಣಿಸುತಿದ್ದ ಏಳು ತಿಂಗಳ ಕಾಲದ ಯಜ್ಞಾಗ್ನಿ" ಎಂಬರ್ಥದಲ್ಲಿ ಪ್ರಯೋಗಿಸಲ್ಪಟ್ಟಿದೆಯೆನ್ನಬಹುದು.

ಉತ್ತರ ಧ್ರುವಪ್ರದೇಶದಲ್ಲಿ ನೆಲಸಿದ್ದ ಆರ್ಯಜನರು ಸೂರ್ಯನು ಕಾಣಿಸದ ಐದು ತಿಂಗಳ ಕಾಲದಲ್ಲಿ ಚಳಿಯನ್ನು ನಿವಾರಿಸುವ ಸಲುವಾಗಿ ಮತ್ತು ಕತ್ತಲೆಯ ಗಾಢತೆಯನ್ನು ಕಡಿಮೆ ಮಾಡುವ ಸಲುವಾಗಿ ಯಜ್ಞಕುಂಡದೊಳಗಿನ ಅಗ್ನಿಯನ್ನು ಬಹಳ ದೊಡ್ಡದಾಗಿ ಉರಿಸಬೇಕಾಗುತಿತ್ತು. ಹಾಗೆ ಆ ಐದು ತಿಂಗಳ

The verse will then mean, "O Agni! thou shinest during human ages and nights." It is necessary to mention 'nights' because though Manusha Yuga is a period of sunshine including a long day and a succession of ordinary days and nights, yet the long or continuous night which followed Manusha Yuga could not have been iucluded in the latter phrase. Therefore when the whole period of the solar year was intended a compound expression like Manusha Yuga and the continuous night was necessary and that is the meaning of the phrase in II, 2,2. page 180.

2. ತತೋ ವಿವಸ್ವಾನ್ ಆದಿತ್ಯೋಽಜಾಯತ ತಸ್ಯವಾ ಇಯಂ ಪ್ರಜಾಯನ್ಮನುಷ್ಯಾಃ ॥ ತೈ. ಸಂ ೬-೫-೬-೨ ॥

ವಿವಸ್ವಾನ್ ಆದಿತ್ಯಸ್ತಸ್ಯೇಮಾ ಪ್ರಜಾಃ ॥ ಶ. ಬ್ರಾ. ೩-೧-೩-೪.
ಅಸೌ ವಾ ಆದಿತ್ಯೋ ವಿವಸ್ವಾನ್ ಏಷ ಹ್ಯಹೋರಾತ್ರೇ ವಿವಸ್ತೇ ॥ ಶ ಬ್ರಾ, ೧೦-೫-೨-೪॥
ವಿವಸ್ವಾನ್ ಆದಿತ್ಯ ಏಷ ತೇ ಸೋಮಪೀಥಸ್ತಸ್ಮಿನ್ ಮತ್ಸ್ವ ॥ ವಾ. ಸಂ. ೮-೫ ॥

1. ಕತಮ ಆದಿತ್ಯಾ ಇತಿ । ದ್ವಾದಶ ಮಾಸಾಃ ಸಂವತ್ಸರಸ್ಯೈತೇ ಆದಿತ್ಯಾಃ ॥ ಶ. ಬ್ರಾ. ೧೧-೬-೩-೮ ॥

ಕಾಲದಲ್ಲಿ ದೊಡ್ಡದಾಗಿ ಉರಿಸಲ್ಪಡುತ್ತಿದ್ದ ಯಜ್ಞಾಗ್ನಿಯು "ಇಂದ್ರ" ಎನಿಸಿ ಕೊಳ್ಳುತ್ತಿದ್ದ. ಅವರು ಸೂರ್ಯನು ಕಾಣಿಸುತ್ತಿದ್ದ ಏಳು ತಿಂಗಳ ಕಾಲದ ಯಜ್ಞಾಗ್ನಿಯನ್ನು "ಸಪ್ತಮಾನುಷಃ" ಎಂದು ಕರೆಯುತ್ತಿದ್ದಂತೆಯೇ "ಸೂರ್ಯನು ಕಾಣಿಸದ ಐದು ತಿಂಗಳ ಕಾಲದ ಯಜ್ಞಾಗ್ನಿಯಾಗಿದ್ದ ಇಂದ್ರನನ್ನು "ಪಂಚಜನ", ಪಂಚ ಚರ್ಷಣಿ, ಪಂಚಕೃಷ್ಟಿ, ಪಂಚಕ್ಷಿತಿ" ಮೊದಲಾದ ಹೆಸರುಗಳಿಂದ ಕರೆಯುತ್ತಿದ್ದರು. ಆ ಶಬ್ದಗಳ ಅರ್ಥವು "ಐವರು ಜನರಲ್ಲಿ ಇಲ್ಲವೇ ಐವರು ಜನರೊಂದಿಗೆ ಇರುವವನು" ಎಂದಿತ್ತು. ಅಗ್ನಿಯ ಸೂಕ್ತದಲ್ಲಿ ಅಗ್ನಿಯನ್ನು "ಸಪ್ತಮಾನುಷಃ" ಎಂದು ಕರೆದಿರು ವಂತೆ ಇಂದ್ರನ ಸೂಕ್ತಗಳಲ್ಲಿ "ಇಂದ್ರನನ್ನು" ಪಂಚಕೃಷ್ಟಿ, ಪಂಚಜನ ಮುಂತಾಗಿ ಕರೆದಿದೆ. ಅಷ್ಟೇ ಅಲ್ಲ ಅಗ್ನಿಯ ಸೂಕ್ತಗಳಲ್ಲಿ ಅಗ್ನಿಯನ್ನೂ ಪಂಚಜನಃ (೧೦-೪೩-೪) ಪಂಚಕೃಷ್ಟಿ: (೨-೨-೧೦) ಮುಂತಾಗಿ ಕರೆದುದಿದೆ. ಕಾರಣ ವೇನೆಂದರೆ ಅಗ್ನಿಯೇ ಇಂದ್ರನಾಗಿದ್ದುದರಿಂದ ಅವನು ಸಪ್ತಮಾನುಷನಾಗಿದ್ದಂತೆಯೇ ಪಂಚಜನನೂ ಆಗಿದ್ದ, ಆದರೆ ಇಂದ್ರನು ಸೂರ್ಯನು ಕಾಣಿಸದ ಐದು ತಿಂಗಳ ಕಾಲದ ಯಜ್ಞಾಗ್ನಿ ಮಾತ್ರ ಆಗಿದ್ದುದರಿಂದ ಅವನು ಪಂಚಜನನಾಗಿದ್ದನೇ ಹೊರತು ಸಪ್ತಮಾನುಷನಾಗಿರಲಿಲ್ಲ.

ಋಗ್ವೇದದ ಮಂತ್ರಗಳಲ್ಲಿ ಅಗ್ನಿಯೊಂದಿಗೆ ಬಂದಿರುವ ಮಾನುಷ ಮತ್ತು ಜನ ಮುಂತಾದ ಶಬ್ದಗಳು ತಿಂಗಳು ಎಂಬರ್ಥವನ್ನು ಸೂಚಿಸಲು ಅಥವಾ ಆ ಶಬ್ದಗಳು ತಿಂಗಳು ಎಂಬರ್ಥದಲ್ಲಿ ಪ್ರಯೋಗಿಸಲ್ಪಟ್ಟುದರ ಒಂದೇ ಒಂದು ಕಾರಣ ವೆಂದರೆ, ಪ್ರಾಚೀನ ಆರ್ಯಜನರು ಏಳು ತಿಂಗಳ ಕಾಲದ ಮತ್ತು ಐದು ತಿಂಗಳ ಕಾಲದ ಅಗ್ನಿಯ ಪ್ರತೀಕಗಳಾಗಿ ನಿರ್ಮಿಸಿದ ಚಿತ್ರಸಂಕೇತಗಳಲ್ಲಿ ಅಗ್ನಿಯೊಂದಿಗೆ ಏಳ್ವರು ಮತ್ತು ಐವರು ಮನುಷ್ಯರ ಚಿತ್ರಗಳಿದ್ದುದೇ ಆಗಿದೆ. ಅಂಥ ಚಿತ್ರ ಸಂಕೇತ ಗಳಿರುವ ಹಲವು ಬಿಲ್ಲೆಗಳು ಸಿಂಧೂಕಣಿವೆಯ ಅಗೆತಗಳಲ್ಲಿ ಬೆಳಕಿಗೆ ಬಂದಿವೆ.

ಆರ್ಯಜನರು ಧ್ವನಿಸೂಚಕ ಚಿಹ್ನೆಗಳಿರುವ ಲಿಪಿಯನ್ನು ನಿರ್ಮಿಸುವ ಹಂತಕ್ಕೆ ತಲುಪುವ ಮೊದಲು ತಮ್ಮ ದೇವನಾದ ಅಗ್ನಿಯನ್ನು ಸೂಚಿಸಲು ಚಿತ್ರ ಗಳನ್ನು ಉಪಯೋಗಿಸುತ್ತಿದ್ದರೆಂದು ಮತ್ತು ಅಗ್ನಿಯನ್ನು ಸ್ತುತಿಸಿದ ಪದ್ಯಗಳನ್ನು ಬರೆಯಲು ಚಿತ್ರ ಸಂಕೇತಗಳನ್ನು ಉಪಯೋಗಿಸುತ್ತಿದ್ದರೆಂದು ಋಗ್ವೇದದಲ್ಲಿ ಬಂದಿರುವ ಕೆಲವು ವಿಶಿಷ್ಟ ಉಲ್ಲೇಖಗಳಿಂದ ತಿಳಿದು ಬರುತ್ತದೆ. ಉದಾಹರಣೆಗಾಗಿ ಹೇಳುವುದಾದರೆ–ಋಗ್ವೇದದಲ್ಲಿ ಅಗ್ನಿಯನ್ನು "ಸಹೋಮಹತ್" ಅಂದರೆ "ಮಹಾ ಬಲಶಾಲಿ" ಎಂತಲೂ "ಸಹಸಸ್ಪುತ್ರ" ಅಂದರೆ "ಶಕ್ತಿಯ ಪುತ್ರ" ಎಂತಲೂ ಕರೆದಿದೆ. ಆಗಿನ ಅವರ ತಿಳುವಳಿಕೆಯಲ್ಲಿ ಕಾಡುಹೋರಿಯು ಅಥವಾ ವೃಷಭವು ಬಹಳ ಬಲಶಾಲಿಯಾಗಿತ್ತು. ಮತ್ತು ಅವರು ಪಳಗಿಸಿ ಪ್ರೀತಿಯಿಂದ ಸಾಕುತ್ತಿದ್ದಂಥ ಪ್ರಾಣಿಯಾಗಿತ್ತು. ಆದುದರಿಂದ ಅವರು ಅಗ್ನಿಯ ಬೆಳಗುವ ಗುಣವನ್ನು ಮತ್ತು ಅವನ ಶಕ್ತಿಯನ್ನು ಸೂಚಿಸಲು ಬೆಳ್ಳಗಿನ ಹೋರಿಯನ್ನು ಅಗ್ನಿಯ ಪ್ರತೀಕವನ್ನಾಗಿ

ಅರಿಸಿದ್ದರೆಂದು ಅಥವಾ ಹೋರಿಯ ಚಿತ್ರವನ್ನು ಬರೆದು ಅದನ್ನು ಅಗ್ನಿ ಎನ್ನು ತ್ತಿದ್ದರೆಂದು ಋಗ್ವೇದದಲ್ಲಿ ಅಗ್ನಿಯನ್ನು ಅಥವಾ ಇಂದ್ರನನ್ನು ನೂರಾರು ಸರ್ತಿ "ವೃಷಭ; ಉಕ್ಷಾ; ಕಕುದ್ಮಾನ್'' ಮುಂತಾಗಿ ಕರೆದಿರುವುದರ ಮೇಲಿಂದ ಸಿದ್ಧ ವಾಗುತ್ತದೆ, ಅದೇ ರೀತಿಯಲ್ಲಿ ಅವರು ಸೂರ್ಯನನ್ನು ಸೂಚಿಸಲು ,,ಅಶ್ವವನ್ನು'' ಅಂದರೆ ,,ಕುದುರೆಯನ್ನು'' ಮತ್ತು ಸೂರ್ಯನ ಪ್ರಕಾಶವನ್ನು ಇಲ್ಲವೇ ಕಿರಣ ಗಳನ್ನು ಸೂಚಿಸಲು ,,ಗಾವಃ'' ಅಂದರೆ ಗೋವುಗಳನ್ನು ಆರಿಸಿದ್ದರು. ಆದುದರಿಂದಲೇ ಅವರು ಸೂರ್ಯೋದಯದ ಮೊದಲಿನ ನಸಿಕನ್ನು ಅಥವಾ ,,ಉಷೆಯನ್ನು" ,,ಗೋಮತೀ'' (೧-೪೮-೨) ಅಂದರೆ ,,ಗೋವುಗಳುಳ್ಳವಳು'' ಎಂತಲೂ ,,ಮಾತಾಗವಾಮ್'' ಅಂದರೆ ,,ಗೋವುಗಳ ತಾಯಿ'' ಎಂತಲೂ ಕರೆ ಯುತಿದ್ದರು. ಅವರ ವಿಚಾರಗಳಲ್ಲಿ ಕೊಂಚ ಸುಧಾರಣೆಯಾದ ತರುವಾಯದಿಂದ ಅವರು ಅಗ್ನಿಯನ್ನು ಮನುಷ್ಯನ ಚಿತ್ರದಿಂದ ಸೂಚಿಸತೊಡಗಿದ್ದರು. ಆದರೆ ಅವರು ಮೊದಲು ಅಗ್ನಿಯನ್ನು ಸೂಚಿಸಲು ಹೋರಿಯ ಚಿತ್ರವನ್ನು ಉಪಯೋಗಿಸು ತಿದ್ದರಾದುದರಿಂದ ಅಗ್ನಿಯನ್ನು ಮನುಷ್ಯ ಚಿತ್ರದಿಂದ ಸೂಚಿಸುವಾಗ ಮನುಷ್ಯನ ತಲೆಯಲ್ಲಿ ಕೊಂಬುಗಳನ್ನು ಚಿತ್ರಿಸತೊಡಗಿದ್ದರು.

ಯಜ್ಞಗಳ ಪ್ರಾರಂಭ ಕಾಲದಲ್ಲಿ ಗಾರ್ಹಪತ್ಯದ ಮತ್ತು ದರ್ಶಪೂರ್ಣ ಮಾಸೇಷ್ಟಿಗಳ–ಎರಡೇ ಚಿತಿಗಳಿದ್ದುವು, ಆದುದರಿಂದ ಅವರು ಅಗ್ನಿಗೆ ಎರಡು ಬಾಯಿಗಳು ಅಥವಾ ಮೋರೆಗಳೆಂದು ನಿರ್ಧರಿಸಿದ್ದರು. ಮುಂದೆ ವ್ಯವಸ್ಥಿತವಾದ ಯಜ್ಞ ಸಂಸ್ಥೆಯು ಸ್ಥಾಪಿತವಾದ ತರುವಾಯ ಯಜ್ಞಗಳಲ್ಲಿ ಗಾರ್ಹಪತ್ಯ, ಆಹವನೀಯ ಮತ್ತು ದಕ್ಷಿಣ ಎಂಬ ಮೂರು ಚಿತಿಗಳು ಉಪಯೋಗಿಸಲ್ಪಡ ತೊಡಗಿದವು. ಹಾಗಾಗಿ ಅಗ್ನಿಗೂ ಮೂರು ಬಾಯಿಗಳು ಅಥವಾ ಮೂರು ಮೋರೆಗಳು ಮತ್ತು ಮೂರು ಮನೆಗಳಾದವು. ಆದುದರಿಂದಲೇ ಋಗ್ವೇದದಲ್ಲಿ ಅಗ್ನಿಗೆ ಎರಡು ಅಲ್ಲದಿದ್ದರೆ ಮೂರು ತಲೆಗಳು ಅಲ್ಲದಿದ್ದರೆ ಮೂರು ಮನೆಗಳು ಎಂಬ ಉಲ್ಲೇಖಗಳಿರುವುದಾಗಿದೆ. ಮುಂದೆ ಕೊಡಲಾಗುವ ಮಂತ್ರದಲ್ಲಿ ಅಗ್ನಿಗೆ ಎರಡು ತಲೆಗಳೆಂಬ ಉಲ್ಲೇಖವಿದೆ.

ಚತ್ವಾರಿ ಶೃಂಗಾಸ್ತ್ರಯೋಽಸ್ಯ ಪಾದಾ
ದ್ವೇ ಶೀರ್ಷೇ ಸಪ್ತಹಸ್ತಾಸೋಽ ಅಸ್ಯ ॥
ತ್ರಿಧಾ ಬದ್ಧೋ ವೃಷಭೋ ರೋರವೀತಿ
ಮಹೋ ದೇವೋ ಮರ್ತ್ಯಾ ಆ ವಿವೇಶ ॥ ಋ ೪-೫೮-೩ ॥

ಅರ್ಥ–ನಾಲ್ಕು ಕೊಂಬುಗಳೂ, ಮೂರು ಕಾಲುಗಳೂ, ಎರಡು ತಲೆ ಗಳೂ ಏಳು ಕೈಗಳೂ ಇರುವ ಹಾಗೂ ಮೂರು ಬಗೆಯಾಗಿ ಕಟ್ಟಲ್ಪಟ್ಟಿರುವ ಆ ವೃಷಭನು ಗಟ್ಟಿಯಾಗಿ ಗರ್ಜಿಸುತ್ತಾನೆ. ಅಂಥ ಆ ವೃಷಭ ರೂಪದ ಮಹಾ

ದೇವನು ಮರ್ತ್ಯರನ್ನು ಪ್ರವೇಶಿಸಿದ್ದಾನೆ, ಅಥವಾ ಮನುಷ್ಯನಾಗಿ ಮಾರ್ಪಟ್ಟಿದ್ದಾನೆ.



ಹಿಂದಿನ ಕಾಲದ ಚಿತ್ರಕಾರರು ಆ ಮಂತ್ರಕ್ಕನುಸಾರವಾಗಿ ಅಗ್ನಿಯನ್ನು ಚಿತ್ರಿಸುತಿದ್ದರೆಂಬುದರ ಪ್ರಮಾಣವಾಗಿ ಶಕವರ್ಷ ೧೮೮೧ರಲ್ಲಿ ಅಂದರೆ ಸಿಂಧೂ ಕಣಿವೆಯಲ್ಲಿ ಅನ್ವೇಷಣಾತ್ಮಕ ಅಗೆತಗಳು ಪ್ರಾರಂಭವಾಗುವುದರ ಮೂವತ್ತು ವರ್ಷಗಳ ಮೊದಲು ಮುಂಬಯಿಯ ಶ್ರೀಮಾನ್ ಗೋಪಾಳ ನಾರಾಯಣ ಜನತಾಧಿಕಾರಿ ವಿನಾಯಕ ನಾರಾಯಣ ಎಂಬವರು ಸ್ವಕೀಯ ಮುದ್ರಣಾಲಯದಲ್ಲಿ ಮುದ್ರಿಸಿ ಪ್ರಕಟಿಸಿದ ಭಟ್ಟನಾರಾಯಣಕೃತ "ಸಮಂತ್ರಕ ಪ್ರಯೋಗರತ್ನಮ್" ಎಂಬ ಗ್ರಂಥದಲ್ಲಿ ಮುದ್ರಿತವಾದ ಅಗ್ನಿಯ ಚಿತ್ರವನ್ನು ಇಲ್ಲಿ ಕೊಟ್ಟಿದೆ. ಅಗ್ನಿಯ ಮೂರು ಮೋರೆಗಳ ಚಿತ್ರವು ಮುಂದೆ "ಸಿಂಧೂ ಸಂಸ್ಕೃತಿ" ಎಂಬ ಅಧ್ಯಾಯದಲ್ಲಿ ಅದಕ್ಕೆ ಸಂಬಂಧಿಸಿದ ಮಂತ್ರದೊಂದಿಗೆ ಕೊಡಲಾಗುವುದು.

ಆರ್ಯಜನರು, ಅವರೊಳಗಿನ ಇಬ್ಬರಲ್ಲಿ ವಿವಾದವೆದ್ದಾಗ ಅದನ್ನು ಪಂಚಾಯತಿಯಿಂದ ಬಗೆಹರಿಸಲು ಸಾಧ್ಯವಾಗದಿದ್ದಲ್ಲಿ ಅವರಿಬ್ಬರೊಳಗೆ ಓಟದ ಸ್ಪರ್ಧೆಯನ್ನು ಏರ್ಪಡಿಸುತಿದ್ದರು. ಮತ್ತು ಅದರಲ್ಲಿ ಗೆದ್ದವನ ವಾದವು ಸರಿಯೆಂದು ನಿರ್ಣಯಿಸಲಾಗುತಿತ್ತು. ಹಾಗೆಯೇ ಹಲವರಲ್ಲಿ ಯಾವನು ಶ್ರೇಷ್ಠನೆಂದು ನಿರ್ಣಯಿಸುವಲ್ಲಿಯೂ, ಯಾವುದೊಂದು ಪುರಸ್ಕಾರವು ಯಾವನಿಗೆ ದೊರೆಯಬೇಕೆಂದು ನಿರ್ಣಯಿಸುವಲ್ಲಿಯೂ ಓಟದ ಸ್ಪರ್ಧೆಯನ್ನು ಏರ್ಪಡಿಸಿ ನಿರ್ಣಯಿಸುತಿದ್ದರು.

ಆರ್ಯಜನರು ಅಗ್ನಿಯನ್ನು ಸ್ತುತಿಸಿ ಪದ್ಯಗಳನ್ನು ರಚಿಸಲು ಪ್ರಾರಂಭಿಸಿದ ಕಾಲದಲ್ಲಿ ಲಿಪಿಯು ಪ್ರಚಲಿತವಿರಲಿಲ್ಲ. ಮತ್ತು ಆಗಿನ ಪದ್ಯಗಳು ಕೂಡ ಬಹಳ ಚಿಕ್ಕದಾಗಿ ಎಂಟೆಂಟು ವರ್ಣಗಳ ತ್ರಿಪದಿಯ ರೂಪದಲ್ಲಿರುತಿದ್ದುವು. ಆದುದರಿಂದ ಅವುಗಳನ್ನು ಕಂಠಪಾಠ ಮಾಡುವುದು ಸುಲಭವಾಗಿತ್ತು. ಮತ್ತು ಬಹಳ ಕಾಲದ ತನಕ ಆ ಪದ್ಯಗಳು ಕಂಠಪಾಠವಾಗಿಯೇ ಮುಂದೆ ಸಾಗಿದ್ದುವು. ಮುಂದೆ ಅವರು ತಮ್ಮ ಪದ್ಯಗಳ ಭಾವವು ಸೂಚಿತವಾಗುವಂಥ ಚಿತ್ರಸಂಕೇತಗಳನ್ನು ನಿರ್ಮಿಸ

ತೊಡಗಿದರು. ಆ ಚಿತ್ರಸಂಕೇತಗಳನ್ನು ನೋಡಿದೊಡನೆಯೇ ಅವರಿಗೆ ಆ ಚಿತ್ರಸಂಕೇತದಿಂದ ಸೂಚಿತವಾಗುವ ಪದ್ಯಗಳೂ, ಆ ಪದ್ಯಗಳಲ್ಲಿ ಅಡಕವಾಗಿದ್ದ ಪ್ರಾಚೀನ ಐತಿಹ್ಯಗಳೂ ನೆನಪಿಗೆ ಬರುತಿದ್ದುವು. ಅಲ್ಲದೇ ಆ ಚಿತ್ರಸಂಕೇತಗಳು ಅವರ ದೇವತೆಗಳ ಪ್ರತೀಕಗಳಾಗಿಯೂ ಉಪಯೋಗಿಸಲ್ಪಡುತಿದ್ದುವು.

ಕಾಲಕ್ರಮೇಣ ಅವರು ತಮ್ಮ ಯಜ್ಞಚಿತಿಗಳ ಮತ್ತು ಕೆಲವು ಯಜ್ಞೋಪಕರಣಗಳ ಆಕೃತಿಗಳನ್ನು ಲಿಪಿಯಂತೆ ಉಪಯೋಗಿಸತೊಡಗಿದರು. ಆದರೆ ಅದು ಪರಿಪೂರ್ಣವಾದ ಲಿಪಿಯಾಗಿರಲಿಲ್ಲ. ಆದುದರಿಂದ ಆ ಲಿಪಿಯಿಂದ ಪದ್ಯಗಳನ್ನು ಬರೆಯಲು ಸಾಧ್ಯವಿರಲಿಲ್ಲ. ಸಿಂಧೂಕಣಿವೆಯ ಅಗೆತಗಳಲ್ಲಿ ಬೆಳಕಿಗೆ ಬಂದ ಎಲ್ಲ ಹಾಲುಗಲ್ಲಿನ ಬಿಲ್ಲೆಗಳ ಮೇಲೆ ಆರ್ಯಜನರ ದೇವರ ಪ್ರತೀಕಗಳೂ, ಪದ್ಯಗಳ ಚಿತ್ರಸಂಕೇತಗಳೂ ಇವೆ. ಮತ್ತು ಅವುಗಳ ಯಥಾವತ್ತಾದ ವರ್ಣನೆಯು ಧ್ವನಿಸೂಚಕ ಲಿಪಿಯು ನಿರ್ಮಿಸಲ್ಪಟ್ಟ ತರುವಾಯ ಬರೆದ ವೇದಸಂಹಿತೆಗಳಲ್ಲಿ ಇವೆ. ಅಂಥ ಕೆಲವು ಬಿಲ್ಲೆಗಳ ಪಡಿಯಚ್ಚುಗಳು ಮುಂದೆ ಸಿಂಧೂ ಸಂಸ್ಕೃತಿ ಎಂಬ ಅಧ್ಯಾಯದಲ್ಲಿ ಬರುವುವು.

ಹಿಂದೆ ವಿವರಿಸಿದಂತೆ ಎಲ್ಲ ಆರ್ಯಪಂಗಡಗಳ ಧರ್ಮವು ಅಗ್ನಿಯ ಆರಾಧನೆಯಾಗಿದ್ದಿತ್ತಾದರೂ ಕಾಲಕ್ರಮೇಣ ದೇಶಭೇದದಿಂದಾಗಿ ಬೇರೆ ಬೇರೆ ಪಂಗಡದ ಜನರು ಅಗ್ನಿಯನ್ನು ಬೇರೆ ಬೇರೆ ಹೆಸರುಗಳಿಂದ ಕರೆದು ಆರಾಧಿಸುತಿದ್ದರು. ಅಂದರೆ ಅವರ ಬೇರೆ ಪಂಗಡಗಳ ಜನರು ಅಗ್ನಿಯನ್ನು, ಶಿವ, ರುದ್ರ, ಕಪರ್ದಿ, ಭವ, ಅಹಿರ್ಬುಧ್ನ ಮುಂತಾದ ಬೇರೆ ಬೇರೆ ಹೆಸರುಗಳಿಂದ ಕರೆಯುತಿದ್ದರು. ಅಹಿರ್ಬುಧ್ನನು ನಾಗನಾಗಿದ್ದನು. ಅಷ್ಟು ಮಾತ್ರವಲ್ಲದೇ ಕೆಲವು ಪಂಗಡಗಳ ಜನರು ಅಗ್ನಿಯನ್ನು ಪ್ರಧಾನ ದೇವನನ್ನಾಗಿ ಆರಾಧಿಸುತಿದ್ದರಾದರೆ ಬೇರೆ ಕೆಲವು ಪಂಗಡಗಳ ಜನರು ಸೂರ್ಯನನ್ನಾಗಲೀ ಚಂದ್ರನನ್ನಾಗಲೀ ಪ್ರಧಾನ ದೇವನೆಂದು ಆರಾಧಿಸುತಿದ್ದರು. ಇಳಾ, ಸರಸ್ವತಿ, ಮತ್ತು ಭಾರತಿ ಎಂಬ ದೇವಿಯರ ಆರಾಧನೆಯು ಎಲ್ಲ ಪಂಗಡಗಳ ಜನರಲ್ಲಿ ಸಾಮಾನ್ಯವಾಗಿದ್ದಿತು. ಬೇರೆ ಕೆಲವು ದೇವಿಯರ ಆರಾಧನೆಯೂ ಪ್ರಚಲಿತವಾಗಿದ್ದಿತು.

ಅಷ್ಟು ಮಾತ್ರವಲ್ಲದೇ ಆರ್ಯ ಜನರ ಬೇರೆ ಬೇರೆ ಗೋತ್ರಗಳ ಜನರ ಕೆಲವು ಕಟ್ಟಳೆಗಳಲ್ಲಿ ಅಥವಾ ಸಂಸ್ಕಾರಗಳಲ್ಲಿ ಮತ್ತು ವೇಷಭೂಷಗಳಲ್ಲಿ ಕೂಡ ಭೇದ ಹುಟ್ಟಿದ್ದಿತು. ಅವರಲ್ಲಿ ಅಂಥ ಭೇದ ಹುಟ್ಟಿದುದರಿಂದಲೇ ತರುವಾಯದ ಕಾಲದಲ್ಲಿ ಶಿವ ಅಥವಾ ರುದ್ರನಾಗಿ ಮಾರ್ಪಟ್ಟ ಅಗ್ನಿಯ ವೇಷಭೂಷಗಳ ಸಂಬಂಧದಲ್ಲಿ ಯಜುರ್ವೇದದ ಸಂಹಿತೆಗಳಲ್ಲಿ ಪರಸ್ಪರ ವಿರುದ್ಧವಾಗಿ ತೋರುವಂಥ ವರ್ಣನೆಗಳು ಬಂದಿವೆ. ಅರ್ಥಾತ್ ಪ್ರಾಚೀನ ಕಾಲದ ಶಿವನ ಮೂರ್ತರೂಪದ ವರ್ಣನೆಗಳಲ್ಲಿ ಕಂಡುಬರುವ ಆ ಬಗೆಯ ಭೇದಗಳಿಗೆ ಪ್ರಾಚೀನ ಕಾಲದ ಆರ್ಯ ಜನರ ಪಂಗಡಗಳಲ್ಲಿ ಪ್ರಚಲಿತವಿದ್ದ ವೇಷಭೇದಗಳೇ ಕಾರಣವಾಗಿದ್ದುವು.

ಅಂದರೆ ಮಿತ್ರ, ವರುಣ, ಅಹಿರ್ಬುಧ್ನ, ಶಿವ, ಭವ, ರುದ್ರ, ಕಪರ್ದಿ ಮುಂತಾದ ಹೆಸರುಗಳಿಂದ ಕರೆಯಲ್ಪಡುತ್ತಿದ್ದ ಅಗ್ನಿಯು ಆರ್ಯಜನರ ಎಲ್ಲ ಪಂಗಡಗಳ ದೇವನಾಗಿದ್ದುದರಿಂದ ಅವನು ಬೇರೆ ಬೇರೆ ವೇಷಗಳಿಂದ ಆ ಎಲ್ಲ ಪಂಗಡಗಳ ಜನರನ್ನು ಪ್ರತಿನಿಧಿಸುತ್ತಿದ್ದ. ಆದುದರಿಂದ ಯಜುರ್ವೇದದ ಒಂದು ಮಂತ್ರದಲ್ಲಿ ರುದ್ರನನ್ನು ಅಥವಾ ಶಿವನನ್ನು „ಕಪರ್ದಿ'' ಅಂದರೆ ತಲೆಯ ಮೇಲೆ ಜಡೆ ಇರುವವನು ಎಂದು ಕರೆದಿದ್ದರೆ ಬೇರೊಂದು ಮಂತ್ರದಲ್ಲಿ ಅವನನ್ನು „ವ್ಯುಪ್ತಕೇಶ'' ಅಂದರೆ „ಮುಡಿ ಬೋಳಿಸಿದವನು'' ಅಥವಾ ಬೋಳು ತಲೆಯವನು ಎಂದು ಕರೆದಿದೆ. ಕಾರಣವೇನೆಂದರೆ ಆರ್ಯರ ಒಂದು ಪಂಗಡದ ಜನರು ಕೂದಲನ್ನು ತಲೆಯ ಮೇಲಕ್ಕೆ ಒಯ್ದು ಗಂಟು ಕಟ್ಟುತ್ತಿದ್ದರಾದರೆ ಬೇರೊಂದು ಪಂಗಡದ ಜನರು ತಲೆಯನ್ನು ನಯವಾಗಿ ಬೋಳಿಸುತ್ತಿದ್ದರು. ಹಾಗೆ ತಲೆಯನ್ನು ಮತ್ತು ಮೀಸೆ (= ಶ್ಮಶ್ರು)ಯನ್ನು ಬೋಳಿಸಿದ ಮತ್ತು ಗಡ್ಡವನ್ನು ಚಿಕ್ಕದಾಗಿ ಕತ್ತರಿಸಿದ ಮನುಷ್ಯನ ಬೊಂಬೆಯು ಸಿಂಧೂ ಕಣಿವೆಯ ಅಗೆತಗಳಲ್ಲಿ ಬೆಳಕಿಗೆ ಬಂದಿದೆ. ಹಾಗೆಯೇ ಅವರೊಳಗಿನ ಒಂದು ಪಂಗಡದ ಜನರು ಕೂದಲಿನ ಗಂಟನ್ನು ಹಣೆಯಲ್ಲಿ ಬಿಡುತ್ತಿದ್ದರಾದರೆ ಬೇರೊಂದು ಪಂಗಡದ ಜನರು ಕೂದಲಿನ ಗಂಟನ್ನು ತಲೆಯ ಹಿಂದುಗಡೆ ಬಿಡುತ್ತಿದ್ದರು. ಹಾಗೆಯೇ ಒಂದು ಪಂಗಡದ ಜನರು ಕೂದಲಿನ ಗಂಟನ್ನು ಎಡ ಕಿವಿಯ ಮೇಲೆ ಬಿಡುತ್ತಿದ್ದರಾದರೆ ವಸಿಷ್ಠ ಕುಲದ ಜನರು (ಋ. ೭-೩೩) ಕೂದಲಿನ ಗಂಟನ್ನು ಬಲ ಕಿವಿಯ ಮೇಲೆ ಬಿಡುತ್ತಿದ್ದರು. ಒಂದು ಪಂಗಡದ ಜನರು ಕೂದಲನ್ನು ಚಲೋ ರೀತಿಯಿಂದ ಹೆಣೆದು ಹೆಳಲನ್ನು ಬೆನ್ನಿನ ಮೇಲೆ ಬಿಡುತ್ತಿದ್ದರಾದರೆ ಬೇರೊಂದು ಪಂಗಡದ ಜನರು ಕೂದಲನ್ನು ಕೆದರಿ ಬೆನ್ನಿನ ಮೇಲೆ ಬಿಡುತ್ತಿದ್ದರು.

ಅದೇ ರೀತಿಯಲ್ಲಿ ಆರ್ಯಪಂಗಡಗಳ ಶವಸಂಸ್ಕಾರದಲ್ಲಿ ಕೂಡ ಹಲವು ಭೇದಗಳಿದ್ದುವು. ಒಂದು ಪಂಗಡದ ಜನರು ಶವವನ್ನು ಭೂಮಿಯಲ್ಲಿ ಹೂಳುತ್ತಿದ್ದರಾದರೆ ಬೇರೊಂದು ಪಂಗಡದ ಜನರು ಶವವನ್ನು ಒಂದು ಕಟ್ಟೆಯ ಮೇಲಿಡುತ್ತಿದ್ದರು. ಕೆಲವು ಪಂಗಡಗಳ ಜನರು ಶವವನ್ನು ಕಾಡಿಗೊಯ್ದು ಬಿಸುಡುತ್ತಿದ್ದರು. ಇಲ್ಲವೇ ಬಯಲಿನಲ್ಲಿ ಇಟ್ಟು ಬರುತ್ತಿದ್ದರು. ಕಾಲಕ್ರಮೇಣ ಅವರಲ್ಲಿ ಶವವನ್ನು ಸುಡುವ ಕ್ರಮವು ಪ್ರಚಲಿತವಾದ ತರುವಾಯ ಕೂಡ ಶವಸಂಸ್ಕಾರದಲ್ಲಿ ಹಲವು ಭೇದಗಳು ತಲೆದೋರಿದ್ದುವು. ಕೆಲವರು ಶವವನ್ನು ಸುಟ್ಟ ತರುವಾಯ ಉಳಿದ ಎಲುಬುಗಳನ್ನು ಹೆಕ್ಕಿ ಒಂದು ಕುಂಭದಲ್ಲಿ ತುಂಬಿಸಿ ಕುಂಭವನ್ನು ಹೂಳುತ್ತಿದ್ದರು, ಕೆಲವರು ಕುಂಭವನ್ನು ನೆಲದ ಮೇಲಿಟ್ಟು ಅದರ ಮೇಲೆ ಮಣ್ಣಿನ ಹೆಂಟೆಗಳನ್ನು ಪೇರುತ್ತಿದ್ದರು: ಬೇರೆ ಕೆಲವರು ಅಸ್ಥಿಕುಂಭವನ್ನು ಭೂಮಿಯಲ್ಲಿಟ್ಟು ಸಮಾಧಿ ಕಟ್ಟುತ್ತಿದ್ದರು. ಹಾಗಾಗಿ ವೈದಿಕ ಸಾಹಿತ್ಯದಲ್ಲಿ ಪ್ರೇತಸಂಸ್ಕಾರದ ಹಲವು ಭೇದಗಳು

ಮತ್ತು ವಿವರಗಳು ಕಂಡುಬರುತ್ತವೆ. ಮುಂದೆ ಕೊಡಲಾಗುವ ಮಂತ್ರದಲ್ಲಿ ಸುಡಲ್ಪಟ್ಟ ಮತ್ತು ಸುಡಲ್ಪಡದ ಎಂಬುದಾಗಿ ಎರಡು ಬಗೆಯ ಸಂಸ್ಕಾರದ ಉಲ್ಲೇಖವಿದೆ.

ಯೇ ಅಗ್ನಿದಗ್ಧಾ ಯೇ ಅನಗ್ನಿದಗ್ಧಾ
ಮಧ್ಯೇ ದಿವಃ ಸ್ವಧಯಾ ಮಾದಯಂತೇ ।
ತೇಭಿಃ ಸ್ವರಾಳಸುನೀತಿ ಮೇತಾಂ
ಯಥಾವಶಂ ತನ್ವಂ ಕಲ್ಪಯಸ್ವ ॥ ಋ. ೧೦–೧೫–೧೪ ॥

ಅರ್ಥ–(ನಮ್ಮ ಪಿತೃಗಳಲ್ಲಿ) ಯಾರು ಅಗ್ನಿಯಲ್ಲಿ ದಹಿಸಲ್ಪಟ್ಟರೋ ಯಾರು ದಹಿಸಲ್ಪಡಲಿಲ್ಲವೋ ಅವರು ಸ್ವಧೆಯಿಂದ ಅಂದರೆ ಶ್ರಾದ್ಧ ಕಾಲದಲ್ಲಿ ಸ್ವಧಾ ಎಂದು ಉಚ್ಚರಿಸುತ್ತ ಅರ್ಪಿಸಿದ ಕವ್ಯದಿಂದ ತೃಪ್ತರಾಗಿ ದಿವದಲ್ಲಿ ಆನಂದ ಪಡುತ್ತಾರೆ. ಸ್ವಯಂಪ್ರಕಾಶವುಳ್ಳ ಹೇ ದೇವನೇ, ನೀನು ಅವರಿಗೆ ನಿನ್ನ ಇಚ್ಛೆಗೆ ಸರಿದೋರಿದ ಹಾಗೂ ಪ್ರಾಣಶಕ್ತಿಯಿಂದ ನಡಿಸಲ್ಪಡುವಂಥ ಶರೀರವನ್ನು ಕರುಣಿಸು.

ಹಿಂದಿನ ಮಂತ್ರದ ಮೇಲಿಂದ ಪ್ರಾಚೀನ ಆರ್ಯಜನರು ತಮ್ಮ ಸತ್ತ ಹಿರಿಯರನ್ನು ಸುಟ್ಟರೂ, ಸುಡದೇ ಹೂಳಿಟ್ಟರೂ, ಸತ್ತ ಅವರಿಗಾಗಿ ಜರುಗಿಸಿದ ಉತ್ತರಕ್ರಿಯೆಗಳ ಫಲವಾಗಿ ಅವರು ದ್ಯುಲೋಕಕ್ಕೆ ತಲಪುತ್ತಾರೆಂತಲೂ ಅವರ ಶ್ರಾದ್ಧಗಳಲ್ಲಿ ಸ್ವಧಾ ಎಂದು ಅರ್ಪಿಸಿದ ಕವ್ಯಗಳನ್ನು ಪಡೆಯುತ್ತಾರೆಂತಲೂ, ಇಹದಲ್ಲಿ ಜರುಗಿಸಿದ ಯಜ್ಞಗಳ ಫಲವಾಗಿ ಪರದಲ್ಲಿ ಮರಳಿ ಶರೀರವನ್ನು ಪಡೆದು ಅಲ್ಲಿನ ಸುಖವನ್ನು ಭೋಗಿಸುತ್ತಾರೆಂತಲೂ ನಂಬುತಿದ್ದರೆಂದು ಸಿದ್ಧವಾಗುತ್ತದೆ.

ಮುಂದೆ ಕೊಡಲಾಗುವ ಮಂತ್ರದಲ್ಲಿ ಶವವನ್ನು, ಹೂಳಿಡುವ, ಬಿಸುಡುವ, ಸುಡುವ, ಮತ್ತು ಕಟ್ಟೆಯ ಮೇಲಿಡುವ ಉಲ್ಲೇಖಗಳಿವೆ—

ಯೇ ನಿಖಾತಾ, ಯೇ ಪರೋಪ್ತಾ, ಯೇ ದಗ್ಧಾ, ಯೇ ಚೋದ್ಧಿತಾಃ ।
ಸರ್ವಾಂಸ್ತಾನಗ್ನ ಆ ವಹ ಪಿತೃನ್ ಹವಿಷೇ ಅತ್ತವೇ ॥ ಅಥರ್ವ.
೧೮–೨–೨೪ ॥

ಅರ್ಥ – ಹೇ ಅಗ್ನಿ ದೇವನೇ, ನಮ್ಮ ಪಿತೃಗಳಲ್ಲಿ ಯಾರು ಹೂಳಲ್ಪಟ್ಟರೋ, ಯಾರು ದೂರಕ್ಕೊಯ್ದು ಬಿಸುಡಲ್ಪಟ್ಟರೋ, ಯಾರು ಸುಡಲ್ಪಟ್ಟರೋ, ಯಾರು ಕಟ್ಟೆಯ ಮೇಲೆ ಇಡಲ್ಪಟ್ಟರೋ, ಆ ಎಲ್ಲ ಪಿತೃಗಳನ್ನು ನೀನು ಹವಿಸ್ಸನ್ನುಣ್ಣುವ ಸಲುವಾಗಿ ಹೊತ್ತುಕೊಂಡು ಬಾ.

ಋಗ್ವೇದದಲ್ಲಿ ಶವವನ್ನು ಹೂಳುವುದರ ಮತ್ತು ಸುಡುವುದರ ಸ್ಪಷ್ಟವಾದ ಉಲ್ಲೇಖಗಳಿವೆ. ಹೂಳುವ ಪದ್ಧತಿಯು ಅತ್ಯಂತ ಪ್ರಾಚೀನವಾಗಿದ್ದು ಸುಡುವ ಪದ್ಧತಿಯು ಆರ್ಯಜನರು ಅಗ್ನಿಯನ್ನು ಕಂಡುಕೊಂಡ ಬಹುಕಾಲದ ತರುವಾಯ ಪ್ರಚಲಿತವಾದುದೆನ್ನಬಹುದು. ಆದರ ತರುವಾಯ ಅವರಲ್ಲಿ ಶವ

ವನ್ನು ಹೂಳುವ ಮತ್ತು ಸುಡುವ ಕ್ರಮಗಳು ಜೊತೆಯಾಗಿಯೇ ಮುಂದುವರಿದು ಕಾಲಕ್ರಮೇಣ ಜನರು ಶವವನ್ನು ಹೂಳುವ ಪದ್ಧತಿಯನ್ನು ತ್ಯಜಿಸಿ ಸುಡುವ ಕ್ರಮವನ್ನು ಮಾತ್ರ ಮುಂದೆ ಸಾಗಿಸಿದರೆನ್ನಬಹುದು. ಹಾಗಿದ್ದರೂ ಸುಟ್ಟ ಶವದ ಎಲುಬುಗಳನ್ನು ಹೆಕ್ಕಿ ಮಣ್ಣಿನ ಕುಂಭದಲ್ಲಿ ತುಂಬಿಸಿ ಆ ಕುಂಭವನ್ನು ಹೂಳುವ ಕ್ರಮವು ಇದ್ದೇ ಇತ್ತು. ಆದರೆ ಆ ಕಾಲದ ಜನರು ಶವಸಂಸ್ಕಾರದಲ್ಲಿ ಅನುಸರಿಸುತಿದ್ದ ಕ್ರಮವು ಈಗ ಪ್ರಚಲಿತವಿರುವ ಕ್ರಮದಿಂದ ಸಂಪೂರ್ಣ ಭಿನ್ನವಾಗಿದ್ದಿತು. ಪ್ರೇತಸಂಸ್ಕಾರದ ವಿಧಿಯು ಆಯಾ ವೇದ ಶಾಖೆಯ ಗೃಹ್ಯ ಸೂತ್ರಗಳಲ್ಲಿ ವಿವರಿಸಲ್ಪಟ್ಟಿದೆ.

ಆರ್ಯಜನರು ಶವವನ್ನು ಹೂಳುವ ಪದ್ಧತಿಯನ್ನು ಬಹಳ ಪ್ರಾಚೀನ ಕಾಲದಲ್ಲಿಯೇ ತ್ಯಜಿಸಿದುದರಿಂದ ತರುವಾಯದ ಕಾಲದಲ್ಲಿ ರಚಿಸಲ್ಪಟ್ಟ ಯಾವುದೊಂದು ವೈದಿಕ ಗ್ರಂಥದಲ್ಲಿಯೂ ಶವವನ್ನು ಹೂಳುವುದಕ್ಕೆ ಸಂಬಂಧಪಟ್ಟ ಯಾವ ವಿವರಗಳೂ ದೊರೆಯುವುದಿಲ್ಲ. ಪರಂತು ಬ್ರಾಹ್ಮಣಗಳಲ್ಲಿ ಮತ್ತು ಶ್ರೌತ ಹಾಗೂ ಗೃಹ್ಯ ಸೂತ್ರಗಳಲ್ಲಿ ಪ್ರೇತದಹನಕ್ಕಾಗಿ ಮತ್ತು ಅಸ್ಥಿಕುಂಭವನ್ನು ಹೂಳಲಿಕ್ಕಾಗಿ ಹೇಳಿರುವ ವಿಧಿಗಳ ಮೇಲಿಂದ ಮತ್ತು ಅಸ್ಥಿಕುಂಭವನ್ನು ಹೂಳುವಾಗ ಪಠಿಸಲಿಕ್ಕಿರುವ ವೇದಮಂತ್ರಗಳ ಆಧಾರದಿಂದ ಪ್ರಾಚೀನ ಆರ್ಯಜನರು ತಮ್ಮವರ ಪ್ರೇತಗಳನ್ನು ಹೂಳುವಾಗ ಯಾವ ಕ್ರಮವನ್ನನುಸರಿಸುತಿದ್ದರೆಂಬುದನ್ನು ಅನುಮಾನಿಸಲು ಸಾಧ್ಯವಿದೆ.

ಶತಪಥ ಬ್ರಾಹ್ಮಣದಲ್ಲಿ ಶವದಹನದ ವಿವರಗಳು ಮಾತ್ರವಲ್ಲದೆ ಯಾವನೊಬ್ಬ ಅಗ್ನಿಹೋತ್ರಿಯು ಪರದೇಶಕ್ಕೆ ಹೋಗಿದ್ದಾಗ ಅಲ್ಲಿ ಸತ್ತನೆಂದಾದರೆ ಅವನ ಶವವನ್ನು ಅಲ್ಲಿ ಸುಟ್ಟು ಉಳಿದ ಎಲುಬುಗಳನ್ನು ಒಂದು ಕುಂಭದಲ್ಲಿ ತುಂಬಿಸಿ ಊರಿಗೆ ತಂದ ತರುವಾಯ ಆ ಎಲುಬುಗಳನ್ನು ಅವನು ಆಧಾನ ಮಾಡಿದ ಅಗ್ನಿಗಳಿಂದಲೇ ಮರಳಿ ಸುಡುವ ಮತ್ತು ಹೂಳುವ ವಿವರಗಳೂ ಇವೆ.

ಹಾಗೆಯೇ ವೇದಗಳ ಬೇರೆ ಬೇರೆ ಶಾಖೆಯುವರ ಶ್ರೌತ ಮತ್ತು ಗೃಹ್ಯ ಸೂತ್ರಗಳಲ್ಲಿ ಶವದಹನದ ಮತ್ತು ಅಸ್ಥಿಕುಂಭವನ್ನು ಹೂಳುವುದರ ಸಂಬಂಧದಲ್ಲಿ ಬೇರೆ ಬೇರೆ ವಿಧಿಗಳಿವೆ. ಋಗ್ವೇದದ ಆಶ್ವಲಾಯನ ಗೃಹ್ಯಸೂತ್ರಗಳಲ್ಲಿ ಅಸ್ಥಿಕುಂಭವನ್ನು ಹೂಳುವಾಗ ಅನುಸರಿಸಲಾಗುತಿದ್ದ ವಿಧಿಯು ಪ್ರಾಚೀನ ಕಾಲದಲ್ಲಿ ಶವವನ್ನು ಹೂಳುವಾಗ ಅನುಸರಿಸಲ್ಪಡುತಿದ್ದಿತೆನ್ನಬಹುದು.

ಯಜ್ಞಕಾಲದಲ್ಲಿ ಯಜ್ಞಕುಂಡದಲ್ಲಿ ದೇವತೆಗಳಿಗೆ ಆಹುತಿಯ ರೂಪದಿಂದ ಅರ್ಪಿಸಲಾಗುವ ಹವಿಸ್ಸು ಮೊದಲಾದುವುಗಳು ಯಜ್ಞಾಗ್ನಿಯಲ್ಲಿ ಸುಟ್ಟು ಹೊಗೆಯ ರೂಪದಿಂದ ಆಕಾಶಕ್ಕೇರಿ ದಿವದಲ್ಲಿರುವ ದೇವತೆಗಳಿಗೆ ತಲಪುತ್ತವಾದುದರಿಂದ ಮೃತನ ಶವವನ್ನು ಕೂಡ ಅಗ್ನಿಯಲ್ಲಿ ಸುಟ್ಟರೆ ಅವನು ಹೊಗೆಯ ರೂಪ

ದಿಂದ ಆಕಾಶಕ್ಕೇರಿ ಸ್ವರ್ಗಕ್ಕೆ ಹೋಗುತ್ತಾನೆಂಬ ನಂಬಿಕೆಯೇ ಶವದಹನವು ಪ್ರಚಾರಕ್ಕೆ ಬರಲು ಕಾರಣವಾಗಿದ್ದಿತೆನ್ನಬಹುದು.

ಪ್ರಾಚೀನ ಆರ್ಯಜನರು ಪ್ರೇತಸಂಸ್ಕಾರದಲ್ಲಿ ಯಾವ ಕ್ರಮವನ್ನು ಅನುಸರಿಸುತಿದ್ದರೆಂಬುದನ್ನು ಅರಿತುಕೊಳ್ಳಲಾಗುವಂತೆ ಇಲ್ಲಿ ಮುಂದೆ—ಆಶ್ವಲಾಯನ ಸೂತ್ರಗಳಲ್ಲಿ ಉಲ್ಲೇಖಿಸಲ್ಪಟ್ಟಿರುವ ವಿಧಿಯನ್ನು ಸಂಗ್ರಹಿಸಿ ಕೊಡಲಾಗುವುದು—

ಆಹಿತಾಗ್ನಿಯು ಅಂದರೆ ಯಜ್ಞಗಳಿಗಾಗಿ ವಿಧಿಪೂರ್ವಕ ಗಾರ್ಹಪತ್ಯ, ಆಹವನೀಯ ಮತ್ತು ದಕ್ಷಿಣ ಎಂಬ ಮೂರು ಅಗ್ನಿಗಳನ್ನು ಆಧಾನಮಾಡಿ ಪ್ರತಿದಿನ ಅಗ್ನಿಹೋತ್ರವನ್ನು ಮತ್ತು ಇತರ ಯಜ್ಞಗಳನು ಜರುಗಿಸುವವನು ಸತ್ತರೆ—ಅವನ ಶವವನ್ನು ಸುಡಲಿಕ್ಕಾಗಿ ಗ್ರಾಮದ ಹೊರಗೆ ಆಗ್ನೇಯ ದಿಕ್ಕಿನಲ್ಲಾಗಲೀ ನೈಋತ್ಯ ದಿಕ್ಕಿನಲ್ಲಾಗಲೀ ದಕ್ಷಿಣಕ್ಕೆ ಇಳಿಜಾರಾಗಿರುವಂಥ ಹಾಗೂ ಸುತ್ತಲೂ ತೆರವಾಗಿರುವಂಥ, ಬಗೆ ಬಗೆಯ ಓಷಧಿಗಳು ಬೆಳೆಯುವಂಥ, ಸುತ್ತಲಿಂದ (ಮಳೆಯ) ನೀರು ಇಳಿದು ಹೋಗುವಂಥ ಸ್ಥಳದಲ್ಲಿ ಒಂದು ಪುರುಷ—ಪ್ರಮಾಣ ಉದ್ದದ, ಒಂದು ಮಾರು ಅಗಲದ ಮತ್ತು ಒಂದು ಗೇಣು ಆಳದ ಶ್ಮಶಾನವನ್ನು ತೋಡಬೇಕು. ಇಲ್ಲಿ ಶವದ ತಲೆಗೂದಲನ್ನು, ಗಡ್ಡ—ಮೀಸೆಗಳನ್ನು ಮತ್ತು ಕೈಕಾಲುಗಳ ಉಗುರುಗಳನ್ನು ವಪನ ಮಾಡಬೇಕು. ತರುವಾಯ ಶವವನ್ನು ಮೀಯಿಸಿ ಹೊಸ ವಸ್ತ್ರವನ್ನು ಉಡಿಸಬೇಕು ಮತ್ತು ಹೂಮಾಲೆ ಮೊದಲಾದುವುಗಳಿಂದ ಅಲಂಕರಿಸಬೇಕು. ಸಾಕಷ್ಟು ದರ್ಭೆ ಹುಲ್ಲನ್ನು ಮತ್ತು ತುಪ್ಪವನ್ನು ಸಿದ್ಧಪಡಿಸಬೇಕು. ಪಿತೃಗಳಿಗಾಗಿ ತುಪ್ಪದಲ್ಲಿ ಮೊಸರನ್ನು ಬೆರಸಿ ಪೃಷದಾಜ್ಯವನ್ನು ತಯಾರಿಸಬೇಕು. ತರುವಾಯ ಮೃತನ ಸಂಬಂಧಿಕರು ಮೃತನು ಸ್ಥಾಪಿಸಿದ ಅಗ್ನಿಗಳನ್ನೂ, ಅವನು ಉಪಯೋಗಿಸುತಿದ್ದ ಯಜ್ಞಪಾತ್ರಗಳನ್ನೂ, ಯಜ್ಞಾಯುಧಗಳನ್ನೂ ಮನೆಯಿಂದ ಹೊರಗೆ ತರಬೇಕು. ಮತ್ತು ಅವುಗಳ ಹಿಂದೆಯೇ ಪ್ರೌಢ ವಯಸ್ಸಿನ ವಿಷಮ ಸಂಖ್ಯೆಯ ಗಂಡಸರು ಶವವನ್ನು ಹೊತ್ತು ತರಬೇಕು. ಮತ್ತು ಶವಯಾತ್ರೆಯು ಶ್ಮಶಾನದ ಕಡೆಗೆ ಹೊರಡಬೇಕು. ಶವವನ್ನು ಹೊತ್ತುಕೊಂಡು ಹೋಗುವ ಬದಲಿಗೆ ಎತ್ತಿನ ಗಾಡಿಯಲ್ಲಿ ಇರಿಸಿಯೂ ಕೊಂಡುಹೋಗಬಹುದು. ಗಾಡಿಯ ಹಿಂದೆ ಅಥವಾ ಶವದ ಹಿಂದೆ ಮುಂದಿನ ಎಡಗಾಲಿಗೆ ಹಗ್ಗ ಕಟ್ಟಿದ ಅನುಸ್ತರಣಿ ಎಂದು ಕರೆಯಲ್ಪಡುವ ಆಕಳೂ, ಆಕಳಿನ ಹಿಂದೆ ಮೃತನ ಮನೆಯ ಎಲ್ಲ ಜನರೂ ಹಿರಿಯನು ಮುಂದಾಗಿ ಕಿರಿಯರು ಹಿಂದಾಗಿ ಸಾಗಬೇಕು. ಅವರು ಜುಟ್ಟಿನ ಗಂಟನ್ನು ಬಿಚ್ಚಿ ಕೂದಲನ್ನು ಬಿಟ್ಟಿರಬೇಕು, ಮತ್ತು ಜನಿವಾರವನ್ನು ಮಾಲೆಯಂತೆ ಇಳಿ ಬಿಡಬೇಕು. ಶವಯಾತ್ರೆಯು ಶ್ಮಶಾನ ಸ್ಥಳಕ್ಕೆ ತಲುಪಿದ ತರುವಾಯ ಆಧ್ವರ್ಯುವು—

ಅಪೇತ ವೀತ ವಿ ಚ ಸರ್ಪತಾತೋ
ಅಸ್ಮಾ ಏತಂ ಪಿತರೋ ಲೋಕಮಕ್ರನ್ ।

ಅಹೋಭಿರದ್ಭಿರಕ್ತುಭಿರ್ವ್ಯಕ್ತಂ
ಯಮೋ ದದಾತ್ಯವಸಾನಮಸ್ಮೈ ॥ ಋ. ೧೦–೧೪–೯ ॥

ಅರ್ಥ (ಇಲ್ಲಿ ವಾಸಿಸುವ ಅದೃಶ್ಯ ಜೀವಿಗಳೇ) ನೀವು ಇಲ್ಲಿಂದ ತೊಲಗಿರಿ; ದೂರಸಾಗಿರಿ; ಪಿತೃಗಳು ಈ ಸ್ಥಳವನ್ನು ಇವನಿಗೆ ಒವಗಿಸಿದ್ದಾರೆ. ಹಗಲು ಗಳಿಂದಲೂ, ರಾತ್ರಿಗಳಿಂದಲೂ, ಜಲಗಳಿಂದಲೂ ಶೋಭಿಸುವ ಈ ವಿಶ್ರಾಂತಿ ಸ್ಥಾನವನ್ನು ಯಮನೇ ಇವನಿಗೆ ಕರುಣಿಸಿದ್ದಾನೆ,

ಎಂಬ ಮಂತ್ರವನ್ನು ಪಠಿಸುತ್ತ ಶ್ಮಶಾನವನ್ನು ಅಪದಕ್ಷಿಣವಾಗಿ ಸಾಗುತ್ತ ಕೈಯಲ್ಲಿ ಹಿಡಿದಿರುವ ಪಾತ್ರೆಯೊಳಗಿನ ನೀರನ್ನು ಶಮೀವೃಕ್ಷದ ಶಾಖೆಯಿಂದ ಶ್ಮಶಾನದಲ್ಲಿ ಪ್ರೋಕ್ಷಿಸಬೇಕು. ತರುವಾಯ ಅವನು ಆಹವನೀಯಾಗ್ನಿಯನ್ನು. ಶ್ಮಶಾನದ (=ಗುಳಿಯ) ಆಗ್ನೇಯ ದಿಕ್ಕಿನಲ್ಲಿಯೂ, ಗಾರ್ಹಪತ್ಯಾಗ್ನಿಯನ್ನು ವಾಯವ್ಯ ದಿಕ್ಕಿನಲ್ಲಿಯೂ, ದಕ್ಷಿಣಾಗ್ನಿಯನ್ನು ನೈಋತ್ಯ ದಿಕ್ಕಿನಲ್ಲಿಯೂ ಇರಿಸಬೇಕು, ತರುವಾಯ ಚಿತೆಯನ್ನು ರಚಿಸಲು ತಿಳಿದವನು ಶ್ಮಶಾನದಲ್ಲಿ ಸಮಿತ್ತುಗಳಿಂದ ಚಿತೆ ಯನ್ನು ರಚಿಸಬೇಕು. ಚಿತೆಯ ಮೇಲೆ ದರ್ಭೆಹುಲ್ಲನ್ನು ಹಾಸಿ ಅದರ ಮೇಲೆ ಕೃಷ್ಣಮೃಗದ ಚರ್ಮವನ್ನು ರೋಮವು ಮೇಲ್ಗಡೆಯಲ್ಲಿರುವಂತೆ ಹಾಸಬೇಕು.

ಶವದೊಂದಿಗೆ ಬಂದ ಜನರು ಶವವನ್ನು ಗಾಡಿಯಿಂದೆತ್ತಿ ಗಾರ್ಹಪತ್ಯಾ ಗ್ನಿಯ ಉತ್ತರದಿಕ್ಕಿನಿಂದ ಒಯ್ದು ಚಿತೆಯ ಮೇಲೆ ಮಲಗಿಸಬೇಕು. ಶವದ ತಲೆಯು ಆಹವನೀಯಾಗ್ನಿಯ ಕಡೆಗಿರಬೇಕು, ಮೃತನ ಪತ್ನಿಯನ್ನು ಶವದ ಎಡ ಬದಿಯಲ್ಲಿ ಮಲಗಿಸಬೇಕು. ಮೃತನು ಕ್ಷತ್ರಿಯನಾಗಿದ್ದರೆ ಅವನ ಬಿಲ್ಲನ್ನು ಕೂಡ ಅಲ್ಲಿಯೇ ಇಡಬೇಕು. ತರುವಾಯ ಮೃತನ ತಮ್ಮನು, ಅವನಿಲ್ಲದಿದ್ದರೆ, ಮೃತನ ಶಿಷ್ಯನು, ಅವನೂ ಇಲ್ಲದಿದ್ದರೆ ಮನೆಯ ಮುದಿ ಸೇವಕನು—

ಉದೀರ್ಷ್ವ ನಾರ್ಯಭಿ ಜೀವಲೋಕಂ
ಗತಾಸುಮೇತಮುಪ ಶೇಷ ಏಹಿ ।
ಹಸ್ತಗ್ರಾಭಸ್ಯ ದಧಿಷೋಸ್ತವೇದಂ
ಪತ್ಯುರ್ಜನಿತ್ವಮಭಿ ಸಂ ಬಭೂಥ ॥ ೧೦–೧೮-೮– ॥

ಅರ್ಥ – ಹೇ ನಾರಿಯೇ, ನೀನು ಪ್ರಾಣವಿಲ್ಲದ ಶವದ ಬಳಿಯಲ್ಲಿ ಮಲಗಿದ್ದೀಯೇ. ಎದ್ದೇಳು ಜೀವವಿರುವವರ ಈ ಲೋಕಕ್ಕೆ ಬಾ. ನಿನ್ನನ್ನು ಪ್ರೀತಿ ಯಿಂದ ವರಿಸಿ ಕೈಹಿಡಿದ ಪತಿಗೆ ನಿನ್ನ ಪತ್ನಿತ್ವವು ಪೂರ್ಣವಾಗಿ ಸಂದಿದೆ.

ಎಂಬ ಮಂತ್ರವನ್ನು ಪಠಿಸುತ್ತ ಅವಳನ್ನು ಎಡಕೈಹಿಡಿದು ಎಬ್ಬಿಸಬೇಕು. ಎಬ್ಬಿಸುವವನು ವೃಷಲನಾಗಿದ್ದರೆ ಅಧ್ವರ್ಯುವೇ ಮಂತ್ರವನ್ನು ಪಠಿಸಬೇಕು, ಆ ತರುವಾಯ ಅವಳನ್ನು ಎಬ್ಬಿಸಿದವನು– (ಮೃತನು ಕ್ಷತ್ರಿಯನಾಗಿದ್ದರೆ)

ಧನುರ್ಹಸ್ತಾದಾದದಾನೋ ಮೃತಸ್ಯಾಸ್ಮೇ
ಕ್ಷತ್ರಾಯ ವರ್ಚಸೇ ಬಲಾಯ ।
ಅತ್ರೈವ ತ್ವಮಿಹ ವಯಂ ಸುವೀರಾಃ
ವಿಶ್ವಾಃ ಸ್ಪೃಧೋ ಅಭಿಮಾತೀರ್ಜಯೇಮ ॥ ೧೦–೧೮–೯ ॥

ಅರ್ಥ – ನಾನು ಕ್ಷಾತ್ರಕ್ಕಾಗಿ, ವರ್ಚಸ್ಸಿಗಾಗಿ ಮತ್ತು ಬಲಕ್ಕಾಗಿ ಮೃತನ ಕೈಯಿಂದ ಈ ಬಿಲ್ಲನ್ನು ತೆಗೆಯುವೆನು. (ಹೇ ಮೃತನೇ) ನೀನು ಅಲ್ಲಿರುವಂತೆಯೇ ನಾವು ಈ ಲೋಕದಲ್ಲಿ ವೀರಪುತ್ರರನ್ನು ಪಡೆದು ನಮ್ಮ ಸಕಲ ಎದುರಾಳಿಗಳನ್ನು ಮತ್ತು ವೈರಿಗಳನ್ನು ಜಯಿಸುವಂತಾಗಲಿ,

ಎಂಬ ಮಂತ್ರಪಠನದೊಂದಿಗೆ ಶವದ ಬಳಿಯಿಂದ ಬಿಲ್ಲನ್ನು ತೆಗೆದು ಅದರ ಹೆದೆಯನ್ನು ಬಿಚ್ಚಿದ ತರುವಾಯ ಅದನ್ನು ಮುರಿದು ಚಿತೆಯ ಮೇಲಿಡಬೇಕು. ತರುವಾಯ (ಮೃತನು ಶ್ರೋತ್ರಿಯನಾಗಿದ್ದರೆ) ಮುಂದೆ ಹೇಳಲಾಗುವಂತೆ ಯಜ್ಞ ಪಾತ್ರಗಳನ್ನು ಶವದ ಅಂಗಾಂಗಗಳಲ್ಲಿ ಇಡಬೇಕು,

ಬಲಗೈಯಲ್ಲಿ ತುಪ್ಪತುಂಬಿದ ಜುಹೂ. ಎಡಗೈಯಲ್ಲಿ ಉಪಭೃತ್, ಬಲ ಬದಿಯಲ್ಲಿ ಸ್ಫ್ಯ, ಎಡಬದಿಯಲ್ಲಿ ಅಗ್ನಿಹೋತ್ರ ಹವಣಿ, ಎದೆಯ ಮೇಲೆ ಧ್ರುವಾ. ತಲೆಯ ಮೇಲೆ ಕಪಾಲಗಳು, ಹಲ್ಲುಗಳ ಮೇಲೆ ಗ್ರಾವ್ಣ (= ಕಲ್ಲುಗಳು) ಮೂಗಿನ ಹೊಳ್ಳೆಗಳಲ್ಲಿ ಸ್ರುವವನ್ನು ಎರಡಾಗಿ ಮುರಿದ ಎರಡು ತುಂಡುಗಳು, ಕಿವಿಗಳಲ್ಲಿ ಪ್ರಾಶಿತ್ರಹರಣದ ಎರಡು ತುಂಡುಗಳು, ಎದೆಯ ಮೇಲೆ ಸಮವತ್ತಧಾನ ಎಂಬ ಪಾತ್ರೆ, ಮತ್ತು ಚಮಸ, ಉಪಸ್ಥದ ಮೇಲೆ ಶಮ್ಯಾ, ತೊಡೆಗಳ ಮೇಲೆ ಅರಣಿಗಳು, ಕಣಗಾಲುಗಳಲ್ಲಿ ಒರಳು ಮತ್ತು ಒನಕೆ. ಪಾದಗಳ ಮೇಲೆ ಮೊರದ ಎರಡು ತುಂಡುಗಳು. ಪಾತ್ರೆಗಳ ಹೊಂಡಗಳಲ್ಲಿ ಪೃಷದಾಜ್ಯವನ್ನು ತುಂಬಿಸಬೇಕು, ದೃಷದ್ ಮತ್ತು ಉಪಲ ಎಂಬ ಕಲ್ಲುಗಳನ್ನು ಮತ್ತು ಕುಂಬಾರನು ನಿರ್ಮಿಸಿದ ಪಾತ್ರಗಳನ್ನು ಮೃತನ ಪುತ್ರನು ಇಟ್ಟುಕೊಳ್ಳಬೇಕು.

ತರುವಾಯ ಅಧ್ವರ್ಯುವು, ಶವದೊಂದಿಗೆ ಅಟ್ಟಿತಂದಿದ್ದ ಅನುಸ್ತರಣೀ ಎಂಬ ಆಕಳನ್ನು ಕೊಂದು ಅದರ ಹೊಟ್ಟೆಯನ್ನು ಬಗೆದು ವಪೆಯನ್ನು ಹೊರ ತೆಗೆಯಬೇಕು ಮತ್ತು—

ಅಗ್ನೇರ್ವರ್ಮ ಪರಿ ಗೋಭಿರ್ವ್ಯಯಸ್ವ
ಸಂ ಪ್ರೋರ್ಣುಷ್ವ ಪೀವಸಾ ಮೇದಸಾ ಚ ।
ನೇತ್ ತ್ವಾ ಧೃಷ್ಣುರ್ಹರಸಾ ಜರ್ಹೃಷಾಣೋ
ದಧೃಗ್ವಿಧಕ್ಷ್ಯನ್ ಪರ್ಯಂಖಯಾತೇ ॥ ಋ. ೧೦–೧೬–೭ ॥

ಅರ್ಥ–(ಹೇ ಪ್ರೇತವೇ) ನೀನು ಅಗ್ನಿಯ ಜ್ವಾಲೆಗೆ ಕವಚದಂತೆ ನಿನ್ನನ್ನು ಈ ಆಕಳಿನ ಮಾಂಸದಿಂದ ಸುತ್ತಿಕೋ, ಮತ್ತು ಕೊಬ್ಬು ಹಾಗೂ ಮೇದಸ್ಸುಗಳಿಂದ ನಿನ್ನನ್ನು ಮುಚ್ಚಿಕೋ, ಆಗ ಜ್ವಾಲೆಗಳಿಂದ ಧಗಧಗಿಸುತ್ತ ಭೀಕರ ರೂಪ ತಳೆದ ಅಗ್ನಿಯು ತನ್ನ ಜ್ವಾಲೆಗಳಿಂದ ನಿನ್ನನ್ನು ಸುತ್ತುವರಿದು ಸುಟ್ಟು ಹಾಕಲಾರ–

ಎಂಬ ಮಂತ್ರದಿಂದ ಶವದ ತಲೆಯನ್ನೂ, ಬಾಯಿಯನ್ನೂ ಆ ವಪೆಯಿಂದ ಮುಚ್ಚಬೇಕು. ತರುವಾಯ ಆಕಳಿನ ಮೂತ್ರಪಿಂಡಗಳನ್ನು ತೆಗೆದು ಅವುಗಳನ್ನು–

ಅತಿ ದ್ರವ ಸಾರಮೇಯೌ ಶ್ವಾನೌ ಚತುರಕ್ಷೌ
ಶಬಲೌ ಸಾಧುನಾ ಪಥಾ ।
ಅಥಾ ಪಿತೃನ್‌ತ್ಸು ವಿದತ್ರಾಂ ಉಪೇಹಿ
ಯಮೇನ ಯೇ ಸಧಮಾದಂ ಮದಂತಿ ॥ ಋ. ೧೦–೧೪–೧೦ ॥

ಅರ್ಥ– (ಎಲೈ ಪ್ರೇತವೇ) ನೀನು ಒಳ್ಳೆಯ ಮಾರ್ಗದಿಂದ ಸಾಗುತ್ತ ಸೆರಮೆಯ ಮರಿಗಳಾದ ಬಣ್ಣ ಬಣ್ಣದ ಕಲೆಗಳುಳ್ಳ, ಮತ್ತು ನಾಲ್ಕು ಕಣ್ಣುಗಳುಳ್ಳ ಎರಡು ನಾಯಿಗಳನ್ನು (ತಪ್ಪಿಸಿ) ಮುಂದೆ ಓಡು. ಮತ್ತು ಯಮನೊಂದಿಗೆ ಒಂದೇ ಸ್ಥಳದಲ್ಲಿ ಕೂತು (ಸ್ವಧೆಗಳಿಂದ) ಆನಂದಿಸುತ್ತಿರುವ ಹಾಗೂ ತುಂಬಾ ತಿಳಿದವರಾದ ಪಿತೃಗಳನ್ನು ಸೇರು.

ಎಂಬ ಮಂತ್ರದೊಂದಿಗೆ ಎಡದ ಮೂತ್ರಪಿಂಡವನ್ನು ಪ್ರೇತದ ಎಡಗೈಯಲ್ಲಿಯೂ, ಬಲದ ಮೂತ್ರಪಿಂಡವನ್ನು ಬಲಗೈಯಲ್ಲಿಯೂ ಇಡಬೇಕು. ತರುವಾಯ ಆಕಳಿನ ಹೃತ್ಪಿಂಡವನ್ನು ತೆಗೆದು ಪ್ರೇತದ ಹೃದಯದ ಮೇಲಿಡಬೇಕು. ಮೂತ್ರ ಪಿಂಡಗಳನ್ನಿಟ್ಟ ತರುವಾಯ ಅಧ್ವರ್ಯುವು ಆಕಳಿನ ಚರ್ಮವನ್ನು ಸುಲಿದು ತೆಗೆಯಬೇಕು. ಮತ್ತು ಆಕಳಿನ ಒಂದೊಂದೇ ಅವಯವವನ್ನು ಕಡಿದು ತೆಗೆದು ಅದನ್ನು ಪ್ರೇತದ ಆಯಾ ಅವಯವದ ಮೇಲಿಡಬೇಕು. ಮತ್ತು ಕೊನೆಗೆ ಚರ್ಮವನ್ನು ಪ್ರೇತಕ್ಕೆ ಹೊದಿಸಬೇಕು. ಹಾಗೂ–

ಇಮಮಗ್ನೇ ಚಮಸಂ ಮಾ ವಿ ಜಿಹ್ವರಃ
ಪ್ರಿಯೋ ದೇವಾನಾಮುತ ಸೋಮ್ಯಾನಾಮ್ ।
ಏಷ ಯಶ್ಚಮಸೋ ದೇವಪಾನಸ್ತಸ್ಮಿನ್
ದೇವಾ ಅಮೃತಾ ಮಾದಯಂತೇ ॥ ಋ. ೧೦–೧೬–೮ ॥

ಅರ್ಥ–ಹೇ ಅಗ್ನಿದೇವನೇ, ನೀನು ಈ ಚಮಸವನ್ನು ಉರುಳಿಸಬೇಡ. ಇದು ದೇವತೆಗಳಿಗೂ. ಸೋಮದ ಅಧಿಕಾರಿಗಳಾದ ಪಿತೃಗಳಿಗೂ ಪ್ರಿಯವಾದುದಾಗಿದೆ. ದೇವತೆಗಳು ಸೋಮವನ್ನು ಕುಡಿಯುವ ಯಾವ ಈ ಚಮಸವಿದೆಯೋ ಅದರಲ್ಲಿ ಅಮೃತರೂಪೀ ದೇವತೆಗಳು ಆನಂದಿಸುತ್ತಾರೆ–

ಎಂಬ ಮಂತ್ರದೊಂದಿಗೆ ಅಧ್ವರ್ಯುವು ಪ್ರಣೀತಾ ಪಾತ್ರವನ್ನು ಕೆಳಗಿಡಬೇಕು. ತರುವಾಯ ಅವನು ತನ್ನ ಎಡಮೊಳಗಾಲನ್ನು ಬಗ್ಗಿಸಿ ಕೂತು ದಕ್ಷಿಣಾಗ್ನಿಯಲ್ಲಿ **ಅಗ್ನಯೇ ಸ್ವಾಹಾ, ಕಾಮಾಯಸ್ವಾಹಾ, ಲೋಕಾಯ ಸ್ವಾಹಾ, ಅನುಮತಯೇ ಸ್ವಾಹಾ"** ಎನ್ನುತ್ತ ಆಜ್ಯದ ನಾಲ್ಕು ಆಹುತಿಗಳನ್ನು ಅರ್ಪಿಸಬೇಕು. ಮತ್ತು **"ಅಸ್ಮಾದ್ವೈ ತ್ವಮಜಾಯಥಾ ಅಯಂತ್ವದಧಿಜಾಯತಾಮಸೌ ಸ್ವರ್ಗಾಯ ಲೋಕಾಯ ಸ್ವಾಹಾ"** ಅಂದರೆ "ಇವನಿಂದಲೇ ನೀನು (=ಅಗ್ನಿಯು) ಹುಟ್ಟಿದ್ದೆ. ಈಗ ನಿನ್ನಿಂದ ಇವನು ಹುಟ್ಟಲಿ. ಇವನು (=ಇಲ್ಲಿ ಮೃತನ ಹೆಸರನ್ನು ಉಚ್ಚರಿಸಬೇಕು) ಸ್ವರ್ಗಲೋಕಕ್ಕೆ ಸ್ವಾಹಾ" ಎನ್ನುತ್ತ ಐದನೆಯ ಆಹುತಿಯನ್ನು ಶವದ ಎದೆಯ ಮೇಲೆ ಎರೆಯಬೇಕು.

ತರುವಾಯ ಅಧ್ವರ್ಯುವು ಮೂರು ಅಗ್ನಿಗಳನ್ನೂ ಒಮ್ಮೆಲೇ ಹೊತ್ತಿಸಲು ಹೇಳಬೇಕು. ಹಾಗೆ ಅಗ್ನಿಗಳನ್ನು ಹೊತ್ತಿಸಿದಾಗ ಆಹವನೀಯಾಗ್ನಿಯ ಜ್ವಾಲೆಯು ಮೊದಲು ಶವಕ್ಕೆ ಸೋಂಕಿದರೆ ಮೃತನು ಸ್ವರ್ಗಕ್ಕೆ ಹೋಗುತ್ತಾನೆಂತಲೂ ಅವನು ಸ್ವರ್ಗದಲ್ಲಿಯೂ, ಅವನ ಪುತ್ರನು ಈ ಲೋಕದಲ್ಲಿಯೂ ಸುಖಭೋಗಿಸುವನೆಂದು ನಂಬುತಿದ್ದರು. ಗಾರ್ಹಪತ್ಯಾಗ್ನಿಯ ಜ್ವಾಲೆಯು ಮೊದಲು ಶವಕ್ಕೆ ಸೋಂಕಿದರೆ ಮೃತನು ಅಂತರಿಕ್ಷಲೋಕಕ್ಕೆ ಹೋಗುತ್ತಾನೆಂತಲೂ, ಅವನು ಅಲ್ಲಿಯೂ, ಅವನ ಪುತ್ರನು ಇಲ್ಲಿಯೂ ಸುಖವನ್ನು ಭೋಗಿಸುವರೆಂದು ನಂಬುತಿದ್ದರು. ದಕ್ಷಿಣಾಗ್ನಿಯ ಜ್ವಾಲೆಯು ಮೊದಲು ಶವಕ್ಕೆ ಸೋಂಕಿದರೆ ಮೃತನು ಮನುಷ್ಯಲೋಕಕ್ಕೆ ತಲುಪುತ್ತಾನೆಂತಲೂ ಅವನು ಅಲ್ಲಿಯೂ, ಅವನ ಪುತ್ರನು ಇಲ್ಲಿಯೂ ಸುಖಪಡುವರೆಂದು ನಂಬುತಿದ್ದರು. ಮೂರು ಅಗ್ನಿಗಳೂ ಒಮ್ಮೆಲೇ ಶವವನ್ನು ಸೋಂಕಿದರೆ ಅದನ್ನು ಅತ್ಯಂತ ಸೌಭಾಗ್ಯವೆಂದು ನಂಬುತಿದ್ದರು.

ಆ ಪ್ರಕಾರ ಶವದ ಚಿತೆಗೆ ಸೋಂಕಿದ ಅಗ್ನಿಗಳಿಂದ ಚಿತೆಯು ಉರಿದು ಶವವು ಸುಡುತ್ತಿರಲಾಗಿ ಅಧ್ವರ್ಯುವು–

ಪ್ರೇಹಿ ಪ್ರೇಹಿ ಪಥಿಭಿಃ ಪೂರ್ವೇಭಿರ್
ಯತ್ರಾ ನಃ ಪೂರ್ವೇ ಪಿತರಃ ಪರೇಯುಃ ।
ಉಭಾ ರಾಜಾನಾ ಸ್ವಧಯಾ ಮದಂತಾ
ಯಮಂ ಪಶ್ಯಾಸಿ ವರುಣಂ ಚ ದೇವಮ್ ॥ಋ. ೧೦-೧೪-೭॥

ಅರ್ಥ–ಹೇ ಮೃತನೇ, ಯಾವ ಹಳೆಯ ಮಾರ್ಗಗಳಿಂದ ನಮ್ಮ ಹಿರಿಯರು ಪರಲೋಕಕ್ಕೆ ಸಾಗಿದರೋ ಅವೇ ಮಾರ್ಗಗಳಿಂದ ನೀನು ಕೂಡ ಸಾಗು. ಆಗ ಅಲ್ಲಿ ನೀನು ನಮ್ಮ ಸ್ವಧೆಗಳಿಂದ ಆನಂದ ಪಡುತ್ತಿರುವ ಇಬ್ಬರು ರಾಜರನ್ನು ಅಂದರೆ ಯಮದೇವನನ್ನು ಮತ್ತು ವರುಣ ದೇವನನ್ನು ಕಾಣುತ್ತೀಯೇ.

ಸಂ ಗಚ್ಛಸ್ವ ಪಿತೃಭಿಃ ಸಂ ಯಮೇನ
ಇಷ್ಟಾಪೂರ್ತೇನ ಪರಮೇ ವ್ಯೋಮನ್ ।

ಹಿತ್ವಾಯಾವದ್ಯಂ ಪುನರಸ್ತಮೇಹಿ
ಸಂಗಚ್ಛಸ್ವ ತನ್ವಾ ಸುವರ್ಚಾ । ಋ. ೧೦–೧೪–೮॥

ಅರ್ಥ–ನೀನು ನೆರವೇರಿಸಿದ ಇಷ್ಟಾಪೂರ್ತಗಳ ಫಲವಾಗಿ ನೀನು ದೂರದ ಆಕಾಶದಲ್ಲಿರುವ ಪಿತೃಗಳೊಂದಿಗೂ ಪಿತೃಲೋಕದ ರಾಜನಾದ ಯಮನೊಂದಿಗೂ ಕೂಡಿಕೋ ಮತ್ತು ದೋಷಗಳನ್ನು ಕಳೆದುಕೊಂಡು ತೇಜಸ್ಸಿನಿಂದ ಕೂಡಿದ ಶರೀರವನ್ನು ಪಡೆದು ಮರಳಿ ಮನೆಗೆ ಬಾ. (ಇದರ ತರುವಾಯ, ೧೧ನೆಯ ಮತ್ತು ೧೨ನೆಯ ಋಚೆಗಳನ್ನು ಪಠಿಸಲಿಕ್ಕಿದೆ)

ಮೈನಮಗ್ನೇ ವಿದಹೋ ಮಾಭಿ ಶೋಚೋ
ಮಾಸ್ಯತ್ವಚಂ ಚಿಕ್ಷಿಪೋ ಮಾ ಶರೀರಮ್ ।

ಯದಾ ಶೃತಂ ಕೃಣವೋ ಜಾತವೇದೋ
ಅಥೇಮೇನಂ ಪರಿ ಪ್ರಹಿಣುತಾತ್ ಪಿತೃಭ್ಯಃ ॥ ಋ. ೧೦-೧೬-೧॥

ಅರ್ಥ–ಹೇ ಅಗ್ನಿದೇವನೇ, ನೀನು ಈ ಪ್ರೇತವನ್ನು ಸುಟ್ಟು ಹಾಕಬೇಡ; ಇಲ್ಲವೇ ನಾಶಮಾಡಬೇಡ. ಅವನ ಚರ್ಮವನ್ನಾಗಲೀ, ಶರೀರವನ್ನಾಗಲೀ ಒಡೆದು ಸಿಡಿಯುವಂತೆ ಮಾಡಬೇಡ. ಹೇ ಜಾತವೇದನೇ, ನೀನು ಅವನನ್ನು ಸರಿಯಾಗಿ ಪಕ್ವ ಮಾಡಿದ ತರುವಾಯ ಪಿತೃಗಳ ಬಳಿಗೆ ಸಾಗಿಸು (ಇದರ ತರುವಾಯುವ ನಾಲ್ಕು ಋಚೆಗಳನ್ನು ಪಠಿಸಲಿಕ್ಕಿದೆ.)

ಆ ರೀತಿಯಲ್ಲಿ ಪ್ರೇತ ಸಂಸ್ಕಾರವನ್ನು ಬಲ್ಲವನು ಶವದಹನವನ್ನು ನೆರವೇರಿಸಿದರೆ ಮೃತನು ಚಿತೆಯ ಬೆಂಕಿಯಿಂದ ಹೊರಡುವ ಹೊಗೆಯೊಂದಿಗೆ ಸ್ವರ್ಗಕ್ಕೆ ಸಾಗುತ್ತಾನೆಂದು ಆ ಕಾಲದ ಜನರು ನಂಬುತಿದ್ದರು. ಶವವನ್ನು ಸುಡುವಾಗ ಶ್ಮಶಾನದ ಬಳಿಯಲ್ಲಿಟ್ಟ ಆಹವನೀಯಾಗ್ನಿಯ ಈಶಾನ್ಯ ದಿಕ್ಕಿನಲ್ಲಿ ಮೊಳಗಾಲಿನಷ್ಟು ಆಳದ ಗುಳಿಯನ್ನು ತೋಡಿ ಅದರಲ್ಲಿ ನೀರನ್ನು ತುಂಬಿಸುತಿದ್ದರು. ಮತ್ತು ಆ ನೀರಿನಲ್ಲಿ ಅವಕಾ ಮತ್ತು ಶೀಪಾಲ ಎಂಬ ಎರಡು ಬಗೆಯ ಎಳೆಹುಲ್ಲುಗಳನ್ನು ಹಾಕುತಿದ್ದರು. ಏಕೆಂದರೆ, ಮೃತನು ಆ ಗುಳಿಯಿಂದ ಹೊರಗೆ ಹೋಗುತ್ತಾನೆಂತಲೂ ಹೊಗೆಯೊಂದಿಗೆ ಕೂಡಿ ಸ್ವರ್ಗಲೋಕಕ್ಕೆ ಹೋಗುತ್ತಾನೆಂತಲೂ ಅವರು ನಂಬುತಿದ್ದರು. ಎಲ್ಲ ಕಾರ್ಯಗಳಾದ ತರುವಾಯ ಅಧ್ವರ್ಯುವು ಮುಂದಿನ ಮಂತ್ರವನ್ನು ಪಠಿಸುತಿದ್ದ–

ಇಮೇ ಜೀವಾ ವಿಮೃತೈರಾವವೃತ್ರನ್
ಅಭೂದ್ ಭದ್ರಾ ದೇವಹೂತಿರ್ನೋ ಅದ್ಯ ।
ಪ್ರಾಂಚೋ ಅಗಾಮ ನೃತಯೇ ಹಸಾಯ
ದ್ರಾಘೀಯ ಆಯುಃ ಪ್ರತರಂ ದಧಾನಾಃ ॥ ಋ. ೧೦-೧೮-೩॥

ಅರ್ಥ–ಈ ಜೀವಿಸಿರುವವರು–ಸತ್ತವರಿಂದ ಬೇರ್ಪಡಲಿ ಮತ್ತು ಇಂದು ನಮ್ಮ ದೇವತೆಗಳ ಹವನವು ಮಂಗಲಕಾರಕವಾಗಲಿ; ಇನ್ನು ನಾವು ನಮ್ಮ ಆಯುಸ್ಸನ್ನು ದೀರ್ಘವಾಗಿಸುವಂತೆ ಕುಣಿಯಲಿಕ್ಕಾಗಿ ಮತ್ತು ನಗಲಿಕ್ಕಾಗಿ ಪೂರ್ವದಿಕ್ಕಿಗೆ ಹೋಗೋಣ.

ಅಧ್ವರ್ಯುವು ಆ ಮಂತ್ರವನ್ನು ಪಠಿಸಿದೊಡನೆ ಶ್ಮಶಾನ ಸ್ಥಳಕ್ಕೆ ಹೋಗಿದ್ದ ಎಲ್ಲ ಜನರು ಅಪದಕ್ಷಿಣವಾಗಿ ಒಮ್ಮೆ ಸುತ್ತಿ ಹಿಂದೆ ನೋಡದೇ ಮರಳುತಿದ್ದರು. ಹಾಗೆ ಮರಳಿ ಬರುವಾಗ ದಾರಿಯಲ್ಲಿ ಎಲ್ಲಾದರೂ ನಿಂತ ನೀರಿದ್ದರೆ ಅದರಲ್ಲಿ ಇಳಿದು ಎಲ್ಲರೂ ಒಮ್ಮೆಲೇ ಮುಳುಗಿ ಏಳುತಿದ್ದರು, ತರುವಾಯ ಮೃತನ ಗೋತ್ರದ ಮತ್ತು ಹೆಸರಿನ ಉಚ್ಚಾರದೊಂದಿಗೆ ಒಂದು ಬೊಗಸೆ ನೀರನ್ನು ಬಿಡುತಿದ್ದರು. ನೀರಿನಿಂದ ಮೇಲೆ ಬಂದು ಬೇರೆ ವಸ್ತ್ರಗಳನ್ನು ಉಡುತಿದ್ದರು. ಒದ್ದೆ ವಸ್ತ್ರಗಳನ್ನು ಒಮ್ಮೆ ಮಾತ್ರ ಹಿಂಡಿ ಅವುಗಳ ದಸಿಗಳು ಉತ್ತರ ದಿಕ್ಕಿಗಿರುವಂತೆ ಒಣಗಲಿಕ್ಕೆ ಹಾಕಿ ನಕ್ಷತ್ರಗಳು ಕಾಣಿಸುವ ತನಕವಾಗಲೀ, ಸೂರ್ಯಾಸ್ತದ ತನಕವಾಗಲೀ ಅಲ್ಲಿಯೇ ಕುಳಿತಿರುತಿದ್ದರು, ಅಲ್ಲದಿದ್ದರೆ ಸೂರ್ಯ ಬಿಂಬದ ಬದಿಯು ಕೊಂಚ ಕಾಣಿಸುತ್ತಿರುವಾಗಲೇ ಅಲ್ಲಿಂದೆದ್ದು, ಕಿರಿಯನು ಮುಂದಾಗಿಯೂ ಹಿರಿಯನು ಹಿಂದಾಗಿಯೂ ಮನೆ ಕಡೆಗೆ ಸಾಗುತಿದ್ದರು. ಮನೆಗೆ ತಲುಪಿದ ತರುವಾಯ ಪ್ರತಿಯೊಬ್ಬನು ಮನೆಯ ಬಾಗಿಲಲ್ಲಿ ಇಟ್ಟಿರುವ ಕಲ್ಲನ್ನು, ಅಗ್ನಿಯನ್ನು, ಗೋಮಯವನ್ನು, ಎಳ್ಳನ್ನು ಮತ್ತು ನೀರನ್ನು ಕೈಯಿಂದ ಮುಟ್ಟಿ ಮನೆಯೊಳಗೆ ಪ್ರವೇಶಿಸಬೇಕಾಗುತಿತ್ತು. ಆ ರಾತ್ರಿ ಅವರ ಮನೆಯಲ್ಲಿ ಯಾವ ಬಗೆಯ ಆಹಾರವನ್ನೂ ಅಡಬಾರದೆಂಬ ನಿಯಮವಿತ್ತು. ಬೆಲೆಗೆ ತಂದ ಇಲ್ಲವೇ ಬೇರೆಯವರು ತಂದು ಕೊಟ್ಟ ಆಹಾರವನ್ನು ಸೇವಿಸಬಹುದಾಗಿತ್ತು ಆ ಮನೆಯವರು ಮೂರು ರಾತ್ರಿಗಳ ತನಕ ಲವಣ-ಕ್ಷಾರಮಿಶ್ರಿತ ಆಹಾರವನ್ನು ತಿನ್ನಬಾರದಿತ್ತು.

ಆ ಕಾಲದ ಜನರು ತಮ್ಮ ಪ್ರಧಾನ ಗುರುವು ಸತ್ತಾಗ ಹದಿನೆರಡು ರಾತ್ರಿಗಳ ಕಾಲ, ಅವರ ಸಪಿಂಡದವನಾಗಲೀ, ಅಸಪಿಂಡ ಗುರುವಾಗಲೀ, ಅವಿವಾಹಿತ ಸಂಬಂಧಿಕಳಾಗಲೀ ಸತ್ತಾಗ ಹತ್ತು ರಾತ್ರಿಗಳ ಕಾಲ, ಬೇರೆ ಆಚಾರ್ಯನಾಗಲೀ ವಿವಾಹಿತ ಸಂಬಂಧಿಕಳಾಗಲೀ, ಹಲ್ಲು ಬರದ ಮಗುವಾಗಲೀ ಸತ್ತಾಗ ಮತ್ತು ಮಗುವು ಸತ್ತು ಜನಿಸಿದಾಗ ಮೂರು ರಾತ್ರಿಗಳ ಕಾಲ, ಸಹಪಾಠಿಯಾಗಲೀ. ಗ್ರಾಮ

ದೊಳಗಿನ ಯಾವನೊಬ್ಬ ಶ್ರೋತ್ರಿಯ ಬ್ರಾಹ್ಮಣನಾಗಲೀ ಸತ್ತಾಗ ಒಂದು ರಾತ್ರಿ ಕಾಲ ವೇದಾಧ್ಯಯನವನ್ನು ಮತ್ತು ದಾನ–ಪುರಸ್ಕಾರಗಳನ್ನು ಮಾಡಬಾರದೆಂಬ ವಿಧಿಯನ್ನು ಆಚರಿಸುತಿದ್ದರು.

ಶವದಹನದ ಹತ್ತು ದಿನಗಳ ತರುವಾಯ ಕೃಷ್ಣಪಕ್ಷದಲ್ಲಿ ಯಾವುದಾದರೂ ವಿಷಮ ಸಂಖ್ಯೆಯ ಹಾಗೂ ಒಂಟಿ ನಕ್ಷತ್ರದ ದಿನ ಹೆಚ್ಚು ವಯಸ್ಸಿನ ವಿಷಮ ಸಂಖ್ಯೆಯ ಸ್ತ್ರೀಯರು ಮಾತ್ರವಾಗಲೀ, ಪುರುಷರು ಮಾತ್ರವಾಗಲೀ ಸುಟ್ಟ ಶವದ ಎಲುಬುಗಳನ್ನು ಒಟ್ಟುಗೂಡಿಸುವ ಸಲುವಾಗಿ ಪುರುಷನಿಗಾದರೆ–ವಿಶಿಷ್ಟ ಚಿಹ್ನೆ ಇರುವಂಥ ಕುಂಭವನ್ನು ಮತ್ತು ಸ್ತ್ರೀಗಾದರೆ ಚಿಹ್ನೆಯಿಲ್ಲದ ಕುಂಭಿಯನ್ನು ಹಿಡಿದುಕೊಂಡು ಶ್ಮಶಾನ ಸ್ಥಳಕ್ಕೆ ಹೋಗಬೇಕಿತ್ತು. ಅಲ್ಲಿಗೆ ತಲುಪಿದ ತರುವಾಯ ಆಧ್ವರ್ಯುವು

ಶೀತಿಕೇ ಶೀತಿಕಾವತಿ, ಹ್ಲಾದಿಕೇ ಹ್ಲಾದಿಕಾವತಿ ।
ಮಂಡೂಕ್ಯಾ ಸುಸಂಗಮ ಇಮಂ ಸ್ವಗ್ನಿಂ ಹರ್ಷಯ॥ಋ ೧೦-೧೬-೧೪॥

ಅರ್ಥ – ಶೀತಲವಿರುವ ಶೀತಿಕಾ ಬಳ್ಳಿಯೇ, ಆರ್ದ್ರವಿರುವ ಆರ್ದ್ರತಾ ಬಳ್ಳಿಯೇ, ನೀನು ಮಂಡೂಕಿಯೊಂದಿಗೆ ಕೂಡಿ ಬಾ. ಮತ್ತು ಈ ಅಗ್ನಿಯನ್ನು ತಣಿಸು.

ಎಂಬ ಮಂತ್ರವನ್ನು ಪಠಿಸುತ್ತ ಅಪದಕ್ಷಿಣವಾಗಿ ಚಿತೆಯನ್ನು ಮೂರು ಸುತ್ತು ಬರುತ್ತ ಶಮೀಶಾಖೆಯಿಂದ ಪಾತ್ರೆಯಲ್ಲಿದ್ದ ಹಾಲು–ನೀರುಗಳ ಮಿಶ್ರಣವನ್ನು ಚಿತೆಯ ಮೇಲೆ ಪ್ರೋಕ್ಷಿಸುತಿದ್ದ. ತರುವಾಯ ಯಾವನಾದರೂ ಬಹಳ ಎಚ್ಚರದಿಂದ ತನ್ನ ಹೆಬ್ಬೆರಳು ಮತ್ತು ಉಂಗುರದ ಬೆರಳುಗಳಿಂದ ಕಾಲಿನ ಎಲುಬಿನಿಂದ ಪ್ರಾರಂಭಿಸಿ ತಲೆಯ ಎಲುಬಿನ ತನಕ ಒಂದೊಂದೇ ಎಲುಬನ್ನು ಎತ್ತಿ ಸದ್ದಾಗದಂತೆ ಕುಂಭದೊಳಗೆ ಸೇರಿಸುತಿದ್ದ ಮತ್ತು ಮೊರದಿಂದ ಗಾಳಿ ಹಾಕಿ ಶುದ್ಧಗೊಳಿಸುತಿದ್ದ. ತರುವಾಯ ಕುಂಭವನ್ನು ಹೊತ್ತುಕೊಂಡು ಎಲ್ಲರೂ ಮರಳುತಿದ್ದರು. ಮತ್ತು ಮಳೆಯ ನೀರಿನ ಹೊರತು ಬೇರೆ ಯಾವ ನೀರೂ ಒಟ್ಟುಗೂಡಿ ಹರಿಯದಂಥ ಸ್ಥಳಕ್ಕೆ ಬಂದು ಅಲ್ಲಿ ಒಂದು ಗುಳಿಯನ್ನು ತೋಡುತಿದ್ದರು. ಮತ್ತು ಆಧ್ವರ್ಯುವು–

ಉಪ ಸರ್ಪ ಮಾತರಂ ಭೂಮಿಮೇತಾಮ್
ಉರುವ್ಯಚಸಂ ಪೃಥಿವೀಂ ಸುಶೇವಾಮ್ ।
ಊರ್ಣಮ್ರದಾ ಯುವತಿರ್ದಕ್ಷಿಣಾವತ
ಏಷಾ ತ್ವಾ ಪಾತು ನಿರ್ಋತೇರುಪಸ್ಥಾತ್ ॥ ಋ. ೧೦–೧೮–೧೦॥

ಅರ್ಥ – ನೀನೀಗ ವಿಶಾಲೆಯೂ, ದಯಾಮಯಿಯೂ ಆಗಿರುವ ಈ ಭೂಮಾತೆಯ ಮಡಿಲಿಗೆ ಹೋಗು. ಭೂರಿ ದಕ್ಷಿಣೆಯನ್ನೀಯುವ ಮನುಷ್ಯನಿಗೆ

ಉಣ್ಣೆಯಂತೆ ಮೆದು ತಗಲುವ ಯುವತಿಯಂತಿರುವ ಈ ಪೃಥ್ವಿಯು ನಿನ್ನನ್ನು ನಿರ್ಋತಿಯ ಮಡಿಲಿನಿಂದ ಅಥವಾ ದುರ್ಗತಿಯಿಂದ ರಕ್ಷಿಸಲಿ ಎಂಬ ಮಂತ್ರವನ್ನು ಪಠಿಸುತ್ತಿರುವಾಗ ಅಸ್ಥಿಕುಂಭವನ್ನು ಹಿಡಿದಿರುವವನು ಅದನ್ನು ಗುಳಿಯಲ್ಲಿಡಬೇಕು. ತರುವಾಯ ಅಧ್ವರ್ಯುವು–

ಉಚ್ಛ್ವಂಚಸ್ವ ಪೃಥಿವಿ ಮಾ ನಿಬಾಧಥಾಃ
ಸೂಪಾಯನಾ ಭವ ಸೂಪವಂಚನಾ ।
ಮಾತಾ ಪುತ್ರಂ ಯಥಾ ಸಿಚಾಭ್ಯೇನಂ ಭೂಮ ಊರ್ಣುಹಿ
॥ ೧೦–೧೮–೧೧ ॥

ಅರ್ಥ – ಹೇ ಭೂಮಾತೆಯೇ, ನೀನು ಮೇಲಕ್ಕೆ ಉಬ್ಬು (ಹೊರತು ಕೆಳಕ್ಕೆ ತಗ್ಗಿ) ಈ ಮೃತಕನನ್ನು ಬಾಧಿಸಬೇಡ. ಸಲಿಗೆಯಿಂದ ಬಳಿಗೆ ಬರಗೊಡು. ಮತ್ತು ಅವನನ್ನು ದಯೆಯಿಂದ ನೋಡು. ತಾಯಿಯು ತನ್ನ ಮಗುವನ್ನು ಸೆರಗಿನ ಮರೆಯಲ್ಲಿ ಕಾಪಾಡುವಂತೆ ನೀನು ಇವನ ಮೇಲೆ ನಿನ್ನ ಹೊದಿಕೆಯನ್ನು ಹಾಕಿ ಕಾಪಾಡು.

ಉಚ್ಛ್ವಂಚಮಾನಾ ಪೃಥಿವೀ ಸು ತಿಷ್ಠತು
ಸಹಸ್ರಂ ಮಿತ ಉಪ ಹಿ ಶ್ರಯಂತಾಮ್ ।
ತೇ ಗೃಹಾಸೋ ಘೃತಶ್ಚುತೋ ಭವಂತು
ವಿಶ್ವಾಹಾಸ್ಮೈ ಶರಣಾಃ ಸಂತ್ವತ್ರ ॥ ಋ. ೧೦-೧೮-೧೨ ॥

ಅರ್ಥ–ಉಬ್ಬುತ್ತಿರುವ ಪೃಥಿವಿಯು ಅಲುಗಾಡದೇ ಸ್ಥಿರವಾಗಲಿ ಮತ್ತು ಮಣ್ಣಿನ ಸಾವಿರಾರು ಕಣಗಳು ಅಥವಾ ಹೆಂಟೆಗಳು ಕುಂಭವನ್ನು (ಅವನನ್ನು) ಸುತ್ತುವರಿಯಲಿ. ಅವುಗಳು ಮೃತಕನಿಗೆ ಘೃತ ಸುರಿವ ಮನೆಗಳಾಗಲಿ ಮತ್ತು ಇಲ್ಲಿ ಅವುಗಳು ಎಲ್ಲ ದಿನಗಳಲ್ಲಿ ಅವನಿಗೆ ಆಶ್ರಯಸ್ಥಾನಗಳಾಗಲಿ.

ಎಂಬ ಮಂತ್ರವನ್ನು ಪಠಿಸುತ್ತ ಗುಳಿಯಲ್ಲಿ ಕುಂಭದ ಸುತ್ತಲೂ ಮಣ್ಣನ್ನು ಹಾಕಬೇಕು. ತರುವಾಯ ಅಧ್ವರ್ಯುವು–

ಉತ್ತೇಸ್ತಭ್ನಾಮಿ ಪೃಥಿವೀಂ ತ್ವತ್ಪರೀಮಂ
ಲೋಗಂ ನಿದಧನ್ಮೋ ಅಹಂ ರಿಷಮ್ ।
ಏತಾಂ ಸ್ಥೂಣಾಂ ಪಿತರೋ ಧಾರಯಂತು
ತೇಽತ್ರಾ ಯಮಃ ಸಾದನಾ ತೇ ಮಿನೋತು ॥ ಋ. ೧೦-೧೮-೧೩॥

ಅರ್ಥ–ನಾನು ಈ ಮಣ್ಣನ್ನು ನಿನ್ನ ಮೇಲೆ ಗಟ್ಟಿಯಾಗಿ ನಿಲ್ಲಿಸುತ್ತೇನೆ. ಮತ್ತು ಅದರ ಮೇಲೆ ಈ ಮಣ್ಣಿನ ಹೆಂಟೆಯನ್ನು ಇಡುತ್ತೇನೆ. ನನಗೆ ಯಾವ

ಕೇಡೂ ಆಗದಿರಲಿ. ಪಿತೃಗಳು ನಿನಗಾಗಿ ಈ ಕಂಭವನ್ನು ಹಿಡಿದು ಕೊಂಡಿರಲಿ. ಮತ್ತು ಯಮನು ನಿನಗೆ ಇಲ್ಲಿ ವಾಸಸ್ಥಾನವನ್ನು ನಿರ್ಮಿಸಲಿ.

ಎಂಬ ಮಂತ್ರವನ್ನು ಪಠಿಸುತ್ತ ಕುಂಭದ ಬಾಯಿಯನ್ನು ಕಪಾಲದಿಂದ (ಓಡಿನಿಂದ) ಮುಚ್ಚಿ ಅದರ ಮೇಲೆ ಮಣ್ಣಿನ ಹೆಂಟೆಗಳನ್ನು ಪೇರಬೇಕು. ಮತ್ತು (ಅಲ್ಲಿ ಅಸ್ಥಿಕುಂಭವಿನೆಯೆಂಬ ಸೂಚನೆಗಾಗಿ) ಗುಳಿಯ ಬಳಿಯಲ್ಲಿ ಒಂದು ಗೂಟ ವನ್ನು ನೆಡಬೇಕು, ತರುವಾಯ ಎಲ್ಲ ಜನರು ಹಿಂದೆ ನೋಡದೇ ಮನೆಗೆ ಬಂದು ನೀರನ್ನು ಮುಟ್ಟಿ ಅಥವಾ ಸ್ನಾನ ಮಾಡಿ ಮೃತನ ಶ್ರಾದ್ಧವನ್ನು ಮಾಡಬೇಕು.

ಆರ್ಯರ ಬೇರೆ ಬೇರೆ ಪಂಗಡಗಳ ಜನರು ಅಥವಾ ತರುವಾಯದ ಕಾಲದ ವೇದಗಳ ಬೇರೆ ಬೇರೆ ಶಾಖೆಯ ಜನರು ತಮ್ಮ ಗೃಹ್ಯಕರ್ಮಗಳಲ್ಲಿ ಮತ್ತು ಸಂಸ್ಕಾರ ಗಳಲ್ಲಿ ಬೇರೆ ಬೇರೆ ಕ್ರಮವನ್ನು ಅನುಸರಿಸುತಿದ್ದರು. ಹಾಗಾಗಿ ಪ್ರೇತಸಂಸ್ಕಾರದಲ್ಲಿ ಕೂಡ ಹಲವು ಭೇದಗಳು ಹುಟ್ಟಿದ್ದುವು. ಆರ್ಯಜನರು ಅಗ್ನಿಯನ್ನು ಕಂಡು ಕೊಳ್ಳುವ ಮೊದಲು ಅವರೊಳಗಿನ ಯಾವನಾದರೂ ಸತ್ತರೆ, ಎಲ್ಲ ಪಂಗಡಗಳ ಜನರು ಶವವನ್ನು ಹೂಳಲೇ ಬೇಕಾಗಿತ್ತು. ಇಲ್ಲವೇ ಕಾಡಿಗೊಯ್ದು ಬಿಸುಡ ಬೇಕಾಗುತಿತ್ತು. ಆದರೆ ಅವರು ಅಗ್ನಿಯನ್ನು ಕಂಡು ಕೊಂಡ ತರುವಾಯವೂ ಬಹುಕಾಲದ ತನಕ ಶವವನ್ನು ಹೂಳುವ ಕ್ರಮವನ್ನು ಬಿಟ್ಟಿರಲಿಲ್ಲವೆಂಬುದು ಹಿಂದೆ ಅಸ್ಥಿಕುಂಭವನ್ನು ಹೂಳಲು ಉದಹರಿಸಿದ ಮಂತ್ರಗಳಲ್ಲಿ ಎಲುಬುಗಳ ಇಲ್ಲವೇ ಕುಂಭದ ಉಲ್ಲೇಖವಿರದೇ ಮನುಷ್ಯನ ಉಲ್ಲೇಖ ಮಾತ್ರ ಇರುವುದರ ಮೇಲಿಂದ ಸಿದ್ಧವಾಗುತ್ತದೆ.


ಅಗ್ನಿಯನ್ನು ಕಂಡುಕೊಂಡ ತರುವಾಯ ಅವರಲ್ಲಿ ಯಜ್ಞಗಳು ಪ್ರಚಲಿತ ವಾದುವಲ್ಲದೇ ಯಜ್ಞಗಳನ್ನು ಜರುಗಿಸಿದವರು ಸತ್ತ ತರುವಾಯ ಸ್ವರ್ಗಕ್ಕೆ ಹೋಗುತ್ತಾರೆಂಬ ನಂಬಿಕೆಯೂ ರೂಢವಾಯಿತು. ಅಷ್ಟು ಮಾತ್ರವಲ್ಲ ಅವನು ಯಜ್ಞಗಳನ್ನು ಜರುಗಿಸಿದುದರ ಫಲವಾಗಿ ಪರಲೋಕದಲ್ಲಿ ಮರಳಿ ಶರೀರವನ್ನು ಪಡೆಯುತ್ತಾನೆಂಬ ಕಲ್ಪನೆಯೂ ರೂಢವಾಯಿತು. ಹಾಗಾಗಿ ಅವನು ಜೀವಿಸಿದ್ದಾಗ ಯಜ್ಞಕಾರ್ಯಗಳಲ್ಲಿ ಉಪಯೋಗಿಸುತಿದ್ದ ಪಾತ್ರಗಳನ್ನು ಮತ್ತು ಯಜ್ಞಾಯುಧ ಗಳನ್ನು, ಮತ್ತು ಅಗ್ನಿಹೋತ್ರಕ್ಕಾಗಿ ಹಾಲನ್ನು ಕರೆಯಲು ಉಪಯೋಗಿಸುತಿದ್ದ ಆಕಳನ್ನು ಅವನ ಶವದೊಂದಿಗೆ ಹೂತರೆ ಅವುಗಳೆಲ್ಲವೂ ಸ್ವರ್ಗಲೋಕದಲ್ಲಿ ಅವನ ಉಪಯೋಗಕ್ಕೆ ಬೀಳಬಹುದೆಂಬ ಕಲ್ಪನೆಯು ತಲೆಯೆತ್ತಿತು, ಮತ್ತು ಆ ಕಲ್ಪನೆ ಗನುಸಾರವಾಗಿಯೇ, ಅವರು ಶವವನ್ನು ಸುಡತೊಡಗಿದಾಗಲೂ, ಯಜ್ಞಾಯುಧ ಗಳನ್ನು ಚಿತೆಯಲ್ಲಿಡತೊಡಗಿದ್ದರಲ್ಲದೇ, ಆಕಳನ್ನು ಕೊಂದು ಅದರ ಅವಯವ ಗಳನ್ನು ಕೊಯ್ದು ಶವದ ಅವಯವಗಳಲ್ಲಿ ಇಡತೊಡಗಿದ್ದರು. ಆದರೆ ಪ್ರಾಚೀನ ಕಾಲದಲ್ಲಿ ಮಣ್ಣಿನ ಪಾತ್ರಗಳ ಹೊರತು ಬೇರೆ ಬಗೆಯ ಪಾತ್ರಗಳು ಇದ್ದಿಲ್ಲವಾದುದ

ರಿಂದ ಆಗ ಶವದೊಂದಿಗೆ ಮಣ್ಣಿನ ಪಾತ್ರಗಳನ್ನೇ ಇಡುತ್ತಿದ್ದರು. ಆದುದರಿಂದಲೇ ಸಿಂಧೂಕಣಿವೆಯ ಅಗೆತಗಳಲ್ಲಿ ಬೆಳಕಿಗೆ ಬಂದಿರುವ ಶ್ಮಶಾನಗಳಲ್ಲಿ ಮನುಷ್ಯನ ಅಸ್ಥಿ ಪಂಜರದೊಂದಿಗೆ ಮಣ್ಣಿನ ಪಾತ್ರೆಗಳೂ, ಆಕಳಿನ ಅಲ್ಲದಿದ್ದರೆ ಆಡಿನ ಎಲುಬುಗಳೂ ದೊರಕುವುದಾಗಿದೆ.

ಶತಪಥ ಬ್ರಾಹ್ಮಣದಲ್ಲಿ (೧೨-೫-೧-೧೩) ಯಜ್ಞಾಗ್ನಿಗಳನ್ನು ಆಧಾನ ಮಾಡಿ ನಿತ್ಯವೂ ಅಗ್ನಿಹೋತ್ರ ಮೊದಲಾದ ಯಜ್ಞಕರ್ಮಗಳನ್ನು ಜರುಗಿಸುತ್ತಿದ್ದ ಅಗ್ನಿಹೋತ್ರಿಯು ಕಾರ್ಯವಶದಿಂದ ದೂರದೇಶಕ್ಕೆ ಹೋದಲ್ಲಿ ಸತ್ತನೆಂದಾದರೆ ಅವನನ್ನು ಅವನ ಅಗ್ನಿಗಳೊಂದಿಗೆ ಕೂಡಿಸುವುದು ಹೇಗೆ? ಎಂಬ ಪ್ರಶ್ನೆ ಇದೆ. ಮತ್ತು ಅದಕ್ಕೆ ಉತ್ತರವಾಗಿ ಮುಂದೆ ಕೊಡಲಾಗುವ ಹೇಳಿಕೆ ಇದೆ–"ಅಗ್ನಿ ಹೋತ್ರಿಯು ದೂರ ದೇಶದಲ್ಲಿ ಸತ್ತರೆ–ಅವನ ಶವವನ್ನು ಅಲ್ಲಿಯೇ ಸುಟ್ಟು ಉಳಿದ ಎಲುಬುಗಳನ್ನು ಕುಂಭದಲ್ಲಿ ತುಂಬಿಸಿ ಊರಿಗೆ ತರಬೇಕು. ಮತ್ತು ಶ್ಮಶಾನ ಸ್ಥಳದಲ್ಲಿ ಅವನ ಮನೆಯಲ್ಲಿ ಆಧಾನ ಮಾಡಿದ ಅಗ್ನಿಗಳನ್ನು ತಂದಿಟ್ಟು ಅವುಗಳ ಮಧ್ಯದಲ್ಲಿ ಚಿತೆಯನ್ನು ರಚಿಸಬೇಕು. ಮತ್ತು ಚಿತೆಯ ಮೇಲೆ ಕೃಷ್ಣಾಜಿನವನ್ನು ಹಾಸಿ ಅದರ ಮೇಲೆ ಕುಂಭದೊಳಗಿನ ಎಲುಬುಗಳನ್ನು ಸುರಿಯಬೇಕು. ತರುವಾಯ ಎಲುಬುಗಳನ್ನು ಯಥಾಕ್ರಮವಾಗಿ ಹೋದಿಸಿ ಮನುಷ್ಯಾಕೃತಿಯನ್ನು ನಿರ್ಮಿಸ ಬೇಕು. ಹಾಗೂ ಅದನ್ನು ಉಣ್ಣೆಯಿಂದ ಮುಚ್ಚಿ ತುಪ್ಪ ಎರೆದು ಅವನ ಅಗ್ನಿ ಗಳಿಂದ ಚಿತೆಯನ್ನು ಉರಿಸಿ ಎಲುಬುಗಳ ಮನುಷ್ಯಾಕೃತಿಯನ್ನು ಸುಡಬೇಕು. ಮತ್ತು ಆ ಪ್ರಕಾರವಾಗಿ ಅವನನ್ನು ಅವನ ಅಗ್ನಿಗಳೊಂದಿಗೆ ಕೂಡಿಸಬೇಕು".

ಹಾಗೆಯೇ ಶತಪಥ ಬ್ರಾಹ್ಮಣದ ೧೩–೮–೧ ಮತ್ತು ೨ರಲ್ಲಿ ಹಾಗೂ ಕಾತ್ಯಾಯನ ಶ್ರೌತಸೂತ್ರದ ೨೧–೩ ಮತ್ತು ೪ರಲ್ಲಿ ಶವವನ್ನು ಸುಟ್ಟ ತರುವಾಯ ಅದರ ಎಲುಬುಗಳನ್ನು ಹೂಳುವುದರ ಸಂಬಂಧದಲ್ಲಿ ಮುಂದಿನ ವಿವರಗಳಿವೆ– "ಸತ್ತ ಅಗ್ನಿಹೋತ್ರಿಯ ಶವವನ್ನು ಸುಟ್ಟ ತರುವಾಯ ಅವನ ಎಲುಬುಗಳನ್ನು ಹೂಳಲು ಅಥವಾ ಸತ್ತವನ ಸ್ಮಾರಕವನ್ನು ನಿರ್ಮಿಸಲು ಅವನಿಗೊಂದು "ಶ್ಮಶಾನ ವನ್ನು" (ಸಮಾಧಿಯನ್ನು) ಅಥವಾ ಪಿತೃಗಳ ಅನ್ನವನ್ನು ಸಿದ್ಧಗೊಳಿಸುತ್ತಿದ್ದರು. ಸಾಮಾನ್ಯವಾಗಿ ಅಗ್ನಿ ಹೋತ್ರಿಯು ಸತ್ತ ಒಂದು ವರ್ಷದ ತರುವಾಯ ಅಲ್ಲದಿದ್ದರೆ ವಿಷಮ ಸಂಖ್ಯೆಯ ವರ್ಷಗಳು ಸಂದ ತರುವಾಯ ಅವನ ಎಲುಬುಗಳ ಮೇಲೆ ಸಮಾಧಿಯನ್ನು ಕಟ್ಟುತ್ತಿದ್ದರು. ಹಿಂದೆ ಶವದಹನಕ್ಕಾಗಿ ಹೇಳಿರುವಂಥ ಸ್ಥಳ ದಲ್ಲಿಯೇ ಸಮಾಧಿಯನ್ನು ಕಟ್ಟಬೇಕಾಗಿತ್ತು. ಅಂಥ ಸ್ಥಳವನ್ನು ಆರಿಸಿದ ತರುವಾಯ ಅಧ್ವರ್ಯುವು ಆ ಸ್ಥಳವನ್ನು ಪಲಾಶವೃಕ್ಷದ ಶಾಖೆಯಿಂದ ಗುಡಿಸುತ್ತಿದ್ದ. ಮತ್ತು ಜನರಿಗೆ ಆ ಸ್ಥಳವನ್ನು ನೇಗಿಲಿನಿಂದ ಉಳಲಿಕ್ಕೆ

ಹೇಳುತಿದ್ದ. ಆಗ ಜನರು ಅತ್ತೀ ಮರದ ನೇಗಿಲಿಗೆ ಆರು ಎತ್ತುಗಳನ್ನು ಹೂಡಿ ಆ ಸ್ಥಳವನ್ನು ಒಮ್ಮೆ ಉದ್ದಕ್ಕೂ ಒಮ್ಮೆ ಅಡ್ಡಕ್ಕೂ ಉಳುತಿದ್ದರು. ಮತ್ತು ಅಧ್ವರ್ಯುವು ಆ ಸ್ಥಳದಲ್ಲಿ ಮಂತ್ರಗಳ ಪಠನ ಮಾಡುತ್ತ ನಾನಾ ಬಗೆಯ ಓಷಧಿಗಳ ಮತ್ತು ಧಾನ್ಯಗಳ ಬೀಜಗಳನ್ನು ಬಿತ್ತುತಿದ್ದ. ಮತ್ತು ಮೃತನ ಮನೆಯಿಂದ ತಂದಿದ್ದ ಕುಂಭದೊಳಗಿನ ಎಲುಬುಗಳನ್ನು ಶ್ಮಶಾನಕ್ಕಾಗಿ ಆರಿಸಿದ ಸ್ಥಳದಲ್ಲಿ ಸುರಿಯುತಿದ್ದ. ತರುವಾಯ ಯಾವನಾದರೊಬ್ಬನು ಆ ಕುಂಭವನ್ನು ದಕ್ಷಿಣ ದಿಕ್ಕಿಗೊಯ್ದು ಬಿಸುಡುತಿದ್ದ ಇಲ್ಲವೇ ಒಡೆಯುತಿದ್ದ. ತರುವಾಯ ಅಧ್ವರ್ಯುವು ಮಂತ್ರೋಚ್ಚಾರದೊಂದಿಗೆ ನಿನ್ನನ್ನು ಪ್ರಜಾಪತಿಗೆ ಒಪ್ಪಿಸುತ್ತೇನೆಂದು ಹೇಳಿ ಎಲ್ಲ ಎಲುಬುಗಳನ್ನು ಯಥಾಕ್ರಮದಲ್ಲಿ ಹೊಂದಿಸಿ ಮನುಷ್ಯಾಕೃತಿಯನ್ನು ನಿರ್ಮಿಸುತಿದ್ದ.[1] ಮತ್ತು ಒಂದು ಅಡಿ ಚದರದ, ಯಾವುದೊಂದು ಚಿಹ್ನೆ ಇಲ್ಲದಂಥ ಮತ್ತು ಯಜ್ಞವೇದಿಗೆ ಉಪಯೋಗಿಸಲ್ಪಡುವಂಥ ಹದಿಮೂರು ಇಟ್ಟಿಗೆಗಳನ್ನು ತರಿಸುತಿದ್ಧ. ಮತ್ತು ಮಂತ್ರ ಪಠನದೊಂದಿಗೆ ಒಂದು ಇಟ್ಟಿಗೆಯನ್ನು ಅದರ ನಾಲ್ಕು ಬದಿಗಳು ಸರಿಯಾಗಿ ನಾಲ್ಕು ದಿಕ್ಕುಗಳಿಗಿರುವಂತೆ ಅಸ್ಥಿಪಂಜರದ ಮಧ್ಯಭಾಗದಲ್ಲಿ ಇಡುತಿದ್ದ. ಅದು "ಆತ್ಮ"[2] (ಒಡಲು) ಎನಿಸಿಕೊಳ್ಳುತಿತ್ತು. ತರುವಾಯ ಅದರ ಪೂರ್ವ ದಿಕ್ಕಿನ ಬದಿಗೆ ಮೂರು ಇಟ್ಟಿಗೆಗಳನ್ನು ಜೋಡಿಸುತಿದ್ದ. ಅದು (ಶ್ಯೇನಪಕ್ಷಿಯ) ತಲೆಯೆನಿಸಿಕೊಳ್ಳುತಿತ್ತು[3] ಅದರ ದಕ್ಷಿಣ ದಿಕ್ಕಿನ ಬದಿಗೆ ಮೂರು ಇಟ್ಟಿಗೆಗಳನ್ನು ಜೋಡಿಸುತಿದ್ದ. ಅದು ಬಲದ ರೆಕ್ಕೆ[1] ಎನಿಸಿಕೊಳ್ಳುತಿತ್ತು. ತರುವಾಯ ಮೂರು ಇಟ್ಟಿಗೆಗಳನ್ನು ಉತ್ತರ ದಿಕ್ಕಿನ ಬದಿಗೆ ಜೋಡಿಸುತಿದ್ದ. ಅದು ಎಡದ ರೆಕ್ಕೆ[2] ಎನಿಸಿಕೊಳ್ಳುತಿತ್ತು. ಮತ್ತು ಉಳಿದ ಮೂರು ಇಟ್ಟಿಗೆಗಳನ್ನು ಪಶ್ಚಿಮ ದಿಕ್ಕಿನ ಬದಿಗೆ ಜೋಡಿಸುತಿದ್ದ. ಅದು ಬಾಲ[3]ವೆನಿಸಿಕೊಳ್ಳುತಿತ್ತು. ಹಾಗೆ ಇದು



ಅವನ ರೆಕ್ಕೆ ಬಾಲಗಳುಳ್ಳ ಶರೀರವು ಅಗ್ನಿಯ ಶರೀರದಂತೆಯೇ ಆಗುತಿತ್ತು.[4] ಅಂದರೆ ಆ ಹದಿಮೂರು ಇಟ್ಟಿಗೆಗಳಿಂದ ಇಂಥ ಆಕೃತಿಯು ಸಿದ್ಧವಾಗುತಿತ್ತು. ಅದು ಶ್ಯೇನಚಿತಿಯ ಆಕೃತಿಯಾಗಿರುವಂತೆಯೇ ಅಗ್ನಿಯ ಮತ್ತು ಪ್ರಜಾಪತಿಯ ಪ್ರತೀಕವೂ ಆಗಿರುತಿತ್ತು. ಇಟ್ಟಿಗೆಗಳಿಂದ ಅಂಥ ಆಕೃತಿಯನ್ನು ನಿರ್ಮಿಸಿದ ತರುವಾಯ ಅಧ್ವರ್ಯುವು ಜನರಿಗೆ ಭೂಮಿಯು ಸೀಳು ಬಿಟ್ಟಿರುವಲ್ಲಿಂದ

---

1 ಅಥೈನಂ ಯಥಾಂಗಂ ಕಲ್ಪಯತಿ, 2 ಸ ಆತ್ಮಾ 3 ತಿಸ್ರಃ ಪುರಸ್ತಾನ್ಮೂರ್ಧ ಸಂಹಿತಾಸ್ತಚ್ಛಿರಃ ।

1 ತಿಸ್ರೋದಕ್ಷಿಣತಃ । ಸ ದಕ್ಷಿಣಃ ಪಕ್ಷಃ ॥ 2. ತಿಸ್ರ ಉತ್ತರತಃ ಸ ಉತ್ತರಃ ಪಕ್ಷಃ ॥

ಮಣ್ಣನ್ನು ಅಗೆದು ತರಲು ಹೇಳುತಿದ್ದ. ಮತ್ತು ಅವರು ತಂದ ಮಣ್ಣಿನಿಂದ ಅವನು ಪುರುಷಪ್ರಮಾಣ ಉದ್ದದ ಒಂದು ಮಾರು ಅಗಲದ ಆಯತಾಕಾರದಲ್ಲಿ ಜೀರೆ ಯವರಿಗೆ ಬೇರೆ ಬೇರೆ ಎತ್ತರದ ಇಲ್ಲವೇ ಎಲ್ಲರಿಗೆ ಸಮಾನವಾಗಿ ಮೊಳಗಾಲಿನಷ್ಟು ಎತ್ತರದ ಶ್ಮಶಾನವನ್ನು ಅಂದರೆ ಸಮಾಧಿಯನ್ನು ಕಟ್ಟುತಿದ್ದ. ಶ್ಮಶಾನವನ್ನು ಕಟ್ಟುತ್ತಿರುವಾಗ ಯಾವನಾದರೊಬ್ಬನು ತೇಜಸೀ ಹುಲ್ಲಿನ ಕಂತೆಯನ್ನು ನೆಟ್ಟಗೆ ಹಿಡಿದುಕೊಂಡಿರುತಿದ್ದ. ಆ ಕಂತೆಯು ಸಂತತಿಯ ಸಂಕೇತವಾಗಿತ್ತು. ಆದುದ ರಿಂದ ಅದನ್ನು ಬಿಸುಡದೇ ಮನೆಗೆ ತಂದು ಬಿದಿರಿನ ಗೂಟಕ್ಕೆ ಕಟ್ಟಿ ನೆಟ್ಟಗೆ ನಿಲ್ಲಿಸುತಿದ್ದರು. ಸಮಾಧಿಯನ್ನು ಕಟ್ಟಿದ ತರುವಾಯ ಅಧ್ವರ್ಯುವು ಜವೆಗೋದಿ ಯನ್ನು ಬಿತ್ತುತಿದ್ದ. ಮತ್ತು ನನ್ನ ಪಾಪವು ತೊಲಗಲಿ ಎನ್ನುತ್ತ ಸಮಾಧಿಯ ಮೇಲೆ ಅವಕಾ ಹುಲ್ಲನ್ನು ಹೊಚ್ಚುತಿದ್ದ. ಹಾಗೂ ನನಗೆ "ಕ ಇರಲಿ" ಅಂದರೆ ಮಂಗಲವಾಗಲಿ ಎನ್ನುತ್ತ ಅರೂಕ್ಷತೆಗಾಗಿ (ತೇವವಿರುವಂತೆ) ಸಮಾಧಿಯ ಮೇಲೆ ದರ್ಭೆಹುಲ್ಲನ್ನು ಹೊಚ್ಚುತಿದ್ದ [1]

ತರುವಾಯ ಸಮಾಧಿಯ ಮುಂಭಾಗದಲ್ಲಿ ಪಲಾಶವೃಕ್ಷದ ಗೂಟವು ನೆಡಲ್ಪಡುತಿತ್ತು. ಪಲಾಶವು ಬ್ರಹ್ಮವಾಗಿರುವುದರಿಂದ ಮೃತನು ಬ್ರಹ್ಮವನ್ನು ಹಿಂಬಾಲಿಸಿ ಸ್ವರ್ಗಕ್ಕೆ ಹೋಗುವನೆಂದು ಅವರು ನಂಬುತಿದ್ದರು. ಶಮೀವೃಕ್ಷವು ಶಾಂತಿ ನೀಡುವುದೆಂದು ಸಮಾಧಿಯ ಎಡಬದಿಯಲ್ಲಿ ಅದರ ಗೂಟವನ್ನು ನೆಡು ತಿದ್ದರು. ವರಣ ವೃಕ್ಷವು ಪಾಪನಿವಾರಕವೆಂದು ಅದರ ಗೂಟವನ್ನು ಸಮಾಧಿಯ ಹಿಂಭಾಗದಲ್ಲಿ ನೆಟ್ಟು ಮೃತನ ಪಾಪವನ್ನು ನಿವಾರಿಸುತಿದ್ದರು. ಮತ್ತು ಸಮಾಧಿಯ ಬಲಭಾಗದಲ್ಲಿ ಕಲ್ಲಿನ ಗೂಟವನ್ನು ನಿಲ್ಲಿಸುತಿದ್ದರು. ಏಕೆಂದರೆ ಮೃತನ ಪಾಪವು ಅದನ್ನು ದಾಟಿ ಹೋಗುವುದಿಲ್ಲವೆಂದು ಅವರ ನಂಬಿಕೆಯಿತ್ತು.

ಮೃತನಿಗೆ ಪರಲೋಕದಲ್ಲಿ ಹಾಲು ಮತ್ತು ನೀರುಗಳು ಅಕ್ಷಯ ಸ್ರೋತ ಗಳಾಗಿ ದೊರೆಯುತ್ತಿರಲೆಂದು. ಅವರು ಶ್ಮಶಾನದ ಬಲಬದಿಯಲ್ಲಿ ಅಂಕುಡೊಂಕಾದ  ಇಲ್ಲವೇ ಅರ್ಧವೃತ್ತಾಕಾರದ  ಎರಡು ಪಾತಿಗಳನ್ನು ತೋಡಿ ಅವುಗಳಲ್ಲಿ ಹಾಲನ್ನು ಮತ್ತು ನೀರನ್ನು ತುಂಬಿಸುತಿದ್ದರು.[1] ಹಾಗೆಯೇ ಮನು

ತಿಸ್ರಃ ಪಶ್ಚಾತ್ ತತ್ಪುಚ್ಛಮ್ ॥ [4] ಸೋಽಸ್ಯೈಷ ಪಕ್ಷಪುಚ್ಛವಾನ್ ಆತ್ಮಾ ಯಥೈವಾಗ್ನೇಸ್ತಥಾ । ಶ. ಬ್ರಾ. ೧೩-೮-೩-ರಿಂದ ೯.

[1] ಕೃತ್ವಾ ಯವಾನ್ ವಪತಿ । ಅಘು—ಯವಯಾನೀ್ಯವಕಾಭಿಃ ಪ್ರಚ್ಛಾದಯತಿ। ಕಂ ಮೇಽಸದಿತಿ ದರ್ಭೈಃ ಪ್ರಚ್ಛಾದಯತ್ಯರೂಕ್ಷತಾಯೈ ॥ ಶ. ಬ್ರಾ. ೧೩-೮-೩-೧೩ ॥

[1] ಅಥ ದಕ್ಷಿಣತಃ ಪರಿವಶ್ರೇ ಖನಂತಿ ಃ ತೇ ಕ್ಷೀರೇಣ ಚೋದಕೇನ ಚ ಪೂರಯಂತಿ । ತೇ ಹೈನಮಮುಷ್ಮಿಂಲ್ಲೋಕೇಽಕ್ಷಿತೇ ಕುಲ್ಯೇ ಉಪಧಾವತಃ । ಸಪ್ತೋತ್ತರತಸ್ತಾ ಉದಕೇನ ಪೂರಯಂತಿ। ಪ ಹ ವೈ ಸಪ್ತಸ್ರವಂತೀ ರಘುಮತ್ಯೇತು ಮರ್ಹತ್ಯ ಘಸ್ಯೈವಾನತ್ಯಯಾಯ ॥ ಶ. ಬ್ರಾ ೧೩-೮-೪-೨ ॥

ಷ್ಯನ ಪಾಪವು ಏಳು ನದಿಗಳನ್ನು ದಾಟಿ ಹೋಗುವುದಿಲ್ಲವೆಂದು ನಂಬುತಿದ್ದ ಆವರು ಶ್ಮಶಾನದ ಎಡಬದಿಯಲ್ಲಿ ಅಂಕುಡೊಂಕಾದ ಏಳು ಪಾತಿಗಳನ್ನು ತೋಡಿ ಅವುಗಳಲ್ಲಿ ನೀರನ್ನು ತುಂಬಿಸುತಿದ್ದರು ಮತ್ತು

ಅಶ್ಮನ್ವತೀರೀಯತೇ ಸಂ ರಭಧ್ವಮ್
ಉತ್ತಿಷ್ಠತಾ ಪ್ರತರತಾ ಸಖಾಯು ।
ಅತ್ರಾ ಜಹಾಮ ಯೇ ಅಸನ್ನ ಶೇವಾಃ
ಶಿವಾನ್ ವಯಮುತ್ತರೇಮಾಭಿವಾಜಾನ್ ॥ ಋ. ೧೦-೫೩-೮ ॥

ಅರ್ಥ – ಎಲೈ ಗೆಳೆಯರೇ, ಎದ್ದೇಳಿರಿ, ಇಲ್ಲಿ ಕಲ್ಲುಗಳ ಹೊಳೆಯು ಹರಿಯುತ್ತಿದೆ. ಒಬ್ಬರನ್ನೊಬ್ಬರು ಗಟ್ಟಿಯಾಗಿ ಹಿಡಿದುಕೊಳ್ಳಿರಿ ಮತ್ತು ಹೊಳೆಯನ್ನು ದಾಟಿರಿ, ಯಾವ ಅಮಂಗಲ ಸತ್ವಗಳಿವೆಯೋ ಅವುಗಳನ್ನು ಇಲ್ಲಿಯೇ ಬಿಡೋಣ, ಮತ್ತು ಮಂಗಲಕರವಾದ ಸತ್ವಗಳನ್ನು ಅನುಲಕ್ಷಿಸಿ ನದಿಯನ್ನು ದಾಟೋಣ.

ಎಂಬ ಮಂತ್ರವನ್ನುಚ್ಚರಿಸುತ್ತ ಎಲುಬುಗಳನ್ನು ಹೂಳಲು ಬಂದಿದ್ದ ಎಲ್ಲ ಜನರು ಆ ಪಾತಿಗಳ ನೀರಿನಲ್ಲಿ ಮೂರು ಮೂರು ಕಲ್ಲುಗಳನ್ನೆಸೆಯುತಿದ್ದರು ಮತ್ತು ಆ ಪಾತಿಗಳನ್ನು ದಾಟುತಿದ್ದರು. ಹಾಗೂ ಅಪಾಮಾರ್ಗದ ಗಿಡದಿಂದ ಮೈಯನ್ನು ಉಜ್ಜಿ ಪಾಪವನ್ನು ಕಳೆಯುತಿದ್ದರು, ಹೋಗುವಾಗ ದಾರಿಯಲ್ಲಿ ಎಲ್ಲಿ ನೀರಿರುತ್ತದೋ ಅಲ್ಲಿ ಮಿಂದು ಹೊಸ ವಸ್ತ್ರವನ್ನುಡುತಿದ್ದರು. ತರುವಾಯ ಅವರಲ್ಲೊಬ್ಬನು ಎತ್ತಿನ ಬಾಲವನ್ನು ಒಂದು ಕೈಯಿಂದ ಹಿಡಿದುಕೊಳ್ಳುತಿದ್ದನು. ಅವನ ಇನ್ನೊಂದು ಕೈಯನ್ನು ಅವನ ಹಿಂದಿನವನು ಹಿಡಿದುಕೊಳ್ಳುತಿದ್ದನು. ಎರಡನೆಯವನ ಇನ್ನೊಂದು ಕೈಯನ್ನು ಮೂರನೆಯವನು ಹಿಡಿದುಕೊಳ್ಳುತಿದ್ದನು, ಆ ಪ್ರಕಾರ ಎಲ್ಲರೂ ಒಬ್ಬನ ಕೈಯನ್ನು ಮತ್ತೊಬ್ಬನು ಹಿಡಿದುಕೊಂಡು ಒಬ್ಬನ ಹಿಂದೆ ಮತ್ತೊಬ್ಬನಂತೆ ಸಾಲಾಗಿ ಎತ್ತನ್ನು ಹಿಂಬಾಲಿಸಿ ಮನೆಗೆ ಸಾಗುತಿದ್ದರು. ಅವರು ಎತ್ತನ್ನು ಅಗ್ನಿಯ ಪ್ರತೀಕವೆಂದು ನಂಬುತಿದ್ದರು. ಆದುದರಿಂದ ಎತ್ತನ್ನು ಮುಂಭಾಗದಲ್ಲಿಟ್ಟು ಅದನ್ನು ಹಿಂಬಾಲಿಸಿ ಸಾಗುವುದೆಂದರೆ ಅಗ್ನಿಯನ್ನು ಮುಂದಾಳಾಗಿ ಮಾಡಿ ಪಿತೃಲೋಕದಿಂದ ಜೀವಲೋಕಕ್ಕೆ ಸಾಗುವುದೆಂದು ಭಾವಿಸುತಿದ್ದರು[1] ಏಕೆಂದರೆ ಪ್ರಯಾಣಿಕರನ್ನು ಸರಿಯಾದ ದಾರಿಯಿಂದ ಸಾಗಿಸುವವನು ಅಗ್ನಿಯೇ ಎಂದು ಆವರು ನಂಬುತಿದ್ದರು. ಮನೆಗೆ ತಲುಪಿದ ತರುವಾಯ ಅಧ್ವರ್ಯುವು

[1] ಸ್ನಾತ್ವಾಹತಾನಿ ವಾಸಾಂಸಿ ಪರಿಧಾಯಾನಡುಹಃ ಪುಚ್ಛಮನ್ವಾರಭ್ಯಾಯಂತ್ಯಾಗ್ನೇಯೋ ಅನಡ್ವಾನಗ್ನಿಮುಖಾ ಏವ ತತ್ಪಿತೃಲೋಕಾಜ್ಜೀವಲೋಕಮ ಭ್ಯಾಯಂತ್ಯಥೋಗ್ನಿರ್ವೈ ಪಥೋ ಅತಿ ಪೋಢಾ ಸ ಏನಾನತಿವಹತಿ ॥ ಶ. ಬ್ರಾ. ೧೩-೮-೪-೬ ॥

ಗಾರ್ಹಪತ್ಯಾಗ್ನಿಯನ್ನು ಹೊತ್ತಿಸಿ ಅಗ್ನಿದೇವನಿಗೆ ಆಜ್ಯವ ಕೆಲವು ಆಹುತಿಗಳನ್ನು ಅರ್ಪಿಸುತ್ತಿದ್ದನು. ಎಲ್ಲ ಕಾರ್ಯಗಳು ಮುಗಿದ ತರುವಾಯ ಮನೆಯವರು ಅಧ್ವರ್ಯುವಿಗೆ ಸಾಮಾನ್ಯವಾಗಿ ಒಂದು ಮುದಿ ಎತ್ತನ್ನೂ, ಗದ್ದುಗೆ ಸಹಿತವಾದ ಒಂದು ಹಳೆಯ ಆಸನವನ್ನೂ ಹಳೆಯ ಜವೆ ಗೋದಿಯನ್ನೂ ದಕ್ಷಿಣೆಯಾಗಿ ಕೊಡುತ್ತಿದ್ದರು. ಧನಿಕರಾಗಿದ್ದವರು ಹೆಚ್ಚು ದಕ್ಷಿಣೆಯನ್ನು ಕೊಡುತ್ತಿದ್ದರು.

ಆರ್ಯರ ಕೆಲವು ಪಂಗಡಗಳ ಜನರು ಹಿಂದೆ ವಿವರಿಸಿದಂತೆ ಅಸ್ಥಿ ಪಂಜರದ ಮೇಲೆ ಆಯತಾಕಾರದ ಸಮಾಧಿಯನ್ನು ಕಟ್ಟುತ್ತಿದ್ದರಾದರೆ ಬೇರೆ ಕೆಲವು ಪಂಗಡಗಳ ಜನರು ಇಟ್ಟಿಗೆಗಳನ್ನು ಮಂಡಲಾಕಾರದಲ್ಲಿ ಹಾಸಿ ಅದರ ಮೇಲೆ ಅಸ್ಥಿ ಪಂಜರವನ್ನು ರಚಿಸುತ್ತಿದ್ದರು. ಮತ್ತು ಮಂಡಲಾಕಾರದ ಸ್ತೂಪವನ್ನು ಕಟ್ಟುತ್ತಿದರು. ಹೇಗಿದ್ದರೂ ಹಿಂದೆ ಅಸ್ಥಿಕುಂಭವನ್ನು ಹೂಳಲು ಹೇಳಿದ ವಿಧಿಗಳು ಪ್ರಾಚೀನ ಕಾಲದಲ್ಲಿ ಶವವನ್ನು ಹೂಳಲು ಅನುಸರಿಸಲ್ಪಡುತ್ತಿದ್ದುವೆಂಬುದರಲ್ಲಿ ಸಂದೇಹವಿಲ್ಲ.

ಪ್ರೇತ ಸಂಸ್ಕಾರವು ಸೂತ್ರಗ್ರಂಥಗಳಲ್ಲಿ 'ಪಿತೃಮೇಧ' ಎಂಬ ಹೆಸರನ್ನು ಪಡೆದಿದೆ. ಮತ್ತು ವೇದಗಳ ಬೇರೆ ಬೇರೆ ಶಾಖೆಗಳ ಜನರು ಅನುಸರಿಸುತ್ತಿದ್ದ ಸೂತ್ರಗ್ರಂಥಗಳಲ್ಲಿ ಪಿತೃಮೇಧವು ಬೇರೆ ಬೇರೆ ರೀತಿಯಲ್ಲಿ ವಿಧಿಸಲ್ಪಟ್ಟಿದೆ. ತಾತ್ಪರ್ಯವೇನೆಂದರೆ–ಶವದಹನದಲ್ಲಿ ಮತ್ತು ಅಸ್ಥಿಕುಂಭವನ್ನು ಹೂಳುವುದರಲ್ಲಿ ಆರ್ಯರ ಬೇರೆ ಬೇರೆ ಪಂಗಡಗಳು ಬೇರೆ ಬೇರೆ ವಿಧಿಯನ್ನು ಅನುಸರಿಸುತ್ತಿದ್ದರೆಂಬುದು ಸೂತ್ರ ಗ್ರಂಥಗಳಿಂದ ಮತ್ತು ಬ್ರಾಹ್ಮಣಗಳಿಂದ ಸ್ಪಷ್ಟವಾಗಿ ಸಿದ್ಧವಾಗುತ್ತದೆ.

ವೈದಿಕ ಆರ್ಯಜನರು ಮನುಷ್ಯನಿಗೆ ಸತ್ತ ತರುವಾಯ ಪರಲೋಕದ ಜೀವನ ವಿದೆಯೆಂದು ನಂಬುತ್ತಿದ್ದರೆಂಬುದು ಹಿಂದಿನ ವಿವರಗಳಿಂದ ಸ್ಪಷ್ಟವಾಗಿದೆ. ಹಾಗೆಯೇ ಹಿಂದಿನ ಕಾಲದ ಜನರು ಯಜ್ಞಗಳನ್ನು ಜರುಗಿಸುತ್ತಿದ್ದುದರ ಒಂದು ಉದ್ದೇಶವು ಸ್ವರ್ಗವನ್ನು ಸೇರುವುದೇ ಆಗಿದ್ದಿತೆಂಬುದು ಕೂಡ ಸ್ಪಷ್ಟವಾಗಿದೆ. ಅಂದರೆ ಆ ಕಾಲದಲ್ಲಿ ಅವರಲ್ಲಿ ಪುನರ್ಜನ್ಮದ ವಿಚಾರವು ತಲೆದೋರಿರಲಿಲ್ಲ. ಪರಲೋಕವಾಸದ ಕಲ್ಪನೆಯು ಕೂಡ ಅವರಲ್ಲಿ ಅಗ್ನಿಯನ್ನು ಕಂಡುಕೊಂಡ ಬಹಳ ಕಾಲದ ತರುವಾಯ ತಲೆದೋರಿದ್ದಿತು. ಮೊದಲು ನಕ್ಷತ್ರಪುಂಜಗಳು "ದೇವತೆಗಳು" ಮತ್ತು "ಅಸುರರು" ಎಂಬ ಎರಡೇ ವರ್ಗಗಳಾಗಿದ್ದುವು. ಧ್ರುವತಾರೆಯನ್ನು ಸುತ್ತುವ ನೇಗಿಲಿನಾಕೃತಿಯ ಏಳು ನಕ್ಷತ್ರಗಳು ಬರಿಯ ಕರಡಿಗಳಾಗಿದ್ದುವು. ಮತ್ತು ಕೃತ್ತಿಕಾ ಪುಂಜದೊಳಗಿನ ಏಳು ತಾರಕೆಗಳು ಆ ಕರಡಿಗಳ ಪತ್ನಿಯರಾಗಿದ್ದುವು.

ಮುಂದೆ ಯಜ್ಞಗಳು ಪ್ರಚಲಿತವಾಗಿ ಪರಲೋಕವಾಸದ ಕಲ್ಪನೆಯು ತಲೆಯೆತ್ತಿದ ತರುವಾಯ ಅವರ ಮೊದಲಿನ ಭಾವನೆಗಳಲ್ಲಿ ಮೆಲ್ಲ ಮೆಲ್ಲನೇ ಮಾರ್ಪಾಟುಗಳಾಗ ತೊಡಗಿದುವು. "ಋಕ್ಷ (ಕರಡಿ)ಗಳು" "ಋಷಿಗಳಾದುವು".

ತರುವಾಯ ಆ ಋಷಿಗಳು ಆರ್ಯಜನರ ಪಿತೃಗಳಾದ ಏಳ್ವರು ದೇವ ಋಷಿಗಳಾದರು. ನಕ್ಷತ್ರಗಳೆಲ್ಲವೂ ಕೂಡಿ ‚‚ವಿಶ್ವೇದೇವಾಃ'' ಎಂಬ ಗುಂಪಾದುವು.

ಹಾಗೆಯೇ ಆರ್ಯಜನರು ಉತ್ತರ ಧ್ರುವ ಪ್ರದೇಶವನ್ನು ತೊರೆದು ಕೆಳಗಿನ ಅಕ್ಷಾಂಶಗಳ ಪ್ರದೇಶಗಳಲ್ಲಿ ಬಂದು ನೆಲಸಿದ ತರುವಾಯ ಅವರ ಮೂಲಭಾವನೆಗಳೆಲ್ಲವೂ ತಲೆಕೆಳಗಾದುವು. ಮಾತ್ರವಲ್ಲ ಕಾಲಕ್ರಮೇಣ ಅವರು ಹಲವು ಪ್ರಾಚೀನ ಐತಿಹ್ಯಗಳನ್ನೂ ಮರೆತರು. ಹಲವು ಹಳೆಯ ಕಲ್ಪನೆಗಳನ್ನು ತ್ಯಜಿಸಿದರು. ಹೊಸ ಕಲ್ಪನೆಗಳನ್ನು ಕಟ್ಟಿದರು. ಹಾಗೆಯೇ ಈ ಜಗತ್ತು ಹೇಗೆ ಹುಟ್ಟಿತು? ಇದನ್ನು ಯಾರು ನಿರ್ಮಿಸಿದರು? ಸೂರ್ಯ–ಚಂದ್ರಾದಿಗಳು ಯಾರ ನಿಯಮಕ್ಕನುಸಾರವಾಗಿ ಸುತ್ತಿ ಬರುತ್ತಾರೆ? ಮುಂತಾದ ಪ್ರಶ್ನೆಗಳಿಗೆ ಉತ್ತರಗಳನ್ನು ಹುಡುಕ ತೊಡಗಿದರು. ಹಾಗೂ ಅವರು ಭಾರತವರ್ಷವನ್ನು ಪ್ರವೇಶಿಸಿ ಅಲ್ಲಿ ನೆಲಸಿದ ತರುವಾಯ ಅವರು ಆ ಮೊದಲೆಂದೂ ಯೋಚಿಸದಿದ್ದ ‚‚ಜೀವಾತ್ಮನ'' ಶೋಧಕ್ಕೂ ತೊಡಗಿದರು. ಅವರ ಅಂಥ ಶೋಧದ ಫಲವೇ ಜ್ಞಾನದ ಆಗರಗಳಾಗಿರುವ "ಉಪನಿಷತ್ತು"ಗಳಾಗಿವೆ.

೫. ಆರ್ಯ ಜನರ ವೈದಿಕ ಸಾಹಿತ್ಯ

ಆರ್ಯ ಜನರು ದೇವರೆಂದು ನಂಬುತಿದ್ದ ಸೂರ್ಯನನ್ನು, ಚಂದ್ರನನ್ನು, ನಕ್ಷತ್ರಗಳನ್ನು ಮತ್ತು ಅಗ್ನಿಯನ್ನು ಸ್ತುತಿಸಿ ರಚಿಸಿದ ಛಂದಸ್ಸುಗಳ ಅಥವಾ ಸ್ತುತಿ ರೂಪದ ಪದ್ಯಗಳ ಹಾಗೂ ಯಜುಸ್ ಎಂದು ಕರೆಯಲ್ಪಟ್ಟ ಪದ್ಯರೂಪದ ಗದ್ಯ ವಾಕ್ಯಗಳ ಸಂಗ್ರಹವು ,,ವೇದ'' ಎಂಬ ಹೆಸರಿನಿಂದ ಕರೆಯಲ್ಪಟ್ಟಿದೆ. ಮತ್ತು ವೇದ ಗಳಿಂದ ಪ್ರಾರಂಭವಾದ ಹಾಗೂ ಅವುಗಳನ್ನು ಆಧರಿಸಿ ರಚಿತವಾದ ತರುವಾಯದ ಸಾಹಿತ್ಯವು ,,ವೈದಿಕ ಸಾಹಿತ್ಯ" ಎಂದು ಹೆಸರಾಗಿದೆ. ಆರ್ಯಜನರ ಪ್ರಾಚೀನ ಇತಿಹಾಸವನ್ನು ಮತ್ತು ಸಂಸ್ಕೃತಿಯನ್ನು ಅರಿತುಕೊಳ್ಳಲು ವೈದಿಕ ಸಾಹಿತ್ಯವು ಮುಖ್ಯ ಸಾಧನವಾಗಿದೆ. ಆದುದರಿಂದ ಈ ಅಧ್ಯಾಯದಲ್ಲಿ ಈ ತನಕ ತಿಳಿದು ಬಂದಿರುವ ಅಧಿಕಾಂಶ ವೈದಿಕ ಗ್ರಂಥಗಳ ಹೆಸರುಗಳನ್ನು ಮತ್ತು ಅವುಗಳ ಸಂಕ್ಷಿಪ್ತ ಪರಿಚಯವನ್ನು ಕೊಡಲಾಗುವುದು,

ಭಾರತ ವರ್ಷದ ಹೊರಗೆ ಮಧ್ಯ ಆಸ್ಯದಲ್ಲಿ, ಪಶ್ಚಿಮ ಆಸ್ಯದಲ್ಲಿ ಮತ್ತು ಯೂರೋಪಿನಲ್ಲಿ ನೆಲಸಿದ್ದ ಆರ್ಯಮೂಲದ ಎಲ್ಲ ಜನರು ಕ್ರೈಸ್ತರಾಗಿ ಮತ್ತು ಮುಸಲ್ಮಾನರಾಗಿ ಮಾರ್ಪಟ್ಟು ಬಹಳ ಕಾಲ ಸಂದುದರಿಂದ ಅವರ ಬಳಿಯಲ್ಲೀಗ ವೈದಿಕ ಧರ್ಮಕ್ಕೆ ಸಂಬಂಧಪಟ್ಟ ಯಾವ ಬಗೆಯ ಪ್ರಾಚೀನ ಸಾಹಿತ್ಯವೂ ಉಳಿದಿಲ್ಲ. ಆ ಕಾರಣದಿಂದ ಮತ್ತು ಆರ್ಯಜನರಲ್ಲಿ ಹಿಂದೆ ಲಿಪಿಯು ಪ್ರಚಲಿತವಿರಲಿಲ್ಲವೆಂಬ ತಪ್ಪುಕಲ್ಪನೆಯಿಂದ ಪ್ರೊ. ಫ್ರೆಡ್ರಿಕ್‌ಮೆಕ್ಸ್‌ಮುಲ್ಲರ್ ಎಂಬ ವಿದ್ವಾಂಸರು ವೈದಿಕ ಸಾಹಿತ್ಯದಲ್ಲಿ ಸರ್ವಪ್ರಥಮವೂ ಪ್ರಾಚೀನತಮವೂ ಆಗಿರುವ ಋಗ್ವೇದದ ಮಂತ್ರ ಗಳು ಆರ್ಯಜನರು ಭಾರತವರ್ಷದಲ್ಲಿ ನೆಲಸಿದ ತರುವಾಯ ಶಕಪೂರ್ವ ೧೩೦೦ ವರ್ಷಗಳ ಈಚೆನಿಂದ ರಚಿಸಲ್ಪಡತೊಡಗಿದ್ದುವೆಂಬ ಅಭಿಪ್ರಾಯವನ್ನು ವ್ಯಕ್ತ ಗೊಳಿಸಿದ್ದಾರೆ. ಆದರೆ ಅವರ ಆ ಅಭಿಪ್ರಾಯವು ವಸ್ತುಸ್ಥಿತಿಗೆ ವಿರುದ್ಧವಾದುದೆಂದು ಮುಂದೆ ,,ವೇದ ಮಂತ್ರಗಳ ಪ್ರಾಚೀನತೆ'' ಮತ್ತು ,,ಬ್ರಾಹ್ಮೀ ಲಿಪಿಯ ಮೂಲ" ಎಂಬ ಅಧ್ಯಾಯಗಳಲ್ಲಿ ಸಿದ್ಧಪಡಿಸಲಾಗುವುದು.

ವೈದಿಕ ಸಾಹಿತ್ಯವು ಜಗತ್ತಿನ ಲಿಖಿತ ಸಾಹಿತ್ಯದಲ್ಲಿಯೇ ಪ್ರಾಚೀನತಮ ವೆಂದು ಗಣಿಸಬಹುದಾದ ಋಗ್ವೇದದ ಮಂತ್ರಗಳಿಂದ ಪ್ರಾರಂಭವಾಗಿ ವೇದಾಂಗ ಗಳಲ್ಲಿ ಕೊನೆಗೊಳ್ಳುತ್ತದೆ. ಆ ಸಾಹಿತ್ಯದಲ್ಲಿ ಆರ್ಯಜನರು ತೀರ ಕಾಡು ಸ್ಥಿತಿಯಿಂದ ಹಂತ ಹಂತವಾಗಿ ಸುಧಾರಿಸುತ್ತ ಸುಸಂಸ್ಕೃತರೂ, ಸಭ್ಯರೂ, ನಾಗರಿಕರೂ, ವಿಜ್ಞಾನಿಗಳೂ ಉನ್ನತ ಮಟ್ಟದ ಆಧ್ಯಾತ್ಮಜ್ಞಾನಿಗಳೂ ಆಗುತ್ತ ಸಾಗಿದ ಸಕಲ ಅವಸ್ಥಾಂತರಗಳನ್ನು ಸೂಚಿಸುವ ಇತಿಹಾಸವು ಅಡಕವಾಗಿದೆ. ಅಂದರೆ ಆ ಸಾಹಿತ್ಯವು

ಆರ್ಯಜನರು ದಿವ್ಯ ಅಥವಾ ದೇವ ಎಂದು ನಂಬಿದ ಅಗ್ನಿ, ಸೂರ್ಯ, ಚಂದ್ರ, ನಕ್ಷತ್ರ ಮೊದಲಾದ ದೇವತೆಗಳನ್ನು ತೃಪ್ತಿಪಡಿಸಿ ಒಲಿಸಿಕೊಳ್ಳುವ ಸಲುವಾಗಿ ಜರುಗಿಸಲಾಗುತ್ತಿದ್ದ ಯಜ್ಞಗಳನ್ನು ಮತ್ತು ಆ ಮೂಲಕ ಅಗ್ನಿಯನ್ನು ಪ್ರಧಾನನನ್ನಾಗಿ ಮಾಡಿ ರಚಿಸಿದ ಸ್ತುತಿ ರೂಪದ ಪದ್ಯದ ಹಾಗೂ ಗದ್ಯದ ರೂಪ ದಿಂದ ನಾನಾ ಅಂಗಗಳಾಗಿ ಬೆಳೆದಿದೆ. ಅಥವಾ ಮೂಲದಲ್ಲಿ ಕೆಲವು ದೇವತೆಗಳ ಸಂಬಂಧವಲ್ಲಿ ಪ್ರಾಚೀನ ಆರ್ಯಜನರ ಅಂತಃಕರಣದಲ್ಲಿ ಉದ್ಭವಿಸಿದ ಭಾವನೆಗಳನ್ನು ಮತ್ತು ಕಲ್ಪನೆಗಳನ್ನು ಆಧರಿಸಿ ರಚಿಸಲ್ಪಟ್ಟ ಛಂದಸ್ಸುಗಳಿಂದ ಪ್ರಾರಂಭವಾಗಿ ಕಾಲ ಕ್ರಮೇಣ ಅವುಗಳಲ್ಲಿ ಹಲವು ಐತಿಹ್ಯಗಳು ಸೇರಿ ಪದ್ಯಗಳ ಮತ್ತು ಗದ್ಯ–ಆಖ್ಯಾನ ಗಳ ರೂಪದಲ್ಲಿ ಬೆಳೆದು ಸೂತ್ರರೂಪದ ಸಾಹಿತ್ಯದಲ್ಲಿ ಕೊನೆಗೊಂಡಿದೆ.

ಛಂದಸ್ಸು ಅಥವಾ ಪದ್ಯರೂಪದ ಸ್ತುತಿಯು ‥ಋಕ್ ಅಥವಾ ಋಚೆ'' ಎಂದು ಹೆಸರಾಗಿದೆ. ಮಾತ್ರೆ, ಗಣ, ಚರಣ ಮೊದಲಾದ ಛಂದೋ ನಿಯಮಗಳಿಗೆ ಒಳಪಡದೇ ಉಚ್ಚಾರಣೆಯಲ್ಲಿ ಪದ್ಯದಂತಿರುವ ಗದ್ಯರೂಪದಸ್ತುತಿಯು ‥ಯಜುಸ್" ಎನಿಸಿಕೊಂಡಿದೆ. ಯಜ್ಞಗಳಲ್ಲಿ ದೇವತೆಗಳನ್ನು ಆಹ್ವಾನಿಸುವ ಸಲುವಾಗಿ ಮತ್ತು ಆಹುತಿಗಳನ್ನು ಅರ್ಪಿಸುವ ಸಲುವಾಗಿ ಉಪಯೋಗಿಸುವ ಪದ್ಯರೂಪದ ಸ್ತುತಿ ಯಾಗಲೀ ಅದು ಗದ್ಯರೂಪದ ಸ್ತುತಿಯಾಗಲೀ ಅದು "ಮಂತ್ರ'' ಎನಿಸಿಕೊಳ್ಳುತ್ತದೆ. ಹಾಗೆಯೇ ಯಜ್ಞಕಾಲದಲ್ಲಿ ರಾಗದೊಂದಿಗೆ ಹಾಡುವ ಸಲುವಾಗಿ ಬೇರ್ಪಡಿಸಿಟ್ಟ ಮಂತ್ರ ಸಮೂಹವು ಮತ್ತು ಆ ಮಂತ್ರಗಳನ್ನು ಹಾಡುವಾಗ ಅನುಸರಿಸಲ್ಪಡುವ ರಾಗಕ್ರಮವು **"ಸಾಮ"** ಎನಿಸಿಕೊಂಡಿದೆ. ಹಾಗಾಗಿ ಇಡೀ ಮಂತ್ರಸಮೂಹವು ಅದರ ಪ್ರಯೋಗಕ್ಕೆ ಅನುಸಾರವಾಗಿ ನಾಲ್ಕು ವಿಭಾಗಗಳಲ್ಲಿ ಹಂಚಲ್ಪಟ್ಟಿದೆ. ಮತ್ತು ಆ ನಾಲ್ಕು ವಿಭಾಗಗಳ ಗ್ರಂಥಗಳು ಅನುಕ್ರಮವಾಗಿ **"ಋಗ್ವೇದ, ಯಜುರ್ವೇದ, ಸಾಮವೇದ, ಮತ್ತು ಅಥರ್ವವೇದ"** ಎಂಬ ಹೆಸರುಗಳನ್ನು ಪಡೆದಿವೆ. ಅವುಗಳನ್ನು **"ಸಂಹಿತೆ"** ಎನ್ನುವುದೂ ಇದೆ. ಉದಾ:– **"ಋಕ್ ಸಂಹಿತೆ"** ಅಲ್ಲದಿದ್ದರೆ **"ಋಗ್ವೇದ ಸಂಹಿತೆ"** ಇತ್ಯಾದಿ.

ಮಂತ್ರಗಳ ಸಮೂಹಕ್ಕೆ **"ವೇದ"** ಎಂಬ ಹೆಸರು ಯಾವ ಕಾಲದಲ್ಲಿ ಪ್ರಚಲಿತವಾಯಿತೆಂದು ನಿಖರವಾಗಿ ಹೇಳಲಾಗದಿದ್ದರೂ ಅದು ಶಕಪೂರ್ವ ಎಂಟು ನೂರು ವರ್ಷಗಳಿಗಿಂತ ಮೊದಲೇ **‥ದೇವತೆಗಳ ಮತ್ತು ಯಜ್ಞಗಳ ಜ್ಞಾನ"** ಎಂಬರ್ಥದಲ್ಲಿ ಪ್ರಚಲಿತವಿದ್ದಿತೆಂದು ನಿಖರವಾಗಿ ಹೇಳಬಹುದು. ಮಂತ್ರಗಳು ರಚಿಸಲ್ಪಡುತ್ತಿದ್ದಂತೆ, ಯಜ್ಞಗಳಲ್ಲಿ ಆ ಮಂತ್ರಗಳ ವಿನಿಯೋಗವನ್ನು ತಿಳಿಸುವ ಸಲುವಾಗಿ, ಯಜ್ಞಗಳ ನಿರ್ವಹಣ ಕ್ರಮವನ್ನು ಸಿದ್ಧಾಂತದ ರೂಪದಿಂದ ವಿವರಿಸುವ ಸಲುವಾಗಿ, ಯಜ್ಞಗಳ ಫಲವನ್ನು ತಿಳಿಸುವ ಸಲುವಾಗಿ, ಮತ್ತು ಮಂತ್ರಗಳಲ್ಲಿ ಅಡಕವಾಗಿರುವ ಪ್ರಾಚೀನ ಐತಿಹ್ಯಗಳನ್ನು ಒಂದು ವಿಶಿಷ್ಟ ರೀತಿಯ ಕಥಾರೂಪ

ದಿಂದ ವರ್ಣಿಸುವ ಸಲುವಾಗಿ ರಚಿಸಲ್ಪಟ್ಟ ಗದ್ಯರೂಪದ ಸಾಹಿತ್ಯವು **"ಬ್ರಾಹ್ಮಣ"** ಎಂದು ಹೆಸರಾಗಿದೆ. ಆ ಬ್ರಾಹ್ಮಣಗಳಲ್ಲಿ ಅತ್ಯಂತ ಪ್ರಾಚೀನ ಕಾಲದ ಐತಿಹ್ಯಗಳಿಂದ ಮೊದಲುಗೊಂಡು ಮಂತ್ರ ಸಾಹಿತ್ಯವು ಕೊನೆಗೊಳ್ಳುವ ತನಕದ ವಿವರಗಳು ದೊರೆಯುತ್ತವೆ. ಅಂದರೆ ವೇದ ಸಂಹಿತೆಗಳೊಳಗಿನ ಎಲ್ಲ ಮಂತ್ರಗಳು ರಚಿಸಲ್ಪಡುವ ಮೊದಲೇ ವಿಶಾಲವಾದ ಯಜ್ಞ ಸಂಸ್ಥೆಯು ಸ್ಥಾಪಿತವಾಗಿದ್ದಿತೆಂದು ಋಗ್ವೇದದೊಳಗಿನ ಮಂತ್ರಗಳಿಂದ ಸ್ಪಷ್ಟವಾಗಿ ಸಿದ್ಧವಾಗುತ್ತದೆ. ಆದುದರಿಂದ ಮಂತ್ರರಚನೆಯು ಮುಗಿದ ತರುವಾಯವೇ ಬ್ರಾಹ್ಮಣಗಳು ಈಗಿನ ರೂಪತಳೆದಿದ್ದುವೆಂದು ಸಿದ್ಧವಾಗುತ್ತದೆ. ಬ್ರಾಹ್ಮಣಗಳಲ್ಲಿ ವಾಸ್ತವಿಕ ಇತಿಹಾಸದ ಜೊತೆಯಲ್ಲಿ ಹಲವು ಕಟ್ಟುಕಥೆಗಳೂ ಇವೆ. ಉದಾಹರಣೆಗಾಗಿ ಹೇಳುವುದಾದರೆ-ಶತಪಥ ಬ್ರಾಹ್ಮಣದಲ್ಲಿ "ಇಂದ್ರನೆಂದರೆ ಬಹಳ ದೊಡ್ಡದಾಗಿ ಉರಿಯುತ್ತಿರುವ ಅಗ್ನಿ" ಎಂಬ ಉಲ್ಲೇಖವಿರುವಂತೆಯೇ "ಇಂದ್ರನು ತ್ವಷ್ಟ್ರನ ಯಜ್ಞಸ್ಥಳಕ್ಕೆ ಬಂದು ಸೋಮಪಾತ್ರವನ್ನೆತ್ತಿ ಸೋಮರಸವನ್ನು ಕುಡಿದನು" ಎಂಬ ಕಟ್ಟುಕಥೆಯೂ ಇದೆ. ಬ್ರಾಹ್ಮಣಗಳಲ್ಲಿ "ಆರಣ್ಯಕ" ಎಂಬ ವಿಭಾಗಗಳಿವೆ. ಮತ್ತು ಹೆಚ್ಚಿನ ಉಪನಿಷತ್ತುಗಳು ಆರಣ್ಯಕ ವಿಭಾಗಗಳಲ್ಲಿ ಬರುತ್ತವೆ. ಕೆಲವು ಆಚಾರ್ಯರು ಬ್ರಾಹ್ಮಣಗಳನ್ನು ಕೂಡ "ವೇದ"[1] ಇಲ್ಲವೇ "ಶ್ರುತಿ" ಎಂದಿದ್ದಾರೆ.

ಆರ್ಯ ಜನರು ನೂರಾರು ಪಂಗಡಗಳಲ್ಲಿ ಹಂಚಿ ಹೋಗಿದ್ದುದರಿಂದ ಪ್ರತಿಯೊಂದು ಪಂಗಡದವರು ಉಪಯೋಗಿಸುತಿದ್ದ ವೇದಮಂತ್ರಗಳಲ್ಲಿ ಮತ್ತು ಬ್ರಾಹ್ಮಣಗಳಲ್ಲಿ ಕೊಂಚ ಕೊಂಚ ಭೇದವಿರುತಿದ್ದಿತು, ಹಾಗೆಯೇ ವೇದ ಮಂತ್ರಗಳ ಹಾಗೂ ಸೂಕ್ತಗಳ ಸಂಖ್ಯೆಯಲ್ಲಿಯೂ ಭೇದವಿರುತಿದ್ದಿತು. ಅಂಥ ಪಾಠ ಭೇದಗಳು, ಉಚ್ಚಾರ ಭೇದಗಳು, ಪ್ರಯೋಗ ಭೇದಗಳು ಮತ್ತು ಸಂಖ್ಯಾ ಭೇದಗಳು ಆಯಾ ವೇದದ ಬೇರೆ ಬೇರೆ ಶಾಖೆಗಳೆನಿಸಿಕೊಂಡಿವೆ, ಮತ್ತು ಅಂಥ ಭೇದಗಳಿಗೆ ಕಾರಣನಾದ ಆಚಾರ್ಯನ ಹೆಸರು ಆಯಾ ಶಾಖೆಗೆ ಬಂದಿದೆ.

ಋಗ್ವೇದ: ಹಿಂದೆ ಈ ವೇದದ ಇಪ್ಪತ್ತೊಂದು ಶಾಖೆಗಳಿದ್ದುವೆಂದು ಕೆಲವು ಗ್ರಂಥಗಳಿಂದ ತಿಳಿದುಬರುತ್ತದೆ, ಆದರೆ ಈಗ ಅವುಗಳೊಳಗಿನ ಹದಿನೈದು ಶಾಖೆಗಳು ಲೋಪವಾಗಿ ಮತ್ತು ಉಳಿದ ಆರು ಶಾಖೆಗಳು ಬೆರೆತು ಎರಡು ಶಾಖೆಗಳಾಗಿ ಮಾರ್ಪಟ್ಟಿವೆ. ಅಂದರೆ ಶಾಕಲ, ಐತರೇಯ ಮತ್ತು ಆಶ್ವಲಾಯನ ಎಂಬ ಮೂರು ಶಾಖೆಗಳು ಬೆರೆತು ಒಂದೇ ಶಾಕಲ ಎಂಬ ಶಾಖೆಯಾಗಿದೆ. ಹಾಗೆಯೇ ಬಾಷ್ಕಲ, ಕೌಷೀತಕ, ಮತ್ತು ಶಾಂಖಾಯನ ಎಂಬ ಮೂರು ಶಾಖೆಗಳು ಬೆರೆತು ಬಾಷ್ಕಲ ಎಂಬ ಒಂದೇ ಶಾಖೆಯಾಗಿದೆ.

---

[1] ಮಂತ್ರ ಬ್ರಾಹ್ಮಣಯೋರ್ವೇದ ನಾಮಧೇಯಮ್ ॥

ಋಗ್ವೇದದ ಋಚೆಗಳು ಅಷ್ಟಕ, ಅಧ್ಯಾಯ ಮತ್ತು ವರ್ಗ ಎಂತಲೂ ಮಂಡಲ, ಸೂಕ್ತ ಮತ್ತು ಋಚೆ ಅಥವಾ ಮಂತ್ರ ಎಂತಲೂ ಎರಡು ಬಗೆಯಾಗಿ ಎಣಿಸಲ್ಪಟ್ಟಿವೆ. ಋಗ್ವೇದದ ಪ್ರತಿಯೊಂದು ಸೂಕ್ತದ ಮೊದಲು ಆ ಸೂಕ್ತದ ಋಷಿಯ ಹೆಸರು, ಅದರಲ್ಲಿ ಸ್ತುತಿಸಲ್ಪಡುವ ದೇವತೆಯ ಹೆಸರು ಮತ್ತು ಛಂದಸ್ಸಿನ ಹೆಸರು ಬರುತ್ತದೆ,

ಶಾಕಲಸಂಹಿತೆಯ ಮಂತ್ರಗಳಲ್ಲಿ ಶಬ್ದಗಳು ಬಿಡಿ–ಬಿಡಿಯಾಗಿ ಬರುತ್ತವೆ. ಅಂದರೆ ಅವುಗಳೊಳಗಿನ ಶಬ್ದಗಳು ಸಂಧಿನಿಯಮಗಳಿಗನುಸಾರವಾಗಿ ಕೂಡಿಕೊಳ್ಳದೇ ಮೂಲರೂಪದಲ್ಲಿಯೇ ಇರುತ್ತವೆ, ಅದನ್ನು ಪದಪಾಠವೆನ್ನುತ್ತಾರೆ. ಶಾಕಲ ಶಾಖೆಯವರ ಸಂಹಿತೆಯಲ್ಲಿ ಹತ್ತು ಮಂಡಲಗಳು ಒಂದು ಸಾವಿರದ ಹದಿನೇಳು ಸೂಕ್ತಗಳು ಮತ್ತು ಹತ್ತು ಸಾವಿರದ ನಾನ್ನೂರ ಎಪ್ಪತ್ತೆರಡು ಋಚೆಗಳು ಅಥವಾ ಎಂಟು ಅಷ್ಟಕಗಳು, ಅರುವತ್ತನಾಲ್ಕು ಅಧ್ಯಾಯಗಳು ಮತ್ತು ಎರಡು ಸಾವಿರದ ಆರು ವರ್ಗಗಳಿವೆ. ಆದರೆ ಬಾಷ್ಕಲ ಶಾಖೆಯ ಸಂಹಿತೆಯಲ್ಲಿ ಎಂಟನೆಯ ಮಂಡಲದ ನಾಲ್ವತ್ತೆಂಟನೆಯ ಸೂಕ್ತದ ತರುವಾಯ "ವಾಲಖಿಲ್ಯ" ಎಂಬ ಹೆಸರಿನ ಹನ್ನೊಂದು ಸೂಕ್ತಗಳು ಹೆಚ್ಚಿಗೆ ಬರುತ್ತವೆ, ಮತ್ತು ಆ ಸೂಕ್ತಗಳಲ್ಲಿ ಎಂಭತ್ತು ಋಚೆಗಳಿವೆ. ಆದುದರಿಂದ ಬಾಷ್ಕಲ ಸಂಹಿತೆಯಲ್ಲಿ ಒಂದು ಸಾವಿರದ ಇಪ್ಪತ್ತೆಂಟು ಸೂಕ್ತಗಳು ಮತ್ತು ಹತ್ತು ಸಾವಿರದ ಐನೂರು ಋಚೆಗಳು ಅಥವಾ ಎರಡು ಸಾವಿರದ ಇಪ್ಪತ್ತ ನಾಲ್ಕು ವರ್ಗಗಳಾಗುತ್ತವೆ. ಅವುಗಳಲ್ಲದೇ ಖಿಲಸೂಕ್ತಗಳೆಂಬ ಬೇರೆ ಮೂವತ್ತಾರು ಸೂಕ್ತಗಳು ಕೆಲವು ಮಂಡಲಗಳ ನಡುವೆ ಬರುತ್ತವೆ, ಕೆಲವರು ಮುದ್ರಿಸಿದ ಋಗ್ವೇದ ಸಂಹಿತೆಗಳಲ್ಲಿ ಖಿಲಸೂಕ್ತಗಳು ಹತ್ತನೆಯ ಮಂಡಲದ ತರುವಾಯ "ಪರಿಶಿಷ್ಟ" ರೂಪದಲ್ಲಿ ಬಂದಿವೆ. ನಿರ್ಣಯಸಾಗರ ಮುದ್ರಾಲಯ ಮುಂಬಈ ಅಲ್ಲಿ ಮುದ್ರಿಸಲ್ಪಟ್ಟ ಬಾಷ್ಕಲಸಂಹಿತೆಯ ಕೊನೆಯಲ್ಲಿ "ನಿವಿದ್" ಎಂಬ ಮಂತ್ರಗಳ ಒಂದು ಅಧ್ಯಾಯವೂ, ಅಥರ್ವವೇದದಿಂದ ಆರಿಸಿದ ಕುಂತಾಪ ಸೂಕ್ತ ಗಳ ಒಂದು ಅಧ್ಯಾಯವೂ, ತೈತ್ತಿರೀಯ ಬ್ರಾಹ್ಮಣದಿಂದ ಆರಿಸಿದ ಪುರೋರುಕ್ ಮತ್ತು ಪ್ರೈಷ ಎಂಬ ಅಧ್ಯಾಯಗಳೂ ಇವೆ.

ಋಗ್ವೇದದ ಸೂಕ್ತಗಳ, ಋಷಿಗಳ. ಮತ್ತು ದೇವತೆಗಳ ಸಂಬಂಧದಲ್ಲಿ ಅನುಕ್ರಮಣಿಕಾಕಾರ, ನಿರುಕ್ತಕಾರ ಮತ್ತು ಬೃಹದ್ದೇವತಾಕಾರ ಇವರಲ್ಲಿ ಕೊಂಚ ಮತಭೇದವಿದೆ, ಆದರೆ ಅವರ ಆ ಮತಭೇದವು ಬರಿಯ ಸಾಂಪ್ರದಾಯಿಕ ರೀತಿಯದಾಗಿದೆಯೇ ಹೊರತು ವೈಜ್ಞಾನಿಕ ರೀತಿಯದಾಗಿರುವುದಿಲ್ಲ. ವಾಸ್ತವವಾಗಿ ಋಗ್ವೇದದ ಹತ್ತನೆಯ ಮಂಡಲದೊಳಗಿನ ಹಲವು ಸೂಕ್ತಗಳ ಋಷಿಗಳು ಯಾರೆಂದು ಗೊತ್ತಿಲ್ಲದುದರಿಂದ ಸೂಕ್ತಗಳನ್ನು ಸಂಕಲನ ಮಾಡಿದವರು ಆ ಸೂಕ್ತಗಳಿಗೆ ಕೆಲವು ಋಷಿಗಳನ್ನು ಕಲ್ಪಿಸಿದ್ದಾರೆ. ಉದಾಹರಣೆಗಾಗಿ ಹೇಳುವುದಾದರೆ–ತ್ರಿತ ಆಪ್ತ್ಯ, ತ್ರಿಶಿರಾತ್ವಾಷ್ಟ್ರ, ವೈವಸ್ವತಯಮ, ಯಮೀ, ಇಂದ್ರ, ಸಾವಿತ್ರೀ ಸೂರ್ಯಾ,

ಅರ್ಬುದ–ಸರ್ಪ, ಊರ್ವಶೀ ಮೊದಲಾದವರು ಕೆಲವು ಋಚೆಗಳ ಋಷಿಗಳು ಮತ್ತು ಋಷಿಕೆಯರಾಗಿದ್ದಾರೆ. ಅವರೆಲ್ಲರೂ ವೈದಿಕ ದೇವತೆಗಳಾಗಿದ್ದಾರೆಯೇ ಹೊರತು ಶರೀರಧಾರೀ ವ್ಯಕ್ತಿಗಳಲ್ಲ. ಆದುದರಿಂದ ಅವರು ಋಚೆಗಳನ್ನು ರಚಿಸಲು ಸಾಧ್ಯವೇ ಇಲ್ಲ. ಅದರಂತೆಯೇ ಕೆಲವು ಆಚಾರ್ಯರು ಅಥವಾ ಭಾಷ್ಯಕಾರರು ಋಷಿಗಳನ್ನು "ಮಂತ್ರದೃಷ್ಟಾರರು" ಅಂದುದು ಕೂಡ ವಾಸ್ತವವಲ್ಲ.

ವಾಸ್ತವವಾಗಿ ಋಷಿಗಳಲ್ಲಿ ಮಂತ್ರದೃಷ್ಟಾರ ಮತ್ತು ಮಂತ್ರಕರ್ತರು ಎಂಬ ಎರಡು ವರ್ಗಗಳಿವೆಯೆಂಬುದರಲ್ಲಿ ಸಂದೇಹವಿಲ್ಲ. ಆದರೆ ಮಂತ್ರದೃಷ್ಟಾರರು ಎಂಬುದರ ಅರ್ಥವು ಮೀಮಾಂಸಾಕಾರರು ಮತ್ತು ವೇದಭಾಷ್ಯಕಾರರು ಹೇಳುವಂತೆ "ತಮ್ಮ ದಿವ್ಯದೃಷ್ಟಿಯಿಂದ ಇಲ್ಲವೇ ಆತ್ಮಜ್ಞಾನದ ಬಲದಿಂದ ಮಂತ್ರಗಳನ್ನು ಕಂಡವರು" ಎಂದಿರದೇ—

೧. ಕೆಲವು ವರ್ಷಗಳ ಹಿಂದೆ ಸಿಂಧೂ ಕಣಿವೆಯಲ್ಲಿ ಬೆಳಕಿಗೆ ಬಂದಿದ್ದ ಹಾಗೂ ವೇದಮಂತ್ರಗಳನ್ನು ಸೂಚಿಸುವ ಚಿತ್ರಸಂಕೇತಗಳಿದ್ದ ಹಾಲುಗಲ್ಲಿನ ಬಿಲ್ಲೆಗಳನ್ನು ಪ್ರಾಚೀನ ಕಾಲದಲ್ಲಿ ಉಪಯೋಗಿಸುತಿದ್ದವರು ಮತ್ತು ಆ ಬಿಲ್ಲೆಗಳ ಮೇಲಿನ ಚಿತ್ರಸಂಕೇತಗಳ ನೆರವಿನಿಂದ ಪ್ರಾಚೀನ ಮಂತ್ರಗಳನ್ನು ಅನೂಚಾನವಾಗಿ ಮುಂದೆ ಸಾಗಿಸಿಕೊಂಡು ಬಂದವರೆಂತಲೂ; ೨. ಬ್ರಾಹ್ಮೀ ವರ್ಣಮಾಲೆಯು ನಿರ್ಮಿಸಲ್ಪಟ್ಟ ತರುವಾಯ ಆ ಬಿಲ್ಲೆಗಳ ಮೇಲಿನ ಚಿತ್ರಸಂಕೇತಗಳನ್ನು ಕಣ್ಣಾರೆ ಕಂಡು ಅವುಗಳಿಂದ ಸೂಚಿತವಾಗುವ ಮಂತ್ರಗಳನ್ನು ಪರಂಪರಾಗತ ಪಾಠದ ಆಧಾರದಿಂದ ಬರೆದುಕೊಂಡವರೆಂತಲೂ" ಇರುತ್ತದೆ.

ಹಾಗೆಯೇ ಮಂತ್ರಕರ್ತರು ಎಂಬುದರ ಅರ್ಥವು ಬ್ರಾಹ್ಮೀಲಿಪಿಯು ನಿರ್ಮಿಸಲ್ಪಟ್ಟ ತರುವಾಯ ಹಳೆಯ ಮಂತ್ರಗಳ ಅನುಕರಣದಿಂದ ಮತ್ತು ತಮಗೆ ಗೊತ್ತಿದ್ದ ಪ್ರಾಚೀನ ಐತಿಹ್ಯಗಳ ಆಧಾರದಿಂದ ಹೊಸ ಮಂತ್ರಗಳನ್ನು ರಚಿಸಿದವರು ಎಂದಿರುತ್ತದೆ. ಅರ್ಥಾತ್ ವೇದಮಂತ್ರಗಳು "ಅಪೌರುಷೇಯ" ಅಥವಾ "ಈಶ್ವರ ಪ್ರಣೀತ" ಎಂಬ ಮೀಮಾಂಸಕರ ವಾದವು ವೈಜ್ಞಾನಿಕ ವಿಮರ್ಶೆಗೆ ನಿಲ್ಲುವುದಿಲ್ಲವಾದುದರಿಂದ "ವೇದಮಂತ್ರಗಳು ಅಪೌರುಷೇಯ" ಎಂಬ ಕಲ್ಪನೆಯನ್ನು ತ್ಯಜಿಸಬೇಕಾಗುತ್ತದೆ.

ಅದನ್ನು ಬೇರೊಂದು ರೀತಿಯಿಂದ ವಿಮರ್ಶಿಸಬಹುದು. ಉದಾ:— ಋಗ್ವೇದವು– **"ಅಗ್ನಿಮೀಳೇ"** ಅಂದರೆ **"ನಾನು ಅಗ್ನಿಯನ್ನು ಪ್ರಾರ್ಥಿಸುತ್ತೇನೆ ಇಲ್ಲವೇ ಆರಾಧಿಸುತ್ತೇನೆ"** ಎಂಬುದಾಗಿ ಪ್ರಾರಂಭವಾಗುತ್ತದೆ. ಅದರಲ್ಲಿ "ಅಗ್ನಿಯನ್ನು ಪ್ರಾರ್ಥಿಸುವವನು ಪರಮಾತ್ಮನಾಗಿರಲು ಸಾಧ್ಯವಿದೆಯೇ? ಹಾಗೆಯೇ ಎರಡನೆಯ ಋಚೆಯಲ್ಲಿ **"ಅಗ್ನಿಃಪೂರ್ವೇಭಿರ್ಋಷಿಭಿರೀಡ್ಯೋ ನೂತನೈರುತ"** ಅಂದರೆ **"ಅಗ್ನಿಯು ಪೂರ್ವಿಕರಾದ ಋಷಿಗಳಿಂದಲೂ ಹೊಸಬರಿಂದಲೂ**

ಪ್ರಾರ್ಥಿಸಲ್ಪಟ್ಟವನು" ಎಂದು ಹೇಳಿದೆ. ಅದೇ ರೀತಿಯಲ್ಲಿ ಋಗ್ವೇದದ ಬೇರೆ ಬೇರೆ ಸೂಕ್ತಗಳಲ್ಲಿ ಬೇರೆ ಬೇರೆ ಋಷಿಗಳು ಅಗ್ನಿಯನ್ನು, ಸೂರ್ಯನನ್ನು, ಚಂದ್ರನನ್ನು ಮತ್ತು ನಕ್ಷತ್ರಗಳನ್ನು ಸ್ತುತಿಸಿದ ಉಲ್ಲೇಖಗಳು ಬರುತ್ತವೆ. ಆದುದರಿಂದ ವೇದಮಂತ್ರಗಳನ್ನು ಈಶ್ವರಪ್ರಣೀತ ಎನ್ನುವ ವಾದದಲ್ಲಿ ಹುರುಳಿಲ್ಲವೆಂದು ಸ್ಪಷ್ಟವಾಗಿ ಸಿದ್ಧವಾಗುತ್ತದೆ.

ಋಗ್ವೇದದ ಸೂಕ್ತಗಳು ಋಷಿಗಳ ಹೆಸರುಗಳಲ್ಲಿ ಮಾತ್ರವಲ್ಲದೇ ಋಷಿಕೆಯರ ಅಂದರೆ ಋಷಿಪತ್ನಿಯರ ಮತ್ತು ಋಷಿಕನ್ಯೆಯರ ಹೆಸರುಗಳಲ್ಲಿಯೂ ಇವೆ. ಅಂದರೆ ಲೋಪಾಮುದ್ರಾ (೧೦-೩೯) ಅಪಾಲಾ (೮–೯೧) ವಿಶ್ವವಾರಾ (೫-೨೮) ಪೌಲೋಮಿ (೧೦–೧೫೯) ಮೊದಲಾದವರು ಸೂಕ್ತಕರ್ತ್ರಿಯರಾದ ಋಷಿಕೆಯರಾಗಿದ್ದಾರೆ.

ಆರ್ಯ ಜನರು ದೇವ ಎಂದು ಕರೆದ ಅಗ್ನಿ, ಸೂರ್ಯ, ಚಂದ್ರ ಮತ್ತು ನಕ್ಷತ್ರಗಳೂ, ಆಕಾಶದಲ್ಲಿ ಪ್ರವಹಿಸುವ ಪ್ರಕಾಶದ ಭೇದಗಳಾದ ಉಷಾ. ಆಪಃ, ಸರಸ್ವತೀ ಮೊದಲಾದುವುಗಳು ಮೂರ್ತರೂಪದಿಂದ ದೇವಿಯರಾಗಿಯೂ, ದ್ಯೌ ಮತ್ತು ಪೃಥಿವಿಗಳು ಅಗ್ನಿಯ ತಾಯಿ ತಂದೆಗಳಾಗಿಯೂ, ಅರಣ್ಯ ಗ್ರಾವಾಣ (= ಕಲ್ಲುಗಳು) ಪರ್ಜನ್ಯ, ಪಿತೃಗಳು ಮೊದಲಾದವರೂ ಋಗ್ವೇದದ ಕೆಲವು ಸೂಕ್ತಗಳ ದೇವತೆಗಳಾಗಿದ್ದಾರಲ್ಲದೇ ಯಜ್ಞಗಳಲ್ಲಿ ಮಂತ್ರಸ್ತುತಿಗಳ ಮೂಲಕ ಆಹ್ವಾನಿಸಲ್ಪಟ್ಟು ಹವಿಸ್ಸಿನ ಆಹುತಿಗಳನ್ನು ಪಡೆಯುವವರೂ ಆಗಿದ್ದಾರೆ.

ಋಗ್ವೇದದ ಶಾಕಲಶಾಖೆಯವರಿಗೆ ಐತರೇಯ ಬ್ರಾಹ್ಮಣವೂ, ಬಾಷ್ಕಲ ಶಾಖೆಯವರಿಗೆ ಕೌಷೀತಕೀ ಮತ್ತು ಶಾಂಖಾಯನ ಬ್ರಾಹ್ಮಣಗಳೂ ಸೇರಿವೆ.

ಯಜುರ್ವೇದ—ಇದು ಕೃಷ್ಣ ಮತ್ತು ಶುಕ್ಲ ಎಂಬುದಾಗಿ ಎರಡು ಬಗೆಯಾಗಿದೆ. ಮತ್ತು ಅದು ಎರಡು ಬಗೆಯಾದುದರ ಸಂಬಂಧದಲ್ಲಿ ಕೆಲವು ಕಲ್ಪಿತ ಕಥೆಗಳು ಪ್ರಚಲಿತವಿವೆ. ಹಿಂದೆ ಯಜುರ್ವೇದದ ಎಂಭತ್ತಾರು ಶಾಖೆಗಳಿದ್ದುವೆಂದು ಚರಣವ್ಯೂಹ ಎಂಬ ಒಂದು ಚಿಕ್ಕ ಕೈಪಿಡಿಯಲ್ಲಿ ಹೇಳಿದೆ. ಪರಂತು ಪ್ರಕೃತ ಕೃಷ್ಣಯಜುರ್ವೇದದ ೧, ತೈತ್ತಿರೀಯ, ೨. ಕಠ, ೩, ಕಪಿಷ್ಠಲಕಠ ಮತ್ತು ೪. ಮೈತ್ರಾಯಣೀ ಎಂಬ ನಾಲ್ಕು ಶಾಖೆಗಳು ಮಾತ್ರ ಉಳಿದಿವೆ. ಶುಕ್ಲಯಜುರ್ವೇದವು ವಾಜಸನೇಯಿ ಸಂಹಿತೆಯೆಂದು ಹೆಸರಾಗಿದ್ದು ಅದರ ಮಾಧ್ಯಂದಿನ ಮತ್ತು ಕಾಣ್ವ ಎಂಬ ಎರಡು ಶಾಖೆಗಳಿವೆ.

ಕೃಷ್ಣಯಜುರ್ವೇದದ ಸಂಹಿತೆಗಳಲ್ಲಿ ಮಂತ್ರಭಾಗ ಮಾತ್ರವಲ್ಲದೇ ಗದ್ಯರೂಪದ ಆಖ್ಯಾನಗಳೂ ಇವೆ. ಕೆಲವರು ಆ ಆಖ್ಯಾನಗಳನ್ನು ಬ್ರಾಹ್ಮಣಗಳೆಂದಿದ್ದಾರೆ. ಆದರೆ ಆ ಎಲ್ಲ ಆಖ್ಯಾನಗಳನ್ನು ಬ್ರಾಹ್ಮಣಗಳೆನ್ನಲಾಗುವುದಿಲ್ಲ. ಏಕೆಂದರೆ

ಕೆಲವು ಆಖ್ಯಾನಗಳು ಯಜ್ಞಗಳಿಗೆ ಸಂಬಂಧಪಟ್ಟಿರದೇ ಶುದ್ಧ ಐತಿಹಾಸಿಕ ವರ್ಣನೆಗಳಾಗಿವೆ. ಯಜುರ್ವೇದದಲ್ಲಿ ಯಜುರ್ಮಂತ್ರಗಳು ಮಾತ್ರವಲ್ಲದೇ ಋಗ್ವೇದದ ಮಂತ್ರಗಳೂ ಇವೆ. ಯಜುರ್ವೇದದ ವಿಷಯವು ಯಜ್ಞಗಳಾಗಿರುವುದರಿಂದ ಅದರಲ್ಲಿ ಯಜ್ಞಗಳ ಹೆಸರುಗಳೊಂದಿಗೆ ಆಯಾ ಯಜ್ಞದಲ್ಲಿ ಪ್ರಯೋಗಿಸಲಾಗುವ ಮಂತ್ರವಿಭಾಗ, ಯಜ್ಞಚಿತಿಗಳ ರಚನೆ, ಚಿತಿಗಳಲ್ಲಿ ಉಪಯೋಗಿಸಲಾಗುವ ಇಟ್ಟಿಗೆಗಳ ವರ್ಣನೆ. ಯಜ್ಞಚಿತಿಗಳ ಹೆಸರುಗಳು, ಆಹುತಿಗಳ ಹಾಗೂ ಬಲಿಪಶುಗಳ ವಿವರಗಳಿವೆ. ಕೆಲವು ಮಂದಿ ಪಾಶ್ಚಾತ್ಯ ವಿದ್ವಾಂಸರ ಅಭಿಪ್ರಾಯದಲ್ಲಿ ಯಜುರ್ವೇದದ ತೈತ್ತಿರೀಯ ಸಂಹಿತೆಯು ಶುಕ್ಲಯಜುರ್ವೇದಕ್ಕಿಂತ ಅರ್ವಾಚೀನವೆಂದಿದೆ. ಆದರೆ ವಾಸ್ತವವಾಗಿ ತೈತ್ತಿರೀಯ ಸಂಹಿತೆಯೇ ಪ್ರಾಚೀನವಾಗಿದ್ದು ಅದರೊಳಗಿನ ಕೆಲವು ಐತಿಹ್ಯಗಳು ಅತ್ಯಂತ ಪ್ರಾಚೀನವಾಗಿವೆ. ಮಾತ್ರವಲ್ಲ ಆ ಐತಿಹ್ಯಗಳು ಇತರ ಯಾವ ವೇದದಲ್ಲಿಯೂ ಇಲ್ಲ.

ಕೃಷ್ಣ ಯಜುರ್ವೇದಗಳಿಗೆ ತೈತ್ತಿರೀಯ ಬ್ರಾಹ್ಮಣವೂ ಶುಕ್ಲ ಯಜುರ್ವೇದಗಳಿಗೆ ಶತಪಥ ಬ್ರಾಹ್ಮಣವೂ ಇದೆ. ಮತ್ತು ಅದರಲ್ಲಿ ಮಾಧ್ಯಂದಿನ ಮತ್ತು ಕಾಣ್ವ ಎಂಬ ಶಾಖಾ ಭೇದವೂ ಇದೆ. ತೈತ್ತಿರೀಯ ಬ್ರಾಹ್ಮಣವು ಶತಪಥ ಬ್ರಾಹ್ಮಣಕ್ಕಿಂತ ಪ್ರಾಚೀನವಾಗಿದೆ.

ಸಾಮವೇದ—ಯಜ್ಞಗಳಲ್ಲಿ ರಾಗವಾಗಿ ಹಾಡುವ ಸಲುವಾಗಿ ಋಗ್ವೇದದೊಳಗಿಂದ ಆರಿಸಿ ಬೇರ್ಪಡಿಸಿದ ಋಚೆಗಳ ಸಮೂಹವೇ ಸಾಮವೇದ ಎಂದು ಹೆಸರಾಗಿದೆ. ಅಂದರೆ ಸಾಮವೇದದೊಳಗಿರುವ ೧೫೪೯ ಋಚೆಗಳಲ್ಲಿ ೧೪೭೪ ಋಚೆಗಳು ಋಗ್ವೇದದವುಗಳೇ ಆಗಿದ್ದು ೭೫ ಋಚೆಗಳು ಮಾತ್ರ ಬೇರೆಯಾಗಿವೆ. ಅದರೊಳಗಿನ ಕೆಲವು ಋಚೆಗಳಲ್ಲಿ ಕೊಂಚ ಪಾಠಭೇದವಿದೆ.

ಹಿಂದೆ ಸಾಮವೇದದ ಒಂದು ಸಾವಿರ ಶಾಖೆಗಳಿದ್ದುವೆಂದು ಚರಣವ್ಯೂಹದಲ್ಲಿ ಹೇಳಿದೆ. ಆದರೆ ಈಗ ಕೌಥುಮಿ, ರಾಣಾಯನೀ, ಮತ್ತು ಜೈಮಿನೀ ಎಂಬ ಮೂರು ಶಾಖೆಗಳು ಮಾತ್ರ ಇವೆ. ಮತ್ತು ಆ ಶಾಖಾಧ್ಯಾಯಿಗಳು ಗೋವದಲ್ಲಿ, ಮಹಾರಾಷ್ಟ್ರದಲ್ಲಿ ಮತ್ತು ಗುಜರಾತದಲ್ಲಿದ್ದಾರೆ.

ಸಾಮವೇದಕ್ಕೆ— ೧. ಸಾಮವಿಧಾನ; ೨. ಆರ್ಷೇಯ (ಕೌಥುಮಿ ಮತ್ತು ಜೈಮಿನೀಯ) ೩. ತಾಂಡ್ಯ ಅಥವಾ ಪಂಚವಿಂಶ; ೪. ಷಡ್ವಿಂಶ; ೫. ಛಾಂದೋಗ್ಯ; ಅಥವಾ ಮಂತ್ರಬ್ರಾಹ್ಮಣ, ೬. ದೈವತ ಅಥವಾ ದೇವತಾಧ್ಯಾಯ, ೭. ಜೈಮಿನೀಯ ಅಥವಾ ತಲವಕಾರ; ೮. ವಂಶ, ೯, ಜೈಮಿನೀಯೋಪನಿಷದ್; ೧೦. ಸಂಹಿತೋಪನಿಷದ್, ೧೧. ಭಾಲ್ಲವಿ ಮತ್ತು ೧೨. ಶಾಟ್ಯಾಯನ ಎಂಬುದಾಗಿ ಹದಿನೆರಡು ಬ್ರಾಹ್ಮಣಗಳಿವೆ. ಆದರೆ ಆರ್ಷೇಯ ಎಂಬುದು ವಾಸ್ತವವಾಗಿ ಬ್ರಾಹ್ಮಣವಾಗಿರದೇ

ಬರಿಯ ಸಾಮಮಂತ್ರಗಳ ಅಥವಾ ಸಾಮಗಾನಗಳ ಅನುಕ್ರಮಣಿ ಮಾತ್ರವಾಗಿದೆ.

ಅಥರ್ವವೇದ—ಇದು ಶೌನಕೀಯ ಮತ್ತು ಪೈಪ್ಪಲಾದ ಎಂಬುದಾಗಿ ಎರಡು ಶಾಖೆಗಳಲ್ಲಿದೆ. ಪರಂತು ಪೈಪ್ಪಲಾದ ಸಂಹಿತೆಯು ಈ ತನಕ ಮುದ್ರಿಸಲ್ಪಡದೇ ಹಸ್ತಲಿಖಿತ ರೂಪದಲ್ಲಿಯೇ ಇರುವುದರಿಂದ ಅಲಭ್ಯವಾಗಿದೆ. ಅಥರ್ವವೇದದ ಶೌನಕೀಯ ಸಂಹಿತೆಯಲ್ಲಿ ಇಪ್ಪತ್ತು ಕಾಂಡಗಳಿವೆ. ಮತ್ತು ೭೩೦ ಅನುವಾಕಗಳಿದ್ದು ೫೯೭೭ ಮಂತ್ರಗಳಿವೆ. ಅದರ ಹದಿನೈದನೆಯ ಕಾಂಡವು ಬ್ರಾಹ್ಮಣಗಳಂತೆ ಗದ್ಯರೂಪದಲ್ಲಿದ್ದು ಆ ಗದ್ಯವಾಕ್ಯಗಳ ಸಂಖ್ಯೆಯು ೨೨೦ ಆಗಿದೆ. ಹಾಗೆಯೇ ಹದಿನಾರನೆಯ ಕಾಂಡದ ಹೆಚ್ಚಿನ ಅಂಶವು ಕೂಡ ಗದ್ಯರೂಪದಲ್ಲಿದ್ದು ಅದರೊಳಗಿನ ಗದ್ಯ ಮತ್ತು ಪದ್ಯಗಳ ಒಟ್ಟು ಸಂಖ್ಯೆಯು ೧೦೩ ಆಗಿದೆ. ಪದ್ಯಗಳಲ್ಲಿ ಸಾವಿರದ ಇನ್ನೂರು ಋಗ್ವೇದದವುಗಳೇ ಆಗಿದ್ದು ಕೊಂಚ ಕೊಂಚ ಪಾಠಭೇದದಿಂದ ಬಂದಿವೆ.

ಅಥರ್ವವೇದದ ಸಂಪಾದಕನು ಆಂಗಿರಸ ಗೋತ್ರದ ಅಥರ್ವ ಋಷಿಯಾಗಿದ್ದುದರಿಂದ ಅದರ ಪ್ರಾಚೀನ ಹೆಸರು "ಅಥರ್ವಾಂಗಿರಸಃ" ಎಂದಿತ್ತು. ಅಥರ್ವವೇದದೊಳಗಿನ ಅಧಿಕಾಂಶ ಮಂತ್ರಗಳ ರಚನಾರೀತಿಯು ಮತ್ತು ಭಾಷೆಯು ಋಗ್ವೇದದ ಮಂತ್ರಗಳಿಂದ ಭಿನ್ನರೀತಿಯದಾಗಿದೆ. ಮತ್ತು ಕೆಲವು ಮಂತ್ರಗಳ ಭಾಷೆಯು ಅರ್ವಾಚೀನವಾಗಿದೆ. ಆದರೆ ಅಧಿಕಾಂಶ ಮಂತ್ರಗಳಲ್ಲಿ ಸಂಗ್ರಹಿಸಲ್ಪಟ್ಟಿರುವ ವಸ್ತುವು ಕಾಲದ ದೃಷ್ಟಿಯಿಂದ ಋಗ್ವೇದದೊಳಗಿನ ಪ್ರಾಚೀನ ಐತಿಹ್ಯಗಳಷ್ಟೇ ಪ್ರಾಚೀನವಾಗಿದೆ. ಮತ್ತು ಜಗತ್ತಿನಲ್ಲಿ ಹರಡಿರುವ ಆರ್ಯಜನರ ಎಲ್ಲ ಪಂಗಡಗಳಿಗೆ ಸಂಬಂಧಪಟ್ಟುದಾಗಿದೆ. ಅದರಲ್ಲಿ ಉನ್ನತ ಆಧ್ಯಾತ್ಮಿಕ ವಿಚಾರಗಳ ಜೊತೆಯಲ್ಲಿ ಪ್ರಾಚೀನ ಕಾಲದ ಜನಸಾಮಾನ್ಯರಲ್ಲಿ ಪ್ರಚಲಿತವಿದ್ದ ಮೂಢ ನಂಬಿಕೆಗಳೂ ಸಂಗ್ರಹಿಸಲ್ಪಟ್ಟಿವೆ.

ಅಥರ್ವವೇದದಲ್ಲಿ ದೇವತೆಗಳ ಸ್ತುತಿಮಾತ್ರವಲ್ಲದೇ ಕೃಷಿ, ಕೈಗಾರಿಕೆ, ಶಿಲ್ಪ. ವಾಸ್ತು, ವ್ಯಾಪಾರ, ಅಭಿಚಾರ ಅಥವಾ ಮಂತ್ರಚಿಕಿತ್ಸೆ, ವೈದ್ಯಕ, ರೋಗನಿದಾನ, ರೋಗ ಚಿಕಿತ್ಸೆ, ವನೌಷಧಿಗಳ ವರ್ಣನೆ, ಅವುಗಳ ಪರಿಚಯು ಮತ್ತು ಉಪಯೋಗ, ಶರೀರಶಾಸ್ತ್ರ, ಶರೀರರಚನೆ, ಜ್ಯೋತಿಷ, ದ್ಯೂತ, ಸಂಗೀತ ಮೊದಲಾದ ಹಲವು ವಿಷಯುಗಳಿಗೆ ಸಂಬಂಧಪಟ್ಟ ವಿವರಗಳಿವೆ.

ಅಥರ್ವವೇದಕ್ಕೆ ಗೋಪಥ ಎಂಬ ಬ್ರಾಹ್ಮಣವಿದೆ.

ಆರ್ಯಸಂಸ್ಕೃತಿಗೆ ಸಂಬಂಧಪಟ್ಟ ಹಾಗೂ, ಬೇರೆ ಬೇರೆ ಕೆಲವು ವಿಷಯುಗಳಿಗೆ ಸಂಬಂಧಿಸಿದ ಪ್ರಾಚೀನ ಪದ್ಯಗಳ ಒಂದು ಸಮೂಹವು ಋಗ್ವೇದ ಮಂತ್ರಗಳು ಗ್ರಥಿತವಾಗುವ ಕಾಲದಲ್ಲಿ ಸಂಗ್ರಹಿಸಲು ಸಾಧ್ಯವಾಗದೇ ಹೊರಗುಳಿದುದರಿಂದ

ತರುವಾಯದ ಕಾಲದಲ್ಲಿ ಆ ಪದ್ಯಸಮೂಹವು ಗ್ರಥಿತವಾಗಿ ಅದರ ಸಂಗ್ರಹಕಾರನ ಹೆಸರಿನ ಮೇಲಿಂದ ಅದು ಅಥರ್ವವೇದವೆನಿಸಿಕೊಂಡಿದ್ದಿತೆಂಬುದರಲ್ಲಿ ಸಂದೇಹವಿಲ್ಲ. ಅಥರ್ವವೇದವು ಒಂದು ರೀತಿಯಲ್ಲಿ ಋಗ್ವೇದಕ್ಕೆ ಪೂರಕವಾಗಿದೆ. ಅಂದರೆ ಅಥರ್ವವೇದದ ಅಧ್ಯಯನ ಮಾಡದಿದ್ದರೆ ಆರ್ಯಸಂಸ್ಕೃತಿಯು ಪೂರ್ಣಪರಿಚಯವಾಗುವಂತಿಲ್ಲ. ಯಜ್ಞಗಳಲ್ಲಿ ಬ್ರಹ್ಮಾ ಎಂಬ ಋತ್ವಿಜನು ಅಥರ್ವವೇದದ ಮಂತ್ರಗಳನ್ನು ಪಠಿಸಲಿರುವುದರಿಂದ ಅದು ಬ್ರಹ್ಮವೇದ ಎಂದು ಕೂಡ ಹೆಸರಾಗಿದೆ.

ವೇದಗಳಿಗೆ ಹಿಂದೆ ಹೇಳಿದ ಬ್ರಾಹ್ಮಣಗಳು ಮಾತ್ರವಲ್ಲದೇ ಬೇರೆ ಹಲವು ಬ್ರಾಹ್ಮಣಗಳೂ ಇದ್ದುವೆಂದು ತಿಳಿದುಬಂದಿದೆ. ಅಂದರೆ ಋಗ್ವೇದಕ್ಕೆ ಆಶ್ವಲಾಯನ ಶಾಖೆಯುವರ ಆಶ್ವಲಾಯನ ಬ್ರಾಹ್ಮಣ, ಪೈಂಗ್ಯ ಶಾಖೆಯ ಪೈಂಗ್ಯ ಬ್ರಾಹ್ಮಣ ಮತ್ತು ಬಹ್ವೃಚ ಶಾಖೆಯುವರ ಬಹ್ವೃಚ ಬ್ರಾಹ್ಮಣ ಎಂಬುದಾಗಿ ಮೂರು ಬ್ರಾಹ್ಮಣಗಳೂ ಕೃಷ್ಣಯಜುರ್ವೇದಕ್ಕೆ-ಚರಕ, ಶ್ವೇತಾಶ್ವತರ, ಕಾಠಕ, ಮೈತ್ರಾಯಣೀ, ಖಾಂಡಿಕೇಯ, ಔಖೇಯ, ಹಾರಿದ್ರವಿಕ, ತುಂಬುರು, ಆಹ್ವರಕ, ಕಂಕತಿ ಮತ್ತು ಛಾಗಲೇಯ ಎಂಬ ಬ್ರಾಹ್ಮಣಗಳೂ, ಶುಕ್ಲ ಯಜುರ್ವೇದಕ್ಕೆ ಜಾಬಾಲ ಎಂಬ ಬ್ರಾಹ್ಮಣವೂ, ಸಾಮವೇದಕ್ಕೆ ಕಾಲಬವಿ ಮತ್ತು ರೌರುಕಿ ಎಂಬ ಬ್ರಾಹ್ಮಣಗಳೂ ಇದ್ದುವೆಂದು ತಿಳಿದುಬರುತ್ತದೆ.

ವೇದಗಳ ಅಧ್ಯಯನಕ್ಕೆ ಮತ್ತು ಯಜ್ಞಕರ್ಮಗಳ ನಿರ್ವಹಣಕ್ಕೆ ಸಹಾಯ ಮಾಡುವ ಸಾಹಿತ್ಯವು ಆರು ವಿಭಾಗಗಳಲ್ಲಿದೆ. ಮತ್ತು ಆ ಆರು ವಿಭಾಗಗಳು ವೇದಗಳ ಅಂಗಗಳೆನಿಸಿಕೊಂಡಿವೆ ಮತ್ತು ಅವುಗಳ ಹೆಸರುಗಳು ಮುಂದಿನಂತಿವೆ— **೧. ಛಂದಸ್, ೨. ಕಲ್ಪ, ೩. ಜ್ಯೋತಿಷ, ೪. ನಿರುಕ್ತ, ೫. ಶಿಕ್ಷಾ ಮತ್ತು ೬. ವ್ಯಾಕರಣ.** ಅವುಗಳಲ್ಲಿ ಮೊತ್ತಮೊದಲು ಹುಟ್ಟಿದುದು ಛಂದಸ್ ಎನ್ನಬಹುದು, ಅದರ ತರುವಾಯ ಕಲ್ಪಶಾಸ್ತ್ರವೂ ಆ ತರುವಾಯ ಜ್ಯೋತಿಷವೂ, ಆ ತರುವಾಯ ಶಿಕ್ಷಾಶಾಸ್ತ್ರ ಮತ್ತು ವ್ಯಾಕರಣ ಶಾಸ್ತ್ರಗಳೂ ಕಟ್ಟಕಡೆಗೆ ನಿರುಕ್ತವೂ ಹುಟ್ಟಿದ್ದಿತೆನ್ನಬಹುದು. ಆಚಾರ್ಯ ಪಾಣಿನಿಯ ಹೆಸರಿನಲ್ಲಿರುವ ಶಿಕ್ಷಾಶಾಸ್ತ್ರದಲ್ಲಿ ಆ ಆರು ವೇದಾಂಗಗಳ ಸಂಬಂಧದಲ್ಲಿ ಮುಂದೆ ಕೊಡಲಾಗುವ ವರ್ಣನೆ ಇದೆ—

ಛಂದಃ ಪಾದೌ ತು ವೇದಸ್ಯ ಹಸ್ತೌ ಕಲ್ಪೋಽಥ ಉಚ್ಯತೇ ।
ಜ್ಯೋತಿಷಾಮಯನಂ ಚಕ್ಷುರ್ನಿರುಕ್ತಂ ಶ್ರೋತ್ರಮುಚ್ಯತೇ ॥ ೪೧ ॥
ಶಿಕ್ಷಾ ಘ್ರಾಣಂ ತು ವೇದಸ್ಯ ಮುಖಂ ವ್ಯಾಕರಣಂ ಸ್ಮೃತಮ್ ।
ತಸ್ಮಾತ್ ಸಾಂಗಮಧೀತ್ಯೈವ ಬ್ರಹ್ಮಲೋಕೇ ಮಹೀಯತೇ ॥ ೪೨ ॥

ಅರ್ಥ—ವೇದವನ್ನು ಒಬ್ಬ ಮನುಷ್ಯನಿಗೆ ಹೋಲಿಸಿದರೆ ಛಂದಸ್ ಎಂಬುದು ಅವನು ಎದ್ದು ನಿಲ್ಲಲು ಆಧಾರವಾಗಿರುವ ಎರಡು ಕಾಲುಗಳಂತಿದ್ದು ಕಲ್ಪಶಾಸ್ತ್ರವು

ಕ್ರಿಯಾಶೀಲವಾದ ಕೈಗಳಂತಿದೆ ಎನ್ನಬಹುದು. ಜ್ಯೋತಿಗಳ ಚಲನವನ್ನು ಅಂದರೆ ಸೂರ್ಯ, ಚಂದ್ರ ಮತ್ತು ನಕ್ಷತ್ರಗಳ ಸ್ಥಿತಿ-ಗತಿಗಳನ್ನು ನಿರ್ಧರಿಸುವ ಜ್ಯೋತಿಷ ಶಾಸ್ತ್ರವು ಅವನ ಕಣ್ಣುಗಳಂತೆಯೂ ಶಬ್ದಗಳ ವ್ಯುತ್ಪತ್ತಿಯನ್ನು ಮತ್ತು ಅರ್ಥಗಳನ್ನು ವಿವರಿಸುವ ನಿರುಕ್ತ ಎಂಬ ಭಾಷಾಶಾಸ್ತ್ರವು ಶಬ್ದಗ್ರಾಹಿಗಳಾದ ಕಿವಿಗಳಂತೆಯೂ ವರ್ಣಗಳ ಸ್ಥಾನ, ಭೇದ ಮತ್ತು ಉಚ್ಚಾರಗಳನ್ನು ತಿಳಿಸುವ ಶಿಕ್ಷಾಶಾಸ್ತ್ರವು ಗಂಧಗ್ರಾಹಿಯಾದ ಮೂಗಿನಂತೆಯೂ, ವ್ಯಾಕರಣ ಶಾಸ್ತ್ರವು ಶಬ್ದಗಳ ಉಚ್ಚಾರಣೆಗಳಿಗೆ ಸಾಧನವಾಗಿರುವ ಬಾಯಿಯಂತೆಯೂ ಇದೆಯೆನ್ನಬಹುದು. ಆದುದರಿಂದ ಆ ಆರು ಅಂಗಗಳ ಸಹಿತವಾಗಿ ವೇದಗಳ ಅಧ್ಯಯನ ಮಾಡಿದರೆ ಮಾತ್ರ ವೇದಮಂತ್ರಗಳ ಸರಿಯಾದ ಅರ್ಥಗಳನ್ನು ತಿಳಿದುಕೊಂಡವನಾಗಿ ಬ್ರಹ್ಮಲೋಕದಲ್ಲಿ ಕೀರ್ತಿಯನ್ನು ಪಡೆಯುತ್ತಾನೆ.

೧. **ಛಂದಸ್**—ಆಚಾರ್ಯ ಪಾಣಿನಿಯು ತನ್ನ ವ್ಯಾಕರಣ ಸೂತ್ರಗಳಲ್ಲಿ ಛಂದಸ್ ಶಬ್ದವನ್ನು ವೇದಮಂತ್ರ ಎಂಬರ್ಥದಲ್ಲಿ ಪ್ರಯೋಗಿಸಿದ್ದಾನೆ. ಆದುದರಿಂದ ಆ ಶಬ್ದದ ಮೂಲಾರ್ಥವು ಅದೇ ಅಂದರೆ "ಪದ್ಯ" ಎಂದಿದ್ದಿತೆಂದು ತಿಳಿಯಬೇಕಾಗುತ್ತದೆ. ಆದರೆ ಆ ಶಬ್ದವು ತರುವಾಯದ ಕಾಲದಲ್ಲಿ ಪದ್ಯಗಳನ್ನು ರಚಿಸುವ ನಿಯಮಗಳನ್ನು ತಿಳಿಸುವ ಶಾಸ್ತ್ರ ಎಂಬರ್ಥದಲ್ಲಿ ಪ್ರಯೋಗಿಸಲ್ಪಡತೊಡಗಿತೆಂಬುದರಲ್ಲಿ ಸಂದೇಹವಿಲ್ಲ. ಅಂದರೆ ತರುವಾಯದ ಕಾಲದಲ್ಲಿ ಅದರ ಅರ್ಥವು ವರ್ಣ ಇಲ್ಲವೇ ಮಾತ್ರೆ, ಗಣ, ಚರಣ, ಗುರು ಮತ್ತು ಲಘು ಎಂಬ ಗಣನೆಗೆ ಅನುಸಾರವಾಗಿ ಹಾಡಲು ಅನುಕೂಲವಾಗುವಂತೆ ಶಬ್ದಗಳನ್ನು ಅಳವಡಿಸುವ ನಿಯಮಗಳನ್ನು ಮತ್ತು ಗಣಗಳ ಸ್ಥಾನಭೇದದಿಂದ ಮತ್ತು ವರ್ಣಗಳ ಸಂಖ್ಯೆಗಳ ಮೇಲಿಂದ ಬೇರೆ ಬೇರೆ ಪದ್ಯಗಳಿಗೆ ಬೇರೆ ಬೇರೆ ಹೆಸರುಗಳನ್ನು ನಿರ್ಧರಿಸುವ ಶಾಸ್ತ್ರವೆಂದಾಯಿತು. ಆ ಶಾಸ್ತ್ರವನ್ನು ರಚಿಸಿದವನ ಹೆಸರು ಪಿಂಗಲನಾಗ ಎಂದಿದೆ.

೨. **ಕಲ್ಪ**—ಎಂಬುದು ವೇದಾಂಗಗಳಲ್ಲಿ ಸರ್ವಪ್ರಧಾನವಾದುದಾಗಿದೆ. ಅದರ ಸಾಮಾನ್ಯ ಅರ್ಥವು-"ವೇದವಿಹಿತ ಕರ್ಮಗಳನ್ನು ಅನುಕ್ರಮವಾಗಿ ಜರುಗಿಸುವ ವಿಧಿಯನ್ನು ತಿಳಿಸುವ ಶಾಸ್ತ್ರ"[1] ಎಂದಿದೆ. ಅರ್ಥಾತ್ ಅದರಲ್ಲಿ ಎಲ್ಲ ಬಗೆಯ ಯಜ್ಞಗಳನ್ನು ಅಂದರ ಶ್ರೌತ ಮತ್ತು ಗೃಹ್ಯ ಎಂಬ ಯಜ್ಞಗಳನ್ನು ಜರುಗಿಸುವ ಕರ್ಮಗಳ ವಿಧಿ ಇದೆ. ಮೂಲ ಕಲ್ಪಶಾಸ್ತ್ರವು ಹೇಗಿದ್ದಿತೆಂದು ತಿಳಿಯಲು ಯಾವುದೊಂದು ಪ್ರಾಚೀನ ಗ್ರಂಥವೂ ಈಗ ಉಪಲಬ್ಧವಿಲ್ಲ. ಆದರೆ ಪ್ರಾಚೀನ ಕಲ್ಪಶಾಸ್ತ್ರವನ್ನು ಅನುಸರಿಸಿ ವೇದಗಳ ಬೇರ ಬೇರೆ ಶಾಖೆಯ ಆಚಾರ್ಯರು ರಚಿಸಿದ ಹಲವು ಸೂತ್ರಗ್ರಂಥಗಳು ಈಗ ಉಪಲಬ್ಧವಿವೆ. ಮತ್ತು ಅವುಗಳೆಲ್ಲವೂ, ಶಕಪೂರ್ವ ಕಾಲದವುಗಳಾಗಿವೆ. ಮತ್ತು ಅವುಗಳು ಶ್ರೌತಸೂತ್ರಗಳು, ಗೃಹ್ಯಸೂತ್ರಗಳು ಮತ್ತು ಧರ್ಮಸೂತ್ರಗಳು ಎಂಬುದಾಗಿ ಮೂರು ವಿಭಾಗಗಳಾಗಿವೆ.

---

[1] ಕಲ್ಪೋ ವೇದವಿಹಿತ ಕರ್ಮಣಾಮಾನುಪೂರ್ವ್ಯೇಣ ಕಲ್ಪನಾ ಶಾಸ್ತ್ರಮ್ ।

ಶ್ರೌತಸೂತ್ರಗಳು—ಅವುಗಳಲ್ಲಿ ವೈದಿಕಯಜ್ಞಗಳಿಗೆ ಸಂಬಂಧಪಟ್ಟ ಎಲ್ಲ ವಿವರಗಳಿವೆ. ಅವುಗಳಲ್ಲಿ ಯಜಮಾನನು ಯಜ್ಞದ ಸಂಕಲ್ಪ ಮಾಡಿದ ತರುವಾಯ ಋತ್ವಿಜರನ್ನು ವರಿಸುವುದರಿಂದ ಪ್ರಾರಂಭಿಸಿ ಯಜ್ಞಶಾಲೆಯ ನಿರ್ಮಾಣ, ಯೂಪಸ್ತಂಭದ ಸ್ಥಾಪನೆ, ಯಜ್ಞಚಿತಿಗಳ ರಚನೆ, ಯಜ್ಞದೀಕ್ಷೆ, ಅಗ್ನಿಮಂಥನ, ಅಗ್ನ್ಯಾಧಾನ, ದೇವತೆಗಳ ಆಹ್ವಾನ, ಆಹುತಿಗಳ ಅರ್ಪಣೆ ಮೊದಲಾದುವುಗಳ ಅಂದರೆ ಯಜ್ಞದ ಪ್ರಾರಂಭದಿಂದ ಪರಿಸಮಾಪ್ತಿಯ ತನಕದ ಸಕಲ ಕಾರ್ಯಗಳನ್ನು ವ್ಯವಸ್ಥಿತ ರೀತಿಯಿಂದ ನಿರ್ವಹಿಸುವ ನಿಯಮಗಳು ಮಾತ್ರವಲ್ಲದೇ ಯಜ್ಞನಿರ್ವಹಣಕ್ಕೆ ಬೇಕಾಗುವ ಸಕಲ ಸಾಮಗ್ರಿಗಳ ಮತ್ತು ಉಪಕರಣಗಳ ವಿವರಗಳೂ ಇವೆ. ಕೆಲವು ಶ್ರೌತಸೂತ್ರಗಳಲ್ಲಿ ಆರ್ಯಜನರ ಗೋತ್ರ ಮತ್ತು ಪ್ರವರಗಳನ್ನು ತಿಳಿಸುವ ಸೂತ್ರಗಳೂ, ಯಜ್ಞಚಿತಿಗಳ ಆಕೃತಿಗಳನ್ನು ರಚಿಸುವ ಶುಲ್ಬ ಸೂತ್ರಗಳೂ ಇವೆ.

ಗೃಹ್ಯಸೂತ್ರಗಳು—ಅವುಗಳಲ್ಲಿ ಗೃಹಸ್ಥನು ತನ್ನ ಪತ್ನಿಯ ಸಹಕಾರದಿಂದ ಪ್ರತಿದಿನ ಜರುಗಿಸಬೇಕಾದ ನಿತ್ಯಕರ್ಮಗಳ ಅಂದರೆ ಅಗ್ನಿಹೋತ್ರ, ವೈಶ್ವೇದೇವ ಬಲಿಹರಣ, ಮತ್ತು ಪಂಚ ಮಹಾಯಜ್ಞಗಳ ವಿಧಿಯೂ, ದರ್ಶಪೂರ್ಣಮಾಸೇಷ್ಟಿ, ಪಾರ್ವಣಶ್ರಾದ್ಧ, ಶ್ರವಣಾಕರ್ಮ, ಅಷ್ಟಕಾಹೋಮ ಮೊದಲಾದುವುಗಳ ವಿಧಿಗಳೂ, ಮನುಷ್ಯನು ವಿವಾಹವಾದ ತರುವಾಯ ಗರ್ಭಾದಾನದಿಂದ ಮೊದಲ್ಗೊಂಡು—ಪುಂಸವನ, ಸೀಮಂತೋನ್ನಯನ, ಜಾತಕರ್ಮ, ನಾಮಕರಣ, ನಿಷ್ಕ್ರಮಣ, ಅನ್ನಪ್ರಾಶನ, ಚೌಲ, ಉಪನಯನ, ಸಮಾವರ್ತನ ಮೊದಲಾದ ಸಂಸ್ಕಾರಗಳ ಸಹಿತವಾಗಿ ಮರಣದ ಮತ್ತು ತರುವಾಯದ ಪ್ರೇತಸಂಸ್ಕಾರದ ತನಕದ ಸಕಲ ಸಂಸ್ಕಾರಗಳ ಮತ್ತು ಉತ್ತರಕ್ರಿಯೆಗಳ ವಿಧಿಗಳು ಮತ್ತು ವಿವರಗಳಿವೆ.

ಧರ್ಮಸೂತ್ರಗಳು ಅಥವಾ ಧರ್ಮಶಾಸ್ತ್ರ. ಅವುಗಳಲ್ಲಿ ಆರ್ಯಜನರೊಳಗೆ ಪ್ರಚಲಿತವಾದ ವರ್ಣಗಳ ಮತ್ತು ಆಶ್ರಮಗಳ ವ್ಯವಸ್ಥೆಯೊಂದಿಗೆ ಪ್ರತಿಯೊಂದು ವರ್ಣದವರು ಜರುಗಿಸಬೇಕಾದ ನಿತ್ಯಕರ್ಮಗಳ, ಆಚರಣೆಯು ಮತ್ತು ಪರಸ್ಪರರೊಳಗಿನ ವ್ಯವಹಾರದ ನಿಯಮಗಳಿವೆ. ಅಂದರೆ ಪಿತಾ-ಪುತ್ರರ ಸಂಬಂಧ, ಗುರುಶಿಷ್ಯರ ಸಂಬಂಧ, ರಾಜಪ್ರಜೆಗಳ ಸಂಬಂಧ ಮತ್ತು ಅವರು ಪರಸ್ಪರ ವ್ಯವಹರಿಸಬೇಕಾದ ರೀತಿ, ಅವರ ಅಧಿಕಾರ, ದಾಯಭಾಗ, ಭಕ್ಷ್ಯ ಮತ್ತು ಅಭಕ್ಷ್ಯಗಳ ವಿಚಾರ ಎಲ್ಲವೂ ಅಡಕವಾಗಿದೆ. ಧರ್ಮಸೂತ್ರಗಳು, ಮುಖ್ಯವಾಗಿ ಸಾಮಾಜಿಕ ವ್ಯವಹಾರಗಳಿಗೆ ಸಂಬಂಧಪಟ್ಟವುಗಳಾಗಿರುವುದರಿಂದ ಅವುಗಳು ಮನುಷ್ಯನ ಎಲ್ಲ ವ್ಯವಹಾರಗಳನ್ನು ನಿಯಂತ್ರಿಸುತ್ತವೆ. ಅವುಗಳಲ್ಲಿ ರಾಜನ ಕರ್ತವ್ಯ, ಪುರೋಹಿತನ ಅಧಿಕಾರ, ಕರಸಂಗ್ರಹ, ಅಪರಾಧಗಳ ವಿಚಾರಣೆ, ಅವುಗಳ ನಿರ್ಣಯ, ಪಾತಕಗಳ ನಿರ್ಣಯ, ಅವುಗಳ ಪ್ರಾಯಶ್ಚಿತ್ತ ಮೊದಲಾದ ಎಲ್ಲ ವಿಷಯಗಳು ಬರುತ್ತವೆ.

ವೇದಗಳ ಶಾಖೆಗಳಿಗನುಸಾರವಾದ ಸೂತ್ರಗಳ ವ್ಯವಸ್ಥೆಯು ಮುಂದಿನಂತೆ ತೋರುತ್ತದೆ—

(೧) ಋಗ್ವೇದದ ಶಾಕಲ ಶಾಖೆಯವರಿಗೆ ಆಶ್ವಲಾಯನ ಸೂತ್ರಗಳು ಮತ್ತು ಬಾಷ್ಕಲ ಶಾಖೆಯವರಿಗೆ ಶಾಂಖಾಯನ ಸೂತ್ರಗಳು, ಈ ಶಾಖೆಯಲ್ಲಿ ಶಾಂಬವ್ಯ ಗೃಹ್ಯಸೂತ್ರಗಳೂ ಬರುತ್ತವೆ.

(೨) ಕೃಷ್ಣಯಜುರ್ವೇದಗಳಿಗೆ- ಬೌಧಾಯನ, ಭಾರದ್ವಾಜ, ಆಪಸ್ತಂಬ, ಹಿರಣ್ಯಕೇಶಿ, ಮಾನವ, ಕಾಠಕ, ಮತ್ತು ವೈಖಾನಸ. ಬೇರೆ ಬೇರೆ ಗ್ರಂಥಗಳಲ್ಲಿ ಇನ್ನೂ ಹಲವು ಸೂತ್ರಗಳ ಉಲ್ಲೇಖಗಳಿವೆಯಾದರೂ ಆ ಸೂತ್ರಗಳು ಈಗ ಉಪಲಬ್ಧವಿಲ್ಲ.

(೩) ಶುಕ್ಲಯಜುರ್ವೇದಿಗಳಿಗೆ ಕಾತ್ಯಾಯನ ಶ್ರೌತಸೂತ್ರಗಳೂ, ಪಾರಸ್ಕರ ಗೃಹ್ಯಸೂತ್ರಗಳೂ ಇವೆ.

(೪) ಸಾಮವೇದಿಗಳಿಗೆ-ಲಾಟ್ಯಾಯನ, ದ್ರಾಹ್ಯಾಯಣ, ಆರ್ಷೇಯ ಮೊದಲಾದ ಶ್ರೌತಸೂತ್ರಗಳಿವೆಯಲ್ಲದೇ ಗೋಭಿಲ ಮತ್ತು ಖಾದಿರ ಎಂಬ ಗೃಹ್ಯ ಸೂತ್ರಗಳೂ ಇವೆ. ಗೋಭಿಲಗೃಹ್ಯಸೂತ್ರಗಳಿಗೆ ಪರಿಶಿಷ್ಟ ರೂಪದಲ್ಲಿ "ಕರ್ಮ ಪ್ರದೀಪ" ಎಂಬ ಪ್ರಯೋಗಭಾಗವಿದೆ. ಅದರಲ್ಲಿ ಅರ್ವಾಚೀನ ಕಾಲದಲ್ಲಿ ಪ್ರಚಲಿತವಾದ ಅಗ್ನಿಮಂಥನ ಕ್ರಮವಿದೆ.

(೫) ಅಥರ್ವವೇದಿಗಳಿಗೆ ವೈತಾನ ಮತ್ತು ಕೌಶಿಕ ಸೂತ್ರಗಳಿವೆ,

೩. **ಜ್ಯೋತಿಷ**—ಎಂಬುದರ ಸಾಮಾನ್ಯ ಅರ್ಥವು ಗ್ರಹಗಳ ಮತ್ತು ನಕ್ಷತ್ರಗಳ ಪರಿಚಯವನ್ನು ಮತ್ತು ಅವುಗಳ ಸ್ಥಿತಿಗತಿಗಳನ್ನು ತಿಳಿಸುವ ಶಾಸ್ತ್ರ ಎಂದಿದೆಯಾದರೂ ವೇದಗಳ ಅಂಗವಾಗಿರುವ ಜ್ಯೋತಿಷದಲ್ಲಿ ಸೂರ್ಯನ, ಚಂದ್ರನ ಮತ್ತು ಇಪ್ಪತ್ತೇಳು ಚಾಂದ್ರನಕ್ಷತ್ರಗಳಿಗೆ ಸಂಬಂಧಿಸಿದ ವಿಚಾರದ ಹೊರತು ಇತರ ಗ್ರಹಗಳದ್ದಾಗಲೀ ನಕ್ಷತ್ರಗಳದ್ದಾಗಲೀ ಉಲ್ಲೇಖವಿಲ್ಲ. ಅಂದರೆ ವೇದಾಂಗ ಜ್ಯೋತಿಷವು ಆದರ ತರುವಾಯ ರಚಿಸಲ್ಪಟ್ಟ ಇತರ ಎಲ್ಲ ಜ್ಯೋತಿಷ ಸಿದ್ಧಾಂತ ಗ್ರಂಥಗಳಿಂದ ಸಂಪೂರ್ಣ ಭಿನ್ನ ರೀತಿಯದಾಗಿದೆ. ಅದರಲ್ಲಿ ಚಾಂದ್ರ ನಕ್ಷತ್ರಗಳ ಹೆಸರುಗಳು ಬಂದಿರದೇ ವೇದಸಂಹಿತೆಗಳಲ್ಲಿ ನಕ್ಷತ್ರಗಳಾಗಿ ನಿರ್ಧರಿಸಿದ ಹಾಗೂ ಋಗ್ವೇದದ ವಿಶ್ವೇದೇವಸೂಕ್ತಗಳಲ್ಲಿ ಸ್ತುತಿಸಲ್ಪಟ್ಟಿರುವ ದೇವತೆಗಳ ಹೆಸರುಗಳು ಬಂದಿವೆ. ಮತ್ತು ಆ ಹೆಸರುಗಳು ಅಗ್ನಿಯಿಂದ ಪ್ರಾರಂಭವಾಗಿವೆ. ಜ್ಯೋತಿಷದ ಜ್ಞಾನವು ಬಹಳ ಪ್ರಾಚೀನ ಕಾಲದಿಂದ ಪರಂಪರಾಗತವಾಗಿ ಸಾಗಿ ಬಂದುದಾದರೂ, ವೇದಾಂಗ ಜ್ಯೋತಿಷದಲ್ಲಿ ಸಂಗ್ರಹಿಸಲಾದ ಗಣನಾಕ್ರಮವು ವಸಂತ ಸಂಪಾತವು ಕೃತ್ತಿಕಾ ನಕ್ಷತ್ರದಲ್ಲಿದ್ದಾಗ ಪ್ರಚಲಿತವಾದುದೆಂದು– ಅಗ್ನಿಯ ಹೆಸರು ಪ್ರಾರಂಭದಲ್ಲಿದ್ದುದರ ಮೇಲಿಂದ ಸಿದ್ಧವಾಗುತ್ತದೆ. ಆದರೆ ಈಗ

ಉಪಲಬ್ಧವಿರುವ ಶ್ಲೋಕರೂಪೀ ಗ್ರಂಥವು ಅಶ್ವಿನೀನಕ್ಷತ್ರದಲ್ಲಿ ವಸಂತ ಸಂಪಾತವಾಗುತಿದ್ದ ಕಾಲದಲ್ಲಿ ರಚಿಸಲ್ಪಟ್ಟಿದ್ದಿತೆಂದು ಹೇಳಬಹುದು.

ವೇದಾಂಗ ಜ್ಯೋತಿಷವು ಮುಖ್ಯವಾಗಿ ಯಜ್ಞದ ಅಗ್ನಿಯನ್ನು ಆಧಾನ ಮಾಡುವ ಕಾಲವನ್ನು. ಅಮಾವಾಸ್ಯೆಯನ್ನು, ಹುಣ್ಣಿಮೆಯನ್ನು ಅಥವಾ ಪರ್ವಗಳನ್ನು, ವಸಂತಾರಂಭವನ್ನು. ಸೂರ್ಯನ ಅಯನಗಳನ್ನು ಮತ್ತು ಗೃಹ್ಯಸಂಸ್ಕಾರಗಳ ಕಾಲವನ್ನು ನಿರ್ಧರಿಸುವ ಉದ್ದೇಶದಿಂದ ರಚಿಸಲ್ಪಟ್ಟಿದ್ದುದರಿಂದ ಅದರಲ್ಲಿ ದಿನ, ಮಾಸ. ಋತು, ಅಯನ ಸಂವತ್ಸರ ಮತ್ತು ಐದು ವರ್ಷಗಳ ಒಂದು ಯುಗ ಎಂಬವುಗಳ ವರ್ಣನೆ ಮಾತ್ರವಿದೆ, ಅದರೊಳಗಿನ ಗಣನಾಕ್ರಮವು ಸ್ಥೂಲ ರೀತಿಯದಾಗಿದೆ. ಅದರ ಕುರಿತಾದ ಹೆಚ್ಚಿನ ವಿವರಗಳು ಮುಂದೆ "ಭಾರತೀಯ ಜ್ಯೋತಿಷ" ಎಂಬ ಅಧ್ಯಾಯದಲ್ಲಿ ಬರುವುವು.

೪. **ಶಿಕ್ಷಾ**—ಇದನ್ನು ಭಾಷಾಧ್ವನಿ ಶಾಸ್ತ್ರ ಅಥವಾ ಉಚ್ಚಾರಶಾಸ್ತ್ರವೆನ್ನಬಹುದು. ಅಂದರೆ ಅದು ವರ್ಣಗಳ ಸಂಖ್ಯೆ, ಅವುಗಳ ವರ್ಗ, ಉಚ್ಚಾರಸ್ಥಾನ, ಪ್ರಯತ್ನ ಮೊದಲಾದುವುಗಳನ್ನು ಮತ್ತು ಸ್ವರಗಳ ಹ್ರಸ್ವದೀರ್ಘ ಮತ್ತು ಪ್ಲುತ ಎಂಬ ಹಾಗೂ ಉದಾತ್ತ, ಅನುದಾತ್ತ, ಮತ್ತು ಸ್ವರಿತ ಎಂಬ ಉಚ್ಚಾರಗಳ ಭೇದಗಳನ್ನು ಮತ್ತು ಅಂಥ ಉಚ್ಚಾರಗಳ ಭೇದದಿಂದ ಶಬ್ದದ ಹಾಗೂ ವಾಕ್ಯದ ಅರ್ಥಗಳಲ್ಲಿ ಹುಟ್ಟುವ ಭೇದಗಳನ್ನು ವಿವರಿಸುವ ಶಾಸ್ತ್ರವಾಗಿದೆ. ಪ್ರಾಚೀನ ಕಾಲದಲ್ಲಿ ಪ್ರತಿಯೊಂದು ವೇದದ ಶಾಖೆಯವರು ತಮ್ಮ ತಮ್ಮ ಉಪಯೋಗಕ್ಕಾಗಿ ಪ್ರಾತಿಶಾಖ್ಯ ಎಂಬ ಹೆಸರಿನ ಶಿಕ್ಷಾ ಶಾಸ್ತ್ರಗಳನ್ನು ಉಪಯೋಗಿಸುತಿದ್ದರು. ಅವುಗಳಲ್ಲಿ ಒಂದೆರಡು ವ್ಯಾಕರಣ ನಿಯಮಗಳೂ ಇರುತಿದ್ದುವು. ಅವುಗಳು ಋಗ್ವೇದಪ್ರಾತಿಶಾಖ್ಯ, ತೈತ್ತಿರೀಯ ಪ್ರಾತಿಶಾಖ್ಯ, ವಾಜಸನೇಯಿಪ್ರಾತಿ ಶಾಖ್ಯ ಮತ್ತು ಅಥರ್ವ ಪ್ರಾತಿಶಾಖ್ಯ ಎಂದು ನಾಲ್ಕು ಇಂದಿಗೂ ಉಪಲಬ್ಧ ಇವೆ. ಹಾಗಿದ್ದರೂ ಈಗ ವ್ಯಾಕರಣಾಚಾರ್ಯ ಪಾಣಿನಿಯ ಹೆಸರಿನಲ್ಲಿರುವ ಶಿಕ್ಷಾಶಾಸ್ತ್ರವು ಹೆಚ್ಚು ಪ್ರಚಲಿತವಿದೆ. ಅದು ಯಜ್ಞಕಾಲದಲ್ಲಿ ಪ್ರಯೋಗಿಸಲಾಗುವ ಮಂತ್ರಗಳ ಉಚ್ಚಾರ ಸಂಬಂಧದಲ್ಲಿ ಮುಂದಿನಂತೆ ಎಚ್ಚರಿಕೆಯನ್ನು ನೀಡುತ್ತದೆ.

ಮಂತ್ರೋ ಹೀನಃ ಸ್ವರತೋ ವರ್ಣತೋ ವಾ
ಮಿಥ್ಯಾ ಪ್ರಯುಕ್ತೋ ನ ತಮರ್ಥಮಾಹ ।
ಸ ವಾಗ್ವಜ್ರೋ ಯಜಮಾನಂ ಹಿನಸ್ತಿ
ಯಥೇಂದ್ರ ಶತ್ರುಃ ಸ್ವರತೋಽಪರಾಧಾತ್ ॥ ೫೨ ॥

ಅಂದರೆ ಸ್ವರದಿಂದಾಗಲೀ ವರ್ಣದಿಂದಾಗಲೀ ಕೊರತೆ ಹೊಂದಿದ ಮತ್ತು ತಪ್ಪಾಗಿ ಪ್ರಯೋಗಿಸಲ್ಪಟ್ಟ ಮಂತ್ರವು ಉದ್ದಿಷ್ಟ ಅರ್ಥವನ್ನು ಕೊಡುವುದಿಲ್ಲ. ಪ್ರತಿಯಾಗಿ ಅದು ವಾಗ್‌ರೂಪದ ವಜ್ರವಾಗಿ ಪರಿಣಮಿಸಿ—"ಇಂದ್ರಶತ್ರುಃ" ಶಬ್ದದ

ಉಚ್ಚಾರದಲ್ಲಾದ ತಪ್ಪಿನಿಂದ ಆ ಶಬ್ದವು ವಿರುದ್ಧ ಫಲವನ್ನು ಕೊಟ್ಟಂತೆ-ಯಜಮಾನನನ್ನು ಕೊಲ್ಲುತ್ತದೆ.

ಇಂದ್ರಶತ್ರು : ಶಬ್ದದ ಉಚ್ಚಾರದ ಸಂಬಂಧದಲ್ಲಿ ಶತಪಥ ಬ್ರಾಹ್ಮಣದ ೧-೬-೩-೧ರಿಂದ ೧೦ರ ತನಕ ಒಂದು ಆಖ್ಯಾನವಿದೆ. ಅದರ ಸಾರಾಂಶವು ಮುಂದಿನಂತಿದೆ-ತ್ವಷ್ಟಾ ಎಂಬವನಿಗೆ-ವಿಶ್ವರೂಪ ಎಂಬ ಹೆಸರಿನ ಮೂರು ಮೋರೆಗಳ ಒಬ್ಬ ಮಗನಿದ್ದ. ಇಂದ್ರನು ಅವನನ್ನು ದ್ವೇಷಿಸುತಿದ್ದ ಆದುದರಿಂದ ಅವನು ವಿಶ್ವರೂಪನ ತಲೆಗಳನ್ನು ತರಿದನು. ಅದರಿಂದ ಕ್ರುದ್ಧನಾದ ತ್ವಷ್ಟನು-ತಾನು ಯಜ್ಞಕ್ಕಾಗಿ ತಂದ ಸೋಮರಸದ ಪಾನದಿಂದ ಇಂದ್ರನನ್ನು ಹೊರತು ಪಡಿಸಿದನು. ಅಂದರೆ ಇಂದ್ರನನ್ನು ಯಜ್ಞಕ್ಕೆ ಆಹ್ವಾನಿಸಲಿಲ್ಲ. ಆದರೆ ಇಂದ್ರನು ಆಹ್ವಾನವಿಲ್ಲದಿದ್ದರೂ ಯಜ್ಞಸ್ಥಳಕ್ಕೆ ಬಂದು ಅಲ್ಲಿ ಪಾತ್ರೆಯೊಳಗೆ ಶುದ್ಧ ಪಡಿಸಿಟ್ಟ ಸೋಮರಸವನ್ನು ತೆಗೆದು ಕುಡಿದನು. ಅದರಿಂದ ಕ್ರುದ್ಧನಾದ ತ್ವಷ್ಟನು ಪಾತ್ರೆಯಲ್ಲಿ ಉಳಿದಿದ್ದ ಸೋಮರಸವನ್ನು **"ಇಂದ್ರಶತ್ರುರ್ವರ್ಧಸ್ವ"** ಎಂದು ಉಚ್ಚರಿಸುತ್ತ ಅಂದರೆ "ನೀನು ಇಂದ್ರನ ಶತ್ರುವಾಗಿ ಬೆಳೆ" ಎಂಬ ಭಾವನೆಯಿಂದ ಯಜ್ಞಕುಂಡದಲ್ಲಿ ಸುರಿದನು. ಆ ರಸವು ಅಗ್ನಿಯನ್ನು ತಲುಪಿದೊಡನೆಯೇ ತ್ವಷ್ಟನು ಎಣಿಸಿದಂತೆ ವೃತ್ರನಾಗಿ ಅಥವಾ ಕಾಲುಗಳಿಲ್ಲದ ಅಹಿಯಾಗಿ ಏನೋ ಮಾರ್ಪಟ್ಟಿತು. ಪರಂತು ತ್ವಷ್ಟನು "ಇಂದ್ರಶತ್ರುಃ" ಎಂಬ ಶಬ್ದವನ್ನು ಉಚ್ಚರಿಸುವಾಗ ಅದು ಅಂತ್ಯೋದಾತ್ತವಾಗಿರಬೇಕಾದುದು ಆದ್ಯುದಾತ್ತವಾಗಿತ್ತು. ಆದುದರಿಂದ ವೃತ್ರನಿಂದ ಇಂದ್ರನು ಹತನಾಗುವುದಕ್ಕೆ ಪ್ರತಿಯಾಗಿ ಇಂದ್ರನಿಂದ ವೃತ್ರನು ಹತನಾದನು. ಕಾರಣವೇನೆಂದರೆ ಇಂದ್ರಶತ್ರು ಎಂಬ ಸಮಾಸ ಪದದೊಳಗಿನ "ಶತ್ರುಃ" ಶಬ್ದದ "ಶ" ಕಾರವು ಉದಾತ್ತವಾಗಿ ಉಚ್ಚರಿಸಲ್ಪಟ್ಟುದಾದರೆ ಅದು "ಇಂದ್ರಸ್ಯ ಶತ್ರುಃ" ಅಂದರೆ ಇಂದ್ರನ ಶತ್ರು ಅಥವಾ ಇಂದ್ರನನ್ನು ಕೊಲ್ಲುವಂಥವನು ಎಂಬ ಅರ್ಥವನ್ನು ಕೊಡುತಿತ್ತು. ಆದರೆ ತ್ವಷ್ಟನು ಆ ಸಮಾಸಪದವನ್ನು ಉಚ್ಚರಿಸುವಾಗ ಇಂದ್ರ ಶಬ್ದದೊಳಗಿನ "ಇ"ಕಾರವು ಉದಾತ್ತವಾಗಿ ಬಿಟ್ಟುದರಿಂದ ಅದು "ಇಂದ್ರೋ ಯಸ್ಯಃ ಶತ್ರು" ಅಂದರೆ "ಇಂದ್ರನು ಯಾವನ ಶತ್ರುವೋ" ಅವನು ಅಥವಾ ಇಂದ್ರನಿಂದ ಕೊಲ್ಲಲ್ಪಡುವಂಥವನು ಎಂಬರ್ಥದ ಬಹುವ್ರೀಹಿ ಸಮಾಸವಾಗಿ ಮಾರ್ಪಟ್ಟಿತು. ಹಾಗಾಗಿ ಇಂದ್ರನಿಂದ ವೃತ್ರನು ಹತನಾದನು. ಈ ಆಖ್ಯಾನದ ಸಾರಾಂಶವು-ಯಾವುದೊಂದು ಶಬ್ದದ ಉಚ್ಚಾರದಲ್ಲಾಗುವ ಭೇದದಿಂದಾಗಿ ಅದರ ಅರ್ಥದಲ್ಲಿಯೂ ಭೇದ ಹುಟ್ಟುತ್ತದಾದುದರಿಂದ ಶಬ್ದಗಳನ್ನು ಉಚ್ಚರಿಸುವಲ್ಲಿ ಸರಿಯಾದ ನಿಯಂತ್ರಣವೂ, ಶುದ್ಧತೆಯೂ, ಸ್ಪಷ್ಟತೆಯೂ ಇರಬೇಕೆಂಬುದಾಗಿಯೇ ಹೊರತು ಬೇರೇನೂ ಅಲ್ಲ.

೩. ವ್ಯಾಕರಣ - ಎಂಬುದರ ಅರ್ಥವು "ಬೇರ್ಪಡಿಸುವಿಕೆ ಅಥವಾ ವಿಭಜಿಸುವಿಕೆ" ಎಂದಿದೆ. ಅಂದರೆ ಅದು ಭಾಷೆಯಲ್ಲಿ ಉಪಯೋಗಿಸಲ್ಪಡುವ ಶಬ್ದ

ಸಮೂಹವನ್ನು ಇಲ್ಲವೇ ಯಾವುದೊಂದು ವಾಕ್ಯದಲ್ಲಿ ಉಪಯೋಗಿಸಲ್ಪಟ್ಟ ಶಬ್ದಗಳನ್ನು, ನಾಮಪದ, ಸರ್ವನಾಮ, ಕ್ರಿಯಾಪದ, ಧಾತು, ಪ್ರತ್ಯಯ, ಉಪಸರ್ಗ, ಅವ್ಯಯ, ವಿಶೇಷಣ, ಕ್ರಿಯಾವಿಶೇಷಣ, ಕಾರಕ, ವಿಭಕ್ತಿ, ಕರ್ತ, ಕರ್ಮ, ಕ್ರಿಯೆ, ಆಖ್ಯಾತ ಇತ್ಯಾದಿಯಾಗಿ ವಿಭಜಿಸಿ ವಿವರಿಸುವ ಶಾಸ್ತ್ರವಾಗಿದೆ. ಅಂದರೆ ಅದು ಭಾಷೆಯನ್ನು ಸರಿಯಾಗಿ ಅರಿತುಕೊಳ್ಳಲು ಮತ್ತು ಸರಿಯಾದ ರೀತಿಯಲ್ಲಿ ಉಪಯೋಗಿಸಲು ಕಲಿಸುವ ಶಾಸ್ತ್ರವಾಗಿದೆ.

ವೇದಮಂತ್ರಗಳ ಪಠನ ಮತ್ತು ಅಧ್ಯಯನಗಳ ಸಲುವಾಗಿಯೇ ಮೊತ್ತಮೊದಲು ವ್ಯಾಕರಣ ಶಾಸ್ತ್ರದ ಆವಶ್ಯಕತೆ ತೋರಿದ್ದಿತೆನ್ನಬಹುದು. ಆದುದರಿಂದಲೇ ಮೊದಲು ಪ್ರಾತಿಶಾಖ್ಯಗಳೆಂಬ ವಾಕ್ಯರಣ ಮಿಶ್ರವಾದ ಶಿಕ್ಷಾಶಾಸ್ತ್ರಗಳು ಹುಟ್ಟಿದ್ದುವು. ಆದರೆ ಅವುಗಳಲ್ಲಿ ವ್ಯಾಕರಣದ ಎಲ್ಲ ಅಂಗಗಳಾಗಲೀ ಸ್ಪಷ್ಟತೆಯಾಗಲೀ ಇರಲಿಲ್ಲ. ಆಚಾರ್ಯ ಆಶ್ವಲಾಯನನ ಗುರುವಾಗಿದ್ದ, ಶೌನಕನು ಮತ್ತು ಶಾಕಲ ಶಾಖೆಯ ಆಚಾರ್ಯ ಶಾಕಲ್ಯ ಎಂಬವನು ಋಗ್ವೇದಕ್ಕೆ ಬೇರೆ ಬೇರೆ ಪ್ರಾತಿಶಾಖ್ಯಗಳನ್ನು ರಚಿಸಿದ್ದಾರೆ. ಹಾಗೆಯೇ ಅಥರ್ವ ವೇದದ ಪ್ರಾತಿಶಾಖ್ಯವು ಕೂಡ ಆಚಾರ್ಯ ಶೌನಕನ ಹೆಸರಿನಲ್ಲಿದೆ. ಶುಕ್ಲ ಯಜುರ್ವೇದಕ್ಕೆ ಆಚಾರ್ಯ ಕಾತ್ಯಾಯನನು ರಚಿಸಿದ ವಾಜಸನೇಯಿ ಪ್ರಾತಿಶಾಖ್ಯವಿದೆ. ಕೃಷ್ಣಯಜುರ್ವೇದಕ್ಕೆ ,,ತೈತ್ತಿರೀಯ ಪ್ರಾತಿಶಾಖ್ಯವಿದೆ. ಮತ್ತು ಅದರಲ್ಲಿ ಸಾಧಾರಣ ಇಪ್ಪತ್ತು ಮಂದಿ ಪ್ರಾತಿಶಾಖ್ಯಕಾರರಾದ ಆಚಾರ್ಯರ ಹೆಸರುಗಳು ಬರುತ್ತವೆ. ಸಾಮವೇದಕ್ಕೆ ಸಾಮವೇದ ಪ್ರಾತಿಶಾಖ್ಯವಿದೆ.

ವ್ಯಾಕರಣದ ಪ್ರಾರಂಭವು ಆಚಾರ್ಯ ಶಾಕಲ್ಯನು ಮಾಡಿದ ಋಗ್ವೇದ ಮಂತ್ರಗಳ ಪದಪಾಠದಿಂದ ಆಯಿತೆನ್ನಬಹುದು ಅಂದರೆ ಅವನು ವೇದಮಂತ್ರಗಳಲ್ಲಿ ಸಂಧಿನಿಯಮಗಳಂತೆ ಕೂಡಿರುವ ಪದಗಳನ್ನು ಬೇರ್ಪಡಿಸಿದನು. ಅಂದರೆ ,,**ಅಗ್ನಿಮೀಳೇ ಪುರೋಹಿತಂ ಯಜ್ಞಸ್ಯ ದೇವಮೃತ್ವಿಜಮ್। ಹೋತಾರಂ ರತ್ನಧಾತಮಮ್** ॥೧–೧–೧॥ ಎಂಬ ಮಂತ್ರವನ್ನು " **ಅಗ್ನಿಮ್ । ಈಳೇ । ಪುರಃ ಹಿತಮ್ । ಯಜ್ಞಸ್ಯ । ದೇವಮ್ ಋತ್ವಿಜಮ್ । ಹೋತಾರಮ್। ರತ್ನಧಾತಮಮ್**" । ಎಂಬುದಾಗಿ ಬಿಡಿಸಿ ಹೇಳಿದನು. ಹಾಗೆ ಅವನು ಇಡೀ ಋಗ್ವೇದ ಸಂಹಿತೆಯನ್ನು ಪದಪಾಠವಾಗಿ ಬಿಡಿಸಿ ಹೇಳಿದ್ದಾನೆ. ಹಾಗಾಗಿ ಅದು ಶಾಕಲ ಸಂಹಿತೆ ಎಂಬುದಾಗಿ ಹೆಸರು ಪಡೆದಿದೆ.

ಆಚಾರ್ಯ ಶಾಕಲ್ಯನು ಋಗ್ವೇದದ ಪದಪಾಠವನ್ನು ಸಿದ್ಧಗೊಳಿಸಿದ ತರುವಾಯ ಸಾಧಾರಣ ಹದಿನಾರು ಮಂದಿ ಆಚಾರ್ಯರು [1] ವ್ಯಾಕರಣ ಗ್ರಂಥ

[1] ಆಗ್ರಾಯಣ, ಔದುಂಬರಾಯಣ, ಔಪಮನ್ಯವ, ಔರ್ಣವಾಭ, ಕಾಶಕೃ; ಕೌತ್ಸಗಾರ್ಗ್ಯ, ಗಾಲವ, ಚರ್ಮಶಿರಸ್, ತೈತಿಕಿ, ಮೌದ್ಗಲ್ಯ, ವಾರ್ಷ್ಯಾಯಣಿ, ಶತಬಲಾಕ್ಷ, ಶಾಕಟಾಯನ, ಶಾಕಪೂಣಿ ಮತ್ತು ಸ್ಥೌಲಷ್ಠೀವನ್.

ಗಳನ್ನು ರಚಿಸಿದ್ದರು. ಆದರೆ ಈಗ ಆ ಆಚಾರ್ಯರ ಹೆಸರುಗಳು ಮಾತ್ರ ಉಳಿದಿವೆಯೇ ಹೊರತು ಅವರು ರಚಿಸಿದ ಗ್ರಂಥಗಳು ಉಳಿದಿಲ್ಲ. ಅವರ ಹೆಸರುಗಳಲ್ಲಿ ಕೆಲವು ಹೆಸರುಗಳು ಆಚಾರ್ಯಯಾಸ್ಕನು ರಚಿಸಿದ ನಿರುಕ್ತ ಅಂದರೆ ವೈದಿಕ ಶಬ್ದಗಳ ವಾಖ್ಯೆ ಇರುವ ಗ್ರಂಥದಲ್ಲಿ ಬರುತ್ತವೆ. ಆಚಾರ್ಯಯಾಸ್ಕನ ತರುವಾಯ ಹುಟ್ಟಿದವರಲ್ಲಿ ಈಗ ವೇದಾಂಗವೆಂದು ಪ್ರಚಲಿತವಿರುವ ‥ಅಷ್ಟಾಧ್ಯಾಯಿ'' ಎಂಬ ಹೆಸರಿನ ಸರ್ವಾಂಗಪರಿಪೂರ್ಣವೂ, ಸರ್ವೋತ್ತಮವೂ ಆಗಿರುವ ವ್ಯಾಕರಣ ಗ್ರಂಥವನ್ನು ರಚಿಸಿ ‥ಮಹರ್ಷಿ" ಪದವನ್ನು ಪಡೆದ ಆಚಾರ್ಯ ಪಾಣಿನಿಯೇ ಪ್ರಧಾನನೆನ್ನಬಹುದು.

ಮಹಾಪ್ರತಿಭಾಶಾಲಿಯಾದ ಆಚಾರ್ಯಪಾಣಿನಿಯು ಶಕಪೂರ್ವ **೫೬**೮ನೆಯ ವರ್ಷದಲ್ಲಿ ಜನಿಸಿ, ೪೮೮ನೆಯ ವರ್ಷದ ತನಕ ಜೀವಿಸಿದ್ದನು. ಅವನ ಜನ್ಮಸ್ಥಾನವು ಗಂಧಾರ ಪ್ರಾಂತಕ್ಕೆ ಸೇರಿದ ಶಲಾತುರಗ್ರಾಮವಾಗಿತ್ತು. ಅವನು ರಚಿಸಿದ ವ್ಯಾಕರಣ ಸೂತ್ರಗಳ ಗ್ರಂಥದಲ್ಲಿ ಎಂಟು ಅಧ್ಯಾಯಗಳಿವೆ ಆದುದರಿಂದ ಅದಕ್ಕೆ ಅಷ್ಟಾಧ್ಯಾಯಿ ಎಂಬ ಹೆಸರು ಬಂದಿದೆ. ಪ್ರತಿಯೊಂದು ಅಧ್ಯಾಯದಲ್ಲಿ ನಾಲ್ಕು ಪಾದಗಳಿವೆ. ಮತ್ತು ಆ ಗ್ರಂಥದಲ್ಲಿ ಗ್ರಂಥಾರಂಭದ **"ಅಕ್ಷರಸಮಾಮ್ನಾಯ"** ಎಂದು ಕರೆಯಲ್ಪಡುವ ಹದಿನಾಲ್ಕು ಸೂತ್ರಗಳ ಸಹಿತವಾಗಿ ಮೂರು ಸಾವಿರದ ಒಂಭೈನೂರು ತೊಂಭತ್ತೈದು ಸೂತ್ರಗಳಿವೆ. ಸೂತ್ರ ಎಂಬುದರ ಅರ್ಥವು "ಚುಟುಕು ವಾಕ್ಯ" ಇಲ್ಲವೆ "ಚುಟುಕಾದ ನಿಯಮ" ಎಂದಿದೆ. ಆಚಾರ್ಯಪಾಣಿನಿಯ ಸಂಬಂಧದ ಹೆಚ್ಚಿನ ವಿವರಗಳು ಮುಂದೆ ‥ಬ್ರಾಹ್ಮೀಲಿಪಿಯ ಮೂಲ'' ಎಂಬ ಅಧ್ಯಾಯದಲ್ಲಿ ಬರುವವು.

೬. ನಿರುಕ್ತ – ಎಂಬ ಶಬ್ದವು ಬ್ರಾಹ್ಮಣ ಮೊದಲಾದ ಗ್ರಂಥಗಳಲ್ಲಿ ‥ಯಾವುದೊಂದು ಶಬ್ದದ ಮೂಲವಾವುದು? ಅದರ ಅರ್ಥವೇನು? ಎಂಬುದನ್ನು ವಿವರಿಸುವುದು'' ಎಂಬರ್ಥದಲ್ಲಿ ಪ್ರಯೋಗಿಸಲ್ಪಟ್ಟಿದೆ, ಬ್ರಾಹ್ಮಣ ಗ್ರಂಥಗಳಲ್ಲಿ ಅಂಥ ಅನೇಕ "ನಿರುಕ್ತಿ''ಗಳಿವೆ. ಆದರೆ ಈಗ ವೇದಾಂಗವೆಂದು ಪರಿಗಣಿಸಲ್ಪಡುತ್ತಿರುವ ನಿರುಕ್ತ ಎಂಬ ಗ್ರಂಥವು ಸಾಧಾರಣ ಶಕಪೂರ್ವ ಏಳನೆಯ ಶತಮಾನದವನಾದ ಆಚಾರ್ಯಯಾಸ್ಕ ಎಂಬುವನು ಸಂಗ್ರಹಿಸಿದ ‥ನಿಘಂಟು'' ಎಂಬ ವೈದಿಕ ಶಬ್ದಕೋಶದೊಳಗಿನ ಶಬ್ದಗಳನ್ನು ಶಾಸ್ತ್ರೀಯ ರೀತಿಯಿಂದ ವಿಶ್ಲೇಷಿಸಿ ಅವುಗಳ ಮೇಲೆ ರಚಿಸಿದ ವಾಖ್ಯೆಯಾಗಿದೆ. ಅದನ್ನು "ವೇದಭಾಷಾ ವಿಜ್ಞಾನ'' ವೆನ್ನಬಹುದು.

ಆಚಾರ್ಯಯಾಸ್ಕನು ಆ ಗ್ರಂಥದಲ್ಲಿ ನಿಘಂಟುವಿನಲ್ಲಿ ಸಂಗ್ರಹಿಸಲ್ಪಟ್ಟಿರುವ ಶಬ್ದಗಳು ಯಗ್ವೇದದ ಯಾವ ಯಾವ ಮಂತ್ರಗಳಲ್ಲಿ ಪ್ರಯೋಗಿಸಲ್ಪಟ್ಟಿವೆ ಯೆಂಬುದನ್ನು ಉದಹರಿಸಿ ಆ ಶಬ್ದಗಳ ವ್ಯುತ್ಪತ್ತಿಯನ್ನು ಮತ್ತು ವ್ಯುತ್ಪತ್ತಿಗೂ, ಸಂದರ್ಭಕ್ಕೂ ಅನುಸಾರವಾದ ಅರ್ಥಗಳನ್ನು ವಿವರಿಸಿದ್ದಾನೆ.

ಆದರೆ ಋಗ್ವೇದದೊಳಗಿನ ಹಲವು ಮಂತ್ರಗಳೊಳಗಿನ ವಿಷಯವು ಅವನ ಕಾಲಕ್ಕಿಂತ ಸಾವಿರಾರು ವರ್ಷಗಳಿಗೆ ಪ್ರಾಚೀನವಾಗಿದ್ದುದರಿಂದ ಆ ಮಂತ್ರಗಳು ಕಾಲ ಪ್ರವಾಹದೊಂದಿಗೆ ಸಾಗಿ ಬರುವಾಗ ಅವುಗಳೊಳಗಿನ ಹಲವು ಶಬ್ದಗಳು ತಮ್ಮ ಮೂಲಾರ್ಥಗಳನ್ನು ಕಳೆದುಕೊಂಡು ಹೊಸ ಅರ್ಥಗಳನ್ನು ಹೊಂದಿದ್ದುವು. ಹಲವು ಶಬ್ದಗಳ ಅರ್ಥಗಳು ತಿಳಿಯದಾಗಿದ್ದುವು. ಮಾತ್ರವಲ್ಲ ವೇದ ಮಂತ್ರಗಳ ವಾಸ್ತವಿಕ ಹಿನ್ನೆಲೆಯನ್ನು ಅರಿಯದ ಆಧ್ಯಾತ್ಮ ಜ್ಞಾನವಾದಿಗಳು ವೇದಮಂತ್ರಗಳಲ್ಲಿ ಆಧ್ಯಾತ್ಮಿಕ ಜ್ಞಾನತುಂಬಿದೆಯೆಂದು ಭಾವಿಸಿ ಮಂತ್ರಗಳೊಳಗಿನ ಶಬ್ದಗಳಿಗೆ ಇಲ್ಲದ ಆಧ್ಯಾತಿಕ ಅರ್ಥವನ್ನು ಹೇಳತೊಡಗಿದ್ದರು. ಹಾಗಾಗಿ ಆಚಾರ್ಯಯಾಸ್ಕನ ನಿರುಕ್ತದ ಮೇಲೂ ಆಧ್ಯಾತ್ಮಿಕ ಅರ್ಥದ ಸಾಕಷ್ಟು ಪ್ರಭಾವವಾಗಿದೆಯೆಂಬುದರಲ್ಲಿ ಸಂದೇಹ ವಿಲ್ಲ. ಆದುದರಿಂದ ಆಚಾರ್ಯಯಾಸ್ಕನು ತನ್ನ ನಿರುಕ್ತದಲ್ಲಿ ವೈದಿಕ ಶಬ್ದಗಳಿಗೆ ಹೇಳಿದ ವ್ಯುತ್ಪತ್ತಿಗಳಾಗಲೀ, ಅರ್ಥಗಳಾಗಲೀ ನೂರಕ್ಕೆ ನೂರು ಸರಿಯಾಗಿವೆಯೆಂದು ತಿಳಿಯುವುದು ಸರಿಯಾಗದು. ಏಕೆಂದರೆ ಅವನು ಕೆಲವು ಶಬ್ದಗಳಿಗೆ ಹೇಳಿದ ವ್ಯುತ್ಪತ್ತಿಗಳು ಮತ್ತು ಅರ್ಥಗಳು ಸಂಪೂರ್ಣ ಕಲ್ಪಿತವಾಗಿವೆಯೆಂದು ಅವನು ಕೊಟ್ಟಿರುವ ಪರ್ಯಾಯವಾಚಿಗಳಿಂದ ಸ್ಪಷ್ಟವಾಗಿ ಗೊತ್ತಾಗುತ್ತದೆ. ಹಾಗಿದ್ದರೂ ಅವನ ಆ ಗ್ರಂಥವು ಅತ್ಯಂತ ಮೌಲಿಕವಾಗಿದೆಯೆಂಬುದರಲ್ಲಿ ಸಂದೇಹವಿಲ್ಲ.

ವೇದಗಳ ಬ್ರಾಹ್ಮಣಗಳಲ್ಲಿರುವ ಆರಣ್ಯಕ ಭಾಗಗಳಲ್ಲಿ ಆಧ್ಯಾತ್ಮಿಕ ವಿಚಾರ ಗಳಿಗೆ ಸಂಬಂಧಪಟ್ಟ "ಉಪನಿಷದ್" ಎಂಬ ಪ್ರವಚನಗಳಿವೆ. ಆ ಪ್ರವಚನಗಳು ಆಧ್ಯಾತ್ಮಿಕ ವಿಚಾರಗಳಿಗಾಗಿ ಬಹಳ ಪ್ರಖ್ಯಾತಿ ಪಡೆದುದರಿಂದ ತರುವಾಯದ ಜನರು ತಮ್ಮ ಆಧ್ಯಾತ್ಮಿಕ ವಿಚಾರಗಳನ್ನು ಪ್ರತಿಪಾದಿಸಿ ರಚಿಸಿದ ಚಿಕ್ಕ ಚಿಕ್ಕ ಕೈಪಿಡಿಗಳಿಗೆ ಕೂಡ ಉಪನಿಷದ್ ಎಂಬ ಹೆಸರನ್ನು ಕೊಟ್ಟಿದ್ದಾರೆ. ಹಾಗಾಗಿ ಈಗ ಉಪನಿಷತ್ತು ಗಳ ಸಂಖ್ಯೆಯು ಇನ್ನೂರಕ್ಕೂ ಮಿಕ್ಕಿದೆ. ಆದರೆ ಆ ಎಲ್ಲ ಉಪನಿಷತ್ತುಗಳನ್ನು ವೈದಿಕ ಸಾಹಿತ್ಯದಲ್ಲಿ ಸೇರಿಸಲು ಬರುವುದಿಲ್ಲ. ಆದುದರಿಂದ ವೇದಗಳ ಶಾಖೆಗಳಿಗೆ ಸೇರಿದ ಉಪನಿಷತ್ತುಗಳ ಹಸರುಗಳು ಮಾತ್ರ ಇಲ್ಲಿ ಮುಂದೆ ಕೊಡಲಾಗುವುವು–

ಋಗ್ವೇದದ ಶಾಖೆಗಳಿಗೆ ಸೇರಿದವುಗಳು– ೧. ಐತರೇಯ ಮತ್ತು ೨. ಕೌಶೀತಕಿ.

ಕೃಷ್ಣಯಜುರ್ವೇದದ ಶಾಖೆಗಳಿಗೆ ಸೇರಿದವುಗಳು– ೧. ತೈತ್ತಿರೀಯ ಮತ್ತು ೨. ಮಹಾನಾರಾಯಣ ಅಥವಾ ಯಾಜ್ಞಿಕೀ. ೧. ಕಠ, ೨. ಶ್ವೇತಾಶ್ವತರ. ೧. ಮೈತ್ರಾಯಣೀ (ಇದು ಸಂಹಿತೆಯಲ್ಲಿಯೇ ಬರುತ್ತದೆ)

ಶುಕ್ಲಯಜುರ್ವೇದದವುಗಳು ೧. ಈಶೋಪನಿಷದ್. ಇದು ವಾಜಸನೇಯಿ ಸಂಹಿತೆಯ ಕೊನೆಯ ನಾಲ್ವತ್ತನೆಯ ಅಧ್ಯಾಯವಾಗಿರುತ್ತದೆ. ೨. ಬೃಹದಾರಣ್ಯಕ ಇದು ಶತಪಥ ಬ್ರಾಹ್ಮಣದ ಕೊನೆಯ ಆರು ಅಧ್ಯಾಯಗಳಾಗಿದೆ.

ಸಾಮವೇದದ ಶಾಖೆಗಳಿಗೆ ಸೇರಿದವುಗಳು–೧. ಕೇನ (ತಲವಕಾರ) ೨. ಛಾಂದೋಗ್ಯ.

ಅಥರ್ವವೇದದ ಗೋಪಥ ಬ್ರಾಹ್ಮಣಕ್ಕೆ ಸೇರಿದವುಗಳು. ೧. ಪ್ರಶ್ನ ೨. ಮುಂಡಕ. ಇವೆರಡು ಪ್ರಾಚೀನವಾಗಿದ್ದು ತರುವಾಯದ ಕಾಲದಲ್ಲಿ ರಚಿಸಲ್ಪಟ್ಟ ಇನ್ನೂ ಇಪ್ಪತ್ತೈದು ಉಪನಿಷತ್ತುಗಳು ಗೋಪಥ ಬ್ರಾಹ್ಮಣಕ್ಕೆ ಸೇರಿವೆ. ಅವುಗಳ ಹೆಸರುಗಳು ಮುಂದಿನಂತಿವೆ–೧. ಅಥರ್ವಶಿಖಾ ೨. ಅಥರ್ವಶಿರಸ್ ೩. ಅಮೃತ ಬಿಂದು. ೪. ಅರುಣಿ. ೫. ಏಕದಂಡಿನ್ಯಾಸ. ೬. ಕ್ಷುರಿಕಾ. ೭. ಗರ್ಭ ೮. ಚೂಲಿಕಾ ೯. ತೇಜೋ ಬಿಂದು. ೧೦. ಧ್ಯಾನ ಬಿಂದು. ೧೧. ನಾದ ಬಿಂದು. ೧೨. ನಾರಾಯಣ. ೧೩. ನೀಲ ರುದ್ರ. ೧೪. ಪಂಚತಾಪನೀಯ (ನೃಸಿಂಹ ತಾಪನೀಯ) ೧೫. ಪರಮ ಹಂಸ. ೧೬. ಪ್ರಾಣಾಗ್ನಿಹೋತ್ರ ೧೭. ಬ್ರಹ್ಮ ೧೮. ಬ್ರಹ್ಮ ಬಿಂದು. ೧೯. ಬ್ರಹ್ಮ ವಿದ್ಯಾ. ೨೦. ಮಹಾ. ೨೧. ಮಾಂಡೂಕ್ಯ. ೨೨. ಯೋಗ ತತ್ವ. ೨೩. ಯೋಗ ಶಿಖಾ. ೨೪. ವೈತಥ್ಯ ೨೫. ಹಂಸ.

ವೈದಿಕ ಸಾಹಿತ್ಯದಲ್ಲಿ ಹಿಂದೆ ಹೆಸರಿಸಿದ ಗ್ರಂಥಗಳು ಮಾತ್ರವಲ್ಲದೇ ಪ್ರತಿಯೊಂದು ವೇದದೊಳಗಿನ ಸೂಕ್ತಗಳ, ಅನುವಾಕಗಳ ಮತ್ತು ಮಂತ್ರಗಳ ಸಂಖ್ಯೆಯನ್ನು, ಅವುಗಳ ಅನುಕ್ರಮವನ್ನು, ಸೂಕ್ತದ ಋಷಿಯು, ದೇವತೆಯು ಮತ್ತು ಛಂದಸ್ಸಿನ ಹೆಸರುಗಳನ್ನು ತಿಳಿಸುವ–ಸೂಕ್ತಾನುಕ್ರಮಣಿ, ಅನುವಾಕಾನುಕ್ರಮಣಿ, ದೇವತಾನುಕ್ರಮಣಿ, ಋಗನುಕ್ರಮಣಿ, ಸರ್ವಾನುಕ್ರಮಣಿ ಮೊದಲಾದ ಹೆಸರುಗಳ ಹಲವು ಗ್ರಂಥಗಳಿವೆ. ಮತ್ತು ಋಗ್ವೇದದ ಸೂಕ್ತಗಳ ಮತ್ತು ಮಂತ್ರಗಳ ವಿವರಗಳೊಂದಿಗೆ ಅವುಗಳ ಋಷಿಗಳ ಮತ್ತು ದೇವತೆಗಳ ಹೆಸರುಗಳಿರುವ ಮತ್ತು ಋಗ್ವೇದದ ಮಂತ್ರಗಳಿಂದ ಸೂಚಿತವಾಗುವ ಸಾಧಾರಣ ನಾಲ್ವತ್ತು ಕಥೆಗಳಿರುವ ಬೃಹದ್ದೇವತಾ ಎಂಬ ಶ್ಲೋಕರೂಪೀ ಗ್ರಂಥವಿದೆ. ಅವೇ ಕಥೆಗಳು ತರುವಾಯದ ಕಾಲದಲ್ಲಿ ರಚಿಸಲ್ಪಟ್ಟ ಮಹಾಭಾರತದಲ್ಲಿ ವಿಸ್ತೃತವಾಗಿ ವರ್ಣಿಸಲ್ಪಟ್ಟಿವೆ. ಹಾಗೆಯೇ ವೇದಗಳ ಶಾಖೆಗಳನ್ನು, ಮಂತ್ರ ಸಂಖ್ಯೆಯನ್ನು, ಪಾಠಕ್ರಮವನ್ನು ಹಾಗೂ ಮಂತ್ರಗಳ ಪಠನದಲ್ಲಿ ಅನುಸರಿಸಲಾಗುತಿದ್ದ ಅಷ್ಟ ವಿಧ ವಿಕೃತಿಗಳನ್ನು ಅಂದರೆ **"ಜಟಾ, ಮಾಲಾ, ಶಿಖಾ, ರೇಖಾ, ಧ್ವಜ, ದಂಡ, ರಥ, ಘನ"** ರೀತಿಗಳನ್ನು ವಿವರಿಸುವ ಚರಣವ್ಯೂಹ ಎಂಬ ಚಿಕ್ಕ ಗ್ರಂಥವಿದೆ. ಮತ್ತು ಈಗ ಉಪಲಬ್ಧವಿಲ್ಲದಿರುವ ಸಾಧಾರಣ ಮೂವತ್ತೈದು ಬ್ರಾಹ್ಮಣಗಳ ಹೆಸರುಗಳು ಈಗ ಉಪಲಬ್ಧವಿರುವ ವೈದಿಕ ಗ್ರಂಥಗಳಲ್ಲಿ ಕಾಣ ಸಿಗುತ್ತವೆ.

ತರುವಾಯದ ಕಾಲವಲ್ಲಿ ಜಗತ್ತಿನ ಅಥವಾ ಸೃಷ್ಟಿಯ ಮೂಲ ತತ್ವದ, ಕಾರಣದ ಮತ್ತು ಸೃಷ್ಟಿಕರ್ತನ ಸಂಬಂಧದಲ್ಲಿ ಬ್ರಹ್ಮ ಮತ್ತು ಆತ್ಮನ ಅಥವಾ ಆಧ್ಯಾತ್ಮಿಕ ವಿಚಾರಗಳ ಸಂಬಂಧದಲ್ಲಿ ಮತ್ತು ಬ್ರಹ್ಮಸಾಕ್ಷಾತ್ಕಾರದ ಸಂಬಂಧದಲ್ಲಿ

ಚರ್ಚಿಸಲ್ಪಟ್ಟ ಆರು ಸೂತ್ರಗ್ರಂಥಗಳು ದರ್ಶನ ಅಥವಾ ಶಾಸ್ತ್ರಗಳೆಂದು ಹೆಸರಾಗಿವೆ. ಅವುಗಳ ಹೆಸರುಗಳು ಮುಂದಿನಂತಿವೆ. ೧. ಸಾಂಖ್ಯ. ೨. ಮೀಮಾಂಸ ೩. ಬ್ರಹ್ಮ ಸೂತ್ರ ಅಥವಾ ವೇದಾಂತ ೪. ವೈಶೇಷಿಕ ೫. ನ್ಯಾಯ ಮತ್ತು ೬. ಯೋಗ. ಇವುಗಳು ವೇದಗಳ ಉಪಾಂಗಗಳೆಂಬ ಹೆಸರನ್ನು ಪಡೆದಿವೆ.

ಆ ರೀತಿಯಲ್ಲಿ ವೇದಮಂತ್ರಗಳಿಂದ ಪ್ರಾರಂಭವಾಗಿ ವೇದಾಂತ ಎಂದು ಕರೆಯಲ್ಪಟ್ಟಿರುವ ಆಧ್ಯಾತ್ಮಿಕ ವಿಚಾರಗಳಿಂದ ಅಂತವಾಗಿರುವ ವೈದಿಕ ಸಾಹಿತ್ಯವು ಆರ್ಯಜನರ ಜೀವನದ ಸಕಲ ಅವಸ್ಥಾಂತರಗಳನ್ನು ಸ್ಥಿತ್ಯಂತರಗಳನ್ನು, ಅವರ ಯಾಜ್ಞಿಕ ಧರ್ಮದ ಆವಿಷ್ಕಾರವನ್ನು, ವಿಕಾಸವನ್ನು ಮತ್ತು ಅವರ ಸಂಸ್ಕೃತಿಯ ಎಲ್ಲ ಹಂತಗಳನ್ನು ತಿಳಿಸುವ ಇತಿಹಾಸವಾಗಿದೆ. ಅಂದರೆ ಅದರಲ್ಲಿ ವಾಸ್ತವಿಕ ಇತಿಹಾಸ ವಿದೆ. ಕಲ್ಪಿತ ರೂಪಕಗಳಿವೆ. ಕಟ್ಟುಕಥೆಗಳಿವೆ. ಕವಿತೆಯಿದೆ, ಕಾವ್ಯವಿದೆ, ನಾಟ್ಯವಿದೆ, ಸಂಗೀತವಿದೆ, ಕಲೆ ಇದೆ. ಶಿಲ್ಪ ಇದೆ, ಜ್ಯೋತಿಷ್ಯವಿದೆ, ಗಣಿತವಿದೆ, ವಾದನವಿದೆ, ವಾದ್ಯವಿದೆ, ಕ್ರೀಡೆ ಇದೆ, ವ್ಯಾಯಾಮವಿದೆ, ಔಷಧವಿದೆ. ಚಿಕಿತ್ಸೆ ಇದೆ, ಕೃಷಿ ಇದೆ, ಕೈಗಾರಿಕೆ ಇದೆ, ಭಕ್ತಿ ಇದೆ, ಶ್ರದ್ಧೆ ಇದೆ, ಅನುನಯವಿದೆ, ವಿನಯವಿದೆ, ಅಧಿಕಾರ ವಿದೆ, ಆಳ್ವಿಕೆ ಇದೆ, ಸೇವೆ ಇದೆ, ಶುಶ್ರೂಷೆ ಇದ, ಅಪರಾಧವಿದೆ,ದಂಡನೆ ಇದೆ, ದೋಷವಿದೆ-ಪ್ರಾಯಶ್ಚಿತ್ತವಿದೆ, ವಿಧೇಯತೆ ಇದೆ, ವಿದ್ರೋಹವಿದೆ, ಸ್ತುತಿ ಇದೆ. ಭರ್ತ್ಸನೆ ಇದೆ, ಜ್ಞಾನವಿದೆ, ವಿಜ್ಞಾನವಿದೆ, ರೋಗವಿದೆ, ರೋಗ ನಿದಾನವಿದೆ, ಯುದ್ಧವಿದೆ, ಸಂಧಿ ಇದೆ, ಪ್ರೇಮವಿದೆ, ವಿರಹವಿದೆ. ಅರ್ಥಾತ್ ಮನುಷ್ಯನು ಸುಸಂಸ್ಕೃತ ಸಮಾಜ ಜೀವಿಯಾಗಿ ಬಾಳಲು ಬೇಕಾದುದೆಲ್ಲವೂ ವೈದಿಕ ಸಾಹಿತ್ಯ ದಲ್ಲಿದೆ. ಆದರೆ ಅಂದಿನ ಯಾವುದೊಂದು ಉದ್ಯಮವಾಗಲೀ, ವಿಜ್ಞಾನವಾಗಲೀ ಇಂದಿನಷ್ಟು ಉತ್ಕರ್ಷವನ್ನು ಪಡೆದಿದ್ದಿತೆಂದು ಇಲ್ಲವೇ ಆ ಕಾಲದಲ್ಲಿ ಇಂದಿನಂಥ ವಿಮಾನ, ದೂರ ಶ್ರವಣ (Radio) ದೂರದರ್ಶನ (Television) ಮೊದಲಾ ದುವುಗಳು ಇದ್ದುವೆಂದು ಎಣಿಸುವುದು ಸರಿಯಾಗಲಾರದು.

ಆ ಪ್ರಕಾರವಾಗಿ ವೈದಿಕ ಸಾಹಿತ್ಯದಲ್ಲಿ ಅಷ್ಟೆಲ್ಲ ಇದ್ದರೂ ಭಾರತ ವರ್ಷದ ಜನರಲ್ಲಿ ಮುಂದಾಳುಗಳಾದವರು—ಲೌಕಿಕ ವಿಚಾರಗಳಲ್ಲಿ ಅನಾಸಕ್ತರಾಗಿ,ಆಧ್ಯಾತ್ಮಿಕ ವಿಚಾರಗಳಲ್ಲಿ ಆಸಕ್ತರಾದುದರ ಪರಿಣಾಮವಾಗಿ ವೇದಗಳ ಅಧ್ಯಯನವು ಕುಂಠಿತ ವಾಯಿತಲ್ಲದೇ ವೈಜ್ಞಾನಿಕ ಅನ್ವೇಷಣವೂ ನಿಂತು ಹೋಯಿತು. ಆಧ್ಯಾತ್ಮವಾದಿ ಗಳು ವೇದಮಂತ್ರಗಳಿಗೆ ಸಲ್ಲದ ಜ್ಞಾನಪದ ಅರ್ಥಗಳನ್ನು ಹೇಳತೊಡಗಿದರು. ಆದರಿಂದಾಗಿ ಹಲವು ವೈದಿಕ ಶಬ್ದಗಳ ಅರ್ಥಗಳು ಮಾಯವಾದುವು. ಮತ್ತು ವೇದ ಗಳ ಸ್ಥಾನದಲ್ಲಿ ಶುದ್ಧ ಕಲ್ಪಿತ ಕಥೆಗಳ ಸಂಗ್ರಹವಾಗಿದ್ದ ಮಹಾಭಾರತ, ರಾಮಾಯಣ ಮತ್ತು ಪುರಾಣಗಳು ಬಂದು ಇತಿಹಾಸದ ರೂಪದಿಂದ ಮಾನ್ಯತೆ ಪಡೆದುವು. ಮೂಲದಲ್ಲಿ ಅಗ್ನಿಯ ಅಂದರೆ ಉರಿಯುವ ಬೆಂಕಿಯ ಹೆಸರುಗಳಾಗಿದ್ದ, ಇಂದ್ರ, ಶಿವ, ವರುಣ ಮೊದಲಾದ ಶಬ್ದಗಳು ಅಗ್ನಿಯಿಂದ ಭಿನ್ನರಾದ ಸ್ವತಂತ್ರ

ಶರೀರಧಾರೀ ದೇವತೆಗಳಾಗಿ ಮಾರ್ಪಟ್ಟು ಅವರಿಗೆ ಹೆಂಡಂದಿರು, ಮಕ್ಕಳು, ಮರಿ ಮಕ್ಕಳು, ತಂದೆ ತಾಯಿಗಳು, ಸಹೋದರ–ಸಹೋದರಿಯರು ಹುಟ್ಟಿದರು. ಇಂಥ ಕಟ್ಟು ಕಥೆಗಳ ಪ್ರಭಾವದಿಂದ ವೈದಿಕ ಧರ್ಮದ ಮೂಲ ರೂಪವು ಸಂಪೂರ್ಣ ಮರೆಯಾಗಿ ಪೌರಾಣಿಕ ಹಿಂದೂ ಧರ್ಮವು ವೈದಿಕ ಧರ್ಮದ ಸ್ಥಾನವನ್ನು ಆಕ್ರಮಿಸಿತು. ಆ ತರುವಾಯದಿಂದ ವೇದ ಮಂತ್ರಗಳಿಗೆ– ಒಬ್ಬನು ಪಾರಮಾರ್ಥಿಕ ಅರ್ಥವೆಂತಲೂ, ಬೇರೊಬ್ಬನು ಲೌಕಿಕ ಅರ್ಥವೆಂತಲೂ, ಮತ್ತೊಬ್ಬನು ಯೌಗಿಕ ಅರ್ಥವೆಂತಲೂ, ಮಗುದೊಬ್ಬನು ಐತಿಹಾಸಿಕ ಅರ್ಥವೆಂತಲೂ ಒಬ್ಬೊಬ್ಬನು ಒಂದೊಂದು ಅರ್ಥದಂತೆ ಹಲವು ಅರ್ಥಗಳನ್ನು ಹೇಳತೊಡಗಿದರು. ಮತ್ತು ವೇದ ಮಂತ್ರಗಳ ವಾಸ್ತವಿಕ ಅರ್ಥಗಳು ತಿಳಿಯದಂತಾದವು. ಆ ಪ್ರಕಾರವಾಗಿ ವೇದಗಳ ಜ್ಞಾನವು ಮರೆಯಾಗಿ ಇಡೀ ಭಾರತವರ್ಷದಲ್ಲಿ ಪುರಾಣಗಳೊಳಗಿನ ಕಟ್ಟುಕಥೆಗಳ ಸಾಮ್ರಾಜ್ಯವು ಸ್ಥಾಪಿತವಾಗಿದ್ದ ಕಾಲದಲ್ಲಿ ಭಾರತ ವರ್ಷಕ್ಕೆ ಪಾಶ್ಚಾತ್ಯರ ಆಗಮನ ವಾಯಿತು. ಜ್ಞಾನ ಪಿಪಾಸುಗಳಾದ ಅವರು ಪುರಾಣಗಳ ಪ್ರಭಾವದಿಂದ ಮೂಲೆ ಪಾಲಾಗಿದ್ದ ವೈದಿಕ ಸಾಹಿತ್ಯವನ್ನು ಬೆಳಕಿಗೆ ತಂದು ಅದಕ್ಕೆ ಹತ್ತಿದ ಇಲ್ಲಣವನ್ನು ಕೊಡವಿ ಅಂದವಾಗಿ ಮುದ್ರಿಸಿ ಪ್ರಕಟಿಸಿದರು. ಅದರ ತರುವಾಯ ಹಲವು ಮಂದಿ ಪಾಶ್ಚಾತ್ಯ ವಿದ್ವಾಂಸರು ವೈದಿಕ ಸಾಹಿತ್ಯದ ಅಧ್ಯಯನದಲ್ಲಿ ತೊಡಗಿ ಅದನ್ನು ಚೆಲೋ ರೀತಿಯಲ್ಲಿ ಸಂಶೋಧಿಸಿ, ತಮ್ಮ ಭಾಷಾ ವಿಜ್ಞಾನದ ಅನುಭವದಿಂದ ವೈದಿಕ ಶಬ್ದಗಳ ಮೂಲಾರ್ಥಗಳನ್ನು ನಿರ್ಧರಿಸಿದರು. ಅವರ ಅಂಥ ದೀರ್ಘ ಪರಿಶ್ರಮದ ಫಲವಾಗಿ ಮತ್ತು ಲೋಕಮಾನ್ಯ ಬಾಲ ಗಂಗಾಧರ ತಿಲಕ ಅವರ ಆರ್ಯಜನರ ಮೂಲಸ್ಥಾನವು ಉತ್ತರ ಧ್ರುವ ಪ್ರದೇಶವಾಗಿದ್ದಿತೆಂಬ ಶೋಧದ ಫಲವಾಗಿ ಋಗ್ವೇದದ ಮಂತ್ರಗಳ ಅರ್ಥಗಳನ್ನು ಕಂಡುಕೊಳ್ಳುವುದು ತುಂಬಾ ಸುಲಭವಾಗಿದೆ.

ಅಷ್ಟು ಮಾತ್ರವಲ್ಲದೇ ಸಿಂಧೂ ಕಣಿವೆಯ ಅಗೆತಗಳಲ್ಲಿ ಬೆಳಕಿಗೆ ಬಂದಿರುವ ಹಾಲುಗಲ್ಲಿನ ಬಿಲ್ಲೆಗಳ ಮೇಲಿರುವ ಚಿತ್ರಗಳು ವೇದಮಂತ್ರಗಳ ಸಂಕೇತ ಗಳೆಂದು ಗೊತ್ತಾಗಿರುವುದರಿಂದ ವೇದ ಮಂತ್ರಗಳ ಸಂಬಂಧದಲ್ಲಿ ಈ ತನಕ ರೂಢ ವಾಗಿರುವ ಕಲ್ಪನೆಗಳನ್ನು ಮತ್ತು ನಂಬಿಕೆಗಳನ್ನು ಪರಿವರ್ತಿಸಬೇಕಾಗಿ ಬಂದಿದೆ.

೬. ಭಾರತೀಯ ಜ್ಯೋತಿಷ ಶಾಸ್ತ್ರ

ವೇದಕಾಲೀನ ಭಾರತೀಯರು ಜೋತಿಷ ಮೊದಲಾದ ವೈಜ್ಞಾನಿಕ ವಿಷಯಗಳಲ್ಲಿ ಹೆಚ್ಚಿನ ಜ್ಞಾನವನ್ನು ಹೊಂದಿರಲಿಲ್ಲವೆಂದು ಮೊದಲೇ ಕಲ್ಪಿಸಿ ಕೊಂಡಿದ್ದ ಮತ್ತು ಹಾಗೆಂದು ಸಾಧಿಸಲು ಹವಣಿಸಿದ್ಧ ಎವ್ ಬಾಯೋ, ಪ್ರೊ. ವ್ಹಿಟ್ನೀ; ಜೇವ್ಸ್ ಬರ್ಜೆಸ್ ಮತ್ತು ಇನ್ನೂ ಹಲವು ಮಂದಿ ಪಾಶ್ಚಾತ್ಯ ವಿದ್ವಾಂಸರು—ಭಾರತೀಯರಲ್ಲಿ ಬಹಳ ಪ್ರಾಚೀನಕಾಲದಿಂದ ಪ್ರಚಲಿತವಿದ್ದ **"ವೇದಾಂಗ ಜ್ಯೋತಿಷ"** ಎಂಬ ಒಂದು ಚಿಕ್ಕ ಕೈಪಿಡಿಯಲ್ಲಿ ಸೂರ್ಯನ, ಚಂದ್ರನ ಮತ್ತು ನಕ್ಷತ್ರಗಳ ಹೊರತು ಇತರ ಗ್ರಹಗಳ ಗತಿಗೆ ಸಂಬಂಧಪಟ್ಟ ಗಣನಾಕ್ರಮವು ಚರ್ಚಿಸಲ್ಪಟ್ಟಿಲ್ಲವೆಂಬ ಕಾರಣದಿಂದ ಮತ್ತು ತರುವಾಯದ ಕಾಲದಲ್ಲಿ ರಚಿಸಲ್ಪಟ್ಟ ಕೆಲವು ಭಾರತೀಯ ಜ್ಯೋತಿಷ ಗ್ರಂಥಗಳಲ್ಲಿ ಪ್ರಯೋಗಿಸಲ್ಪಟ್ಟ ತಾವುರಿ, ದ್ರೇಷ್ಕಾಣ, ಕೇಂದ್ರ ಮೊದಲಾದ ಶಬ್ದಗಳು ಯವನ ಮೂಲದವುಗಳೆಂಬ ಆಧಾರ ದಿಂದ ವೇದಕಾಲೀನ ಭಾರತೀಯರಿಗೆ ಸೂರ್ಯಚಂದ್ರರ ಹೊರತು ಇತರ ಗ್ರಹಗಳ ಪರಿಚಯವಿರಲಿಲ್ಲವೆಂತಲೂ, ಭಾರತೀಯರು ಗ್ರಹಗಳ ಗಣಿತವನ್ನು ಮತ್ತು ಫಲ ಜ್ಯೋತಿಷವನ್ನು ಯವನರಿಂದ ಪಡೆದಿದ್ದರೆಂತಲೂ ಪ್ರತಿಪಾದಿಸಿದ್ದಾರೆ. ಆದರೆ ಹಾಗೆ ಪ್ರತಿಪಾದಿಸಿದ ಆ ಪಾಶ್ಚಾತ್ಯ ವಿದ್ವಾಂಸರು ಗ್ರಹ ಗಣಿತವು ಮೂಲದಲ್ಲಿ ಯವನರದಾಗಿರದೇ ಯವನರು ಕೂಡ ಅದನ್ನು ಪರರಿಂದ ಅಂದರೆ ಈಜಿಪ್ತದ ಜನ ರಿಂದ ಕಲಿತಿದ್ದರೆಂದು ಹೇಳುತ್ತಾರೆ.

ಪಾಶ್ಚಾತ್ಯ ವಿದ್ವಾಂಸರ ಅಂಥ ವಾದ ಸರಣಿಯನ್ನು ಆಳವಾಗಿ ಪರಿಶೀಲಿಸಿ ದರೆ, ಹೆಚ್ಚಿನ ಪಾಶ್ಚಾತ್ಯ ವಿದ್ವಾಂಸರ ಮಾನಸಿಕ ಒಲವು ಸತ್ಯಶೋಧನದ ಕಡೆಗಿರದೇ, ಪ್ರಾಚೀನ ಆರ್ಯವರ್ಗದ ಜನರಿಗೆ, ಜ್ಯೋತಿಷದ ಹಾಗೂ ಇತರ ವೈಜ್ಞಾನಿಕ ವಿಷಯಗಳ ಯಾವ ಬಗೆಯ ಜ್ಞಾನವೂ ಇರಲಿಲ್ಲವೆಂದು ಮತ್ತು ಜಗತ್ತಿನ ಜನರು ಬರಹ, ಜ್ಯೋತಿಷ ಮೊದಲಾದುವುಗಳನ್ನು ಸೆಮಿಟಿಕ್ ವರ್ಗದ ಜನರಿಂದಲೇ ಕಲಿತಿದ್ದರೆಂದು ಸಾಧಿಸುವುದರ ಕಡೆಗಿದೆಯೆಂದು ಸ್ಪಷ್ಟವಾಗಿ ಗೊತ್ತಾಗುವುದು.

ಆದರೆ ಭಾರತೀಯರ ವೇದಾಂಗ ಜ್ಯೋತಿಷದಲ್ಲಿ ದೇವತೆಗಳ ಹೆಸರುಗಳ ಮೂಲಕ ಸೂಚಿಸಲ್ಪಟ್ಟಿರುವ ಇಪ್ಪತ್ತೇಳು ಚಾಂದ್ರನಕ್ಷತ್ರಗಳು ಅಥವಾ ಚಂದ್ರನ ಕ್ರಾಂತಿ ಪಥದ ಸಮಾನ ವಿಸ್ತೀರ್ಣದ ಇಪ್ಪತ್ತೇಳು ನಾಕ್ಷತ್ರಿಕ ವಿಭಾಗಗಳು ಮತ್ತು ಅವುಗಳಿಗನುಸಾರವಾದ ಕಾಲ ಗಣನಾಪದ್ಧತಿಯು ಸೆಮಿಟಿಕ್ ಜನರ ಪ್ರಾಚೀನ ಗ್ರಂಥಗಳಲ್ಲಿ ಇಲ್ಲದಿರುವುದರಿಂದ ಅವರ ಆ ಉದ್ದೇಶವು ಸಿದ್ಧಿಸುವಂತಿರಲಿಲ್ಲ. ಅಂದರೆ ವೇದಕಾಲೀನ ಭಾರತೀಯರು ಸೆಮಿಟಿಕ್ ಜನರಿಂದ ಚಾಂದ್ರನಕ್ಷತ್ರಗಳ ಗಣನಾ ಪದ್ಧತಿಯನ್ನು ಪಡೆದಿದ್ದರೆನ್ನಲು ಸಾಧ್ಯವಿರಲಿಲ್ಲ.

ಪಾಶ್ಚಾತ್ಯ ವಿದ್ವಾಂಸರ ಉದ್ದೇಶಸಿದ್ಧಿಯ ಹಾದಿಯಲ್ಲಿದ್ದ ಆ ತೊಡಕನ್ನು ಕಂಡು ಕೊಂಡ ಫ್ರೆಂಚ್ ಜ್ಯೋತಿರ್ವಿದ ಎಮ್. ಬಾಯೋ (M. Biot) ಮತ್ತು ಅವರ ತರುವಾಯ ಅಮೇರಿಕದ ಜ್ಯೋತಿರ್ವಿದ ಪ್ರೊ. ವ್ಹಿಟ್ನೀ, ಡಾ. ಥೀಬೋ ಮೊದಲಾದ ವಿದ್ವಾಂಸರು ಚೀನೀ ಜನರಲ್ಲಿ ಇಪ್ಪತ್ತೆಂಟು ನಕ್ಷತ್ರಗಳ ಗಣನಾ ಪದ್ಧತಿಯು ಪ್ರಚಲಿತವಿದ್ದುದನ್ನು ತಿಳಿದು ವೇದಾಂಗ ಜ್ಯೋತಿಷದೊಳಗಿನ ಇಪ್ಪತ್ತೇಳು ನಕ್ಷತ್ರಗಳ ಗಣನಾ ಪದ್ಧತಿಯು ಮೂಲದಲ್ಲಿ ಚೀನೀಯರದ್ದಾಗಿದ್ದಿತೆಂತಲೂ, ಅದು ಶಕಪೂರ್ವ ಹದಿನೆರಡನೆಯ ಶತಮಾನದ ಸುಮಾರಿಗೆ ಚೀನದಿಂದ ಪಶ್ಚಿಮ ಆಸ್ಯದ ಹಾದಿಯಾಗಿ ಭಾರತ ವರ್ಷವನ್ನು ಪ್ರವೇಶಿಸಿದ್ದಿತೆಂತಲೂ ಭಾರತೀಯರು ಅದನ್ನು ತಮಗೆ ಬೇಕಾದಂತೆ ಪರಿವರ್ತಿಸಿ ಉಪಯೋಗಿಸತೊಡಗಿದರೆಂತಲೂ ಬಲವಾಗಿ ವಾದಿಸಿದ್ಧಾರೆ. ಸಂತೋಷದ ವಿಷಯವೆಂದರೆ ರೆ. ಎಬರ್‌ನೆಜರ್ ಬರ್ಜೆಸ್, ಪ್ರೊ. ಬೆಂಟಲೀ ಮೊದಲಾದ ಜ್ಯೋತಿಷ ಶಾಸ್ತ್ರವೇತ್ತರೂ ಪ್ರೊ. ಫ್ರೆಡ್ರಿಕ್ ಮೆಕ್ಸ್ ಮುಲ್ಲರರೂ ಬಾಯೋ ಮೊದಲಾದವರ ವಾದವನ್ನು ಒಪ್ಪದೇ ಅದನ್ನು ಯುಕ್ತಿಯುಕ್ತವಾಗಿ ಖಂಡಿಸಿದುದಾಗಿದೆ.

ಋಗ್ವೇದ ಸಂಹಿತೆಯನ್ನು ಪರಿಷ್ಕರಿಸಿ ನಾಲ್ಕು ಭಾಗಗಳಲ್ಲಿ ಪ್ರಕಟಿಸಿದ ಪ್ರೊ. ಫ್ರೆಡ್ರಿಕ್ ಮೆಕ್ಸ್ ಮುಲ್ಲರ್ ಅವರು ಋಗ್ವೇದದ ನಾಲ್ಕನೇ ಭಾಗಕ್ಕೆ ಬರೆದ ಪ್ರಸ್ತಾವನೆಯಲ್ಲಿ ವೇದಾಂಗ ಜ್ಯೋತಿಷದ ಸಂಬಂಧದಲ್ಲಿಯೂ ಚಾಂದ್ರ ನಕ್ಷತ್ರಗಳ ಸಂಬಂಧದಲ್ಲಿಯೂ ವಿಸ್ತಾರವಾಗಿ ಚರ್ಚಿಸಿದ್ದಾರೆ. ಮತ್ತು ಚಾಂದ್ರ ನಕ್ಷತ್ರಗಳ ಆವಿಷ್ಕಾರವು ಮೂಲದಿಂದಲೂ, ಭಾರತೀಯರದೇ ಎಂತಲೂ, ಭಾರತೀಯರಿಂದಲೇ ಚೀನಿಯರು ನಕ್ಷತ್ರಗಳನ್ನು ಪಡೆದಿದ್ದರೆಂತಲೂ ಸಪ್ರಮಾಣವಾಗಿ ಸಾಧಿಸಿದ್ದಾರೆ. ಆದರೆ ಅವರು ಋಗ್ವೇದದ ಮಂತ್ರಗಳು ಶಕಪೂರ್ವ ೧೩೦೦ ವರ್ಷಗಳ ಈಚಿನಿಂದ ರಚಿಸಲ್ಪಡ ತೊಡಗಿದ್ದುವೆಂಬ ಒಂದು ಹೊಸ ಕಲ್ಪನೆಯನ್ನು ಮುಂದೆ ತಂದಿದ್ದುದರಿಂದ ವೇದಾಂಗ ಜ್ಯೋತಿಷವು ಸಾಧಾರಣ ಶಕಪೂರ್ವ ಮೂರನೆಯ ಶತಮಾನದಲ್ಲಿ ರಚಿಸಲ್ಪಟ್ಟುದೆಂದು ವಾದಿಸಿದ್ದಾರಲ್ಲದೇ ವೇದಾಂಗ ಜ್ಯೋತಿಷದೊಳಗೆ ಸೂರ್ಯನ ಅಯನಗಳು ಪ್ರಾರಂಭವಾಗುವ ಸ್ಥಾನಗಳ ಮತ್ತು ಕಾಲಗಳ ಸಂಬಂಧದಲ್ಲಿ ಬಂದಿರುವ ಉಲ್ಲೇಖದಿಂದ ಸಿದ್ಧವಾಗುವ ಕಾಲವು ಶಕಪೂರ್ವ ಹದಿನೆರಡನೆಯ ಶತಮಾನಕ್ಕಿಂತ ಪ್ರಾಚೀನವಲ್ಲವೆಂದು ಸಾಧಿಸಲು ಬಹಳ ಶ್ರಮಪಟ್ಟಿದ್ದಾರೆ. ಹಾಗಾಗಿ ವೈದಿಕ ಸಾಹಿತ್ಯದಲ್ಲಿ ನಕ್ಷತ್ರಗಳ ಸಂಬಂಧವಾಗಿ ಬಂದಿರುವ ಹಲವು ಪ್ರಾಚೀನ ಪ್ರಮಾಣಗಳನ್ನು ಅವರು ಉದಹರಿಸದೇ ಕಡೆಗಣಿಸಿದ್ದಾರೆ.

ಹೇಗಿದ್ದರೂ ಚೀನೀಯರಲ್ಲಿ ಮೊದಲು ಇಪ್ಪತ್ತನಾಲ್ಕು ನಕ್ಷತ್ರಗಳು ಮಾತ್ರ ಪ್ರಚಲಿತವಿದ್ದುವೆಂದು, ಶಕಪೂರ್ವ ಹದಿನೆರಡನೆಯ ಶತಮಾನದ ಸುಮಾರಿಗೆ ಅವುಗಳ ಸಂಖ್ಯೆಯು ಇಪ್ಪತ್ತೆಂಟಕ್ಕೇರಿತೆಂದು, ಅವರ ನಕ್ಷತ್ರಗಳು ಕ್ರಾಂತಿಪಥದ ಸಮಾನ ವಿಸ್ತೀರ್ಣದ ವಿಭಾಗಗಳಲ್ಲವೆಂದು ಮತ್ತು ಅವರ ಎಲ್ಲ ನಕ್ಷತ್ರಗಳು ಒಂಟಿ ತಾರಕೆ

ಗಳಾಗಿವೆಯೇ ಹೊರತು ಒಂದು ತಾರಕೆಗಿಂತ ಹೆಚ್ಚು ತಾರಕೆಗಳಿರುವ ಪುಂಜಗಳಲ್ಲ ವೆಂದು ಹಿಂದೆ ಹೆಸರಿಸಿದ ಪಾಶ್ಚಾತ್ಯ ವಿದ್ವಾಂಸರ ಹೇಳಿಕೆಗಳಿಂದ ತಿಳಿದುಬರುವು ದರಿಂದ ಭಾರತೀಯರು ಚೀನಿಯರಿಂದ ನಕ್ಷತ್ರಗಳ ಗಣನೆಯನ್ನು ಪಡೆದರು ಎಂಬ ವಾದದಲ್ಲಿ ಹುರುಳಿಲ್ಲವೆಂದು ತಾನಾಗಿ ಸಿದ್ಧವಾಗುತ್ತದೆ. ಇಲ್ಲಿ ತತ್ಕಾಲಕ್ಕೆ ಆರ್ಯ ಜನರ ಜ್ಯೋತಿಷ ಜ್ಞಾನದ ಸಂಬಂಧದಲ್ಲಿ ವೈದಿಕ ಸಾಹಿತ್ಯದ ಅಧ್ಯಯನದಿಂದ ತಿಳಿದು ಬರುವ ಕೆಲವು ಮುಖ್ಯ ವಿಷಯಗಳನ್ನು ಮತ್ತು ಐತಿಹ್ಯಗಳನ್ನು ಸಂಕ್ಷೇಪ ವಾಗಿ ಕೊಟ್ಟು ಅದರ ತರುವಾಯ ಪಾಶ್ಚಾತ್ಯ ವಿದ್ವಾಂಸರಲ್ಲಿ ಕೆಲವರು ಭಾರತೀಯ ಜ್ಯೋತಿಷದ ಸಂಬಂಧದಲ್ಲಿ ಮುಂದೆ ತಂದಿದ್ದ ವಾದವನ್ನು ವಿಸ್ತೃತವಾಗಿ ವಿಮರ್ಶಿಸ ಲಾಗುವುದು.

ಆರ್ಯ ಜನರು ಸಾಧಾರಣ ಶಕಪೂರ್ವ ಏಳು ಸಾವಿರ ವರ್ಷಗಳಷ್ಟು ಹಿಂದೆಯೇ ಚಂದ್ರನ ಗತಿಯ ನಿರ್ಧರಣಕ್ಕೆ ಅವನ ಕ್ರಾಂತಿಪಥದಲ್ಲಿನ ಮೂವತ್ತ ಮೂರು ನಕ್ಷತ್ರಪುಂಜಗಳನ್ನು ಗುರುತಿಸಿದ್ದರೆಂಬ ಪ್ರಮಾಣಗಳು ಋಗ್ವೇದದಲ್ಲಿ ಮತ್ತು ಯಜುರ್ವೇದದ ತೈತ್ತಿರೀಯ ಸಂಹಿತೆಯಲ್ಲಿವೆ. ಅತ್ರಿ ಕುಲದವರು ಜ್ಯೋತಿಷದಲ್ಲಿ ತುಂಬಾ ಮುಂದುವರಿದವರಾಗಿದ್ದು ಗ್ರಹಣಗಳ ಸ್ಪರ್ಶ ಮತ್ತು ಮೋಕ್ಷ ಕಾಲಗಳನ್ನು ಸರಿಯಾಗಿ ಹೇಳುತಿದ್ದರೆಂಬ ಪ್ರಮಾಣಗಳು ಋಗ್ವೇದದಲ್ಲಿವೆ. ಆರ್ಯಜನರು ಜ್ಯೋತಿಷದಲ್ಲಿ ಹೆಚ್ಚಿನ ನೈಪುಣ್ಯವನ್ನು ಪಡೆದು ಸಾಧಾರಣ ಶಕಪೂರ್ವ ನಾಲ್ಕು ಸಾವಿರ ವರ್ಷಗಳ ಸುಮಾರಿಗೆ ಚಂದ್ರನ ಗತಿಯ ನಿರ್ಧರಣಕ್ಕೆ ಅವರು ಮೊದಲು ಉಪಯೋಗಿಸುತಿದ್ದ ಮೂವತ್ತಮೂರು ನಕ್ಷತ್ರಪುಂಜಗಳನ್ನು ತ್ಯಜಿಸಿ ಚಂದ್ರನ ಕ್ರಾಂತಿ ಪಥವನ್ನು ಸಮಾನ ವಿಸ್ತಾರದ ಇಪ್ಪತ್ತೇಳು ವಿಭಾಗಗಳನ್ನಾಗಿ ಮಾಡಿದರು. ಮತ್ತು ಆ ವಿಭಾಗಗಳಲ್ಲಿ ಬರುವ ನಕ್ಷತ್ರಪುಂಜಗಳಿಗೆ ಹೊಸ ಹೆಸರು ಗಳನ್ನು ಕೊಟ್ಟರು. ಯಜ್ಞದ ಅಗ್ನಿಯ ಆಧಾನ, ನಕ್ಷತ್ರ ಹಾಗೂ ಸೂರ್ಯನ ಉದಯ, ಮತ್ತು ವೇದದ ಮಂತ್ರ ಇವುಗಳು ಪ್ರಾರಂಭ ಕಾಲದಿಂದಲೂ ವಸ್ತ್ರದ ಹಾಸು ಹೊಕ್ಕುಗಳಂತೆ ಹೆಣೆದುಕೊಂಡಿದ್ದು ಅವುಗಳು ಒಂದನ್ನು ಬಿಟ್ಟು ಮತ್ತೊಂದು ಸ್ವತಂತ್ರವಾಗಿರಲು ಸಾಧ್ಯವೇ ಇರಲಿಲ್ಲ. ಆದುದರಿಂದ ಸೂರ್ಯ-ಚಂದ್ರರ ಮತ್ತು ನಕ್ಷತ್ರಗಳ ಗತಿಗಳಿಗೆ ಸಂಬಂಧಪಟ್ಟ ಜ್ಯೋತಿಷ ಶಾಸ್ತ್ರದ ಆವಿಷ್ಕಾರವು ಆರ್ಯ ಜನರು ಉತ್ತರ ಧ್ರುವ ಪ್ರದೇಶದಲ್ಲಿ ನೆಲಸಿದ್ದಾಗಲೇ ಆಗಿತ್ತು. ಅವರು ಉತ್ತರ ಧ್ರುವ ಪ್ರದೇಶವನ್ನು ತೊರೆದು ಬಂದು ಮಧ್ಯ ಆಸ್ಯದಲ್ಲಿ ನೆಲಸಿದ ತರುವಾಯ ಜ್ಯೋತಿಷವು ಮೊದಲಿಗಿಂತ ಹೆಚ್ಚು ವಿಕಸಿತವಾಯಿತು. ಮತ್ತು ಮೆಲ್ಲ ಮೆಲ್ಲನೇ ಅವರು ಇತರ ಗ್ರಹಗಳ ಗತಿಗಳನ್ನು ನಿರೀಕ್ಷಿಸತೊಡಗಿದರು, ಮತ್ತು ಅವರಲ್ಲಿ ಪ್ರಗತಿಯನ್ನು ಸಾಧಿಸಿದರು. ಅದನ್ನು ಮುಂದಿನಂತೆ ವಿವರಿಸಬಹುದು.

ಆರ್ಯ ಜನರು ಮಧ್ಯ ಆಸ್ಯದಲ್ಲಿ ನೆಲಸ ತೊಡಗಿದ ತರುವಾಯ ಅವರಲ್ಲಿ ಅಗ್ನಿಯನ್ನು ಪ್ರಧಾನದೇವನಾಗಿಯೂ, ಸೂರ್ಯನನ್ನು ಪ್ರಧಾನ ದೇವನಾಗಿಯೂ, ಚಂದ್ರನನ್ನು ಪ್ರಧಾನ ದೇವನಾಗಿಯೂ ಆರಾಧಿಸುವಂಥ ಮೂರು ಪಂಗಡಗಳು ಉಂಟಾದುವು. ಅಗ್ನಿಯ ಮತ್ತು ಚಂದ್ರನ ಆರಾಧಕರು ಕಾಲ ಗಣನೆಗೆ ಚಾಂದ್ರಮಾನ

ವನ್ನು ಉಪಯೋಗಿಸುತಿದ್ದರು, ಆದರೆ ಗವಾಮಯನವ್ ಎಂಬ ವಾರ್ಷಿಕ ಸತ್ರವನ್ನು ಜರುಗಿಸುವವರು ಸೂರ್ಯನ ಚಲನವನ್ನನುಸರಿಸಿ ಕಾಲಗಣನೆಯನ್ನು ಮಾಡುತಿದ್ದರು. ಅದರೊಂದಿಗೆ ಚಾಂದ್ರಮಾನ ಗಣನೆಯೂ ಸಾಗುತಿತ್ತು. ಹಾಗಾಗಿ ಎರಡು ಮಾನಗಳೂ ಜೊತೆಯಾಗಿಯೇ ಗಣಿಸಲ್ಪಡುವ ಐದು ವರ್ಷಗಳ ಯುಗ ಎಂಬ ಮಾನವು ಪ್ರಚಲಿತವಾಯಿತು.

ಮುಂದೆ ಚಾಂದ್ರಮಾನವನ್ನು ಉಪಯೋಗಿಸುತಿದ್ದ ಅಗ್ನಿಪೂಜಕ ಜನರು ಮಧ್ಯಆಸ್ಯದಿಂದ ವಲಸೆ ಬಂದು ಈರಾನ, ಬಲೂಚಿಸ್ಥಾನ, ಅಪಘಾನಿಸ್ಥಾನ ಮತ್ತು ಪಂಜಾಬ ಪ್ರದೇಶಗಳಲ್ಲಿ ನೆಲಸಿದರು. ಮತ್ತು ಅವರು ಭರತರೆನಿಸಿಕೊಂಡರು. ಹಾಗಿದ್ದರೂ ಅವರಿಗೆ ಮಧ್ಯ ಆಸ್ಯದಲ್ಲಿ ಮತ್ತು ಪಶ್ಚಿಮ ಆಸ್ಯದಲ್ಲಿ ನೆಲಸಿದ್ಧ ಸೂರ್ಯಾರಾಧಕರೊಂದಿಗೆ ನಿತ್ಯ ಸಂಪರ್ಕವಿದ್ದಿತು. ಕಾಲಕ್ರಮೇಣ ಪಶ್ಚಿಮ ಆಸ್ಯದಲ್ಲಿ ನೆಲಸಿದ್ಧ ಜನರು "ಯವನ" ಎಂತಲೂ ಮಧ್ಯ ಆಸ್ಯದಲ್ಲಿ ನೆಲಸಿದ್ದ ಜನರು "ಶಕ" ಎಂತಲೂ ಹೆಸರಾದರು. ಅವರು ಸೂರ್ಯನ ಗತಿಯನ್ನು ನಿರೀಕ್ಷಿಸುತಿದ್ದಂತೆಯೇ ರಾತ್ರಿಕಾಲದಲ್ಲಿ ಚಂದ್ರನ ಗತಿಯನ್ನು ನಿರೀಕ್ಷಿಸುತಿದ್ದಾಗ–ಚಂದ್ರನಂತೆಯೇ ಬೇರೆ ಕೆಲವು ಚಿಕ್ಕ ಗೋಲಗಳು ಅಥವಾ ಗ್ರಹಗಳು ಕೂಡ ಬಹಳ ಮೆಲ್ಲನೇ ನಕ್ಷತ್ರ ಪುಂಜಗಳನ್ನು ಕ್ರಮಿಸಿ ಸಾಗುವುದನ್ನು ಕಂಡುಕೊಂಡರು. ಮತ್ತು ಅವುಗಳ ಸ್ಥಿತಿ–ಗತಿಗಳನ್ನೂ ನಿರ್ಧರಿಸುವ ಪ್ರಯತ್ನವನ್ನು ಮಾಡತೊಡಗಿದರು, ಮತ್ತು ಯವನರು ಆ ಪ್ರಯತ್ನದಲ್ಲಿ ಹೆಚ್ಚು ಪ್ರಗತಿಯನ್ನು ಪಡೆದರು.

ಅವರಂತೆಯೇ ಭಾರತೀಯರು ಕೂಡ ರಾತ್ರಿ ಕಾಲದಲ್ಲಿ ಚಂದ್ರನಂತೆಯೇ ಬೆಳಗುತ್ತ ನಕ್ಷತ್ರ ಪುಂಜಗಳನ್ನು ಕ್ರಮಿಸಿ ಸಾಗುವ ಗ್ರಹಗಳನ್ನು ಕಂಡಿದ್ದರು, ಅಷ್ಟೇ ಅಲ್ಲ ಅವರಿಗೆ ಗ್ರಹಗಳ ಮಾತ್ರವಲ್ಲದೇ ಧೂಮಕೇತುಗಳ ಪರಿಚಯು ಕೂಡ ಇದ್ದಿತೆಂದು ಅಥರ್ವವೇದದ ಒಂದು ಮಂತ್ರದಿಂದ ಸಿದ್ಧವಾಗುತ್ತದೆ.[1]. ಆದರೆ ಯಜ್ಞಾಗ್ನಿಯ ಆಧಾನ ಕಾಲವನ್ನು ನಿರ್ಧರಿಸಲು ಸೂರ್ಯನ ಚಂದ್ರನ ಮತ್ತು ನಕ್ಷತ್ರಗಳ ಹೊರತು ಇತರ ಗ್ರಹಗಳ ಸ್ಥಿತಿಗತಿಗಳನ್ನು ತಿಳಿದುಕೊಳ್ಳುವ ಆವಶ್ಯಕತೆಯಿರಲಿಲ್ಲವಾದುದರಿಂದ ಅವರು ಇತರ ಗ್ರಹಗಳ ಸ್ಥಿತಿಗತಿಗಳನ್ನು ನಿರ್ಧರಿಸುವ ಪ್ರಯತ್ನವನ್ನು ಮಾಡಲೇ ಇಲ್ಲ. ಆದುದರಿಂದಲೇ ವೇದಾಂಗ ಜ್ಯೋತಿಷದಲ್ಲಾಗಲೀ ಇತರ ವೈದಿಕ ಸಾಹಿತ್ಯದಲ್ಲಾಗಲೀ ಇತರ ಗ್ರಹಗಳ ಸ್ಥಿತಿಗತಿಗಳಿಗೆ ಸಂಬಂಧಪಟ್ಟ ಉಲ್ಲೇಖಗಳಿಲ್ಲ.

ಆರ್ಯಜನರಿಗೆ ಜ್ಯೋತಿಷದ ಜ್ಞಾನವು ಪೈತೃಕದಾಯವಾಗಿ ಪ್ರಾಪ್ತವಾಗಿದ್ದಿ

---

1. ಶಂ ನೋ ಗ್ರಹಾಶ್ಚಾಂದ್ರಮಸಾಃ ಶಮಾದಿತ್ಯರಾಹುಣಾ।
ಶಂ ನೋ ಮೃತ್ಯುರ್ಧೂಮಕೇತುಃ ಶಂ ರುದ್ರಸ್ತಿಗ್ಮತೇಜಸಃ ॥ ೧೯-೯-೧೦ ॥

ತಾದುದರಿಂದ ಯವನರು ಪರಕೀಯರಿಂದ ಜ್ಯೋತಿಷವನ್ನು ಕಲಿತಿದ್ದರೆಂದು ಪಾಶ್ಚಾತ್ಯರು ಮುಂದೆ ತಂದಿರುವ ಕಲ್ಪನೆಯನ್ನು ವಾಸ್ತವವೆಂದು ಒಪ್ಪಲು ಸಾಧ್ಯವಿಲ್ಲ. ಮತ್ತು ಭಾರತೀಯರು ಯವನರಿಂದ ನವಗ್ರಹಗಳ ಗಣಿತವನ್ನು ಕಲಿತಿದ್ದರೆಂಬುದು ವಾಸ್ತವವೆಂದಾದರೆ ಅದನ್ನು ಅಲ್ಲಗಳೆಯಲು ಹೆಣಗಾಡಬೇಕೆಂದೇನೂ ಇಲ್ಲ.

ದಿವಂಗತ ಶಂಕರ ಬಾಳಕೃಷ್ಣ ದೀಕ್ಷಿತ ಎಂಬ ಮಹಾರಾಷ್ಟ್ರೀಯ ವಿದ್ವಾಂಸರು ಜ್ಯೋತಿಷದ ಪ್ರಕಾಂಡ ಪಂಡಿತರಾಗಿದ್ದರು, ಅವರು ಮರಾಠಿ ಭಾಷೆಯಲ್ಲಿ **“ಭಾರತೀಯ ಜ್ಯೋತಿಷ ಶಾಸ್ತ್ರ ಅಥವಾ ಭಾರತೀಯ ಜ್ಯೋತಿಷಾಚಾ ಪ್ರಾಚೀನ ಆಣಿ ಅರ್ವಾಚೀನ ಇತಿಹಾಸ”** ಎಂಬ ವಿಸ್ತೃತವಾದ ಗ್ರಂಥವನ್ನು ಬರೆದು ಪ್ರಕಟಿಸಿದ್ದಾರೆ. ಅವರು ಆ ಗ್ರಂಥದಲ್ಲಿ ಪಾಶ್ಚಾತ್ಯ ವಿದ್ವಾಂಸರು ಭಾರತೀಯರ ಜ್ಯೋತಿಷಜ್ಞಾನದ ಸಂಬಂಧದಲ್ಲಿ ಮುಂದೆ ತಂದಿದ್ದ ಕಲ್ಪನೆಗಳನ್ನು ಶಾಸ್ತ್ರಿಯ ರೀತಿಯಿಂದ ವಿಮರ್ಶಿಸಿದ್ದಾರೆ. ಮತ್ತು ಜ್ಯೋತಿಷದ ಸಂಬಂಧದಲ್ಲಿ ಭಾರತೀಯರಿಗೆ ಗೊತ್ತಿದುದೆಷ್ಟು? ಯವನರಿಗೆ ಗೊತ್ತಿದ್ದುದೆಷ್ಟು? ಮತ್ತು ಭಾರತೀಯರು ಯವನರಿಂದ ಪಡೆದುದೇನು? ಎಂಬುದನ್ನು ಪ್ರಮಾಣಗಳ ಮೂಲಕ ನಿರ್ಧರಿಸಿದ್ದಾರೆ. ಪರಂತು ಅವರು ಆ ಗ್ರಂಥದಲ್ಲಿ ಕೆಲವು ಐತಿಹಾಸಿಕ ವಿಷಯಗಳನ್ನು ಆವಶ್ಯಕವಿದ್ದಷ್ಟು ವಿಮರ್ಶಿಸಿಲ್ಲ. ಆದುದರಿಂದ ಅವರು ಬಿಟ್ಟಿರುವ ವಿಷಯಗಳನ್ನು ಮತ್ತು ಅವರು ಉದಹರಿಸಿದ ಕೆಲವು ವೈದಿಕ ವಾಕ್ಯಗಳ ಅರ್ಥಗಳನ್ನು ಮಾತ್ರ ಇದರಲ್ಲಿ ಚರ್ಚಿಸಲಾಗುವುದು.

ಬ್ರಿಟಿಷರು ಪ್ರಕಟಿಸಿದ ಗ್ರೀಕರ ಇತಿಹಾಸ ಗ್ರಂಥಗಳಲ್ಲಿ ಗ್ರೀಸ್ ದೇಶವು ಪಾಶ್ಚಾತ್ಯ ಸಂಸ್ಕೃತಿಯ ಮಾತೃದೇಶವೆಂದೂ ಆ ದೇಶದ ಸಂಸ್ಕೃತಿಯ ಆರಂಭವು ಮೂರು ಸಾವಿರ ವರ್ಷಗಳಿಗಿಂತ ಪ್ರಾಚೀನವೆಂದೂ ಹೇಳಿದೆಯಲ್ಲದೇ[1] ಯವನ ದೇಶದ ಮಿಲೆಟಸ್ ಎಂಬಲ್ಲಿನ ಥೇಲ್ಸ್ (ಶ. ಪೂ. ೬೧೮-೬೩೬) ಎಂಬವನು ಗ್ರೀಕರ ಮತ್ತು ಆ ಕಾರಣದಿಂದ ಯುರೋಪೀಯರ ಸರ್ವಪ್ರಥಮ ತತ್ವದರ್ಶಿ ಹಾಗೂ ವಿಜ್ಞಾನಿಯಾಗಿದ್ದನೆಂತಲೂ, ಅವನು ಈಜಿಪ್ತದಲ್ಲಿ ಜ್ಯೋತಿಷವನ್ನು ಕಲಿತಿದ್ದನೆಂತಲೂ, ಅದರ ಬಲದಿಂದ ಅವನು ಇಂಥ ಒಂದು ವರ್ಷ ಕಳೆಯಬೇಕಾದರೆ ಒಂದು ಸೂರ್ಯಗ್ರಹಣವು ಸಂಭವಿಸುವುದೆಂದು ಯವನರಿಗೆ ಎಚ್ಚರಿಕೆಯನ್ನಿತ್ತಿದ್ದನೆಂದೂ. ಅವನ ವಿದ್ವತ್ತು ಗ್ರಹಣ ಸಂಭವಿಸುವ ದಿನವನ್ನಾಗಲೀ, ಗಳಿಗೆಯನ್ನಾಗಲೀ ಹೇಳು

---

1. Our civilisation had its origin in Greece and we must date its' beginning to more than three thousand years ago. A History of Greece page 5 by J. A. Bury.

ಘಷ್ಟಿರಲಿಲ್ಲವೆಂತಲೂ ಹೇಳಿದೆ.[2] ಆ ಹೇಳಿಕೆಯು ಯವನರ, ಜ್ಯೋತಿಷದ, ಘಿಜ್ಞಾನದ ಹಾಗೂ ತತ್ವಜ್ಞಾನದ ಆವಿಷ್ಕಾರಕ್ಕೊಂದು ನಿಶ್ಚಿತ ಕಾಲಮಿತಿಯನ್ನು ಹೇರುತ್ತದೆ. ಅಂದರೆ ಶಕಪೂರ್ವ ಏಳನೆಯ ಶತಮಾನಕ್ಕಿಂತ ಮೊದಲು ಯವನರಿಗೆ ಜ್ಯೋತಿಷದ ಪರಿಚಯವೇ ಇರಲಿಲ್ಲವೆಂದು ತಿಳಿಸುತ್ತದೆ. ಆದರೆ ಅದನ್ನು ಬ್ರಿಟಿಷ್ ವಿದ್ವಾಂಸರ ಕಪೋಲ ಕಲ್ಪನೆಯೆನ್ನಬಹುದೇ ಹೊರತು ವಾಸ್ತವವೆನ್ನಲಾಗುವುದಿಲ್ಲ. ಏಕೆಂದರೆ ಆ ಕಾಲಕ್ಕಿಂತ ಮೊದಲಿಸಿಂದಲೂ ಭಾರತೀಯರೊಂದಿಗೆ ಯವನರ ಮತ್ತು ಶಕಜನರ ನಿತ್ಯ ಸಂಪರ್ಕವಿದ್ದಿತೆಂದು ತಿಳಿಯಬಹುದಾದ ಹಲವು ಪ್ರಾಚೀನ ಪ್ರಮಾಣ ಗಳಿರುವುದರಿಂದ ಭಾರತೀಯರೊಳಗೂ, ಯವನರೊಳಗೂ ಜ್ಯೋತಿಷ. ರೇಖಾ ಗಣಿತ, ಮೊದಲಾದ ವೈಜ್ಞಾನಿಕ ವಿಷಯಗಳ ಸಂಬಂಧದಲ್ಲಿ ವಿಚಾರವಿನಿಮಯ ಸಾಗುತಿದ್ದಿತೆಂದು ಒಪ್ಪಲೇ ಬೇಕಾಗುತ್ತದೆ. ಮತ್ತು ಜಗತ್ತಿನ ಲಿಖಿತ ಸಾಹಿತ್ಯದಲ್ಲಿ ಪ್ರಾಚೀನತಮವೆಂದು ಸಿದ್ಧವಾಗುವ ಋಗ್ವೇದದಲ್ಲಿ ಚಾಂದ್ರ ನಕ್ಷತ್ರಗಳ ಉಲ್ಲೇಖ ಗಳೂ, ಸೂರ್ಯಗ್ರಹಣ ಸಂಭವಿಸಿದ ವರ್ಣನೆಯೂ, ಅತ್ರಿಗಳು ಗ್ರಹಣದ ಮೋಕ್ಷ ಕಾಲವನ್ನು ಹೇಳಲು ಶಕ್ತರಿದ್ದರೆಂಬ ಹೇಳಿಕೆಯೂ ಇರುವುದರಿಂದ ಹಾಗೂ ಋಗ್ವೇದದೊಳಗಿನ ಐತಿಹ್ಯಗಳು ಆರ್ಯವರ್ಗದ ಎಲ್ಲ ಜನರಿಗೆ ಸಂಬಂಧಿಸಿರುವುದ ರಿಂದ ಆ ಐತಿಹ್ಯಗಳ ಮತ್ತು ನಕ್ಷತ್ರಗಳಿಗೆ ಸಂಬಂಧಪಟ್ಟ ಜ್ಯೋತಿಷದ ಅರಿವು ಯವನರಿಗೂ, ಶಕಜನರಿಗೂ ಇದ್ದಿತೆಂದು ಹೇಳಬೇಕಾಗುತ್ತದೆ.

ಹಾಗೆಯೇ ಕೃಷ್ಣ ಯಜುರ್ವೇದದ ಸಂಹಿತೆಗಳಲ್ಲಿ ಎಲ್ಲ ಚಾಂದ್ರ ನಕ್ಷತ್ರಗಳ ಉಲ್ಲೇಖಗಳಿರುವುದೂ, ಸಾಂಪಾತಿಕ ನಕ್ಷತ್ರವಾಗಿದ್ದ ಕೃತ್ತಿಕಾ ಪುಂಜವು ಪೂರ್ವ ದಿಕ್ಕಿನಿಂದ ಕದಲಿ ಹೋಗುವುದೇ ಇಲ್ಲವೆಂಬ ಶತಪಥ ಬ್ರಾಹ್ಮಣದೊಳಗಿನ ಉಲ್ಲೇಖವೂ ನಮ್ಮನ್ನು ಶಕಪೂರ್ವ ಎರಡು ಸಾವಿರದೈನೂರು ವರ್ಷಗಳ ಹಿಂದಕ್ಕೊಯ್ಯುತ್ತದೆ.[1] ಆದರ ತರುವಾಯದ ವೇದಾಂಗ ಜ್ಯೋತಿಷದಲ್ಲಿ ಸೂರ್ಯನ ಉತ್ತರಾಯಣವು ಧನಿಷ್ಠಾ ನಕ್ಷತ್ರದ ಆದಿಯಲ್ಲಿಯೂ ದಕ್ಷಿಣಾಯನವು ಆಶ್ಲೇಷಾ ನಕ್ಷತ್ರದ ಮಧ್ಯದಲ್ಲಿಯೂ ಪ್ರಾರಂಭವಾಗುತ್ತದೆಂದು ಹೇಳಿದೆಯಾದುದರಿಂದ ಆ ಕಾಲವು ಶಕಪೂರ್ವ ೧೫೦೦ ವರ್ಷಗಳೆಂದು ಸಿದ್ಧವಾಗುತ್ತದೆ. ಹಾಗಾಗಿ ಭಾರತೀ

---

2. Thales of Miletus, the father of Greek and thereby European philosophy and science, had studied a stronomy in Egypt and he was able to warn the Ionians that before such a year passed - his lore could not tell the day or hour—the sun would be darkened. Thales was not only the first man of sciencc he was also the first philosopher, science and philosophy were not yet separated. Ibid page 222.

1, ಹೆಚ್ಚಿನ ವಿವರಗಳು ವೇದಮಂತ್ರಗಳ ಪ್ರಾಚೀನತೆ ಎಂಬ ಆಧ್ಯಾಯದಲ್ಲಿ ಬರುವುವು.

ಯರು ಚೀನೀಯರಿಂದ ನಕ್ಷತ್ರಗಳನ್ನು ಪಡೆದರೆಂಬ ವಾದವು ವ್ಯರ್ಥವಾಗುತ್ತದೆ. ಆದರೆ ಬೇರೆ ಕೆಲವು ಪಾಶ್ಚಾತ್ಯ ವಿದ್ವಾಂಸರು ಭಾರತೀಯರು ಕೃತ್ತಿಕೆಯಿಂದ ಪ್ರಾರಂಭವಾಗುವ ನಕ್ಷತ್ರ ಮಾಲೆಯನ್ನು ಬೆಬಿಲೋನೀ ಜನರಿಂದ ಪಡೆದಿದ್ದರೆನ್ನುವ ವಾದವನ್ನು ಮುಂದೆ ತಂದಿದ್ದಾರೆ.

ಭಾರತೀಯರು ಬೆಬಿಲೋನೀ ಜನರಿಂದ ನಕ್ಷತ್ರಮಾಲೆಯನ್ನು ಪಡೆದಿದ್ದರೆಂದವರಲ್ಲಿ ವೈದಿಕ ಸಾಹಿತ್ಯದ ಮಹಾ ಪಂಡಿತರಾದ ಡಾ। ಆಲ್ಬರ್ಟ್ ವೇಬರ್ ಎಂಬ ಜರ್ಮನ್ ವಿದ್ವಾಂಸರು ಪ್ರಮುಖರೆನ್ನಬಹುದು. ಅವರು ಜರ್ಮನ್ ಭಾಷೆಯಲ್ಲಿ ಬರೆದ "ಭಾರತೀಯ ಸಾಹಿತ್ಯದ ಇತಿಹಾಸ" ಎಂಬ ಗ್ರಂಥದ ಇಂಗ್ಲಿಷ್ ಭಾಷಾಂತರವು ಶಕವರ್ಷ ೧೮೧೪ರಲ್ಲಿ ಪ್ರಕಟವಾಗಿತ್ತು. ಅದರ ಎರಡನೆಯ ಆವೃತ್ತಿಯ ಎರಡನೆಯ ಪುಟದ ಅಡಿ ಟಿಪ್ಪಣಿಯಲ್ಲಿ ಮುಂದೆ ಕೊಡಲಾಗುವ ಅಂಶವಿದೆ.

"ಎಲ್ಲ ಪ್ರಾಚೀನತಮ ಲೇಖಗಳು ನಕ್ಷತ್ರ ಮಾಲೆಯನ್ನು ಕೃತ್ತಿಕೆಯಿಂದ ಪ್ರಾರಂಭಿಸುತ್ತಿರುವ ಪ್ರಸಂಗವು ನಮ್ಮನ್ನು ವೇದಾಂಗ ಜ್ಯೋತಿಷದ ಕಾಲಕ್ಕಿಂತ ಬಹಳ ಹಿಂದಕ್ಕೆ ಅಂದರೆ ಶಕಪೂರ್ವ ೨೮೦೦–೧೯೦೦ ವರ್ಷಗಳಷ್ಟು ಹಿಂದಕ್ಕೊಯ್ಯುತ್ತದೆ. ಆಗ ವಸಂತ ಸಂಪಾತವು ಕೃತ್ತಿಕಾ ನಕ್ಷತ್ರದಲ್ಲಿ ಘಟಿಸುತಿದ್ದುದರಿಂದ ಆ ಕಾಲವು ಸ್ಥೂಲ ಸಂಖ್ಯೆಯಲ್ಲಿ ಶಕಪೂರ್ವ ೨೪೦೦ ವರ್ಷಗಳೆನ್ನಬಹುದು. ಆದರೆ ಈ ಗ್ರಂಥದ ಮೊದಲನೆಯ ಆವೃತ್ತಿಯಲ್ಲಿ ವ್ಯಕ್ತಗೊಳಿಸಿರುವಂತೆ ಒಂದೋ ಹಿಂದುಗಳು ಹಿಂದುಸ್ಥಾನವನ್ನು ಪ್ರವೇಶಿಸುವ ಕಾಲದಲ್ಲಿ ಕೃತ್ತಿಕೆಯಿಂದ ಪ್ರಾರಂಭವಾಗುವ ಚಾಂದ್ರ ನಕ್ಷತ್ರ ಮಾಲೆಯ ಜ್ಞಾನವನ್ನು ತಮ್ಮೊಂದಿಗೆ ತಂದಿರಬಹುದು. ಇಲ್ಲವೇ ತರುವಾಯದ ಕಾಲದಲ್ಲಿ ಫಿನಿಶ್ಯನ್ ಜನರು ಪಂಜಾಬದ ಜನರೊಂದಿಗೆ ಸ್ಥಾಪಿಸಿದ ವ್ಯಾಪಾರೀ ಸಂಬಂಧದಿಂದಾಗಿ ಅವರ ಮೂಲಕ ಹಿಂದುಗಳು ನಕ್ಷತ್ರಮಾಲೆಯ ಜ್ಞಾನವನ್ನು ಹೊಂದಿರಬಹುದು ಎಂಬ ಎರಡು ಮತಗಳಲ್ಲಿ ತರುವಾಯದ ಮತವೂ, ಅದರೊಂದಿಗೆ ಆ ಕಾಲದ ನಿರ್ಧಾರಣಕ್ಕೆ ಆಧಾರವಾಗಿರುವ ನಕ್ಷತ್ರವೇಧಗಳ ಅಥವಾ ನಕ್ಷತ್ರ ನಿರೀಕ್ಷಣದ ಮಾತೃದೇಶವು ಬೆಬಿಲೋನವಾಗಿರಬಹುದೆಂಬ ಅನುಮಾನವೂ ಇತ್ತೀಚೆಗೆ ಹೆಚ್ಚಿನ ಸಂಭಾವ್ಯತೆಯನ್ನು ಗಳಿಸಿದೆ."[1]

---

1. The circumstance that the oldest records begin the series of N kshatra with the sign of Krithikas, carries us back to a considerably earlier period, even than the dates derived from the so called Vedic calendar—viz: to a period between 2700—1800 B. C., since the vernal equinox concided with n Tauri = Krittika in a round number about the year 2300 B. C., But on the other hand the opinion expressed in the first edition of

ಆದರೆ ಆವರು ಮುಂದೆ ಆ ಪುಸ್ತಕದ ಮೂವತ್ತನೆಯ ಪುಟದಲ್ಲಿ ಮುಂದಿನಂತೆ ಅಂದಿದ್ದಾರೆ–"**ವಾಜಸನೇಯಿ ಸಂಹಿತೆಯ ತರುವಾಯದ ಅಂಶಗಳಲ್ಲಿ ಮತ್ತು ಛಾಂದೋಗ್ಯೋಪನಿಷತ್ತಿನಲ್ಲಿ ನಕ್ಷತ್ರ ನಿರೀಕ್ಷಕ (ಅ) ಮತ್ತು ಜ್ಯೋತಿಷ ಶಾಸ್ತ್ರ (ಆ) ಎಂಬ ಸ್ಪಷ್ಟ ಉಲ್ಲೇಖಗಳಿರುವುದರಿಂದ ಇಪ್ಪತ್ತೇಳು ಚಾಂದ್ರನಕ್ಷತ್ರಗಳ ಜ್ಞಾನವು ಮೊದಲೇ ಪಸರಿಸಿದ್ದಿತೆಂದು ಗೊತ್ತಾಗುತ್ತದೆ. ತೈತ್ತಿರೀಯ ಸಂಹಿತೆಯಲ್ಲಿ ಇಪ್ಪತ್ತೇಳು ಚಾಂದ್ರ ನಕ್ಷತ್ರಗಳ ಹೆಸರುಗಳು ಬಿಡಿ ಬಿಡಿಯಾಗಿ (ಇ) ಬಂದಿವೆ. ಮತ್ತು ಅವುಗಳ ಕಾಲವು ಶಕಪೂರ್ವ ೧೫೫೦-೬೧೪ ಆಗಿರಬಹುದು.**" ಎಂದು ಹೇಳಿದ್ದರೂ ಅದಕ್ಕೆ ಟಿಪ್ಪಣಿಯಾಗಿ ಅಡಿಯಲ್ಲಿ "**ಅವುಗಳ ಸರಿಯಾದ ಕಾಲವು ಶಕಪೂರ್ವ ೨೮೫೦-೧೯೦೦ ವರ್ಷಗಳು ಮತ್ತು ವೇದಾಂಗ ಜ್ಯೋತಿಷದೊಳಗಿನ ಉಲ್ಲೇಖದಂತೆ ಭರಣಿಯಿಂದ ನಕ್ಷತ್ರಮಾಲೆಯು ಪ್ರಾರಂಭವಾಗುವ ಕಾಲವು ಶಕಪೂರ್ವ ೧೯೦೦-೯೪೦ ವರ್ಷಗಳು**" ಎಂಬುದಾಗಿ ಸ್ಪಷ್ಟಪಡಿಸಿದ್ದಾರೆ.[1]

ಹಿಂದೆ ವಿವರಿಸಿದಂತೆ ಡಾ. ವೇಬರ್ ಅವರು ಭಾರತೀಯರಿಗೆ ನಕ್ಷತ್ರಗಳ ಜ್ಞಾನ ಮತ್ತು ಅವುಗಳನ್ನು ನಿರೀಕ್ಷಿಸುವ ಅನುಭವ ಮೊದಲಾದುವುಗಳು ಇದ್ದು

---

this work (1852) to the effect that the Indians may either have brought the knowledge of these lunar mansions headed by Krittika with them into India or else, have obtained it at a later period through the commercial relations of the phoenicians with the Punjab, has recently gained considerably in probability, and there with the suggestion of Babylon as the mother country of the observations on which this date is established.

1 (ಅ) ಪ್ರಜ್ಞಾನಾಯ ನಕ್ಷತ್ರದರ್ಶಮ್ ॥ ವಾ. ಸಂ. ೩೦-೧೦ ॥

(ಆ) ನಕ್ಷತ್ರ ವಿದ್ಯಾ ॥ ಛಾಂ. ಉ. ೭-೧-೨ ಮತ್ತು ೪ ॥

(ಇ) ನಕ್ಷತ್ರಗಳ ಹೆಸರುಗಳ ಜೊತೆಯಲ್ಲಿ ಅವುಗಳ ದೇವತೆಗಳ ಹೆಸರುಗಳೂ ಇವೆ.

1 Thus we find in later portions of the Vajasaneyi Samhita and in the Chhandogyopanishad, express mention is made of "observer of the stars" and "the science of astronomy" and in perticular the knowledge of the twenty seven lunar mansions was early diffused. They are enumerated singly in the Taittiriya Samhita and the order in which they occur is one that must necessarily have been established somewhere between 1472 and 537 B. C.

Foot note:- The correct numbers are rather 2780-1820 B. C., and for the Bharani series, which seems to be that continued in the Jotisha, we obtain the years 1820-860 B. C.

ವೆಂದು ಒಪ್ಪುತ್ತಾರಾದರೂ ಅವರ ಅಭಿಪ್ರಾಯದಲ್ಲಿ ಆ ಕಾಲದ ಭಾರತೀಯರು ಜ್ಯೋತಿಷದಲ್ಲಿ ಬಹಳ ಹೆಚ್ಚಿನ ಪ್ರಗತಿಯನ್ನು ಸಾಧಿಸಿರಲಿಲ್ಲವೆಂದು ಆ ಕಾಲದ ಭಾರತೀಯರ ವೇಧಗಳು ಅಥವಾ ನಿರೀಕ್ಷಣಗಳು ಚಂದ್ರನ ಗತಿಗೆ, ಸೂರ್ಯನ ಅಯನಗಳಿಗೆ ಮತ್ತು ಕೆಲವು ಸ್ಥಿರ ನಕ್ಷತ್ರಗಳಿಗೆ ಹಾಗೂ ಮುಖ್ಯವಾಗಿ ಫಲ ಜೋತಿಷ್ಯಕ್ಕೆ ಸಂಬಂಧ ಪಟ್ಟಿದ್ದುವು – ಎಂದಿದೆ.[2]

ಅದರ ತರುವಾಯ ಅವರು ಆ ಪುಸ್ತಕದ ೨೪೬ನೆಯ ಪುಟದಲ್ಲಿ ವೇದಾಂಗ ಜ್ಯೋತಿಷದ ಕುರಿತಾಗಿ ತನ್ನ ಅಭಿಪ್ರಾಯವನ್ನು ಮುಂದಿನಂತೆ ವ್ಯಕ್ತಗೊಳಿಸಿದ್ದಾರೆ. **"ಈ ತರುವಾಯದ ಪಟ್ಟಿಯಲ್ಲಿರುವ ಅಧಿಕಾಂಶ ನಕ್ಷತ್ರಗಳ ಹೆಸರುಗಳು ಅರ್ವಾಚೀನ ಜ್ಯೋತಿಷಿಗಳು ಉಪಯೋಗಿಸಿದವುಗಳೇ ಆಗಿದ್ದು ಅವುಗಳೊಂದಿಗೆ ಕ್ರಾಂತಿ ವೃತ್ತದ ವಿಭಾಗಗಳಾಗಿರುವ "ರಾಶಿ"ಗಳು ಕೂಡ ಬಂದಿವೆ. ಈ ಅರ್ವಾಚೀನ ಗ್ರಂಥಕ್ಕೆ ಸಲ್ಲದ ಪ್ರಾಮುಖ್ಯತೆ ಕೊಡಲಾಗಿದೆ. ವೇದಾಂಗ ಜ್ಯೋತಿಷದ ಕರ್ತನೆಂದು ತಿಳಿಯಲಾದ ಲಗಧನು ಅಥವಾ ಲಗಟನು ಅಲ್‌ಬೆರೂನಿಯು ಸೂರ್ಯ ಸಿದ್ಧಾಂತದ ಕರ್ತನೆಂದು ಹೇಳಿರುವ "ಲಾಟ" ಎಂಬವನೆಂಬ ನನ್ನ ಊಹೆಯು ಸರಿಯೆಂದಾದರೆ ವೇದಾಂಗ ಜ್ಯೋತಿಷದ ಕಾಲವು ಶಕದ ನಾಲ್ಕನೆಯ ಶತಮಾನ ವೆಂದಾಗುವುದು. ಅಲ್ಪ ಮಹತ್ವದ ಆ ಕೃತಿಗೆ ಅಷ್ಟು ಪ್ರಾಚೀನತೆಯು ಕೂಡ ಹೆಚ್ಚೆನ್ನಬಹುದು.**[1]

ಮಹಾಪಂಡಿತರಾಗಿದ್ದ ವೇಬರರು ವೇದಾಂಗ ಜ್ಯೋತಿಷದ ಸಂಬಂಧದಲ್ಲಿ ವ್ಯಕ್ತಗೊಳಿಸಿದ ಆ ಅಭಿಪ್ರಾಯವು ಅವರ ಪಾಂಡಿತ್ಯಕ್ಕೆ ಮತ್ತು ಆ ಜ್ಯೋತಿಷ ಗ್ರಂಥದ ವಾಸ್ತವಿಕ ಕಾಲಕ್ಕೆ ತಕ್ಕುದಾಗಿಲ್ಲ. ಅಂದರೆ "ವೇದಾಂಗ ಜ್ಯೋತಿಷ"

---

2. Nevertheless, they had not made great progress at this period, their observations were chiefly confined to the course of the moon, to the soltice to a few fixed stars and more particularly astrology page 30.

1. This later list contains for the most part the names employed by the later astronomers, and it is precisely these later ones that are enumerated in the so called Jotisha or Vedic Calendar- (along with zodiacal signs too). To this later treatise an importance has been attributed, to which its contents do not entitle it. Should my conjecture be confirmed that the Lagadha or Lagata whose system it embodies, is identical with the Lat, who is mentioned by Alberuni, the author of Surya Siddhanta, then it would fall in the fourth or fifth century of our era, and even this might almost seem too high an antiquity for this some what in significant tract, which has only had a certain significance attached to it on account of its being ranked with Veda.

ಎಂದು ಪ್ರಖ್ಯಾತಿಪಡೆದ ಆ ಚಿಕ್ಕ ಕೈಪಿಡಿಯೊಂದೇ ಪ್ರಾಚೀನ ಕಾಲದ ಯಾಜ್ಞಿಕರು ಯಜ್ಞದ ಕಾಲವನ್ನು ನಿರ್ಧರಿಸಲು ಯಾವ ಬಗೆಯ ಗಣಿತವನ್ನು ಉಪಯೋಗಿಸುತಿದ್ದರೆಂಬುದನ್ನು ಮತ್ತು ಋಗ್ವೇದದೊಳಗಿನ ವಿಶ್ವೇದೇವರ ರಹಸ್ಯವನ್ನು ತಿಳಿಸುವ ಪ್ರಾಮಾಣಿಕ ಗ್ರಂಥವಾಗಿದೆಯೆಂಬುದನ್ನು ಅವರು ಲಕ್ಷಿಸಲೇ ಇಲ್ಲ. ಭಾರತೀಯರು ಆ ಚಿಕ್ಕ ಕೈಪಿಡಿಯನ್ನು ವೇದಾಂಗವೆಂದು ಕರೆದು ಅದಕ್ಕೆ ಅಷ್ಟು ಮಹತ್ವವನ್ನು ಏಕೆ ಕೊಡುತಿದ್ದರೆಂಬುದನ್ನು ಅವರಿಂದ ತಿಳಿದುಕೊಳ್ಳಲಾಗದಿದ್ದುದರಿಂದ ಅವರದನ್ನು ತುಚ್ಛೀಕರಿಸಿದ್ದಾರೆ. ಮತ್ತು ಅವರು ತನ್ನ ಅಭಿಪ್ರಾಯವನ್ನು ವ್ಯಕ್ತಗೊಳಿಸುವಲ್ಲಿ ತುಂಬಾ ದುಡುಕಿದ್ದಾರೆ. ಅಲ್ಲದೇ ವೇದಾಂಗ ಜ್ಯೋತಿಷವು ಭಾರತೀಯರು ನಂಬಿಕೊಂಡಿರುವಷ್ಟು ಪ್ರಾಚೀನವಲ್ಲವೆಂದು ಸಾಧಿಸುವ ಭರದಲ್ಲಿ ಅವರು ತನ್ನ ಗ್ರಂಥದ ಆರಂಭದಲ್ಲಿ ವ್ಯಕ್ತಗೊಳಿಸಿದ ಅಭಿಪ್ರಾಯಗಳನ್ನು ಸಂಪೂರ್ಣವಾಗಿ ಮರೆತಿದ್ದಾರೆ, ಹಾಗೆಯೇ ಅವರು ಆ ಜ್ಯೋತಿಷಗ್ರಂಥದೊಳಗಿನ ಶ್ಲೋಕಗಳನ್ನು ಶಾಂತಚಿತ್ತದಿಂದ ಪರಿಶೀಲಿಸದಿದ್ದುದರಿಂದ ಹಲವು ತಪ್ಪುಗಳನೂ ಮಾಡಿದ್ದಾರೆ. ಮುಂದೆ ಕೊಡಲಾಗುವ ವೇದಾಂಗ ಜ್ಯೋತಿಷದ ಶ್ಲೋಕಗಳ ಅವಗಾಹನದಿಂದ ಅವರು ಮಾಡಿದ ತಪ್ಪುಗಳನ್ನು ಕಂಡು ಹಿಡಿಯಬಹುದು.

ವೇದಾಂಗ ಜ್ಯೋತಿಷವು ಮೂಲದಲ್ಲಿ ಒಂದೇ ಇದ್ದಿರಬಹುದಾದರೂ ಕಾಲಾಂತರದಲ್ಲಿ ಅದು ಋಗ್ವೇದೀಯ, ಯಜುರ್ವೇದೀಯ ಮತ್ತು ಅಥರ್ವವೇದೀಯವೆಂಬುದಾಗಿ ಮೂರು ಬಗೆಯಾಗಿತ್ತು. ಋಗ್ವೇದೀಯ ಜ್ಯೋತಿಷದಲ್ಲಿ ೩೬ ಶ್ಲೋಕಗಳಿದ್ದು ಯಜುರ್ವೇದೀಯ ಜ್ಯೋತಿಷದಲ್ಲಿ ೪೬ ಶ್ಲೋಕಗಳಿವೆ. ಮತ್ತು ಅವೆರಡರೊಳಗಿನ ೩೨ ಶ್ಲೋಕಗಳಲ್ಲಿ ಕೊಂಚ ಪಾಠಭೇದವಿದ್ದರೂ ವಿಷಯದಲ್ಲಿ ಸಾಮ್ಯವಿದೆ. ಅಂದರೆ ಯಜುರ್ವೇದೀಯ ಜ್ಯೋತಿಷದೊಳಗಿನ ೧೪ ಶ್ಲೋಕಗಳು ಋಗ್ವೇದೀಯ ಜ್ಯೋತಿಷದ ಶ್ಲೋಕಗಳಿಂದ ಭಿನ್ನವಾಗಿವೆ. ಅಥರ್ವವೇದೀಯ ಜ್ಯೋತಿಷವು ಆ ಎರಡು ಜ್ಯೋತಿಷಗಳಿಂದ ಸಂಪೂರ್ಣ ಭಿನ್ನವಾಗಿದೆಯಲ್ಲದೇ ಅರ್ವಾಚೀನವೂ ಆಗಿದೆ, ವೇದಾಂಗ ಜ್ಯೋತಿಷವು ಮುಖ್ಯವಾಗಿ ಯಜ್ಞದ ಅಗ್ನಿಯನ್ನು ಅಧಾನಮಾಡುವ ಸಲುವಾಗಿ ರಚಿಸಲ್ಪಟ್ಟುದರಿಂದ, ಯಜ್ಞಗಳಿಗೆ ಸಂಬಂಧಪಟ್ಟ ಯಜುರ್ವೇದೀಯ ಜ್ಯೋತಿಷವೇ ಮೂಲಕೃತಿಯಾಗಿದ್ದಿತೆನ್ನಬಹುದು. ಯಜುರ್ವೇದೀಯ ಜ್ಯೋತಿಷಕ್ಕೆ ಶೇಷನಾಗ ಎಂಬವನ ಭಾಷ್ಯವಿದೆಯಲ್ಲದೇ ಸೋಮಾಕರ ಎಂಬವನ ವಿವರಣವೂ ಇದೆ. ಅಷ್ಟು ಮಾತ್ರವಲ್ಲದೇ ಅದರ ಶುದ್ಧ ಮುದ್ರಿತ ಪಾಠವೂ ಈಗ ಉಪಲಬ್ಧವಿದೆ. ನಮಗೆ ಈಗ ದೊರೆಯುವ ಋಗ್ವೇದೀಯ ಜ್ಯೋತಿಷದ ಶ್ಲೋಕಗಳಲ್ಲಿ ಅನೇಕ ಅಕ್ಷರದೋಷಗಳೂ, ಶಬ್ದದೋಷಗಳೂ ಇವೆಯಾದುದರಿಂದ ಅವುಗಳ ಸರಿಯಾದ ಅರ್ಥಗಳನ್ನು ತಿಳಿದುಕೊಳ್ಳುವುದು ಅಸಾಧ್ಯವಾಗಿದೆ. ಆ ಕಾರಣದಿಂದ ಋಗ್ವೇದೀಯ ಜ್ಯೋತಿಷದ ಎಲ್ಲ

ಶ್ಲೋಕಗಳನ್ನು ಯಜುರ್ವೇದೀಯ ಜ್ಯೋತಿಷದ ಶ್ಲೋಕಗಳ ನೆರವಿನಿಂದ ತಿದ್ದಿ ಇಲ್ಲಿ ಮುಂದೆ ಕೊಡಲಾಗುವುದು—

ಪಂಚಸಂವತ್ಸರಮಯಂ ಯುಗಾಧ್ಯಕ್ಷಂ ಪ್ರಜಾಪತಿಮ್ ।
ದಿನರ್ತ್ವಯನಮಾಸಾಂಗಂ ಪ್ರಣಮ್ಯ ಶಿರಸಾ ಶುಚಿಃ ॥ ೧ ॥
ಪ್ರಣಮ್ಯ ಶಿರಸಾಕಾಲಮಭಿವಾದ್ಯ ಸರಸ್ವತೀಮ್।
ಕಾಲಜ್ಞಾನಂ ಪ್ರವಕ್ಷ್ಯಾಮಿ ಲಗಧಸ್ಯ ಮಹಾತ್ಮನಃ ॥೨॥

ಅರ್ಥ– ನಾನು ಪೂರ್ಣ ಶುಚಿಯಾಗಿ ದಿನ, ಋತು, ಅಯನ ಮತ್ತು ಮಾಸಗಳು ಯಾವುದರ ಅಂಗಗಳಾಗಿರುತ್ತವೋ ಅಂಥ ಐದು ವರ್ಷಗಳಿಂದ ಕೂಡಿದ ಯುಗದ ಅಧ್ಯಕ್ಷನಾಗಿರುವ ಪ್ರಜಾಪತಿಯನ್ನು ತಲೆಬಾಗಿ ವಂದಿಸಿ ಸರಸ್ವತಿಯನ್ನು ಅಭಿವಾದಿಸಿ, ಕಾಲನನ್ನು ನಮಿಸಿ ಮಹಾತ್ಮನಾದ ಲಗಧನ ಕಾಲ (ಗಣನೆಯ) ಜ್ಞಾನವನ್ನು ಹೇಳುವೆನು.

ಶ್ಲೋಕದಲ್ಲಿ "ಲಗಧನ ಕಾಲಜ್ಞಾನವನ್ನು ಹೇಳುವೆನು" ಎಂದಿರುವುದರಿಂದ ಅದನ್ನು ಹೇಳುವವನು ಲಗಧನಲ್ಲವೆಂಬುದು ಅತ್ಯಂತ ಸ್ಪಷ್ಟವಿದೆ. ಅಂದರೆ ಜ್ಯೋತಿಷದ ಶ್ಲೋಕಗಳು ಲಗಧನಿಂದ ರಚಿಸಲ್ಪಟ್ಟವುಗಳಾಗಿರದೇ – ಆ ಶ್ಲೋಕಗಳು ಹೇಳುವ ಶಾಸ್ತ್ರವು ಮಾತ್ರ ಲಗಧನದೆಂದು ಸಿದ್ಧವಾಗುತ್ತದೆ. ಆದುದರಿಂದ ಪ್ರಾಚೀನ ಕಾಲದಲ್ಲಿ ಲಗಧನು ರಚಿಸಿದ್ದ ಜ್ಯೋತಿಷ ಶಾಸ್ತ್ರವನ್ನು ತರುವಾಯದ ಬೇರೆ ಯಾವನೋ ಶ್ಲೋಕರೂಪದಿಂದ ಹೇಳುತ್ತಾನೆಂದು ತಿಳಿಯಬೇಕಾಗುತ್ತದೆ. ಏಕೆಂದರೆ ವೇದಾಂಗ ಜ್ಯೋತಿಷದ ಇಪ್ಪತ್ತೈದನೆಯ ಶ್ಲೋಕದಲ್ಲಿ ಹೇಳಿರುವ ನಕ್ಷತ್ರ ದೇವತೆಗಳ ಹೆಸರುಗಳಲ್ಲಿ "ಅಗ್ನಿ" ಎಂಬ ಹೆಸರು ಮೊದಲನೆಯದಾಗಿದೆ ಹಾಗೂ ಅಗ್ನಿಯು ಕೃತ್ತಿಕಾ ನಕ್ಷತ್ರದ ಅಧಿಪೇವನಾಗಿದ್ದಾನೆ. ಅದು ಕೃತ್ತಿಕಾ ನಕ್ಷತ್ರವು ಎಣಿಕೆಯಲ್ಲಿ ಮೊದಲನೆಯದಾಗಿದ್ದುದನ್ನು ಅಥವಾ ವಸಂತ ಸಂಪಾತ ಬಿಂದುವು ಕೃತ್ತಿಕಾ ನಕ್ಷತ್ರದಲ್ಲಿದ್ದುದನ್ನು ಸೂಚಿಸುತ್ತದೆ. ಆದರೆ ವೇದಾಂಗ ಜ್ಯೋತಿಷದ ಆರನೆಯ ಶ್ಲೋಕದಲ್ಲಿ ಉಕ್ತವಾಗಿರುವ ಸೂರ್ಯನ ಅಯನ ಬಿಂದುಗಳು ಆಗ ವಸಂತ ಸಂಪಾತವು ಭರಣೀ ನಕ್ಷತ್ರದಲ್ಲಿದ್ದಿತೆಂಬುದನ್ನು ಸಿದ್ಧಪಡಿಸುತ್ತವೆ. ದಿವಂಗತ ಶಂಕರ ಬಾಳಕೃಷ್ಣ ದೀಕ್ಷಿತರು—ತನ್ನ ಭಾರತೀಯ ಜ್ಯೋತಿಷ ಶಾಸ್ತ್ರದ ಪುಟ ೮೭ರಲ್ಲಿ ಧನಿಷ್ಠಾ ನಕ್ಷತ್ರದ ಆದಿಯಲ್ಲಿ ಸೂರ್ಯನ ಉತ್ತರಾಯಣವು ಪ್ರಾರಂಭವಾಗುತಿದ್ದ ಕಾಲವು ಶಕಪೂರ್ವ ೧೪೮೮ನೆಯ ವರ್ಷವೆಂತಲೂ ಈಗಿನ ವೇದಾಂಗ ಜ್ಯೋತಿಷದ ರಚನಾ ಕಾಲವು ಕೂಡ ಅದೇ ಎಂತಲೂ ನಿರ್ಧರಿಸಿದ್ದಾರೆ. ಹಾಗೆಯೇ ಆ ಗ್ರಂಥದ ೧೨೮ನೆಯ ಪುಟದಲ್ಲಿ ಕೃತ್ತಿಕಾದಿಗಣನಾ ಕಾಲವು ಅಥವಾ ವಸಂತ ಸಂಪಾತ ಬಿಂದುವು ಕೃತ್ತಿಕಾ ನಕ್ಷತ್ರದಲ್ಲಿ ಬಂದಿದ್ದ ಕಾಲವು ಶಕಪೂರ್ವ ೩೧೯೮ನೆಯ ವರ್ಷವೆಂತಲೂ ನಿರ್ಧರಿಸಿದ್ದಾರೆ.

ಆದರೆ ಈಗ ದೊರೆಯುವ ವೇದಾಂಗ ಜ್ಯೋತಿಷದ ೧೪ನೆಯ ಶ್ಲೋಕದಲ್ಲಿ ಪರ್ವ ನಕ್ಷತ್ರಗಳ ಪಟ್ಟಿಯು "ಜೌ" ಅಂದರೆ "ಅಶ್ವಯುಜೌ" ಅಥವಾ ಅಶ್ವಿನೀ ನಕ್ಷತ್ರದಿಂದ ಪ್ರಾರಂಭವಾಗಿರುವುದನ್ನು ಪರಿಶೀಲಿಸಿದರೆ ವಸಂತ ಸಂಪಾತ ಬಿಂದುವು ಭರಣೀ ನಕ್ಷತ್ರದಿಂದ ಹಿಂದೆ ಸರಿದು ಅಶ್ವಿನೀ ನಕ್ಷತ್ರದಲ್ಲಿ ಬಂದಿದ್ದಾಗ ಆ ಕಾಲದ ಯಾವನೋ ಜ್ಯೋತಿಷಿಯು ಹಳೆಯ ಪರ್ವ ನಕ್ಷತ್ರಗಳ ಪಟ್ಟಿಯಲ್ಲಿ ತನ್ನ ಕಾಲಕ್ಕನುಸಾರವಾದ ಪರಿವರ್ತನವನ್ನು ಮಾಡಿದನೆನ್ನಬೇಕಾಗುತ್ತದೆ. ಅರ್ಥಾತ್ ಮೂಲ ವೇದಾಂಗ ಜ್ಯೋತಿಷದಲ್ಲಿ ಕಾಲಕಾಲಕ್ಕೆ ಪರಿವರ್ತನಗಳಾಗಿವೆ ಯೆಂಬುದರಲ್ಲಿ ಸಂದೇಹವೇ ಇಲ್ಲ. ಇಲ್ಲಿ ಇನ್ನು ಮುಂದೆ ವೇದಾಂಗ ಜ್ಯೋತಿಷದ ಇತರ ಶ್ಲೋಕಗಳು ಉದಹರಿಸಲಾಗುವುವು—

ಜ್ಯೋತಿಷಾಮಯನಂ ಕೃತ್ಸ್ನಂ ಪ್ರವಕ್ಷ್ಯಾಮ್ಯನುಪೂರ್ವಶಃ।
ವಿಪ್ರಾಣಾಂ ಸಂಮತಂ ಲೋಕೇ ಯಜ್ಞಕಾಲಾರ್ಥಸಿದ್ಧಯೇ॥೩॥

ಅರ್ಥ— ಲೋಕದಲ್ಲಿ ಯಜ್ಞಗಳ ಕಾಲವನ್ನು ಸರಿಯಾಗಿ ಕಂಡುಕೊಳ್ಳುವ ಸಲುವಾಗಿ ನಾನು ವಿಪ್ರರಿಗೆ ಸಂಮತವಾದ ಸಮಗ್ರ ಜ್ಯೋತಿಗಳ ಚಲನವನ್ನು ಅಥವಾ ಜ್ಯೋತಿಷ ಶಾಸ್ತ್ರವನ್ನು ಪೂರ್ವಾನುಕ್ರಮದಂತೆ ಹೇಳುವೆನು.

ನಿರೇಕಂ ದ್ವಾದಶಾಭ್ಯಸ್ತಂ ದ್ವಿಗುಣಂ ಗತಸಂಯುತಮ್।
ಷಷ್ಟ್ಯಾ ಷಷ್ಟ್ಯಾ ಯುತಂ ದ್ವಾಭ್ಯಾಂ ಪರ್ವಣಾಂ ರಾಶಿರುಚ್ಯತೇ ॥೪॥

ಅರ್ಥ- (ಯುಗದೊಳಗಿನ ಯಾವುದೊಂದು ಸಂವತ್ಸರದ ಪರ್ವಗಳ ಸಂಖ್ಯೆ (= ರಾಶಿ)ಯನ್ನು ಕಂಡು ಕೊಳ್ಳುವುದಿದ್ದರೆ) ಐದು ವರ್ಷದ ಯುಗ ದೊಳಗಿನ ಸಂವತ್ಸರದ ಸಂಖ್ಯೆಯಲ್ಲಿ ಒಂದನ್ನು ಕಳೆದು ಉಳಿದುದನ್ನು ಹದಿನೆರಡ ರಿಂದ ಗುಣಿಸಬೇಕು ಮತ್ತು ಲಬ್ಧಕ್ಕೆ ಗತಮಾಸಗಳ ಸಂಖ್ಯೆಯನ್ನು ಕೂಡಿಸಿ ಎರಡ ರಿಂದ ಗುಣಿಸಬೇಕು. ಲಬ್ಧವು ಆರುವತ್ತಕ್ಕೆ ಮೀರಿದರೆ ಪ್ರತಿ ಆರುವತ್ತಕ್ಕೆ ಎರಡರಂತೆ ಕೂಡಿಸಬೇಕು. ಹಾಗೆ ಪ್ರಾಪ್ತವಾದ ಫಲವು ಪರ್ವಗಳ "ರಾಶಿ" ಅಥವಾ ಮೊತ್ತ ಎನಿಸಿಕೊಳ್ಳುತ್ತದೆ.

ಉದಾ— ಯುಗದೊಳಗಿನ ಮೂರನೆಯ ವರ್ಷದ ಏಳನೆಯ ತಿಂಗಳ ಕೊನೆಗೆ ಪರ್ವಗಳ ಸಂಖ್ಯೆಯು ಎಷ್ಟಾಗುತ್ತದೆಂದು ಕಂಡು ಕೊಳ್ಳುವುದಿದ್ದರೆ ಮೂರರಿಂದ ಒಂದನ್ನು ಕಳೆದು ಉಳಿದ ಎರಡನ್ನು ಹದಿನೆರಡರಿಂದ ಗುಣಿಸಬೇಕು. ಮತ್ತು ಲಬ್ಧಕ್ಕೆ ಗತಮಾಸಗಳ ಸಂಖ್ಯೆ ಏಳನ್ನು ಕೂಡಿಸಿ ಎರಡರಿಂದ ಗುಣಿಸಬೇಕು. $(೨ \times ೧೨ + ೭) \times ೨ = ೬೨$. ಇಲ್ಲಿ ಲಬ್ಧವು ಆರುವತ್ತಕ್ಕೆ ಮೀರಿರುವುದರಿಂದ ಅದಕ್ಕೆ ಎರಡನ್ನು ಕೂಡಿಸಬೇಕು. $೬೨ + ೨ = ೬೪$. ಅಂದರೆ ಆರುವತ್ತನಾಲ್ಕು ಪರ್ವಗಳ ರಾಶಿ ಅಥವಾ ಮೊತ್ತವಾಗಿರುತ್ತದೆ.

ಸ್ವರಾಕ್ರಮೇತೇ ಸೋಮಾರ್ಕೌಯದಾ ಸಾಕಂ ಸವಾಸವೌ।
ಸ್ಯಾತ್ತದಾದಿಯುಗಂ ಮಾಘಸ್ತಪಶ್ಶುಕ್ಲೋಽಯನಂ ಹ್ಯುದಕ್ ॥೫॥

ಅರ್ಥ– ಸೂರ್ಯ ಚಂದ್ರರು ಒಟ್ಟಾಗಿ ಧನಿಷ್ಠಾ ನಕ್ಷತ್ರದಲ್ಲಿ ಆಕಾಶವನ್ನು ಆಕ್ರಮಿಸಿದಾಗ ಯುಗವೂ, ಮಾಘಮಾಸವೂ, ಶುಕ್ಲಪಕ್ಷವೂ, ಉಷ್ಣಕಾಲವೂ ಸೂರ್ಯನ ಉತ್ತರಾಯಣವೂ ಪ್ರಾರಂಭವಾಗುವುದು.

ಪ್ರಪದ್ಯೇತೇ ಶ್ರವಿಷ್ಠಾದೌ ಸೂರ್ಯಾಚಂದ್ರಮಸಾವುದಕ್।
ಸರ್ಪಾರ್ಧೇ ದಕ್ಷಿಣಾರ್ಕಸ್ತು ಮಾಘಶ್ರಾವಣಯೋಃ ಸದಾ ॥೬॥

ಅರ್ಥ– ಸೂರ್ಯಚಂದ್ರರು ಧನಿಷ್ಠಾನಕ್ಷತ್ರದ ಆದಿಯಲ್ಲಿ ಉತ್ತರಕ್ಕೆ ಹೋಗುತ್ತಾರೆ. ಮತ್ತು ಸೂರ್ಯನು ಆಶ್ಲೇಷಾ ನಕ್ಷತ್ರದ ಅರ್ಧದಲ್ಲಿ ದಕ್ಷಿಣಕ್ಕೆ ಸಾಗುತ್ತಾನೆ. ಮತ್ತು ಸೂರ್ಯನ ಆಯನಗಳು ಯಾವಾಗಲೂ ಮಾಘ ಮತ್ತು ಶ್ರಾವಣ ಮಾಸಗಳಲ್ಲಿ ಪ್ರಾರಂಭವಾಗುತ್ತವೆ.

ಘರ್ಮವೃದ್ಧಿರಪಾಂ ಪ್ರಸ್ಥಃ ಕ್ಷಪಾಹ್ರಾಸ ಉದಗ್ಗತೌ।
ದಕ್ಷಿಣೇತೌ ವಿಪರ್ಯಾಸೌ ಷಣ್ಮುಹೂರ್ತ್ಯಯನೇನತು ॥೭॥
ಪ್ರಥಮಂ ಸಪ್ತಮಂ ಚಾಹುರಯನಾದ್ಯಂ ತ್ರಯೋದಶಃ।
ಚತುರ್ಥಂ ದಶಮಂ ಚೈವ ದ್ವಿಯುಗ್ಮಂ ಬಹುಲೇಽಪ್ಯೃತೌ ॥೮॥
ವಸುಸ್ತ್ವಷ್ಟಾ ಭವೋಽಜಶ್ಚ ಮಿತ್ರಸ್ಸರ್ಪೋಽಶ್ವಿನೌ ಜಲಮ್।
ಅರ್ಯಮಾ ಕೋಽಯನಾದ್ಯಾಸ್ಸ್ಯುರರ್ಧಪಂಚನಭಸ್ತ್ವೃತುಃ ॥೯॥
ಭಾಂಶಾಃ ಸ್ಯುರಷ್ಟಕಾಃ ಕಾರ್ಯಾ ಪಕ್ಷದ್ವಾದಶಕೋದ್ಗತಾ ।
ಏಕಾದಶ ಗುಣಶ್ಚೋನಃ ಶುಕ್ಲೇಽರ್ಧಂ ಚೈಂದವಾ ಯದಿ ॥೧೦॥
ಕಾರ್ಯಾ ಭಾಂಶಾಷ್ಟಕಾಸ್ಥಾನೇ ಕಲಾ ಏಕೋನವಿಂಶತಿಃ।
ಊನಸ್ಥಾನೇ ದ್ವಿಸಪ್ತತೀರುದ್ಧರೇದ್ಯುಕ್ತ ಸಂಭವೇ ॥೧೧॥
ತ್ರ್ಯಂಶೋ ಭಶೇಷೋ ದಿವಸಾಂಶಭಾಗಶ್ಚತುರ್ದಶಸ್ಯಾಪನೀಯ ಭಿನ್ನಮ್।
ಭಾರ್ಧೇಽಧಿಕೇ ಚಾಧಿಗತೇ ಪರೇಽಂಶೇದ್ಯೂತ್ತಮ್ಯೈಕಂನವಕೈರ ವೇತ್ಯಮ್ ॥೧೨॥
ಪಕ್ಷಾತ್ಪಂಚದಶಾದೂರ್ಧ್ವಂ ತದ್ಭುಕ್ತಮಿತಿ ನಿರ್ದಿಶೇತ್।
ನವಭಿಸ್ತೂದ್ಗತೋಽಂಶಃಸ್ಯಾದೂನಾಂಶೋದ್ವ್ಯಧಿಕೇನ ತು ॥೧೩॥
ಜೌದ್ರಾಗಃಖೇಶ್ವೇಹೀರೋಷಾಚಿನ್ಮೂಷಣ್ಯಃ ಸೂಮಾಮಾಧಾನಃ।
ರೇಮೃಘಾಸ್ವಾಪೋಜಃಕೃಷ್ಯೋಹ ಜ್ಯೇಷ್ಠಾ ಇತ್ಯೃಕ್ಷಾಲಿಂಗೈಃ ॥೧೪॥
ಚಾವಾದ್ಯಂ ಶೈಃ ಸಮಂ ವಿದ್ಯಾತ್ಪೂರ್ವಾರ್ಧೇ ಪರ್ವಸೂತ್ತರೇ।

ಭಾದಾನಂ ಸ್ಯಾಚ್ಚತುರ್ದಶ್ಯಾ ದ್ವಿಭಾಗೇಭ್ಯೋಽಧಿಕೋ ಯದಿ ॥೧೫॥
ಕಲಾದಶಸವಿಂಶಾ ಸ್ಯಾದ್ ದ್ವೇ ಮುಹೂರ್ತಸ್ಯ ನಾಡಿಕೇ।
ದ್ಯುತ್ರಿಂಶತ್ತತ್ಕಲಾನಾಂ ತು ಷಟ್ಛತೀತ್ರ್ಯಧಿಕಂ ಭವೇತ್॥೧೬॥
ನಾಡಿಕೇ ದ್ವೇ ಮುಹೂರ್ತಸ್ತು ಪಂಚಾಶತ್ಪಲಮಾಢಕಮ್।
ಆಢಕಾತ್ಕುಂಭಿಕಾ ದ್ರೋಣಃ ಕುಡವೈರ್ವರ್ಧತೇ ತ್ರಿಭಿಃ॥೧೭॥
ಸಸಪ್ತ್ಯೈಕಂ ಭಯುಕ್ ಸೋಮಃ ಸೂರ್ಯೋ ದ್ಯೂನಿ ತ್ರಯೋದಶ।
ನವಮಾನಿ ಚ ಪಂಚಾಹ್ನಃ ಕಾಷ್ಠಾ ಪಂಚಾಕ್ಷರೀ ಭವೇತ್ ॥೧೮॥

ಶ್ರವಿಷ್ಠಾಭ್ಯಾಂ ಗುಣಾಭ್ಯಸ್ತಾನ್ ಪ್ರಾಗ್ವಿಲಗ್ನಾನ್ ವಿನಿರ್ದಿಶೇತ್।
ಅರ್ಕ್ಷಾನ್ ಮಾಸಾನ್ಷಡಭ್ಯಸ್ತಾನ್ ವಿದ್ಯಾಚ್ಚಾಂದ್ರ
ಮಸಾನೃತೂನ್ ॥೧೯॥

ಅತೀತಪರ್ವಭಾಗೇಭ್ಯಃ ಶೋಧಯೇದ್ ದ್ವಿಗುಣಾಂ ತಿಥಿಮ್।
ತೇಷು ಮಂಡಲ ಭಾಗೇಷು ತಿಥಿನಿಷ್ಠಾ ಗತೋ ರವಿಃ ॥೨೦॥

ಯಾಃ ಪರ್ವಭಾದಾನಕಲಾಸ್ತಾಸು ಸಪ್ತಗುಣಾಂ ತಿಥಿಮ್।
ಪ್ರಕ್ಷಿಪೇತ್ ಕಲಾಸಮೂಹಸ್ತು ವಿದ್ಯಾದ್ ಆನಕೀಃ ಕಲಾಃ ॥೨೧॥
ಯದುತ್ತರಸ್ಯಾಯನತೋ ಗತಂಸ್ಯಾಚ್ಛೇಷಂ ತಥಾ
ದಕ್ಷಿಣತೋಽಯನಸ್ಯ।
ತದೇಕಷಷ್ಟ್ಯಾದ್ವಿಗುಣಂ ವಿಭಕ್ತಂ ಸದ್ವಾದಶಂ ಸ್ಯಾದ್ದಿವಸ
ಪ್ರಮಾಣಮ್ ॥೨೨॥
ಯದರ್ಧದಿನ ಭಾಗಾನಾಂ ಸದಾ ಪರ್ವಣಿ ಪರ್ವಣಿ।
ಋತುಶೇಷಂ ತು ತದ್ವಿದ್ಯಾತ್ ಸಂಖ್ಯಾಯ ಸಹ ಪರ್ವಣಾಮ್ ॥೨೩॥
ಇತ್ಯುಪಾಯಸಮುದ್ದೇಶೋ ಭೂಯೋಽಪ್ಯೇವಂ ಪ್ರಕಲ್ಪಯೇತ್।
ಜ್ಞೇಯರಾಶಿಂ ಗತಾಭ್ಯಸ್ತಂ ವಿಭಜೇಜ್ ಜ್ಞಾನರಾಶಿನಾ ॥೨೪॥
ಅಗ್ನಿಃ[1] ಪ್ರಜಾಪತಿಃ[2] ಸೋಮೋ[3] ರುದ್ರೋ[4] ಅದಿತಿ[5] ಬೃಹಸ್ಪತಿಃ[6]
ಸರ್ಪಾ[7]ಶ್ಚ ಪಿತರ[8]ಶ್ಚೈವ ಭಗ[9]ಶ್ಚೈವಾರ್ಯಮಾ[10]ಪಿ ಚ ॥೨೫॥
ಸವಿತಾ[11] ತ್ವಷ್ಟಾ[12]ಥ ವಾಯು[13]ಶ್ಚೇಂದ್ರಾಗ್ನೀ[14] ಮಿತ್ರ[15]
ಏವ ಚ।
ಇಂದ್ರೋ[16] ನಿರ್ಋತಿ[17]ರಾಪೋ[18]ವೈ ವಿಶ್ವೇದೇವಾ[19]ಸ್ತ
ಥೈವ ಚ ॥೨೬॥
ವಿಷ್ಣು[20] ರ್ವಸವೋ[21] ವರುಣೋ[22] ಅಹಿರ್ಬುಧ್ನ್ಯ[23]ಸ್ತಥೈವ ಚ।
ಅಜಏಕಪಾತ್ತ[24]ಥಾ ಪೂಷಾ[25] ಅಶ್ವಿನೌ[26] ಯಮ[27] ಏವ ಚ ॥೨೭॥

ನಕ್ಷತ್ರ ದೇವತಾ ಹ್ಯೇತಾ ಏತಾಭಿರ್ಯಜ್ಞಕರ್ಮಣಿ।
ಯಜಮಾನಸ್ಯ ಶಾಸ್ತ್ರಜ್ಞೈರ್ನಾಮ ನಕ್ಷತ್ರಜಂ ಸ್ಮೃತಮ್ ॥೨೮॥
ಇತ್ಯೇತನ್ಮಾಸವರ್ಷಾಣಾಂ ಮುಹೂರ್ತೋದಯಪರ್ವಣಾಮ್।
ದಿನರ್ತ್ವಯನಮಾಸಾನಾಂ ವ್ಯಾಖ್ಯಾನಂ ಲಗಧೋಽಬ್ರವೀತ್ ॥೨೯॥
ಸೋಮಸೂರ್ಯಸ್ತೃಚರಿತಂ ಲೋಕಾಂಲ್ಲೋಕೇ ಚ ಸಂಮಿತಮ್।
ಸೋಮಸೂಯಸ್ತೃಚರಿತಂ ವಿದ್ವಾನ್ ವೇದ ವಿದಶ್ನುತೇ ॥೩೦॥
ವಿಷುವಂ ತದ್ಗುಣಂದ್ವಾಭ್ಯಾಂ ರೂಪಹೀನಂ ತು ಷಡ್ಗುಣಮ್।
ಯಲ್ಲಬ್ಧಂ ತಾನಿ ಪರ್ವಾಣಿ ತಥೋರ್ಧ್ವಂ ಸಾ ತಿಥಿರ್ಭವೇತ್ ॥೩೧॥

ಮಾಘಶುಕ್ಲ ಪ್ರವೃತ್ತಸ್ಯ ಪೌಷ ಕೃಷ್ಣ ಸಮಾಪಿನಃ।
ಯುಗಸ್ಯ ಪಂಚವರ್ಷಸ್ಯ ಕಾಲ ಜ್ಞಾನಂ ಪ್ರಚಕ್ಷತೇ ॥೩೨॥

ತೃತೀಯಾಂ ನವಮೀಂ ಚೈವ ಪೌರ್ಣಮಾಸೀಂ ತ್ರಯೋದಶೀಮ್।
ಷಷ್ಠಿಂ ಚ ವಿಷುವಾನ್ಪ್ರೋಕ್ತೋ ದ್ವಾದಶ್ಯಾಂ ಚ ಸಮಂ ಭವೇತ್।೩೩।

ಚತುರ್ದಶೀಮುಪವಸಥಸ್ತಥಾ ಭವೇದ್ಯಥೋದಿತೋ ದಿನಮುಪೈತಿ ಚಂದ್ರಮಾಃ।
ಮಾಘಶುಕ್ಲಾಹ್ನಿಕೇ ಯುಂಕ್ತೇ ಶ್ರವಿಷ್ಠಾಯಾಂ ಚ ವಾರ್ಷಿಕೀಮ್॥೩೪॥
ಯಥಾ ಶಿಖಾ ಮಯೂರಾಣಾಂ ನಾಗಾನಾಂ ಮಣಯೋ ಯಥಾ।
ತದ್ವದ್ವೇದಾಂಗ ಶಾಸ್ತ್ರಾಣಾಂ ಜ್ಯೋತಿಷಂ ಮೂರ್ಧನಿ ಸ್ಥಿತಮ್ ॥೩೫॥
ವೇದಾಹಿ ಯಜ್ಞಾರ್ಥಮಭಿಪ್ರವೃತ್ತಾಃ ಕಾಲಾನುಪೂರ್ವ್ಯಾ ವಿಹಿತಾಶ್ಚ ಯಜ್ಞಾಃ।
ತಸ್ಮಾದಿದಂ ಕಾಲವಿಧಾನ ಶಾಸ್ತ್ರಂ ಯೋ ಜ್ಯೋತಿಷಂ ವೇದ ಸ ವೇದ ಯಜ್ಞಾನ್।
ಯೋ ಜ್ಯೋತಿಷಂ ವೇದ ಸ ವೇದ ಯಜ್ಞಾನ್ ॥೩೬॥
ಪಂಚಸಂವತ್ಸರಂ ಪ್ರಪದ್ಯೇತೇ ಕಾರ್ಯಾಃ। ಕಲಾದಶಚಯಾಃ ಪರ್ವ ಸವಿತಾ
ವಿಷುವಂ ಸಪ್ತ॥ ಇತಿ ವೇದಾಂಗ ಜ್ಯೋತಿಷ ಸಮಾಪ್ತಮ್ ॥

ಯಜುರ್ವೇದೀಯ ಜ್ಯೋತಿಷದಲ್ಲಿ ಮುಂದೆ ಕೊಡಲಾಗುವ ಶ್ಲೋಕಗಳು ಹೆಚ್ಚಿಗಿವೆ—

ಏಕಾಂತರೇಽಹ್ನಿ ಮಾಸೇ ಚ ಪೂರ್ವಾದೃತ್ವಾದಿರುತ್ತರಃ।
ಅರ್ಧಯೋಃ ಪಂಚವರ್ಷಾಣಾಮೃತೂ ಪಂಚದಶಾಷ್ಟಮೌ ॥೧೧॥
ದ್ಯು ಹೇಯಂ ಪರ್ವ ಚೇತ್ಪಾದೇ ಪಾದ ತ್ರಿಂಶತ್ತು ಸೈತಿಕಾ।
ಭಾಗಾತ್ಮನಾಽಪವೃಜ್ಯಾಂಶಾನ್ನಿರ್ದಿಶೇತ್ತದಧಿಕೋ ಯದಿ ॥೧೨॥

ಸ್ಯುಃ ಪಾದೋರ್ಧ್ವಂ ತ್ರಿಪದ್ಯಾಯಾಃ ತ್ರಿದ್ವ್ಯೇಕೇಽಹ್ನಃ ಕೃತೇ ಸ್ಥಿತಿಮ್।
ಸಾಮ್ಯೇನೇಂದೋಸ್ತೃಣೋಽನ್ಯೇತು ಪಂಚಕಾಃ ಪರ್ವಸಂಮತಾಃ ॥೧೪॥

ನವಕೈರುದ್ಗತಾಂಶಃ ಸ್ಯಾದೂನಃ ಸಪ್ತಗುಣೋ ಭವೇತ್।
ಆವಾಪಸ್ತ್ವಯುಜದ್ಯುಃಸ್ಯಾತ್ತೌ ಪರಸ್ತ್ಯೇಽಸ್ತಂ ಗತೇ ಪರಮ್ ॥೧೬॥

ತಿಥಿಮೇಕಾದಶಾಭ್ಯಸ್ತಾಂ ಪರ್ವಭಾಂಶ ಸಮನ್ವಿತಮ್।
ವಿಭಜ್ಯ ಭ ಸಮೂಹೇನ ತಿಥಿನಕ್ಷತ್ರಮಾದಿಶೇತ್ ॥೨೦॥

ಏಕಾದಶಭಿರಭ್ಯಸ್ಯ ಪರ್ವಾಣಿ ನವಭಿಸ್ತಿಥಿಮ್।
ಯುಗಲಬ್ಧಂ ಸ ಪರ್ವಸ್ಯಾದ್ ವರ್ತಮಾನಾರ್ಕಭಂ ಕ್ರಮಾತ್ ॥೨೫॥

ಸೂರ್ಯರ್ಕ್ಷಭಾಗಾನ್ನವಭಿರ್ವಿಭಜ್ಯ ಶೇಷಂ ದ್ವಿರಭ್ಯಸ್ಯ ದಿನೋಪಭುಕ್ತಿಃ।
ತಿಥಿರ್ಯಥಾಭುಕ್ತಿರ್ದಿನೇಷು ಕಾಲೋಽಯೋಗೋ ದಿನೈಕಾದಶಕೇನ ತದ್ಭಮ್ ॥೨೬॥

ತ್ರಿಂಶತ್ಯಹ್ನಾಂಸಪಟ್‌ಷಷ್ಟಿರಬ್ದಃ ಷಡ್ ಋತವೋಽಯನೇ ।
ಮಾಸಾದ್ವಾದಶಸೂರ್ಯಾಃ ಸ್ಯುರೇತತ್ಪಂಚ ಗುಣಂ ಯುಗಮ್ ॥೨೮॥

ಉದಯಾ ವಾಸವಸ್ಯ ಸ್ಯುರ್ದಿನರಾಶಿಃ ಸಪಂಚಕಃ।
ಋಷೇರ್ದ್ವಿಷಷ್ಟ್ಯಾಹೀನಃ ಸ್ಯಾದ್ ವಿಂಶತ್ಯಾ ನೈಕಯಾಸ್ತೃಣಾಮ್ ॥೨೯॥

೨೯ನೆಯ ಶ್ಲೋಕದ ಅರ್ಥ — ಐದು ವರ್ಷಗಳ ಒಂದು ಯುಗದಲ್ಲಿ ವಾಸವನ ಅಂದರೆ ಇಂದ್ರನ ಅಥವಾ ಇಂದ್ರನು ದೇವತೆಯಾಗಿರುವ ಧನಿಷ್ಠಾ ನಕ್ಷತ್ರದ ಉದಯಗಳು ಯುಗದ ದಿನಗಳ ಸಂಖ್ಯೆಗಿಂತ ಅಥವಾ ಮೊತ್ತಕ್ಕಿಂತ ಐದು ಹೆಚ್ಚಾಗುತ್ತವೆ = ೩೬೬ × ೫ + ೫ = ೧೮೩೫. ಚಂದ್ರನ ಉದಯಗಳು ಯುಗದ ದಿನಗಳ ಸಂಖ್ಯೆಗಿಂತ ಆರುವತ್ತೆರಡು ಕಡಿಮೆಯಾಗುತ್ತವೆ-೧೮೩೦ — ೬೨ = ೧೭೬೮. ಮತ್ತು ಚಂದ್ರನ ನಾಕ್ಷತ್ರಿಕ ಪರಿಭ್ರಮಣಗಳು ಇಪ್ಪತ್ತೊಂದು ಕಡಿಮೆಯಾಗುತ್ತವೆ. = ೧೮೩೦ — ೨೧ = ೧೮೦೯.

ಪಂಚತ್ರಿಂಶಚ್ಛತಂ ಪೌಷ್ಣಮೇಕೋನಮಯನ್ಯೃಷೇಃ ।
ಪರ್ವಣಾಂಸ್ಯಾಚ್ಚತುಷ್ಪಾದೀ ಕಾಷ್ಠಾನಾಂ ಚೈವ ತಾಃ ಕಲಾಃ ॥೩೦॥

ಸಾವನೇಂದುಸ್ತೃಮಾಸಾನಾಂ ಷಷ್ಟಿಃ ಸೈಕಾ ದ್ವಿಸಪ್ತಿಕಾ।
ದ್ಯುತ್ರಿಂಶತ್ ಸಾವನಃ ಸಾರ್ಧಃ ಸೂರ್ಯಃ ಸ್ತೃಣಾಂ ಸಪರ್ಯಯಃ ॥೩೧॥

ಉಗ್ರಾಣ್ಯಾರ್ದ್ರಾ ಚ ಚಿತ್ರಾ ಚ ವಿಶಾಖಾ ಶ್ರವಣಾಶ್ವಯುಕ್।
ಕ್ರೂರಾಣಿ ತು ಮಘಾಸ್ವಾತೀ ಜ್ಯೇಷ್ಠಾ ಮೂಲಂ ಯಮಸ್ಯಯತ್ ॥೩೬॥

ದ್ಯೂನಂ ದ್ವಿಷಷ್ಟಿ ಭಾಗೇನ ಜ್ಞೇಯಂ ಸೂರ್ಯಾರ್ತ್ ಸಪಾರ್ವಣವ್ ।
ಯತ್ಕೃತಾವುಪಜಾಯೆತೇ ಮಧ್ಯೇ ಚಾಂತೇ ಚಾಧಿಮಾಸಕೌ ॥೩೭॥

ಒಂದೆ ಉಪಹರಿಸಿರುವಂತೆ ಯಜುರ್ವೇದೀಯ ಜ್ಯೋತಿಷದಲ್ಲಿ ಋಗ್ವೇದೀಯ ಜ್ಯೋತಿಷ ಗ್ರಂಥದಲ್ಲಿಲ್ಲದ ಹದಿಮೂರು ಶ್ಲೋಕಗಳು ಹೆಚ್ಚಿಗಿವೆ. ಮತ್ತು ಆ ಹದಿಮೂರು ಶ್ಲೋಕಗಳಿಲ್ಲದೇ ಆ ಶಾಸ್ತ್ರವು ಪೂರ್ಣವಾಗುವುದಿಲ್ಲ. ಪಾಶ್ಚಾತ್ಯ ವಿದ್ವಾಂಸರು ವ್ಯಕ್ತಗೊಳಿಸಿದ ಅಭಿಪ್ರಾಯಗಳ ಮೇಲಿಂದ ಅವರೆಲ್ಲರೂ ಯಜುರ್ವೇದೀಯ ಜ್ಯೋತಿಷ ಗ್ರಂಥವನ್ನೇ ಆಧಾರವನ್ನಾಗಿ ಸ್ವೀಕರಿಸಿದ್ದರೆಂದು ತಿಳಿಯಬೇಕಾಗುತ್ತದೆ.

ಡಾ। ವೇಬರ್ ಅವರು ವೇದಾಂಗ ಜ್ಯೋತಿಷದ ರಚನಾ ಕಾಲವು ಶಕದ ನಾಲ್ಕನೆಯ ಶತಮಾನವೆನ್ನುವಾಗ, ಅವರು ಆ ಮೊದಲು ವೇದಾಂಗ ಜ್ಯೋತಿಷದ ಆರನೆಯ ಶ್ಲೋಕದ ಆಧಾರದಿಂದ–ಸೂರ್ಯನ ಉತ್ತರಾಯಣ ಮತ್ತು ದಕ್ಷಿಣಾಯನಗಳು ಧನಿಷ್ಠಾ ನಕ್ಷತ್ರದ ಆದಿಯಲ್ಲಿ ಮತ್ತು ಆಶ್ಲೇಷಾ ನಕ್ಷತ್ರದ ಮಧ್ಯದಲ್ಲಿ ಪ್ರಾರಂಭವಾಗುತಿದ್ದ ಕಾಲವು ಶಕಪೂರ್ವ ೧೯೦೦ರಿಂದ ೯೪೦ ವರ್ಷಗಳೆಂದೂ ಆಗ ವಸಂತ ಸಂಪಾತ ಬಿಂದುವು ಭರಣೀ ನಕ್ಷತ್ರದಲ್ಲಿದ್ದಿತೆಂದೂ–ಹೇಳಿರುವುದನ್ನು ಸಂಪೂರ್ಣವಾಗಿ ಮರೆತಿದ್ದಾರೆ. ಮತ್ತು ಸೂರ್ಯನ ಅಯನಗಳು ಪ್ರಾರಂಭವಾಗುವ ಸ್ಥಾನಗಳನ್ನು ಅಷ್ಟು ಸೂಕ್ಷ್ಮವಾಗಿ ಹಾಗೂ ಸ್ಪಷ್ಟವಾಗಿ ಉಲ್ಲೇಖಿಸಲ್ಪಟ್ಟಿರುವ ಬೇರೊಂದು ಪ್ರಾಚೀನ ಜ್ಯೋತಿಷ ಗ್ರಂಥವು ಜಗತ್ತಿನಲ್ಲಿಯೇ ಇಲ್ಲವೆಂಬ ತಥ್ಯವನ್ನೂ ಕಡೆಗಣಿಸಿದ್ದಾರೆ.

ಎರಡನೆಯದಾಗಿ ಅವರು ವೇದಾಂಗ ಜ್ಯೋತಿಷದಲ್ಲಿ ನಕ್ಷತ್ರಗಳ ಹೆಸರುಗಳು ಅನುಕ್ರಮವಾಗಿ ಬಂದಿರುವ ಪಟ್ಟಿಯು ಇಲ್ಲವೆಂಬುದನ್ನೂ ಅದರಲ್ಲಿ ನಕ್ಷತ್ರಗಳ ಅಧಿದೇವತೆಗಳ ಹೆಸರುಗಳು ಮಾತ್ರ ಅನುಕ್ರಮವಾಗಿ ತೈತ್ತಿರೀಯ ಬ್ರಾಹ್ಮಣದಲ್ಲಿರುವಂತೆಯೇ ಉಲ್ಲೇಖಿಸಲ್ಪಟ್ಟಿವೆಯೆಂಬುದನ್ನೂ ಪರಿಶೀಲಿಸಿಲ್ಲ. ಆ ದೇವತೆಗಳು ಅನುಕ್ರಮವಾಗಿ ಮುಂದೆ ಕೊಡಲಾಗುವ ನಕ್ಷತ್ರ ಪುಂಜಗಳ ಪ್ರತಿನಿಧಿಗಳಾಗಿವೆ—

೧. ಕೃತ್ತಿಕಾ; ೨. ರೋಹಿಣೀ; ೩. ಮೃಗಶೀರ್ಷ; ಅಥವಾ ಇನ್ವಕಾ ೪. ಆರ್ದ್ರಾ ಅಥವಾ ಬಾಹೂ; ೫. ಪುನರ್ವಸೂ; ೬. ತಿಷ್ಯ; ೭. ಆಶ್ರೇಷಾ; ೮. ೮. ಮಘಾ; ೯. ಪೂರ್ವೇ ಫಲ್ಗುನೀ; ೧೦. ಉತ್ತರೇ ಫಲ್ಗುನೀ; ೧೧. ಹಸ್ತ; ೧೨. ಚಿತ್ರಾ; ೧೩. ಸ್ವಾತೀ ಅಥವಾ ನಿಷ್ಟ್ಯಾ. ೧೪. ವಿಶಾಖೇ: ೧೫. ಅನೂರಾಧಾ; ೧೬. ರೋಹಿಣೀ ಅಥವಾ ಜ್ಯೇಷ್ಠಾ; ೧೭. ವಿಚೃತೌ ಅಥವಾ ಮೂಲ; ೧೮ ಪೂರ್ವಾ ಅಷಾಢಾ; ೧೯. ಉತ್ತರಾ ಅಷಾಢಾ; ೨೦. ಶ್ರೋಣಾ ಅಥವಾ ಶ್ರವಣ; ೨೧. ಶ್ರವಿಷ್ಠಾ: ೨೨. ಶತಭಿಷಕ್; ೨೩ ಪೂರ್ವಾ: ಪ್ರೋಷ್ಠಪದಾ; ೨೪. ಉತ್ತರಾ: ಪ್ರೋಷ್ಠಪದಾ; ೨೫. ರೇವತೀ; ೨೬. ಅಶ್ವಯುಜೌ; ೨೭. ಅಪಭರಣೀ ಅಥವಾ ಭರಣೀ.

ಹಿಂದೆ ಉದಹರಿಸಿದ ಋಗ್ವೇದೀಯ ಜ್ಯೋತಿಷದ ೨೫ನೆಯ ಶ್ಲೋಕದಲ್ಲಿ ಉಲ್ಲೇಖಿಸಲ್ಪಟ್ಟಿರುವ ನಕ್ಷತ್ರದೇವತೆಗಳ ಹೆಸರುಗಳಲ್ಲಿ "ಅಗ್ನಿ" ಎಂಬ ಹೆಸರು ಮೊದಲನೆಯದಾಗಿರುವುದರಿಂದ, ಆ ದೇವತೆಗಳ ಪಟ್ಟಿಯು ಕೃತ್ತಿಕಾ ನಕ್ಷತ್ರದಲ್ಲಿ ವಸಂತ ಸಂಪಾತವಿದ್ದ ಕಾಲದಲ್ಲಿ ರಚಿಸಲ್ಪಟ್ಟಿದ್ದಿತೆಂದು ಸಿದ್ಧವಾಗುತ್ತದೆ. ಅರ್ಥಾತ್ ಮೂಲ ವೇದಾಂಗ ಜ್ಯೋತಿಷವು ಆ ಕಾಲದಲ್ಲಿ ರಚಿಸಲ್ಪಟ್ಟಿದ್ದಿತೆಂದು ಸಿದ್ಧವಾಗುತ್ತದೆ. ಹಾಗೆಯೇ ಯಜ್ಞಗಳನ್ನು ಜರುಗಿಸುತಿದ್ದ ಋತ್ವಿಜರು ಪ್ರತಿದಿನ ನಕ್ಷತ್ರಗಳ ಗತಿಯನ್ನು ನಿರೀಕ್ಷಿಸುತಿದ್ದುದರಿಂದ, ಅವರು ವಸಂತ ಸಂಪಾತ ಬಿಂದುವು ಕೃತ್ತಿಕಾ ನಕ್ಷತ್ರದಿಂದ ಹಿಂದೆ ಸರಿದು ಭರಣೀ ನಕ್ಷತ್ರದಲ್ಲಿ ಬಂದುದನ್ನು ಕಂಡುಕೊಂಡ ತರುವಾಯ ಆ ಕಾಲದ ಅಯನಬಿಂಧುಗಳನ್ನು ನಿರ್ಧರಿಸಿದ್ದರೆಂದು ಮತ್ತು ವಸಂತ ಸಂಪಾತ ಬಿಂದುವು ಭರಣೀ ನಕ್ಷತ್ರದಿಂದ ಹಿಂದಕ್ಕೆ ಸರಿಯುತ್ತ ಅಶ್ವಿನೀ ನಕ್ಷತ್ರದಲ್ಲಿ ಬಂದುದನ್ನು ಕಂಡ ಋತ್ವಿಜರು – ಪರ್ವನಕ್ಷತ್ರಗಳ ಪಟ್ಟಿಯಲ್ಲಿ ಅಶ್ವಿನೀ ನಕ್ಷತ್ರವನ್ನು ಮೊದಲನೆಯದನ್ನಾಗಿ ಮಾಡಿದರೆಂದು ತಿಳಿಯಬೇಕಾಗುತ್ತದೆ. ತಾತ್ಪರ್ಯವೇನೆಂದರೆ ನಕ್ಷತ್ರಗಳ ಗತಿಯನ್ನು ಪ್ರತಿದಿನ ನಿರೀಕ್ಷಿಸುತಿದ್ದ ಋತ್ವಿಜರು ಮೂಲ ಜ್ಯೋತಿಷ ಗ್ರಂಥದಲ್ಲಿ ತಮ್ಮ ತಮ್ಮ ಕಾಲಕ್ಕನುಸಾರವಾದ ಪರಿವರ್ತನಗಳನ್ನು ಮಾಡುತಿದ್ದುದರಿಂದಲೇ, ಈಗ ನಮಗೆ ದೊರೆಯುವ ವೇದಾಂಗ ಜ್ಯೋತಿಷದ ೬ನೆಯ ಶ್ಲೋಕದಲ್ಲಿ ಉಲ್ಲೇಖಿಸಲ್ಪಟ್ಟಿರುವ ಸೂರ್ಯನ ಅಯನಗಳು ಪ್ರಾರಂಭವಾಗುವ ಸ್ಥಾನಗಳಿಂದ ಭರಣೀ ನಕ್ಷತ್ರದಲ್ಲಿ ವಸಂತ ಸಂಪಾತವಿದ್ದುದೂ, ೧೪ನೆಯ ಶ್ಲೋಕದಲ್ಲಿ ಉಲ್ಲೇಖಿಸಲ್ಪಟ್ಟಿರುವ ಪರ್ವನಕ್ಷತ್ರಗಳ ಪಟ್ಟಿಯಲ್ಲಿ "ಜೌ" ಅಂದರೆ ಅಶ್ವಿನೀ ನಕ್ಷತ್ರವು ಮೊದಲನೆಯದಾಗಿರುವುದರಿಂದ ಆಗ ಅಶ್ವಿನೀ ನಕ್ಷತ್ರದಲ್ಲಿ ವಸಂತ ಸಂಪಾತವಿದ್ದಿತೆಂಬುದೂ. ೨೫ನೆಯ ಶ್ಲೋಕದಲ್ಲಿ ಉಲ್ಲೇಖಿಸಲ್ಪಟ್ಟಿರುವ ನಕ್ಷತ್ರ ದೇವತೆಗಳಲ್ಲಿ ಅಗ್ನಿಯು ಮೊದಲನೆಯವನಾಗಿರುವುದರಿಂದ ಆಗ ಕೃತ್ತಿಕಾ ನಕ್ಷತ್ರದಲ್ಲಿ ವಸಂತ ಸಂಪಾತವು ಘಟಿಸುತಿದ್ದಿತೆಂಬುದೂ-ಸೂಚಿಸಲ್ಪಡುವುದಾಗಿದೆ.

ಹಿಂದೆ ಉದಹರಿಸಿದ ವೇದಾಂಗ ಜ್ಯೋತಿಷದ ೨೫ನೆಯ, ೨೬ನೆಯ ಮತ್ತು ೨೭ನೆಯ ಶ್ಲೋಕಗಳಲ್ಲಿ ಉಲ್ಲೇಖಿಸಲ್ಪಟ್ಟಿರುವ ನಕ್ಷತ್ರ ದೇವತೆಗಳ ಹೆಸರುಗಳು ಋಗ್ವೇದದೊಳಗಿನ ಸಾಧಾರಣ ಎಂಭತ್ತೈದು ವಿಶ್ವೇದೇವ ಸೂಕ್ತಗಳಲ್ಲಿ ನ್ಯೂನಾಧಿಕ ಸಂಖ್ಯೆಗಳಲ್ಲಿ ಸ್ತುತಿಸಲ್ಪಟ್ಟಿವೆ. ಮತ್ತು ಅಗ್ನಿ, ಅಪಾಂನಪಾತ್, ಅಶ್ವಿನೌ, ಆಪಃ, ಇಂದ್ರ, ಪ್ರಜಾಪತಿ, ಪಿತರಃ, ಪೂಷಾ, ಬೃಹಸ್ಪತಿ, ಮಿತ್ರ, ಯಮ, ರುದ್ರ, ವರುಣ, ವಾಯು, ವಿಷ್ಣು, ಸವಿತಾ, ಸೋಮ ಮತ್ತು ಇಂದ್ರಾಗ್ನೀ ಎಂಬ ಹದಿನೆಂಟು ದೇವತೆಗಳು ಸ್ವತಂತ್ರವಾದ ಬೇರೆ ಬೇರೆ ಸೂಕ್ತಗಳಲ್ಲಿಯೂ ಸ್ತುತಿಸಲ್ಪಟ್ಟಿದ್ದಾರೆ.

ಹೆಚ್ಚಿನ ವಿಶ್ವೇದೇವ ಸೂಕ್ತಗಳಲ್ಲಿ ನಕ್ಷತ್ರದೇವತೆಗಳೊಂದಿಗೆ ಬೇರೆ ಕೆಲವು

ದೇವತೆಗಳು ಸ್ತುತಿಸಲ್ಪಟ್ಟಿವೆಯಾದರೂ ಅವುಗಳಲ್ಲಿ ನಕ್ಷತ್ರದೇವತೆಗಳೇ ಅಧಿಕ ಸಂಖ್ಯೆಯುಲ್ಲಿವೆ. ಕೆಲವು ವಿಶ್ವೇದೇವಸೂಕ್ತಗಳಲ್ಲಿ ನಕ್ಷತ್ರ ದೇವತೆಗಳೊಂದಿಗೆ ಒಂದೆರಡು ನಕ್ಷತ್ರಗಳೂ ಸ್ತುತಿಸಲ್ಪಟ್ಟಿವೆ. ಉದಾಹರಣೆ ಕೊಟ್ಟು ವಿವರಿಸುವುದಾದರೆ–ಋಗ್ವೇದದ ಐದನೆಯ ಮಂಡಲದೊಳಗಿನ ನಾಲ್ವತ್ತಾರನೆಯ ಸೂಕ್ತದಲ್ಲಿ– **೧. ಅಗ್ನಿ; ೨. ಅದಿತಿ; ೩. ಅರ್ಯಮಾ; ೪. ಅಶ್ವಿನೌ; ೫. ಆಪಃ; ೬. ಇಂದ್ರ; ೭. ಇಂದ್ರಾಗ್ನಿ; ೮. ತ್ವಷ್ಟಾ; ೯. ಪೂಷಾ; ೧೦. ಬೃಹಸ್ಪತಿ; ೧೧. ಭಗ; ೧೨. ಮಿತ್ರ; ೧೩. ರುದ್ರ; ೧೪. ವರುಣ; ೧೫. ವಾಯು; ೧೬. ವಿಷ್ಣು: ೧೭. ಸವಿತಾ; ೧೮. ಸೋಮ** ಎಂಬ ಹದಿನೆಂಟು ದೇವತೆಗಳೊಂದಿಗೆ **೧ ಋಭುಗಳು; ೨. ನದಿಗಳು; ೩. ಪರ್ವತಗಳು; ೪. ಪೃಥ್ವಿ; ೫. ದ್ಯುಲೋಕ; ೬. ಮರುದ್ಗಣ; ೭. ಸರಸ್ವತೀ;** ಹಾಗೂ **೮. ಅಗ್ನಾಯೀ; ೯. ಇಂದ್ರಾಣೀ ೧೦. ವರುಣಾನೀ** ಎಂಬ ದೇವಪತ್ನಿಯರೂ ಸ್ತುತಿಸಲ್ಪಟ್ಟಿದ್ದಾರೆ. ಹಾಗೆಯೇ ಐವತ್ತೊಂದನೆಯ ಸೂಕ್ತದಲ್ಲಿ– **೧. ಅಗ್ನಿ, ೨. ಅದಿತಿ, ೩. ಅಶ್ವಿನೌ, ೪. ಇಂದ್ರ, ೫. ಇಂದ್ರಾಗ್ನೀ, ೬. ಪೂಷಾ, ೭. ಭಗ, ೮. ಬೃಹಸ್ಪತಿ, ೯. ಮಿತ್ರ. ೧೦. ರುದ್ರ, ೧೧. ವಸು; ೧೨. ವಾಯು, ೧೩. ವಿಶ್ವೇದೇವಾ, ೧೪. ವಿಷ್ಣು ಮತ್ತು ೧೫. ಸೋಮ** ಎಂಬ ನಕ್ಷತ್ರದೇವತೆಗಳೂ **"ರೇವತಿ"** ಎಂಬ ನಕ್ಷತ್ರದ ಹೆಸರೂ **"ಪಥ್ಯಾ"** ಮತ್ತು **"ದ್ಯಾವಾಪೃಥಿವೀ"** ಎಂಬ ದೇವತೆಗಳೂ ಸ್ತುತಿಸಲ್ಪಟ್ಟಿದ್ದಾರೆ. ಮತ್ತು ಈ ಸೂಕ್ತದಲ್ಲಿ ನಾಲ್ವತ್ತಾರನೆಯ ಸೂಕ್ತದಲ್ಲಿ ಇಲ್ಲದ **"ವಸು"** ಮತ್ತು **"ವಿಶ್ವೇದೇವಾ"** ಎಂಬ ಎರಡು ನಕ್ಷತ್ರದೇವತೆಗಳೂ ಸ್ತುತಿಸಲ್ಪಟ್ಟಿದ್ದಾರೆ. ಅದೇ ರೀತಿಯಲ್ಲಿ ಋಗ್ವೇದದ ಇತರ ವಿಶ್ವೇದೇವ ಸೂಕ್ತಗಳಲ್ಲಿ ಹಿಂದೆ ಉದಹರಿಸಿದ ಎರಡು ಸೂಕ್ತಗಳಲ್ಲಿ ಉಲ್ಲೇಖಿಸಲ್ಪಟ್ಟಿರದ ಬೇರೆ ನಕ್ಷತ್ರದೇವತೆಗಳು ಸ್ತುತಿಸಲ್ಪಟ್ಟಿದ್ದಾರೆ. ಅರ್ಥಾತ್ ಋಗ್ವೇದದಲ್ಲಿ ನಕ್ಷತ್ರಗಳೇ ಪರೋಕ್ಷವಾಗಿ ದೇವತೆಗಳ ಹೆಸರುಗಳಿಂದ ಸ್ತುತಿಸಲ್ಪಟ್ಟಿವೆಯೆಂಬುದು ಸಂದೇಹಕ್ಕೆಡೆಯಿಲ್ಲದಂತೆ ಸಿದ್ಧವಾಗುತ್ತದೆ. ಮತ್ತು ಆ ಕಾರಣದಿಂದಲೇ ಋಗ್ವೇದದಲ್ಲಿ ನಕ್ಷತ್ರಗಳ ಮೂಲ ಹೆಸರುಗಳು ಉಲ್ಲೇಖಿಸಲ್ಪಟ್ಟಿಲ್ಲವೆಂದು ತಿಳಿಯಬೇಕಾಗುತ್ತದೆ.

ಸಕಲ ವೈದಿಕ ಸಾಹಿತ್ಯವನ್ನು ವೈಜ್ಞಾನಿಕ ರೀತಿಯಿಂದ ವಿಮರ್ಶಿಸಿದ ತರುವಾಯ, ತಾವು ವೈದಿಕ ಮಂತ್ರಗಳ ಹಾಗೂ ವೈದಿಕ ಸಾಹಿತ್ಯದ ಅರ್ಥವನ್ನು ಭಾರತೀಯ ವಿದ್ವಾಂಸರಿಗಿಂತ ಚೆಲೋ ರೀತಿಯಲ್ಲಿ ವಿವರಿಸಬಲ್ಲೆವೆಂದು ವಾದಿಸಿದ ಪ್ರೊ. ಮೆಕ್ಸಮುಲ್ಲರರಾಗಲೀ, ಡಾ. ವೇಬರರಾಗಲೀ, ಇತರ ಪಾಶ್ಚಾತ್ಯ ವಿದ್ವಾಂಸರಾಗಲೀ, ವೇದಾಂಗ ಜ್ಯೋತಿಷದಲ್ಲಿ ಉಲ್ಲೇಖಿಸಲ್ಪಟ್ಟಿರುವ ನಕ್ಷತ್ರದೇವತೆಗಳೇ ಋಗ್ವೇದದ ಸೂಕ್ತಗಳಲ್ಲಿ ಸ್ತುತಿಸಲ್ಪಟ್ಟಿವೆಯೆಂಬುದನ್ನೂ, ನಕ್ಷತ್ರಗಳಿಗೂ ಋಗ್ವೇದದೊಳಗಿನ ದೇವತೆಗಳಿಗೂ ನೇರಾದ ಸಂಬಂಧವಿದೆಯೆಂಬುದನ್ನೂ, ವೇದಾಂಗ ಜ್ಯೋತಿಷಕ್ಕೂ ವೈದಿಕ ಯಜ್ಞಗಳಿಗೂ ನಿಕಟ ಸಂಬಂಧವಿದೆಯೆಂಬುದನ್ನೂ ಕಂಡು

ಕೊಳ್ಳಲು ಶಕ್ತರಾಗಿಲ್ಲ. ಅಂದರೆ ಅವರು ಆಚಾರ್ಯ ಪಾಣಿನಿಯ ಶಿಕ್ಷಾಶಾಸ್ತ್ರದಲ್ಲಿ **"ಜ್ಯೋತಿಷಾಮಯನಂ ಚಕ್ಷುಃ"** ಅಂದರೆ "ಜ್ಯೋತಿಗಳ ಚಲನೆಯು" ಅಥವಾ ಜ್ಯೋತಿಷ ಶಾಸ್ತ್ರದ ಜ್ಞಾನವು ವೇದಗಳ ಕಣ್ಣು ಎಂದು ಹೇಳಿದುದನ್ನು ಲಕ್ಷಿಸಲೇ ಇಲ್ಲವೆನ್ನಬೇಕಾಗುತ್ತದೆ, ಏಕೆಂದರೆ "ವೇದಾಂಗ ಜ್ಯೋತಿಷದಲ್ಲಿ ನಕ್ಷತ್ರಗಳ ಹೆಸರುಗಳಿಗೆ ಪ್ರತಿಯಾಗಿ ದೇವತೆಗಳ ಹೆಸರುಗಳನ್ನು ಹೇಳಿದುದರಲ್ಲಿ ಅಡಗಿರುವ ರಹಸ್ಯವನ್ನು ಅರಿತುಕೊಳ್ಳಲಾರದವನು ಋಗ್ವೇದ ಮಂತ್ರಗಳ ಅರ್ಥಗಳನ್ನು ಕಾಣಲಾರದ ಕುರುಡನಂತಿರುತ್ತಾನೆ" ಎಂಬುದೇ ಆ ವಾಕ್ಯದ ಧ್ವನಿತಾರ್ಥವಾಗಿದೆ.

ಡಾ। ವೇಬರರು ವೇದಾಂಗ ಜ್ಯೋತಿಷದೊಳಗಿನ ಯಾವ (೧೪ನೆಯ) ಶ್ಲೋಕದ ಆದಿಯಲ್ಲಿರುವ **"ಜೌ"** ಎಂಬ ಅಕ್ಷರವನ್ನು ನೋಡಿ ಅದನ್ನು ಅಶ್ವಿನೀ ನಕ್ಷತ್ರದಿಂದ ಪ್ರಾರಂಭವಾಗುವ ಅರ್ವಾಚೀನ ನಕ್ಷತ್ರಮಾಲೆಯೆಂದು ಗ್ರಹಿಸಿದ್ದರೋ, ಅದು ವಾಸ್ತವವಾಗಿ ಸೂರ್ಯ–ಚಂದ್ರರ ಪರ್ವಗಳು ಯಾವ ನಕ್ಷತ್ರದ ತರುವಾಯ ಯಾವ ನಕ್ಷತ್ರದಲ್ಲಿ ಬರುವುವೆಂಬುದನ್ನು ಸೂಚಿಸುವ ಪಟ್ಟಿಯಾಗಿದೆಯೇ ಹೊರತು ನಕ್ಷತ್ರಗಳ ಅನುಕ್ರಮವಾದ ಹೆಸರುಗಳಿಗಿರುವ ಪಟ್ಟಿಯಾಗಿಲ್ಲ, ಆ ಶ್ಲೋಕದಲ್ಲಿ ನಕ್ಷತ್ರಗಳ ಪೂರ್ಣ ಹೆಸರುಗಳು ಬಂದಿರದೇ ಕೆಲವು ಹೆಸರುಗಳೊಳಗಿನ ಯಾವುದಾದರೊಂದು ಅಕ್ಷರವಾಗಲೀ ನಕ್ಷತ್ರದೇವತೆಗಳ ಹೆಸರುಗಳೊಳಗಿನ ಯಾವುದಾದರೊಂದು ಅಕ್ಷರವಾಗಲೀ ಬಂದಿದೆ. ಅದರ ಸರಿಯಾದ ವಿವರವು ಮುಂದಿನಂತಿದೆ–

೧. ಜೌ = ಅಶ್ವಯುಜೌ ೨. ದ್ರಾ = ಆದ್ರಾ ೩. ಗಃ = ಭಗಃ = ಪೂರ್ವೇಫಲ್ಗುನೀಃ ೪. ಖೇ = ವಿಶಾಖೇ ೫. ಶ್ವೇ = ವಿಶ್ವೇದೇವಾಃ = ಉತ್ತರಾ ಅಷಾಢಾ ೬. ಹಿಃ = ಅಹಿರ್ಬುಧ್ನ್ಯಃ = ಉತ್ತರಾಃ ಪ್ರೋಷ್ಠಪದಾಃ; ೭. ರೋ = ರೋಹಿಣೀ; ೮. ಷಾ = ಆಶ್ರೇಷಾ; ೯. ಚಿತ್ = ಚಿತ್ರಾ; ೧೦. ಮೂ = ಮೂಲ; ೧೧. ಷಕ್ = ಶತಭಿಷಕ್; ೧೨. ಣ್ಯ = ಭರಣ್ಯಃ; ೧೩. ಸೂ = ಪುನರ್ವಸೂ; ; ೧೪. ಮಾ = ಅರ್ಯಮಾ = ಉತ್ತರಾಃ ಫಲ್ಗುನೀಃ; ೧೫. ಧಾ = ಅನೂರಾಧಾ; ೧೬. ನಃ = ಣಃ = ಶ್ರೋಣಃ; ೧೭. ರೇ = ರೇವತಿ; ೧೮. ಮೃ = ಮೃಗಶಿರಃ; ೧೯. ಘಾ = ಮಘಾ; ೨೦. ಸ್ವಾ = ಸ್ವಾತೀ; ೨೧. ಪಃ = ಆಪಃ = ಪೂರ್ವಾ ಅಷಾಢಾ; ೨೨. ಅಜಃ = ಅಜಏಕಪಾತ್ = ಪೂರ್ವೆಪ್ರೋಷ್ಠಪದಾ; ೨೩. ಕೃ = ಕೃತ್ತಿಕಾಃ; ೨೪. ಷ್ಯ = ಪುಷ್ಯಃ; ೨೫. ಹ = ಹಸ್ತ. ೨೬. ಜೇ = ಜ್ಯೇಷ್ಠಾ; ೨೭. ಷ್ಠಾ = ಶ್ರವಿಷ್ಠಾ.

ಹಿಂದಿನ ಪಟ್ಟಿಯಲ್ಲಿ ಒಂದು ನಕ್ಷತ್ರದ ತರುವಾಯದ ಮತ್ತೊಂದು ನಕ್ಷತ್ರವು ಮೊದಲನೆಯ ನಕ್ಷತ್ರದಿಂದ ಆರನೆಯದಾಗಿದೆ. ಅಂಥ ಪರ್ವಕ್ರಮವು ವೇದಾಂಗ ಜ್ಯೋತಿಷದ ವೈಶಿಷ್ಟ್ಯವಾಗಿದೆ.

ಹಾಗೆಯೇ ಡಾ। ವೇಬರರು ಹೇಳಿರುವಂತೆ ವೇದಾಂಗ ಜ್ಯೋತಿಷವಲ್ಲಿ "ರಾಶಿ" ಎಂಬ ಶಬ್ದವು ಕ್ರಾಂತಿವೃತ್ತದ ವಿಭಾಗ ಅಥವಾ ಸೌರಮಾಸ ಎಂಬರ್ಥದಲ್ಲಿ ಪ್ರಯೋಗಿಸಲ್ಪಡಲೇ ಇಲ್ಲ. ರಾಶಿ ಶಬ್ದವು ಋಗ್ವೇದೀಯ ಜ್ಯೋತಿಷದ ನಾಲ್ಕನೆಯ ಮತ್ತು ಇಪ್ಪತ್ತನಾಲ್ಕನೆಯ ಶ್ಲೋಕಗಳಲ್ಲಿಯೂ ಯಜುರ್ವೇದೀಯ ಜ್ಯೋತಿಷದ ಇಪ್ಪತ್ತೊಂಭತ್ತನೆಯ ಶ್ಲೋಕದಲ್ಲಿಯೂ ಬಂದಿದೆ. ಮತ್ತು ಆ ಮೂರು ಸ್ಥಳಗಳಲ್ಲಿಯೂ ರಾಶಿ ಶಬ್ದವು "ಸಂಖ್ಯೆ" ಅಥವಾ ಮೊತ್ತ ಎಂಬರ್ಥದಲ್ಲಿಯೇ ಪ್ರಯೋಗಿಸಲ್ಪಟ್ಟಿದೆ. ಆದುದರಿಂದ ಡಾ. ವೇಬರರು ವೇದಾಂಗ ಜ್ಯೋತಿಷದೊಳಗಿನ ಶ್ಲೋಕಗಳನ್ನು ಲಕ್ಷಪೂರ್ವಕ ಓದದೆನೇ ತನ್ನ ಅಭಿಪ್ರಾಯವನ್ನು ವ್ಯಕ್ತಗೊಳಿಸಿದ್ದರೆನ್ನಬೇಕಾಗುತ್ತದೆ. ಪರ್ವ ನಕ್ಷತ್ರಗಳ ಪಟ್ಟಿಯಲ್ಲಿ "ಜೌ" ಎಂಬುದು ಆದಿಯಲ್ಲಿರುವುದರ ಕಾರಣವನ್ನು ಮೊದಲೇ ವಿವರಿಸಲಾಗಿದೆ.

ಇನ್ನು ಡಾ. ವೇಬರರು ವೇದಾಂಗ ಜ್ಯೋತಿಷವು ಶಕದ ನಾಲ್ಕನೆಯ ಶತಮಾನದಲ್ಲಿ ರಚಿಸಲ್ಪಟ್ಟುದಾಗಿರಬೇಕೆಂದು ಹೇಳಿದುದಕ್ಕೆ ವಿರುದ್ಧವಾದ ಒಂದು ಅತ್ಯಂತ ದೃಢವಾದ ಪ್ರಮಾಣವು ವೇದಾಂಗ ಜ್ಯೋತಿಷದ ಐದನೆಯ ಮತ್ತು ಆರನೆಯ ಶ್ಲೋಕಗಳಲ್ಲಿ ಸೂರ್ಯನ ಅಯನಗಳು ಪ್ರಾರಂಭವಾಗುವ ನಕ್ಷತ್ರಗಳ ರೂಪದಿಂದ ಬಂದಿದೆ. ಹಾಗೆಯೇ ಬೇರೊಂದು ಪ್ರಮಾಣವು ಕೋಲ್ ಬ್ರೂಕ್ ಅವರು ಮತ್ತು ಪ್ರೊ. ಮೆಕ್ಸ್ ಮುಲ್ಲರ್ ಅವರು ಉಪಯೋಗಿಸಿದ ವೇದಾಂಗ ಜ್ಯೋತಿಷದ ಹಸ್ತ ಲಿಖಿತ ಪ್ರತಿಯಲ್ಲಿ **"ಇತಿ ಶೇಷನಾಗಕೃತಂ ಜ್ಯೋತಿಃ ಶಾಸ್ತ್ರ ಭಾಷ್ಯಂ ಸಮಾಪ್ತಮ್"** ಎಂಬ ವಾಕ್ಯದ ರೂಪದಿಂದ ಬಂದಿದೆ. ಆ ಸಮಾಪ್ತಿ ವಾಕ್ಯದ ಸಂಬಂಧವಲ್ಲಿ ಕೋಲ್ ಬ್ರೂಕ್ ಅವರು ಆ ಭಾಷ್ಯದ ವಾಸ್ತವಿಕ ಕರ್ತೃವು ಯಾರೆಂದು ಗೊತ್ತಾಗಿಲ್ಲದುದರಿಂದ ಅದರ ಕರ್ತೃತ್ವವು ಯಾವನೋ ಕಲ್ಪಿತ ಶೇಷನಾಗನಿಗೆ ಕೊಡಲ್ಪಟ್ಟಿದೆ ಎಂದಿದ್ದಾರೆ. ಆದರೆ ಪ್ರೊ. ಮೆಕ್ಸ್‌ಮುಲ್ಲರರು ಋಗ್ವೇದ ಸಂಹಿತೆಯ ನಾಲ್ಕನೆಯ ಭಾಗಕ್ಕೆ ಬರೆದ ಪ್ರಸ್ತಾವನೆಯಲ್ಲಿ ಕೋಲ್‌ಬ್ರೂಕರ ಆ ಅಭಿಪ್ರಾಯವು ಸರಿಯಲ್ಲವೆಂದೂ, ಆ ಸಮಾಪ್ತಿ ವಾಕ್ಯವು **"ಇತಿ ಶೇಷನಾಗ ಕೃತ ಜ್ಯೋತಿಷ ಶಾಸ್ತ್ರಭಾಷ್ಯಂ ಸಮಾಪ್ತಮ್"** ಎಂದಾಗ ಬೇಕೆಂದೂ ಒಂದು ತಿದ್ದುಪಡಿಯನ್ನು ಸೂಚಿಸಿದ್ದಾರಲ್ಲದೇ ಶೇಷನಾಗ ಎಂಬುದು ಪತಂಜಲಿಯ ಬೇರೊಂದು ಹೆಸರಾಗಿರುವುದರಿಂದ ವೇದಾಂಗ ಜ್ಯೋತಿಷದ ಕರ್ತೃವು ಪತಂಜಲಿಯೆಂದೂ, ಅದರಲ್ಲಿ **"ಸೋಮಾಕರೋಽಹಂ ವಿವೃಣೋಮಿಶಕ್ತ್ಯಾ"** ಎಂದು ಹೇಳಿರುವುದರಿಂದ ಸೋಮಾಕರನು ವೇದಾಂಗ ಜ್ಯೋತಿಷದ ಭಾಷ್ಯಕಾರನೆಂದೂ – ತಾನು ನಂಬುವೆನಾಗಿ ಹೇಳಿದ್ದಾರೆ. ಆದರೆ ಮೆಕ್ಸ್‌ಮುಲ್ಲರರ ಆ ನಂಬಿಕೆಯು ಆಧಾರ ರಹಿತವೂ ಪ್ರಮಾಣ ವಿರುದ್ಧವೂ ಆಗಿರುವುದರಿಂದ ಅವರ ಆ ಬಗೆಯ ವಾದವು ಸ್ವೀಕಾರ ಯೋಗ್ಯವಲ್ಲವೆನ್ನ ಬೇಕಾಗಿದೆ. ಏಕೆಂದರೆ–ಮೊದಲನೆಯದಾಗಿ ವೇದಾಂಗ ಜ್ಯೋತಿಷದ ಎರಡನೆಯ ಮತ್ತು ಇಪ್ಪತ್ತೊಂಭತ್ತನೆಯ ಶ್ಲೋಕಗಳಿಂದ ವೇದಾಂಗ

ಜ್ಯೋತಿಷದ ಕರ್ತೃವು ಲಗಧನಾಗಿದ್ದನೆಂದು ಸ್ಪಷ್ಟವಾಗಿ ಸಿದ್ಧವಾಗುತ್ತದೆ. ಪರಂತು ಮೆಕ್ಸ್‌ಮುಲ್ಲರರು "ಲಗಧ" ಶಬ್ದಕ್ಕೂ ಒಂದು ತಿದ್ದುಪಡಿಯನ್ನು ಸೂಚಿಸಿದ್ದಾರೆ. ಅದೆಂದರೆ–ಹಿಂದೆ ಮಗಧ ದೇಶವು ಜ್ಯೋತಿಷದ ಜ್ಞಾನದಲ್ಲಿ ಬಹಳ ಹೆಸರಾಗಿದ್ದಿತಾದುದರಿಂದ ಆ ಶ್ಲೋಕದೊಳಗಿನ "ಲಗಧ" ಶಬ್ದವು "ಮಾಗಧ" ಎಂದಾಗಬೇಕು - ಅಂದಿದ್ದಾರೆ. ಅರ್ಥಾತ್ ಮೆಕ್ಸ್‌ಮುಲ್ಲರರು ವೇದಾಂಗ ಜ್ಯೋತಿಷವು ಶಕಪೂರ್ವ ಮೂರನೆಯ ಶತಮಾನಕ್ಕಿಂತ ಪ್ರಾಚೀನವಲ್ಲವೆಂಬ ತನ್ನ ವಾದವನ್ನು ಸರಿಯೆಂದು ಸಾಧಿಸುವ ಸಲುವಾಗಿ ವೇದಾಂಗ ಜ್ಯೋತಿಷದೊಳಗಿನ ಶ್ಲೋಕಗಳಲ್ಲಿ ಪರಿವರ್ತನಗಳಾಗ ಬೇಕೆಂದಿದ್ದಾರೆಂಬುದರಲ್ಲಿ ಸಂದೇಹವಿಲ್ಲ. ವಾಸ್ತವವಾಗಿ ಸೋಮಾಕರನು ವೇದಾಂಗ ಜ್ಯೋತಿಷದ ವಿವರಣಕಾರನಾಗಿದ್ದನೇ ಹೊರತು ಭಾಷ್ಯಕಾರನಲ್ಲ. ಮತ್ತು ಶೇಷನಾಗ ಎಂಬವನು ಕೋಲ್‌ಬ್ರೂಕ್ ಅವರು ಭಾವಿಸಿರುವಂತೆ ಕಲ್ಪಿತ ವ್ಯಕ್ತಿಯಾಗಿರದೇ ವಾಸ್ತವಿಕ ಐತಿಹಾಸಿಕ ವ್ಯಕ್ತಿಯಾಗಿದ್ದಾನೆ. ಹಾಗೂ ಶೇಷನಾಗ ಎಂಬುದು ಮೆಕ್ಸ್‌ಮುಲ್ಲರರು ಹೇಳಿದಂತೆ ಪತಂಜಲಿಯ ಹೆಸರೆಂದು ಒಪ್ಪಲಾಗುವುದಿಲ್ಲ. ಕೋಲ್‌ಬ್ರೂಕ್ ಮತ್ತು ಮೆಕ್ಸ್‌ಮುಲ್ಲರ್ ಅವರ ಕಾಲದಲ್ಲಿ ಭಾರತ ವರ್ಷದ ಪ್ರಾಚೀನ ಇತಿಹಾಸದಲ್ಲಿ ಹೆಚ್ಚಿನ ಶೋಧಗಳಾಗಿರಲಿಲ್ಲ. ಅವರ ತರುವಾಯ ಭಾರತೀಯ ಸಂಶೋಧಕರಲ್ಲೊಬ್ಬರಾಗಿದ್ದ ಶ್ರೀಮಾನ್ ಕಾಶೀಪ್ರಸಾದ ಜಾಯಸ್ವಾಲ್ ಎಂಬವರ ಅನ್ವೇಷಣದ ಫಲವಾಗಿ ಶೇಷನಾಗ ಎಂಬುದು ವಿದಿಶೆಯಲ್ಲಿ ಆಳಿದ ನಾಗ ವಂಶದ ಅರಸರಲ್ಲಿ ಮೊದಲನೆಯ ಅರಸನ ಹೆಸರಾಗಿದ್ದಿತೆಂದೂ ಅವನ ಆಳ್ವಿಕೆಯ ಕಾಲವು ಶಕಪೂರ್ವ ೧೮೮ರಿಂದ ೧೬೮ನೆಯ ವರ್ಷಗಳೆಂದೂ ಸಿದ್ಧವಾಗಿದೆ.[1] ಅರ್ಥಾತ್ ಲಗಧನ ವೇದಾಂಗ ಜ್ಯೋತಿಷಕ್ಕೆ ಭಾಷ್ಯ ಬರೆದ ಶೇಷನಾಗನು ಕಲ್ಪಿತ ವ್ಯಕ್ತಿಯಾಗಿರದೇ ವಿದಿಶೆಯ ಅರಸನಾಗಿ ಆಳಿದ ವಾಸ್ತವಿಕ ವ್ಯಕ್ತಿಯೆಂಬುದರಲ್ಲಿ ಸಂದೇಹಕ್ಕೆಡೆಯೇ ಇಲ್ಲ.

ಇನ್ನು ಡಾ। ವೇಬರರು ಪ್ರಾಚೀನ ಭಾರತೀಯರಿಗೆ ಚಾಂದ್ರ ನಕ್ಷತ್ರಗಳ ಜ್ಞಾನವಿರಲಿಲ್ಲವೆಂಬ ತಮ್ಮ ಗ್ರಹಿಕೆಯನ್ನು ಸರಿಯೆಂದು ಸಾಧಿಸಲು ಮುಂದೆ ತಂದ ಬೇರೆ ಎರಡು ಕಲ್ಪನೆಗಳನ್ನು ಅಂದರೆ– ೧. ನಕ್ಷತ್ರವೇಧಗಳ ಮಾತೃದೇಶವು ಬೆಬಿಲೋನವಾಗಿತ್ತು. ಮತ್ತು ಭಾರತ ವರ್ಷವನ್ನು ಪ್ರವೇಶಿಸಿದ ಹಿಂದುಗಳು– ಬೆಬಿಲೋನಿಯರಿಂದ ಪಡೆದ ಕೃತ್ತಿಕೆಯಿಂದ ಪ್ರಾರಂಭವಾಗುವ ನಕ್ಷತ್ರಮಾಲೆಯ ಜ್ಞಾನವನ್ನು ತಮ್ಮೊಂದಿಗೆ ತಂದಿದ್ದರು. ಇಲ್ಲವೇ– ೨. ತರುವಾಯದ ಕಾಲದಲ್ಲಿ ಪಂಜಾಬದ ಜನರೊಂದಿಗೆ ವ್ಯಾಪಾರೀ ಸಂಬಂಧವನ್ನು ಸ್ಥಾಪಿಸಿದ ಫಿನಿಶ್ಯನ್ ಜನರಿಂದ ಹಿಂದುಗಳು ನಕ್ಷತ್ರಗಳ ಜ್ಞಾನವನ್ನು ಪಡೆದಿರಬಹುದು ಎಂಬವುಗಳನ್ನು ವಿಮರ್ಶಿಸಬೇಕಾಗಿದೆ.

---

[1] Ancient India by V. D. Mahajan M. A. page 366.

ವೊದಲನೆಯದಾಗಿ–ಡಾ। ವೇಬರರು ಭಾರತೀಯರು ಬೆಬಿಲೋನಿಯರಿಂದ ಕೃತ್ತಿಕೆಯಿಂದ ಪ್ರಾರಂಭವಾಗುವ ನಕ್ಷತ್ರಮಾಲೆಯ ಜ್ಞಾನವನ್ನು ಪಡೆದಿದ್ದರೆನ್ನುವುದರೊಂದಿಗೆ,– ಕೃತ್ತಿಕೆಯಿಂದ ನಕ್ಷತ್ರಗಳ ಗಣನೆಯು ಪ್ರಾರಂಭವಾದುದರ ಕಾರಣವು ಆ ಕಾಲದಲ್ಲಿ ವಸಂತ ಸಂಪಾತವು ಕೃತ್ತಿಕೆಯಲ್ಲಿದ್ದುದೇ ಆಗಿದ್ದಿತೆಂದು ಮತ್ತು ಆ ಕಾಲವು ಶಕಪೂರ್ವ ೨೫೦೦ ವರ್ಷಗಳೆಂದು ಹಾಗೂ ವೇದಾಂಗ ಜ್ಯೋತಿಷದೊಳಗಿನ ಅಯನಗಳ ಪ್ರಾರಂಭ ಸ್ಥಾನಗಳ ಆಧಾರದಿಂದ ಆ ಕಾಲದಲ್ಲಿ ನಕ್ಷತ್ರ ಮಾಲೆಯು ಭರಣಿಯಿಂದ ಪ್ರಾರಂಭವಾಗುತ್ತಿದ್ದಿತೆಂದು ಮತ್ತು ಆ ಕಾಲವು ಶಕಪೂರ್ವ ೧೯೦೦ ವರ್ಷಗಳೆಂದು ಸ್ಪಷ್ಟಪಡಿಸಿದ್ದಾರೆ. ಮತ್ತು ಅವರು ಆ ಕಾಲದಲ್ಲಿ ಪ್ರಕಟಿಸಿದ ಹಲವು ಲೇಖಗಳಲ್ಲಿಯೂ ಅದನ್ನು ಒಪ್ಪಿಕೊಂಡಿದ್ದಾರೆ. ಅರ್ಥಾತ್ ಅವರು ಆ ಮೂಲಕ ಭಾರತೀಯರು ಕೃತ್ತಿಕೆಯಿಂದ ಪ್ರಾರಂಭವಾಗಿದ್ದ ನಕ್ಷತ್ರಮಾಲೆಯನ್ನು – ಒಂಭೈನೂರು ವರ್ಷಗಳ ತರುವಾಯ ತಮ್ಮ ಪ್ರತ್ಯಕ್ಷ ನಿರೀಕ್ಷಣದ ಬಲದಿಂದ – ಪರಿವರ್ತಿಸಿ ಭರಣಿಯಿಂದ ನಕ್ಷತ್ರಗಳ ಗಣನೆಯನ್ನು ಪ್ರಾರಂಭಿಸಿದ್ದರೆಂದು ಪರೋಕ್ಷವಾಗಿ ಒಪ್ಪಿಕೊಂಡಿದ್ದಾರೆ. ಹಾಗಾಗಿ ಭಾರತೀಯರು ನಕ್ಷತ್ರಗಳ ಸ್ಥಿತಿ-ಗತಿಗಳನ್ನು ವೇಧಯಂತ್ರಗಳ ಮೂಲಕ ನಿರೀಕ್ಷಿಸುತ್ತಿದ್ದರೆಂದು ಮತ್ತು ಭಾರತೀಯರಿಗೆ ಸಂಪಾತ ಚಲನದ ಜ್ಞಾನವಿದ್ದಿತೆಂದು ಅವರು ಒಪ್ಪಿಕೊಂಡಂತಾಗಿದೆ. ವಾಸ್ತವವಾಗಿ ಭಾರತೀಯರು ನಕ್ಷತ್ರಗಳ ಸ್ಥಿತಿಗತಿಗಳನ್ನು ಪ್ರತ್ಯಕ್ಷವಾಗಿ ವೇಧಯಂತ್ರಗಳ ಮೂಲಕ ನಿರೀಕ್ಷಿಸುತ್ತಿದ್ದಿಲ್ಲವಾದರೆ ಮತ್ತು ಅವರಿಗೆ ಸಂಪಾತಚಲನದ ಜ್ಞಾನವಿದ್ದಿಲ್ಲವಾದರೆ ಅವರು ನಕ್ಷತ್ರಮಾಲೆಯ ಪ್ರಾರಂಭಿಕ ನಕ್ಷತ್ರವನ್ನು ಕಾಲ-ಕಾಲಕ್ಕೆ ಪರಿವರ್ತಿಸುತ್ತ ಸಾಗುತ್ತಿದ್ದಿಲ್ಲವೆಂಬುದು ಅತ್ಯಂತ ಸ್ಪಷ್ಟವಿದೆ. ಅಲ್ಲದೇ ಭಾರತೀಯರು ವೇದಾಂಗ ಜ್ಯೋತಿಷದಲ್ಲಿ ಭರಣೀ ನಕ್ಷತ್ರದಿಂದ ಪ್ರಾರಂಭವಾಗಿದ್ದ ನಕ್ಷತ್ರಮಾಲೆಯನ್ನು ತರುವಾಯದ ಕಾಲದಲ್ಲಿ ಪರಿವರ್ತಿಸಿ ಅಶ್ವಿನೀ ನಕ್ಷತ್ರದಿಂದ ಪ್ರಾರಂಭಿಸಿದ ಪ್ರಮಾಣವು ನಮ್ಮಲ್ಲಿ ಇಂದಿಗೂ ಉಳಿದುಕೊಂಡಿದೆ. ಆ ರೀತಿಯಲ್ಲಿ ಭಾರತೀಯರು ನಕ್ಷತ್ರಮಾಲೆಯ ಪ್ರಾರಂಭಿಕ ನಕ್ಷತ್ರವನ್ನು ಪರಿವರ್ತಿಸುತ್ತ ಸಾಗಿದ ಪ್ರಮಾಣವು ಅವರು ನಕ್ಷತ್ರಗಳ ಸ್ಥಿತಿಗತಿಗಳನ್ನು ಪ್ರತ್ಯಕ್ಷವಾಗಿ ನಿರೀಕ್ಷಿಸುತ್ತಿದ್ದರೆಂಬುದನ್ನು ಮತ್ತು ಅವರು ನಕ್ಷತ್ರಗಳ ಜ್ಞಾನಕ್ಕಾಗಿ ಬೆಬಿಲೋನೀ ಜನರನ್ನು ಅವಲಂಬಿಸಿರಲಿಲ್ಲವೆಂಬುದನ್ನು ಸಂದೇಹಕ್ಕೆಡೆಯಿಲ್ಲದಂತೆ ಸಿದ್ಧಪಡಿಸುತ್ತದೆ. ಅಷ್ಟುಮಾತ್ರವಲ್ಲದೇ ಪ್ರಾಚೀನ ಕಾಲದಿಂದ ನಕ್ಷತ್ರ ಮಾಲೆಯು ಮೊದಲಿನ ನಕ್ಷತ್ರವನ್ನು ಸಂಪಾತ ಚಲನಕ್ಕನುಸಾರವಾಗಿ ಕಾಲಕಾಲಕ್ಕೆ ಪರಿವರ್ತಿಸುತ್ತ ಸಾಗಿದ ಉಲ್ಲೇಖಗಳು ಅಥವಾ ಪ್ರಮಾಣಗಳು ಭಾರತೀಯರ ವೈದಿಕ ಗ್ರಂಥಗಳಲ್ಲಿ ಹೊರತು ಇತರ ಜನಾಂಗಗಳ ಗ್ರಂಥಗಳಲ್ಲಿ ಇವೆಯೆಂದು ಈ ತನಕ ಸಿದ್ಧವಾಗಿಲ್ಲ. ಆದುದರಿಂದ ನಕ್ಷತ್ರಗಳ ಜ್ಞಾನವು ಅಥವಾ ನಕ್ಷತ್ರಗಳಿಗನುಸಾರವಾದ ಜ್ಯೋತಿಷ ಶಾಸ್ತ್ರವು ವೈದಿಕ ಜನರ ಆವಿಷ್ಕಾರವಾಗಿದ್ದಿತೆಂಬುದರಲ್ಲಿ ಸಂದೇಹವುಳಿಯುವುದಿಲ್ಲ.

ಎರಡನೆಯದಾಗಿ—ಭಾರತೀಯರು ಬೆಬಿಲೋನಿಯರಿಂದ ನಕ್ಷತ್ರಗಳ ಜ್ಞಾನವನ್ನು ಪಡೆದಿದ್ದರೆಂದು ವಾದಿಸಿದ ಯಾವನೊಬ್ಬ ಪಾಶ್ಚಾತ್ಯ ವಿದ್ವಾಂಸನಾದರೂ ಬೆಬಿಲೋನೀ ಜನರಲ್ಲಿ ಇಪ್ಪತ್ತೇಳು ನಕ್ಷತ್ರಗಳ ಗಣನಾ ಪದ್ಧತಿಯು ಪ್ರಚಲಿತವಿದ್ದಿತೆಂದು ಸಿದ್ಧಪಡಿಸಲು ಯಾವುದೊಂದು ಲಿಖಿತ ಅಥವಾ ದೃಢವಾದ ಪ್ರಮಾಣವನ್ನು ಉದಹರಿಸಿಲ್ಲ. ಪಾಶ್ಚಾತ್ಯ ವಿದ್ವಾಂಸರು ಬೆಬಿಲೋನೀ ಉಪಪತ್ತಿಯನ್ನು ಮುಂದೆ ತಂದಿದ್ದ ಕಾಲದಲ್ಲಿ ಭಾರತೀಯ ವಿದ್ವಾಂಸರಿಗೆ ಬೆಬಿಲೋನಿಯಾದ ವಾಸ್ತವಿಕ ಇತಿಹಾಸದ ಪರಿಚಯವಿರಲಿಲ್ಲ, ಈಗಲಾದರೋ ಬೆಬಿಲೋನಿಯಾದಲ್ಲಿ ನಡೆಸಿದ ಅಗೆತಗಳಲ್ಲಿ ಬೆಳಕಿಗೆ ಬಂದ ಸಾವಿರಾರು ಲಿಖಿತ ಪಟ್ಟಿಕೆಗಳಿಂದ ಭಾರತೀಯರಿಗೆ ಬೆಬಿಲೋನಿಯಾದ ಇತಿಹಾಸಕ್ಕೆ ಸಂಬಂಧಪಟ್ಟ ಹಲವು ವಿಷಯಗಳು ತಿಳಿದು ಬಂದಿವೆ. ಮತ್ತು ಆ ಪಟ್ಟಿಕೆಗಳಲ್ಲಿ ಗ್ರಹಗಳಿಗೆ ಸಂಬಂಧಪಟ್ಟ ಹಲವು ಉಲೇಖಗಳಿದ್ದರೂ ಇಪ್ಪತ್ತೇಳು ಚಾಂದ್ರನಕ್ಷತ್ರಗಳ ಉಲ್ಲೇಖಗಳಿಲ್ಲವೆಂದು ಗೊತ್ತಾಗಿದೆ.[1] ಮತ್ತು ಆದರಿಂದಾಗಿ ಚಾಂದ್ರ ನಕ್ಷತ್ರಗಳನ್ನು ಕಂಡುಹಿಡಿದವರು ಬೆಬಿಲೋನೀಯರಾಗಿದ್ದರು ಹಾಗೂ ಭಾರತೀಯರು ಅವರಿಂದ ಚಾಂದ್ರ ನಕ್ಷತ್ರಗಳನ್ನು ಪಡೆದಿದ್ದರು ಎಂಬ ಪಾಶ್ಚಾತ್ಯ ವಿದ್ವಾಂಸರ ಕಲ್ಪನೆಗೆ ಬುಡವೇ ಇರಲಿಲ್ಲವೆಂದು ಸಿದ್ಧವಾಗಿದೆ. ಆದುದರಿಂದ ಚಾಂದ್ರ ನಕ್ಷತ್ರಗಳ ಗಣನಾ ಪದ್ಧತಿಯು ವೈದಿಕ ಜನರಿಗೆ ಸೇರಿದುದೆಂದು ಒಪ್ಪಲೇ ಬೇಕಾಗಿದೆ.[2]

ಮೂರನೆಯದಾಗಿ—ಭಾರತೀಯರು ಫಿನಿಶ್ಯನ್ ಜನರ ಸಂಪರ್ಕದಿಂದಾಗಿ ನಕ್ಷತ್ರಗಳ ಜ್ಞಾನವನ್ನು ಪಡೆದಿರಬಹುದೆಂಬು ಡಾ। ವೇಬರರು ಅನುಮಾನಿಸಿದಂತೆಯೇ ಬೇರೆ ಕೆಲವು ಪಾಶ್ಚಾತ್ಯ ವಿದ್ವಾಂಸರು ಫಿನಿಶ್ಯನ್ ಜನರಿಂದ ಭಾರತೀಯರು ಲಿಪಿಯನ್ನು ಕಲಿತರೆಂದು ಹೇಳಿದುದೂ ಇದೆ. ಆದರೆ ಡಾ। ವೇಬರರಾಗಲೀ, ಇತರ

---

1. There has been a good deal of controversy regarding the place of origin of the lumar zodiac. Many savants were inclined to ascribe the origin of the 27 nakshatra system to ancient Babylon, like all other early astronomical discoveries. But as far as the authors of this book are aware there is no positive evidence in favour of this view. Thousands of clay tablets containing astronomical data going back to 2000 B. C., and extending up to the first century A. D. have been obtained but none of them are known to have any reference to 27 or 28 lunar mansions. Report of the Calendar Reform Committee. Government of India 1955. page 183.

2. ಭಾರತೀಯ ಜ್ಯೋತಿಷ ಶಾಸ್ತ್ರ ಎಂಬ ಮರಾಠಿ ಗ್ರಂಥದ ೧೩೭ನೆಯ, ೪೬೩ನೆಯ ಮತ್ತು ೪೯೩ನೆಯ ಪುಟಗಳನ್ನು ನೋಡಿರಿ.

ಪಾಶ್ಚಾತ್ಯ ವಿದ್ವಾಂಸರಾಗಲೀ ಫಿನಿಶ್ಯನ್ ಜನರು ಭಾರತ ವರ್ಷಕ್ಕೆ ಬಂದ ಕಾಲ ವಾವುದು? ಅವರು ತಂಗಿದ ಸ್ಥಳವಾವುದು? ಮುಂತಾದ ಮುಖ್ಯ ವಿಷಯಗಳನ್ನು ಪ್ರಮಾಣ ಸಹಿತವಾಗಿ ಸಿದ್ಧಪಡಿಸಲು ಶಕ್ತರಾಗಿಲ್ಲ. ಅಂದರೆ ಅವರ ವಾದಗಳೆಲ್ಲವೂ ಬರಿಯ ಊಹಾಪೋಹಗಳೇ ಹೊರತು ಪ್ರಮಾಣಸಂಗತವಾದವುಗಳಲ್ಲ. ಹೆಚ್ಚಿನ ಪಾಶ್ಚಾತ್ಯ ವಿದ್ವಾಂಸರು ಫಿನಿಶ್ಯನ್ ಜನರನ್ನು ಸೆಮಿಟಿಕ್ ವರ್ಗದವರೆಂದು ಹೇಳಿದ್ದರೂ "Indo-Sumerian Seals Deciphered" ಎಂಬ ಪುಸ್ತಕವನ್ನು ಬರೆದ ಎಲ್. ಎ. ವಾಡೆಲ್ ಅವರು ಫಿನಿಶ್ಯನ್ ಜನರನ್ನು ಆರ್ಯವರ್ಗದವರೆಂದು ಬಹಳ ಬಲವಾಗಿ ವಾದಿಸುತ್ತಾರೆ. ಅದು ಹೇಗಿದ್ದರೂ ಭಾರತೀಯರು ಸೆಮಿಟಿಕ್ ಜನರಿಂದ ನಕ್ಷತ್ರವಿದ್ಯೆಯನ್ನು ಮತ್ತು ಲಿಪಿಯನ್ನು ಕಲಿತಿದ್ದರೆಂದು ಸಾಧಿಸುವ ಸಲುವಾಗಿ ಪಾಶ್ಚಾತ್ಯ ವಿದ್ವಾಂಸರು ಮುಂದೆ ತಂದಿದ್ದ ಯಾವುದೊಂದು ಕಲ್ಪನೆಗೂ ಪ್ರಮಾಣಗಳ ಆಧಾರವಿಲ್ಲವೆಂಬುದು ಮಾತ್ರ ನೂರಕ್ಕೆ ನೂರು ಸತ್ಯವಾಗಿದೆ, ಆದುದರಿಂದ ಪ್ರೊ. ಎ. ಎ. ಮೆಕ್‌ಡೊನೆಲ್ ಅವರು ತನ್ನ ವೇದಿಕ್ ಇಂಡೆಕ್ಸ್ ಎಂಬ ಪುಸ್ತಕದಲ್ಲಿ ಭಾರತೀಯರ ನಕ್ಷತ್ರವಿದ್ಯೆಯ ಜ್ಞಾನದ ಸಂಬಂಧದಲ್ಲಿ ವ್ಯಕ್ತಗೊಳಿಸಿದ ಅಭಿಪ್ರಾಯಗಳನ್ನು ಚರ್ಚಿಸುವ ಆವಶ್ಯಕತೆಯಿಲ್ಲ.

ಅತ್ಯಂತ ಪ್ರಾಚೀನ ಕಾಲದ ಆರ್ಯಜನರು ಸೂರ್ಯ–ಚಂದ್ರರ ಕ್ರಾಂತಿ-ಪಥದಲ್ಲಿ ಕಾಣಿಸುತಿದ್ದ ಸಾವಿರಾರು ನಕ್ಷತ್ರಗಳಲ್ಲಿ ಮೂವತ್ತೊಂಭತ್ತು ನಕ್ಷತ್ರ ಪುಂಜಗಳನ್ನು ಗುರುತಿಸಿ ಅವುಗಳನ್ನು ದೇವರೆನ್ನುತಿದ್ದರೆಂದು ಹಿಂದೆ "ಆರ್ಯ ಜನರ ವೈದಿಕ ಸಂಸ್ಕೃತಿ" ಎಂಬ ಅಧ್ಯಾಯದಲ್ಲಿ ವಿವರಿಸಿದೆ. ಅವರು ಆ ಮೂವತ್ತೊಂಭತ್ತು ಪುಂಜಗಳಲ್ಲಿ ಮೂವತ್ತಮೂರು ಪುಂಜಗಳನ್ನು ಚಂದ್ರನ ಗತಿಯನ್ನು ಕಂಡು ಕೊಳ್ಳುವ ಸಲುವಾಗಿ ಬೇರ್ಪಡಿಸಿದ್ದರು. ಮತ್ತು ಆರು ಪುಂಜಗಳನ್ನು ಸೂರ್ಯೋದಯದ ಮತ್ತು ಸೂರ್ಯಾಸ್ತದ ಸೂಚಕಗಳನ್ನಾಗಿ ನಿರ್ಧರಿಸಿದ್ದರು. ಆದರೆ ಉತ್ತರ ಧ್ರುವಪ್ರದೇಶದಲ್ಲಿ ನೆಲಸಿದ್ದಾಗ ಅವರು ಚಂದ್ರನ ಗತಿಯ ನಿರ್ಧರಣಕ್ಕಾಗಿ ಆರಿಸಿದ ಮೂವತ್ತಮೂರು ಪುಂಜಗಳನ್ನು ಬಿಡಿ ಬಿಡಿಯಾಗಿ ಯಾವ ಹೆಸರುಗಳಿಂದ ಕರೆಯುತಿದ್ದರೆಂದು ಈಗ ಕಂಡು ಹಿಡಿಯುವುದು ದುಃಸಾಧ್ಯವಾಗಿದೆ. ಹಾಗಿದ್ದರೂ, ಐತರೇಯ, ತೈತ್ತಿರೀಯ, ಶತಪಥ ಮೊದಲಾದ ಬ್ರಾಹ್ಮಣ ಗ್ರಂಥಗಳಲ್ಲಿ ಬಂದಿರುವ ಆಖ್ಯಾಯಿಕೆಗಳ ಆಧಾರದಿಂದ ಪ್ರಾಚೀನ ಕಾಲದ ಆರ್ಯಜನರು ಆ ಮೂವತ್ತಮೂರು ಪುಂಜಗಳೊಳಗಿನ ಒಂದು ಗುಂಪನ್ನು **'ದೇವಾಃ'** ಅಂದರೆ "ದೇವರು" ಎಂತಲೂ ಬೇರೊಂದು ಗುಂಪನ್ನು **'ಅಸುರಾಃ'** ಅಂದರೆ "ಸೂರ್ಯನಿಲ್ಲದವರು" ಅಥವಾ ಸೂರ್ಯನ ದಕ್ಷಿಣಾಯನದ ಕಾಲದ ರಾತ್ರಿಯಲ್ಲಿ ಕಾಣಿಸುವವರು ಎಂತಲೂ ಹೆಸರಿಸಿದ್ದರೆಂದು ಹೇಳಬಹುದಾಗಿದೆ. ತರುವಾಯದ ಕಾಲದ ಋತ್ವಿಜರು ಆ ನಕ್ಷತ್ರ ಪುಂಜಗಳ ಇಡೀ ಸಮುದಾಯವನ್ನು **'ವಿಶ್ವೇದೇವಾಃ'** ಎಂಬುದಾಗಿ ಹೆಸರಿಸಿದ್ದರು. ಅರ್ಥಾತ್ ಋಗ್ವೇದದಲ್ಲಿ ಹಲವು ಸರ್ತಿ[1] ಉಲ್ಲೇಖಿಸಲ್ಪಟ್ಟಿರುವ "ಮೂವತ್ತ

---

1. ೧-೩೪-೧೧; ೧-೪೫-೨; ೧-೧೩೯-೧೧; ೩-೫೧-೯; ೮-೨೭-೧; ೮-೩೦-೨; ೮-೩೫-೩; ೮-೩೯-೯; ೯-೯೨-೪.

ಮೂರು ದೇವರು" ಅಂದರೆ ಚಂದ್ರನ ಗತಿಯನ್ನು ನಿರ್ಧರಿಸುವ ಸಲುವಾಗಿ ಅವನ ಕ್ರಾಂತಿಪಥದಲ್ಲಿ ಕಾಣಿಸುವ ನಕ್ಷತ್ರಗಳಿಂದ ಆರಿಸಿದ ಮೂವತ್ತಮೂರು ನಕ್ಷತ್ರ ಪುಂಜಗಳೇ ಆಗಿದ್ದುವೆಂಬುದನ್ನು ಮುಂದೆ ಕೊಡಲಾಗುವ ಪ್ರಮಾಣದಿಂದ ತಿಳಿದುಕೊಳ್ಳಬಹುದು.

ಮೂವತ್ತ ಮೂರು ಚಾಂದ್ರ ನಕ್ಷತ್ರಗಳ ಕುರಿತಾಗಿ ಕೃಷ್ಣಯಜುರ್ವೇದದ ತೈತ್ತಿರೀಯ ಸಂಹಿತೆಯಲ್ಲಿ ಬಂದಿರುವ ಆಖ್ಯಾಯಿಕೆಯ ಪೂರ್ವಾರ್ಧವು ಮುಂದಿನಂತಿದೆ– **'ಪ್ರಜಾಪತೇಸ್ತ್ರಯಸ್ತ್ರಿಂಶದ್ದುಹಿತರ ಆಸನ್ ತಾಃ ಸೋಮಾಯ ರಾಜ್ಞೇऽದದಾತ್ । ತಾಸಾಂ ರೋಹಿಣೀ ಮುಪೈತ್ । ತಾಃ ಈರ್ಷ್ಯಂತೀಃ ಪುನರಾಗಚ್ಛನ್। ತಾ ಅನ್ವೈತ್। ತಾಃ ಪುನರಯಾಚತ। ತಾ ಅಸ್ಮೈನ ಪುನರದದಾತ್। ಸೋऽಬ್ರವೀದೃತಮಮೀಷ್ವ ಯಥಾ ಸಮಾವಚ್ಛ ಉಪೈಷ್ಯಾಮ್ಯಥತೇ ಪುನರ್ದಾಸ್ಯಾಮೀತಿ। ಸಿ ಋತಮಮೀತ್। ತಾ ಅಸ್ಯೈ ಪುನರದದಾತ್। ತಾಸಾಂ ರೋಹಿಣೀ ಮೇವೋಪೈತ್। ತಂ ಯಕ್ಷ್ಮ ಆರ್ಚ್ಛದ್ರಾಜಾನಂ ಯಕ್ಷ್ಮ ಆರದಿತಿ ತದ್ರಾಜಯಕ್ಷ್ಮಸ್ಯ ಜನ್ಮ॥ ತೈ. ಸಂ. ೨-೩-೫॥** ಅರ್ಥ–ಪ್ರಜಾಪತಿಗೆ ಮೂವತ್ತ ಮೂರು ಹೆಣ್ಣು ಮಕ್ಕಳಿದ್ದರು. ಅವನು ಅವರನ್ನು ಸೋಮರಾಜನಿಗೆ (–ಚಂದ್ರನಿಗೆ) ಕೊಟ್ಟನು. ಸೋಮನು ಅವರಲ್ಲಿ ರೋಹಿಣಿಯ ಸಮೀಪಕ್ಕೆ ಮಾತ್ರ ಹೋದನು, ಅದರಿಂದ ಈರ್ಷ್ಯೆಗೊಂಡು ಅವರು ತಂದೆಯ ಬಳಿಗೆ ಹೋದರು. ಸೋಮನು ಅವರನ್ನು ಹಿಂಬಾಲಿಸಿ ಹೋದನು ಮತ್ತು ಅವರನ್ನು ಮರಳಿ ಬೇಡಿದನು. ಪ್ರಜಾಪತಿಯು ಕೊಡಲಿಲ್ಲ. ನೀನು ಎಲ್ಲರನ್ನು ಸಮನಾಗಿ ಸೇರುವೆಯೆಂದು ಪ್ರತಿಜ್ಞೆ ಮಾಡಿದರೆ ಕೊಡುವೆನೆಂದನು. ಸೋಮನು ಪ್ರತಿಜ್ಞೆ ಮಾಡಿದನು. ಆಗ ಪ್ರಜಾಪತಿಯು ಅವರನ್ನು ಮರಳಿ ಕೊಟ್ಟನು. ಆಗಲೂ ಸೋಮನು ರೋಹಿಣಿಯ ಬಳಿಗೆ ಮಾತ್ರ ಹೋದನು. ಆಗ ಸೋಮನಿಗೆ ಯಕ್ಷ್ಮ ತಗಲಿತು. ಹಾಗಾಗಿ ರಾಜನಿಗೆ ಯಕ್ಷ್ಮ ತಗಲಿತು ಎಂಬ ನುಡಿಯೇ ರಾಜಯಕ್ಷ್ಮ ಶಬ್ದದ ಹುಟ್ಟಿಗೆ ಕಾರಣವಾಯಿತು.

ಪ್ರಜಾಪತಿಯು ಅಥವಾ ದಕ್ಷನು ತನ್ನ ಹೆಣ್ಣು ಮಕ್ಕಳನ್ನು ಸೋಮರಾಜನಿಗೆ ಕೊಟ್ಟಿದ್ದನೆಂಬ ಆಖ್ಯಾಯಿಕೆಯು ಬಹಳ ಪ್ರಾಚೀನವಾಗಿದ್ದು, ಆರ್ಯಜನರ ನಕ್ಷತ್ರ ನಿರೀಕ್ಷಣದ ದೃಢವಾದ ಪ್ರಮಾಣವೂ, ಜ್ಯೋತಿಷಶಾಸ್ತ್ರದ ದೃಷ್ಟಿಯಿಂದ ಅತ್ಯಂತ ಮೌಲಿಕವೂ ಆಗಿದೆ. ಸೋಮನು ರೋಹಿಣಿಯ ಬಳಿಗೆ ಮಾತ್ರ ಹೋಗುತ್ತಿದ್ದ ಅಥವಾ ರೋಹಿಣಿಯನ್ನು ಇತರರಿಗಿಂತ ಹೆಚ್ಚು ಪ್ರೀತಿಸುತಿದ್ದನೆಂಬ ಕಲ್ಪನೆಗೆ– ಚಂದ್ರನು ತನ್ನ ಪಥದಲ್ಲಿ ಸಾಗುವ ಹದಿನೆಂಟು ವರ್ಷಗಳ ಪರಿಭ್ರಮಣ ಚಕ್ರದಲ್ಲಿ ಐದು ವರ್ಷಗಳ ಪ್ರತಿ ಸುತ್ತಿನಲ್ಲಿ ರೋಹಿಣೀ ನಕ್ಷತ್ರದಲ್ಲಿ ಬಂದಾಗ ಆ ನಕ್ಷತ್ರ ಪುಂಜವನ್ನು ಆಚ್ಛಾದಿಸುವ ಅಥವಾ ಚಂದ್ರನು ಸಮೀಪ ಬಂದುದರಿಂದ ರೋಹಿಣೀ ನಕ್ಷತ್ರ ಪುಂಜವು ಕಾಣಿಸದಂತಾಗುವ ಘಟನೆಯೇ ಆಧಾರವಾಗಿದೆ. ತರುವಾಯದ

ಾಲವಲ್ಲಿ ರಚಿಸಲ್ಪಟ್ಟ ಜ್ಯೋತಿಷ ಗ್ರಂಥಗಳಲ್ಲಿ ಆ ಘಟನೆಯು **"ರೋಹಿಣೀ ಶಕಟ ಭೇದ"** ಎಂದು ಹೆಸರಾಗಿದೆ.

ತೈತ್ತಿರೀಯ ಸಂಹಿತೆಯೊಳಗಿನ ಆ ಆಖ್ಯಾಯಿಕೆಯು ಪ್ರತ್ಯಕ್ಷ ನಿರೀಕ್ಷಣದ ಆಧಾರದಿಂದ ರಚಿಸಲ್ಪಟ್ಟಿದ್ದಿತೆಂಬುವರಲ್ಲಿ ಸಂದೇಹವಿಲ್ಲ. ಆದರೆ ತರುವಾಯದ ಋತ್ವಿಜರು ಪ್ರಾಚೀನ ಕಾಲದ ಮೂವತ್ತಮೂರು ನಕ್ಷತ್ರಗಳ ಗಣನಾಕ್ರಮವನ್ನು ತ್ಯಜಿಸಿ, ಕ್ರಾಂತಿಪಥದ ಸಮಾನ ವಿಸ್ತೀರ್ಣದ ಇಪ್ಪತ್ತೇಳು ನಾಕ್ಷತ್ರಿಕ ವಿಭಾಗಗಳ ಗಣನಾಕ್ರಮವನ್ನು ಸ್ವೀಕರಿಸಿದುದರಿಂದ, ಪ್ರಾಚೀನ ಐತಿಹ್ಯಗಳನ್ನು ಅರಿತಿದ್ದ ವಿದ್ವಾಂಸರು ತೈತ್ತಿರೀಯ ಸಂಹಿತೆಯೊಳಗಿನ ಆಖ್ಯಾಯಿಕೆಯನ್ನು ಪರಿವರ್ತಿಸಿ ಮಹಾಭಾರತದೊಳಗೆ ಸೇರಿಸುವಾಗ ಪ್ರಜಾಪತಿಯ ಹೆಣ್ಣು ಮಕ್ಕಳ ಸಂಖ್ಯೆಯನ್ನು ಮೂವತ್ತಮೂರರಿಂದ ಇಪ್ಪತ್ತೇಳಕ್ಕೆ ಇಳಿಸಿದರು.

ದಕ್ಷಸ್ಯ ತನಯಾ ಯಾಸ್ತಾಃ ಪ್ರಾದುರಾಸನ್ ವಿಶಾಂಪತೇ ।
ಸ ಸಪ್ತವಿಂಶತಿಂ ಕನ್ಯಾ ದಕ್ಷಃ ಸೋಮಾಯ ವೈ ದದೌ ॥ ಶಲ್ಯ ೩೬-೪೫ ॥

ಅರ್ಥ—ಹೇ ರಾಜನೇ, ದಕ್ಷನು ತನಗೆ ಹುಟ್ಟಿದ್ದ ಇಪ್ಪತ್ತೇಳು ಕನ್ಯೆಯರನ್ನು ಸೋಮನಿಗೆ ಕೊಟ್ಟನು.

ಹೇಗಿದ್ದರೂ ತೈತ್ತಿರೀಯ ಸಂಹಿತೆಯೊಳಗಿನ ಆಖ್ಯಾಯಿಕೆಯು ಪ್ರಾಚೀನ ಕಾಲದ ಆರ್ಯಜನರು ಚಂದ್ರನ ಗತಿಯನ್ನು ನಿರ್ಧರಿಸಲು ಮೂವತ್ತ ಮೂರು ನಕ್ಷತ್ರ ಪುಂಜಗಳನ್ನು ಆರಿಸಿದ್ದರೆಂಬುದನ್ನು ಸ್ಪಷ್ಟವಾಗಿ ಸಿದ್ಧಪಡಿಸುತ್ತದೆ. ಅಷ್ಟೇ ಅಲ್ಲ ಋಗ್ವೇದದೊಳಗಿನ ಕೆಲವು ಮಂತ್ರಗಳು ಆ ಮೂವತ್ತಮೂರು ನಕ್ಷತ್ರಪುಂಜಗಳನ್ನು "ಮೂವತ್ತಮೂರು ದೇವರು" ಎನ್ನುತಿದ್ದರೆಂದು ಮತ್ತು ಅವುಗಳನ್ನು ಹನ್ನೊಂದರ ಮೂರು ಗುಂಪುಗಳನ್ನಾಗಿ ಮಾಡಿದ್ದರೆಂದು ಸ್ಪಷ್ಟವಾಗಿ ಸೂಚಿಸುತ್ತವೆ—

ಯೇ ತ್ರಿಂಶತಿ ತ್ರಯಸ್ಪರೋ ದೇವಾಸೋ ಬರ್ಹಿರಾಸದನ್ ।
ವಿದನ್ನಹ ದ್ವಿತಾಸನನ್ ॥ ಋ. ೮-೨೮-೧ ॥

ಅರ್ಥ— ಯಾವ ಮೂವತ್ತು ಮತ್ತು ಮೂರು ದೇವರು ಕುಶಾಸನದಲ್ಲಿ ಕೂತಿರುವರೋ ಅವರು ಎಲ್ಲವನ್ನು ಅರಿತರು, ಮತ್ತು ಎರಡನ್ನೂ (ಆಜ್ಯವನ್ನು ಮತ್ತು ಹವಿಸ್ಸನ್ನು) ಪಡೆದರು.

ಆ ನಾಸತ್ಯಾ ತ್ರಿಭಿರೇಕಾದಶೈರಿಹ
ದೇವೇಭಿರ್ಯಾತಂ ಮಧುಪೇಯಮಶ್ವಿನಾ ।
ಪ್ರಾಯುಸ್ತಾರಿಷ್ಟಂ ನೀರಪಾಂಸಿ ಮೃಕ್ಷತಂ
ಸೇಧತಂ ದ್ವೇಷೋ ಭವತಂ ಸಚಾ ಭುವಾ 1 ಋ. ೧ ೩೪–೧೧ ॥

ಅರ್ಥ– ನಾಸತ್ಯರೆನಿಸಿಕೊಳ್ಳುವ ಹೇ ಅಶ್ವಿನಿಗಳೇ, ನೀವು ಮೂರು-ಹನ್ನೊಂದು ದೇವರೊಂದಿಗೆ ಇಲ್ಲಿಗೆ,- ಮಧುರವಾದ ರಸವನ್ನು ಕುಡಿಯುವಲ್ಲಿಗೆ ಬನ್ನಿರಿ; ನಮ್ಮ ಬದುಕಿನ ದಿನಗಳನ್ನು ಹೆಚ್ಚಿಸಿರಿ; ನಮ್ಮ ಪಾಪಗಳನ್ನು ತೊಳೆಯಿರಿ; ನಮ್ಮ ದ್ವೇಷಿಗಳನ್ನು ನಾಶ ಮಾಡಿರಿ. ಮತ್ತು ಸದಾ ಕಾಲ ನಮ್ಮ ಬಳಿಯಲ್ಲಿಯೇ ಇದ್ದು ಬಿಡಿರಿ. ಅಶ್ವಿನಿಗಳು–ಉತ್ತರ ಧ್ರುವ ಪ್ರದೇಶದಲ್ಲಿ ಉಷೋದಯದೊಂದಿಗೆ ಕಾಣಿಸುತಿದ್ದ ನಕ್ಷತ್ರಗಳಾಗಿದ್ದುವೆಂಬುದನ್ನು ಇಲ್ಲಿ ಸ್ಮರಿಸಬೇಕು.

ಯೇ ದೇವಾಸೋ ದಿವ್ಯೇಕಾದಶ ಸ್ಥ
ಪೃಥಿವ್ಯಾಮೇಕಾದಶ ಸ್ಥ ।
ಅಪ್ಸು ಕ್ಷಿತೋ ಮಹಿನ್ಯೈಕಾದಶ ಸ್ಥ
ತೇ ದೇವಾಸೋ ಯಜ್ಞಮಿಮಂ ಜುಷಧ್ವಮ್ ॥ ಋ. ೧–೧೩೯-೧೧ ॥

ಅರ್ಥ–ನೀವು ಎತ್ತರದ ಆಕಾಶದಲ್ಲಿ ಯಾವ ಹನ್ನೊಂದು ದೇವರಿದ್ದೀರೋ ಭೂಮಿಯ (ಸಮಾಂತರದ)ಲ್ಲಿ ಯಾವ ಹನ್ನೊಂದು ದೇವರಿದ್ದೀರೋ, ಮತ್ತು ನಿಮ್ಮ ಮಹಿಮೆಯು ಬಲದಿಂದ ದಿವ್ಯ ಜಲಗಳಲ್ಲಿ (ಅಂದರೆ ಕ್ಷಿತಿಜದ ಕೆಳ ಭಾಗದಲ್ಲಿ) ಯಾವ ಹನ್ನೊಂದು ದೇವರಿದ್ದೀರೋ ಅಂಥ ನೀವೆಲ್ಲರೂ ನಮ್ಮ ಈ ಯಜ್ಞವನ್ನು ಪ್ರೀತಿಯಿಂದ ಸ್ವೀಕರಿಸಿರಿ.

ಹಿಂದಿನ ವಿವರಗಳಿಂದ ಆರ್ಯಜನರು ಬಹಳ ಪ್ರಾಚೀನ ಕಾಲದಲ್ಲಿ ಚಂದ್ರನ ಗತಿಯನ್ನು ನಿರ್ಧರಿಸಲು ಮೂವತ್ತಮೂರು ನಕ್ಷತ್ರ ಪುಂಜಗಳನ್ನು ಆರಿಸಿದ್ದರೆಂಬುದು ಸ್ಪಷ್ಟವಾಗಿ ಸಿದ್ಧವಾಗುತ್ತದೆ. ಆ ಮೂವತ್ತಮೂರು ನಕ್ಷತ್ರಗಳನ್ನು ಹನ್ನೊಂದರ ಮೂರು ಗುಂಪುಗಳನ್ನಾಗಿ ಮಾಡಿದುದರ ಕಾರಣವು ಮೊದಲು ವರ್ಷವು ಮೂರು ಚಾತುರ್ಮಾಸ್ಯಗಳಲ್ಲಿ ವಿಭಜಿಸಲ್ಪಟ್ಟಿದ್ದುದೇ ಆಗಿದ್ದಿತೆಂದು ಹಿಂದೆ ಹೇಳಿದೆ. ಆದರೆ ಪ್ರಾಚೀನ ಆರ್ಯಜನರು ಚಂದ್ರನ ಗತಿಯನ್ನು ನಿರ್ಧರಿಸಲು ಮೂವತ್ತಮೂರು ನಕ್ಷತ್ರ ಪುಂಜಗಳನ್ನು ಆರಿಸಿದ್ದರೆಂಬುದನ್ನು ಅರಿತುಕೊಳ್ಳಲಾಗದುದರಿಂದ ಮತ್ತು ವೈದಿಕ ಜನರಲ್ಲಿ ಮೊದಲಿನಿಂದಲೂ ಇಪ್ಪತ್ತೇಳು ನಕ್ಷತ್ರಗಳ ಗಣನಾ ಕ್ರಮವೇ ಪ್ರಚಲಿತವಿದ್ದಿತೆಂದು ನಂಬಿದುದರಿಂದ ಪ್ರೊ. ಮೆಕ್ಸ್‌ಮುಲ್ಲರ್, ಬೆಂಟಲೀ ಮೊದಲಾದ ವಿದ್ವಾಂಸರು ತೈತ್ತಿರೀಯ ಸಂಹಿತೆಯಲ್ಲಿ ಪ್ರಜಾಪತಿಯ ಹೆಣ್ಣು ಮಕ್ಕಳ ಸಂಖ್ಯೆಯು ಮೂವತ್ತಮೂರು ಎಂದಿರುವುದನ್ನು ಸರಿಯಾಗಿ ಪರಿಶೀಲಿಸದೇ, ಆ ಮೂವತ್ತಮೂರರ ಸಂಖ್ಯೆಯನ್ನು ಪೂರ್ತಿಗೊಳಿಸಲು ಈಗ ಪ್ರಚಲಿತವಿರುವ ಇಪ್ಪತ್ತೇಳು ನಕ್ಷತ್ರಗಳ ಹೆಸರುಗಳಲ್ಲಿ ಆರು ಹೆಸರುಗಳು ದ್ವಿವಚನದಲ್ಲಿವೆಯೆಂಬ ಇಲ್ಲವೇ ಕೃತ್ತಿಕಾ ಪುಂಜದಲ್ಲಿ ಏಳು ತಾರಕೆಗಳಿವೆ. ಹಾಗಾಗಿ ತೈತ್ತಿರೀಯ ಸಂಹಿತೆಯಲ್ಲಿ ನಕ್ಷತ್ರಗಳ ಸಂಖ್ಯೆಯು ಮೂವತ್ತಮೂರಾಗಿದೆ ಎಂಬ ಕಲ್ಪನೆಯನ್ನು ಮುಂದೆ ತಂದಿದ್ದಾರೆ.

ಈಗ ಪ್ರಚಲಿತವಿರುವ ನಕ್ಷತ್ರಗಳ ಹೆಸರುಗಳಲ್ಲಿ ಆದಿಕಾಲದವುಗಳಾವುವು, ತರುವಾಯದವುಗಳಾವುವು ಎಂಬುದನ್ನಾಗಲೀ, ಅವುಗಳ ದೇವತೆಗಳ ಹೆಸರುಗಳಲ್ಲಿ ಮೂಲ ಹೆಸರುಗಳಾವುವು–ತರುವಾಯ ಸೇರಿಸಿದವುಗಳಾವುವು ಎಂಬುದನ್ನಾಗಲೀ, ಹೇಳುವುದು ತುಂಬಾ ಅಸಾಧ್ಯವೆನ್ನಬಹುದು. ಹಾಗಿದ್ದರೂ ಆಶ್ಲೇಷಾ ನಕ್ಷತ್ರದ ದೇವತೆಯಾಗಿರುವ ಸರ್ಪಾಃ ಎಂಬುದು ಮೂಲ ಹೆಸರೆನ್ನಬಹುದು. ಏಕೆಂದರೆ ಲತೀನ ಭಾಷೆಯಲ್ಲಿ ಆಶ್ಲೇಷಾ ನಕ್ಷತ್ರವನ್ನು Hydra ಅಂದರೆ ಜಲಸರ್ಪ ಎನ್ನುತ್ತಾರೆ. ಆದುದರಿಂದ ಆರ್ಯ ವರ್ಗದ ಪಾಶ್ಚಾತ್ಯ ಜನರಲ್ಲಿ ನಕ್ಷತ್ರಗಳಿಗಾಗಿ ಪ್ರಚಲಿತವಿರುವ ಪ್ರಾಚೀನ ಹೆಸರುಗಳ ನೆರವಿನಿಂದ ಪ್ರಾಚೀನ ವೈದಿಕ ಹೆಸರುಗಳನ್ನು ಕಂಡು ಹಿಡಿಯಬಹುದಾಗಿದೆ.

ನಕ್ಷತ್ರಗಳನ್ನು ದೇವತೆಗಳ ಹೆಸರಿನಿಂದ ಕರೆದು ಅವುಗಳಿಗೆ ಯಜ್ಞಗಳಲ್ಲಿ ಆಹುತಿಗಳನ್ನು ಅರ್ಪಿಸುವ ಕ್ರಮವು ಬಹಳ ಹಿಂದಿನಿಂದ ಸಾಗಿ ಬಂದಿದೆ. ನಕ್ಷತ್ರಗಳನ್ನು ದೇವತೆಗಳ ಹೆಸರಿನಿಂದ ತೃಪ್ತಿಪಡಿಸುವ ಸಲುವಾಗಿ ಜರುಗಿಸಲ್ಪಡುವ ಯಜ್ಞವು ನಕ್ಷತ್ರೇಷ್ಟಿ ಎಂದು ಹೆಸರಾಗಿದೆ. ನಕ್ಷತ್ರೇಷ್ಟಿಗಳ ವಿವರಗಳು ತೈತ್ತಿರೀಯ ಸಂಹಿತೆಯಲ್ಲಿ ಮತ್ತು ತೈತ್ತಿರೀಯ ಬ್ರಾಹ್ಮಣದ ೩–೧–೪ರಲ್ಲಿ ಇವೆ. ಯಜ್ಞಕಾಲದಲ್ಲಿ ನಕ್ಷತ್ರಗಳು ದೇವತೆಗಳ ಹೆಸರುಗಳಿಂದ ಸ್ತುತಿಸಲ್ಪಡುತಿದ್ದುದರಿಂದ ಮತ್ತು ನಕ್ಷತ್ರಗಳ ಗುಂಪನ್ನು "ವಿಶ್ವೇ ದೇವಾಃ" ಎಂದು ಕರೆಯುತಿದ್ದುದರಿಂದ ಋಗ್ವೇದದಲ್ಲಿ ನಕ್ಷತ್ರಗಳ ಮತ್ತು ನಕ್ಷತ್ರ ದೇವತೆಗಳ ಸ್ತುತಿ ಇರುವಂಥ ಸೂಕ್ತಗಳು "ವಿಶ್ವೇದೇವ ಸೂಕ್ತಗಳು'' ಎಂಬ ಹೆಸರನ್ನು ಪಡೆದಿವೆ. ವೇದಾಂಗ ಜ್ಯೋತಿಷದಲ್ಲಿ ನಕ್ಷತ್ರಗಳಿಗೆ ಪ್ರತಿಯಾಗಿ ಯಾವ ದೇವತೆಗಳ ಹೆಸರುಗಳು ಉಲ್ಲೇಖಿಸಲ್ಪಟ್ಟಿವೆಯೋ ಅದೇ ಹೆಸರುಗಳು ಬೇರೆ ಕೆಲವು ಹೆಸರುಗಳೊಂದಿಗೆ ವಿಶ್ವೇದೇವ ಸೂಕ್ತಗಳಲ್ಲಿ ಸ್ತುತಿಸಲ್ಪಟ್ಟಿವೆ. ಆದುದರಿಂದ ವಿಶ್ವೇದೇವರೆಂದರೆ ನಕ್ಷತ್ರಗಳೇ ಎಂಬುದರಲ್ಲಿ ಸಂದೇಹವುಳಿಯುವುದಿಲ್ಲ.

ವೇದಮಂತ್ರಗಳಿಗೆ ಭಾಷ್ಯವನ್ನು ಬರೆದ ಮತ್ತು ವೇದಮಂತ್ರಗಳನ್ನು ಬೇರೆ ಬೇರೆ ಭಾಷೆಗಳಿಗೆ ಅನುವಾದಿಸಿದ ವಿದ್ವಾಂಸರು ಋಗ್ವೇದದ ಮಂತ್ರಗಳಲ್ಲಿ ಮತ್ತು ವೇದಾಂಗ ಜ್ಯೋತಿಷದಲ್ಲಿ ಅಡಗಿರುವ ನಕ್ಷತ್ರ ದೇವತೆಗಳ ರಹಸ್ಯವನ್ನು ಅರಿತುಕೊಳ್ಳುವುದು ಹಾಗಿರಲಿ, ಊಹಿಸಲು ಕೂಡ ಶಕ್ತರಾಗಿಲ್ಲ. ಅವರು ವಿಶ್ವೇದೇವರ ರಹಸ್ಯವನ್ನು ಅರಿತುಕೊಂಡಿದ್ದುದಾದರೆ ವೇದಮಂತ್ರಗಳ ಅರ್ಥವನ್ನು ಹೇಳುವಲ್ಲಿ ಹೆಚ್ಚು ಕಷ್ಟವಾಗುತ್ತಿರಲಿಲ್ಲ. ಜನರಲ್ಲಿ ವೇದಮಂತ್ರಗಳ ಕುರಿತು ತಪ್ಪು ಭಾವನೆಗಳು ರೂಢವಾಗುತ್ತಿರಲಿಲ್ಲ. ಮತ್ತು ಪಾಶ್ಚಾತ್ಯ ವಿದ್ವಾಂಸರು ಋಗ್ವೇದದಲ್ಲಿ ಚಂದ್ರಕ್ಕಿಂತ ಹೆಚ್ಚು ಚಾಂದ್ರ ನಕ್ಷತ್ರಗಳ ಹೆಸರುಗಳಿಲ್ಲವೆಂದು ವಾದಿಸಲು ಸಾಧ್ಯವಿರಲಿಲ್ಲ.

ಆರ್ಯ ಜನರು ಚಂದ್ರನ ಕ್ರಾಂತಿಪಥವನ್ನು ಯಾವ ಕಾಲದಲ್ಲಿ

ಇಪ್ಪತ್ತೇಳು ವಿಭಾಗಗಳನ್ನಾಗಿ ಮಾಡಿದ್ದರೆಂದು, ಮತ್ತು ಪ್ರಾಚೀನ ಕಾಲದಲ್ಲಿ ಯಾವ ನಕ್ಷತ್ರವು ಯಾವ ಹೆಸರಿನಿಂದ ಕರೆಯಲ್ಪಡುತಿದ್ದಿತೆಂದು ನಿಖರವಾಗಿ ಹೇಳಲು ಸಾಧ್ಯವಿಲ್ಲವಾದರೂ, ಅವರು ಇಪ್ಪತ್ತೇಳು ನಕ್ಷತ್ರಗಳಿಗೆ ಕೊಟ್ಟ ಹೊಸ ಹೆಸರುಗಳಲ್ಲಿ **"ಅಶ್ವಯುಜೌ, ಅಘಾ, ಅರ್ಜುನೀ, ತಿಷ್ಯ , ಪುನರ್ವಸೂ, ರೇವತೀ ಮತ್ತು ಶತಭಿಷಕ್"** ಎಂಬ ಏಳು ಹೆಸರುಗಳು ಋಗ್ವೇದದ ಬೇರೆ ಬೇರೆ ಮಂಡಲ ಗಳಲ್ಲಿ ಬಂದಿವೆಯಾದುದರಿಂದ ಮತ್ತು ಯಜುರ್ವೇದದ ತೈತ್ತಿರೀಯ, ಕಾಠಕ ಮತ್ತು ಮೈತ್ರಾಯಣೀ ಸಂಹಿತೆಗಳಲ್ಲಿ, ತೈತ್ತಿರೀಯ ಬ್ರಾಹ್ಮಣದಲ್ಲಿ, ಅಥರ್ವ ವೇದದಲ್ಲಿ ಮತ್ತು ವೇದಾಂಗ ಜ್ಯೋತಿಷದಲ್ಲಿ ನಕ್ಷತ್ರಗಳ ಪಟ್ಟಿಯು ಕೃತ್ತಿಕೆ ಯಿಂದಲೇ ಪ್ರಾರಂಭವಾಗಿದ್ದರೂ ಅವುಗಳಲ್ಲಿ ಉಲ್ಲೇಖಿಸಲ್ಪಟ್ಟಿರುವ ನಕ್ಷತ್ರಪುಂಜ ಗಳ ಮತ್ತು ದೇವತೆಗಳ ಹೆಸರುಗಳಲ್ಲಿ ತುಂಬಾ ಭೇದವಿರುವುದರಿಂದ ಹಾಗೂ ಮೃಗಶಿರಸ್ ನಕ್ಷತ್ರದ ದೇವನಾದ ಪ್ರಜಾಪತಿಯು ತನ್ನ ಮಗಳಾದ ರೋಹಿಣಿ ಯನ್ನು ಕಾಮಿಸಿದನೆಂಬ ಆಖ್ಯಾಯಿಕೆಯು ಬ್ರಾಹ್ಮಣ ಗ್ರಂಥಗಳಲ್ಲಿ ವಿವರಿಸಲ್ಪಟ್ಟಿ ದ್ದರೂ, ಅದರ ಮೂಲವು ಋಗ್ವೇದದಲ್ಲಿ[1] ಕೂಡ ಇರುವುದರಿಂದ ವಸಂತ ಸಂಪಾತ ಬಿಂದುವು ಮೃಗಶಿರಸ್ ನಕ್ಷತ್ರದಲ್ಲಿದ್ದ ಕಾಲದಲ್ಲಿ ಕ್ರಾಂತಿಪಥವನ್ನು ಇಪ್ಪತ್ತೇಳು ನಾಕ್ಷತ್ರಿಕ ವಿಭಾಗಗಳಾಗಿ ಮಾಡಲಾಯಿತೆಂದು ಅನುಮಾನಿಸಬಹುದು. ಮತ್ತು ವೇದಾಂಗ ಜ್ಯೋತಿಷದಲ್ಲಿ ನಕ್ಷತ್ರಪುಂಜಗಳಿಗಾಗಿ ಯಾವ ದೇವತೆಗಳ ಹೆಸರುಗಳು ಉಲ್ಲೇಖಿಸಲ್ಪಟ್ಟಿವೆಯೋ ಅವುಗಳು ರೋಹಿಣೀ ನಕ್ಷತ್ರದಲ್ಲಿ ವಸಂತ ಸಂಪಾತವಾಗುತ್ತಿದ್ದ ಕಾಲದಲ್ಲಿ ನಿರ್ಧರಿಸಲ್ಪಟ್ಟಿದ್ದುವೆನ್ನಬಹುದು. ಏಕೆಂದರೆ ಅದರಲ್ಲಿ ಪ್ರಜಾಪತಿಯು ರೋಹಿಣೀ ನಕ್ಷತ್ರದ ದೇವನಾಗಿದ್ದಾನೆ.

ಋಗ್ವೇದದ ವಿಶ್ವೇದೇವ ಸೂಕ್ತಗಳಲ್ಲಿ ಚಾಂದ್ರನಕ್ಷತ್ರಗಳಿಗಾಗಿ ನಿರ್ಧರಿಸಿದ ದೇವರ ಹೆಸರುಗಳು ಮಾತ್ರವಲ್ಲದೇ, ಉತ್ತರ ಧ್ರುವ ಪ್ರದೇಶದಲ್ಲಿ ಉಷೋದಯ ವನ್ನು ಮತ್ತು ಸೂರ್ಯನ ಆಗಮನವನ್ನು ಹಾಗೂ ಸೂರ್ಯಾಸ್ತದ ತರುವಾಯದ ದೀರ್ಘರಾತ್ರಿಯ ಆಗಮನವನ್ನು ಸೂಚಿಸುತಿದ್ದ ಬೇರೆ ಎಂಟು ನಕ್ಷತ್ರಪುಂಜಗಳ ಅಂದರೆ-**"ಸರಮಾ, ಸಾರಮೇಯ, ನೌ, ಶ್ಯಾಮ, ಶಬಲ, ಕಾಲಕಂಜ, ವೃಕ, ವೃಕೀ ಮತ್ತು ಸಪ್ತರ್ಷಿಗಳ"** ಉಲ್ಲೇಖಗಳೂ ಇವೆ. ಭಾರತ ವರ್ಷದಲ್ಲಿ ನೆಲಸಿದ ಆರ್ಯ ವರ್ಗದ ಜನರಲ್ಲಿ ಹೆಚ್ಚಿನವರಿಗೆ ಸಪ್ತರ್ಷಿಗಳ ಹೊರತು ಇತರ ಎಂಟು ನಕ್ಷತ್ರಗಳ ಪರಿಚಯವು ಬಹಳ ಕಾಲದ ಹಿಂದೆಯೇ ಇಲ್ಲವಾಗಿದೆ. ಆದರೆ ಆರ್ಯವರ್ಗದ ಪಾಶ್ಚಾತ್ಯ ಜನರಿಗೆ ಆ ನಕ್ಷತ್ರ ಪುಂಜಗಳ ಪರಿಚಯವು ಇಂದಿಗೂ ಇದೆಯೆಂದು

---

1 ಪಿತಾಯತ್ ಸ್ವಾಂ ದುಹಿತರಮಧಿಷ್ಕನ್‌ಕ್ಷ್ಮಯಾರೇತಃ ಸಂಜಗ್ಮಾನೋ ನಿಷಿಂಚತ್।
ಸ್ವಾಧ್ಯೋಽಜನಯನ್ ಬ್ರಹ್ಮದೇವಾ ವಾಸ್ತೋಷ್ಪತಿಂ ವ್ರತಪಾಂ
ನಿರತಕ್ಷನ್ ॥೧೦-೬೧-೭ ॥

ತಿಳಿದು ಬರುತ್ತದೆ. ಆದರೆ ಋಗ್ವೇದದಲ್ಲಿ ಉಲ್ಲೇಖಿಸಲ್ಪಟ್ಟಿರುವ **'ಶಿಶ್ನದೇವ'** ಮತ್ತು **'ಮೂರದೇವ'** ಎಂಬ ನಕ್ಷತ್ರಪುಂಜಗಳು ಯಾವುವೆಂದು ತಿಳಿದು ಬಂದಿಲ್ಲ. ದೇವ ಎಂಬ ಶಬ್ದದಿಂದ ಸೂಚಿತವಾಗುವಂತೆ ಅವುಗಳು ನಕ್ಷತ್ರಪುಂಜಗಳೆಂಬು ದರಲ್ಲಿ ಸಂದೇಹವೇ ಇಲ್ಲ, ಮತ್ತು ಶಿಶ್ನದೇವ ಎಂಬುದರ ಅರ್ಥವು "ಶಿಶ್ನದ ಇಲ್ಲವೇ ಬಾಲದ ಆಕೃತಿಯಲ್ಲಿರುವ ನಕ್ಷತ್ರಪುಂಜವೆಂತಲೂ, ಮೂರದೇವ ಎಂಬುದರ ಅರ್ಥವು ಸ್ಥಿರವಾದ ಅಥವಾ ಇದ್ದಲ್ಲೇ ಇರುವ ನಕ್ಷತ್ರಪುಂಜವೆಂತಲೂ ಆಗುತ್ತದೆ. ಋಗ್ವೇದದ ೭–೨೧–೫ನೆಯ ಋಚೆಯಲ್ಲಿ "ಶಿಶ್ನ ದೇವರನ್ನು ನಮ್ಮ ಹಾದಿಗೆ ಬರಗೊಡಬೇಡ" ಎಂಬುದಾಗಿ ಇಂದ್ರನನ್ನು ಪ್ರಾರ್ಥಿಸಿದೆಯಾದರೆ ೧೦-೯೯-೩ನೆಯ ಋಚೆಯಲ್ಲಿ "ಇಂದ್ರನು ಶಿಶ್ನದೇವರನ್ನು ಕೊಂದು ಪ್ರಕಾಶವನ್ನು ಗೆದ್ದುಕೊಂಡನೆಂದು" ಹೇಳಿದೆ. ಆದುದರಿಂದ ಶಿಶ್ನದೇವ ಎಂಬ ನಕ್ಷತ್ರ ಪುಂಜವು ಕತ್ತಲೆಗೆ ಸಂಬಂಧಪಟ್ಟುದೆಂದು ಹೇಳಬಹುದಾಗಿದೆ. ಹಾಗೆಯೇ ೭-೧೦೪-೨೪ ನೆಯ ಋಚೆಯಲ್ಲಿ "ಮೂರ ದೇವರು ತೊಲಗಲಿ, ಅವರು ಉದಯಿಸುವ ಸೂರ್ಯ ನನ್ನು ಕಾಣದಿರಲಿ" ಎಂದಿದೆ, ಆದರೆ ಋಗ್ವೇದ ಮಂತ್ರಗಳಿಗೆ ಅರ್ಥವನ್ನು ಹೇಳಿದ ವಿದ್ವಾಂಸರು ಆ ಎರಡು ಶಬ್ದಗಳು ನಕ್ಷತ್ರ ಪುಂಜಗಳ ಹೆಸರುಗಳಾಗಿರಬಹುದೆಂದು ಊಹಿಸಲಾಗದೇ ಶಿಶ್ನದೇವ ಎಂಬ ಶಬ್ದಕ್ಕೆ ವಿಷಯಲಂಪಟ ಮತ್ತು ಶಿಶ್ನಪೂಜಕ ಅಥವಾ ಲಿಂಗಾರಾಧಕ ಎಂಬರ್ಥಗಳನ್ನು ಹೇಳಿದ್ದಾರೆ. ಹಾಗಾಗಿ ಆ ಶಬ್ದಗಳು ಬಂದಿರುವ ಋಚೆಗಳ ವಾಸ್ತವಿಕ ಅರ್ಥಗಳು ತಿಳಿಯದಂತಾಗಿವೆ.

ಭಾರತ ವರ್ಷದ ಹೊರಗೆ ಉಳಿದ ಯವನ, ರೋಮಕ ಮೊದಲಾದ ಆರ್ಯವರ್ಗದ ಜನರಲ್ಲಿ ಇಪ್ಪತ್ತೇಳು ಚಾಂದ್ರ ನಕ್ಷತ್ರಗಳಿಗೆ ಪ್ರತಿಯಾಗಿ ಹದಿನೆರಡು ರಾಶಿಗಳು ಪ್ರಚಲಿತವಿದ್ದರೂ ಆ ರಾಶಿಗಳ ಕೂಟದಲ್ಲಿ ಭಾರತವರ್ಷ ದಲ್ಲಿ ಚಾಂದ್ರನಕ್ಷತ್ರಗಳಾಗಿ ಪ್ರಚಲಿತವಿರುವ ಕೃತ್ತಿಕಾ Plieades; ಮೃಗಶಿರಸ್ = Orion; ಪುನರ್ವಸೂ = Castor and Pollux; ಆಶ್ಲೇಷಾ = Hydra; ಮಘಾ = Regulus ಮುಂತಾದುವುಗಳು ರಾಶಿಗಳಿಂದ ಭಿನ್ನವಾದ ಸ್ವತಂತ್ರ ನಕ್ಷತ್ರ ಪುಂಜಗಳಾಗಿರುವುದರಿಂದ ಅವರಲ್ಲಿ ಕೂಡ ಬಹಳ ಹಿಂದೆ ಮೂವತ್ತಮೂರು ಚಾಂದ್ರ ನಕ್ಷತ್ರಗಳು ಪ್ರಚಲಿತವಿದ್ದಿರಬಹುದೆಂಬ ಅನುಮಾನ ಬರುತ್ತದೆ. ಹೇಗಿದ್ದರೂ ಋಗ್ವೇದದಲ್ಲಿ ಉಲ್ಲೇಖಿಸಲ್ಪಟ್ಟಿರುವ ಬೇರೆ ಕೆಲವು ನಕ್ಷತ್ರಪುಂಜಗಳ ಹೆಸರುಗಳು ಅವರಲ್ಲಿ ಇಂದಿಗೂ ಪ್ರಚಲಿತವಿವೆ. ಆದುದರಿಂದ ಆ ನಕ್ಷತ್ರಪುಂಜಗಳನ್ನು ಅವರಲ್ಲಿ ಪ್ರಚಲಿತವಿರುವ ಹೆಸರುಗಳೊಂದಿಗೆ ಇಲ್ಲಿ ಮುಂದೆ ಕೊಡುವೆನು.

೧. **ಸರಮಾ:** ಒಂದು ಹೆಣ್ಣು ನಾಯಿ. ಮಹಾಭಾರತದ ಆದಿಪರ್ವ ದಲ್ಲಿ (೩-೩) ಅದನ್ನು **"ದೇವಶುನಿ"** ಅಂದರೆ ದೇವಲೋಕದ ನಾಯಿ ಎಂದಿದೆ ಯಲ್ಲದೇ. ಅದರ ಮರಿ ಸಾರಮೇಯನು ಜನಮೇಜಯನ ಯಜ್ಞಸ್ಥಳಕ್ಕೆ ಬಂದಿ

ದ್ದಾಗ ಜನಮೇಜಯನ ತಮ್ಮಂದಿರು ಅದನ್ನು ಹೊಡೆದಟ್ಟಿದರೆಂದು ಹೇಳಿದೆ. ಪಾಶ್ಚಾತ್ಯರು ಸರಮೆಯನ್ನು Procyon ಅನ್ನುತ್ತಾರೆ. ಋಗ್ವೇದದ ಹತ್ತನೆಯ ಮಂಡಲದ ನೂರೆಂಟನೆಯ ಇಡೀ ಸೂಕ್ತವು ಸರಮೆಗೆ ಸಂದಿದೆ. ಅದರಲ್ಲಿ ಸರಮೆಯು ಇಂದ್ರನ ದೂತಿಯಾಗಿ ಪಣಿಗಳು ಅಡಗಿಸಿಟ್ಟ ಗೋವುಗಳನ್ನು ಹುಡುಕುತ್ತ ಪಣಿಗಳಿದ್ದ ಸ್ಥಳಕ್ಕೆ ತಲುಪಿದುದನ್ನು ಮತ್ತು ಅವಳು ಪಣಿಗಳೊಂದಿಗೆ ಮಾಡಿದ ಸಂಭಾಷಣೆಯನ್ನು ಚೆಲೋ ರೀತಿಯಲ್ಲಿ ವರ್ಣಿಸಲಾಗಿದೆ. ಬೇರೆ ಮಂಡಲಗಳ ಕೆಲವು ಸೂಕ್ತಗಳಲ್ಲಿಯೂ, ವಿಶ್ವೇದೇವಸೂಕ್ತಗಳಲ್ಲಿಯೂ ಸರಮೆಯ ಉಲ್ಲೇಖವಿದೆ. ಮುಂದೆ ಕೊಡಲಾಗುವ ಋಚೆಯಲ್ಲಿ ಋತವನ್ನು ಅಂದರೆ ಕ್ರಾಂತಿಪಥವನ್ನು ಅನುಸರಿಸಿ ಸಾಗುತಿದ್ದ ಸರಮೆಯು ಗೋವುಗಳನ್ನು ಅಂದರೆ ಸೂರ್ಯನ ಪ್ರಕಾಶವನ್ನು ಕಂಡುಹಿಡಿದಳೆಂಬ ವರ್ಣನೆಯಿದೆ.

ಅನೂನೋದತ್ರ ಹಸ್ತಯತೋ ಅದ್ರಿರಾರ್ಚನ್
ಯೇನ ದಶಮಾಸೋ ನವಗ್ವಾಃ ।
ಋತಂ ಯತೀ ಸರಮಾ ಗಾ ಅವಿಂದದ್
ವಿಶ್ವಾನಿ ಸತ್ಯಾಂಗಿರಾಶ್ಚಕಾರ ॥ ಋ. ೫-೪೫-೭ ॥

ಅರ್ಥ– ಇಲ್ಲಿ ಕೈಯಿಂದ (ಸೋಮಬಳ್ಳಿಯನ್ನು ಗುದ್ದಲಿಕ್ಕಾಗಿ) ಬಡಿಯಲ್ಪಡುತಿದ್ದ ಕಲ್ಲುಗಳು ಮಧುರವಾದ ಧ್ವನಿಯನ್ನು ಹೊರಡಿಸಿದುವು. ಮತ್ತು ನವಗ್ವರು ಹತ್ತು ತಿಂಗಳ ಕಾಲ ಸ್ತೋತ್ರವನ್ನು ಹಾಡಿದರು. ಹಾಗೂ ಋತವನ್ನು ಅನುಸರಿಸಿ ಸಾಗುತಿದ್ದ ಸರಮೆಯು ಗೋವುಗಳನ್ನು ಕಂಡುಹಿಡಿದಳು. ಹಾಗಾಗಿ ಅಂಗಿರಸರು ತಮ್ಮ ಕಾರ್ಯವನ್ನು ಪೂರ್ತಿಗೊಳಿಸಿದರು ಅಂದರೆ ಮುಗಿಸಿದರು.

ವಿಶ್ವೇ ಅಸ್ಯಾವ್ಯುಷಿ ಮಾಹಿನಾಯಾ
ಸಂ ಯದ್ಗೋಭಿರಂಗಿರಸೋ ನವಂತ ।
ಉತ್ಸ ಆಸಾಂ ಪರಮೇ ಸಧಸ್ಥ
ಋತಸ್ಯ ಪಥಾ ಸರಮಾ ವಿದದ್ ಗಾಃ ॥ ಋ. ೫–೪೫–೮ ॥

ಅರ್ಥ– ಮಹಾಮಹಿಮಳಾದ ಉಷಾ ದೇವಿಯು ಉದಿಸಿದೊಡನೆ ಅಂಗಿರಸರು ಅವಳ ಗೋವುಗಳೊಂದಿಗೆ (= ಪ್ರಕಾಶದೊಂದಿಗೆ) ಸ್ತೋತ್ರಗಳನ್ನು ಹಾಡಿದರು. ಆ ಗೋವುಗಳ ಉಗಮಸ್ಥಾನವು ದೂರದ ಸಂಧಿಪ್ರದೇಶದಲ್ಲಿತ್ತು. ಮತ್ತು ಸರಮೆಯು ಋತದ ಹಾದಿಯಿಂದ ಆ ಗೋವುಗಳನ್ನು ಪಡೆದಿದ್ದಳು.

ಮುಂದಿನ ಎರಡು ಋಚೆಗಳು ಹತ್ತನೆಯ ಮಂಡಲದೊಳಗಿನ ಸರಮಾ ಸೂಕ್ತದವುಗಳಾಗಿವೆ—

ಕಿಮಿಚ್ಛಂತೀ ಸರಮಾ ಪ್ರೇದಮಾನಡ್
ದೂರೇ ಹ್ಯಧ್ವಾ ಜಗುರಿಃ ಪರಾಚೈಃ ।
ಕಾಸ್ಮೇ ಹಿತಿ ಕಾ ಪರಿತಕ್ಮ್ಯಾಸೀತ್
ಕಥಂ ರಸಾಯಾ ಅತರಃ ಪಯಾಂಸಿ ॥ ಋ. ೧೦-೧೦೮-೧ ॥

ಅರ್ಥ– (ಸರಮೆಯು ಬರುವುದನ್ನು ಕಂಡ ಪಣಿಗಳು ತಮ್ಮ ತಮ್ಮೊಳಗೆ ವಿಚಾರಿಸುತ್ತಾರೆ. ಸರಮೆಯು ಯಾವ ಬಯಕೆಯಿಂದ ಇತ್ತ ಬರುತ್ತಿದ್ದಾಳೆ? ಈ ಹಾದಿಯಾದರೊ ಬಹಳ ದೂರಕ್ಕೆ ಸಾಗುವಂಥದ್ದಾಗಿದೆ. (ತರುವಾಯ ಸರಮೆ ಯನ್ನು ಸಂಬೋಧಿಸಿ) ಹೇ ಸರಮೆಯೇ, ನೀನು ನಮಗೆ ಏನು ಕೆಲಸ ತಂದಿರುವಿ? ಇದು ಎಂಥ ತಿರುಗಾಟ? ನೀನು ರಸಾನದಿಯ ಜಲರಾಶಿಯನ್ನು ಹೇಗೆ ದಾಟಿದೆ?– ಸರಮೆಯು ಉತ್ತರಿಸುತ್ತಾಳೆ–

ಇಂದ್ರಸ್ಯ ದೂತೀರಿ ಷಿತಾ ಚರಾಮಿ
ಮಹ ಇಚ್ಛಂತೀ ಪಣಯೋ ನಿಧೀನ್ ವಃ ।
ಅತಿಷ್ಕದೋ ಭಿಯಸಾ ತನ್ನ ಆವತ್
ತಥಾ ರಸಾಯಾ ಅತರಂ ಪಯಾಂಸಿ ॥ ಋ. ೧೦–೧೦೮–೨ ॥

ಅರ್ಥ– ಎಲೇ ಪಣಿಗಳೇ, ನಾನು ಇಂದ್ರನ ದೂತಿಯಾಗಿ ಕಳುಹಿಸಲ್ಪಟ್ಟು ನಿಮ್ಮ ಮಹಾನಿಧಿಗಳನ್ನು ಬಯಸುವವಳಾಗಿ ಸಂಚರಿಸುತ್ತಿದ್ದೇನೆ. ಆ ಬಯಕೆಯು ನನ್ನನ್ನು ನದಿಯನ್ನು ದಾಟುವ ಭಯದಿಂದ ರಕ್ಷಿಸಿದೆ. ಹಾಗಾಗಿ ನಾನು ರಸಾನದಿಯ ಜಲರಾಶಿಯನ್ನು ದಾಟಿದೆ.

ಸರಮಾ ಎಂಬ ನಕ್ಷತ್ರವು ಪುನರ್ವಸೂ ನಕ್ಷತ್ರ ಪುಂಜದ ಪಶ್ಚಿಮದಲ್ಲಿದ್ದು ರಸಾನದಿಯ ಅಂದರೆ ಆಕಾಶ ಗಂಗೆಯ ಪೂರ್ವದಡದಲ್ಲಿ ಕಾಣಿಸುತ್ತದೆ. ಸರಮೆಯು ಗೋವುಗಳನ್ನು ಕಂಡುಹಿಡಿದಳೆಂದು ಹೇಳಿದೆಯಾದುದರಿಂದ ಬಹಳ ಪ್ರಾಚೀನ ಕಾಲದಲ್ಲಿ ಅಂದರೆ ವಸಂತ ಸಂಪಾತವು ಪುನರ್ವಸೂ ನಕ್ಷತ್ರದಲ್ಲಿದ್ದ ಕಾಲದಲ್ಲಿ, ಸರಮಾ ನಕ್ಷತ್ರವು ಉದಯಿಸಿದ ತರುವಾಯ ಉತ್ತರ ಧ್ರುವಪ್ರದೇಶದಲ್ಲಿ ದೀರ್ಘ ರಾತ್ರಿಯು ಮುಗಿದು ಬೆಳಕು ಹರಿಯುತ್ತಿದ್ದಿರಬಹುದು, ಆ ಆಶಯವು ಮುಂದಿನ ಋಚೆಯಿಂದ ಸೂಚಿತವಾಗುತ್ತದೆ–

ಅಪೋ ಯದದ್ರಿಂ ಪುರುಹೂತ ದರ್ದರ್
ಆವಿರ್ಭುವತ್ ಸರಮಾ ಪೂರ್ವ್ಯಂ ತೇ ।
ಸ ನೋ ನೇತಾ ವಾಜಮಾದರ್ಷಿ ಭೂರಿಂ
ಗೋತ್ರಾ ರುಜನ್ನಂಗಿರೋಭಿರ್ಗೃಣಾನ ॥ ಋ. ೪-೧೬-೮ ॥

ಅರ್ಥ– ಬಹಳವಾಗಿ ಸ್ತುತಿಸಲ್ಪಟ್ಟ ಹೇ ಇಂದ್ರದೇವನೇ, ನೀನು ಜಲ

ಗಳನ್ನು ತಡೆದಿಟ್ಟ ಬಂಡೆಯನ್ನು ಸೀಳಲಾಗಿ ಸರಮೆಯು ನಿನ್ನ ಮುಂದೆ ಕಾಣಿಸಿಕೊಂಡಳು, ಅಂಗಿರಸದಿಂದ ಸ್ತುತಿಸಲ್ಪಟ್ಟು ಬಹಳ ಬಲಪಡೆದ ಹಾಗೂ ಗೋವುಗಳ ತಡೆಯನ್ನು ಒಡೆದ ನೀನು ನಮ್ಮ ನಾಯಕನಾಗಿರುತ್ತೀ.

೨. **ಶ್ವಾನ ಅಥವಾ ಸಾರಮೇಯ** ದೊಡ್ಡ ನಾಯಿ, ಸರಮೆಯ ಮಗ, ಇದು ಪಾಶ್ಚಾತ್ಯರು "Canis Majoris" ಎಂದು ಕರೆಯುತ್ತಿರುವ ನಕ್ಷತ್ರ ಪುಂಜದಲ್ಲಿ ಬಹಳವಾಗಿ ಬೆಳಗುವ ದೊಡ್ಡ ನಕ್ಷತ್ರವಾಗಿದೆ. ಪಾಶ್ಚಾತ್ಯರು ಅದನ್ನು "Sirius" ಎಂದು ಕೂಡಾ ಕರೆಯುತ್ತಾರೆ. ಕೆಲವು ಭಾರತೀಯ ಜ್ಯೋತಿಷಿಗಳು ಅದನ್ನು "ಲುಬ್ಧಕ" ಎಂದಿದ್ದಾರೆ. ಕೆಲವು ಭಾರತೀಯ ವಿದ್ವಾಂಸರ ಅಭಿಪ್ರಾಯದಲ್ಲಿ ಐತರೇಯ ಬ್ರಾಹ್ಮಣದೊಳಗಿನ ಮೃಗವ್ಯಾಧ ಅಥವಾ ಪಶುಮಾನ್ ಎಂಬುದು ಪಾಶ್ಚಾತ್ಯರ "Canis Majoris" ಎಂಬ ನಕ್ಷತ್ರಪುಂಜವೆಂದಿದೆ[1]. ಜ್ಯೋತಿಷ ಸಿದ್ಧಾಂತಕಾರರು ಅದನ್ನು ಲುಬ್ಧಕ ಎಂದು ಕರೆದು ಅದು ಮಿಥುನ ರಾಶಿಯ ಇಪ್ಪತ್ತನೆಯ ಅಂಶದಲ್ಲಿದೆಯೆಂದು ಹೇಳಿದ್ದಾರೆ.

ಋಗ್ವೇದದ ಏಳನೆಯ ಮಂಡಲದ ಐವತ್ತೈದನೆಯ ಸೂಕ್ತದಲ್ಲಿ ಸಾರಮೇಯನಿಗೆ ಸಂಬಂಧಿಸಿದ ಮೂರು ಋಚೆಗಳಿವೆಯಲ್ಲದೇ ಬೇರೆ ಮಂಡಲಗಳ ಕೆಲವು ಸೂಕ್ತಗಳಲ್ಲಿಯೂ ಸಾರಮೇಯನ ಉಲ್ಲೇಖಗಳಿವೆ–

ಯದರ್ಜುನಸಾರಮೇಯ ದತಃ ಪಿಶಂಗ ಯಚ್ಛಸೇ ।
ವೀವ ಭ್ರಾಜಂತ ಋಷ್ಟಯ ಉಪಸ್ರಕ್ವೇಷು ಬಪ್ಸತೋ
ನಿ ಷುಸ್ವಪ ॥ ಋ ೭–೫೫–೨ ॥

ಅರ್ಥ– ಹೇ ಬಿಳಿ ಬಣ್ಣದ ಸಾರಮೇಯನೇ, ಹೇ ಪಿಶಂಗ ವರ್ಣದವನೇ, ನೀನು ಕಚ್ಚಲೆಂದು ಬಾಯಿ ತೆರೆದು ಹಲ್ಲುಗಳನ್ನು ತೋರಿಸಿದಾಗ ಅವುಗಳು ನಿನ್ನ ದವಡೆಗಳಲ್ಲಿ ಈಟಿಗಳಂತೆ ಹೊಳೆಯುತ್ತವೆ. ಆದರೆ (ನೀನು ನಮ್ಮನ್ನು ಕಚ್ಚದೇ) ಈಗ ಸುಖವಾಗಿ ನಿದ್ರಿಸು.

ಈ ಋಚೆ ಇರುವ ಸೂಕ್ತದ ಋಷಿಯು ವಸಿಷ್ಠನಾಗಿದ್ದಾನೆ. ಹಾಗಾಗಿ ವಸಿಷ್ಠನು ನಿದ್ರೆಯಲ್ಲಿಯೇ ಸಂಚರಿಸುತ್ತ ತನ್ನ ತಂದೆಯಾದ ವರುಣನ ಮನೆಗೆ ಹೋದಾಗ ಅಲ್ಲಿ ಬಾಗಿಲು ಕಾಯುತಿದ್ದ ಸಾರಮೇಯನು ಅವನನ್ನು ಕಚ್ಚಲು ಬಂದಿತೆಂತಲೂ, ಆಗ ವಸಿಷ್ಠನು ಕೆಲವು ಋಚೆಗಳನ್ನು ಪಠಿಸಿ ಆ ನಾಯಿಯನ್ನು ನಿದ್ರಿಸುವಂತೆ ಮಾಡಿದನೆಂತಲೂ, ಬೃಹದ್ದೇವತಾಕಾರನಾದ ಶೌನಕನು ಒಂದು ಕಥೆಯನ್ನು ಹೇಳಿದ್ದಾನೆ.

. Popular Hindu Astronomy Part I page 45 by Kalinatha Mukherji.

ಸ್ತೇನಂ ರಾಯ ಸಾರಮೇಯ ತಸ್ಕರಂ ವಾ ಪುನಃ ಸರ
ಸ್ತೋತೄನಿಂದ್ರಸ್ಯ ರಾಯಸಿ ಕಿಮಸ್ಮಾನ್ ದುಚ್ಛುನಾಯಸೇ
ನಿ ಷುಸ್ವಪ ॥ ಋ. ೭-೫೫-೩ ॥

ಅರ್ಥ– ಹೇ ಸಾರಮೇಯನೇ, ನೀನು ಕಳ್ಳರನ್ನೋ, ತುಡುಗರನ್ನೋ (ಕಂಡರೆ) ಬೊಗಳು. ಇಂದ್ರನ ಸ್ತುತಿಪಾಠಕರಾದ ನಮ್ಮನ್ನು ಬೊಗಳಿ ಏಕೆ ಗದರಿಸುತ್ತೀ; ಹಿಂದೆ ಸರಿ; ಸುಖವಾಗಿ ಮಲಗು.

ತ್ವಂ ಸೂಕರಸ್ಯ ದರ್ದೃಹಿ ತವ ದರ್ದರ್ತು ಸೂಕರಃ ।
ಸ್ತೋತೄ ನಿಂದ್ರಸ್ಯ ರಾಯಸಿ ಕಿಮಸ್ಮಾನ್
ದುಚ್ಛುನಾಯಸೇ ನಿ ಷುಸ್ವಪ ॥ ಋ ೭-೫೫-೪ ॥

ಅರ್ಥ– ಒಂದೋ ನೀನು ಹಂದಿಯನ್ನು ಸೀಳು, ಇಲ್ಲವೇ ಹಂದಿಯು ನಿನ್ನನ್ನು ಸೀಳಲಿ, ಬರಿದೇ ಇಂದ್ರನ ಸ್ತುತಿಪಾಠಕರಾದ ನಮ್ಮನ್ನೇಕೆ ಬೊಗಳಿ ಗದರಿಸುತ್ತೀ? ಸುಖವಾಗಿ ಮಲಗು.

ಈ ಸಂದರ್ಭದಲ್ಲಿ ಆರ್ದ್ರಾ ನಕ್ಷತ್ರದ ಅಧಿದೇವನು ರುದ್ರನೆಂಬುದನ್ನೂ, ಋಗ್ವೇದದ ೧-೧೧೪-೫ರಲ್ಲಿ ರುದ್ರನನ್ನು **"ದಿವೋ ವರಾಹಮ್ ಅರುಷಂ ಕಪರ್ದಿನಮ್"** ಅಂದರೆ "ಆಕಾಶದಲ್ಲಿರುವ ಕಾಡುಹಂದಿಯೆಂದೂ, ಕೆಂಪಗಿರುವವನೆಂದೂ, ತಲೆಯಲ್ಲಿ ಜಡೆಯಿರುವವ"ನೆಂದೂ ಬಣ್ಣಿಸಿರುವುದರಿಂದ ಮತ್ತು ಯಜುರ್ವೇದದಲ್ಲಿ ರುದ್ರನನ್ನು ಬಹುವಚನದಲ್ಲಿ ಸಂಬೋಧಿಸಿ—**"ನಮೋ ಮೃಗಯುಭ್ಯಃ ಶ್ವನಿಭ್ಯಶ್ಚ-ವೋ ನಮಃ । ನಮಃ ಶ್ವಭ್ಯಃ ಶ್ವಪತಿಭ್ಯಶ್ಚವೋ ನಮಃ ॥ ತೈ. ಸಂ. ೪-೫-೪-೧೬"** ಅಂದರೆ—ಬೇಟೆಗಾರರಿಗೂ. ನಾಯಿಗಳ ನಾಯಕರಿಗೂ ನಮಸ್ಕಾರ, ನಾಯಿಗಳಿಗೂ, ನಾಯಿಗಳ ಒಡೆಯರಿಗೂ ನಮಸ್ಕಾರ ವೆಂದು ಹೇಳಿರುವುದನ್ನು ಪರಿಶೀಲಿಸಿದರೆ ಹಿಂದಿನ ಋಚೆಯಲ್ಲಿ ಬಂದಿರುವ ನಾಯಿ ಮತ್ತು ಹಂದಿಗಳೊಳಗಿನ ಸಂಬಂಧವು ಸ್ಪಷ್ಟವಾಗುತ್ತದೆ. ಅಂದರೆ ಸಾರಮೇಯ ನಕ್ಷತ್ರವು ಆರ್ದ್ರಾ ನಕ್ಷತ್ರದ ಸರಿ ನೇರಿನಲ್ಲಿದೆಯೆಂದು ಗೊತ್ತಾಗುತ್ತದೆ. ಅರ್ಥಾತ್ ಸಾರಮೇಯ ನಕ್ಷತ್ರವು ಪ್ರಜಾಪತಿಯ ಅಥವಾ ಮೃಗ (ಶಿರಸ್) ನಕ್ಷತ್ರದ ಕೆಳಗಡೆಯಲ್ಲಿ ದಕ್ಷಿಣ ಪೂರ್ವದಲ್ಲಿದೆ. ಆ ಶ್ವಾನವು ನಿದ್ರಿಸಿದ್ದ ಋಭುಗಳನ್ನು ಎಬ್ಬಿಸಿದ್ದಿತೆಂಬ ಆಖ್ಯಾಯಿಕೆಯು ಆ ನಕ್ಷತ್ರದ ಸಂಬಂಧವು ಸೂರ್ಯೋದಯದೊಂದಿಗೂ ಹೊಸ ವರ್ಷದ ಪ್ರಾರಂಭದೊಂದಿಗೂ ಇದ್ದಿತೆಂಬುದನ್ನು ಸೂಚಿಸುತ್ತದೆ.

ಸುಷುಪ್ವಾಂಸ ಋಭವಸ್ತದಪೃಚ್ಛತಾಗೋಹ್ಯ
ಕ ಇದಂ ನೋ ಅಬೂಬುಧತ್ ।
ಶ್ವಾನಂ ಬಸ್ತೋ ಬೋಧಯಿತಾರಮಬ್ರವೀತ್
ಸಂವತ್ಸರ ಇದಮದ್ಯಾವ್ಯಖ್ಯತ ॥ ಋ. ೧-೧೬೧-೧೩॥

ಅರ್ಥ—ನಿದ್ರೆಯಿಂದ ಎಚ್ಚೆತ್ತ ಋಭುಗಳು ಹೇ ಅಗೋಹ್ಯನೇ (ಅಡಗಿಸಲು ಸಾಧ್ಯವಿಲ್ಲದಂಥ ಸೂರ್ಯನೇ) ನಮ್ಮನ್ನು ಯಾವನು ಎಚ್ಚರಗೊಳಿಸಿದನು? ಎಂಬುದಾಗಿ ಕೇಳಲು- ಹೋತನು (=ಸೂರ್ಯನು) ಶ್ವಾನವು (=ನಾಯಿಯು) ನಿಮ್ಮನ್ನು ಎಚ್ಚರಗೊಳಿಸಿತೆಂದೂ, ಅದು ನಿಮ್ಮನ್ನು ಇಂದು ಸಂವತ್ಸರದಲ್ಲಿ ಅಂದರೆ ವರ್ಷದ ಮೊದಲನೆಯ ದಿನ ಮಾತ್ರ ಕಂಡಿತೆಂದೂ ಹೇಳಿದನು.

೩. **ಶ್ಯಾಮ ಮತ್ತು ಶಬಲ** ಎಂಬ ಎರಡು ನಾಯಿಗಳು. ಇವುಗಳು ಯಮನ ನಾಯಿಗಳೆಂದೂ, ಯಮಲೋಕದ ಹಾದಿಯನ್ನು ಕಾಯುತ್ತವೆಂದೂ ಸತ್ತವರು ಯಮನ ಬಳಿಗೆ ಹೋಗುವಾಗ ಅವರೊಂದಿಗೆ ಸಾಗಿ ಅವರನ್ನು ಕಾಪಾಡುತ್ತವೆಂದೂ, ಅವುಗಳಿಗೆ ನಾಲ್ಕು ಕಣ್ಣುಗಳಿವೆಯೆಂದೂ ಋಗ್ವೇದದ ಮಂತ್ರಗಳಿಂದ ತಿಳಿದುಬರುತ್ತದೆ. ವೇದಾಂಗ ಜ್ಯೋತಿಷದ ಪ್ರಕಾರ ನಿರ್ಋತಿ ಅಥವಾ ಮೃತ್ಯುವು ಮೂಲ ನಕ್ಷತ್ರದ ದೇವತೆಯಾಗಿದೆ. ಯಜುರ್ವೇದದ ತೈತ್ತಿರೀಯ ಸಂಹಿತೆಯ ೪-೪-೧೦-೨ರಲ್ಲಿ ಮೂಲನಕ್ಷತ್ರದ ಹೆಸರು **"ವಿಚೃತೌ"** ಎಂದು ಹೇಳಿದೆಯಲ್ಲದೇ ಅದರ ಅಧಿದೇವತೆಯು **"ಪಿತರಃ"** ಅಂದರೆ ಪಿತೃಗಳಾಗಿದ್ದಾರೆ. ಹಾಗೆಯೇ ಅಥರ್ವವೇದದ ೨-೮-೧ರಲ್ಲಿ ಮತ್ತು ೬-೧೨೧-೩ರಲ್ಲಿ **"ವಿಚೃತೌ ನಾಮ ತಾರಕೇ"** ಅಂದರೆ "ವಿಚೃತ್" ಎಂಬ ಹೆಸರಿನ ಎರಡು ತಾರಕೆಗಳು ಎಂದು ಹೇಳಿದ್ದು ೬-೧೧೦-೨ರಲ್ಲಿ **"ವಿಚೃತೌ ಯಮಸ್ಯ"** ಅಂದರೆ "ಯಮನ ಬಿಡುಗಡೆಗಾರರು" ಎಂದು ಕೂಡ ಹೇಳಿದೆ. ಆದುದರಿಂದ ಪ್ರಾಚೀನ ಕಾಲದಲ್ಲಿ ಯಮಲೋಕದ ಅಥವಾ ಪಿತೃಲೋಕದ ಹಾದಿಯು ಮೂಲನಕ್ಷತ್ರದಿಂದ ಪ್ರಾರಂಭವಾಗುತಿದ್ದಿತೆಂದು ಭಾವಿಸಬೇಕಾಗುತ್ತದೆ. ಮತ್ತು ಮೂಲ ನಕ್ಷತ್ರಪುಂಜದೊಳಗಿನ ಎರಡು ತಾರಕೆಗಳನ್ನು ಶ್ಯಾಮ ಹಾಗೂ ಶಬಲ ಎನ್ನುತಿದ್ದರೆಂದು ತಿಳಿಯಬೇಕಾಗುತ್ತದೆ. ಇಲ್ಲವೇ ಶ್ಯಾಮ ಮತ್ತು ಶಬಲ ಎಂಬ ಎರಡು ತಾರಕೆಗಳು ಮೂಲ ನಕ್ಷತ್ರದ ಬಳಿಯಲ್ಲಿಯೇ ಇವೆಯೆಂದು ಭಾವಿಸಬೇಕಾಗುತ್ತದೆ. ಋಗ್ವೇದದಲ್ಲಿ ಶ್ಯಾಮ-ಶಬಲರ ಸಂಬಂಧದಲ್ಲಿ ಮುಂದೆ ಕೊಡಲಾಗುವ ಋಚೆಗಳಿವೆ. ಮತ್ತು ಅವುಗಳು ಗೃಹ್ಯಸೂತ್ರಗಳಲ್ಲಿ ಪ್ರೇತ ಸಂಸ್ಕಾರಕ್ಕಾಗಿ ವಿಧಿಸಲ್ಪಟ್ಟಿವೆ—

ಅತಿ ದ್ರವ ಸಾರಮೇಯೌ ಶ್ವಾನೌ
ಚತುರಕ್ಷೌ ಶಬಲೌ ಸಾಧುನಾ ಪಥಾ ।
ಅಥಾ ಪಿತೄನ್ ತ್ಸುವಿದತ್ರಾಂ ಉಪೇಹಿ
ಯಮೇನ ಯೇ ಸಧಮಾದಂ ಮದಂತಿ ॥ ಋ. ೧೦-೧೪-೧೦ ॥

ಅರ್ಥ- (ಎಲೇ ಮೃತಕನೇ) ನೀನು ಒಳ್ಳೆಯ ಮಾರ್ಗದಿಂದ (ಸಾಗುವಾಗ) ಹಾದಿಯಲ್ಲಿ ಸಿಗುವ ಸರಮೆಯ ಮರಿಗಳಾದ, ಬಣ್ಣ ಬಣ್ಣದ ಕಲೆಗಳುಳ್ಳ

ಮತ್ತು ನಾಲ್ಕು ಕಣ್ಣುಗಳುಳ್ಳ ಎರಡು ನಾಯಿಗಳನ್ನು ಏರಿ ಓಡು. ಮತ್ತು ಯಮನೊಂದಿಗೆ ಕೂತು ಸ್ಪರ್ಧೆಗಳಿಂದ ಆನಂದ ಪಡುತ್ತಿರುವ ಹಾಗೂ ತುಂಬಾ ತಿಳಿವುಳ್ಳ, ತಿಳಿದವರಾದ ಪಿತೃಗಳ ಬಳಿಗೆ

ಯೌ ತೇ ಶ್ವಾನೌ ಯಮ ರಕ್ಷಿತಾರೌ
ಚತುರಕ್ಷೌ ಪಥಿರಕ್ಷೀ ನೃಚಕ್ಷಸೌ ।
ತಾಭ್ಯಾಮೇನಂ ಪರಿ ದೇಹಿ ರಾಜನ್
ಸ್ವಸ್ತಿ ಚಾಸ್ಮಾ ಅನಮೀವಂ ಚ ಧೇಹಿ ॥ ಋ. ೧೦-೧೪-೧೧ ॥

ಅರ್ಥ– ಹೇ ಯಮರಾಜನೇ, ರಕ್ಷಣೆ ನೀಡುವಂಥವುಗಳೂ, ನಾಲ್ಕು ಕಣ್ಣುಗಳುಳ್ಳವುಗಳೂ, ಹಾದಿಯಲ್ಲಿ ಕಾಪಾಡುವಂಥವುಗಳೂ, ಮನುಷ್ಯರನ್ನು ಕಣ್ಣಿಟ್ಟು ನೋಡುವಂಥವುಗಳೂ, ಆದ ಯಾವ ನಿನ್ನ ಎರಡು ನಾಯಿಗಳಿವೆಯೋ ಅವುಗಳಿಗೆ ನೀನು ಈ ಮೃತಕನನ್ನು ಒಪ್ಪಿಸಿಕೊಡು. ಮತ್ತು ಅವನಿಗೆ ಮಂಗಲ ವನ್ನೂ, ಆರೋಗ್ಯವನ್ನೂ ಕರುಣಿಸು.

ಉರೂಣಸಾವಸುತೃಪಾ ಉದುಂಬಲೌ
ಯಮಸ್ಯ ದೂತೌ ಚರತೋ ಜನಾँ ಅನು ।
ತಾವಸ್ಮಭ್ಯಂ ದೃಶಯೇ ಸೂರ್ಯಾಯ
ಪುನರ್ದಾತಾಮಸುಮದ್ಯೇಹ ಭದ್ರಮ್ ॥ ಋ. ೧೦-೧೪-೧೨ ॥

ಅರ್ಥ- ಅಗಲವಾದ ಮೂಗುಳ್ಳವುಗಳೂ, ಪ್ರಾಣದಿಂದಲೇ ತೃಪ್ತಿ ಪಡೆಯುವಂಥವುಗಳೂ, ಕೆಂಚ ಬಣ್ಣದವುಗಳೂ, ಯಮನ ದೂತರೂ ಆಗಿರುವ ಆ ಎರಡು ನಾಯಿಗಳು ನಮಗೆ ಸೂರ್ಯನನ್ನು ನೋಡಲಿಕ್ಕಾಗಿ ಇಂದು ಇಲ್ಲಿ ಮಂಗಲ ಮಯವಾದ ಜೀವನವನ್ನು ಕೊಡಲಿ.

೪. ಕಾಲಕಂಜ ಎಂಬ ಹೆಸರಿನ ಎರಡು ತಾರಕೆಗಳು. ತೈತ್ತಿರೀಯ ಹಾಗೂ ಶತಪಥ ಬ್ರಾಹ್ಮಣಗಳೊಳಗಿನ ಆಖ್ಯಾಯಿಕೆಗಳ ಪ್ರಕಾರ ಇಟ್ಟಿಗೆಗಳಿಂದ ಯಜ್ಞ ಚಿತಿಯನ್ನು ಕಟ್ಟಿ ಸ್ವರ್ಗಕ್ಕೇರುತ್ತಿದ್ದಾಗ ಇಂದ್ರನು ಚಿತಿಯನ್ನು ಕೆಡವಿದುದರಿಂದ ಆಕಾಶಕ್ಕೆ ಹಾರಿ ಹೋಗಿ ದಿವ್ಯಶ್ವಾನಗಳಾಗಿ ಮಾರ್ಪಟ್ಟ ಇಬ್ಬರು ಅಸುರರು. ಹೆವ್ಲೀಲಿಯಸ್ ಎಂಬ ಪಾಶ್ಚಾತ್ಯ ಜ್ಯೋತಿರ್ವಿದರೊಬ್ಬರು ಶಕವರ್ಷ. ೧೬೧೨ರಲ್ಲಿ ಆ ಎರಡು ತಾರಕೆಗಳನ್ನು "Canes Venatici" ಅಂದರೆ "ಎರಡು ಬೇಟೆ ನಾಯಿಗಳು" ಎಂದು ಹೆಸರಿಸಿದ್ದಾರೆ. ತೈತ್ತಿರೀಯ ಬ್ರಾಹ್ಮಣದೊಳಗಿನ ಆಖ್ಯಾಯಿಕೆ ಯು ಮುಂದಿನಂತಿದೆ–

"ಕಾಲಕಂಜಾ ವೈ ನಾಮಾಸುರಾ ಆಸನ್। ತೇ ಸುವರ್ಗಾಯ ಲೋಕಾ ಯಾಗ್ನಿಮಚಿನ್ವತ। ಪುರುಷ ಇಷ್ಟಕಾಮುಪಾದಧಾತ್ ಪುರುಷ ಇಷ್ಟಕಾಮ್। ಸ

ಇಂದ್ರೋ ಬ್ರಾಹ್ಮಣೋ ಬ್ರುವಾಣ ಇಷ್ಟಕಾಮುಪಾಧತ್ತ। ಏಷಾ ಮೇ ಚಿತ್ರಾನಾಮೇತಿ। ತೇ ಸುವರ್ಗಂ ಲೋಕಮಾಪ್ರಾರೋಹನ್। ಸ ಇಂದ್ರ ಇಷ್ಟಕಾಮಾವೃಹತ್। ತೇಽವಾಕೀರ್ಯಂತ। ಯೇಽವಾಕೀರ್ಯಂತ ತ ಊರ್ಣಾವಭ ಯೋಽಭವನ್। ದ್ವಾವುದಪತತಾಮ್ ತೌ ದಿವ್ಯೌ ಶ್ವಾನಾವಭವತಾಮ್॥ ತೈ. ಬ್ರಾ. ೧-೧-೨ ॥

ಅರ್ಥ–ಕಾಲಕಂಜ ಎಂಬ ಅಸುರರಿದ್ದರು, ಅವರು ಸ್ವರ್ಗ ಲೋಕಕ್ಕೇರಲು (ನಕ್ಷತ್ರಗಳ ಹೆಸರಿನ) ಇಟ್ಟಿಗೆಗಳಿಂದ ಯಜ್ಞಚಿತಿಯನ್ನು ಕಟ್ಟತೊಡಗಿದರು. ಅವರಲ್ಲಿ ಪ್ರತಿಯೊಬ್ಬನು ಒಂದೊಂದು ಇಟ್ಟಿಗೆಯನ್ನಿಡುತಿದ್ದ. ಆಗ ಇಂದ್ರನು ತಾನು ಬ್ರಾಹ್ಮಣನೆಂದು ಹೇಳುತ್ತ ಅಲ್ಲಿಗೆ ಬಂದು ಚಿತ್ರಾ ಎಂಬ ಹೆಸರಿನ ಇಟ್ಟಿಗೆಯನ್ನು ಆ ಚಿತಿಯಲ್ಲಿಟ್ಟ. ಅಸುರರು ಚಿತಿಯನ್ನು ಹತ್ತಿ ಸ್ವರ್ಗಲೋಕಕ್ಕೇರತೊಡಗಿದರು. ಒಡನೆಯೇ ಇಂದ್ರನು ಚಿತಿಯಿಂದ ತನ್ನ ಇಟ್ಟಿಗೆಯನ್ನು ಕಿತ್ತುತೆಗೆದ. ಅಸುರರು ಚೆಲ್ಲಾಪಿಲ್ಲಿಯಾಗಿ ಹರಡಿ ಕೆಳಗೆ ಬಿದ್ದರು. ಬಿದ್ದವರು ಜೇಡರ ಹುಳಗಳಾದರು. ಇಬ್ಬರು ಮೇಲಕ್ಕೆ ಹಾರಿ ಹೋಗಿದ್ದರು, ಅವರು ದಿವ್ಯ (=ಆಕಾಶದ) ಶ್ವಾನ (ನಾಯಿ)ಗಳಾದರು.

ಶತಪಥ ಬ್ರಾಹ್ಮಣದಲ್ಲಿ–ಚಿತ್ರಾ ನಕ್ಷತ್ರದಲ್ಲಿ ಯಜ್ಞದ ಅಗ್ನಿಯನ್ನು ಆಧಾನ ಮಾಡಬೇಕೆಂದು ಹೇಳಿದ ತರುವಾಯ ಆ ನಕ್ಷತ್ರಕ್ಕೆ "ಚಿತ್ರಾ" ಎಂಬ ಹೆಸರು ಏಕೆ ಬಂದಿತೆಂದು ವಿವರಿಸುವ ಒಂದು ಆಖ್ಯಾಯಿಕೆ ಇದೆ. ಅದರ ಸಾರಾಂಶವು ಮುಂದಿನಂತಿದೆ–

"ಪ್ರಜಾಪತಿಯ ಮಕ್ಕಳಾದ ದೇವತೆಗಳು (=ಉತ್ತರಾಯಣ ಕಾಲದ ನಕ್ಷತ್ರಗಳು) ಮತ್ತು ಅಸುರರು(ದಕ್ಷಿಣಾಯನ ಕಾಲದ ನಕ್ಷತ್ರಗಳು) ಹಿರಿಮೆಗಾಗಿ ಸ್ಪರ್ಧಿಸುತಿದ್ದರು. ಎರಡು ಪಕ್ಷಗಳೂ ಸ್ವರ್ಗಕ್ಕೇರಲು ಹವಣಿಸುತಿದ್ದರು. ಅಸುರರು ಸ್ವರ್ಗಕ್ಕೇರಲು ರೌಹಿಣ ಎಂಬ ಅಗ್ನಿಚಿತಿಯನ್ನು ಕಟ್ಟತೊಡಗಿದರು. ಅಸುರರು ಆ ಚಿತಿಯನ್ನು ಕಟ್ಟಿದರೆ ಜಯಗಳಿಸುವುದು ನಿಶ್ಚಿತವೆಂದು ಎಣಿಸಿದ ಇಂದ್ರನು ಒಂದು ಇಟ್ಟಿಗೆಯನ್ನು ಹಿಡಿದುಕೊಂಡು ಬ್ರಾಹ್ಮಣನೆಂದು ಹೇಳುತ್ತ ಅಲ್ಲಿಗೆ ಹೋದ. ಮತ್ತು ಅಸುರರನ್ನು ಕರೆದು ನಾನು ಕೂಡ ಒಂದು ಇಟ್ಟಿಗೆಯನ್ನಿಡುವೆನೆಂದ. ಅಸುರರು ಆಗಲಿ ಎನ್ನಲಾಗಿ ಇಂದ್ರನು ಇಟ್ಟಿಗೆಯನ್ನಿಟ್ಟ. ಅವರ ಚಿತಿಯು ಪೂರ್ಣವಾಗಲು ಸ್ವಲ್ಪ ಮಾತ್ರ ಉಳಿದಿತ್ತು. ಆಗ ಇಂದ್ರನು ನನ ಇಟ್ಟಿಗೆಯನ್ನು ನಾನು ಹಿಂದೆ ತೆಗೆಯುವೆನೆನ್ನುತ್ತ ತನ್ನ ಇಟ್ಟಿಗೆಯನ್ನು ಚಿತಿಯಿಂದ ಕಿತ್ತುತೆಗೆದ. ಒಡನೆಯೇ ಚಿತಿಯು ಕುಸಿದು ಬಿತ್ತು. ಮತ್ತು ಅದರೊಂದಿಗೆ ಅಸುರರೂ ಬಿದ್ದರು, ಇಂದ್ರನು ಆ ಇಟ್ಟಿಗೆಗಳನ್ನು ವಜ್ರಗಳನ್ನಾಗಿ ಮಾರ್ಪಡಿಸಿ ಅವುಗಳಿಂದ ಅಸುರರ ಕುತ್ತಿಗೆಗಳನ್ನು ತರಿದನು. ಆಗ ದೇವತೆಗಳೆಲ್ಲ ಒಟ್ಟು

ಗೂಡಿ ನಾವು ಅಷ್ಟು ಮಂದಿ ವೈರಿಗಳನ್ನು ಕೊಂದುದು "ಚಿತ್ರ"ವೇ ಸೈ ಅಂದರು. ಅದುವೇ ಚಿತ್ರಾ ನಕ್ಷತ್ರದ ಚಿತ್ರತ್ವವಾಗಿದೆ.[1]

ಋಗ್ವೇದದ ಒಂದು ಋಚೆಯಲ್ಲಿ ಇಂದ್ರನು ರೌಹಿಣವನ್ನು ತಳ್ಳಿಬಿಟ್ಟನೆಂದು ಹೇಳಿರುವುದೇ ಶತಪಥ ಬ್ರಾಹ್ಮಣದೊಳಗಿನ ಆ ಆಖ್ಯಾಯಿಕೆಗೆ ಮೂಲಾಧಾರವಾಗಿರಬಹುದಾಗಿದೆ. ಆ ಋಚೆಯು ಮುಂದಿನಂತಿದೆ–

ಯಃ ಸಪ್ತರಶ್ಮಿರ್ವೃಷಭಸ್ತುವಿಷ್ಮಾನ್
ಅವಾಸೃಜತ್ ಸರ್ತವೇ ಸಪ್ತಸಿಂಧೂನ್ ।
ಯೋ ರೌಹಿಣಮಸ್ಫುರದ್ ವಜ್ರಬಾಹುರ್
ದ್ಯಾಮಾರೋಹಂತಂ ಸ ಜನಾಸ ಇಂದ್ರ ॥ ಋ. ೨–೧೨–೧೨ ॥

ಅರ್ಥ: ಹೇ ಜನರೇ, ಏಳು ರಶ್ಮಿಗಳುಳ್ಳವನೂ, ವೃಷಭನೂ, ಮಹಾಬಲಶಾಲಿಯೂ ಆದ ಯಾವನು ಏಳು ನದಿಗಳನ್ನು ಪ್ರವಹಿಸುವ ಸಲುವಾಗಿ ಬಿಡುಗಡೆ ಮಾಡಿದನೋ ವಜ್ರಬಾಹುವಾಗಿದ್ದ ಯಾವನು ಆಕಾಶಕ್ಕೇರುತಿದ್ದ ರೌಹಿಣನೆಂಬ ಅಸುರನನ್ನು ತಳ್ಳಿಬಿಟ್ಟನೋ ಅವನೇ ಇಂದ್ರನು.

ಪ್ರಜಾಪತಿಯ ಮಕ್ಕಳೆಂದು ವೈದಿಕ ಸಾಹಿತ್ಯದಲ್ಲಿ ಉಲ್ಲೇಖಿಸಲ್ಪಟ್ಟಿರುವ ದೇವತೆಗಳು ಮತ್ತು ಅಸುರರು ವಾಸ್ತವವಾಗಿ ನಕ್ಷತ್ರಗಳಾಗಿರುವುದರಿಂದ ಹಿಂದಿನ ಋಚೆಯಲ್ಲಿ ಬಂದಿರುವ ರೌಹಿಣ ಎಂಬ ಶಬ್ದವು ರೋಹಿಣೀ ನಕ್ಷತ್ರವನ್ನು ಸೂಚಿಸುತ್ತದೆಂಬುದರಲ್ಲಿ ಸಂದೇಹವಿಲ್ಲ. ಹಾಗೆಯೇ ತೈತ್ತಿರೀಯ ಸಂಹಿತೆಯಲ್ಲಿ (೪-೪-೧೦)

---

[1] ಚಿತ್ರಾಯಾಮಗ್ನೀ ಆದಧೀತ। ದೇವಾಶ್ಚ ವಾ ಅಸುರಾಶ್ಚೋಭಯೇ ಪ್ರಜಾಪತ್ಯಾಃ ಪಸ್ಪೃಧಿರೇ। ತ ಉಭಯ ಏವಾಮುಂ ಲೋಕಂ ಸಮಾರುರುಕ್ಷಾಂ ಚಕ್ರುರ್ದಿವಮೇವ ತತೋಽಸುರಾ ರೌಹಿಣ ಮಿತ್ಯಗ್ನಿಂ ಚಿಕ್ಯಿರೇಽನೇನಾಮುಂ ಲೋಕಂ ಸಮಾರೋಕ್ಷ್ಯಾಮ ಇತಿ ॥೨-೧-೨ ೧೩॥ ಇಂದ್ರೋ ಹ ವ್ಯೈಕ್ಷಾಂ ಚಕ್ರೇ ಇಮಂ ಚೇದ್ವಾ ಇಮೇ ಚಿನ್ವತೇ ತತ ಏವ ನೋಽಭಿಭವಂತೀತಿ ಸ ಬ್ರಾಹ್ಮಣೋ ಬ್ರುವಾಣ ಏಕೇಷ್ಟಕಾಂ ಪ್ರಬಧ್ಯೇಯಾಯ॥೧೪॥ ಸ ಹೋವಾಚ ಹಂತಾಹಮಿಮಾಮಪ್ಯುಪದಧಾ ಇತಿ ತಥೇತಿ ತಾಮುಪಾದಧತ್ತ। ತೇಷಾಮಲ್ಪಕಾದೇವಾಗ್ನಿರಸಂಚಿತ ಆಸ ॥೧೫॥ ಅಥ ಹೋವಾಚ ಅನ್ವಾಽಹಂ ತಾಂ ದಾಸ್ಯೇ ಯಾಮಾಮೇಹೇತಿ ತಾಮಭಿಪದ್ಯಾಬಬರ್ಹ ತಸ್ಯಾಮಾಬೃಢಾಯಾಮಗ್ನಿರ್ವ್ಯವಶಾದಾಗ್ನೇರ್ವ್ಯವಶಾದಮನ್ವಸುರಾ ವ್ಯವಸೇದುಃ ಸ ತಾ ಏವೇಷ್ಟಕಾಃ ವಜ್ರಾನ್ ಕೃತ್ವಾ ಗ್ರೀವಾಃ ಪ್ರಚಿಚ್ಛೇದ ॥೧೬॥ ತೇ ಹ ದೇವಾಃ ಸಮೇತ್ಯೋಚುಃ। ಚಿತ್ರಂ ವಾ ಅಭೂಮ ಯ ಇಯತಃ ಸಪತ್ನಾನ್ ಅವಧಿಷ್ಮೇತಿ। ತದ್ವೈ ಚಿತ್ರಾಯೈ ಚಿತ್ರಾತ್ವಮ್। ಚಿತ್ರಂ ಹ ಭವತಿ ಹಂತಿ ಸಪತ್ನಾನ್ ಹಂತಿ ದ್ವಿಷಂತಂ ಭ್ರಾತೃವ್ಯಂ ಯ ಏವಂ ವಿದ್ವಾಂಶ್ಚಿತ್ರಾಯಾಮಾಧತ್ತೇ ತಸ್ಮಾದೇತತ್ ಕ್ಷತ್ರಿಯ ಏವ ನಕ್ಷತ್ರಮುಪೇತ್ಸೇಜ್ಜಿಘಾಂಸತೀವ ಹ್ಯೇಷ ಸಪತ್ನಾನ್ ವೀವ ಜಿಗೀಷತೇ ॥೧೭॥

ಮತ್ತು ತೈತ್ತಿರೀಯ ಬ್ರಾಹ್ಮಣದಲ್ಲಿ (೧-೫-೧-೪) ಜ್ಯೇಷ್ಠಾ ನಕ್ಷತ್ರದ ಹೆಸರು "ರೋಹಿಣೀ" ಎಂತಲೂ ಅದರ ದೇವತೆಯ ಹೆಸರು ಇಂದ್ರನೆಂತಲೂ ಹೇಳಿರುವು ದರಿಂದ ಒಂದು ಕಾಲದಲ್ಲಿ ರೋಹಿಣೀ ಅಥವಾ ಜ್ಯೇಷ್ಠಾ ನಕ್ಷತ್ರದಿಂದ- ಅಸುರ ನಕ್ಷತ್ರಗಳ ಉದಯವು ಪ್ರಾರಂಭವಾಗುತಿದ್ದಿತೆಂದು ಇಲ್ಲವೇ ಆದರಿಂದ ಅಸುರ ನಕ್ಷತ್ರಗಳು ಕೊನೆಗೊಳ್ಳುತಿದ್ದುವೆಂದು ಹೇಳಬಹುದಾಗಿವೆ. ಆದರೆ ರೌಹಿಣ ಅಥವಾ ರೋಹಿಣೀ ಮತ್ತು ಚಿತ್ರಾ ನಕ್ಷತ್ರಗಳೊಳಗಿನ ಸಂಬಂಧವು ಯಾವ ಬಗೆಯದೆಂದು ಹೇಳಲಾಗುವುದಿಲ್ಲ, ಹೇಗಿದ್ದರೂ ತೈತ್ತಿರೀಯ ಬ್ರಾಹ್ಮಣದ ಆಖ್ಯಾಯಿಕೆಯಲ್ಲಿ ಎರಡು ದಿವ್ಯ ಶ್ವಾನಗಳಾಗಿ ಮಾರ್ಪಟ್ಟ ಇಬ್ಬರು ಕಾಲಕಾಂಜರೆಂದರೆ ಚಿತ್ರಾನಕ್ಷತ್ರದ ನೇರಿಗೆ ದೂರ ಉತ್ತರದಲ್ಲಿ ಕಾಣಿಸುವ ಎರಡು ತಾರಕೆಗಳೆಂಬುದರಲ್ಲಿ ಮಾತ್ರ ಸಂದೇಹವಿಲ್ಲ, ಆದರೆ ತೈತ್ತಿರೀಯ ಬ್ರಾಹ್ಮಣದಲ್ಲಿ ಆಕಾಶಕ್ಕೆ ಹಾರಿಹೋದ ಕಾಲ ಕಾಂಜರು ಇಬ್ಬರು ಎಂದು ಹೇಳಿದೆಯಾದರೆ ಅಥರ್ವವೇದದಲ್ಲಿ **"ಯೇ ತ್ರಯಃ ಕಾಲಕಾಂಜಾ ದಿವಿ ದೇವಾ ಇವಶ್ರಿತಾಃ** ॥ ೬-೮೦ ೨ ॥ ಅಂದರೆ "ಮೂವರು ಕಾಲ ಕಾಂಜರು ದಿವದಲ್ಲಿ ದೇವರಂತೆ ನೆಲಸಿದ್ದಾರೆ" ಎಂದು ಹೇಳಿದೆ.

೫. **ವೃಕ** (Lupus) **ಮತ್ತು ವೃಕೀ** (Lupa) ಗಂಡು ತೋಳ ಮತ್ತು ಹೆಣ್ಣು ತೋಳ-ಎಂಬ ಎರಡು ತಾರೆಗಳು. ಇವುಗಳು ಒಂದರಿಂದ ಇನ್ನೊಂದು ಕೊಂಚ ದೂರವಾಗಿ ಅನುರಾಧಾ ನಕ್ಷತ್ರದ ದಕ್ಷಿಣದಲ್ಲಿವೆ, ಋಗ್ವೇದದ ಕೆಲವು ಋಚೆಗಳಲ್ಲಿ "ವೃಕಿ"ಯ ಸಂಬಂಧದಲ್ಲಿ ಬಂದಿರುವ ವರ್ಣನೆಯ ಮೇಲಿಂದ ಈ ನಕ್ಷತ್ರಗಳ ಜೊತೆಯು ಕ್ಷಿತಿಜದಲ್ಲಿ ಕಾಣಿಸತೊಡಗಿದ ಹಾಗೆಯೇ ಉತ್ತರಧ್ರುವ ಪ್ರದೇಶದಲ್ಲಿ ನೂರು ದಿನಗಳ ಅವಧಿಯ ದೀರ್ಘರಾತ್ರಿಯು ಪ್ರಾರಂಭವಾಗಿ ದಟ್ಟ ವಾದ ಕತ್ತಲೆಯು ಕವಿಯುತಿದ್ದಿತೆಂದು ಮತ್ತು ಜನರು ಕಣ್ಣುಗಳಿದ್ದರೂ ಕುರುಡ ರಂತಾಗುತಿದ್ದರೆಂದು ತಿಳಿಯಬಹುದಾಗಿದೆ. ಅಂದರೆ ಋಜ್ರಾಶ್ವನೆಂಬವನು ವೃಕಿಯ ಸಲುವಾಗಿ ನೂರು ಕುರಿಗಳನ್ನು ಕೊಂದನೆಂಬ ಕಾರಣದಿಂದ ಅವನ ತಂದೆಯು ಅವನನ್ನು ಕುರುಡನನ್ನಾಗಿ ಮಾಡಿದನೆಂತಲೂ, ದೇವತೆಗಳ ವೈದ್ಯರಾದ ಅಶ್ವಿನೀ ಕುಮಾರರು ಅವನಿಗೆ ದೃಷ್ಟಿಯನ್ನು ಕರುಣಿಸಿದರೆಂದೂ ಆ ಋಚೆಗಳಲ್ಲಿ ವರ್ಣಿಸಿದೆ[1]. ಋಗ್ವೇದದಲ್ಲಿ ಅಶ್ವಿನಿಗಳು ಪ್ರಾತಃಕಾಲಿಕ ದೇವತೆಗಳಾಗಿದ್ದಾರೆ, ಅಂದರೆ ಅಶ್ವಿನೀ ನಕ್ಷತ್ರಪುಂಜವು ಪೂರ್ವದಿಕ್ಕಿನಲ್ಲಿ ಕಾಣಿಸತೊಡಗಿದ ಹಾಗೆಯೇ ಉತ್ತರಧ್ರುವ

---

1 ಶತಂ ಮೇಷಾನ್ ವೃಕ್ಯೇಚಕ್ಷದಾನಮೃಜ್ರಾಶ್ವಂ ಪಿತಾಂಧಂ ಚಕಾರ ।
ತಸ್ಮಾ ಅಕ್ಷೀ ನಾಸತ್ಯಾ ವಿಚಕ್ಷ ಆಧತ್ತಂ ದಸ್ರಾಭಿಷಜಾವನರ್ವನ್ ॥ ಋ. ೧-೧೧೬-೧೬ ॥
ಶತಂ ಮೇಷಾನ್ ಮಾಮಹಾನಂ ತಮಃ ಪ್ರಣೀತಮಶಿವೇನ ಪಿತ್ರಾ ।
ಆಕ್ಷೀ ಋಜ್ರಾಶ್ವೇ ಅಶ್ವಿನಾವಧತ್ತಂ ಜ್ಯೋತಿರಂಧಾಯ ಚಕ್ರತುರ್ವಿಚಕ್ಷೇ । ಋ. ೧-೧೧೭-೧೭

ಪ್ರದೇಶದಲ್ಲಿ ಉಷೋದಯವಾಗುತ್ತಿತ್ತು. ಮತ್ತು ಕತ್ತಲೆಯಿಂದಾಗಿ ಕಾಣಿಸದಂತಾದ ಕಣ್ಣುಗಳು ಕಾಣಿಸತೊಡಗುತ್ತಿದ್ದುವು. ಆ ಋಚೆಗಳು ಮಾತ್ರವಲ್ಲದೇ ಋಗ್ವೇದದಲ್ಲಿ ಅಧ್ವರ್ಯುಗಳು ತಮ್ಮನ್ನು ಅಪಾಯಕಾರಿಗಳಾದ ವೃಕನಿಗಾಗಲೀ ವೃಕಿಗಾಗಲೀ ಕೊಡಬೇಡಿರೆಂದು ದೇವರನ್ನೂ, ವೃಕಿಯನ್ನು, ವೃಕನನ್ನು ಮತ್ತು ಕಳ್ಳನನ್ನು ದೂರ ಸರಿಸು, ಮತ್ತು ನೀನು ನಮ್ಮಿಂದ ಸುಖವಾಗಿ ದಾಟಲಾಗುವಂಥವಳಾಗು ಎಂಬುದಾಗಿ ರಾತ್ರಿಯನ್ನೂ[3] ಪ್ರಾರ್ಥಿಸಿದ ಋಚೆಗಳೂ ಇವೆ. ಅದೇ ರೀತಿಯಲ್ಲಿ ಅಪಾಯಕಾರಿಯೂ, ಕೆಡುಕನೂ, ಹಾನಿಕಾರಕನೂ ಆಗಿರುವ ತೋಳನನ್ನು ನಮ್ಮ ಹಾದಿಯಿಂದ ತೊಲಗಿಸೆಂದು ರೇವತೀ ನಕ್ಷತ್ರದ ದೇವನಾದ ಪೂಷನನ್ನು ಪ್ರಾರ್ಥಿಸಿದೆ.[1] ಮತ್ತು ಆಕಾಶದ ಪರಿನಲ್ಲಿ ಕೂತಿರುವ ಸುಪರ್ಣರು ವಿಶಾಲ ಜಲಗಳಲ್ಲಿ ಈಜುತ್ತ ಬರುವ ತೋಳನನ್ನು ಹಿಂದಕ್ಕಟ್ಟುತ್ತಾರೆಂದು ಹೇಳಿದೆ,[2] ಹೊಟ್ಟೆಬಾಕನಾದ ಅಥವಾ ಕಡು ಲೋಭಿಯಾದ ಈ ಪಣಿಯನ್ನು ನಾಶಮಾಡೆಂದು ಸೋಮನನ್ನು ಪ್ರಾರ್ಥಿಸಿದ ಮತ್ತು ಪಣಿಯೇ ವೃಕನೆಂದು ಹೇಳಿದ ಋಚೆಗಳೂ ಋಗ್ವೇದದಲ್ಲಿವೆ.[3]

೬. ನೌ ಅಂದರೆ ನಾವೆ ಅಥವಾ ಹಡಗು. ಹತ್ತಕ್ಕಿಂತ ಹೆಚ್ಚು ತಾರೆಗಳುಳ್ಳ ಈ ನಕ್ಷತ್ರ ಪುಂಜವು ಆರ್ದ್ರಾ ಮತ್ತು ಪುನರ್ವಸೂ ನಕ್ಷತ್ರಗಳ ಮಧ್ಯಸ್ಥಾನದ ನೇರಿಗೆ ಬಹುದೂರ ದಕ್ಷಿಣದಲ್ಲಿ ಅಗಸ್ತ್ಯ ನಕ್ಷತ್ರದ ಎಡಗಡೆಯಲ್ಲಿದೆ. ಯವನರು ಆ ನಾವೆಯನ್ನು Argo ಎನ್ನುತ್ತಾರೆ. ಯವನ ವೀರರು ಜೇಸನ್ ಎಂಬವನ ನಾಯಕತ್ವದಲ್ಲಿ ಆ ನಾವೆಯನ್ನೇರಿ ಚಿನ್ನದ ಕುರಿಯ ತುಪ್ಪಟವನ್ನು ತರಲು ಹೋಗಿದ್ದರೆಂಬ ಒಂದು ಚೆಲೋ ಕಥೆಯು ಯವನರಲ್ಲಿ ಪ್ರಚಲಿತವಿದೆ. ನೌ ಎಂಬ ಶಬ್ದವು ಋಗ್ವೇದದ ಹಲವು ಋಚೆಗಳಲ್ಲಿ ಬಂದಿದೆಯಾದರೂ ಅದು ಎಲ್ಲ ಸಂದರ್ಭಗಳಲ್ಲಿ ನಕ್ಷತ್ರಪುಂಜವನ್ನು ಸೂಚಿಸುವುದಿಲ್ಲ. ಅದು ನಕ್ಷತ್ರಪುಂಜವನ್ನು ಸೂಚಿಸುವ ಸಂದರ್ಭಗಳಲ್ಲಿ ಅದರೊಂದಿಗೆ "ದಿವ" ಅಲ್ಲದಿದ್ದರೆ "ಅಂತರಿಕ್ಷ" ಎಂಬ ಶಬ್ದಗಳು ಬರುತ್ತವೆ. ಅಂದರೆ ಅದು ದಿವ್ಯನಾವೆಯಾಗಿರುತ್ತದೆ–

ಯಾಸ್ತೇ ಪೂಷನ್ ನಾವೋ ಅಂತಃ ಸಮುದ್ರೇ
ಹಿರಣ್ಯಯೀರಂತರಿಕ್ಷೇ ಚರಂತಿ।
ತಾಭಿರ್ಯಾಸಿ ದೂತ್ಯಾಂ ಸೂರ್ಯಸ್ಯ
ಕಾಮೇನ ಕೃತ ಶ್ರವ ಇಚ್ಛಮಾನಃ ॥ಋ. ೬–೫೮–೩॥

---

2 ಮಾನೋವೃಕಾಯವೃಕ್ಯೇ ಸಮಸ್ಮಾ । ಅಘಾಯತೇ ರೀರಧತಾ ಯಜತ್ರಾಃ
॥ ಋ, ೬-೫೧-೬ ॥

3 ಯಾವಯಾ ವೃಕ್ಯಂ ವೃಕಂ ಯವಯಸ್ತೇನಮೂರ್ಮ್ಯೇ । ಅಥಾನಃಸುತರಾಭವ
॥ ೧೦-೧೨೭-೬ ॥

ಅರ್ಥ– ಹೇ ದೇವ ಪೂಷನೇ, ಕಾಮನೆಯಿಂದ ಕೂಡಿದ ಹಾಗೂ ಹೊಗಳಿಕೆಯನ್ನು ಬಯಸುವ ನೀನು ಅಂತರಿಕ್ಷರೂಪದ ಸಮುದ್ರದಲ್ಲಿ ಸಂಚರಿಸುವಂಥ ನಿನ್ನ ಚಿನ್ನದ ನಾವೆಗಳ ಮೂಲಕ ಸೂರ್ಯನ ದೂತಕಾರ್ಯವನ್ನು ನೆರವೇರಿಸಲು ಹೋಗುತ್ತಿ.

ಋಗ್ವೇದದ ವಿಶ್ವೇದೇವ ಸೂಕ್ತದೊಳಗಿನ ಒಂದು ಅರ್ಧಋಚೆಯು ಮುಂದಿನಂತಿದೆ–

ದೈವೀ ನಾವಂ ಸ್ವರಿತ್ರಾಮನಾಗಸವ್ ಅಸ್ರವಂತೀಮಾರುಹೇಮಾ
ಸ್ವಸ್ತಯೇ ॥೧೦-೬೩-೧೦॥

ಅರ್ಥ– ನಾವು ಚಲೋ ಹುಟ್ಟುಗೋಲುಗಳಿರುವ, ನೀರು ಒಳಗೆ ಸೋರದಂಥ ಮತ್ತು ಏನೊಂದು ದೋಷವಿಲ್ಲದ ದಿವ್ಯನಾವೆಯನ್ನು ನಮ್ಮ ಕಲ್ಯಾಣಕ್ಕಾಗಿ ಏರುವ.

ಅಥರ್ವವೇದದಲ್ಲಿ ದಿವ್ಯ ನಾವೆಗೆ ಸಂಬಂಧಪಟ್ಟ ನಾಲ್ಕು ಋಚೆಗಳಿವೆ, ಅವುಗಳಲ್ಲಿ ಎರಡು ಮುಂದಿನಂತಿವೆ–

ಹಿರಣ ಯೀ ನೌರಚರದ್ಧಿರಣ್ಯ ಬಂಧನಾ ದಿವಿ
ತತ್ರಾಮೃತಸ್ಯಪುಷ್ಪಂ ದೇವಾಃ ಕುಷ್ಠಮತನ್ವತ ॥ ಅಥರ್ವ–೫_೪_೪॥

ಅರ್ಥ– ಚಿನ್ನದ ಹಗ್ಗ ಮೊದಲಾದುವುಗಳಿಂದ ಸಜ್ಜಾದ ಚಿನ್ನದ ನಾವೆಯು ಆಕಾಶದಲ್ಲಿ ಚಲಿಸಿತು. ಮತ್ತು ದೇವತೆಗಳು ಅದರ ಮೂಲಕ (ಪ್ರಯಾಣಿಸಿ) ಅಮೃತದ (=ಪ್ರಕಾಶದ) ಹೂವಾಗಿರುವ ಕುಷ್ಠವನ್ನು (=ಸೂರ್ಯನನ್ನು) ಕಂಡುಕೊಂಡರು. ಕುಷ್ಠವೆಂಬುದು ವಾಸ್ತವವಾಗಿ ಒಂದು ಅಮೃತಸಮಾನವಾದ ಓಷಧಿಯಾಗಿದೆಯಾದರೂ ಅದು ಹಿಂದಿನ ಋಚೆಯಲ್ಲಿ ಆಲಂಕಾರಿಕವಾಗಿ ಸೂರ್ಯ ಎಂಬರ್ಥದಲ್ಲಿ ಪ್ರಯೋಗಿಸಲ್ಪಟ್ಟಿವೆ.

ಹಿರಣ್ಯಯಾಃ ಪಂಥಾನ ಆಸನ್ನರಿತ್ರಾಣಿ ಹಿರಣ್ಯಯಾ ।
ನಾವೋ ಹಿರಣ್ಯಯೀರಾಸನ್ ಯಾಭಿ: ಕುಷ್ಠಂ ನಿರಾವಹನ್
॥ ಅ. ೫_೪_೫ ॥

ಅರ್ಥ– (ನಾವೆಗಳು ಹೋಗುವ) ಹಾದಿಗಳು ಚಿನ್ನದವುಗಳಾಗಿದ್ದುವು. ಹುಟ್ಟುಗೋಲುಗಳೂ ಚಿನ್ನದವುಗಳಾಗಿದ್ದುವು ಮತ್ತು ಕುಷ್ಠವನ್ನು ಹೊತ್ತುತಂದ ನಾವೆಗಳೂ ಚಿನ್ನದವುಗಳೇ ಆಗಿದ್ದುವು,

ವೈದಿಕ ಸಾಹಿತ್ಯದಲ್ಲಿ ಪ್ರಕಾಶವನ್ನು ಅಮೃತವೆಂತಲೂ, ಅಂಧಕಾರವನ್ನು ಮೃತ್ಯುವೆಂತಲೂ ವರ್ಣಿಸಿದ ಹಲವು ಪ್ರಸಂಗಗಳಿವೆ. ಆದುದರಿಂದ ಹಿಂದಿನ ಋಚೆಗಳಲ್ಲಿ ಅಮೃತದ ಹೂವಾಗಿರುವ ಕುಷ್ಠ ಎಂಬ ಶಬ್ದವು ಸೂರ್ಯ ಎಂಬರ್ಥದಲ್ಲಿ ಪ್ರಯೋಗಿಸಲ್ಪಟ್ಟಿದೆಯೆಂಬುದರಲ್ಲಿ ಸಂದೇಹವೇ ಇಲ್ಲ, ಏಕೆಂದರೆ ಆ ದಿವ್ಯ

ನಾವೆಯು ಸಂಬಂಧವು ಸೂರ್ಯೋದಯದೊಂದಿಗೆ ಇದೆಯೆಂಬುದು ಅತ್ಯಂತ ಸ್ಪಷ್ಟವಿದೆ.

ಈಗ ಸಪ್ತರ್ಷಿ ಎಂದು ಕರೆಯಲ್ಪಡುವ ನಕ್ಷತ್ರಪುಂಜವನ್ನು ಋಗ್ವೇದದ ೧-೨೦-೧೦ರಲ್ಲಿ **"ಋಕ್ಷಾಃ"** ಅಂದರೆ "ಕರಡಿಗಳು" ಎಂದು ಕರೆದಿದೆ. ಆ "ಕರಡಿಗಳು" ಎಂಬ ಹೆಸರು ಆರ್ಯಜನರ ಎಲ್ಲ ಪಂಗಡಗಳು ಒಟ್ಟಿಗೆ ಒಂದೇ ಪ್ರದೇಶದಲ್ಲಿ ನೆಲಸಿದ್ದಾಗಲೇ ಪ್ರಚಲಿತವಾಗಿದ್ದಿತೆಂಬುದರಲ್ಲಿ ಸಂದೇಹವಿಲ್ಲ. ಆದುದರಿಂದಲೇ ಪಾಶ್ಚಾತ್ಯರು ಆ ನಕ್ಷತ್ರಪುಂಜವನ್ನು ಇಂದಿಗೂ "Great Bear" ಅಲ್ಲದಿದ್ದರೆ "Ursa Major" ಅನ್ನುವುದಾಗಿದೆ.

ಋಗ್ವೇದವ ೧೦-೧೯ನೆಯ ವಿಶ್ವೇದೇವ ಸೂಕ್ತದಲ್ಲಿ ಆ ನಕ್ಷತ್ರಪುಂಜವನ್ನು **"ಸಪ್ತಋಷಯಃ"** ಎಂತಲೂ ೧೦-೧೩೦-೭ರಲ್ಲಿ **"ಋಷಯಃ ಸಪ್ತ ದೈವ್ಯಾಃ"** ಅಂದರೆ "ಏಳ್ವರು ದೇವ ಋಷಿಗಳು" ಅಥವಾ "ದಿವದಲ್ಲಿರುವ ಏಳ್ವರು ಋಷಿಗಳು" ಎಂತಲೂ ೪-೪೨-೪ರಲ್ಲಿ **"ಅಸ್ಮಾಕಂ ಪಿತರಸ್ತೇ ಆಸನ್‌ತ್ಸಪ್ತ ಋಷಯಃ"** ಅಂದರೆ "ಆ ಏಳ್ವರು ಋಷಿಗಳು ನಮ್ಮ ಹಿರಿಯರಾಗಿದ್ದರು" ಎಂತಲೂ ಹೇಳಿದೆ. ಶತಪಥ ಬ್ರಾಹ್ಮಣದ ೨-೧-೨-೪ರಲ್ಲಿ "ಕೃತ್ತಿಕಾ ಪುಂಜದೊಳಗಿನ ಏಳು ತಾರಕೆಗಳು ಮೊದಲು ಕರಡಿಗಳ ಪತ್ನಿಯರಾಗಿದ್ದರೆಂತಲೂ ಪ್ರಾಚೀನ ಕಾಲದಲ್ಲಿ ಸಪ್ತರ್ಷಿಗಳನ್ನೇ ಕರಡಿಗಳೆನ್ನುತ್ತಿದ್ದರೆಂತಲೂ[1] ಹೇಳಿದೆಯಲ್ಲದೇ ೧೪-೫-೨-೬ರಲ್ಲಿ **"೧. ಗೋತಮ ೨. ಭರದ್ವಾಜ; ೩. ವಿಶ್ವಾಮಿತ್ರ; ೪. ಜಮದಗ್ನಿ; ೫. ವಸಿಷ್ಠ; ೬. ಕಶ್ಯಪ; ೭. ಅತ್ರಿ."** ಎಂಬುದಾಗಿ ಆ ಏಳ್ವರು ಋಷಿಗಳ ಹೆಸರುಗಳೆಂತಲೂ ಹೇಳಿದೆ.

ಹಿಂದೆ ವಿವರಿಸಿದ ಎಲ್ಲ ನಕ್ಷತ್ರಪುಂಜಗಳ ಅಥವಾ ಅವುಗಳ ದೇವತೆಗಳ ಹೆಸರುಗಳು ವಿಶ್ವೇದೇವ ಸೂಕ್ತಗಳಲ್ಲಿ ಸ್ತುತಿಸಲ್ಪಟ್ಟಿವೆ. ಆದುದರಿಂದ ನಕ್ಷತ್ರ ದೇವತೆಗಳನ್ನು ಸ್ತುತಿಸುವ ಸಲುವಾಗಿಯೇ ವಿಶ್ವೇದೇವ ಸೂಕ್ತಗಳು ರಚಿಸಲ್ಪಟ್ಟಿವೆವೆನ್ನಬೇಕಾಗುತ್ತದೆ. ಆದರೆ ತರುವಾಯದ ಕಾಲದ ಋತ್ವಿಜರಿಗೆ ವಿಶ್ವೇದೇವರುಗಳೆಂದರೆ ಮೂಲದಲ್ಲಿ ಮೂವತ್ತಮೂರು ಚಾಂದ್ರ ನಕ್ಷತ್ರಗಳಾಗಿದ್ದುವೆಂಬ ಐತಿಹ್ಯವು ಮರೆತು ಹೋದುದರಿಂದ ಅವರು ಅಷ್ಟವಸುಗಳನ್ನು, ಏಕಾದಶ ರುದ್ರರನ್ನು, ದ್ವಾದಶ ಆದಿತ್ಯರನ್ನು, ಪ್ರಜಾಪತಿಯನ್ನು ಮತ್ತು ವಷಟ್ಕಾರವನ್ನು ಸೇರಿಸಿ ಒಂದು ಹೊಸ ಮೂವತ್ತಮೂರರ ಗುಂಪನ್ನು[2] ನಿರ್ಮಿಸಿದ್ದರಲ್ಲದೇ ಅವರನ್ನೇ

---

[1] ಋಕ್ಷಾಣಾಂಹವಾಽಏತಾ ಅಗ್ರೇ ಪತ್ನ್ಯ ಆಸುಃ ಸಪ್ತರ್ಷೀನು ಹ ಸ್ಮ ವೈ ಪುರಽ ಋಕ್ಷಾ ಇತ್ಯಾ ಚಕ್ಷತೇ ।

[2] ತ್ರಯಸ್ತ್ರಿಂಶದ್ವೈದೇವಾ ಅಷ್ಟೌವಸವ ಏಕಾದಶಶ ರುದ್ರಾ ದ್ವಾದಶಾದಿತ್ಯಾಃ ಪ್ರಜಾ ಪ್ರತಿಶ್ಚ ವಷಟ್‌ಕಾರಶ್ಚ ॥ ಐತರೇಯ ಬ್ರಾಹ್ಮಣ. ೧-೨-೧೦॥

ದೇವತಾ ವಾವ ತ್ರಯಸ್ತ್ರಿಂಶೋಽಷ್ಟೌವಸವ ಏಕಾದಶ ರುದ್ರಾ ದ್ವಾದಶಾದಿತ್ಯಾಃ ಪ್ರಜಾಪತಿಶ್ಚವಷಟ್‌ಕಾರಶ್ಚತ್ರ ಯಸ್ತ್ರಿ ಶಾ ॥ತಾಂಡ್ಯ ಬ್ರಾಹ್ಮಣ. ೬-೨॥

ವಿಶ್ವೇದೇವರೆನ್ನತೊಡಗಿದರು. ಪರಂತು ಋಗ್ವೇದದಲ್ಲಿ ವಿಶ್ವೇದೇವರನ್ನು ಹಲವು ಸರ್ತಿ ಹನ್ನೊಂದರ ಮೂರು ವಿಭಾಗಗಳನ್ನಾಗಿ ಮಾಡಿದ ಉಲ್ಲೇಖಗಳಿವೆಯೆಂಬು ದನ್ನೂ ಅವರು ನಿರ್ಮಿಸಿದ ಗುಂಪನ್ನು ಹನ್ನೊಂದರ ಮೂರು ವಿಭಾಗಗಳನ್ನಾಗಿ ಮಾಡಲು ಸಾಧ್ಯವಿಲ್ಲವೆಂಬುದನ್ನೂ ಅವರು ಪರಿಶೀಲಿಸಲಿಲ್ಲ.

ಋಗ್ವೇದದ ವಿಶ್ವೇದೇವ ಸೂಕ್ತಗಳಲ್ಲಿ ಅತ್ಯಧಿಕವಾಗಿಯೂ ಇತರ ಸೂಕ್ತ ಗಳಲ್ಲಿ ಕ್ವಚಿತ್ತಾಗಿಯೂ ಉಲ್ಲೇಖಿಸಲ್ಪಟ್ಟಿರುವ ದೇವತೆಗಳು ಮತ್ತು ಅಗ್ನಿ ಹಾಗೂ ಇಂದ್ರ-ಸೂಕ್ತಗಳಲ್ಲಿ ಉಲ್ಲೇಖಿಸಲ್ಪಟ್ಟಿರುವ ಅಸುರರು ನಕ್ಷತ್ರಪುಂಜಗಳ ಮೂರ್ತಿ ಕೃತ ರೂಪಗಳೆಂದು ತಿಳಿದುಕೊಳ್ಳಲಾಗದ ಭಾರತೀಯ ವಿದ್ವಾಂಸರು ಮತ್ತು ವೇದ ಮಂತ್ರಗಳಿಗೆ ಭಾಷ್ಯಗಳನ್ನು ಬರೆದ ಆಚಾರ್ಯರು ವಿಶ್ವೇದೇವ ಸೂಕ್ತಗಳಲ್ಲಿ ಇತರ ನಕ್ಷತ್ರದೇವತೆಗಳ ಜೊತೆಯಲ್ಲಿ ಉಲ್ಲೇಖಿಸಲ್ಪಟ್ಟಿರುವ ರೇವತೀ ಮತ್ತು ಪುನರ್ವಸೂ ಎಂಬ ಶಬ್ದಗಳು ನಕ್ಷತ್ರನಾಮಗಳಾಗಿದ್ದರೂ ಅವುಗಳನ್ನು ಇತರ ಶಬ್ದಗಳ ವಿಶೇಷಣ ಗಳನ್ನಾಗಿ ಗ್ರಹಿಸಿದ್ದಾರೆ. ಹಾಗಾಗಿ ಪಾಶ್ಚಾತ್ಯ ವಿದ್ವಾಂಸರು ಕೂಡ ಆ ನಕ್ಷತ್ರನಾಮ ಗಳನ್ನು ವಿಶೇಷಣಗಳನ್ನಾಗಿಯೇ ಗ್ರಹಿಸಿ ಋಗ್ವೇದದಲ್ಲಿ ಅಘಾ ಮತ್ತು ಅರ್ಜುನೀ ಎಂಬ ಎರಡು ನಕ್ಷತ್ರನಾಮಗಳ ಹೊರತು ಬೇರೆ ನಕ್ಷತ್ರನಾಮಗಳ ಉಲ್ಲೇಖಗಳಿಲ್ಲ ವೆಂದು ವಾದಿಸಿದ್ದಾರೆ. ಉದಾಹರಣೆಗಾಗಿ ಇಲ್ಲಿ ವಿಶ್ವೇದೇವ ಸೂಕ್ತದೊಳಗಿನ ಒಂದು ಋಚೆಯು ಕೊಡಲಾಗುವುದು–

ಸ್ವಸ್ತಿ ಮಿತ್ರಾ ವರುಣಾ ಸ್ವಸ್ತಿ ಪಥ್ಯೇ ರೇವತಿ।
ಸ್ವಸ್ತಿನ ಇಂದ್ರಶ್ಚಾಗ್ನಿಶ್ಚ ಸ್ವಸ್ತಿ ನ ಅದಿತೇ ಕೃಧಿ ॥ ಋ. ೫-೫೧-೧೪॥

ಈ ಋಚೆಗೆ ಆಚಾರ್ಯಸಾಯಣರು ಮುಂದಿನಂತೆ ಭಾಷ್ಯ ಹೇಳಿದ್ದಾರೆ–

"ಹೇ ಮಿತ್ರಾವರುಣೌ ಅಹೋರಾತ್ರಾಭಿಮಾನಿ ದೇವೌ ಸ್ವಸ್ತಿ ಕುರುತ ಮ್। ಹೇ ಪಥ್ಯೇ। ಪಂಥಾ ಅಂತರಿಕ್ಷ ಮಾರ್ಗಃ। ತತ್ರ ಹಿತಾ ಮಾರ್ಗಾಭಿಮಾನಿನೀ ದೇವೀ। ಹೇ ತಾದೃಶೀ ರೇವತಿ ಧನವತಿ ದೇವಿ ಸ್ವಸ್ತಿ ಕೃಧಿ। ಇಂದ್ರಾಗ್ನಿಶ್ಚ ಪ್ರ ತ್ಯೇಕಂ ನೋ ಅಸ್ಮಭ್ಯಂ ಸ್ವಸ್ತಿ ಕೃಧಿ। ಹೆ ಅದಿತೇ ದೇವಿ ನಃ ಸ್ವಸ್ತಿಕೃಧಿ। ಕುರು।

ಅದೇ ಋಚೆಗೆ ಆಸ್ಥಾನ ವಿದ್ವಾನ್ ಎಚ್. ಪಿ. ವೆಂಕಟರಾವ್ ಅವರು ಹೇಳಿದ ಅರ್ಥವು ಮುಂದಿನಂತಿದೆ–

ಪ್ರತಿಪದಾರ್ಥ – ಮಿತ್ರಾವರುಣಾ–ಎಲೈ ಮಿತ್ರಾವರುಣರೇ । ಸ್ವಸ್ತಿ– ನಮಗೆ ಮಂಗಳವುಂಟಾಗಲಿ । ರೇವತಿ – ಧನಯುಕ್ತಳಾದ । ಪಥ್ಯೇ - ಅಂತರಿಕ್ಷ ಮಾರ್ಗವೇ । ಸ್ವಸ್ತಿ – ನಮಗೆ ಕಲ್ಯಾಣವುಂಟಾಗಲಿ । ಇಂದ್ರಃ – ಇಂದ್ರನೂ, । ಅಗ್ನಿಶ್ಚ = ಅಗ್ನಿಯೂ ನಃ = ನಮಗೆ । ಸ್ವಸ್ತಿ – ಮಂಗಳವನ್ನುಂಟುಮಾಡಲಿ ।

---

[2] ಅಷ್ಟಾವಸವಃ। ಏಕಾದಶ ರುದ್ರಾ ದ್ವಾದಶಾದಿತ್ಯಾ ಇಮೇ ಏವ ದ್ಯಾವಾ ಪೃಥಿವಿ ತ್ರ ಯಸ್ತ್ರಿಂ ಶ್ಯಾ ತ್ರಯಸ್ತ್ರಿಂಶದ್ವೈದೇವಾಃ । ಪ್ರಜಾಪತಿಶ್ಚತುಸ್ತ್ರಿಂಶಃ ॥ ಶತಪಥ ಬ್ರಾಹ್ಮಣ. ೪-೫-೭-೨ ॥ ಈ ಹೇಳಿಕೆಯು ಮೊದಲಿನ ಎರಡು ಹೇಳಿಕೆಗಳಿಂದ ಭಿನ್ನವಾಗಿದೆ.

ಅದಿತೇ – ಎಲೈ ಅದಿತಿಯೇ । ನಃ – ನಮಗೆ । ಸ್ವಸ್ತಿ – ಮಂಗಳವನ್ನು । ಕೃಧಿ – ಉಂಟುಮಾಡು,

ಭಾವಾರ್ಥ – ಎಲೈ ಮಿತ್ರಾವರುಣರೇ, ನಮಗೆ ಮಂಗಳವುಂಟಾಗಲಿ. ಧನಯುಕ್ತಳಾದ ಅಂತರಿಕ್ಷಮಾರ್ಗವೇ ನಮಗೆ ಕಲ್ಯಾಣವುಂಟಾಗಲಿ. ಇಂದ್ರನೂ, ಅಗ್ನಿಯೂ ನಮಗೆ ಮಂಗಳವನ್ನುಂಟುಮಾಡಲಿ. ಎಲೈ ಆದಿತಿಯೇ ನಮಗೆ ಮಂಗಳವನ್ನು ಉಂಟುಮಾಡು.

ಹಿಂದಿನ ಋಚೆಯಲ್ಲಿ ಸ್ತುತಿಸಲ್ಪಟ್ಟಿರುವ ಮಿತ್ರ, ವರುಣ, ಇಂದ್ರ, ಅಗ್ನಿ ಮತ್ತು ಅದಿತಿ ಎಂಬವರು ವೇದಾಂಗ ಜ್ಯೋತಿಷದಲ್ಲಿ, ಯಜುರ್ವೇದ ಸಂಹಿತೆಗಳಲ್ಲಿ ಮತ್ತು ತೈತ್ತಿರೀಯ ಬ್ರಾಹ್ಮಣದಲ್ಲಿ ಉಲ್ಲೇಖಿಸಲ್ಪಟ್ಟಿರುವ ನಕ್ಷತ್ರ ದೇವತೆಗಳಾಗಿದ್ದಾರೆಂಬುದು ಸ್ಪಷ್ಟವಿದೆ. ಏಕೆಂದರೆ ಹಿಂದೆ ಉದಹರಿಸಿದ ಋಚೆಯು ಯಾವ ಸೂಕ್ತದಲ್ಲಿದೆಯೋ ಆ ಸೂಕ್ತದ ಇತರ ಋಚೆಗಳಲ್ಲಿ ಹಿಂದೆ ಎಣಿಸಿದ ಐದು ದೇವತೆಗಳು ಮಾತ್ರವಲ್ಲದೇ – ಅಶ್ವಿನೌ, ಇಂದ್ರಾಗ್ನಿ. ಪೂಷಾಭಗ, ರುದ್ರ, ವಸು, ವಾಯು, ವಿಶ್ವೇದೇವಾಃ, ವಿಷ್ಣು ಮತ್ತು ಸೋಮ ಎಂಬ ಬೇರೆ ಹನ್ನೊಂದು ನಕ್ಷತ್ರ ದೇವತೆಗಳು ಸ್ತುತಿಸಲ್ಪಟ್ಟಿದ್ದಾರೆ. ಅಂದರೆ ಆ ಎಲ್ಲ ಹೆಸರುಗಳು ನಕ್ಷತ್ರ ದೇವತೆಗಳದ್ದಾಗಿರುವುದರಿಂದ ಅವುಗಳೊಂದಿಗೆ ಬಂದಿರುವ ರೇವತಿ ಶಬ್ದವು ಕೂಡ ನಕ್ಷತ್ರದ ಹೆಸರೇ ಹೊರತು ಪಥ್ಯಾ ಶಬ್ದದ ವಿಶೇಷಣವೆನ್ನಲಾಗುವುದಿಲ್ಲ. ಮತ್ತು ಹಾಗೆನ್ನಲು ಆಧಾರವೂ ಇಲ್ಲ. ಅಲ್ಲದೇ ರೇವತಿ ಶಬ್ದವನ್ನು ಪಥ್ಯಾ ಶಬ್ದದ ವಿಶೇಷಣವನ್ನಾಗಿ ಗ್ರಹಿಸಿದ ಯಾವನೊಬ್ಬ ವಿದ್ವಾಂಸನಾದರೂ ಅಂತರಿಕ್ಷ ಮಾರ್ಗವು "ಪಥ್ಯಾ" ಎಂದು ಕರೆಯಲ್ಪಟ್ಟು ದೇವೀಪದವನ್ನು ಏಕೆ ಮತ್ತು ಹೇಗೆ ಪಡೆಯಿತೆಂಬುದನ್ನು ವಿವರಿಸಿಲ್ಲ. ಅಂದರೆ ಪಥ್ಯಾ ಎಂಬುದರ ಅರ್ಥವು ಮಾರ್ಗ ಎಂದಿದ್ದರೂ ಅದು ಅಂತರಿಕ್ಷ ಮಾರ್ಗವೆನ್ನಲು ಆಧಾರವೇನು? ಅದು ಬರೇ ಮಾರ್ಗ ಅಥವಾ ದಾರಿ ಎಂಬರ್ಥವನ್ನು ಸೂಚಿಸುವ ಶಬ್ದವೆಂದಾದರೆ ಅದು ಯಾವ ದಾರಿ? ಆ ದಾರಿಗೆ ನಕ್ಷತ್ರಗಳೊಂದಿಗೆ ಸಂಬಂಧವೇನು? ಅದಕ್ಕೆ ಅಂಥ ಮಹತ್ವ ವೇಕೆ? ಋಗ್ವೇದದ ಮಂತ್ರಗಳಲ್ಲಿ ನಕ್ಷತ್ರ ದೇವತೆಗಳ ಸ್ತುತಿಯೊಂದಿಗೆ ಅದರ ಸ್ತುತಿಯೂ ಇರಲು ಕಾರಣವೇನು? ಮುಂತಾದ ಪ್ರಶ್ನೆಗಳನ್ನು ಉತ್ತರಿಸುವ ಶ್ರಮವನ್ನು ಇಂದಿನ ತನಕ ಯಾರೂ ಮಾಡಿಲ್ಲ.

ವಾಸ್ತವವಾಗಿ ಪಥ್ಯಾದೇವಿಯು ಅತ್ಯಂತ ಪ್ರಾಚೀನಳಾಗಿದ್ದು ಆರ್ಯ ಜನರ ಉತ್ತರ ಧ್ರುವಪ್ರದೇಶದ ವಸತಿಯೊಂದಿಗೆ ಸಂಬಂಧವಿದ್ದವಳಾಗಿದ್ದಾಳೆ. ಆದುದರಿಂದ ಹಿಂದಿನ ಪ್ರಶ್ನೆಗಳನ್ನು ಆರ್ಯಜನರ ಉತ್ತರ ಧ್ರುವಪ್ರದೇಶದ ಹಿನ್ನೆಲೆಯ ಆಧಾರದಿಂದ ಹೊರತು ಬೇರೆ ರೀತಿಯಿಂದ ಬಗೆಹರಿಸಲು ಸಾಧ್ಯವಿಲ್ಲ. ಅಂದರೆ ಋಗ್ವೇದದೊಳಗಿನ ಅಧಿಕಾಂಶ ಮಂತ್ರಗಳು ಆರ್ಯಜನರು ಉತ್ತರ

ಧ್ರುವಪ್ರದೇಶದಲ್ಲಿ ನೆಲಸಿದ್ದ ಕಾಲದ ಐತಿಹ್ಯಗಳ ಆಧಾರದಿಂದ ತರುವಾಯದ ಕಾಲದಲ್ಲಿ ರಚಿಸಲ್ಪಟ್ಟವುಗಳಾಗಿರುವುದರಿಂದ ಆ ಪ್ರದೇಶದ ಪ್ರಾಚೀನ ಪರಿಸ್ಥಿತಿಯನ್ನು ಜ್ಞಾಪಿಸಿಕೊಂಡು ಆ ಮಂತ್ರಗಳ ಅರ್ಥವನ್ನು ಹೇಳುವುದು ಉಚಿತವಾಗಿದೆಯೇ ಹೊರತು ಆ ಮಂತ್ರಗಳು ರಚಿಸಲ್ಪಟ್ಟ ಸಾವಿರಾರು ವರ್ಷಗಳ ತರುವಾಯ ಬಳೆಯಲ್ಪಟ್ಟ ಪುರಾಣಗಳೊಳಗಿನ ಕಥೆಗಳ ಆಧಾರದಿಂದ ಅವುಗಳ ಅರ್ಥವನ್ನು ವಿವರಿಸುವುದು ಸಮಂಜಸವಲ್ಲ.

ಉತ್ತರ ಧ್ರುವಪ್ರದೇಶದಲ್ಲಿ ನೆಲಸಿದ್ದ ಆರ್ಯಜನರ ವರ್ಷವು ದೀರ್ಘರಾತ್ರಿಯ ಕೊನೆಯಲ್ಲಿ ಮುಗಿಯುತಿತ್ತು. ಮತ್ತು ಉಷೆಯ ಉದಯದ ತರುವಾಯ ಹೊಸವರ್ಷವು ಪ್ರಾರಂಭವಾಗುತಿತ್ತು. ಆ ಕಾಲದ ಆರ್ಯಜನರು ಉಷೋದಯದ ತರುವಾಯ ಸೂರ್ಯನು ಮೂಡುವ ಮೊದಲೇ ಹೊಸವರ್ಷದ ಯಜ್ಞಕ್ಕಾಗಿ ಅಗ್ನಿಯನ್ನು ಉತ್ಪಾದಿಸುವ ಕೆಲಸವನ್ನು ಅಂದರೆ ಅರಣಿಗಳಿಂದ ಅಗ್ನಿಮಂಥನವನ್ನು ಪ್ರಾರಂಭಿಸುತಿದ್ದರು. ಬಹಳ ಹಿಂದೆ ಅಲ್ಲಿ ಬೆಳಕಾಗುವ ಕಾಲಕ್ಕೆ ಸರಿಯಾಗಿ ಉತ್ತರದಿಕ್ಕಿನಲ್ಲಿ ಪುನರ್ವಸೂ ಎಂಬ ಹೆಸರನ್ನು ಪಡೆದ ಎರಡು ತಾರಕೆಗಳ ಪುಂಜವು ಕಾಣಿಸುತಿದ್ದಿತು. ಆ ತಾರಕಾ ಪುಂಜವು ತನ್ನ ಉದಯದೊಂದಿಗೆ ವಸುವನ್ನು ಅಂದರೆ ಸೂರ್ಯಪ್ರಕಾಶವನ್ನು ಮರಳಿ ತರುತಿದ್ದುದರಿಂದ ಅವರು ಅದನ್ನು ಪುನರ್ವಸೂ ಎಂದು ಕರೆದಿದ್ದರು. ಅವರು ಯಜ್ಞಕ್ಕಾಗಿ ಆಧಾನ ಮಾಡಿದ ಅಗ್ನಿಯಲ್ಲಿ ಮೊತ್ತಮೊದಲಿನ ಆಹುತಿಯನ್ನು ಆ ತಾರಕಾ ಪುಂಜಕ್ಕೆ ಅಥವಾ ಅದರ ದೇವತೆಯಾದ ಅದಿತಿಗೆ ಅರ್ಪಿಸುತಿದ್ದರು. ಉತ್ತರ ದಿಕ್ಕಿನಲ್ಲಿ ಅದಿತಿಯು ಕಾಣಬರುವ ಮೊದಲು ಅಲ್ಲಿನ ಕ್ಷಿತಿಜದಲ್ಲಿ ಮಂದವಾದ ಪ್ರಕಾಶದ ಶಿಖೆಯು ಕಾಣಿಸಿಕೊಂಡು ಮೇಲೇರುತಿತ್ತು. ಆ ಪ್ರಕಾಶವು ಮೇಲೇರಿ ಬರುವ ದಾರಿಯೇ ಋಗ್ವೇದದ ಮಂತ್ರಗಳಲ್ಲಿ ಸ್ತುತಿಸಲ್ಪಟ್ಟ "ಪಥ್ಯಾ" ಆಗಿದ್ದಾಳೆ. ಉತ್ತರ ಧ್ರುವಪ್ರದೇಶದಲ್ಲಿ ನೆಲಸಿದ್ದ ಆರ್ಯಜನರಿಗೆ ಸೂರ್ಯನ ಪ್ರಕಾಶವೆಂಬುದು ಜೀವನದಾಯಕವಾದ ಅಮೃತಕ್ಕೆ ಸಮಾನವಾಗಿತ್ತು. ದೀರ್ಘರಾತ್ರಿಯ ಅಂಧಕಾರದಿಂದ ಕಂಗೆಟ್ಟಿದ್ದ ಅವರು ಪ್ರಕಾಶಕ್ಕಾಗಿ ಹಾತೊರೆಯುತಿದ್ದರು. ಆದುದರಿಂದ ಸೂರ್ಯನ ಪ್ರಕಾಶವು ಮೇಲೇರಿ ಬರುವ "ಮಂಗಲಕರವಾದ ದಾರಿಯನ್ನು" "ಪಥ್ಯಾ ಸ್ವಸ್ತಿ" ಎಂದು ಕರೆದು ಅವಳನ್ನು ದೇವೀಪದಕ್ಕೇರಿಸಿದ್ದರು. ಉತ್ತರ ದಿಕ್ಕಿನಲ್ಲಿ ಪಥ್ಯೆಯು ಕಾಣಿಸುವಾಗ ಪೂರ್ವದಿಕ್ಕಿನಲ್ಲಿ ರೇವತೀ ನಕ್ಷತ್ರಪುಂಜವು ಮಿನುಗುತಿತ್ತು. ಆದುದರಿಂದಲೇ ಹಿಂದೆ ಉದಹರಿಸಿದ ಋಚೆಯಲ್ಲಿ ಪಥ್ಯೆ ಮತ್ತು ರೇವತಿಯರು ಜೊತೆಗೂಡಿದ್ದಾರೆ. ಋಗ್ವೇದದಲ್ಲಿ ಪಥ್ಯೆಗೆ ಸಂಬಂಧಪಟ್ಟ ಹೆಚ್ಚಿನ ವಿವರಗಳು ಇಲ್ಲವಾದರೂ ಶತಪಥ ಬ್ರಾಹ್ಮಣದಲ್ಲಿ ಪಥ್ಯೆಯ ಕೆಲವು ವಿವರಗಳು ದೊರೆಯುತ್ತವೆ.

ಪಥ್ಯಾಸ್ವಸ್ತಿ ಎಂಬ ಬೆಳಕಿನ ದಾರಿಯ ಸಂಬಂಧವು ಉತ್ತರ ದಿಕ್ಕಿನೊಂದಿಗೆ, ಅದಿತಿಯೊಂದಿಗೆ ಮತ್ತು ಯಜ್ಞದ ಪ್ರಾರಂಭದೊಂದಿಗೆ ಇದ್ದಿತೆಂದು ಶತಪಥ

ಬ್ರಾಹ್ಮಣದೊಳಗಿನ ಒಂದು ಆಖ್ಯಾಯಿಕೆಯಿಂದ ತಿಳಿದು ಬರುತ್ತದೆ. ಪುನರ್ವಸೂ ನಕ್ಷತ್ರದ ಉದಯದೊಂದಿಗೆ ಯಜ್ಞವು ಪ್ರಾರಂಭವಾಗುತಿದ್ದ ಕಾಲದಲ್ಲಿ ಮೊತ್ತ ಮೊದಲು ಅದಿತಿಗೆ ಆಹುತಿಯನ್ನು ಕೊಡುವ ಸಲುವಾಗಿ ಚರುಬೇಯಿಸಲ್ಪಡುತಿತ್ತು. ಅದು ಆದಿತ್ಯಚರು ಎನಿಸಿಕೊಳ್ಳುತಿತ್ತು. ಶತಪಥ ಬ್ರಾಹ್ಮಣದಲ್ಲಿ ದೇವತೆಗಳು ಅದಿತಿಯಿಂದಲೇ ಯಜ್ಞವನ್ನು ಪ್ರಾರಂಭಿಸುವೆವೆಂತಲೂ, ಅವಳಿಂದಲೇ ಯಜ್ಞವನ್ನು ಮುಗಿಸುವೆವೆಂತಲೂ ಅವಳಿಗೆ ವಚನ ಕೊಟ್ಟರೆಂದು ಹೇಳಿದ ತರುವಾಯ ಮುಂದಿನ ಆಖ್ಯಾಯಿಕೆ ಬರುತ್ತದೆ.

ಅಧ್ವರ್ಯುವು ಯಜ್ಞವನ್ನು (—ಅದಿತಿಯ ಉದಯವನ್ನು) ಕಂಡು ಕೊಳ್ಳುವ ಸಲುವಾಗಿ ಪ್ರಾಯಣೀಯ ಆದಿತ್ಯಚರುವನ್ನು ಬೇಯಿಸುತ್ತಾನೆ. ಅವನು ಯಜ್ಞವನ್ನು ಕಂಡ ತರುವಾಯ ಸೋಮವನ್ನು ಕೊಳ್ಳುವೆನು ಮತ್ತು ಯಜ್ಞವನ್ನು ವಿಸ್ತರಿಸುವೆನೆಂದು ಯೋಚಿಸಿ ಪ್ರಾಯಣೀಯ ಚರುವನ್ನು ಬೇಯಿಸಿದನು. ಬೇಯಿಸಿದ ಚರುವು ಅದರ ದೇವತೆಗೆ (—ಅದಿತಿಗೆ) ಅರ್ಪಿಸಲ್ಪಡಲಿಲ್ಲ. (ಅದಿತಿಯು ಉದಯಿಸಲಿಲ್ಲ) ಆಗ ಅವರಿಗೆ ಪಥ್ಯಾಸ್ವಸ್ತಿಯು ಹೊಳೆದಳು. ಅವರು ಅವಳಿಗೆ ಆಹುತಿಯನ್ನು ಅರ್ಪಿಸಿದರು. ಪಥ್ಯಾಸ್ವಸ್ತಿಯು ವಾಕ್ ಆಗಿದ್ದಾಳೆ. ಮತ್ತು ವಾಕ್ಕೇ ಯಜ್ಞವಾಗಿದೆ. ಹಾಗೆ ಅವರು ಯಜ್ಞವನ್ನು ಕಂಡು ಅದನ್ನು ವಿಸ್ತರಿಸಿದರು. ಅವರು ಪಥ್ಯಾಸ್ವಸ್ತಿಯಿಂದ ಏರು (—ಉತ್ತರ) ದಿಕ್ಕನ್ನು ತಿಳಿದರು. ಆದುದರಿಂದಲೇ (ಉತ್ತರದ) ಕುರು ಪಾಂಚಾಲರಲ್ಲಿ ವಾಕ್ಕು ಏರಾಗಿ ನುಡಿಯಲ್ಪಡುತ್ತದೆ. ವಾಸ್ತವವಾಗಿ ವಾಕ್ಕೇ ಪಥ್ಯಾ ಸ್ವಸ್ತಿಯಾಗಿದ್ದಾಳೆ. ಅವರು ಅವಳಿಂದ ಉತ್ತರ ದಿಕ್ಕನ್ನು ತಿಳಿದರು. ಉತ್ತರವು ಅವಳ ದಿಕ್ಕಾಗಿದೆ.[1]

ಹಿಂದಿನ ವಿವರಗಳಿಂದ ಪಥ್ಯಾ ಎಂದರೆ ಯಾವಳು ಏನು ಎಂಬುದು ತಿಳಿದಂತಾಯಿತು. ಆದುದರಿಂದ ಹಿಂದೆ ಉದಹರಿಸಿದ ಋಚೆಯೊಳಗಿನ - **"ಸ್ವಸ್ತಿ ಮಿತ್ರ ವರುಣಾ ಸ್ವಸ್ತಿ ಪಥ್ಯೇ ರೇವತಿ"** ಎಂಬ ಅಂಶದ ವಾಸ್ತವಿಕ ಅರ್ಥವು - "ಹೇ ಮಿತ್ರ ಮತ್ತು ವರುಣರೇ ನೀವು ನಮಗೆ ಮಂಗಲವನ್ನು ಮಾಡಿರಿ. ಹೇ ಪಥ್ಯೆ ಮತ್ತು ರೇವತಿಯರೇ ನಮಗೆ ಕಲ್ಯಾಣವನ್ನು ಮಾಡಿರಿ" ಎಂದಿರುತ್ತದೆಂಬುದರಲ್ಲಿ ಸಂದೇಹವಿಲ್ಲವೆನ್ನಬಹುದು. ತಾತ್ಪರ್ಯವೇನೆಂದರೆ ಪ್ರಾಚೀನ ಕಾಲದ ಆರ್ಯ

1 ಸಯದಾದಿತ್ಯಂ ಚರುಂ ಪ್ರಾಯಣೀಯಂ ನಿರ್ವಪತಿ ಯಜ್ಞಸ್ಯೈವದೃಷ್ಟ್ಯೈ। ಯಜ್ಞಂ ದೃಷ್ಟ್ವೈವ ಕ್ರೀಣಾನಿ ತಂ ತನವಾ ಇತಿ। ತಸ್ಮಾದಾದಿತ್ಯಂ ಚರುಂ ಪ್ರಾಯಣೀಯಂ ನಿರ್ವಪತಿ। ತದ್ವೈ ನಿರುಪ್ತಂ ಹವಿರಾಸೀದನಿಷ್ಟಾ ದೇವತಾ ॥ ೩-೨-೩-೭॥ ಅಥೈಭ್ಯಃ ಪಥ್ಯಾ ಸ್ವಸ್ತಿಃ ಪ್ರಾರೋಚತ ತಾಮಯಜನ್। ವಾಗ್ವೈ ಪಥ್ಯಾ ಸ್ವಸ್ತಿಃ ವಾಗ್ಯಜ್ಞಸ್ತದ್ಯಜ್ಞಮಪಶ್ಯಂಸ್ತಮತನ್ವತ ॥ ೮ ॥ ಉದೀಚೀಮೇವದಿಶಮ್ । ಪಥ್ಯಯಾಸ್ವಸ್ತ್ಯಾ ಪ್ರಾಜಾನಂಸ್ತಸ್ಮಾದುತ್ತರಾಹಿವಾಗ್ವದತಿಕುರು ಪಾಂಚಾಲತ್ರಾ ವಾಗ್ಘ್ಯೇಷಾ ನಿದಾನೇನೋದೀಚೀಂ ಹ್ಯೇತಯಾ ದಿಶಂ ಪ್ರಾಜಾನನ್ನುದೀಚೀ ಹ್ಯೇತಸ್ಯೈ ದಿಕ್ ॥ ೧೫ ॥

ಜನರು ನಕ್ಷತ್ರಗಳನ್ನು ದೇವರೆಂದು ನಂಬಿ ಪ್ರಾರ್ಥಿಸುತಿದ್ದರೆಂಬುದನ್ನು ಅರಿಯದ ಅರ್ವಾಚೀನ ಭಾರತೀಯ ವಿದ್ವಾಂಸರು ಋಗ್ವೇದ ಮಂತ್ರಗಳಲ್ಲಿ ಬಂದಿರುವ ರೇವತೀಃ ಮತ್ತು ಪುನರ್ವಸೂ ಎಂಬ ಶಬ್ದಗಳು ವಾಸ್ತವವಾಗಿ ನಕ್ಷತ್ರಪುಂಜಗಳ ಹೆಸರುಗಳಾಗಿದ್ದರೂ, ಅವುಗಳನ್ನು ನಕ್ಷತ್ರಗಳೆಂದು ಗ್ರಹಿಸದೇ ಬೇರೆ ಶಬ್ದಗಳ ವಿಶೇಷಣಗಳನ್ನಾಗಿ ಗ್ರಹಿಸಿ ಅವುಗಳಿಗೆ "ಧನವತಿಯರು" ಎಂಬ ಅರ್ಥವನ್ನು ಹೇಳಿದ್ದಾರೆ. ಮತ್ತು ಆ ಅರ್ಥವು ತಮ್ಮ ಕಲ್ಪನೆಗೆ ಅನುಕೂಲವಾದುದೆಂಬ ಕಾರಣದಿಂದ ಪಾಶ್ಚಾತ್ಯ ವಿದ್ವಾಂಸರು ಅದನ್ನು ವಿಮರ್ಶಿಸದೇ ಸ್ವೀಕರಿಸಿದ್ದಾರೆ.

ಆ ರೀತಿಯಲ್ಲಿ ಭಾರತೀಯ ವಿದ್ವಾಂಸರು ಮತ್ತು ಭಾಷ್ಯಕಾರರು ಋಗ್ವೇದದ ಮಂತ್ರಗಳಿಗೆ ಹೇಳಿದ ಅಪಾರ್ಥಗಳನ್ನು ಮತ್ತು ಮಾಡಿದ ಆಧಾರ ರಹಿತ ಕಲ್ಪನೆಗಳನ್ನು ತೋರಿಸಿಕೊಡಲು ಇಲ್ಲೊಂದು ಚಿಲೋ ಉದಾಹರಣೆಯನ್ನು ಕೊಡಲಾಗುವುಧು. ಋಗ್ವೇದದ ಸೂಕ್ತಗಳಿಗೆ ದೇವತೆಗಳನ್ನು ನಿರ್ಧರಿಸಿದ ಪ್ರಾಚೀನ ಆಚಾರ್ಯರು ಋಗ್ವೇದದ ಹತ್ತನೆಯ ಮಂಡಲದ ಹತ್ತೊಂಭತ್ತನೆಯ ಸೂಕ್ತದ ದೇವತೆಯೂ ಅಂದರೆ ಸ್ತುತಿಯ ವಿಷಯವಾದ ವಸ್ತುವು **"ಆಪಃ; ಗಾವೋವಾ"** ಅಂದರೆ ದಿವ್ಯ ಜಲಗಳು ಅಲ್ಲದಿದ್ದರೆ ಗೋವುಗಳು ಎಂದು ಹೇಳಿದ್ದಾರೆ. ಆದರೆ ಆ ಇಡೀ ಸೂಕ್ತದಲ್ಲಿ "ಆಪಃ" ಎಂಬ ಶಬ್ದದ ಉಲ್ಲೇಖವೇ ಇಲ್ಲ. ಮತ್ತು ಗೋವುಗಳ ವರ್ಣನೆಯಾಗಲೀ ಸ್ತುತಿಯಾಗಲೀ ಇಲ್ಲ. ಆ ಸೂಕ್ತದ ಆರನೆಯ ಋಚೆಯಲ್ಲಿ ಅಧ್ವರ್ಯುಗಳು–ಗೋವುಗಳನ್ನು ಹಿಂದಕ್ಕೆ ಕೊಡು ಎಂದು ಇಂದ್ರನನ್ನು ಪ್ರಾರ್ಥಿಸಿದ್ದಾರೆಯೇ ಹೊರತು ಗೋವುಗಳನ್ನು ಸ್ತುತಿಸಿಲ್ಲ. ಅಂದರೆ ಗೋವುಗಳು ಆ ಸೂಕ್ತದ ದೇವತೆಯಲ್ಲವೆಂಬುದು ಅತ್ಯಂತ ಸ್ಪಷ್ಟವಿದೆ ವಾಸ್ತವವಾಗಿ ಆ ಸೂಕ್ತದಲ್ಲಿ ರೇವತೀ ಮತ್ತು ಪುನರ್ವಸೂ ಎಂಬ ನಕ್ಷತ್ರಗಳು ಮತ್ತು ಅಗ್ನಿ, ಸೋಮ ಮತ್ತು ಇಂದ್ರ ಎಂಬ ನಕ್ಷತ್ರ ದೇವತೆಗಳು ಸ್ತುತಿಸಲ್ಪಟ್ಟಿದ್ದಾರೆ. ವಿಚಿತ್ರವೆಂದರೆ ವೇದ ಭಾಷ್ಯಕಾರರು ಆ ಸೂಕ್ತದ ಮೊದಲನೆಯ ಋಚೆಯಲ್ಲಿ ಬಂದಿರುವ ರೇವತೀ ಎಂಬ ನಕ್ಷತ್ರನಾಮವನ್ನು ಆ ಋಚೆಯಲ್ಲಿ ಇಲ್ಲವೇ ಇಲ್ಲದ "ಗೋವಿನ" ವಿಶೇಷಣವನ್ನಾಗಿ ಮಾರ್ಪಡಿಸಿ ಆ ಋಚೆಗೆ ಸಲ್ಲದ ಅರ್ಥವನ್ನು ಹೇಳಿದುದಾಗಿದೆ—ಆ ಋಚೆಯು ಮುಂದಿನಂತಿದೆ—

ನಿ ವರ್ತಧ್ವಂ ಮಾನು ಗಾತಾಸ್ಮಾನ್ ತ್ಸಿಷಕ್ತ ರೇವತೀಃ ।
ಅಗ್ನಿಷೋಮಾ ಪುನರ್ವಸೂ ಅಸ್ಮೇ ಧಾರಯತಂ ರಯಿಮ್ ॥

ಋ. ೧೦–೧೯–೧ ॥

ಪದಪಾಠ –ನಿ । ವರ್ತಧ್ವಂ । ಮಾ । ಅನು । ಗಾತ । ಅಸ್ಮಾನ್ । ಸಿಷಕ್ತ । ರೇವತೀಃ । ಅಗ್ನಿಸೋಮಾ । ಪುನರ್ವಸೂ ಇತಿ ಪುನಃऽ ವಸೂ । ಅಸ್ಮೇ । ಧಾರಯತಂ । ರಯಿಮ್ ।

ಸಾಯಣ ಭಾಷ್ಯ – ಹೇ ಗಾವೋ ಹೇ ಆಪೋ ವಾ ಯೂಯಂ ನಿವರ್ತಧ್ವಂ। ಅಸ್ಮಾನ್ ಪ್ರತ್ಯಾಗಚ್ಛತ। ಮಾನುಗಾತ। ಅಸ್ಮದ್ ವ್ಯತಿರಿಕ್ತಂ ಯಜಮಾನಂ ಮಾ ಗಚ್ಛತ। ಆಗತ್ಯ ಚ ಹೇ ರೇವತೀ ರೇವತ್ಯೋ ಧನವತ್ಯೋ ಯೂಯಮಸ್ಮಾನ್ ಸಿಷಕ್ತ। ಸೇಚಯತ। ಅವಗಾಹತ। ಗೋದೋಹನಸ್ನಾನ ಪಾನಾದಿ ದ್ವಾರೇಣ ಸೇವಧ್ವಮಿತ್ಯರ್ಥಃ। ಹೇ ಪುನರ್ವಸೂ। ಪುನಃ ಪುನರ್ವಸ್ತಾರೌ ಸ್ತೋತೃಣಾಂ ಯಷ್ಟೃಣಾಮಾಚ್ಛಾಯಿತಾರಾವೇತನ್ನಾಮಕೌ ದೇವೌ ಯುವಾ ಮಸ್ಮೇ ಅಸ್ಮಾಸು ರಯಿಂ ವ್ರೀಹ್ಯಾದಿಲಕ್ಷಣಂ ಧನಂ ಧಾರಯತಂ। ಸ್ಥಾಪಯ ತಮ್ ।

ಆಸ್ಥಾನ ವಿದ್ವಾನ್ ಎಚ್. ಪಿ. ವೆಂಕಟರಾವ್ ಅವರ ಪ್ರತಿಪದಾರ್ಥ– (ಎಲೈ ಗೋವುಗಳೇ) ನಿವರ್ತಧ್ವಂ–ಹಿಂದಿರುಗಿ। ಮಾನುಗಾತ - ಬೇರೆ ಯಜಮಾನ ರಲ್ಲಿಗೆ ಹೋಗಬೇಡಿ। ರೇವತೀಃ – ಸಂಪದ್ಯುಕ್ತರಾದ ನೀವು। ಅಸ್ಮಾನ್–ನಮಗೆ। ಸಿಷಕ್ತ–ಕ್ಷೀರವನ್ನು ಸುರಿಸಿರಿ। ಪುನರ್ವಸೂ–ಪದೇ ಪದೇ ಯಜಮಾನರಿಗೆ ವಸತಿ ದಾಯಕರಾದ। ಅಥವಾ ವಸ್ತ್ರಾದಿಗಳಿಂದ ಹೊದಿಸುವವರಾದ। ಅಗ್ನಿಷೋಮಾ– ಎಲೈ ಅಗ್ನಿ ಮತ್ತು ಸೋಮ ದೇವತೆಗಳೇ। ಅಸ್ಮೇ–ನಮ್ಮಲ್ಲಿ। ರಯಿಂ-ಧನವನ್ನು ಧಾರಯತಮ್–ಸ್ಥಾಪಿಸಿರಿ।

ಹಿಂದೆ ಉದಹರಿಸಿದ ಋಚೆಯಲ್ಲಿ "ಗೋ" ಎಂಬ ಶಬ್ದವಿಲ್ಲವಾದುದ ರಿಂದಲೂ, ಸಿಷಕ್ತ ಎಂಬ ಕ್ರಿಯೆಯ ಮೂಲವು ಸಿಚ್ ಧಾತುವಾಗಿರದೇ ಸಚ್ ಧಾತು ವಾಗಿರುವುದರಿಂದಲೂ, ಪುನರ್ವಸೂ ಶಬ್ದವು ಅಗ್ನಿಸೋಮರ ವಿಶೇಷಣವಾಗಲು ಸಾಧ್ಯವಿಲ್ಲದುದರಿಂದಲೂ, ಅಗ್ನಿ ಸೋಮರು-ಪ್ರಕಾಶವನ್ನು ಕೊಡಬಲ್ಲರೇ ಹೊರತು ವಸತಿಯನ್ನಾಗಲೀ, ವಸ್ತ್ರವನ್ನಾಗಲೀ, ಧನವನ್ನಾಗಲೀ ಕೊಡಲಾರರಾದುದ ರಿಂದಲೂ ಆಚಾರ್ಯ ಸಾಯಣರ ಭಾಷ್ಯವೂ – ಆ ಭಾಷ್ಯವನ್ನನುಸರಿಸಿ ವಿದ್ವಾನ್ ವೆಂಕಟರಾಯರು ಹೇಳಿದ ಅರ್ಥವೂ ಸರ್ವಥಾ ಅಸಂಗತವೆನ್ನಬೇಕಾಗಿದೆ. ರೇವತಿ, ಮತ್ತು ಪುನರ್ವಸೂ ನಕ್ಷತ್ರಗಳು. ಉತ್ತರ ಧ್ರುವಪ್ರದೇಶದಲ್ಲಿ ಸೂರ್ಯೋದಯ ವನ್ನು ಸೂಚಿಸುವ ನಕ್ಷತ್ರಗಳಾಗಿದ್ದುದರಿಂದ ಆ ನಕ್ಷತ್ರಗಳು ಕೂಡ ಪ್ರಕಾಶವನ್ನು ಕೊಡುವಂಥವುಗಳಾಗಿದ್ದುವೆನ್ನಬಹುದು. ಹಿಂದಿನ ಋಚೆಗೆ ಪ್ರೊ. ರಾಲ್ಫ್. ಟಿ. ಎಚ್. ಗ್ರಿಫಿಥ್ ಅವರು ಹೇಳಿದ ಅರ್ಥವು ಮುಂದಿನಂತಿದೆ–

Turn, go not farther on your way; visit us, O ye wealthy ones. Agni and Soma, ye bring riches again, secure us wealth.

ವಾಸ್ತವವಾಗಿ ಆ ಋಚೆಯ ಅರ್ಥವು ಮುಂದಿನಂತಾಗುತ್ತದೆ–

ಪ್ರಕಾಶದಂಥ ಧನದ ಆಗಮಕ್ಕೆ ಕಾರಣರಾದ ಹೇ ರೇವತಿಯರೇ, ನೀವು

ಹಿಂತಿರುಗಿರಿ ಮುಂದೆ ಸಾಗ ಬೇಡಿರಿ. (ಅಸ್ಮಾನ್ ಸಿಪಕ್ತ) ನಮ್ಮ ಬಳಿಯಲ್ಲಿಯೇ ಇದ್ದು ಬಿಡಿರಿ ಸದಾ ಪ್ರಕಾಶಿಸುವಂಥ ಹೇ ಅಗ್ನಿ ಮತ್ತು ಸೋಮರೇ, ಪ್ರಕಾಶವನ್ನು ಮರಳಿ ತರುವ ಹೇ ಪುನರ್ವಸುಗಳೇ ನೀವು ನಮಗಾಗಿ ಪ್ರಕಾಶರೂಪೀ ಧನವನ್ನು ಸ್ಥಿರಗೊಳಿಸಿರಿ.

ಆದುದರಿಂದ ಹಿಂದೆ ಉದಹರಿಸಿದ ಎರಡು ಋಚೆಗಳಲ್ಲಿ ಬಂದಿರುವ ರೇವತಿ ಶಬ್ದ ಮತ್ತು ತರುವಾಯದ ಋಚೆಯಲ್ಲಿ ಬಂದಿರುವ ಪುನರ್ವಸೂ ಶಬ್ದ-ಎರಡನ್ನೂ ಸ್ವತಂತ್ರವಾದ ನಕ್ಷತ್ರನಾಮಗಳೆನ್ನಬಹುದೇ ಹೊರತು ಬೇರೆ ಶಬ್ದಗಳ ವಿಶೇಷಣಗಳೆನ್ನಲಾಗುವುದಿಲ್ಲ. ಮತ್ತು ಹಾಗೆನ್ನಲು ಆಧಾರವೂ ಇಲ್ಲ. ಇನ್ನು ಋಗ್ವೇದದ ೧-೨೪-೯ರಲ್ಲಿ ವರುಣನನ್ನು ಕುರಿತು **"ಶತಂ ತೇ ರಾಜನ್ ಭಿಷಜಃ"** ಅಂದರೆ "ಹೇ ರಾಜನೇ, ನಿನಗೆ ನೂರು ಮಂದಿ ವೈದ್ಯರು" ಎಂಬುದು ಸ್ಪಷ್ಟವಾಗಿ **"ಶತಭಿಷಕ್"** ನಕ್ಷತ್ರವನ್ನು ಸೂಚಿಸುತ್ತದೆ. ಹೇಗೆಂದರೆ ಶತಭಿಷಕ್ ನಕ್ಷತ್ರದ ದೇವತೆಯು ವರುಣನೇ ಆಗಿದ್ದಾನೆ. ಮತ್ತು ಶತಪಥ ಬ್ರಾಹ್ಮಣದಲ್ಲಿ ಇತರ ಎಲ್ಲ ನಕ್ಷತ್ರಗಳು ಪೂರ್ವದಿಂದ ತೊಲಗಿ ಹೋದರೂ ಕೃತ್ತಿಕೆಯರು ಪೂರ್ವದಿಂದ ಕದಲುವುದೇ ಇಲ್ಲವೆಂದು ಹೇಳಿದಂತೆಯೇ ಋಗ್ವೇದದ ೫–೫೪-೧೩ರಲ್ಲಿ **'ನಯೋ ಯುಚ್ಛತಿ ತಿಷ್ಯೋ ಯಥಾ ದಿವಃ'**[1] ಅಂದರೆ "ತಿಷ್ಯನು ಅಥವಾ ಪುಷ್ಯ ನಕ್ಷತ್ರ ಪುಂಜವು ಆಕಾಶದಿಂದ (–ತನ್ನ ಉದಯ ಸ್ಥಾನದಿಂದ) ಹೇಗೆ ಕದಲುವುದಿಲ್ಲವೋ ಅಥವಾ ಇಲ್ಲವಾಗುವುದಿಲ್ಲವೋ ಹಾಗೆ" ಎಂದು ಹೇಳಿದೆ. ತಿಷ್ಯ ಶಬ್ದದ ಉಲ್ಲೇಖವು ೧೦–೬೪–೮ ನೆಯ ಋಚೆಯಲ್ಲಿಯೂ ಇದೆ. ಇನ್ನು ಕೊನೆಯದಾಗಿ ಋಗ್ವೇದದ ೧೦-೮೫-೧೩ ನೆಯ ಋಚೆಯಲ್ಲಿ **"ಅಘಾ ಅಂದರೆ ಮಘಾ ಮತ್ತು ಅರ್ಜುನೀ ಅಂದರೆ ಫಲ್ಗುನೀ**[2] ಎಂಬ ಎರಡು ನಕ್ಷತ್ರಗಳ ಹೆಸರು ಬಂದಿವೆ. ಪ್ರೊ. ಏ. ಏ. ಮೆಕ್‌ಡೊನೆಲ್ ಅವರು ಅವುಗಳು ಚಾಂದ್ರನಕ್ಷತ್ರಗಳ ಹೆಸರುಗಳೆಂದು ಒಪ್ಪಿದ್ದಾರಾದರೂ, ಹಾಗೆ ಒಪ್ಪುವಾಗ ಋಗ್ವೇದದ ಹತ್ತನೆಯ ಮಂಡಲದೊಳಗಿನ ಸೂಕ್ತಗಳು ಬಹಳ ಅರ್ವಾಚೀನವಾದವುಗಳೆಂದು ವಾದಿಸಿದ್ದಾರೆ. ಪಾಶ್ಚಾತ್ಯರು ಯಾವ ರೀತಿಯಿಂದ ವಾದಿಸಿದರೂ ಋಗ್ವೇದದಲ್ಲಿ – **ರೇವತೀ, ಪುನರ್ವಸೂ, ತಿಷ್ಯ, ಶತಭಿಷಕ್, ಮಘಾ ಮತ್ತು ಫಲ್ಗುನೀ"** ಎಂಬ ಆರು ಚಾಂದ್ರನಕ್ಷತ್ರಗಳ ಹೆಸರುಗಳಿವೆಯೆಂಬುದನ್ನು ಅಲ್ಲಗಳೆಯಲಾಗುವುದಿಲ್ಲ. ಆದುದರಿಂದ ಋಗ್ವೇದ ಮಂತ್ರಗಳು ಬರೆಯಲ್ಪಟ್ಟು

---

1 ಯುಷ್ಮಾಕ್ದತ್ತಸ್ಯಮರುತೋ ವಿಚೇತಸೋರಾಯಃಸ್ಯಾಮ ರಥ್ಯೋ ವಯಸ್ವತಃ।
ನ ಯೋ ಯುಚ್ಛತಿ ತಿಷ್ಯೋ ದಿವೋऽಸ್ಮೇರಾರಂತ ಮರುತಃ ಸಹಸ್ರಿಣಮ್
॥ ಋ. ೫-೫೪-೧೩ ॥

2 ಸೂರ್ಯಾಯಾ ವಹತುಃ ಪ್ರಾಗಾತ್ ಸವಿತಾ ಯಮವಾಸೃಜತ್।
ಅಘಾಸು ಹನ್ಯಂತೇ ಗಾವೋऽರ್ಜುನ್ಯೋಃ ಪರ್ಯುಹ್ಯತೇ ॥ ಋ. ೧೦-೮೫-೧೩॥

ಗ್ರಂಥಸ್ಥವಾಗುವ ಕಾಲದಲ್ಲಿ ಇಪ್ಪತ್ತೇಳು ಚಾಂದ್ರನಕ್ಷತ್ರಗಳಿಗೂ ಹೆಸರುಗಳಿದ್ದುವೆಂಬುದನ್ನು ಮತ್ತು ಚಾಂದ್ರನಕ್ಷತ್ರಗಳಿಗನುಸಾರವಾದ ಗಣನೆಯು ಪ್ರಚಲಿತವಿದ್ದಿತೆಂಬುದನ್ನು ಒಪ್ಪಲೇ ಬೇಕಾಗುತ್ತದೆ.

ವೇದಾಂಗ ಜ್ಯೋತಿಷದ ಮುಖ್ಯ ಉದ್ದೇಶವು ಯಜ್ಞಾಗ್ನಿಗಳ ಆಧಾನ ಕಾಲವನ್ನು ನಿರ್ಧರಿಸುವುದಾಗಿದ್ದುದರಿಂದ, ಮತ್ತು ದರ್ಶ –ಪೂರ್ಣಮಾಸಗಳನ್ನು ಕಂಡುಕೊಳ್ಳುವುದಾಗಿದ್ದುರಿಂದ ಅದರಲ್ಲಿ ಸೂರ್ಯನ, ಚಂದ್ರನ ಮತ್ತು ನಕ್ಷತ್ರಗಳ ಮಧ್ಯಮ ಸ್ಥಿತಿಯನ್ನು ಕಂಡು ಕೊಳ್ಳುವ ಗಣಿತ ಕ್ರಮ ಮಾತ್ರ ವಿವರಿಸಲ್ಪಟ್ಟಿದೆ. ಅಂದರೆ ಅದರೊಳಗಿನ ಗಣಿತವು ಅಧ್ವರ್ಯುಗಳಿಗೆ ಸಾಮಾನ್ಯ ಮಾರ್ಗದರ್ಶನವನ್ನು ಮಾಡಿಸುವಂತಿದೆಯೇ ಹೊರತು ಸೂಕ್ಷ್ಮ ರೀತಿಯದಾಗಿರುವುದಿಲ್ಲ. ಹಾಗಾಗಿ ಅದರೊಳಗಿನ ವರ್ಷಕ್ಕೆ ೩೬೬ ದಿನಗಳಿವೆ. ಕಾರಣವೇನೆಂದರೆ ಪ್ರಾಚೀನ ಕಾಲದ ಋತ್ವಿಜರು ನಭೋಮಂಡಲವನ್ನು ಪ್ರತ್ಯಕ್ಷವಾಗಿ ನಿರೀಕ್ಷಿಸಿ ಸೂರ್ಯ–ಚಂದ್ರರ ಹಾಗೂ ನಕ್ಷತ್ರಗಳ ಸೂಕ್ಷ್ಮ ಸ್ಥಿತಿಯನ್ನು ಕಂಡುಕೊಳ್ಳುತ್ತಿದ್ದರು. ಯಜ್ಞಗಳ ಕಾಲ ನಿರ್ಧರಣಕ್ಕೆ ಸೂರ್ಯನ ಮತ್ತು ಚಂದ್ರನ ಹೊರತು ಇತರ ಗ್ರಹಗಳ ಸ್ಥಿತಿಯನ್ನು ಕಂಡುಕೊಳ್ಳುವ ಆವಶ್ಯಕತೆಯಿರಲಿಲ್ಲ. ಹಾಗಾಗಿ ವೇದಾಂಗ ಜ್ಯೋತಿಷದಲ್ಲಿ ಇತರ ಗ್ರಹಗಳ ಉಲ್ಲೇಖಗಳು ಬಂದಿಲ್ಲ.

ಸೌರವರ್ಷವು ಚಾಂದ್ರವರ್ಷಕ್ಕಿಂತ ಸಾಧಾರಣ ಹನ್ನೊಂದು ದಿನಗಳಿಗೆ ದೊಡ್ಡದಾಗಿದ್ದುದರಿಂದ ಆ ಎರಡು ವರ್ಷಗಳನ್ನು ಹೊಂದಿಸಿ ಕೊಳ್ಳುವ ಸಲುವಾಗಿ ಅಂದರೆ ಚಂದ್ರನ ಮಾಸಗಳನ್ನು ಸೂರ್ಯನ ಋತುಗಳೊಂದಿಗೆ ಹೊಂದಿಸಿ ಕೊಳ್ಳುವ ಸಲುವಾಗಿ ಋಗ್ವೇದ ಕಾಲದಿಂದಲೇ ಚಂದ್ರನ ವರ್ಷದಲ್ಲಿ ಅಧಿಕ ಮಾಸವನ್ನು ಸೇರಿಸುತಿದ್ದರೆಂದು ತಿಳಿದು ಬರುತ್ತದಾದರೂ ಅಧಿಕಮಾಸವನ್ನು ಯಾವಾಗ ಸೇರಿಸುತಿದ್ದರೆಂಬ ವಿವರಗಳು ವೇದಮಂತ್ರಗಳಲ್ಲಿ ದೊರೆಯುವುದಿಲ್ಲ. ಪರಂತು ಪ್ರಾಚೀನ ಪರಂಪರೆಯ ಆಧಾರದಿಂದ ರಚಿಸಲ್ಪಟ್ಟ ವೇದಾಂಗ ಜ್ಯೋತಿಷದಲ್ಲಿ ಸೂರ್ಯ ಚಂದ್ರರ ಮಧ್ಯಮಗತಿಗನುಸಾರವಾಗಿ–ಸೂರ್ಯನ ಐದು ವರ್ಷಗಳಲ್ಲಿ ಚಂದ್ರನ ಎರಡು ಅಧಿಕ ಮಾಸಗಳು ಅಂದರೆ ಸೂರ್ಯನ ಅರುವತ್ತು ತಿಂಗಳುಗಳಲ್ಲಿ ಚಂದ್ರನ ಅರುವತ್ತೆರಡು ತಿಂಗಳುಗಳು ಬರುವಂಥ ಗಣಿತವಿದೆ. ಅರ್ಥಾತ್ ಚಂದ್ರನ ಮೂವತ್ತು ಮಾಸಗಳ ತರುವಾಯದ ಮೂವತ್ತೊಂದನೆಯ ಮಾಸವು ಅಧಿಕ ಬರುತ್ತದೆ. ಆದುದರಿಂದ ವೇದಾಂಗ ಜ್ಯೋತಿಷದಲ್ಲಿ ಚಾಂದ್ರವರ್ಷ ಮತ್ತು ಸೌರವರ್ಷಗಳು ಜೊತೆಯಾಗಿಯೇ ಸಾಗುತ್ತವೆ. ಹಾಗೆ ಎರಡುಮಾನಗಳು ಜೊತೆಯಾಗಿ ಸಾಗುತಿದ್ದುದರಿಂದ ಆ ಐದು ವರ್ಷಗಳ ಕಾಲಚಕ್ರಕ್ಕೆ **'ಯುಗ'** ಅಂದರೆ ಸೌರ ಮತ್ತು ಚಾಂದ್ರ ಎಂಬ ಎರಡು ಮಾನಗಳನ್ನು ಹೂಡಿದ "ನೊಗ" (yoke) ಎಂಬ ಹೆಸರು ಬಂದಿತ್ತು. ಆ ಯುಗದಲ್ಲಿ ಸೇರಿದ ಐದು ಚಾಂದ್ರವರ್ಷಗಳ ಹೆಸರುಗಳು ಮತ್ತು ಅವುಗಳಲ್ಲಿ ಎಣಿಸಲ್ಪಡುತಿದ್ದ ದಿನಗಳು ಸಾಮಾನ್ಯವಾಗಿ ಮುಂದೆ ಕೊಡಲಾದ ಕ್ರಮದಲ್ಲಿರುತಿದ್ದುವು–

೧. ಸಂವತ್ಸರ = ೩೬೬ ದಿನಗಳು. ೨. ಪರಿವತ್ಸರ = ೩೬೪ ದಿನಗಳು. ೩. ಇದಾವತ್ಸರ = ಅಧಿಕಮಾಸ ಸಹಿತ ೩೮೪ದಿನಗಳು. ೪. ಅನುವತ್ಸರ = ೩೬೪ದಿನಗಳು. ೫. ಇದ್ವತ್ಸರ = ಅಧಿಕಮಾಸ ಸಹಿತ ೩೮೩ ದಿನಗಳು. ಅಂದರೆ ಆ ಐದು ಚಾಂದ್ರ ವರ್ಷಗಳಲ್ಲಿರುತಿದ್ದ ದಿನಗಳ ಮೊತ್ತವು ಐದು ಸೌರ ವರ್ಷದ ದಿನಗಳಷ್ಟೇ ಅಂದರೆ ೧೮೩೦ ದಿನಗಳಾಗುತಿತ್ತು. ಆ ಗಣನೆಯಂತೆ ಒಂದು ಸೌರವರ್ಷದಲ್ಲಿ ೩೬೬ ದಿನಗಳಿರುತಿದ್ದುವು. ಆದರೆ ಅದು ಸ್ಥೂಲಮಾನವಾಗಿದ್ದಿತೇ ಹೊರತು ಸೂಕ್ಷ್ಮಮಾನವಾಗಿರಲಿಲ್ಲವೆಂದು ಹೇಳಲು ಬೇರೆ ಹಲವು ಪ್ರಮಾಣಗಳಿವೆ. ಅಂದರೆ ಆ ಕಾಲದ ಜನರಿಗೆ ಸೂರ್ಯನ ವರ್ಷವು ೩೬೫ ದಿನಗಳಿಗಿಂತ ಕೊಂಚ ದೊಡ್ಡದೂ, ೩೬೬ ದಿನಗಳಿಂತ ಚಿಕ್ಕದೂ ಆಗಿರುತ್ತದೆಂಬ ಸ್ಪಷ್ಟವಾದ ಜ್ಞಾನವಿದ್ದಿತು.

ಹಾಗಿದ್ದರೂ ವೇದಾಂಗ ಜ್ಯೋತಿಷದ ಗಣನೆಯಂತೆ ಸೌರವರ್ಷಕ್ಕೆ ೩೬೬ ದಿನಗಳಿರುವುದನ್ನು ಕಂಡ ಪ್ರೊ. ಎ. ಎ. ಮೆಕ್‌ಡೊನೆಲ್ ಎಂಬ ಬ್ರಿಟಿಷ್ ವಿದ್ವಾಂಸರು ತಾನು ಬರೆದ "ವೇದಿಕ್ ಇಂಡೆಕ್ಸ್" ಎಂಬ ಗ್ರಂಥದಲ್ಲಿ ನಕ್ಷತ್ರಗಳ ವಿಮರ್ಶೆ ಮಾಡುವಾಗ ಸೌರವರ್ಷಕ್ಕೆ ಸರಿಯಾಗಿ ಎಷ್ಟು ದಿನಗಳೆಂದು ನಿರ್ಧರಿಸಲಾಗದ ವೇದಕಾಲೀನ ಜ್ಯೋತಿಷ್ಕರು ಸಂಪಾತ ಸ್ಥಾನವನ್ನು ಮತ್ತು ಸಂಪಾತಚಲನವನ್ನು ಕಂಡು ಹಿಡಿಯುವಷ್ಟು ಶಕ್ತರಾದ ಶುದ್ಧ ನಿರೀಕ್ಷಕರಾಗಿದ್ದರೆಂದು ಹೇಳಲಾಗುವುದಿಲ್ಲವೆಂದಿದ್ದಾರೆ.[1]

ಆದರೆ ಋಗ್ವೇದದಲ್ಲಿ ಅಧಿಕಮಾಸಗಳ ಉಲ್ಲೇಖವೂ, ಅತ್ರಿಗಳು ತುರೀಯ ಬ್ರಹ್ಮವೆಂಬ ವೇಧಮಂತ್ರದ ನೆರವಿನಿಂದ ಸೂರ್ಯನಿಗೆ ತಗಲಿದ ಗ್ರಹಣವು ಬಿಡುವ ಕಾಲವನ್ನು ಕಂಡು ಹಿಡಿದರೆಂಬ ಉಲ್ಲೇಖವೂ ಇರುವುದರಿಂದ ವೇದಕಾಲೀನ ಋತ್ವಿಜರು ವೇಧಯಂತ್ರಗಳ ಮೂಲಕ ಸೂರ್ಯ ಚಂದ್ರರ ಸ್ಥಿತಿ ಗತಿಗಳನ್ನು ಪ್ರತ್ಯಕ್ಷ ನಿರೀಕ್ಷಿಸಿ ನಿರ್ಧರಿಸುತಿದ್ದರೆಂದು ಸಂದೇಹಕ್ಕೆಡೆಯಿಲ್ಲದಂತೆ ಸಿದ್ಧವಾಗುತ್ತದೆ. ಅಧಿಕ ಮಾಸದ ಉಲ್ಲೇಖವಿರುವ ಋಚೆಯು ಮುಂದಿನಂತಿದೆ–

ವೇದ ಮಾಸೋ ಧೃತವ್ರತೋ ದ್ವಾದಶ ಪ್ರಜಾವತಃ।
ವೇದಾ ಯ ಉಪಜಾಯತೇ ॥ ಋ. ೧-೨೫-೮ ॥

---

[1] The fact that the place of the equinox is not a matter accurately determined by mere observation, and the Hindu astronomers of the Vedic period cannot deemed to have been very accurate observers, since they made no precise determination of the number of days of the year which even in the Jotisha they do not determine precisely than as 366 days, and even the Surya Siddhanta does not know the precession of the equinoxes.

ಅರ್ಥ – ನಿಯಮವನ್ನು ಹಿಡಿದಿರುವ ವರುಣನು ಪ್ರಜೆಗಳುಳ್ಳ ಹದಿನೆರಡು ಮಾಸಗಳನ್ನೂ, ತರುವಾಯ ಹೆಚ್ಚಿಗೆ ಹುಟ್ಟುವ ಮಾಸವನ್ನೂ ಬಲ್ಲನು,

Prof R. T. H. Griffith—True to his holy law, he knows the twelve moons with their progeny, He knows the moon of later birth.[1]

ಸೂರ್ಯಗ್ರಹಣಕ್ಕೆ ಸಂಬಂಧಪಟ್ಟ ಋಚೆಗಳು ಮುಂದಿನಂತಿವೆ—

ಯತ್ ತ್ವಾ ಸೂರ್ಯ ಸ್ವರ್ಭಾನುಸ್ತಮಸಾऽವಿಧ್ಯದಾಸುರಃ ।
ಅಕ್ಷೇತ್ರವಿದ್ ಯಥಾ ಮುಗ್ಧೋ ಭುವನಾನ್ಯ ದೀಧಯುಃ

ಋ. ೫–೪೦–೫ ॥

ಅರ್ಥ – ಹೇ ಸೂರ್ಯದೇವನೇ, ಅಸುರನಾದ ಸ್ವರ್ಭಾನುವು ನಿನ್ನನ್ನು ಕತ್ತಲೆಯಿಂದ ಇರಿಯಲಾಗಿ ಸಕಲ ಪ್ರಾಣಿಗಳು – ಕಂಗೆಟ್ಟ ಒಬ್ಬ ಮನುಷ್ಯನಂತೆ ಅಂದರೆ ತಾನು ಎಲ್ಲಿದ್ದೇನೆಂದು ತಿಳಿಯದೇ ಮೂಢನಾದವನಂತೆ ತೋರಿದುವು.

ಹಿಂದಿನ ವರ್ಣನೆಯು – ಆ ಗ್ರಹಣವು ಖಗ್ರಾಸವಾಗಿದ್ದಿತೆಂತಲೂ, ಸರ್ವತ್ರ ಕತ್ತಲು ಕವಿದಿದ್ದಿತೆಂತಲೂ ಸೂಚಿಸುತ್ತದೆ.

Prof Griffith—O Surya, when the Asura's descendent Svarbhanu pierced thee through and through with darkness.

All the creatures looked like one who is be wilderd, who knoweth not where he is standing.

ಸ್ವರ್ಭಾನೋರಧ ಯದಿಂದ್ರ ಮಾಯಾ ಅವೋ
ದಿವೋ ವರ್ತಮಾನಾ ಅವಾಹನ್ ।
ಗೂಳ್ಹಂ ಸೂರ್ಯಂ ತಮಸಾಪವ್ರತೇನ
ತುರಿಯೇಣ ಬ್ರಹ್ಮಣಾವಿಂದದತ್ರಿಃ ॥ ಋ. ೫–೪೦–೬ ॥

ಅರ್ಥ – ಹೇ ಇಂದ್ರನೇ (ಉಜ್ವಲನಾಗಿ ಉರಿಯುವ ಅಗ್ನಿದೇವನೇ) ಸ್ವರ್ಭಾನುವು ಆಕಾಶದ ಕೆಳಭಾಗದಲ್ಲಿ ಹರಡಿದ ಮಾಯೆಯನ್ನು ನೀನು ನಾಶಗೊಳಿಸಲಾಗಿ ಅವನ ಕತ್ತಲೆಯಿಂದ ಮರೆಯಾಗಿ ಕಾಣದಾದ ಸೂರ್ಯನನ್ನು ಅತ್ರಿಯು ತುರೀಯ ಬ್ರಹ್ಮದಿಂದ ಅಂದರೆ ಆ ಹೆಸರಿನ ಒಂದು ವೇಧಯಂತ್ರದ ನೆರವಿನಿಂದ ಕಂಡುಕೊಂಡನು. ಅಂದರೆ ಅತ್ರಿಯು ಗ್ರಹಣ ಬಿಡುವ ಕಾಲವನ್ನು ನಿರ್ಧರಿಸಿದನು.

---

[1] Twelve moons with their progeny=the twelve months with days which are their offspring. The moon of later birth= the thirteenth, the supplementary or intercalary month of the luni-solar year.

ದಿವಂಗತ ಲೋಕಮಾನ್ಯ ಬಾಲಗಂಗಾಧರ ತಿಲಕ ಅವರು ತನ್ನ "ಒರಾಯನ್" ಎಂಬ ಗ್ರಂಥದಲ್ಲಿ ಹಿಂದಿನ ಋಚೆಯಲ್ಲಿ ಬಂದಿರುವ "ತುರೀಯಬ್ರಹ್ಮದ" ಸಂಬಂಧ ದಲ್ಲಿ ಚರ್ಚಿಸಿದ್ದಾರೆ. ಅವರ ಅಭಿಪ್ರಾಯದಲ್ಲಿ ಅರ್ವಾಚೀನ ಜ್ಯೋತಿಷ ಗ್ರಂಥಗಳಲ್ಲಿ ಒಂದು ವೇಧ ಯಂತ್ರವನ್ನು "ತುರೀಯಯಂತ್ರ"ವೆಂದು ಕರೆದಿರುವಂತೆಯೇ ವೇದ ಕಾಲದಲ್ಲಿ ಯಾವುದೋ ಒಂದು ವೇಧಯಂತ್ರವನ್ನು "ತುರೀಯ ಬ್ರಹ್ಮವನ್ನು" ತಿದ್ದ ರೆಂದಿದೆ.[1] ಆದರೆ ತುರೀಯ ಬ್ರಹ್ಮವು ಯಾವುದೆಂದು ಕಂಡುಹಿಡಿಯುವುದು ಅಷ್ಟೊಂದು ಕಠಿನವಲ್ಲ. ಏಕೆಂದರೆ "ತುರೀಯ" ಶಬ್ದದ ಅರ್ಥವು "ನಾಲ್ಕನೆಯ" ಎಂದು ಮಾತ್ರವಲ್ಲದೇ "ನಾಲ್ಕು ಭಾಗಗಳುಳ್ಳ" ಎಂದು ಕೂಡ ಆಗುತ್ತದೆ. ಋಗ್ವೇದದಲ್ಲಿ "ಕಃಪ್ರಜಾಪತಿಃ" ಎಂದು ಕರೆಯಲಾದ ಈ + ಚತುಷ್ಪದವೇ ವಾಸ್ತವವಾದ ಬ್ರಹ್ಮವಾಗಿದೆ. ಮತ್ತು ಅದರ ಸುತ್ತಲೂ ವೃತ್ತವನ್ನೆಳೆದರೆ ⊕ ಅದರಲ್ಲಿ ನಾಲ್ಕು ಭಾಗಗಳಾಗುತ್ತವೆ ಮತ್ತು ಕ್ರಾಂತಿವೃತ್ತವನ್ನು ನಿರೀಕ್ಷಿಸಲಾಗುವಂಥ ವೇಧಯಂತ್ರವೂ ಆಗುತ್ತದೆ. ಅದುವೇ ಹಿಂದಿನ ಋಚೆಯಲ್ಲಿ ಬಂದಿರುವ ತುರೀಯ ಬ್ರಹ್ಮವಾಗಿದೆಯೆಂಬುದರಲ್ಲಿ ಸಂದೇಹವಿಲ್ಲ. ಏಕೆಂದರೆ ಉತ್ತರ ಧ್ರುವಪ್ರದೇಶದಲ್ಲಿ ನೆಲಸಿದ್ದ ಆರ್ಯಜನರು ಈ + ಆಕೃತಿಯ ಯಜ್ಞವೇದಿ (=ಕಟ್ಟೆ) ಯನ್ನು ಕಟ್ಟುತ್ತಿದ್ದರು. ಅದರ ನಾಲ್ಕು ಕಾಲುಗಳು ಸರಿಯಾಗಿ ನಾಲ್ಕು ದಿಕ್ಕುಗಳನ್ನು ತೋರಿಸುತಿದ್ದುವು. ಹಾಗಾಗಿ ಅವರು ಅದರ ಪೂರ್ವದಿಕ್ಕಿನ ಕಾಲಿನ ನೇರಿನಲ್ಲಿ ಕಾಣಸುತಿದ್ದ ಯಾವುದೊಂದು ಸ್ಥಿರ ನಕ್ಷತ್ರವನ್ನು ಗುರುತಿಸಿ ಅದು ಇಡೀ ವರ್ಷ ಭೂಮಿಯನ್ನು ಸುತ್ತಿ ಮರಳಿ ಪೂರ್ವದಿಕ್ಕಿಗೆ ಬರುವುದನ್ನು ಲಕ್ಷಪೂರ್ವಕವಾಗಿ ನಿರೀಕ್ಷಿಸುತಿದ್ದರು. ಅಂಥ ನಿರೀಕ್ಷಣದಿಂದ ಪ್ರಚೋದಿತರಾದ ಅವರು ತರುವಾಯ ಸೂರ್ಯಚಂದ್ರರ ಗತಿಯನ್ನು ನಿರ್ಧರಿಸುವ ಸಲುವಾಗಿ ಒಂದು ಸಾಧಾರಣ ಎತ್ತರ ವಾದ ವೇದಿಯ ಮೇಲೆ ತುರೀಯ ಬ್ರಹ್ಮವನ್ನು ನಿರ್ಮಿಸಿ ಅದರ ಪರಿಧಿ ಯನ್ನು ಹದಿನೆರಡು ವಿಭಾಗಗಳನ್ನಾಗಿ ಮಾಡಿದ್ದರು. ಆ ಹದಿನೆರಡು ವಿಭಾಗಗಳು ವರ್ಷದ ಹದಿನೆರಡು ತಿಂಗಳುಗಳಾಗಿದ್ದುವು. ಅವರ ವರ್ಷವು ಮುನ್ನೂರ ಅರು ವತ್ತು ಸಾವನ ದಿನಗಳಲ್ಲಿ ವಿಭಜಿಸಲ್ಪಟ್ಟಿತ್ತು. ಆದುದರಿಂದ ಅವರು ಆ ತುರೀಯ ಬ್ರಹ್ಮದ ಅಥವಾ ಚಕ್ರದ ಪರಿಧಿಯ ಪ್ರತಿಯೊಂದು ವಿಭಾಗದಲ್ಲಿ ಮೂವತ್ತರಂತೆ ಒಟ್ಟು ಮುನ್ನೂರ ಆರುವತ್ತು ಗೂಟಗಳನ್ನು ಜಡಿಯುತ್ತಿದ್ದರು. ಮತ್ತು ಆ ಗೂಟ ಗಳ ನೆರವಿನಿಂದ, ನಕ್ಷತ್ರದ, ಚಂದ್ರನ ಮತ್ತು ಸೂರ್ಯನ ಗತಿಯನ್ನು ನಿರ್ಧರಿಸು ತಿದ್ದರು. ಅದನ್ನು ಋಗ್ವೇದದ ಮುಂದಿನ ಋಚೆಯಿಂದ ಸ್ಪಷ್ಟವಾಗಿ ತಿಳಿದುಕೊಳ್ಳ ಬಹುದು–

1 Pas Orion, pages 159—160

ದ್ವಾದಶ ಪ್ರಧಯಶ್ಚಕ್ರಮೇಕಂ
ತ್ರೀಣಿ ನಭ್ಯಾನಿ ಕ ಉ ತಚ್ಚಿಕೇತ।
ತಸ್ಮಿನ್ ತ್ಸಾಕಂ ತ್ರಿಶತಾ ನ ಶಂಕವೋ
ಅರ್ಪಿತಾ ಷಷ್ಟಿರ್ನ ಚಲಾ ಚಲಾಸಃ ॥ ಋ. ೧-೧೬೪-೪೮ ॥

ಆರ್ಯ ಜನರ ಉತ್ತರ ಧ್ರುವ ಪ್ರದೇಶದ ವಸತಿಯು ಅರಿವಿಲ್ಲದ ಹಾಗೂ ಋಚೆಯಲ್ಲಿ ವರ್ಣಿಸಲ್ಪಟ್ಟ ಚಕ್ರವು ವೇಧಯಂತ್ರವಾಗಿದ್ದಿತೆಂದು ಊಹಿಸಲಾರದ ಭಾರತೀಯ ವಿದ್ವಾಂಸರು ಅದನ್ನು ವರ್ಷದ ಉಪಮಾನವಾಗಿ ಬಂದಿರುವ ಸಾಮಾನ್ಯ ಗಾಡಿಯ ಚಕ್ರದ ವರ್ಣನೆಯೆಂದು ಭಾವಿಸಿದ್ದಾರೆ. ಹಾಗಾಗಿ ಅವರು "ಕಃ" ಎಂಬುದು ಪ್ರಜಾಪತಿಯ ಸಂಕೇತವಾಗಿರುವ ಈ + ಚತುಷ್ಪದವೆಂದು ತಿಳಿಯದೇ ಅದನ್ನು ಪ್ರಶ್ನಾರ್ಥಕ ಸರ್ವನಾಮವೆಂದು ಗ್ರಹಿಸಿದ್ದಾರಲ್ಲದೇ ಕಿತ್ ಅಥವಾ ಚಿತ್ ಎಂಬ ಧಾತುವಿಗೆ "ನಿರೀಕ್ಷಿಸು" ಮತ್ತು "ಸರಿಯಾಗಿ ನೋಡು" ಎಂಬ ಅರ್ಥಗಳು ಕೂಡ ಇದ್ದರೂ "ತಿಳಿ" ಎಂಬ ಅರ್ಥವನ್ನು ಮಾತ್ರ ಗ್ರಹಿಸಿದ್ದಾರೆ. ಹಾಗೆಯೆ "ಶಂಕು" ಎಂಬುದರ ಅರ್ಥವು "ನೆಟ್ಟಗೆ ಅಥವಾ ಊರ್ಧ್ವಮುಖವಾಗಿ ಜಡಿಯಲಾಗುವ ಗೂಟ" ಎಂದಿದ್ದರೂ ಅದಕ್ಕೆ ಚಕ್ರದ ನಾಭಿಯಿಂದ ಪರಿಧಿಗೆ ಸಾಗುವ "ಆರೆ" ಎಂಬರ್ಥವನ್ನು ಹೇಳಿದ್ದಾರೆ. ಉದಾಹರಣೆಗಾಗಿ ಇಲ್ಲಿ ಮುಂದೆ ಆ ಋಚೆಗೆ ಕೆಲವು ವಿದ್ವಾಂಸರು ಹೇಳಿದ ಅರ್ಥಗಳನ್ನು ಕೊಡಲಾಗುವುದು–

ಆಸ್ಥಾನ್ ವಿದ್ವಾನ್ ಎಚ್. ಪಿ. ವೆಂಕಟರಾವ್ - "ಸಂವತ್ಸರ ರೂಪವಾದ ಚಕ್ರಕ್ಕೆ ಪರಿಧಿಗಳು ಹದಿನೆರಡು, ಮಧ್ಯಭಾಗದ ಅಚ್ಚುಗಳು ಮೂರು. ಈ ಚಕ್ರದಲ್ಲಿ ಪರಿಭ್ರಮಣವನ್ನು ಮಾಡುವ ಮುನ್ನೂರ ಅರುವತ್ತು ಅವಯವಗಳು ಒಟ್ಟಿಗೆ ಅರ್ಪಿತವಾಗಿವೆ. ಈ ರಹಸ್ಯವನ್ನು ಅರಿತ ಮಹಾತ್ಮನು ಅಪರೂಪ,

ಶ್ರೀಮಾನ್ ರಾಮಚಂದ್ರ ವಿನಾಯಕ ಪಟವರ್ಧನ್ (ಮರಾಠಿ) ಚಾಕ ಏಕಚ, ಪರಂತು ತ್ಯಾಲಾ ಬಾರಾ ಧಾಂವಾ ಆಣಿ ತೀನ ತುಂಬೇ ಆಹೇತ। ಹೇಂ ಕಸೇಂ ತೇಂ ಕೋಣ ಓಳಖತೋ? ತ್ಯಾ ಚಾಕಾಲಾ ತೀನಶೇಂ ಸಾಠ ಆರೇ ಆಹೇತ ಆಣೀ ತೇ ಶಂಕೂ ಪ್ರಮಾಣೆ ಗರಗರ ಫಿರತ ಅಸತಾತ್.

Prof H. H. Wilson– The fellies are twelve, the wheel is one, three are the axles, but who knows it? Within it are collected 360 (spokes) which are as it were movable and immovable.

Prof Griffith- Twelve are the fellies, and the wheel is single, three are the naves, what man hath

understood it? There in are set together spokes three hundred and sixty, which in novice can be loosened.

ಋಗ್ವೇದದೊಳಗಿನ ವರ್ಷದ ಸಂಬಂಧದಲ್ಲಿ ಹಿಂದೆ ಬೇರೆ ಬೇರೆ ಅಧ್ಯಾಯ ಗಳಲ್ಲಿ ಕೊಟ್ಟಿರುವ ವಿವರಗಳನ್ನು ಅಂದರೆ ಅತ್ಯಂತ ಪ್ರಾಚೀನ ಆರ್ಯಜನರ ಸಾವನ ವರ್ಷವು ೩೬೦ ದಿನಗಳದ್ದಾಗಿತ್ತು, ಮತ್ತು ವರ್ಷವು ಮೂರು ಚಾತುರ್ಮಾಸ್ಯ ಗಳಲ್ಲಿ ಮತ್ತು ಹದಿನೆರಡು ಮಾಸಗಳಲ್ಲಿ ವಿಭಜಿಸಲ್ಪಟ್ಟಿದ್ದಿತೆಂಬುದನ್ನು ಸ್ಮರಿಸಿ ಮತ್ತು ಹಿಂದಿನ ಋಚೆಯಲ್ಲಿ ವರ್ಣಿಸಲಾದ ಚಕ್ರವು ವೇಧಯಂತ್ರವಾಗಿದ್ದಿತೆಂದು ಗ್ರಹಿಸಿದರೆ ಅದರ ಅರ್ಥವು ಮುಂದಿನಂತಾಗುವುದು—

ಚಕ್ರಂ = ಚಕ್ರವು ಏಕಂ = ಒಂದು (ಆದರೂ) ಪ್ರಧಯಃ = ಪರಿಧಿಗಳು, ದ್ವಾದಶ = ಹದಿನೆರಡು; ನಭ್ಯಾನಿ = ನಾಭಿಗಳು ಅಂದರೆ ಚಕ್ರದ ಮಧ್ಯದ ಗುಂಬ ಗಳು ತ್ರೀಣಿ = ಮೂರು; ತತ್ = ಅದನ್ನು ಕಃ ಉ = ಪ್ರಜಾಪತಿಯು ಮಾತ್ರ. ಚಿಕೇತ = (ಬಲ್ಲನು, ಅಥವಾ) ವ್ಯವಸ್ಥಿತವಾಗಿರುವಂತೆ ನೋಡುತ್ತಾನೆ. ತಸ್ಮಿನ್ = ಅದರಲ್ಲಿ ಅಂದರೆ ಅದರ ಪರಿಧಿಯಲ್ಲಿ ತ್ರಿಶತಾ = ಮುನ್ನೂರು. ನ = ಮತ್ತು ಷಷ್ಟಿಃ = ಆರುವತ್ತು ಶಂಕವಃ = ಗೂಟಗಳು ಸಾಕಂ = ಹತ್ತಿರ ಹತ್ತಿರವಾಗಿ; ನ ಚ ಲಾಚಲಾಸಃ = ಎಷ್ಟು ಮಾತ್ರಕ್ಕೂ ಅಲುಗಾಡದಂಥವುಗಳು ಅಥವಾ ಅಲುಗಾಡ ದಂತೆ; ಅರ್ಪಿತಾಃ = ಜಡಿಯಲ್ಪಟ್ಟಿವೆ.

ಹದಿನೆರಡು ಪರಿಧಿಗಳು ಎಂಬುದರ ತಾತ್ಪರ್ಯವು ಒಂದೇ ಪರಿಧಿಯ ಹದಿನೆರಡು ವಿಭಾಗಗಳು ಅಥವಾ ವರ್ಷದ ಹದಿನೆರಡು ಮಾಸಗಳು. ಮೂರು ಗುಂಬಗಳು ಅಂದರೆ ವರ್ಷಕ್ಕೆ ಆರು ಋತುಗಳು ಮತ್ತು ಇಪ್ಪತ್ತೇಳು ನಕ್ಷತ್ರಗಳು ಎಂಬ ಗಣನೆಯು ಪ್ರಚಲಿತವಾಗುವ ಮೊದಲು ಪ್ರಚಲಿತವಿದ್ದ ಮೂರು ಚಾತು ರ್ಮಾಸ್ಯಗಳನ್ನು ಮತ್ತು ಮೂವತ್ತಮೂರು ನಕ್ಷತ್ರಗಳ ಹನ್ನೊಂದರ ಮೂರು ವಿಭಾಗಗಳನ್ನು ಸೂಚಿಸುವ ಗುರುತುಗಳು ಎಂದಿರುತ್ತದೆ. ಚಕ್ರವು ಅಥವಾ ಕಃಪ್ರಜಾ ಪತಿಯು ಸುತ್ತಲೂ ಎಳೆದ ವೃತ್ತವು ಅಥವಾ ಇಡೀ ತುರೀಯ ಬ್ರಹ್ಮವು ವೇದಿಯ ಮೇಲೆ ಚಿತ್ರಿಸಲ್ಪಡುತಿದ್ದಿತು ಮತ್ತು ಚಕ್ರದ ಪರಿಧಿಯಲ್ಲಿ ಮುನ್ನೂರ ಆರುವತ್ತು ಗೂಟಗಳು ಜಡಿಯಲ್ಪಡುತಿದ್ದುವು. ಅವುಗಳು ಚಲಿಸುವುದು ಅಥವಾ ಅಲುಗಾಡು ವುದು ಸಾಧ್ಯವಿರಲಿಲ್ಲ, ಅವುಗಳು ವೃತ್ತದ ಮುನ್ನೂರ ಆರುವತ್ತು ಅಂಶಗಳಾ ಗಿದ್ದುವು ಮತ್ತು ವರ್ಷದ ಮುನ್ನೂರ ಆರುವತ್ತು ದಿನಗಳಾಗಿದ್ದುವು. ಆ ಕಾಲದ ಋತ್ವಿಜರು ಆ ಗೂಟಗಳ ನೆರವಿನಿಂದ ಚಂದ್ರನ, ಸೂರ್ಯನ ಮತ್ತು ನಕ್ಷತ್ರಗಳ ಗತಿಯನ್ನು ಕಂಡುಕೊಳ್ಳುತಿದ್ದರು,

ಹಿಂದೆ ವಿವರಿಸಿದ ಗ್ರಹಣಕ್ಕೆ ಸಂಬಂಧಪಟ್ಟ ಮತ್ತೊಂದು ಋಚೆಯು ಮುಂದಿನಂತಿದೆ—

ಯಂ ವೈ ಸೂರ್ಯಂ ಸ್ವರ್ಭಾನುಸ್ತಮಸಾ ವಿಧ್ಯದಾಸುರಃ ।
ಅತ್ರಯಸ್ತಮನ್ವವಿಂದನ್ನಹ್ಯನ್ಯೇಽಶಕ್ನುವನ್ ॥ ಋ. ೫–೪೦–೯ ॥

ಅರ್ಥ – ಸ್ವರ್ಭಾನು ಎಂಬ ಅಸುರನು ಸೂರ್ಯನನ್ನು ಕತ್ತಲೆಯಿಂದ ಇರಿದಾಗ ಅಂದರೆ ಕತ್ತಲೆಯಿಂದ ಆವರಿಸಿದಾಗ ಅತ್ರಿಗಳು ಮಾತ್ರ ಅವನನ್ನು ಕಂಡು ಹಿಡಿದರು. ಇತರರು ಕಂಡುಹಿಡಿಯಲು ಶಕ್ತರಾಗಲಿಲ್ಲ.

ಹಿಂದೆ ಉದಹರಿಸಿದ ಋಚೆಗಳಲ್ಲಿ ಬಂದಿರುವ ವರ್ಣನೆಯ ಮೇಲಿಂದ ಋಗ್ವೇದ ಕಾಲದ ಜನರಲ್ಲಿ ಅತ್ರಿ ಕುಲದವರು ಜ್ಯೋತಿಷದಲ್ಲಿ ಮತ್ತು ಗಣಿತವಿದ್ಯೆಯಲ್ಲಿ ಇತರ ಕುಲದವರಿಗಿಂತ ನಿಪುಣರಾಗಿದ್ದರೆಂದು ಮತ್ತು ಅವರು ವೇಧಯಂತ್ರಗಳ ಮೂಲಕ ಸೂರ್ಯ - ಚಂದ್ರರ ಗತಿಯನ್ನು ನಿರೀಕ್ಷಿಸಿ ಗ್ರಹಣಗಳ - ಸ್ಪರ್ಶ ಹಾಗೂ ಮೋಕ್ಷದ ಸರಿಯಾದ ಕಾಲವನ್ನು ಗೊತ್ತು ಮಾಡುತಿದ್ದರೆಂದು ಸ್ಪಷ್ಟವಾಗಿ ಸಿದ್ಧವಾಗುತ್ತದೆ.

ಋಗ್ವೇದದಲ್ಲಿ ಬಂದಿರುವ ಉಲ್ಲೇಖಗಳಿಂದ ವರ್ಷಕ್ಕೆ ಮುನ್ನೂರ ಅರುವತ್ತು ದಿನಗಳೆಂದು ತಿಳಿಯುವಂತಿದೆಯಾದರೂ, ಯಜ್ಞಗಳ ನಿರ್ವಹಣವನ್ನು ಮತ್ತು ಯಜ್ಞಗಳಲ್ಲಿ ಋಗ್ವೇದದ ಮಂತ್ರಗಳ ವಿನಿಯೋಗವನ್ನು ತಿಳಿಸುವ ಐತರೇಯ ಬ್ರಾಹ್ಮಣದಲ್ಲಿ ವರ್ಷಗಳ ದಿನಗಳನ್ನು ಎಣಿಸುವ ಹಲವು ಕ್ರಮಗಳು ಕಲಬೆರಕೆಯಾಗಿ ಉಲ್ಲೇಖಿಸಲ್ಪಟ್ಟಿವೆ. ಅವುಗಳ ಮೇಲಿಂದ ಆ ಕಾಲದ ಅಧ್ವರ್ಯುಗಳು ಸೋಮಯಜ್ಞಕ್ಕೆ ಮುನ್ನೂರ ಅರುವತ್ತು ದಿನಗಳ ಸಾವನ ವರ್ಷವನ್ನೂ, ಗೃಹ್ಯಕರ್ಮಗಳಿಗೆ ಮುನ್ನೂರ ಐವತ್ತನಾಲ್ಕು ದಿನಗಳ ಚಾಂದ್ರವರ್ಷವನ್ನೂ. ಸೂರ್ಯನ ಗತಿಗನುಸಾರವಾಗಿ ಜರುಗಿಸಲ್ಪಡುತಿದ್ದ "ಗವಾಮಯನವ್" ಎಂಬ ಸತ್ರಕ್ಕೆ ಮುನ್ನೂರ ಅರುವತ್ತೈದು ದಿನಗಳ ಸೌರವರ್ಷವನ್ನೂ ಎಣಿಸುತಿದ್ದರೆಂದು ನಿರ್ಧರಿಸಬಹುದಾಗಿದೆ. ಹಾಗೆಯೇ ಆ ಕಾಲದ ಅಧ್ವರ್ಯುಗಳು ಭೂಗೋಲದ ವಿಷುವದ್ರೇಖೆಯನ್ನು ಸರಿಯಾಗಿ ಗುರುತಿಸಿದ್ದರೆಂದು ಮತ್ತು ವಿಷುವ ವೃತ್ತ-ಮತ್ತು ಕ್ರಾಂತಿವೃತ್ತದ ಸಂಪಾತ ಸ್ಥಾನವನ್ನು ಸರಿಯಾಗಿ ಅರಿತಿದ್ದರೆಂದು, ಹಾಗೂ ಸಂಪಾತ ಸ್ಥಾನಕ್ಕೆ ಚಲನವಿದೆಯೆಂಬುದನ್ನು ತಿಳಿದಿದ್ದರೆಂದು ಅಥವಾ ಅವರು ಅತ್ಯಂತ ಶುದ್ಧ ನಿರೀಕ್ಷಕರಾಗಿದ್ದರೆಂದು ಅವರು ಸಾಂಪಾತಿಕ ನಕ್ಷತ್ರಗಳನ್ನು ಕಾಲಕಾಲಕ್ಕೆ ಪರಿವರ್ತಿಸುತ್ತ ಸಾಗಿದುದರ ಮೇಲಿಂದ ಸಿದ್ಧವಾಗುತ್ತದೆ. ಅಂದರೆ ಸಂಪಾತ ಸ್ಥಾನವನ್ನು ಗುರುತಿಸುವುದು ಮತ್ತು ಸಾಂಪಾತಿಕ ನಕ್ಷತ್ರವನ್ನು ಪರಿವರ್ತಿಸುತ್ತ ಇರುವುದು ಶುದ್ಧ ನಿರೀಕ್ಷಣದಿಂದ ಮಾತ್ರ ಸಾಧ್ಯವೇ ಹೊರತು ಅನ್ಯಥಾ ಸಾಧ್ಯವಿಲ್ಲ.

ವೇದಾಂಗ ಜ್ಯೋತಿಷದೊಳಗಿನ ಸ್ಥೂಲ ಗಣನೆಯಂತೆ ಸೌರವರ್ಷಕ್ಕೆ ಮುನ್ನೂರ ಅರುವತ್ತಾರು ದಿನಗಳಾಗುತ್ತವೆ. ಆದರೆ ಬ್ರಾಹ್ಮಣ ಗ್ರಂಥಗಳಲ್ಲಿ ಸೂರ್ಯನ ಗತಿಗನುಸಾರವಾಗಿ ಇಡೀ ವರ್ಷ ಜರುಗಿಸಲಾಗುವ ಗವಾಮಯನವ್

ಎಂಬ ಸತ್ರದಲ್ಲಿ **"ವಿಷುವಾನ್"** ದಿನವು ವರ್ಷದ ಮಧ್ಯದಿನವಾಗಿದ್ದು ಅದರ ಮೊದಲು ಮತ್ತು ತರುವಾಯ ಸಮಾನ ಸಂಖ್ಯೆಯ ದಿನಗಳಿರುತ್ತವೆಂದು ಸ್ಪಷ್ಟವಾಗಿ ಹೇಳಿರುವುದರಿಂದ ಸೌರವರ್ಷದಲ್ಲಿ ವಿಷಮ ಸಂಖ್ಯೆಯ ದಿನಗಳು ಅಂದರೆ ಮುನ್ನೂರ ಆರುವತ್ತೈದು ದಿನಗಳು ಎಣಿಸಲ್ಪಡುತಿದ್ದುವೆಂದು ಸ್ಪಷ್ಟವಾಗಿ ಸಿದ್ಧವಾಗುತ್ತದೆ–

" ಏಕವಿಂಶವೇತದಹರುಪಯಂತಿ ವಿಷುವಂತಂ ಮಧ್ಯೇ ಸಂವತ್ಸರಸ್ಯ ಏತೇನ ವೈ ದೇವಾ ಏಕವಿಂಶೇನಾದಿತ್ಯಂ ಸ್ವರ್ಗಾಯ ಲೋಕಾಯೋದಯಚ್ಛನ್ ತ್ಸ ಏಷ ಇತ ಏಕವಿಶಸ್ತಸ್ಯ ದಶಾವಸ್ತಾದ ಹಾನಿ ದಿವಾಕೀರ್ತ್ಯಸ್ಯ ಭವಂತಿ। ದಶಪರಸ್ತಾ ನ್ಮಧ್ಯ ಏಕವಿಂಶ ಉಭಯತೋ ವಿರಾಜಿ ಪ್ರತಿಷ್ಠಿತ ॥ ಇ. ಬ್ರಾ. ೪-೩-೧೮ ॥

ಅರ್ಥ– ಏಕವಿಂಶ ಎಂಬ ಇಪ್ಪತ್ತೊಂದು ದಿನಗಳ ಕಾರ್ಯವನ್ನು ಜರಗಿಸುತ್ತಾರೆ ಆ ಏಕವಿಂಶವೆಂದು ಹೆಸರಾದ ವಿಷುವಾನ್ ದಿನವನ್ನು ಸಂವತ್ಸರದ ಮಧ್ಯದಲ್ಲಿ ಜರುಗಿಸುತ್ತಾರೆ. ಆ ಏಕವಿಂಶದ ಮೂಲಕ ದೇವತೆಗಳು ಸೂರ್ಯನನ್ನು ಸ್ವರ್ಗಲೋಕಕ್ಕೇರಿಸಿದರು (ಅಂದರೆ ಭೂಮಧ್ಯ ರೇಖೆಯನ್ನು ದಾಟಿಸಿ ಉತ್ತರ ಗೋಲಾರ್ಧಕ್ಕೆ ತಲುಪಿಸಿದರು.) ದಿವಾಕೀರ್ತ್ಯ ಅಂದರೆ ಹಗಲಲ್ಲಿ ಹಾಡಬೇಕಾದ ಮಂತ್ರಸಮೂಹವು ರಚಿಸಲ್ಪಟ್ಟ ಅಥವಾ ದಿವಾಕೀರ್ತ್ಯ ಎಂಬ ಸಾಮಮಂತ್ರಗಳನ್ನು ಹಾಡಲಿಕ್ಕಿರುವ ಆ ದಿನದ ಮೊದಲು ಹತ್ತು ದಿನಗಳೂ, ತರುವಾಯ ಹತ್ತು ದಿನಗಳೂ ಇರುತ್ತವಾದುದರಿಂದ ಅದು ಎರಡು ಕಡೆಗಳಿಂದಲೂ ವಿರಾಜ್ (ಅಂದರೆ ಪ್ರತಿಯೊಂದು ಪಾದದಲ್ಲಿ ಹತ್ತು ಅಕ್ಷರಗಳುಳ್ಳ ಛಂದಸ್ಸು) ಸಂಖ್ಯೆಯ ಮಧ್ಯದಲ್ಲಿ ಸ್ಥಾಪಿತವಾಗಿದೆ.

"ಯಥಾ ವೈ ಪುರುಷ ಏವಂ ವಿಷುವಾಂಸ್ತಸ್ಯ ಯಥಾ ದಕ್ಷಿಣೋಽರ್ಧ ಏವಂ ಪೂರ್ವೋಽರ್ಧೋ ವಿಷುವತೋ ಯಥೋತ್ತರೋಽರ್ಧ ಏವಮುತ್ತರೋಽರ್ಧೋ ವಿಷುವತಸ್ತಸ್ಮಾದುತ್ತರ ಇತ್ಯಾಚಕ್ಷತೇ ಪ್ರಬಾಹುಕ್ ಸತಃ ಶಿರ ಏವ ವಿಷುವಾನ್ ಬಿದಲ ಸಂಹಿತ ಇವ ಪುರುಷಸ್ಯದ್ಧಾಪಿ ಸ್ಯೂಮೇವ ಮಧ್ಯೇ ಶೀರ್ಷ್ಣೋ ವಿಜ್ಞಾಯತೇ ತದಾಹುರ್ವಿಷುವತ್ಯೈ ವೈತದಹಃ ಶಂಸೇದ್ ವಿಷುವಾನ್ ವಾ ಏತದುಕ್ಥಾನಾಮುಕ್ಥಂ ವಿಷುವಾನ್ ವಿಷುವಾನಿತಿ ಹ ವಿಷುವಂತೋ ಭವಂತಿ ಶ್ರೇಷ್ಠತಾಮಶ್ನುವತ ಇತಿ. ॥ ಇ. ಬ್ರಾ. ೪-೩-೨೨ ॥

ಅರ್ಥ- ವಿಷುವಾನ್ ಎಂಬುದು ಮನುಷ್ಯನಂತೆಯೇ ಇರುತ್ತದೆ. ಮನುಷ್ಯನ ಬಲದ ಅರ್ಧ ಭಾಗವಿರುವಂತೆಯೇ ವಿಷುವಾನ್ ದಿನದ ಮೊದಲಿನ ಅರ್ಧ ಭಾಗವಿರುತ್ತದೆ. ಮತ್ತು ಮನುಷ್ಯನ ಎಡದ ಅರ್ಧಭಾಗವಿರುವಂತೆಯೇ ವಿಷುವಾನ್ ದಿನದ ತರುವಾಯದ ಅರ್ಧವಿರುತ್ತದೆ. ಅಂದರೆ ಅದು ಸಮಾನವಾದ ಎರಡು ಭಾಗಗಳ ನಡುವಿನ ತಲೆಯಂತಿರುತ್ತದೆ. ಮನುಷ್ಯನು ಎರಡು ಅರ್ಧ ಭಾಗಗಳಿಂದ ಕೂಡಿದ್ದಾನೆ, ಆದುದರಿಂದ ಅವನ ತಲೆಯ ಮಧ್ಯದಲ್ಲಿ ಜೋಡಣೆ ಅಥವಾ ಹೊಲಿಗೆ

ಇದ್ದಂತೆ ಕಾಣಿಸುತ್ತದೆ. ಆ ದಿನ ವಿಷುವಾನ್ ದಿನದ ಸ್ತುತಿಯು ಜರುಗಬೇಕು, ವಿಷುವಾನ್ ಸ್ತುತಿಯು ಸ್ತುತಿಗಳಲ್ಲಿ ಶ್ರೇಷ್ಠವಾದ ಸ್ತುತಿಯಾಗಿದೆ. ವಿಷುವಾನ್ ಎಂಬುದು ಭೂಗೋಲದ ಮಧ್ಯರೇಖೆಯಾಗಿದೆ. ಹಾಗೆ ಆ ದಿನ ವಿಷುವದ್ ಮಂತ್ರಗಳ ಮೂಲಕ ಸ್ತುತಿಸಿದವರು ಭೂಮಧ್ಯರೇಖೆಗೆ ಸಮಾನರಾಗುತ್ತಾರೆ. ಅಂದರೆ ಶ್ರೇಷ್ಠತೆಯನ್ನು ಪಡೆಯುತ್ತಾರೆ.

ಏಕವಿಂಶದ ಸಂಬಂಧದಲ್ಲಿ ತೈತ್ತಿರೀಯ ಬ್ರಾಹ್ಮಣದಲ್ಲಿ ಮುಂದಿನ ಉಲ್ಲೇಖಗಳಿವೆ—

ಏಕವಿಂಶ ಏಷ ಭವತಿ । ಏತೇನ ವೈ ದೇವಾ ಏಕವಿಂಶೇನ । ಆದಿತ್ಯಂ ಉತ್ತಮಂ ಸುವರ್ಗಂ ಲೋಕಮಾರೋಹನ್ । ಸ ವಾ ಏಷ ಇತ ಏಕವಿಂಶಃ । ತಸ್ಯ ದಶಾವಸ್ತಾದಹಾನಿ । ದಶ ಪರಸ್ತಾತ್ । ಸ ವಾ ಏಷ ವಿರಾಜ್ಯುಭಯತಃ ಪ್ರತಿಷ್ಠಿತಃ : ತೈ. ಬ್ರಾ. ೧–೨–೪–೧ ॥ ಅರ್ಥ ಹಿಂದಿನದೇ—

ವಿಷೂವಾನ್ ದಿವಾಕೀರ್ತ್ಯಮ್ । ಯಥಾ ಶಾಲಾಯೈ ಪಕ್ಷಸೀ । ಏವಂ ಸಂವತ್ಸರಸ್ಯ ಪಕ್ಷಸೀ । ಯಥಾ ಶಾಲಾಯೈ ಪಕ್ಷಸೀ ಮಧ್ಯಮಂ ವಂಶಮಭಿ ಸಮಾಯಚ್ಛತಿ । ಏವಂ ಸಂವತ್ಸರಸ್ಯ ಪಕ್ಷಸೀ ದಿವಾಕೀರ್ತ್ಯಮಭಿ ಸಂತನ್ವಂತಿ । ತೈ. ಬ್ರಾ. ॥ ೧–೨–೩–೧ ॥

ಅರ್ಥ - ವಿಷೂವಾನ್ ಎಂಬುದು ದಿವಾಕೀರ್ತ್ಯವೆಂದು ಹೆಸರಾದ ದಿನವಾಗಿದೆ. ಯಜ್ಞಶಾಲೆಯ ಛಾವಣಿಗೆ ಎರಡು ಪಕ್ಕಗಳಿರುವಂತೆಯೇ ಸಂವತ್ಸರಕ್ಕೂ ಎರಡು ಪಕ್ಕಗಳಿವೆ, ಮತ್ತು ಛಾವಣಿಯ ಪಕ್ಕಗಳು ನಡುವಿನ ಅಥವಾ ಬೆನ್ನಿನ ಅಥವಾ ಕೊಬಳಿನ ಬಿದಿರಿಗೆ ಕಟ್ಟಲ್ಪಟ್ಟಿರುವಂತೆಯೇ ಸಂವತ್ಸರದ ಪಕ್ಕಗಳು ದಿವಾಕೀರ್ತ್ಯಕ್ಕೆ ಅಥವಾ ವಿಷುವಾನ್ ದಿನಕ್ಕೆ ಆಚೆ ಈಚೆಯಿಂದ ಹೊಂದಿಕೊಂಡಿರುತ್ತವೆ. ಹಿಂದಿನ ವಿವರಗಳಿಂದ ವಿಷುವಾನ್ ದಿನವು ವರ್ಷದ ಮಧ್ಯದ ದಿನವಾಗಿರುತ್ತದೆಂದು ಸ್ಪಷ್ಟವಾಗಿ ಸಿದ್ಧವಾಗುತ್ತದೆ.

ಐತರೇಯ ಬ್ರಾಹ್ಮಣದಲ್ಲಿ ಗವಾಮಯನಮ್ ಎಂಬ ಸಾಂವತ್ಸರಿಕ ಸತ್ರದ ನಿರ್ವಹಣಕ್ಕೆ ತಿಂಗಳಿಗೆ ಮೂವತ್ತು ದಿನಗಳಂತೆ ಹದಿನೆರಡು ತಿಂಗಳಿಗೆ ಮುನ್ನೂರ ಅರುವತ್ತು ದಿನಗಳ ಸಾವನ ವರ್ಷವನ್ನು ಸ್ವೀಕರಿಸಿದಂತೆ ತೋರಿದರೂ, ಸಂವತ್ಸರದ ಆರಂಭದಲ್ಲಿ, ಮಧ್ಯದಲ್ಲಿ ಮತ್ತು ಅಂತ್ಯದಲ್ಲಿ ಜರುಗಿಸಬೇಕಾದ ಕೆಲವು ಕಾರ್ಯಗಳಿಗಾಗಿ ವಿಧಿಸಿದ ಅಥವಾ ಹಂಚಿ ಹಾಕಿದ ದಿನಗಳ ಗಣನೆಯ ಮೇಲಿಂದ–ಗವಾಮಯನಮ್ ಸತ್ರದ ಸಂವತ್ಸರದಲ್ಲಿ ಮುನ್ನೂರ ಆರುವತ್ತು ದಿನಗಳಿಗಿಂತ ಹೆಚ್ಚು ದಿನಗಳಿದ್ದುವೆಂಬುದು ಅಥವಾ ವಿಷಮ ಸಂಖ್ಯೆಯ ದಿನಗಳಿರುತಿದ್ದುವೆಂದು ಗೊತ್ತಾಗುತ್ತದೆ. ಮುಂದೆ ಕೊಡಲಾಗುವ ಉದಾಹರಣೆಯಿಂದ ಆ ಕಾಲದ ಋತ್ವಿಜ

ರಲ್ಲಿ ಕೆಲವರು ಗವಾಮಯನವ್ ಸತ್ರವನ್ನು ಮುನ್ನೂರ ಆರುವತ್ತು ದಿನಗಳಿಗಿಂತ ಹೆಚ್ಚು ದಿನಗಳ ತನಕ ಜರುಗಿಸುತಿದ್ದರೆಂದು ಸಿದ್ಧವಾಗುತ್ತದೆ—

॥ ಯೇ ವಾ ಅತ ಊರ್ಧ್ವಂ ಸಂವತ್ಸರಮುಪಯಂತಿ ಗುರುಂ ವೈ ತೇ ಭಾರಮಭಿ ನಿದಧತೇ । ಸಂವೈ ಗುರುರ್ಭಾರಃ ಶೃಣಾತಿ ॥ ಐ ಬ್ರಾ. ೪-೨-೧೩ ॥

ಅರ್ಥ – ಯಾರು ಇದರ ತರುವಾಯವೂ ಅಂದರೆ ಮುನ್ನೂರ ಆರುವತ್ತು ದಿನಗಳು ಮುಗಿದ ತರುವಾಯವೂ ಸಂವತ್ಸರ (=ಸತ್ರ)ವನ್ನು ಮುಂದೆ ಸಾಗಿಸುತ್ತಾರೋ ಅವರು ದೊಡ್ಡ ಹೊರೆಯನ್ನು ಹೊರುತ್ತಾರೆ, ಮತ್ತು ಆ ಹೊರೆಯು ಅವರನ್ನು ಜಜ್ಜುತ್ತದೆ.

ತಾತ್ಪರ್ಯವೇನೆಂದರೆ– ಗವಾಮಯನವ್[1] ಎಂಬುದು ಸೂರ್ಯನ ಚಲನಕ್ಕನುಸಾರವಾಗಿ ಜರುಗಿಸಲ್ಪಡುವಂಥ ಸತ್ರವಾಗಿದ್ದುದರಿಂದ ಜ್ಯೋತಿಷದ ಸರಿಯಾದ ಜ್ಞಾನವಿದ್ದ ಋತ್ವಿಜರು ಸೂರ್ಯನ ಸ್ಥಿತಿ-ಗತಿಗಳನ್ನು ಸರಿಯಾಗಿ ನಿರೀಕ್ಷಿಸಿ. ಮಾಸಗಳನ್ನು ಮತ್ತು ಋತುಗಳನ್ನು ಹಾಗೂ ಅವುಗಳ ಗಣನೆಯಂತೆ ಸೂರ್ಯನ ವರ್ಷದ ದಿನಗಳನ್ನು ಎಣಿಸಿ ಅವುಗಳಿಗನುಸಾರವಾಗಿ ಗವಾಮಯನವ್ ಸತ್ರವನ್ನು ಜರುಗಿಸುತಿದ್ದರು. ಆದರೆ ಜ್ಯೋತಿಷದ ಸರಿಯಾದ ಜ್ಞಾನವಿಲ್ಲದ ಇತರ ಯಾಜ್ಞಿಕರು ಸಾವನ ವರ್ಷಕ್ಕನುಸಾರವಾಗಿ ಸಂವತ್ಸರವನ್ನು ಎಣಿಸುತಿದ್ದರು. ಅವರಿಗೆ ಋತುಗಳು ತಪ್ಪುತಿದ್ದುವು. ಹಾಗಾಗಿ ಯಜ್ಞನಿರ್ವಹಣ ಕಾಲದ ಸಂಬಂಧದಲ್ಲಿ ಗೊಂದಲ ಉಂಟಾಗುತಿತ್ತು, ಹೇಳಿದ್ದರೂ ಐತರೇಯ ಮತ್ತು ಇತರ ಬ್ರಾಹ್ಮಣ ಗ್ರಂಥಗಳೊಳಗಿನ ಉಲ್ಲೇಖಗಳ ಮೇಲಿಂದ, ಆ ಕಾಲದ ಕೆಲವು ಋತ್ವಿಜರು ವರ್ಷವನ್ನು ಮುನ್ನೂರ ಆರುವತ್ತು ದಿನಗಳಿಗಿಂತ ಮುಂದೆ ಸಾಗಿಸುತಿದ್ದರೆಂದು ಮತ್ತು ವಿಷುವಾನ್ ದಿನದ ವರ್ಣನೆಯ ಮೇಲಿಂದ ಸೌರವರ್ಷದಲ್ಲಿ ವಿಷಮ ಸಂಖ್ಯೆಯ ದಿನಗಳಿರುತಿದ್ದುವೆಂದು ಸ್ಪಷ್ಟವಾಗಿ ಸಿದ್ಧವಾಗುವುದರಿಂದ ಅವರ ವರ್ಷದಲ್ಲಿ ಮುನ್ನೂರ ಆರುವತ್ತೈದು ದಿನಗಳಿರುತಿದ್ದುವೆಂದು ಹೇಳಲೇ ಬೇಕಾಗುತ್ತದೆ, ಅಷ್ಟುಮಾತ್ರವಲ್ಲದೇ ಅವರು "ಅತಿರಾತ್ರ" ಎಂಬ "ಒಂದು ದಿನದ" ಒಂದು ಕಾರ್ಯಕ್ರಮವನ್ನು ಜರಗಿಸುತಿದ್ದುದರಿಂದ ಮತ್ತು ಅತಿರಾತ್ರ ಎಂಬುದರ ಅರ್ಥವು "ಹೆಚ್ಚಿನ ದಿನ" ಎಂದಿರುವುದರಿಂದ– ಅವರಿಗೆ ಸೌರವರ್ಷವು ಮುನ್ನೂರ ಆರುವತ್ತೈದು ದಿನಗಳಿಗಿಂತ ಕೊಂಚ ದೊಡ್ಡದಿದೆಯೆಂಬುದರ ಜ್ಞಾನವಿದ್ದಿತೆಂದೂ. ಅತಿರಾತ್ರವನ್ನು ಸೇರಿಸಿ ಸೌರಮಾನವನ್ನು ಸರಿಪಡಿಸುವ ಸಲುವಾಗಿಯೇ ಅವರು ಐದು ವರ್ಷಗಳ ಯುಗದ ಗಣನಾಕ್ರಮವನ್ನು ಸ್ವೀಕರಿಸಿದ್ದರೆಂದೂ ಮತ್ತು ಅಂಥ ಯುಗದಲ್ಲಿ ಅವರು ಆಗಾಗ್ಗೆ ಒಂದು ಇಲ್ಲವೇ ಆವಶ್ಯಕವೆಂದು ತೋರಿದ ಯುಗದಲ್ಲಿ ಎರಡು ಅತಿ ರಾತ್ರಗಳನ್ನು ಸೇರಿಸುತಿದ್ದರೆಂದೂ ಅನುಮಾನಿಸಬೇಕಾಗುತ್ತದೆ. ಆದರೆ

---

[1] ಗವಾಮಯನೇನ ಯಂತಿ ಗಾವೋ ವಾ ಆದಿತ್ಯಾ ಆದಿತ್ಯಾನಾಮೇವ ತದಯನೇನಯಂತಿ ಐ ಬ್ರಾ. ೪-೩-೧೭ ॥

ತರುವಾಯದ ಕಾಲದ ಅಧ್ವರ್ಯುಗಳು ಗವಾಮಯನವ್ ಸತ್ರದ ಪಾರಂಭಕಾಲದಲ್ಲಿ ಒಂದು "ಪ್ರಾಯಣೀಯ "ಅತಿರಾತ್ರ" ಎಂಬ ಮತ್ತು ಆ ಸತ್ರದ ಅಂತ್ಯದಲ್ಲಿ ಒಂದು "ಉದಯನೀಯ ಅತಿರಾತ್ರ" ಎಂಬ ಎರಡು ಅತಿರಾತ್ರಗಳನ್ನು ಜರುಗಿಸತೊಡಗಿದ್ದರು. ಮತ್ತು ಸೌರವರ್ಷದ ದಿನಗಳನ್ನು ಪೂರ್ತಿಗೊಳಿಸಲು ಹಲವು ಹೊಸ ಹಂಚಿಕೆಗಳನ್ನು ಪ್ರಚಾರಕ್ಕೆ ತಂದಿದ್ದರು. ಯಜ್ಞಸಿದ್ಧಾಂತಗಳು ಅಡಕವಾಗಿರುವ ಬ್ರಾಹ್ಮಣ ಗ್ರಂಥಗಳಲ್ಲಿ ಆ ಎಲ್ಲ ಹಂಚಿಕೆಗಳು ವಿವರಿಸಲ್ಪಟ್ಟಿವೆ. ಆದರೆ ಬ್ರಾಹ್ಮಣಗ್ರಂಥಗಳಲ್ಲಿ ಅಷ್ಟೆಲ್ಲ ಹಂಚಿಕೆಗಳು ವಿವರಿಸಲ್ಪಟ್ಟಿದ್ದರೂ ಅವುಗಳ ಮೇಲಿಂದ ಸೌರವರ್ಷಕ್ಕೆ ವಾಸ್ತವವಾಗಿ ಎಷ್ಟು ದಿನಗಳೆಂದು ತಿಳಿದುಕೊಳ್ಳಲಾಗುವುದಿಲ್ಲ, ಬ್ರಾಹ್ಮಣ ಗ್ರಂಥಗಳನ್ನು ಪಾಶ್ಚಾತ್ಯ ಭಾಷೆಗಳಿಗೆ ಪರಿವರ್ತಿಸಿದ ಪಾಶ್ಚಾತ್ಯ ವಿದ್ವಾಂಸರು ಗವಾಮಯನವ್ ಸತ್ರದ ಸಂವತ್ಸರದಲ್ಲಿ ಮುನ್ನೂರ ಅರುವತ್ತು ದಿನಗಳಿರುತಿದ್ದುವೆಂದು ನಿರ್ಧರಿಸಿದ್ದಾರೆ.

ಪ್ರಾಚೀನ ಕಾಲದ ಋತ್ವಿಜರು ಪ್ರತ್ಯಕ್ಷ ನಿರೀಕ್ಷಣದ ಬಲದಿಂದಲೇ ಚಂದ್ರನ ಪಕ್ಷ. ಮಾಸ ಮತ್ತು ವರ್ಷವನ್ನು ನಿರ್ಧರಿಸುತಿದ್ದರೆಂದು ಯಜುರ್ವೇದದ ತೈತ್ತಿರೀಯ ಸಂಹಿತೆಯೊಳಗಿನ ಉಲ್ಲೇಖಗಳಿಂದ ತಿಳಿದುಬರುತ್ತದೆ. ಅವರು ಚಂದ್ರನ ಒಂದು ಸುತ್ತು ಪೂರ್ಣಗೊಳ್ಳಲು ಇಪ್ಪತ್ತೊಂಭತ್ತುವರೆ ದಿನಗಳು ತಗಲುತ್ತವೆಂದು ಕಂಡುಹಿಡಿದಿದ್ದರು. ಆದುದರಿಂದ ಅವರು ಚಂದ್ರನ ಒಂದು ತಿಂಗಳಲ್ಲಿ ಮೂವತ್ತು ದಿನಗಳನ್ನೂ ಮತ್ತೊಂದು ತಿಂಗಳಲ್ಲಿ ಇಪ್ಪತ್ತೊಂಭತ್ತು ದಿನಗಳನ್ನೂ ಎಣಿಸುತಿದ್ದರು. ಅಥವಾ ಒಂದು ತಿಂಗಳ ಮೂವತ್ತು ದಿನಗಳಿಂದ ಒಂದು ದಿನವನ್ನು ಬಿಡುತಿದ್ದರು. ಅವರು ಆರು ದಿನಗಳ ಒಂದು ವಾರವನ್ನು ಅಥವಾ "ಷಡಹ"ವನ್ನು ಎಣಿಸುತಿದ್ದರು. ಅವರ ಸ್ಪಷ್ಟವಾದ ವಿವರಗಳು ಮತ್ತು ತಿಂಗಳಿಂದ ದಿನವನ್ನು ಬಿಡಬೇಕೋ, ಬೇಡವೋ ಎಂಬುದಾಗಿ ಋತ್ವಿಜರು ನಡಿಸಿದ ಸಮೀಕ್ಷೆಯು ಯಜುರ್ವೇದದ ತೈತ್ತರೀಯ ಸಂಹಿತೆಯಲ್ಲಿ ಮುಂದೆ ಕೊಟ್ಟಿರುವಂತೆ ಬಂದಿದೆ—

"ಷಡಹೈರ್ಮಾಸಾನ್ತ್ಸಂ ಪಾದ್ಯಾಹರುತ್ಸೃಜಂತಿ, ಷಡಹೈರ್ಹಿಮಾಸಾನ್ತ್ಸಂಪಶ್ಯಂತಿ॥" ಅಂದರೆ–(ಋತ್ವಿಜರು) ಷಡಹಗಳ ಎಣಿಕೆಯಿಂದ ಮಾಸವನ್ನು ಪೂರ್ತಿಗೊಳಿಸಿ ದಿನವನ್ನು ಬಿಡುತ್ತಾರೆ. ಅವರು ಷಡಹಗಳ ಮೂಲಕವೇ ಮಾಸವನ್ನು ಈಕ್ಷಿಸುತ್ತಾರೆ.

"ಅರ್ಧಮಾಸೈರ್ಮಾಸಾನ್ ತ್ಸಂಪಾದ್ಯಾಹರುತ್ ಸೃಜಂತ್ಯರ್ಧಮಾಸೈರ್ಹಿಮಾಸಾನ್ತ್ಸಂಪಶ್ಯಂತಿ"- ಅಂದರೆ ಅವರು ಅರ್ಧಮಾಸಗಳ ಎಣಿಕೆಯಿಂದ ಮಾಸಗಳನ್ನು ಪೂರ್ತಿಗೊಳಿಸಿ ದಿನವನ್ನು ಬಿಡುತ್ತಾರೆ. ಅವರು ಅರ್ಧಮಾಸಗಳ ಮೂಲಕವೇ ಮಾಸವನ್ನು ಈಕ್ಷಿಸುತ್ತಾರೆ,

"ಅಮಾವಾಸ್ಯಯಾ ಮಾಸಾನ್ತ್ಸಂಪಾದ್ಯಾಹರುತ್ ಸೃಜಂತ್ಯಮಾವಾಸ್ಯಯಾ ಹಿ ಮಾಸಾನ್ತ್ಸಂ ಪಶ್ಯಂತಿ" ಅಂದರೆ ಅವರು ಅಮಾವಾಸ್ಯೆಯಿಂದ ಮಾಸ

ವನ್ನು ಪೂರ್ತಿಗೊಳಿಸಿ ದಿನವನ್ನು ಬಿಡುತ್ತಾರೆ. ಅವರು ಅಮಾವಾಸ್ಯೆಯಿಂದಲೇ ಮಾಸವನ್ನು ಈಕ್ಷಿಸುತ್ತಾರೆ.

ಪೌರ್ಣಮಾಸ್ಯಾಮಾಸಾನ್‌ತ್ಸಂಪಾದ್ಯಾಹರುತ್‌ಸೃಜಂತಿ ಪೌರ್ಣಮಾಸ್ಯಾ ಹಿ ಮಾಸಾನ್‌ತ್ಸಂಪಶ್ಯಂತಿ" ಅಂದರೆ – ಕೆಲವರು ಹುಣ್ಣಿಮೆಯಿಂದ ಮಾಸವನ್ನು ಪೂರ್ತಿಗೊಳಿಸಿ ದಿನವನ್ನು ಬಿಡುತ್ತಾರೆ. ಅವರು ಹುಣ್ಣಿಮೆಯಿಂದಲೇ ಮಾಸವನ್ನು ಈಕ್ಷಿಸುತ್ತಾರೆ.

"ಯೋ ವೈ ಪೂರ್ಣ ಆಸಿಂಚತಿ ಪರಾ ಸ ಸಿಂಚತಿ ಯಃ ಪೂರ್ಣಾದುದಂಚತಿ ಪ್ರಾಣಮಸ್ಮಿನ್ ತ್ಸ ದಧಾತಿ ಯತ್ ಪೌರ್ಣಮಾಸ್ಯಾಮಾಸಾನ್‌ತ್ಸಂಪಾದ್ಯಾಹರುತ್ಸೃಜಂತಿ ಸಂವತ್ಸರಾಯೈವ ತತ್ ಪ್ರಾಣಂ ದಧತಿ ತದನು ಸತ್ರಿಣಃ ಪ್ರಾಣಂತಿ। ಯದಹರ್ನೋತ್ಸೃಜೇಯುರ್ಯಥಾ ಧೃತಿರುಪನದ್ಧೋ ವಿಪತತ್ಯೇವಂ ಸಂವತ್ಸರೋ ವಿಪತೇದಾರ್ತಿಮಾರ್ಚ್ಛೇಯುಃ॥ ತೈ. ಸಂ. ೭-೫ ೬ ॥

ಅರ್ಥ– ಯಾವನು ತುಂಬಿರುವ ಪಾತ್ರೆಗೆ ದ್ರವವನ್ನು ಎರೆಯುತ್ತಾನೋ ಅವನು ಅದನ್ನು ಹಾಳು ಮಾಡುತ್ತಾನೆ. ಯಾವನು ತುಂಬಿದ್ದ ಪಾತ್ರೆಯಿಂದ ದ್ರವವನ್ನು ಹೊರಗೆ ಸುರಿಯುತ್ತಾನೋ ಅವನು ಪಾತ್ರೆಯೊಳಗೆ ಪ್ರಾಣವಾಯುವನ್ನು ತುಂಬುತ್ತಾನೆ. ಹುಣ್ಣಿಮೆಯಿಂದ ಮಾಸಗಳನ್ನು ಪೂರ್ತಿಗೊಳಿಸಿ ದಿನವನ್ನು ಬಿಡುವವರು ಸಂವತ್ಸರದಲ್ಲಿ ಉಸಿರನ್ನು ತುಂಬುತ್ತಾರೆ. ಮತ್ತು ಅದರೊಂದಿಗೆ ತಾವೂ ಉಸಿರಾಡಿಸುತ್ತಾರೆ. ಅವರು ಹಾಗೆ ದಿನವನ್ನು ಬಿಡದಿದ್ದರೆ ಗಾಳಿಯನ್ನು ತುಂಬಿದ ತಿದಿಯನ್ನು ಹಗ್ಗದಿಂದ ಬಲವಾಗಿ ಬಿಗಿಯಲಾಗಿ ಅದು ಬಿರಿಯುವಂತೆ ಸಂವತ್ಸರವು ಕೂಡ ಬಿರಿದು ಹೋದೀತು ಮತ್ತು ಅಧ್ವರ್ಯುಗಳು ಕಷ್ಟಕ್ಕೊಳಗಾದಾರು.

"ಉತ್ಸೃಜ್ಯಾಂ೩ನೋತ್ಸೃಜ್ಯಾ೩ಮಿತಿ ಮೀಮಾಂಸತೇ ಬ್ರಹ್ಮವಾದಿನಸ್ತದ್ವಾಹುರುತ್ಸೃಜ್ಯಮೇವೇತ್ಯಮಾವಾಸ್ಯಾಯಾಂ ಚ ಪೌರ್ಣಮಾಸ್ಯಾಂಚೋತ್ಸೃಜ್ಯಮಿತ್ಯಾಹುರೇತೇಹಿ ಯಜ್ಞಂ ವಹತ ಇತಿ॥ ತೈ. ಸಂ. ೭-೫-೭-೧॥

ಅರ್ಥ- ಯಾಜ್ಞಿಕ ಪುರೋಹಿತರು ಮಾಸದಿಂದ ದಿನವನ್ನು ಬಿಡಬೇಕೋ? ಬೇಡವೋ? ಎಂಬುದಾಗಿ ಸಮೀಕ್ಷೆ ಮಾಡಿ ಬಿಡಲೇ ಬೇಕೆನ್ನುತ್ತಾರೆ. ಮತ್ತು ಅಮಾವಾಸ್ಯೆಯ ಪಕ್ಷದಿಂದಲೂ, ಹುಣ್ಣಿಮೆಯ ಪಕ್ಷದಿಂದಲೂ ಬಿಡಬೇಕೆನ್ನುತ್ತಾರೆ. ಏಕೆಂದರೆ ಅವುಗಳೇ ಯಜ್ಞವನ್ನು ನಿರ್ವಹಿಸುತ್ತವೆ.

ಸೌರನಕ್ಷತ್ರವನ್ನು ಹೇಗೆ ಮತ್ತು ಯಾವಾಗ ನಿರೀಕ್ಷಿಸಬೇಕು ಎಂಬುದರ ಉಲ್ಲೇಖವು ತೈತ್ತಿರೀಯ ಬ್ರಾಹ್ಮಣದ ಮುಂದಿನ ಅಂಶದಲ್ಲಿದೆ-

"ಯತ್ಪುಣ್ಯಂ ನಕ್ಷತ್ರಮ್। ತದ್ ಬಟ್ ಕುರ್ವೀತೋಪವ್ಯುಷಮ್। ಯಃ

ದಾವೈ ಸೂರ್ಯ ಉದೇತಿ। ಅಥ ನಕ್ಷತ್ರಂ ನೈತಿ। ಯಾವತಿ ತತ್ರ ಸೂರ್ಯೋ ಗಚ್ಛೇತ್। ಯತ್ರ ಜಘನ್ಯಂ ಪಶ್ಯೇತ್। ತಾವತಿ ಕುರ್ವೀತ ಯತ್ ಕಾರೀ ಸ್ಯಾತ್। ಪುಣ್ಯಾಹ ಏವ ಕುರುತೇ। ಏವಂ ಹ ವೈ ಯಜ್ಞೇಷುಂ ಶತದ್ಯುಮ್ನಂ ಚ ಮಾತ್ಸ್ಯೋ ನಿರವಸಾಯಯಾಂ ಚಕಾರ ॥ ತೈ. ಬ್ರಾ. ೧-೫-೨-೧ ॥

ತಾತ್ಪರ್ಯ– ಯಜಮಾನನು ತನ್ನ ಕಾರ್ಯಕ್ಕೆ ಅನುಕೂಲವಾದ ಹಾಗೂ ಶುಭ ಫಲ ಕೊಡುವ ನಕ್ಷತ್ರವಾವುದೆಂದು ಮೊದಲೇ ನಿರ್ಧರಿಸಿ ಉಷಕಾಲಕ್ಕೆ ಮೊದಲೇ ಕ್ಷಿತಿಜದಲ್ಲಿ ಅದರ ಉದಯವನ್ನು ನಿರೀಕ್ಷಿಸುತ್ತಿರಬೇಕು. ಅದು ಕಾಣಿಸ ತೊಡಗಿದಾಗ ಸೂರ್ಯೋದಯಕ್ಕಿಂತ ಮೊದಲು ಅದು ಇದ್ದ ಸ್ಥಾನವನ್ನು ಸರಿಯಾಗಿ ಗುರುತಿಸಬೇಕು. ಏಕೆಂದರೆ ಸೂರ್ಯನು ಉದಯಿಸಿದ ತರುವಾಯ ನಕ್ಷತ್ರವು ಕಾಣಿಸುವುದಿಲ್ಲ. ಸೂರ್ಯನು ಉದಯಿಸುತ್ತಿರುವಾಗ ಅವನು ನಕ್ಷತ್ರವಿದ್ದ ಸ್ಥಾನದ ಸಮೀಪಕ್ಕೆ ಬಂದೊಡನೆ ಯಜ್ಞಕಾರ್ಯವನ್ನು ಪ್ರಾರಂಭಿಸಬೇಕು. ಆಗ ಮಾತ್ರ ಆ ಕಾರ್ಯವು ಫಲಪ್ರದವಾಗುವುದು. ಆದೇ ರೀತಿಯಲ್ಲಿ ಮಾತ್ಸ್ಯನೆಂಬ ಪುರೋಹಿತನು ಯಜ್ಞಮಾಡ ಬಯಸಿದ ಶತದ್ಯುಮ್ನನೆಂದ ಪುಣ್ಯಕಾಲದಲ್ಲಿ ಯಜ್ಞವನ್ನು ಮಾಡಿಸಿ ಅವನನ್ನು ಶ್ರೇಷ್ಠತೆಗೇರಿಸಿದನು.

ಪ್ರಾಚೀನ ಆರ್ಯಜನರಲ್ಲಿ ನಕ್ಷತ್ರಗಳು ಶುಭ ಇಲ್ಲವೇ ಅಶುಭ ಫಲಕೊಡುತ್ತವೆಂಬ ನಂಬಿಕೆಯು ರೂಢವಾಗಿದ್ದಿತೆಂದು ಮುಂದಿನ ಉಲ್ಲೇಖದಿಂದ ತಿಳಿದು ಬರುತ್ತದೆ–

“ಯಾಂ ಕಾಮಯೇತ ದುಹಿತರಂ ಪ್ರಿಯಾ ಸ್ಯಾದಿತಿ। ತಾಂ ನಿಷ್ಟ್ಯಾಯಾಂ ದದ್ಯಾತ್। ಪ್ರಿಯೈವ ಭವತಿ। ನೈವ ತು ಪುನರಾಗಚ್ಛತಿ ॥ ತೈ. ಬ್ರಾ. ೧-೫-೨-೩ ॥

ಅರ್ಥ– ಮಗಳು ತನ್ನ ಪತಿಗೆ ಪ್ರಿಯಳಾಗಬೇಕೆಂದು ಬಯಸುವ ತಂದೆಯು ಅವಳನ್ನು ಸ್ವಾತೀ ನಕ್ಷತ್ರದಲ್ಲಿ (ಧ್ರುವಾ?) ಕೊಡಬೇಕು. ಆಗ ಅವಳು ಪತಿಗೆ ಬಹಳ ಪ್ರಿಯಳಾಗುವಳು, ಎಂದಿಗೂ ತವರಿಗೆ ಮರಳುವುದಿಲ್ಲ.

ಯಾನ್ಯೇವ ದೇವ ನಕ್ಷತ್ರಾಣಿ। ತೇಷು ಕುರ್ವೀತ ಯತ್ಕಾರೀ ಸ್ಯಾತ್। ಪುಣ್ಯಾಹ ಏವ ಕುರುತೇ॥ ತೈ. ಬ್ರಾ. ೧-೫-೪-೯ ॥

ಅರ್ಥ– (ಕಾಮ್ಯ) ಕರ್ಮಗಳನ್ನು ದೇವ ನಕ್ಷತ್ರಗಳ (ಸೂರ್ಯನ ಉತ್ತರಾಯಣ ಕಾಲದ)ಲ್ಲಿಯೇ ಮಾಡಬೇಕು. ಆಗ ಆ ಕರ್ಮವು ಫಲಪ್ರದವೂ ದೋಷರಹಿತವೂ ಆಗುವುದಲ್ಲದೇ ಅವನ್ನು ಜರುಗಿಸಿದ ದಿನವೂ ಶುಭದಿನವಾಗುತ್ತದೆ.

ಪ್ರಾಚೀನ ಆರ್ಯಜನರಲ್ಲಿ ನಕ್ಷತ್ರಗಳ ಕುರಿತು ರೂಢವಾಗಿದ್ದ ಅಂಥ ನಂಬಿಕೆಗಳಿಂದಾಗಿಯೇ ಮುಂದೆ ಅವರಲ್ಲಿ ಫಲಜ್ಯೋತಿಷವು ರೂಪುಗೊಂಡಿತೆನ್ನ

ಬಹುದು. ಆದರೆ ಭಾರತೀಯ ಆರ್ಯಜನರ ಯಾವುದೊಂದು ವೈದಿಕ ಗ್ರಂಥ ದಲ್ಲಿಯೂ ಫಲಜ್ಯೋತಿಷಕ್ಕೆ ಮುಖ್ಯ ಆಧಾರಗಳಾಗಿರುವ ನವಗ್ರಹಗಳಲ್ಲಿ - ಕುಜ, ಬುಧ, ಗುರು, ಶುಕ್ರ, ಶನಿ, ರಾಹು ಮತ್ತು ಕೇತು ಎಂಬ ಏಳು ಗ್ರಹಗಳ ಉಲ್ಲೇಖಗಳಿಲ್ಲ. ದಿ. ಶಂಕರ ಬಾಳ ಕೃಷ್ಣ ದೀಕ್ಷಿತರು–ತನ್ನ "ಭಾರತೀಯ ಜೋತಿಷ ಶಾಸ್ತ್ರ" ಎಂಬ ಗ್ರಂಥದ ೬೫ನೆಯ ಪುಟದಲ್ಲಿ ಋಗ್ವೇದದ ೪-೫೦-೪ನೆಯ ಋಚೆಯನ್ನು ಉದಹರಿಸಿ ಅದರಲ್ಲಿ ಬಂದಿಗುವ ಬೃಹಸ್ಪತಿ ಶಬ್ದವು ಗುರುಗ್ರಹವನ್ನು ಸೂಚಿಸುತ್ತದೆಂದಿದ್ದಾರೆ. ಆದರೆ ಋಗ್ವೇದದಲ್ಲಿ ಬೃಹಸ್ಪತಿ ಶಬ್ದವು ಅಗ್ನಿಯ ಪರ್ಯಾಯ ನಾಮವಾಗಿ ಪ್ರಯೋಗಿಸಲ್ಪಟ್ಟಿದೆಯೆಂದು ಅದರೊಂದಿಗೆ ಬಂದಿರುವ ವಿಶೇಷಣಗಳಿಂದ ಸ್ಪಷ್ಟವಾಗಿ ಗೊತ್ತಾಗುತ್ತದೆ. ದಿ. ದೀಕ್ಷಿತರು ಉದಹರಿಸಿದ ಋಚೆಯಲ್ಲಿ ಕೂಡ ಬೃಹಸ್ಪತಿಯನ್ನು **"ಸಪ್ತಾಸ್ಯ"** ಅಂದರೆ "ಏಳು ಬಾಯಿಗಳುಳ್ಳವನು" ಮತ್ತು **"ಸಪ್ತರಶ್ಮಿ"** ಅಂದರೆ "ಏಳು ಕಿರಣಗಳುಳ್ಳವನು ಅಥವಾ ಜ್ವಾಲೆಗಳುಳ್ಳವನು" ಎಂದು ಕರೆದಿದೆ. ಅವುಗಳು ಅಗ್ನಿಯ ವಿಶೇಷಣಗಳಾಗಿವೆ. ಆದುದರಿಂದ ಋಗ್ವೇದದೊಳಗಿನ ಬೃಹಸ್ಪತಿಯು ಗುರುಗ್ರಹವಲ್ಲವೆನ್ನಬೇಕಾಗುತ್ತದೆ.

ಹಾಗೆಯೇ ದಿವಂಗತ ಲೋಕಮಾನ್ಯ ಬಾಲಗಂಗಾಧರ ತಿಲಕ ಅವರು ತನ್ನ "Orion" ಎಂಬ ಗ್ರಂಥದ ೧೬೨ನೆಯ ಮತ್ತು ೧೬೩ನೆಯ ಪುಟಗಳಲ್ಲಿ ಉದಹರಿಸಿದ ಋಗ್ವೇದದ ೩–೩೨–೩ನೆಯ ಮತ್ತು ೯-೪೬-೪ನೆಯ ಋಚೆಗಳಲ್ಲಿ ಬಂದಿರುವ **"ಶುಕ್ರ"** ಮತ್ತು **"ಮಂಥಿ"** ಶಬ್ದಗಳು ಶುಕ್ರಗ್ರಹವನ್ನು ಮತ್ತು ಶನಿಗ್ರಹವನ್ನು ಸೂಚಿಸುತ್ತವೆಂದಿದ್ದಾರೆ. ಆದರೆ ಆ ಎರಡು ಶಬ್ದಗಳೂ ಸೋಮರಸದ ಹೆಸರುಗಳಾಗಿರುತ್ತವೆಂದು ಆ ಮಂತ್ರಗಳಿಂದಲೇ ಸ್ಪಷ್ಟವಾಗುತ್ತದೆ.

ಗವಾಶಿರಂ ಮಂಥಿನಮಿಂದ್ರ ಶುಕ್ರಂ
ಪಿಬಾ ಸೋಮಂ ರರಿಮಾತೇ ಮದಾಯ ।
ಬ್ರಹ್ಮಕೃತಾ ಮಾರುತೇನಾ ಗಣೇನ
ಸಜೋಷಾ ರುದ್ರೈಸ್ತೃಪದಾ ವೃಷಸ್ವ ॥ ಋ. ೩-೩೨-೩ ॥

ಅರ್ಥ-ಹೇ ದೇವ ಇಂದ್ರನೇ, ನೀನು ಗವಾಶಿರವನ್ನು ಅಂದರೆ ದನದ ಹಾಲನ್ನು ಬೆರಸಿದ ಸೋಮವನ್ನು, ಮಂಥಿಯನ್ನು ಅಂದರೆ ಹಿಟ್ಟನ್ನು ಬೆರಸಿದ ಸೋಮರಸವನ್ನು ಮತ್ತು ಶುಕ್ರವನ್ನು ಅಂದರೆ ಅಚ್ಚ ಬೆಳ್ಳಗಿರುವ ಸೋಮರಸವನ್ನು ಕುಡಿ. ನಾವು ನಿನ್ನನ್ನು ಮುದಭರಿತನನ್ನಾಗಿ ಮಾಡುವ ಸಲುವಾಗಿ ಅದನ್ನು ನಿನಗೆ ಅರ್ಪಿಸುತ್ತೇವೆ. ನೀನು ಮರುತ್ತುಗಳ ಗಣದೊಂದಿಗೂ, ರುದ್ರರೊಂದಿಗೂ ಕೂಡಿ ತೃಪ್ತಿಯಾಗುವಂತೆ ಆ ರಸವನ್ನು ಸುರಿ (=ಹೀರು.)

ಹಾಗೆಯೇ ದಿ। ದೀಕ್ಷಿತರು[1] ಮತ್ತು ದಿ। ಲೋಕಮಾನ್ಯರು[2] ಋಗ್ವೇದದ ೧೦-೧೨೩-೧ರಲ್ಲಿ ಬಂದಿರುವ **"ವೇನಃ"** ಶಬ್ದವು ಲತೀನ ಭಾಷೆಯ 'Venus" ಶಬ್ದದ ಸಮಾನಾರ್ಥಕವಾಗಿರುತ್ತದೆಂದು ಮತ್ತು ಅದು ಶುಕ್ರಗ್ರಹವನ್ನು ಸೂಚಿಸುತ್ತ ದೆಂದು ಹೇಳಿದುದು ಕೂಡ ಸರಿಯೆನ್ನಲಾಗುವುದಿಲ್ಲ. ಏಕೆಂದರೆ ಋಗ್ವೇದದ ೧-೮೩-೫[3]ರಲ್ಲಿ ವೇನ ಶಬ್ದವು ಸೂರ್ಯನ ವಿಶೇಷಣವಾಗಿ ಬಂದಿದೆ. ಮತ್ತು ಅದು ೧೦-೧೩೨-೧ರಲ್ಲಿ ಕೂಡ ಸೂರ್ಯ ಎಂಬರ್ಥದಲ್ಲಿಯೇ ಬಂದಿದೆ. ಅರ್ಥಾತ್ ಯಾವುದೊಂದು ವೈದಿಕ ಗ್ರಂಥದಲ್ಲಾದರೂ ಸೂರ್ಯನ, ಚಂದ್ರನ ಮತ್ತು ನಕ್ಷತ್ರ ಪುಂಜಗಳ ಹೊರತು ಇತರ ಯಾವ ಗ್ರಹದ ಉಲ್ಲೇಖವೂ ಇಲ್ಲವೆಂದು ಸ್ಪಷ್ಟವಾಗಿ ಸಿದ್ಧವಾಗುತ್ತದೆ. ಅದುದರಿಂದ ನವಗ್ರಹಗಳ ಗತಿಗೆ ಸಂಬಂಧಪಟ್ಟ ಜ್ಯೋತಿಷವು ಯವನರಿಂದಲೇ ನಮಗೆ ಬಂದುದೆಂದು ನಾವು ಒಪ್ಪಲೇ ಬೇಕಾಗುತ್ತದೆ. ಮಾತ್ರವಲ್ಲ ಆಚಾರ್ಯ ವರಾಹಮಿಹಿರನು ನವಗ್ರಹಗಳಿಗೆ ಸಂಬಂಧಪಟ್ಟ ಈ ಜ್ಯೋತಿಷ ಶಾಸ್ತ್ರವು ಯವನರಲ್ಲಿ ಚೆಲೋ ರೀತಿಯಲ್ಲಿ ಸ್ಥಾಪಿತವಾಗಿದೆಯೆಂದು[1] ಕೂಡ ಹೇಳಿದ್ದಾನೆ. ಆದರೆ ಆ ಜ್ಯೋತಿಷವು ಯಾವ ಕಾಲದಲ್ಲಿ ಭಾರತವರ್ಷದಲ್ಲಿ ಪ್ರವೇಶಿಸಿತು ಎಂಬು ದನ್ನು ಕಂಡುಕೊಳ್ಳದಿದ್ದರೆ ಅದರ ವಾಸ್ತವಿಕ ಇತಿಹಾಸವು ತಿಳಿಯುವಂತಿಲ್ಲ. ಅದನ್ನು ಕಂಡುಕೊಳ್ಳಲು ಒಂದು ಉತ್ತಮವಾದ ಹಾದಿಯೂ ಇದೆ.

ಅದೆಂದರೆ ನವಗ್ರಹಗಳಿಗೆ ಸಂಬಂಧಪಟ್ಟ ಹೊಸ ಜ್ಯೋತಿಷ ಸಿದ್ಧಾಂತಗಳ ಪ್ರಕಾರ ಕೃತ್ತಿಕಾ ನಕ್ಷತ್ರಪುಂಜದಲ್ಲಿ ಆರು ತಾರಕೆಗಳಿವೆ. ಆದರೆ ವೈದಿಕ ಸಾಹಿತ್ಯದ ಪ್ರಕಾರ ಆ ಪುಂಜದಲ್ಲಿ ಏಳು ತಾರಕೆಗಳಿವೆ. ಮಾತ್ರವಲ್ಲ ಯಜುರ್ವೇದದ ತೈತ್ತಿರೀಯ ಸಂಹಿತೆಯ ೪-೪-೫೧ರಲ್ಲಿ ಮತ್ತು ತೈತ್ತಿರೀಯ ಬ್ರಾಹ್ಮಣದ ೩-೧-೪-೧ರಲ್ಲಿ ಆ ಏಳು ತಾರಕೆಗಳ ಹೆಸರುಗಳು ಮುಂದಿನಂತೆ ಬಂದಿವೆ—

೧. **ಅಂಬಾ**, ೨. **ದುಲಾ**, ೩. **ನಿತತ್ನೀ** ೪. **ಅಭ್ರಯಂತೀ**, ೫. **ಮೇಘ ಯಂತೀ**, ೬. **ವರ್ಷಯಂತೀ** ೭. **ಚುಪುಣೀಕಾ**, ಹಾಗೆಯೇ ಶತಪಥ ಬ್ರಾಹ್ಮಣದ ೨-೧-೨-೪ ರಲ್ಲಿ ಆ ಕೃತ್ತಿಕೆಯರು ಮೊದಲು ಋಕ್ಷರ ಅಂದರೆ ಕರಡಿಗಳ ಪತ್ನಿಯ ರಾಗಿದ್ದರೆಂತಲೂ, ಈಗ ಸಪ್ತರ್ಷಿಗಳೆಂದು ಕರೆಯಲ್ಪಡುವ ನಕ್ಷತ್ರಗಳನ್ನು ಹಿಂದೆ

1, ಭಾರತೀಯ ಜ್ಯೋತಿಷ ಶಾಸ್ತ್ರವು. ೬೬

2. The Orion p. 163

3, ಯಜ್ಞೈರಥರ್ವಾ ಪ್ರಥಮಃ ಪಥಸ್ತತೇ, ತತಃ ಸೂರ್ಯೋವ್ರತಪಾ ವೇನ ಆಜನಿ।
ಆ ಗಾ ಆಜದುಶನಾ ಕಾವ್ಯಃ ಸಚಾ ಯಮಸ್ಯ ಜಾತಮಮೃತಂ ಯ ಜಾಮ ಹೇ
॥ ೧-೮೩-೫ ॥

1 ಮ್ಲೇಚ್ಛಾಹಿ ಯವನಾಸ್ತೇಷು ಸಮ್ಯಕ್ ಶಾಸ್ತ್ರಮಿದಂ ಸ್ಥಿತಮ್ ।
ಋಷಿವತ್ತೇಽಪಿ ಪೂಜ್ಯಂತೇ ಕಿಂ ಪುನರ್ದೈವವಿದ್ ದ್ವಿಜಃ ॥ ೨-೩೦ ॥

ಕರಡಿಗಳೆನ್ನುತ್ತಿದ್ದರೆಂತಲೂ ಹೇಳಿದೆ.[1] ಅದೇ ರೀತಿಯಲ್ಲಿ ಯವನರ ಪುರಾಕಥೆಗಳಲ್ಲಿ ಆ ಏಳು ತಾರಕೆಗಳನ್ನು ಏಳ್ವರು ಸೋದರಿಯರೆಂತಲೂ, ಅವರು ಎಟ್ಲಾಸ್ ಮತ್ತು ಪ್ಲಿಇಯೋನೇ ಎಂಬವರ ಮಕ್ಕಳೆಂತಲೂ ಹೇಳಿದೆ. ಶಕಪೂರ್ವ ೨೩೦ರಲ್ಲಿ ಜೀವಿಸಿದ್ದ ಯವನ ಜ್ಯೋತಿಷಿ ಹಿಪಾರ್ಕಸ್ ಎಂಬವನು ಚಂದ್ರನಿಲ್ಲದ ರಾತ್ರಿಗಳ ನಿರಭ್ರ ಆಕಾಶದಲ್ಲಿ ಕೃತ್ತಿಕಾ ಪುಂಜದೊಳಗಿನ ಏಳು ತಾರಕೆಗಳೂ ಸ್ಪಷ್ಟವಾಗಿ ಕಾಣಿಸುತ್ತವೆಂದು ಹೇಳಿದ್ದಾನೆ. ಆದರೆ ಶಕಪೂರ್ವ ೧೨೧ ರಿಂದ ೬೦ನೆಯ ವರ್ಷದ ತನಕ ಜೀವಿಸಿದ್ದ ಓವಿದ್ ಎಂಬ ಕವಿಗೆ ಕೃತ್ತಿಕಾಪುಂಜದಲ್ಲಿ ಆರಕ್ಕಿಂತ ಹೆಚ್ಚು ತಾರಕೆಗಳು ಕಾಣಿಸದಿದ್ದುದರಿಂದ ಅವನು ತಾನು ರಚಿಸಿದ ಒಂದು ಕಾವ್ಯದಲ್ಲಿ ದೇವಪುರುಷನೊಬ್ಬನು ತನ್ನ ಆರ್ವರು ಸೋದರಿಯರನ್ನು ಮುದ್ದಿಸಿ ಆಲಿಂಗಿಸಿದಂತೆ ತನ್ನನ್ನೂ ಆಲಿಂಗಿಸಲಿಲ್ಲವೆಂಬ ವ್ಯಥೆಯಿಂದ ಒಬ್ಬಳು ಟ್ರಾಜನ್ ಯುದ್ಧದ ಕಾಲದಲ್ಲಿ ಓಡಿಹೋದಳೆಂದು ಉತ್ಪ್ರೇಕ್ಷೆ ಮಾಡಿದ್ದಾನೆ. ಆದರ ತರುವಾಯದಿಂದ ಪಾಶ್ಚಾತ್ಯರಲ್ಲಿ ಕೃತ್ತಿಕಾಪುಂಜದಲ್ಲಿ ಆರೇ ತಾರಕೆಗಳೆಂಬ ನಂಬಿಕೆಯು ರೂಢವಾಗಿದೆ, ಆದರೆ ಓವಿದ್ ಕವಿಯು ಆ ಕಾವ್ಯವನ್ನು ಬರೆದೊಡನೆಯೇ ಅವನ ಆ ಕಲ್ಪನೆಯು ಭಾರತವರ್ಷದಲ್ಲಿಯೂ ಪ್ರಚಲಿತವಾಯಿತೆನ್ನಲಾಗುವುದಿಲ್ಲ. ಅದು ಅಲ್ಲಿಂದ ಮುಂದುವರಿದು ಭಾರತವರ್ಷದೊಳಗೆ ಪ್ರವೇಶಿಸಲು ಒಂದು ಶತಮಾನವಾದರೂ ತಗಲಿರಬಹುದು. ಆದುದರಿಂದ ಶಕಾರಂಭದ ತರುವಾಯ ಭಾರತವನ್ನು ಪ್ರವೇಶಿಸಿದ ಹೊಸ ಶಕಪಂಗಡದ ಜನರೊಂದಿಗೆನೇ ನವಗ್ರಹಗಳಿಗೆ ಸಂಬಂಧಪಟ್ಟ ಯವನರ ಜ್ಯೋತಿಷ ಶಾಸ್ತ್ರವೂ ಭಾರತವರ್ಷಕ್ಕೆ ಬಂದಿತೆನ್ನಬಹುದು, ಆದರೆ ಭಾರತವರ್ಷದಲ್ಲಿ ಮೊದಲಿನಿಂದ ಪ್ರಚಲಿತವಿದ್ದ ವೇದಾಂಗ ಜ್ಯೋತಿಷವು ಶಕದ ಮೂರನೆಯ ಶತಮಾನದ ತನಕ ಪ್ರಚಲಿತವಿದ್ದಿತೆಂಬ ಪ್ರಮಾಣವಿದೆಯಾದುದರಿಂದ ಮತ್ತು ಹೊಸ ಜ್ಯೋತಿಷ ಸಿದ್ಧಾಂತಗಳು ಶಕದ ನಾಲ್ಕನೆಯ ಶತಮಾನದ ಮೊದಲು ಪ್ರಚಲಿತವಿದ್ದುವೆಂಬ ಪ್ರಮಾಣಗಳು ಇಲ್ಲವಾದುದರಿಂದ, ಶಕದ ಮೊದಲನೆಯ ಶತಮಾನದಲ್ಲಿ ಭಾರತವರ್ಷವನ್ನು ಪ್ರವೇಶಿಸಿದ ಯವನರ ಜ್ಯೋತಿಷವು ಕೆಲವು ತಿದ್ದುಪಡಿಗಳೊಂದಿಗೆ ಭಾರತೀಯ ರೂಪವನ್ನು ಧರಿಸಿ ಮೂರನೆಯ ಶತಮಾನದ ಉತ್ತರಾರ್ಧದಲ್ಲಿ ಉಪಯೋಗಕ್ಕೆ ಸಿದ್ಧವಾಗಿ ನಾಲ್ಕನೆಯ ಶತಮಾನದಲ್ಲಿ ಪ್ರಚಲಿತವಾಯಿತೆನ್ನಬಹುದು.

---

1 ಋಕ್ಷಾಣಾಂ ವಾ ಏತಾ ಅಗ್ರೇ ಪತ್ನ್ಯ ಆಸುಃ । ಸಪ್ತರ್ಷೀನು ಹ ಸ್ಮ ವೈ ಪುರರ್ಕ್ಷಾ ಇತ್ಯಾ ಚಕ್ಷತೇ ॥

1 The Vedanga Jyotisha period, which we shall show, was continued by Indian dynasts up to the time of Satavahanas (A.D.) was succeeded by the Siddhanta Jyotisha, but the first record of this period is available about 400 A- D. Report of the Calendar Reform Committee Government of India page 212.

ಶಕವರ್ಷ ೪೨೭ರಲ್ಲಿ ಜನಿಸಿದ ಶಕವರ್ಗದ ಪ್ರಸಿದ್ಧ ಜ್ಯೋತಿಷಿ ಆಚಾರ್ಯ ವರಾಹಮಿಹಿರನು ಶಕವರ್ಷ ೪೫೦ರಲ್ಲಿ ರಚಿಸಿದ "ಪಂಚಸಿದ್ಧಾಂತಿಕಾ" ಎಂಬ ಗ್ರಂಥದಲ್ಲಿ ಸಾಧಾರಣ ಶಕದ ಮೂರನೆಯ ಶತಮಾನದಲ್ಲಿ ಪ್ರಚಲಿತವಿದ್ದ **"ಪಿತಾಮಹ, ವಸಿಷ್ಠ, ರೋಮಕ, ಪುಲಿಶ ಮತ್ತು ಸೂರ್ಯ"** ಎಂಬ ಐದು ಜ್ಯೋತಿಷ ಸಿದ್ಧಾಂತಗಳನ್ನು ಸಂಗ್ರಹಿಸಿ ಅವುಗಳ ಗಣಿತ ಕ್ರಮದ ಪರಿಚಯವನ್ನು ಕೊಟ್ಟಿದ್ದಾನೆ. ಮತ್ತು ಡಾಕ್ಟರ್ ಥೀಬೋ ಎಂಬ ಜರ್ಮನ್ ವಿದ್ವಾಂಸರು ಮಹಾಮಹೋಪಾಧ್ಯಾಯ ಸುಧಾಕರ ದ್ವಿವೇದೀ ಎಂಬ ವಿದ್ವಾಂಸರ ಸಹಕಾರದಿಂದ ಆ ಗ್ರಂಥವನ್ನು ಪರಿಶೋಧಿಸಿ, ಶ್ರೀ ದ್ವಿವೇದಿಯರ ಟೀಕೆಯೊಂದಿಗೂ, ತನ್ನ ಇಂಗ್ಲೀಷ್ ಭಾಷಾಂತರದೊಂದಿಗೂ ಮುದ್ರಿಸಿ ಪ್ರಕಟಿಸಿದ್ದಾರೆ.

ಆ ಗ್ರಂಥದೊಳಗಿನ ಐದು ಸಿದ್ಧಾಂತಗಳಲ್ಲಿ ಪಿತಾಮಹ ಮತ್ತು ವಸಿಷ್ಠ ಎಂಬವುಗಳು ಉಳಿದ ಮೂರು ಸಿದ್ಧಾಂತಗಳಿಗಿಂತ ಪ್ರಾಚೀನವಾಗಿವೆ. ಪಿತಾಮಹ ಸಿದ್ಧಾಂತವು ವೇದಾಂಗ ಜ್ಯೋತಿಷದಷ್ಟು ವಿಸ್ತೃತವಾಗಿಲ್ಲವಾದರೂ ಅದು ಇದ್ದಷ್ಟು ಮಟ್ಟಿಗೆ ಸಂಪೂರ್ಣವಾಗಿ ವೇದಾಂಗ ಜ್ಯೋತಿಷವನ್ನು ಹೋಲುತ್ತದೆ. ಅಂದರೆ ಅದರಲ್ಲಿ ವೇದಾಂಗ ಜ್ಯೋತಿಷದಲ್ಲಿರುವಂತೆಯೇ ಸೂರ್ಯನ, ಚಂದ್ರನ ಮತ್ತು ನಕ್ಷತ್ರಗಳ ವಿಚಾರ ಮಾತ್ರವಿದೆ. ಮತ್ತು ಸೂರ್ಯನ ಹಾಗೂ ಚಂದ್ರನ ಮಾನಗಳನ್ನು ಹೊಂದಿಸಿದ ಐದು ವರ್ಷಗಳ ಯುಗವಿದೆ.

ರವಿಶಶಿನೋಃ ಪಂಚಯುಗಂ ವರ್ಷಾಣಿ ಪಿತಾಮಹೋಪದಿಷ್ಟಾನಿ।
ಅಧಿಮಾಸಸ್ತ್ರಿಂಶದ್ಭಿರ್ಮಾಸೈರವಮೋ ದ್ವಿಷಷ್ಟ್ಯಾತು ॥ ೧೨-೧ ॥

ಅಂದರೆ- ಪಿತಾಮಹನು (=ಬ್ರಹ್ಮನು) ಉಪದೇಶಿಸಿದಂತೆ ಸೂರ್ಯನ ಮತ್ತು ಚಂದ್ರನ ಯುಗಕ್ಕೆ ಐದು ವರ್ಷಗಳು, ಮತ್ತು ಮೂವತ್ತು ಮಾಸಗಳಿಗೆ ಒಂದು ಅಧಿಕಮಾಸವೂ ಆರುವತ್ತೆರಡು ತಿಥಿಗಳಿಗೆ ಒಂದು ಕ್ಷಯ ತಿಥಿಯೂ ಬರುತ್ತವೆ.

ಅರ್ಥಾತ್ ಸೂರ್ಯನ ಐದು ವರ್ಷಗಳ ೬೦ ತಿಂಗಳುಗಳಿಗೆ ಚಂದ್ರನ ಆರುವತ್ತೆರಡು ತಿಂಗಳು ಬರುತ್ತವೆ. ಮತ್ತು ಚಂದ್ರನ ೬೨ ತಿಥಿಗಳಿಗೆ ಒಂದು ತಿಥಿಯಂತೆ ಕ್ಷಯವಾಗುತ್ತದೆ. ಅದರ ಪ್ರಕಾರ ಐದು ಸೂರ್ಯನ ವರ್ಷಗಳಿಗೆ ೧೮೩೦ ಸಾವನ ದಿನಗಳಾಗಿರುತ್ತವೆ. ಅಂದರೆ ಒಂದು ಸೌರ ವರ್ಷಕ್ಕೆ ೩೬೬ ದಿವಸಗಳಾಗುತ್ತವೆ.

ಆದರೆ ದಿವಂಗತ ಶಂಕರ ಬಾಳಕೃಷ್ಣ ದೀಕ್ಷಿತರು ತಾನು ಬರೆದು ಪ್ರಕಟಿಸಿದ "ಭಾರತೀಯ ಜ್ಯೋತಿಷ ಶಾಸ್ತ್ರ ಅಥವಾ ಭಾರತೀಯ ಜೋತಿಷದ ಪ್ರಾಚೀನ ಮತ್ತು ಅರ್ವಾಚೀನ ಇತಿಹಾಸ" ಎಂಬ ಮರಾಠಿ ಗ್ರಂಥದಲ್ಲಿ ಪಿತಾಮಹ ಸಿದ್ಧಾಂತ

ದೊಳಗಿನ ಸೌರವರ್ಷಕ್ಕೆ ೩೬೫ ದಿನ, ೨೧ ಗಳಿಗೆ ೨೫ ಪಲ ಎಂದು ಹೇಳಿದ್ದಾರೆ. ಕಾರಣವೇನೆಂದರೆ ಅವರು ಉಪಯೋಗಿಸಿದ ಪಂಚ ಸಿದ್ಧಾಂತಿಕೆಯ ಹಳೆಯ ಹಸ್ತ ಲಿಖಿತ ಪ್ರತಿಯಲ್ಲಿ ಅವರು–ಹಿಂದೆ ಉದಹರಿಸಿದ ಆರ್ಯೆಯನ್ನು ತನ್ನ ಊಹಾಬಲ ದಿಂದ ತಪ್ಪಾಗಿ-"**ರವಿಶಶಿನೋಃ ಪಂಚಯುಗಂ ವರ್ಷಾಣಿ ಪಿತಾಮಹೋಪದಿಷ್ಟಾನಿ। ಅಧಿಮಾಸಸ್ತ್ರಿಂಶದ್ಭಿರ್ಮಾಸ್ಯೈರವಮುಸ್ತ್ರಿಷಷ್ಟ್ಯಾಹ್ನಾಮ್॥** ಎಂಬುದಾಗಿ ಓದಿದ್ದಾರೆ. ಅಂದರೆ ಆರುವತ್ತಮೂರು ತಿಥಿಗಳಿಗೆ ಒಂದರಂತೆ ಕ್ಷಯತಿಥಿ ಎಂದು ಓದಿದ್ದಾರೆ. ಅವರು ಹಾಗೆ ತಪ್ಪಾಗಿ ಓದಿದುದರ ಫಲವಾಗಿ ಆ ಆರ್ಯೆಯಲ್ಲಿ ಸ್ಪಷ್ಟವಾಗಿ ಮೂವತ್ತು ಮಾಸಗಳಿಗೆ ಒಂದು ಅಧಿಕಮಾಸವೆಂದು ಹೇಳಿರುವುದನ್ನೂ. ಯುಗಕ್ಕೆ ಐದು ವರ್ಷಗಳೆಂದು ಹೇಳಿರುವುದನ್ನೂ ಕಡೆಗಣಿಸಿ, ಭಟೋತ್ಪಲನ ಒಂದು ಶ್ಲೋಕ ವನ್ನು ಉದಹರಿಸಿ ಮೂವತ್ತೆರಡು ಮಾಸಗಳಿಗೆ ಒಂದು ಅಧಿಕಮಾಸವೆಂದು ನಿರ್ಧರಿಸಿ ದ್ದಾರಲ್ಲದೇ ಯುಗಕ್ಕೆ ಎಂಟು ವರ್ಷಗಳನ್ನು ಗಣಿಸಿದ್ದಾರೆ. ಅಂದರೆ ಅದನ್ನು ತನ್ನ ಊಹೆಗೆ ಸರಿ ಬರುವಂತೆ ಮಾಡಿದ್ದಾರೆ.

ಪಂಚ ಸಿದ್ಧಾಂತಿಕೆಯಲ್ಲಿ ವಸಿಷ್ಠ ಸಿದ್ಧಾಂತದ ಸಂಬಂಧದಲ್ಲಿ ಹೆಚ್ಚಿನ ವಿವರಗಳಿಲ್ಲ. ಅದರಲ್ಲಿ ಬಂದಿರುವ ವಿವರಗಳಿಂದ ಅದರೊಳಗಿನ ಗಣಿತವು ಸೂರ್ಯನ ಮತ್ತು ಚಂದ್ರನ ಗತಿಗೆ ಮಾತ್ರ ಸಂಬಂಧಿಸಿದ್ದಿತೆಂದು ಗೊತ್ತಾಗುತ್ತದೆ.

ರೋಮಕ ಸಿದ್ಧಾಂತವು ವೇದಾಂಗ ಜ್ಯೋತಿಷದಿಂದ ಕೊಂಚ ಭಿನ್ನವಾಗಿದ್ದು ಅದರೊಳಗಿನ ಗಣಿತವು ವೇದಾಂಗ ಜ್ಯೋತಿಷದೊಳಗಿನ ಗಣಿತಕ್ಕಿಂತ ಕೊಂಚ ಉನ್ನತ ಮಟ್ಟದ್ದಾಗಿದೆ. ಅಂದರೆ ಅದರೊಳಗಿನ ಸೌರವರ್ಷದ ದಿನಮಾನವು ೩೬೫ ದಿನ; ೧೪ ಗಳಿಗೆ, ೪೮ ಪಲಗಳಾಗಿದೆ. ಆದರೆ ಅದರಲ್ಲಿ ಕೂಡ ಸೂರ್ಯನ, ಚಂದ್ರನ ಮತ್ತು ನಕ್ಷತ್ರಗಳ ಹೊರತು ಇತರ ಗ್ರಹಗಳ ಉಲ್ಲೇಖವಿಲ್ಲ. ಹಾಗಿದ್ದರೂ ಅದರಲ್ಲಿ ವೇದಾಂಗ ಜ್ಯೋತಿಷದಲ್ಲಿ ಇಲ್ಲದ ಸೂರ್ಯ ಚಂದ್ರರ ಸ್ಥಿತಿ-ಗತಿಗಳ ಸಾಧನ ಮತ್ತು ಸ್ಪಷ್ಟೀಕರಣ ಹಾಗೂ ಸೂರ್ಯ-ಚಂದ್ರರ ಗ್ರಹಣಗಳ ಸಾಧನವಿದೆ. ಅದರೊಳಗಿನ ಸೂರ್ಯಚಂದ್ರರ ಯುಗದಲ್ಲಿ ೨೮೫೦ ವರ್ಷಗಳು ಬರುತ್ತವೆ.

ಪುಲಿಷ ಸಿದ್ಧಾಂತದಲ್ಲಿ, ನವಗ್ರಹಗಳಿಗೆ ಸಂಬಂಧಪಟ್ಟ ಗಣಿತ, ಮೇಷಾದಿ ರಾಶಿಗಳು ಮತ್ತು ಗ್ರಹಣಗಳ ಸಾಧನವಿದೆ. ಆದರೆ ಅದರಲ್ಲಿ ಯಾವುದೊಂದು ಯುಗದ[1] ಉಲ್ಲೇಖವಿಲ್ಲ.

---

1. If, again, we find that, according to Panchasiddhantika, the Pulisa Siddhanta, made no use of yugas of any kind to the end of calculating the Ahargana, and the mean position of planets, but employed for those purposes a peculiar system of its own: Introduction. page XVI.

ಪಂಚಸಿದ್ಧಾಂತಿಕೆಯಲ್ಲಿ ಸೂರ್ಯಸಿದ್ಧಾಂತಕ್ಕೆ ಹೆಚ್ಚು ಪ್ರಾಧಾನ್ಯ ಕೊಡಲಾಗಿದೆ. ಕಾರಣವೇನೆಂದರೆ ಆದರೊಳಗಿನ ಮಾನಗಳು ಹೆಚ್ಚು ಶುದ್ಧವಾಗಿವೆ. ಆದರ ಮೊದಲನೆಯ ಅಧ್ಯಾಯದ ೧೪ನೆಯ ಆರ್ಯೆಯಲ್ಲಿ ಸಾವನ ದಿನಗಳನ್ನು (=ಅಹರ್ಗಣವನ್ನು) ಕಂಡುಹಿಡಿಯಲು ೧೮೦೦೦೦ ವರ್ಷಗಳ ಮಾನವನ್ನು ಕೊಟ್ಟು ಅಷ್ಟು ವರ್ಷಗಳಲ್ಲಿ ೬೬೩೮೯ ಅಧಿಮಾಸಗಳೂ, ೧೦೪೫೮೯೫ ಕ್ಷಯ ತಿಥಿಗಳೂ ಇರುತ್ತವೆಂದು ಹೇಳಿದೆ. ಡಾಕ್ಟರ್ ಥೀಬೋ ಅವರು ಆ ವರ್ಷಗಳನ್ನು ಮಹಾಯುಗದ ಇಪ್ಪತ್ತನಾಲ್ಕನೆಯ ಒಂದಂಶವೆಂದು ಹೇಳಿದ್ದಾರೆ. ಮುಂದೆ ಹದಿನೈದನೆಯ ಅಧ್ಯಾಯದ ೨೪ನೆಯ ಆರ್ಯೆಯಲ್ಲಿ—ಅಧಿಮಾಸಗಳು, ಕ್ಷಯತಿಥಿಗಳು, ಗ್ರಹಗಳ ಸಾವನ ದಿನಗಳು, ತಿಥಿ, ಮೇಷ ರಾಶಿ, ಸೂರ್ಯನ, ಚಂದ್ರನ ಮತ್ತು ನಕ್ಷತ್ರಗಳ ಗತಿ, ಅಯನ, ಋತು ಮೊದಲಾದವುಗಳೆಲ್ಲ ಯುಗದ ಪ್ರಾರಂಭದೊಂದಿಗೇನೇ ಪ್ರಾರಂಭವಾಗುತ್ತವೆಂದು ಅಂದರೆ ಯುಗದ ಆದಿಯಲ್ಲಿ ಎಲ್ಲ ಗ್ರಹಗಳು ಮಧ್ಯಮ ಮಾನದಿಂದ ಮೇಷರಾಶಿಯಲ್ಲಿರುತ್ತವೆಂದು ಹೇಳಿದೆ. ಮುಂದೆ ಹದಿನಾರನೆಯ ಅಧ್ಯಾಯದಲ್ಲಿ ಗ್ರಹಗಳ ಮಧ್ಯಮ ಸ್ಥಿತಿಯನ್ನು ನಿರ್ಧರಿಸಲು, ಶನಿಯ ೧೪೬, ೫೬೪ ಭ್ರಮಣಗಳೂ, ಗುರುವಿನ-೩೬೪೨೨೦ ಭ್ರಮಣಗಳೂ, ಕುಜನ ೨೨೯೬೮೨೪ ಭ್ರಮಣಗಳೂ, ಶುಕ್ರನ ೭೦೨೨೩೮೮ ಭ್ರಮಣಗಳೂ, ಬುಧನ ೧೭೯೩೭೦೦೦ ಭ್ರಮಣಗಳೂ ಆಗುತ್ತವೆಂದು ಹೇಳಿದೆ. ಆದರೆ ಅಷ್ಟು ಭ್ರಮಣಗಳು ಎಷ್ಟು ಕಾಲದಲ್ಲಾಗುತ್ತವೆಯೆಂಬುದನ್ನು ಅಲ್ಲಿ ಹೇಳಿಲ್ಲ. ಆದರೆ ಗ್ರಹಸ್ಥಿತಿಗಳನ್ನು ಅವಂತಿಯ (ಉಜ್ಜಯಿನಿಯ) ಮಧ್ಯರಾತ್ರಿಯ ಸಮಯಕ್ಕೆ ಸರಿಯೆಂದು ಹೇಳಿದೆ. ಅದರಲ್ಲಿ ಹೇಳಿದ ದ್ಯುಗಣದ ಅಂದರೆ ಅಹರ್ಗಣದ ಗುಣನಗಳಿಂದ ಸಿದ್ಧವಾಗುವ ಸಾವನದಿನಗಳ ಆಧಾರದಿಂದ, ಶ್ರೀಮಾನ್ ಸುಧಾಕರ ದ್ವಿವೇದಿಯವರು ಮತ್ತು ಡಾ। ಥೀಬೋ ಅವರು ಆ ಭ್ರಮಣಗಳು ಒಂದು ಮಹಾಯುಗದ ದಿನಗಳಲ್ಲಿ ಆಗುವಂಥವುಗಳೆಂದು ಹೇಳಿದ್ದಾರೆ. ಮತ್ತು ಆ ಭ್ರಮಣಗಳಲ್ಲಿ ಸೂರ್ಯಚಂದ್ರರ ಸ್ಥಿತಿಯನ್ನು ಹೇಳಿಲ್ಲವಾದುದರಿಂದ ಅದನ್ನು ಕಲ್ಪದ ಆದಿಯಿಂದ ಗಣಿತಮಾಡಿ ನಿರ್ಧರಿಸಬೇಕೆಂದು ಹೇಳಿದ್ದಾರೆ.

ಆದರೆ ಇಲ್ಲಿ ಸರಿಯಾಗಿ ಲಕ್ಷಿಸಬೇಕಾದ ವಿಷಯವೆಂದರೆ ಆಚಾರ್ಯ ವರಾಹಮಿಹಿರನು ಸೂರ್ಯಸಿದ್ಧಾಂತದ ಆಹರ್ಗಣವನ್ನು ಅಥವಾ ಸಾವನ ದಿನಗಳನ್ನು ಕಂಡುಹಿಡಿಯಲು ಕೊಟ್ಟಿರುವ ೧೮೦೦೦೦ ವರ್ಷಗಳು ಮಹಾಯುಗದ ಇಪ್ಪತ್ತನಾಲ್ಕನೆಯ ಒಂದಂಶವಾಗಿರಲೂ ಬಹುದು ಮತ್ತು ಗ್ರಹಗಳ ಸ್ಥಿತಿಯ ನಿರ್ಧರಣಕ್ಕಾಗಿ ಹೇಳಿದ ಗ್ರಹಗಳ ಭ್ರಮಣಗಳು ಮಹಾಯುಗದ ೧೫೭೭೯೧, ೭೮೦೦ ಸಾವನ ದಿನಗಳಿಗೆ ಸರಿಬರಲೂ ಬಹುದು. ಆದರೆ ಆಚಾರ್ಯ ವರಾಹಮಿಹಿರನು ಪಂಚ ಸಿದ್ಧಾಂತಿಕೆಯಲ್ಲಿ ಎಲ್ಲಿಯೂ ಮಹಾಯುಗ ಎಂಬ ಶಬ್ದವನ್ನಾಗಲೀ, ಕಲ್ಪ ಶಬ್ದವನ್ನಾಗಲೀ ಕೃತ. ತ್ರೇತಾ, ದ್ವಾಪರ ಮತ್ತು ಕಲಿ ಎಂಬ ಶಬ್ದಗಳನ್ನಾಗಲೀ

ಉಪಯೋಗಿಸಿಲ್ಲವೆಂಬುದಾಗಿದೆ. ಅವನ ಕಾಲದಲ್ಲಿ ಕೃತಾದಿ ಯುಗಮಾನಗಳೂ, ಮಹಾಯುಗ, ಕಲ್ಪ, ಮನ್ವಂತರ ಮೊದಲಾದ ಇತರ ಮಾನಗಳೂ ಪ್ರಚಲಿತ ವಿದ್ದುವು, ಹಾಗಿದ್ದರೂ ಅವನು ಪಂಚಸಿದ್ಧಾಂತಿಕೆಯಲ್ಲಿ ಆ ಯುಗಮಾನಗಳನ್ನು ಉಪಯೋಗಿಸಿಲ್ಲ. ಆದುದರಿಂದ ಅವನು ಪಂಚಸಿದ್ಧಾಂತಿಕೆಯಲ್ಲಿ ಸಂಗ್ರಹಿಸಿದ ಆ ಐದು ಮೂಲ ಸಿದ್ಧಾಂತಗಳಲ್ಲಿ ಮತ್ತು ಅವುಗಳ ರಚನಾ ಕಾಲದಲ್ಲಿ ಕೃತಾದಿ ಯುಗಮಾನಗಳು ಇರಲಿಲ್ಲ ಅಥವಾ ಪ್ರಚಲಿತವಿರಲಿಲ್ಲವೆಂದು ಸಿದ್ಧವಾಗುತ್ತದೆ, ಈ ವಿಷಯವು ಐತಿಹಾಸಿಕ ದೃಷ್ಟಿಯಿಂದ ಬಹಳ ಮಹತ್ವವುಳ್ಳದಾಗಿದೆ.

ಆಚಾರ್ಯ ವರಾಹಮಿಹಿರನು ಪಂಚಸಿದ್ಧಾಂತಿಕೆಯ ೧೫ನೆಯ ಅಧ್ಯಾಯದ ೧೮, ೧೯ ಮತ್ತು ೨೦ನೆಯ ಆರ್ಯೆಗಳಲ್ಲಿ ಲಾಟಾಚಾರ್ಯ, ಸಿಂಹಾಚಾರ್ಯ ಅವನ ಗುರು ಮತ್ತು ಆಚಾರ್ಯ ಆರ್ಯಭಟ ಎಂಬ ನಾಲ್ವರ ಮತ್ತು ೧೮ನೆಯ ಅಧ್ಯಾಯದ ೬೨ನೆಯ ಆರ್ಯೆಯಲ್ಲಿ ಪ್ರದ್ಯುಮ್ನ ಮತ್ತು ವಿಜಯನಂದಿ ಎಂಬ ಇಬ್ಬರ ಹಾಗೆ ಒಟ್ಟು ಆರ್ವರ ಹೆಸರುಗಳನ್ನು ಉಲ್ಲೇಖಿಸಿದ್ದಾನೆ. ಆ ಆರ್ವರಲ್ಲಿ ಆಚಾರ್ಯ ಆರ್ಯಭಟನ "ಆರ್ಯಭಟೀಯ" ಎಂಬ ಒಂದು ಗ್ರಂಥದ ಹೊರತು ಇತರ ಐವರ ಗ್ರಂಥಗಳು ಈಗ ಉಪಲಬ್ಧವಿಲ್ಲ, ಆದರೆ ಹಿಂದಿನ ಕಾಲದ ಬೇರೆ ಜ್ಯೋತಿಷಿಗಳು ಆ ಐವರ ಗ್ರಂಥದಿಂದ ಕೊಟ್ಟ ಉದಾಹರಣೆಗಳ ಮೇಲಿಂದ ಅವರ ಗ್ರಂಥಗಳಲ್ಲಿ ಕೃತಾದಿ ಯುಗಗಳ ಉಲ್ಲೇಖಗಳಿದ್ದುವೆಂದು ತಿಳಿದುಬರುತ್ತದೆ. ದಿವಂಗತ ಶಂಕರ ಬಾಳಕೃಷ್ಣ ದೀಕ್ಷಿತರ ಅಭಿಪ್ರಾಯದಲ್ಲಿ ಆ ಐವರು ಜ್ಯೋತಿಷಿಗಳು ಶಕವರ್ಷ ೪೨೦ಕ್ಕಿಂತ ಮೊದಲಿನವರು ಅಂದರೆ ಆಚಾರ್ಯ ಆರ್ಯಭಟನ ಕಾಲಕ್ಕಿಂತ ಕೆಲವು ವರ್ಷಗಳ ಮೊದಲಿನವರೆಂದಿದೆ.

ಆಚಾರ್ಯ ಆರ್ಯಭಟನು ತನ್ನ ಕಾಲವನ್ನು ಮುಂದಿನಂತೆ ಕೊಟ್ಟಿದ್ದಾನೆ.

ಷಷ್ಟ್ಯಬ್ದಾನಾಂ ಷಷ್ಟಿರ್ಯದಾ ವ್ಯತೀತಾಸ್ತ್ರಯಶ್ಚ ಯುಗಪಾದಾಃ
ತ್ರ್ಯಧಿಕಾ ವಿಂಶತಿರಬ್ದಾಸ್ತದೇಹ ಮಮ ಜನ್ಮನೋಽತೀತಾಃ ॥

ಅಂದರೆ– ಮೂರು ಯುಗಪಾದಗಳು ಕಳೆದುಹೋದ ತರುವಾಯ ನಾಲ್ಕನೆಯ ಪಾದ (ಕಲಿ)ದಲ್ಲಿ ೩೬೦೦ನೆಯ ವರ್ಷ ನನ್ನ ಜನ್ಮವಾಗಿ ೨೩ ವರ್ಷಗಳಾಗಿದ್ದುವು. ಅವನ ಸಿದ್ಧಾಂತದ ಪ್ರಕಾರ ಕಲಿಯುಗ ಪಾದವು ಶಕಪೂರ್ವ ೩೧೭೯ನೆಯ ವರ್ಷದಲ್ಲಿ ಪ್ರಾರಂಭವಾಗಿತ್ತು. ಮತ್ತು ಅವನು ಶಕದ ೩೯೮ನೆಯ ವರ್ಷದಲ್ಲಿ ಜನಿಸಿದ್ದನು. ಹಾಗೂ ಅವನ ಜ್ಯೋತಿಷ ಸಿದ್ಧಾಂತವು ಶಕವರ್ಷ ೪೨೧ರಲ್ಲಿ ರಚಿಸಲ್ಪಟ್ಟಿತ್ತು. ಅವನ ಸಿದ್ಧಾಂತದ ಪ್ರಕಾರ ಕೃತಾದಿ ನಾಲ್ಕು ಯುಗ ಪಾದಗಳ ವರ್ಷಮಾನವೂ ಸಮಾನವಾಗಿದೆ. ಆದರೆ ಆತನ ತರುವಾಯದ ಜ್ಯೋತಿಷ ಸಿದ್ಧಾಂತಗಳಲ್ಲಿ – ಯುಗಗಳ ವರ್ಷಮಾನವು – ಕಲಿಯ ಎರಡರಷ್ಟು ದ್ವಾಪರಕ್ಕೆ, ಮೂರರಷ್ಟು ತ್ರೇತಾಕ್ಕೆ ಮತ್ತು ನಾಲ್ಕರಷ್ಟು ಕೃತಕ್ಕೆ– ಎಂದಿರುತ್ತದೆ.

ಎಲ್ಲ ಸಿದ್ಧಾಂತಗಳಲ್ಲಿಯೂ ನಾಲ್ಕು ಯುಗಗಳಿಗೆ ಒಂದು ಮಹಾಯುಗ. ಒಂದು ಸಾವಿರ ಮಹಾಯುಗಗಳಿಗೆ ಒಂದು ಕಲ್ಪ ಎಂಬ ಮಾನವಿದೆ. ಮತ್ತು ಅದು ಬ್ರಹ್ಮನ ಒಂದು ದಿನವಾಗಿದೆ. ಮತ್ತು ಒಂದು ಕಲ್ಪದಲ್ಲಿ ೧೪ ಮನುಗಳು–ಅಥವಾ ಮನ್ವಂತರಗಳಿವೆ.

ಆರ್ಯಭಟನ ಸಿದ್ಧಾಂತದ ಪ್ರಕಾರ ಪ್ರತಿಯೊಂದು ಕಲ್ಪದ, ಪ್ರತಿಯೊಂದು ಮಹಾಯುಗದ ಮತ್ತು ಪ್ರತಿಯೊಂದು ಯುಗಪಾದದ ಪ್ರಾರಂಭದಲ್ಲಿ ಎಲ್ಲ ಗ್ರಹಗಳು ಒಂದೇ ರಾಶಿಯಲ್ಲಿರುತ್ತವೆ.

ಈ ಯುಗ, ಮಹಾಯುಗ, ಕಲ್ಪ ಮೊದಲಾದ ಕಾಲಮಾನಗಳು ಗ್ರಹಗಳ ಸ್ಥಿತಿಗಳನ್ನು ನಿರ್ಧರಿಸಲು ಅನುಕೂಲವಾಗುವಂತೆ ಜ್ಯೋತಿಷಿಗಳು ಮಾಡಿದ ಹಂಚಿಕೆಗಳೇ ಹೊರತು ವಾಸ್ತವವಾದವುಗಳಲ್ಲ ಅಂದರೆ ಎಲ್ಲ ಜ್ಯೋತಿಷ ಸಿದ್ಧಾಂತಗಳಲ್ಲಿ ಒಂದಲ್ಲ ಒಂದು ಮಾನವು ಪ್ರಾರಂಭವಾಗುವ ಕಾಲದಲ್ಲಿ ಎಲ್ಲ ಗ್ರಹಗಳು ಒಂದೇ ಸ್ಥಾನದಲ್ಲಿ ಅಂದರೆ ಮೇಷರಾಶಿಯಲ್ಲಿದ್ದುವೆಂದು ಕಲ್ಪಿಸಿದ್ದಾರೆ. ಅಂದರೆ ಅವರು ತಮ್ಮ ತಮ್ಮ ಕಾಲದ ಗ್ರಹಸ್ಥಿತಿಯ ಆಧಾರದಿಂದ- ಎಲ್ಲ ಗ್ರಹಗಳು ಒಂದೇ ಸ್ಥಾನದಲ್ಲಿ ಬರುವ ಕಾಲದ ತನಕ ಗಣನೆ ಮಾಡುತ್ತ ಹಿಂದೆ ಸಾಗಿ, ಆ ಕಾಲವನ್ನು ಕಲ್ಪದ ಆದಿಯೆಂದಾಗಲೀ, ಮಹಾಯುಗದ ಆದಿಯೆಂದಾಲೀ, ಯುಗದ ಆದಿಯೆಂದಾಗಲೀ ಹೇಳಿದ್ದಾರೆ. ಮತ್ತು ಕಲ್ಪದಲ್ಲಿ, ಮಹಾಯುಗದಲ್ಲಿ ಇಲ್ಲವೇ ಯುಗದಲ್ಲಿ ಇಂಥಿಂಥ ಗ್ರಹದ ಭ್ರಮಣಗಳು ಇಂತಿಷ್ಟು, ಅಥವಾ ಇಂಥಿಂಥ ಗ್ರಹವು ಇಂತಿಷ್ಟು ಸುತ್ತುಗಳನ್ನು ತೆಗೆಯುತ್ತದೆಂದು ಹೇಳಿದ್ದಾರೆ. ಅದರ ಆಧಾರದಿಂದ ಕಲ್ಪದಲ್ಲಾಗಲೀ, ಮಹಾಯುಗದಲ್ಲಾಗಲೀ ಯುಗದಲ್ಲಾಗಲೀ ಕಳೆದು ಹೋದ ವರ್ಷಗಳಲ್ಲಿ ಯಾವ ಯಾವ ಗ್ರಹದ ಎಷ್ಟೆಷ್ಟು ಸುತ್ತುಗಳಾದುವು ಎಂಬುದರ ಗಣನೆಯ ಮೇಲಿಂದ ವರ್ತಮಾನ ಕಾಲದಲ್ಲಿ ಯಾವ ಗ್ರಹವು ಯಾವ ರಾಶಿಯಲ್ಲಿದೆಯೆಂದು ಹೇಳಲು ಸಾಧ್ಯವಾಗುತ್ತದೆ. ಆದರೆ ಎಲ್ಲ ಜ್ಯೋತಿಷ ಸಿದ್ಧಾಂತಗಳಲ್ಲಿ ಸೌರ ಮತ್ತು ಚಾಂದ್ರ ಎಂಬ ಎರಡು ಮಾನಗಳು ಮಿಶ್ರವಾಗಿರುವುದರಿಂದ ಗ್ರಹಗಳ ಸ್ಥಿತಿಯನ್ನು ನಿರ್ಧರಿಸುವ ಮೊದಲು ಸೌರವರ್ಷದ ದಿನಮಾನವನ್ನು ನಿರ್ಧರಿಸಬೇಕಾಗುತ್ತದೆ. ಹಾಗೆಯೇ ಕಲ್ಪದಲ್ಲಿ ಇಲ್ಲವೇ ಮಹಾಯುಗದಲ್ಲಿ ಇಲ್ಲವೇ ಒಂದು ಯುಗದಲ್ಲಿ ಸಾವನ ದಿನಗಳು ಎಷ್ಟು ಎಂಬುದನ್ನು ನಿರ್ಧರಿಸಬೇಕಾಗುತ್ತದೆ. ಆರ್ಯಭಟನು ಸಾವನ ದಿನಗಳ ಸಂಖ್ಯೆಯನ್ನು "ಅಹರ್ಗಣ" ಎಂದಿದ್ದಾನೆ. ಪ್ರತಿಯೊಬ್ಬ ಜ್ಯೋತಿಷ ಸಿದ್ಧಾಂತಕಾರನು ಅಹರ್ಗಣವನ್ನು ಸಾಧಿಸಲು ತನ್ನ ಕಲ್ಪನೆಯ ಕಲ್ಪದಲ್ಲಾಗಲೀ, ಮಹಾಯುಗದಲ್ಲಾಗಲೀ, ಯುಗದಲ್ಲಾಗಲೀ ಚಂದ್ರನ ಇಂತಿಷ್ಟು ಅಧಿಕ ಮಾಸಗಳು ಬರುತ್ತವೆಂತಲೂ, ಚಂದ್ರನ ಇಂತಿಷ್ಟು ತಿಥಿಗಳಲ್ಲಿ ಇಂತಿಷ್ಟು ತಿಥಿಗಳು ಕ್ಷಯವಾಗುತ್ತವೆಂತಲೂ ಹೇಳಿದ್ದಾನೆ. ಅದರ ಆಧಾರದಿಂದ ಸಾವನ ದಿನಗಳನ್ನು ನಿರ್ಧರಿಸಲು ಸಾಧ್ಯವಾಗುತ್ತದೆ. ಹಾಗೆಯೇ ಸೌರವರ್ಷದ ದಿನಮಾನವನ್ನೂ

ನಿರ್ಧರಿಸಲಿಕ್ಕಾಗುತ್ತದೆ. ಆದರೆ ಎಲ್ಲ ಜ್ಯೋತಿಷ ಸಿದ್ಧಾಂತಗಳ ಸೌರವರ್ಷದ ದಿನ ಮಾನವು ಸಮಾನವಾಗಿರದೇ ಭಿನ್ನಭಿನ್ನವಾಗಿದೆ. ಆಚಾರ್ಯ ಆರ್ಯಭಟನ ಸೌರವರ್ಷದ ದಿನಮಾನವು ೩೬೫ ದಿನ, ೧೫ ಗಳಿಗೆ ೩೧ ಪಲ, ೧೫ ವಿಪಲ ವಾಗಿರುತ್ತದೆ.

ಹಿಂದಿನ ವಿವರಗಳಿಂದ ಶಕದ ನಾಲ್ಕನೆಯ ಶತಮಾನದ ಕೊನೆಯ ತನಕ ಕೃತಾದಿ ಯುಗಮಾನಗಳು ಅಥವಾ, ಕಲ್ಪ, ಮಹಾಯುಗ, ಮನ್ವಂತರ ಮೊದಲಾದ ಕಾಲಮಾನಗಳು ಪ್ರಚಾರಕ್ಕೆ ಬಂದಿರಲಿಲ್ಲವೆಂದು ಸ್ಪಷ್ಟವಾಗಿ ಸಿದ್ಧವಾಗುತ್ತದೆ. ಆದರೆ ವೇದಗಳಿಗೆ ಭಾಷ್ಯವನ್ನು ಬರೆದ ಸಾಯಣಾಚಾರ್ಯರು ಯಜುರ್ವೇದದ ಸಂಹಿತೆಗಳಲ್ಲಿ ಮತ್ತು ಬ್ರಾಹ್ಮಣಗಳಲ್ಲಿ ಉಲ್ಲೇಖಿಸಲ್ಪಟ್ಟಿರುವ ಕೃತ, ತ್ರೇತಾ, ದ್ವಾಪರ ಮತ್ತು ಕಲಿ ಎಂಬ ಶಬ್ದಗಳನ್ನು ಸರಿಯಾಗಿ ವಿಮರ್ಶಿಸದನೇ ಯುಗ ಸೂಚಕಗಳೆಂದು ವ್ಯಾಖ್ಯಾಸಿದ್ದಾರೆ. ಹಾಗಾಗಿ ದಿವಂಗತ ಶಂಕರ ಬಾಳಕೃಷ್ಣ ದೀಕ್ಷಿತರು ತನ್ನ "ಭಾರತೀಯ ಜ್ಯೋತಿಷದ ಇತಿಹಾಸ" ಎಂಬ ಗ್ರಂಥದಲ್ಲಿ ಕೃತಾದಿ ಯುಗನಾಮಗಳು ವೇದಗಳ ಕಾಲದಲ್ಲಿಯೇ ಪ್ರಚಲಿತವಿದ್ದುವೆಂದು ಪ್ರತಿಪಾದಿಸಿ ದ್ದಾರೆ,[1] ಮತ್ತು ತನ್ನ ಪ್ರತಿಪಾದನೆಯನ್ನು ಸಮರ್ಥಿಸಲು ಮುಂದೆ ಕೊಡಲಾಗುವ ಅಂಶಗಳನ್ನು ಉದಹರಿಸಿದ್ದಾರೆ–

೧. ಪ್ರಾಚೀದಿಶಾಂ —— ಕೃತಮಯಾನಾಂ — — ತ್ರೇತಾ ಅಯಾ ನಾಂ — — ದ್ವಾಪರೋಽಯಾನಾಂ — — ಆಸ್ಕಂದೋಽಯಾನಾಮ್ — — ಅಭಿಭೂರ್ ಅಯಾನಾಮ್ । ॥ತೈ. ಸಂ. ೪–೩–೩ ॥

೨. ಕೃತಾಯಾದಿ ನವದರ್ಶಂ ತ್ರೇತಾಯೈ ಕಲ್ಪಿನಂ; ದ್ವಾಪರಾಯಾಧಿ ಕಲ್ಪಿನಮಾಸ್ಕಂದಾಯ ಸಭಾಸ್ಥಾಣುಮ್ ॥ ವಾ. ಸಂ. ೩೦–೧೮ ॥

೩. ಕೃತಾಯ ಸಭಾವಿನಮ್ । ತ್ರೇತಾಯಾ ಆದಿನವದರ್ಶಮ್ । ದ್ವಾಪ ರಾಯ ಬಹಿಃ ಸದಮ್ । ಕಲಯೇ ಸಭಾಸ್ಥಾಣುಮ್ ॥ ತೈ. ಬ್ರಾ. ೩–೪–೧೬ ॥

೪. ಕಲಿಃ ಶಯಾನೋಭವತಿ । ಸಂಜಿಹಾನಸ್ತು ದ್ವಾಪರಃ । ಉತ್ತಿಷ್ಠಂ ಸ್ತ್ರೇತಾ ಭವತಿ ॥ ಕೃತಂ ಸಂಪದ್ಯತೇ ಚರನ್ ॥ ಐ. ಬ್ರಾ. ೩೩-೧೫ ॥

ಹಿಂದೆ ಉದಹರಿಸಿದ ೨ ನೆಯ ಮತ್ತು ೩ ನೆಯ ಅಂಶಗಳ ಆದಿಯಲ್ಲಿ **"ಅಕ್ಷರಾಜಾಯ ಕಿತವಮ್"** ಎಂದಿದ್ದುದನ್ನು ದಿ. ದೀಕ್ಷಿತರು ಉದಹರಿಸದೇ ಬಿಟ್ಟು ಬಿಟ್ಟಿದ್ದಾರೆ. ಆದರೆ ಹಿಂದೆ ಉದಹರಿಸಿದ ಆ ನಾಲ್ಕು ಅಂಶಗಳಲ್ಲಿ ೧ನೆಯ ಮತ್ತು ೨ನೆಯ ಅಂಶಗಳಲ್ಲಿ ಕೃತ, ತ್ರೇತಾ ಮತ್ತು ದ್ವಾಪರ ಎಂಬ ಶಬ್ದಗಳಿದ್ದರೂ "ಕಲಿ" ಎಂಬ ಶಬ್ದವಿಲ್ಲ. ಪ್ರತಿಯಾಗಿ "ಆಸ್ಕಂದ" ಎಂಬ ಶಬ್ದವಿದೆ. ಮತ್ತು

---

[1] ಪುಟ ೨೫.

೧ನೆಯ ಅಂಶದ ಕೊನೆಯಲ್ಲಿರುವ "ಅಭಿಭೂಃ" ಎಂಬ ಶಬ್ದಕ್ಕೆ ಪ್ರತಿಯಾಗಿ ೨ನೆಯ ಮತ್ತು ೩ನೆಯ ಅಂಶಗಳ ಆದಿಯಲ್ಲಿ "ಅಕ್ಷರಾಜ" ಎಂಬ ಶಬ್ದವಿದೆ.

ವಾಸ್ತವವಾಗಿ ಅಕ್ಷರಾಜ, ಕೃತ, ತ್ರೇತಾ, ದ್ವಾಪರ ಮತ್ತು ಕಲಿ ಎಂಬ ಶಬ್ದಗಳು ದ್ಯೂತದಲ್ಲಿ ಉಪಯೋಗಿಸಲಾಗುತಿದ್ದ ಅಕ್ಷಗಳ ಅಂದರೆ ಲೆತ್ತಗಳ ಹೆಸರುಗಳಾಗಿವೆ. ಮತ್ತು ಅವುಗಳು ಗರಗಳ ಸಂಖ್ಯೆಗಳನ್ನು ಸೂಚಿಸುವಂಥವು ಗಳಾಗಿವೆ. ಕೆಲವು ಶ್ರೌತಯಜ್ಞಗಳಲ್ಲಿ ಯಜಮಾನನು ಅಕ್ಷದ್ಯೂತವನ್ನು ಆಡ ಬೇಕಾಗುತ್ತಗೆಂದು ಹಿಂದೆ ಆರ್ಯಜನರ ವೈದಿಕ ಸಂಸ್ಕೃತಿಯೆಂಬ ಅಧ್ಯಾಯದಲ್ಲಿ ಹೇಳಿದೆ. ಮತ್ತು ಯಜ್ಞಗಳಲ್ಲಿ ದೇವತೆಗಳಿಗೆ ಬಲಿಯನ್ನು ಅರ್ಪಿಸುವಂತೆಯೇ ಅಕ್ಷಗಳಿಗೂ ಬಲಿಯನ್ನು ಅರ್ಪಿಸಲಿಕ್ಕಿದೆಯೆಂದು ಹೇಳಿದೆ,

ಹಿಂದಿನ ನಾಲ್ಕು ಅಂಶಗಳಲ್ಲಿ ಮೊದಲನೆಯ ಅಂಶವು ಯಜುರ್ವೇದದ ತೈತ್ತಿರೀಯ ಸಂಹಿತೆಯಲ್ಲಿ ಉಕ್ತವಾದ ಯಜ್ಞಚಿತಿಯನ್ನು ಕಟ್ಟಲು ಅಪಾನಭೃತ್ ಎಂಬ ಇಟ್ಟಿಗೆಗಳನ್ನು ಇಡುವ ಸಮಯದಲ್ಲಿ ಪಠಿಸಲಾಗುವ ಮಂತ್ರಗಳಾಗಿವೆ, ಮತ್ತು ಅವುಗಳಲ್ಲಿ ಬಂದಿರುವ **"ಅಯ"** ಶಬ್ದದ ಅರ್ಥವು (ಲೆತ್ತದ) "ಎಸೆತ ಅಥವಾ ಗರ" (Throw) ಎಂದಿದೆ. ಆದುದರಿಂದ **"ಕೃತಮ್ ಅಯಾನಾಮ್"** ಎಂಬುದರ ಅರ್ಥವು "ಗರಗಳಲ್ಲಿ ಕೃತವು ಅಥವಾ ನಾಲ್ಕರ ಗರ" ಎಂದಾಗುತ್ತದೆ, ಅದು ದ್ಯೂತದಲ್ಲಿ ಗೆಲ್ಲುವ ಗರವಾಗಿತ್ತು. ಹಾಗೆಯೇ ತ್ರೇತಾ ಎಂಬುದು ಮೂರನ್ನೂ, ದ್ವಾಪರ ಎಂಬುದು ಎರಡನ್ನೂ "ಆಸ್ಕಂದ" ಎಂಬುದು ನೆಗೆತವನ್ನೂ ಅಂದರೆ ಸೋಲನ್ನೂ ಸೂಚಿಸುವ ಶಬ್ದಗಳಾಗಿವೆ. ಅಭಿಭೂಃ ಎಂಬುದು ಎಲ್ಲ ಎದುರಾಳಿಗಳನ್ನು ಗೆಲ್ಲುವ ಗರವಾಗಿದೆ. ತರುವಾಯದ ೨ನೆಯ ಮತ್ತು ೩ನೆಯ ಅಂಶಗಳಲ್ಲಿ ಮೊದಲನೆ ಅಂಶದೊಳಗಿನ "ಅಭಿಭೂಃ" ಎಂಬ ಶಬ್ದದ ಅರ್ಥದಲ್ಲಿ "ಅಕ್ಷರಾಜ" ಎಂಬ ಶಬ್ದ ಬಂದಿದೆ. ಹಾಗೆಯೇ ೩ನೆಯ ಮತ್ತು ೪ನೆಯ ಅಂಶ ಗಳಲ್ಲಿ ಬಂದಿರುವ "ಕಲಿ" ಶಬ್ದವು ಒಂದರ ಸಂಖ್ಯೆಯನ್ನು ಸೂಚಿಸುತ್ತದೆ. ಅದು ದ್ಯೂತದಲ್ಲಿ ಸೋಲುವ ಗರವಾಗಿದೆ.

ಎರಡನೆಯ ಮತ್ತು ಮೂರನೆಯ ಅಂಶಗಳು ವಾಜಸನೇಯಿ ಸಂಹಿತೆಯಲ್ಲಿ ಮತ್ತು ತೈತ್ತಿರೀಯ ಬ್ರಾಹ್ಮಣದಲ್ಲಿ ಉಕ್ತವಾಗಿರುವ ಪುರುಷಮೇಧದಲ್ಲಿ ಯಾವ ಅಕ್ಷಕ್ಕೆ (=ಲೆತ್ತಕ್ಕೆ) ಯಾವ ಪಶುವನ್ನು ಬಲಿಯಾಗಿ ಅರ್ಪಿಸಬೇಕೆಂದು ವಿವರಿಸುವ ಸಂದರ್ಭದಲ್ಲಿ ಬಂದವುಗಳಾಗಿವೆ. ಆದುದರಿಂದ ಅವುಗಳ ಮೊದಲನೆಯ ಅಂಶದಲ್ಲಿ "ಅಕ್ಷರಾಜ ಎಂಬ ಲೆತ್ತಕ್ಕೆ ದ್ಯೂತವಾಡುವವನನ್ನೂ, ಕೃತಕ್ಕೆ ಎದುರಾಳಿಯು ಸೋಲಲು ಬಯಸುವವನನ್ನೂ ತ್ರೇತಾಕ್ಕೆ ದ್ಯೂತದ ಸಂಚಾಲಕನನ್ನೂ, ದ್ವಾಪರಕ್ಕೆ ಮುಖ್ಯ ಸಂಚಾಲಕನನ್ನೂ ಆಸ್ಕಂದಕ್ಕೆ ದ್ಯೂತದ ಕಳವನ್ನು ಬಿಟ್ಟುಹೋಗದೇ ಕಂಭ ದಂತೆ ನಿಲ್ಲುವವನನ್ನೂ ಬಲಿ ಕೊಡಬೇಕೆಂದು ಹೇಳಿದೆ. ಮತ್ತು ತರುವಾಯದ

ಅಂಶದಲ್ಲಿ ಅಕ್ಷರಾಜಕ್ಕೆ ದ್ಯೂತವಾಡುವವನನ್ನೂ, ಕೃತಕ್ಕೆ ದ್ಯೂತದ ಮನೆ ಇಟ್ಟವನನ್ನೂ, ತ್ರೇತಾಕ್ಕೆ ಎದುರಾಳಿಯು ಸೋಲಲು ಬಯಸುವವನನ್ನೂ ದ್ವಾಪರಕ್ಕೆ–ದ್ಯೂತದಲ್ಲಿ ಸ್ಥಾನ ಸಿಗದೇ ಹೊರಗೆ ಕೂತವನನ್ನೂ, ಕಲಿಗೆ ದ್ಯೂತದ ಕಳವನ್ನು ಬಿಟ್ಟು ಹೋಗದೇ ಕಂಭದಂತೆ ನಿಲ್ಲುವವನನ್ನೂ ಬಲಿಕೊಡಬೇಕೆಂದು ಹೇಳಿದೆ.

ನಾಲ್ಕನೆಯ ಅಂಶವು ಐತರೇಯ ಬ್ರಾಹ್ಮಣದ ೭–೩-೧೩ರಿಂದ ಪ್ರಾರಂಭವಾಗುವ ಶುನಃಶೇಪನ ಆಖ್ಯಾನದೊಳಗಿನದಾಗಿದೆ. ಅದು ಕೂಡ ಪುರುಷಮೇಧದ ಪ್ರಸಂಗವಾಗಿದೆ.

ಇಕ್ಷ್ವಾಕು ವಂಶದ ವೇಧಸನ ಪುತ್ರನಾದ ರಾಜಾ ಹರಿಶ್ಚಂದ್ರನಿಗೆ ನೂರ್ವರು ಪತ್ನಿಯರಿದ್ದರೂ ಸಂತತಿಯಾಗಿರಲಿಲ್ಲ. ಅವನ ಅರಮನೆಯಲ್ಲಿ ಪರ್ವತ ಮತ್ತು ನಾರದ ಎಂಬ ಇಬ್ಬರು ಋಷಿಯರಿದ್ದರು. ಹರಿಶ್ಚಂದ್ರನು ಅವರೊಡನೆ ಪುತ್ರಸಂತತಿಯ ಕುರಿತು ಪರಾಮರ್ಶ ಮಾಡಲಾಗಿ ಅವರು- ರಾಜಾ ವರುಣನ ಬಳಿಗೆ ಹೋಗು ಮತ್ತು ನನಗೆ ಪುತ್ರನನ್ನು ಕೊಡು. ನಾನು ಆ ಪುತ್ರನಿಂದ ನಿನ್ನ ಯಜ್ಞವನ್ನು ಮಾಡುವೆನೆಂದು ಹೇಳು–ಎಂದು ಉಪದೇಶಿಸಿದರು.

ಹರಿಶ್ಚಂದ್ರನು ಅವರು ಹೇಳಿದ ಹಾಗೆಯೇ ವರುಣನ ಬಳಿಗೆ ಹೋಗಿ ತನಗೆ ಪುತ್ರನನ್ನು ಕರುಣಿಸಿದರೆ ಅವನಿಂದ ನಿನ್ನ ಯಜ್ಞವನ್ನು ಜರುಗಿಸುವೆನು ಅಂದರೆ ಅವನನ್ನು ಯಜ್ಞದಲ್ಲಿ ಬಲಿಪಶುವಾಗಿ ಅರ್ಪಿಸುವೆನೆಂದು ಹೇಳಿದನು. ವರುಣನು ಹಾಗೇ ಆಗಲೆಂದನು. ಹಾಗೆ ವರುಣನ ಕೃಪೆಯಿಂದ ಹರಿಶ್ಚಂದ್ರನಿಗೆ ರೋಹಿತನೆಂಬ ಪುತ್ರನು ಹುಟ್ಟಿದನು. ಆಗ ವರುಣನು ಬಂದು– ನೋಡು ನಿನಗೆ ಪುತ್ರನು ಹುಟ್ಟಿದನು ಈಗ ನೀನು ಅವನಿಂದ ನನ್ನ ಯಜ್ಞವನ್ನು ಜರುಗಿಸು ಎಂದನು. ಆಗ ಹರಿಶ್ಚಂದ್ರನು-ಮಗನು ಹುಟ್ಟಿದ್ದಾನಷ್ಟೇ ಅವನಿಗೆ ಹತ್ತು ದಿನಗಳಾದರೂ ತುಂಬಲಿ ಆಗ ಯಜ್ಞ ಮಾಡುವೆನೆಂದನು. ಹತ್ತು ದಿನಗಳ ತರುವಾಯ ವರುಣನು ಬಂದು ಈಗ ಯಜ್ಞಮಾಡೆಂದು ಹೇಳಿದಾಗ–ಹರಿಶ್ಚಂದ್ರನು ಮಗುವಿಗೆ ಹಲ್ಲುಗಳು ಹುಟ್ಟಲಿ ಆಗ ಯಜ್ಞ ಮಾಡುವೆನೆಂದನು. ಆ ಪ್ರಕಾರವಾಗಿ ವರುಣನು ಪ್ರತಿ ಸರ್ತಿ ಬಂದಾಗಲೂ ಹರಿಶ್ಚಂದ್ರನು ಒಂದಲ್ಲ ಒಂದು ನೆವ ಹೇಳಿ ಬಲಿಯ ದಿನವನ್ನು ಮುಂದೆ ತಳ್ಳುತ್ತ ತಳ್ಳುತ್ತ ರೋಹಿತನು ಪ್ರಾಯಭರಿತನಾದನು. ಆಗ ವರುಣನು ಬಂದು–ನೋಡು ನೀನು ಬೇಡಿದಂತೆ ನಿನ್ನ ಪುತ್ರನು ದೊಡ್ಡವನಾಗಿ ಧನುಸ್ಸನ್ನು ಧರಿಸಲು ಶಕ್ತನಾಗಿದ್ದಾನೆ. ಆದುದರಿಂದ ಈಗ ನೀನು ಅವನಿಂದ ನನ್ನ ಯಜ್ಞವನ್ನು ಜರುಗಿಸು ಎಂದು ಆಗ್ರಹ ಮಾಡಿದನು. ಆಗ ಹರಿಶ್ಚಂದ್ರನು ಆಗಲಿ ಎಂದು ಹೇಳಿ ಪುತ್ರನನ್ನು ಕರೆದು-ನೋಡು-ಯಾವನು ನಿನ್ನನ್ನು ನನಗೆ ಕೊಟ್ಟನೋ, ಅವನಿಗೇ ನಿನ್ನನ್ನು ಯಜ್ಞದಲ್ಲಿ ಕೊಡುವೆನು ಎಂದನು. ಆದರೆ ರೋಹಿತನು ತಂದೆಯ ಮಾತಿಗೆ ಒಪ್ಪದೇ ಬಿಲ್ಲನ್ನು ತೆಗೆದುಕೊಂಡು ಕಾಡಿಗೆ ಹೋಗಿ ಕಾಡಿನಲ್ಲಿ ಸಂಚರಿಸತೊಡಗಿದನು.

ಇಲ್ಲಿ ವರುಣನು ಹರಿಶ್ಚಂದ್ರನನ್ನು ಹಿಡಿದುಕೊಳ್ಳುವನು. ಅಂದರೆ ಹರಿಶ್ಚಂದ್ರನಿಗೆ ಜಲೋದರವಾಗಿ ಹೊಟ್ಟೆ ಉಬ್ಬುವುದು. ಅವನನ್ನು ಕೇಳಿದ ರೋಹಿತನು ಕಾಡಿನಿಂದ ಹಿಂದಿರುಗುವನು. ದಾರಿಯಲ್ಲಿ ಅವನಿಗೆ ಬ್ರಾಹ್ಮಣನ ವೇಷದಲ್ಲಿ ಇಂದ್ರನು ಎದುರಾಗುವನು. ಮತ್ತು ಅವನು– ರೋಹಿತನಿಗೆ-ಯಾವನು ಚರಿಸುವುದಿಲ್ಲವೋ ಅವನಿಗೆ ಶ್ರೀಯು ಪ್ರಾಪ್ತವಾಗುವುದಿಲ್ಲ. ಅವನು ಮನುಷ್ಯ ರೊಂದಿಗೆನೇ ವಾಸಿಸುತ್ತ ಕೆಡುಕನಾಗುತ್ತಾನೆ. ಯಾವನು ಚರಿಸುತ್ತಲೇ ಇರುತ್ತಾನೋ ಅವನಿಗೆ ಇಂದ್ರನು ಗೆಳೆಯನಾಗುತ್ತಾನೆ. ಆದುದರಿಂದ ನೀನು ಚರಿಸುತ್ತಲೇ ಇರು ಎನ್ನುವನು.

ಆಗ ರೋಹಿತನು– ತನಗೆ ಬ್ರಾಹ್ಮಣನು ಚರಿಸಲು ಹೇಳಿದನೆಂದು ಮರಳಿ ಕಾಡಿಗೆ ಹೋಗಿ ಒಂದು ವರ್ಷ ಚರಿಸಿ ಹಿಂದಿರುಗುತ್ತಾನೆ. ಆಗಲೂ ಇಂದ್ರನು ಬ್ರಾಹ್ಮಣವೇಷದಲ್ಲಿ ಬಂದು ಅವನನ್ನು ಕಾಡಿಗೆ ಕಳುಹಿಸುತ್ತಾನೆ. ಆಗ ರೋಹಿತನು ಒಂದು ವರ್ಷದ ತನಕ ಕಾಡಿನಲ್ಲಿ ಚರಿಸಿ ಹಿಂದಿರುಗುತ್ತಾನೆ. ಆಗಲೂ ಇಂದ್ರನು ಬಂದು– **ಕಲಿಃ ಶಯಾನೋ ಭವತಿ**·· ಅಂದರೆ ಕಲಿಯು (= ಸೋತವನು) ಮಲಗು ವವನಾಗುತ್ತಾನೆ. **"ಸಂಜಿಹಾನಸ್ತು ದ್ವಾಪರಃ**–ಅಂದರೆ ದ್ವಾಪರನು ಏಳುವವ ನಾಗುತ್ತಾನೆ. **"ಉತ್ತಿಷ್ಠಂ ಸ್ತ್ರೇತಾ ಭವತಿ**–ಅಂದರೆ–ತ್ರೇತಾ ಎದ್ದು ನಿಲ್ಲುವಂಥವ ನಾಗುತ್ತಾನೆ.–**"ಕೃತಃ ಸಂಪದ್ಯತೇ ಚರನ್"** ಅಂದರೆ ಕೃತನು ಚರಿಸುವಂಥವನಾಗಿ ಜಯಪಡೆಯುತ್ತಾನೆ. ಎಂದ ತರುವಾಯ– **"ಚರೈವ, ಚರೈವ"** ಅಂದರೆ ನೀನು ಚರಿಸುತ್ತಲೇ ಇರು, ಚರಿಸುತ್ತಲೇ" ಇರು ಎನ್ನುತ್ತಾನೆ.

ಅರ್ಥಾತ್ ಹಿಂದೆ ಉದಹರಿಸಿದ ವೈದಿಕ ಅಂಶಗಳು ದ್ಯೂತಕ್ಕೆ ಸಂಬಂಧ ಪಟ್ಟವುಗಳೆಂದು ಸಿದ್ಧವಾಗುತ್ತದೆಯೇ ಹೊರತು, ಅವುಗಳಲ್ಲಿ ಬಂದಿರುವ ಕೃತ, ತ್ರೇತಾ, ದ್ವಾಪರ ಮತ್ತು ಕಲಿ ಎಂಬ ಶಬ್ದಗಳು ಯುಗಗಳನ್ನು ಅಥವಾ ಕಾಲಮಾನ ಗಳನ್ನು ಸೂಚಿಸುತ್ತವೆಂದು ಸಿದ್ಧವಾಗುವುದಿಲ್ಲ. ಆದುದರಿಂದ ಕೃತಾದಿ ಯುಗ ಮಾನಗಳು ಶಕದ ನಾಲ್ಕನೆಯ ಶತಮಾನದ ಕೊನೆಯ ಭಾಗದಲ್ಲಿಯೇ ಪ್ರಚಲಿತ ವಾಗಿದ್ದುವೆನ್ನಬೇಕಾಗುತ್ತದೆ,

ಆದರೆ ಹೊಸ ಜ್ಯೋತಿಷ ಸಿದ್ಧಾಂತಕಾರರು "ಕೃತ" ಮೊದಲಾದ ಶಬ್ದ ಗಳನ್ನು ಕಾಲಮಾನಗಳನ್ನಾಗಿ ಉಪಯೋಗಿಸಲು, ಅವರ ಮುಂದೆ ಒಂದು ಹಳೆಯ ದೃಷ್ಟಾಂತವಿತ್ತು. ಅದೆಂದರೆ ಮಾಳವ ಗಣರಾಜ್ಯದ ಅಧಿಪತಿಯಾಗಿದ್ದ ವಿಕ್ರಮಾದಿತ್ಯನು ಶಕಪೂರ್ವ ೧೩೫ನೆಯ ವರ್ಷದಲ್ಲಿ ಅವಂತಿ ರಾಜ್ಯವನ್ನು ಆಳುತಿದ್ದ ಶಕಜನರನ್ನು ಅಲ್ಲಿಂದ ಹೊಡೆದೋಡಿಸಿ ಅವಂತಿ ರಾಜ್ಯವನ್ನು ಮಾಳವ ರಾಜ್ಯದಲ್ಲಿ ಸೇರಿಸಿದ್ದನು. ಮತ್ತು ಅವನು ಶಕಜನರನ್ನು ಜಯಿಸಿದ ಸ್ಮಾರಕವಾಗಿ ಜಯಿಸಿದ ವರ್ಷವನ್ನು "ಕೃತವರ್ಷ"[1] ಅಂದರೆ "ಜಯದವರ್ಷ" ಎಂದು ಕರೆದಿದ್ದನು. ಆ

---

1. Indian Palaeography page 202 by Rajbali Pandey.

ತರುವಾಯದಿಂದ ಜನರು ವರ್ಷಗಳ ಸಂಖ್ಯೆಯೊಂದಿಗೆ "ಕೃತ" ಎಂಬ ಶಬ್ದವನ್ನು ಸೇರಿಸಿ ಕಾಲವನ್ನು ಸೂಚಿಸತೊಡಗಿದ್ದರು. ಹಾಗೆ "ಕೃತವರ್ಷ" ಎಂಬ ಉಲ್ಲೇಖ ವಿರುವ ಹಲವು ಶಿಲಾಶಾಸನಗಳು ದೊರಕಿವೆ. ಕೃತ ವರ್ಷದ ಉಲ್ಲೇಖವಿರುವ ಕಟ್ಟ ಕಡೆಯ ಶಾಸನದ ಒಕ್ಕಣೆಯು ಮುಂದಿನಂತಿದೆ– **"ಕೃತೇಷು ವರ್ಷಶತೇಷ್ವೇಕಾಶೀ ತ್ಯುತ್ತರೇಷ್ವಸ್ಯಾಂ ಮಾಲವ ಪೂರ್ವಾಯಾಂ ಕಾರ್ತಿಕ ಶುಕ್ಲಾ ಪಂಚಮ್ಯಾಮ್"** ಆದರಲ್ಲಿ ಕೃತವರ್ಷದ ಸಂಖ್ಯೆಯು ೪೮೧ ಇದೆ. ಮತ್ತು ಅದು ಶಕದ ೩೪೬ನೆಯ ವರ್ಷಕ್ಕೆ ಸರಿ ಬರುತ್ತದೆ. ಆ ಶಾಸನದ ತರುವಾಯದ ಕಾಲದ ಶಾಸನಗಳಲ್ಲಿ **'ಮಾಲವಾನಾಂ ಗಣ ಸ್ಥಿತಿಃ'** ಅಲ್ಲದಿದ್ದರೆ **'ಮಾಲವಗಣಸ್ಥಿತಿಃ'** ಎಂಬ ಉಲ್ಲೇಖ ಗಳಿವೆ. ಮತ್ತು ಎಂಟನೆಯ ಶತಮಾನದಲ್ಲಿ ಮತ್ತು ತರುವಾಯ ಬರೆದ ಶಾಸನ ಗಳಲ್ಲಿ "ವಿಕ್ರಮ ಸಂವತ್" ಎಂಬುದರ ಪ್ರಯೋಗಗಳು ಕಂಡು ಬರುತ್ತವೆ.

ವಿಕ್ರಮಾದಿತ್ಯನು ಕೃತವರ್ಷವನ್ನು ಪ್ರಾರಂಭಿಸಿದ ೧೩೫ ವರ್ಷಗಳ ತರುವಾಯ ಶಕಜನರು ಮರಳಿ ಬಂದು ಅವಂತಿ ರಾಜ್ಯವನ್ನು ಗೆದ್ದು ಅಲ್ಲಿ ತಮ್ಮ ಆಳ್ವಿಕೆಯನ್ನು ಸ್ಥಾಪಿಸಿದರು. ಮತ್ತು ಅಲ್ಲಿ ಪ್ರಚಲಿತವಿದ್ದ ಕೃತ ವರ್ಷದ ಗಣನೆ ಯನ್ನು ನಿರೋಧಿಸಿ ತಮ್ಮ ಆಳ್ವಿಕೆಯ ವರ್ಷದಿಂದ ಕಾಲಗಣನೆಯನ್ನು ಪ್ರಾರಂಭಿ ಸಿದರು. ಆದರೆ ಮೊದಲಿನ ನಾಲ್ಕು ಶತಮಾನಗಳ ತನಕ ಆ ಕಾಲಮಾನಕ್ಕೆ ಯಾವುದೊಂದು ಹೆಸರಿರಲಿಲ್ಲ. ಆರಂಭ ಕಾಲದಿಂದ ಕಳೆದ ವರ್ಷಗಳ ಸಂಖ್ಯೆಯನ್ನು ಮಾತ್ರ ಬರೆಯುತಿದ್ದರು. ಐದನೆಯ ಶತಮಾನದ ತರುವಾಯದಿಂದ ಬರೆಯಲ್ಪಟ್ಟ ಶಾಸನಗಳಲ್ಲಿ ಆ ಸಂಖ್ಯೆಗಳ ಜೊತೆಯಲ್ಲಿ "ಶಕಕಾಲ" ಎಂದಾಗಲೀ "ಶಕನೃಪತಿ ಕಾಲ" ಎಂದಾಗಲಿ, "ಶಕನೃಪತಿ ಸಂವತ್ಸರ" ಎಂದಾಗಲೀ "ಶಕನೃಪತಿ ರಾಜ್ಯಾಭಿ ಷೇಕ ಸಂವತ್ಸರ" ಎಂದಾಗಲೀ ಇದ್ದುದು ಕಾಣಿಸುತ್ತದೆ. "ಶಕ" ಎಂಬ ಶಬ್ದದ ಮೊದಲಿನ ಉಲ್ಲೇಖವು ಆಚಾರ್ಯ ವರಾಹಮಿಹಿರನು ರಚಿಸಿದ "ಪಂಚ ಸಿದ್ಧಾಂತಿ ಕೆಯ ಮೊದಲನೆಯ ಅಧ್ಯಾಯದ ಎಂಟನೆಯ ಆರ್ಯೆಯಲ್ಲಿ **"ಸಪ್ತಾಶ್ವಿವೇದ ಸಂಖ್ಯಂ ಶಕಕಾಲಮಪಾಸ್ಯ"** ಅಂದರೆ "ಶಕಕಾಲದ ೪೨೭ರಷ್ಟನ್ನು ಕಳೆದು" ಎಂಬ ರೂಪದಿಂದ ಬಂದಿದೆ. ಆದರೆ ಹದಿನೆರಡನೆಯ ಶತಮಾನದ ಕೊನೆಯ ತನಕ ಆ ಕಾಲಮಾನಕ್ಕೆ "ಶಾಲಿವಾಹನ ಶಕ" ಎಂಬ ಹೆಸರು ಬಂದಿರಲಿಲ್ಲ. ಆ ಹೆಸರು ಆಂಧ್ರ ದೇಶವನ್ನಾಳುತಿದ್ದ ಶಕವಂಶದ ಸಾತವಾಹನ ಅರಸರಿಂದಾಗಿ ಬಂದಿತ್ತು, ಅಂದರೆ "ಸಾತವಾಹನ" ಇದ್ದುದೇ "ಶಾಲಿವಾಹನ" ಆಗಿತ್ತು. ಮತ್ತು ಅದರ ಮೊತ್ತಮೊದಲಿನ ಪ್ರಯೋಗವು ವಿಜಯನಗರದ ದೊರೆ ಬುಕ್ಕರಾಯನ ದಾನಶಾಸನ ದಲ್ಲಿ "ನೃಪಶಾಲಿವಾಹನ ಶಕ" ಎಂಬ ರೂಪದಿಂದ ಬಂದಿದೆ.

ಕೃತವರ್ಷ ೧೩೫ರಲ್ಲಿ ಭಾರತ ವರ್ಷಕ್ಕೆ ಬಂದಿದ್ದ ಶಕಜನರಲ್ಲಿ ಜ್ಯೋತಿಷಿ ಗಳು ಇದ್ದರು. ಆದುದರಿಂದ ಅವರಿಂದಾಗಿಯೇ ಭಾರತ ವರ್ಷದಲ್ಲಿ ಯವನರ

ಜ್ಯೋತಿಷ ಶಾಸ್ತ್ರವು ಪ್ರಚಲಿತವಾಗಿದ್ದಿತೆನ್ನಬಹುದು. ಅವರು ತಮ್ಮ ಜ್ಯೋತಿಷ ಗ್ರಂಥಗಳಲ್ಲಿ ಶಕವರ್ಷಗಳನ್ನು ಉಪಯೋಗಿಸುತ್ತಿದ್ದುದರಿಂದ ಅವರ ಜ್ಯೋತಿಷ ದೊಂದಿಗೆ ಶಕಕಾಲ ಮಾನವೂ ಭಾರತವರ್ಷದ ಕೆಲವು ಪ್ರದೇಶಗಳಲ್ಲಿ ಪ್ರಚಲಿತ ವಾಯಿತೆನ್ನಬಹುದು ಮತ್ತು ಶಕದ ನಾಲ್ಕನೆಯ ಶತಮಾನದ ಸುಮಾರಿಗೆ ಅವರ ಜ್ಯೋತಿಷದಲ್ಲಿ ಕೃತಾದಿ ಚತುರ್ಯುಗಗಳ ಕಾಲಗಣನೆಯೂ ಸೇರಿತೆನ್ನಬಹುದು.

ಯಾವುದೊಂದು ವಿಜ್ಞಾನದ ಬೆಳವಣಿಗೆಗೆ ಅಂಕಗಣಿತದ ಜ್ಞಾನವು ಬಹಳ ಸಹಕಾರಿಯಾಗಿದೆ. ಮತ್ತು ಗಣಿತವೇ ಮುಖ್ಯವಾಗಿರುವ ಜ್ಯೋತಿಷದಲ್ಲಿ ಗ್ರಹಗಳ ಭ್ರಮಣಗಳ ಆಧಾರದಿಂದ ಅವುಗಳ ಸ್ಥಿತಿಗತಿಗಳನ್ನು ನಿರ್ಧರಿಸುವಲ್ಲಿ ಅಂಕಗಣಿತದ ಸಹಾಯವು ಅತ್ಯಂತ ಆವಶ್ಯಕವಾಗಿದೆ. ಆದರೆ ಮೊದಲು ನಿರ್ಮಿಸಲ್ಪಟ್ಟ ಅಂಕೆ ಗಳಿಂದ ಗಣಿತದ ಪರಿಕ್ರಿಯೆಗಳನ್ನು ನೆರವೇರಿಸಲು ಸಾಧ್ಯವಿರಲಿಲ್ಲ. ಆದುದರಿಂದ ಆ ಕಾಲದ ಜನರು ಗುಲಗಂಜಿಗಳ ರಾಶಿಗಳ ಮೂಲಕ ಗಣಿತದ ಪರಿಕರ್ಮಗಳನ್ನು ನೆರವೇರಿಸುತ್ತಿದ್ದರು, ವೇದಾಂಗ ಜ್ಯೋತಿಷದೊಳಗಿನ ಪರ್ವಸಂಖ್ಯೆಗಳನ್ನು, ನಕ್ಷತ್ರದ ಉದಯ ಕಾಲವನ್ನು ಮತ್ತು ತಿಥಿಗಳನ್ನು ಕಂಡುಕೊಳ್ಳಲು, ಬೇಕಾದ ಪೂರ್ಣಾಂಕಗಳ ಹಾಗೂ ಭಿನ್ನಾಂಕಗಳ ಸಂಕಲನ, ವ್ಯವಕಲನ, ಗುಣನ ಮತ್ತು ಭಾಗಹಾರಗಳನ್ನು ನೆರವೇರಿಸಲು ಸಾಧಾರಣ ನಾಲ್ಕು ಸಾವಿರ ಗುಲಗಂಜಿಗಳ ಒಂದು ಇಲ್ಲವೇ ಮೂರು ರಾಶಿಗಳು ಸಾಕಾಗುತ್ತಿದ್ದುವು. ಆದರೆ ತರುವಾಯದ ಗಣಕರು ಸಾವಿರದ ಹಾಗೂ ಲಕ್ಷದ ಸಂಖ್ಯೆಗಳನ್ನು ಅವೇ ಸಂಖ್ಯೆಗಳಿಂದ ಗುಣಿಸಲು ಪ್ರಯತ್ನಿಸಿ ದಾಗ ಗುಣನಫಲವನ್ನು ಕಂಡುಕೊಳ್ಳಲು ಬೇಕಾಗುವ ಕೋಟಿಗಟ್ಟಳೆ ಗುಲಗಂಜಿಗಳ ರಾಶಿಗಳನ್ನು ಕೂಡಿಹಾಕುವುದು ಸಾಧ್ಯವಿರಲಿಲ್ಲ. ಆದುದರಿಂದ ಅವರು ತಮ್ಮ ಆ ಸಮಸ್ಯೆಯನ್ನು ಬಗೆಹರಿಸುವ ಸುಲಭ ಉಪಾಯವನ್ನು ಹುಡುಕತೊಡಗಿದ್ದರು. ಮತ್ತು ಅವರ ಅಂಥ ಹುಡುಕಾಟದ ಫಲವೇ ಇಂದು ಪ್ರಚಲಿತವಿರುವ ಒಂದರಿಂದ ಒಂಭತ್ತರ ತನಕದ ಒಂಭತ್ತು ಅಂಕೆಗಳೂ ಒಂದು ಸೊನ್ನೆಯೂ–ದಶಗುಣೋತ್ತರ ಸ್ಥಾನಮೂಲ್ಯದ ಪದ್ಧತಿಯೂ ಆಗಿದೆ.

ಸೊನ್ನೆಯ ಮತ್ತು ದಶಗುಣೋತ್ತರ ಸ್ಥಾನ ಮೂಲ್ಯದ ಆವಿಷ್ಕಾರವು ಯಾವ ಕಾಲದಲ್ಲಾಯಿತೆಂದು ನಿಖರವಾಗಿ ಹೇಳಲು ಸಾಧ್ಯವಿಲ್ಲವಾದರೂ ಅದು ಭಗವಾನ್ ಬುದ್ಧನ ಜನ್ಮಕಾಲಕ್ಕಿಂತ ಮೊದಲೇ ಆಗಿದ್ದಿತೆಂದು ಮತ್ತು ಯಾಜ್ಞಿಕ ಪುರೋಹಿತರಲ್ಲಿ ರಹಸ್ಯರೂಪದಿಂದ ಇದ್ದಿತೆಂದು ಯಜುರ್ವೇದದ ತೈತ್ತಿರೀಯ ಸಂಹಿತೆಯ ೪-೪-೧೧ರಲ್ಲಿ ಶತ (=೧೦೦) ಸಹಸ್ರ (=೧೦೦೦) ಅಯುತ (=೧೦೦೦೦) ನಿಯುತ (=೧೦೦೦೦೦) ಪ್ರಯುತ (೧೦೦೦೦೦೦) ಅರ್ಬುದ (=೧೦೦೦೦೦೦೦) ನ್ಯರ್ಬುದ (=೧೦೦೦೦೦೦೦೦) ಸಮುದ್ರ (=೧೦೦೦೦೦೦೦೦೦) ಮಧ್ಯ(=೧೦೦೦೦೦೦೦೦೦೦) ಅಂತ(=೧೦೦೦೦೦೦೦೦೦೦೦)

ಮತ್ತು ಪರಾರ್ಧ (=೧೦೦೦೦೦೦೦೦೦೦೦೦) ಎಂಬ ದೊಡ್ಡ ಸಂಖ್ಯಾವಾಚಕ ಶಬ್ದಗಳಿರುವುದರಿಂದ ಮತ್ತು ಸೊನ್ನೆಯ ಹಾಗೂ ಸ್ಥಾನ ಮೂಲ್ಯದ ಪದ್ಧತಿಯ ಆಧಾರವಿಲ್ಲದೇ ಬರಿಯ ಗುಲಗುಂಜಿಗಳ ರಾಶಿಗಳಿಂದ ಅಷ್ಟು ದೊಡ್ಡ ಸಂಖ್ಯೆಗಳನ್ನು ಸೂಚಿಸುವುದಾಗಲೀ ಬರೆಯುವುದಾಗಲೀ ಸಾಧ್ಯವಿಲ್ಲವಾದುವರಿಂದ ಸಿದ್ಧವಾಗುತ್ತದೆ. ಆದರೆ ಪ್ರಾಚೀನ ಕಾಲದ ಯಾಜ್ಞಿಕ ಪುರೋಹಿತರು ತಾವು ಮಾಡಿದ ಯಾವುದೊಂದು ಹೊಸ ಅನ್ವೇಷಣದ ಅಥವಾ ಆವಿಷ್ಕಾರದ ಗುಟ್ಟನ್ನು ತಮ್ಮ ಮಕ್ಕಳಿಗಲ್ಲದೇ ಅನ್ಯರಿಗೆ ತಿಳಿಸುತ್ತಿದ್ದಿಲ್ಲವಾದುದರಿಂದ ಸೊನ್ನೆಯ ಮತ್ತು ದಶಗುಣೋತ್ತರ ಸ್ಥಾನ ಮೂಲ್ಯದ ಆವಿಷ್ಕಾರವು ಬಹಳ ಕಾಲದ ತನಕ ರಹಸ್ಯವಾಗಿಯೇ ಇದ್ದಿತೆಂಬುದರಲ್ಲಿ ಸಂದೇಹವಿಲ್ಲ. ಪರಂತು ಶಕಾರಂಭದಲ್ಲಿ ಭಾರತ ವರ್ಷಕ್ಕೆ ಬಂದಿದ್ದ ಮಗ ಬ್ರಾಹ್ಮಣರಿಂದ ನವಗ್ರಹಗಳ ಸ್ಥಿತಿ–ಗತಿಗಳಿಗೆ ಸಂಬಂಧಿಸಿದ ಜ್ಯೋತಿಷವನ್ನು ಕಲಿಯ ಬಯಸಿದ ಯಾಜ್ಞಿಕ ಪುರೋಹಿತರು ಜ್ಯೋತಿಷಕ್ಕೆ ಪ್ರತಿಯಾಗಿ ತಮ್ಮ ಅಂಕಗಣಿತ ವಿದ್ಯೆಯನ್ನು ಮಗಬ್ರಾಹ್ಮಣರಿಗೆ ಕಲಿಸಬೇಕಾಗಿ ಬಂದುದರಿಂದ ಅಂಕಗಣಿತದ ರಹಸ್ಯವು ಬಯಲಾಯಿತೆನ್ನಬಹುದು.

ಆಚಾರ್ಯ ಆರ್ಯಭಟನ ಆರ್ಯಭಟೀಯವೆಂಬ ಜ್ಯೋತಿಷ ಸಿದ್ಧಾಂತವನ್ನು ನಾನು ಕಂಡಿಲ್ಲ. ಆದರೆ ದಿ. ಶಂಕರ ಬಾಳಕೃಷ್ಣ ದೀಕ್ಷಿತರ "ಭಾರತೀಯ ಜ್ಯೋತಿಷ" ಗ್ರಂಥದಲ್ಲಿ ಅವರು ಉದಹರಿಸಿದ ಆರ್ಯಭಟೀಯದೊಳಗಿನ ಆರ್ಯಗಳನ್ನು ಓದಿದ್ದೇನೆ. ಅವುಗಳ ಮೇಲಿಂದ ಆರ್ಯಭಟನು ದಶಾಂಕ ದಶಗುಣೋತ್ತರ ಸ್ಥಾನ ಮೂಲ್ಯದ ಅಂಕಗಣಿತವನ್ನು ಉಪಯೋಗಿಸಿದ್ದಾನೆಂದು ಹೇಳಬಹುದಾದರೂ ಅವನು ಅನುಸರಿಸಿದ ಪದ್ಧತಿ ಯು ಅತ್ಯಂತ ಕ್ಲಿಷ್ಟವಾಗಿದೆ. ಪರಂತು ಆಚಾರ್ಯ ವರಾಹಮಿಹಿರನು ಶಕವರ್ಷ ೪೫೦ರಲ್ಲಿ ಸಂಪಾದಿಸಿದ ಪಂಚಸಿದ್ಧಾಂತಿಕೆಯ ಎಂಟನೆಯ ಅಧ್ಯಾಯದ ಎಂಟನೆಯ ಶ್ಲೋಕದಲ್ಲಿ ಬಂದಿರುವ "ರಸರ್ತುಯಮಪಟ್ಕ ಪಂಚಕ" ಎಂಬ ಅಂಶವು ಸ್ಪಷ್ಟವಾಗಿ ೫೬೨೬೬ ಎಂಬ ಸಂಖ್ಯೆಯನ್ನು ಸೂಚಿಸುವುದರಿಂದ ಅವನ ಕಾಲದಲ್ಲಿ ದಶಾಂಕ ದಶಗುಣೋತ್ತರ ಸ್ಥಾನಮೂಲ್ಯದ ಅಂಕಗಣಿತವು ಸರ್ವವಿದಿತವಾಗಿದ್ದಿತೆಂದು ಸಿದ್ಧವಾಗುತ್ತದೆ. ಈ ದಶಾಂಕದಶಗುಣೋತ್ತರ ಸ್ಥಾನ ಮೂಲ್ಯದ ಅಂಕಗಣಿತ ಪದ್ಧತಿಯು ಭಾರತೀಯರಿಂದ ಜಗತ್ತಿಗೆ ಕೊಡಲ್ಪಟ್ಟ ಅತಿಮೂಲ್ಯದ ಅಥವಾ ಬೆಲೆಯನ್ನು ಕಟ್ಟಲು ಸಾಧ್ಯವಿಲ್ಲದ ಕೊಡುಗೆಯಾಗಿದೆ. ಹಾಗಿದ್ದರೂ ಪಾಶ್ಚಾತ್ಯ ವಿದ್ವಾಂಸರು ಭಾರತೀಯರ ಅಂಕೆಗಳನ್ನು ಅರಬೀ ಅಂಕೆಗಳೆಂದು ಹೆಸರಿಸಿದ್ದಾರಲ್ಲದೇ ಆ ಅಂಕ ಗಣಿತ ಪದ್ಧತಿಯು—ಭಾರತೀಯ ಮೂಲದ್ದಲ್ಲವೆಂದು ಸಾಧಿಸಲು ಹೆಣಗಾಡಿ ಸೋತುದರಿಂದ ತುಂಬಾ ವಿಷವನ್ನೂ ಕಾರಿದ್ದಾರೆ.[1]

---

[1] History of Hindu Mathematics ಎಂಬ ಪುಸ್ತಕದಲ್ಲಿ G.R. Kaye ಎಂಬವರ ಅಭಿಪ್ರಾಯಗಳನ್ನು ಓದಿರಿ.

ವೇದಾಂಗ ಜ್ಯೋತಿಷದಲ್ಲಿ ಪೂರ್ಣಾಂಕಗಳ ಮತ್ತು ಭಿನ್ನಾಂಕಗಳ ಸಂಕಲನ, ವ್ಯವಕಲನ, ಗುಣನ ಮತ್ತು ಭಾಗಹಾರಗಳ ವಿವರಗಳು ಮಾತ್ರವಲ್ಲದೇ ಅಪವರ್ತಗಳ ಮತ್ತು ತ್ರೈರಾಶಿಕಗಳ ವಿವರಗಳೂ ಇವೆ. ಆದರೆ ಅದರಲ್ಲಿ ರೇಖಾಗಣಿತದ ಅಥವಾ ಕ್ಷೇತ್ರಗಣಿತದ ಉಲ್ಲೇಖವಿಲ್ಲ. ಪರಂತು ಯಜ್ಞಚಿತಿಗಳ ನಿರ್ಮಾಣಕ್ಕೆ ರೇಖಾಗಣಿತದ ಮತ್ತು ಕ್ಷೇತ್ರಗಣಿತದ ಜ್ಞಾನವು ಅತ್ಯಾವಶ್ಯಕವಾದುದರಿಂದ ಮತ್ತು ಯಜ್ಞ ಸಂಸ್ಥೆಯು ಬಹಳ ಪ್ರಾಚೀನವಾದುದರಿಂದ ವೇದಾಂಗ ಜ್ಯೋತಿಷದ ರಚನಾಕಾಲಕ್ಕಿಂತ ಮೊದಲಿನಿಂದಲೂ ವೈದಿಕ ಋತ್ವಿಜರಿಗೆ ರೇಖಾಗಣಿತದ ಮತ್ತು ಕ್ಷೇತ್ರಗಣಿತದ ಜ್ಞಾನವಿದ್ದಿತೆನ್ನಬೇಕಾಗುತ್ತದೆ. ಏಕೆಂದರೆ ರೇಖಾಗಣಿತ ಮತ್ತು ಕ್ಷೇತ್ರಗಣಿತಗಳು ಯಜ್ಞಚಿತಿಗಳ ಆಕೃತಿಗಳನ್ನೆಳೆಯುವುದಕ್ಕೆ ಮತ್ತು ಇಟ್ಟಿಗೆಗಳನ್ನು ಉಪಯೋಗಿಸಿ ಆಯಾ ಆಕೃತಿಗಳ ಚಿತಿಗಳನ್ನು ಕಟ್ಟಲಿಕ್ಕೆ ಸಂಬಂಧಿಸಿದ್ದುದರಿಂದ ಅವುಗಳ ವಿವರಗಳು ಯಜ್ಞವಿಧಿಗಳನ್ನು ಹೇಳುವ ಶ್ರೌತಸೂತ್ರಗಳಲ್ಲಿ "ಶುಲ್ಬಸೂತ್ರಗಳು" ಎಂಬ ಹೆಸರಿನಿಂದ ಬರುತ್ತವೆ.

ಯಜ್ಞಗಳು ಪ್ರಚಲಿತವಾದ ಆ ಪ್ರಾಚೀನ ಕಾಲದಲ್ಲಿ ಯಜ್ಞಚಿತಿಗಳ ಆಕೃತಿಗಳನ್ನೆಳೆಯಲು ಈಗಿನಂಥ ಕೈವಾರ (Compasses)ವನ್ನು ನಿರ್ಮಿಸಲು ಸಾಧ್ಯವಿರಲಿಲ್ಲವಾದುದರಿಂದ ಆ ಕಾಲದ ಜನರು ಶುಲ್ಬದ ಅಂದರೆ ಅಳತೆಯ ಹಗ್ಗದ ಮತ್ತು ಶಂಕುವಿನ ಅಂದರೆ ನೆಟ್ಟನ ಗೂಟದ ನೆರವಿನಿಂದ ಕೈವಾರದಿಂದ ಮಾಡಬಹುದಾದ ಎಲ್ಲ ಕಾರ್ಯಗಳನ್ನು ಮಾಡುತಿದ್ದರು. ಅಂದರೆ ಅವರು ಮೊದಲು ಒಂದು ಸರಳ ರೇಖೆಯನ್ನೆಳೆಯುತಿದ್ದರು. ಮತ್ತು ಆ ರೇಖೆಯಲ್ಲಿ ಒಂದು ಮೊಳೆಯನ್ನು ಜಡಿದು ತಮಗೆ ಬೇಕಾದ ವ್ಯಾಸದಷ್ಟು ಉದ್ದದ ಹಗ್ಗವನ್ನು ಮಾಲೆಯಾಗಿ ಮಾಡಿ ಆ ಮೊಳೆಗೆ ಸಿಲುಕಿಸಿ ವೃತ್ತವನ್ನೆಳೆಯುತಿದ್ದರು. ಚೌಕವನ್ನು ನಿರ್ಮಿಸಬೇಕೆಂದಿದ್ದರೆ ವೃತ್ತದ ವ್ಯಾಸದ ಎರಡು ಕೊನೆಗಳಲ್ಲಿಯೂ ಎರಡು ಮೊಳೆಗಳನ್ನು ಜಡಿದು ಅದೇ ಮಾಲೆಯಿಂದ ಎರಡು ವೃತ್ತಗಳನ್ನೆಳೆಯುತಿದ್ದರು. ಮತ್ತು ಆ ಎರಡು ವೃತ್ತಗಳು ಮೊದಲಿನ ವೃತ್ತದ ಪರಿಧಿಯನ್ನು ಛೇದಿಸಿದಲ್ಲಿನ ಬಿಂದುಗಳನ್ನು ಸೇರಿಸಿ ಸರಳ ರೇಖೆಗಳನ್ನೆಳೆಯುತ್ತಿದ್ದರು. ಆ ಪ್ರಕಾರವಾಗಿ ಅವರು ಬೇರೆ ಬೇರೆ ಆಕೃತಿಗಳನ್ನು ಎಳೆಯುತ್ತಿದ್ದರು. ಅವರು ಆ ಕಾಲದಲ್ಲಿ ಅಂಥ ಆಕೃತಿಗಳನ್ನೆಳೆಯುವ ಸಲುವಾಗಿ ನಿರ್ಧರಿಸಿದ ನಿಯಮಗಳೇ ಕಾಲಕ್ರಮೇಣ ವಿಕಸಿತವಾಗಿ ರೇಖಾಗಣಿತ ಎಂಬ ಹೆಸರನ್ನು ಪಡೆದಿದ್ದುವು ಮತ್ತು ಆ ಆಕೃತಿಗಳ ವರ್ಗಫಲವನ್ನು ಮತ್ತು ಘನಫಲವನ್ನು ಕಂಡುಹಿಡಿದು – ಚಿತಿಗಳನ್ನು ಕಟ್ಟಲು ಯಾವ ಅಳತೆಯ ಎಷ್ಟು ಇಟ್ಟಿಗೆಗಳು ಬೇಕಾಗುತ್ತವೆಂದು ನಿರ್ಧರಿಸಿ – ರಚಿಸಿದ ನಿಯಮಗಳೇ ಮುಂದೆ "ಕ್ಷೇತ್ರಗಣಿತ" ಎಂಬ ಹೆಸರನ್ನು ಪಡೆದಿದ್ದುವು.

ಯಜ್ಞಚಿತಿಗಳಲ್ಲಿ ಗಾರ್ಹಪತ್ಯ, ಎಂಬ ಮಂಡಲಾಕಾರದ ಚಿತಿ, ಆಹವ

ನೀಯುವೆಂಬ ಚೌಕಾಕಾರದ ಚಿತಿ ಮತ್ತು ದಕ್ಷಿಣ ಎಂಬ ಅರ್ಧವೃತ್ತಾಕಾರದ ಚಿತಿ ಇವು ಮೂರು ಮುಖ್ಯವಾಗಿದ್ದುವು. ಮತ್ತು ಆ ಮೂರು ಚಿತಿಗಳ ಕ್ಷೇತ್ರಫಲವು ಸಮಾನವಾಗಿರಬೇಕಿತ್ತು. ಮಾತ್ರವಲ್ಲ ಅವುಗಳನ್ನು ಕಟ್ಟಲು ಉಪಯೋಗಿಸಲ್ಪಡುವ ಇಟ್ಟಿಗೆಗಳ ಸಂಖ್ಯೆಯು ಕೂಡ ಸಮಾನವಿರಬೇಕಿತ್ತು. ಆದುದರಿಂದ ಯಜ್ಞಚಿತಿಗಳನ್ನು ಕಟ್ಟುವ ಅಧ್ವರ್ಯು ಎಂಬ ಪುರೋಹಿತನಿಗೆ. ಅಂಕಗಣಿತದ, ಕ್ಷೇತ್ರಗಣಿತದ ಮತ್ತು ಬೀಜಗಣಿತದ ಸರಿಯಾದ ಜ್ಞಾನವಿರಲೇ ಬೇಕಾಗಿತ್ತು. ಅವನಿಗೆ ವೃತ್ತದ ವ್ಯಾಸಕ್ಕೂ ಪರಿಧಿಗೂ ಇರುವ ಪ್ರಮಾಣವು ತಿಳಿದಿರಬೇಕಾಗಿತ್ತು. ಏಕೆಂದರೆ ಅವನು ವೃತ್ತದ ಕ್ಷೇತ್ರಫಲವನ್ನು ಕಂಡುಹಿಡಿದು ಅಷ್ಟೇ ಕ್ಷೇತ್ರಫಲದ ಚೌಕವನ್ನೂ, ಅರ್ಧ ವೃತ್ತವನ್ನೂ ನಿರ್ಮಿಸಬೇಕಾಗುತಿತ್ತು. ಅಂದರೆ ವೃತ್ತವಿದ್ದುದನ್ನು ಚೌಕವನ್ನಾಗಿಯೂ, ಅರ್ಧವೃತ್ತವನ್ನಾಗಿಯೂ ಪರಿವರ್ತಿಸಬೇಕಾದ ಸಮಸ್ಯೆಯು ಬಹಳ ಪ್ರಾಚೀನಕಾಲದಲ್ಲಿಯೇ ವೈದಿಕ ಜನರನ್ನು ಎದುರಿಸಿತ್ತು. ಮತ್ತು ವೈದಿಕ ಜನರು ಆ ಸಮಸ್ಯೆಯನ್ನು ಬಹುಮಟ್ಟಿಗೆ ಸರಿಯಾಗಿಯೇ ಬಗೆಹರಿಸಿದ್ದರು.

ಪಾಶ್ಚಾತ್ಯ ವಿದ್ವಾಂಸರು—ರೇಖಾಗಣಿತದ ಆವಿಷ್ಕಾರ ಮತ್ತು ವಿಕಾಸವು ಯಾರಿಂದಾಯಿತು? ಎಂಬ ಪ್ರಶ್ನೆಯು ಸಮರ್ಪಕವಾಗಿ ಬಗೆಹರಿಯುದಂತೆ ಗೊಂದಲವೆಬ್ಬಿಸಿ ಬಿಟ್ಟಿದ್ದಾರೆ. ಮತ್ತು ರೇಖಾಗಣಿತವನ್ನು ವಿಕಸಿತಗೊಳಿಸಿದವರು ಯವನರೆಂದು ವಾದಿಸಿದ್ದಾರೆ. ಆದರೆ ಅದನ್ನು ಸರಿಯೆಂದು ಒಪ್ಪಲಾಗುವುದಿಲ್ಲ, ಏಕೆಂದರೆ ಅವರು ತ್ರಿಕೋಣಮಿತಿಯು ಜನಕನೆಂದು ಹೇಳುವ ಪಾಇಥಗೊರಸನೂ, ಬೇರೆ ಹಲವು ಯುವನರೂ ವಿದ್ಯಾರ್ಥಿಗಳಾಗಿ ಭಾರತವರ್ಷಕ್ಕೆ ಬಂದಿದ್ದರೆಂದು ಯವನ ವಿದ್ವಾಂಸರು ಬರೆದಿಟ್ಟ ಐತಿಹಾಸಿಕ ಪ್ರಮಾಣಗಳಿವೆ.

ಆದರೆ ಪಾಶ್ಚಾತ್ಯರ ಇತ್ತೀಚಿನ ವೈಜ್ಞಾನಿಕ ಪ್ರಗತಿಯಿಂದಾಗಿ ಬೀಗಿದ ಪ್ರೊ। ಫ್ರೆಡ್ರಿಕ್ ಮೆಕ್ಸ್‌ಮುಲ್ಲರರು .. ಪಾಇಥಗೊರಸ್ ಮೊದಲಾದವರು ಭಾರತವರ್ಷಕ್ಕೆ ಬಂದಿದ್ದರೆಂದು ಯವನ ಇತಿಹಾಸಕಾರರು ಬರೆದಿಟ್ಟ ತಥ್ಯಗಳನ್ನು ಬರಿಯ ಕಟ್ಟುಕಥೆಗಳೆಂದು - ಬರಿಯ ಕಲ್ಪನೆಗಳೆಂದು ಧಿಕ್ಕರಿಸಿದ್ದಾರೆ.[1] ಅವರ ಅಂಥ

---

1. We hear, indeed, of more Greek travellers, and it is difficult to understand, how, in those times anybody could have travelled without a certain knowledge of the people through whose camps and villages and towns he had to pass. Many of these travels, however, particularly those which are said to have extended as far as India are mere inventions of later writers. Lacurgus may have travelled to Spain and Africa, he certainly did not proceed to India, nor is there any mention of his intercourse with the Indian Gymosophist before Aristocrates.

ತೆಗಳಿಕೆಯ ಉದ್ದೇಶವು – ಪಾಶ್ಚಾತ್ಯರು ಭಾರತೀಯರಿಂದ ವೈಜ್ಞಾನಿಕ ವಿಷಯಗಳಲ್ಲಿ ಏನನ್ನೂ ಪಡೆದಿಲ್ಲವೆಂದು ಸಾಧಿಸುವುದಾಗಿತ್ತೆಂಬುದರಲ್ಲಿ ಸಂದೇಹವೇ ಇಲ್ಲ. ಆದರೆ ಮೆಕ್ಸ್‌ಮುಲ್ಲರ್ ಮೊದಲಾದ ಪಾಶ್ಚಾತ್ಯ ವಿದ್ವಾಂಸರು ಅವರ ಇತ್ತೀಚಿನ ನಾಲ್ಕು ಶತಮಾನಗಳ ವೈಜ್ಞಾನಿಕ ಪ್ರಗತಿಯಿಂದ ಬೀಗಿದವರಾಗಿ ಪ್ರಾಚೀನ ಭಾರತೀಯರಿಗೆ ವಿಜ್ಞಾನದ ಗಂಧವೇ ಇರಲಿಲ್ಲವೆಂದು ಸಾಧಿಸಲು ಹಿಂದಿನವರು ಬರೆದಿಟ್ಟ ಐತಿಹಾಸಿಕ ಸತ್ಯಗಳನ್ನು ಬರಿಯ ಕಲ್ಪನೆಗಳೆಂದು ತೆಗಳಿದೊಡನೆ ವಸ್ತುಸ್ಥಿತಿಯೇನೂ ಸುಳ್ಳಾಗುವಂತಿಲ್ಲ. ಮತ್ತು ರೇಖಾಗಣಿತದ ಆವಿಷ್ಕಾರವು ಭಾರತೀಯರಿಂದಲೇ ಆಗಿತ್ತೆಂಬ ಸತ್ಯವನ್ನು ಅಲ್ಲಗಳೆಯಲು ಆಗುವಂತಿಲ್ಲ.

ಭಾರತೀಯ ವೈದಿಕ ಜನರಿಗೆ ಬಹಳ ಪ್ರಾಚೀನ ಕಾಲದಿಂದ ಯವನರ ಪರಿಚಯ ಮತ್ತು ಸಂಪರ್ಕವಿದ್ದಿತಾದರೂ ಭಾರತೀಯರು ಯವನರಿಂದ ಪಡೆದುದಕ್ಕಿಂತ ಕೊಟ್ಟುದೇ ಹೆಚ್ಚೆನ್ನಬಹುದು. ಹೆಚ್ಚೇಕೆ ಅವರ ಪರಿಚಯವು ಬಹಳ ಪ್ರಾಚೀನವಾದರೂ ಭಾರತೀಯರು ಯವನರ ಗ್ರಹಗಣಿತವನ್ನು ಶಕದ ಮೂರನೆಯ ಶತಮಾನದ ಕೊನೆಯ ತನಕ ಸ್ವೀಕರಿಸಿರಲಿಲ್ಲ. ಏಕೆಂದರೆ ಭಾರತೀಯರ ಯಜ್ಞಗಳಿಗೆ ನವಗ್ರಹಗಳ ಗಣಿತ ಅಥವಾ ಸ್ಥಿತಿಗತಿಗಳನ್ನು ತಿಳಿದುಕೊಳ್ಳುವ ಆವಶ್ಯಕತೆಯಿರಲಿಲ್ಲ. ಆದರೆ ಶಕದ ಮೂರನೆಯ ಶತಮಾನದಲ್ಲಿ ಯವನರ ಜ್ಯೋತಿಷ ಶಾಸ್ತ್ರವನ್ನು ಭಾರತೀಯ ರೂಪಕ್ಕೆ ಪರಿವರ್ತಿಸಿದ ಶಕಬ್ರಾಹ್ಮಣರು ಗ್ರಹಗಳ ಸ್ಥಿತಿ-ಗತಿಗಳು ಜನರ ಜೀವನದ ಮೇಲೆ ಪ್ರಭಾವ ಬೀರುತ್ತವೆಂಬ ಕಲ್ಪನೆಯನ್ನು ಪ್ರಚಾರ ಮಾಡಿದುದರ ಫಲವಾಗಿ ವೈದಿಕ ಜನರು ಕೂಡ ಅದನ್ನು ನಂಬತೊಡಗಿ ನವಗ್ರಹಗಳ ಗಣಿತವನ್ನು ಸ್ವೀಕರಿಸಿದರೆನ್ನಬಹುದು.

ಆದರೆ ಶಕದ ನಾಲ್ಕನೆಯ ಶತಮಾನದ ಉತ್ತರಾರ್ಧದ ಮೊದಲು ಹೊಸ ಜ್ಯೋತಿಷ ಸಿದ್ಧಾಂತಗಳಿಗನುಸಾರವಾದ ಕಾಲಗಣನೆಯು ಪ್ರಚಲಿತವಾಗಿರಲಿಲ್ಲವೆನ್ನಬಹುದು. ಏಕೆಂದರೆ ಆ ಕಾಲದ ಶಕವರ್ಗದ ರಾಜರು ಕೂಡ ತಮ್ಮ ಶಾಸನಗಳಲ್ಲಿ ಹೊಸ ಜ್ಯೋತಿಷ ಸಿದ್ಧಾಂತಗಳಿಗನುಸಾರವಾದ ಕಾಲಮಾನವನ್ನು ಉಪಯೋಗಿಸಿಲ್ಲ. ಮಾತ್ರವಲ್ಲ ವಸಂತ ಸಂಪಾತ ಬಿಂದುವು ಅಶ್ವಿನೀ ನಕ್ಷತ್ರದಲ್ಲಿದ್ದ ಕಾಲದ ತನಕ ಅಂದರೆ ಶಕದ ನಾಲ್ಕನೆಯ ಶತಮಾನದ ತನಕ ಭಾರತ ವರ್ಷದ ಮುಖ್ಯ ರಾಜ್ಯಗಳಲ್ಲಿ ವೇದಾಂಗ ಜ್ಯೋತಿಷಕ್ಕನುಸಾರವಾದ ಕಾಲಗಣನಾ ಪದ್ಧತಿಯು ಪ್ರಚಲಿತವಿದ್ದುದರ ಲಿಖಿತ ಪ್ರಮಾಣಗಳು ದೊರೆಯುತ್ತವೆ. ಆದುದರಿಂದ ಹೊಸ

---

who lived about 100 B. C. The travels of Pythogorus are equally mythical, they are inventions of Alexandrian writers, who believed all wisdom flowed from the East.

The Lectures on Science of Language, page 99.

ಜ್ಯೋತಿಷ ಸಿದ್ಧಾಂತಗಳು ಶಕದ ಮೂರನೆಯ ಶತಮಾನದ ಕೊನೆಯ ಭಾಗದಲ್ಲಿ ಸಿದ್ಧವಾಗಿದ್ದುವಾದರೂ ಅವುಗಳು ನಾಲ್ಕನೆಯ ಶತಮಾನದ ಉತ್ತರಾರ್ಧದ ಮೊದಲು ಪ್ರಚಾರಕ್ಕೆ ಬಂದಿರಲಿಲ್ಲವೆಂದು ಸಂದೇಹವಿಲ್ಲದೇ ಹೇಳಬಹುದು.

ಹೊಸ ಜ್ಯೋತಿಷ ಸಿದ್ಧಾಂತಗಳನ್ನು ಅನುಸರಿಸ ತೊಡಗಿದ ಜ್ಯೋತಿಷಿಗಳು ಆ ಸಿದ್ಧಾಂತಗಳಲ್ಲಿ ನಿರ್ಧರಿಸಲ್ಪಟ್ಟ ಗ್ರಹಗಳ ಭ್ರಮಣಗಳ ಮಾನಗಳನ್ನನುಸರಿಸಿ ಗ್ರಹಗಳ ಸ್ಥಿತಿ–ಗತಿಗಳನ್ನು ನಿರ್ಧರಿಸುತಿದ್ದರೇ ಹೊರತು ಅವರು ಸ್ವಯಂ ನಭೋಮಂಡಲವನ್ನು ನಿರೀಕ್ಷಿಸಿ ಗ್ರಹಗಳ ಸ್ಥಿತಿಗತಿಗಳನ್ನು ಕಂಡುಕೊಳ್ಳುತ್ತಿರಲಿಲ್ಲ. ಮತ್ತು ಅವರಲ್ಲಿ ಹೆಚ್ಚಿನವರಿಗೆ ನಕ್ಷತ್ರಪುಂಜಗಳ ಪರಿಚಯವೂ ಇರಲಿಲ್ಲ. ಅಲ್ಲದೇ ಹೊಸ ಜ್ಯೋತಿಷ ಸಿದ್ಧಾಂತಕಾರರು ನಕ್ಷತ್ರಗಳ ಪ್ರತ್ಯಕ್ಷ ನಿರೀಕ್ಷಣವನ್ನೂ, ಸಂಪಾತ ಚಲನವನ್ನೂ ಕಡೆಗಣಿಸಿದುದರಿಂದಾಗಿ ಅವರ ಕಾಲದಲ್ಲಿ ಮೊದಲನೆಯದಾಗಿ ಗಣಿಸಲ್ಪಡುತಿದ್ದ ಅಶ್ವಿನೀ ನಕ್ಷತ್ರವು ಈಗಲೂ ಮೊದಲನೆಯದಾಗಿಯೇ ಗಣಿಸಲ್ಪಡುತ್ತಿದೆ. ವಾಸ್ತವವಾಗಿ ಈಗ ಸಂಪಾತ ಬಿಂದುವು ಉತ್ತರಾಭಾದ್ರಾ ನಕ್ಷತ್ರದಲ್ಲಿರುವುದರಿಂದ ಅದು ಮೊದಲನೆಯ ನಕ್ಷತ್ರವಾಗಿ ಗಣಿಸಲ್ಪಡಬೇಕಾಗಿತ್ತು.

ಹಿಂದೆ ವಿವರಿಸಿದ ಪಂಚಸಿದ್ಧಾಂತಿಕೆಯೊಳಗಿನ ಐದು ಜ್ಯೋತಿಷ ಗ್ರಂಥಗಳ ತರುವಾಯ ಹಲವು ಜ್ಯೋತಿಷಿಗಳು ಜ್ಯೋತಿಷ ಗ್ರಂಥಗಳನ್ನು ರಚಿಸಿದ್ದಾರಾದರೂ ಶಕವರ್ಷ ೩೯೮ ರಲ್ಲಿ ಹುಟ್ಟಿದ ಆಚಾರ್ಯ ಆರ್ಯಭಟನು ಶಕವರ್ಷ ೪೨೧ರಲ್ಲಿ ರಚಿಸಿದ "ಆರ್ಯಭಟೀಯ ಎಂಬ ಗ್ರಂಥವು ಸರ್ವಶ್ರೇಷ್ಠವಾಗಿದೆ. ಆರ್ಯಭಟನು ತನ್ನ ಗ್ರಂಥದಲ್ಲಿ ನಕ್ಷತ್ರಗಳು ಸ್ಥಿರವಾಗಿವೆಯೆಂತಲೂ, ಭೂಮಿಯು ಮಾತ್ರ ತಿರುಗುತ್ತದೆಂತಲೂ ಹೇಳಿದ್ದಾನೆ. ಅಂದರೆ ಭೂಮಿಯು ಸುತ್ತುತಿದೆಯೆಂದು ಮೊತ್ತಮೊದಲು ಹೇಳಿದ ಜ್ಯೋತಿಷಿಯು ಅವನೇ ಆಗಿದ್ದಾನೆ. ಹಾಗೆಯೇ ವೃತ್ತದ ಪರಿಧಿಯ ಮತ್ತು ವ್ಯಾಸಗಳ ಆಸನ್ನ ಪ್ರಮಾಣವು = ೧:೩.೧೪೧೬ ಎಂದು ಹೇಳಿದವನೂ ಆಚಾರ್ಯ ಆರ್ಯಭಟನೇ ಆಗಿದ್ದಾನೆ.

ಪರಂತು ಆಚಾರ್ಯ ಆರ್ಯಭಟನ–"ಭೂಮಿಯು ತಿರುಗುತ್ತಿದೆ" ಎಂಬ ತಥ್ಯವನ್ನು ಸ್ವೀಕರಿಸಲು ಸಿದ್ಧನಿಲ್ಲದ ಆಚಾರ್ಯವರಾಹಮಿಹಿರನು ತನ್ನ ಪಂಚಸಿದ್ಧಾಂತಿಕೆಯ ಹದಿಮೂರನೆಯ ಅಧ್ಯಾಯದ ಆರನೆಯ ಆರ್ಯೆಯಲ್ಲಿ **"ಭ್ರಮತಿ ಭ್ರಮಂ ಸ್ಥಿತೇವ ಕ್ಷಿತಿರಿತ್ಯಪರೇ ವದಂತಿ ನೋಡುಗಣಃ। ಯದ್ಯೇವಂ ಶ್ಯೇನಾದ್ಯಾನ ಖಾತ್ಪುನಃ ಸ್ವನಿಲಯಮುಪೇಯುಃ ॥೬॥** ಎಂತಲೂ ಏಳನೆಯ ಆರ್ಯೆಯಲ್ಲಿ **"ಅನ್ಯಚ್ಚ ಭವೇದ್ಭೂಮೇರಹ್ನಾ ಭ್ರಮರಂಹಸಾ ಧ್ವಜಾದೀನಾಮ್"। ನಿತ್ಯಂ ಪಶ್ಚಾತ್ಪ್ರೇರಣಮಥಾಲ್ಪಗಾ ಸ್ಯಾತ್ಕಥಂ ಭ್ರಮತಿ ॥೭॥** ಎಂತಲೂ ಅಂದಿದ್ದಾನೆ. ಅಂದರೆ ಕೆಲವರು ಭೂಮಿಯು ತಿರುಗುವ ಯಂತ್ರದಲ್ಲಿಟ್ಟಂತೆ ತಿರುಗುತ್ತದೆಂತಲೂ ನಕ್ಷತ್ರಗಣವು ತಿರುಗುವುದಿಲ್ಲವೆಂತಲೂ ಅನ್ನುತ್ತಾರೆ. ಹಾಗಿದ್ದರೆ ಆಕಾಶಕ್ಕೆ ಹಾರಿದ

ಹಕ್ಕಿಗಳು ಆಕಾಶದಿಂದ ಮರಳಿ ತಮ್ಮ ಗೂಡಿಗೆ ಬರಲಾರವು. ಅಲ್ಲದೇ ಭೂಮಿಯು ದಿನಕ್ಕೊಂದು ಸುತ್ತನ್ನು ತೆಗೆಯುತ್ತದೆಂದಾರೆ ಅದರ ಭ್ರಮಣದ ವೇಗಕ್ಕೆ ಧ್ವಜಾದಿಗಳು ನಿರಂತರವಾಗಿ ಪಶ್ಚಿಮಕ್ಕನೇ ಹಾರುತ್ತಿರಬೇಕಾಗುವುದು; ಅಥವಾ ಭೂಮಿಯು ಬಹಳ ಮೆಲ್ಲಗೆ ತಿರುಗುವುದು ಎಂದಾದರೆ ಅದು ಒಂದು ದಿನದೊಳಗೆ ಒಂದು ಸುತ್ತನ್ನು ಹೇಗೆ ತೆಗೆಯುವುದು? ಎಂದು ಪ್ರಶ್ನಿಸಿದ್ದಾನೆ. ಆಚಾರ್ಯ ವರಾಹಮಿಹಿರನು ಮಾತ್ರವಲ್ಲ ಅವನ ತರುವಾಯದ ಎಲ್ಲ ಜ್ಯೋತಿಷಿಗಳು ಆಚಾರ್ಯ ಆರ್ಯಭಟನ ಭೂಭ್ರಮಣ ಸಿದ್ಧಾಂತವನ್ನು ಖಂಡಿಸಿದ್ದಾರೆ.

ಇನ್ನು ಕೊನೆಯದಾಗಿ ವೈದಿಕ ಗ್ರಂಥಗಳಲ್ಲಿ ನಕ್ಷತ್ರಪುಂಜಗಳಿಗಾಗಿ ನಿರ್ಧರಿಸಿದ ದೇವತೆಗಳ ಸಂಬಂಧವಲ್ಲಿ ಬೇರೆ ಕೆಲವು ವಿವರಗಳನ್ನು ಕೊಡಬೇಕಾಗಿದೆ. ಚಾಂದ್ರನಕ್ಷತ್ರಗಳ ಸಂಖ್ಯೆಯು ಮೂಲದಲ್ಲಿ ಮೂವತ್ತಮೂರಾಗಿದ್ದಿತೆಂದು– ಅದಕ್ಕೆ ಸಂಬಂಧಪಟ್ಟ ಇತರ ವಿವರಗಳೊಂದಿಗೆ – ಹಿಂದೆ ಹೇಳಿದೆ. ಹಾಗೆಯೇ ಬ್ರಾಹ್ಮಣ ಗ್ರಂಥಗಳಲ್ಲಿ ನಕ್ಷತ್ರಗಳನ್ನು ದೇವತೆಗಳು ಮತ್ತು ಅಸುರರೆಂದು ಕರೆದು ಅವರು ಪ್ರಜಾಪತಿಯ ಮಕ್ಕಳೆಂದೂ ಅಸುರರು ಸ್ವರ್ಗಕ್ಕೇರಲು-ದೇವತೆಗಳೊಂದಿಗೆ ಸ್ಪರ್ಧಿಸುತ್ತಿದ್ದರೆಂದು ವರ್ಣಿಸಿರುವುದನ್ನೂ ಹಿಂದೆ ಹೇಳಿದೆ. ಅದರ ಮೇಲಿಂದ ಆ ಕಾಲದಲ್ಲಿ ಚಾಂದ್ರ ನಕ್ಷತ್ರಗಳಿಗೆ ಕೃತ್ತಿಕಾ, ರೋಹಿಣೀ ಮೊದಲಾದ ಹೆಸರುಗಳಿರಲಿಲ್ಲವೆಂದು ಮತ್ತು ಕೆಲವು ನಕ್ಷತ್ರಗಳನ್ನು ಅಸುರರ ಹೆಸರುಗಳಿಂದಲೂ ಕೆಲವು ನಕ್ಷತ್ರಗಳನ್ನು ದೇವತೆಗಳ ಹೆಸರಿನಿಂದಲೂ ಕರೆಯುತ್ತಿದ್ದರೆಂದು ಸಿದ್ಧವಾಗುತ್ತದೆ. ಆದರೆ ವೇದಾಂಗ ಜ್ಯೋತಿಷದಲ್ಲಿ ನಕ್ಷತ್ರ ಪುಂಜಗಳಿಗಾಗಿ ಯಾವ ಯಾವ ದೇವತೆಗಳ ಹೆಸರುಗಳು ಬಂದಿವೆಯೋ ಅವೇ ಹೆಸರುಗಳು ಪ್ರಾಚೀನ ಕಾಲದಲ್ಲಿಯೂ ಪ್ರಚಲಿತವಿದ್ದುವೆನ್ನಲಾಗುವುದಿಲ್ಲ, ಏಕೆಂದರೆ ವೇದಾಂಗ ಜ್ಯೋತಿಷದಲ್ಲಿ ಬಂದಿರುವ ದೇವತೆಗಳ ಮಾಲಿಕೆಯಲ್ಲಿರುವ ತ್ವಷ್ಟಾ, ನಿರ್ಋತಿ ಮತ್ತು ವರುಣ ಎಂಬ ಹೆಸರುಗಳು ತೈತ್ತಿರೀಯ ಸಂಹಿತೆಯ ೪–೪–೧೦ರಲ್ಲಿ ಬಂದಿರುವ ದೇವತೆಗಳ ಮಾಲಿಕೆಯಲ್ಲಿ ಇಲ್ಲ. ಅಷ್ಟೇ ಅಲ್ಲ ತೈತ್ತಿರೀಯ ಸಂಹಿತೆಯಲ್ಲಾಗಲೀ, ತೈತ್ತಿರೀಯ ಬ್ರಾಹ್ಮಣದಲ್ಲಾಗಲೀ, ವೇದಾಂಗ ಜ್ಯೋತಿಷದಲ್ಲಿಯೇ ಆಗಲೀ ಬಂದಿರುವ ದೇವತೆಗಳ ಸಂಖ್ಯೆಯು ಮಾತ್ರ ಇಪ್ಪತ್ತೇಳಾಗಿದೆಯೇ ಹೊರತು ದೇವತೆಗಳು ಇಪ್ಪತ್ತೇಳಾಗಿರುವುದಿಲ್ಲ, ಅಂದರೆ "ವಿಶ್ವೇದೇವಾ" ಮತ್ತು "ಇಂದ್ರಾಗ್ನೀ" ಎಂಬವುಗಳು ಒಂಟಿ ದೇವತೆಗಳಲ್ಲ. ಆದುದರಿಂದ ಅವುಗಳನ್ನು ಇಪ್ಪತ್ತೇಳರಿಂದ ಬಿಡಬೇಕಾಗುತ್ತದೆ. ಇನ್ನುಳಿದ ಇಪ್ಪತ್ತೈದು ಹೆಸರುಗಳಲ್ಲಿ ೧. **ಅಗ್ನಿ; ೨. ಅಜಏಕಪಾದ್; ೩. ಅರ್ಯಮಾ; ೪. ಅಹಿರ್ಬುಧ್ನಿಯ; ೫. ಇಂದ್ರ; ೬. ತ್ವಷ್ಟಾ; ೭- ಪೂಷಾ; ೮. ಪ್ರಜಾಪತಿ; ೯. ಬೃಹಸ್ಪತಿ; ೧೦. ಭಗ; ೧೧. ಮಿತ್ರ; ೧೨. ಯಮ; ೧೩. ರುದ್ರ; ೧೪. ವರುಣ; ೧೫. ವಸು; ಮತ್ತು ೧೬. ವಾಯು** ಎಂಬ ಹದಿನಾರು ಹೆಸರುಗಳು

ಅಗ್ನಿಯವೇ ಆಗಿವೆ.[1] ಇನ್ನುಳಿವ ಹೆಸರುಗಳಲ್ಲಿ ವಿಷ್ಣು ಮತ್ತು ಸವಿತಾ ಎಂಬವುಗಳು ಸೂರ್ಯನ ಹೆಸರುಗಳಾಗಿವೆ. ಆದುದರಿಂದ ದೇವತೆಗಳ ಮಾಲಿಕೆಯೊಳಗಿನ ಪರ್ಯಾಯ ನಾಮಗಳನ್ನು ಬಿಟ್ಟರೆ **"ಅಗ್ನಿ; ಅದಿತಿ; ಅಶ್ವಿನೌ, ಆಪಃ, ನಿರ್ಋತಿ; ಪಿತರಃ; ಸರ್ಪಾಃ; ಸವಿತಾ ಮತ್ತು ಸೋಮಃ"** ಎಂಬ ಒಂಭತ್ತು ಹೆಸರುಗಳು ಮಾತ್ರ ಉಳಿಯುತ್ತವೆ. ಅವುಗಳಲ್ಲಿ ಅದಿತಿ, ಅಶ್ವಿನೌ, ಆಪಃ ಮತ್ತು ಸರ್ಪಾಃ ಎಂಬವುಗಳು ಮಾತ್ರ ಬಹಳ ಪ್ರಾಚೀನವಾಗಿವೆ ಎನ್ನಬಹುದು. ಅಂದರೆ ಮೊತ್ತ ಮೊದಲು ಆರ್ಯಜನರು ನಕ್ಷತ್ರಗಳನ್ನು "ದೇವತೆಗಳು" ಎಂಬ ಸಾಮಾನ್ಯ ಹೆಸರಿನಿಂದ ಕರೆಯುತಿದ್ದು ತರುವಾಯ ಅವುಗಳನ್ನು ದೇವನಕ್ಷತ್ರಗಳು ಮತ್ತು ಅಸುರ ನಕ್ಷತ್ರಗಳೆಂದು ವಿಭಜಿಸಿದರೆಂತಲೂ, ಕಾಲಕ್ರಮೇಣ ಒಂದೊಂದೇ ನಕ್ಷತ್ರಪುಂಜಕ್ಕೆ ಬೇರೆ ಬೇರೆ ಹೆಸರುಗಳನ್ನು ಕೊಟ್ಟರೆಂತಲೂ ಹೇಳಬಹುದು. ಆ ಕಾಲದಲ್ಲಿ ಅವರು ಕೆಲವು ನಕ್ಷತ್ರಗಳನ್ನು ತಿಷ್ಯ, ಅದಿತಿ, ಆಪಃ, ರೇವತೀ, ಶತಭಿಷಕ್, ಸರ್ಪಾಃ ರೋಹಿಣೀ, ಕೃತ್ತಿಕಾ ಮೊದಲಾದ ಹೆಸರುಗಳಿಂದ ಕರೆದಿದ್ದರೆನ್ನಬಹುದು. ವ್ಯವಸ್ಥಿತವಾದ ಯಜ್ಞಸಂಸ್ಥೆಯು ಸ್ಥಾಪಿತವಾದ ತರುವಾಯ ಅವರು ನಕ್ಷತ್ರಗಳಿಗೂ ಆಹುತಿಗಳನ್ನು ಅರ್ಪಿಸುವ ಸಲುವಾಗಿ ನಕ್ಷತ್ರೇಷ್ಟಿಗಳನ್ನು ಜರುಗಿಸತೊಡಗಿದಾಗ ಪ್ರತಿಯೊಂದು ನಕ್ಷತ್ರಪುಂಜಕ್ಕೆ ಒಂದರಂತೆ ದೇವತೆಗಳನ್ನು ನಿರ್ಧರಿಸಿದರೆನ್ನಬಹುದು. ಆದರೆ ದೇವತೆಗಳನ್ನು ನಿರ್ಧರಿಸುವ ಹಂತಕ್ಕೆ ತಲುಪುವಾಗ ಇಪ್ಪತ್ತೇಳು ನಕ್ಷತ್ರಗಳ ಗಣನೆಯು ಪ್ರಚಲಿತವಾಗಿ ಬಹಳ ಕಾಲ ಸಂದಿದ್ದಿತೆಂಬುದರಲ್ಲಿ ಸಂದೇಹವಿಲ್ಲ.

ದೇವತೆಗಳ ಹೆಸರುಗಳ ಮಾಲಿಕೆಯಲ್ಲಿ ಅಗ್ನಿಯ ಹೆಸರುಗಳು ಹದಿನಾರು ಇರುವುದರ ಕಾರಣವು, ಬಹುತರವಾಗಿ ಆ ಕಾಲದ ಋತ್ವಿಜರು ಪ್ರತಿಯೊಂದು ನಕ್ಷತ್ರದ ಉದಯದೊಂದಿಗೆ ಅಗ್ನಿಯನ್ನು ಬೇರೆ ಬೇರೆ ಹೆಸರುಗಳಿಂದ ಕರೆಯುತಿದ್ದುದಾಗಿರಬಹುದು.

---

[1] ಋಗ್ವೇದದ ೧-೩೧-೩ರಲ್ಲಿ ಅಗ್ನಿಯನ್ನು "ವಸೋ = ವಸುವೇ" ಎಂದು ಸಂಬೋಧಿಸಲಾಗಿದೆ. ಮತ್ತು ತೈತ್ತಿರೀಯ ಬ್ರಾಹ್ಮಣದ ೩-೧-೧-೧೧ರಲ್ಲಿ ವಾಯುವನ್ನು ಮಾತರಿಶ್ವಾ ಎಂದಿದೆ. ಅದು ಅಗ್ನಿಯ ಹೆಸರಾಗಿದೆ.

೭. ವೇದಮಂತ್ರಗಳ ಪ್ರಾಚೀನತೆ

ಶಕವರ್ಷ ೧೭೬೯ರಲ್ಲಿ ಬ್ರಿಟಿಷ್ ಈಸ್ಟ್ ಇಂಡಿಯಾ ಕಂಪೆನಿಯ ಸಂಚಾಲಕರು ಇಂಗ್ಲಾಂಡಿನ ಆಕ್ಸ್‌ಫರ್ಡ್ ವಿಶ್ವವಿದ್ಯಾಲಯದಲ್ಲಿ ಸಂಸ್ಕೃತದ ಪ್ರಾಧ್ಯಾಪಕರಾಗಿದ್ದ ಫ್ರೆಡ್ರಿಕ್ ಮೆಕ್ಸ್‌ಮುಲ್ಲರ್ ಎಂಬ ಜರ್ಮನ್ ವಿದ್ವಾಂಸರನ್ನು ಹಿಂದುಗಳ ಋಗ್ವೇದ ಸಂಹಿತೆಯನ್ನು ಪರಿಷ್ಕರಿಸಿ ಸಂಪಾದಿಸುವ ಕಾರ್ಯದಲ್ಲಿ ನಿಯೋಜಿಸಿದರು, ಮತ್ತು ಮೆಕ್ಸ್‌ಮುಲ್ಲರರು ತನ್ನ ಸಂಸ್ಕೃತ ಭಾಷಾ ಪಾಂಡಿತ್ಯದ ಬಲದಿಂದ ಹಾಗೂ ಬಹಳ ಪರಿಶ್ರಮದಿಂದ ಋಗ್ವೇದದ ಪರಿಷ್ಕರಣವನ್ನು ಸಾಯಣಾಚಾರ್ಯರ ಭಾಷ್ಯದೊಂದಿಗೆ ಉತ್ಕೃಷ್ಟ ರೀತಿಯಿಂದ ನಿರ್ವಹಿಸಿದರು, ತರುವಾಯ ಅವರು ಪರಿಷ್ಕರಿಸಿದ ಋಗ್ವೇದ ಸಂಹಿತೆಯು ನಾಲ್ಕು ಭಾಗಗಳಲ್ಲಿ ಮುದ್ರಿಸಲ್ಪಟ್ಟು ಪ್ರಕಟವಾಯಿತು.

ಮೆಕ್ಸ್‌ಮುಲ್ಲರರ ಅಭಿಪ್ರಾಯದಲ್ಲಿ ಆರ್ಯಜನರು ಸಾಧಾರಣ ಶಕಪೂರ್ವ ೧೬೦೦ವರ್ಷಗಳ ಸುಮಾರಿಗೆ ಪಶ್ಚಿಮ ಆಸ್ಯದಿಂದ ಮುಂದುವರಿದು ಭಾರತ ವರ್ಷವನ್ನು ಪ್ರವೇಶಿಸಿದ್ದರೆಂದಿತ್ತು. ಮತ್ತು ಅವರು ಭಾರತ ವರ್ಷದಲ್ಲಿ ನೆಲಸಿದ ತರುವಾಯವೇ ಋಗ್ವೇದದ ಮಂತ್ರಗಳು ಮತ್ತು ಇತರ ವೈದಿಕ ಸಾಹಿತ್ಯವು ರಚಿಸಲ್ಪಟ್ಟಿದ್ದಿತೆಂದಿತ್ತು. ಹಾಗಾಗಿ ಅವರು ಋಗ್ವೇದದ ನಾಲ್ಕನೆಯ ಭಾಗದಲ್ಲಿ ಬರೆದಿರುದ ಉಪೋದ್ಘಾತದಲ್ಲಿ ಋಗ್ವೇದದ ಮಂತ್ರಗಳು ಅಥವಾ ಛಂದಸ್ಸುಗಳು ಶಕಪೂರ್ವ ೧೩೦೦ ವರ್ಷಗಳ ಸುಮಾರಿನಿಂದ ರಚಿಸಲ್ಪಡತೊಡಗಿದ್ದುವೆಂತಲೂ, ತರುವಾಯ ಇನ್ನೂರು ಇನ್ನೂರು ವರ್ಷಗಳ ಅಂತರದಿಂದ ಆರುನೂರು ವರ್ಷಗಳ ಮಿತಿಯಲ್ಲಿ ಇತರ ವೇದಗಳು. ಬ್ರಾಹ್ಮಣಗಳು ಮತ್ತು ಕಲ್ಪಸೂತ್ರ ಮೊದಲಾದುವುಗಳು ರಚಿಸಲ್ಪಟ್ಟುವೆಂತಲೂ ಪ್ರತಿಪಾದಿಸಿದ್ದಾರೆ. ಮತ್ತು ಅಷ್ಟು ಸಾಹಿತ್ಯವು ಸಿದ್ಧವಾಗಲು ಆರುನೂರು ವರ್ಷಗಳು ಎಷ್ಟು ಮಾತ್ರಕ್ಕೂ ಕಡಿಮೆಯಲ್ಲವೆಂತಲೂ ವಾದಿಸಿದ್ದಾರೆ. ವೈದಿಕ ಸಾಹಿತ್ಯವು ಎಷ್ಟು ವಿಶಾಲವಾಗಿದೆಯೆಂಬುವರ ವಾಸ್ತವಿಕ ಜ್ಞಾನವಿಲ್ಲದ ಜನರಿಗೆ ಮೆಕ್ಸ್‌ಮುಲ್ಲರರ ಆ ಬಗೆಯ ವಾದವು ಸಮಂಜಸವೆಂದು ತೋರಬಹುದಾದರೂ ವಸ್ತುಸ್ಥಿತಿಯನ್ನು ಅರಿತ ವಿದ್ವಾಂಸರು ಅವರ ವಾದವನ್ನು ಸರ್ವಥಾ ಒಪ್ಪಲಾರರು.

ಹಾಗೆಯೇ ಪಾರಸದ ಪ್ರಾಚೀನ ಲಿಖಿತ ಸಾಹಿತ್ಯದಲ್ಲಿ **"ಹರಯೂ"** ಮತ್ತು **"ಹರಕ್ವಿತಿ"** ಎಂಬ ನದಿಗಳ ಉಲ್ಲೇಖಗಳಿರುವುದನ್ನು ಮತ್ತು ಪಾರಸಿಗಳ ಪ್ರಾಚೀನ ಧರ್ಮಗ್ರಂಥ "ಜೆಂದ ಅವೆಸ್ತ"ದಲ್ಲಿ ವೇದಮಂತ್ರಗಳ ರೂಪಾಂತರಗಳು ಮತ್ತು ಯಜ್ಞಗಳ ವಿವರಗಳು ಇವೆಯೆಂಬುದನ್ನು ಅರಿತ ಮೆಕ್ಸ್‌ಮುಲ್ಲರರು ತನ್ನ "ಭಾಷಾ ಶಾಸ್ತ್ರದ ಮೇಲಿನ" ಉಪನ್ಯಾಸಗಳು" (Lectures on the Science of

Language) ಎಂಬ ಗ್ರಂಥದಲ್ಲಿ "ಆರ್ಯ" ಎಂಬ ಶಬ್ದದ ಬಳಕೆಯ ಸಂಬಂಧದಲ್ಲಿ ಚರ್ಚಿಸುವಾಗ ಭಾರತವರ್ಷದಲ್ಲಿ ಆರ್ಯಶಬ್ದದ ಪ್ರಯೋಗವು ಮರೆಯಾಗಿದೆಯಾದರೂ ಪಾರಸಿಗಳಲ್ಲಿ ಆ ಶಬ್ದದ ಪ್ರಯೋಗವು ಇಂದಿಗೂ ಉಳಿದುಕೊಂಡಿದೆಯೆಂತಲೂ ಪಾರಸಿಗಳು ಕೂಡ ಮೊದಲು ಭಾರತವರ್ಷದಲ್ಲಿಯೇ ನೆಲಸಿದ್ದರೆಂತಲೂ ತರುವಾಯ ಆರ್ಯಜನರಲ್ಲಿ ಒಡಕು ಹುಟ್ಟಿದುದರಿಂದ ಅವರು ಭಾರತವರ್ಷದಿಂದ ವಲಸೆ ಹೋಗಿ ಪಾರಸದಲ್ಲಿ ನೆಲಸಿದ್ದರೆಂತಲೂ ಹೇಳಿದ್ದಾರೆ.[1] ಆದರೆ ಪಾರಸಿಗಳು ಭಾರತವರ್ಷದಿಂದ ವಲಸೆ ಹೋದವರೆಂಬ ಮೆಕ್ಸ್‌ಮುಲ್ಲರರ ಕಲ್ಪನೆಯನ್ನು ಸಿದ್ಧಪಡಿಸುವ ಯಾವ ಪ್ರಮಾಣವೂ ಇಲ್ಲ. ಆದುದರಿಂದ ಮೆಕ್ಸ್‌ಮುಲ್ಲರರು ತನ್ನ ಮೊದಲಿನ ಕಲ್ಪನೆಯನ್ನು ಅಂದರೆ ಆರ್ಯಜನರು ಭಾರತವರ್ಷದಲ್ಲಿ ನೆಲಸಿದ ತರುವಾಯ ಶಕಪೂರ್ವ ೧೩೦೦ ವರ್ಷಗಳ ಈಚೆ ಕಡೆಯಿಂದ ವೇದಮಂತ್ರಗಳು ರಚಿಸಲ್ಪಟ್ಟಿದ್ದುವೆಂಬುದನ್ನು ಸರಿಯೆಂದು ಸಾಧಿಸುವ ಸಲುವಾಗಿಯೇ ಪಾರಸಿಗಳು ಭಾರತದಿಂದ ಪಾರಸಕ್ಕೆ ವಲಸೆ ಹೋಗಿದ್ದರೆಂಬ ಕಲ್ಪನೆಯನ್ನು ಮುಂದೆ ತಂದಿದ್ದರೆನ್ನಬೇಕಾಗುತ್ತದೆ.

ಅರ್ಥಾತ್ ಆರ್ಯಜನರು ಶಕಪೂರ್ವ ೧೬೦೦ ವರ್ಷಗಳ ಸುಮಾರಿಗೆ ಭಾರತ ವರ್ಷವನ್ನು ಪ್ರವೇಶಿಸಿದ್ದರೆಂಬ ಮತ್ತು ವೇದಮಂತ್ರಗಳು ಭಾರತ ವರ್ಷದಲ್ಲಿಯೇ ರಚಿಸಲ್ಪಟ್ಟಿದ್ದುವೆಂಬ ಹಾಗೂ ಪಾರಸಿಗಳು ಭಾರತವರ್ಷದಿಂದ ಪಾರಸಕ್ಕೆ ವಲಸೆ ಹೋದವರೆಂಬ ಮೆಕ್ಸ್‌ಮುಲ್ಲರರ ಕಲ್ಪನೆಗಳು ಮೂಲದಲ್ಲಿಯೇ ತಪ್ಪಾಗಿವೆ ಅಥವಾ ವಸ್ತುಸ್ಥಿತಿಗೆ ಸಂಪೂರ್ಣ ವಿರುದ್ಧವಾಗಿವೆ. ಹೇಗೆಂದರೆ ಆರ್ಯಜನರ ಯಜ್ಞಗಳು ಮತ್ತು ಋಗ್ವೇದದೊಳಗಿನ ಪ್ರಾಚೀನ ಮಂತ್ರಗಳು ಪರಸ್ಪರ ಸಂಬಂಧವಾಗಿದ್ದು ಮಂತ್ರಗಳನ್ನು ಬಿಟ್ಟು ಯಜ್ಞಗಳಾಗಲೀ, ಯಜ್ಞಗಳನ್ನು ಬಿಟ್ಟು ಮಂತ್ರಗಳಾಗಲೀ, ಸ್ವತಂತ್ರವಾಗಿರಲು ಸಾಧ್ಯವೇ ಇಲ್ಲ. ಯಜ್ಞಸಂಸ್ಥೆಯು ಅತ್ಯಂತ

---

[1] In India, as we saw, the name Arya, as a national name fell into oblivion in later times, and preserved in the term, "Aryavarta", the abode of Aryans. But it was more faithfully preserved by the Zoroastrians who migrated from India, to the north-west and whose religion has been preserved to us in the Zend-Avesta though in fragments only. page 277.

The Zoroastrians were a colony from Northern India. They had been together for a time with the people whose sacred songs have been preserved to us in the Vedas. A schism took place and the Zoroastrian migrated westwards to Archosia and Persia pages 287-88.

ಪ್ರಾಚೀನವಾಗಿದ್ದು ಆರ್ಯಜನರ ಎಲ್ಲ ಪಂಗಡಗಳು ಒಟ್ಟಿಗೆ ಒಂದೇ ಸ್ಥಳದಲ್ಲಿ ನೆಲಸಿದ್ದಾಗಲೇ ಪ್ರಚಲಿತವಾಗಿದ್ದಿತೆಂಬುದಕ್ಕೆ ಮತ್ತು ಯಜ್ಞಗಳಲ್ಲಿ ಋಗ್ವೇದದ ಮಂತ್ರಗಳು ಪ್ರಾಚೀನ ಕಾಲದಿಂದಲೂ ಪ್ರಯೋಗಿಸಲ್ಪಡುತ್ತಿದ್ದುವೆಂಬುದಕ್ಕೆ ಆರ್ಯ ವರ್ಗದ ಯವನರಲ್ಲಿ, ರೋಮಿಯರಲ್ಲಿ, ಶಕಜನರಲ್ಲಿ ಮತ್ತು ಪಾರಸಿ ಜನರಲ್ಲಿ ಯಜ್ಞಗಳು ಪ್ರಚಲಿತವಿದ್ದುದು. ಪಾರಸಿಗಳ ಅವೆಸ್ತದಲ್ಲಿ ಋಗ್ವೇದ ಮಂತ್ರಗಳ ರೂಪಾಂತರಗಳಿರುವುದು ಸಿಂಧೂ ಕಣಿವೆಯ ಅಗೆತಗಳಲ್ಲಿ ದೊರಕಿದ ಹಾಲುಗಲ್ಲಿನ ಬಿಲ್ಲೆಗಳ ಮೇಲೆ ಆರ್ಯ ಜನರ ಮುಖ್ಯ ಕುರುಹುಗಳಾದ + 卐 卍 ಈ ಚಿಹ್ನೆಗಳು ಮತ್ತು ವೇದಮಂತ್ರಗಳ ಸಾಂಕೇತಿಕ ಚಿತ್ರಗಳಿರುವುದು. ಅಂಥ ಹಲವು ಬಿಲ್ಲೆಗಳು ಪಶ್ಚಿಮ ಆಸ್ಯದ ಸುಮೇರದಲ್ಲಿ ದೊರಕಿದುದು ಮತ್ತು ಕಿರಿಯ ಆಸ್ಯದ ಬೋಗಾರಝ್ ಕೋಈ ಎಂಬ ಹಳ್ಳಿಯಲ್ಲಿ ದೊರಕಿದ ಶಕಪೂರ್ವ ೧೫೦೦ ವರ್ಷಗಳ ಹಿಂದಿನ ಲಿಖಿತ ಫಲಕಗಳಲ್ಲಿ ಇಂದ್ರ, ವರುಣ, ನಾಸತ್ಯ ಮೊದಲಾದ ವೈದಿಕ ದೇವತೆಗಳ ಹೆಸರುಗಳಿರುವುದು ಆರ್ಯ ಜನರು ಶಕಪೂರ್ವ ೩೫೦೦ ವರ್ಷಗಳಷ್ಟು ಹಿಂದೆಯೇ ಭಾರತ ವರ್ಷದಲ್ಲಿ ನೆಲಸಿದ್ದರೆಂಬುದರ ಮತ್ತು ಪಶ್ಚಿಮ ಭಾರತದಿಂದ ಕಿರಿಯ ಆಸ್ಯದ ತನಕ ಹರಡಿರುವ ಸಮಸ್ತ ಪ್ರದೇಶದಲ್ಲಿ ನೆಲಸಿದ್ದ ಆರ್ಯಜನರೊಳಗೆ ನಿತ್ಯ ಸಂಪರ್ಕವಿದ್ದಿತೆಂಬುದರ ಮತ್ತು ಆ ಇಡೀ ಪ್ರದೇಶದಲ್ಲಿ ವೇದ ಮಂತ್ರಗಳು ಪ್ರಚಲಿತವಿದ್ದುವೆಂಬುದರ ಅತ್ಯಂತ ದೃಢವಾದ ಪ್ರಮಾಣಗಳಾಗಿವೆ.

ಯವನರು ಮತ್ತು ರೋಮಿಯರು ಕ್ರೈಸ್ತರಾಗಿ ಮಾರ್ಪಟ್ಟುದರಿಂದ ಅವರಲ್ಲಿ ಈಗ ಪ್ರಾಚೀನ ವೈದಿಕ ಸಾಹಿತ್ಯವು ಉಳಿದಿಲ್ಲವಾದರೂ ಪಾರಸಿಗಳ ಅವೆಸ್ತವು ಮತ್ತು ಸುಮೇರದಲ್ಲಿ ದೊರಕಿದ ಸಿಂಧೂ ಮಾದರಿಯ ಬಿಲ್ಲೆಗಳು ಈಗಲೂ ಉಪಲಬ್ಧವಿರುವುದರಿಂದ ಮೆಕ್ಸಮುಲ್ಲರರು ವೇದಮಂತ್ರಗಳ ರಚನಾ ಕಾಲದ ಮತ್ತು ಆರ್ಯಜನರು ಭಾರತವರ್ಷಕ್ಕೆ ಬಂದ ಕಾಲದ ಸಂಬಂಧದಲ್ಲಿ ಮುಂದೆ ತಂದ ಕಲ್ಪನೆಗಳು ಪ್ರಮಾಣ ವಿರುದ್ಧವಾದವುಗಳೆಂದು ಸ್ಪಷ್ಟವಾಗಿ ಸಿದ್ಧವಾಗುತ್ತದೆ. ಹಾಗಿದ್ದರೂ ಅವರ ವಾದವನ್ನು ಕೂಲಂಕುಷವಾಗಿ ವಿಮರ್ಶಿಸುವ ಅವಶ್ಯಕತೆ ಇದ್ದೇ ಇದೆ.

ಮೆಕ್ಸ್‌ಮುಲ್ಲರರು ಋಗ್ವೇದದ ನಾಲ್ಕನೆಯ ಭಾಗದ ಉಪೋದ್ಘಾತದಲ್ಲಿ ಜ್ಯೋತಿಷದ ನೆರವಿನಿಂದ ಋಗ್ವೇದ ಮಂತ್ರಗಳ ರಚನಾ ಕಾಲವನ್ನು ನಿರ್ಧರಿಸಲು ಸಾಧ್ಯವಿದೆಯೇ? ಎಂಬ ಪ್ರಶ್ನೆಯನ್ನೆತ್ತಿದ್ದಾರೆ. ಮತ್ತು ವೇದಾಂಗ ಜ್ಯೋತಿಷದಲ್ಲಿ ಉಲ್ಲೇಖಿಸಲಾದ – ಧನಿಷ್ಠಾದಿಯಲ್ಲಿ ಸೂರ್ಯನ ಉತ್ತರಾಯಣವೂ ಆಶ್ಲೇಷಾರ್ಧದಲ್ಲಿ ದಕ್ಷಿಣಾಯನವೂ ಪ್ರಾರಂಭವಾಗುತ್ತಿದ್ದ ಕಾಲವು ವಾಸ್ತವವಾಗಿ ಶಕಪೂರ್ವ-

೧೪೮೮ ವರ್ಷಗಳಾದರೂ, ಅವರು ಆ ಕಾಲವು ಶಕಪೂರ್ವ ೧೨೦೦ ವರ್ಷಗಳೆಂದು ಸಾಧಿಸಲು ಬಹಳವಾಗಿ ಶ್ರಮಿಸಿದ್ದಾರೆ. ಮತ್ತು ವೇದಮಂತ್ರಗಳು ಆ ಕಾಲಕ್ಕಿಂತ ಪ್ರಾಚೀನವಾದವುಗಳೆಂದು ಸಿದ್ಧಪಡಿಸುವ ಆಂತರಿಕ ಪ್ರಮಾಣಗಳು ಇಲ್ಲವಾದರೆ ವೇದಾಂಗ ಜ್ಯೋತಿಷದೊಳಗಿನ ಆ ಉಲ್ಲೇಖಕ್ಕೆ ಯಾವ ಮಹತ್ವವೂ ಇಲ್ಲವೆಂತಲೂ, ಆ ಉಲ್ಲೇಖವು ವಾಸ್ತವಿಕ ನಿರೀಕ್ಷಣದ ಫಲವೆಂಬುದೂ ಪೂರ್ಣ ಸತ್ಯವಾಗಿರಬಹುದಾದರೂ, ಆ ಕಾಲದಲ್ಲಿ ಋಗ್ವೇದದ ಒಂದೇ ಒಂದು ಮಂತ್ರವಾದರೂ ಇದ್ದಿತೆಂಬುದರ ಇಲ್ಲವೇ ಕೆಲವರು ವಿವೇಚನೆ ಮಾಡದನೇ ಬರಿಯ ದಿಟ್ಟತನದಿಂದ ವಾದಿಸಿರುವಂತೆ ಋಗ್ವೇದ ಮಂತ್ರಗಳ ಸಂಗ್ರಹವು[1] ಅಥವಾ ಋಗ್ವೇದ ಸಂಹಿತೆಯ ಸಂಕಲನವು ಮುಗಿದಿದ್ದಿತೆಂಬುದರ ಕಿಂಚಿತ್ತಾದ ಸೂಚನೆಯಾದರೂ ಎಲ್ಲಿದೆ? ಎಂದು ಪ್ರಶ್ನಿಸಿದ್ದಾರೆ.

ಆದರೆ ಮೆಕ್ಸ್‌ಮುಲ್ಲರರ ಆ ಬಗೆಯ ವಾದವು ಅರ್ಥಶೂನ್ಯವಾದುದು ಅಥವಾ ಹೆಚ್ಚಿನ ಅನ್ವೇಷಣವನ್ನು ಮತ್ತು ಪರಿಶೀಲನವನ್ನು ಮಾಡದನೇ ಮುಂದೆ ತಂದುದೆನ್ನಬೇಕಾಗಿದೆ. ಏಕೆಂದರೆ ವೇದಾಂಗ ಜ್ಯೋತಿಷದ ಮೂರನೆಯ ಶ್ಲೋಕದಲ್ಲಿ ಆ ಜ್ಯೋತಿಷದ ಉದ್ದೇಶವು ಯಜ್ಞಗಳ ಕಾಲವನ್ನು ನಿರ್ಧರಿಸುವುದಾಗಿದೆಯೆಂತಲೂ, ಮೂವತ್ತಾರನೆಯ ಶ್ಲೋಕದಲ್ಲಿ ವೇದಗಳು ಯಜ್ಞಗಳಿಗಾಗಿಯೇ ಪ್ರವೃತ್ತವಾದವುಗಳೆಂತಲೂ ಸ್ಪಷ್ಟವಾಗಿ ಹೇಳಿರುವುದರಿಂದ – ವೇದಮಂತ್ರಗಳು ಮತ್ತು ವೇದಗಳ ಸಂಹಿತೆಗಳು ವೇದಾಂಗ ಜ್ಯೋತಿಷದ ರಚನಾ ಕಾಲಕ್ಕಿಂತ ಮೊದಲಿನಿಂದಲೂ ಇದ್ದುವೆಂಬ ಆಂತರಿಕ ಪ್ರಮಾಣಗಳಿವೆಯೆಂಬುದು ತಾನಾಗಿ ಸಿದ್ಧವಾಗುತ್ತದೆ.

ಅಥವಾ ಅವರ ವಾದದ ಅರ್ಥವು – ಅಂಥ ಪ್ರಮಾಣಗಳು ಋಗ್ವೇದದಲ್ಲಿ ಇಲ್ಲ–ಎಂಬುದಾದರೆ ಅವರು ಋಗ್ವೇದದಲ್ಲಿ ಬಂದಿರುವ ಬೃಹಸ್ಪತಿಯ ಮತ್ತು ಅದಿತಿಯ ಐತಿಹ್ಯಗಳನ್ನು ಕಡೆಗಣಿಸಿದ್ದಾರೆನ್ನಬೇಕಾಗುತ್ತದೆ. ಏಕೆಂದರೆ ಬೃಹಸ್ಪತಿ ಮತ್ತು ಅದಿತಿಯರು ಅನುಕ್ರಮವಾಗಿ ಪುಷ್ಯ ಮತ್ತು ಪುನರ್ವಸೂ ನಕ್ಷತ್ರಗಳ ಪ್ರತಿನಿಧಿಗಳಾಗಿದ್ದಾರೆ. ಯಾವುದೊಂದು ನಕ್ಷತ್ರವು ಗಣನೆಯಲ್ಲಿ ಮೊದಲನೆಯದಾಗಿರುವುದರ ಅರ್ಥವು ಆ ಕಾಲದಲ್ಲಿ ವಸಂತ ಸಂಪಾತವು ಅದರಲ್ಲಿ ಘಟಿಸುತಿತ್ತೆಂಬುದಾಗಿದೆ.

---

1. But I feel bound to remark that unless there was internal evidence that the Vedic hymns reached back to that remote antiquity this passage in the Gyotisha would by itself carry no weight whatsoever. First, it might be perfectly true that such an observation was really made, as recorded in the Gyotisha, but where is there the slightest hint that at the same time a single Vedic hymn had been in existence or as has been asserted with greatest boldness than discretion, that a collection of Vedic hymns was completed. ?

ಾ! ಆಲ್ಬರ್ತ್‌ವೇಬರ್ ಕೂಡ ಅದೇ ಅರ್ಥವನ್ನು ಗ್ರಹಿಸಿದ್ದಾರೆ, ಋಗ್ವೇದ ಲ್ಲಾದರೋ ಶಿಷ್ಯನು ತನ್ನ ಸ್ಥಾನದಿಂದ ಕದಲುವುದೇ ಇಲ್ಲವೆಂಬ ಮತ್ತು ಅದಿತಿಯು ತರ ದೇವತೆಗಳಿಗಿಂತ ಮೊದಲು ಹುಟ್ಟಿದ್ದಳೆಂಬ ಉಲ್ಲೇಖಗಳಿವೆ. ಆ ಉಲ್ಲೇಖ ಳಿಂದ ಋಗ್ವೇದದ ಮಂತ್ರಗಳು ವೇದಾಂಗ ಜ್ಯೋತಿಷದ ಕಾಲಕ್ಕಿಂತ ಸಾವಿರ ಾವಿರ ವರ್ಷಗಳಿಗೆ ಪ್ರಾಚೀನವಾದುವುಗಳೆಂದು ಸಿದ್ಧವಾಗುತ್ತದೆ, ಆದುದರಿಂದ ಮೆಕ್ಸ್‌ಮುಲ್ಲರರು ಋಗ್ವೇದದ ಮಂತ್ರಗಳು ಶಕಪೂರ್ವ ೧೨೦೦ ವರ್ಷಗಳಿಗಿಂತ ಾಚೀನವೆಂದು ಸಿದ್ಧಪಡಿಸುವ ಆಂತರಿಕ ಪ್ರಮಾಣಗಳಿಲ್ಲವೆಂದುದರಲ್ಲಿ ಹುರುಳಿಲ್ಲ ವೆನ್ನಬೇಕಾಗುತ್ತದೆ.

ಶಕವರ್ಷ ೧೮೧೫ರಲ್ಲಿ ಪ್ರೊ. ಹರ್ಮನ್ ಜಾಕೋಬಿ ಎಂಬ ಜರ್ಮನ್ ವಿದ್ವಾಂಸರು "ಇಂಡಿಯನ್ ಏಂಟಿಕ್ವೆರಿ" ಎಂಬ ಪತ್ರಿಕೆಯಲ್ಲಿ ಪ್ರಾರಂಭಿಸಿದ ಒಂದು ಲೇಖನ ಮಾಲೆಯಲ್ಲಿ ಜ್ಯೋತಿಷದ ನೆರವಿನಿಂದ ಋಗ್ವೇದದ ಕೆಲವು ಮಂತ್ರಗಳು ಶಕಪೂರ್ವ ೪೦೦೦ ವರ್ಷಗಳಿಗಿಂತ ಪ್ರಾಚೀನವಾಗಿವೆಯೆಂದು ಪ್ರತಿಪಾದಿಸಿದ್ದರು. ಆದರೆ ಋಗ್ವೇದದ ಮಂತ್ರಗಳನ್ನು ಅಷ್ಟು ಪ್ರಾಚೀನವೆಂದು ಗ್ರಹಿಸಲು ಸಿದ್ಧರಿಲ್ಲದ ಬೋಡೆನ್ ವಿದ್ವಾಂಸ ಪ್ರೊ. ಏ. ಏ. ಮೆಕ್‌ಡೊನೆಲ್ ಅವರು ತಾನು ಬರೆದ "ಸಂಸ್ಕೃತ ಸಾಹಿತ್ಯದ ಇತಿಹಾಸ"ದಲ್ಲಿ ಜಾಕೋಬಿಯವರ ಪ್ರತಿಪಾದನೆಯನ್ನು ಮುಂದಿನಂತೆ ಖಂಡಿಸಿದ್ದಾರೆ:—**"ವೇದಮಂತ್ರಗಳು ಶಕಪೂರ್ವ ೪೦೦೦ ವರ್ಷಗಳಷ್ಟು ಪ್ರಾಚೀನವಾಗಿವೆಯೆಂಬ ಪ್ರೊ. ಜಾಕೋಬಿಯವರ ಪ್ರತಿಪಾದನೆಯು ವೇದಕಾಲಕ್ಕಾಗಿ ನಿರ್ಧರಿಸಿದ ಹಿಂದಿನ ಎಲ್ಲ ಎಣಿಕೆಗಳನ್ನು ತಲೆಕೆಳಗಾಗಿ ಮಾಡಿದೆ. ಅವರ ಪ್ರತಿಪಾದನೆಯು ಋಗ್ವೇದ ಮಂತ್ರಗಳು ರಚಿಸಲ್ಪಟ್ಟ ತರುವಾಯ ಸಂಭವಿಸಿದ ಋತುಗಳ ಪರಿವರ್ತನಗಳಿಗೆ ಸಂಬಂಧಿಸಿದ ಜ್ಯೋತಿರ್ಗಣನೆಯನ್ನು ಆಧರಿಸಿಕೊಂಡಿದೆ. ಆದರೆ ಅವರ ಪ್ರತಿಪಾದನೆಗೆ ಆಧಾರವಾಗಿರುವ ಒಂದು ವೈದಿಕ ಶಬ್ದಕ್ಕೆ ಅವರು ಗ್ರಹಿಸಿದ ಅರ್ಥವು ಸಂದಿಗ್ಧವೂ ಅಸಂಭಾವ್ಯವೂ ಆಗಿರುವುದರಿಂದ ಅವರ ಇಡೀ ಪ್ರತಿಪಾದನೆಯು ವ್ಯರ್ಥವಾಗಿದೆ. ಹೇಗಿದ್ದರೂ ತತ್ಕಾಲದ ಮಟ್ಟಿಗೆ ನಾವು ವೈದಿಕ ಸಾಹಿತ್ಯವು ಯವನರ ಸಾಹಿತ್ಯಕ್ಕಿಂತ ಹೆಚ್ಚು ಪ್ರಾಚೀನವಾಗಿದೆಯೆಂಬುದರಿಂದಲೇ ತೃಪ್ತರಾಗಬೇಕು.**[1]

---

[1] All previous estimates of the antiquity of the Vedic period have been out done by the recent theory of Professor Jacoby of Bonn, who supposes that period goes back at least 4000 B. C. This theory is based on astronomical calculations connected with a change in the beginning of the seasons which, Professor Jacoby thinks has taken place since the time of the Rigveda. The whole estimate is, however, invalidated by the assumption

ಪ್ರೊ. ಜಾಕೋಬಿಯವರು ತನ್ನ ಲೇಖನವನ್ನು ಪ್ರಕಟಿಸುತ್ತಿದ್ದ ಕಾಲದಲ್ಲಿಯೇ ದಿವಂಗತ ಲೋಕಮಾನ್ಯ ಬಾಲಗಂಗಾಧರ ತಿಲಕ ಅವರು ಅದೇ ವರ್ಷ ಲಂಡನಿನಲ್ಲಿ ಸೇರಿದ ಪ್ರಾಚ್ಯ ಸಂಮೇಳನದಲ್ಲಿ ಓದುವ ಸಲುವಾಗಿ ವೇದಮಂತ್ರಗಳ ಪ್ರಾಚೀನತೆಯ ಸಂಬಂಧದಲ್ಲಿ ಒಂದು ಪ್ರಬಂಧವನ್ನು ಬರೆದು ಕಳುಹಿಸಿದ್ದರು. ತರುವಾಯ ಆ ಪ್ರಬಂಧವು "Orion or Researches into the Antiquity of the Vedas" ಎಂಬ ಹೆಸರಿನಲ್ಲಿ ಪ್ರಕಟಿಸಲ್ಪಟ್ಟಿತ್ತು, ಮತ್ತು ಅದರ ವಿಸ್ತೃತವಾದ ಮರಾಠಿ ಭಾಷಾಂತರವು "ವೇದಕಾಲ ನಿರ್ಣಯ" ಎಂಬ ಹೆಸರಿನಲ್ಲಿಯೂ ಪ್ರಕಟವಾಗಿತ್ತು. ಲೋಕಮಾನ್ಯರು ಆ ಗ್ರಂಥದಲ್ಲಿ ಪಾಶ್ಚಾತ್ಯ ವಿದ್ವಾಂಸರು ವೇದ ಮಂತ್ರಗಳ ಪ್ರಾಚೀನತೆಯ ಸಂಬಂಧದಲ್ಲಿ ವ್ಯಕ್ತಗೊಳಿಸಿದ ಅಭಿಪ್ರಾಯಗಳನ್ನು ಸರಿಯಲ್ಲವೆಂದು ನಿರಾಕರಿಸಿದ್ದಾರಲ್ಲದೇ ವೈದಿಕ ಗ್ರಂಥಗಳೊಳಗಿನ ಪ್ರಮಾಣಗಳನ್ನು ಉದಹರಿಸಿ ಸಂಪಾತ ಚಲನದ ಆಧಾರದಿಂದ ಬೇರೆ ಬೇರೆ ಕಾಲಗಳಲ್ಲಿ ಕೃತ್ತಿಕಾ, ರೋಹಿಣೀ, ಮೃಗಶಿರಾ, ಆರ್ದ್ರಾ ಮತ್ತು ಪುನರ್ವಸೂ ನಕ್ಷತ್ರಗಳು ಸಂಪಾತ ಸ್ಥಾನದಲ್ಲಿದ್ದುವೆಂದು ಮತ್ತು ಪುನರ್ವಸೂ ನಕ್ಷತ್ರದ ದೇವತೆಯಾದ ಅದಿತಿಯ ಐತಿಹ್ಯದ ಆಧಾರದಿಂದ ಋಗ್ವೇದದೊಳಗಿನ ಕೆಲವು ಮಂತ್ರಗಳು ಶಕಪೂರ್ವ ೬೦೦೦ ವರ್ಷಗಳಷ್ಟು ಪ್ರಾಚೀನವಾಗಿವೆಯೆಂದು ಪ್ರತಿಪಾದಿಸಿದ್ದಾರೆ.

ಋಗ್ವೇದದಲ್ಲಿರುವ ಅದಿತಿಯ ಐತಿಹ್ಯವು ಶಕಪೂರ್ವ ೬೦೦೦ ವರ್ಷ ಪ್ರಾಚೀನವಾಗಿದೆಯೆಂಬುವರಲ್ಲಿ ಸಂದೇಹವಿಲ್ಲ. ಆದರೆ ಋಗ್ವೇದದಲ್ಲಿ ಅದಕ್ಕಿಂತಲೂ ಪ್ರಾಚೀನವಾದ ಅಂದರೆ ಪುಷ್ಯ ನಕ್ಷತ್ರದಲ್ಲಿ ವಸಂತ ಸಂಪಾತವಿದ್ದುದರ ಸೂಚನೆಯೂ ಇದೆ. ಆರ್ಯಜನರ ಉತ್ತರ ಧ್ರುವ ಪ್ರದೇಶದಲ್ಲಿನ ವಸತಿಯನ್ನು ಹಿನ್ನೆಲೆಯಾಗಿಟ್ಟುಕೊಂಡು ಋಗ್ವೇದದೊಳಗಿನ ವಿಶ್ವೇದೇವತೆಗಳೆಂದರೆ ವಾಸ್ತವವಾಗಿ ನಕ್ಷತ್ರಗಳಾಗಿವೆಯೆಂಬ ತಥ್ಯವನ್ನು ಅರಿತುಕೊಂಡರೆ ಋಗ್ವೇದದ ಮಂತ್ರಗಳಲ್ಲಿ ಅಡಗಿರುವ ಪ್ರಾಚೀನ ಐತಿಹ್ಯಗಳನ್ನು ಮತ್ತು ಅವುಗಳ ಕಾಲವನ್ನು ಕಂಡುಕೊಳ್ಳುವುದು ಬಹಳ ಸುಲಭವಾಗುತ್ತದೆ. ಅಂದರೆ ಉತ್ತರ ಧ್ರುವ ಪ್ರದೇಶದ ಕೆಲವು ಪ್ರಾಕೃತಿಕ ವೈಶಿಷ್ಟ್ಯಗಳನ್ನು ಮತ್ತು ವೈದಿಕ ಆರ್ಯಜನರು ನಕ್ಷತ್ರಗಳಿಗೆ ಅಷ್ಟು ಮಹತ್ವವನ್ನು ಏಕೆ ಕೊಡುತ್ತಿದ್ದರೆಂದು ಅರಿತುಕೊಳ್ಳದಿದ್ದರೆ ವೇದಮಂತ್ರಗಳಲ್ಲಿ ಅಡಗಿರುವ ಐತಿಹ್ಯಗಳನ್ನು ಕಂಡುಹಿಡಿಯಲು ಸಾಧ್ಯವಿಲ್ಲ. ಆದುದರಿಂದ ಇಲ್ಲಿ ಮುಂದೆ ಉತ್ತರ ಧ್ರುವ ಪ್ರದೇಶಕ್ಕೆ ಸಂಬಂಧಪಟ್ಟ ಕೆಲವು ವೈಶಿಷ್ಟ್ಯಗಳನ್ನು ವಿವರಿಸಲಾಗುವುದು–

---

of a doubtful, and even improbable, meaning in a vedic word, which forms the very starting point of the theory. Meanwhile we must rest content with the certainty that Vedic literature in any case is of a considerably higher antiquity than that of Greece. page 10.

ಆರ್ಯಜನರ ಪೂರ್ವಜರು ಬಹಳ ಪ್ರಾಚೀನ ಕಾಲದಲ್ಲಿ ಉತ್ತರಧ್ರುವ ಪ್ರದೇಶದಲ್ಲಿ ನೆಲಸಿದ್ದರೆಂತಲೂ, ಉತ್ತರಾಯಣದ ಕಾಲದಲ್ಲಿ ಭೂಮಿಯ ಉತ್ತರ ಗೋಲಾರ್ಧದಲ್ಲಿರುತಿದ್ದ ಸೂರ್ಯನು, ದಕ್ಷಿಣಾಯನ ಪ್ರಾರಂಭವಾದ ತರುವಾಯ ಮೆಲ್ಲಮೆಲ್ಲನೇ ಕೆಳಗಿಳಿಯತೊಡಗಿದಂತೆ ಹಗಲು ಕಿರಿದಾಗುತ್ತ ಸಾಗುತಿದ್ದಿತೆಂತಲೂ ಕೊನೆಗೆ ಸೂರ್ಯನು ಮುಳುಗಿದ ತರುವಾಯ ಸತತವಾಗಿ ತೊಂಭತ್ತೊಂಭತ್ತು ದಿನಗಳಷ್ಟು ದೀರ್ಘ ಅವಧಿಯ ರಾತ್ರಿಯು ಪ್ರಾರಂಭವಾಗುತಿದ್ದಿತೆಂತಲೂ, ಆಗ ಅಲ್ಲಿನ ಜನರು ಮರಳಿ ಸೂರ್ಯೋದಯವು ಯಾವಾಗ ಆಗುವುದೆಂಬುದನ್ನು ಕಂಡುಕೊಳ್ಳಲು ನಕ್ಷತ್ರಗಳ ಗತಿಯನ್ನು ಅವಲಂಬಿಸಿರಬೇಕಾಗುತಿದ್ದಿತೆಂತಲೂ ಸೂರ್ಯನ ಉತ್ತರಾಯಣವು ಪ್ರಾರಂಭವಾದೊಡನೆ ಉತ್ತರ ಧ್ರುವ ಪ್ರದೇಶದಲ್ಲಿ ಬೆಳಕಾಗುತಿದ್ದಿತೆಂತಲೂ, ಸೂರ್ಯನು ಭೂಮಿಯ ವಿಷುವ ರೇಖೆಯನ್ನು ದಾಟಿ ಉತ್ತರ ಗೋಲಾರ್ಧವನ್ನು ಪ್ರವೇಶಿಸಿದ ದಿನದಿಂದ ಅಲ್ಲಿ ವಸಂತ ಋತುವು ಪ್ರಾರಂಭವಾಗುತಿದ್ದಿತೆಂತಲೂ, ಕೆಲವರು ಮೊದಲಿನ ಸೂರ್ಯೋದಯಕ್ಕೆ ಸರಿಯಾಗಿಯೂ, ಬೇರೆ ಕೆಲವರು, ವಸಂತ ಋತುವಿನ ಸೂರ್ಯೋದಯಕ್ಕೆ ಸರಿಯಾಗಿಯೂ ವಾರ್ಷಿಕ ಯಜ್ಞದ ಅಗ್ನಿಯನ್ನು ಆಧಾನ ಮಾಡಿ ಕಾಲಗಣನೆಯನ್ನು ಮಾಡುತಿದ್ದರೆಂತಲೂ ಹಿಂದೆ ಹೇಳಿದೆ. ಅಂದರೆ ಆ ಕಾಲದ ಆರ್ಯ ಜನರಿಗೆ ಉತ್ತರಾಯಣದ ಮತ್ತು ವಸಂತ ಋತುವಿನ ಪ್ರಾರಂಭಕಾಲವನ್ನು ಕಂಡುಕೊಳ್ಳುವುದು ಅತ್ಯಂತ ಆವಶ್ಯಕವಾಗಿದ್ದಿತು. ಮತ್ತು ಅಂಥಕಾಲವನ್ನು ಕಂಡುಕೊಳ್ಳಲು ನಕ್ಷತ್ರಗಳ ಗತಿ ಅಥವಾ ಅವುಗಳ ಸ್ಥಾನಪರಿವರ್ತನವೇ ಮುಖ್ಯ ಸಾಧನವಾಗಿದ್ದಿತು. ಆದುದರಿಂದಲೇ ಆರ್ಯಜನರು ನಕ್ಷತ್ರಗಳಿಗೆ ಅಷ್ಟು ಮಹತ್ವವನ್ನು ಕೊಡುತಿದ್ದರು.

ಉತ್ತರ ಧ್ರುವ ಪ್ರದೇಶದಲ್ಲಿ ನೆಲಸಿದ್ದ ಆರ್ಯಜನರು ಸೂರ್ಯನ ಉತ್ತರಾಯಣವು ಪ್ರಾರಂಭವಾಗುವಾಗ ವಸಂತ ಋತುವು ಪ್ರಾರಂಭವಾಗುವಾಗ ಮತ್ತು ದಕ್ಷಿಣಾಯನದಲ್ಲಿ ಸೂರ್ಯನು ಕಟ್ಟಕಡೆಗೆ ಅಸ್ತನಾಗುವಾಗ ನಾಲ್ಕು ದಿಕ್ಕುಗಳಲ್ಲಿಯೂ ಯಾವ ಯಾವ ನಕ್ಷತ್ರಗಳಿರುತಿದ್ದುವೆಂಬುದನ್ನು ಸರಿಯಾಗಿ ಗುರುತಿಸಿ ಅವುಗಳ ಗತಿಯನ್ನು ನಿರೀಕ್ಷಿಸುತಿದ್ದರು. ಅಲ್ಲಿ ಸೂರ್ಯನು ಪ್ರತಿದಿನ ಉದಯಸ್ಥಾನವನ್ನು ಪರಿವರ್ತಿಸುತಿದ್ದುದರಿಂದ ಅವರು ಸೂರ್ಯನು ಉತ್ತರ ದಿಕ್ಕಿನಲ್ಲಿ ಮೂಡಿ ಪೂರ್ವ ದಿಕ್ಕಿಗೆ ಬಂದ ತರುವಾಯ ಅಲ್ಲಿಂದ ಮುಂದುವರಿದು ಭೂಮಿಯನ್ನು ಸುತ್ತಿ ಮರಳಿ, ಅಲ್ಲಿಗೆ (=ಪೂರ್ವ ದಿಕ್ಕಿಗೆ) ಬಂದು ತಲುಪುವ ಒಂದು ಸುತ್ತನ್ನು ಒಂದು ದಿನವೆಂದು ನಿರ್ಧರಿಸಿದ್ದರು. ಮತ್ತು ದಿನವನ್ನು ಆರುವತ್ತು ನಾಡಿಕೆ (=ನಳಿಗೆ) ಗಳಲ್ಲಿ ವಿಭಜಿಸಿದ್ದರು. ಅಂದರೆ ಅವರು ನಿಶ್ಚಿತ ಪ್ರಮಾಣದ ಒಂದು ನಳಿಗೆಯ ಅಡಿಯಿಂದ ಒಂದು ಚಿಕ್ಕ ತೂತನ್ನು ಕೊರೆದು ಅದನ್ನು ನೀರಿನ

ಹೂಜೆಯಲ್ಲಿ ಇಡುತಿದ್ದರು. ಆ ನಳಿಗೆಯು ಒಂದು ದಿನವಲ್ಲಿ ಆರುವತ್ತು ಸರ್ತಿ ತುಂಬಿ ಮುಳುಗುತ್ತಿತ್ತು. ಮತ್ತು ಸೂರ್ಯನು ಅಷ್ಟು ಹೊತ್ತಿನಲ್ಲಿ ತಪ್ಪದೇ ಒಂದು ಸುತ್ತನ್ನು ತೆಗೆದು ಮರಳಿ ಪೂರ್ವ ದಿಕ್ಕಿಗೆ ಬರುತಿದ್ದ. ಆದರೆ ನಕ್ಷತ್ರಗಳ ಸ್ಥಿತಿಯು ಹಾಗಿರಲಿಲ್ಲ. ವರ್ಷಗಳು ಸಂದಂತೆ ಪೂರ್ವ ದಿಕ್ಕಿನಿಂದ ಹೊರಟ ಯಾವುದೊಂದು ನಕ್ಷತ್ರವು ಮರಳಿ ಪೂರ್ವದಿಕ್ಕಿಗೆ ಬರಲು ಆರುವತ್ತು ನಾಡಿಕೆಗಳಿಗಿಂತ ಹೆಚ್ಚು ಸಮಯ ವನ್ನು ತೆಗೆದುಕೊಳ್ಳುವುದೆಂದು ಅವರು ಕಂಡು ಹಿಡಿದಿದ್ದರು. ಅರ್ಥಾತ್ ನಕ್ಷತ್ರ ಗಳು ಬಹಳ ಮೆಲ್ಲನೇ ದಕ್ಷಿಣ ದಿಕ್ಕಿನಿಂದ ಉತ್ತರ ದಿಕ್ಕಿಗೆ ಸಾಗುತ್ತವೆಂಬುದು ಕಂಡು ಹಿಡಿದಿದ್ದರು. ಅದರ ಕಾರಣವಾವುದೆಂದು ಮಾತ್ರ ಅವರಿಗೆ ಗೊತ್ತಿರಲಿಲ್ಲ. ಅಂಥ ಚಲನವನ್ನು ತರುವಾಯದ ಜ್ಯೋತಿಷ್ಕರು "ಸಂಪಾತ ಚಲನ" ಎಂದು ಕರೆದಿದ್ದಾರೆ.

ಪ್ರಾಚೀನ ಆರ್ಯಜನರು ನಕ್ಷತ್ರಗಳ ಆ ಬಗೆಯ ಚಲನವನ್ನು ಕಂಡು ಹಿಡಿದುದರಿಂದಲೇ ಋಗ್ವೇದದಿಂದ ಮೊದಲುಗೊಂಡು ಸಕಲ ವೈದಿಕ ಸಾಹಿತ್ಯದಲ್ಲಿ ಬೇರೆ ಬೇರೆ ಕಾಲದಲ್ಲಿ ಬೇರೆ ಬೇರೆ ನಕ್ಷತ್ರಗಳು ಗಣನೆಯಲ್ಲಿ ಮೊದಲನೆಯದಾಗಿ ದ್ದುವೆಂದು ಸೂಚಿಸುವ ಅಲ್ಲದಿದ್ದರೆ ಯಜ್ಞದ ಅಗ್ನಿಯನ್ನು ವಸಂತ ಋತುವಿನಲ್ಲಿ ಬೇರೆ ಬೇರೆ ನಕ್ಷತ್ರಗಳಲ್ಲಿ ಆಧಾನ ಮಾಡಬೇಕೆಂದು ವಿಧಿಸಿದ ಉಲ್ಲೇಖಗಳಿರುವು ದಾಗಿದೆ. ಅರ್ಥಾತ್ ವಸಂತ ಋತುವು ಬೇರೆ ಬೇರೆ ಕಾಲದಲ್ಲಿ ಬೇರೆ ಬೇರೆ ನಕ್ಷತ್ರಗಳಲ್ಲಿ ಪ್ರಾರಂಭವಾಗಿದ್ದಿತೆಂಬುದನ್ನು ಸೂಚಿಸುವ ಉಲ್ಲೇಖಗಳು ವೈದಿಕ ಸಾಹಿತ್ಯದಲ್ಲಿ ಹೇರಳವಾಗಿವೆ. ಅಂಥ ಉಲ್ಲೇಖಗಳ ಆಧಾರದಿಂದ ಆ ಉಲ್ಲೇಖಗಳಿರುವ ಅಂಶವು ಅಲ್ಲದಿದ್ದರೆ ಗ್ರಂಥವು ಯಾವ ಕಾಲದಲ್ಲಿ ರಚಿಸಲ್ಪಟ್ಟುದೆಂದು ನಿರ್ಧರಿಸಲು ಸಾಧ್ಯ ವಾಗುತ್ತದೆ. ಅದು ಹೇಗೆಂದು ಮುಂದೆ ಕೊಡಲಾಗುವ ವಿವರಗಳಿಂದ ಗೊತ್ತಾ ಗುವುದು.

ಭೂಮಿಯು ಸೂರ್ಯನ ಸುತ್ತಲೂ ಉರುಳುತ್ತ ಸಾಗುವ ದೀರ್ಘ ವೃತ್ತಾಕಾರದ ಹಾದಿಯು ಕ್ರಾಂತಿಪಥ ಇಲ್ಲವೇ ಕ್ರಾಂತಿವೃತ್ತ ಎಂದು ಹೆಸರಾಗಿದೆ. ಆದು ಋಗ್ವೇದದಲ್ಲಿ "ಋತ" ಎಂದು ಕರೆಯಲ್ಪಟ್ಟಿದೆ. ಮತ್ತು ಋತದ ಅಂಶ ಗಳೇ ಋತುಗಳಾಗಿವೆ. ಭೂಮಿಯನ್ನು ಅದರ ಎರಡು ಧ್ರುವಗಳ ಸರಿ ಮಧ್ಯ ಪ್ರದೇಶದಲ್ಲಿ ವಿಭಜಿಸುವ ರೇಖೆಯು ಭೂಮಧ್ಯರೇಖೆ ಅಥವಾ ವಿಷುವದ್‌ವೃತ್ತ ಎಂದು ಹೆಸರಾಗಿದೆ. ಸೂರ್ಯನ ಮತ್ತು ಚಂದ್ರನ (ಹಾಗೂ ಇತರ ಗ್ರಹಗಳ) ಗತಿಯನ್ನು ಕಂಡು ಕೊಳ್ಳುವ ಸಲುವಾಗಿ ಕ್ರಾಂತಿಪಥದಲ್ಲಿ ಗುರುತಿಸಿರುವ ಅಶ್ವಿನೀ, ಭರಣೀ ಮೊದಲಾದ ನಕ್ಷತ್ರ ಪುಂಜಗಳು ಭೂಮಿಯ ಸುತ್ತಲೂ ಬಹಳ ದೂರದಲ್ಲಿ ಕಾಣಿಸುತ್ತವೆ. ಭೂಮಿಯು ಕ್ರಾಂತಿಪಥದಲ್ಲಿ ಸಾಗುವಾಗ ಅದರ ಅಕ್ಷದ ಉತ್ತರ ಧ್ರುವ ಬಿಂದುವು ಸದಾಕಾಲ ಧ್ರುವ ನಕ್ಷತ್ರಕ್ಕೆ ಅಭಿಮುಖವಾಗಿರುವಂತೆ ಉರುಳು ತ್ತದೆ. ಭೂಮಿಯ ಅಕ್ಷವು ಕ್ರಾಂತಿವೃತ್ತದ ತಲಕ್ಕೆ ಸಮಕೋಣದಲ್ಲಿ ಲಂಬ

ವಾಗಿರದೇ ೬೩ ೧/೨ ಅಂಶದ ಕೋಣವಾಗಿರುವಂತೆ ವಾಲಿದೆ ಅಥವಾ ಅಕ್ಷದ ತುದಿಯು ತನ್ನ ನೇರಿನಿಂದ ೨೩ ೧/೨ ಅಂಶದಷ್ಟು ಧ್ರುವ ನಕ್ಷತ್ರದ ಕಡೆಗೆ ಒಲಿದಿದೆ. ಭೂಮಿಯ ಅಕ್ಷವು ಆ ಪ್ರಕಾರವಾಗಿ ಧ್ರುವ ನಕ್ಷತ್ರದ ಕಡೆಗೆ ಒಲಿದಿರುವುದರಿಂದ ಭೂಮಿಯು ಕ್ರಾಂತಿಪಥದಲ್ಲಿ ಉರುಳುತ್ತ ಸಾಗುವಾಗ ಬೇರೆ ಬೇರೆ ಸ್ಥಾನಗಳಿಗೆ ತಲುಪಿದೊಡನೆ ಋತು ಪರಿವರ್ತನಗಳು ಉಂಟಾಗುತ್ತವೆ. ಭೂಮಿಯು ಆ ಪ್ರಕಾರ ವಾಗಿ ಕ್ರಾಂತಿಪಥದಲ್ಲಿ ಉರುಳುತ್ತ ಸಾಗುತ್ತಿರುವಾಗ ವರ್ಷದಲ್ಲಿ ಎರಡು ಸರ್ತಿ ಅಂದರೆ ರಾಷ್ಟ್ರೀಯ ಪಂಚಾಂಗದ ಪ್ರಕಾರ ಚೈತ್ರಮಾಸದ ಮೊದಲನೆಯ ದಿನ ಒಮ್ಮೆ ಮತ್ತು ಭಾದ್ರಪದ ಮಾಸದ ಇಪ್ಪತ್ತೈದನೆಯ ದಿನ ಒಮ್ಮೆ ಆದರ ವಿಷುವದ್ ವೃತ್ತವು ಕ್ರಾಂತಿವೃತ್ತವನ್ನು ಛೇದಿಸುತ್ತದೆ. ಅಥವಾ ಭೂಮಿಯ ವಿಷುವದ್ ವೃತ್ತವು ಕ್ರಾಂತಿವೃತ್ತದ ಮೇಲೆ ಬೀಳುತ್ತದೆ; ಅಂಥ ಛೇದಸವು ಅಥವಾ ಪಾತವು ಜ್ಯೋತಿಷ ಶಾಸ್ತ್ರದಲ್ಲಿ "ಸಂಪಾತ" ಎಂದು ಕರೆಯಲ್ಪಟ್ಟಿದೆ. ಆ ಎರಡು ದಿನಗಳಲ್ಲಿ ಸೂರ್ಯನು ಸರಿಯಾಗಿ ಭೂಮಿಯ ವಿಷುವದ್ ರೇಖೆಯ ನೇರಿ ನಲ್ಲಿರುವುದರಿಂದ ಆ ಎರಡು ದಿನಗಳಲ್ಲಿ ಹಗಲಿರುಳುಗಳ ಅವಧಿಯು ಸಮಾನ ವಾಗಿರುತ್ತದೆ. ಆದುದರಿಂದ ಅವುಗಳನ್ನು ವಿಷುವ ದಿನಗಳೆನ್ನುತ್ತಾರೆ. ಭೂಮಿಯ ವಿಷುವದ್ರೇಖೆಯು ಕ್ರಾಂತಿವೃತ್ತವನ್ನು ಛೇದಿಸುವ ಸ್ಥಾನದಲ್ಲಿ ಅಥವಾ ಆ ದಿನ ಸೂರ್ಯನು ಉದಯಿಸುವ ಸ್ಥಾನದಲ್ಲಿ ಯಾವ ನಕ್ಷತ್ರವಿರುತ್ತದೋ ಅದು ಸಾಂಪಾತಿಕ ನಕ್ಷತ್ರವೆನಿಸಿಕೊಳ್ಳುತ್ತದೆ. ಚೈತ್ರ ಮಾಸದ ಸಂಪಾತವು ವಸಂತಸಂಪಾತ ವೆಂತಲೂ, ಭಾದ್ರಪದ ಮಾಸದ ಸಂಪಾತವು ಶರತ್ ಸಂಪಾತವೆಂತಲೂ ಹೆಸರಾಗಿವೆ. ವಸಂತ ಸಂಪಾತ ಸ್ಥಾನದಲ್ಲಿರುವ ನಕ್ಷತ್ರವು ಗಣನೆಯಲ್ಲಿ ಮೊದಲನೆಯದಾಗಿರುತ್ತದೆ. ಕಾರಣವೇನೆಂದರೆ ವಸಂತ ಸಂಪಾತದ ದಿನದಿಂದ ಭೂಮಿಯ ಉತ್ತರ ಗೋಲಾರ್ಧ ದಲ್ಲಿ ವಸಂತ ಋತುವು ಪ್ರಾರಂಭವಾಗುತ್ತದೆ. ಮತ್ತು ಅಲ್ಲಿನ ಜನರು ಪ್ರಾಚೀನ ಕಾಲದಿಂದಲೂ ಅಂದಿನಿಂದಲೇ ಹೊಸವರ್ಷದ ಗಣನೆಯನ್ನು ಮಾಡುತ್ತ ಬಂದಿ ದ್ದಾರೆ. ಅಂದಿನಿಂದ ಶರತ್ ಸಂಪಾತದ ತನಕ ಆರು ತಿಂಗಳ ಕಾಲ ಸೂರ್ಯನು ಭೂಮಿಯ ವಿಷುವದ್ ವೃತ್ತದ ಉತ್ತರ ದಿಕ್ಕಿನಲ್ಲಿರುತ್ತಾನೆ.

ಆದರೆ ಸಂಪಾತವು ಸದಾಕಾಲ ಒಂದೇ ನಕ್ಷತ್ರದಲ್ಲಿ ಘಟಿಸುವುದಿಲ್ಲ. ಕಾರಣವೇನೆಂದರೆ ಭೂಮಿಯು ಧ್ರುವ ನಕ್ಷತ್ರವನ್ನು ಕೇಂದ್ರವನ್ನಾಗಿಟ್ಟುಕೊಂಡು ಅದನ್ನು ಸುತ್ತಿ ಬರುವಾಗ ಸೂರ್ಯ–ಚಂದ್ರರು ಭೂಮಿಯ ವಿಷುವತ್ ಪ್ರದೇಶ ವನ್ನು ಆಕರ್ಷಿಸುತ್ತಿರುವುದರಿಂದ ಭೂಗೋಲವು ಬಹಳ ಮೆಲ್ಲನೇ ಪಶ್ಚಿಮಕ್ಕೆ, (ಉತ್ತರ ಧ್ರುವಪ್ರದೇಶದಲ್ಲಿ ದಕ್ಷಿಣಕ್ಕೆ) ಸರಿಯುತ್ತಿರುತ್ತದೆ. ಹಾಗಾಗಿ ಕ್ರಾಂತಿ ವೃತ್ತವೂ ಪರಿವರ್ತನ ಹೊಂದುತ್ತದೆ. ನಕ್ಷತ್ರಗಳು ಸಾಪೇಕ್ಷ್ಯವಾಗಿ ಸ್ಥಿರವಾಗಿರು ವುದರಿಂದ ಮೊದಲು ಸಂಪಾತಸ್ಥಾನದಲ್ಲಿ ಕಾಣಿಸುತಿದ್ದ ನಕ್ಷತ್ರವು ಪೂರ್ವದಿಕ್ಕಿಗೆ

(ಉತ್ತರ ಧ್ರುವಪ್ರದೇಶದಲ್ಲಿ ಉತ್ತರದಿಕ್ಕಿಗೆ ಅಥವಾ ನೋಡುವವನ ಎಡಕ್ಕೆ) ಸರಿದಂತೆ ಕಾಣಿಸುತ್ತದೆ. ಮತ್ತು ಸಂಪಾತ ಸ್ಥಾನದಲ್ಲಿ ಆದರ ಹಿಂದಿನ ನಕ್ಷತ್ರವು ಕಾಣಿಸತೊಡಗುತ್ತದೆ. ಕ್ರಾಂತಿವೃತ್ತದ ಅಥವಾ ಸಂಪಾತಸ್ಥಾನದ ಆ ಬಗೆಯ ಚಲನವು ಜ್ಯೋತಿಷಶಾಸ್ತ್ರದಲ್ಲಿ ಸಂಪಾತಚಲನವೆನಿಸಿಕೊಂಡಿದೆ, ಸಂಪಾತ ಬಿಂದುಗಳ ಚಲನದಿಂದ ಅಯನ ಬಿಂದುಗಳೂ ಚಲಿಸುತ್ತವೆ. ಅವುಗಳ ಚಲನವು ಅಯನ ಚಲನವೆನಿಸಿಕೊಂಡಿದೆ.

ಸಂಪಾತ ಬಿಂದುವಿನ ಚಲನವು ವರ್ಷಕ್ಕೆ ಸರಾಸರಿ ಐವತ್ತು ವಿಕಲೆಗಳೆಂದು ನಿರ್ಧರಿಸಲಾಗಿದೆ, ಮತ್ತು ಕ್ರಾಂತಿವೃತ್ತದ ಹದಿಮೂರು ಅಂಶ ಇಪ್ಪತ್ತು ಕಲೆಗಳಷ್ಟು ವಿಸ್ತಾರವನ್ನು ಒಂದು ನಕ್ಷತ್ರದ ಪ್ರದೇಶವೆಂದು ಎಣಿಸಲಾಗಿದೆ. ಮತ್ತು ಅದನ್ನು ಕ್ರಾಂತಿವೃತ್ತದ ನಾಕ್ಷತ್ರಿಕ ವಿಭಾಗವೆಂತಲೂ, ಆ ವಿಭಾಗದಲ್ಲಿ ಬರುವ ನಕ್ಷತ್ರವನ್ನು ವಿಭಾಗಾತ್ಮಕ ನಕ್ಷತ್ರವೆಂತಲೂ ಹೆಸರಿಸಲಾಗಿದೆ. ಸಂಪಾತ ಬಿಂದುವಿನ ಚಲನವು ವರ್ಷಕ್ಕೆ ಐವತ್ತು ವಿಕಲೆಗಳೆಂದು ಗೊತ್ತಿರುವುದರಿಂದ ಹಿಂದೆ ಯಾವುದೊಂದು ನಕ್ಷತ್ರವು ಸಂಪಾತಸ್ಥಾನದಲ್ಲಿದ್ದ ಸರಿಯಾದ ವರ್ಷವು ಗೊತ್ತಿದ್ದರೆ ಅದರ ಆಧಾರದಿಂದ ಬೇರೆ ಬೇರೆ ನಕ್ಷತ್ರಗಳು ಸಂಪಾತಸ್ಥಾನದಲ್ಲಿದ್ದ ಕಾಲವನ್ನು ಕಂಡುಹಿಡಿಯಲು ಸಾಧ್ಯವಾಗುತ್ತದೆ. ಹಿಂದೆ ಹೇಳಿದ ಮಾನದಂತೆ ಸಂಪಾತ ಬಿಂದುವು ಒಂದು ಅಂಶದಷ್ಟು ಚಲಿಸಲು ಎಪ್ಪತ್ತೆರಡು ವರ್ಷಗಳೂ ಒಂದು ನಕ್ಷತ್ರದ ಪ್ರದೇಶವನ್ನು ಕ್ರಮಿಸಲು, ಒಂಭೈನೂರ ಆರುವತ್ತು ವರ್ಷಗಳೂ ತಗಲುತ್ತವೆ.

ವೈದಿಕ ಸಾಹಿತ್ಯದಲ್ಲಿ ಅಂದರೆ ಋಗ್ವೇದದಿಂದ ಮೊದಲುಗೊಂಡು ವೇದಾಂಗ ಜ್ಯೋತಿಷದ ತನಕದ ಗ್ರಂಥಗಳಲ್ಲಿ ವಸಂತ ಸಂಪಾತವು ಪುಷ್ಯ ನಕ್ಷತ್ರದಿಂದ ಒಂದೊಂದೇ ನಕ್ಷತ್ರದಂತೆ ಹಿಂದಕ್ಕೆ ಸರಿಯುತ್ತ ವೇದಾಂಗ ಜ್ಯೋತಿಷದ ಕಾಲದಲ್ಲಿ ಭರಣೀ ನಕ್ಷತ್ರದಲ್ಲಿ ಬಂದಿರುವ ಪ್ರಮಾಣಗಳಿವೆ. ಅಂದರೆ ಯಜ್ಞದ ಅಗ್ನಿಯನ್ನು ವಸಂತ ಋತುವಿನ ಪ್ರಾರಂಭಕಾಲದಲ್ಲಿ ಬೇರೆ ಬೇರೆ ನಕ್ಷತ್ರಗಳಲ್ಲಿ ಆಧಾನ ಮಾಡಬೇಕೆಂದು ಹೇಳಿದ ಮತ್ತು ಬೇರೆ ಬೇರೆ ಕಾಲಗಳಲ್ಲಿ ಬೇರೆ ಬೇರೆ ನಕ್ಷತ್ರವು ಗಣನೆಯಲ್ಲಿ ಮೊದಲನೆಯದಾಗಿದ್ದಿತೆಂಬ ಪ್ರಮಾಣಗಳಿವೆ. ಭರಣೀ ನಕ್ಷತ್ರದ ತರುವಾಯ ವಸಂತ ಸಂಪಾತವು ಅಶ್ವಿನೀ ನಕ್ಷತ್ರದಲ್ಲಿ ಬಂದುದರ ಪ್ರಮಾಣವು ಇಂದಿಗೂ ಉಳಿದಿದೆ. ತಾತ್ಪರ್ಯವೇನೆಂದರೆ ಸಾಂಪಾತಿಕ ನಕ್ಷತ್ರಗಳು ಪರಿವರ್ತನ ಹೊಂದಿದುದನ್ನು ಸೂಚಿಸುವ ಉಲ್ಲೇಖಗಳ ಆಧಾರದಿಂದ ಆಯಾ ಗ್ರಂಥದ ಇಲ್ಲವೇ ಆ ಗ್ರಂಥದೊಳಗಿನ ಯಾವುದೊಂದು ಅಂಶದ ರಚನಾ ಕಾಲವನ್ನು ಕಂಡು ಹಿಡಿಯಲು ಸಾಧ್ಯವಿದೆ. ಆದರೆ ಆದನ್ನು ಕಂಡು ಹಿಡಿಯುವ ಮೊದಲು ಪಾಶ್ಚಾತ್ಯ ವಿದ್ವಾಂಸರು ವೇದ ಮಂತ್ರಗಳ ಭಾಷೆಯ ಸಂಬಂಧದಲ್ಲಿ ಹೂಡಿದ ವಾದವನ್ನು ಬಗೆಹರಿಸಬೇಕಾಗಿದೆ.

ಪಾಶ್ಚಾತ್ಯ ವಿದ್ವಾಂಸರ ಅಭಿಪ್ರಾಯದಲ್ಲಿ ಋಗ್ವೇದದ ಮೊದಲನೆಯ ಮಂಡಲದೊಳಗಿನ ಮತ್ತು ಹತ್ತನೆಯ ಮಂಡಲದೊಳಗಿನ ಅಧಿಕಾಂಶ ಸೂಕ್ತಗಳ ಭಾಷೆಯು ಮತ್ತು ಆ ಸೂಕ್ತಗಳಲ್ಲಿ ವ್ಯಕ್ತಗೊಳಿಸಿದ ಆಧ್ಯಾತ್ಮಿಕ ವಿಚಾರಗಳು ಇತರ ಮಂಡಲಗಳ ಭಾಷೆಗಿಂತ ಮತ್ತು ವಿಚಾರಗಳಿಂದ ಭಿನ್ನವಾಗಿದ್ದು ಬಹಳ ಅರ್ವಾಚೀನವಾಗಿವೆಯೆಂದಿದೆ. ಅವರ ಆ ಅಭಿಪ್ರಾಯದಲ್ಲಿ ಕೊಂಚ ಹುರುಳಿದೆ ಯೆನ್ನಬಹುದಾದರೂ ಆ ಅಭಿಪ್ರಾಯವನ್ನು ಪೂರ್ಣ ಸರಿಯೆನ್ನಲು ಮಾತ್ರ ಸಾಧ್ಯ ವಿಲ್ಲ. ಅವರು ವಾದಿಸಿರುವಂತೆ ಆ ಎರಡು ಮಂಡಲಗಳಲ್ಲಿ ವ್ಯಕ್ತಗೊಳಿಸಲಾದ ಆಧ್ಯಾತ್ಮಿಕ ವಿಚಾರಗಳನ್ನು ಮತ್ತು ಜಗತ್ತಿನ ಉತ್ಪತ್ತಿಗೆ ಸಂಬಂಧಪಟ್ಟ ಕಲ್ಪನೆ ಗಳನ್ನು ವಿವರಿಸುವ ಸೂಕ್ತಗಳು ಇತರ ಸೂಕ್ತಗಳ ತುಲನೆಯಲ್ಲಿ ಕೊಂಚ ಅರ್ವಾಚೀನ ವಾಗಿವೆಯೆನ್ನಬಹುದಾದರೂ ಅವುಗಳನ್ನು ಪಾಶ್ಚಾತ್ಯ ವಿದ್ವಾಂಸರು ಸೂಚಿಸುವಷ್ಟು ಅರ್ವಾಚೀನವೆನ್ನಲಾಗುವುದಿಲ್ಲ. ಏಕೆಂದರೆ ಮೊದಲನೆಯದಾಗಿ ಭಗವಾನ್ ಬುದ್ಧನ ಜನ್ಮಕಾಲಕ್ಕಿಂತ ಮೊದಲೇ ವೇದ ಸಂಹಿತೆಗಳೆಲ್ಲವೂ ಸಂಕಲಿತವಾಗಿದ್ದುವೆಂಬ ಪ್ರಮಾಣಗಳಿರುವುದರಿಂದ ಕನಿಷ್ಠ ಪಕ್ಷ ಶಕಪೂರ್ವ ಏಳನೆಯ ಶತಮಾನದ ಈಚೆ ಕಡೆಯ ಕಾಲದಲ್ಲಿ ವೇದ ಸಂಹಿತೆಗಳೊಳಗೆ ಒಂದೇ ಒಂದು ಹೊಸ ಸೂಕ್ತವಾದರೂ ಸೇರಲು ಸಾಧ್ಯವಿರಲಿಲ್ಲ.

ಎರಡನೆಯದಾಗಿ ಪಾಶ್ಚಾತ್ಯ ವಿದ್ವಾಂಸರು ನಿರ್ಧರಿಸಿರುವಂತೆ ನಿತ್ಯ ಬಳಕೆ ಯಲ್ಲಿರುವ ಜೀವಂತ ಭಾಷೆಯೊಳಗಿನ ಯಾವುದೊಂದು ವಿಶಿಷ್ಟ ಶಬ್ದದ ರೂಪ ವನ್ನು ಮತ್ತು ಪ್ರಯೋಗವನ್ನು ಆಧರಿಸಿ ಭಾಷೆಯ ಕಾಲವನ್ನು ನಿಖರವಾಗಿ ನಿರ್ಧರಿಸಲು ಸಾಧ್ಯವಿಲ್ಲ. ಮತ್ತು ಹಾಗೆ ನಿರ್ಧರಿಸುವುದು ಸಾಧುವೂ ಅಲ್ಲ. ಏಕೆಂದರೆ ಒಂದೇ ವರ್ಗದ, ಒಂದೇ ಭಾಷೆಯನ್ನಾಡುವ ಜನರು ಬೇರೆ ಬೇರೆ ಪ್ರದೇಶಗಳಲ್ಲಿ ನೆಲಸಿದುದರಿಂದ ಅವರಾಡುವ ಆ ಭಾಷೆಯು ಒಂದೇ ಕಾಲದಲ್ಲಿ ಬೇರೆ ಬೇರೆ ರೂಪ ಗಳಲ್ಲಿ ಮತ್ತು ರೀತಿಯಲ್ಲಿ ನುಡಿಯಲ್ಪಡುವುದನ್ನು ಮತ್ತು ಒಂದೇ ಶಬ್ದದ ಇಲ್ಲವೆ ಕ್ರಿಯಾಪದದ ಹಲವು ರೂಪಗಳು ಪ್ರಯೋಗಿಸಲ್ಪಡುವುದನ್ನು ಇಂದಿಗೂ ಕಾಣ ಬಹುದು. ಆದುದರಿಂದ ನಿತ್ಯ ಬಳಕೆಯ ಭಾಷೆಯೊಳಗಿನ ಯಾವುದೊಂದು ಶಬ್ದದ ಯಾವುದೊಂದು ವಿಶಿಷ್ಟರೂಪವು ಯಾವ ನಿಶ್ಚಿತ ಕಾಲದಲ್ಲಿ ಪ್ರಚಲಿತ ವಾಯಿತೆಂಬುದನ್ನು ನಿರ್ಧರಿಸಲು ಸಾಧ್ಯವಿಲ್ಲ. ಹಾಗೆ ನಿರ್ಧರಿಸುವುದು ಬರಿಯ ಅನುಮಾನವಾದೀತೇ ಹೊರತು ಸಿದ್ಧಾಂತವಾಗಲಿಕ್ಕಿಲ್ಲ.

ಅಷ್ಟು ಮಾತ್ರವಲ್ಲದೇ ಪಾಶ್ಚಾತ್ಯ ವಿದ್ವಾಂಸರು ಭಾವಿಸಿರುವಂತೆ ಯಾರು ಬೇಕಾದರೂ ಹೊಸ ಮಂತ್ರಗಳನ್ನು ರಚಿಸಿ, ಯಾರಿಗೂ ತಿಳಿಯದಂತೆ ವೇದಗಳ

ಸಂಹಿತೆಗಳಲ್ಲಿ ಸೇರಿಸಲು ಸಾಧ್ಯವಿರಲಿಲ್ಲ. ಏಕೆಂದರೆ ಹಿಂದೆ ವೇದಗಳ ಅಧ್ಯಾಪನ ಕ್ಕಾಗಿ ವೇದವಿದರಾದ ಆಚಾರ್ಯರಿಂದ ಸ್ಥಾಪಿಸಲ್ಪಟ್ಟ "ಚರಣ" ಎಂಬ ಹೆಸರಿನ ಗುರುಕುಲಗಳಿದ್ದುವು. ಮತ್ತು ವೇದ ಸಂಹಿತೆಗಳು ಆ ಚರಣಗಳ ಅಥವಾ ಚರಣಗಳ ಆಚಾರ್ಯರ ಸ್ವಕೀಯ ಸ್ವತ್ತಾಗಿದ್ದುವು. ಹಾಗಾಗಿ ಯಾವನಾದರೂ ಪ್ರಾಚೀನ ಐತಿಹ್ಯಗಳ ಆಧಾರದಿಂದ ಹೊಸ ಋಚೆಗಳನ್ನು ರಚಿಸಿ ವೇದಸಂಹಿತೆಗಳಲ್ಲಿ ಸೇರಿಸ ಬೇಕೆಂದು ಬಯಸಿದ್ದಲ್ಲಿ ಅವನು ತಾನು ರಚಿಸಿದ ಋಚೆಗಳನ್ನು ಪೊತ್ತಮೊದಲು ತಾನು ಕಲಿಯುತ್ತಿರುವ ಇಲ್ಲವೇ ಕಲಿತ ಚರಣದ ಕುಲಪತಿಯ ಮುಂದೆ ಹಾಡಿ ತೋರಿಸಿ ಅವರ ಮನ್ನಣೆಯನ್ನು ಪಡೆಯ ಬೇಕಾಗುತಿತ್ತು. ಕುಲಪತಿಯು ಆ ಋಚೆ ಗಳ ಪರಿಶೀಲನೆಗಾಗಿ ಇತರ ಚರಣಗಳ ಆಚಾರ್ಯರನ್ನು ಮತ್ತು ಕುಲಪತಿಗಳನ್ನು ತನ್ನಲ್ಲಿಗೆ ಕರೆಸಿಕೊಳ್ಳುತ್ತಿದ್ದನು. ಆ ಋಚೆಗಳನ್ನು ಎಲ್ಲ ಕುಲಪತಿಗಳು ಮೆಚ್ಚಿ ಮನ್ನಣೆ ಕೊಟ್ಟರೆಂದಾದರೆ ಆಗ ಮಾತ್ರ ಆ ಋಚೆಗಳನ್ನು ಸಂಹಿತೆಗಳಲ್ಲಿ ಎಲ್ಲಿ ಸೇರಿಸುವು ದೆಂದು ನಿರ್ಧರಿಸುತಿದ್ದರು. ಅವುಗಳಿಗೆ ಎಲ್ಲರ ಮನ್ನಣೆ ದೊರೆಯದೇ ಹೋದರ ಅವುಗಳು ಪರಿಶಿಷ್ಟಗಳೆಂದಾಲೀ, ಖಿಲಸೂಕ್ತಗಳೆಂದಾಗಲೀ ಕರೆಯಲ್ಪಡುತಿದ್ದುವು. ಆದುದರಿಂದ ಪಾಶ್ಚಾತ್ಯ ವಿದ್ವಾಂಸರು ವಾದಿಸಿರುವಂತೆ ವೇದಗಳಲ್ಲಿ ಶಕಪೂರ್ವ ಏಳನೆಯ ಶತಮಾನದ ಈಚೆ ಯಾವುದೊಂದು ಸೂಕ್ತವಾಗಲೀ ಋಚೆಯಾಗಲೀ ಸೇರಿದೆಯೆನ್ನಲಾಗುವುದಿಲ್ಲ.

ಪಾಶ್ಚಾತ್ಯ ವಿದ್ವಾಂಸರು ಆ ಎರಡು ಮಂಡಲಗಳೊಳಗಿನ ಕೆಲವು ಸೂಕ್ತ ಗಳನ್ನು ಅರ್ವಾಚೀನ ರಚನೆಗಳೆಂದು ವಾದಿಸುವಾಗ ಅವುಗಳ ಭಾಷೆಯನ್ನು ಮಾತ್ರ ವಿಮರ್ಶಿಸಿದ್ದಾರೆಯೇ ಹೊರತು ಆ ಸೂಕ್ತಗಳಿಂದ ಸೂಚಿತವಾಗುವ ಐತಿಹ್ಯಗಳನ್ನು ಪರಿಶೀಲಿಸುವ ಗೋಜಿಗೆ ಹೋಗಿಲ್ಲ. ಅಂದರೆ ಆ ಸೂಕ್ತಗಳ ಭಾಷೆಯು ಕೊಂಚ ಅರ್ವಾಚೀನವಾಗಿ ತೋರಿದರೂ, ಅವುಗಳಲ್ಲಿ ಅತ್ಯಂತ ಪ್ರಾಚೀನವಾದ ಐತಿಹ್ಯಗಳು ಅಡಗಿವೆಯೆಂಬುದು ಸ್ಪಷ್ಟವಾಗಿ ಗೊತ್ತಾಗುತ್ತದೆ. ಹೇಗೆಂದರೆ ಆ ಎರಡು ಮಂಡಲ ಗಳಲ್ಲಿರುವ ಕೆಲವು ಸೂಕ್ತಗಳಲ್ಲಿ ಉತ್ತರ ಧ್ರುವ ಪ್ರದೇಶದ ಭೌಗೋಲಿಕ, ಖಗೋಲಿಕ ಮತ್ತು ಪ್ರಾಕೃತಿಕ ಪರಿಸ್ಥಿತಿಗಳನ್ನು ಸೂಚಿಸುವಂಥ ಹಾಗೂ ಆರ್ಯ ಜನರ ಪ್ರಾಚೀನ ಸಾಮಾಜಿಕ ಕಟ್ಟಳೆಗಳಿಗೆ ಮತ್ತು ಪ್ರೇತ ಸಂಸ್ಕಾರ ಮೊದಲಾದ ವುಗಳಿಗೆ ಸಂಬಂಧಪಟ್ಟ ವಿವರಗಳು ಅಡಕವಾಗಿವೆ ಎಂಬುದು ಸ್ಪಷ್ಟವಾಗಿ ತಿಳಿಯು ತ್ತದೆ. ಆದುದರಿಂದ ಅಂಥ ಪ್ರಾಚೀನ ಐತಿಹ್ಯಗಳಿರುವ ಆ ಸೂಕ್ತಗಳ ಭಾಷೆಯು ಅರ್ವಾಚೀನವಾಗಿರಲು ಕಾರಣವೇನು? ಎಂಬುದನ್ನು ಕಂಡು ಹಿಡಿಯಲು ಪ್ರಯತ್ನಿ ಸುವುದು ಸಮಂಜಸವಾದೀತೇ ಹೊರತು. ಆ ಸೂಕ್ತಗಳ ಭಾಷೆಯು ಅರ್ವಾಚೀನ ವಾಗಿದೆಯೆಂಬ ಒಂದೇ ಕಾರಣದಿಂದ ಆ ಸೂಕ್ತಗಳೊಂದಿಗೆ ಅವುಗಳಲ್ಲಿ ಅಡಕ ವಾಗಿರುವ ಐತಿಹ್ಯಗಳನ್ನು ಕೂಡ ಕಡೆಗಣಿಸುವುದು ಸಮಂಜಸವಾಗಲಾರದು. ಏಕೆಂದರೆ ನಾವು ಎಂಟು ಸಾವಿರ ವರ್ಷಗಳ ಹಿಂದಿನ ಇತಿಹಾಸವನ್ನು ಇಂದಿನ ಭಾಷೆ

ಯಲ್ಲಿ ಬರೆದವೆಂದಾದರೆ ಆ ಕಾರಣದಿಂದ ಆ ಇತಿಹಾಸವು ಹೇಗೆ ಇಂದಿನದಾಗಲು ಸಾಧ್ಯವಿಲ್ಲವೋ ಹಾಗೆಯೇ, ಭಾಷೆಯು ಅರ್ವಾಚೀನವಾಗಿ ತೋರುತ್ತಿದೆಯೆಂಬ ಕಾರಣದಿಂದ ಆ ಸೂಕ್ತಗಳಲ್ಲಿ ಅಡಕವಾಗಿರುವ ಐತಿಹ್ಯಗಳು ಕೂಡ ಅರ್ವಾಚೀನ ವಾಗಲು, ಇಲ್ಲವೇ ಅಪ್ರಮಾಣಿಕವಾಗಲು ಸಾಧ್ಯವಿಲ್ಲ. ಆದುದರಿಂದ ಋಗ್ವೇದ ಮಂತ್ರಗಳ ಕಾಲವನ್ನು ನಿರ್ಧರಿಸಬೇಕಾದ ಸಂದರ್ಭಗಳಲ್ಲಿ ಆ ಮಂತ್ರಗಳಿಂದ ಸೂಚಿತವಾಗುವ ಐತಿಹ್ಯಗಳ ಕಾಲಕ್ಕೆ ಪ್ರಾಧಾನ್ಯ ಕೊಡಬೇಕೇ ಹೊರತು ಮಂತ್ರಗಳ ಭಾಷೆಗಲ್ಲ. ಏಕೆಂದರೆ ಆ ಮಂತ್ರಗಳು ಪ್ರಾಚೀನ ಕಾಲದಿಂದ ಪಾರಂಪರ್ಯವಾಗಿ ಮುಂದೆ ಸಾಗಿ ಬಂದ ಮಂತ್ರಗಳ ಅರ್ವಾಚೀನ ಪರಿವರ್ತನಗಳಾಗಿವೆಯೇ ಹೊರತು ಸ್ವತಂತ್ರವಾದ ಅರ್ವಾಚೀನ ರಚನೆಗಳಲ್ಲ. ಅವುಗಳನ್ನು ಪ್ರಾಚೀನ ಮಂತ್ರಗಳ ಅರ್ವಾಚೀನ ಅನುವಾದಗಳೆಂದರೂ ಸಲ್ಲುವುದು. ಹಾಗೆ ಆ ಪ್ರಾಚೀನ ಐತಿಹ್ಯ ಗಳಿರುವ ಮಂತ್ರಗಳ ಭಾಷೆಯು ಅರ್ವಾಚೀನವಾದುದರ ಒಂದು ಮುಖ್ಯ ಕಾರಣ ವನ್ನು ಮುಂದಿನಂತೆ ವಿವರಿಸಬಹುದು,

ಬಹಳ ಪ್ರಾಚೀನ ಕಾಲದ ಆರ್ಯ ಜನರಿಗೆ ತಮ್ಮ ಭಾವನೆಗಳನ್ನು ಬರೆದಿಡಬೇಕೆಂಬ ವಿಚಾರವು ಹೊಳೆದಿರಲಿಲ್ಲ. ಮತ್ತು ಆಗ ಅವರಿಗೆ ತಮ್ಮ ಭಾವನೆ ಗಳನ್ನು ಬರೆದಿಡಬೇಕಾದ ಆವಶ್ಯಕತೆಯೂ ಇರಲಿಲ್ಲ. ಆದುದರಿಂದ ಅವರು ಬರೆ ಯುವ ಹಂಚಿಕೆಯನ್ನು ಹುಡುಕಿರಲಿಲ್ಲ. ಅವರ ಪ್ರಾಚೀನ ಐತಿಹ್ಯಗಳು ಶ್ರುತಿ ರೂಪದಿಂದಲೇ ಮುಂದುವರಿಯುತಿದ್ದುವು. ಮುಂದೆ ಅವರು ಅಗ್ನಿಯನ್ನು ಕಂಡು ಕೊಂಡು ಅವನನ್ನು ಆರಾಧಿಸತೊಡಗಿದ ತರುವಾಯ ಅವನನ್ನು ಸ್ತುತಿಸುವ ಸಲು ವಾಗಿ ಚಿಕ್ಕ ಚಿಕ್ಕ ವಾಕ್ಯಗಳಿರುವ ಪದ್ಯಗಳನ್ನು ರಚಿಸತೊಡಗಿದರು. ಪ್ರಾರಂಭ ಕಾಲದಲ್ಲಿ ಆ ಪದ್ಯಗಳ ಸಂಖ್ಯೆಯು ಚಿಕ್ಕದಾಗಿದ್ದುದರಿಂದ ಅವರು ಆ ಪದ್ಯಗಳನ್ನು ಕಂಠ ಪಾಠ ಮಾಡಿಕೊಂಡಿರುತಿದ್ದರು. ಮತ್ತು ಅವುಗಳನ್ನು ತಮ್ಮ ಮಕ್ಕಳಿಗೂ ಕಂಠಪಾಠ ಮಾಡಿಸುತಿದ್ದರು. ಹಾಗಾಗಿ ಆ ಪದ್ಯಗಳು ಬಹುಕಾಲದ ತನಕ ಕಂಠ ಪಾಠವಾಗಿಯೇ ಮುಂದೆ ಸಾಗಿದ್ದುವು. ಕಾಲಾಂತರದಲ್ಲಿ ಆ ಪದ್ಯಗಳ ಸಂಖ್ಯೆಯು ಬೆಳೆಯ ತೊಡಗಿದುದರಿಂದ ಅವುಗಳನ್ನು ಕಂಠಪಾಠವಾಗಿ ನೆನಪಿನಲ್ಲಿಟ್ಟುಕೊಳ್ಳು ವುದು ಕಠಿನವೆನಿಸತೊಡಗಿತು. ಆಗ ಅವರು ಆ ಪದ್ಯಗಳನ್ನು ನೆನಪಿಟ್ಟುಕೊಳ್ಳಲು ಸುಲಭವಾಗುವಂತೆ ಅವುಗಳ ಚಿತ್ರ ಸಂಕೇತಗಳನ್ನು ನಿರ್ಮಿಸತೊಡಗಿದರು. ಆ ಚಿತ್ರ ಸಂಕೇತಗಳನ್ನು ಕಂಡೊಡನೆ ಅವರಿಗೆ ಆ ಚಿತ್ರ ಸಂಕೇತಗಳಿಂದ ಸೂಚಿತವಾಗುವ ಪದ್ಯಗಳ ಸರಿಯಾದ ಪಾಠವು ನೆನಪಿಗೆ ಬರುತಿದ್ದಿತು. ಆದರೆ ಕಾಲಸಾಗುತಿದ್ದಂತೆ ಆ ಪದ್ಯಗಳ ಭಾಷೆಯಲ್ಲಿ ಯಾರೊಬ್ಬರ ಲಕ್ಷಕ್ಕೆ ಬಾರದನೇ ಚಿಕ್ಕ ಚಿಕ್ಕ ಪರಿವರ್ತನ ಗಳು ಆಗುತ್ತಲೇ ಇದ್ದುವು ಮತ್ತು ಪಾಠಭೇದಗಳೂ ಹುಟ್ಟುತಿದ್ದುವು,

ಮುಂದೆ ಆರ್ಯ ಜನರು ಪ್ರತಿಯೊಂದು ಧ್ವನಿಗೆ ಒಂದು ನಿಶ್ಚಿತ ಚಿಹ್ನೆ

ಯಿರುವಂಥ ಬ್ರಾಹ್ಮೀ ವರ್ಣಮಾಲೆಯನ್ನು ನಿರ್ಮಿಸಿ ಎಲ್ಲ ಮಂತ್ರಗಳನ್ನು ಬರೆದುಕೊಳ್ಳುವ ಕಾಲದಲ್ಲಿ ಹಲವು ಮಂತ್ರಗಳ ಭಾಷೆಯು ತಾತ್ಕಾಲಿಕ ಭಾಷೆಯ ರೂಪವನ್ನು ತಳೆದಿದ್ದಿತು. ಆ ಕಾರಣದಿಂದಲೇ ಮೊದಲನೆಯ ಮತ್ತು ಹತ್ತನೆಯ ಮಂಡಲಗಳೊಳಗಿನ ಹಲವು ಸೂಕ್ತಗಳ ಭಾಷೆಯು ಅರ್ವಾಚೀನವಾಗಿಮಾರ್ಪಟ್ಟಿದ್ದಿತೆಂಬುದರಲ್ಲಿ ಸಂದೇಹವಿಲ್ಲ. ಬ್ರಾಹ್ಮೀ ಲಿಪಿಯ ನಿರ್ಮಾಣವು ಕೃತ್ತಿಕಾ ನಕ್ಷತ್ರದಲ್ಲಿ ವಸಂತ ಸಂಪಾತವಿದ್ದ ಕಾಲದಲ್ಲಾಗಿದ್ದಿತೆಂದು ನಿರ್ಧರಿಸಲು ಹಲವು ಪ್ರಮಾಣಗಳಿವೆ. ಅವುಗಳಲ್ಲಿ ಒಂದು ಪ್ರಮಾಣವು ಋಗ್ವೇದದ ಪ್ರಾರಂಭಿಕ ಋಚೆಯಾಗಿದೆ. ಹೇಗೆಂದರೆ ಅಗ್ನಿಗೆ ಬೇರೆ ಹಲವು ಹೆಸರುಗಳಿದ್ದರೂ, ಮತ್ತು ಪುಷ್ಯ ನಕ್ಷತ್ರದಲ್ಲಿ ವಸಂತ ಸಂಪಾತವಿದ್ದಾಗ ಯಜ್ಞಗಳು ಅಥವಾ ಅಗ್ನಿಯ ಆರಾಧನೆಯು ಪ್ರಚಲಿತವಾಗಿದ್ದಿತಾದರೂ ಬೇರೆ ಯಾವ ಹೆಸರಿನಿಂದಲೂ ಋಗ್ವೇದವು ಪ್ರಾರಂಭವಾಗಿರದೇ ಕೃತ್ತಿಕಾ ನಕ್ಷತ್ರದ ದೇವನಾದ ಅಗ್ನಿಯಿಂದ, ಅಗ್ನಿಯನ್ನು ಪುರೋಹಿತನನ್ನಾಗಿ ಮಾಡಿ ಅವನನ್ನು ಯಜ್ಞದ ದೇವನೆಂದು ಕರೆದು ಪ್ರಾರಂಭವಾದುದಾಗಿದೆ. ಆ ಕಾಲದ ತರುವಾಯವೂ ಋಗ್ವೇದ ಸಂಹಿತೆಯಲ್ಲಿ ಹಲವು ಹೊಸ ಸೂಕ್ತಗಳು ಸೇರಿವೆಯೆನ್ನಬಹುದು.

ಹೇಗಿದ್ದರೂ ಆ ಎರಡು ಮಂಡಲಗಳೊಳಗಿನ ಹಲವು ಸೂಕ್ತಗಳು ಮತ್ತು ಮಂತ್ರಗಳು ಬಹಳ ಪ್ರಾಚೀನ ಕಾಲದಿಂದ ಶ್ರೌತ ಮತ್ತು ಗೃಹ್ಯ ಕರ್ಮಗಳಲ್ಲಿ ಪ್ರಯೋಗಿಸಲ್ಪಡುತ್ತ ಮುಂದೆ ಸಾಗಿ ಬಂದಿದ್ದುವೆಂಬ ಪ್ರಮಾಣಗಳು ಬ್ರಾಹ್ಮಣಗಳಲ್ಲಿ ಮತ್ತು ಕಲ್ಪಸೂತ್ರಗಳಲ್ಲಿ ಇವೆಯಾದುದರಿಂದ ಆ ಮಂತ್ರಗಳ ಭಾಷೆಯು ಅರ್ವಾಚೀನವಾಗಿ ಮಾರ್ಪಟ್ಟಿದೆಯಾದರೂ ಅವುಗಳಲ್ಲಿ ಅಡಕವಾಗಿರುವ ಐತಿಹ್ಯಗಳು ಮಾತ್ರ ಪ್ರಾಚೀನವಾದವುಗಳೇ ಎಂಬುದು ಸಂದೇಹಕ್ಕೆಡೆಯಿಲ್ಲದಂತೆ ಸಿದ್ಧವಾಗುತ್ತದೆ. ಆದುದರಿಂದ ಈ ಅಧ್ಯಾಯದಲ್ಲಿ ಯಾವುದೊಂದು ಸೂಕ್ತದ ಇಲ್ಲವೇ ಮಂತ್ರದ ಪ್ರಾಚೀನತೆಯನ್ನು ನಿರ್ಧರಿಸುತ್ತಿರುವ ಸಂದರ್ಭದಲ್ಲಿ ಅದರೊಳಗಿನ ಐತಿಹ್ಯಕ್ಕೆ ಮಾತ್ರ ಪ್ರಾಧಾನ್ಯ ಕೊಡಲಾಗಿದೆಯೇ ಹೊರತು ಭಾಷೆಗಲ್ಲವೆಂಬುದನ್ನು ಲಕ್ಷದಲ್ಲಿಡಬೇಕಾಗಿದೆ.

ಆದರೆ ಆ ಐತಿಹ್ಯಗಳ ರಹಸ್ಯವನ್ನು ಸರಿಯಾಗಿ ತಿಳಿಯಲು ಅನುಕೂಲವಾಗುವಂತೆ ಮುಂದೆ ಕೊಡಲಾಗುವ ಕೆಲವು ವಿವರಗಳನ್ನು ನೆನಪಿನಲ್ಲಿಟ್ಟುಕೊಳ್ಳುವ ಆವಶ್ಯಕತೆ ಇದೆ. ೧. ಪ್ರಾಚೀನ ಕಾಲದಲ್ಲಿ ನಕ್ಷತ್ರಗಳನ್ನು ದೇವರೆಂದು ನಂಬುತ್ತಿದ್ದರಾದುದರಿಂದ ಋಗ್ವೇದದಲ್ಲಿ ನಕ್ಷತ್ರಗಳು ದೇವತೆಗಳ ಹೆಸರುಗಳಿಂದ ಕರೆಯಲ್ಪಟ್ಟಿವೆ. ೨. ಅಗ್ನಿಯು ಆರ್ಯ ಜನರ ಪ್ರಧಾನ ದೇವನಾಗಿರುವುದರಿಂದ ಅಧಿಕಾಂಶ ನಕ್ಷತ್ರಗಳು ಅಗ್ನಿಯ ಪರ್ಯಾಯ ನಾಮಗಳಿಂದಲೇ ಅಂದರೆ ಅಗ್ನಿ, ಅಜಏಕಪಾದ್, ಅರ್ಯಮಾ, ಅಹಿರ್ಬುಧ್ನಿಯ, ಇಂದ್ರ, ತ್ವಷ್ಟಾ, ಪೂಷಾ, ಪ್ರಜಾ

ಪತಿ, ಬೃಹಸ್ಪತಿ, ಭಗ, ಮಿತ್ರ, ಯಮ, ರುದ್ರ, ವರುಣ, ವಸು, ಮತ್ತು ವಾಯು ಎಂಬ ಹೆಸರುಗಳಿಂದ ಕರೆಯಲ್ಪಟ್ಟಿವೆ. ೩. ಯಜ್ಞದ ಅಗ್ನಿಯನ್ನು ವಸಂತ ಋತು ವಿನ ಮೊದಲನೆಯ ದಿನ ಸೂರ್ಯೋದಯಕ್ಕೆ ಸರಿಯಾಗಿ ಆಧಾನ ಮಾಡಬೇಕಾ ಗಿರುವುದರಿಂದ ಸಾಂಪಾತಿಕ ನಕ್ಷತ್ರದ ಉದಯದೊಂದಿಗೆ ಅಗ್ನಿ ಮಂಥನವನ್ನು ಪ್ರಾರಂಭ ಮಾಡಿ ಅಗ್ನಿಯನ್ನು ಹುಟ್ಟಿಸಬೇಕಾಗಿದೆ. ಆದುದರಿಂದ ಸಾಂಪಾತಿಕ ನಕ್ಷತ್ರವು ಗಣನೆಯಲ್ಲಿ ಮೊದಲನೆಯದಾಗಿರುತ್ತದೆ ಅಥವಾ ಸಾಂಪಾತಿಕ ನಕ್ಷತ್ರದ ದೇವತೆಯು ಇತರ ದೇವತೆಗಳಿಗಿಂತ ಮೊದಲು ಹುಟ್ಟುತ್ತಾನೆ, ಇಲ್ಲವೇ ಆ ದೇವತೆಯು ಇತರ ದೇವತೆಗಳ ಪುರೋಹಿತ ಅಂದರೆ ಮುಂದಾಳಾಗಿರುತ್ತಾನೆ ಇಲ್ಲವೇ ತಂದೆಯಾಗಿರುತ್ತಾನೆ. ದೇವತೆಯು ಸ್ತ್ರೀಯಾಗಿದ್ದರೆ ಅವಳು ಇತರ ದೇವತೆ ಗಳ ತಾಯಿಯಾಗಲೀ, ಅಕ್ಕನಾಗಲೀ ಆಗಿರುತ್ತಾಳೆ. ೪. ಸಾಂಪಾತಿಕ ನಕ್ಷತ್ರವು ಬಹಳ ವರ್ಷಗಳ ತನಕ ವಸಂತ ಋತುವಿನಲ್ಲಿ ಸೂರ್ಯೋದಯದ ಮೊದಲು ಸೂರ್ಯನ ಉದಯ ಸ್ಥಾನವಾಗಿರುವ ಪೂರ್ವದಿಕ್ಕಿನಲ್ಲಿಯೇ ಕಾಣಿಸುತ್ತದೆ. ಆದುದರಿಂದ ಅದು ತನ್ನ ಸ್ಥಾನದಿಂದ ಕದಲುವುದಿಲ್ಲವೆಂದು ವರ್ಣಿಸಲ್ಪಡುತ್ತದೆ. ೫. ಸಾಂಪಾತಿಕ ನಕ್ಷತ್ರದ ದೇವತೆಯು ಸಾಂಪಾತಿಕ ನಕ್ಷತ್ರದಲ್ಲಿ ಹುಟ್ಟಿದವನೆಂದು ವರ್ಣಿಸಲ್ಪಡು ತ್ತಾನೆ. ಕಾರಣವೇನೆಂದರೆ ಅಧಿಕಾಂಶ ನಕ್ಷತ್ರಗಳ ದೇವತೆಗಳ ಹೆಸರುಗಳು ಅಗ್ನಿಯ ಪರ್ಯಾಯ ನಾಮಗಳೇ ಆಗಿರುವುದರಿಂದ ಸಾಂಪಾತಿಕ ನಕ್ಷತ್ರದ ಉದಯ ದೊಂದಿಗೆ ಅರಣಿಗಳ ಮಂಥನದಿಂದ ಹುಟ್ಟುವವನು ಅಗ್ನಿಯೇ ಆಗಿರುತ್ತಾನೆ.

ಈ ತನಕ ತಿಳಿದುಬಂದಂತೆ ಋಗ್ವೇದದಲ್ಲಿರುವ ಅತ್ಯಂತ ಪ್ರಾಚೀನ ಐತಿ ಹ್ಯವು ತಿಷ್ಯ ನಕ್ಷತ್ರದ್ದಾಗಿದೆ. ಅದರ ದೇವತೆಯು ಬೃಹಸ್ಪತಿಯಾಗಿದ್ದಾನೆ. ಮತ್ತು ಅವನು ತಿಷ್ಯ ನಕ್ಷತ್ರದಲ್ಲಿ ಹುಟ್ಟಿದವನಾಗಿದ್ದಾನೆ. ಮುಂದೆ ಕೊಡಲಾಗುವ ಋಚೆ ಯಲ್ಲಿ ತಿಷ್ಯನು ದಿವದಿಂದ ಇಲ್ಲವಾಗುವುದಿಲ್ಲ ಅಥವಾ ಕದಲುವುದೇ ಇಲ್ಲವೆಂಬ ಉಲ್ಲೇಖವಿದೆ. ಅದರ ಮೇಲಿಂದ ಒಂದು ಕಾಲದಲ್ಲಿ ವಸಂತ ಸಂಪಾತವು ಪುಷ್ಯ ನಕ್ಷತ್ರದಲ್ಲಿ ಇದ್ದಿತೆಂದು ಸಿದ್ಧವಾಗುತ್ತದೆ—

ಯುಷ್ಮಾದತ್ತಸ್ಯ ಮರುತೋ ವಿಚೇತಸೋ
ರಾಯಃ ಸ್ಯಾಮ ರಥ್ಯೋ೩ ವಯಸ್ವತಃ ।
ನ ಯೋ ಯುಚ್ಛತಿ ತಿಷ್ಯೋ೩ ಯಥಾ ದಿವೋ
ಅಸ್ಮೇ ರಾರಂತ ಮರುತಃ ಸಹಸ್ರಿಣಮ್ ॥ ಋ. ೫–೫೪ ೧೩ ॥

ಅರ್ಥ – ಮಹಾ ಪ್ರಾಜ್ಞರಾದ ಹೇ ಮರುತ್ತುಗಳೇ, ನಾವು ನಿಮ್ಮಿಂದ ಕೊಡಲ್ಪಟ್ಟಂಥ ಧನದಿಂದ ತುಂಬಿದ ರಥದ ರಥಿಕರಾಗುವಂತಾಗಲಿ, ಮತ್ತು ಹೇ ಮರುತ್ತುಗಳೇ, ತಿಷ್ಯನು ಹೇಗೆ ದಿವದಿಂದ ಕದಲಿ ಹೋಗುವುದಿಲ್ಲವೋ ಅಥವಾ

ತನ್ನ ಸ್ಥಾನದಿಂದ ಇಲ್ಲವಾಗುವುದಿಲ್ಲವೋ ಹಾಗೆಯೇ ನೀವು ನಮಗೆ ಕೊಟ್ಟಂಥ ಸಹಸ್ರಸಂಖ್ಯೆಯ ಧನವು ಕೂಡ ಅಳಿಯದೇ ಸ್ಥಿರವಾಗಿರಲಿ.

ಮುಂದೆ ಕೊಡಲಾಗುವ ತೈತ್ತಿರೀಯ ಬ್ರಾಹ್ಮಣದ ವಾಕ್ಯದಲ್ಲಿ ಬೃಹಸ್ಪತಿಯನ್ನು ಮೂವತ್ತಮೂರು ದೇವತೆಗಳ ಪುರೋಹಿತನೆಂದು ಕರೆದಿದೆ -

ತ್ರಯಾ ದೇವಾ ಏಕಾದಶ । ತ್ರಯಸ್ತ್ರಿಂಶಾಃ ಸುರಾಧಸಃ । ಬೃಹಸ್ಪತಿ ಪುರೋಹಿತಾಃ ॥ ತೈ. ಬ್ರಾ ೨-೬-೫-೭ ॥

ಅರ್ಥ – ದೇವತೆಗಳು ಮೂರು ಸರ್ತಿ ಹನ್ನೊಂದಾಗಿದ್ದಾರೆ. ಅಥವಾ ಚೆಲೋ ಉಡುಗೆರೆಗಳನ್ನು ಕೊಡುವಂಥ ಮೂವತ್ತಮೂರಾಗಿದ್ದಾರೆ. ಮತ್ತು ಅವರು ಬೃಹಸ್ಪತಿಯು ಪುರೋಹಿತನಾಗಿರುವಂಥವರು ಅಥವಾ ಮುಂದಾಳಾಗಿರುವವರಾಗಿದ್ದಾರೆ.

ಯಜುರ್ವೇದದ ತೈತ್ತಿರೀಯ ಸಂಹಿತೆಯಲ್ಲಿ ಕೂಡ ಬೃಹಸ್ಪತಿಯನ್ನು ದೇವತೆಗಳ ಪುರೋಹಿತ ಅಂದರೆ ಮುಂದಾಳು ಎಂದು ಕರೆದಿದೆ.

ಬೃಹಸ್ಪತಿರ್ದೇವಾನಾಂ ಪುರೋಹಿತಃ ॥ ತೈ. ಸಂ. ೬-೪-೧೦-೧ ॥

ಮೂವತ್ತಮೂರು ದೇವತೆಗಳೆಂದರೆ ಆರ್ಯಜನರು ಚಂದ್ರನ ಗತಿಯನ್ನು ನಿರ್ಧರಿಸಲು ಪ್ರಾಚೀನ ಕಾಲದಲ್ಲಿ ಗುರುತಿಸಿದ ಮೂವತ್ತಮೂರು ನಕ್ಷತ್ರ ಪುಂಜಗಳೆಂದು ಹಿಂದೆ "ಭಾರತೀಯ ಜ್ಯೋತಿಷ" ಎಂಬ ಅಧ್ಯಾಯದಲ್ಲಿ ಸಿದ್ಧಪಡಿಸಿದೆ. ಆದುದರಿಂದ ಅದನ್ನು ಇಲ್ಲಿ ಮರಳಿ ವಿವರಿಸಬೇಕಾಗಿಲ್ಲ.

ಋಗ್ವೇದದ ೨-೨೪-೯ ರಲ್ಲಿ ಬೃಹಸ್ಪತಿಯನ್ನು ಪುರೋಹಿತನೆಂತಲೂ ಯುದ್ಧದಲ್ಲಿ ತುಂಬಾ ಸ್ತುತಿಸಲ್ಪಡುವವನೆಂತಲೂ ವರ್ಣಿಸಿದೆ.[1] ಹಾಗೆಯೇ ೪-೫೦-೧ ರಲ್ಲಿ ವಿಪ್ರರು ಹಾಗೂ ಋಷಿಗಳು ಬೃಹಸ್ಪತಿಯನ್ನು ಮುಂದೆ ಇಟ್ಟರು ಅಥವಾ ಮುಂದಾಳನ್ನಾಗಿ ಅಂದರೆ ಪುರೋಹಿತನನ್ನಾಗಿ ಮಾಡಿದರು ಎಂದು ಹೇಳಿದೆ.[2] ಮುಂದೆ ಕೊಡಲಾಗುವ ಋಚೆಯಲ್ಲಿ ಬೃಹಸ್ಪತಿಯನ್ನು ದೇವತೆಗಳ ತಂದೆಯೆಂದು ವರ್ಣಿಸಿದೆ—

ಸ ಇಜ್ಜನೇನ ಸ ವಿಶಾ ಸ ಜನ್ಮನಾ ಸ ಪುತ್ರೈರ್ವಾಜಂ ಭರತೇ ಧನಾ ನೃಭಿಃ । ದೇವಾನಾಂ ಯಃ ಪಿತರಮಾ ವಿವಾಸತಿ ಶ್ರದ್ಧಾಮನಾ ಹವಿಷಾ ಬೃಹ್ಮಣಸ್ಪತಿಮ್ ॥ ೨-೨೬-೩ ॥

ಅರ್ಥ – ಯಾವನು ಶ್ರದ್ಧಾಯುಕ್ತ ಮನಸ್ಸಿನಿಂದ ದೇವತೆಗಳ ತಂದೆ

---

[1] ಸ ಸಂನಯಃ ವಿನಯಃ ಪುರೋಹಿತಃ ಸ ಸುಷ್ಟುತಃ ಸ ಯುಧಿ ಬೃಹ್ಮಣಸ್ಪತಿಃ ॥ ೨-೨೪-೯॥

[2] ಯಸ್ತಸ್ತಂಭ ಸಹಸಾ ವಿಜ್ಮೋ ಅಂತಾನ್ ಬೃಹಸ್ಪತಿ ಸ್ತ್ರಿಷಧಸ್ಥೋರವೇಣ । ತಂ ಪ್ರತ್ನಾಸ ಋಷಯೋ ದೀಧ್ಯಾನಾಃ ಪುರೋವಿಪ್ರಾ ದಧಿರೇ ಮಂದ್ರಜಿಹ್ವಮ್ ॥ ೪-೫೦-೧ ॥

ಯಾವ ಬೃಹಸ್ಪತಿಯನ್ನು ಹವಿಸ್ಸಿನಿಂದ ಆರಾಧಿಸುತ್ತಾನೋ ಅವನು ಮಾತ್ರ ಹುಟ್ಟಿದ ಸಕಲ ಜನರೊಂದಿಗೆ ಧಾನ್ಯಾದಿ ಅನ್ನಗಳನ್ನು ಪಡೆಯುತ್ತಾನೆ. ಮತ್ತು ಅವನೇ ಪುತ್ರರಿಂದಲೂ ಪ್ರಜೆಗಳಿಂದಲೂ ಸೇವಕಜನರಿಂದಲೂ ಕೂಡಿದವನಾಗಿ ಧನವನ್ನು ಪಡೆಯುತ್ತಾನೆ.

ಮುಂದೆ ಕೊಡಲಾಗುವ ತೈತ್ತಿರೀಯ ಬ್ರಾಹ್ಮಣದ ವಾಕ್ಯದಲ್ಲಿ ಬೃಹಸ್ಪತಿಯು ಪುಷ್ಯ ನಕ್ಷತ್ರದಲ್ಲಿ ಹುಟ್ಟಿದ್ದನೆಂಬ ವರ್ಣನೆ ಇದೆ—

ಬೃಹಸ್ಪತಿಃ ಪ್ರಥಮಂ ಜಾಯಮಾನಃ । ತಿಷ್ಯಂ ನಕ್ಷತ್ರಮಭಿ ಸಂಬಭೂವ ॥ ತೈ. ಬ್ರಾ. ೩-೧-೧-೫ ॥ ಅಂದರೆ – ಬೃಹಸ್ಪತಿಯು ಮೊತ್ತಮೊದಲು ಹುಟ್ಟುವಾಗ ಪುಷ್ಯ ನಕ್ಷತ್ರದ ಮುಂದೆ ಹುಟ್ಟಿದ್ದನು. ಹಾಗೆಯೇ ಋಗ್ವೇದದಲ್ಲಿ ಬೃಹಸ್ಪತಿಯು ಮೊದಲು ದೂರದ ಆಕಾಶದಲ್ಲಿ (ವಿದ್ಯುತ್ತಿನ ರೂಪದಲ್ಲಿ) ಹುಟ್ಟಿದ್ದನೆಂದು ಸೂಚಿಸುವ ಉಲ್ಲೇಖವೂ ಇದೆ.

ಬೃಹಸ್ಪತಿಃ ಪ್ರಥಮಂ ಜಾಯಮಾನಃ ಮಹೋಜ್ಯೋತಿಷಃ ಪರಮೇ ವ್ಯೋಮನ್ । ಸಪ್ತಾಸ್ಯಸ್ತುವಿಜಾತೋ ರವೇಣ ವಿ ಸಪ್ತರಶ್ಮಿರಧಮತ್ ತಮಾಂಸಿ ॥ ೪-೫೦-೧ ॥

ಅರ್ಥ - ಬೃಹಸ್ಪತಿಯು ಮೊತ್ತಮೊದಲು ಹುಟ್ಟುವಾಗ ದೂರದ ಆಕಾಶದಲ್ಲಿ ದೊಡ್ಡ ಶಬ್ದದೊಂದಿಗೆ ಮಹತ್ತಾದ ಬೆಳಕಿನಿಂದ ಹುಟ್ಟಿದ್ದನು. ಏಳು ಮೋರೆಗಳೂ, ಏಳು ರಶ್ಮಿಗಳೂ ಉಳ್ಳ ಅವನು ಬಹಳ ಬಲದಿಂದ ಹುಟ್ಟಿದವನಾಗಿ ಕತ್ತಲೆಗಳನ್ನು ನಾಶಪಡಿಸಿದನು.

ಬೃಹಸ್ಪತಿಯು ಪುಷ್ಯನಕ್ಷತ್ರದ ದೇವತೆಯೆಂಬುದನ್ನು ಲಕ್ಷ್ಯದಲ್ಲಿಟ್ಟು ಹಿಂದಿನ ವಿವರಗಳನ್ನು ಪರಿಶೀಲಿಸಿದರೆ ಒಂದು ಕಾಲದಲ್ಲಿ ಪುಷ್ಯನಕ್ಷತ್ರವು ವಸಂತ ಸಂಪಾತದ ಸ್ಥಾನದಲ್ಲಿದ್ದಿತೆಂಬ ನಿರ್ಣಯಕ್ಕೆ ಬರಲೇಬೇಕಾಗುತ್ತದೆ. ಹಾಗಲ್ಲದಿದ್ದರೆ ಬೃಹಸ್ಪತಿಯು ದೇವತೆಗಳ ಪುರೋಹಿತರೂ, ತಂದೆಯೂ, ಗಣನೆಯಲ್ಲಿ ಮೊದಲಿಗನೂ ಆಗಲು ಸಾಧ್ಯವಿರಲಿಲ್ಲ. ಮತ್ತು ಅವನು ಪುಷ್ಯನಕ್ಷತ್ರದಲ್ಲಿ ಹುಟ್ಟುತ್ತಿರಲಿಲ್ಲ. ಅಂದರೆ ಹಿಂದೆ ಉದಹರಿಸಿದ ಪ್ರಮಾಣಗಳಲ್ಲಿ ಪುಷ್ಯನಕ್ಷತ್ರವು ಸಂಪಾತಸ್ಥಾನದಲ್ಲಿದ್ದಿತೆಂಬ ಐತಿಹ್ಯವು ಅಡಗಿದೆಯೆಂದು ಸ್ಪಷ್ಟವಾಗಿ ಸಿದ್ಧವಾಗುತ್ತದೆ. ಋಗ್ವೇದದ ಬೃಹಸ್ಪತಿ ಸೂಕ್ತಗಳಲ್ಲಿ ಮತ್ತು ಬೇರೆ ಬೇರೆ ಬ್ರಾಹ್ಮಣಗಳಲ್ಲಿ ಬೃಹಸ್ಪತಿಗೆ ಸಂಬಂಧಪಟ್ಟ ಇನ್ನೂ ಹಲವು ಐತಿಹ್ಯಗಳಿವೆ.

ಋಗ್ವೇದದಲ್ಲಿ ಉಲ್ಲೇಖಿಸಲ್ಪಟ್ಟಿರುವ ಐತಿಹ್ಯಗಳಲ್ಲಿ ಬೃಹಸ್ಪತಿಯ ತರುವಾಯದ ಐತಿಹ್ಯವು ಅದಿತಿಗೆ ಸಂಬಂಧಪಟ್ಟುದಾಗಿದೆ. ಅದಿತಿಯು ಪುನರ್ವಸೂ ನಕ್ಷತ್ರದ ದೇವತೆಯಾಗಿದ್ದಾಳೆ. ಆದುದರಿಂದ ಅದಿತಿಯ ಐತಿಹ್ಯವೆಂದರೆ ಪುಷ್ಯನಕ್ಷತ್ರದಲ್ಲಿದ್ದ ವಸಂತ ಸಂಪಾತ ಬಿಂದುವು ಅದರಿಂದ ಹಿಂದಕ್ಕೆ ಚಲಿಸುತ್ತ ಪುನ

ರ್ವಸೂ ನಕ್ಷತ್ರದಲ್ಲಿ ಬಂದುದರ ಇತಿಹಾಸವಾಗಿದೆಯೆಂಬುದರಲ್ಲಿ ಸಂದೇಹವಿಲ್ಲ, ಅದಿತಿಗೆ ಸಂಬಂಧಪಟ್ಟ ಋಗ್ವೇದದ ಒಂದು ಮಂತ್ರವು ಮುಂದಿನಂತಿದೆ—

ಅದಿತಿರ್ಹ್ಯಜನಿಷ್ಟ ದಕ್ಷ ಯಾ ದುಹಿತಾ ತವ ।

ತಾಂ ದೇವಾ ಅನ್ವಜಾಯಂತ ಭದ್ರಾ ಅಮೃತ ಬಂಧವಃ ॥ ೧೦ ೭೨-೫॥

ಅರ್ಥ - ಹೇ ದಕ್ಷನೇ, ನಿನ್ನ ಮಗಳಾದ ಯಾವ ಅದಿತಿ ಇರುವಳೋ ಅವಳು (ಮೊದಲು) ಹುಟ್ಟಿದಳು. ಅವಳನ್ನು ಅನುಸರಿಸಿ ಮಂಗಲ ಸ್ವರೂಪರೂ, ಅಮೃತದ ಬಂಧುಗಳೂ ಆದ (ಇತರ) ದೇವತೆಗಳು ಹುಟ್ಟಿದರು.

ದಕ್ಷ ಎಂಬುದು ಪ್ರಜಾಪತಿಯ ಹೆಸರಾಗಿದೆ. ಎಲ್ಲ ದೇವತೆಗಳು ಮತ್ತು ಅಸುರರು ಪ್ರಜಾಪತಿಯ ಮಕ್ಕಳಾಗಿದ್ದಾರೆ. ಹಾಗೆಯೇ ಎಲ್ಲ ಮೂವತ್ತಮೂರು ನಕ್ಷತ್ರಗಳೂ ಪ್ರಜಾಪತಿಯ ಮಕ್ಕಳಾಗಿವೆ. ಆದುದರಿಂದ ನಕ್ಷತ್ರದೇವತೆಯಾಗಿರುವ ಅದಿತಿಯು ಕೂಡ ಪ್ರಜಾಪತಿಯ ಮಗಳಾಗಿದ್ದಾಳೆ. ಅರ್ಥಾತ್ ಅದಿತಿಯು ನಕ್ಷತ್ರದೇವಿಯಾಗಿರುವುದರಿಂದ ಅವಳನ್ನನುಸರಿಸಿ ಹುಟ್ಟಿದ ಇತರ ದೇವತೆಗಳು ಕೂಡ ಅವಳ ತರುವಾಯ ಉದಯಿಸಿದ ಪುಷ್ಯ, ಆಶ್ಲೇಷಾ, ಮಘಾ ಮೊದಲಾದ ನಕ್ಷತ್ರಗಳೇ ಆಗಿದ್ದುವೆಂಬುದರಲ್ಲಿ ಸಂದೇಹವಿಲ್ಲ. ಅಲ್ಲದೇ ವೈದಿಕ ಸಾಹಿತ್ಯದಲ್ಲಿ ಅಂಧಕಾರವನ್ನು ಅಥವಾ ರಾತ್ರಿಯನ್ನು "ಮೃತ್ಯು"[1] ಎಂದು ಉದಾಹರಣೆಯಿರುವುದರಿಂದ ಹಿಂದಿನ ಋಚೆಯಲ್ಲಿ ಬಂದಿರುವ "ಅಮೃತ" ಶಬ್ದವು ಪ್ರಕಾಶವನ್ನು ಅಥವಾ ಹಗಲನ್ನು ಸೂಚಿಸುತ್ತದೆನ್ನಬೇಕಾಗುತ್ತದೆ. ಆದುದರಿಂದ ಅಮೃತದ ಬಂಧುಗಳಾದ ದೇವತೆಗಳೆಂದರೆ ಪ್ರಕಾಶಕ್ಕೆ ಸಂಬಂಧಪಟ್ಟ ದೇವತೆಗಳೆಂದು ಅಥವಾ ಸೂರ್ಯನ ಉತ್ತರಾಯಣ ಆರಂಭವಾದೊಡನೆ ಉತ್ತರ ಧ್ರುವಪ್ರದೇಶದಲ್ಲಿ ಬೆಳಕು ಹರಿಯುತಿದ್ದುದರಿಂದ ಅಲ್ಲಿ ಉತ್ತರಾಯಣದ ರಾತ್ರಿಗಳಲ್ಲಿ ಕಾಣಿಸುತಿದ್ದ ನಕ್ಷತ್ರಗಳೆಂದು ಮತ್ತು ಅದಿತಿಯ ತರುವಾಯ ಉದಯಿಸುತಿದ್ದ ನಕ್ಷತ್ರಗಳೆಂದು ತಿಳಿಯಬೇಕಾಗುತ್ತದೆ. ಅಂದರೆ ಹಿಂದಿನ ಮಂತ್ರದೊಳಗಿನ ಉಲ್ಲೇಖದಿಂದ ಆ ಕಾಲದಲ್ಲಿ ನಕ್ಷತ್ರಗಳ ಗಣನೆಯು ಅದಿತಿಯಿಂದ ಪ್ರಾರಂಭವಾಗುತಿದ್ದಿತೆಂದು ಮತ್ತು ಅದಿತಿಯ ಉದಯದ ತರುವಾಯ ಉತ್ತರಾಯಣದ ಬೆಳಕು ಹರಿಯುತಿದ್ದಿತೆಂದು ಸ್ಪಷ್ಟವಾಗಿ ಸಿದ್ಧವಾಗುತ್ತದೆ. ಅದಿತಿಗೆ ಸಂಬಂಧಪಟ್ಟ ಬೇರೆ ಎರಡು ಋಚೆಗಳು ಹಿಂದೆ "ಆರ್ಯಜನರ ಮೂಲಸ್ಥಾನ" ಎಂಬ ಅಧ್ಯಾಯದಲ್ಲಿ ಬಂದಿವೆ.

ಯಜ್ಞವು ವಸಂತ ಋತುವಿನ ಮೊದಲನೆಯ ದಿನ ಸಾಂಪಾತಿಕ ನಕ್ಷತ್ರದ ಉದಯದೊಂದಿಗೆ ಪ್ರಾರಂಭವಾಗುತಿದ್ದಿತೆಂದು ಹಿಂದೆ ಹೇಳಿದೆ. ಅದಕ್ಕನುಸಾರವಾಗಿ ಪ್ರಾಚೀನ ಕಾಲದಲ್ಲಿ ಅದಿತಿಯಿಂದ ಯಜ್ಞವು ಪ್ರಾರಂಭವಾಗುತಿದ್ದಿತೆಂಬು

---

[1] (ತೇ) ಅಬಿಭಯೂ ರಾತ್ರೇಸ್ತಮಸೋ ಮೃತ್ಯೋಸ್ತಸ್ಮಾದ್ಧಾಪ್ಯೇತರ್ಹಿ ನಕ್ತಂ ಯಾವನ್ಮಾತ್ರಮಿವೈವಾಪಕ್ರಮ್ಯ ಬಿಭೇತಿ ತಮ ಇವ ಹಿ ರಾತ್ರಿರ್ಮೃತ್ಯುರಿವ ॥ ಐ. ಬ್ರಾ. ೪-೧-೫ ॥

ವನ್ನು ಸ್ಪಷ್ಟವಾಗಿ ಸೂಚಿಸುವ ಒಂದು ಐತಿಹಾಸಿಕ ಆಖ್ಯಾಯಿಕೆಯು ಐತರೇಯ ಬ್ರಾಹ್ಮಣದಲ್ಲಿ ಮುಂದೆ ಕೊಟ್ಟಿರುವಂತೆ ವರ್ಣಿಸಲ್ಪಟ್ಟಿದೆ–

"ಯಜ್ಞೋ ವೈ ದೇವೇಭ್ಯ ಉದಕ್ರಾಮತ್। ತೇ ದೇವಾ ನ ಕಿಂಚನಾಶಕ್ನುವನ್ ಕರ್ತುಂ ನ ಪ್ರಾಜಾನಂಸ್ತೇಽಬ್ರುವನ್ನದಿತಿಂ ತ್ವಯೇಮಂ ಯಜ್ಞಂ ಪ್ರಜಾನಾಮೇತಿ। ಸಾ ತಥೇತ್ಯಬ್ರವೀತ್ ಸಾ ವೈ ವೋ ವರಂವೃಣಾ ಇತಿ ವೃಣೀಷ್ವೇತಿ ಸೈತಮೇವ ವರಮವೃಣೀತ ಮತ್ಪ್ರಾಯಣಾ ಯಜ್ಞಾಃ ಸಂತು ಮದುದಯನಾ ಇತಿ। ತಥೇತಿ। ತಸ್ಮಾದಾದಿತ್ಯಚರುಃ ಪ್ರಾಯಣೀಯೋ ಭವತ್ಯಾದಿತ್ಯಚರುರುದಯನೀಯೋ ವರವೃತೋಹ್ಯಸ್ಯಾ ಅಥೋ ಏತಂ ವರಮವೃಣೀತ ಮಯ್ಯೈವ ಪ್ರಾಚೀಂ ದಿಶಂ ವ್ಯಜಾನಾಥ ॥ ಐ. ಬ್ರಾ. ೧–೨-೭॥

ಅರ್ಥ– ಯಜ್ಞವು ದೇವತೆಗಳ ಬಳಿಯಿಂದ ಓಡಿ ಹೋಯಿತು. ಆಗ ದೇವತೆಗಳು ಏನನ್ನೂ ಮಾಡಲಾರದಾದರು ಮತ್ತು ಏನನ್ನೂ ತಿಳಿಯದಾದರು. ಅವರು ಅದಿತಿಯೊಡನೆ ನಾವು ನಿನ್ನಿಂದ ಯಜ್ಞವನ್ನು ತಿಳಿಯಬಯಸುತ್ತೇವೆಂದರು. ಅದಿತಿಯು ಆಗಲಿ, ಆದರೆ ನಾನು ನಿಮ್ಮೊಡನೆ ಒಂದು ವರವನ್ನು ಬೇಡುವೆನೆಂದಳು. ದೇವತೆಗಳು ಹಾಗೆಯೇ ಆಗಲೆಂದರು. ಆಗ ಅದಿತಿಯು ನಿಮ್ಮ ಯಜ್ಞವು ನನ್ನಿಂದ ಅಂದರೆ ಮೊತ್ತ ಮೊದಲಿನ ಆಹುತಿಯು ನನಗೆ ಅರ್ಪಿಸುವುದರಿಂದ ಪ್ರಾರಂಭವಾಗಬೇಕು ಮತ್ತು ಯಜ್ಞವು ನನ್ನಿಂದಲೇ ಪರಿಸಮಾಪ್ತವಾಗಬೇಕು ಎಂದಳು. ದೇವತೆಗಳು ಒಪ್ಪಿದರು. ಆದುದರಿಂದ ಯಜ್ಞದ ಪ್ರಾರಂಭ ಕಾಲದಲ್ಲಿಯೂ ಸಮಾಪ್ತಿ ಕಾಲದಲ್ಲಿಯೂ ಆದಿತ್ಯ ಚರುವು ಅಂದರೆ ಅದಿತಿಗೆ ಅರ್ಪಿಸಲ್ಪಡುವಂಥ ಚರುವು ಬೇಯಿಸಲ್ಪಡುತ್ತದೆ. ಅಷ್ಟೇ ಅಲ್ಲ ಅದಿತಿಯು ದೇವತೆಗಳೊಡನೆ "ನೀವು ನನ್ನಿಂದಲೇ ಅಂದರೆ ನನ್ನ ಉದಯದಿಂದಲೇ ಪೂರ್ವ ದಿಕ್ಕನ್ನು ತಿಳಿಯಿರಿ" ಎಂಬ ವರವನ್ನೂ ಬೇಡಿದ್ದಳು.

ಹಿಂದಿನ ಆಖ್ಯಾಯಿಕೆಯೊಳಗಿನ ಐತಿಹ್ಯವನ್ನು ಮುಂದಿನಂತೆ ವಿವರಿಸಬಹುದು. ವಸಂತ ಸಂಪಾತ ಬಿಂದುವು ಪುನರ್ವಸೂ ನಕ್ಷತ್ರದಲ್ಲಿದ್ದ ಕಾಲದಲ್ಲಿ ಉತ್ತರ ಧ್ರುವ ಪ್ರದೇಶದ ಜನರಿಗೆ ವಸಂತ ಋತುವಿನ ಮೊದಲನೆಯ ದಿನ ಸೂರ್ಯೋದಯದ ಮೊದಲು ಪೂರ್ವದಿಕ್ಕಿನಲ್ಲಿ ಪುನರ್ವಸೂ ನಕ್ಷತ್ರವು ಕಾಣಿಸುತ್ತಿತ್ತು. ಅದು ಅಂದಿನಿಂದ ಕೊಂಚ ಕೊಂಚವಾಗಿ ದಕ್ಷಿಣಕ್ಕೆ ಸಾಗುತ್ತ ಒಂದು ವರ್ಷದಲ್ಲಿ ಭೂಮಿಯ ಪೂರ್ಣ ಪ್ರದಕ್ಷಿಣೆಯನ್ನು ತೆಗೆದು ಮರಳಿ ಪೂರ್ವ ದಿಕ್ಕಿಗೆ ಬರುತ್ತಿತ್ತು. ಆಗ ಒಂದು ವರ್ಷವು ಮುಗಿಯುತ್ತಿತ್ತು. ಅರ್ಥಾತ್ ಅವರು ವಸಂತ ಋತುವಿನ ಮೊದಲನೆಯ ದಿನ ಅದಿತಿಯು ಅಥವಾ ಸರಿಯಾದ ಬೆಳಕು ಕಾಣಿಸುವಾಗ ಪೂರ್ವದಿಕ್ಕಿನಲ್ಲಿ ಪುನರ್ವಸೂ ನಕ್ಷತ್ರವು ಕಾಣಿಸುತ್ತಿದ್ದುದರಿಂದ ಅವರು

ಯಜ್ಞದ ಆರಂಭದಲ್ಲಿ ಪುನರ್ವಸೂ ನಕ್ಷತ್ರದ ದೇವತೆಯಾದ ಅದಿತಿಗೆ ಮೊತ್ತ ಮೊದಲಿನ ಆಹುತಿಯನ್ನು ಅರ್ಪಿಸುತ್ತಿದ್ದರು. ವರ್ಷದ ಕೊನೆಗೆ ಪುನರ್ವಸೂ ನಕ್ಷತ್ರವು ಒಂದು ಸುತ್ತನ್ನು ಮುಗಿಸಿ ಮರಳಿ ಪೂರ್ವಕ್ಕೆ ಬರುತಿತ್ತು. ಮತ್ತು ಯಜ್ಞವು ಕೊನೆಗೊಳ್ಳುತಿತ್ತು. ಹಾಗಾಗಿ ಆವರು ಯಜ್ಞ ಸಮಾಪ್ತಿಯ ಕಾಲದಲ್ಲಿ ಯೂ ಪುನರ್ವಸೂ ನಕ್ಷತ್ರದ ದೇವತೆಯಾದ ಅದಿತಿಗೆ ಆಹುತಿಯನ್ನು ಅರ್ಪಿಸುತಿದ್ದರು.

ದೇವತೆಗಳು ಹಿಂದೆ ಪುನರ್ವಸೂ ನಕ್ಷತ್ರದಲ್ಲಿ ಯಜ್ಞದ ಅಗ್ನಿಯನ್ನು ಆಧಾನ ಮಾಡಿದರು- ಎಂಬ ಒಂದು ಐತಿಹ್ಯವು ತೈತ್ತಿರೀಯ ಬ್ರಾಹ್ಮಣದಲ್ಲಿ ಮುಂದಿನಂತೆ ವಿವರಿಸಲ್ಪಟ್ಟಿದೆ–

"ದೇವಾ ವೈ ಭದ್ರಾಃ ಸಂತೋಽಗ್ನಿಮಾಧಿತ್ಸಂತ। ತೇಷಾಮನಾಹಿತೋಽಗ್ನಿರಾಸೀದ್ ಅಥೈಭ್ಯೋವಾಮಂ ವಸ್ವಪಾಕ್ರಾಮತ್ । ತೇ ಪುನರ್ವಸ್ವೋರಾದಧತ । ತತೋ ವೈತಾನ್ ವಾಮಂ ವಸೂಪಾವರ್ತತ । ಯಃ ಪುರಾ ಭದ್ರಃ ಸನ್ ಪಾಪೀಯಾನ್‌ತ್ಸ್ಯಾತ್‌ಸ ಪುನರ್ವಸ್ವೋರಾದಧೀತ। ಪುನರೇವೈನಂ ವಾಮಂ ವಸೂಪಾವರ್ತತೇ। ಭದ್ರೋ ಭವತಿ ॥ತೈ. ಬ್ರಾ. ೧-೧-೨-೧॥

ಅರ್ಥ– ಧನಸಂಪನ್ನನಾಗಿ ಸುಖದಿಂದಿದ್ದ ದೇವತೆಗಳು ಯಜ್ಞ ಜರುಗಿಸುವ ಬಯಕೆಯಿಂದ ಅಗ್ನಿಯನ್ನು ಆಧಾನ ಮಾಡಿದರು. ಆದರೆ ಅವರ ಅಗ್ನಿಯು ಅನಾಹಿತವಾಗಿತ್ತು. ಅಂದರೆ ಅವರು ಅಗ್ನಿಯನ್ನು ಆಧಾನ ಮಾಡುವಾಗ ಯೋಗ್ಯ ದಿನವನ್ನಾಗಲೀ, ನಕ್ಷತ್ರವನ್ನಾಗಲೀ ನೋಡಿರಲಿಲ್ಲ, ಮತ್ತು ವಿಧಿಪೂರ್ವಕ ಸಮಿತ್ತುಗಳನ್ನೂ ಇಟ್ಟಿರಲಿಲ್ಲ, ಆದುದರಿಂದ ಅವರ ಧನ ಸಂಪತ್ತು ಹೋಗಿ ಬಿಟ್ಟಿತು. ತರುವಾಯ ಅವರು ಪುನರ್ವಸೂ ನಕ್ಷತ್ರದಲ್ಲಿ–ವಿಧಿಪೂರ್ವಕ ಅಗ್ನಿಯನ್ನು ಆಧಾನ ಮಾಡಿದರು, ಆಗ ಅವರ ಕಳೆದು ಹೋದ ಧನ ಸಂಪತ್ತು ಮರಳಿ ಅವರ ಬಳಿಗೆ ಬಂತು. ಯಾವನು ಮೊದಲು ಧನ ಸಂಪನ್ನನಾಗಿದ್ದು ತರುವಾಯ ಬಡ ಸ್ಥಿತಿಗೆ ಇಳಿಯುವನೋ ಅವನು ಪುನರ್ವಸೂ ನಕ್ಷತ್ರಗಳಲ್ಲಿ ಯಜ್ಞದ ಅಗ್ನಿಯನ್ನು ಆಧಾನ ಮಾಡಬೇಕು. ಅವನ ಧನ ಸಂಪತ್ತು ಮರಳುತ್ತದೆ. ಸುಖಿಯಾಗುತ್ತಾನೆ. ಅದೇ ಬ್ರಾಹ್ಮಣದಲ್ಲಿ ತುಸು ಮುಂದೆ "ಅನಾಹಿತಾಗ್ನಿ" ಎಂದರೇನೆಂದು ಮುಂದಿನಂತೆ ವಿವರಿಸಿದೆ–

"ಅನಾಹಿತಸ್ತಸ್ಯಾಗ್ನಿರಿತ್ಯಾಹುಃ । ಯಃ ಸಮಿಧೋ ಅನಾಧಾಯಾಗ್ನಿಮಾಧತ್ತೇ: ತಾಃ ಸಂವತ್ಸರೇ ಪುರಸ್ತಾದಾದಧ್ಯಾತ್ । ಸಂವತ್ಸರಾದೇವೈನಮವರುಧ್ಯಾಽಧತ್ತೇ ॥ ತೈ. ಬ್ರಾ. ೧-೧-೯-೧೦ ॥

ಅರ್ಥ- ಯಾವನು ಸಮಿತ್ತುಗಳನ್ನು ಆಧಾನಮಾಡದೇ ಅಗ್ನಿಯನ್ನು ಆಧಾನ ಮಾಡುತ್ತಾನೋ ಅವನ ಅಗ್ನಿಯು ಅನಾಹಿತಃ ಅಂದರೆ ಆಧಾನಮಾಡದ್ದು ಎನಿಸಿಕೊಳ್ಳುತ್ತದೆ. ಅಗ್ನಿಯನ್ನು ಆಧಾನಮಾಡಬೇಕೆಂದಿರುವವನು ಸಂವತ್ಸರದಲ್ಲಿ ಮುಂದಾಗಿ ಅಂದರೆ ವರ್ಷದ ಮೊದಲನೆಯ ದಿನ ವಿಧಿಪೂರ್ವಕ ಸಮಿತ್ತುಗಳನ್ನು ಆಧಾನಮಾಡಿ ತರುವಾಯ ಅಗ್ನಿಯನ್ನು ಆಧಾನಮಾಡಬೇಕು. ಆಗ ಅವನು ಅಗ್ನಿಯನ್ನು ಸಂವತ್ಸರದಿಂದ ಸುತ್ತುಗಟ್ಟಿ ಆಧಾನಮಾಡಿದಂತಾಗುತ್ತದೆ.

ಸಾಮಾನ್ಯವಾಗಿ ಎಲ್ಲ ಬ್ರಾಹ್ಮಣಗಳು ಮತ್ತು ಕಲ್ಪಸೂತ್ರಗಳು ಯಜ್ಞದ ಅಗ್ನಿಯನ್ನು ವಸಂತ ಋತುವಿನಲ್ಲಿ ಆಧಾನಮಾಡಬೇಕೆಂದು ವಿಧಿಸುತ್ತವೆ. ತೈತ್ತಿರೀಯ ಬ್ರಾಹ್ಮಣದಲ್ಲಿ ಮುಂದಿನಂತೆ ವಿಧಿಸಿದೆ—

ವಸಂತೇ ಬ್ರಾಹ್ಮಣೋಽಗ್ನಿಮಾದಧೀತ। ವಸಂತೋ ವೈ ಬ್ರಾಹ್ಮಣಸ್ಯರ್ತುಃ ಸ್ವ ಏವೈನಮೃತಾವಾಧಾಯ ಬ್ರಹ್ಮವರ್ಚಸೀ ಭವತಿ। ಮುಖಂ ವಾ ಏತದೃತೂನಾಮ್। ಯದ್ವಸಂತಃ । ಯೋ ವಸಂತಾಽಗ್ನಿಮಾಧತ್ತೇ। ಮುಖ್ಯ ಏವ ಭವತಿ ॥ ತೈ. ಬ್ರಾ. ೧-೧-೨-೬ ಮತ್ತು ೭ ॥

ಅರ್ಥ – ಬ್ರಾಹ್ಮಣನು ವಸಂತ ಋತುವಿನಲ್ಲಿ ಅಗ್ನಿಯನ್ನು ಆಧಾನಮಾಡಬೇಕು. ವಸಂತವು ಬ್ರಾಹ್ಮಣನ ಋತುವಾಗಿದೆ. ಅವನು ಸ್ವಂತ ಋತುವಿನಲ್ಲಿ ಅಗ್ನಿಯನ್ನು ಆಧಾನಮಾಡಿ ಬ್ರಹ್ಮವರ್ಚಸುಳ್ಳವನಾಗುತ್ತಾನೆ, ವಸಂತವು ಋತುಗಳ ಮುಖವಾಗಿದೆ. ಆದುದರಿಂದ ವಸಂತಋತುವಿನಲ್ಲಿ ಅಗ್ನಿಯನ್ನು ಆಧಾನಮಾಡಿದವನು ಮುಖ್ಯನಾಗುತ್ತಾನೆ.

ಅಗ್ನಿಯನ್ನು ಸಂವತ್ಸರದ ಮೊದಲನೆಯ ದಿನದಲ್ಲಿ ಮತ್ತು ವಸಂತ ಋತುವಿನಲ್ಲಿ ಆಧಾನಮಾಡಬೇಕು, ಮತ್ತು ವಸಂತವು ಋತುಗಳ ಮುಖ ಅಂದರೆ ಋತುಗಳಲ್ಲಿ ಮೊದಲನೆಯದು ಎಂಬುದಾಗಿ ಹೇಳಿರುವುದನ್ನು ಆಧಾರವಾಗಿಟ್ಟು ಕೊಂಡು ಅದರ ಮೊದಲಿನ ಎರಡು ಆಖ್ಯಾಯಿಕೆಗಳಲ್ಲಿ ಬಂದಿರುವ – ೧ ಅದಿತಿಯು ದೇವತೆಗಳೊಡನೆ ಯಜ್ಞವು ತನ್ನಿಂದಲೇ ಪ್ರಾರಂಭವಾಗಬೇಕೆಂಬ ವರವನ್ನು ಬೇಡಿದಳು ಎಂಬ ಮತ್ತು ೨. ದೇವತೆಗಳು ಪುನರ್ವಸೂ ನಕ್ಷತ್ರಗಳಲ್ಲಿ ಯಜ್ಞದ ಅಗ್ನಿಯನ್ನು ಆಧಾನ ಮಾಡಿದರು – ಎಂಬ ಹೇಳಿಕೆಗಳನ್ನು ಪರಿಶೀಲಿಸಿದರೆ ಆ ಆಖ್ಯಾಯಿಕೆಗಳಲ್ಲಿ ಅಡಗಿರುವ ಐತಿಹ್ಯಗಳ ಕಾಲದಲ್ಲಿ ವಸಂತ ಸಂಪಾತ ಬಿಂದುವು ಪುನರ್ವಸೂ ನಕ್ಷತ್ರದಲ್ಲಿದ್ದಿತೆಂಬ ತಥ್ಯವು ಹೊರಡುವುದು. ಅದನ್ನೂ ಋಗ್ವೇದದ ಮಂತ್ರಗಳಲ್ಲಿ ಉಲ್ಲೇಖಿಸಲ್ಪಟ್ಟಿರುವ ಅದಿತಿಯ ವರ್ಣನೆಗಳನ್ನೂ ಹೊಂದಿಸಿಕೊಂಡರೆ ಆ ಐತಿಹ್ಯಗಳ ಕಾಲದಲ್ಲಿ ವಸಂತ ಋತುವಿನ ಪ್ರಾರಂಭವು ಅದಿತಿಯ ಅಥವಾ ಪುನರ್ವಸೂ ನಕ್ಷತ್ರದ ಉದಯದೊಂದಿಗೆ ಆಗುತಿದ್ದಿತೆಂದು ಸ್ಪಷ್ಟವಾಗಿ ಸಿದ್ಧವಾಗುತ್ತದೆ.

ಹಿಂದಿನ ಆಖ್ಯಾಯಿಕೆಗಳಲ್ಲಿ ಅಡಕವಾಗಿರುವ ಇತಿಹಾಸವು ಆರ್ಯಜನರು ಉತ್ತರ ಧ್ರುವಪ್ರದೇಶದಲ್ಲಿ ನೆಲಸಿದ್ದ ಕಾಲಕ್ಕೆ ಸಂಬಂಧಪಟ್ಟುದಾಗಿದೆ. ಆ ಇತಿಹಾಸವು ಪುನರ್ವಸೂ ನಕ್ಷತ್ರದಲ್ಲಿ ವಸಂತ ಸಂಪಾತವಿದ್ದಿತೆಂಬುದನ್ನು ಮತ್ತು ಆ ಕಾಲದಲ್ಲಿಯೇ ವಿಧಿಯುಕ್ತವಾದ ಯಜ್ಞನಿರ್ವಹಣ ಕ್ರಮವೂ ವ್ಯವಸ್ಥಿತವಾದ ಕಾಲ ಗಣನೆಯೂ ಪ್ರಾರಂಭವಾಗಿದ್ದಿತೆಂಬುದನ್ನು ತಿಳಿಸುತ್ತದೆ. ಅದನ್ನು ಇನ್ನಷ್ಟು ಸ್ಪಷ್ಟವಾಗಿ ಮುಂದಿನಂತೆ ವಿವರಿಸಬಹುದು—

ಉತ್ತರ ಧ್ರುವ ಪ್ರದೇಶದಲ್ಲಿ ನೆಲಸಿದ್ದ ಪ್ರಾಚೀನ ಆರ್ಯಜನರು ದಕ್ಷಿಣಾಯನದ ಕಾಲದಲ್ಲಿ ಸೂರ್ಯನು ಮುಳುಗಿದ ತರುವಾಯ ಆರಂಭವಾಗುತಿದ್ದ ದೀರ್ಘ ರಾತ್ರಿಯು ಯಾವಾಗ ಕೊನೆಗೊಳ್ಳುವುದೆಂಬುದನ್ನು ಮತ್ತು ಯಾವಾಗ ಬೆಳಕು ಹರಿಯುವುದೆಂಬುದನ್ನು ಅಥವಾ ಸೂರ್ಯನು ಯಾವಾಗ ಉದಯಿಸುವನೆಂಬುದನ್ನು ತಿಳಿದಿರಲಾರರು. ಅವರು ಆ ಇಡೀ ರಾತ್ರಿಯನ್ನು ನಿದ್ದೆಯಲ್ಲಿಯೇ ಕಳೆಯುತಿದ್ದರೆನ್ನಲೂ ಆಗದು. ಆದುದರಿಂದ ಅವರು ಎಚ್ಚೆತ್ತಿರುವಾಗ ಅಗ್ನಿಕುಂಡದ ಸುತ್ತಲೂ ಕುಳಿತು ಚಳಿ ಕಾಯಿಸುತಿದ್ದಾಗ ತಮ್ಮ ಸುತ್ತಲಿನ ಕ್ಷಿತಿಜದಲ್ಲಿ ಮಿನುಗುತ್ತ ಕಾಣಿಸುತ್ತಿರುವ ನಕ್ಷತ್ರ ಪುಂಜಗಳನ್ನು ಲಕ್ಷ್ಯ ಪೂರ್ವಕ ನಿರೀಕ್ಷಿಸುತಿದ್ದರೆನ್ನಬಹುದು. ಹಾಗೆ ಅವರು ಸತತವಾಗಿ ನಕ್ಷತ್ರಗಳನ್ನು ನಿರೀಕ್ಷಿಸುತಿದ್ದುದರಿಂದ ಎಲ್ಲ ನಕ್ಷತ್ರಗಳು ಭೂಮಿಯನ್ನು ಸುತ್ತಿ ಮರಳಿ ಮೊದಲಿನ ಸ್ಥಾನಕ್ಕೆ ಬರುತ್ತವೆಂಬುದನ್ನೂ, ಅಂಥ ತೊಂಭತ್ತೊಂಭತ್ತು ಸುತ್ತುಗಳು ಮುಗಿಯುವಾಗ ಉತ್ತರ ಮತ್ತು ಪೂರ್ವ ದಿಕ್ಕುಗಳ ಸರಿ ಮಧ್ಯಪ್ರದೇಶದಲ್ಲಿ ಮಂದ ಪ್ರಕಾಶವು ಕಾಣಿಸುತ್ತದೆಂಬುದನ್ನೂ ಕಂಡು ಹಿಡಿದಿದ್ದರೆನ್ನಬಹುದು. ಮತ್ತು ಆ ನಸಿಕು ಕಾಣಿಸುವಾಗ ಆ ಸ್ಥಳದಲ್ಲಿ ಯಾವ ನಕ್ಷತ್ರವು–ಇರುತ್ತದೆಂಬುದನ್ನೂ ಗುರುತಿಸಿದ್ದರೆನ್ನಬಹುದು. ಮತ್ತು ಈಗ ತಿಳಿದಿರುವಂತೆ ಅವರು ಮೊತ್ತ ಮೊದಲು ಗುರುತಿಸಿದ ನಕ್ಷತ್ರವು ತಿಷ್ಯ ಎಂಬುದಾಗಿದ್ದಿತೆಂದೂ ಅದರ ತರುವಾಯ ಅವರು ಚಂದ್ರನ ಗತಿಯನ್ನೂ ಸಂಪಾತ ಚಲನೆಯನ್ನೂ-ನಿರ್ಧರಿಸಿದ್ದರೆಂದೂ ಹೇಳಬಹುದು. ತಿಷ್ಯ ನಕ್ಷತ್ರದ ಹೆಚ್ಚಿನ ವಿವರಗಳು ತೈತ್ತಿರೀಯ ಬ್ರಾಹ್ಮಣದಲ್ಲಿ ಬರುತ್ತವೆ. ಅದರ ತರುವಾಯ ಅವರು ಸಂಪಾತ ಸ್ಥಾನದಲ್ಲಿ ಕಂಡ ನಕ್ಷತ್ರವು "ಪುನರ್ವಸೂ" ಅಂದರೆ "ಮರಳಿ ಪ್ರಕಾಶ ತರುವಂಥ ಎರಡು ನಕ್ಷತ್ರಗಳು" ಎಂಬ ಪುಂಜವಾಗಿತ್ತು. ಪುನರ್ವಸು ಸಂಪಾತ ಕಾಲದಲ್ಲಿ ಆರ್ಯಜನರು ಜ್ಯೋತಿಷದಲ್ಲಿ ಮೊದಲಿಗಿಂತ ಹೆಚ್ಚು ಪ್ರಗತಿ ಪಡೆದಿದ್ದರೆನ್ನಬಹುದು.

ದೀರ್ಘರಾತ್ರಿಯ ಕತ್ತಲೆಯಿಂದ ಕುರುಡರಂತಾದ, ಉತ್ತರ ಧ್ರುವ ಪ್ರದೇಶದ ಆರ್ಯಜನರು ಆ ರಾತ್ರಿಯ ಕೊನೆಯಲ್ಲಿ ಕಂಡು ಬರುತಿದ್ದ ನಸಿಕನ್ನು "ಉಷಸ್" ಎಂದು ಕರೆದು ಅದನ್ನು ದೇವಿಯನ್ನಾಗಿ ಮಾಡಿದ್ದರು. ಹಾಗಾಗಿ ಅವರು ಉಷಾದೇವಿಯನ್ನು ನಾನಾ ಬಗೆಯಾಗಿ ಹಲವು ಸೂಕ್ತಗಳಲ್ಲಿ ಸ್ತುತಿಸಿ

ಕೊಂಡಾಡಿದ್ದಾರೆ, ಉಷೋದಯವಾದ ಏಳು ದಿನಗಳ ತರುವಾಯ ಆದಿತಿಯ ಉದಯವಾಗುತಿತ್ತು. ಅಂದರೆ ಸರಿಯಾಗಿ ಬೆಳಕಾಗುತಿತ್ತು. ಮತ್ತು ನಸಿಕು ಹರಿದ ತರುವಾಯವೇ ದೇವ ನಕ್ಷತ್ರಗಳು ಒಂದೊಂದಾಗಿ ಉದಯಿಸುತಿದ್ದುವು. ಆದುದರಿಂದ ಉಷೆಯು ದೇವತೆಗಳ ತಾಯಿಯೂ, ಅದಿತಿಯ ಮೋರೆ ಅಥವಾ ಅಗ್ರಭಾಗವೂ ಆಗಿದ್ದಳು. ಮತ್ತು ಉಷೋದಯದ ತರುವಾಯವೇ ಯಜ್ಞದ ಸಿದ್ಧತೆಯು ಪ್ರಾರಂಭವಾಗುತಿತ್ತು. ಆದುದರಿಂದ ಉಷೆಯು ಯಜ್ಞದ ಧ್ವಜವೂ ಆಗಿದ್ದಳು. ಆ ಆಶಯವು ಮುಂದೆ ಕೊಡಲಾಗುವ ಋಗ್ವೇದದ ಮಂತ್ರದಲ್ಲಿದೆ–

ಮಾತಾ ದೇವಾನಾಮದಿತೇರನೀಕಂ
ಯಜ್ಞಸ್ಯ ಕೇತುರ್ಬೃಹತೀ ವಿಭಾಹಿ।
ಪ್ರಶಸ್ತಿಕೃದ್ ಬ್ರಹ್ಮಣೇ ನೋ ವ್ಯುಚ್ಛಾ
ನೋ ಜನೇ ಜನಯ ವಿಶ್ವವಾರೇ ॥ಋ. ೧-೧೧೩-೧೯॥

ಅರ್ಥ– ದೇವತೆಗಳ ತಾಯಿಯೂ, ಆದಿತಿಯ ಮೋರೆಯೂ, ಯಜ್ಞದ ಧ್ವಜವೂ ಆಗಿರುವ ಹೇ ಉಷಾ ದೇವಿಯೇ ನೀನು ಉಜ್ವಲಳಾಗಿ ಬೆಳಗು. ಸಕಲ ರಿಂದಲೂ ಬಯಸಲ್ಪಡುವ ಹೇ ದೇವಿಯೇ ನೀನು ನಮ್ಮ ಸ್ತೋತ್ರಗಳಿಗೆ ಪ್ರಶಸ್ತಿ ಕೊಡುವಂಥವಳಾಗಿ ಮೇಲೇರು ಮತ್ತು ನಮ್ಮನ್ನು ಜನರಲ್ಲಿ ಪ್ರಮುಖರನ್ನಾಗಿ ಮಾಡು.

ಪ್ರಾಚೀನ ಆರ್ಯಜನರು ನಕ್ಷತ್ರಗಳ, ಚಂದ್ರನ ಮತ್ತು ಸೂರ್ಯನ ಗತಿ ಯನ್ನು ಸರಿಯಾಗಿ ಕಂಡುಕೊಳ್ಳುವ ಮೊದಲು ದೀರ್ಘ ರಾತ್ರಿಯು ಕೊನೆಗೊಂಡು ನಸಿಕು ಹರಿದೊಡನೆ ಯಜ್ಞದ ಸಿದ್ಧತೆಗಳನ್ನು ಮಾಡುತಿದ್ದರೆಂದು ಮತ್ತು ಹೊತ್ತ ಮೊದಲಿನ ಸೂರ್ಯೋದಯಕ್ಕೆ ಸರಿಯಾಗಿ ಯಜ್ಞದ ಅಗ್ನಿಯನ್ನು ಆಧಾನ ಮಾಡಿ ಯಜ್ಞವನ್ನು ಪ್ರಾರಂಭಿಸುತಿದ್ದರೆಂದು ಹಿಂದಿನ ಮಂತ್ರದಿಂದ ವ್ಯಕ್ತವಾಗುತ್ತದೆ.

ಆದರೆ ಆರ್ಯಜನರು ಕಾಲಕ್ರಮೇಣ ವಸಂತ ಋತುವಿನ ಮೊದಲನೆಯ ದಿನದಿಂದ ಕಾಲಗಣನೆಯನ್ನು ಮಾಡುವುದು ಹೆಚ್ಚು ಸುಲಭ ಹಾಗೂ ಅನುಕೂಲ ವೆಂದು ಕಂಡು ಕೊಂಡ ತರುವಾಯ ಅವರು ವಸಂತ ಸಂಪಾತದ ದಿನ ಯಜ್ಞವನ್ನು ಪ್ರಾರಂಭಿಸಿ ಅಂದಿನಿಂದ ಹೊಸ ವರ್ಷವನ್ನು ಎಣಿಸತೊಡಗಿದ್ದರೆಂದು ವೈದಿಕ ಸಾಹಿತ್ಯದ ಅಧ್ಯಯನದಿಂದ ತಿಳಿದು ಬರುತ್ತದೆ. ಅಂದರೆ- ಬ್ರಾಹ್ಮಣ ಗ್ರಂಥಗಳಲ್ಲಿ ಮತ್ತು ಕಲ್ಪಸೂತ್ರಗಳಲ್ಲಿ ಯಜ್ಞದ ಅಗ್ನಿಯನ್ನು ವಸಂತ ಋತುವಿನ ಮೊದಲನೆಯ ದಿನ ಆಧಾನ ಮಾಡಬೇಕೆಂದು ಸ್ಪಷ್ಟವಾಗಿ ವಿಧಿಸಿದೆ. ಅಲ್ಲದೇ ಹಿಂದೆ ಉದಹರಿಸಿದ ಐತರೇಯ ಬ್ರಾಹ್ಮಣದೊಳಗಿನ ಆದಿತಿಯ ಆಖ್ಯಾಯಿಕೆಯಲ್ಲಿ "ಆದಿತಿಯು ದೇವತೆ ಗಳಿಗೆ "ನೀವು ನನ್ನಿಂದಲೇ ಪೂರ್ವ ದಿಕ್ಕನ್ನು ತಿಳಿಯಿರಿ" ಎಂದು ಹೇಳಿದ ಪ್ರಮಾಣವೂ

ಇದೆ. ಆದರಲ್ಲಿ "ಆದಿತಿ" ಶಬ್ದವು "ಬೆಳಕು" ಎಂಬ ಅರ್ಥದಲ್ಲಿ ಮಾತ್ರವಲ್ಲದೇ "ಪುನರ್ವಸೂ ನಕ್ಷತ್ರ" ಎಂಬ ಅರ್ಥದಲ್ಲಿಯೂ ಪ್ರಯೋಗಿಸಲಾಗಿದೆಯೆಂಬುದರಲ್ಲಿ ಸಂದೇಹವಿಲ್ಲ. ಅಂದರೆ ಆ ಹೇಳಿಕೆಯಿಂದ ಸಂವತ್ಸರದ ಮೊದಲನೆಯ ದಿನ ಅಥವಾ ವಸಂತ ಋತುವಿನ ಪ್ರಾರಂಭ ಕಾಲದಲ್ಲಿ ಪುನರ್ವಸೂ ನಕ್ಷತ್ರವು ಪೂರ್ವದಿಕ್ಕಿನಲ್ಲಿ ಕಾಣಿಸುತಿದ್ದಿತೆಂಬುದು ಮತ್ತು ಅದು ಸಾಂಪಾತಿಕ ನಕ್ಷತ್ರವಾಗಿದ್ದಿತೆಂಬುದು ಸ್ಪಷ್ಟವಾಗಿ ಸಿದ್ಧವಾಗುತ್ತದೆ ಮತ್ತು ಸೂರ್ಯನ ಉತ್ತರಾಯಣವು ಪ್ರಾರಂಭವಾಗಿ ಉತ್ತರ ಧ್ರುವ ಪ್ರದೇಶದಲ್ಲಿನ ದೀರ್ಘರಾತ್ರಿಯು ಕೊನೆಗೊಂಡು ಉಷೋದಯವಾಗುವಾಗ ಅಲ್ಲಿನ ಜನರಿಗೆ ಉತ್ತರ ದಿಕ್ಕಿನಲ್ಲಿ ಪುನರ್ವಸೂ ನಕ್ಷತ್ರವೂ ಪೂರ್ವದಿಕ್ಕಿನಲ್ಲಿ ಅಶ್ವಿನೀ ನಕ್ಷತ್ರವೂ ಕಾಣಿಸುತಿದ್ದುವೆಂದು ಮತ್ತು ದಿನಗಳು ಸಾಗಿದಂತೆ ಉತ್ತರ ದಿಕ್ಕಿನಲ್ಲಿ ಕಾಣಿಸುತಿದ್ದ ಪುನರ್ವಸೂ ನಕ್ಷತ್ರವು ಅಲ್ಲಿಂದ ಬಲಗಡೆಗೆ ಸರಿಯುತ್ತ ಸರಿಯುತ್ತ ವಸಂತ ಋತುವಿನ ಪ್ರಾರಂಭಕಾಲದಲ್ಲಿ ಪೂರ್ವದಿಕ್ಕಿನಲ್ಲಿ ಕಾಣಿಸುತಿದ್ದಿತೆಂದು ಹಾಗೂ ಪುನರ್ವಸೂ ಮತ್ತು ಅಶ್ವಿನೀ ನಕ್ಷತ್ರಗಳಲ್ಲಿ ನಿತ್ಯ ಸಂಬಂಧವಿದ್ದಿತೆಂದು ಗೊತ್ತಾಗುತ್ತದೆ.

ಋಗ್ವೇದದಲ್ಲಿ ಆರ್ದ್ರಾ ನಕ್ಷತ್ರದ ದೇವತೆಯಾದ ರುದ್ರನಿಗೂ ರೇವತೀ ನಕ್ಷತ್ರದ ದೇವತೆಯಾದ ಪೂಷನಿಗೂ ದೊರೆತಿರುವ ಪ್ರಾಧಾನ್ಯವು ಆರ್ದ್ರಾ ನಕ್ಷತ್ರವು ಸಂಪಾತ ಸ್ಥಾನದಲ್ಲಿದ್ದಿತೆಂಬುದರ ಪ್ರಮಾಣವಾಗಿದೆ. ಆದರೆ ವಸಂತ ಸಂಪಾತ ಬಿಂದುವು ಆರ್ದ್ರಾ ನಕ್ಷತ್ರದಲ್ಲಿದ್ದಿತೆಂಬು ಸ್ಪಷ್ಟವಾಗಿ ಸೂಚಿಸುವಂಥ ಉಲ್ಲೇಖಗಳು ವೈದಿಕ ಸಾಹಿತ್ಯದಲ್ಲಿ ಅತ್ಯಂತ ವಿರಳವಾಗಿವೆ. ಆದರ ಕಾರಣವು ಆ ಕಾಲದಲ್ಲಿ ಉತ್ತರ ಧ್ರುವ ಪ್ರದೇಶದ ಪ್ರಾಕೃತಿಕ ಪರಿಸ್ಥಿತಿಯು ಕೆಟ್ಟು ಅಲ್ಲಿ ನೆಲಸಿದ್ದ ಆರ್ಯಜನರು ತಮ್ಮ ನೆಲೆಯನ್ನು ತೊರೆದು ಹೊಸ ನೆಲೆಯನ್ನು ಅರಸುತ್ತ ಅಲೆದಾಡುತಿದ್ದುದಾಗಿರಬಹುದು.

ಮೃಗಶಿರಸ್ ಮತ್ತು ರೋಹಿಣೀ ನಕ್ಷತ್ರಗಳಲ್ಲಿ ವಸಂತ ಸಂಪಾತವಾಗುತಿದ್ದಿತೆಂಬುದರ ಸ್ಪಷ್ಟವಾದ ಸೂಚನೆಯು ಮುಂದೆ ಕೊಡಲಾಗುವ ಐತರೇಯ ಬ್ರಾಹ್ಮಣದೊಳಗಿನ ಆಖ್ಯಾಯಿಕೆಯಲ್ಲಿದೆ–

"ಪ್ರಜಾಪತಿಯು ತನ್ನ ಮಗಳನ್ನು ಕಾಮಿಸಿದನು. ಕೆಲವರು ಅವಳನ್ನು ದಿವ ಅನ್ನುತ್ತಾರೆ ಬೇರೆ ಕೆಲವರು ಉಷೆ ಅನ್ನುತ್ತಾರೆ. ಅವನು ಋಶ್ಯದ ಅಂದರೆ ಜಿಂಕೆಯ ರೂಪವನ್ನು ಧರಿಸಿದನು. ಮತ್ತು ಮಗಳು ರೋಹಿತಳಾದಳು. ಆಗ ಅವನು ಅವಳ ಬಳಿಗೆ ಸಾಗಿದನು. ದೇವತೆಗಳು ಅದನ್ನು ನೋಡಿ ಪ್ರಜಾಪತಿಯು ಮಾಡಬಾರದುದನ್ನು ಮಾಡುತಿದ್ದಾನೆ. ಅವನನ್ನು ಆ ದರಿಂದ ತಡೆಯುವವನು ಯಾವನೂ ಇಲ್ಲವೇ? ಎಂದು ಪ್ರಶ್ನಿಸಿದರು. ಅವರಿಗೆ ತಮ್ಮಲ್ಲಿ ಅಂಥವನಾವನೂ

ಕಂಡು ಬರಲಿಲ್ಲ. ಆಗ ಅವರು ತಮ್ಮೊಳಗಿನ ಘೋರತಮ ಅಂಶವನ್ನು ಒಟ್ಟುಗೂಡಿಸಿದರು. ಒಟ್ಟುಗೂಡಿದ ಆ ಅಂಶವು ಒಬ್ಬ ದೇವನಾಯಿತು. ಅವನ ಹೆಸರು ಭೂತವಾನ್ ಎಂದಾಯಿತು. ಅವರು ಅವನೊಡನೆ ಈ ಪ್ರಜಾಪತಿಯು ಮಾಡಬಾರದುದನ್ನು ಮಾಡಿದ್ದಾನೆ. ಇವನನ್ನು ಇರಿದು ಬಿಡು ಎಂದರು. ಅವನು ಒಪ್ಪಿದನು. ಮತ್ತು ತಾನೊಂದು ವರವನ್ನು ಬೇಡುವೆನೆಂದನು. ಅವರು ಬೇಡು ಎಂದರು. ಅವನು ಪಶುಗಳ ಆಧಿಪತ್ಯವನ್ನು ಬೇಡಿದನು. ಹಾಗಾಗಿ ಅವನ ಹೆಸರು ಪಶುಮಾನ್ ಎಂದಾಯಿತು. ಆ ಹೆಸರನ್ನು ತಿಳಿದವನು ಪಶುಸಂಪತ್ತುಳ್ಳವನಾಗುವನು. ಭೂತವಾನನು ಪ್ರಜಾಪತಿಯನ್ನು ಸಮೀಪಿಸಿ ಬಾಣದಿಂದ ಇರಿದನು. ಇರಿಯಲ್ಪಟ್ಟ ಪ್ರಜಾಪತಿಯು ನೆಟ್ಟಗೆ ಮೇಲಕ್ಕೆ ಹಾರಿದನು. ಅವನನ್ನು ಮೃಗ ಅನ್ನುತ್ತಾರೆ. ಇರಿದವನನ್ನು ಮೃಗವ್ಯಾಧ ಅನ್ನುತ್ತಾರೆ. ರೋಹಿತಳೇ ರೋಹಿಣಿಯಾಗಿದ್ದಾಳೆ. ಭೂತವಾನನು ಇರಿದ ಮೂರು ಕಾಂಡಗಳ ಬಾಣವು ಮೃಗದ ಶರೀರದಲ್ಲಿರುವ ಮೂರು ಕಾಂಡಗಳ ಬಾಣವಾಗಿದೆ. ಮತ್ತು ಪ್ರಜಾಪತಿಯು ಚೆಲ್ಲಿದ ರೇತಸ್ಸು ಸರೋವರವಾಗಿದೆ."[1]

ಒಂದಿನ ಆಖ್ಯಾಯಿಕೆಯು ಆರ್ದ್ರಾ, ಮೃಗಶಿರಸ್ ಮತ್ತು ರೋಹಿಣೀ ಎಂಬ ಮೂರು ನಕ್ಷತ್ರಗಳಿಗೆ ಸಂಬಂಧಪಟ್ಟಿದೆಯೆಂಬುದು ಅತ್ಯಂತ ಸ್ಪಷ್ಟವಿದೆ– ಅಂದರೆ ಆ ಆಖ್ಯಾಯಿಕೆಯಲ್ಲಿ ಬಂದಿರುವ ಭೂತವಾನ್, ಪಶುಮಾನ್ ಮತ್ತು ಮೃಗವಾಧ ಮೂರೂ ಹೆಸರುಗಳು ಒಬ್ಬನೇ ದೇವನನ್ನು ಅಂದರೆ ರುದ್ರನನ್ನು ಸೂಚಿಸುತ್ತವೆ. ರುದ್ರನು ಆರ್ದ್ರಾ ನಕ್ಷತ್ರದ ದೇವತೆಯಾಗಿದ್ದಾನೆ. ಆದರೆ ಆಖ್ಯಾಯಿಕೆಯಲ್ಲಿ ವರ್ಣಿಸಿರುವಂತೆ ದೇವತೆಗಳು ಪ್ರಜಾಪತಿಯನ್ನು ಇರಿಯಲು ರುದ್ರ

---

1 ಪ್ರಜಾಪತಿರ್ವೈ ಸ್ವಾಂ ದುಹಿತರಮಭ್ಯಧ್ಯಾಯದ್ದಿವಮಿತ್ಯನ್ಯ ಆಹುರುಪಸಮಿತ್ಯನ್ಯೇ, ತಾಮೃಶ್ಯೋಭೂತ್ವಾರೋಹಿತಂ ಭೂತಾಮಭ್ಯೈತ್ತಂ ದೇವಾ ಅಪಶ್ಯನ್ನಕೃತಂ ವೈ ಪ್ರಜಾಪತಿಃ ಕರೋತೀತಿ ತೇ ತಮೈಚ್ಛನ್ ಯ ಏನಮಾರಿಷ್ಯತ್ಯೇತಮನ್ಯೋಽನ್ಯಸ್ಮಿನ್ನಾವಿಂದಂ ಸ್ತೇಷಾಂ ಯಾ ಏವ ಘೋರತಮಾಸ್ತನ್ವ ಆಸುಸ್ತಾ ಏಕಧಾ ಸಮಭರಂಸ್ತಾಃ ಸಂಭೃತಾ ಏಷ ದೇವೋಽಭವತ್ತದ್ಯದಸ್ಯೈತದ್ಭೂತವಾನ್ ನಾಮ ಭವತಿವೈಸಯೋಽಸ್ಯೈತದೇವಂ ನಾಮ ವೇದ ತಂ ದೇವಾ ಅಬ್ರುವನ್ನಯಂ ವೈ ಪ್ರಜಾಪತಿರಕೃತಮಕರಿಮಂ ವಿಧ್ಯೇತಿ ಸ ತಥೇತ್ಯಬ್ರವೀತ್ಸವೈ ವೋ ವರಂವೃಣಾ ಇತಿ, ವೃಣೀಷ್ವೇತಿ ಸ ಏತಮೇವ ವರಮವೃಣೀತ ಪಶುನಾಮಾಧಿಪತ್ಯಂ ತದಸ್ಯೈತತ್ಪಶುಮನ್ನಾಮ ಪಶುಮಾನ್ ಭವತಿಯೋಽಸ್ಯೈತದೇವಂ ನಾಮವೇದ. ತಮಭ್ಯಾಯತ್ಯಾವಿಧ್ಯತ್ ಸವಿದ್ಧ ಊರ್ಧ್ವ ಉದಪ್ರಪತತ್ತಮೇತಂ ಮೃಗ ಇತ್ಯಾಚಕ್ಷತೇ ಯ ಏವ ಮೃಗವ್ಯಾಧಃ ಸ ಉ ಏವ ಸ ಯಾ ರೋಹಿತ್ ಸಾ ರೋಹಿಣೀ ಯೋ ಏವೇಷು ಸ್ತ್ರಿಕಾಂಡಾ ಸೋ ಏವೇಷು ಸ್ತ್ರಿಕಾಂಡಾ ತದ್ವಾ ಇದಂ ಪ್ರಜಾಪತೇ ರೇತಃ ಸಿಕ್ತಮಧಾವತ್ತತ್ಸರೋಽಭವತಾ ॥ಐ. ಬ್ರಾ. ೩–೩೩॥

ನನ್ನು ಆರಿಸಿದುದರ ಮತ್ತು ರುದ್ರನು ಪ್ರಜಾಪತಿಯನ್ನು ಸಮೀಪಿಸಿ ಅವನನ್ನು ಬಾಣದಿಂದ ಇರಿದುದರ ಹಾಗೂ ರುದ್ರನು ಇರಿದೊಡನೆ ಪ್ರಜಾಪತಿಯು ಮೇಲೆ ಹಾರಿದುದರ ಆಶಯವು ಗೊತ್ತಾಗುವುದಿಲ್ಲ. ಹೇಗಿದ್ದರೂ ಆ ಆಖ್ಯಾಯಿಕೆಯೊಳಗಿನ ವರ್ಣನೆಯ ಮೇಲಿಂದ ಪಾಶ್ಚಾತ್ಯ ಜನರು ಈಗ ಒರಾಯನ್ (Orion) ಎಂದು ಕರೆಯುತ್ತಿರುವ ನಕ್ಷತ್ರಪುಂಜವನ್ನು ಪ್ರಾಚೀನ ಕಾಲದ ಆರ್ಯಜನರು ಮೃಗ ಎನ್ನುತಿದ್ದರೆಂದು ಮತ್ತು ಆ ಕಾಲದಲ್ಲಿ ಅದರ ದೇವತೆಯು ಪ್ರಜಾಪತಿಯಾಗಿದ್ದನೆಂಬುದು ಮಾತ್ರ ಸ್ಪಷ್ಟವಾಗಿ ಸಿದ್ಧವಾಗುತ್ತದೆ. ಮತ್ತು ಪ್ರಜಾಪತಿ ಎಂಬುದು ಅಗ್ನಿಯ ಮತ್ತು ಯಜ್ಞದ ಪರ್ಯಾಯ ನಾಮವೂ ನಕ್ಷತ್ರಪುಂಜಗಳ ಪಿತನ ನಾಮವೂ ಆಗಿರುವುದರಿಂದ ಮೊದಲು ಯಜ್ಞದ ಅಗ್ನಿಯನ್ನು ಮೃಗಶೀರ್ಷ ನಕ್ಷತ್ರದಲ್ಲಿ ಆಧಾನ ಮಾಡುತಿದ್ದರೆಂಬುದನ್ನು ಅಥವಾ ವಸಂತ ಸಂಪಾತ ಬಿಂದುವು ಮೃಗಪುಂಜದಲ್ಲಿದ್ದಿತೆಂಬುದನ್ನು ಮತ್ತು ಅದು ಮೃಗಪುಂಜದಿಂದ ಹಿಂದೆ ಸರಿದು ರೋಹಿಣೀ ನಕ್ಷತ್ರದಲ್ಲಿ ಬಂದಿದೆಯೆಂಬುದನ್ನು ಸೂಚಿಸುವುದೇ ಆ ಆಖ್ಯಾಯಿಕೆಯ ಉದ್ದೇಶವಾಗಿದೆಯೆಂದು ಅದರೊಳಗಿನ ವರ್ಣನೆಯಿಂದ ಸಿದ್ಧವಾಗುತ್ತದೆ. ಹೇಗೆಂದರೆ ಅದರ ತರುವಾಯದಿಂದ ಪ್ರಜಾಪತಿಯು ರೋಹಿಣೀ ನಕ್ಷತ್ರದ ದೇವತೆಯಾಗಿದ್ದಾನೆ. ಆದರೆ ಆ ಆಖ್ಯಾಯಿಕೆಯಲ್ಲಿ ಪ್ರಜಾಪತಿಯ ಮಗಳನ್ನು ಕೆಲವರು ದಿವ ಅನ್ನುತ್ತಾರೆಂತಲೂ, ಕೆಲವರು ಉಷೆ ಅನ್ನುತ್ತಾರೆಂತಲೂ ಹೇಳಿದುದು ಆ ಬ್ರಾಹ್ಮಣಕಾರನ ಸ್ವಂತದ ಕಲ್ಪನೆಯೆನ್ನಬೇಕಾಗಿದೆ, ಏಕೆಂದರೆ ಆ ಆಖ್ಯಾಯಿಕೆಗೆ ಮೂಲವಾಗಿರುವ ಋಗ್ವೇದದ ಮಂತ್ರಗಳಲ್ಲಿ ದಿವದ ಮತ್ತು ಉಷೆಯ ಉಲ್ಲೇಖಗಳಿಲ್ಲ.[1]

ಅದೇ ಆಖ್ಯಾಯಿಕೆಯು ತುಸುವೇ ಭಿನ್ನ ರೂಪದಿಂದ ಶತಪಥ ಬ್ರಾಹ್ಮಣದ ೧-೭-೪_೧ರಿಂದ ೬ರ ತನಕ ಬಂದಿದೆ. ಮತ್ತು ಮುಂದೆ ೨_೧-೨-೮ರಲ್ಲಿ ಯಜ್ಞದ ಅಗ್ನಿಗಳನ್ನು ಮೃಗಶೀರ್ಷ ನಕ್ಷತ್ರದಲ್ಲಿ ಆಧಾನ ಮಾಡಬೇಕೆಂದೂ, ಆ ನಕ್ಷತ್ರವು ಪ್ರಜಾಪತಿಯ ತಲೆಯೆಂದೂ ತಲೆಯು ಶ್ರೇಷ್ಠತಾ ಸೂಚಕವೆಂದೂ, ತಮ್ಮಲ್ಲಿ ಶ್ರೇಷ್ಠನಾದವನನ್ನು ಜನರು ತಮ್ಮ ಮುಖಂಡನೆನ್ನುತ್ತಾರೆಂತಲೂ ಆದನ್ನು ತಿಳಿದು ಮೃಗಶೀರ್ಷನಕ್ಷತ್ರದಲ್ಲಿ ಅಗ್ನಿಗಳನ್ನು ಆಧಾನ ಮಾಡಿದವನು ಶ್ರೇಷ್ಠತೆಯನ್ನು ಪಡೆಯು

---

[1] ಪ್ರಥಿಷ್ಟ ಯಸ್ಯ ವೀರ ಕರ್ಮ ಮಿಷ್ಣದನುಷ್ಠಿತಂ ನ ನರ್ಯೋ ಅ ಪೌಹತ್।
ಪುನಸ್ತದಾವೃಹತಿ ಯತ್ಕನಾಯಾ ದುಹಿತುರಾ ಅನುಭೃತಮನರ್ವಾ ॥ಋ. ೧೦-೬೧-೫॥
ಮಧ್ಯಾಯತ್ಕರ್ತ್ವಮಭವದಭೀಕೇ ಕಾಮಂ ಕೃಣ್ವಾನೇ ಪಿತರಿ ಯುವತ್ಯಾಮ್।
ಮನಾನಗ್ರೇತೋ ಜಹುತುರ್ವಿಯಂತಾ ಸಾನೌ ನಿಷಿಕ್ತಂ ಸುಕೃತಸ್ಯ ಯೋ ನೌ ॥೬॥
ಪಿತಾ ಯತ್ ಸ್ವಾಂ ದುಹಿತರಮಧಿಷ್ಕನ್ ಕ್ಷ್ಮಯಾ ರೇತಃ ಸಂಜಗ್ಮಾನೋ ನಿಷಿಂಚತ್ಃ
ಸ್ವಾಧ್ಯೋಽಜನಯನ್ ಬ್ರಹ್ಮ ದೇವಾ ವಾಸ್ತೋಷ್ಪತಿಂ ವ್ರತಪಾಂ ನಿರತಕ್ಷನ್॥೭॥

ನ್ತಾನೆಂತಲೂ ಹೇಳಿದೆ.[1] ಅದರ ತರುವಾಯ ೨-೧-೨-೯ರಲ್ಲಿ ಆ ಮೃಗಶೀರ್ಷ ಪುಂಜವು ಪ್ರಜಾಪತಿಯು ಶರೀರವೆಂದೂ, ಹಿಂದೆ ದೇವತೆಗಳು ಅದನ್ನು ಮೂರು ಾಂಡಗಳ ಬಾಣದಿಂದ ಇರಿದುದರಿಂದ ಪ್ರಜಾಪತಿಯು ಅದನ್ನು ತೊರೆದನೆಂದೂ ಅದೀಗ ಅವನು ವಾಸಿಸಿದ್ದ ಕಳೇವರ ಮಾತ್ರವಾಗಿರುವುದರಿಂದ ಅದು ಅಯಜ್ಞಿಯ ವೆಂದೂ, ಸತ್ವಹೀನವೆಂದೂ ಅದರಲ್ಲಿ ಅಗ್ನಿಗಳನ್ನು ಆಧಾನಮಾಡಬಾರದೆಂದೂ ಹೇಳಿದ ತರುವಾಯ ೧೦ರಲ್ಲಿ ಆ ಶರೀರವು ದೇವನಾದ ಪ್ರಜಾಪತಿಯದಾಗಿರುವುದ ರಿಂದ ಅದು ಕಳೇಪರವೂ ಅಲ್ಲ ಅಯಜ್ಞಿಯವೂ ಅಲ್ಲ, ಆದುದರಿಂದ ಮೃಗಶೀರ್ಷ ನಕ್ಷತ್ರದಲ್ಲಿ ಅಗ್ನಿಗಳನ್ನು ಆಧಾನ ಮಾಡಬೇಕೆಂದು ಹೇಳಿದೆ.[2] ಅದರ ಮೇಲಿಂದ ಪ್ರಜಾಪತಿಯು ಮೊದಲು ಮೃಗಶೀರ್ಷ ನಕ್ಷತ್ರ ದೇವತೆಯಾಗಿದ್ದನೆಂತಲೂ,ವಸಂತ ಸಂಪಾತವು ಆಗ ಅದೇ ನಕ್ಷತ್ರದಲ್ಲಿ ಘಟಿಸುತಿದ್ದಿತೆಂತಲೂ ಸಿದ್ಧವಾಗುತ್ತದೆ,

ಹಾಗೆಯೇ ತೈತ್ತಿರೀಯ ಬ್ರಾಹ್ಮಣದಲ್ಲಿ ಪ್ರಜಾಪತಿಯು ರೋಹಿಣೀ ನಕ್ಷತ್ರದಲ್ಲಿ ಅಗ್ನಿಯನ್ನು ಸೃಷ್ಟಿಸಿದನೆಂತಲೂ ದೇವತೆಗಳು ಆ ಅಗ್ನಿಯನ್ನು ರೋಹಿಣೀ ನಕ್ಷತ್ರದಲ್ಲಿ ಆಧಾನ ಮಾಡಿದರೆಂತಲೂ ಹೇಳಿದೆ.[3] ಮತ್ತು ಶತಪಥ ಬ್ರಾಹ್ಮಣದಲ್ಲಿ ಪ್ರಜೆಗಳನ್ನು ಬಯಸಿದ ಪ್ರಜಾಪತಿಯು ರೋಹಿಣೀ ನಕ್ಷತ್ರದಲ್ಲಿ ಅಗ್ನಿಗಳನ್ನು ಆಧಾನ ಮಾಡಿದನೆಂದು ಹೇಳಿದೆ. ಆ ಹೇಳಿಕೆಗಳು ಐತರೇಯ ಬ್ರಾಹ್ಮಣದೊಳಗಿನ ಆಖ್ಯಾಯಿಕೆಯಲ್ಲಿ "ಪ್ರಜಾಪತಿಯು ತನ್ನ ಮಗಳಾದ ರೋಹಿಣಿ ಯನ್ನು ಕಾಮಿಸಿ ಅವಳ ಬಳಿಗೆ ಸಾಗಿದನು" ಎಂಬುದರಿಂದ ಸೂಚಿತವಾಗುವ ಆಶಯವನ್ನು ಸಮರ್ಥಿಸುತ್ತವೆ. ಅಂದರೆ ಆ ಕಾಲದಲ್ಲಿ ವಸಂತ ಸಂಪಾತವು ರೋಹಿಣೀ ನಕ್ಷತ್ರದಲ್ಲಿ ಘಟಿಸತೊಡಗಿದ್ದಿತೆಂಬುದನ್ನು ಸ್ಪಷ್ಟಪಡಿಸುತ್ತವೆ. ಮತ್ತು ಅದಕ್ಕಿಂತ ಮೊದಲು ವಸಂತ ಸಂಪಾತವು ಮೃಗಶೀರ್ಷ ನಕ್ಷತ್ರದಲ್ಲಿದ್ದಿತೆಂಬುದನ್ನು ಸೂಚಿಸುತ್ತವೆ.

---

1 ಮೃಗಶೀರ್ಷೇಽಗ್ನೀ ಆದಧೀತ। ಏತದ್ವೈ ಪ್ರಜಾಪತೇಃ ಶಿರೋಯನ್ಮೃಗಶೀರ್ಷಂ ಶ್ರೀ ರ್ವೈ ಶಿರಃ ಶ್ರೀರ್ಹಿವೈ ಶಿರಸ್ತಸ್ಮಾದ್ಯೋಽರ್ಧಸ್ಯ ಶ್ರೇಷ್ಠೋ ಭವತ್ಯಸಾವಮುಷ್ಯಸ್ಯಾರ್ಧಸ್ಯ ಶಿರ ಇತ್ಯಾಹುಃ ಶ್ರಿಯಂ ಹ ಗಚ್ಛತಿ ಯ ಏವಂ ವಿದ್ವಾನ್ ಮೃಗಶೀರ್ಷೇ
ಆಧತ್ತೇ ॥ಶ. ಬ್ರಾ. ೨-೧-೨-೮॥

2 ಅಥ ಯಸ್ಮಾನ್ನ ಮೃಗಶೀರ್ಷ ಆದಧೀತ । ಪ್ರಜಾಪತೇರ್ವಾ ಏತಚ್ಛರೀರಂ ಯತ್ರವಾ ಏನಂತದಾವೇಧ್ಯಂಸ್ತದಿಷುಣಾ ತ್ರಿಕಾಂಡೇನೇತ್ಯಾಹುಃ ಸ ಏತಚ್ಛರೀರಮಜಹಾದ್ ವಾಸ್ತು ವೈ ಶರೀರಮಯಜ್ಞಿಯಂ ನಿರ್ವೀರ್ಯಂತಸ್ಮಾನ್ನ ಮೃಗಶೀರ್ಷ ಆದಧೀತ॥೯॥ ತದ್ವೇವಾದ ಧೀತ। ಸ ವಾ ಏತಸ್ಯವಾಸ್ತು ನಾಯಜ್ಞಿಯಂ ನ ಶರೀರಮಸ್ತಿ ಯತ್ಪ್ರಜಾಪತೇಸ್ತಸ್ಮಾ
ದ್ವೇವಧೀತ॥೧೦॥

3 ಪ್ರಜಾಪತೀ ರೋಹಿಣ್ಯಾಮಗ್ನಿಮಸೃಜತ। ತಂ ದೇವಾ ರೋಹಿಣ್ಯಾಮಾದಧತ
॥ತೈ. ಬ್ರಾ. ೧-೧-೨-೨॥

ಆದರ ತರುವಾಯ ರೋಹಿಣೀ ನಕ್ಷತ್ರದಲ್ಲಿದ್ದ ವಸಂತ ಸಂಪಾತಬಿಂದುವು ಅದರಿಂದ ಹಿಂದಕ್ಕೆ ಚಲಿಸಿ ಕೃತ್ತಿಕಾ ನಕ್ಷತ್ರದಲ್ಲಿ ಬಂದಿರುವುದನ್ನು ಸೂಚಿಸುವ ಉಲ್ಲೇಖಗಳು ಯಜುರ್ವೇದದ ಸಂಹಿತೆಗಳಲ್ಲಿ ಮತ್ತು ಬ್ರಾಹ್ಮಣಗಳಲ್ಲಿ ಹೇರಳವಾಗಿವೆ. ಆದರ ಪ್ರಮಾಣವಾಗಿ ಕೃತ್ತಿಕಾ ನಕ್ಷತ್ರದಿಂದ ಪ್ರಾರಂಭವಾಗುವ ನಕ್ಷತ್ರ ಮಾಲೆಯ ಉಲ್ಲೇಖವು ಕೃಷ್ಣ ಯಜುರ್ವೇದದ ತೈತ್ತಿರೀಯ ಸಂಹಿತೆಯ ೪-೪-೧೦ ರಲ್ಲಿಯೂ, ಕಾಠಕ ಸಂಹಿತೆಯ ೩೯-೧೦ ರಲ್ಲಿಯೂ ಮೈತ್ರಾಯಣೀ ಸಂಹಿತೆಯ ೨-೧೩-೨೦ರಲ್ಲಿಯೂ, ತೈತ್ತಿರೀಯ ಬ್ರಾಹ್ಮಣದ ೧-೫-೧-೧ರಲ್ಲಿ ಮತ್ತು ೩-೧-೪-೧ ರಲ್ಲಿಯೂ, ಅಥರ್ವವೇದದ ೧೯-೭ ರಲ್ಲಿಯೂ ಇದೆ. ಮತ್ತು ಕೃತ್ತಿಕಾ ನಕ್ಷತ್ರದಲ್ಲಿ ಅಗ್ನಿಯನ್ನು ಆಧಾನ ಮಾಡಬೇಕೆಂದು ಮತ್ತು ಕೃತ್ತಿಕೆಯು ನಕ್ಷತ್ರಗಳ ಮೊರೆಯೆಂದು ಹೇಳಿದ ಉಲ್ಲೇಖಗಳು ತೈತ್ತಿರೀಯ ಮತ್ತು ಶತಪಥ ಬ್ರಾಹ್ಮಣಗಳಲ್ಲಿ ಇವೆ–

ಕೃತ್ತಿಕಾಸ್ವಗ್ನಿಮಾದಧೀತ। ಏತದ್ವಾ ಅಗ್ನೇರ್ನಕ್ಷತ್ರಮ್। ಯತ್ ಕೃತ್ತಿಕಾಃ ಸ್ವಾಯಾಮೇವೈನಂ ದೇವತಾಯಾಮಾಧಾಯ ಬ್ರಹ್ಮವರ್ಚಸೀ ಭವತಿ ॥ ತೈ. ಬ್ರಾ. ೧-೧-೨-೧ ॥

ಅರ್ಥ–ಕೃತ್ತಿಕೆಗಳಲ್ಲಿ ಅಗ್ನಿಯನ್ನು ಆಧಾನ ಮಾಡಬೇಕು. ಅದು ಅಗ್ನಿಯ ನಕ್ಷತ್ರವಾಗಿದೆ. ಆದುದರಿಂದ ಅಗ್ನಿಯ ಸ್ವಂತದ ನಕ್ಷತ್ರದಲ್ಲಿ ಅಗ್ನಿಯನ್ನು ಆಧಾನ ಮಾಡಿದವನು ಬ್ರಹ್ಮವರ್ಚಸ್ಸುಳ್ಳವನಾಗುತ್ತಾನೆ.

ಮುಖಂ ವಾ ಏತನ್ನಕ್ಷತ್ರಾಣಾಂ ಯತ್ ಕೃತ್ತಿಕಾಃ। ಯಃ ಕೃತ್ತಿಕಾಸ್ವಗ್ನಿಮಾಧತ್ತೇ ಮುಖ್ಯ ಏವ ಭವತಿ॥ತೈ. ಬ್ರಾ. ೧-೧-೨-೧॥

ಅರ್ಥ– ಕೃತ್ತಿಕೆಯು ನಕ್ಷತ್ರಗಳ ಮುಖವಾಗಿದೆ. ಅಂದರೆ ಗಣನೆಯಲ್ಲಿ ಮೊದಲಿನದಾಗಿದೆ. ಆದುದರಿಂದ ಕೃತ್ತಿಕೆಯಲ್ಲಿ ಅಗ್ನಿಯನ್ನು ಆಧಾನಮಾಡಿದವನು ಮುಖ್ಯನಾಗುತ್ತಾನೆ.

ಶತಪಥ ಬ್ರಾಹ್ಮಣದಲ್ಲಿ ಅಗ್ನಿಯನ್ನು ಕೃತ್ತಿಕೆಯಲ್ಲಿ ಆಧಾನ ಮಾಡಬೇಕೆಂದು ಹೇಳುವುದರೊಂದಿಗೆ ಆ ನಕ್ಷತ್ರಕ್ಕೆ ಸಂಬಂಧಿಸಿದ ಬೇರೆ ಹಲವು ವಿವರಗಳಿವೆ,

ಕೃತ್ತಿಕಾಸ್ವಗ್ನೀ ಆದಧೀತ। ಏತಾವ್ವಾಅಗ್ನಿನಕ್ಷತ್ರಂ ಯತ್ ಕೃತ್ತಿಕಾಃ। ತದ್ವೈಸಲೋಮ ಯೋ ಅಗ್ನಿನಕ್ಷತ್ರೇಽಗ್ನೀ ಆದಧಾತ। ಏತಸ್ಮಾತ್ ಕೃತ್ತಿಕಾಸ್ವಾದಧೀತ ॥ ೨-೧-೨-೧ ॥

ಅರ್ಥ- ಕೃತ್ತಿಕೆಯಲ್ಲಿ ಅಗ್ನಿಗಳನ್ನು– ಅಂದರೆ ಗಾರ್ಹಪತ್ಯವನ್ನು ಮತ್ತು ಆಹವನೀಯುವನ್ನು ಆಧಾನ ಮಾಡಬೇಕು. ಏಕೆಂದರೆ ಕೃತ್ತಿಕೆಯು ಅಗ್ನಿಯ ನಕ್ಷತ್ರ

ನಾಗಿರುತ್ತದೆ. ಆದರಲ್ಲಿ ಆಧಾನ ಮಾಡಿದರೆ ಅಗ್ನಿಗಳಲ್ಲಿ ಮತ್ತು ನಕ್ಷತ್ರದಲ್ಲಿ ಹೊಂದಿಕೆ ಮಾಡಿದಂತಾಗುತ್ತದೆ. ಆದುದರಿಂದ ಕೃತ್ತಿಕೆಯಲ್ಲಿ ಅಗ್ನಿಗಳನ್ನು ಆಧಾನ ಮಾಡಬೇಕು.

ಏತಾ ಹ ವೈ ಪ್ರಾಚ್ಯೈ ದಿಶೋ ನ ಚ್ಯವಂತೇ। ಸರ್ವಾಣಿ ಹ್ಯನ್ಯಾನಿ ನಕ್ಷತ್ರಾಣಿ ಪ್ರಾಚ್ಯೈ ದಿಶಶ್ಚ್ಯವಂತೇ। ತಸ್ಮಾತ್ಪ್ರಾಚ್ಯಾಮೇವಾಸ್ಯೈತದ್ದಿಶ್ಯಾಹಿತೌ ಭವತಃ॥ ತಸ್ಮಾತ್ ಕೃತ್ತಿಕಾಸ್ವಾದಧೀತ ॥೨-೧-೨-೩॥

ಅರ್ಥ– ಈ ಕೃತ್ತಿಕೆಗಳು ಪೂರ್ವ ದಿಕ್ಕಿನಿಂದ ಕದಲುವುದೇ ಇಲ್ಲ. ಇತರ ಎಲ್ಲ ನಕ್ಷತ್ರಗಳು ಪೂರ್ವದಿಕ್ಕಿನಿಂದ ಕದಲಿ ಹೋಗುತ್ತವೆ. ಆದುದರಿಂದ ಅಗ್ನಿಯ ದಿಕ್ಕಾದ ಪೂರ್ವದಲ್ಲಿ ಅಗ್ನಿಗಳು ಆಧಾನ ಮಾಡಲ್ಪಡುತ್ತವೆ. ಆದುದರಿಂದ ಕೃತ್ತಿಕೆಯಲ್ಲಿ ಆಧಾನ ಮಾಡಬೇಕು.

ಹಿಂದೆ ಉದಹರಿಸಿದ ಅಂಶದಲ್ಲಿ ಬಂದಿರುವ "ಕೃತ್ತಿಕೆಗಳು ಪೂರ್ವ ದಿಕ್ಕಿನಿಂದ ಚಲಿಸುವುದೇ ಇಲ್ಲ" ಎಂಬ ವರ್ತಮಾನ ಕಾಲಿಕ ಉಲ್ಲೇಖದ ಮೇಲಿಂದ–ಅದು ಪ್ರತ್ಯಕ್ಷದರ್ಶಿಯ ಉಲ್ಲೇಖವಾಗಿದೆಯೆಂಬುದರಲ್ಲಿ ಸಂದೇಹವುಳಿಯುವುದಿಲ್ಲ. ಮತ್ತು ಅದರ ಮೇಲಿಂದ ವಸಂತ ಸಂಪಾತ ಬಿಂದುವು ಆಗ ತಾನೇ ಕೃತ್ತಿಕಾ ನಕ್ಷತ್ರದಲ್ಲಿ ಬಂದಿತ್ತೆಂಬುದು ಸಿದ್ಧವಾಗುತ್ತದೆ.

ಶತಪಥ ಬ್ರಾಹ್ಮಣದಲ್ಲಿ ಕೃತ್ತಿಕೆಯರನ್ನು ಅಗ್ನಿಯ ನಕ್ಷತ್ರವೆಂದು ಹೇಳಿದ ತರುವಾಯ ಆ ಕೃತ್ತಿಕೆಯರು ಋಕ್ಷರ ಅಂದರೆ ಕರಡಿಗಳ ಪತ್ನಿಯರಾಗಿದ್ದರೆಂತಲೂ, ಮೊದಲು ಸಪ್ತರ್ಷಿಗಳನ್ನೇ ಕರಡಿಗಳೆನ್ನುತಿದ್ದರೆಂತಲೂ, ಕೃತ್ತಿಕೆಯರು ಪೂರ್ವದಿಕ್ಕಿನಲ್ಲಿ ಮತ್ತು ಸಪ್ತರ್ಷಿಗಳು ಉತ್ತರ ದಿಕ್ಕಿನಲ್ಲಿ ಉದಯಿಸುತಿದ್ದುದರಿಂದ ಪತಿಪತ್ನಿಯರಲ್ಲಿ ಕೂಡಾಟವಿರಲಿಲ್ಲವೆಂತಲೂ, ಅಗ್ನಿಯು ಅವರ ಕೂಡಾಟದವನಾಗಿದ್ದನೆಂತಲೂ, ಅಗ್ನಿಯಿಂದ ಕೃತ್ತಿಕೆಯರು ಸಮೃದ್ಧರಾದರೆಂತಲೂ ಹೇಳಿದೆ.[1] ಆ ಹೇಳಿಕೆಯ ಆಧಾರದಿಂದ ಮತ್ತು ವಸಂತ ಸಂಪಾತವು ಕೃತ್ತಿಕಾ ನಕ್ಷತ್ರದಲ್ಲಿ ಘಟಿಸುತಿದ್ದಿತೆಂಬುದರ ಆಧಾರದಿಂದ ಮಹಾಭಾರತಕಾರನು, ಮಹಾಭಾರತದ ವನಪರ್ವದಲ್ಲಿ ಯಜ್ಞಕ್ಕಾಗಿ ಸಪ್ತರ್ಷಿಯರಲ್ಲಿಗೆ ಬಂದಿದ್ದ ಅಗ್ನಿಯು ಸಪ್ತರ್ಷಿಯರ ಪತ್ನಿಯರ ಸೌಂದರ್ಯದಿಂದ ಮೋಹಿತನಾಗಿ ಅವರ ಗಾರ್ಹಪತ್ಯಕುಂಡದಲ್ಲಿ ನೆಲಸಿದನೆಂತಲೂ ಮುಂದೆ ಅವನಿಂದಾಗಿ ಸ್ಕಂದನು ಹುಟ್ಟಿದನೆಂತಲೂ ಒಂದು ಕಥೆಯನ್ನು ಹೇಳಿದ್ದಾನೆ. ಅದರ ವಿವರಗಳು ಮುಂದೆ ಸಿಂಧೂಸಂಸ್ಕೃತಿ ಎಂಬ ಅಧ್ಯಾಯದಲ್ಲಿ ಬರುವುವು.

---

[1] ಋಕ್ಷಾಣಾಂ ಹ ವಾ ಏತ ಅಗ್ರೇಪತ್ನ್ಯ ಆಸುಃ ಸಪ್ತರ್ಷೀನು ಹ ಸ್ಮ ಪುರರ್ಕ್ಷಾ ಇತ್ಯಾಚಕ್ಷತೇ। ತಾ ಮಿಥುನೇನ ವ್ಯಾರ್ಧ್ಯಂತಾಮಿ ಹ್ಯುತ್ತರಾ ಸಪ್ತ ಋಷಯ ಉದ್ಯಂತಿ ಪುರ ಏತಾ ॥೨-೧-೨-೪॥ ಅಗ್ನಿರ್ವಾ ಏತಾಸಾಂ ಮಿಥುನಮಗ್ನಿನೈತಾ ಮಿಥುನೇನ ಸಮೃದ್ಧಾಃ ॥ ೨-೧-೨-೫ ॥

ಹಿಂದೆ ಹೆಸರಿಸಿದ ವೈದಿಕ ಗ್ರಂಥಗಳಲ್ಲಿ ಹಲವು ಪ್ರಾಚೀನ ಐತಿಹ್ಯಗಳ ಜೊತೆಯಲ್ಲಿ ತರುವಾಯದ ಕಾಲದಲ್ಲಿ ಕೃತ್ತಿಕಾನಕ್ಷತ್ರದಿಂದ ಪ್ರಾರಂಭವಾದ ನಕ್ಷತ್ರ ಮಾಲೆಯ ಉಲ್ಲೇಖವೂ ಇರುವುದರಿಂದ ಮೊದಲು ಕಂಠಪಾಠವಾಗಿಯೇ ಮುಂದೆ ಸಾಗಿ ಬಂದಿದ್ದ ಗದ್ಯ ಐತಿಹ್ಯಗಳು ಮತ್ತು ಪದ್ಯಗಳು ಕೃತ್ತಿಕೆಯಲ್ಲಿ ವಸಂತ ಸಂಪಾತ ವಿದ್ದ ಕಾಲದಲ್ಲಿ ಬ್ರಾಹ್ಮೀ ಲಿಪಿಯಿಂದ ಬರೆಯಲ್ಪಟ್ಟು ಗ್ರಂಥರೂಪ ತಳೆದುವೆಂದೂ, ಅವುಗಳು ಬರೆಯಲ್ಪಡುವ ಕಾಲದಲ್ಲಿ ಪ್ರಾಚೀನ ನಕ್ಷತ್ರಗಣನೆಯಲ್ಲಿ ತತ್ಕಾಲೀನ ಗಣನೆಗನುಸಾರವಾದ ಅಂದರೆ ಕೃತ್ತಿಕಾನಕ್ಷತ್ರವು ಮೊದಲನೆಯದಾಗಿರುವಂತೆ–ಪರಿವರ್ತನ ಮಾಡಲಾಯಿತೆಂದು ಹೇಳಬಹುದು.

ಕೃತ್ತಿಕಾ ನಕ್ಷತ್ರದಲ್ಲಿದ್ದ ವಸಂತ ಸಂಪಾತ ಬಿಂದುವು ಅದರಿಂದ ಹಿಂದಕ್ಕೆ ಸರಿಯುತ್ತ ಭರಣೀ ನಕ್ಷತ್ರದಲ್ಲಿ ಬಂದಿದ್ದಿತೆಂಬುದು ವೇದಾಂಗ ಜ್ಯೋತಿಷದಲ್ಲಿ ಉಲ್ಲೇಖಿಸಲ್ಪಟ್ಟಿರುವ ಸೂರ್ಯನ ಅಯನಾರಂಭ ಸ್ಥಾನಗಳಿಂದ ಸಿದ್ಧವಾಗುತ್ತದೆ. ಆದರೆ ವಸಂತಸಂಪಾತ ಬಿಂದುವು ಭರಣೀನಕ್ಷತ್ರದಲ್ಲಿ ಬಂದ ಉಲ್ಲೇಖವು ಇತರ ಯಾವ ವೈದಿಕ ಗ್ರಂಥದಲ್ಲಿಯೂ ಇಲ್ಲ.

ಭರಣೀ ನಕ್ಷತ್ರದ ತರುವಾಯ ಸಂಪಾತ ಬಿಂದುವು ಅಶ್ವಿನೀ ನಕ್ಷತ್ರದಲ್ಲಿ ಬಂದುದರ ಪ್ರಮಾಣವು ಇಂದಿಗೂ ಉಳಿದುಕೊಂಡಿದೆ. ಅಂದರೆ ಭರಣೀ ನಕ್ಷತ್ರ ದಲ್ಲಿದ್ದ ಸಂಪಾತ ಬಿಂದುವು ಅದರಿಂದ ಚಲಿಸಿ ಅಶ್ವಿನೀ ನಕ್ಷತ್ರದಲ್ಲಿ ಬಂದಿದ್ದಾಗ ಆಗಿನ ಕಾಲದ ಋತ್ವಿಜರು ಪ್ರತ್ಯಕ್ಷ ನಿರೀಕ್ಷಣದ ಬಲದಿಂದ ನಕ್ಷತ್ರಮಾಲೆಯನ್ನು ಅಶ್ವಿನೀ ನಕ್ಷತ್ರದಿಂದ ಪ್ರಾರಂಭವಾಗುವಂತೆ ಪರಿವರ್ತಿಸಿದ್ದರು. ಮತ್ತು ಅಶ್ವಿನೀ ನಕ್ಷತ್ರದಲ್ಲಿದ್ದ ವಸಂತ ಸಂಪಾತ ಬಿಂದುವು ಅದರಿಂದ ಹಿಂದಕ್ಕೆ ಚಲಿಸುತ್ತ ಶಕವರ್ಷ ನಾನ್ನೂರಹದಿನೆರಡರಲ್ಲಿ ರೇವತೀ ನಕ್ಷತ್ರದ ಕೊನೆಗೆ ಬಂದು ತಲುಪಿತ್ತು.[1] ಅಂದರೆ ಅಲ್ಲಿಗೆ ಅಶ್ವಿನಿಯಿಂದ ನಕ್ಷತ್ರಗಳ ಗಣನೆಯು ಕೊನೆಗೊಳ್ಳಬೇಕಾಗಿತ್ತು,

ಹಿಂದೆ ವಿವರಿಸಿದಂತೆ ನಮಗೆ ಋಗ್ವೇದದೊಳಗಿನ ಐತಿಹ್ಯಗಳ ಆದಿಮಿತಿ ಯಾಗಿರುವ ಪುಷ್ಯ-ಸಂಪಾತದಿಂದ ಮೊದಲುಗೊಂಡು ಅಶ್ವಿನೀ ಸಂಪಾತದ ತನಕ ವ್ಯವಸ್ಥಿತ ಪಾರಂಪರ್ಯದ ಪ್ರಮಾಣಗಳು ದೊರೆಯುತ್ತವೆ. ಅಂದರೆ ಶಕವರ್ಷ ನಾನ್ನೂರಹದಿನೆರಡರ ಮೊದಲು ಅನುಕ್ರಮವಾಗಿ ಅಶ್ವಿನೀ, ಭರಣೀ, ಕೃತ್ತಿಕಾ, ರೋಹಿಣೀ, ಮೃಗಶಿರಾ, ಆರ್ದ್ರಾ, ಪುನರ್ವಸೂ ಮತ್ತು ಪುಷ್ಯ ಎಂಬ ಎಂಟು ನಕ್ಷತ್ರ ಪುಂಜಗಳು ವಸಂತಸಂಪಾತ ಸ್ಥಾನಕ್ಕೆ ಬಂದು ಆಗಲಿವೆ. ಆದುದರಿಂದ ಹಿಂದೆ ವಿವರಿಸಿದ ಗಣನೆಯಂತೆ ಪ್ರತಿಯೊಂದು ನಕ್ಷತ್ರಕ್ಕೆ ಸಂಪಾತಸ್ಥಾನದಿಂದ ಸರಿದುಹೋಗಲು ತಗಲುವ ಒಂಭೈನೂರ ಆರುವತ್ತು ವರ್ಷಗಳ ಪ್ರಕಾರ ಹಿಂದಕ್ಕೆ

---

1 ಪ್ರೊಫೆಸರ್ ವ್ಹಿಟನೀ: Orion page 32

ಗುಣಿಸುತ್ತ ಸಾಗಿದರೆ ಪ್ರತಿಯೊಂದು ನಕ್ಷತ್ರವು ಸಂಪಾತಸ್ಥಾನದಲ್ಲಿದ್ದ ಕಾಲವು ಗೊತ್ತಾಗುತ್ತದೆ.

ಆ ಗಣನೆಯಂತೆ ಅಶ್ವಿನೀ ನಕ್ಷತ್ರವು ಸಂಪಾತ ಸ್ಥಾನದಲ್ಲಿದ್ದ ಕಾಲವು ಶಕವರ್ಷ ೪೧೨ + ೯೬೦ = ಶಕಪೂರ್ವ ೫೪೮ನೆಯ ವರ್ಷದ ತನಕ. ಅದರ ಮೊದಲು ಭರಣೀ ನಕ್ಷತ್ರವು ಸಂಪಾತ ಸ್ಥಾನದಲ್ಲಿದ್ದ ಕಾಲವು ೫೪೮ + ೯೬೦ ಅಂದರೆ ಶಕಪೂರ್ವ ೫೪೯ನೆಯ ವರ್ಷದಿಂದ ಶಕಪೂರ್ವ ೧೫೦೮ನೆಯ ವರ್ಷದ ತನಕ. ಅದು ವೇದಾಂಗ ಜ್ಯೋತಿಷದ ಕಾಲವಾಗಿತ್ತು. ಅದಕ್ಕಿಂತ ಮೊದಲು ಕೃತ್ತಿಕಾ ನಕ್ಷತ್ರವು ವಸಂತ ಸಂಪಾತ ಸ್ಥಾನದಲ್ಲಿದ್ದ ಕಾಲವು ಶಕಪೂರ್ವ ೧೫೦೮ + ೯೬೦ ಅಂದರೆ ಶಕಪೂರ್ವ ೧೫೦೯ನೆಯ ವರ್ಷದಿಂದ ೨೪೬೮ನೆಯ ವರ್ಷದ ತನಕ ವಾಗಿದೆ. ಅದು ಶತಪಥ ಬ್ರಾಹ್ಮಣದೊಳಗಿನ ಕೃತ್ತಿಕೆಯರ ವರ್ಣನೆಗೆ ಸಂಬಂಧ ಪಟ್ಟ ಕಾಲವಾಗಿದೆ. ಅದಕ್ಕಿಂತ ಮೊದಲು ರೋಹಿಣೀ ನಕ್ಷತ್ರದಲ್ಲಿ ಸಂಪಾತವಿದ್ದ ಕಾಲವು ೨೪೬೮ + ೯೬೦ ಅಂದರೆ ಶಕಪೂರ್ವ ೨೪೬೯ನೆಯ ವರ್ಷದಿಂದ ೩೪೨೮ನೆಯ ವರ್ಷದ ತನಕವಾಗಿದೆ. ಅದು ತೈತ್ತಿರೀಯ ಬ್ರಾಹ್ಮಣದಲ್ಲಿ "ಪ್ರಜಾಪತಿಯು ರೋಹಿಣಿಯಲ್ಲಿ ಅಗ್ನಿಯನ್ನು ಸೃಷ್ಟಿಸಿದನು ಮತ್ತು ದೇವತೆಗಳು ಆ ಅಗ್ನಿಯನ್ನು ರೋಹಿಣಿಯಲ್ಲಿ ಆಧಾನ ಮಾಡಿದರು" ಎಂದು ವಿವರಿಸಿದ ಇತಿಹಾಸಕ್ಕೆ ಸಂಬಂಧಪಟ್ಟ ಕಾಲವಾಗಿದೆ. ಮತ್ತು ಋಗ್ವೇದದ ಹತ್ತನೆಯ ಮಂಡಲದ ಅರುವತ್ತೊಂದನೆಯ ಸೂಕ್ತದೊಳಗಿನ ಆರು ಮಂತ್ರಗಳ ಐತಿಹ್ಯಕ್ಕೆ ಸಂಬಂಧಪಟ್ಟ ಕಾಲವಾಗಿದೆ. ರೋಹಿಣಿಗಿಂತ ಮೊದಲು ಮೃಗಶೀರ್ಷ ನಕ್ಷತ್ರವು ಸಂಪಾತಸ್ಥಾನದಲ್ಲಿದ್ದ ಕಾಲವು ಶಕಪೂರ್ವ ೩೪೨೮ + ೯೬೦ ಅಂದರೆ ಶಕಪೂರ್ವ ೩೪೨೯ನೆಯ ವರ್ಷದಿಂದ ೪೩೮೮ನೆಯ ವರ್ಷದ ತನಕವಾಗಿದೆ. ಅದು ಶತಪಥ ಬ್ರಾಹ್ಮಣದಲ್ಲಿ "ಮೃಗ" ನಕ್ಷತ್ರವು ಪ್ರಜಾಪತಿಯ ಶರೀರವಾಗಿತ್ತು, ಎಂದು ವಿವರಿಸಿದ ಇತಿಹಾಸಕ್ಕಿಂತ ಮತ್ತು ಪ್ರಜಾಪತಿಯು ತನ್ನ ಮಗಳಾದ ರೋಹಿಣಿಯನ್ನು ಕಾಮಿಸಿ ಅವಳ ಬಳಿಗೆ ಸಾಗಿದನು ಎಂದು ಐತರೇಯ ಬ್ರಾಹ್ಮಣದಲ್ಲಿ ವರ್ಣಿಸಿದ ಐತಿಹ್ಯದ ಕಾಲಕ್ಕಿಂತ ಕೊಂಚ ಮೊದಲಿನ ಕಾಲವಾಗಿದೆ.

ಋಗ್ವೇದದ ಮಂತ್ರಗಳಲ್ಲಾಗಲೀ ಬ್ರಾಹ್ಮಣಗಳಲ್ಲಾಗಲೀ ಆರ್ದ್ರಾ ನಕ್ಷತ್ರದಲ್ಲಿ ವಸಂತ ಸಂಪಾತವಾಗುತಿದ್ದಿತೆಂದು ಸ್ಪಷ್ಟವಾಗಿ ಸೂಚಿಸುವ ಉಲ್ಲೇಖಗಳಿಲ್ಲವಾದರೂ ಋಗ್ವೇದದ ೬-೫೮-೩ ರಲ್ಲಿ ಪೂಷನೆಂಬ ದೇವನು ಚಿನ್ನದ ನಾವೆಗಳಿಂದ ಸೂರ್ಯನ ದೂತಕಾರ್ಯವನ್ನು ನೆರವೇರಿಸಲು ಹೋಗುತಿದ್ದಾನೆಂದು ಉಲ್ಲೇಖಿಸಿರುವುದರ ಮೇಲಿಂದ – ಅಂದರೆ ಪೂಷನು ರೇವತೀ ನಕ್ಷತ್ರದ ದೇವತೆಯಾಗಿರುವುದರಿಂದ - ಉತ್ತರ ಧ್ರುವಪ್ರದೇಶದಲ್ಲಿ ದೀರ್ಘರಾತ್ರಿಯ ತರುವಾಯ ಪೂರ್ವ ದಿಕ್ಕಿನಲ್ಲಿ ರೇವತೀ ನಕ್ಷತ್ರವು ಕಾಣಿಸಿದೊಡನೆಯೇ ಒಂದು ಕಾಲದಲ್ಲಿ ಬೆಳಕು

ಹರಿಯುತಿದ್ದಿತೆಂದು ಅನುಮಾನಿಸಬಹುದಾಗಿದೆ. ಹೇಗೆಂದರೆ ರೇವತೀ ನಕ್ಷತ್ರವು ಪೂರ್ವ ದಿಕ್ಕಿನಲ್ಲಿ ಕಾಣಿಸುವುದಾದರೆ ಆದ್ರ್ರಾ ನಕ್ಷತ್ರವು ಉತ್ತರ ದಿಕ್ಕಿನಲ್ಲಿ ಕಾಣಿಸಲೇ ಬೇಕಾಗುತ್ತದೆ. ಮತ್ತು ಹಾಗೆ ಉತ್ತರ ದಿಕ್ಕಿನಲ್ಲಿ ಕಾಣಿಸುತಿದ್ದ ಆದ್ರ್ರಾ ನಕ್ಷತ್ರವು ಪೂರ್ವ ದಿಕ್ಕಿಗೆ ತಲುಪುವಾಗ ವಸಂತ ಋತುವು ಪ್ರಾರಂಭವಾಗುತಿದ್ದಿತೆಂಬುದರಲ್ಲಿ ಸಂದೇಹವಿಲ್ಲ.

ವೈದಿಕ ಸಾಹಿತ್ಯದಲ್ಲಿ ವಸಂತ ಸಂಪಾತ ಬಿಂದುವು ಆದ್ರ್ರಾ ನಕ್ಷತ್ರದಲ್ಲಿದ್ದಿತೆಂದು ಸೂಚಿಸುವಂಥ ಉಲ್ಲೇಖಗಳಿಲ್ಲದಿರುವುದರ ಕಾರಣವು ಆ ಕಾಲದಲ್ಲಿ ಉತ್ತರ ಧ್ರುವಪ್ರದೇಶದ ಪ್ರಾಕೃತಿಕ ಪರಿಸ್ಥಿತಿಯು ಕೆಟ್ಟುದರಿಂದ ಆರ್ಯಜನರು ತಮ್ಮ ಧ್ರುವಪ್ರದೇಶದ ನೆಲೆಯನ್ನು ತೊರೆದು ಹೊಸನೆಲೆಯನ್ನು ಅರಸುತ್ತ ಅಲೆದಾಡುತಿದ್ದುದಾಗಿರಬಹುದೆಂದು ಹಿಂದೆ ಹೇಳಿದೆ. ಅವರು ಹಾಗೆ ಅಲೆದಾಡುತಿದ್ದಾಗ ನಾನಾ ಬಗೆಯ ಸಂಕಟಗಳನ್ನೂ, ಕಷ್ಟಗಳನ್ನೂ ಅನುಭವಿಸಿರಬಹುದು. ಆದುದರಿಂದಲೇ ಅವರು ಆದ್ರ್ರಾ ನಕ್ಷತ್ರದ ದೇವತೆಯಾಗಿರುವ ರುದ್ರನು ಮುನಿದರೆ ಬಹಳ ಅಪಾಯಕಾರಿಯೆಂದೂ, ಬಗೆ ಬಗೆಯ ಕಷ್ಟಗಳನ್ನೂ, ರೋಗಗಳನ್ನೂ ಕೊಟ್ಟು ಪೀಡಿಸುತ್ತಾನೆಂದೂ ವರ್ಣಿಸಿದ್ದಾರೆನ್ನಬಹುದು.

ಆದ್ರ್ರಾ ನಕ್ಷತ್ರದಲ್ಲಿ ವಸಂತ ಸಂಪಾತವಾಗುತಿದ್ದ ಕಾಲವು ಶಕಪೂರ್ವ ೪೩೮೮ + ೯೬೦ ಅಂದರೆ ಶಕಪೂರ್ವ ೪೩೯೮ನೆಯ ವರ್ಷದಿಂದ-೫೩೪೮ನೆಯ ವರ್ಷದ ತನಕವಾಗಿದೆ. ಆದ್ರ್ರಾ ನಕ್ಷತ್ರಕ್ಕಿಂತ ಮೊದಲು ಪುನರ್ವಸೂ ನಕ್ಷತ್ರವು ಸಂಪಾತ ಸ್ಥಾನದಲ್ಲಿದ್ದಿತೆಂಬುದನ್ನು ಹಿಂದೆ ವಿವರಿಸಿದೆ. ಆ ಕಾಲವು ಶಕಪೂರ್ವ ೫೩೪೮ + ೯೬೦ ಅಂದರೆ ಶಕಪೂರ್ವ ೫೩೯೮ನೆಯ ವರ್ಷದಿಂದ ೬೩೦೮ನೆಯ ವರ್ಷದ ತನಕವಾಗಿದೆ. ಪುನರ್ವಸೂ ನಕ್ಷತ್ರಕ್ಕಿಂತ ಮೊದಲು ತಿಷ್ಯ ಅಥವಾ ಪುಷ್ಯ ನಕ್ಷತ್ರವು ವಸಂತ ಸಂಪಾತದಲ್ಲಿದ್ದಿತೆಂಬುದರ ಪ್ರಮಾಣಗಳು ಕೂಡ ಹಿಂದೆ ಉದಹರಿಸಲ್ಪಟ್ಟಿವೆ. ಅವುಗಳಿಗನುಸಾರವಾಗಿ ಪುಷ್ಯ ನಕ್ಷತ್ರವು ಸಂಪಾತ ಸ್ಥಾನದಲ್ಲಿದ್ದ ಕಾಲವು ಶಕಪೂರ್ವ ೬೩೦೮ + ೯೬೦ ವರ್ಷಗಳು ಅಂದರೆ ಶಕಪೂರ್ವ ೬೩೯೮ನೆಯ ವರ್ಷದಿಂದ ೭೨೬೮ನೆಯ ವರ್ಷದ ತನಕವಾಗಿದೆ. ಹಿಂದೆ ಹೇಳಿದ ಎಲ್ಲ ಕಾಲಮಾನಗಳು ಜ್ಯೋತಿಷದ ಆಧಾರದಿಂದ ಸಿದ್ಧವಾಗುವಂಥವುಗಳಾಗಿರುವುದರಿಂದ ಅವುಗಳಲ್ಲಿ ನೂರು ಇಲ್ಲವೇ ಇನ್ನೂರು ವರ್ಷಗಳ ಅಂತರವನ್ನು ಹೇಳಬಹುದೇ ಹೊರತು - ಅವುಗಳನ್ನು ಅಲ್ಲಗಳೆಯಲು ಸಾಧ್ಯವಿಲ್ಲ.

ಆ ಪ್ರಕಾರವಾಗಿ ನಮಗೆ ಈಗ ತಿಳಿದು ಬಂದ ಮಟ್ಟಿಗೆ ಪುಷ್ಯ ನಕ್ಷತ್ರದಲ್ಲಿ ವಸಂತ ಸಂಪಾತವಿದ್ದಿತೆಂದು ಸೂಚಿಸುವ ಉಲ್ಲೇಖಗಳು ಜ್ಯೋತಿಷದ ಆಧಾರದಿಂದ ಋಗ್ವೇದದ ಮಂತ್ರಗಳಲ್ಲಿ ಅಡಕವಾಗಿರುವ ಐತಿಹ್ಯಗಳ ಪ್ರಾಚೀನತೆಯನ್ನು ನಿರ್ಧರಿಸಲು ಸಹಾಯ ಮಾಡುತ್ತವಾದರೂ ಋಗ್ವೇದದಲ್ಲಿ ಆ ಕಾಲಕ್ಕಿಂತ ಪ್ರಾಚೀನವಾದ

ಐತಿಹ್ಯಗಳೂ ಇವೆಯೆಂಬುದರಲ್ಲಿ ಸಂದೇಹವಿಲ್ಲ. ಉದಾಹರಣೆಗಾಗಿ ಹೇಳುವುದಾದರೆ – ಋಗ್ವೇದದೊಳಗಿನ – **"ತ್ವಾಮಗ್ನೇಽಂಗಿರಸೋ ಗುಹಾಹಿತಮನ್ವವಿಂದಞ್ಛಿಶ್ರಿಯಾಣಂ ವನೇವನೇ"** ಅಂದರೆ **"ಅಂಗಿರಸರು ಕಾಡುಗಳಲ್ಲಿ ಅಡಗಿದ್ದ ಅಗ್ನಿಯನ್ನು ಕಂಡುಹಿಡಿದರು"** ಎಂಬ ಇತಿಹಾಸವು ಪುಷ್ಯ ನಕ್ಷತ್ರದಲ್ಲಿ ವಸಂತ ಸಂಪಾತವಾಗುತಿದ್ದ ಕಾಲಕ್ಕಿಂತ ಪ್ರಾಚೀನವಾಗಿದೆ. ಹೇಗೆಂದರೆ ಪ್ರಷ್ಯ ನಕ್ಷತ್ರದಲ್ಲಿ ವಸಂತ ಸಂಪಾತವಾಗುತಿದ್ದ ಕಾಲದಲ್ಲಿ ಯಜ್ಞಗಳು ಸ್ಥಾಪಿತವಾಗಿದ್ದುವೆಂದು ಗೊತ್ತಾಗುತ್ತದೆ. ಮತ್ತು ಅಗ್ನಿಯನ್ನು ಕಂಡುಹಿಡಿದುದು ಯಜ್ಞಪೂರ್ವಕಾಲದ ಇತಿಹಾಸವಾಗಿದೆ. ಅಂಥ ಉಲ್ಲೇಖಗಳು ಋಗ್ವೇದದಲ್ಲಿ ಕನಿಷ್ಟ ಪಕ್ಷದಲ್ಲಿ ಒಂಭತ್ತು ಸಾವಿರದ ಐನೂರು ವರ್ಷಕ್ಕಿಂತ ಪ್ರಾಚೀನವಾದ ಇತಿಹಾಸವು ಸಂಗ್ರಹಿಸಲ್ಪಟ್ಟಿದೆಯೆಂಬುದನ್ನು ಸಂದೇಹಕ್ಕೆಡೆಯಿಲ್ಲದಂತೆ ಸಿದ್ಧಪಡಿಸುತ್ತವೆ. ಆದುದರಿಂದ ವೇದ ಮಂತ್ರಗಳ ಪ್ರಾಚೀನತೆಯ ಸಂಬಂಧದಲ್ಲಿ ಪ್ರೊ. ಮೆಕ್ಸ್‌ಮುಲ್ಲರ್ ಮತ್ತು ಅವರನ್ನನುಸರಿಸಿದ್ದ ಇತರ ಪಾಶ್ಚಾತ್ಯ ವಿದ್ವಾಂಸರು ಮುಂದೆ ತಂದ ವಾದಗಳನ್ನು ಬುಡವಿಲ್ಲದ ಕಲ್ಪನೆಗಳೆಂದು ತ್ಯಜಿಸಬಹುದಾಗಿದೆ.

೮. ಶಿವಾರಾಧನೆ ಮತ್ತು ನಾಗಾರಾಧನೆ.

ಪಶ್ಚಿಮ ಆಸ್ಯದ ಸುಮೇರದಲ್ಲಿ ಮತ್ತು ಭಾರತ ವರ್ಷದ ಬಲೂಚಿಸ್ತಾನ, ಪಂಜಾಬ ಮೊದಲಾದ ಪ್ರದೇಶಗಳಲ್ಲಿ ನಡೆಸಿದ ಅಗೆತಗಳಲ್ಲಿ ಬೆಳಕಿಗೆ ಬಂದಿದ್ದ ಕೆಲವು ಹಾಲುಗಲ್ಲಿನ ಬಿಲ್ಲೆಗಳ ಮೇಲೆ ತಲೆಯಲ್ಲಿ ಎತ್ತಿನ ಕೊಂಬುಗಳಿರುವ ತ್ರಿಮುಖ ದೇವನ ಮತ್ತು ನಾಗನ ಚಿತ್ರಗಳನ್ನು ಕಂಡ ಬ್ರಿಟಿಷ್ ವಿದ್ವಾಂಸರು ತ್ರಿಮುಖ ದೇವನನ್ನು ಪಶುಪತಿಶಿವನೆಂದು ನಿರ್ಧರಿಸಿ – ಆರ್ಯಜನರು ಭಾರತವರ್ಷಕ್ಕೆ ಬರುವ ಮೊದಲು ಅಲ್ಲಿ ನೆಲಸಿದ್ದ ದ್ರಾವಿಡ ಜನರಲ್ಲಿ ಶಿವನ ಮತ್ತು ನಾಗನ ಆರಾಧನೆಯು ಪ್ರಚಲಿತವಿದ್ದಿತೆಂದು ಮತ್ತು ಆರ್ಯಜನರು ದ್ರಾವಿಡ ಜನರಿಂದ ಶಿವನ ಮತ್ತು ನಾಗನ ಆರಾಧನೆಯನ್ನು ಸ್ವೀಕರಿಸಿದ್ದರೆಂದು ಸಾಧಾರಣ ನೂರೈವತ್ತು ವರ್ಷಗಳಿಂದ ಪ್ರಚಾರ ಮಾಡುತ್ತ ಬಂದಿದ್ದಾರೆ.

ಹಾಗೆಯೇ ಇಬ್ಬರು ಬೋಡೆನ್ ಸಂಸ್ಕೃತ ವಿದ್ವಾಂಸರಾಗಿದ್ದ ಎಚ್. ಎಚ್. ವಿಲ್ಸನ್ ಮತ್ತು ಏ. ಏ. ಮೆಕ್‌ಡೊನೆಲ್ ಎಂಬವರು ಋಗ್ವೇದದೊಳಗಿನ ಎರಡು ಋಚೆಗಳಲ್ಲಿ ನಕ್ಷತ್ರಗಳ ಹೆಸರಾಗಿ ಬಂದಿರುವ "ಶಿಶ್ನದೇವಾಃ" ಎಂಬ ಶಬ್ದಕ್ಕೆ "ಲಿಂಗಾರಾಧಕರು" ಎಂಬ ಅರ್ಥಕಟ್ಟಿ ಆರ್ಯಪೂರ್ವ ಭಾರತವಾಸಿಗಳಲ್ಲಿ ಶಿವನ ಲಿಂಗರೂಪದ ಆರಾಧನೆಯು ಪ್ರಚಲಿತವಿದ್ದಿತೆಂಬ ಕಲ್ಪನೆಯನ್ನು ಮಂಡಿಸಿದ್ದಾರೆ.

ಪರಂತು ಶಿವನು ದ್ರಾವಿಡ ಜನರ ದೇವನೆಂಬ ಮತ್ತು ಶಿವನ ಲಿಂಗರೂಪದ ಆರಾಧನೆಯು ಋಗ್ವೇದ ಕಾಲಕ್ಕಿಂತ ಪ್ರಾಚೀನವಾದುದೆಂಬ ಕಲ್ಪನೆಯನ್ನು ಮುಂದೆ ತಂದ ಯಾವನೊಬ್ಬ ಪಾಶ್ಚಾತ್ಯ ವಿದ್ವಾಂಸನಾದರೂ ತನ್ನ ಆ ಕಲ್ಪನೆಯನ್ನು ಸಂದೇಹಾತೀತವಾಗಿ ಸಿದ್ಧಪಡಿಸಲು ಯಾವುದೊಂದು ದೃಢವಾದ ಹಾಗೂ ವಿಶ್ವಾಸಾರ್ಹವಾದ ಪ್ರಮಾಣವನ್ನು ಉದಹರಿಸಿಲ್ಲ. ಅವರು ಸಂಸ್ಕೃತ ಭಾಷೆಯ ಕೆಲವು ಶಬ್ದಗಳನ್ನು ಎತ್ತಿಕೊಂಡು ಅವುಗಳನ್ನು ಎಳೆದಾಡಿದ್ದಾರೆಯೇ ಹೊರತು ದ್ರಾವಿಡ ಜನರ ಪ್ರಾಚೀನ ಸಾಹಿತ್ಯದಿಂದ ಒಂದೇ ಒಂದು ಪ್ರಮಾಣವನ್ನಾದರೂ ಉದಹರಿಸಲಿಲ್ಲ. ಅಂದರೆ ಅವರು ಕೆಲವು ಸಂಸ್ಕೃತ ಶಬ್ದಗಳು ತಮಿಳಿನಿಂದ ಹುಟ್ಟಿದವುಗಳೆಂದು ಇಲ್ಲವೇ ರೂಪಾಂತರ ಹೊಂದಿದವುಗಳೆಂದು ಸಾಧಿಸಲು ಬಹಳವಾಗಿ ಹೆಣಗಾಡಿದ್ದಾರೆ. ಉದಾಹರಣೆಗಾಗಿ ಹೇಳುವುದಾದರೆ ಒಬ್ಬ ಬ್ರಿಟಿಷ್ ವಿದ್ವಾಂಸನು ಸಂಸ್ಕೃತದ 'ಪೂಜ್' ಎಂಬ ಕ್ರಿಯಾಪದವು ತಮಿಳಿನ "ಪೂ = ಹೂವು" ಮತ್ತು "ಶೆಯ್ = ಮಾಡು" ಎಂಬ ಶಬ್ದಗಳ ಸಂಯೋಗದಿಂದ ರೂಪುಗೊಂಡು "ಪೂಶೆಯ್" ಎಂಬುದರ ರೂಪಾಂತರವೆಂದು ವಾದಿಸಿದರೆ ಬೇರೊಬ್ಬ ವಿದ್ವಾಂಸನು ತಮಿಳಿನ

"ಪೂಚ್ಚು = ಪೂಸು" ಎಂಬ ಕ್ರಿಯೆಯ ರೂಪವೇ "ಪೂಜ್" ಆಗಿದೆಯೆಂದು ವಾದಿಸುತ್ತಾನೆ. ಇನ್ನೊಬ್ಬನು ಸಂಸ್ಕೃತದಲ್ಲಿ ಶಿವನ ಬಣ್ಣವನ್ನು "ನೀಲಲೋಹಿತ" ಅಂದರೆ "ನೀಲಿ ಕೆಂಪು" ಎಂದು ಹೇಳಿದೆಯಾದುದರಿಂದ ಶಿವ ಶಬ್ದವು "ಲೋಹಿತ" ಅಂದರೆ "ಕೆಂಪು" ಎಂಬರ್ಥದ ತಮಿಳು ಶಬ್ದ "ಶಿವಪ್ಪು" ಎಂಬುದರಿಂದ ಇಲ್ಲವೇ "ಶಿವ್ = ಕೆಂಪಾಗು" ಎಂಬ ಧಾತುವಿನಿಂದ ಹುಟ್ಟಿದುದೆನ್ನುತ್ತಾನೆ. ಹಾಗೆಯೇ ಮತ್ತೊಬ್ಬ ಬ್ರಿಟಿಷ್ ವಿದ್ವಾಂಸನು ಶಿವನ ಸಂಸ್ಕೃತ ಹೆಸರುಗಳಲ್ಲೊಂದಾದ "ಶಂಭು" ಎಂಬ ಶಬ್ದವು ತಮಿಳಿನ "ಶೆಂಬು" ಇಲ್ಲವೇ "ಚೆಂಬು" ಶಬ್ದದಿಂದ ಹುಟ್ಟಿದುದೆನ್ನುತ್ತಾನೆ.[1] ಆದರೆ ಯಾವನೊಬ್ಬ ಬ್ರಿಟಿಷ್ ವಿದ್ವಾಂಸನಾದರೂ ಸಂಸ್ಕೃತದ ಮತ್ತು ತಮಿಳಿನ ಆ ಶಬ್ದಗಳಲ್ಲಿ ಅರ್ಥಸಾಮ್ಯವಿಲ್ಲವೆಂಬುದನ್ನು ಪರಿಶೀಲಿಸುವ ಗೋಜಿಗೆ ಹೋಗಿಲ್ಲ. ಅಂದರೆ ಸಂಸ್ಕೃತದಲ್ಲಿ "ಶಿವ" ಶಬ್ದದ ಅರ್ಥವು "ಕೆಂಪು" ಎಂದಿರದೇ "ಮಂಗಲಮಯ ಅಥವಾ ಕಲ್ಯಾಣಕಾರಕ" ಎಂದಿದೆಯೆಂಬುದನ್ನಾಗಲೀ "ಶಂಭು" ಶಬ್ದದ ಅರ್ಥವು "ತಾಮ್ರ" ಎಂದಿರದೇ ಅದು "ಶಮ್" ಮತ್ತು "ಭೂ" ಎಂಬ ಎರಡು ಪದಗಳ ಸಂಯೋಗದಿಂದ ಹುಟ್ಟಿದ ಶಬ್ದವಾಗಿದ್ದು ಅದರ ಅರ್ಥವು "ಶಾಂತನಾಗಿರುವವ ಅಥವಾ ಶುಭಕರನಾಗಿರುವವ" ಎಂದಿದೆಯೆಂಬುದನ್ನಾಗಲೀ ಪರಿಶೀಲಿಸಲಿಲ್ಲ. ಆ ಪ್ರಕಾರವಾಗಿ ಬ್ರಿಟಿಷ್ ವಿದ್ವಾಂಸರು ಮುಂದೆ ತಂದಿದ್ದ ವ್ಯುತ್ಪತ್ತಿಗಳಲ್ಲಿ ಅತ್ಯಂತ ಚೆಲೋದಾದುದೆಂದರೆ- ಸಂಸ್ಕೃತದ "ಹನುಮತ್"[2] ಎಂಬ ಶಬ್ದವು ತಮಿಳಿನ "ಆಣ್‌ಮಂದಿ"[3] ಶಬ್ದದ ರೂಪಾಂತರವೆಂದುದಾಗಿದೆ. ಅದೇ ರೀತಿಯಲ್ಲಿ ಜೆಜುಇಟ್ ಪಾದ್ರಿ ಹೆನರೀ ಹೆರಾಸ್ ಎಂಬವರು ಕೂಡ ಶಿವನು ದ್ರಾವಿಡರ ದೇವನೆಂದು ವಾದಿಸಿ ಹಲವು ಬುಡವಿಲ್ಲದ ಕಲ್ಪನೆಗಳನ್ನು ಮುಂದೆ ತಂದಿದ್ದಾರೆ. ಅಂದರೆ ಪ್ರತಿಯೊಬ್ಬ ಪಾಶ್ಚಾತ್ಯ ವಿದ್ವಾಂಸನು ಸಂಸ್ಕೃತ ಪುರಾಣಗಳೊಳಗಿನ ಕಥೆಗಳಲ್ಲಿ ಬಂದಿರುವ ವರ್ಣನೆಗಳ ಆಧಾರದಿಂದ ನಾನಾ ಬಗೆಯ ಕಲ್ಪನೆಗಳನ್ನು ಮುಂದೆ ತಂದಿದ್ದಾನೆಯೇ ಹೊರತು ಅವರೊಳಗಿನ ಒಬ್ಬನಾದರೂ ಶಿವನ ವಾಸ್ತವಿಕ ಮೂಲವನ್ನು ಕಂಡು ಹಿಡಿದು ಅವನು ಯಾವ ತತ್ವವನ್ನು ಪ್ರತಿನಿಧಿಸುತ್ತಾನೆಂದು ವಿವರಿಸಿದುದಾಗಲೀ ಶಿವನು ದ್ರಾವಿಡರ ದೇವನೆಂದು ಸಿದ್ಧಪಡಿಸಲು ದ್ರಾವಿಡರ ಪ್ರಾಚೀನ ಗ್ರಂಥಗಳಿಂದ ಯೋಗ್ಯ ಪ್ರಮಾಣಗಳನ್ನು ಉದಹರಿಸಿದುದಾಗಲೀ ಇಲ್ಲ.

ವೈದಿಕ ಸಾಹಿತ್ಯದ ಪ್ರಕಾರ ಅಗ್ನಿಯೇ ಶಿವನೂ, ರುದ್ರನೂ ಆಗಿದ್ದಾನೆ. ಮತ್ತು ಅಗ್ನಿಯನ್ನು ಶಿವ ಮತ್ತು ರುದ್ರ ಎಂದು ಕರೆದು ಆರಾಧಿಸುವ ಪದ್ಧತಿಯು

---

[1] Ancient India page 37. by V. D. Mahajan M. A.

[2] A History of South India page 12. by K. A. Nilakanta Sastry M. A.

[3] "ಆಣ್ ಮಂದಿ = ಗಂಡು ಕೋತಿ"

ಪಾಶ್ಚಾತ್ಯ ವಿದ್ವಾಂಸರು ಕಲ್ಪಿಸಿ ಹೇಳುವಂತೆ ಋಗ್ವೇದೋತ್ತರ ಕಾಲದ ಬೆಳವಣಿಗೆಯಾಗಿರದೇ ಋಗ್ವೇದ ಪೂರ್ವಕಾಲದಿಂದಲೇ ಸಾಗಿ ಬಂದ ಸಂಪ್ರದಾಯವಾಗಿದೆಯೆಂದು ಋಗ್ವೇದದೊಳಗಿನ ಮಂತ್ರಗಳಿಂದ ಸ್ಪಷ್ಟವಾಗಿ ಸಿದ್ಧವಾಗುತ್ತದೆ. ಆದುದರಿಂದಲೇ ಋಗ್ವೇದದ ೧–೧೧೪ನೆಯ ೨–೩೩ನೆಯ ಮತ್ತು ೭–೪೬ನೆಯ ಸಂಪೂರ್ಣ ಸೂಕ್ತಗಳಲ್ಲಿ ಮತ್ತು ಬೇರೆ ಹಲವು ಸೂಕ್ತಗಳಲ್ಲಿ ರುದ್ರನ ಸ್ತುತಿ ಇರುವುದಾಗಿದೆ. ಅಲ್ಲದೇ ರುದ್ರನು ಆರ್ದ್ರಾ ನಕ್ಷತ್ರದ ದೇವನಾಗಿರುವುದರಿಂದ ವಿಶ್ವೇದೇವ ಸೂಕ್ತಗಳಲ್ಲಿಯೂ ರುದ್ರನ ಸ್ತುತಿ ಬರುತ್ತದೆ. ಅಷ್ಟೇಕೆ ಋಗ್ವೇದದ ೧-೨೭-೧೦ನೆಯ ೨-೧-೬ನೆಯ ಮತ್ತು ೩-೨-೫ನೆಯ ಋಚೆಗಳಲ್ಲಿ ಅಗ್ನಿಯನ್ನು ಸ್ಪಷ್ಟವಾಗಿ ರುದ್ರನೆಂದು ಕರೆದಿದೆ.

ಆರ್ಯ ಜನರ ಪೂರ್ವಜರು ಉತ್ತರ ಧ್ರುವ ಪ್ರದೇಶದಲ್ಲಿ ನೆಲಸಿದ್ದಾಗ ಅಲ್ಲಿನ ದೀರ್ಘ ರಾತ್ರಿಯ ಕಾಲದಲ್ಲಿ ಚಳಿಯನ್ನು ನಿವಾರಿಸುವ ಸಲುವಾಗಿ ಬಹಳ ದೊಡ್ಡದಾಗಿ ಉರಿಸುತಿದ್ದ ಅಗ್ನಿಯನ್ನೇ ಅವರು ರುದ್ರನೆಂದು ಕರೆಯುತಿದ್ದರು. ಅಂದರೆ ಪ್ರಾಚೀನ ಕಾಲದ ಆರ್ಯ ಜನರು ಅಗ್ನಿಯನ್ನೇ ಪ್ರಸಂಗಾನುಸಾರವಾಗಿ ಇಂದ್ರನೆಂದೂ, ರುದ್ರನೆಂದೂ, ಶಿವನೆಂದೂ, ಕಪರ್ದಿಯೆಂದೂ ಕರೆಯುತಿದ್ದರೆಂಬ ಪ್ರಮಾಣಗಳು ಋಗ್ವೇದದಲ್ಲಿ ಹೇರಳವಾಗಿದೆ. ಅರ್ಥಾತ್ ಅಗ್ನಿಯ ಆರಾಧನೆಯು ಆರ್ಯ ಜನರದೇ ವೈಶಿಷ್ಟ್ಯವಾಗಿರುವುದರಿಂದ ಅಗ್ನಿಯ ಬೇರೊಂದು ಹೆಸರಿನ ರೂಪವಾಗಿರುವ ಶಿವನನ್ನು ಆರ್ಯಜನರ ದೇವನಲ್ಲವೆನ್ನುವ ಪಾಶ್ಚಾತ್ಯ ವಿದ್ವಾಂಸರ ವಾದದಲ್ಲಿ ರವಷ್ಟಾದರೂ ಹುರುಳಿಲ್ಲವೆನ್ನಬೇಕಾಗಿದೆ.

ಋಗ್ವೇದದಲ್ಲಿ "ಶಿವ" ಎಂಬ ಶಬ್ದವು "ಮಂಗಲಕಾರಕ" ಎಂಬರ್ಥದಲ್ಲಿ ವಿಶೇಷಣವಾಗಿಯೂ "ಮಂಗಲಮಯ ದೇವ" ಎಂಬರ್ಥದಲ್ಲಿ ಅಗ್ನಿಯ ಹೆಸರಾಗಿಯೂ ಹಲವು ಸರ್ತಿ ಪ್ರಯೋಗಿಸಲಾಗಿದೆ. ಉದಾಹರಣೆಯಾಗಿ ಅಗ್ನಿಯನ್ನು ಶಿವ ಮತ್ತು ರುದ್ರ ಎಂದು ಕರೆದಿರುವ ಕೆಲವು ಋಗ್ವೇದದ ಮಂತ್ರಗಳು ಇಲ್ಲಿ ಮುಂದೆ ಕೊಡಲಾಗುವುವು–

ತ್ವಮಗ್ನೇ ಪ್ರಥಮೋ ಅಂಗಿರಾ ಋಷಿರ್ದೇವೋ
ದೇವಾನಾಮಭವಃ ಶಿವಃ ಸಖಾ
ತವವ್ರತೇ ವಿದ್ಮನಾಪಸೋ ಅಜಾಯಂತ
ಮರುತೋ ಭ್ರಾಜದೃಷ್ಟಯಃ ॥ ಋ. ೧-೩೧-೧ ॥

ಅರ್ಥ— ಹೇ ಅಗ್ನಿದೇವನೇ, ನೀನು ಮೊತ್ತಮೊದಲಿನ ಅಂಗಿರಾ ಋಷಿಯೂ, ದೇವರುಗಳ ದೇವನೂ, ಶಿವರೂಪದ ಗೆಳೆಯನೂ ಆದಿ. ನಿನ್ನ ಆವರಣದಲ್ಲಿ ಅಂದರೆ ಯಜ್ಞಚಿತಿಯಲ್ಲಿ ವಿಚಾರ ಶೀಲರೂ ಮಿನುಗುವ ಈಟಿಗಳಾಗಿರುವವರೂ ಆದ ಮರುತ್ತುಗಳು ಹುಟ್ಟಿದರು.

ಆರೇ ಅಸ್ಮದಮತಿಮಾರೇ ಅಂಹ
ಆರೇ ವಿಶ್ವಾಂ ದುರ್ಮತಿಂ ಯನ್ನಿಪಾಸಿ ।
ದೋಷಾ ಶಿವಃ ಸಹಸಃ ಸೂನೋ
ಅಗ್ನೇ ಯಂ ದೇವ ಆ ಚಿತ್ ಸಚಸೇ ಸ್ವಸ್ತಿ ॥ ಋ. ೪-೧೧-೬ ॥

ಅರ್ಥ—ಹೇ ಅಗ್ನಿದೇವನೇ, ನೀನು ನಮ್ಮನ್ನು ಕಾಪಾಡುತ್ತಿರಲು ನಮ್ಮ ದಾರಿದ್ರ್ಯವನ್ನೂ, ಕಷ್ಟಗಳನ್ನೂ ಸಕಲ ಕಲಹಗಳನ್ನೂ ದೂರಗೊಳಿಸುತ್ತೀ. ಹೇ ಬಲದ ಪುತ್ರನಾದ ಅಗ್ನಿಯೇ ಶಿವರೂಪನಾದ ನೀನು ಯಾವನ ಬಳಿಯಲ್ಲಿರುತ್ತಿಯೋ ಅವನಿಗೆ ರಾತ್ರಿಯು ಸುಖಕರವಾಗುತ್ತದೆ.

ಅಗ್ನೇ ತ್ವಂ ನೋ ಅಂತಮ
ಉತ ತ್ರಾತಾ ಶಿವೋ ಭವಾ ವರೂಥ್ಯಃ ॥ ಋ. ೫-೨೪-೧ ॥

ಅರ್ಥ— ಹೇ ಅಗ್ನಿದೇವನೇ, ನೀನು ನಮ್ಮ ನಿಕಟತಮ ಮಿತ್ರನೂ, ರಕ್ಷಕನೂ, ಶಿವನೂ, ಮರೆನೀಡುವವನೂ ಆಗು.

ತ್ವಮಗ್ನೇ ರುದ್ರೋऽಸುರೋ ಮಹೋದಿವಸ್
ತ್ವಂ ಶರ್ಧೋ ಮಾರುತಂ ಪೃಕ್ಷ ಈಶಿಷೇ ।
ತ್ವಂ ವಾತೈರರುಣೈರ್ಯಾಸಿ ಶಂಗಯಸ್
ತ್ವಂ ಪೂಷಾ ವಿಧತಃ ಪಾಸಿ ನು ತ್ಮನಾ ॥ ಋ. ೨-೧-೬ ॥

ಅರ್ಥ— ಹೇ ಅಗ್ನಿಯೇ, ನೀನು ರುದ್ರನಾಗಿರುತ್ತಿ. ಮಹದಾಕಾಶದ ಅಸುರನಾಗಿರುತ್ತೀ, ಮರುತ್ತುಗಳ ಫೂತ್ಕಾರವಾಗಿರುತ್ತೀ, ಆಹಾರದ ಒಡೆಯನಾಗಿ ರುತ್ತೀ, ನೀನು ಕೆಂಪು ಗಾಳಿಗಳೊಂದಿಗೆ ಹೋಗುತ್ತೀ, ಮನೆಗಳಿಗೆ ಮಂಗಲಕರ ನಾಗಿರುತ್ತೀ ಮತ್ತು ಪೂಷಾ ಎಂಬ ಹೆಸರಿನಿಂದ ನಿನ್ನ ಆರಾಧಕರನ್ನು ಸಂರಕ್ಷಿಸುತ್ತೀ.

ಭುವನಸ್ಯ ಪಿತರಂ ಗೀರ್ಭಿರಾಭೀ
ರುದ್ರಂ ದಿವಾ ವರ್ಧಯಾ ರುದ್ರಮಕ್ತೌ ।
ಬೃಹಂತಮೃಷ್ವಮಜರಂ ಸುಷುಮ್ನಮ್
ಋಧಗ್ಘುವೇಮ ಕವಿನೇಷಿತಾಸಃ ॥ ಋ. ೬-೪೯-೧೦ ॥

ಅರ್ಥ— ಜಗತ್ತಿನ ತಂದೆಯಾಗಿರುವ ರುದ್ರನನ್ನು ಈ ಚೆಲೋ ಸ್ತುತಿ ಗಳಿಂದ ಹಗಲಿರುಳು ದೊಡ್ಡವನನ್ನಾಗಿ ಮಾಡು. ದೊಡ್ಡವನೂ, ಶ್ರೇಷ್ಠನೂ, ಮುಪ್ಪಿಲ್ಲದವನೂ. ದಯಾಳುವೂ ಆಗಿರುವ ರುದ್ರನನ್ನು ಋಷಿಗಳಿಂದ ಪ್ರೇರಿತ ರಾದ ರೀತಿಯಲ್ಲಿಯೇ ನಾವು ಕರೆಯುವ.

ಋಗ್ವೇದದ ಬೇರೆ ಹಲವು ಮಂತ್ರಗಳಲ್ಲಿ ಕೂಡ ಅಗ್ನಿಯನ್ನು ಶಿವ ಮತ್ತು ರುದ್ರ ಎಂದು ಕರೆದ ಇಲ್ಲವೇ ರುದ್ರನನ್ನು ಶಿವ ಎಂದು ಕರೆದ ಪ್ರಮಾಣಗಳಿವೆ,

ಅದೇ ರೀತಿಯಲ್ಲಿ ಯಜುರ್ವೇದದ ಸಂಹಿತೆಗಳಲ್ಲಿ ಮತ್ತು ಬ್ರಾಹ್ಮಣಗಳಲ್ಲಿ ಅಗ್ನಿಯನ್ನು ಶಿವ ಮತ್ತು ರುದ್ರ ಎಂದು ಕರೆದ ಹಾಗೂ ಅಗ್ನಿಯೇ ಶಿವನೆಂದೂ, ರುದ್ರನೆಂದೂ ಸ್ಪಷ್ಟವಾಗಿ ಹೇಳಿದ ಪ್ರಮಾಣಗಳಿವೆ:—

ಶಿವೋ ಭೂತ್ವಾ ಮಹ್ಯಮಗ್ನೇಽಥೋಸೀದ ಶಿವಸ್ತ್ವಮ್ । ಶಿವಾಃ ಕೃತ್ವಾ ದಿಶಃ ಸರ್ವಾಃ ಸ್ವಾಂ ಯೋನಿಮಿಹಾಸದ ॥ ತೈ. ಸಂ. ೪–೧–೯–೧೬ ವಾ. ಸಂ. ೧೨-೧೭ ॥

ಅರ್ಥ– ಹೇ ಅಗ್ನಿದೇವನೇ, ನೀನು ನನಗೆ ಕಲ್ಯಾಣಕಾರಕನಾಗಿ ಈಗ ಕುಳಿತುಕೋ. ನೀನೇ ಶಿವನು ಅಥವಾ ಮಂಗಲ ಸ್ವರೂಪನು. ಎಲ್ಲ ದಿಕ್ಕುಗಳನ್ನು (ನಿನ್ನ ಪ್ರಕಾಶದಿಂದ) ಮಂಗಲಮಯಗಳನ್ನಾಗಿ ಮಾಡಿ ನಿನ್ನ ಯೋನಿಯಲ್ಲಿ (=ಚಿತಿಯಲ್ಲಿ) ಕುಳಿತುಕೋ,

ಯಜುರ್ವೇದದ ವಾಜಸನೇಯಿ ಸಂಹಿತೆಯಲ್ಲಿ ಅಗ್ನಿಯನ್ನು–"**ಶಿವೋ ನಾಮಾಸಿ ॥ ೩-೬೩ ॥** ಅಂದರೆ–ನೀನು ಶಿವನೆಂಬ ಹೆಸರಿನವನಾಗಿರುತ್ತೀ ಎಂದು ಹೇಳಿದೆ.

ಹಾಗೆಯೇ ತೈತ್ತಿರೀಯ ಸಂಹಿತೆಯಲ್ಲಿ ಈ ಅಗ್ನಿಯೇ ರುದ್ರನೆಂದು ಹಲವು ಸರ್ತಿ ಹೇಳಿದೆ– **ರುದ್ರೋ ವಾಏಷ ಯದಗ್ನಿಃ ॥ ೫–೪-೩–೧ ॥ ೫-೪-೧೦-೫ ॥ ೫-೫-೭-೪ ಇತ್ಯಾದಿ ॥**

ಶತಪಥ ಬ್ರಾಹ್ಮಣದಲ್ಲಿ ಅಗ್ನಿಯನ್ನು ಶಿವ ಮತ್ತು ರುದ್ರ ಎಂಬುದಾಗಿ ಮಾತ್ರವಲ್ಲ ಋಗ್ವೇದದಲ್ಲಿ ಇಲ್ಲದ ಬೇರೆ ಹೆಸರುಗಳಿಂದ ಕೂಡ ಕರೆದ ಪ್ರಮಾಣಗಳಿವೆ.

ತದ್ವಾ ಅಗ್ನಯೇ ಇತಿಕ್ರಿಯತೇ । ಅಗ್ನಿರ್ವೈ ಸ ದೇವಃ । ತಸ್ಯೈತಾನಿ ನಾಮಾನಿ । ಶರ್ವ ಇತಿ ಯಥಾ ಪ್ರಾಚ್ಯಾ ಆಚಕ್ಷತೇ । ಭವ ಇತಿ ಬಾಹೀಕಾಃ । ಪಶೂನಾಂ ಪತೀ ರುದ್ರೋಽಗ್ನಿರಿತಿ ತಾನ್ಯಸ್ಯಾಶಾಂತಾನ್ಯೇವೇತರಾಣಿನಾಮಾನಿ । ಅಗ್ನಿರಿತ್ಯೇವ ಶಾಂತತಮಮ್ । ತಸ್ಮಾದಗ್ನಯೇ ಇತಿ ಕ್ರಿಯತೇ ಸ್ವಿಷ್ಟಕೃತೇ ಇತಿ ॥ ಶ. ಬ್ರಾ. ೧–೭–೩–೮ ॥

ಅರ್ಥ—ಅದು (=ಆಹುತಿಯು) ಅಗ್ನಿಗೆಂದೇ ಅರ್ಪಿಸಲ್ಪಡುತ್ತದೆ. ಏಕೆಂದರೆ ಅಗ್ನಿಯೇ ಆ ದೇವನಾಗಿದ್ದಾನೆ. ಮತ್ತು ಈ ಎಲ್ಲ ಹೆಸರುಗಳು ಅಗ್ನಿಯವೇ ಆಗಿವೆ. ಯಾವುವೆಂದರೆ–ಮೂಡಣ ಕಡೆಯವರು ಅಗ್ನಿಯನ್ನು "ಶರ್ವ" ಅನ್ನುತ್ತಾರೆ. ಮತ್ತು ಬಾಹೀಕರು "ಭವ" ಅನ್ನುತ್ತಾರೆ. (ಬೇರೆ ಕೆಲವರು) ಪಶುಗಳ ಪತಿಯೆಂತಲೂ, ರುದ್ರನೆಂತಲೂ ಕರೆಯುತ್ತಾರೆ. ಆದರೆ ಅಗ್ನಿ ಎಂಬ ಹೆಸರು ಮಾತ್ರ ಅತ್ಯಂತ ಶಾಂತ ಅಥವಾ ಶುಭಕರವಾಗಿರುತ್ತದೆ. ಇತರ ಹೆಸರುಗಳು ಅಶಾಂತ ಅಥವಾ ಘೋರವಾಗಿವೆ. ಆದುದರಿಂದ ಆಹುತಿಗಳು "ಅಗ್ನಯೇ' ಅಂದರೆ

"ಅಗ್ನಿದೇವನಿಗೆ" ಎಂತಲೂ "ಸ್ವಿಷ್ಟಕೃತೇ" ಅಂದರೆ ಒಳ್ಳೆಯ ಬಯಕೆಗಳನ್ನು ಈಡೇರಿಸುವವನಿಗೆ ಎಂತಲೂ ಅರ್ಪಿಸಲ್ಪಡುತ್ತವೆ.

ಶತಪಥ ಬ್ರಾಹ್ಮಣದ ೬-೩-೧-೮ ರಿಂದ ೧೭ರ ತನಕ ಅಗ್ನಿಯ ಹೆಸರುಗಳ ಸಂಬಂಧದಲ್ಲಿ ಒಂದು ರಹಸ್ಯಾತ್ಮಕ ಆಖ್ಯಾನವಿದೆ. ಅದರ ಸಾರಾಂಶವು ಮುಂದಿನಂತಿದೆ. ಸಂವತ್ಸರ ಪ್ರಜಾಪತಿಯು ಉಷೆಯಲ್ಲಿಟ್ಟ ರೇತಸ್ಸಿನಿಂದ ಸಂವತ್ಸರದಲ್ಲಿ ಒಬ್ಬ ಕುಮಾರನು ಹುಟ್ಟಿದನು. ಅವನಿಗೆ ಹೆಸರಿರಲಿಲ್ಲ. ಆದುದರಿಂದ ಅವನು ತನಗೆ ಹೆಸರು ಬೇಕೆಂದು ಕೂಗಿದನು.—ಆಗ ಪ್ರಜಾಪತಿಯು ಅವನಿಗೆ **"ರುದ್ರ, ಶರ್ವ, ಪಶುಪತಿ, ಉಗ್ರ, ಅಶನಿ, ಭವ, ಮಹಾನ್‌ದೇವ ಮತ್ತು ಈಶಾನ"** ಎಂಬ ಎಂಟು ಹೆಸರುಗಳನ್ನಿಟ್ಟನು. ಶಿವನು ಆರ್ಯಜನರ ವೈದಿಕ ದೇವನೆಂದು ಸಿದ್ಧಪಡಿಸಲು ಹಿಂದಿನ ಪ್ರಮಾಣಗಳು ಯಥೇಷ್ಟವಾಗಿವೆ.

ಇನ್ನು ಭಾರತವರ್ಷದಲ್ಲಿ ಶಿವನ ಲಿಂಗ ರೂಪದ ಆರಾಧನೆಯು ಹೇಗೆ? ಮತ್ತು ಏಕೆ? ಪ್ರಚಲಿತವಾಯಿತೆಂದು ಕಂಡುಕೊಂಡರೆ ಪಾಶ್ಚಾತ್ಯ ವಿದ್ವಾಂಸರು ಲಿಂಗಾರಾಧನೆಯ ಸಂಬಂಧದಲ್ಲಿ ಪ್ರಚಾರ ಮಾಡಿದ ಬುಡವಿಲ್ಲದ ಕಲ್ಪನೆಗಳ ನಿರಸನವಾಗುವುದು. ಶಿವನು ಆರ್ಯಜನರ ವೈದಿಕ ದೇವನೆಂದು ಸಿದ್ಧವಾಗಿರುವುದರಿಂದ ಶಿವನ ಲಿಂಗರೂಪದ ಆರಾಧನೆಯು ಕೂಡ ಅವರಿಂದಲೇ ಪ್ರಚಲಿತವಾಗಿದ್ದಿತೆಂದು ಪೃಥಕ್ಕಾಗಿ ಸಿದ್ಧಪಡಿಸಬೇಕಾಗಿಲ್ಲ. ಆದರೆ ಅದು ಎಂದು ಪ್ರಾರಂಭವಾಯಿತು? ಎಂಬುದನ್ನು ಕಂಡುಕೊಂಡರೆ ಅದರ ಇತಿಹಾಸವು ಮುಗಿಯುವುದು.

ಪ್ರಾಚೀನ ವೈದಿಕ ಜನರು ತಾವು ಜರುಗಿಸುತ್ತಿದ್ದ ಯಜ್ಞಗಳಲ್ಲಿ ತಾವು ಆರಾಧಿಸುವ ದೇವ-ದೇವಿಯರ ಪ್ರತಿಮೆಗಳನ್ನು ಯಜ್ಞಕುಂಡದ ಬಳಿಯಲ್ಲಿ ಹಾಸಿದ ದರ್ಭೆಗಳ ಮೇಲಿರಿಸಿ ಮಂತ್ರ-ಸ್ತುತಿಗಳೊಂದಿಗೆ ಅವುಗಳ ಹೆಸರಿನಲ್ಲಿ ಸ್ವಾಹಾ ಎನ್ನುತ್ತ ಯಜ್ಞದ ಅಗ್ನಿಯಲ್ಲಿ ಆಹುತಿಗಳನ್ನು ಅರ್ಪಿಸುತ್ತಿದ್ದರೆಂದು ಹಿಂದೆ ಹೇಳಿದೆ. ಆ ಪ್ರತಿಮೆಗಳಲ್ಲಿ ಸರಸ್ವತೀ, ಉಷಾ, ಇಳಾ, ಭಾರತೀ, ಜ್ಯೇಷ್ಠಾ, ನಕ್ತಾ ಮೊದಲಾದ ದೇವಿಯರ ಪ್ರತಿಮೆಗಳೂ ಇರುತ್ತಿದ್ದುವು. ಕೆಲವು ಪ್ರತಿಮೆಗಳು **"ಹಿರಣ್ಯಯೀ"** ಅಂದರೆ ಚಿನ್ನದವುಗಳಾಗಿರುತ್ತಿದ್ದುವು ಇಲ್ಲವೇ ಚಿನ್ನದ ಒಡವೆಗಳಿಂದ ಅಲಂಕರಿಸಲ್ಪಟ್ಟಿರುತ್ತಿದ್ದುವು. ಪರಂತು ಯಜ್ಞಕಾಲದಲ್ಲಿ ಅವುಗಳಿಗೆ ಮಂತ್ರಪೂರ್ವಕ ಆಹುತಿಗಳು ಮಾತ್ರ ಅರ್ಪಿಸಲ್ಪಡುತ್ತಿದ್ದುವೇ ಹೊರತು ಈಗಿನಂತೆ ಆಗಮಶಾಸ್ತ್ರಕ್ಕನುಸಾರವಾಗಿ ಧೂಪ, ದೀಪ, ನೈವೇದ್ಯ ಮೊದಲಾದುವುಗಳೊಂದಿಗೆ ಪೂಜೆಯು ಸಲ್ಲುತ್ತಿರಲಿಲ್ಲ. ಹಿಂದೆ ವಿವರಿಸಿದಂತೆ ವೈದಿಕ ಗ್ರಂಥಗಳಲ್ಲಿ, ಅಗ್ನಿ, ಇಂದ್ರ, ಸರಸ್ವತಿ ಮೊದಲಾದ ದೇವದೇವಿಯರ ಪ್ರತಿಮೆಗಳ ಉಲ್ಲೇಖವಿದ್ದರೂ. ಅಗ್ನಿಯ ಅಥವಾ ಶಿವನ ಲಿಂಗ ಪ್ರತೀಕದ ಉಲ್ಲೇಖವಿಲ್ಲ. ಆದುದರಿಂದ ವೈದಿಕ ಕಾಲದಲ್ಲಿ ಶಿವನ ಲಿಂಗರೂಪದ ಆರಾಧನೆಯು ಪ್ರಚಲಿತವಿರಲಿಲ್ಲವೆಂದು ಸಿದ್ಧವಾಗುತ್ತದೆ.

ಇನ್ನು ಇಬ್ಬರು ಬೋಡೆನ್ ವಿದ್ವಾಂಸರಾದ ಎಚ್, ಎಚ್. ವಿಲ್ಸನ್ ಮತ್ತು ಎ. ಎ. ಮೆಕ್‌ಡೊನೆಲ್ ಎಂಬವರು "ಶಿಶ್ನದೇವಾಃ" ಎಂಬ ಶಬ್ದಕ್ಕೆ "ಶಿಶ್ನದ ಆರಾಧಕರು ಅಂದರೆ ಪುರುಷನ ಜನಕೇಂದ್ರಿಯದ ಆರಾಧಕರು" ಎಂಬ ಅರ್ಥ ಮಾಡಿದುದಕ್ಕೆ ಯಾವ ಪ್ರಾಚೀನ ಪ್ರಮಾಣದ ಆಧಾರವೂ ಇಲ್ಲ. ಎಚ್. ಎಚ್. ವಿಲ್ಸನ ಅವರು ಇಂಗ್ಲೀಷಿನಲ್ಲಿ ಋಗ್ವೇದವ ಭಾಷಾಂತರವನ್ನು ಆರಂಭಿಸಿದ ಮೊದಲ ಹಂತದಲ್ಲಿ ಋಗ್ವೇದದ ೭-೨೧-೫ನೆಯ ಋಚೆಯಲ್ಲಿ ಬಂದಿರುವ **"ಶಿಶ್ನದೇವಾ:"** ಎಂಬ ಶಬ್ದಕ್ಕೆ "unchaste" ಎಂಬ ಅರ್ಥವನ್ನು ಹೇಳಿದ್ದರು. ಅದರ ತರುವಾಯ ಕೆಲವು ಬ್ರಿಟಿಷ್ ವಿದ್ವಾಂಸರು – ಶಿವನನ್ನು ಆರ್ಯಜನರ ದೇವನಲ್ಲವೆಂದು ಸಾಧಿಸಲು ಹವಣಿಸಿದುದರಿಂದ ವಿಲ್ಸನರು ಕೂಡ ಋಗ್ವೇದದ ೧೦_೯೯-೩ರಲ್ಲಿ ಬಂದ "ಶಿಶ್ನದೇವಾಃ" ಎಂಬ ಶಬ್ದಕ್ಕೆ ಅರ್ಥ ಹೇಳುವಾಗ ತಮ್ಮ ಮೊದಲನೆಯ ಅಭಿಪ್ರಾಯವನ್ನು ಪರಿವರ್ತಿಸಿ ಅವಕ್ಕೆ "Phallus-worshippers" ಅಂದರೆ ಪುರುಷನ ಜನಕಾಂಗವನ್ನು ಆರಾಧಿಸುವವರು" ಎಂಬ ಅರ್ಥವನ್ನು ಹೇಳಿದರು. ಮತ್ತು ಅವರ ತರುವಾಯ ಅವರ ಸ್ಥಾನಾಪನ್ನರಾದ ಎ. ಎ. ಮೆಕ್‌ಡೊನೆಲ್ ಅವರು ೧೦_೯೯–೩ನೆಯ ಋಚೆಯಲ್ಲಿ "ಇಂದ್ರನು ಶಿಶ್ನದೇವರನ್ನು ಕೊಂದನು" ಎಂದು ಹೇಳಿರುವುದರ ಆಧಾರದಿಂದ ಆರ್ಯಜನರು ಲಿಂಗಾರಾಧನೆಯ ವಿರೋಧಿಗಳಾಗಿದ್ದರು. ಆದುದರಿಂದ ಲಿಂಗಾರಾಧನೆಯು ಭಾರತ ವರ್ಷದ ಮೂಲನಿವಾಸಿಗಳಿಗೆ ಸೇರಿದುದೆಂಬ ಕಲ್ಪನೆಯನ್ನು ಮುಂದೆ ತಂದರು. ಆದರೆ ಋಗ್ವೇದವನ್ನು ಇಂಗ್ಲೀಷಿಗೆ ಭಾಷಾಂತರಿಸಿದ ಇನ್ನೊಬ್ಬ ಸಂಸ್ಕೃತ ವಿದ್ವಾಂಸ ಪ್ರೊ. ರಾಲ್ಫ್, ಟಿ. ಎಚ್. ಗ್ರಿಫಿಥ್ ಎಂಬವರು ವಿಲ್ಸನರ ಅರ್ಥವನ್ನು ಒಪ್ಪದೇ ಶಿಶ್ನದೇವಾಃ ಎಂಬ ಶಬ್ದ ಬಂದಿರುವ ಎರಡು ಸಂದರ್ಭಗಳಲ್ಲಿಯೂ ಅದಕ್ಕೆ "Lewd ಮತ್ತು Lustful" ಅಂದರೆ "ಸ್ತ್ರೀ ಲಂಪಟ, ಮತ್ತು ಕಾಮುಕ" ಎಂಬ ಅರ್ಥವನ್ನು ಹೇಳಿದ್ದಾರೆ. ಮತ್ತು ಅವರು ಆ ಅರ್ಥವನ್ನು ಹೇಳುವಾಗ ಆಚಾರ್ಯ ಯಾಸ್ಕನನ್ನು ಅನುಸರಿಸಿದ್ದಾರೆ.

ಶಿಶ್ನದೇವಾಃ ಎಂಬ ಶಬ್ದಕ್ಕೆ ಪ್ರಾಚೀನ ಕಾಲದ ವಿದ್ವಾಂಸರು ಯಾವ ಅರ್ಥವನ್ನು ಗ್ರಹಿಸುತಿದ್ದರು ಎಂಬುದನ್ನು ತಿಳಿಯಲು ಶಕಪೂರ್ವ ಎಂಟನೆಯ ಶತಮಾನದವನಾದ ಆಚಾರ್ಯಯಾಸ್ಕನು ರಚಿಸಿದ ನಿರುಕ್ತ ಎಂಬ ಗ್ರಂಥವೊಂದೇ ನಮ್ಮ ಬಳಿಯಲ್ಲಿರುವ ದೃಢವಾದ ಪ್ರಮಾಣವಾಗಿದೆ. ಆಚಾರ್ಯ ಯಾಸ್ಕನ ಕಾಲದಲ್ಲಿ ಶಿವನ ಲಿಂಗರೂಪದ ಆರಾಧನೆಯು ಪ್ರಚಲಿತವಿರಲಿಲ್ಲ. ಮತ್ತು ಅವನಿಗೆ ಆರ್ಯ ಜನರ ಉತ್ತರ ಧ್ರುವ ಪ್ರದೇಶದ ವಸತಿಯ ಐತಿಹ್ಯವೂ ಗೊತ್ತಿರಲಿಲ್ಲ. ಆದುದರಿಂದ ಅವನು ಶಿಶ್ನದೇವಾಃ ಎಂಬುದರ ಅರ್ಥವನ್ನು ಲಿಂಗಾರಾಧಕರೆಂದಾಗಲೀ, ಶಿಶ್ನದ ಆಕೃತಿಯಲ್ಲಿರುವ ನಕ್ಷತ್ರಪುಂಜವೆಂದಾಗಲೀ ಹೇಳದೇ **"ಅಬ್ರಹ್ಮಚರ್ಯಾಃ"** ಅಂದರೆ "ಬ್ರಹ್ಮಚರ್ಯವನ್ನು ಪಾಲಿಸದ ಲಂಪಟರು" ಎಂದು ಹೇಳಿದ್ದಾನೆ.

ವೈದಿಕ ಗ್ರಂಥಗಳಲ್ಲಿ ಕಟ್ಟಕಡೆಯದಾದ – ಆಚಾರ್ಯ ಪಾಣಿನಿಯ ಅಷ್ಟಾಧ್ಯಾಯೀ ಎಂಬ ವ್ಯಾಕರಣ ಗ್ರಂಥವಲ್ಲಿ ಸಾಧಾರಣ ಎಲ್ಲ ವೈದಿಕ ದೇವತೆಗಳ ಮತ್ತು ಅವನ ಜೀವಿತ ಕಾಲದಲ್ಲಿ ಪ್ರಚಲಿತವಿದ್ದ ವೈದಿಕೋತ್ತರ ಕಾಲದ ದೇವತೆಗಳ ಮತ್ತು ಪ್ರತಿಮೆಗಳ ಉಲ್ಲೇಖಗಳಿವೆ. ಆದರೆ ಅದರಲ್ಲಿ ಶಿವನ ಲಿಂಗರೂಪದ ಉಲ್ಲೇಖವಿಲ್ಲ. ಮಾತ್ರವಲ್ಲ ಅವನ ವ್ಯಾಕರಣದಲ್ಲಿ ಲಿಂಗ ಶಬ್ದವು ಗುಣ ಸೂಚಕ ಲಕ್ಷಣ ಅಥವಾ ಸಂಕೇತ ಅಥವಾ ಕುರುಹು ಎಂಬರ್ಥದಲ್ಲಿ ಪ್ರಯೋಗಿಸಲ್ಪಟ್ಟಿದೆಯೇ ಹೊರತು ಪುರುಷನ ಜನಕಾಂಗ ಎಂಬರ್ಥದಲ್ಲಿ ಪ್ರಯೋಗಿಸಲ್ಪಟ್ಟಿಲ್ಲ.

ಆಚಾರ್ಯ ಪಾಣಿನಿಯು ತನ್ನ ವ್ಯಾಕರಣ ಸೂತ್ರಗಳಲ್ಲಿ ಯಾವುದೊಂದರ ಯಥಾವತ್ತಾದ ಚಿತ್ರವನ್ನು, ಬೊಂಬೆಯನ್ನು ಇಲ್ಲವೇ ಪ್ರತಿಮೆಯನ್ನು "ಪ್ರತಿಕೃತಿ" ಎಂದಿದ್ದಾನೆ. ಮತ್ತು ಆ ಪ್ರತಿಕೃತಿಯು ದೇವತೆಗಳದ್ದಾಗಿದ್ದು ಮಾರಾಟಕ್ಕಾಗಿ ತಯಾರಿಸಿದ್ದಾಗಿದ್ದರೆ. ಅಂದರೆ ಆಟದ ಬೊಂಬೆಯಾಗಿದ್ದರೆ ಅದರ (ದೇವತೆಯ) ಹೆಸರಿನ ಕೊನೆಯಲ್ಲಿ "ಕ" ಪ್ರತ್ಯಯವು ಕೂಡುತ್ತದೆಂದು ಹೇಳಿದ್ದಾನೆ. ಮತ್ತು ಅದಕ್ಕೆ ಸಂಬಂಧಪಟ್ಟ ಹಲವು ಸೂತ್ರಗಳನ್ನು ಹೇಳಿದ್ದಾನೆ.[1] ಆದರೆ ಆ ಪ್ರತಿಕೃತಿಯು ಜೀವನ ನಿರ್ವಹಣಕ್ಕಾಗಿ, ಅಲ್ಲದಿದ್ದರೆ ಪೂಜೆಗಾಗಿ ಉಪಯೋಗಿಸಲ್ಪಡುವಂಥದ್ದಾಗಿದ್ದರೆ "ಕ" ಪ್ರತ್ಯಯವು ಕೂಡುವದಿಲ್ಲವೆಂದಿದ್ದಾನೆ. ಅಂದರೆ ಶಿವನ ಪ್ರತಿಕೃತಿಯು ಆಟದ ಬೊಂಬೆಯಾಗಿದ್ದರೆ, ಅದು "ಶಿವಕ" ಅನಿಸಿಕೊಳ್ಳುತ್ತದೆಂತಲೂ ಪೂಜೆಯ ಪ್ರತಿಮೆಯೆಂದಾದರೆ "ಶಿವ" ಎಂದೇ ಕರೆಯಲ್ಪಡುತ್ತದೆಂತಲೂ ಹೇಳಿದ್ದಾನೆ. ಆದರೆ ಅವನ ಯಾವುದೊಂದು ಸೂತ್ರದಿಂದಲೂ ಅವನ ಕಾಲದಲ್ಲಿ ಶಿವನ ಲಿಂಗರೂಪದ ಆರಾಧನೆಯಿದ್ದಿತೆಂಬುದರ ಸೂಚನೆ ಕೂಡ ದೊರೆಯುವುದಿಲ್ಲ. ಆದುದರಿಂದ ಆಚಾರ್ಯ ಪಾಣಿನಿಯ ಕಾಲದಲ್ಲಿ ಶಿವನ ಲಿಂಗ ರೂಪದ ಆರಾಧನೆಯು ಪ್ರಚಲಿತವಿರವಿಲ್ಲವೆಂದು ಸಿದ್ಧವಾಗುತ್ತದೆ.

ಅದೇ ರೀತಿಯಲ್ಲಿ ಆಚಾರ್ಯ ಪಾಣಿನಿಯ ಮೂರು ಶತಮಾನಗಳ ತರುವಾಯ ಅವನ ವ್ಯಾಕರಣ ಸೂತ್ರಗಳಿಗೆ ಭಾಷ್ಯ ಹೇಳಿದ ಆಚಾರ್ಯ ಪತಂಜಲಿಯು– "ಜೀವಿಕಾರ್ಥೇ" ಚಾಪಣ್ಯೇ ॥೫-೩-೯೯। ಸೂತ್ರದ ಮೇಲಿನ ಭಾಷ್ಯದಲ್ಲಿ **"ಅಪಣ್ಯೇ-ಇತ್ಯುಚ್ಯತೇ ತತ್ರೇದಂ ನ ಸಿಧ್ಯತಿ, ಶಿವಃ, ಸ್ಕಂದಃ, ವಿಶಾಖಃ ಇತಿ। ಕಿಂ ಕಾರಣಮ್? ಮೌರ್ಯೈರ್ಹಿರಣ್ಯಾರ್ಥಿಭಿರರ್ಚಾಃ ಪ್ರಕಲ್ಪಿತಾಃ। ಭವೇತ್ತಾಸು ನ ಸ್ಯಾತ್। ಯಾಸ್ತ್ವೇತಾ ಸಂಪ್ರತಿ ಪೂಜಾರ್ಥಾಸ್ತಾಸು ಭವಿಷ್ಯತಿ॥** ಅಂದಿದ್ದಾನೆ. ಅಂದರೆ ಪ್ರತಿಮೆಗಳ ಮಾರಾಟದ ಮೇಲೆ ಕರ ಹೇರುವುದರಿಂದ ರಾಜನ ಬೊಕ್ಕಸಕ್ಕೆ ತುಂಬಾ ಧನಾ

---

[1] ಪ್ರಾಗಿವಾತ್ಕಃ ॥ ೫-೩-೭೦॥ ಕುತ್ಸಿತೇ॥೫-೩-೭೪॥ ಸಂಜ್ಞಾಯಾಂ ಕನ್॥೫-೩-೭೫॥ ಅವಕ್ಷೇಪಣೇಕನ್ ।೫-೩-೯೫॥ ಇವೇ ಪ್ರತಿಕೃತೌ ॥೫-೩-೯೬॥ ಲುಮ್ಮನುಷ್ಯೇ ॥೫-೩-೯೮॥ **ಜೀವಿಕಾರ್ಥೇಚಾಪಣ್ಯೇ ॥೫-೩-೯೯॥**

ದಾಯವಾಗುವುದೆಂಬ ಸ್ವಾರ್ಥದಿಂದ ಮೌರ್ಯರು ಪ್ರತಿಮೆಗಳ ನಿರ್ಮಾಣವನ್ನು ಪ್ರಚಾರಕ್ಕೆ ತಂದರು. ಆದುದರಿಂದ ಅಂಥ ಪ್ರತಿಮೆಗಳ ಹೆಸರಿನ ಕೊನೆಯಲ್ಲಿ "ಕ" ಪ್ರತ್ಯಯ ಕೂಡುತ್ತದೆ–ಎಂಬುದು ಅವನ ಅಭಿಪ್ರಾಯವಾಗಿದೆ. ಅರ್ಥಾತ್ ಆಚಾರ್ಯ ಪತಂಜಲಿಯ ಕಾಲದಲ್ಲಿ ಆಚಾರ್ಯ ಪಾಣಿನಿಯ ಕಾಲದಲ್ಲಿ ಪ್ರಚಲಿತವಿದ್ದುದಕ್ಕಿಂತ ಹೆಚ್ಚು ದೇವತೆಗಳ ಪ್ರತಿಮೆಗಳು ಪ್ರಚಲಿತವಿದ್ದುವೆಂದು ಅವನ ಮಹಾಭಾಷ್ಯದಿಂದ ಗೊತ್ತಾಗುತ್ತದೆ. ಪರಂತು ಅವನ ಮಹಾಭಾಷ್ಯದಲ್ಲಿ ಕೂಡ ಶಿವನ ಲಿಂಗರೂಪದ ಉಲ್ಲೇಖವಿಲ್ಲವಾದುದರಿಂದ ಶಕಪೂರ್ವ ಎರಡನೆಯ ಶತಮಾನದ ಮಧ್ಯಕಾಲದ ತನಕ ಭಾರತ ವರ್ಷದಲ್ಲಿ ಶಿವನ ಲಿಂಗ ರೂಪದ ಆರಾಧನೆಯು ಪ್ರಚಲಿತವಾಗಿರಲಿಲ್ಲ ವೆಂದು ಸ್ಪಷ್ಟವಾಗಿ ಸಿದ್ಧವಾಗುತ್ತದೆ. ಡಾ. ಬೈಜನಾಥ ಪುರಿ ಅವರು ಕೂಡ ತಾನು ಇಂಗ್ಲೀಷಿನಲ್ಲಿ ಬರೆದ "ಪತಂಜಲಿಯ ಕಾಲದಲ್ಲಿ ಭಾರತ ವರ್ಷ" ಎಂಬ ಪುಸ್ತಕದಲ್ಲಿ "ಪತಂಜಲಿಯ ಕಾಲದಲ್ಲಿ ಶಿವನ ಲಿಂಗ ರೂಪದ ಆರಾಧನೆಯು ಸ್ಥಾಪಿತವಾಗಿರಲಿಲ್ಲ ಅಥವಾ ರೂಪು ತಳೆದಿರಲಿಲ್ಲ"[1] ಎಂದಿದ್ದಾರೆ. ಆದುದರಿಂದ ಭಾರತ ವರ್ಷದಲ್ಲಿ ಶಿವನ ಲಿಂಗ ರೂಪದ ಆರಾಧನೆಯು ಆಚಾರ್ಯ ಪತಂಜಲಿಯ ತರುವಾಯವೇ ಪ್ರಚಲಿತವಾದುದೆಂದು ಸಂದೇಹಪಡದೇ ಹೇಳಬಹುದು.

ಈ ತನಕ ತಿಳಿದು ಬಂದಿರುವಂತೆ ಉತ್ತರ ಪ್ರದೇಶದ ಲಖನಊ ಪ್ರಾಚೀನ ವಸ್ತು ಸಂಗ್ರಹಾಲಯದಲ್ಲಿ ಭೀಟಾ ಎಂಬಲ್ಲಿಂದ ತಂದಿರಿಸಿದ ಒಂದು ಮತ್ತು ಆಂಧ್ರ ಪ್ರದೇಶದ ಗುಡಿಮಲ್ಲಂ ಎಂಬ ಹಳ್ಳಿಯಲ್ಲಿನ ಒಂದು ದೇವಾಲಯದಲ್ಲಿ ರುವ ಒಂದು ಹೀಗೆ ಒಟ್ಟಿಗೆ ಎರಡು ಪ್ರತೀಕಗಳೇ "ಶಿವನ ಲಿಂಗಗಳೆಂದು" ತಿಳಿಯ ಲಾದ ಪ್ರತೀಕಗಳಲ್ಲಿ ಪ್ರಾಚೀನತಮಗಳಾಗಿವೆ. ಅವುಗಳು ಸಾಧಾರಣ ಶಕಪೂರ್ವ ನೂರುವರ್ಷಗಳ ಹಿಂದಿನವುಗಳೆಂದು ನಿರ್ಧರಿಸಲ್ಪಟ್ಟಿವೆ. ಆದರೆ ಅವುಗಳನ್ನು ಶಿವನ ಲಿಂಗರೂಪಗಳೆಂದು ಹೇಳುವದು ಸರಿಯಾಗದು. ಏಕೆಂದರೆ ಭೀಟಾದ ಪ್ರತೀಕವು ಚೌಕದ ಕಂಭದಂತಿದ್ದು ಅದರ ಮೇಲ್ಭಾಗವು – ಮನುಷ್ಯನ ಎದೆಯ ಮೇಲ್ಗಡೆಯ ಅಂಶ (Bust) ವಾಗಿದೆ, ಮತ್ತು ಅದರ ಎಡಗೈಯಲ್ಲಿ ಜೋಗಣಿ ಇದೆ. ಮತ್ತು ಬಲಗೈಯು ಅಭಯ ಮುದ್ರೆಯಲ್ಲಿದೆ. ಎದೆಯ ಕೆಳಭಾಗದ ನಾಲ್ಕು ಮೂಲೆಗಳಲ್ಲಿ ಮನುಷ್ಯನ ನಾಲ್ಕು ಮೋರೆ ಗಳಿವೆ. ಮತ್ತು ಆ ಪ್ರತೀಕದ ಅಡಿಯಲ್ಲಿ **"ಖಜಹಟಿಯ ಮಕ್ಕಳ ಈ ಲಿಂಗವು ವಸೇಠಿಯ ಮಗ ನಾಗಸಿರಿಯ ಅರ್ಪಣೆ. ದೇವರು ಪ್ರೀತನಾಗಲಿ"** ಎಂಬ ರ್ಥದ ವಾಕ್ಯವಿದೆ. ಆದುದರಿಂದ ಅದನ್ನು ಖಜಹಟಿಯ ಮಕ್ಕಳ ಪ್ರತಿಮಾ ಸಂಕೇತವೆನ್ನಬಹುದೇ ಹೊರತು ಶಿವನ ಲಿಂಗರೂಪವೆನ್ನಲಾಗುವುದಿಲ್ಲ. ಗುಡಿಮಲ್ಲಂ

---

1. Linga worship had not come into form by that time p. 177.

ಂಬಲ್ಲಿನ ಪ್ರತಿಮಾ ರೂಪವನ್ನು ಇಲ್ಲಿ ಕೊಟ್ಟಿದೆ. ಇದರಲ್ಲಿ ಯಜ್ಞದೀಕ್ಷಿತನಾದ ಮನುಷ್ಯನು ಯಕ್ಷನ ಹೆಗಲೇರಿ ಯಜ್ಞಕ್ಕೆ ಸಿದ್ಧನಾಗಿದ್ದಾನೆ. ಅಂದರೆ ಅದು ಯಜ್ಞ ಪುರುಷನ ಪ್ರತಿಮೆಯಾಗಿದೆ. ಯಜ್ಞ ಕಾಲದಲ್ಲಿ ಯಜಮಾನನು ಅಗ್ನಿಯ ಪ್ರತಿನಿಧಿ ಅಥವಾ ಅಗ್ನಿಯೇ ಆಗಿರುತ್ತಾನೆ. ಯಜ್ಞ ಪುರುಷನ ಬಲಗೈಯಲ್ಲಿ ಯಜ್ಞದ ಪಶು ಇದೆ. ಮತ್ತು ಎಡಗೈಯಲ್ಲಿ ದಂಡ ಮತ್ತು ಆಜ್ಯಪಾತ್ರೆಗಳಿವೆ. ಕಲ್ಲಿನಲ್ಲಿ ಕೆತ್ತಿದ ಆ ದಂಡದ ಕೊನೆಯು ಕೊಡಲಿಯಂತಿದೆಯೆಂಬ ಕಾರಣದಿಂದ ಕೆಲವರು ಆ ಪ್ರತಿಮೆಯನ್ನು ಪರಶುರಾಮೇಶ್ವರ ಅಂದಿದ್ದಾರೆ. ಪ್ರತಿಮೆಯ ಬೆನ್ನಹಿಂದೆ ಯೂಪಸ್ತಂಭ ಇದೆ. ಮತ್ತು ಯೂಪಸ್ತಂಭದ ತಲೆಯಲ್ಲಿ ಚಷಾಲ ಎಂಬ ಕುಲಾವಿ ಇದೆ . ಯೂಪಸ್ತಂಭವನ್ನು ನೆಡದೇ ಯಜ್ಞವನ್ನು ಜರುಗಿಸಲು ಸಾಧ್ಯವಿಲ್ಲವಾದುದರಿಂದ ಆ ಪ್ರತೀಕವು ಸ್ಪಷ್ಟವಾಗಿ ಯಜ್ಞದ ಸಾಂಕೇತಿಕ ನಿರೂಪಣವಾಗಿದೆ. ಕೆಲವು ವಿದ್ವಾಂಸರು ಆ ಯೂಪಸ್ತಂಭವನ್ನು ಶಿವಲಿಂಗವೆಂದು ಭ್ರಮಿಸಿದ್ದಾರೆ.



Fig. I

ಹಿಂದೆ ವಿವರಿಸಿದ ಎರಡು ಪ್ರತಿಮಾ ಸಂಕೇತಗಳನ್ನು ನಾವು ಒಮ್ಮೆಗೆ ಶಿವಲಿಂಗಗಳೆಂದೇ ಗ್ರಹಿಸಿದರೂ ಶಿವನ ಲಿಂಗರೂಪದ ಆರಾಧನೆಯು ಶಕಪೂರ್ವ ಮೊದಲನೆಯ ಶತಮಾನದಲ್ಲಿ ಪ್ರಚಲಿತವಾಯಿತೆಂದು ಸಿದ್ಧವಾದೀತೇ ಹೊರತು ಅದಕ್ಕಿಂತ ಮೊದಲು ಪ್ರಚಲಿತವಿದ್ದಿತೆಂದು ಸಿದ್ಧವಾಗಲಾರದು. ಆದುದರಿಂದ ವಾಸ್ತವವಾಗಿ ಶಿವನ ಲಿಂಗರೂಪದ ಆರಾಧನೆಯು. ಏಕೆ? ಯಾರಿಂದ? ಮತ್ತು ಯಾವ ಕಾಲದಲ್ಲಿ? ಪ್ರಚಲಿತವಾಯಿತು ಎಂಬುದನ್ನು ಕಂಡು ಹಿಡಿಯಲು ಪ್ರಯತ್ನಿಸುವುದು ವಿಹಿತವಾಗಿದೆ. ಆದರೆ ನಮ್ಮ ಪ್ರಯತ್ನದಲ್ಲಿ ಪುರಾಣಗಳೊಳಗಿನ ಉತ್ಪ್ರೇಕ್ಷಾಭರಿತ ಕಟ್ಟುಕಥೆಗಳು ನಮಗೆ ಯಾವ ಸಹಾಯವನ್ನೂ ಮಾಡುವಂತಿಲ್ಲ. ಆದುದರಿಂದ ನಾವು ಐತಿಹಾಸಿಕ ಪ್ರಮಾಣಗಳು ದೊರೆಯುತ್ತಿವೆಯೋ ಎಂದು ಹುಡುಕಬೇಕಾಗಿದೆ.

ಪಾಶುಪತ ಶೈವಪಂಥದ ಅಂದರೆ ಶಿವನನ್ನು ಪಶುಪತಿಯೆಂದು ಕರೆದು ಲಿಂಗರೂಪದಿಂದ ಅವನನ್ನು ಆರಾಧಿಸುವಂಥ ಒಂದು ಹೊಸ ಮತದ ಆಚಾರ್ಯರಲ್ಲಿ ಒಬ್ಬನಾಗಿದ್ದ ಲಾಕುಲಿ ಅಥವಾ ಲಾಕುಲೀಶ ಎಂಬವನು ಶಕದ ಮೊದಲನೆಯ ಶತಮಾನದ ಮಧ್ಯಕಾಲದಲ್ಲಿ ಜೀವಿಸಿದ್ದ ಐತಿಹಾಸಿಕ ವ್ಯಕ್ತಿಯಾಗಿದ್ದಾನೆ. ಕೆಲವು ವಿದ್ವಾಂಸರ ಅಭಿಪ್ರಾಯದಲ್ಲಿ ಲಾಕುಲೀಶನೇ ಪಾಶುಪತ ಶೈವಪಂಥದ ಸ್ಥಾಪಕನಾಗಿದ್ದನೆಂದಿದೆ.[1] ಆದರೆ ಆ ಅಭಿಪ್ರಾಯವನ್ನು ಸರಿಯೆನ್ನಲಾಗುವುದಿಲ್ಲ. ಏಕೆಂದರೆ ಪಾಶುಪತ ಶೈವಪಂಥವು ಲಾಕುಲೀಶನ ಜನ್ಮಕಾಲಕ್ಕಿಂತ ಮೊದಲಿನಿಂದಲೂ ಬ್ರಾಹ್ಮಣರ ಒಂದು ಚಿಕ್ಕ ಪಂಗಡದಲ್ಲಿ ಪ್ರಚಲಿತವಿದ್ದಿತೆಂಬ ಪ್ರಮಾಣಗಳಿವೆ. ಅಂದರೆ ಲಾಕುಲೀಶನು ಆ ಮತವನ್ನು ವಿಶಾಲವಾದ ಪ್ರದೇಶದಲ್ಲಿ ಮತ್ತು ಹೆಚ್ಚು ಜನರಲ್ಲಿ ಪ್ರಚಾರಮಾಡಿದವನಾಗಿದ್ದನು. ಲಾಕುಲೀಶನಿಗಿಂತ ಮೊದಲೇ ಸೌರಾಷ್ಟ್ರದೊಳಗಿನ ಪ್ರಭಾಸಕ್ಷೇತ್ರವು ಪಾಶುಪತ ಶೈವ ಪಂಥದ ಪ್ರಧಾನ ಆಚಾರ್ಯನ ಮುಖ್ಯ ಠಾಣ್ಯವಾಗಿದ್ದಿತು. ಮತ್ತು ಪ್ರಭಾಸದಲ್ಲಿನ ಸೋಮನಾಥ ದೇವಾಲಯವು ಪಾಶುಪತ ಶೈವಪಂಥದವರ ಅಖಿಲ ಭಾರತೀಯ ಕೇಂದ್ರವಾಗಿದ್ದಿತು. ಆದುದರಿಂದ ಪಾಶುಪತ ಶೈವಪಂಥದ ಆದ್ಯ ಆಚಾರ್ಯರೇ ಶಕಪೂರ್ವ ಮೊದಲನೆಯ ಶತಮಾನದಲ್ಲಿ ಪ್ರಭಾಸದಲ್ಲಿ ದೇವಾಲಯವನ್ನು ಕಟ್ಟಿಸಿ ಅದರೊಳಗೆ ಸೋಮನಾಥ ಎಂಬ ಹೆಸರಿನ ಶಿವಲಿಂಗವನ್ನು ಪ್ರತಿಷ್ಠಿಸಿದರೆಂದು ಮತ್ತು ಆಗಮ ಶಾಸ್ತ್ರವನ್ನು ರಚಿಸಿ ಅದಕ್ಕನುಸಾರವಾದ ಪೂಜಾಕ್ರಮವನ್ನು ಪ್ರಚಾರಕ್ಕೆ ತಂದರೆಂದು ಹಾಗೂ ಶಿವನನ್ನು ಲಿಂಗದ ರೂಪದಲ್ಲಿ ಆರಾಧಿಸುವ ಸಲುವಾಗಿ ಸ್ಥಾಪಿಸಲ್ಪಟ್ಟ ಮೊತ್ತ ಮೊದಲಿನ ದೇವಾಲಯವೇ ಅದಾಗಿದ್ದಿತೆಂದು ನಿಶ್ಚಿತವಾಗಿ ಹೇಳಬಹುದು. ಅದಕ್ಕೆ ಬೇರೆ ಪ್ರಮಾಣಗಳೂ ದೊರೆಯುತ್ತವೆ.[2]

---

1 D. R. Bhandarkar, editing the Mathura Pillar inscription of G. E. 61 discussed the history of the Lakulisa sect founded by Lakuly whom he placed in the first quarter of the second century A. D.

India under the Kushanas. page 155 by B. N. Puri

2 Another parallel tradition connects Prabhasa with the Pasupata cult as a very important and ancient branch of Siva worship. That the temple of Somanatha was the all India centre of the Pasupata cult during historical times is indisputable, Lakulisa born in the second century A. D., at Kayavarohan (modern Karavan) near Broach on the Narmada, was the last of the great Pasupata teachers. Long before the second century A. D., the head of the Pasupata cult had his head quarters at

ಆದರೆ ಪಾಶುಪತ ಶೈವಪಂಥವನ್ನು ಪ್ರಚಾರಕ್ಕೆ ತಂದ ಬ್ರಾಹ್ಮಣರು ವನನ್ನು ಆರಾಧಿಸಲು ಮನುಷ್ಯರೂಪದ ಪ್ರತಿಮೆಯನ್ನು ಉಪಯೋಗಿಸುವುದಕ್ಕೆ ಪ್ರತಿಯಾಗಿ ಸ್ತ್ರೀಯ ಯೋನಿಯಂತೆ ಮತ್ತು ಪುರುಷನ ಶಿಶ್ನದಂತೆ ತೋರುವ ಕಲ್ಲುಗಳ ಜೊತೆಯನ್ನು ಉಪಯೋಗಿಸಿದುದರ ವಾಸ್ತವಿಕ ಕಾರಣವನ್ನು ಪುರಾಣ ಗಳಲ್ಲಿ ಬಂದಿರುವ ಕಥೆಗಳ ಆಧಾರದಿಂದ ಕಂಡುಹಿಡಿಯಲು ಸಾಧ್ಯವಿಲ್ಲವಾದರೂ ಶತಪಥ ಬ್ರಾಹ್ಮಣದೊಳಗಿನ ಕೆಲವು ಉಲ್ಲೇಖಗಳಿಂದ ಅದರ ಕಾರಣವನ್ನೂ, ಶಕ ಪೂರ್ವಕಾಲದ ಕೆಲವು ಘಟನೆಗಳ ಆಧಾರದಿಂದ ಪಾಶುಪಥ ಶೈವಪಂಥವು ಪ್ರಚಲಿತ ವಾದುದರಿಂದ ಕಾರಣವನ್ನೂ ಕಂಡುಹಿಡಿಯಲು ಸಾಧ್ಯವಿದೆ.

ಅಗ್ನಿಯು ಆರ್ಯಜನರ ಪ್ರಧಾನ ದೇವನೆಂದು ಹಿಂದೆ ಹೇಳಿದೆ. ಅಂಥ ದೇವನಾದ ಅಗ್ನಿಯ ಆರಾಧನೆಯೇ ಮೂಲದಲ್ಲಿ ಯಜ್ಞವಾಗಿತ್ತು. ಅಥವಾ ಯಜ್ಞವೇ ಅಗ್ನಿಯ ಆರಾಧನೆಯಾಗಿತ್ತು. ಕಾಲಾಂತರದಲ್ಲಿ ಯಜ್ಞಸಂಸ್ಥೆಯು ವಿಶಾಲವಾಗಿ ಬೆಳೆದಾಗ ಸೋಮಯಜ್ಞಗಳು ಬಹಳ ಪ್ರಾಮುಖ್ಯತೆಯನ್ನು ಪಡೆದುವು. ಆ ಯಜ್ಞಗಳಲ್ಲಿ ಸೋಮದ ಸವನವೂ ಪಶುಗಳ ಆಲಂಭನವೂ ಇರುತ್ತಿತ್ತು. ಹಾಗಾಗಿ ಅಶ್ವಮೇಧದಂಥ ಸೋಮಯಜ್ಞದಲ್ಲಿ ಒಮ್ಮೆಲೇ ನೂರಾರು ಪಶುಗಳ ವಧೆಯಾಗುತ್ತಿತ್ತು. ಅಂಥ ವಧೆಯಿಂದ ಜುಗುಪ್ಸೆಗೊಂಡ, ಕೆಲವು ಬ್ರಾಹ್ಮಣರು ಯಜ್ಞಗಳಲ್ಲಿ ಪಶುವಧೆ ಮಾಡುವುದನ್ನು ವಿರೋಧಿಸತೊಡಗಿದರು. ಆದರೆ ಯಜ್ಞಗಳಲ್ಲಿ ಪಶುಗಳ ಆಲಂಭನವು ಪ್ರಾಚೀನ ಕಾಲದಿಂದ ಸಾಗಿ ಬಂದುದ ರಿಂದ ಬಹುಸಂಖ್ಯಾಕರಾದ ಯಾಜ್ಞಿಕ ಬ್ರಾಹ್ಮಣರು ಆ ವಿರೋಧವನ್ನು ಕಡೆಗಣಿಸಿ ದರು. ಆದರಿಂದ ಅಸಂತುಷ್ಟರಾದ ಕೆಲವರು ಯಾಜ್ಞಿಕರ ಗುಂಪಿನಿಂದ ಸಿಡಿದು ದೂರವಾದರು. ಕೆಲವರು ಆ ಸಮಾಜವನ್ನೇ ತೊರೆದರು ಮತ್ತು ಯಜ್ಞಗಳನ್ನೂ, ಯಜ್ಞಗಳಿಗೆ ಮೂಲಗಳಾದ ವೇದಗಳನ್ನೂ ಖಂಡಿಸತೊಡಗಿದರು. ಅವರಿಂದಾಗಿ ಯಜ್ಞವಿರೋಧಿಯಾದ ಅಹಿಂಸಾ ಧರ್ಮದ ಪ್ರಚಾರಕ್ಕೆ ತುಂಬಾ ಬಲ ದೊರೆಯಿತು. ಆದರೆ ಯಾಜ್ಞಿಕ ಬ್ರಾಹ್ಮಣರಿಂದ ಸಿಡಿದು ಬೇರೆಯಾಗಿದ್ದರೂ ಅವರ ಸಮಾಜವನ್ನು ತೊರೆದು ಬೇರೆ ಹೋಗದ ಯಜ್ಞವಿರೋಧಿಗಳು ಅಗ್ನಿಯನ್ನು ಆರಾಧಿಸಲು ಒಂದು ಹೊಸ ಹಾದಿಯನ್ನು ಕಂಡುಕೊಂಡರು. ಅವರು ಸೋಮಯಜ್ಞಗಳಲ್ಲಿ ಸೋಮ ರಸವನ್ನು ಹಿಂಡಲು ಉಪಯೋಗಿಸಲ್ಪಡುತ್ತಿದ್ದ ಉಲೂಖಲಮುಸಲಗಳ ಜೊತೆ

Prabhasa. Somanatha as the Principal Shrine of Siva can therefore be taken to have been established at least by the beginning of the Christian era, to which period perhaps the first Temple belongs.

Somanatha The Shrine Eternal. page 11

ಯನ್ನು ಯಜ್ಞಾಗ್ನಿಯ ಸಂಕೇತವನ್ನಾಗಿ ಮಾರ್ಪಡಿಸಿದರು. ಮತ್ತು ಅಗ್ನಿಯೇ ಸೋಮದ ಒಡೆಯನಾಗಿದ್ದುದರಿಂದ ಆ ಸಂಕೇತಕ್ಕೆ **"ಸೋಮನಾಥ"** ಎಂಬ ಹೆಸರನ್ನಿಟ್ಟರು. ಪಶುಪತಿ ಎಂಬುದು ಅಗ್ನಿಯ ರುದ್ರರೂಪದ ಹೆಸರಾಗಿತ್ತು; ಮತ್ತು ಸೋಮನಾಥನು ಪಶುಪತಿಯ ಪ್ರತೀಕನಾಗಿದ್ದನು. ಆದುದರಿಂದ ಪಶುಪತಿಯ ಪ್ರತೀಕನಾದ ಸೋಮನಾಥನ ಆರಾಧಕರು ಪಾಶುಪತರೆನಿಸಿಕೊಂಡರು.

ಶತಪಥ ಬ್ರಾಹ್ಮಣದ ೧-೪-೩-೯ರಲ್ಲಿ ಅಗ್ನಿಯನ್ನು "ಜ್ವಾಲೆಗಳೇ ಕೂದಲಾಗಿರುವವನೆಂತಲೂ, ಅಂಥ ಶೋಚಿಷ್ಕೇಶನನ್ನು ನಾವು ಆರಾಧಿಸುತ್ತೇವೆಂತಲೂ, ಆ ಶೋಚಿಷ್ಕೇಶನೇ ಶಿಶ್ನ (=ಪುರುಷನ ಜನಕಾಂಗ)ವೆಂತಲೂ ಹೇಳಿದೆ.[1] ಹಾಗೆಯೇ ಮುಂದೆ ೭-೫-೧-೩೮ರಲ್ಲಿ ಸೋಮರಸವನ್ನು ಹಿಂಡಲು ಉಪಯೋಗಿಸುವ ಉಲೂಖಲವನ್ನು **"ಯೋನಿ"** ಎಂತಲೂ ಮುಸಲವನ್ನು ದುಂಡಗಿದೆಯೆಂದು **"ಶಿಶ್ನ"** ಅಂದರೆ ಪುರುಷನ ಜನಕಾಂಗ ಎಂತಲೂ ಹೇಳಿದೆ. ಆ ಆಧಾರದಿಂದ ಪಾಶುಪತ ಶೈವಪಂಥದ ಸ್ಥಾಪಕರು ಯೋನಿಯನ್ನು ಯಜ್ಞಕುಂಡದ ಸಂಕೇತವನ್ನಾಗಿಯೂ ಶಿಶ್ನವನ್ನು ಜ್ವಾಲಾರೂಪದ ಅಗ್ನಿಯ ಸಂಕೇತವನ್ನಾಗಿಯೂ ಗ್ರಹಿಸಿ ಉಲೂಖಲ ಮುಸಲಗಳ ಜೊತೆಯನ್ನು ಶಿವಲಿಂಗವನ್ನಾಗಿ ಅಥವಾ ಯಜ್ಞಾಗ್ನಿಯ ಸಂಕೇತವನ್ನಾಗಿ ಮಾರ್ಪಡಿಸಿದರು ಮತ್ತು ಅದನ್ನು ಅಗ್ನಿಯ ಶಾಂತರೂಪವಾದ ಶಿವನೆಂದು ಆರಾಧಿಸತೊಡಗಿದರು. ಮತ್ತು ಆ ಸಂಕೇತವನ್ನು ಅಗ್ನಿಯ ಪ್ರತೀಕವೆಂದು ಸೂಚಿಸಲು ಅಗ್ನಿಯ ಪ್ರಾಚೀನ ಪ್ರತೀಕವಾಗಿದ್ದ ಬಸವನನ್ನು ಲಿಂಗಾಕೃತಿಯ ಎದುರುಗಡೆಯಲ್ಲಿ ಸ್ಥಾಪಿಸಿದರು– ಎಂಬುದರಲ್ಲಿ ಸಂದೇಹವಿಲ್ಲ.

ಪಾಶುಪತ ಶೈವಪಂಥದ ಆಚಾರ್ಯರು ತಾವು ಸ್ಥಾಪಿಸುತಿದ್ದ ಶಿವಲಿಂಗಗಳಿಗೆ "ಸೋಮನಾಥ" ಎಂಬ ಹೆಸರನ್ನಿಡುತಿದ್ದರೆಂದು, ಅವರು ಸೌರಾಷ್ಟ್ರದ ಸಮುದ್ರ ತೀರದಲ್ಲಿರುವ ಪ್ರಭಾಸ ಕ್ಷೇತ್ರದಿಂದ ಮೊದಲುಗೊಂಡು ದಕ್ಷಿಣ ಭಾರತದ ಪಶ್ಚಿಮ ಸಮುದ್ರ ತೀರದಲ್ಲಿ ಅಲ್ಲಲ್ಲಿ ದಕ್ಷಿಣ ಕನ್ನಡ ಜಿಲ್ಲೆಯ ಉಳ್ಳಾಲದ ತನಕ[2] ಸ್ಥಾಪಿಸಿದ ಪ್ರಾಚೀನ ದೇವಾಲಯಗಳಲ್ಲಿನ ಶಿವಲಿಂಗಗಳ ಹೆಸರು ಸೋಮನಾಥ ಎಂದೇ ಇರುವುದರ ಮೇಲಿಂದ ಸಿದ್ಧವಾಗುತ್ತದೆ. ಮತ್ತು ದಕ್ಷಿಣ ಭಾರತದಲ್ಲಿ ಶಕದ ನಾಲ್ಕನೆಯ ಶತಮಾನದ ಸುಮಾರಿಗೆ ಪಾಶುಪತ ಶೈವಪಂಥದ ಆಚಾರ್ಯರಿಂದ ಮತ್ತು ಅವರ ಅನುಯಾಯಿಗಳಿಂದ ಶಿವಲಿಂಗದ ಆರಾಧನೆಯು ಪ್ರಚಲಿತವಾಯಿತೆಂದು ತಿಳಿದುಬರುತ್ತದೆ.

---

[1] ಶೋಚಿಷ್ಕೇಶಸ್ತಮೀಮಹ ಇತೀ ಶಿಶ್ನಂ ವೈಶೋಚಿಷ್ಕೇಶಂಶಿಶ್ನಂ ಹೀದಂ ಶಿಶ್ನಿನಂ ಭೂಯಿಷ್ಠಂ ಶೋಚಯತಿ ॥ ಶ, ಬ್ರಾ. ೧-೪-೩-೯ ॥

[2] ಮುಂದೆ ದಕ್ಷಿಣದ ಕೇರಳದಲ್ಲಿಯೂ ಇರಬಹುದು.

ಹಾಗೆಯೇ ಉತ್ತರ ಭಾರತದಲ್ಲಿ ಶಕದ ಎರಡನೆಯ ಶತಮಾನದ ಸುಮಾರಿಗೆ ಬಹಳ ಪ್ರಬಲರಾಗಿ ಸಾಮ್ರಾಜ್ಯವನ್ನು ಕಟ್ಟಿದ ನಾಗವಂಶದ ಭಾರಶಿವ ಅಂದರೆ ಹೆಗಲಲ್ಲಿ ಸದಾಕಾಲ ಶಿವಲಿಂಗವನ್ನು ಹೊತ್ತುಕೊಂಡಿರುತಿದ್ದ ರಾಜಕುಲದವರು ಉತ್ತರ ಭಾರತದ ಹಲವು ಪ್ರದೇಶಗಳಲ್ಲಿ ಶಿವಸ ಲಿಂಗಾರಾಧನೆಯು ಪ್ರಚಲಿತವಾಗುವಂತೆ ಮಾಡಿದರೆಂದು ಮತ್ತು ಅವರಿಂದಲೇ ಗಂಗೆಯ ಪಾವಿತ್ರ್ಯವೂ, ಗೋವಿನ ಪೂಜ್ಯತೆಯೂ ಪ್ರಸ್ಥಾಪಿತವಾಗಿದ್ದಿತೆಂದು ತಿಳಿದು ಬರುತ್ತದೆ.[1]

ಹಿಂದೆ ದಕ್ಷಿಣ ಭಾರತದ ಎಲ್ಲ ಶಿವಾಲಯಗಳಲ್ಲಿ ಪಾಶುಪತ ಶೈವಪಂಥದ ಆಚಾರ್ಯರೇ ಅರ್ಚಕರಾಗಿದ್ದರೆಂದು ಮತ್ತು ಅವರಲ್ಲಿ ಕಾಶ್ಮೀರೀ ಕಾಳಮುಖ ಎಂಬ ವಿಭೇದವಿದ್ದಿತೆಂದು ಮತ್ತು ಅವರು ಅರ್ಚಕರಾಗಿರುತಿದ್ದ ಶಿವಾಲಯಗಳು ವಿದ್ಯಾಲಯಗಳು ಕೂಡ ಆಗಿರುತಿದ್ದುವೆಂದು ಅಲ್ಲಿನ ಲಿಖಿತ ಶಾಸನಗಳಿಂದ ಗೊತ್ತಾಗುತ್ತದೆ. ಕೆಲವು ಶಾಸನಗಳಲ್ಲಿ ಆ ಅರ್ಚಕರನ್ನು ಮತ್ತು ಆಚಾರ್ಯರನ್ನು ಗೊರವರೆಂದುದೂ ಇದೆ. ಪಾಶುಪತ ಶೈವಪಂಥದ ಬ್ರಾಹ್ಮಣರು ಶೈವರಲ್ಲಿ ಕಡು ಶೈವರಾಗಿದ್ದು ದಕ್ಷಿಣ ಭಾರತದ ಎಲ್ಲ ರಾಜ್ಯಗಳಲ್ಲಿ ರಾಜಾಶ್ರಯ ಪಡೆದು ರಾಜರ ಮತ್ತು ಪ್ರಜೆಗಳ ಗೌರವಾದರಗಳಿಗೆ ಪಾತ್ರರಾಗಿದ್ದರೆಂದು ಮತ್ತು ರಾಜರ ಧರ್ಮಗುರುಗಳೂ, ವಿದ್ಯಾಲಯದ ಅಧಿಪತಿಗಳೂ, ಶಿವಾಲಯಗಳಲ್ಲಿ ಶಿವಲಿಂಗಗಳ

---

1. Bhavanaga is described as belonging to the family of Bharasivas whose royal line owed its origin to the satisfaction of Siva that caused their carrying a Sivalinga placed as a load upon their shoulder and who were besprinkled with the pure water of Bhagirathi that had been obtained by their valour. Ancient India p. 367. by V. D. Mahajan M. A.

The Nagas performed ten Asvamedhas at Kasi and Brighukachcha on the Narmada Siva and Nandi were added as honorific titles by kings and emperors to their names. Their images were carved on official seals as the emblems of Varnasrama Dharma.

The tremendous political events led to cultural renaissance of which Siva was the centre. Ganga was the emblem of purity. The sacredness of the bull and the cow was accepted as a national creed.

Somanatha The Shrine Eternal. page 11.

ಅರ್ಚಕರೂ ಆಗಿದ್ದರೆಂದು ಲಿಖಿತ ಶಾಸನಗಳಿಂದ ತಿಳಿದು ಬರುತ್ತದೆ.[1] ಆದರೆ ಪಾಶುಪತ ಶೈವಪಂಥದ ಆಚಾರ್ಯರು ದಕ್ಷಿಣ ಭಾರತದಲ್ಲಿ ಶಿವನ ಲಿಂಗರೂಪದ ಆರಾಧನೆಯನ್ನು ಪ್ರಚಾರಮಾಡುವ ಮೊದಲು ಅಲ್ಲಿ ಶಿವಲಿಂಗದ ಆರಾಧನೆಯು ಪ್ರಚಲಿತವಿದ್ದಿತೆಂದು ಸಿದ್ಧಪಡಿಸುವ ಒಂದೇ ಒಂದು ಪ್ರಮಾಣವಾದರೂ ಈ ತನಕ ದೊರಕಿಲ್ಲ.

ಶಿವಲಿಂಗವು ಯಜ್ಞಾಗ್ನಿಯ ಸಂಕೇತ ಮಾತ್ರವಾಗಿರದೇ ಸೋಮದ ಮತ್ತು ಪಂಚಮುಖ ಪ್ರಜಾಪತಿಯ ಅಥವಾ ಅಗ್ನಿಮಂಥನ ಯಂತ್ರದ ಸಂಕೇತವೂ ಆಗಿರುತ್ತದೆ. ಋಗ್ವೇದದಲ್ಲಿ ಸೋಮ ಎಂಬ ಶಬ್ದವು ಒಂದು ಬಗೆಯ ಮಾದಕ ರಸವನ್ನೀಯುವ ಓಷಧಿ ಮತ್ತು ಚಂದ್ರ ಎಂಬ ದ್ವಯಾರ್ಥದಲ್ಲಿ ಪ್ರಯೋಗಿಸಲ್ಪಟ್ಟಿದೆ. ಆದುದರಿಂದ ಚಂದ್ರನಿಲ್ಲದ ಕತ್ತಲೆಯ ರಾತ್ರಿಗಳಲ್ಲಿ ರುದ್ರರೂಪದ ಯಜ್ಞಾಗ್ನಿಯು ಚಂದ್ರನಂತೆಯೇ ಕತ್ತಲೆಯನ್ನು ಕಡಿಮೆ ಮಾಡುವುದರಿಂದ ಯಜುರ್ವೇದದ ರುದ್ರಾಧ್ಯಾಯದಲ್ಲಿ ರುದ್ರರೂಪದ ಅಗ್ನಿಯನ್ನು "ಸೋಮ" ಎಂದು ಕರೆದು ನಮಸ್ಕರಿಸಿದೆ—**"ನಮಃ ಸೋಮಾಯ ಚ ರುದ್ರಾಯ ಚ" ॥ ತೈ. ಸಂ. ೪–೫–೮–೧ ॥** ಹಾಗಾಗಿ ಪುರಾಣಗಳ ಕಾಲದ ತಾಂತ್ರಿಕರು ಶಿವನೊಂದಿಗೆ ಸೋಮನ ಸಂಬಂಧವನ್ನು ಕಲ್ಪಿಸಿದ್ದಾರೆ.

ಸಾಮಾನ್ಯವಾಗಿ ರಾತ್ರಿಕಾಲದಲ್ಲಿ ಜರುಗಿಸಲ್ಪಡುತಿದ್ದ ಸೋಮಯಜ್ಞಗಳಲ್ಲಿ ಇಂದ್ರನನ್ನು ಮದಭರಿತನನ್ನಾಗಿ ಮಾಡಲು ಅಂದರೆ ಇಂದ್ರರೂಪದ ಅಗ್ನಿಯನ್ನು ಪ್ರಜ್ವಲಿತನನ್ನಾಗಿ ಮಾಡಲು ಯಜ್ಞಕುಂಡದಲ್ಲಿ ಸೋಮರಸವು ಧಾರಾಕಾರವಾಗಿ ಎರೆಯಲ್ಪಡುತಿತ್ತು. ಹಾಗಾಗಿ ಋಗ್ವೇದದಲ್ಲಿ ಅಗ್ನಿಯನ್ನು **"ಸೋಮಪೃಷ್ಠಃ"** ಅಂದರೆ "ಬೆನ್ನಿನಲ್ಲಿ ಸೋಮವಿರುವವನು ಅಥವಾ ಸೋಮವು ಬೆನ್ನಾಗಿರುವವನು" ಎನ್ನಲಾಗಿದೆ. ಹಾಗೆಯೇ ಶತರುದ್ರೀಯ ಯಜ್ಞದಲ್ಲಿ ಅಗ್ನಿಯನ್ನು ಘೋರವಾಗಿ ಉರಿಯುವಂತೆ ಮಾಡಲು ಯಜ್ಞಕುಂಡದಲ್ಲಿ ಘೃತವು ಧಾರಾಕಾರವಾಗಿ ಎರೆಯಲ್ಪಡುತಿತ್ತು. ಆದುದರಿಂದ ಅಗ್ನಿಯನ್ನು **"ಘೃತಪೃಷ್ಠಃ"** ಎಂದು ಕೂಡ ಕರೆಯಲಾಗಿದೆ. ಅರ್ವಾಚೀನ ಕಾಲದ ಯಾಜ್ಞಿಕರು ಶತರುದ್ರೀಯ ಯಜ್ಞದಲ್ಲಿ ಅಗ್ನಿಯನ್ನು ಪ್ರದೀಪ್ತನನ್ನಾಗಿ ಮಾಡಲು ಯಜ್ಞಕುಂಡದಲ್ಲಿ ಸತತವಾಗಿ ಘೃತದ ಧಾರೆಯು ಇಳಿಯುವಂತೆ ಮಾಡಲು, ಅಡಿಯಿಂದ ಚಿಕ್ಕ ತೂತಿರುವ ಒಂದು ಪಾತ್ರೆಯಲ್ಲಿ ಘೃತವನ್ನು ತುಂಬಿಸಿ ಅದನ್ನು ಯಜ್ಞಕುಂಡದ ಮೇಲೆ ನೇತಾಡಿಸುತಿದ್ದರು. ಆದರೆ ಪಾಶುಪತ ಶೈವಪಂಥದ ಬ್ರಾಹ್ಮಣರು ಅಗ್ನಿಯ ಶಾಂತರೂಪದ ಆರಾಧಕರಾಗಿದ್ದುದರಿಂದ ಅವರು ಅಗ್ನಿಯನ್ನು ಶಾಂತಗೊಳಿಸುವ ಸಲುವಾಗಿ ಶಿವಲಿಂಗದ ಮೇಲೆ ತಂಪಾದ ಗಂಗಾಜಲವು ಇಳಿಯುವಂತೆ

---

1 ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ

ಮಾಡಲು, ಅಡಿಯಿಂದ ತೂತಿರುವ ಗಂಗಾಜಲದ ಪಾತ್ರೆಯನ್ನು ನೇತಾಡಿಸ ತೊಡಗಿದರು.

ಹಿಂದೆ ವಿವರಿಸಿದಂತೆ ಶಿವನೊಂದಿಗೆ ಸೋಮನ ಮತ್ತು ಗಂಗೆಯ ಸಂಬಂಧವಿದೆಯೆಂಬ ಆಧಾರದಿಂದ ಅರ್ವಾಚೀನ ಶಿಲ್ಪಿಗಳು ಮತ್ತು ಚಿತ್ರಕಾರರು ಶಿವನ ಪ್ರತಿಮೆಯ ಮತ್ತು ಚಿತ್ರದ ಜಡೆಯಲ್ಲಿ ಚಂದ್ರನನ್ನು ಮತ್ತು ಗಂಗೆಯನ್ನು ಸೇರಿಸಿದರು. ಬೇರೆ ಕೆಲವರು ಶಿವನ ಪ್ರಜಾಪತಿ ರೂಪವನ್ನು ಸೂಚಿಸಲು ಶಿವಲಿಂಗದ ಸುತ್ತಲೂ ಮನುಷ್ಯನ ಐದು ಮೋರೆಗಳನ್ನು ಕೆತ್ತಿದರು. ಹಾಗೆಯೇ ಕೆಲವರು ಶಿವಲಿಂಗವೆಂದರೆ ಯಜ್ಞದ ಯೂಪಸ್ತಂಭವಾಗಿರಬಹುದೆಂದು ಭಾವಿಸಿ ಶಿವಲಿಂಗದ ಕೆಳಭಾಗವನ್ನು ಚತುಷ್ಕೋಣವನ್ನಾಗಿಯೂ ಅಷ್ಟಕೋಣವನ್ನಾಗಿಯೂ ಕೆತ್ತಿದರು.

ಹಿಂದಿನ ವಿವರಗಳಿಂದ ಶಕಪೂರ್ವ ಮೊದಲಿನ ಶತಮಾನಕ್ಕಿಂತ ಹಿಂದೆ ಭಾರತ ವರ್ಷದಲ್ಲಿ ಲಿಂಗಾರಾಧನೆಯು ಪ್ರಚಲಿತವಿರಲಿಲ್ಲವೆಂದೂ ಈಗ ಯಾವ ಕಲ್ಲುಗಳು ಶಿವಲಿಂಗವೆಂಬ ಭಾವನೆಯಿಂದ ಪೂಜಿಸಲ್ಪಡುತ್ತಿವೆಯೋ ಅವುಗಳು ಋಗ್ವೇದ ಕಾಲದಿಂದ ಇದ್ದುವೆಂತಲೂ, ಆ ಕಾಲದಲ್ಲಿ ಅವುಗಳು ಸೋಮರಸವನ್ನು ಹಿಂಡಲು ಉಪಯೋಗಿಸಲ್ಪಡುತಿದ್ದ ಉಲೂಖಲ ಮುಸಲಗಳಾಗಿದ್ದು- ಯಜ್ಞ ಕಾಲದಲ್ಲಿ ಸ್ತುತಿಸಲ್ಪಡುತಿದ್ದುವೆಂದೂ, ಪಾಶುಪತ ಶೈವಪಂಥದ ಆಚಾರ್ಯರು ಆ ಉಲೂಖಲ ಮುಸಲಗಳನ್ನು ಶಿವಲಿಂಗವನ್ನಾಗಿ ಮಾರ್ಪಡಿಸಿ ಆರಾಧಿಸತೊಡಗಿದರೆಂದೂ, ಶಿಶ್ನದೇವಾಃ ಎಂಬುದರ ಅರ್ಥವು "ಲಿಂಗಾರಾಧಕರು" ಎಂದಲ್ಲವೆಂದೂ, ಆ ಅರ್ಥಕ್ಕೆ ಪ್ರಾಚೀನ ಪ್ರಮಾಣಗಳ ಆಧಾರವಿಲ್ಲವೆಂದೂ ಸ್ಪಷ್ಟವಾಗಿದೆ. ಅಂದರೆ ಲಿಂಗಾರಾಧನೆಯು ಋಗ್ವೇದ ಪೂರ್ವ ಕಾಲದಿಂದ ಭಾರತ ವರ್ಷದ ಮೂಲನಿವಾಸಿಗಳಲ್ಲಿ ಪ್ರಚಲಿತವಿದ್ದಿತೆಂಬ ಬ್ರಿಟಿಷ್ ವಿದ್ವಾಂಸರ ವಾದವು ಬುಡವಿಲ್ಲದ ಕಲ್ಪನೆಯೆಂದು ಸಂದೇಹಕ್ಕೆಡೆಯಿಲ್ಲದಂತೆ ಸಿದ್ಧವಾಗಿದೆ. ಇನ್ನು ಸೋಮಬಳ್ಳಿಯ ರಸವನ್ನು ಹಿಂಡಲು ಉಪಯೋಗಿಸಲ್ಪಡುತಿದ್ದ ಉಲೂಖಲವು ವೃತ್ತಾಕಾರವಾಗಿ ಮಾತ್ರವಲ್ಲದೇ ಚೌಕಾಕಾರವಾಗಿಯೂ ಇದ್ದಿತೆಂದು ಹೇಳಿದರೆ ಶಿವಲಿಂಗದ ಇತಿಹಾಸವು ಮುಗಿಯುವುದು. ಕೊನೆಯದಾಗಿ ಸರ್ ಜಾನ್ ಮಾರ್ಶಲರು ಪ್ರಕಟಿಸಿದ "Mahenjo-daro and Indus Valley civilization" ಎಂಬ ಪುಸ್ತಕದಲ್ಲಿ ಸಿಂಧೂ ಕಣಿವೆಯ ಜನರು ಲಿಂಗಪೂಜಕರಾಗಿದ್ದರೆಂದು ಸಾಧಿಸಲು-ಸಿಂಧೂ ಕಣಿವೆಯ ಅಗೆತಗಳಲ್ಲಿ ದೊರಕಿದ ಶಿವಲಿಂಗಗಳದ್ದೆಂದು ಎರಡು ಚಿತ್ರಗಳನ್ನು ಕೊಟ್ಟಿದ್ದಾರೆ. ಆದರೆ ಅವುಗಳನ್ನು ಅರ್ವಾಚೀನ ಯಾಜ್ಞಿಕರು ಸೋಮರಸವನ್ನು ಹಿಂಡಲು ಉಪಯೋಗಿಸುತಿದ್ದ ಉಲೂಖಲಮುಸಲಗಳೆನ್ನಬಹುದೇ ಹೊರತು ಶಿವನ ಲಿಂಗ ಪ್ರತೀಕಗಳೆನ್ನಲಾಗುವುದಿಲ್ಲ. ಅಲ್ಲದೇ ಅವುಗಳನ್ನು ಸಿಂಧೂಸಂಸ್ಕೃತಿಯ ಪಟ್ಟಣಗಳ ಕಾಲದಷ್ಟು ಪ್ರಾಚೀನವೆನ್ನಲೂ ಆಗುವುದಿಲ್ಲ. ಅವುಗಳ ಚಿತ್ರವನ್ನು ಇಲ್ಲಿ ಕೊಟ್ಟಿದೆ-

ಅಷ್ಟೇ ಅಲ್ಲ ಈ ತನಕ ನೂರಕ್ಕಿಂತ ಹೆಚ್ಚು ಸಿಂಧೂ ಸನ್ನಿವೇಶಗಳಲ್ಲಿ ಅಗೆತಗಳು ನಡೆದಿದ್ದರೂ, ಸಿಂಧೂಕಣಿವೆಯ ಆ ಪ್ರಾಚೀನ ಪಟ್ಟಣಗಳಲ್ಲಿ ನೆಲಸಿದ್ದ





ಜನರು ಲಿಂಗಾರಾಧಕರಾಗಿದ್ದರೆಂದು ಸಿದ್ಧಪಡಿಸುವಂಥ ಕುರುಹುಗಳು ಯಾವ ಸನ್ನಿವೇಶದಲ್ಲಿಯೂ ಬೆಳಕಿಗೆ ಬಂದಿಲ್ಲ. ಅಂದರೆ ಸಿಂಧೂ ಕಣಿವೆಯ ನಿವಾಸಿಗಳು ಲಿಂಗಾರಾಧಕರೆಂದು ಸಾಧಿಸುವ ಪ್ರಚಾರವು ಅಲ್ಲಿನ ಅಗೆತಗಳು ಪ್ರಾರಂಭವಾಗುವ ಬಹುಕಾಲ ಮೊದಲಿನಿಂದಲೇ ಸಾಗಿತ್ತು.

ನಾಗಾರಾಧನೆ

ಇನ್ನು ಆರ್ಯಜನರು ನಾಗಾರಾಧನೆಯನ್ನು ಪರರಿಂದ ಸ್ವೀಕರಿಸಿದ್ದರೆಂದು ಬ್ರಿಟಿಷ್ ವಿದ್ವಾಂಸರು ಪ್ರಚಾರ ಮಾಡಿದ ಕಲ್ಪನೆಯು ಕೂಡ ಬುಡವಿಲ್ಲದ್ದೆಂದು ಮುಂದಿನ ವಿವರಗಳಿಂದ ತಿಳಿಯಬಹುದು.[1]

ಸರ್ಪದ ಅಥವಾ ಅಹಿಯ ಕಲ್ಪನೆಯು ಮತ್ತು ಅದರ ಸಂಬಂಧವು ಆರ್ಯ ಜನರ ಜೀವನದಲ್ಲಿ ಆದಿಕಾಲದಿಂದಲೇ ಬೆರೆತುಕೊಂಡಿದೆ. ಮತ್ತು ಅವರು ಸರ್ಪಗಳನ್ನು ಹಲವು ರೂಪಗಳಲ್ಲಿ ಆರಾಧಿಸುತ್ತ ಬಂದಿದ್ದಾರೆ. "ಋಗ್ವೇದದಲ್ಲಿ ಅಗ್ನಿಯನ್ನು ಶಿವ, ರುದ್ರ, ಇಂದ್ರ ಮುಂತಾಗಿ ಕರೆದಿರುವಂತೆಯೇ "ಅಹಿ" ಎಂದರೆ ಹಾವು ಎಂತಲೂ, ಅಹಿರ್ಬುಧ್ನ್ಯ ಅಂದರೆ ಬುಡದಲ್ಲಿ ಅಥವಾ ತಗ್ಗಿನಲ್ಲಿರುವ ಹಾವು ಎಂತಲೂ ಕರೆದಿದೆ. ಋಗ್ವೇದದಲ್ಲಿ "ಅಹಿ" ಎಂಬ ಒಂಟಿ ಶಬ್ದವು ಸಾಮಾನ್ಯವಾಗಿ ಕತ್ತಲೆಯ ಸಂಕೇತವಾಗಿದ್ದು ವೃತ್ರ ಶಬ್ದದ ಪರ್ಯಾಯ ವಾಚಿಯಾಗಿ ಸೂರ್ಯನನ್ನು ಅಥವಾ ಅವನ ಪ್ರಕಾಶವನ್ನು ಅಥವಾ ದಿವ್ಯಜಲಗಳ ಪ್ರವಾಹವನ್ನು ತಡೆದಿಟ್ಟವನೆಂಬ ಅರ್ಥದಲ್ಲಿ ಪ್ರಯೋಗಿಸಲ್ಪಟ್ಟಿದೆ. ಮತ್ತು ಇಂದ್ರನು ಆ ಅಹಿಯನ್ನು ಕೊಂದನೆಂದು ವರ್ಣಿಸಿದೆ. ಪರಂತು ಅಹಿ ಶಬ್ದವು ಅಗ್ನಿಯ ಸಲುವಾಗಿ ಪ್ರಯೋಗಿಸಲ್ಪಟ್ಟ ಸಂದರ್ಭಗಳಲ್ಲಿ ಅದರೊಂದಿಗೆ "ಬುಧ್ನಃ" ಶಬ್ದವಾಗಲೀ, ಅಪಾಂನಪಾತ್ ಶಬ್ದವಾಗಲೀ ಅಜಏಕಪಾದ್ ಶಬ್ದವಾಗಲೀ ಬಂದಿರುತ್ತದೆ. ಬುಧ್ನಃ ಶಬ್ದದ ಅರ್ಥವು ಬುಡ ಎಂದಿದ್ದು ಅದು ಅಡಿಭಾಗ, ತಳ ಮತ್ತು ತಗ್ಗು ಎಂಬ ಲಾಕ್ಷಣಿಕಾರ್ಥಗಳನ್ನೂ ಕೊಡುತ್ತದೆ. ಆದುದರಿಂದ "ಅಹಿರ್ಬುಧ್ನ್ಯಃ" ಎಂಬುದರ ಅರ್ಥವು ಆಳದಲ್ಲಿ ಇಲ್ಲವೇ ತಗ್ಗಾದ ಸ್ಥಳದಲ್ಲಿರುವ ಹಾವೆಂತಲೂ, ಅಡಿಯಲ್ಲಿ ಇಲ್ಲವೇ ಬುಡದಲ್ಲಿರುವ ಹಾವೆಂತಲೂ ಆಗುತ್ತದೆ. ಅಪಾಂನಪಾತ್ ಎಂಬುದರ ಅರ್ಥವು ದಿವ್ಯಜಲಗಳ ಪುತ್ರ ಎಂತಲೂ, ಅಜಏಕಪಾದ್ ಎಂಬುದರ ಅರ್ಥವು ಒಂಟಿಗಾಲಿನ ಹೋತ ಎಂತಲೂ ಇದ್ದು ಅವುಗಳು ಅಗ್ನಿಯ ಹೆಸರುಗಳಾಗಿರುತ್ತವೆ.

---

1. ಡಾಕ್ಟರ್ ಫ್ಲೀಟ್ ಎಂಬ ಬ್ರಿಟಿಷ್ ವಿದ್ವಾಂಸರೊಬ್ಬರು ಚಾಲುಕ್ಯ ಮಂಗಲೇಶನು ಶಕವರ್ಷ ೫೩೪ರಲ್ಲಿ ಬರೆಯಿಸಿದ ಮಹಾಕೂಟದ ಶಿಲಾಸ್ತಂಭ ಶಾಸನದಲ್ಲಿ ಬಂದಿರುವ ಆಳುಪ ಶಬ್ದದ ಅರ್ಥವು ಮಹಾಶೇಷ ಎಂದಿರುವುದರಿಂದ ಹಿಂದೆ ದಕ್ಷಿಣ ಭಾರತದ ಪಶ್ಚಿಮ ಕರಾವಳಿಯ ಪ್ರದೇಶವನ್ನು ಆಳುತಿದ್ದ ಆಳುವ ಅರಸರು ನಾಗಕುಲದವರೆಂದು ಮುಂದೆ ತಂದ ಕಲ್ಪನೆಗೆ ಬುಡವಿಲ್ಲವೆಂದು ನಾನು ಹಿಂದೆ ಬರೆದು ಪ್ರಕಟಿಸಿದ "ಕೊಂಕಣಿ ಮತ್ತು ಮರಾಠಿಗಳ ತುಲನಾತ್ಮಕ ವಿಮರ್ಶೆ ಹಾಗೂ ಸಾರಸ್ವತ ಬ್ರಾಹ್ಮಣರ ಪ್ರಾಚೀನ ಇತಿಹಾಸ" ಎಂಬ ಪುಸ್ತಕದಲ್ಲಿ ಪ್ರಮಾಣಗಳ ಆಧಾರದಿಂದ ಸಿದ್ಧಪಡಿಸಿದ್ದೇನೆ.

ಋಗ್ವೇದದ ೪–೧–೧೧ನೆಯ ಋಚೆಯಲ್ಲಿ ಅಗ್ನಿಯು ಮೊತ್ತ ಮೊದಲು ಅವನ ಯೋನಿಯಲ್ಲಿ ಅಂದರೆ ಗಾರ್ಹಪತ್ಯಕುಂಡದಲ್ಲಿ ಇಲ್ಲವೇ ಅಧರಾರಣಿಯ ಗುಳಿಯಲ್ಲಿ ರಜಸ್ಸುಗಳ ಅಂದರೆ ಹೊಗೆಯ ಮಬ್ಬಿನ ಅಡಿಯಲ್ಲಿ ಹುಟ್ಟಿದನೆಂದು ಸ್ಪಷ್ಟವಾಗಿ ಹೇಳಿದೆ. ಸಾಮಾನ್ಯವಾಗಿ ವೇದಮಂತ್ರಗಳಿಗೆ ಅರ್ಥ ಹೇಳಿದ ವಿದ್ವಾಂಸರು "ರಜಸ್" ಶಬ್ದಕ್ಕೆ ಮಬ್ಬು, ಹಬೆ, ಧೂಳಿನ ಕಣ ಮುಂತಾದ ಅರ್ಥಗಳಿದ್ದರೂ ಅವುಗಳನ್ನು ಬಿಟ್ಟು "ರಜೋ ಲೋಕ" ಎಂಬರ್ಥವನ್ನು ಗ್ರಹಿಸಿದ್ದಾರೆ. ಹಾಗಾಗಿ ಅವರು ಆ ಋಚೆಯ ವಾಸ್ತವಿಕ ಅರ್ಥವನ್ನು ಗ್ರಹಿಸಲು ಶಕ್ತರಾಗಲಿಲ್ಲ. ರಜಸ್ ಶಬ್ದಕ್ಕೆ ಮಬ್ಬು ಎಂಬರ್ಥವನ್ನು ಗ್ರಹಿಸಿದರೆ ಋಚೆಯ ಅರ್ಥವು ಸ್ಪಷ್ಟವಾಗಿ ಮುಂದೆ ಕೊಟ್ಟಂತಾಗುವುದು.

ಸ ಜಾಯತ ಪ್ರಥಮಃ ಪಸ್ತ್ಯಾಸು
ಮಹೋ ಬುಧ್ನೇ ರಜಸೋ ಅಸ್ಯಯೋನೌ
ಅಪಾದ ಶೀರ್ಷೋ ಗುಹಮಾನೋ ಅಂತಾ
ಆಯೋಯುವಾನೋ ವೃಷಭಸ್ಯ ನೀಳೇ ॥ಋ. ೪–೧-೧೧॥

ಅರ್ಥ– ಆ ಅಗ್ನಿಯು ಮೊತ್ತ ಮೊದಲು (ಗೃಹಸ್ಥರ) ಮನೆಗಳಲ್ಲಿ ಅವನ ಯೋನಿಯಲ್ಲಿ ಅಂದರೆ ಗಾರ್ಹಪತ್ಯ ಕುಂಡದಲ್ಲಿ ಮಹತ್ತಾದ (ಹೊಗೆಯ) ಮಬ್ಬಿನ ಅಡಿಯಲ್ಲಿ, ಕಾಲು–ತಲೆಗಳಿಲ್ಲದವನೂ, ಒಳಗೆ ಅಡಗಿದಂಥವನೂ. ವೃಷಭನಾದ ತನ್ನ ಹಕ್ಕಿಯಲ್ಲಿಯೇ ಸುಳಿದಾಡುವಂಥವನೂ ಆಗಿ ಹುಟ್ಟಿದನು. ಅಂದರೆ ಆ ಅಗ್ನಿಯು- ಗಾರ್ಹಪತ್ಯ ಕುಂಡದಲ್ಲಿ ಎಸೆದ ಸಮಿತ್ತುಗಳಿಂದ ಹೊರಟ ಹೊಗೆಯ ಗಾಢವಾದ ಮಬ್ಬಿನ ಅಡಿಯಲ್ಲಿ ಯಾರಿಗೂ ಕಾಣದಂತೆ ಹುಟ್ಟಿದನು. ಮತ್ತು ಅವನೇ ಅಹಿರ್ಬುಧ್ನ್ಯನಾಗಿದ್ದನು. ಆ ಆಶಯವನ್ನು ಮುಂದೆ ಕೊಡಲಾಗುವ ಐತರೇಯ ಬ್ರಾಹ್ಮಣದೊಳಗಿನ ವಾಕ್ಯದಿಂದ ಸರಿಯಾಗಿ ತಿಳಿದು ಕೊಳ್ಳಬಹುದು–

ಏಷ ಹ ವಾ ಅಹಿರ್ಬುಧ್ನ್ಯೋ ಯದಗ್ನಿರ್ಗಾರ್ಹಪತ್ಯಃ ॥೩-೩–೩೬॥

ಅಂದರೆ ಯಾವ ಗಾರ್ಹಪತ್ಯ ಅಗ್ನಿ ಇರುವನೋ ಅವನೇ ಈ ಅಹಿರ್ಬುಧ್ನ್ಯನಾಗಿರುತ್ತಾನೆ.

ವಾಜಸನೇಯಿ ಸಂಹಿತೆಯಲ್ಲಿ ಕೂಡ ಗಾರ್ಹಪತ್ಯಾಗ್ನಿಯನ್ನು ಅಹಿರ್ಬುಧ್ನ್ಯ ಮತ್ತು ಅಜಏಕಪಾದ್ ಅಂದಿದೆ.

ಅಜೋऽಸಿ ಏಕಪಾದ್। ಅಹಿರಸಿ ಬುಧ್ನ್ಯಃ ॥ ೫-೩೩॥

ಅಂದರೆ– ನೀನು ಒಂಟಿಗಾಲಿನ ಹೋತನಾಗಿರುತ್ತೀ; ಆಳದಲ್ಲಿರುವ ಹಾವಾಗಿರುತ್ತಿ.

ಪ್ರಾಚೀನ ಕಾಲದ ಆರ್ಯ ಜನರು ಅಗ್ನಿಯನ್ನು ಏಕೆ ಹಾವೆಂದು ಕರೆದಿದ್ದ

ಎಂದು ನಿಶ್ಚಿತವಾಗಿ ಹೇಳಲಾಗದಿದ್ದರೂ, ಅಗ್ನಿಯ ಜ್ವಾಲೆಗಳು ಗಾಳಿಯು ಬೀಸುವಾಗ ಅಂಕು ಡೊಂಕಾಗಿ ಅಲುಗಾಡುತ್ತಿರುವುದರಿಂದಲೂ ಮತ್ತು ಅಂಥ ಅಲುಗಾಡುವಿಕೆಯು ಹಾವಿನ ತೆವಳುವಿಕೆಯಂತೆ ತೋರುವುದರಿಂದಲೂ ಅವರು ಅಗ್ನಿಯನ್ನು ಹಾವೆಂದಿರಬಹುದು. ಋಗ್ವೇದದಲ್ಲಿ ಮತ್ತು ಇತರ ವೈದಿಕ ಸಾಹಿತ್ಯದಲ್ಲಿ ಅಗ್ನಿಯನ್ನು ಹಾವೆಂದು ಕರೆದ ಹಲವು ಉಲ್ಲೇಖಗಳಿವೆ–

ಹಿರಣ್ಯಕೇಶೋ ರಜಸೋ ವಿಸಾರೇ ಅಹಿರ್ಧುನಿರ್ವಾತ ಇವ ಧ್ರಜೀಮಾನ್। ಶುಚಿಭ್ರಾಜಾ ಉಷಸೋ ನವೇದಾ ಯಶಸ್ವತೀರಪಸ್ಯುವೋ ನ ಸತ್ಯಾಃ ॥ಋ. ೧-೭೯-೧॥

ಅರ್ಥ – ಚಿನ್ನದ ಕೂದಲುಳ್ಳ ಆ ಅಗ್ನಿಯು (ಹೊಗೆಯು) ಮಬ್ಬಿನ ಹಾಸಿನೊಳಗೆ ಬುಸುಗುಟ್ಟುವ ಹಾವಿನಂತೆಯೂ, ಬಿರುಸಾದ ಗಾಳಿಯಂತೆಯೂ ತೋರುತ್ತಾನೆ. ಅವನು ಬಹಳ ಬೆಳಗುವವನೂ, ಚಟುವಟಿಕೆಯಿಂದ ಕೂಡಿ ಮನಃಪೂರ್ವಕ ಕೆಲಸಮಾಡುವ ದಾಸಿಯರಂತಿರುವ ಉಷೆಯರನ್ನು ಬಲ್ಲವನೂ ಆಗಿದ್ದಾನೆ.

ಯಜುರ್ವೇದದ ತೈತ್ತಿರೀಯ ಸಂಹಿತೆಯಲ್ಲಿ, ಬ್ರಾಹ್ಮಣದಲ್ಲಿ ಮತ್ತು ವೇದಾಂಗ ಜ್ಯೋತಿಷದಲ್ಲಿ ಸರ್ಪಗಳು ಆಶ್ಲೇಷಾ ನಕ್ಷತ್ರದ ದೇವತೆಗಳಾಗಿದ್ದು ಅಹಿರ್ಬುಧ್ನ್ಯನು ಉತ್ತರಾಭಾದ್ರಾ ನಕ್ಷತ್ರದ ದೇವತೆಯಾಗಿದ್ದಾನೆ! ತೈತ್ತಿರೀಯ ಬ್ರಾಹ್ಮಣದಲ್ಲಿ ವಿವರಿಸಲ್ಪಟ್ಟಿರುವ ನಕ್ಷತ್ರೇಷ್ಟಿಯಲ್ಲಿ–ಸರ್ಪಗಳಿಗೂ, ಅಹಿರ್ಬುಧ್ನ್ಯನಿಗೂ ಇತರ ದೇವತೆಗಳಂತೆಯೇ ಹವಿಸ್ಸು ಮತ್ತು ಪುರೋಡಾಶಗಳು ಅರ್ಪಿಸಲ್ಪಡುತ್ತವೆ. ಆಗ ಪಠಿಸಲಾಗುವ ಪುರೋನುವಾಕ್ಯಗಳು ಮತ್ತು ಯಾಜ್ಯಾನುವಾಕ್ಯಗಳು ಮುಂದೆ ಕೊಟ್ಟಂತಿವೆ.

ಇದಂ ಸರ್ಪೇಭ್ಯೋ ಹವಿರಸ್ತು ಜುಷ್ಟಮ್ । ಆಶ್ರೇಷಾ ಯೇಷಾಮನುಯಂತಿ ಚೇತಃ । ಯೇ ಅಂತರಿಕ್ಷಂ ಪೃಥಿವೀಂ ಕ್ಷಿಯಂತಿ । ತೇನಃ ಸರ್ಪಾಸೋ ಹವಮಾಗಮಿಷ್ಠಾಃ ॥ ತೈ. ಬ್ರಾ. ೩-೧-೧-೫ ॥

ಅರ್ಥ – ನಮ್ಮ ಈ ಹವಿಸ್ಸು ಸರ್ಪಗಳಿಗೆ ಪ್ರಿಯವಾಗಲಿ. ಆಶ್ಲೇಷಾ ನಕ್ಷತ್ರಗಳು ಯಾವ ಸರ್ಪಗಳ ಚೇತಸ್ಸನ್ನು ಹಿಂಬಾಲಿಸಿ ಸಾಗುತ್ತವೋ ಯಾವ ಸರ್ಪಗಳು ಭೂಮಿಯಲ್ಲಿ ಮತ್ತು ಅಂತರಿಕ್ಷದಲ್ಲಿ ವಾಸಿಸುತ್ತವೋ ಅವುಗಳು ನಮ್ಮ ಯಜ್ಞಕ್ಕೆ ಬರಲಿ.

ಯೇ ರೋಚನೇ ಸೂರ್ಯಸ್ಯಾಪಿ ಸರ್ಪಾಃ । ಯೇ ದಿವಂ ದೇವೀಮನು ಸಂಚರಂತಿ ಯೇಷಾಮಾಶ್ರೇಷಾ ಅನುಯಂತಿ ಕಾಮಮ್ । ತೇಭ್ಯಃ ಸರ್ಪೇಭ್ಯೋ ಮಧು ಮಜ್ಜುಹೋಮಿ ॥ ತೈ. ಬ್ರಾ. ೩-೧-೧-೬ ॥

ಅರ್ಥ - ಯಾವ ಸರ್ಪಗಳು ಸೂರ್ಯನ ಪ್ರಕಾಶದಲ್ಲಿರುತ್ತವೋ ಯಾವ ಸರ್ಪಗಳು ದ್ಯುಲೋಕ ರೂಪೀದೇವಿಯ ಹಿಂದೆ ಸಂಚರಿಸುತ್ತವೋ ಯಾವ ಸರ್ಪಗಳ ಇಚ್ಛೆಯನ್ನು ಆಶ್ಲೇಷಾ ನಕ್ಷತ್ರಗಳು ಅನುಸರಿಸುತ್ತವೋ ಆ ಸರ್ಪಗಳಿಗೆ ನಾನು ಮಧುರವಾದ ಹವಿಸ್ಸನ್ನು ಅರ್ಪಿಸುತ್ತೇನೆ.

ಅಹಿರ್ಬುಧ್ನಿಯ ಪ್ರಥಮಾನ ಏತಿ । ಶ್ರೇಷ್ಠೋ ದೇವಾನಾಮುತ ಮಾನುಷಾಣಾಮ್ । ತಂ ಬ್ರಾಹ್ಮಣಾಃ ಸೋಮಪಾಃ ಸೋಮ್ಯಾಸಃ ಪ್ರೋಷ್ಠಪದಾಸೋ ಅಭಿರಕ್ಷಂತಿ ಸರ್ವೇ ॥ ತೈ. ಬ್ರಾ. ೩-೧-೨-೯ ॥

ಅರ್ಥ – ದೇವತೆಗಳಲ್ಲಿಯೂ, ಮನುಷ್ಯರಲ್ಲಿಯೂ ಶ್ರೇಷ್ಠನಾದ ಅಹಿರ್ಬುಧ್ನಿಯನು ವಿಸ್ತರಿಸುತ್ತ ಸಾಗುತ್ತಾನೆ. ಮಂಚದ ಕಾಲುಗಳೆಂದು ಕರೆಯಲ್ಪಡುವ ಉತ್ತರಾ ಭಾದ್ರಾನಕ್ಷತ್ರಗಳೂ ಸೋಮಪಾಯಿಗಳೂ. ಸುಂದರ ಶರೀರಿಗಳೂ ಆದ ಬ್ರಾಹ್ಮಣರೂ ಆ ದೇವನನ್ನು ಸುತ್ತುವರಿದು ಕಾಯುತ್ತಾರೆ.

ಚತ್ವಾರ ಏಕಮಭಿಕರ್ಮದೇವಾಃ । ಪ್ರೋಷ್ಠಪದಾಸ ಇತಿ ಯಾನ್ವದಂತಿ : ತೇ ಬುಧ್ನಿಯಂ ಪರಿಷದ್ಯಂಸ್ತುವಂತಃ । ಅಹಿಂ ರಕ್ಷಂತಿ ನಮಸೋಪಸದ್ಯ ॥ ತೈ. ಬ್ರಾ. ೩-೧-೨-೯ ॥

ಅರ್ಥ- ಒಂದೇ ಕೆಲಸದಲ್ಲಿ ನಿರತರಾಗಿರುವ ಹಾಗೂ ಮಂಚದ ಕಾಲುಗಳೆಂದು ಕರೆಯಲ್ಪಡುವ ಯಾವ ನಾಲ್ಕು ನಕ್ಷತ್ರರೂಪೀ ದೇವತೆಗಳಿವೆಯೋ ಅವುಗಳು ಪೂಜಾಯೋಗ್ಯನಾದ ಅಹಿರ್ಬುಧ್ನಿಯನನ್ನು ನಮಸ್ಕಾರದೊಂದಿಗೆ ಸ್ತುತಿಸುತ್ತ ಸುತ್ತವರಿದು ಕಾಯುತ್ತಾರೆ.

ತೈತ್ತಿರೀಯ ಬ್ರಾಹ್ಮಣದಲ್ಲಿ ಸರ್ಪಗಳಿಗೆ ಸಂಬಂಧಪಟ್ಟ ಬೇರೊಂದು ಉಲ್ಲೇಖವಿದೆ–

ದೇವಾ ವೈ ಸರ್ಪಾಃ। ತೇಷಾಮಿಯಂ ರಾಜ್ಞೀ ॥ ಯತ್ಸರ್ಪರಾಜ್ಞಿಯಾ ಋಗ್ಭಿಃಸ್ತುವಂತಿ । ಅಸ್ಯಾಮೇವ ಪ್ರತಿತಿಷ್ಠಂತಿ ॥ ತೈ. ಬ್ರಾ. ೨–೨-೬–೨॥

ಅಂದರೆ– ಸರ್ಪಗಳೇ ದೇವತೆಗಳು ಮತ್ತು ಇವಳು (= ಈ ಭೂಮಿಯು) ಸರ್ಪಗಳ ರಾಣಿ. ಆದುದರಿಂದ ಅವಳನ್ನು ಸರ್ಪರಾಜ್ಞೀ ಋಚೆಗಳಿಂದ (ಋ. ೧೦-೧೮೯ನೆಯ ಸೂಕ್ತ) ಸ್ತುತಿಸುತ್ತಾರೆ. ಮತ್ತು ಅವಳಲ್ಲಿ ಸ್ಥಿರವಾಗಿ ನಿಲ್ಲುತ್ತಾರೆ.

ಯಜುರ್ವೇದದ ತೈತ್ತಿರೀಯ ಸಂಹಿತೆಯ ಐದನೆಯ ಕಾಂಡದ ಐದನೆಯ ಪ್ರಪಾಠಕದ ಹತ್ತನೆಯ ಅನುವಾದಕದಲ್ಲಿ ಸರ್ಪಾಹುತಿಯ ಮಂತ್ರಗಳಿವೆ. ಮತ್ತು ಅವುಗಳಲ್ಲಿ ಪ್ರತಿಯೊಂದು ದಿಕ್ಕಿನ ಅಧಿಪತಿಯ ಹೆಸರಿನೊಂದಿಗೆ ಒಂದೊಂದು ಸರ್ಪದ ಹೆಸರು ಬರುತ್ತದೆ. ಮತ್ತು ಆ ಅಧಿಪತಿಗೂ ಸರ್ಪಕ್ಕೂ ಆಹುತಿಗಳು ಅರ್ಪಿಸಲ್ಪಡುತ್ತವೆ.

ಯಜುರ್ವೇದದ ವಾಜಸನೇಯಿ ಸಂಹಿತೆಯಲ್ಲಿ ಮುಂದಿನ ಮಂತ್ರವಿದೆ-

ಯೇವಾವಟೇಷು ಶೇರತೇ ತೇಭ್ಯಃ ಸರ್ಪೇಭ್ಯೋ ನಮಃ

॥ ವಾ. ಸಂ. ೧೩.೭ ॥

ಅಂದರೆ– ಬಿಲಗಳಲ್ಲಿ ಮಲಗಿಕೊಳ್ಳುವ ಸರ್ಪಗಳಿಗೆ ನಮಸ್ಕಾರ. ಆಶ್ವಲಾಯನ ಗೃಹ್ಯಸೂತ್ರಗಳಿಗನುಸಾರವಾಗಿ ಋಗ್ವೇದಿಗಳು ಶ್ರಾವಣ ಮಾಸದ ಹುಣ್ಣಿಮೆಯ ದಿನ ಜರುಗಿಸುವ ಒಂದು ವಿಶಿಷ್ಟ ಕಾರ್ಯದ ಹೆಸರು "ಶ್ರವಣಾ ಕರ್ಮ"ವೆಂದು ಹೆಸರಾಗಿದೆ. ಆ ದಿನ ಗೃಹಪತಿಯು ಒಂದು ದರ್ವಿ ತುಂಬ ಸಕ್ತು ವನ್ನು ಹಿಡಿದುಕೊಂಡು ಸೂರ್ಯಾಸ್ತದ ತರುವಾಯ ಮನೆಯ ಹೊರಗೆ ಹೋಗಿ ಪೂರ್ವದಿಕ್ಕಿನಲ್ಲಿ ಒಂದು ಶುಚಿಯಾದ ಸ್ಥಳದಲ್ಲಿ ಜಲವನ್ನು ಪ್ರೋಕ್ಷಿಸಿದ ತರುವಾಯ **"ಸರ್ಪದೇವ ಜನೇಭ್ಯಃ ಸ್ವಾಹಾ"** ಎಂದು ಉಚ್ಚರಿಸುತ್ತ ಆ ಸಕ್ತುವನ್ನು ಆ ಸ್ಥಳ ದಲ್ಲಿಟ್ಟು. **"ಯೇ ಸರ್ಪಾಃ ಪಾರ್ಥಿವಾ ಯ ಅಂತರಿಕ್ಷ್ಯಾ ಯೇ ದಿವ್ಯಾ ಯೇ ದಿಶ್ಯಾಸ್ತೇಭ್ಯ ಇಮಂ ಬಲಿಮಾಹಾರ್ಷಂ ತೇಭ್ಯ ಇಮಂ ಬಲಿಮುಪಾಕರೋಮಿ ॥ ಆಶ್ವ. ಗೃಹ್ಯ: ೨–೧-೯ ॥** ಅಂದರೆ– "ಭೂಮಿಯಲ್ಲಿ, ಅಂತರಿಕ್ಷದಲ್ಲಿ, ದ್ಯುಲೋಕ ದಲ್ಲಿ ಮತ್ತು ದಿಕ್ಕು ದಿಕ್ಕುಗಳಲ್ಲಿ ಇರುವಂಥ ಎಲ್ಲ ಸರ್ಪಗಳಿಗೆ ನಾನು ಈ ಬಲಿ ಯನ್ನು ತಂದಿದ್ದೇನೆ. ಮತ್ತು ಆ ಎಲ್ಲ ಸರ್ಪಗಳಿಗೆ ನಾನು ಈ ಬಲಿಯನ್ನು ಅರ್ಪಿಸು ತ್ತೇನೆ" ಎಂಬುದಾಗಿ ನಿವೇದಿಸಲಿಕ್ಕಿದೆ.

ಹಾಗೆಯೇ ಸ್ವಾಧ್ಯಾಯ ಕಾಲದಲ್ಲಿ ದೇವ, ಋಷಿ, ಆಚಾರ್ಯ ಮೊದಲಾದವರೊಂದಿಗೆ ನಾಗಗಳಿಗೂ ತರ್ಪಣ ಕೊಡಲಿಕ್ಕಿದೆ-

ದೇವತಾಸ್ತರ್ಪಯತಿ-ಪ್ರಜಾಪತಿರ್ಬ್ರಹ್ಮಾ ವೇದಾದೇವಾ ಋಷಯಃ — ಗಂಧರ್ವಾಪ್ಸರಸೋನಾಗಾಃ–ಆಚಾರ್ಯಾಸ್ತೇಸರ್ವೇತೃಪ್ಯಂತು ॥ಆಶ್ವಗೃಹ್ಯ ೩-೪॥

ಹಿಂದಿನ ವಿವರಗಳಿಂದ ಸರ್ಪಗಳ ಆರಾಧನೆಯು ಆರ್ಯಜನರಲ್ಲಿ ವೇದ ಪೂರ್ವಕಾಲದಿಂದ ಪ್ರಚಲಿತವಿದ್ದು ಮುಂದೆ ಸಾಗಿ ಬಂದಿದ್ದಿತೆಂದು ಮತ್ತು ಆ ಆರಾಧನಾ ಕ್ರಮವು ಈಗ ಪ್ರಚಲಿತವಿರುವ ಕ್ರಮದಿಂದ ಕೊಂಚ ಭಿನ್ನವಾಗಿದ್ದಿತೆಂದು ಸಂದೇಹಕ್ಕೆಡೆಯಿಲ್ಲದಂತೆ ಸಿದ್ಧವಾಗುತ್ತದೆ.

ಯಜ್ಞಗಳು ಪ್ರಚಲಿತವಿದ್ದ ಕಾಲದಲ್ಲಿ ದೇವತೆಗಳಿಗೆ ಯಜ್ಞಕಾಲದಲ್ಲಿ ಹವಿಸ್ಸಿನ ಆಹುತಿಗಳು ಅರ್ಪಿಸಲ್ಪಡುತ್ತಿದ್ದುವು. ಕಾಲಕ್ರಮೇಣ ಯಜ್ಞಗಳು ವಿರಳವಾಗುತ್ತ ಸಾಗಿ ಕೊನೆಗೆ ನಿಂತೇ ಹೋದುವು. ಆ ನಡುವೆ ವೈದಿಕ ಜನರಿಗೆ ಸರ್ಪಗಳ ಮತ್ತು ಅಹಿರ್ಬುಧ್ನಿಯರೊಳಗಿನ ಭೇದವು ಮರೆತು ಹೋಗಿತ್ತು. ಅದರೆ ಅಹಿರ್ಬುಧ್ನಿಯ ಎಂಬುದು ಅಗ್ನಿಯ ಹೆಸರೆಂಬುದು ಗೊತ್ತಿತ್ತು ಹಾಗಾಗಿ ಆ ಕಾಲದ ವೈದಿಕ ಜನರಲ್ಲಿ ಕೆಲವರು ತಮ್ಮ ದೇವನಾದ ಅಗ್ನಿಯನ್ನು ಶಿವನ ರೂಪದಿಂದಲೂ, ಕೆಲವರು ನಾಗನ ರೂಪದಿಂದಲೂ ಕೆಲವರು ಅಶ್ವತ್ಥವೃಕ್ಷದ ರೂಪದಿಂದಲೂ

ಆರಾಧಿಸತೊಡಗಿದರು ಮತ್ತು ಆ ಆರಾಧನೆಗೆ ಒಂದು ಹೊಸ ವಿಧಿಯನ್ನು ರೂಪಿಸಿದರು. ಆ ಹೊಸ ವಿಧಿಯೇ ಈಗ ಪ್ರಚಲಿತವಿರುವ ಆರಾಧನಾಕ್ರಮವಾಗಿದೆ.

ಮುಂದೆ ದೇವಾಲಯಗಳನ್ನು ಕಟ್ಟಿ ಗರ್ಭಗೃಹದ ಒಳಗೆ ದೇವತೆಗಳ ಪ್ರತಿಮೆಗಳನ್ನು ಸ್ಥಾಪಿಸುವ ಕ್ರಮವು ಪ್ರಚಲಿತವಾದಾಗ ಕೆಲವರು ಶಿವನ ಪ್ರತಿಮೆಗಳನ್ನೂ, ಕೆಲವರು ನಾಗನ ಪ್ರತಿಮೆಗಳನ್ನೂ ಪ್ರತಿಷ್ಠಿಸಿದರು. ಆದರೆ ಅಗ್ನಿಯನ್ನು ಅಹಿರ್ಬುಧ್ನಿಯ ಅಂದರೆ ಆಳದಲ್ಲಿ ಅಥವಾ ತಗ್ಗಿನಲ್ಲಿ ಇರುವ ಹಾವೆಂದು ಕರೆದುದರಿಂದ ನಾಗನ ಆಲಯಗಳನ್ನು ಸುತ್ತಲೂ ಗುಡ್ಡಗಳಿರುವ ತಗ್ಗು ಸ್ಥಳದಲ್ಲಿ ಕಟ್ಟಿಸಿ, ಅದರೊಳಗೆ ನಾಗನ ಪ್ರತಿಮೆಯನ್ನು ಸ್ಥಾಪಿಸಿ ಆರಾಧಿಸತೊಡಗಿದರು. ಬೇರೆ ಕೆಲವರು ಭೂಮಿಯಲ್ಲಿ ಆಳವಾದ ಗಾರ್ಹಪತ್ಯ ಚಿತಿಯನ್ನು ನಿರ್ಮಿಸಿ ಅದರಲ್ಲಿ ನಾಗನ ವಿಗ್ರಹವನ್ನು ಸ್ಥಾಪಿಸಿ ಆರಾಧಿಸತೊಡಗಿದರು. ಮತ್ತೆ ಕೆಲವರು ಅಶ್ವತ್ಥ ವೃಕ್ಷದ ಬುಡದಲ್ಲಿ ನಾಗನ ವಿಗ್ರಹಗಳನ್ನಿಟ್ಟು ಆರಾಧಿಸತೊಡಗಿದರು. ಆದುದರಿಂದ ಆ ಕ್ರಮವೇ ಈಗಲೂ ಪ್ರಚಲಿತವಿದೆ.

ನಾಗಾರಾಧನೆಯು ದಕ್ಷಿಣ ಭಾರತದಲ್ಲಿ ಪ್ರಚಲಿತವಿದೆಯೆಂಬ ಒಂದೇ ಒಂದು ಆಧಾರದಿಂದ ಡಾಕ್ಟರ್ ಫ್ಲೀಟ್, ಬೆಲಫರ್ ಮೊದಲಾದ ಬ್ರಿಟಿಷ್ ವಿದ್ವಾಂಸರು ನಾಗಾರಾಧನೆಯು ಮೂಲದಲ್ಲಿ ದ್ರಾವಿಡ ಜನರಿಗೆ ಸೇರಿದುದೆಂಬ ಕಲ್ಪನೆಯನ್ನು ಮುಂದೆ ತಂದಿದ್ದಾರೆ, ಅಷ್ಟೇ ಅಲ್ಲ ಅವರಲ್ಲಿ ಕೆಲವರು "ನಾಗ" ಎಂಬ ಶಬ್ದವು ಸಂಸ್ಕೃತ ಭಾಷೆಯದಾಗಿದ್ದರೂ, ಅದು ಸಂಸ್ಕೃತ ಭಾಷೆಯದಲ್ಲವೆಂದುಮೂ ಇದೆ, ಬೊಡೆನ್ ಸಂಸ್ಕೃತ ವಿದ್ವಾಂಸ ಸರ್ ಮೊನಿಯರ್ ಎಮ್. ವಿಲಿಯಮ್ಸ್ ಎಂಬವರು ತಾನು ಸಂಪಾದಿಸಿದ "ಸಂಸ್ಕೃತ ಇಂಗ್ಲಿಷ್ ಶಬ್ದಕೋಶ"ದಲ್ಲಿ ನಾಗ ಶಬ್ದವು ಬಹುಶ "ನಗ" ಶಬ್ದದಿಂದಾಗಲೀ "ನಗ್ನ" ಶಬ್ದದಿಂದಾಗಲೀ ಹುಟ್ಟಿರಲಾರದೆಂದು ವ್ಯಾಖ್ಯಾನಿಸಿದುದು ಅದಕ್ಕೊಂದು ದೃಷ್ಟಾಂತವಾಗಿದೆ- "नाग" naga (probably neither from na-ga nor nagna) ಸಂಸ್ಕೃತದ ಮಹಾ ಪಂಡಿತರಾದ ಅವರು ನಾಗ ಶಬ್ದದ ಹುಟ್ಟಿನ ಸಂಬಂಧದಲ್ಲಿ ಅಂಥ ಸಂದೇಹವನ್ನು ಸೂಚಿಸಿದುದು ಆಶ್ಚರ್ಯಕರವಾಗಿದೆ. ಏಕೆಂದರೆ ನಾಗ ಶಬ್ದವು ನಗ ಶಬ್ದದಿಂದ ಅತ್ಯಂತ ಸರಳ ರೀತಿಯಲ್ಲಿ ಸಿದ್ಧಿಸುವ ಶಬ್ದವಾಗಿದೆ.

ಸಂಸ್ಕೃತದ "ನಡೆ" ಅಥವಾ "ಹೋಗು" ಎಂಬರ್ಥದ **"ಗಮ್"** ಧಾತುವು ಭಾವಾರ್ಥಕ ನಾಮರೂಪದಿಂದ ಅನ್ಯ ಶಬ್ದಗಳೊಂದಿಗೆ ಕೂಡುವಾಗ **"ಗ"** ಎಂಬ ರೂಪವನ್ನು ತಳೆಯುತ್ತದೆ. **"ಅನುಗ"** ಅಂದರೆ ಹಿಂಬಾಲಿಸಿ ನಡೆಯುವವ. **"ಉರಗ"** ಅಂದರೆ "ಎದೆಯಿಂದ ನಡೆದು ಸಾಗುವ" ಹಾವು ಇತ್ಯಾದಿ. ಆ **"ಗ"** ಎಂಬ ಪದವು ನಿಷೇಧಾರ್ಥಕ **"ನ"** ಎಂಬ ಪದದಿಂದ ಕೂಡಿ **"ನಗ"** ಎಂಬ ಭಾವ

ನಾಮವಾಗಿ ಮಾರ್ಪಟ್ಟಾಗ ಅದರ ಅರ್ಥವು "ನಡೆದು ಹೋಗಲಾರದಂಥ ಬೆಟ್ಟ ಮತ್ತು ಹಾವು" ಎಂದಾಗುವುದು. ನಗ ಎಂಬ ಶಬ್ದವು ಬೆಟ್ಟ ಎಂಬರ್ಥದಲ್ಲಿ ಮೊತ್ತ ಮೊದಲು ಅಥರ್ವ ವೇದದ ಒಂದು ಮಂತ್ರದಲ್ಲಿ ಪ್ರಯೋಗಿಸಲ್ಪಟ್ಟಿದೆ.

ಯಾನಿ ನಕ್ಷತ್ರಾಣಿ ದಿವ್ಯಂತರಿಕ್ಷೇ
ಅಪ್ಸು ಭೂಮೌ ನಗೇಷು ದಿಕ್ಷು ।
ಪ್ರಕಲ್ಪಯಂಶ್ಚಂದ್ರಮಾ ಯಾನ್ಯೇತಿ
ಸರ್ವಾಣಿ ಮಮೈತಾನಿ ಶಿವಾನಿಸಂತು ॥ ಅಥರ್ವ-೧೯–೮.೧ ॥

ಅರ್ಥ– ಯಾವ ನಕ್ಷತ್ರಗಳು ದಿವದಲ್ಲಿ, ಅಂತರಿಕ್ಷದಲ್ಲಿ, ದಿವ್ಯಜಲಗಳಲ್ಲಿ ಭೂಮಿಯಲ್ಲಿ ಬೆಟ್ಟಗಳಲ್ಲಿ ಮತ್ತು ದಿಕ್ಕು-ದಿಕ್ಕುಗಳಲ್ಲಿ ಇವೆಯೋ, ಚಂದ್ರನು ಯಾವ ನಕ್ಷತ್ರಗಳನ್ನು ಗೌರವಿಸುತ್ತ ಸಾಗುತ್ತಾನೋ ಆ ಎಲ್ಲ ನಕ್ಷತ್ರಗಳು ನನಗೆ ಮಂಗಲದಾಯಕಗಳಾಗಲಿ.

"ನಗ" ಶಬ್ದವನ್ನು ಅದರ ಅಪತ್ಯ ಸೂಚಕವನ್ನಾಗಿ ಮಾರ್ಪಡಿಸುವುದಾದರೆ ಅದರ ರೂಪವು **"ನಾಗ"** ಎಂದಾಗುವುದು. ಮತ್ತು ನಗದ ಅಂದರೆ ಬೆಟ್ಟದ ಸಂತತಿ "ನಾಗ" ಎಂಬ ಶಬ್ದವು "ಆನೆ" ಎಂಬರ್ಥವನ್ನೂ ಹಾವಿನ ಸಂತತಿ "ನಾಗ" ಎಂಬ ಶಬ್ದವು "ಹಾವು" ಎಂಬ ಅರ್ಥವನ್ನೂ ಕೊಡುವುದು. ಹಾವಿನ ಸಂತತಿಯು ಹಾವಲ್ಲದೇ ಬೇರೇನಾಗಲು ಸಾಧ್ಯವಿದೆ? ಅಂದರೆ–**"ನಗದ ಅಪತ್ಯವೇ ನಾಗ"** ಎಂದು ವ್ಯಾಕರಣ ರೀತ್ಯಾ ಸಿದ್ಧವಾಗುತ್ತದೆ.

ನಾಗ ಶಬ್ದವು ಪ್ರಯೋಗಿಸಲ್ಪಟ್ಟಿರುವ ಒಂದು ಪ್ರಮಾಣವು ಹಿಂದೆ ಆಶ್ವಲಾಯನ ಗೃಹ್ಯಸೂತ್ರಗಳೊಳಗಿನ ತರ್ಪಣ ರೂಪದಿಂದ ಉದಹರಿಸಲಾಗಿದೆ. ಸೂತ್ರ ಗ್ರಂಥಗಳಿಗಿಂತ ಪ್ರಾಚೀನವಾದ ಶತಪಥ ಬ್ರಾಹ್ಮಣದ ೧೧–೨–೭–೧೨ರಲ್ಲಿ **"ಮಹಾನಾಗ"** ಶಬ್ದದ ಉಲ್ಲೇಖವಿದೆ. ಆದರೆ ಆ ಕಂಡಿಕೆಯಲ್ಲಿ ಆ ಶಬ್ದಕ್ಕೆ ಸಂಬಂಧಪಟ್ಟ ಇತರ ವಿವರಗಳಿಲ್ಲವೆಂಬ ಕಾರಣದಿಂದ ಜೋಡೆನ್ ಸಂಸ್ಕೃತ ವಿದ್ವಾಂಸ ಪ್ರೊ. ಎ. ಎ. ಮುಕ್‌ಡೊನೆಲ್ ಅವರು ಆ ಶಬ್ದದ ಅರ್ಥದ ಸಂಬಂಧದಲ್ಲಿ ಅಂದರೆ ಅದು ಆನೆಯೋ ಅಥವಾ ಹಾವೋ ಎಂಬುದರಲ್ಲಿ ಸಂದೇಹವನ್ನು ವ್ಯಕ್ತಗೊಳಿಸಿದ್ದಾರೆ. ಆದರೆ ಆ ಕಂಡಿಕೆಯು ಬಂದಿರುವ ಇಡೀ ಬ್ರಾಹ್ಮಣವು ಅಗ್ನಿಗೆ ಸಂಬಂಧಪಟ್ಟುದಾದುದರಿಂದ ಶತಪಥ ಬ್ರಾಹ್ಮಣವನ್ನು ಇಂಗ್ಲೀಷಿಗೆ ಭಾಷಾಂತರಿಸಿದ ಪ್ರೊ. ಜೂಲಿಯಸ್ ಎಗೆಲಿಂಗ್ ಎಂಬ ವಿದ್ವಾಂಸರು ಅದರ ಅರ್ಥವನ್ನು "Great Serpant" ಅಂದರೆ ಬಹಳ ದೊಡ್ಡ ಹಾವೆಂದು ಹೇಳಿದ್ದಾರೆ.

ಹಿಂದೆ ಉದಹರಿಸಿದ ಪ್ರಮಾಣಗಳ ಆಧಾರದಿಂದ ಶಿವ ಮತ್ತು ನಾಗ ಎಂಬ ದೇವತೆಗಳು ಮೂಲದಿಂದಲೂ ಆರ್ಯಜನರ ವೈದಿಕ ದೇವತೆಗಳಾಗಿದ್ದರೆಂದೂ,

ಆರ್ಯ ಜನರ ವೈದಿಕ ಧರ್ಮದ ಪ್ರಚಾರದೊಂದಿಗೆನೇ ಆ ದೇವತೆಗಳ ಆರಾಧನೆಯು ಇಡೀ ಭಾರತ ವರ್ಷದಲ್ಲಿ ಪ್ರಚಲಿತವಾಗಿದ್ದಿತೆಂದೂ ಸಂದೇಹ ಪಡದೇ ಹೇಳ ಬಹುದಾಗಿದೆ. ಹಾಗಿದ್ದರೂ ಆ ವಿಷಯವನ್ನು ಬೇರೊಂದು ರೀತಿಯಿಂದ ವಿಮರ್ಶಿ ಸುವ ಆವಶ್ಯಕತೆಯಿದೆ.

ಅಂದರೆ ದ್ರಾವಿಡ ಜನರಲ್ಲಿ ಇಲ್ಲವೇ ಭಾರತ ವರ್ಷದ ಮೂಲ ನಿವಾಸಿ ಗಳಲ್ಲಿ ಈಗಿನ ಅರ್ಥದ "ದೇವರು" ಎಂಬ ಕಲ್ಪನೆಯಾಗಲೀ ಆ ಬಗೆಯ ಭಾವನೆ ಯಾಗಲೀ ಇದ್ದಿತೆಂದು ಸಿದ್ಧಪಡಿಸುವ ಪ್ರಮಾಣಗಳಿವೆಯೋ ? ಅವರಲ್ಲಿ ಶಿವಾರಾಧನೆಯು ತಲೆಯೆತ್ತಲು ಕಾರಣವಿದ್ದಿತೇ ? ಅಥವಾ ಅವರಲ್ಲಿ ಶಿವನ ಮೂಲಕ್ಕೆ ಸಂಬಂಧಪಟ್ಟ ಲಿಖಿತ ಪ್ರಮಾಣಗಳಿವೆಯೋ ? ಸಂಸ್ಕೃತದಲ್ಲಿ ಶಿವನಿ ಗಾಗಿ ಪ್ರಯೋಗಿಸಲ್ಪಟ್ಟಿರುವ ಯಾವ ಪ್ರಾಚೀನ ಹೆಸರುಗಳಿವೆಯೋ ಅವುಗಳ ಮೂಲವಾಗಲೀ, ಸಮಾನಾರ್ಥಕ ಹೆಸರುಗಳಾಗಲೀ ದ್ರಾವಿಡ ಗುಂಪಿನ ಭಾಷೆಗಳಲ್ಲಿ ಇವೆಯೋ ? ಮುಂತಾದ ಪ್ರಶ್ನೆಗಳನ್ನು ಬಗೆಹರಿಸಬೇಕಾಗಿದೆ. ಮತ್ತು ಆ ಸಂದರ್ಭದಲ್ಲಿ ಆರ್ಯಜನರಲ್ಲಿ "ದೇವರು" ಅಥವಾ "ದೇವ" ಎಂಬ ಶಬ್ದ ಮತ್ತು ಅದರಿಂದ ವ್ಯಕ್ತವಾಗುವ ಭಾವನೆಯ ಮೂಲವಾವುದೆಂಬುದನ್ನು ಕೂಡ ಸ್ಪಷ್ಟ ಪಡಿಸಬೇಕಾಗಿದೆ.

ಆದಿ ಕಾಲದ ಆರ್ಯ ಜನರು ಸೂರ್ಯನನ್ನು, ಚಂದ್ರನನ್ನು ಮತ್ತು ನಕ್ಷತ್ರಗಳನ್ನು ದಿವದಲ್ಲಿ ಇರುವವರು ಮತ್ತು ಬೆಳಗುವವರು ಎಂಬ ಕಾರಣದಿಂದ "ದೇವರು" ಎನ್ನುತಿದ್ದರೆಂದು ಹಿಂದೆ ಆರ್ಯ ಜನರ ವೈದಿಕ ಸಂಸ್ಕೃತಿ ಎಂಬ ಅಧ್ಯಾಯದಲ್ಲಿ ವಿವರಿಸಿದೆ. ಅಗ್ನಿಯು ಕೂಡ ದ್ಯುಲೋಕದಲ್ಲಿ ಹುಟ್ಟಿ ಸಿಡಿಲಿನ ರೂಪದಿಂದ ಧರೆಗಿಳಿದಿದ್ದನೆಂಬ ಮತ್ತು ಬೆಳಗುತಿದ್ದನೆಂಬ ಕಾರಣದಿಂದ ಅವನು ಕೂಡ ದೇವನಾಗಿದ್ದ. ಅಗ್ನಿಯಿಂದ ಅವರಿಗೆ ತುಂಬಾ ಉಪಕಾರವಾಗುತಿದ್ದು ದರಿಂದ ಅವರು ಅಗ್ನಿಯನ್ನು ಬಹಳ ಪ್ರೀತಿಯಿಂದ ಮತ್ತು ಶ್ರದ್ಧೆಯಿಂದ ಆರಾಧಿಸುತಿದ್ದರು. ಆದರೆ ಆದಿ ಕಾಲದ ಆರ್ಯ ಜನರು ಸೂರ್ಯನನ್ನು, ಚಂದ್ರ ನನ್ನು ನಕ್ಷತ್ರಗಳನ್ನು ಮತ್ತು ಅಗ್ನಿಯನ್ನು "ದೇವರು" ಎಂದು ಕರೆದುದರಲ್ಲಿ ಅಡಗಿದ್ದ ಭಾವನೆಯಲ್ಲಿ ಮತ್ತು ಉಪನಿಷತ್ಕಾಲದ ಆಧ್ಯಾತ್ಮ ಚಿಂತಕರು ವಿವರಿಸ ತೊಡಗಿದ ಅದೃಶ್ಯ ಶಕ್ತಿಯನ್ನು ಪರಮಾತ್ಮ ಅಥವಾ ದೇವ ಎಂದು ಕರೆದುದರಲ್ಲಿ ಅಡಗಿದ್ದ ಭಾವನೆಯಲ್ಲಿ ಮಹದಂತರವಿತ್ತು. ಅಂದರೆ ಋಗ್ವೇದದ ಪ್ರಾಚೀನತಮ ಋಚೆಗಳನ್ನು ರಚಿಸಿದ ಋಷಿಗಳಿಗೆ ಅಥವಾ ಕವಿಗಳಿಗೆ ನಿರಾಕಾರ, ಸರ್ವವ್ಯಾಪಕ, ಸರ್ವಾಂತರ್ಯಾಮಿ, ಸರ್ವಶಕ್ತ, ಸರ್ವಜ್ಞ– ಪರಮಾತ್ಮನ ಕಲ್ಪನೆಯೇ ಇರಲಿಲ್ಲ. ಅವರು ಕಣ್ಣಾರೆ ಕಾಣಬಹುದಾದ ದೇವರ ಆರಾಧನೆಯಿಂದಲೇ ಪೂರ್ಣ ತೃಪ್ತ ರಾಗಿದ್ದರು. ಅರ್ಥಾತ್ ಅವರ ಜ್ಞಾನ ಶಕ್ತಿಯು ಸೀಮಿತವಾಗಿದ್ದಂತೆಯೇ ಅವರ

ದೇವರ ಶಕ್ತಿಯೂ ಪರಿಮಿತವಾಗಿತ್ತು. ಆದರೆ ಅವರಿಗೆ ತಮ್ಮ ಮೂಲನೆಲೆಯನ್ನು ತೊರೆಯುವಂತೆ ಮಾಡಿದ ದುರ್ಭರ ಘಟನೆಯೂ ತರುವಾಯ ಅವರಿಗೆ ಒದಗಿದ ಕಷ್ಟಗಳ ಪರಂಪರೆಯೂ, ಹೊಸ ಪ್ರದೇಶದ ಭೌಗೋಲಿಕ ಮತ್ತು ಖಗೋಲಿಕ ಪರಿಸ್ಥಿತಿಗಳೂ ಅವರ ಮೊದಲಿನ ಭಾವನೆಗಳಲ್ಲಿ ಮತ್ತು ನಂಬಿಕೆಗಳಲ್ಲಿ ಕ್ಷೋಭೆವನ್ನು ಹುಟ್ಟಿಸಿದ್ದುವು. ಹಾಗಾಗಿ ಅವರು ಕಣ್ಣಿಗೆ ಕಾಣಿಸದ ಹಾಗೂ ಸರ್ವಶಕ್ತನಾದ ಒಬ್ಬ ದೇವನನ್ನು ಅರಸುವಂತಾಗಿತ್ತು. ಅರ್ಥಾತ್ ವೈದಿಕ ಸಾಹಿತ್ಯದ ಕೊನೆಯ ಅಂಶಗಳಲ್ಲಿ ಅಭಿವ್ಯಕ್ತವಾಗುವ ಆಧ್ಯಾತ್ಮಿಕ ಜ್ಞಾನವು ಹಂತ ಹಂತವಾಗಿ ವಿಕಸಿತವಾಗಿತ್ತು. ಅದುವೇ ವೇದಾಂತವಾಗಿತ್ತು.

ಆದರೆ ದ್ರಾವಿಡ ಜನರಿಗೆ ಆರ್ಯ ಜನರ ಸಂಪರ್ಕವಾಗುವ ಮೊದಲು ದಿವ್ಯಶಕ್ತಿಯು ಅಥವಾ ಪರಮಾತ್ಮ ಎಂಬುದರ ಕಲ್ಪನೆಯಿದ್ದಿತೆಂದು ಸಿದ್ಧಗೊಳಿಸುವ ಯಾವುದೊಂದು ಪ್ರಾಚೀನ ಪ್ರಮಾಣವೂ ಈ ತನಕ ಬೆಳಕಿಗೆ ಬಂದಿಲ್ಲ. ಅಲ್ಲದೇ ಸಕಲ ಬಗೆಯ ಪ್ರಾಕೃತಿಕ ಸೌಕರ್ಯಗಳಿಂದ ಸಂಪನ್ನರಾಗಿದ್ದ ದ್ರಾವಿಡ ಜನರಿಗೆ ದೇವರನ್ನು ಇಲ್ಲವೇ ಮಾನವಾತೀತ ಅದೃಶ್ಯ ಶಕ್ತಿಯೊಂದನ್ನು ಅರಸಬೇಕಾದ ಆವಶ್ಯಕತೆಯೂ ಇರಲಿಲ್ಲ. ಆದುದರಿಂದಲೇ ದ್ರಾವಿಡ ಗುಂಪಿನ ಭಾಷೆಗಳಲ್ಲಿ ದೇವರನ್ನು ಇಲ್ಲವೇ ದಿವ್ಯ ಶಕ್ತಿಯನ್ನು ಮತ್ತು ಆಧ್ಯಾತ್ಮಿಕ ವಿಚಾರಗಳನ್ನು ವ್ಯಕ್ತಗೊಳಿಸಲಾಗುವಂಥ ಶಬ್ದಗಳಿಲ್ಲ. ಡಾ. ರಾಬರ್ಟ್ ಕಾಲ್ಡವೆಲ್ ಅವರು ದ್ರಾವಿಡ ಭಾಷಾ ಸಮುದಾಯದಲ್ಲಿ ಪ್ರಾಚೀನವೆಂದು ನಿರ್ಧರಿಸಿದ ತಮಿಳಿನಲ್ಲಿ ಕಂದಳಿ. ಕಡವುಳ್. ಆಂಡವನ್ ಮೊದಲಾದ ಶಬ್ದಗಳು ಈಗ "ದೇವರು" ಎಂಬರ್ಥದಲ್ಲಿ ಪ್ರಯೋಗಿಸಲ್ಪಡುತ್ತಿವೆಯಾದರೂ, ಅವುಗಳ ಮೂಲಾರ್ಥವು "ದೇವರು" ಎಂದಿಲ್ಲ. ಮತ್ತು ಆ ಶಬ್ದಗಳ ಹುಟ್ಟು ಕೂಡ ಹೆಚ್ಚು ಪ್ರಾಚೀನವಲ್ಲ. ಏಕೆಂದರೆ ಆ ಶಬ್ದಗಳ ರೂಪಾಂತರಗಳಾಗಲೀ, ಸಮಾನಾರ್ಥಕ ಶಬ್ದಗಳಾಗಲೀ ದ್ರಾವಿಡ ಗುಂಪಿನ ಇತರ ಭಾಷೆಗಳಲ್ಲಿ ಇಲ್ಲ.

ಆರ್ಯ ಜನರು ಪ್ರಾಚೀನ ಕಾಲದಲ್ಲಿ ಸೂರ್ಯ ಮೊದಲಾದ ದೇವತೆಗಳಿಗೆ ಪೂಜ್ಯತೆಯನ್ನು ಕೊಡುತ್ತಿದ್ದಂತೆಯೇ ದ್ರಾವಿಡ ಜನರು ತಮ್ಮ ಅರಸನಿಗೆ ಬಹಳ ಗೌರವವನ್ನು ಕೊಡುತ್ತಿದ್ದರು. ಅರಸನೇ ಅವರ ಭಾಗ್ಯ ವಿಧಾತನಾಗಿದ್ದನು. ಅವರು ತಮ್ಮ ಅರಸನನ್ನು "ಕೋ" ಎಂತಲೂ ಯುವರಾಜನನ್ನು ಇಳಂ + ಕೋ (ಇಳಂಗೋ) ಎಂತಲೂ ಅರಮನೆಯನ್ನು ಕೋ + ಇಲ್ (ಕೋವಿಲ್) ಎಂತಲೂ ಹೆಸರಿಸಿದ್ದರು. ಆರ್ಯಜನರ ಸಂಪರ್ಕದಿಂದ ಅವರಲ್ಲಿ ದೇವ ಮತ್ತು ದೇವಾಲಯಗಳು ಪ್ರಚಾರಕ್ಕೆ ಬಂದ ತರುವಾಯ ಅವರು ಕೋಇಲ್ ಎಂಬ ಶಬ್ದವನ್ನೇ ದೇವಾಲಯ ಎಂಬರ್ಥದಲ್ಲಿ ಉಪಯೋಗಿಸತೊಡಗಿದರು. ಆದರೆ ತಮಿಳಿನಲ್ಲಿ "ಕೋ" ಎಂಬ ಒಂಟಿ ಶಬ್ದವು "ದೇವ" ಎಂಬರ್ಥದಲ್ಲಿ ಪ್ರಯೋಗಿಸಲ್ಪಟ್ಟ

ದೆಯೋ ಎಂಬುದು ಈ ತನಕ ಗೊತ್ತಾಗಿಲ್ಲ. ಹೇಗಿದ್ದರೂ ತಮಿಳಿನಲ್ಲಿ ಪರಮಾತ್ಮ ಅಥವಾ ದೇವರು ಎಂಬುದನ್ನು ಸೂಚಿಸುವ ವಿಶಿಷ್ಟ ಶಬ್ದವು ಇರಲಿಲ್ಲವೆಂದು ಸಂದೇಹವಿಲ್ಲದೇ ಹೇಳಬಹುದು. ಏಕೆಂದರ ತಮಿಳಿನಲ್ಲಿ ದೇವರು ಎಂಬರ್ಥದ ಪ್ರಾಚೀನ ಶಬ್ದವು ಇದ್ದುದಾದರೆ ಅದೇ ಶಬ್ದವಾಗಲೀ ಅದರ ರೂಪಾಂತರವಾಗಲೀ ದ್ರಾವಿಡ ಗುಂಪಿನ ಇತರ ಭಾಷೆಗಳಲ್ಲಿಯೂ ಇರುತ್ತಿದ್ದಿತು. ಆದರೆ ತಮಿಳಿನಷ್ಟೇ ಪ್ರಾಚೀನವಾಗಿರುವ ಹಾಗೂ ತಮಿಳಿನಲ್ಲಿಲ್ಲದ ಹಲವು ಪ್ರಾಚೀನ ಶಬ್ದಗಳನ್ನೂ, ತಮಿಳಿಗಿಂತ ಶುದ್ಧವಾದ ಕೆಲವು ಶಬ್ದರೂಪಗಳನ್ನೂ ಹೊಂದಿರುವ ಕನ್ನಡದಲ್ಲಿ ಪರಮಾತ್ಮ ಎನ್ನಲು "ದೇವರು" ಎಂಬ ಶಬ್ದದ ಹೊರತು ಬೇರೆ ಶಬ್ದವಿಲ್ಲ. ಹಾಗೆಯೇ ತುಳುವಿನಲ್ಲಿ ಕೂಡ "ದೇವೆರ್" ಹೊರತಾಗಿ ಬೇರೆ ಶಬ್ದವಿಲ್ಲ. ಅರ್ಥಾತ್ ಆ ಎರಡು ಭಾಷೆಗಳಲ್ಲಿ ಪರಮಾತ್ಮ ಎಂಬರ್ಥದಲ್ಲಿ ದೇವರು ಮತ್ತು ದೇವೆರ್ ಎಂಬ ಶಬ್ದಗಳ ಹೊರತು ಬೇರೆ ಶಬ್ದವಿಲ್ಲದಿರುವುದು ತಮಿಳಿನಲ್ಲಿ ಕೂಡ ದೇವರು ಎಂಬರ್ಥದ ಶಬ್ದವಿರಲಿಲ್ಲವೆಂಬುದರ ಪರೋಕ್ಷ ಪ್ರಮಾಣವಾಗಿದೆ.

ಅಷ್ಟು ಮಾತ್ರವಲ್ಲದೇ ತಮಿಳಿನಲ್ಲಿ ಚಿತ್ರವನ್ನು ಇಲ್ಲವೇ ಮಕ್ಕಳ ಆಟಿಗೆಯನ್ನು ಸೂಚಿಸಲು "ಬೊಮ್ಮೈ" ಎಂಬ ಶಬ್ದವಿದ್ದರೂ ದೇವತೆಗಳ ವಿಗ್ರಹ ಅಥವಾ ಪ್ರತಿಮೆ ಎಂಬುದನ್ನು ಸೂಚಿಸಲು ವಿಶಿಷ್ಟ ಶಬ್ದವಿಲ್ಲ. ಆದುದರಿಂದ ದ್ರಾವಿಡ ಭಾಷೆಗಳ ತುಲನಾತ್ಮಕ ವ್ಯಾಕರಣವನ್ನು ರಚಿಸಿದ ಬ್ರಿಟಿಷ್ ಪಾದ್ರಿ ಡಾ. ರಾಬರ್ಟ್ ಕಾಲ್ಡ್‌ವೆಲ್ ಅವರು ಆ ವ್ಯಾಕರಣ ಗ್ರಂಥದ ಉಪೋದ್ಘಾತದಲ್ಲಿ ಮುಂದಿನಂತೆ ಅಂದಿದ್ದಾರೆ– "ನಾವು ಬಾಇಬಲಿನ ತಮಿಳು ಭಾಷಾಂತರದ ಶೈಲಿಯನ್ನು ಪರಿಷ್ಕೃತ ಕಾವ್ಯಮಯ ಭಾಷೆಯ ಮಟ್ಟಕ್ಕೆ ಏರಿಸಲು ಬಯಸಿದರೆ ತಮಿಳಿನಲ್ಲಿ ಸಂಸ್ಕೃತ ಶಬ್ದಗಳೇ ಉಳಿಯಲಾರವು. ಆದರೆ ನಾವು "ಪ್ರತಿಮೆ" ಎಂಬ ಒಂದು ಶಬ್ದವನ್ನು ಮಾತ್ರ ಶುದ್ಧವಾದ ಹಾಗೂ ಕಾವ್ಯದ ಶಬ್ದದಿಂದ ವ್ಯಕ್ತಗೊಳಿಸಲಾರೆವು. ಏಕೆಂದರೆ ಪ್ರತಿಮೆ ಎಂಬ ಶಬ್ದ ಮತ್ತು ವಸ್ತು- ಎರಡೂ ಪ್ರಾಚೀನ ತಮಿಳು ರೂಢಿಗೂ, ವಿಚಾರ ಧಾರೆಗೂ ಪರಕೀಯಗಳಾಗಿದ್ದು ಅವುಗಳು ಬ್ರಾಹ್ಮಣರಿಂದ ಪೌರಾಣಿಕ ಪದ್ಧತಿಯ ಧಾರ್ಮಿಕ ವಿಚಾರಗಳೊಂದಿಗೆ ಮತ್ತು ಮೂರ್ತಿ ಪೂಜೆಯೊಂದಿಗೆ ತಮಿಳು ನಾಡಿನಲ್ಲಿ ಪ್ರಚಲಿತವಾದವುಗಳಾಗಿವೆ.[1]

---

1. If we wish to raise the style of the translation to a refined and classsical pitch Sanskrit would almost entirely disappear. Of the entire number of words contained in this formula there is only one word, which could not be expressed with faultless propriety and poetical elegance in equivalents of pure Dravidian origin. That word is "image". Both word and thing are foreign to primitive Tamil usages and habits of thought, and were

ಹಾಗೆಯೇ ಅವರು ಮುಂದೆ – "ತಮಿಳರಲ್ಲಿ ವಂಶಪರಂಪರಾಗತ ಪುರೋಹಿತ ವರ್ಗವಾಗಲೀ, ವಿಗ್ರಹಗಳಾಗಲೀ, ಸ್ವರ್ಗ, ನರಕ, ಆತ್ಮ, ಪಾಪ ಮೊದಲಾದುವುಗಳ ಕಲ್ಪನೆಯಾಗಲೀ ಇರಲಿಲ್ಲ. ಅವರು ದೇವರ ಅಸ್ತಿತ್ವವನ್ನು ಒಪ್ಪುತ್ತಿದ್ದರು. ಮತ್ತು ಅವನನ್ನು "ಕೋ" ಇಲ್ಲವೇ "ಅರಸ" ಎಂಬ ವಾಸ್ತವಿಕ ಹೆಸರಿನಿಂದ ಕರೆಯುತ್ತಿದ್ದರು. ಆದರೆ ಅವರು ದೇವರನ್ನು ಯಾವ ರೀತಿಯಿಂದ ಆರಾಧಿಸುತ್ತಿದ್ದರೆಂಬುದರ ಕುರುಹನ್ನು ಕೂಡ ಕಾಣಲಿಲ್ಲ" ಅಂದಿದ್ದಾರೆ.[2]

ದ್ರಾವಿಡ ಜನರು ಸಾಮಾನ್ಯವಾಗಿ ಗುಣವಂತನಾದ ತಮ್ಮ ಅರಸನನ್ನು ಮತ್ತು ತಮ್ಮೊಳಗಿನ ವೀರ ಯೋಧರನ್ನು ಬಹಳವಾಗಿ ಗೌರವಿಸುತ್ತಿದ್ದರು. ಅಂಥ ವೀರರು ರಣರಂಗದಲ್ಲಿ ಶೌರ್ಯದಿಂದ ಕಾದುತ್ತ ಮಡಿದರೆಂದಾದರೆ ಅವರು ಆ ವೀರರ ಸ್ಮಾರಕವಾಗಿ ಒಂದು ಕಲ್ಲನ್ನು ಇಡುತ್ತಿದ್ದರು. ಇಲ್ಲವೇ ಕಲ್ಲಿನ ಒಂದು ಕಂಬವನ್ನು ನಿಲ್ಲಿಸುತ್ತಿದ್ದರು. ಮತ್ತು ಅವರ ಸ್ಮರಣಾರ್ಥವಾಗಿ ಕಾಲ ಕಾಲಕ್ಕೆ ಉತ್ಸವ-ಸಮಾರಂಭಗಳನ್ನು ಜರುಗಿಸಿ ಆ ಕಲ್ಲಿನ ಬಳಿಯಲ್ಲಿ ಭತ್ತದ ಇಲ್ಲವೇ ಅನ್ನದ ರಾಶಿಯನ್ನು ಹಾಕುತ್ತಿದ್ದರು. ಅದು ಅವರ ಆರಾಧನಾ ಕ್ರಮವಾಗಿತ್ತು. ಈ ಬಗೆಯ ಆರಾಧನಾ ಕ್ರಮವು ಅತ್ಯಂತ ಪ್ರಾಚೀನವಾಗಿದ್ದು ಆರ್ಯ ಪೂರ್ವ ಕಾಲದ ಅವಶೇಷವಾಗಿತ್ತು. ಆ ಕ್ರಮವು ಇಡೀ "ತಮಿಳು ಸಂಗಮ್" ಕಾಲದಲ್ಲಿ ಪ್ರಚಲಿತವಿದ್ದಿತಲ್ಲದೇ ಅದರ ತರುವಾಯವೂ ಮುಂದುವರಿದಿದ್ದಿತೆಂದು ಶ್ರೀಮಾನ್ ಕೆ. ಎ. ನೀಲಕಂಠ ಶಾಸ್ತ್ರಿ ಎಮ್. ಎ. ಅವರು ಬರೆದ ದಕ್ಷಿಣ ಭಾರತದ ಇತಿಹಾಸ ಎಂಬ ಗ್ರಂಥದಲ್ಲಿದೆ.[3] ಆ ಆರಾಧನೆಯೇ ತುಳುನಾಡಿನಲ್ಲಿ "ಭೂತದ ಆರಾಧನೆ" ಎಂದು ಹೆಸರಾಗಿದೆ.

---

introduced into Tamil country by the Bramins with Puranic system of religious ideas and the worship of idols. page 51.

2 They were without hereditory priests and idols and appear to have had no idea of heaven or hell, of soul or sin, but they acknowledged the existence of God, whom they styled "ko" or king, a realistic title, little known to orthodox Hinduism. They erected to his honour a temple which they called "Koil" God's house, but I cannot find any trace of the nature of the worship which they offered to him. page 118.

3 One poem in the Purananuru affirms that there are only four castes (kudi) tudian, panan paraiyan and kadamban, and only one god worthy of being worshipped with paddy strewn before him, namely the hero-stone recalling the fall of a brave warrior in battle These castes and this worship were very great

ಪ್ರಾಚೀನ ಕಾಲದ ದ್ರಾವಿಡ ಜನರಲ್ಲಿ ಅಥವಾ ತಮಿಳರಲ್ಲಿ ದೇವರ ಕಲ್ಪನೆಯಾಗಲೀ ಮೂರ್ತಿ ಪೂಜೆಯಾಗಲೀ, ಲಿಂಗಾರಾಧನೆಯಾಗಲೀ, ಪ್ರಚಲಿತವಿರಲಿಲ್ಲವೆಂದು ಸಿದ್ಧಪಡಿಸಲು ಹಿಂದೆ ಉದಹರಿಸಿದ ಪ್ರಮಾಣಗಳು ಮತ್ತು ಕೊಟ್ಟ ವಿವರಗಳು ಪರ್ಯಾಪ್ತವಾಗಿವೆ.

---

antiquity, perhaps, survivals from pre-Aryan times. The practice of erecting hero-stones and offering regular worship to them continued throughout the "Sangam age" and many centuries after. A History of South India page 131.

೯. ಬ್ರಾಹ್ಮೀ ಲಿಪಿಯ ಮೂಲ

ಶಕವರ್ಷ ೧೭೦೬ರಲ್ಲಿ ಸರ್ ವಿಲಿಯಮ್ ಜೋನ್ಸ್ ಎಂಬ ಸಂಸ್ಕೃತ ಪ್ರೇಮಿ ಬ್ರಿಟಿಷ್ ಅಧಿಕಾರಿಯೊಬ್ಬರು ಬ್ರಾಹ್ಮೀ ವರ್ಣಗಳು ಮತ್ತು ಅವುಗಳಿಂದ ರೂಪಾಂತರ ಹೊಂದಿದ ನಾಗರೀ ವರ್ಣಗಳು ರೋಮನ್ ವರ್ಣಗಳಂತೆಯೇ ಧ್ವನ್ಯಾತ್ಮಕಗಳಾಗಿರುವುದರಿಂದ ಬ್ರಾಹ್ಮೀ ವರ್ಣಮಾಲೆಯು ಕೂಡ ರೋಮನ್ ವರ್ಣಮಾಲೆಯಂತೆಯೇ ಸೆಮಿಟಿಕ್ ವರ್ಣಮಾಲೆಯಿಂದ ರೂಪಾಂತರ ಹೊಂದಿ ಹುಟ್ಟಿದುದಾಗಿರಬೇಕೆಂಬ ಅಭಿಪ್ರಾಯವನ್ನು ವ್ಯಕ್ತಗೊಳಿಸಿದರು. ಅವರ ಆ ಅಭಿಪ್ರಾಯವು ಬಹಳ ದೀರ್ಘ ಪರಿಣಾಮಕಾರಿಯೂ ಹಲವು ಉದ್ದೇಶಗಳಿಂದ ಕೂಡಿದ್ದುದೂ ಆಗಿದ್ದಿತೆಂದು ಅವರ ತರುವಾಯ ಇತರ ಪಾಶ್ಚಾತ್ಯ ವಿದ್ವಾಂಸರು ಬ್ರಾಹ್ಮೀ ಲಿಪಿಯ ಹುಟ್ಟಿನ ಮತ್ತು ಪ್ರಾಚೀನತೆಯ ಸಂಬಂಧದಲ್ಲಿ ಪ್ರಚಾರ ಮಾಡಿದ ಬಗೆ ಬಗೆಯ ಕಲ್ಪನೆಗಳಿಂದ ಸಿದ್ಧವಾಗುತ್ತದೆ. ಅಂದರೆ ಅವರ ಒಂದು ಉದ್ದೇಶವು ವೇದ ಕಾಲೀನ ಭಾರತೀಯರಲ್ಲಿ ಲಿಪಿಯು ಪ್ರಚಲಿತವಿರಲಿಲ್ಲವೆಂದು ಸಾಧಿಸುವುದಾಗಿದ್ದಿತಾದರೆ ಎರಡನೆಯ ಉದ್ದೇಶವು ಸೆಮಿಟಿಕ್ ವರ್ಗದ ಲಿಪಿಗಳು ಬ್ರಾಹ್ಮೀ ಲಿಪಿಗಿಂತ ಪ್ರಾಚೀನವಾದವುಗಳೆಂದು ಸಾಧಿಸಿ ಅವರು ಉಪಯೋಗಿಸುತ್ತಿದ್ದ ರೋಮನ್ ಲಿಪಿಯ ಮೂಲವಾಗಿದ್ದ ಯವನಾನೀ ಅಥವಾ ಗ್ರೀಕ್ ವರ್ಣಮಾಲೆಯು ಬ್ರಾಹ್ಮೀ ವರ್ಣ ಮಾಲೆಯ ಮರಿಯಾಗಿದ್ದಿತ್ತೆಂಬ ಐತಿಹಾಸಿಕ ಸತ್ಯವನ್ನು ಅಡಗಿಸುವುದಾಗಿದ್ದಿತು. ಮೂರನೆಯ ಉದ್ದೇಶವು ಬ್ರಿಟಿಷರು ಭಾರತ ವರ್ಷದಲ್ಲಿ ಸ್ಥಾಪಿಸಿದ್ದ ಪಾಠಶಾಲೆಗಳಲ್ಲಿ ಕಲಿಯುವ ಮಕ್ಕಳಿಗೆ ರೋಮನ್ ಲಿಪಿಯ ಮೂಲಕ ದೇಶೀ ಭಾಷೆಗಳನ್ನು ಕಲಿಸುವುದಾಗಿದ್ದಿತು. ಅಂದರೆ ದೇಶೀ ಭಾಷೆಗಳನ್ನು ಬರೆಯಲು ಮತ್ತು ಮುದ್ರಿಸಲು ರೋಮನ್ ಅಕ್ಷರಗಳನ್ನು ಉಪಯೋಗಿಸಿ ದೇವನಾಗರೀ ಲಿಪಿಯ ಉಪಯೋಗವನ್ನು ಕೊನೆಗಾಣಿಸುವುದಾಗಿದ್ದಿತು. ಆದರೆ ಆ ಕಾಲದ ಬ್ರಿಟಿಷ್ ಅಧಿಕಾರಿಗಳು ಉತ್ತರ ಪ್ರದೇಶದ ಪಾಠಶಾಲೆಗಳಲ್ಲಿ ಹಿಂದೀ ಭಾಷೆಯನ್ನು ಬರೆಯಲು ದೇವನಾಗರೀ ಲಿಪಿಯ ಬದಲಿಗೆ ರೋಮನ್ ಲಿಪಿಯನ್ನು ಉಪಯೋಗಿಸ ತೊಡಗಿದೊಡನೆಯೇ ಅಲ್ಲಿನ ಜನರು ಚಳವಳವನ್ನು ಹೂಡಿ ಪ್ರಬಲವಾದ ವಿರೋಧವನ್ನು ಪ್ರಕಟಿಸಿದುದರಿಂದ ಬ್ರಿಟಿಷ್ ಅಧಿಕಾರಿಗಳು ಆ ಪ್ರಯತ್ನವನ್ನು ಬಿಟ್ಟುಕೊಟ್ಟರು. ಮತ್ತು ಹಲವು ಮಂದಿ ಪಾಶ್ಚಾತ್ಯ ವಿದ್ವಾಂಸರಿಗೆ ವೇತನ ಕೊಟ್ಟು ಅವರ ಮೂಲಕ ಸಂಸ್ಕೃತ ಸಾಹಿತ್ಯದ ಸಂಶೋಧನ ಮಾಡಿಸುವ ನೆವದಿಂದ ಬ್ರಾಹ್ಮೀ ಲಿಪಿಯ ಹುಟ್ಟಿನ ಸಂಬಂಧದಲ್ಲಿ ಮತ್ತು ವೇದ ಮಂತ್ರಗಳ ರಚನಾಕಾಲದ ಸಂಬಂಧದಲ್ಲಿ ಬಗೆ ಬಗೆಯ ಕಲ್ಪನೆಗಳನ್ನು ಹೊರಗೆಡವಿಸತೊಡಗಿದರು.

ಅಂಥ ಸಂಶೋಧನದ ಫಲವಾಗಿ ಸಂಸ್ಕೃತ ಸಾಹಿತ್ಯದ ಇತಿಹಾಸವನ್ನು

ಬರೆಯು ತೊಡಗಿದ ಡಾಕ್ಟರ್ ಆಲ್ಬರ್ಟ್ ವೇಬರ್ ಎಂಬ ಜರ್ಮನ್ ವಿದ್ವಾಂಸರು ಬ್ರಾಹ್ಮೀಲಿಪಿಯು ಫಿನಿಶಿಯನ್ ಜನರು ಉಪಯೋಗಿಸುತಿದ್ದ ಸೆಮಿಟಿಕ್ ವರ್ಣಮಾಲೆಯಿಂದ ಹುಟ್ಟಿದುದೆಂದರು. ಅವರ ತರುವಾಯ ಡಾ. ಎ. ಸೀ. ಬರ್ನೆಲ್ ಅವರು ಡಾ. ವೇಬರರ ವಾದವನ್ನು ಸಮರ್ಥಿಸಿ ಬ್ರಾಹ್ಮೀ ವರ್ಣಮಾಲೆಯು ಫಿನಿಶಿಯನ್ ಜನರ ಆರಮೈಕ್ ವರ್ಣಮಾಲೆಯಿಂದ ರೂಪಾಂತರವಾದುದೆಂದರು. ಒಟ್‌ಫ್ರೆಡ್ ಮುಲ್ಲರ್ ಎಂಬವರು ಯವನ ರಾಜಕುಮಾರ ಅಲೆಕ್ಸಾಂಡರನು ಭಾರತವರ್ಷದ ಮೇಲೆ ಆಕ್ರಮಣ ಮಾಡಿದ ಕಾಲದಲ್ಲಿ ಭಾರತೀಯರಿಗೆ ಯವನರ ಲಿಪಿಯು ಪರಿಚಯವಾಯಿತೆಂತಲೂ ಭಾರತೀಯರು ಯವನರ ಲಿಪಿಯಿಂದ ಬ್ರಾಹ್ಮೀ ಲಿಪಿಯನ್ನು ರೂಪಿಸಿಕೊಂಡರೆಂತಲೂ ವ್ಯಾಖ್ಯಾನಿಸಿದರು. ಹಾಗೆಯೇ ಡಾ. ಪ್ರಿನ್ಸೆಪ್ ಮತ್ತು ಪ್ರೊ ಸೆನಾರ್ಟ್ ಮೊದಲಾದವರು ಕೂಡ ಯವನಾನಿಯಿಂದಲೇ ಬ್ರಾಹ್ಮೀ ವರ್ಣಮಾಲೆಯು ಹುಟ್ಟಿದ್ದಿತೆಂದರು. ಪೊ. ಫ್ರೆಡ್ರಿಕ್ ಮೆಕ್ಸ್ ಮುಲ್ಲರರಾದರೋ ಆಚಾರ್ಯ ಪಾಣಿನಿಯು ಅಷ್ಟಾಧ್ಯಾಯಿಯಲ್ಲಿ, ಅವನಿಗಿಂತ ಮೊದಲಿನಿಂದ ಲಿಪಿಯೂ, ಲಿಖಿತ ಗ್ರಂಥಗಳೂ ಪ್ರಚಲಿತವಿದ್ದುವೆಂದು ಸ್ಪಷ್ಟವಾಗಿ ಸೂಚಿಸುವ **ಲಿಪಿಕರ ॥ ೩-೨-೨೧ ॥**[1] **ಅಧಿಕೃತ್ಯಕೃತೇ ಗ್ರಂಥೇ ॥ ೪-೩-೮೭ ॥ ಕೃತೇ ಗ್ರಂಥೇ ॥೪-೩-೧೧೬॥** ಮೊದಲಾದ ಸೂತ್ರಗಳಿದ್ದರೂ ಅವುಗಳನ್ನು ಮರೆಮಾಜಿ ಪಾಣಿನಿಯ ವ್ಯಾಕರಣದ ಪರಿಭಾಷೆಯಲ್ಲಿ ಅವನಿಗಿಂತ ಮೊದಲು ಬರವಣಿಗೆಯು ಅಸ್ತಿತ್ವದಲ್ಲಿದ್ದಿತೆಂದು ಭಾವಿಸ ಬಹುದಾದ ಒಂದೇ ಒಂದು ಶಬ್ದವಾದರೂ ಇಲ್ಲವೆಂದು ತಾನು ಬರೆದ ಸಂಸ್ಕೃತ ಸಾಹಿತ್ಯದ ಇತಿಹಾಸದಲ್ಲಿ ಬಹಳ ದೃಢತಾಪೂರ್ವಕ ವಿವರಿಸಿದರು.[2] ಹಾಗೆಯೇ ಎಮ್. ಜೆ. ಹಲೇವಿ ಅವರು ಶಕಪೂರ್ವ ಐದನೆಯ ಶತಮಾನದ ಸುಮಾರಿಗೆ ಉತ್ತರ ಭಾರತದಲ್ಲಿ ಪ್ರಚಲಿತವಿದ್ದ ಆರಮೈಕ್ ಮತ್ತು ಖರೋಷ್ಠೀ ಎಂಬ ಎರಡು ವರ್ಣಮಾಲೆಗಳೊಳಗಿನ ಕೆಲವು ಕೆಲವು ವರ್ಣಗಳು ರೂಪಾಂತರ ಹೊಂದಿ ಬ್ರಾಹ್ಮೀವರ್ಣಮಾಲೆಯಾಗಿದ್ದಿತೆಂದರು. ಆ ಪ್ರಕಾರವಾಗಿ ಅನೇಕಾನೇಕ ಪಾಶ್ಚಾತ್ಯ ವಿದ್ವಾಂಸರು ಬ್ರಾಹ್ಮೀ ಲಿಪಿಯ ಹುಟ್ಟಿನ ಸಂಬಂಧದಲ್ಲಿ ಮುಂದಿಗೊಂದರಂತೆ ಹಲವಾರು ಬಗೆಯ ಅಭಿಪ್ರಾಯಗಳನ್ನು ವ್ಯಕ್ತಗೊಳಿಸಿದರು. ಅವರ ಕೆಲವು ಕಲ್ಪನೆಗಳಲ್ಲಿ ಮತ್ತು ವಿವರಗಳಲ್ಲಿ ಕೊಂಚ ವಿರೋಧವಿದ್ದಿತಾದರೂ ವೇದ ಕಾಲೀನ ಆರ್ಯ ಜನರಲ್ಲಿ ಲಿಪಿಯು ಪ್ರಚಲಿತವಿರಲಿಲ್ಲ ಎಂಬುವುದರಲ್ಲಿ ಮತ್ತು ಅವರಲ್ಲಿ ಪ್ರಚಲಿತವಾದ ಬ್ರಾಹ್ಮೀ ಲಿಪಿಯು ಯಾವುದೋ ಒಂದು

---

[1] ಕೃಣೋ ಹೇತುತಾಚ್ಛೀಲ್ಯಾನುಲೋಮ್ಯೇಷು ॥೩-೨-೨೦॥ ದಿವಾವಿಭಾನಿಶಾಪ್ರಭಾಭಾಸ್ಕಾರಾಂತಾನಂತಾದಿಬಹುನಾಂದೀ ಕಿಂಲಿಪಿಲಿಬಿಬಲಿಭಕ್ತಿಕರ್ತೃಚಿತ್ರಕ್ಷೇತ್ರಸಂಖ್ಯಾಜಂಘಾಬಾಹ್ವಹರ್ಯತ್ತದನುರರುಃಷು ॥ ೩-೨-೨೧ ॥

[2] I maintain that there is not a single word in Panini's terminology which presupposed the existence of writing p. 262.

ಸೆಮಿಟಿಕ್ ವರ್ಣಮಾಲೆಯಿಂದ ರೂಪಾಂತರವಾಗಿದ್ದಿತೆಂಬುದರಲ್ಲಿ ಹಾಗೂ ಬ್ರಾಹ್ಮೀ ಲಿಪಿಯು ಶಕಪೂರ್ವ ಐದನೆಯ ಶತಮಾನಕ್ಕಿಂತ ಪ್ರಾಚೀನವಲ್ಲ ಎಂಬುದರಲ್ಲಿ ಮತಭೇದವಿರಲಿಲ್ಲ. ಆದರೆ ಅವರಲ್ಲೊಬ್ಬನಾದರೂ ದೃಢವಾದ ಪ್ರಮಾಣಗಳನ್ನು ಉದಹರಿಸಿ ತನ್ನ ಅಭಿಪ್ರಾಯವನ್ನು ಸಿದ್ಧಗೊಳಿಸಲಿಲ್ಲ. ಎಲ್ಲರ ವಾದವೂ ಬರಿಯ ಊಹಾಪೋಹವಾಗಿತ್ತು. ಬರಿಯ ಕಪೋಲ ಕಲ್ಪನೆಯಾಗಿತ್ತು.

ಲಿಪಿಯ ವಾದದಲ್ಲಿ ಭಾಗವಹಿಸಿದ ಪಾಶ್ಚಾತ್ಯ ವಿದ್ವಾಂಸರಲ್ಲಿ ತುಂಬಾ ನಿಪುಣರಾಗಿದ್ದ, ಪ್ರೊ. ಜಾರ್ಜ್‌ಬುಹ್ಲರ್ ಎಂಬವರು ಇಡೀ ಭಾರತ ವರ್ಷವನ್ನು ಸಂಚರಿಸಿ ಶಕಪೂರ್ವ ಆರನೆಯ ಶತಮಾನಕ್ಕಿಂತ ಪ್ರಾಚೀನವಾದ ಬ್ರಾಹ್ಮೀ ಲಿಪಿಯ ಲೇಖಗಳಿಲ್ಲವೆಂದು ಮತ್ತು ಆ ಕಾಲದ ಯಾವನೊಬ್ಬ ಭಾರತೀಯ ವಿದ್ವಾಂಸನೂ ಬ್ರಾಹ್ಮೀ ವರ್ಣಮಾಲೆಯ ಮೂಲವಾವುದೆಂದು ಹೇಳಲು ಶಕ್ತನಿಲ್ಲವೆಂದು ಕಂಡು ಕೊಂಡ ತರುವಾಯ, ಫಿನಿಶಿಯನ್ ಜನರ ಮತ್ತು ಮೋಆಬದ ಅರಸನಾದ ಮೇಶಾನ ಶಿಲಾಲೇಖದಲ್ಲಿ ಉಪಯೋಗಿಸಲ್ಪಟ್ಟ – ವರ್ಣಮಾಲೆಗಳನ್ನು ಕೊಟ್ಟು ಅವುಗಳೊಳಗಿನ ಕೆಲವು – ಕೆಲವು ವರ್ಣಗಳು ರೂಪಾಂತರ ಹೊಂದಿಯೇ ಬ್ರಾಹ್ಮೀ ವರ್ಣಮಾಲೆಯು ರೂಪುಗೊಂಡಿದ್ದಿತೆಂದು ಪ್ರತಿಪಾದಿಸಿ "On the Origin of the Indian Brahma Alphabet" ಎಂಬ ಪುಸ್ತಕವನ್ನು ಪ್ರಕಟಿಸಿದರು. ಅವರ ವಿಮರ್ಶೆಯು ಮುಂದೆ ಬರುವುದು. ಅದಕ್ಕಿಂತ ಮೊದಲು ಅರಮ್ಮೈಕ್ ವರ್ಣಮಾಲೆಯ ಸಂಬಂಧದಲ್ಲಿ ತಿಳಿದು ಬಂದ ಕೆಲವು ವಿವರಗಳನ್ನು ತಿಳಿಸುವ ಆವಶ್ಯಕತೆ ಇದೆ.

ಪಾಶ್ಚಿಮಾತ್ಯ ವಿದ್ವಾಂಸರು ಇತ್ತೀಚಿನಿಂದ ಯಾವ ವರ್ಣಮಾಲೆಯನ್ನು ಅರಮ್ಮೈಕ್ ಎಂದು ಕರೆಯ ತೊಡಗಿದ್ದಾರೋ ಅದು ಮೂಲದಲ್ಲಿ ಸೆಮಿಟಿಕ್ ಜನರ ಲಿಪಿಯಾಗಿರದೇ ಪಾರಸೀ ಜನರ ಪಾರಸೀ ಲಿಪಿಯಾಗಿತ್ತು. ಆ ಲಿಪಿಯಿಂದ ಬರೆದ ಒಂದು ಲೇಖವು ಜನರಲ್ ಕನಿಂಘಾಮ್ ಅವರಿಗೆ ತಕ್ಷಶಿಲೆಯಲ್ಲಿ ದೊರಕಿದ್ದಿತಂತೆ. ಮತ್ತು ಅದರಲ್ಲಿ ಪ್ರಿಯದರ್ಶಿ ಎಂಬ ಶಬ್ದವಿರುವುದರಿಂದ ಅದನ್ನು ಅಶೋಕ ಚಕ್ರವರ್ತಿಯ ಕಾಲದ್ದೆಂದು ಹೇಳಬಹುದಂತೆ. ಆದರೆ ಆ ಲಿಪಿಯಿಂದ ಬರೆದ ಬೇರೆ ಯಾವುದೊಂದು ಲೇಖವೂ ಭಾರತವರ್ಷದಲ್ಲಿ ಇಂದಿನ ತನಕ ದೊರೆತಿಲ್ಲ. ಆದುದರಿಂದ ಬ್ರಾಹ್ಮೀ ವರ್ಣಮಾಲೆಯು ಅರಮ್ಮೈಕ್ ವರ್ಣಮಾಲೆಯಿಂದ ಹುಟ್ಟಿದುದೆಂಬ ವಾದವು ವ್ಯರ್ಥವಾಗುತ್ತದೆ.

ಪಾಶ್ಚಾತ್ಯ ವಿದ್ವಾಂಸರು ಅರಮ್ಮೈಕ್ ಎಂದು ಕರೆಯತೊಡಗಿದ ಆ ಲಿಪಿಯು ಪಾರಸೀ ಜನರ ಸ್ವಂತದ ನಿರ್ಮಾಣವಾಗಿತ್ತು. ಮತ್ತು ಅದು ಪಾರಸಿಗಳ ಸಾಮ್ರಾಜ್ಯ ವಿಸ್ತರಣದೊಂದಿಗೆ ಅವರ ಇಡೀ ಸಾಮ್ರಾಜ್ಯದಲ್ಲಿ ಅಂದರೆ ಪಶ್ಚಿಮ ಭಾರತದಿಂದ ಮೊದಲುಗೊಂಡು ಕಿರಿಯ ಆಸ್ಯದ ತನಕವೂ ಅಲ್ಲಿಂದ ಭೂಮಧ್ಯ

ಸಮುದ್ರದ ತೀರದ ಪ್ರದೇಶಗಳನ್ನೊಳಗೊಂಡು ಈಜಿಪ್ತದ ತನಕವೂ ಪಾರಸದ ದಕ್ಷಿಣಕ್ಕಿದ್ದ ಬೆಬಿಲೋನಿಯವನ್ನೊಳಗೊಂಡು ಅರಬದ ತನಕವೂ ಪ್ರಚಲಿತವಾಗಿತ್ತು. ಮತ್ತು ಆ ಲಿಪಿಯೂ, ಪಾರಸೀ ಭಾಷೆಯೂ ಅವರ ಸಾಮ್ರಾಜ್ಯದ ರಾಜಕೀಯ ವ್ಯವಹಾರಗಳಲ್ಲಿ ಉಪಯೋಗಿಸಲ್ಪಡುತಿತ್ತು.

ಪಾರಸಿಗಳ ಹಖಾಮನೀ ಸಾಮ್ರಾಜ್ಯವು ಶಕಪೂರ್ವ ೬೩೬ರಿಂದ ೬೦೮ನೆಯ ವರ್ಷದ ತನಕ ಪಾರಸವನ್ನು ಆಳಿದ ಕುರುಷ (cyrus I) ಚಕ್ರವರ್ತಿಯಿಂದ ಸ್ಥಾಪಿಸಲ್ಪಟ್ಟಿದ್ದಿತು. ಅವನು ಭಾರತ ವರ್ಷದ ವಾಯುವ್ಯ ಪ್ರಾಂತಕ್ಕೆ ಸೇರಿದ್ದ ಕಾಬೂಲ ಪ್ರದೇಶವನ್ನೂ, ಪಶ್ಚಿಮ ಆಸ್ಯದ ಬಾಹ್ಲೀಕ, ಮೀಡಿಯಾ, ಬೆಬಿಲೋನಿಯಾ ಮತ್ತು ಅಸ್ಸಿರಿಯಾ ಪ್ರಾಂತಗಳನ್ನೂ ಗೆದ್ದು ತನ್ನ ಸಾಮ್ರಾಜ್ಯದಲ್ಲಿ ಸೇರಿಸಿದ್ದನು. ಅವನ ಪುತ್ರ ಕಂಬೋಜೀಯ (Cambysus) ಎಂಬವನು ಕಿರಿಯ ಆಸ್ಯವನ್ನು ಗೆದ್ದ ತರುವಾಯ ಭೂಮಧ್ಯ ಸಮುದ್ರ ತೀರದ ಸಕಲ ಪ್ರದೇಶಗಳೊಂದಿಗೆ ಈಜಿಪ್ತವನ್ನೂ ಗೆದ್ದು ತಂದೆಯ ಸಾಮ್ರಾಜ್ಯವನ್ನು ಇನ್ನಷ್ಟು ವಿಸ್ತರಿಸಿದ್ದನು. ಅದರ ತರುವಾಯ ಅವನು ಕಿರಿಯ ಆಸ್ಯದ ಜಲಸಂಧಿಯನ್ನು ದಾಟಿ ಗ್ರೀಸು ದೇಶವನ್ನು ಆಕ್ರಮಿಸಿದ್ದನು. ಅಲ್ಲಿ ಯುದ್ಧ ನಡೆಯುತಿದ್ದಾಗ ಪಾರಸದ ರಾಜಧಾನಿಯಲ್ಲಿ ರಾಜಕೀಯ ಗೊಂದಲವೆದ್ದುದರಿಂದ ಅವನು ಗ್ರೀಸಿನಿಂದ ಯುದ್ಧವನ್ನು ತೊರೆದು ರಾಜಧಾನಿಗೆ ಮರಳಬೇಕಾಯಿತು. ಅವನ ತರುವಾಯ ಶಕಪೂರ್ವ ೬೦೭ರಿಂದ ೫೬೪ನೆಯ ವರ್ಷದ ತನಕ ಪಾರಸ ಸಾಮ್ರಾಜ್ಯವನ್ನಾಳಿದ ಮೊದಲನೆಯ ದಾರಯವುಶ್ (Darius I) ಎಂಬವನು ಪಶ್ಚಿಮ ಭಾರತವನ್ನು ಆಕ್ರಮಿಸಿ ಪಂಜಾಬನ್ನು ಮತ್ತು ಸಿಂಧು ಪ್ರಾಂತವನ್ನು ಗೆದ್ದು ತನ್ನ ಸಾಮ್ರಾಜ್ಯದಲ್ಲಿ ಸೇರಿಸಿದ ತರುವಾಯ ಗ್ರೀಸು ದೇಶದ ಮೇಲೆ ದಂಡೆತ್ತಿ ಹೋಗಿ, ಥ್ರೇಸ್, ಎಥೆನ್ಸ್ ಮೊದಲಾದ ಪ್ರಾಂತಗಳನ್ನು ಗೆದ್ದು ತನ್ನ ಸಾಮ್ರಾಜ್ಯದಲ್ಲಿ ಸೇರಿಸಿದ್ದನು. ಪಾರಸದ ಸೈನ್ಯದಲ್ಲಿ ಪಾರಸಿಕರು ಮಾತ್ರವಲ್ಲದೇ ಭಾರತೀಯ ಮತ್ತು ಯವನ ಸೈನಿಕರೂ, ಸೇನಾಧಿಕಾರಿಗಳೂ ಇರುತಿದ್ದರು, ಮತ್ತು ಪಾರಸಿಗಳು ತಾವು ಗೆದ್ದ ದೇಶಗಳ ಮುಖ್ಯ ಪಟ್ಟಣಗಳಲ್ಲಿ ತಮ್ಮ ಸೈನಿಕ ಶಿಬಿರಗಳನ್ನು ಸ್ಥಾಪಿಸುತಿದ್ದರು. ಹಾಗಾಗಿ ಆ ಶಿಬಿರದಲ್ಲಿನ ಸೈನಿಕರಿಗೂ, ಸೇನಾಧಿಕಾರಿಗಳಿಗೂ ಆ ಎಲ್ಲ ದೇಶಗಳ ಮತ್ತು ಅಲ್ಲಿನ ಜನರ ಪರಿಚಯವಾಗುತಿತ್ತು. ಪಾರಸಿಗಳು ಭಾರತ ವರ್ಷದ ಪಶ್ಚಿಮ ಭಾಗವನ್ನು ಗೆದ್ದು ಆಳತೊಡಗಿದ ತರುವಾಯ ಅಲ್ಲಿನ ರಾಜಕೀಯ ವ್ಯವಹಾರಗಳಿಗಾಗಿ ತಮ್ಮದಾದ ಪಾರಸೀ ಭಾಷೆಯನ್ನೂ ಪಾರಸೀ (ಅರಮೈಕ್) ಲಿಪಿಯನ್ನೂ ಉಪಯೋಗಿಸತೊಡಗಿದ್ದರು.

ಪಾರಸೀ ಬರವಣಿಗೆಯು ಬಲಗಡೆಯಲ್ಲಿ ಪ್ರಾರಂಭವಾಗಿ ಎಡಗಡೆಗೆ ಸಾಗುತಿತ್ತು. ಅದರಲ್ಲಿ ಸಂಸ್ಕೃತ ಭಾಷೆಯನ್ನು ಬರೆಯಲು ಬೇಕಾದಷ್ಟು ವರ್ಣಗಳಿರಲಿಲ್ಲ. ಆದುದರಿಂದ ಪಾರಸೀ ವರ್ಣಮಾಲೆಯನ್ನು ಉಪಯೋಗಿಸಿ ಸಂಸ್ಕೃತ ಭಾಷೆಯನ್ನು

ಬರೆಯಲು ಸಾಧ್ಯವಿರಲಿಲ್ಲ. ಹಾಗಾಗಿ ಭಾರತೀಯರು ತಮ್ಮ ಭಾಷೆಯನ್ನು ಬರೆಯಲು ಪಾರಸೀ ವರ್ಣಮಾಲೆಯನ್ನು ಉಪಯೋಗಿಸುವಂತಿರಲಿಲ್ಲ. ಭಾರತ ವರ್ಷದಲ್ಲಿ ಮೊದಲಿನಿಂದಲೂ ಬ್ರಾಹ್ಮೀವರ್ಣಮಾಲೆಯು ಪ್ರಚಲಿತವಿದ್ದುದರಿಂದ ಭಾರತೀಯರು ತಮ್ಮ ಸ್ವಕೀಯ ವ್ಯವಹಾರಗಳಲ್ಲಿ ಬ್ರಾಹ್ಮೀವರ್ಣಮಾಲೆಯನ್ನೇ ಉಪಯೋಗಿಸುತಿದ್ದರು.

ಪಾರಸೀ ಲಿಪಿಯು ಗಂಧಾರ ಪ್ರಾಂತದಲ್ಲಿ ಹೆಚ್ಚು ಕಾಲದ ತನಕ ಪ್ರಚಲಿತ ವಿದ್ದಿತೆನ್ನಬಹುದು, ಏಕೆಂದರೆ ಆ ಲಿಪಿಯು ತರುವಾಯದ ಕಾಲದಲ್ಲಿ ಕೊಂಚ ರೂಪಾಂತರ ಹೊಂದಿ ಮತ್ತು ಹಲವು ಹೊಸ ವರ್ಣಚಿಹ್ನೆಗಳನ್ನು ಸೇರಿಸಿಕೊಂಡು "ಖರೋಷ್ಠೀ" ಎಂಬ ಹೆಸರಿನಿಂದ ಅಲ್ಲಿ ಪ್ರಚಲಿತವಾಗಿತ್ತು. ಅಂದರೆ ಪಾಶ್ಚಾತ್ಯರು ಅರೆಮ್ಯಿಕ್ ಎಂದು ಕರೆದ ಪಾರಸೀ ಲಿಪಿಯಿಂದ ರೂಪಾಂತರ ಹೊಂದಿದ ಲಿಪಿಯು ಖರೋಷ್ಠೀ ಆಗಿದ್ದಿತೇ ಹೊರತು ಬ್ರಾಹ್ಮೀ ಆಗಿರಲಿಲ್ಲ. ಪ್ರೊ. ಜಾರ್ಜ್ ಬ್ಯುಹ್ಲರರು ಕೂಡ ಪಾರಸಿಗಳ ಆಳ್ವಿಕೆಯಿಂದಾಗಿಯೇ ಖರೋಷ್ಠೀ ಲಿಪಿಯು ವಿಕಸಿತವಾಗಿದ್ದಿ ತೆಂಬುದನ್ನು ಒಪ್ಪುತ್ತಾರೆ.[1]

ಆದರೆ ಪ್ರೊ, ಬ್ಯುಹ್ಲರರಾಗಲೀ ಇತರ ಪಾಶ್ಚಾತ್ಯ ವಿದ್ವಾಂಸರೇ ಆಗಲಿ ಬ್ರಾಹ್ಮೀಲಿಪಿಯ ಹುಟ್ಟಿನ ಸಂಬಂಧದಲ್ಲಿ ಮುಂದೆ ತಂದಿದ್ದ ವಾದಗಳೆಲ್ಲವೂ ಬರಿಯ ಕಲ್ಪನೆಗಳಾಗಿದ್ದುವೇ ಹೊರತು ಲಿಖಿತ ಪ್ರಮಾಣಗಳ ಆಧಾರವಿದ್ದವುಗಳಾಗಿರಲಿಲ್ಲ. ಮಾತ್ರವಲ್ಲ ಅವರ ವಾದಗಳು ವಸ್ತುಸ್ಥಿತಿಗೂ, ಲಿಖಿತ ಪ್ರಮಾಣಗಳಿಗೂ ವಿರುದ್ಧ ವಾಗಿದ್ದುವು. ಅಂದರೆ ಪಾಶ್ಚಾತ್ಯ ವಿದ್ವಾಂಸರು ಋಗ್ವೇದದಲ್ಲಿ ಮತ್ತು ಇತರ ವೈದಿಕ ಸಾಹಿತ್ಯದಲ್ಲಿ "ಧ್ವನಿ ಚಿಹ್ನೆ" (Syllable ಅಥವಾ Letter) ಎಂಬ ಅರ್ಥದಲ್ಲಿ "ಅಕ್ಷರ" ಎಂಬ ಶಬ್ದವು ಹಲವು ಸರ್ತಿ ಪ್ರಯೋಗಿಸಲ್ಪಟ್ಟಿರುವುದನ್ನು ಕಂಡಿದ್ದರೂ ಅವನ್ನು ಮರೆಮಾಜಿ ಋಗ್ವೇದದಲ್ಲಿ ಲಿಪಿಯು ಪ್ರಚಲಿತವಿದ್ದಿತೆಂಬ ಸೂಚಿಸುವ ಉಲ್ಲೇಖಗಳಿಲ್ಲವೆಂದು ವಾದಿಸುತಿದ್ದರು. ಸಂಸ್ಕೃತದ ಘನಪಂಡಿತ ರಾಗಿದ್ದ ಡಾ। ಆಲ್ಬರ್ಟ್ ವೇಬರ್ ಎಂಬವರು ಋಗ್ವೇದದಲ್ಲಿ ಬಂದಿರುವ ಅಕ್ಷರ ಶಬ್ದದ ಅರ್ಥವು ನಾಶರಹಿತ ಎಂದಿರಬಹುದೇ ಹೊರತು ಧ್ವನಿ ಚಿಹ್ನೆ ಅಥವಾ ವರ್ಣ ಎಂದಿರಲಾರದೆಂದು ತನ್ನ ಭಾರತೀಯ ಸಾಹಿತ್ಯದ ಇತಿಹಾಸ ಎಂಬ ಗ್ರಂಥದ

---

1 Equally the conviction has become stronger that Brahmi is the most ancient Indian alphabet and the development of the Kharoshthi is one of the results of the Persian domination over Gandhara and Sindh. Preface page XI.

ಮೊದಲನೆಯ ಆವೃತ್ತಿಯಲ್ಲಿ ಹೇಳಿದ್ದರು.[1] ಆದರೆ ತರುವಾಯ ಪ್ರೊ. ಔಫರೆಕ್ಟ್ ಎಂಬವರು ಋಗ್ವೇದದ ೧-೧೬೪-೨೪ರಲ್ಲಿ[2] ಮತ್ತು ೯-೧೩-೩ರಲ್ಲಿ ಅಕ್ಷರ ಶಬ್ದವು ವಾಣಿಯ ಮಾನ ಎಂಬರ್ಥದಲ್ಲಿ ಬಂದಿರುವುದರಿಂದ ಅದು "ವರ್ಣ"ವನ್ನು ಸೂಚಿಸುತ್ತದೆಂದು ತಿಳಿಸಿದುದರಿಂದ ಡಾ। ವೇಬರರು ಆ ಆವೃತ್ತಿಯ ಶುದ್ಧಿಪತ್ರದಲ್ಲಿ ಅಕ್ಷರ ಶಬ್ದದ ಅರ್ಥವು "ವರ್ಣ" ಎಂದಿರಬಹುದೆಂದು ವಿವರಿಸಿದರು.[3]

ಫಿನಿಶಿಯನ್ ಜನರಿಂದಾಗಿ ಭಾರತೀಯರಿಗೆ ಸೆಮಿಟಿಕ್ ವರ್ಣಮಾಲೆಯ ಪರಿಚಯವಾಗಿದ್ದಿತೆಂದು ವಾದಿಸಿದ ಯಾವನೊಬ್ಬ ಪಾಶ್ಚಾತ್ಯ ವಿದ್ವಾಂಸನಾದರೂ ಆ ಫಿನಿಶಿಯನ್ ಜನರು ಯಾವ ನಿಶ್ಚಿತ ಕಾಲದಲ್ಲಿ ಭಾರತ ವರ್ಷಕ್ಕೆ ಬಂದಿದ್ದರು? ಎಲ್ಲಿ ತಂಗಿದ್ದರು? ಯಾರೊಡನೆ ವ್ಯವಹರಿಸಿದ್ದರು ಎಂಬುದನ್ನಾಗಲೀ ಆ ಕಾಲದಲ್ಲಿ ಬರೆದ ಲೇಖಗಳನ್ನಾಗಲೀ, ಭಾರತ ವರ್ಷದಲ್ಲಿ ಅವರ ಲಿಪಿಯಿಂದ ಬರೆದ ಯಾವುದೊಂದು ಪತ್ರವನ್ನಾಗಲೀ ಉದಹರಿಸಿಲ್ಲ. ಅವರ ಎಲ್ಲ ವಾದಗಳು ಬರಿಯ ಮಾತುಗಳಲ್ಲಿ ಕೊನೆಗೊಂಡಿವೆ.

ಆದೇ ರೀತಿಯಲ್ಲಿ ಪ್ರೊ. ಜಾರ್ಜ್‌ಬ್ಯುಹ್ಲರರು ಕೂಡ-ಫಿನಿಶಿಯನ್ ಜನರ ಮತ್ತು ಮೋಶಾನ ಶಿಲಾಶಾಸನದಲ್ಲಿನ ಸೆಮಿಟಿಕ್ ವರ್ಣಗಳಿಂದ ಬ್ರಾಹ್ಮೀ ವರ್ಣಗಳು ಹುಟ್ಟಿದ್ದುವೆಂದು ಪ್ರತಿಪಾದಿಸುವಾಗ ತನ್ನ ಅಧ್ಯಯನದ ಆಳವನ್ನು ಮತ್ತು ಪ್ರಖರವಾದ ಪಾಂಡಿತ್ಯವನ್ನು ಪೂರ್ಣ ರೀತಿಯಿಂದ ಪ್ರದರ್ಶಿಸಿದ್ದಾರಾದರೂ, ಶಕ ಪೂರ್ವ ಆರನೆಯ ಶತಮಾನಕ್ಕಿಂತ ಪ್ರಾಚೀನವಾದ ಬ್ರಾಹ್ಮೀಲೇಖಗಳು ದೊರೆತಿಲ್ಲವೆಂಬ ಕಾರಣದಿಂದ ಆ ಕಾಲಕ್ಕಿಂತ ಮೊದಲು ಭಾರತೀಯರಲ್ಲಿ ಸ್ವಂತದ ಲಿಪಿಯಿರಲಿಲ್ಲವೆಂದು ವಾದಿಸಿದ ಅವರು — ತನ್ನ ಪ್ರತಿಪಾದನೆಗೆ ಆಧಾರವಾಗಿ ಭಾರತ

---

1. Foot note to page 12. Nor does etymolody lead us to a more certain result in the case of another word found in this connection viz. Akshara = Syllable. This word does not seem in this sense in the samhita of the Rik (or Saman); it there rather signifies imperishable.

2. ಗಾಯತ್ರೇಣ ಪ್ರತಿಮಿಮೀತೇ ಅರ್ಕಮರ್ಕೇಣ ಸಾಮತ್ರೈಷ್ಟುಭೇನವಾಕಮ್ ।
ವಾಕೇನ ವಾಕಂ ದ್ವಿಪದಾ ಚದುಷ್ಪದಾ ಅಕ್ಷರೇಣಮಿಮತೇ ಸಪ್ತವಾಣೀಃ
॥ ಋ ೧-೧೬೪-೨೪-೧೬೪-೨೪)

3. [In the Erratta to the first German edition it was pointed out on the authority of a communication received from Prof. Aufrecht, that Akshara is twice used in the Rik of the measuring of speech Viz i. 164 . 24 and IX. 13.3 and consequently may there mean "Syllable".

ರ್ಷದಲ್ಲಿ ಎಂದಾದರೂ ಸೆಮಿಟಿಕ್ ಲಿಪಿಯು ಉಪಯೋಗಿಸಲ್ಪಟ್ಟಿದ್ದಿತೆಂಬು ನ್ನು ಸಿದ್ಧಪಡಿಸಲು ಸೆಮಿಟಿಕ್ ವರ್ಣಗಳಿಂದ ಬರೆದ ಒಂದೇ ಒಂದು ಪ್ರಮಾಣ ನ್ನಾದರೂ ಮುಂದೆ ತಂದಿಲ್ಲ. ಆಂದರೆ ಅವರ ವಾದಕ್ಕೆ ಕೂಡ ದೃಢವಾದ ುಡವಿಲ್ಲ.

ಪ್ರೊ. ಜಾರ್ಜ್‌ಬುಹ್ಲರ್ ಅವರು ತನ್ನ ಪ್ರತಿಪಾದನೆಯಲ್ಲಿ ಆ ಸೆಮಿಟಿಕ್ ರ್ಣದ ಚಿಹ್ನೆಯು ಹೀಗೆ. ಹೀಗೆ ರೂಪಾಂತರವಾಗಿ ಈ ಬ್ರಾಹ್ಮೀ ವರ್ಣವಾಗಿ ಮಾರ್ಪಟ್ಟಿತು ಇಲ್ಲವೇ ಈ ಸೆಮಿಟಿಕ್ ವರ್ಣದ ಚಿಹ್ನೆಯು ಹಾಗೆ ರೂಪಾಂತರವಾಗಿ ಈ ಬ್ರಾಹ್ಮೀ ವರ್ಣವಾಗಿ ಮಾರ್ಪಟ್ಟಿತು ಎಂಬುದಾಗಿ ವಾದಿಸುತ್ತ ಸಾಗಿದ್ದಾರೆಯೇ ಹೊರತು, ಆ ವಾದಗಳಿಗೆ ಪ್ರಮಾಣವಾಗಿ ಮೂಲ ಸೆಮಿಟಿಕ್ ವರ್ಣಗಳಾಗಲೀ, ಅವುಗಳಿಂದ ರೂಪಾಂತರವಾದ ಯಾವುದೊಂದು ಹಂತದ ವರ್ಣಗಳಾಗಲೀ ಭಾರತೀಯ ಭಾಷೆಯನ್ನು ಬರೆಯಲು ಉಪಯೋಗಿಸಲ್ಪಟ್ಟಿರುವ ಒಂದೇ ಒಂದು ಲೇಖವನ್ನಾದರೂ ಉದಹರಿಸಿಲ್ಲ. ಮಾತ್ರವಲ್ಲ ಅವರ ಪ್ರತಿಪಾದನೆಯಲ್ಲಿ ಹಲವು ಅಸಂಗತವಾದ ಹಾಗೂ ಪ್ರಮಾಣ ವಿರುದ್ಧವಾದ ಕಲ್ಪನೆಗಳೂ ಇವೆ.

ಅವುಗಳಲ್ಲಿ ಒಂದು ಕಲ್ಪನೆಯು ಬ್ರಾಹ್ಮೀ ವರ್ಣಮಾಲೆಯು ನಿರ್ಮಿಸಲ್ಪಟ್ಟ ಮೊದಲ ಹಂತದಲ್ಲಿ ಅದರೊಳಗೆ "ಋ, ೠ, ಌ, ೡ" ಎಂಬ ನಾಲ್ಕು ಅರ್ಧಸ್ವರಗಳ ಚಿಹ್ನೆಗಳು ಇರಲಿಲ್ಲವೆಂಬುದಾಗಿದೆ. ಅವರು ತನ್ನ ಆ ಕಲ್ಪನೆಯನ್ನು ಸಮರ್ಥಿಸಲು ಜೈನರ ಸಮವಾಯಾಂಗ ಮೊದಲಾದ ಗ್ರಂಥಗಳಿಂದ ದ್ವಾದಶಾಕ್ಷರಿಯ ಅಥವಾ ಹದಿನೆರಡು ಕಾಗುಣಿತಗಳ ಉದಾಹರಣೆಗಳನ್ನು ಕೊಟ್ಟಿದ್ದಾರಾದರೂ ಅವರು ಉದಹರಿಸಿದ ಮುಖ್ಯ ಪ್ರಮಾಣವು ಚೀನದ ಪ್ರವಾಸದಲ್ಲಿದ್ದ ಎಮ್. ಸಿಲ್ವೇನ್ ಲೇವಿ (Sylvain Levy) ಅವರು ಚೀನದ ಬೌದ್ಧ ಗ್ರಂಥಗಳಲ್ಲಿ ಆ ನಾಲ್ಕು ಸ್ವರಗಳ ಚಿಹ್ನೆಗಳನ್ನು ನಾಗಾರ್ಜುನನು ಅಲ್ಲದಿದ್ದರೆ ಶಾತವಾಹನನ ಮಂತ್ರಿಯಾಗಿದ್ದ ಶರ್ವವರ್ಮನು ನಿರ್ಮಿಸಿದ್ದನೆಂಬ ಸ್ಪಷ್ಟವಾದ ಉಲ್ಲೇಖಗಳಿವೆಯೆಂದು ಜಾರ್ಜ್ ಬುಹ್ಲರರಿಗೆ ತಿಳಿಸಿದುದೇ ಆಗಿದೆ.[1]

---

1. Finally there are explicit statements in Chinese Buddhist works discovered and kindly communicated to me by M. Sylvain Levy, according to which the signs for the four liquid vowels were invented either by Nagarjuna or by Sarvavarman the minister of Satavahana. This tradition points at all events to the conclusion that even in later times the Hindus were aware of the fact that the ancient Brahma alphabet contained only twelve owel signs

On the Origin of the Indian Brahma Alphabet page 33.

ಇಂಥ ಅದ್ಭುತ ಕಲ್ಪನೆಯನ್ನು ಮುಂದೆತಂದ ಜಾರ್ಜ್ ಬುಹ್ಲರರ ನೈಪುಣ್ಯವನ್ನು ಮತ್ತು ತೀಕ್ಷ್ಣಮತಿತ್ವವನ್ನು ಎಷ್ಟು ಕೊಂಡಾಡಿದರೂ ಸ್ವಲ್ಪವೇ ಅನ್ನಬಹುದು. ಏಕೆಂದರೆ ಬ್ರಾಹ್ಮೀ ವರ್ಣಮಾಲೆಯಲ್ಲಿ ಮೊದಲಿನಿಂದ ಆ ಸ್ವರ ಗಳ ಚಿಹ್ನೆಗಳು ಇದ್ದಿಲ್ಲವೆಂದಾದರೆ ವೇದಗಳ ಮಂತ್ರಗಳನ್ನು ಬರೆಯಲು ಸಾಧ್ಯ ವಿರಲಿಲ್ಲ. ಆದುದರಿಂದ ನಾಗಾರ್ಜುನನಿಗಿಂತ ಮೊದಲು ಬ್ರಾಹ್ಮೀವರ್ಣ ಮಾಲೆ ಯಲ್ಲಿ ಆ ಸ್ವರಗಳ ಚಿಹ್ನೆಗಳು ಇರಲಿಲ್ಲವೆಂದು ಸಾಧಿಸಿದರೆ ಅವನಿಗಿಂತ ಮೊದಲು ವೇದ ಮಂತ್ರಗಳು ಬರೆಯಲ್ಪಟ್ಟಿರಲಿಲ್ಲವೆಂದು ಸಿದ್ಧಪಡಿಸಲು ಬೇರೆ ಪ್ರಮಾಣಗಳ ಆವಶ್ಯಕತೆಯೇ ಉಳಿಯುತಿ ರಲಿಲ್ಲ.

ಆದರೆ ಜಾರ್ಜ್ ಬುಹ್ಲರರು ತನ್ನ ಆ ಕಲ್ಪನೆಯನ್ನು ಮುಂದೆ ತರುವಲ್ಲಿ ತಾನು ಪೂರ್ಣವಾಗಿ ಮುಗ್ಗರಿಸಿ ಬೀಳುತಿದ್ದೇನೆಂದು ತಿಳಿಯದಿದ್ದುದು ಬಹಳ ಆಶ್ಚರ್ಯಕರ ವಾಗಿದೆ. ಏಕೆಂದರೆ ಅವರು ಉದಹರಿಸಿದ ಸಿಲ್ವೇನ್ ಲೇವಿ ಅವರ ಪ್ರಮಾಣದಿಂದ ಆ ನಾಲ್ಕು ಸ್ವರ ಚಿಹ್ನೆಗಳನ್ನು ನಿರ್ಮಿಸಿದವನು ನಾಗಾರ್ಜುನನೋ, ಶರ್ವವರ್ಮನೋ ಎಂಬುದು ನಿಶ್ಚಿತವಾಗಿ ಗೊತ್ತಾಗುವುದಿಲ್ಲ ಮಾತ್ರವಲ್ಲ ಆ ಪ್ರಮಾಣವು ಐತಿಹಾಸಿಕ ಪ್ರಮಾಣಗಳಿಗೂ, ಜಾರ್ಜ್ ಬುಹ್ಲರರು ತನ್ನ ಪುಸ್ತಕದಲ್ಲಿ ಅದಕ್ಕಿಂತ ಮೊದಲು ಬರೆದ ವಿವರಗಳಿಗೂ ಸಂಪೂರ್ಣ ವಿರುದ್ಧವಾಗಿದೆ. ಆದುದರಿಂದ ಸಿಲ್ವೇನ್ ಲೇವೀ ಅವರು ತಿಳಿಸಿದ ಪ್ರಮಾಣಕ್ಕೆ ಬೆಲೆಯೇ ಇಲ್ಲವೆನ್ನ ಬೇಕಾಗಿದೆ. ಏಕೆಂದರೆ–

೧. ಮೊದಲನೆಯದಾಗಿ ನಾಗಾರ್ಜುನನು ಬೌದ್ಧ ಧರ್ಮದ ಮಹಾಯಾನ ಪಂಥದ ಆಚಾರ್ಯನಾಗಿದ್ದು ಶಕವಂಶದ ಕನಿಷ್ಕ ರಾಜನ ಸಮ ಕಾಲಿಕನಾಗಿದ್ದನು. ಈಗ ನಾವು ಕಾಲಗಣನೆಗಾಗಿ ಉಪಯೋಗಿಸುವ “ಶಾಲಿವಾಹನ ಶಕ” ಎಂಬ ಕಾಲಮಾನವು ಹಿಂದೆ ಗಂಧಾರ ಪ್ರಾಂತವನ್ನಾಳಿದ ಶಕರಾಜ ಕನಿಷ್ಕನು ಪಟ್ಟಾಭಿಷಿಕ್ತನಾದ ದಿನದಿಂದ ಪ್ರಾರಂಭವಾದುದಾಗಿದೆ. ಅಂದರೆ ನಾಗಾರ್ಜುನನು ಶಕದ ಮೊದಲನೆಯ ಶತಮಾನದವನೆಂದು ಸಿದ್ಧವಾಗುತ್ತದೆ.

೨. ಎರಡನೆಯದಾಗಿ ಸಾತವಾಹನರು ಕೂಡ ಶಕವರ್ಗದವರಾಗಿದ್ದು ಶಕಪೂರ್ವ ಮೊದಲನೆಯ ಶತಮಾನದಿಂದ ಆಂಧ್ರ ರಾಜ್ಯವನ್ನು ಆಳ ತೊಡಗಿದ್ದರು. ಸಾತವಾಹನ ರಾಜವಂಶವು ಶಿಮುಖ ಎಂಬವನಿಂದ ಸ್ಥಾಪಿಸಲ್ಪಟ್ಟಿದ್ದಿತು. ಮುಂದೆ ಆ ಸಾತವಾಹನ ಎಂಬ ಶಬ್ದವು ಶಾಲಿವಾಹನ ಎಂದು ಮಾರ್ಪಟ್ಟಿತು. ಶರ್ವ ವರ್ಮನು ಯಾವ ಸಾತವಾಹನ ರಾಜನ ಮಂತ್ರಿಯಾಗಿದ್ದನೆಂದು ಸರಿಯಾಗಿ ತಿಳಿದು ಬಂದಿಲ್ಲ. ಆದರೆ ಅವನು ತನ್ನ ರಾಜನಿಗಾಗಿ ಕಾತಂತ್ರ ಎಂಬ ಸಂಸ್ಕೃತ ವ್ಯಾಕರಣ ವನ್ನು ರಚಿಸಿದ್ದನೆಂದು ತಿಳಿದು ಬಂದಿವೆ. ನಾವು ಸದ್ಯಕ್ಕೆ ಶರ್ವವರ್ಮನನ್ನು ಶಿಮುಖನ ಮಂತ್ರಿಯಾಗಿದ್ದನೆಂದು ಗ್ರಹಿಸಿ ಸಾಗಿದರೂ ಅವನು ಶಕಪೂರ್ವ ಮೊದಲನೆಯ ಶತಮಾನದವನೆಂದು ಸಿದ್ಧವಾಗುವುದೇ ಹೊರತು ಅದಕ್ಕಿಂತ ಪ್ರಾಚೀನನೆಂದಾಗುವುದಿಲ್ಲ.

೩. ಮೂರನೆಯದಾಗಿ ಬುಹ್ಲರರು ತಮ್ಮ ಪುಸ್ತಕದ ಇಪ್ಪತ್ತೊಂದನೆಯ ಪುಟದಲ್ಲಿ ಆಚಾರ್ಯ ಪಾಣಿನಿಗಿಂತ ಮೊದಲಿನಿಂದ ಬ್ರಾಹ್ಮೀವರ್ಣಮಾಲೆಯು ಪ್ರಚಲಿತವಿದ್ದಿತೆಂದು ಒಪ್ಪಿದ್ದಾರಲ್ಲದೇ ಪಾಣಿನಿಯು ಕಾಲವು ಶಕಪೂರ್ವ ೩೫೦ (350 B. C.) ಎಂದು ಹೇಳಿದ್ದಾರೆ. ವಾಸ್ತವವಾಗಿ ಆಚಾರ್ಯ ಪಾಣಿನಿಯ ಜೀವಿತ ಕಾಲವು ಶಕಪೂರ್ವ ೫೭೦ನೆಯ ವರ್ಷದಿಂದ ೪೮೦ನೆಯ ವರ್ಷದ ತನಕ ವಾಗಿದೆ. ಅವನು ರಚಿಸಿದ ಅಷ್ಟಾಧ್ಯಾಯೀ ಎಂಬ ವ್ಯಾಕರಣ ಗ್ರಂಥವು "ಅಕ್ಷರ ಸಮಾಮ್ನಾಯದಿಂದ "ಅಂದರೆ ವರ್ಣಮಾಲೆಯೊಳಗಿನ ಅಕ್ಷರಗಳನ್ನು ಒಂದು ವಿಶಿಷ್ಟ ರೀತಿಯಿಂದ ವಿಭಜಿಸಿ ಹಾಕಿರುವ ಹದಿನಾಲ್ಕು ಪ್ರತ್ಯಾಹಾರ ಸೂತ್ರಗಳಿಂದ ಪ್ರಾರಂಭವಾಗುತ್ತದೆ. ಆ ಸೂತ್ರಗಳಲ್ಲಿ ಮೊದಲನೆಯದು "ಅಇಉಣ್" ಎಂತಲೂ ಎರಡನೆಯದು "ಋಌಕ್" ಎಂತಲೂ ಇದೆ. ಅಂದರೆ ಆಚಾರ್ಯ ಪಾಣಿನಿಯು ಹೇಳಿದ ಎರಡನೆಯ ಸೂತ್ರದಲ್ಲಿಯೇ "ಋ" ಮತ್ತು "ಌ" ಎಂಬ ಸ್ವರವರ್ಣಗಳ ಉಲ್ಲೇಖವಿದೆ. ಆ ಹದಿನಾಲ್ಕು ಸೂತ್ರಗಳ ತರುವಾಯದ ೧–೨–೨೭ನೆಯ ಸೂತ್ರ ದಲ್ಲಿ ಪಾಣಿನಿಯು ಆ ಸ್ವರಗಳಿಗೆ ದೀರ್ಘ ಉಚ್ಚಾರಗಳನ್ನೂ ಹೇಳಿದ್ದಾನೆ. ಅದರ ಮೇಲಿಂದ ಆಚಾರ್ಯ ಪಾಣಿನಿಗಿಂತ ಮೊದಲಿನಿಂದಲೂ ಬ್ರಾಹ್ಮೀ ವರ್ಣಮಾಲೆಯಲ್ಲಿ "ಋ, ೠ. ಌ, ೡ" ಎಂಬ ನಾಲ್ಕು ಸ್ವರಗಳ ಚಿಹ್ನೆಗಳೂ ಇದ್ದುವೆಂದು ಸ್ಪಷ್ಟ ವಾಗಿ ಸಿದ್ಧವಾಗುತ್ತದೆ. ಅಷ್ಟೇ ಅಲ್ಲ ಆಚಾರ್ಯ ಪಾಣಿನಿಯ ಅಷ್ಟಾಧ್ಯಾಯಿ ಯೊಳಗಿನ ಸಕಲ ಸೂತ್ರಗಳೂ ಮೊದಲಿನ ಆ ಹದಿನಾಲ್ಕು ಪ್ರತ್ಯಾಹಾರ ಸೂತ್ರ ಗಳನ್ನು ಅವಲಂಬಿಸಿಕೊಂಡಿವೆಯಾದುದರಿಂದ "ಋಌಕ್" ಎಂಬ ಸೂತ್ರವನ್ನು ತರುವಾಯದ ಜನರು ಅಷ್ಟಾಧ್ಯಾಯಿಯಲ್ಲಿ ಸೇರಿಸಿದ್ದರೆಂದು ಯಾವನೊಬ್ಬನು ಮೊಂಡುವಾದವನ್ನೂ ಹೂಡಲು ಸಾಧ್ಯವಿಲ್ಲ. ಆದುದರಿಂದ ಮೂಲ ಬ್ರಾಹ್ಮೀ ವರ್ಣಮಾಲೆಯಲ್ಲಿ "ಋ, ೠ, ಌ, ೡ" ಎಂಬ ಸ್ವರಗಳ ಚಿಹ್ನೆಗಳು ಇರಲಿಲ್ಲ ವೆಂಬುದು ಡಾ. ಜಾರ್ಜ ಬುಹ್ಲರರ ಉದ್ದೇಶಪೂರ್ವಕವಾದ ಮಿಥ್ಯಾ ಕಲ್ಪನೆ ಯಾಗಿದ್ದಿತೆಂದು ಸಿದ್ಧವಾಗುತ್ತದೆ.

ಬ್ರಾಹ್ಮೀ ಲಿಪಿಯ ಹುಟ್ಟಿನ ಸಂಬಂಧವಲ್ಲಿ ಈ ತನಕ ಬಹಳಷ್ಟು ವಾದ–ಪ್ರತಿವಾದಗಳು ಜರುಗಿವೆಯಲ್ಲದೇ ಆ ಸಂಬಂಧವಲ್ಲಿ ಹಲವು ಗ್ರಂಥಗಳೂ ಪ್ರಕಟ ವಾಗಿವೆ. ಆ ಗ್ರಂಥಗಳಲ್ಲಿ ಪ್ರಕಟವಾಗಿರುವ ಪಾಶ್ಚಾತ್ತ್ಯ ವಿದ್ವಾಂಸರ ವಾದ ಸರಣಿಯ ಮೇಲಿಂದ, ಅಥವಾ ಪಾಶ್ಚಾತ್ತ್ಯ ವಿದ್ವಾಂಸರು ವಸ್ತು ಸ್ಥಿತಿಯನ್ನು ಮರೆಮಾಜಿ ಸಲ್ಲದ ಮಿಥ್ಯಾ ಕಲ್ಪನೆಗಳನ್ನು ಪ್ರಚಾರ ಮಾಡಿದುದರ ಮೇಲಿಂದ ಅವರ ಆ ಬಗೆಯ ವಾದದ ಮುಖ್ಯ ಉದ್ದೇಶವು ವೇದ ಕಾಲೀನ ಭಾರತೀಯರಲ್ಲಿ ಲಿಪಿಯು ಪ್ರಚಲಿತ ವಿರಲಿಲ್ಲವೆಂತಲೂ, ಶಕಪೂರ್ವ ಎರಡನೆಯ ಶತಮಾನಕ್ಕಿಂತ ಮೊದಲು ವೇದ ಮಂತ್ರಗಳು ಬರೆಯಲ್ಪಟ್ಟಿರಲಿಲ್ಲವೆಂತಲೂ. ಸೆಮಿಟಿಕ್ ವರ್ಗದ ಲಿಪಿಗಳು ಬ್ರಾಹ್ಮೀ ಲಿಪಿಗಿಂತ ಪ್ರಾಚೀನವಾದುವುಗಳೆಂತಲೂ ಸಾಧಿಸುವುದಾಗಿದ್ದಿತೆಂದು ಸ್ಪಷ್ಟವಾಗಿ

ಸಿದ್ಧವಾಗುತ್ತದೆ. ಆ ರೀತಿಯಲ್ಲಿ ಪಾಶ್ಚಾತ್ಯ ವಿದ್ವಾಂಸರು ತಮ್ಮ ಉದ್ದೇಶ ಸಾಧನೆಗಾಗಿ ಮಿಥ್ಯಾ ಕಲ್ಪನೆಗಳನ್ನು ಆಶ್ರಯಿಸಿದುದರಿಂದ, ಅವರು ಈಜಿಪ್ತದ ನಾಇಲ್ ನದೀಮುಖ ರೋಜೆಟ ಎಂಬಲ್ಲಿ ದೊರೆತ ಶಿಲಾಖಂಡದ ಮೇಲಿನ ಲೇಖ ವನ್ನು ಸೆಮಿಟಿಕ್ ಭಾಷೆಯಿಂದ ಓದಿದ್ದರೆಂಬುದನ್ನಾಗಲೀ, ಜಾಗತಿಕ ಇತಿಹಾಸದ ಸಂಬಂಧದಲ್ಲಿ ಅವರು ಮಾಡಿದ ಅನ್ವೇಷಣಗಳೆಂದು ಪ್ರಕಟಿಸಿರುವ ವಿವರಗಳನ್ನಾ ಗಲೀ ಪೂರ್ಣ ವಿಮರ್ಶೆ ಮಾಡದೇ ಸತ್ಯವೆಂದು ನಂಬಲು ಸಾಧ್ಯವಿಲ್ಲದಂತಾಗಿದೆ.

ಹೇಗಿದ್ದರೂ ಈಗ ಬ್ರಾಹ್ಮೀ ವರ್ಣಮಾಲೆಯ ವಾಸ್ತವಿಕ ಮೂಲವೂ ಅದರ ನಿರ್ಮಾಣ ಕಾಲವೂ ಗೊತ್ತಾಗಿರುವುದರಿಂದ, ಸಕಲ ಸೆಮಿಟಿಕ್ ವರ್ಣ ಮಾಲೆಗಳೂ, ಯವನಾನಿಯೂ, ಬ್ರಾಹ್ಮೀವರ್ಣಮಾಲೆಯು ನಿರ್ಮಿಸಲ್ಪಟ್ಟ ಬಹು ಕಾಲದ ತರುವಾಯ ಅದರ ಅನುಕರಣದಿಂದಲೇ ರೂಪಿಸಲ್ಪಟ್ಟವುಗಳೆಂದು ಪ್ರಮಾಣ ಸಹಿತವಾಗಿ ಸಿದ್ಧಪಡಿಸಲು ಸಾಧ್ಯವಿದೆ. ಆದುದರಿಂದ ಹಿಂದಿನ ಪಾಶ್ಚಾತ್ಯ ವಿದ್ವಾಂಸರ ವಾದಗಳನ್ನು ಇನ್ನೂ ಹೆಚ್ಚು ವಿಮರ್ಶಿಸುವ ಇಲ್ಲವೇ ಇದರಲ್ಲಿ ಉದಹರಿಸುವ ಆವಶ್ಯಕತೆಯಿಲ್ಲ.

ಹಾಗೆ ಯಾರಾದರೂ ಹಿಂದಿನವರ ವಾದಗಳ ಸಾರಾಂಶಗಳನ್ನು ತಿಳಿಯ ಲಪೇಕ್ಷಿಸುವುದಾದರೆ ಭಾರತೀಯ ಲಿಪಿತಜ್ಞರು ಬರೆದು ಪ್ರಕಟಿಸಿದ ಗ್ರಂಥಗಳನ್ನು ತರಿಸಿ ಓದಬಹುದು. ಅಂಥ ಗ್ರಂಥಗಳಲ್ಲಿ ರಾಯಬಹದ್ದೂರ್ ಗೌರೀ ಶಂಕರ ಹೀರಾ ಚಂದ ಓಝಾ ಅವರು ಹಿಂದೀಯಲ್ಲಿ ಮತ್ತು ಇಂಗ್ಲೀಷಿನಲ್ಲಿ ಬೇರೆ ಬೇರೆ ಯಾಗಿ ಬರೆದು ಪ್ರಕಟಿಸಿದ "ಭಾರತೀಯ ಪ್ರಾಚೀನ ಲಿಪಿಮಾಲಾ" ಮತ್ತು "Indian Palaeography" ಎಂಬ ಪುಸ್ತಕವು ಹೆಚ್ಚು ವಿಸ್ತೃತವಾಗಿದೆ. ಅದರಲ್ಲಿ ಬ್ರಾಹ್ಮೀ ಲಿಪಿಯ ಹುಟ್ಟಿನ ಸಂಬಂಧದಲ್ಲಿ ಅಧಿಕಾಂಶ ಪಾಶ್ಚಾತ್ಯ ವಿದ್ವಾಂಸರು ವ್ಯಕ್ತಗೊಳಿಸಿದ ಅಭಿಪ್ರಾಯಗಳ ಸಾರಾಂಶಗಳು ಮಾತ್ರವಲ್ಲದೇ ಚಕ್ರವರ್ತಿ ಅಶೋಕನು ಬ್ರಾಹ್ಮೀ ಲಿಪಿಯಿಂದ ಬರೆಯಿಸಿದ ಹಲವು ಧರ್ಮಶಾಸನ ಗಳ ಪ್ರತಿಲಿಪಿಗಳೂ ತರುವಾಯದ ಕಾಲದಲ್ಲಿ ಬ್ರಾಹ್ಮೀ ವರ್ಣಗಳು ಕೊಂಚ ಕೊಂಚ ರೂಪಾಂತರ ಹೊಂದುತ್ತ ಬೇರೆ ಬೇರೆ ಪ್ರಾದೇಶಿಕ ವರ್ಣಮಾಲೆಗಳಾಗಿ ಮಾರ್ಪಟ್ಟ ಬೇರೆ ಬೇರೆ ಹಂತಗಳನ್ನು ತೋರಿಸುವ ಪ್ರತಿಲಿಪಿಗಳೂ ಇವೆ.

ಪಂಡಿತ ಓಝಾ ಅವರು ಆ ಪುಸ್ತಕದಲ್ಲಿ ಜಾರ್ಜ್ ಬುಹ್ಲರರ ವಾದವನ್ನು ಸಯುಕ್ತಿಕವಾಗಿ ಖಂಡಿಸಿದ್ದಾರಲ್ಲದೇ ಭಾರತೀಯರಲ್ಲಿ ವೇದಕಾಲದಿಂದಲೂ ಲಿಪಿಯು ಪ್ರಚಲಿತವಿದ್ದಿತೆಂದು ಸೂಚಿಸುವ ಹಲವು ವೈದಿಕ ಪ್ರಮಾಣಗಳನ್ನು ಉದಹರಿಸಿ ಬ್ರಾಹ್ಮೀ ವರ್ಣಮಾಲೆಯು ಸೆಮಿಟಿಕ್ ವರ್ಣಮಾಲೆಯಿಂದ ರೂಪಾಂತರವಾದುದಲ್ಲವೆಂದು ಪ್ರತಿಪಾದಿಸಿದ್ದಾರೆ. ಆದರೆ ಅವರಿಂದ ಬ್ರಾಹ್ಮೀ

ವರ್ಣಮಾಲೆಯು ಯಾವ ಮೂಲದಿಂದ ? ಹೇಗೆ ? ಮತ್ತು ಯಾವ ಕಾಲದಲ್ಲಿ? ನಿರ್ಮಿಸಲ್ಪಟ್ಟಿದ್ದಿತೆಂಬುದನ್ನು ವಿವರಿಸಲು ಸಾಧ್ಯವಾಗಿಲ್ಲ. ಹಾಗೆಯೇ ಲಿಪಿಯು ವಾದದಲ್ಲಿ ಭಾಗವಹಿಸಿದ ಇತರ ಭಾರತೀಯ ವಿದ್ವಾಂಸರಿಂದಾಗಲೀ ಪಾಶ್ಚಾತ್ಯ ವಿದ್ವಾಂಸರಿಂದಾಗಲೀ ಬ್ರಾಹ್ಮೀ ವರ್ಣಮಾಲೆಯ ವಾಸ್ತವಿಕ ಮೂಲವಾವುದೆಂದು ಸಂದೇಹಾತೀತವಾಗಿ ಸಿದ್ಧಪಡಿಸಲು ಸಾಧ್ಯವಾಗಿಲ್ಲ.

ಆದುದರಿಂದ ಇತರ ವಿದ್ವಾಂಸರು ಉದಹರಿಸಿಲ್ಲದ ಕೆಲವು ಋಗ್ವೇದ ಮಂತ್ರಗಳನ್ನು ಈ ಅಧ್ಯಾಯದಲ್ಲಿ ಉದಹರಿಸಿ ಋಗ್ವೇದದ ಹಲವು ಮಂತ್ರಗಳು ರಚಿಸಲ್ಪಡುವ ಮೊದಲೇ ವೈದಿಕ ಜನರಲ್ಲಿ ಬ್ರಾಹ್ಮೀವರ್ಣಮಾಲೆಯು ಪ್ರಚಲಿತವಿದ್ದಿತೆಂದು ಮತ್ತು ಆ ವರ್ಣಮಾಲೆಯು ಯಾವ ಮೂಲದಿಂದ ಹುಟ್ಟಿದ್ದಿತೆಂದು ಸಂದೇಹಕ್ಕೆಡೆಯಿಲ್ಲದಂತೆ ಸಿದ್ಧ ಪಡಿಸಲಾಗುವುದು.

ವೈದಿಕ ಜನರಲ್ಲಿ ಬ್ರಾಹ್ಮೀ ವರ್ಣಮಾಲೆಯು ಪ್ರಚಲಿತವಾಗುವ ಮೊದಲು ಹಲವು ವೇದ ಮಂತ್ರಗಳು ಚಿತ್ರ ಸಂಕೇತಗಳ ರೂಪದಲ್ಲಿದ್ದುವೆಂದು, ಆ ಕಾಲದ ಜನರು ಚಿತ್ರ ಸಂಕೇತಗಳ ನೆರವಿನಿಂದ ವೇದಮಂತ್ರಗಳನ್ನು ಕಂಠಪಾಠವಾಗಿ ಮುಂದೆ ಸಾಗಿಸಿಕೊಂಡು ಬರುತಿದ್ದರೆಂದು, ಸಿಂಧೂ ಕಣಿವೆಯ ಅಗೆತಗಳಲ್ಲಿ ಬೆಳಕಿಗೆ ಬಂದಿರುವ ಬಿಲ್ಲೆಗಳ ಮೇಲಿರುವ ಚಿತ್ರಗಳು ವೇದಮಂತ್ರಗಳ ಸಾಂಕೇತಿಕ ನಿರೂಪಣಗಳಾಗಿವೆಯೆಂದು ಮತ್ತು ಬ್ರಾಹ್ಮೀ ವರ್ಣಮಾಲೆಯನ್ನು ನಿರ್ಮಿಸಿದ ಆಚಾರ್ಯರು ಆ ವರ್ಣಮಾಲೆಯನ್ನು ಉಪಯೋಗಿಸಿ, ಆ ಬಿಲ್ಲೆಗಳ ಮೇಲಿನ ಚಿತ್ರ ಸಂಕೇತಗಳಿಂದ ಸೂಚಿತವಾಗುವ ವೇದ ಮಂತ್ರಗಳನ್ನು ಬರೆದು ಕೊಂಡಿದ್ದರೆಂದು ಮತ್ತು ಆ ಆಚಾರ್ಯರಿಗೆ ಸಿಂಧೂ ಬಿಲ್ಲೆಗಳ ಪ್ರತ್ಯಕ್ಷ ಪರಿಚಯವಿದ್ದಿತೆಂದು ವೇದಗಳಲ್ಲಿ ಬಂದಿರುವ ಉಲ್ಲೇಖಗಳ ಆಧಾರದಿಂದ ನಿರ್ಧರಿಸಬಹುದಾಗಿದೆ. ಅಂದರೆ ಸಿಂಧೂ ಕಣಿವೆಯ ಅಗೆತಗಳಲ್ಲಿ ಬೆಳಕಿಗೆ ಬಂದಿರುವ ಹಾಲುಗಲ್ಲಿನ ಬಿಲ್ಲೆಗಳ ಮೇಲೆ ಕಂಡು ಬರುವ ಚಿತ್ರ ಸಂಕೇತಗಳ ಯಥಾವತ್ತಾದ ವರ್ಣನೆಗಳು ವೇದಮಂತ್ರಗಳಲ್ಲಿದೆ.[1] ಆದುದರಿಂದ ಆ ಬಿಲ್ಲೆಗಳನ್ನು ಉಪಯೋಗಿಸುತಿದ್ದ ಜನರೇ, ಆ ಚಿತ್ರಸಂಕೇತಗಳ ನೆರವಿನಿಂದ ಕಂಠಪಾಠವಾಗಿ ಮುಂದೆ ಸಾಗಿಸಿಕೊಂಡು ಬಂದಿದ್ದ ವೇದಮಂತ್ರಗಳನ್ನು ಬ್ರಾಹ್ಮೀ ಲಿಪಿಯು ನಿರ್ಮಿಸಲ್ಪಟ್ಟ ತರುವಾಯ ಆ ಲಿಪಿಯಿಂದ ಬರೆದು ಕೊಂಡಿದ್ದರೆಂದು ಹೇಳಬೇಕಾಗುತ್ತದೆ.

ಪ್ರಾಚೀನ ಚರಣಗಳ ಆಚಾರ್ಯರು ವೇದಮಂತ್ರಗಳನ್ನು, ತಮಗೆ ಬೇಕಾದಾಗ ನೋಡಲಾಗುವಂತೆ, ಭೂರ್ಜವೃಕ್ಷದ ತೆಳ್ಳನ ತೊಗಟೆಯ ತುಂಡುಗಳ ಮೇಲೆ ಬಣ್ಣದ ಕಡ್ಡಿಗಳಿಂದ ಬರೆದಿಡುತಿದ್ದರು. ಹಾಗೆ ಬರೆದಿಟ್ಟ ಅಕ್ಷರಗಳು

---

1 ಅದರ ವಿವರಗಳು ಮುಂದಿನ ಅಧ್ಯಾಯದಲ್ಲಿ ಬರುವುವು.

ವರ್ಣಗಳೆನಿಕೊಳ್ಳುತಿದ್ದುವು. ಅಂಥ ವರ್ಣಗಳಿಂದ ಕೂಡಿದ ಆ ತೊಗಟೆಯ ತುಂಡುಗಳನ್ನು ಅವರು ಬಹಳ ಎಚ್ಚರದಿಂದ ಕಾಪಾಡುತಿದ್ದರು, ಇತರರು ಅವುಗಳನ್ನು ಮುಟ್ಟಿದರೆ ವರ್ಣಗಳು ಮಾಸಿ ಹೋಗಬಹುದೆಂಬ ಕಾರಣದಿಂದ ಚರಣದೊಳಗಿನ ಬ್ರಹ್ಮಚಾರಿಗಳಿಗೆ ಕೂಡ ಅವುಗಳನ್ನು ಕೈಯಲ್ಲಿ ಎತ್ತಿಕೊಳ್ಳಲು ಬಿಡುತ್ತಿರಲಿಲ್ಲ. ಅಷ್ಟು ಎಚ್ಚರ ವಹಿಸಿದರೂ ಆ ತೊಗಟೆಯ ತುಂಡುಗಳು ಹೆಚ್ಚು ಕಾಲ ಬಾಳು ತ್ತಿರಲಿಲ್ಲ. ಆದುದರಿಂದ ವೇದ ಮಂತ್ರಗಳನ್ನು ಆಗಾಗ್ಗೆ ಹೊಸ ತೊಗಟೆಯ ತುಂಡುಗಳ ಮೇಲೆ ಬರೆದುಕೊಳ್ಳಬೇಕಾಗುತಿತ್ತು. ಅಷ್ಟು ಮಾತ್ರವಲ್ಲದೇ ಬ್ರಾಹ್ಮೀ ಲಿಪಿಯು ನಿರ್ಮಿಸಲ್ಪಟ್ಟ ಬಹುಕಾಲದ ತನಕ ಅದು ಚರಣಗಳ ಆಚಾರ್ಯರಲ್ಲಿಯೇ ಗುಪ್ತವಾಗಿದ್ದಿತು. ಕಾಲ ಕ್ರಮೇಣ ಚರಣಗಳಲ್ಲಿ ಅಧ್ಯಯನ ಮಾಡುತಿದ್ದ ಬ್ರಹ್ಮ ಚಾರಿಗಳು ಲಿಪಿಯನ್ನು ಕಲಿತುಕೊಳ್ಳತೊಡಗಿದ್ದರಾದರೂ ಭಗವಾನ್ ಬುದ್ಧನ ಜನ್ಮ ಕಾಲದ ತನಕ ಜನಸಾಮಾನ್ಯರಿಗೆ ಲಿಪಿಯು ಪರಿಚಯವಾಗಿರಲಿಲ್ಲ. ಆದುದ ರಿಂದ ಆ ಕಾಲಕ್ಕಿಂತ ಮೊದಲಿನ ಯಾವುದೊಂದು ಬ್ರಾಹ್ಮೀ ಲೇಖವೂ ದೊರೆಯು ವುದಿಲ್ಲ. ಅರ್ಥಾತ್ ಆ ಕಾಲಕ್ಕಿಂತ ಮೊದಲಿನ ಲೇಖಗಳು ದೊರೆಯುವುದಿಲ್ಲ ಅಥವಾ ದೊರೆತಿಲ್ಲವೆಂಬ ಒಂದೇ ಕಾರಣದಿಂದ ವೇದಕಾಲೀನ ಭಾರತೀಯರಲ್ಲಿ ಲಿಪಿಯು ಪ್ರಚಲಿತವಿರಲಿಲ್ಲವೆಂದು ಪಾಶ್ಚಾತ್ಯ ವಿದ್ವಾಂಸರು ವಾದಿಸುವುದರಲ್ಲಿ ಅರ್ಥವೇ ಇಲ್ಲವೆನ್ನಬೇಕಾಗಿದೆ.

ಏಕೆಂದರೆ ಋಗ್ವೇದದಲ್ಲಿ ಹಲವು ಛಂದಸ್ಸುಗಳ ಹೆಸರುಗಳು ಮಾತ್ರ ವಲ್ಲದೇ ಋಗ್ವೇದದ ಹಲವು ಮಂತ್ರಗಳಲ್ಲಿ "ಅಕ್ಷರ" ಎಂಬ ಶಬ್ದವು ಸ್ಪಷ್ಟವಾಗಿ "ಧ್ವನಿ ಸೂಚಕ ಚಿಹ್ನೆ" ಅಥವಾ "ವರ್ಣ" ಎಂಬ ಅರ್ಥದಲ್ಲಿ "ನಾಮಪದ"ವಾಗಿ ಬಂದಿರುವುದರಿಂದ ಋಗ್ವೇದದ ಹಲವು ಮಂತ್ರಗಳು ರಚಿಸಲ್ಪಡುವ ಮೊದಲೇ ವೈದಿಕ ಜನರಲ್ಲಿ ಲಿಪಿಯು ಪ್ರಚಲಿತವಿದ್ದಿತೆಂದು ಸಿದ್ಧವಾಗುತ್ತದೆ. ಅದನ್ನು ಮುಂದೆ ಕೊಡಲಾಗುವ ಮಂತ್ರಗಳಿಂದ ಸರಿಯಾಗಿ ಅರಿತು ಕೊಳ್ಳಬಹುದು–

ಋಚೋ ಅಕ್ಷರೇ ಪರಮೇ ವ್ಯೋಮನ್
ಯಸ್ಮಿನ್ ದೇವಾ ಅಧಿ ವಿಶ್ವೇ ನಿಷೇದುಃ।
ಯಸ್ತನ್ನ ವೇದ ಕಿಮ್ ಋಚಾ ಕರಿಷ್ಯತಿ
ಯ ಇತ್ತದ್ವಿದುಸ್ತ ಇಮೇ ಸಮಾಸತೇ ॥ ಋ. ೧–೧೬೪–೩೯॥

ಅರ್ಥ– ವಿಶ್ವೇದೇವತೆಗಳು ದೂರದ ಆಕಾಶದಲ್ಲಿ ಹೇಗೋ ಹಾಗೆಯೇ ಋಚೆಯ ಪ್ರತಿಯೊಂದು ಅಕ್ಷರದಲ್ಲಿ ಅಂದರೆ ಋಗ್ವೇದದ ಪ್ರತಿಯೊಂದು ಮಂತ್ರ ದಲ್ಲಿ ನೆಲಸಿದ್ದಾರೆ. ಯಾವನು ಅದನ್ನು (=ಆ ರಹಸ್ಯವನ್ನು) ತಿಳಿಯುವುದಿಲ್ಲವೋ ಅವನು ಋಚೆಯಿಂದ ಏನು ಮಾಡಿಯಾನು? ಅಂದರೆ ಅಂಥವನು ವೇದಾಧ್ಯಯನ

ಮಾಡುವುದರಿಂದ ಏನು ಪ್ರಯೋಜನವಾದೀತು? ಆದರೆ ಯಾರೆಲ್ಲ ಅದನ್ನು ತಿಳಿಯುತ್ತಾರೋ ಅವರು ಒಟ್ಟು ಸೇರಿ ಕುಳಿತುಕೊಳ್ಳುತ್ತಾರೆ. ಅಂದರೆ ಒಟ್ಟಿಗೆ ಕುಳಿತು ಮಂತ್ರಗಳನ್ನು ಪರಿಶೀಲಿಸುತ್ತಾರೆ.

ಈ ಋಚೆಯು ಋಗ್ವೇದದ ಮಂತ್ರಗಳ ರಹಸ್ಯವನ್ನು ತಿಳಿದುಕೊಳ್ಳುವ ದೃಷ್ಟಿಯಿಂದ ಅತ್ಯಂತ ಮೌಲಿಕವಾಗಿದೆ. ಏಕೆಂದರೆ ಅದು ಋಗ್ವೇದದ ಮಂತ್ರಗಳಲ್ಲಿ ಯಾರ ಸ್ತುತಿಯು ಅಡಗಿದೆಯೆಂಬುದನ್ನು ಬಿಡಿಸಿ ಹೇಳುತ್ತದೆ. ಹಿಂದೆ ಆರ್ಯ ಜನರ ವೈದಿಕ ಸಂಸ್ಕೃತಿ ಎಂಬ ಅಧ್ಯಾಯದಲ್ಲಿಯೂ, ಭಾರತೀಯ ಜ್ಯೋತಿಷ ಶಾಸ್ತ್ರ ಎಂಬ ಅಧ್ಯಾಯದಲ್ಲಿಯೂ ಋಗ್ವೇದದ ಮಂತ್ರಗಳಲ್ಲಿ ಉಲ್ಲೇಖಿಸಲ್ಪಟ್ಟಿರುವ ವಿಶ್ವೇ ದೇವತೆಗಳೆಂದರೆ ಬಹಳ ಪ್ರಾಚೀನ ಕಾಲದಲ್ಲಿ ಚಂದ್ರನ ಗತಿಯನ್ನು ಕಂಡು ಕೊಳ್ಳಲು ನಿರ್ಧರಿಸಿದ ಮೂವತ್ತ ಮೂರು ನಕ್ಷತ್ರ ಪುಂಜಗಳು ಅಥವಾ ಅವುಗಳಿಗಾಗಿ ನಿರ್ಧರಿಸಿದ ದೇವತೆಗಳು- ಎಂಬುದಾಗಿಯೂ ಆ ದೇವತೆಗಳ ಹೆಸರುಗಳಲ್ಲಿ ಹೆಚ್ಚಿನವುಗಳು ಅಗ್ನಿಯ ಪರ್ಯಾಯನಾಮಗಳೆಂಬುದಾಗಿಯೂ, ಋಗ್ವೇದದ ಮಂತ್ರಗಳಲ್ಲಿ ದೇವತೆಗಳ ಹೆಸರುಗಳ ಮೂಲಕ ಚಾಂದ್ರ ನಕ್ಷತ್ರಗಳು ಸ್ತುತಿಸಲ್ಪಟ್ಟಿವೆಯೆಂಬುದಾಗಿಯೂ ವಿವರಿಸಿದೆ. ಹಿಂದಿನ ಋಚೆಯು ಅದೇ ವಿಷಯವನ್ನು ಬೇರೊಂದು ರೀತಿಯಿಂದ ತಿಳಿಸುತ್ತದೆ. ಅದರಲ್ಲಿ ವಿಶ್ವೇ ದೇವತೆಗಳು ಆಕಾಶದಲ್ಲಿ ನೆಲಸಿದ್ದಾರೆಂದು ಹೇಳಿರುವುದರಿಂದ ಅವುಗಳು ನಕ್ಷತ್ರ ಪುಂಜಗಳೆಂಬುದರಲ್ಲಿ ಸಂದೇಹವುಳಿಯುವುದಿಲ್ಲ. ಆ ಋಚೆಯ ಉದ್ದೇಶವು ವಿಶ್ವೇ ದೇವತೆಗಳೆಂದರೆ ನಕ್ಷತ್ರ ದೇವತೆಗಳೆಂದು ಮತ್ತು ಋಗ್ವೇದದ ಸೂಕ್ತಗಳಲ್ಲಿ ನಕ್ಷತ್ರ ದೇವತೆಗಳ ಸ್ತುತಿ ಇದೆಯೆಂದು ತಿಳಿದು ಕೊಳ್ಳಲಾರದವರು ವೇದಾಧ್ಯಯನ ಮಾಡುವುದರಿಂದ ಏನೂ ಪ್ರಯೋಜನವಿಲ್ಲವೆಂದು ತಿಳಿಸುವುದಾಗಿದೆ. ಅಂಥ ಆ ರಹಸ್ಯವನ್ನು ತಿಳಿಯಲಾಗದುದರಿಂದ ವೇದ ಮಂತ್ರಗಳಿಗೆ ಅರ್ಥ ಹೇಳಲು ಪ್ರಯತ್ನಿಸಿದ ವಿದ್ವಾಂಸರೆಲ್ಲರೂ ಗೊಂದಲಕ್ಕೀಡಾಗಿದ್ದಾರೆ.

ಹೀಗಿದ್ದರೂ ಹಿಂದಿನ ಋಚೆಯಲ್ಲಿ "ಅಕ್ಷರ" ಶಬ್ದವು "ಧ್ವನಿಯ ಚಿಹ್ನೆ" ಅಥವಾ "ವರ್ಣ" ಎಂಬರ್ಥದಲ್ಲಿ ಬಂದಿದೆಯೆಂಬುದು ಸ್ಪಷ್ಟವಿದೆಯಾದುದರಿಂದ ಆ ಋಚೆಯು ರಚಿಸಲ್ಪಡುವ ಮೊದಲೇ ವೈದಿಕ ಜನರಲ್ಲಿ ಲಿಪಿಯು ಪ್ರಚಲಿತವಾಗಿದ್ದಿತೆಂದು ಸ್ಪಷ್ಟವಾಗಿ ಸಿದ್ಧವಾಗುತ್ತದೆ. ವೇದ ಭಾಷೆಯ ಘನ ವಿದ್ವಾಂಸರಾಗಿದ್ದ ಪ್ರೊ. ರಾಲ್ಫ್. ಟಿ. ಎಚ್. ಗ್ರಿಫಿಥ್ ಎಂಬವರು ಆ ಋಚೆಯೊಳಗಿನ ವಿಶ್ವೇ ದೇವತೆಗಳೆಂದರೆ ಮೂವತ್ತ ಮೂರು ನಕ್ಷತ್ರ ದೇವತೆಗಳೆಂದು ತಿಳಿದು ಕೊಳ್ಳದಿದ್ದರೂ ಅಕ್ಷರ ಎಂಬ ಶಬ್ದಕ್ಕೆ "ಧ್ವನಿ ಚಿಹ್ನೆ" ಎಂಬ ಅರ್ಥವನ್ನೇ ಹೇಳಿದ್ದಾರೆ–

Upon what syllable of holy praise song as it

were their highest heaven, the gods repose them,

Who knows not this, what will he do with praise-song!

But who know it well sit here assembled.

ಮತ್ತು ಋಗ್ವೇದದ ಶಾಕಲ ಸಂಹಿತೆಯನ್ನು ಸಂಪಾದಿಸಿದ ಶ್ರೀಮಾನ್ ವಿನಾಯಕ ರಾಮಚಂದ್ರ ಪಟವರ್ಧನ್ ಅವರು ಕೂಡ ಆ ಋಚೆಗೆ ಮರಾಠಿಯಲ್ಲಿ ಅದೇ ರೀತಿಯ ಅರ್ಥವನ್ನು ಹೇಳಿದ್ದಾರೆ–

"ಅತ್ಯುಚ್ಚ ಅಶಾ ಸ್ವರ್ಲೋಕೀಂ ರಾಹಿಲ್ಯಾ ಪ್ರಮಾಣೇಂಚ್ ವೇದಾಂತೀಲ್ ಋಚ್ಯಾಂಚಾ ಅಕ್ಷರಾಂತ್ ಸರ್ವ ದೇವಾಂನೀಂ ವಾಸ್ ಕೇಲಾ ಆಹೇ. ತರ್ ಅಸೇಂ ಜೇಂ ಋಚೇಂಚೇಂ ಅಕ್ಷರ್ ತೇಂ ಜ್ಯಾಲಾ ಸಮಜತ ನಾಹೀಂ ತ್ಯಾಲಾ ವೇದ್ ಘೇಊನ್ ತರೀ ಕಾಯ್ ಕರಾವಯಾಚೇಂ ಆಹೇ ? ಆಣೀ ತೇಂ (ಅಕ್ಷರ್) ಜ್ಯಾಂನಾ ಸಮಜಲೇಂ ತೇ ಸರ್ವ ಆನಂದಾನೇ ಏಕತ್ರರಹಾತಾತ್ "

ಆ ಋಚೆಯ ಅರ್ಥವು ಅಷ್ಟು ಸರಳ ಹಾಗೂ ಸ್ಪಷ್ಟವಿದ್ದರೂ ಋಗ್ವೇದದ ಪ್ರತಿಯೊಂದು ಮಂತ್ರದಲ್ಲಿಯೂ ಆಧ್ಯಾತ್ಮಿಕ ಜ್ಞಾನದ ಹೊಳಪನ್ನು ಕಾಣುತಿದ್ದ ನಮ್ಮ ಆಚಾರ್ಯರು ಅಂದರೆ ನಿರುಕ್ತಕಾರನಾದ ಯಾಸ್ಕನು ಮತ್ತು ಅವನನ್ನನುಸರಿಸಿದ ವೇದ ಭಾಷ್ಯಕಾರರು ಹಿಂದೆ ಉದಹರಿಸಿದ ಋಚೆಗೆ ಇಲ್ಲದ ಸಲ್ಲದ ಅಪಾರ್ಥಗಳನ್ನು ಹೇಳಿದ್ದಾರೆ. ಅದಕ್ಕೊಂದು ಉದಾಹರಣೆಯಾಗಿ ಆಚಾರ್ಯ ಸಾಯಣನ ಭಾಷ್ಯವನ್ನನುಸರಿಸಿ ಮೈಸೂರಿನ ಆಸ್ಥಾನ ವಿದ್ವಾನ್ ಎಚ್. ಪಿ. ವೆಂಕಟ ರಾವ್ ಅವರು ಹೇಳಿದ ಅರ್ಥವನ್ನು ಇಲ್ಲಿ ಕೊಡುವೆನು–

ಋಚಃ = ಋಕ್ ಪ್ರಧಾನವಾದ ವೇದಗಳಿಂದ ಪ್ರತಿಪಾದಿತನಾದವನೂ ಅಕ್ಷರೇ = ನಾಶರಹಿತನೂ। ಪರಮೇ = ಉತ್ಕೃಷ್ಟನಾದ। ವ್ಯೋಮನಿ = (ಸರ್ವ) ರಕ್ಷಕನಾದವನೂ ಆದ। ಯಸ್ಮಿನ್ = ಯಾವ ಪರಮಾತ್ಮನಲ್ಲಿ। ವಿಶ್ವೇದೇವಾಃ = ಸಕಲ ದೇವತೆಗಳೂ। ಅಧಿ ನಿಷೇದುಃ = ಆಶ್ರಯ ಪಡೆದಿರುತ್ತಾರೆ। ಯಃ = ಯಾವನು। ತತ್ = ವೇದಾಧ್ಯಯನವು ಇಂತಹ ಪರತತ್ವವನ್ನು ತಿಳಿಯುವುದಕ್ಕಾಗಿಯೇ ಎಂಬುದಾಗಿ। ನ ವೇದ = ತಿಳಿಯುವುದಿಲ್ಲವೋ। ಸಃ = ಆ ಮನುಷ್ಯನು। ಋಚಾ = (ಲಕ್ಷವನ್ನೇ ಮುಟ್ಟದ) ಋಗಾದಿಗಳ ಪಠನದಿಂದ। ಕಿಂ ಕರಿಷ್ಯತಿ = ಯಾವ ಪ್ರಯೋಜನವನ್ನು ಪಡೆಯ ಬಲ್ಲನು ?। ಯ ಇತ್ = ಯಾರೇ ಆದರೂ ತತ್ = ಈ ತತ್ವವನ್ನು। ವಿದುಃ = ತಿಳಿಯುತ್ತಾರೋ। ತೇ ಇಮೇ = ಅವರು ಮಾತ್ರ ಸಮಾಸತೇ = ಬ್ರಹ್ಮೈಕ್ಯವನ್ನು ಪಡೆಯುತ್ತಾರೆ.

ಪೂರ್ವಗ್ರಹವಿಲ್ಲದೇ ಶುದ್ಧ ವಿಮರ್ಶಕ ದೃಷ್ಟಿಯಿಂದ ಹಿಂದೆ ಉದಹರಿಸಿದ

ಅರ್ಥವನ್ನು ಪರಿಶೀಲಿಸಿದಲ್ಲಿ ಅದು ಅಸನ್ವಿತವೂ ಅಸಂಗತವೂ ಆಗಿದೆಯೆಂದು ಹೇಳಲೇ ಬೇಕಾಗುವುದು. ಏಕೆಂದರೆ "ಋಚಃ" ಎಂಬ ಶಬ್ದವು "ಋಕ್" ಶಬ್ದದ ಪ್ರಥಮಾ ಮತ್ತು ದ್ವಿತೀಯಾ ವಿಭಕ್ತಿಗಳ ಬಹುವಚನರೂಪವಾಗಿರುವಂತೆಯೇ ಪಂಚಮೀ ಮತ್ತು ಷಷ್ಠೀ ವಿಭಕ್ತಿಗಳ ಏಕವಚನ ರೂಪವೂ ಆಗಿರುತ್ತದೆ. ಹಾಗೆಯೇ ಅಕ್ಷರೇ, ಪರಮೇ, ವ್ಯೋಮನಿ ಮತ್ತು ಯಸ್ಮಿನ್ ಎಂಬ ಶಬ್ದಗಳು ಸಪ್ತಮೀ ವಿಭಕ್ತಿಯ ಏಕವಚನ ರೂಪದಲ್ಲಿವೆ. ಋಚಃ ಶಬ್ದವನ್ನು ಪ್ರಥಮಾ ಮತ್ತು ದ್ವಿತೀಯಾವಿಭಕ್ತಿಗಳ ಬಹುವಚನರೂಪವೆಂದು ಗ್ರಹಿಸಿದರೆ ಅದರ ಅರ್ಥವು "ಋಚೆಗಳು" ಮತ್ತು "ಋಚೆಗಳನ್ನು" ಎಂದಾಗುವುದು. ಮತ್ತು ಪಂಚಮೀ ವಿಭಕ್ತಿಯ ಏಕವಚನ ರೂಪವೆಂದು ಗ್ರಹಿಸಿದರೆ ಅದರ ಅರ್ಥವು ಋಚೆಯಿಂದಾಗಿ ಇಲ್ಲವೇ ಋಚೆಗಿಂತ ಎಂದಾಗುವುದು. ಆದರೆ ಅವುಗಳಲ್ಲಿ ಯಾವುದೊಂದು ಅರ್ಥದ ರೂಪದೊಂದಿಗೂ ಸಪ್ತಮೀ ವಿಭಕ್ತಿಯ ರೂಪಗಳು ಹೊಂದಿಕೊಳ್ಳುವುದಿಲ್ಲ. ಮತ್ತು ವ್ಯಾಕರಣದ ನಿಯಮಗಳ ಪ್ರಕಾರ ಹೊಂದಿಸಲಿಕ್ಕೂ ಆಗುವುದಿಲ್ಲ. ಪರಂತು ಋಚಃ ಶಬ್ದವನ್ನು ಷಷ್ಠೀ ವಿಭಕ್ತಿಯ ಏಕವಚನ ರೂಪವೆಂದು ಗ್ರಹಿಸಿದರೆ ಅದರ ಅರ್ಥವು "ಋಚೆಯ" ಎಂದಾಗುವುದು. ಮತ್ತು ಅದರೊಂದಿಗೆ "ಅಕ್ಷರೇ" ಅಂದರೆ "ಅಕ್ಷರದಲ್ಲಿ" ಎಂಬ ಅರ್ಥದ ಒಂದು ಶಬ್ದ ಮಾತ್ರ ಹೊಂದಿಕೊಳ್ಳುವುದು. ಮತ್ತು "ಋಚೋऽಕ್ಷರೇ" ಎಂದಾಗಿ "ಋಚೆಯ ಅಕ್ಷರದಲ್ಲಿ" ಎಂಬರ್ಥವನ್ನು ಕೊಡುವುದು. ಉಳಿದ "ಪರಮೇ ವ್ಯೋಮನಿ" ಅಂದರೆ "ದೂರದ ಆಕಾಶದಲ್ಲಿ" ಎಂಬ ಅಂಶದೊಂದಿಗೆ "ಯಸ್ಮಿನ್" ಎಂಬ ಸಂಬಂಧೀ ಸರ್ವ ನಾಮದ ರೂಪವನ್ನು ಕೂಡಿಸಿ "ವಿಶ್ವೇ ದೇವಾಃ" ಹಾಗೂ "ಅಧಿ ನಿಷೇದುಃ" ಎಂಬ ಪದಗಳನ್ನು ಸೇರಿಸಿ ವ್ಯವಸ್ಥಿತವಾದ ಅನ್ವಯವನ್ನು ಮಾಡಲು ಸಾಧ್ಯವಾಗುತ್ತದೆ. ಅನ್ಯಥಾ ಆ ಶಬ್ದಗಳ ಅನ್ವಯವನ್ನು ಮಾಡಲು ಸಾಧ್ಯವಿಲ್ಲ. ಅಷ್ಟು ಮಾತ್ರವಲ್ಲದೇ ಋಗ್ವೇದದಲ್ಲಿ ವ್ಯೋಮನ್ ಎಂಬ ಶಬ್ದವು ಶಿವ ಅಥವಾ ಆಕಾಶ ಮತ್ತು ಅಂತರಿಕ್ಷ ಎಂಬ ಅರ್ಥದಲ್ಲಿ ಪ್ರಯುಕ್ತವಾಗಿದೆಯೇ ಹೊರತು ಆಚಾರ್ಯಯಾಸ್ಕನು ನಿರುಕ್ತದಲ್ಲಿ ಹೇಳಿದ ಇತರ ಅರ್ಥಗಳಲ್ಲಿ ಪ್ರಯೋಗಿಸಲ್ಪಟ್ಟಿಲ್ಲ. ಹಾಗೆಯೇ ಯಾಸ್ಕನು ಋಗ್ವೇದದೊಳಗಿನ ವಿಶ್ವೇ ದೇವತೆಗಳೆಂದರೆ ನಕ್ಷತ್ರ ದೇವತೆಗಳೆಂಬುದನ್ನೂ ತಿಳಿದುಕೊಂಡಿಲ್ಲ. ಮತ್ತು ಅಕ್ಷರ ಶಬ್ದದ ಅರ್ಥವನ್ನು "ವರ್ಣ" ಎಂದೂ ಗ್ರಹಿಸಲಿಲ್ಲ. ತಾತ್ಪರ್ಯವೇನೆಂದರೆ ಹಿಂದಿನ ಋಚೆಯಲ್ಲಿ ಅಕ್ಷರ ಶಬ್ದವು "ಧ್ವನಿಯ ಚಿಹ್ನ" ಅಥವಾ "ವರ್ಣ" ಎಂಬರ್ಥದಲ್ಲಿ ಸ್ವತಂತ್ರವಾದ ಸಂಜ್ಞೆಯಾಗಿ ಬಂದಿದೆಯೇ ಹೊರತು "ನಾಶರಹಿತ" ಎಂಬರ್ಥದಲ್ಲಿ ಇತರ ಸಂಜ್ಞೆಗಳ ವಿಶೇಷಣವಾಗಿ ಬಂದಿಲ್ಲ. ಅಕ್ಷರ ಶಬ್ದವು ವರ್ಣ ಎಂಬರ್ಥದಲ್ಲಿ ಬಂದಿರುವ ಇತರ ಋಚೆಗಳು ಮುಂದಿನಂತಿವೆ—

ಗೌರೀರ್ಮಿಮಾಯ ಸಲಿಲಾನಿ ತಕ್ಷತೀ
ಏಕಪದೀ ದ್ವಿಪದೀ ಸಾ ಚತುಷ್ಪದೀ।

ಅಷ್ಟಾಪದೀ ನವಪದೀ ಬಭೂವಷೀ
ಸಹಸ್ರಾಕ್ಷರಾ ಪರಮೇ ವ್ಯೋಮನ್ ॥ಋ. ೧-೧೬೪-೪೧॥

ಇದು ಮಳೆಗಾಲವಲ್ಲಿ ಮೋಡಗಳಿಂದ ಹೊರಡುವ ಗುಡುಗಿನ ಶಬ್ದವನ್ನು ಮತ್ತು ಮೋಡಗಳಲ್ಲಿ ತೋರುವ ವಿದ್ಯುತ್ತಿನ ಸೆಳೆಗಳ ಓಡಾಟವನ್ನು ವರ್ಣಿಸುವ ಕವಿತೆಯಾಗಿದೆ. ಆದುದರಿಂದ ಅದರ ಅರ್ಥವು ಮುಂದಿನಂತಾಗುತ್ತದೆ–

ಅರ್ಥ– ದೂರದ ಆಕಾಶದಲ್ಲಿ ಜಲಗಳನ್ನು ನಿರ್ಮಿಸುತ್ತ ಅಂದರೆ ಮಳೆಯನ್ನು ಸುರಿಸುವಾಗ ಸಾವಿರ ಅಕ್ಷರಗಳನ್ನು ಹೊರಡಿಸುವ ಆ ಬೆಳಗಿನ ದೇವಿಯು (ಅಂದರೆ ವಿದ್ಯುತ್ತು) ಒಂದು, ಎರಡು, ನಾಲ್ಕು, ಎಂಟು ಇಲ್ಲವೇ ಒಂಭತ್ತು ಕಾಲುಗಳುಳ್ಳವಳಾಗುತ್ತ (=ಸೆಳೆಗಳುಳ್ಳವಳಾಗುತ್ತ) ಗುಡುಗಿದಳು.

ಉಪ ತ್ವಾ ಸಾತಯೇ ನರೋ
ವಿಪ್ರಾಸೋ ಯಂತಿ ಧೀತಿಭಿಃ।
ಉಪಾಕ್ಷರಾ ಸಹಸ್ರಿಣೀ ॥ ಋ. ೭-೧೫-೯ ॥

ಅರ್ಥ– ವಿಪ್ರ ಜನರು ತಮ್ಮ ಅಭೀಷ್ಟ ಧನದ ಪ್ರಾಪ್ತಿಗಾಗಿ ಭಕ್ತಿಪೂರ್ವಕವಾದ ಸ್ತುತಿಗಳೊಂದಿಗೆ ನಿನ್ನನ್ನು ಸಮೀಪಿಸುತ್ತಾರೆ. ಮತ್ತು ಅವರ ಸಾವಿರ ಅಕ್ಷರಗಳುಳ್ಳ ಸ್ತೋತ್ರವು ಕೂಡ ನಿನ್ನ ಬಳಿಗೆನೇ ಸಾಗುತ್ತದೆ.

ಮುಂದೆ ಕೊಡಲಾಗುವ ಋಚೆಯು ಅಂಗಿರಸರು ಜರುಗಿಸುವ ಸಂವತ್ಸರ ಸತ್ರಕ್ಕೆ ಸಂಬಂಧಪಟ್ಟುದಾಗಿದ್ದು, ಆ ಸತ್ರವು ಸುಸೂತ್ರವಾಗಿ ಮುಗಿದ ಸಂತೋಷದಿಂದ ಅವರು ತಮ್ಮ ಪುರೋಹಿತನಾಗಿದ್ದ ನಾಭಾ ನೇದಿಷ್ಟನೆಂಬ ಋಷಿಗೆ ಕಿವಿಯಲ್ಲಿ ಎಂಟರ ಅಂಕೆಯನ್ನು ಅಂಕಿಸಿದ ಸಾವಿರ ದನಗಳನ್ನು ದಾನಮಾಡಿದುದನ್ನು ತಿಳಿಸುತ್ತದೆ– ಅಂದರೆ ಆ ಋಚೆಯಲ್ಲಿ ಎಂಟರ ಅಂಕೆಯ ಉಲ್ಲೇಖವಿದೆ–

ಇಂದ್ರೇಣ ಯುಜಾ ನಿಃ ಸೃಜಂತ ವಾಘತೋ
ವ್ರಜಂ ಗೋಮಂತಮಶ್ವಿನಮ್ ।
ಸಹಸ್ರಂ ಮೇ ದದತೋ ಅಷ್ಟಕರ್ಣ್ಯಃ
ಶ್ರವೋ ದೇವೇಷ್ವಕ್ರತ ॥ ಋ. ೧೦-೬೨-೭॥

ಅರ್ಥ– ಇಂದ್ರನಿಂದ ಅಂದರೆ ಉಜ್ವಲನಾಗಿ ಉರಿಯುವ ಅಗ್ನಿಯಿಂದ ಕೂಡಿದವರಾಗಿ ಅಂದರೆ ಅಗ್ನಿಯ ಸಹಾಯದಿಂದ ಋತ್ವಿಜರು ಅಂದರೆ ಯಜ್ಞನಿರ್ವಾಹಕರಾದ ಅಂಗಿರಸರು (ಪಣಿಗಳು ತಡೆದಿಟ್ಟ) ಗೋವುಗಳ ಮತ್ತು ಕುದುರೆಗಳ ಹಿಂಡನ್ನು ಹೊರಗೆ ಬಿಟ್ಟರು. ಮತ್ತು ನನಗೆ ಕಿವಿಯಲ್ಲಿ ಎಂಟರ ಅಂಕೆಯಿರುವ

ಸಾವಿರ ಗೋವುಗಳನ್ನು ಕೊಡುವಂಥವರಾಗಿ ದೇವತೆಗಳಲ್ಲಿ ಕೀರ್ತಿಯನ್ನು ಪಡೆದರು.

ಪ್ರೊ. ರಾಲ್ಫ್. ಟಿ. ಎಚ್. ಗ್ರಿಫಿಥ್ ಅವರ ಅರ್ಥ– With Indra for associate the priests have cleared the stable full of steeds and kine; Giving me a thousand with their eight-marked ears, they gained renown among the Gods.

ಈ ಋಚೆಯ ಮೇಲೆ- ಪ್ರೊ. ಮೆಕ್ಸ್‌ಮುಲ್ಲರರು ಪರಿಷ್ಕರಿಸಿ ಪ್ರಕಟಿಸಿದ ಆಚಾರ್ಯ ಸಾಯಣರ ಭಾಷ್ಯವು ಮುಂದಿನಂತಿದೆ–

"ವಾಘತಃ ಕರ್ಮಣಾಂ ವೋಢಾರೋ ವಿಶ್ವೇ ದೇವಾ ಅಂಗಿರಸೋ ವೇಂದ್ರೇಣ ಯುಜಾ ಸಹಾಯೇನ ನಿಃಸೃಜಂತ। ನಿರಗಮಯನ್। ಕಿಂ। ಗೋಮಂತಂ ಗೋಯುಕ್ತಂ। ಅಶ್ವಿನಮ್ ಅಶ್ವವಂತಂ। ಪಣಿಭಿರವರುದ್ಧಂ ವ್ರಜಂ। ತೇ. ಮೇ ಮಾಂ ಪ್ರತಿ ಸಹಸ್ರಂ ಸಹಸ್ರ ಸಂಖ್ಯಾಕಂ ಧನಂ ಸತ್ರಪರಿವೇಷಣಮಷ್ಟಕರ್ಣ್ಯಃ। ಅಷ್ಟ ಇತಿ ಅಶೂ ವ್ಯಾಪ್ತೌ ನಿಷ್ಠಾಯಾಂ ರೂಪಂ। ವಿಸ್ತೃತ ಕರ್ಣಾಃ। ಉಪಲಕ್ಷಣಮೇತತ್। ವ್ಯಾಪ್ತಸರ್ವಾವಯವಾ ಗಾಶ್ಚ ದದತೋ ಮಹ್ಯಂ ಪ್ರಯಚ್ಛತೋ ದೇವೇಷ್ವಿಂದ್ರಾದಿಷು ಶ್ರವೋ ಹವಿರ್ಲಕ್ಷಣಮನ್ನಂ ಕೀರ್ತಿಂವಾಕ್ರತ ಅಕೃಷತ।

ಈ ಭಾಷ್ಯದ ಆಧಾರದಿಂದ ಜೋಡೆನ್ ಸಂಸ್ಕೃತ ವಿದ್ವಾಂಸ ಪ್ರೊ. ವಿಲ್ಸನರು ಆ ಋಚೆಯ ಅರ್ಥವನ್ನು ಮುಂದಿನಂತೆ ಹೇಳಿದ್ದಾರೆ-

The acceptors of oblations with Indra for their associate have emptied the pasture crowded with cows and horses giving me a thousand full-grown cattle they gained renown amongst the Gods.

ಆದರೆ ಹಿಂದೆ ಉದಹರಿಸಿದ ಸಾಯಣ ಭಾಷ್ಯವು ಅಪ್ರಾಸಂಗಿಕವೂ ಅಪಾರ್ಥಕವೂ ಆಗಿದೆಯಲ್ಲದೇ, ವ್ಯಾಕರಣಕ್ಕೂ, ಪರಂಪರಾಗತ ಐತಿಹ್ಯಕ್ಕೂ ವಿರುದ್ಧವಾದುದೂ ಆಗಿದೆ. ಆದುದರಿಂದ ಆಚಾರ್ಯ ಸಾಯಣರು ಅಂಥ ದೂಷಿತ ಭಾಷ್ಯವನ್ನು ಹೇಳಬಹುದೇ? ಎಂದು ಸಂದೇಹ ಪಡುವಂತಾಗಿದೆ. ಆದರೆ ಆ ಸಂದೇಹವನ್ನು ನಿವಾರಿಸಲು ಸಾಯಣಾಚಾರ್ಯರು ಬರೆದ ಮೂಲ ಭಾಷ್ಯದ ಪ್ರತಿಯು ಭಾರತ ವರ್ಷದಲ್ಲಿ ಉಪಲಬ್ಧವಿಲ್ಲ. ಅದು ಇಂಗ್ಲಾಂಡಿನಲ್ಲಿದೆ. ಈಗ ಭಾರತ ವರ್ಷದಲ್ಲಿ ಉಪಲಬ್ಧವಿರುವ ಮುದ್ರಿತ ಪ್ರತಿಗಳೆಲ್ಲವೂ ಪ್ರೊ. ಮೆಕ್ಸ್‌ಮುಲ್ಲರರು ಪ್ರಕಟಿಸಿದ ಋಗ್ವೇದ ಸಂಹಿತೆಯಲ್ಲಿರುವ ಭಾಷ್ಯದ–ಯಥಾ

ವೃತಿಗಳಾಗಿವೆ. ಆದುದರಿಂದ ಆ ಸಂದೇಹವು ಇನ್ನಷ್ಟು ಬಲಗೊಳ್ಳುತ್ತದೆ. ಏಕೆಂದರೆ ಪ್ರೊ. ಮೆಕ್ಸ್‌ಮುಲ್ಲರರು ಮತ್ತು ಪ್ರೊ. ವಿಲ್ಸನ್ ಮೊದಲಾದ ಜೋಡೆನ್ ಸಂಸ್ಕೃತ ವಿದ್ವಾಂಸರು ವೇದಕಾಲೀನ ಭಾರತೀಯರಲ್ಲಿ ಲಿಪಿಯು ಪ್ರಚಲಿತವಿರಲಿಲ್ಲ ವೆನ್ನುವವರ ಪಕ್ಷದವರಾಗಿದ್ದಾರೆ. ಆದುದರಿಂದಲೇ ಅವರು ಹಿಂದಿನ ಋಚೆಯಲ್ಲಿ ಬಂದಿರುವ "ಅಷ್ಟ" ಶಬ್ದದ ಅರ್ಥವನ್ನು "ಎಂಟು" ಎಂದು ಹೇಳದೇ "ಶರೀರದಲ್ಲಿ ಚೆನ್ನಾಗಿ ಬಲಿತ" ಎಂದು ಹೇಳಿದ್ದಾರೆ. ಅದಕ್ಕೆ ಬೇರೊಂದು ಪ್ರಮಾಣವನ್ನೂ ಉದಹರಿಸಬಹುದು.

ಸರ್ ಮೊನಿಯರ್ ಎಮ್. ವಿಲಿಯಮ್ಸ್ ಎಂಬ ಜೋಡೆನ್ ಸಂಸ್ಕೃತ ವಿದ್ವಾಂಸರು ತಾನು ಸಂಪಾದಿಸಿದ "ಸಂಸ್ಕೃತ–ಇಂಗ್ಲೀಷ್ ಶಬ್ದ ಕೋಶದ" ಉಪೋದ್ಘಾತದಲ್ಲಿ ಬ್ರಾಹ್ಮೀವರ್ಣಮಾಲೆಯು ಸೆಮಿಟಿಕ್ ವರ್ಣಮಾಲೆಯಿಂದ ಹುಟ್ಟಿದುದೆಂದು ವಾದಿಸಿದ್ದಾರಲ್ಲದೇ ವೇದಕಾಲೀನ ಭಾರತೀಯರಲ್ಲಿ ಲಿಪಿಯು ಪ್ರಚಲಿತವಿರಲಿಲ್ಲವೆಂದು ಸಾಧಿಸಲು ಹಿಂದೆ ಉದಹರಿಸಿದ ಋಚೆಯೊಳಗಿನ "ಅಷ್ಟ ಕರ್ಣ್ಯಃ" ಎಂಬ ಶಬ್ದಕ್ಕೆ ತನ್ನದೇ ಆದ ಒಂದು ವಿಶಿಷ್ಟ ಅರ್ಥವನ್ನು ವಿವರಿಸಿದ್ದಾರೆ– "ಅಷ್ಟ mfn." marked, branded" only in compound; with karna–branded on the ear Pan. VI, 3, 115 (i) a cow oranded on the ear RV. X, 62, 7. ಎಂಬುದಾಗಿ ಹೇಳಿದ್ದಾರೆ. ಅಂದರೆ– ಸಮಾಸಪದಗಳಲ್ಲಿ "ಅಷ್ಟ" ಎಂಬುದರ ಅರ್ಥವು "ಅಂಕಿಸಿದ, ಬರೆಹಾಕಿದ" ಎಂತಲೂ "ಅಷ್ಟಕರ್ಣ" ಎಂಬುದರ ಅರ್ಥವು "ಕಿವಿಯಲ್ಲಿ ಬರೆಹಾಕಿದಂಥ" ಎಂತಲೂ ಹೇಳಿ ಆಚಾರ್ಯ ಪಾಣಿನಿಯ ೬-೩-೧೧೫ನೆಯ ಸೂತ್ರವನ್ನು ಸೂಚಿಸಿದ್ದಾರೆ. ಮತ್ತು ಋಗ್ವೇದದ ೧೦-೬೨-೭ ನೆಯ ಋಚೆಯೊಳಗಿನ "ಅಷ್ಟ ಕರ್ಣ್ಯ" ಶಬ್ದದ ಅರ್ಥವು "ಕಿವಿಯಲ್ಲಿ ಬರೆ ಹಾಕಿದ ದನ" ಎಂದು ಹೇಳಿದ್ದಾರೆ.

ಇದರಲ್ಲಿ ವಿಚಾರಣೀಯ ಅಂಶವೆಂದರೆ "ಅಷ್ಟಕರ್ಣ" ಎಂಬ ಸಮಾಸ ಪದದ ಅರ್ಥವು "ಕಿವಿಯಲ್ಲಿ ಬರೆ ಹಾಕಿದ" ಎಂದಿಷ್ಟೇ ಆಗುವುದಾದರೆ ಅದೇ ಪದವು "ಅಷ್ಟ ಕರ್ಣ್ಯ" ಎಂದಾದೊಡನೆ "ಕಿವಿಯಲ್ಲಿ ಬರೆಹಾಕಿದ ದನ" ಎಂದಾಗುವುದು ಹೇಗೆ? ಅಲ್ಲಿ "ದನ" ಶಬ್ದವು ಬರುವುದು ಹೇಗೆ? ಎಂಬುದಾಗಿದೆ. ಅಲ್ಲದೇ ಕಿವಿ ಯಲ್ಲಿ ಬರೆ ಹಾಕಲು ಒಂದು ಚಿಹ್ನೆಯು ಬೇಕೇ ಬೇಕಾಗುತ್ತದೆ. ಆದರೆ ಅವರ ವಿವರಣೆಯಲ್ಲಿ ಅಂಥ ಚಿಹ್ನೆಯ ಉಲ್ಲೇಖವೇ ಇಲ್ಲ. ಅಂದರೆ ಕಿವಿಯಲ್ಲಿ ಯಾವ ಚಿಹ್ನೆಯನ್ನು ಬರೆಹಾಕಲಾಗುತಿತ್ತೆಂದು ತಿಳಿಯುವುದಿಲ್ಲ. ಅವರು ಅಷ್ಟಕರ್ಣ ಶಬ್ದದ ರೂಪಸಿದ್ಧಿಗಾಗಿ ಆಚಾರ್ಯ ಪಾಣಿನಿಯ ವ್ಯಾಕರಣ ಸೂತ್ರದ ೬–೩-೧೧೫ ಎಂಬ ಸಂಖ್ಯೆಯನ್ನು ಸೂಚಿಸಿದ್ದಾರೆ. ಆ ಸೂತ್ರವು ಮುಂದಿನಂತಿದೆ- **"ಕರ್ಣೇ ಲಕ್ಷಣಸ್ಯಾವಿಷ್ಟಾಷ್ಟಪಂಚಮಣಿಭಿನ್ನಚ್ಛಿನ್ನಚ್ಛಿದ್ರಸ್ರುವಸ್ವಸ್ತಿಕಸ್ಯ॥** ಇದರಲ್ಲಿ "ಕಿವಿಯಲ್ಲಿ

ಗುರುತು ಹಾಕುವಂಥ" ಎಂಬುದಾಗಿ "ವಿಷ್ಟ, ಅಷ್ಟ, ಪಂಚ, ಮಣಿ, ಭಿನ್ನ, ಛಿನ್ನ, ಛಿದ್ರ, ಸ್ರುವ, ಮತ್ತು ಸ್ವಸ್ತಿಕದ" ಎಂದು ಒಂಭತ್ತು ಚಿಹ್ನೆಗಳ ಹೆಸರುಗಳಿವೆ. ಮತ್ತು ಆ ಸೂತ್ರದಲ್ಲಿ "ಅಷ್ಟ" ಎಂಬ ಶಬ್ದವು "ಎಂಟರ ಅಂಕೆ" ಎಂಬರ್ಥದಲ್ಲಿ ಬಂದಿದೆಯೇ ಹೊರತು ಸರ್ ವಿಲಿಯಮ್ಸ್ ಅವರು ವಿವರಿಸಿದಂತೆ "ಬರೆ ಹಾಕಿದ" ಎಂಬರ್ಥದಲ್ಲಿ ಅಲ್ಲ. ಅಷ್ಟು ಮಾತ್ರವಲ್ಲದೇ ಆ ಸೂತ್ರದಲ್ಲಿ ಅಷ್ಟ ಶಬ್ದದೊಂದಿಗೆ "ಪಂಚ" ಅಂದರೆ "ಐದು" ಎಂಬ ಅಂಕೆಯ ಉಲ್ಲೇಖವೂ ಇದೆ. ಆದುದರಿಂದ "ಅಷ್ಟ" ಎಂಬುದರ ಅರ್ಥವು "ಎಂಟರ ಅಂಕೆ" ಎಂಬುದರಲ್ಲಿ ಸಂದೇಹವುಳಿಯುವುದಿಲ್ಲ. ಅಲ್ಲದೇ ಆಚಾರ್ಯ ಪಾಣಿನಿಯ ಸೂತ್ರದಲ್ಲಿ ಕೂಡ "ಕಿವಿಯಲ್ಲಿ ಗುರುತು ಹಾಕುವ" ಎಂದು ಸ್ಪಷ್ಟವಾಗಿ ಹೇಳಿರುವುದರಿಂದ ಅದರಲ್ಲಿ ಸಂದೇಹಕ್ಕೆ ಎಡೆಯೇ ಇಲ್ಲ. ದನಗಳ ಕಿವಿಗಳಲ್ಲಿ ಸಂಖ್ಯೆಗಳನ್ನು ಅಂಕಿಸುವ ಕ್ರಮವು ಪ್ರಾಚೀನ ಕಾಲದಿಂದ ಸಾಗಿ ಬಂದುದಾಗಿದೆ. ಮತ್ತು ಅವುಗಳ ಅರ್ಥಗಳು ಕೂಡ ಜನರಲ್ಲಿ ಪಾರಂಪರ್ಯವಾಗಿ ಸಾಗಿ ಬಂದವುಗಳಾಗಿವೆ. ಆದುದರಿಂದ "ಅಷ್ಟಕರ್ಣೀ" ಎಂದರೆ "ಕಿವಿಯಲ್ಲಿ ಎಂಟರ ಚಿಹ್ನೆ ಇರುವ ದನ" ಎಂಬ ಅರ್ಥವನ್ನು ಯಾರೂ ಪರಿವರ್ತಿಸುವಂತಿಲ್ಲ. ಅಲ್ಲದೇ "ಅಷ್ಟ" ಶಬ್ದವು "ಅಶ್" ಧಾತುವಿನಿಂದ ಹುಟ್ಟಿದುದೆಂಬುದು ನಿರುಕ್ತಕಾರನಾದ ಯಾಸ್ಕನ ಕಲ್ಪನೆಯಾಗಿದೆಯೆನ್ನಬಹುದೇ ಹೊರತು ವಾಸ್ತವವೆನ್ನಲಾಗುವುದಿಲ್ಲ. ಏಕೆಂದರೆ ಅಷ್ಟ ಶಬ್ದವು ಯಾಸ್ಕನಿಗಿಂತ ಎಷ್ಟೋ ಸಾವಿರ ವರ್ಷಗಳಿಗೆ ಪ್ರಾಚೀನವಾಗಿದೆ. ಮತ್ತು ಶಬ್ದಗಳು ಆಖ್ಯಾತಜನ್ಯಗಳಲ್ಲವೆಂಬ ಅವನ ಮತಕ್ಕೂ ಅದು ವಿರುದ್ಧವಾಗಿದೆ.

ಹಿಂದೆ ವಿವರಿಸಿದಂತೆ ಭಾರತೀಯರಲ್ಲಿ ಋಗ್ವೇದ ಪೂರ್ವಕಾಲದಿಂದಲೂ ಅಂಕೆಗಳ ಸಹಿತವಾದ ವರ್ಣಮಾಲೆಯು ಪ್ರಚಲಿತವಿದ್ದಿತೆಂದು ಋಗ್ವೇದದ ಮಂತ್ರಗಳಿಂದಲೇ ಸಿದ್ಧವಾಗುತ್ತದೆ. ಆದುದರಿಂದ ವೇದಕಾಲೀನ ಭಾರತೀಯರಲ್ಲಿ ಲಿಪಿಯು ಪ್ರಚಲಿತವಿರಲಿಲ್ಲವೆಂದು ಪಾಶ್ಚಾತ್ಯ ವಿದ್ವಾಂಸರು ಮುಂದೆ ತಂದಿದ್ದ ಸಕಲ ವಾದಗಳೂ ವ್ಯರ್ಥವಾಗುತ್ತವೆ.

ಆರ್ಯ ಜನರು ಪ್ರತಿಯೊಂದು ಧ್ವನಿಗೆ ಒಂದರಂತೆ ನಿಶ್ಚಿತ ಚಿಹ್ನೆಯಿರುವಂಥ ಬ್ರಾಹ್ಮೀ ವರ್ಣಮಾಲೆಯನ್ನು ನಿರ್ಮಿಸುವ ಮೊದಲು ತಾವು ರಚಿಸಿದ ದೇವರ ಸ್ತುತಿಗಳನ್ನು ನೆನಪಿನಲ್ಲಿಡಲು ಚಿತ್ರ ಸಂಕೇತಗಳನ್ನು ಉಪಯೋಗಿಸುತ್ತಿದ್ದರೆಂದು ಮತ್ತು ಆ ಕಾಲದಲ್ಲಿ ಅವರು ಉಪಯೋಗಿಸುತ್ತಿದ್ದ ಚಿತ್ರಮಿಶ್ರಿತ ಲಿಪಿಯು ಪರಿಪೂರ್ಣತೆಯನ್ನು ಪಡೆದಿರಲಿಲ್ಲವೆಂದು ಸಿಂಧೂ ಕಣಿವೆಯ ಅಗೆತಗಳಲ್ಲಿ ಬೆಳಕಿಗೆ ಬಂದಿರುವ ಹಾಲುಗಲ್ಲಿನ ಬಿಲ್ಲೆಗಳಿಂದ ಸಿದ್ಧವಾಗುತ್ತದೆ. ಪಾಶ್ಚಾತ್ಯ ವಿದ್ವಾಂಸರು ಸಿಂಧೂ ಸಂಸ್ಕೃತಿಯನ್ನು ಆರ್ಯಜನರದ್ದೆಂದು ಒಪ್ಪಲು ಇಷ್ಟವಿಲ್ಲದೇ ಅದನ್ನು ಆರ್ಯೇತರ ಜನರದ್ದೆಂದು ವಾದಿಸುತ್ತ ಬಂದಿದ್ದಾರಾದರೂ ಯೋಗ್ಯ ಹಾಗೂ ಸಮರ್ಪಕವಾದ ಪ್ರಮಾಣಗಳ ಆಧಾರದಿಂದ ಅದನ್ನು

ಆರ್ಯಜನರದ್ದೆಂದು ಸಿದ್ಧಪಡಿಸಿದರೆ ಅವರು ಒಪ್ಪಿಕೊಳ್ಳಲೇಬೇಕಾಗುವುದು. ಏಕೆಂದರೆ ಸಿಂಧೂ ಬಿಲ್ಲೆಗಳ ಮೇಲಿರುವ  ಈ ಮೂರು ಆಕೃತಿಗಳು ಆರ್ಯಜನರ ಮುಖ್ಯ ಕುರುಹುಗಳೆಂಬುದರಲ್ಲಿ ಈಗ ಯಾವ ಸಂದೇಹವೂ ಉಳಿದಿಲ್ಲ. ಹಾಗೆಯೇ ಸಿಂಧೂ ಬಿಲ್ಲೆಗಳ ಮೇಲಿನ ಬರಹದ ಸಾಲುಗಳಲ್ಲಿ ಕಂಡು ಬರುವ  ಈ ಆಕೃತಿಗಳ ಉಲ್ಲೇಖವು ಯಜುರ್ವೇದದ ತೈತ್ತಿರೀಯ ಸಂಹಿತೆಯಲ್ಲಿ ಇದೆಯಲ್ಲದೇ ಆ ಎಲ್ಲ ಆಕೃತಿಗಳು ಬ್ರಾಹ್ಮೀ ವರ್ಣಮಾಲೆಯಲ್ಲಿಯೂ ಇವೆ. ಹಾಗೆಯೇ ಸಿಂಧೂ ಬಿಲ್ಲೆಗಳ ಮೇಲಿರುವ ಚಿತ್ರ ಸಂಕೇತಗಳ ವರ್ಣನೆಯು ಋಗ್ವೇದದಲ್ಲಿ ಮತ್ತು ಯಜುರ್ವೇದದಲ್ಲಿ ಇದೆ. ಆದರ ಮೇಲಿಂದ ಸಿಂಧೂ ಸಂಸ್ಕೃತಿಗೂ, ವೇದಗಳಿಗೂ, ಬ್ರಾಹ್ಮೀ ವರ್ಣಮಾಲೆಗೂ ನೇರಾದ ಸಂಬಂಧವಿದೆಯೆಂದು ಸ್ಪಷ್ಟವಾಗಿ ಸಿದ್ಧವಾಗುತ್ತದೆ.

ಲಿಪಿಯ ಆವಿಷ್ಕಾರ ಮತ್ತು ವಿಕಾಸ

ಪ್ರಾಚೀನ ಕಾಲದ ಮನುಷ್ಯನು ತನ್ನ ಭಾವನೆಗಳನ್ನು ದೃಶ್ಯರೂಪದಿಂದ ತೋರಿಸಲು ಮೊತ್ತ ಮೊದಲು ಚಿತ್ರಗಳನ್ನು ಉಪಯೋಗಿಸಿದ್ದನೆಂಬುದು ವಿದ್ವಾಂಸರೆಲ್ಲರೂ ಸ್ವೀಕರಿಸಿದ ಒಂದು ಸಿದ್ಧಾಂತವಾಗಿದೆ. ಆದರೆ ಮೊತ್ತ ಮೊದಲಿನ ಮನುಷ್ಯನು ಯಾವ ಭಾವನೆಯಿಂದ ಪ್ರೇರಿತನಾಗಿ ಚಿತ್ರವನ್ನು ಬರೆದಿದ್ದನೆಂದು ನಿಖರವಾಗಿ ಹೇಳಲಾಗದಿದ್ದರೂ, ಚಿತ್ರಮೂಲದಿಂದಲೇ ಲಿಪಿಯು ವಿಕಸಿತವಾಗಿದ್ದಿತೆಂಬುವನ್ನು ಪೂರ್ಣ ವಿಶ್ವಾಸದಿಂದ ಹೇಳಬಹುದು. ಮತ್ತು ಅದಕ್ಕೆ ಲಿಖಿತ ಪ್ರಮಾಣಗಳೂ ಇವೆ.

ಅವನು ಮೊದಲು ತಾನು ಕಾಣುವ ವಸ್ತುಗಳ ಅಂದರೆ ಪ್ರಾಣಿಗಳ, ಮರಗಳ, ಉಪಕರಣ ಇತ್ಯಾದಿಗಳ ಚಿತ್ರಗಳನ್ನು ಬಿಡಿಸಿದ್ದನು. ಆಗ ಅವುಗಳು ಬರಿಯ ಪ್ರತಿಕೃತಿಗಳಾಗಿದ್ದುವು. ಮುಂದೆ ಅವನು ಹಲವು ಬಗೆಯ ಚಿತ್ರಗಳನ್ನು ಯಥಾವತ್ತಾಗಿ ಬರೆಯಲು ಶಕ್ತನಾದಾಗ ಆ ಚಿತ್ರಗಳಲ್ಲಿ ತನಗೆ ಬೇಕಾದಂಥ ತಿದ್ದುಪಡಿಗಳನ್ನು ಮಾಡಿ ತನ್ನ ಭಾವನೆಗಳನ್ನು ಸೂಚಿಸತೊಡಗಿದನು. ಆಗ ಅಂಥ ಚಿತ್ರಗಳು ಬರಿಯ ಪ್ರತಿಕೃತಿಗಳಾಗಿಯೇ ಉಳಿಯದೇ ಚಿತ್ರ ಸಂಕೇತಗಳಾಗಿ ಮಾರ್ಪಟ್ಟುವು. ಆದರೆ ಅದನ್ನು ಹಾಗೆ ತಿದ್ದಿ ಚಿತ್ರಿಸಿದವನು ಅದರ ರಹಸ್ಯವನ್ನು ವಿವರಿಸಿ ಹೇಳದಿದ್ದರೆ ಇತರರಿಗೆ ಅದು ಫಕ್ಕನೇ ತಿಳಿಯುತ್ತಿರಲಿಲ್ಲ.

ಮುಂದೆ ಮನುಷ್ಯನ ವಿಚಾರ ಶಕ್ತಿಯು ಮೊದಲಿಗಿಂತ ಹೆಚ್ಚು ವಿಕಸಿತವಾದಾಗ ಅವನು ಬೇರೆ ಬೇರೆ ಹೆಸರುಗಳ ಚಿತ್ರಗಳನ್ನು ಸಾಲಾಗಿ ಬರೆದು ಪ್ರತಿಯೊಂದು ಚಿತ್ರದ ಹೆಸರಿನ ಮೊದಲಿನ ಅಕ್ಷರವನ್ನು ಅನುಕ್ರಮವಾಗಿ ಹೊಂದಿಸಿ

ಬೇರೆ ಬೇರೆ ಶಬ್ದಗಳನ್ನು ಮತ್ತು ವಾಕ್ಯಗಳನ್ನು ರಚಿಸ ತೊಡಗಿದನು. ಅದು ಕಾಲ ಕ್ರಮೇಣ ಚಿತ್ರಲಿಪಿಯೆಂಬ ಹೆಸರನ್ನು ಪಡೆಯಿತು.

ಮನುಷ್ಯನು ಇಷ್ಟಷ್ಟು ಉನ್ನತಿಯನ್ನು ಸಾಧಿಸಿದಾಗ ತನ್ನ ಬಾಯಿಯಿಂದ ಹೊರಡುವ ಎಲ್ಲ ಧ್ವನಿಗಳ ಮೂಲರೂಪವನ್ನು ಗುರುತಿಸಿ ಅವುಗಳಿಗೆ ಬೇರೆ ಬೇರೆ ಚಿಹ್ನೆಗಳನ್ನು ನಿರ್ಮಿಸಿದನು. ಅವುಗಳು ವರ್ಣಗಳೆನಿಸಿಕೊಂಡವು. ತರುವಾಯ ಅವನು ಆ ವರ್ಣಗಳನ್ನು ವ್ಯಂಜನಗಳೆಂತಲೂ, ಸ್ವರಗಳೆಂತಲೂ ವಿಭಜಿಸಿದನಲ್ಲದೇ ಆ ವರ್ಣಗಳ ಉಚ್ಚಾರ ಸ್ಥಾನಗಳಿಗನುಸಾರವಾಗಿ ಅವುಗಳನ್ನು ವರ್ಗಗಳನ್ನಾಗಿ ಮಾಡಿದನು:- ಅದು ಲಿಪಿಯ ವಿಕಾಸವಲ್ಲಿ ಕೊನೆಯ ಹಂತವಾಗಿತ್ತು. ಭಾರತ ವರ್ಷದಲ್ಲಿ ನೆಲಸಿದ ಆರ್ಯಜನರ ಲಿಪಿವಿಕಾಸದ ಕೊನೆಯ ಹಂತವು ಮತ್ತು ಮೊತ್ತ ಮೊದಲಿನ ಧ್ವನಿ ಲಿಪಿಯು ಬ್ರಾಹ್ಮೀ ವರ್ಣಮಾಲೆಯಾಗಿತ್ತು. ಮತ್ತು ಆ ಬ್ರಾಹ್ಮೀ ವರ್ಣಮಾಲೆಯೇ ಕಾಲಾಂತರದಲ್ಲಿ ಬಗೆಬಗೆಯ ರೂಪಾಂತರಗಳನ್ನು ಹೊಂದುತ್ತಾ ಹೋಗಿ ಈಗ ಭಾರತ ವರ್ಷದಲ್ಲಿ ಪ್ರಚಲಿತವಿರುವ ಪ್ರಾದೇಶಿಕ ವರ್ಣಮಾಲೆಗಳಾಗಿ ಮಾರ್ಪಟ್ಟಿತ್ತು.

ಸಿಂಧೂ ಕಣಿವೆಯ ಅಗೆತಗಳಲ್ಲಿ ಬೆಳಕಿಗೆ ಬಂದಿರುವ ಹಾಲುಗಲ್ಲಿನ ಬಿಲ್ಲೆಗಳ ಮೇಲೆ ಚಿತ್ರ ಸಂಕೇತಗಳು ಮಾತ್ರವಲ್ಲದೇ ಶುದ್ಧ ಚಿತ್ರಲಿಪಿಯೂ, ಚಿತ್ರಮಿಶ್ರವಿರುವ ಧ್ವನಿಲಿಪಿಯೂ ಇದೆ. ಅವುಗಳಲ್ಲಿ ಚಿತ್ರಲಿಪಿ ಇರುವ ಬಿಲ್ಲೆಗಳ ಸಂಖ್ಯೆಯು ಬಹಳ ಚಿಕ್ಕದಾಗಿದೆ. ಅಧಿಕಾಂಶ ಬಿಲ್ಲೆಗಳ ಮೇಲೆ ಮಿಶ್ರಲಿಪಿಯೇ ಉಪಯೋಗಿಸಲ್ಪಟ್ಟಿದೆ. ಅಂದರೆ ಚಿತ್ರಗಳ ಜೊತೆಯಲ್ಲಿ ಧ್ವನಿಯ ಚಿಹ್ನೆಗಳೂ ಉಪಯೋಗಿಸಲ್ಪಟ್ಟಿವೆ. ಆದುದರಿಂದ ಆ ಲಿಪಿಯು ಪರಿಪೂರ್ಣತೆಯನ್ನು ಪಡೆದಿರಲಿಲ್ಲವೆನ್ನಬಹುದಾಗಿದೆ. ಅಲ್ಲದೇ ಯಾವುದಾದರೂ ಒಂದೇ ಪದ್ಧತಿಯನ್ನನುಸರಿಸಿ ಆ ಬಿಲ್ಲೆಗಳ ಮೇಲಿನ ಬರಹವನ್ನು ಈ ತನಕ ಓದಲು ಸಾಧ್ಯವಾಗಿಲ್ಲವಾದುದರಿಂದ ಆ ಎಲ್ಲ ಬಿಲ್ಲೆಗಳು ಒಂದೇ ಕಾಲದವುಗಳಾಗಿರದೇ ಬೇರೆ ಬೇರೆ ಕಾಲದಲ್ಲಿ ಬೇರೆ ಬೇರೆ ಪಂಗಡಗಳ ಜನರು ಬೇರೆ ಬೇರೆ ಪದ್ಧತಿಯನ್ನನುಸರಿಸಿ ನಿರ್ಮಿಸಿದವುಗಳಾಗಿರಬಹುದೆಂಬ ಅನುಮಾನ ಬರುತ್ತದೆ. ಅಷ್ಟು ಮಾತ್ರವಲ್ಲದೇ ಕಾಲ ಸಂದಂತೆ ಮೂಲ ಲಿಪಿಯ ವರ್ಣ ಚಿಹ್ನೆಗಳಲ್ಲಿ ರೂಪಾಂತರಗಳೂ ಆಗಿರಬಹುದಾಗಿದೆ. ಮತ್ತು ಮೂಲದಲ್ಲಿ ಇಲ್ಲದ ಕೆಲವು ಹೊಸ ಚಿಹ್ನೆಗಳೂ ಅದರಲ್ಲಿ ಸೇರಿರಬಹುದಾಗಿದೆ.

ಅಕ್ಷರ ಶಬ್ದದ ಉತ್ಪತ್ತಿ

ಋಗ್ವೇದದ ಕೆಲವು ಮಂತ್ರಗಳಲ್ಲಿ "ಅಕ್ಷರ" ಎಂಬ ಶಬ್ದವು ಸಂಜ್ಞಾರೂಪ

ದಿಂದ ಬಂದಿರುವಲ್ಲಿ ಅದು ವರ್ಣ ಅಥವಾ ಧ್ವನಿ ಚಿಹ್ನೆ ಎಂಬರ್ಥವನ್ನು ಸೂಚಿಸು ತ್ತದೆಂಬು ಹಿಂದೆ ಸ್ಪಷ್ಟಪಡಿಸಿದೆ. ಆದರೆ ಅಕ್ಷರ ಶಬ್ದವು ಮೂಲದಲ್ಲಿ "ಓವ್" ಎಂಬ ಸಂಯುಕ್ತ ಧ್ವನಿಯ ಮತ್ತು ಅದರ "ಸಂಕೇತದ" ಹೆಸರಾಗಿದ್ದಿತೆಂದು ಕೆಲವ ಉಪನಿಷತ್ತುಗಳಿಂದ ತಿಳಿದು ಬರುತ್ತದೆ. ಮಾಂಡೂಕ್ಯೋಪನಿಷತ್ತಿನೊಳಗಿನ ವಾಕ್ಯಗಳಿಂದಾದರೋ ಓವ್ ಎಂಬ ಧ್ವನಿಯು ಮತ್ತು ಅದರ ಸಂಕೇತವು ಯಾವ ಮೂಲದಿಂದ ಹುಟ್ಟಿದ್ದಿತೆಂದು ಕೂಡ ಗೊತ್ತಾಗುತ್ತದೆ. ಅಷ್ಟು ಮಾತ್ರವಲ್ಲ ಧ್ವನಿಯ ಚಿಹ್ನೆಗಳಲ್ಲಿ ಓಂಕಾರದ ಚಿಹ್ನೆಯೇ ಮೊತ್ತ ಮೊದಲು ರೂಪು ತಳೆದಿದ್ದಿ ತೆಂದು ಕೂಡ ಗೊತ್ತಾಗುತ್ತದೆ. ಮಾಂಡೂಕ್ಯೋಪನಿಷತ್ತಿನಲ್ಲಿ ಓಂಕಾರದ ಕುರಿತಾಗಿ ಬಂದಿರುವ ಉಲ್ಲೇಖಗಳು ಆಧ್ಯಾತ್ಮಿಕ ವಿಚಾರಗಳಿಗೆ ಸಂಬಂಧಪಟ್ಟವು ಗಳಾಗಿದ್ದರೂ, ಆ ಉಲ್ಲೇಖಗಳಲ್ಲಿ ಓಂಕಾರದ ಸಂಕೇತವು ಅಥವಾ ಚಿಹ್ನೆಯು ಯಾವ ಮೂಲದಿಂದ ಹುಟ್ಟಿದ್ದಿತೆಂಬುದನ್ನು ಸೂಚಿಸುವ ರಹಸ್ಯವು ಅಡಗಿದೆಯೆಂದು ಸ್ಪಷ್ಟವಾಗಿ ಗೊತ್ತಾಗುತ್ತದೆ. ಆ ಉಲ್ಲೇಖಗಳು ಮುಂದಿನಂತಿವೆ–

ಓಮಿತ್ಯೇತದಕ್ಷರಮಿದಃ ಸರ್ವಂ ತಸ್ಯೋಪವ್ಯಾಖ್ಯಾನಮ್। ಭೂತಂ, ಭವದ್ ಭವಿಷ್ಯದಿತಿ ಸರ್ವಮೋಂಕಾರ ಏವ ॥೧॥

ಅರ್ಥ- ಓವ್ ಎಂಬುದಿದು ಒಂದು ಅಕ್ಷರವಾಗಿದೆ, ಅಂದರೆ ವರ್ಣ ರೂಪವಾಗಿದೆ. ಅದು ದೇವತಾತ್ಮಕವಾಗಿರುವುದರಿಂದ ನಾಶವಿಲ್ಲದುದಾಗಿದೆ. ಇದೆಲ್ಲವೂ ಅಂದರೆ ಅದರಿಂದ ಹುಟ್ಟಿದ ಜ್ಞಾನ ಸಾಹಿತ್ಯವೆಲ್ಲವೂ ಅದರ ಉಪ ವ್ಯಾಖ್ಯಾನವಾಗಿದೆ. ಆ ರೀತಿಯಲ್ಲಿ ಆಗಿ ಹೋದುದು ಆಗುತ್ತಲಿರುವುದು ಮತ್ತು ಆಗಲಿರುವುದು ಎಲ್ಲವೂ ಓಂಕಾರವೇ.

ಸರ್ವಂ ಹ್ಯೇತದ್ಬ್ರಹ್ಮಾಯಮಾತ್ಮಾ ಬ್ರಹ್ಮ ಸೋಽಯಮಾತ್ಮಾ ಚತು ಷ್ಪಾತ್ ॥೨॥

ಅರ್ಥ – ಇದೆಲ್ಲವೂ–ಅಂದರೆ ಓಂಕಾರದಿಂದ ಹುಟ್ಟಿದ ಜ್ಞಾನ ಸಾಹಿತ್ಯ ವೆಲ್ಲವೂ ಬ್ರಹ್ಮವಾಗಿದೆ. ಈ ಆತ್ಮವೂ ಅಂದರೆ ಓಂಕಾರದ ಒಡಲು ಕೂಡ ಬ್ರಹ್ಮ ವಾಗಿದೆ. ಅಂಥ ಆ ಒಡಲು ನಾಲ್ಕು ಕಾಲುಗಳುಳ್ಳುದಾಗಿದೆ. ಈ ವಾಕ್ಯದೊಳಗಿನ ಆತ್ಮಾ ಶಬ್ದವು ಜೀವಾತ್ಮನನ್ನು ಸೂಚಿಸುತ್ತದೆಂದು ಗ್ರಹಿಸಲು ಸಾಧ್ಯವಿಲ್ಲ. ಏಕೆಂದರೆ ಯಾವ ವೈದಿಕ ಸಾಹಿತ್ಯದಲ್ಲಿಯೂ ಜೀವಾತ್ಮನಿಗೆ ನಾಲ್ಕು ಕಾಲುಗಳಿವೆ ಯೆಂದು ಹೇಳಿಲ್ಲ. ಅಲ್ಲದೇ ವೇದಗಳಲ್ಲಿ ಆತ್ಮಾ ಎಂಬ ಶಬ್ದವು ತಾನು ಮತ್ತು ಶರೀರ ಎಂಬ ಎರಡು ಅರ್ಥಗಳಲ್ಲಿ ಮಾತ್ರ ಪ್ರಯುಕ್ತವಾಗಿದೆ. ಅಲ್ಲದೇ ಹಿಂದಿನ ವಾಕ್ಯದಲ್ಲಿ ಆತ್ಮವೂ ಬ್ರಹ್ಮವಾಗಿದೆಯೆಂದು ಹೇಳಿರುವುದರಿಂದ ಮತ್ತು ಅದು ಓಂಕಾರಕ್ಕೆ ಸಂಬಂಧಪಟ್ಟುದಾದುದರಿಂದ ಅದರ ಅರ್ಥವನ್ನು "ಓಂಕಾರದ ಒಡಲು" ಎಂದೇ ಗ್ರಹಿಸಬೇಕಾಗುತ್ತದೆ. ಏಕೆಂದರೆ ಓಂಕಾರದ ಒಡಲಾಗಿರುವ ಬ್ರಹ್ಮಕ್ಕೆ

ಮಾತ್ರ ನಾಲ್ಕು ಕಾಲುಗಳಿವೆ. ಆದುದರಿಂದ ಆ ವಾಕ್ಯವು ಓಂಕಾರದ ಒಡಲಾಗಿರುವ ಬ್ರಹ್ಮವನ್ನೇ ನಿರ್ದೇಶಿಸುತ್ತದೆಂದು ಗ್ರಹಿಸಬೇಕಾಗುತ್ತದೆ. ಹಿಂದಿನ ವಾಕ್ಯಕ್ಕೆ ಸಂಬಂಧಪಟ್ಟ ಇತರ ವಿವರಗಳು ಅದರ ಸಮೀಪದ ವಾಕ್ಯಗಳಲ್ಲಿ ಬಂದಿರದೇ ದೂರದ ಎಂಟನೆಯ ವಾಕ್ಯದಲ್ಲಿ ಮುಂದೆ ಕೊಟ್ಟಿರುವಂತೆ ಬಂದಿವೆ.

ಸೋಽಯಮಾತ್ಮಾಧ್ಯಕ್ಷರಮೋಂಕಾರೋಽಧಿಮಾತ್ರಂ ಪಾದಾಮಾತ್ರಾ ಮಾತ್ರಾಶ್ಚ ಪಾದಾಃ ॥ ಅಕಾರ ಉಕಾರೋ ಮಕಾರ ಇತಿ ॥ ೮ ॥


ಅರ್ಥ – ಅಂಥ ಆ ಆತ್ಮವು ಅಂದರೆ ಬ್ರಹ್ಮರೂಪದ ಒಡಲು ಅಕ್ಷರದಲ್ಲಿದೆ ಅಂದರೆ ಓಂಕಾರದಲ್ಲಿದೆ ಅಥವಾ ಓಂಕಾರದ ಚಿಹ್ನೆಯಾಗಿ ಮಾರ್ಪಟ್ಟಿದೆ. ಓಂಕಾರವು ಮಾತ್ರೆಗಳಲ್ಲಿದೆ. ಅಂದರೆ ಓಂಕಾರವು ಮಾತ್ರೆಗಳ ಸಂಯೋಗದಿಂದ ಹುಟ್ಟಿದೆ. ಆತ್ಮದ ಅಥವಾ ಬ್ರಹ್ಮದ ಕಾಲುಗಳೇ ಆ ಮಾತ್ರೆಗಳು ಅಥವಾ ಮಾತ್ರೆಗಳೇ ಆ ಕಾಲುಗಳು. ಅವುಗಳೆಂದರೆ ಅಕಾರ, ಉಕಾರ ಮತ್ತು ಮಕಾರಗಳಾಗಿವೆ.



ಹಿಂದಿನ ವಾಕ್ಯದ ಅರ್ಥವು ಅತ್ಯಂತ ಸ್ಪಷ್ಟವಿದೆ. ಅಂದರೆ ಅದು ಎರಡನೆಯ ವಾಕ್ಯದಲ್ಲಿ ಬ್ರಹ್ಮವೆಂದು ಹೇಳಿದ ಆತ್ಮವು ಓಂಕಾರವಾಗಿ ಮಾರ್ಪಟ್ಟಿದೆಯೆಂದೂ ಅಥವಾ ಬ್ರಹ್ಮವೆಂದು ಕರೆಯಲ್ಪಡುತ್ತಿದ್ದ ನಾಲ್ಕು ಕಾಲುಗಳ ಆಕೃತಿಯು ಓಮ್ ಎಂಬ ಧ್ವನಿಯ ಚಿಹ್ನೆಯಾಗಿ ಮಾರ್ಪಟ್ಟಿದೆಯೆಂದು ಮತ್ತು ಓಮ್ ಎಂಬುದು ಅ, ಉ, ಮ ಎಂಬ ಮೂರು ಮಾತ್ರೆಗಳ ಸಂಯುಕ್ತ ರೂಪವೆಂದು ಸ್ಪಷ್ಟವಾಗಿ ಸೂಚಿಸುತ್ತದೆ.

ಹಿಂದಿನ ಉಪನಿಷದ್ವಾಕ್ಯಗಳಲ್ಲಿ ಬಂದಿರುವ ನಾಲ್ಕು ಕಾಲುಗಳ ಬ್ರಹ್ಮವು ಇವರ ಹೊರತು ಬೇರೆ ಯಾವುದೂ ಆಗಿರಲು ಸಾಧ್ಯವಿಲ್ಲ. ಏಕೆಂದರೆ ಅದು ಅಗ್ನಿಯ ಮತ್ತು ಪ್ರಜಾಪತಿಯ ಪ್ರತೀಕವಾಗಿದೆ. ಋಗ್ವೇದದಲ್ಲಿ ಅಗ್ನಿಯೇ ಬ್ರಹ್ಮನಾಗಿದ್ದಾನೆ.[1] ಮತ್ತು ತರುವಾಯದ ವೈದಿಕ ಸಾಹಿತ್ಯದಲ್ಲಿ ಪ್ರಜಾಪತಿಯೇ ಬ್ರಹ್ಮನಾಗಿದ್ದಾನೆ. ಹಿಂದಿನ ವಾಕ್ಯಗಳಲ್ಲಿ ಬ್ರಹ್ಮ ಶಬ್ದವು ನಪುಂಸಕ ಲಿಂಗದಲ್ಲಿ ಬಂದಿರುವುದರ ಕಾರಣವು ಅಲ್ಲಿ ಲಕ್ಷ್ಯವು ಅಗ್ನಿಯಾಗಿರದೇ ಅಗ್ನಿಯ ಪ್ರತೀಕವಾಗಿರುವುದಾಗಿದೆ. ಆದುದರಿಂದ ಮಾಂಡೂಕ್ಯೋಪನಿಷತ್ತಿನ ವಾಕ್ಯಗಳಲ್ಲಿ ಬಂದಿರುವ ಬ್ರಹ್ಮ ಶಬ್ದವು ಪರಮಾತ್ಮ ತತ್ವವನ್ನು ಬೋಧಿಸುವಂತೆ ತೋರಿದರೂ ಅದು ಪ್ರಜಾಪತಿಯ ಪ್ರತೀಕವಾದ ನಾಲ್ಕು ಕಾಲುಗಳ ಈ ಬ್ರಹ್ಮವನ್ನೇ ಸೂಚಿಸುತ್ತದೆಂದು ಸಂದೇಹವಿಲ್ಲದೇ ಹೇಳಬಹುದು. ಏಕೆಂದರೆ ಪ್ರಾಚೀನ ಬ್ರಾಹ್ಮೀ

---

[1] ಉತ ಗ್ನಾ ಅಗ್ನಿರಧ್ವರ ಉತೋ ಗೃಹಪತಿರ್ದಮೇ । ಉತ ಬ್ರಹ್ಮಾ ನಿಷೀದತಿ॥೪-೯-೪॥ ಬ್ರಹ್ಮಾ ಚಾಸಿ ಗೃಹಪತಿಶ್ಚ ನೋ ದಮೇ ॥೨-೧-೨॥

ಲೇಖಗಳಲ್ಲಿ ಓಮ್ ಎಂಬ ಸಂಯುಕ್ತ ಧ್ವನಿಯ ಚಿಹ್ನೆಯು ಈ  ರೂಪದಲ್ಲಿ ಬಂದಿರುವುದರಿಂದ ಅದರ ಮೂಲ ರೂಪವು  ಹೀಗಿದ್ದಿತೆಂದು ಮತ್ತು ಬರೆಯುವವರ ಅವಸರದಿಂದ ಕಾಲಕ್ರಮೇಣ ಅದರ ಮೂಲೆಗಳು ಸವೆದು ಅದು  ಹೀಗಾಗಿದ್ದಿತೆಂದು ತಾನಾಗಿ ಸಿದ್ಧವಾಗುತ್ತದೆ. ಅಂದರೆ  ಈ ಆಕೃತಿಯು ಬ್ರಹ್ಮವೆಂಬ ಈ  ಆಕೃತಿಯನ್ನು ಹೀಗೆ  ಎರಡಾಗಿ ಮುರಿದು ಮೊದಲಿನ ತುಂಡನ್ನು ಬುಡ ಮೇಲು ಮಾಡಿ ಎರಡನೆಯ ತುಂಡಿನ ಮೇಲ್ಗಡೆಯಲ್ಲಿಟ್ಟುದರಿಂದ ಉಂಟಾಗಿದ್ದಿತೆಂದು ಸ್ಪಷ್ಟವಾಗಿ ಸಿದ್ಧವಾಗುತ್ತದೆ. ಅರ್ಥಾತ್ ಓಮ್ ಎಂಬ ಸಂಯುಕ್ತ ಧ್ವನಿಯ ಈ  ಚಿಹ್ನೆಯು ಅಗ್ನಿಯ ಅಥವಾ ಪ್ರಜಾಪತಿಯ ಪ್ರತೀಕವಾಗಿದ್ದ ಈ  ನಾಲ್ಕು ಕಾಲುಗಳ ಬ್ರಹ್ಮದಿಂದ ಹುಟ್ಟಿದ್ದಿತೆಂಬ ಐತಿಹ್ಯವನ್ನು ಅರಿತಿದ್ದ ಆಚಾರ್ಯನು ಅದನ್ನು ತಾನು ರಚಿಸಿದ ಮಾಂಡೂಕ್ಯೋಪನಿಷತ್ತಿನಲ್ಲಿ ಆಧ್ಯಾತ್ಮಿಕ ರಹಸ್ಯವನ್ನಾಗಿ ರಕ್ಷಿಸಿದ್ದಾನೆಂಬುದರಲ್ಲಿ ಸಂದೇಹವಿಲ್ಲ. ಅಲ್ಲದೇ ಓಮ್ ಧ್ವನಿಯ ಚಿಹ್ನೆಯನ್ನು ನಿರ್ಮಿಸಿದವರು ಬ್ರಹ್ಮದ ಆ ಎರಡು ತುಂಡುಗಳನ್ನು ಬೇರೆ ಬೇರೆ ರೀತಿಯಲ್ಲಿ ಅಳವಡಿಸಿ ಅ, ಉ, ಮ ಎಂಬ ಧ್ವನಿಗಳ ಚಿಹ್ನೆಗಳನ್ನೂ ನಿರ್ಮಿಸಿದ್ದರೆಂದು ಹಿಂದೆ ಉದಹರಿಸಿದ ಎಂಟನೆಯ ವಾಕ್ಯದಿಂದ ಸೂಚಿತವಾಗುತ್ತದೆ.

ಓಂಕಾರದ ಈ  ಚಿಹ್ನೆಯು ತರುವಾಯದ ಕಾಲದ ಶಾಸನಗಳಲ್ಲಿ  ಹೀಗೆ ಹಲವು ರೂಪಗಳಲ್ಲಿ ಕಂಡು ಬರುತ್ತದೆ. ಮತ್ತು ಪ್ರಯೋಗವಾಗಿರುವ  ಈ ರೂಪಗಳು ಒಂಭತ್ತರ ಅಂಕೆಯಾಗಿಯೂ ಉಪಯೋಗಿಸಲ್ಪಟ್ಟಿವೆ. ಆ ಎಲ್ಲ ಆಕೃತಿಗಳನ್ನು ರಾಯಬಹದ್ದೂರ್ ಗೌರೀಶಂಕರ ಹೀರಾ ಚಂದ ಓಝಾ ಅವರ "ಭಾರತೀಯ ಪ್ರಾಚೀನ ಲಿಪಿಮಾಲಾ" ಎಂಬ ಪುಸ್ತಕದಲ್ಲಿ ನೋಡ ಬಹುದು. ಸಾಮಾನ್ಯವಾಗಿ ಹಿಂದಿನ ಶಾಸನ ಲೇಖಕರು ಶಾಸನವನ್ನು "ಓಮ್‌ಸ್ವಸ್ತಿ" ಎಂಬುದಾಗಿ ಪ್ರಾರಂಭಿಸುತಿದ್ದರು. ಕರ್ನಾಟಕದ ಕೊಡಗು ಜಿಲ್ಲೆಯಲ್ಲಿ ದೊರೆತ ಗಂಗವಂಶದ ಕೊಂಗುಣಿ ಅವನೀತನ ಶಕದ ನಾಲ್ಕನೆಯ ಶತಮಾನದ ಒಂದು ಶಾಸನವು ತಾಮ್ರದ ನಾಲ್ಕು ಪತ್ರಗಳಲ್ಲಿ ಬರೆಯಲ್ಪಟ್ಟಿದೆ.[1] ಅದು  ಸ್ವಸ್ತಿ ಎಂದು ಪ್ರಾರಂಭವಾಗಿ  ಈ ಚಿಹ್ನೆಯಿಂದ ಕೊನೆಗೊಂಡಿದೆ.

---

[1] ಎಪಿಗ್ರಾಫಿಕ ಕರ್ನಾಟಕ, ಸಂಪುಟ 1. ಕೊಡಗು ಜಿಲ್ಲೆ. Plate I


ಪ್ರಾಚೀನ ಕಾಲದ ಆರ್ಯಜನರು ಅಗ್ನಿಯ ಪ್ರತೀಕವಾಗಿದ್ದ ಈ ✚ ಬ್ರಹ್ಮವನ್ನು ಮುರಿದು ಓಂಕಾರದ ಚಿಹ್ನೆಯನ್ನಾಗಿ ಏಕೆ ಮಾಡಿದರೆಂದು ತಿಳಿಸುವ ಯಾವ ವಿವರಗಳೂ ಪ್ರಾಚೀನ ಸಾಹಿತ್ಯದಲ್ಲಿ ದೊರೆಯುವುದಿಲ್ಲ. ಹಾಗಿದ್ದರೂ ಓಂಕಾರದೊಳಗಿನ ಅ,ಉ,ಮ, ಎಂಬ ಮೂರು ಮಾತ್ರೆಗಳು ಆವರ ಮೂವರು ದೇವರ ಹೆಸರುಗಳ ಮೊದಲನೆಯ ಅಕ್ಷರಗಳಾಗಿರುವುದರ ಆಧಾರದಿಂದ ಅದರ ಕಾರಣವನ್ನು ಮುಂದಿನಂತೆ ಊಹಿಸಲು ಸಾಧ್ಯವಿದೆ. ಪ್ರಾಚೀನ ಕಾಲದ ಆರ್ಯ ಜನರು ತಮ್ಮ ಯಜ್ಞಗಳಲ್ಲಿ ಅಗ್ನಿಯ, ಸೂರ್ಯನ ಮತ್ತು ಚಂದ್ರನ ಪ್ರತೀಕಗಳಾಗಿ ✚ 卐 卍 ಈ ಮೂರು ಆಕೃತಿಗಳನ್ನು ಉಪಯೋಗಿಸುತ್ತಿದ್ದರೆಂದು ಮತ್ತು ಅಗ್ನಿ, ಸೂರ್ಯ ಮತ್ತು ಚಂದ್ರರು ಆರ್ಯಜನರ ಪ್ರಧಾನ ದೇವರಾಗಿದ್ದರೆಂದು ಹಾಗೂ ಈ ✚ ಆಕೃತಿಯಿಂದಲೇ ಈ 卐 卍 ಎರಡು ಆಕೃತಿಗಳು ಹುಟ್ಟಿದ್ದುವೆಂದು ಹಿಂದೆ ವಿಷಯ ಪರಿಚಯದಲ್ಲಿ ವಿವರಿಸಿದೆ. ಅಂದರೆ ಅವುಗಳು ಒಂದೇ ಮೂಲ ಆಕೃತಿಯ ಬೇರೆ ಬೇರೆ ರೂಪಗಳಾಗಿದ್ದುವೆಂದು ಸೂಚಿಸಿದೆ. ತರುವಾಯದ ಜನರು ಆ ಮೂರು ಆಕೃತಿಗಳಿಂದ ಬೇರೆ ಬೇರೆಯಾಗಿ ಸೂಚಿಸಲ್ಪಡುತ್ತಿದ್ದ ಮೂವರು ದೇವರನ್ನು ಮತ್ತು ಅವರ ಮೂರು ಹೆಸರುಗಳನ್ನು ಒಂದೇ ಆಕೃತಿಯಿಂದ ಮತ್ತು ಒಂದೇ ಶಬ್ದದಿಂದ ಸೂಚಿಸಲು ಸಾಧ್ಯವಾಗಬೇಕೆಂದು ಮಾಡಿದ ಹಂಚಿಕೆಯ ಫಲವೇ  ಈ ಆಕೃತಿಯೂ ಓಮ್ ಎಂಬ ಸಂಯುಕ್ತ ಧ್ವನಿಯೂ ಆಗಿದ್ದಿತೆನ್ನಬಹುದು. ಮತ್ತು ಅದು ನಾಮವಿಲ್ಲದ ದೇವತೆಗಳ ಸಂಕೇತ ಅಥವಾ ಪ್ರತೀಕವಾಗಿದ್ದುದರಿಂದ "ಅಕ್ಷರ" ಎನಿಸಿಕೊಂಡಿತೆನ್ನಬಹುದು. ಹಾಗೆ ಓಮ್ ಎಂಬುದು ದೇವತೆಗಳ ಸಂಕೇತವಾಗಿದ್ದುದರಿಂದ ಮತ್ತು ಮೊತ್ತ ಮೊದಲಿನ ಧ್ವನಿಚಿಹ್ನೆಯಾಗಿದ್ದುದರಿಂದ ಅದು ವೈದಿಕ ಸಾಹಿತ್ಯದಲ್ಲಿ ಬಹಳ ಮಹತ್ವಪಡೆದಿದ್ದಿತೆಂಬುದರಲ್ಲಿ ಸಂದೇಹವಿಲ್ಲ.

ಓಮ್ ಎಂಬುದು ಅ, ಉ, ಮ ಎಂಬ ಮೂರು ಸ್ವರವರ್ಣಗಳು, ವ್ಯಾಕರಣ ರೀತ್ಯಾ ಕೂಡಿಕೊಂಡು ಉಂಟಾಗುವ ಸಂಯುಕ್ತಧ್ವನಿಯ ರೂಪವಾಗಿರುತ್ತದೆ. ಮತ್ತು ಆ ಮೂರು ಸ್ವರವರ್ಣಗಳು ಹಿಂದೆ ಹೇಳಿದ ಮೂವರು ದೇವತೆಗಳ ಹೆಸರುಗಳೊಳಗಿನ ಮೊದಲನೆಯ ಅಕ್ಷರಗಳಾಗಿವೆ. ಅಂದರೆ "ಅಗ್ನಿ" ಶಬ್ದದೊಳಗಿನ "ಅ" ಕಾರ, ಸೂರ್ಯನ ಹೆಸರುಗಳಾದ "ಉರುಕ್ರಮ" ಅಲ್ಲದಿದ್ದರೆ "ಉರುಗಾಯ" ಶಬ್ದದೊಳಗಿನ "ಉ" ಕಾರ ಮತ್ತು ಚಂದ್ರನ ಮೂಲ ಹೆಸರಾಗಿದ್ದ "ಮಸ್" ಶಬ್ದದೊಳಗಿನ "ಮ" ಕಾರಗಳಾಗಿವೆ.

ಹಾಗೆ ವೈದಿಕ ಜನರು ಮೊತ್ತ ಮೊದಲು ನಿರ್ಮಿಸಿದ ಧ್ವನಿಚಿಹ್ನೆ "ಓಮ್"

ಎಂಬುದು ಅಕ್ಷರ ಎಂದು ಕರೆಯಲ್ಪಟ್ಟುದರಿಂದ ಆದರ ತರುವಾಯ ನಿರ್ಮಿಸಲ್ಪಟ್ಟ ಇತರ ಧ್ವನಿಚಿಹ್ನೆಗಳು ಕೂಡ ಅಕ್ಷರ ಎನಿಸಿಕೊಂಡುವು. ವೇದಗಳ ಪ್ರಾತಿಶಾಖ್ಯ ಗಳಲ್ಲಿ ಅಂದರೆ ಆಚಾರ್ಯ ಪಾಣಿನಿಯ ಕಾಲಕ್ಕಿಂತ ಮೊದಲು ವೇದಗಳ ಬೇರೆ ಬೇರೆ ಶಾಖೆಗಳ ಜನರು ಉಪಯೋಗಿಸುತಿದ್ದ ವ್ಯಾಕರಣದ ಚಿಕ್ಕ ಚಿಕ್ಕ ಕೈಪಿಡಿಗಳಲ್ಲಿ ವರ್ಣಗಳನ್ನು ಅವುಗಳ ಉಚ್ಚಾರ ಸ್ಥಾನಗಳಿಗನುಸಾರವಾಗಿ ಬೇರೆ ಬೇರ ವರ್ಗಗಳ ನ್ನಾಗಿ ಮಾಡಿರುವಂತೆಯೇ ಪ್ರತಿಯೊಂದು ವರ್ಗಕ್ಕೆ ಒಬ್ಬ ದೇವತೆಯನ್ನು ನಿರ್ಧರಿ ಸಿದೆ. ಮತ್ತು ಬಿಡಿ ವರ್ಣವನ್ನೂ, ವರ್ಣಗಳ ಸಮೂಹವನ್ನೂ "ಅಕ್ಷರ" ಎಂದು ಹೆಸರಿಸಿದೆ. **"ತತ್ಸಮುದಾಯೋಽಕ್ಷರಮ್ ॥ವಾ. ಪ್ರಾ. ೮-೫೫॥ ವರ್ಣೋವಾ ॥೮-೫೬॥**

ಓಮ್ ಎಂಬ ಧ್ವನಿಯ ಚಿಹ್ನೆಯು ಬ್ರಹ್ಮದಿಂದ ಹುಟ್ಟಿದುದರಿಂದ ಮತ್ತು ಅದು ಮೊತ್ತ ಮೊದಲು ಹುಟ್ಟಿದ ವರ್ಣವಾಗಿದ್ದುದರಿಂದ ಹಾಗೂ ತರುವಾಯದ ಎಲ್ಲ ವರ್ಣಗಳು ಅಥವಾ ಧ್ವನಿ ಚಿಹ್ನೆಗಳು ಬ್ರಹ್ಮವೆಂದು ಕರೆಯಲ್ಪಡುತಿದ್ದ ಯಜ್ಞ ಗಳಿಗೆ ಆಧಾರವಾಗಿದ್ದ ಯಜ್ಞಚಿತಿಗಳ ಮತ್ತು ಯಜ್ಞದ ಉಪಕರಣಗಳ ಆಕೃತಿ ಗಳಿಂದ ನಿರ್ಮಿಸಲ್ಪಟ್ಟಿದ್ದುದರಿಂದ ಅವುಗಳನ್ನು ಉಪಯೋಗಿಸಿ ಬರೆಯ ಲಾಗುತಿದ್ದ ಲಿಪಿಯು ಬ್ರಾಹ್ಮೀ ಎಂಬ ಹೆಸರನ್ನು ಪಡೆದಿದ್ದಿತು. ಮತ್ತು ಆ ವರ್ಣ ಗಳ ಸಮುದಾಯವು ಬ್ರಾಹ್ಮೀ ವರ್ಣಮಾಲೆ ಎನಿಸಿಕೊಂಡಿತ್ತು. ಹಾಗೆ ಬ್ರಾಹ್ಮೀ ಎಂದು ಹೆಸರು ಪಡೆದ ವರ್ಣಮಾಲೆಯೊಳಗಿನ ಎಲ್ಲ ವರ್ಣಚಿಹ್ನೆಗಳು ಮುಂದೆ ಕೊಟ್ಟಿರುವ ಆಕೃತಿಗಳಿಂದಲೇ ಹುಟ್ಟಿದ್ದುವು-




ಈ ಎಲ್ಲ ಆಕೃತಿಗಳು ಸಿಂಧೂ ಕಣಿವೆಯ ಅಗೆತಗಳಲ್ಲಿ ದೊರಕಿದ ಹಾಲುಗಲ್ಲಿನ ಬಿಲ್ಲೆಗಳ ಮೇಲೆ ಇವೆಯಲ್ಲದೇ, ಮೊದಲಿನ ಒಂಭತ್ತು ಆಕೃತಿಗಳ ಹೆಸರುಗಳು ಯಜುರ್ವೇದದ ತೈತ್ತಿರೀಯ ಸಂಹಿತೆಯಲ್ಲಿ ಋತುಪಾತ್ರಗಳೆಂದೂ, ಕಾಮ್ಯಚಿತಿಗಳೆಂದೂ ಉಲ್ಲೇಖಿಸಲ್ಪಟ್ಟಿವೆ. ತರುವಾಯದ ಮೂರು ಆಕೃತಿಗಳ ಹೆಸರುಗಳು ಋಗ್ವೇದದಲ್ಲಿ ಋಷ್ಟಿ, ಕುಂಭ ಮತ್ತು ದೇಹೀದ್ವಾರ" ಎಂಬುದಾಗಿ ಉಲ್ಲೇಖಿಸಲ್ಪಟ್ಟಿವೆ. ಆದುದರಿಂದ ಆ ಆಕೃತಿಗಳ ಪ್ರಾಚೀನತೆಯನ್ನು ಸಿದ್ಧಪಡಿಸಲು ಬೇರೆ ಪ್ರಮಾಣಗಳ ಆವಶ್ಯಕತೆಯಿಲ್ಲ. ಕಾಮ್ಯಚಿತಿಗಳ ವಿವರವು ಆರ್ಯಜನರ ವೈದಿಕ ಸಂಸ್ಕೃತಿ ಎಂಬ ಅಧ್ಯಾಯದಲ್ಲಿಯೂ, ಋತುಪಾತ್ರಗಳ ವಿವರಗಳು ವಿಷಯ ಪರಿಚಯದಲ್ಲಿಯೂ ಬಂದಿವೆ.

ಹಿಂದೆ ಕೊಟ್ಟಿರುವ ಆಕೃತಿಗಳಲ್ಲಿ ಮೂರನೆಯ ಮತ್ತು ನಾಲ್ಕನೆಯ ಋತುಪಾತ್ರಗಳನ್ನು ಅಥವಾ ಸ್ವಸ್ತಿಕಗಳನ್ನು ಬಿಟ್ಟು ಉಳಿದ ಎಲ್ಲ ಆಕೃತಿಗಳು ತಮ್ಮ ಮೂಲ ರೂಪಗಳಲ್ಲಿಯೇ ಬ್ರಾಹ್ಮೀ ವರ್ಣಮಾಲೆಯಲ್ಲಿ ಬೇರೆ ಬೇರೆ ವರ್ಣಗಳ ಚಿಹ್ನೆಗಳಾಗಿವೆ. ಮೊದಲನೆಯದಾದ ಅಗ್ನಿಯ ಪ್ರತೀಕದೊಂದಿಗೂ ಎರಡು ಋತುಪಾತ್ರಗಳೊಂದಿಗೂ ಇರುವ ನಾಲ್ಕು ನಾಲ್ಕು ಬಿಂದುಗಳು ಆ ಪ್ರತೀಕಗಳನ್ನು ಯಜ್ಞವೇದಿಯಲ್ಲಿ ಜಡಿಯಲು ಉಪಯೋಗಿಸಲ್ಪಡುವ ಕಂಚಿನ ಮೊಳೆಗಳ ತಲೆಗಳ (=ಗುಂಡುಗಳ) ಚಿಹ್ನೆಗಳಾಗಿವೆ. ಮತ್ತು ಮುಂದೆ ವಿವರಿಸಿದಂತೆ ಬೇರೆ ಬೇರೆ ವರ್ಣ ಚಿಹ್ನೆಗಳಾಗಿವೆ.


ಮೂರು ಬಿಂದುಗಳಿಂದ ∴ ಇ ಎಂಬ ಸ್ವರವೂ ನಾಲ್ಕು ಬಿಂದುಗಳಿಂದ ∷ ಈ ಎಂಬ ಸ್ವರವೂ ಉಂಟಾಗಿದೆ. ಒಂದು ಬಿಂದುವು · ಅನುಸ್ವಾರವಾಗಿದೆ. ಮತ್ತು ಅನುಸ್ವಾರ ಮತ್ತು ಊಷ್ಮ ವರ್ಣಗಳ ಮೊದಲು ಈ ∪ ಕುಂಭಾಕೃತಿಯು ಮಧ್ಯದಲ್ಲಿ ಸೇರಿ ⊍ ಜ ಎಂದು ಉಚ್ಚರಿಸಲ್ಪಡುತ್ತದೆ. ಎರಡು ಬಿಂದುಗಳಿಂದ : ವಿಸರ್ಗ ಉಂಟಾಗಿದೆ. ಒಂದು ಬಿಂದುವು ಮಂಡಲಾಕೃತಿಯ ಮಧ್ಯದಲ್ಲಿ ಸೇರಿ ⊙ ಥ ಎಂಬ ವರ್ಣವನ್ನು ಹುಟ್ಟಿಸಿದೆ. ಉಳಿವ ಹದಿನೆರಡನೆಯ ಬಿಂದುವು ಎರಡು ಭಾಗಗಳಾಗಿ ◡◠ ಉಪಧ್ಮಾನೀಯದ ಚಿಹ್ನೆಯಾಗಿದೆ.

ಈ ಆಕೃತಿಗಳಲ್ಲಿ ಮೊದಲನೆಯದಾದ ಅಗ್ನಿಯ ಅಥವಾ ಪ್ರಜಾಪತಿಯ ಪ್ರತೀಕವು + ಕ ಎಂಬ ವರ್ಣವಾಗಿದೆ. ಎರಡನೆಯದಾದ | ನೆಟ್ಟನ ಗೆರೆಯು

ಯಜ್ಞಕಾಲದಲ್ಲಿ ಯಜಮಾನನು ಧರಿಸುವ ದಂಡದ ಪ್ರತೀಕವಾಗಿದ್ದು ರ ಎಂಬ ವರ್ಣವಾಗಿದೆಯಲ್ಲದೇ ಮುಂದೆ ಕೊಡಲಾಗುವ ಸೂರ್ಯನ ಪ್ರತೀಕದ ತುಂಡುಗಳೊಂದಿಗೆ ಕೂಡಿ ಹಲವು ವರ್ಣಗಳ ಹುಟ್ಟಿಗೆ ಕಾರಣವಾಗಿದೆ. ಮೂರನೆಯದಾದ ಸೂರ್ಯನ ಪ್ರತೀಕವೂ 卐 ನಾಲ್ಕನೆಯದಾದ ಚಂದ್ರನ ಪ್ರತೀಕವೂ ಮುಂದೆ ಕೊಟ್ಟಿರುವಂತೆ ನಾಲ್ಕು ಮತ್ತು ಎರಡು ತುಂಡುಗಳಾಗಿ ಬೇರೆ ಬೇರೆ ವರ್ಣಗಳಾಗಿ ಮಾರ್ಪಟ್ಟಿವೆ–



ಅವುಗಳಲ್ಲಿ ಸೂರ್ಯನ ಪ್ರತೀಕದ ತುಂಡುಗಳು ದಂಡದೊಂದಿಗೆ ಕೂಡಿಯೂ, ಕೂಡದೆಯೂ ಹಲವು ವರ್ಣಗಳಾಗಿ ಮಾರ್ಪಟ್ಟಿವೆ –





ಚಂದ್ರನ ಪ್ರತೀಕದ ಎರಡು ತುಂಡುಗಳು ಇದ್ದ ರೂಪದಲ್ಲಿಯೇ  = ಓ  = ಷ ಮತ್ತು  = ಭ ಎಂಬ ವರ್ಣಗಳಾಗಿ ಮಾರ್ಪಟ್ಟಿವೆ. ಐದನೆಯದಾದ ಮಂಡಲಾಕೃತಿಯು ಗಾರ್ಹಪತ್ಯಚಿತಿಯ ಆಕೃತಿಯಾಗಿದ್ದು ◯ = ಠ ಎಂಬ ವರ್ಣವಾಗಿದೆ. ಮತ್ತು ನಡುವೆ ಬಿಂದುವನ್ನು ಸೇರಿಸಿಕೊಂಡು ⊙ = ಥ ವರ್ಣವಾಗಿಯೂ ದಂಡದೊಂದಿಗೆ ಕೂಡಿ  = ಛ ಮತ್ತು  = ವ ಎಂಬ ವರ್ಣಗಳಾಗಿಯೂ ಮಾರ್ಪಟ್ಟಿದೆ. ಆರನೆಯದಾದ □ ಚತುರಸ್ರವು ಆಹವ

ೀಯು ಚಿತ್ರವು ಆಕೃತಿಯಾಗಿದ್ದು "ಬ" ಎಂಬ ವರ್ಣವಾಗಿದೆ. ಏಳನೆಯದಾದ  ಅರ್ಧ ಚಂದ್ರಾಕೃತಿಯು ದಕ್ಷಿಣಾಗ್ನಿಯ ಚಿತಿಯಾಗಿದ್ದು "ಧ" ಎಂಬ ವರ್ಣವಾಗಿದೆ. ಎಂಟನೆಯದಾದ  ತ್ರಿಕೋಣವು ಪ್ರಉಗ ಎಂಬ ಕಾಮ್ಯಚಿತಿಯಾಗಿದ್ದು "ಏ" ಎಂಬ ಸ್ವರವರ್ಣವಾಗಿದೆ. ಒಂಭತ್ತನೆಯದಾದ  ವಜ್ರಾಕೃತಿಯು ಉಭಯತಃ ಪ್ರಉಗ ಎಂಬ ಕಾಮ್ಯಚಿತಿಯಾಗಿದ್ದು ಜಿಹ್ವಾಮೂಲೀಯದ ಚಿಹ್ನೆಯಾಗಿದೆ. ಮತ್ತು ಅದರ ಮೇಲ್ಭಾಗದ ಅಡ್ಡಗೆರೆಯನ್ನು ತೆಗೆದು  ಅದನ್ನು "ಮ" ವರ್ಣದ ಚಿಹ್ನೆಯನ್ನಾಗಿ ಮಾಡಲಾಗಿದೆ. ಹತ್ತನೆಯದಾದ  ತ್ರಿಶೂಲವು ಯಜ್ಞಕುಂಡದೊಳಗಿನ ಕೆಂಡವನ್ನು ಕೆಣಕುವ ಉಪವೇಶ ಅಥವಾ ಋಷ್ಟಿ ಎಂಬ ಉಪಕರಣವಾಗಿದ್ದು, ಅದು ಅಡ್ಡವಾಗಿ  ಋ ಎಂಬ ವರ್ಣವಾಗಿಯೂ, ಬುಡ ಮೇಲಾಗಿ  ಌ ಎಂಬ ವರ್ಣವಾಗಿಯೂ ಉಪಯೋಗಿಸಲ್ಪಟ್ಟಿದೆ. ಹನ್ನೊಂದನೆಯದಾದ  ಕುಂಭಾಕೃತಿಯು ಯಜ್ಞಕಾಲದಲ್ಲಿ ಉಪಯೋಗಿಸಲ್ಪಡುವ ಜಲಪಾತ್ರೆಯ ಚಿತ್ರವಾಗಿದ್ದು, ಅವಗ್ರಹದ ಚಿಹ್ನೆಯಾಗಿಯೂ. ಮಧ್ಯದಲ್ಲಿ ಬಿಂದುವನ್ನು ಸೇರಿಸಿಕೊಂಡು ಅನುಸ್ವಾರದ ಚಿಹ್ನೆಯಾಗಿಯೂ ಮಾರ್ಪಟ್ಟಿದೆ. ಹದಿನೆರಡನೆಯದಾದ  ಈ ಆಕೃತಿಯು ಯಜ್ಞಗೃಹದ ದ್ವಾರದ ಪ್ರತೀಕವಾಗಿದ್ದು "ದ" ಎಂಬ ವರ್ಣವಾಗಿದೆ.

ಈ ತನಕ ದೊರೆತ ಬ್ರಾಹ್ಮೀ ಲಿಪಿಯ ಯಾವುದೊಂದು ಸಂಸ್ಕೃತ ಲೇಖವಲ್ಲಿಯೂ ಋ ಮತ್ತು ಌ ವರ್ಣಗಳು ಬಿಡಿಯಾಗಿ ಅಂದರೆ ಸ್ವತಂತ್ರವಾದ ಅಸಂಯುಕ್ತ ರೂಪದಲ್ಲಿ ಕಂಡು ಬಂದಿಲ್ಲ. ಶಕದ ಐದನೆಯ ಶತಮಾನದಲ್ಲಿ ಬರೆಯಲ್ಪಟ್ಟ ಒಂದು ಓಲೆಗ್ರಂಥವು ಜಪಾನದ ಹೊರ್ಯುಜೀ ಮಠದಲ್ಲಿದ್ದು ಅದರೊಳಗಿನ ಬ್ರಾಹ್ಮೀ ವರ್ಣಮಾಲೆಯೊಂದು ಭಾರತೀಯ ಪ್ರಾಚೀನ ಲಿಪಿಮಾಲಾ ಎಂಬ ಗ್ರಂಥದಲ್ಲಿ ಮುದ್ರಿತವಾಗಿದೆ. ಆದರೆ ಅದರೊಳಗಿನ ವರ್ಣಗಳು ಮೂಲ ರೂಪದಲ್ಲಿರದೇ ತುಂಬಾ ರೂಪಾಂತರ ಹೊಂದಿವೆಯಾದುದರಿಂದ ಅದರೊಳಗಿನ ಋ, ೠ, ಌ, ೡ ಎಂಬ ವರ್ಣಗಳು ಕೂಡ ಮೂಲ ರೂಪದಲ್ಲಿವೆಯೆನ್ನಲಾಗುವುದಿಲ್ಲ.


ಆದುದರಿಂದ ನಾನು ಆಚಾರ್ಯ ಪಾಣಿನಿಯ ಹದಿನಾಲ್ಕು ಪ್ರತ್ಯಾಹಾರ ಸೂತ್ರಗಳು ಶಿವನ ನೃತ್ಯಕಾಲದಲ್ಲಿ ಅವನ ಡಮರುವಿನಿಂದ ಹೊರಟ ಶಬ್ದಗಳೆಂಬ

ಆಖ್ಯಾಯಿಕೆಯಲ್ಲಿ ಏನೋ ರಹಸ್ಯವಿರಬೇಕೆಂಬ ಎಣಿಕೆಯಿಂದ ಮತ್ತು ಶಿವನ ಪ್ರತಿಮಾ ರೂಪದ ಕೈಗಳಲ್ಲಿ ಡಮರು ಮತ್ತು ತ್ರಿಶೂಲಗಳೆರಡೂ ಇರುವುದರಿಂದ ಮತ್ತು ತ್ರಿಶೂಲದ ವೈದಿಕ ಹೆಸರು ಋಷ್ಟಿ ಎಂದಿರುವುದರಿಂದ ಆ ತ್ರಿಶೂಲವು ಬ್ರಾಹ್ಮಿ ವರ್ಣಮಾಲೆಯಲ್ಲಿದ್ದಿತೆಂದು ನಿರ್ಧರಿಸಿದ್ದೇನೆ. ಮತ್ತು ಅದನ್ನು ಋ ಮತ್ತು ೠ ವರ್ಣಗಳಿಗಾಗಿ ಉಪಯೋಗಿಸಿದ್ದೇನೆ. ಅಂದರೆ ಅದು ನನ್ನ ಸ್ವಂತದ ಕಲ್ಪನೆ ಮಾತ್ರವಾಗಿದೆ. ಅದು ಸರಿಯೋ ಅಲ್ಲವೋ ಎಂಬುದು ಮುಂದೆ ಗೊತ್ತಾಗಬೇಕಷ್ಟೇ. ಆದರೆ ಆ ತ್ರಿಶೂಲ ಮತ್ತು ಡಮರುಗಳು ಸಿಂಧೂ ಬಿಲ್ಲೆಗಳ ಮೇಲೂ ಇವೆಯೆಂಬುದನ್ನು ಇಲ್ಲಿ ಸ್ಮರಿಸಬೇಕು. ವಜ್ರಾಕೃತಿಯು ಪ್ರಾಚೀನ ಸಂಸ್ಕೃತ ವ್ಯಾಕರಣಗಳಲ್ಲಿ ಕೂಡ ಜಿಹ್ವಾಮೂಲಿಯದ ಚಿಹ್ನೆಯಾಗಿರುವುದರಿಂದ ಅದು ಪಾರಂಪರ್ಯವಾಗಿ ಸಾಗಿ ಬಂದ ಚಿಹ್ನೆಯೆಂಬುದರಲ್ಲಿ ಸಂದೇಹವಿಲ್ಲ. ಹಾಗೆಯೇ ಅನುಸ್ವಾರದ ಮತ್ತು ಅವಗ್ರಹದ ಚಿಹ್ನೆಗಳೂ ಪ್ರಾಚೀನ ಕಾಲದಿಂದ ಸಾಗಿ ಬಂದವುಗಳೇ ಆಗಿವೆ.

ವೈದಿಕ ಜನರು ಬ್ರಾಹ್ಮೀ ವರ್ಣಮಾಲೆಯನ್ನು ನಿರ್ಮಿಸಿದ ತರುವಾಯ ಸಂಖ್ಯಾಚಿಹ್ನೆಗಳನ್ನು ಅಂದರೆ ಅಂಕೆಗಳನ್ನೂ ನಿರ್ಮಿಸಿದ್ದರು. ಬ್ರಾಹ್ಮಿಯ ಮೊದಲಿನ ಮೂರು ಅಂಕೆಗಳು ಬರಿಯ ಗೆರೆಗಳಾಗಿವೆ. ಉದಾ: ಒಂದು , ಎರಡು , ಮೂರು  ತರುವಾಯದ ಅಂಕೆಗಳಿಗಾಗಿ ವರ್ಣ ಚಿಹ್ನೆಗಳು ಉಪಯೋಗಿಸಲ್ಪಟ್ಟಿವೆ, ಉದಾ:- ನಾಲ್ಕು  (ಕ) ಐದು  (ಞ) ಆರು  (ಜ) ಏಳು  (ಖ) ಎಂಟು  (ಹ) ಒಂಭತ್ತು  (ಓಮ್) ಹತ್ತು  (ಅಡ್ಡ ಬರೆದ, ಮು)

ಆ ಪ್ರಕಾರವಾಗಿ ನಿರ್ಮಿಸಲ್ಪಟ್ಟ ಅಂಕೆಗಳ ಸಹಿತವಾದ ಇಡೀ ಬ್ರಾಹ್ಮೀ ವರ್ಣಮಾಲೆಯು ಮುಂದೆ ಕೊಟ್ಟಂತಿತ್ತು.–

ಬ್ರಾಹ್ಮೀ ವರ್ಣಮಾಲೆ



ಆ ಕಾಲದಲ್ಲಿ "ಸೊನ್ನೆಯು ಹುಟ್ಟಿರಲಿಲ್ಲ. ಆದುದರಿಂದ ದಶಕದ ಶತಕದ ಮತ್ತು ಸಹಸ್ರದ ಸಂಖ್ಯೆಗಳನ್ನು ಬರೆಯಲು ವಿಶಿಷ್ಟವಾದ ಚಿಹ್ನೆಗಳು ಮತ್ತು ವರ್ಣ

ಗಳು ಉಪಯೋಗಿಸಲ್ಪಡುತಿದ್ದುವು– ಉದಾ–ಹದಿನೈದು

ಇಪ್ಪತ್ತು . ಮೂವತ್ತು . ನಾಲ್ವತ್ತು . ಐವತ್ತು .

ಆರುವತ್ತು . ಎಪ್ಪತ್ತು . ಎಂಭತ್ತು . ತೊಂಭತ್ತು .

ನೂರು . ಇನ್ನೂರು . ಮುನ್ನೂರು . ಸಾವಿರ .

ಹತ್ತು ಸಾವಿರ . ಇಪ್ಪತ್ತು ಸಾವಿರ . ಇತ್ಯಾದಿ.

ಹಿಂದೆ ಕೊಟ್ಟಿರುವ ವರ್ಣಮಾಲೆಯೊಳಗಿನ ಋ ಮತ್ತು ಲ್ಲ ವರ್ಣಗಳನ್ನು ಬಿಟ್ಟು ಉಳಿವ ಎಲ್ಲ ವರ್ಣಗಳು ಮೂಲ ರೂಪದಲ್ಲಿಯೂ, ಕೊಂಚ ಪರಿವರ್ತನ ಹೊಂದಿರುವ ರೂಪಗಳಲ್ಲಿಯೂ ಚಕ್ರವರ್ತಿ ಅಶೋಕನು ಬರೆಯಿಸಿದ ಧರ್ಮ ಶಾಸನಗಳಲ್ಲಿ ಉಪಯೋಗಿಸಲ್ಪಟ್ಟಿವೆ. ಶ್ರೀಮಾನ್ ಚಂದ್ರಿಕಾ ಸಿಂಘ ಉಪಾಸಕ್ ಎಮ್. ಏ., ಪಿ. ಎಚ್. ಡಿ. ಅವರು ಪ್ರಕಟಿಸಿದ The History and Palaeogrphy of Mauryan Brahmi Script" ಎಂಬ ಪುಸ್ತಕ ದಲ್ಲಿ ಯಾವ ಶಾಸನದಲ್ಲಿ ಯಾವ ವರ್ಣವು ಮೂಲರೂಪದಲ್ಲಿಯೇ ಇದೆಯೆಂಬು ದನ್ನು ತೋರಿಸಿದೆ. ಅಂದರೆ ಹಿಂದೆ ಕೊಟ್ಟಿರುವ ಎಲ್ಲ ವರ್ಣಗಳನ್ನು ಆ ಪುಸ್ತಕ ದಲ್ಲಿ ಮೂಲರೂಪಗಳಲ್ಲಿಯೇ ಕಾಣಬಹುದು. ಆದರೆ ಎಲ್ಲ ಶಾಸನಗಳಲ್ಲಿ ಎಲ್ಲ ವರ್ಣಗಳು ಮತ್ತು ಅಂಕೆಗಳು ಒಂದೇ ರೂಪದಲ್ಲಾಗಲೀ, ಮೂಲರೂಪದಲ್ಲಿಯೇ ಆಗಲೀ ಬರೆಯಲ್ಪಟ್ಟಿಲ್ಲವೆಂಬುದನ್ನು ಇಲ್ಲಿ ತಿಳಿದಿರಬೇಕು. ಅಷ್ಟು ಮಾತ್ರವಲ್ಲದೇ ದಕ್ಷಿಣ ಭಾರತದಲ್ಲಿ ದೊರಕದ ಅಶೋಕ ಚಕ್ರವರ್ತಿಯ ಕೆಲವು ಶಾಸಗಳಲ್ಲಿ ಕಂಡು ಬರುವ ಕೆಲವು ವರ್ಣಗಳ ರೂಪಗಳು ಉತ್ತರ ಭಾರತದ ಶಾಸನಗಳಲ್ಲಿ ಉಪಯೋಗಿ ಸಲ್ಪಟ್ಟ ವರ್ಣರೂಪಗಳಿಂದ ಸರ್ವಥಾ ಭಿನ್ನವಾಗಿವೆ. ಅವರ ಏಕ ಮಾತ್ರ ಕಾರಣವು ಉತ್ತರ ಭಾರತದಲ್ಲಿ ಪ್ರಚಲಿತವಿದ್ದ ಲಿಪಿಯು ಭಗವಾನ್ ಬುದ್ಧನ ಬಹು ಕಾಲ–ತರುವಾಯದ್ದಾಗಿರುವುದಾಗಿದೆ. ಮತ್ತು ದಕ್ಷಿಣ ಭಾರತದಲ್ಲಿ ಉಪಯೋಗಿ ಸಲ್ಪಡುತಿದ್ದ ಲಿಪಿಯು ಭಗವಾನ್ ಬುದ್ಧನ ಜನ್ಮಕಾಲಕ್ಕಿಂತ ಹಲವು ಶತಮಾನಗಳ ಮೊದಲೇ ಉತ್ತರ ಭಾರತದಿಂದ ಬಂದು ದಕ್ಷಿಣ ಭಾರತದಲ್ಲಿ ನೆಲಸಿದ್ದ ಬ್ರಾಹ್ಮಣ ರಲ್ಲಿ ಪ್ರಚಲಿತವಿದ್ದುದಾಗಿದ್ದು ಆದರೊಳಗಿನ ಕೆಲವು ಪ್ರಾಚೀನ ರೂಪಗಳು ಪರಿವರ್ತನ ಹೊಂದದೇ ಉಳಿದುದಾಗಿದೆ.

ಹಿಂದಿನ ವಿವರಗಳಿಂದ ವೇದಕಾಲದ ಆರ್ಯಜನರು ತಾವು ಪ್ರತಿ ದಿನ ಉಪಯೋಗಿಸುತಿದ್ದ ದೇವರ ಪ್ರತೀಕಗಳ, ಯಜ್ಞಚಿತಿಗಳ ಮತ್ತು ಯಜ್ಞದ ಉಪಕರಣಗಳ ಆಕೃತಿಗಳಿಂದಲೇ ತಮ್ಮ ವರ್ಣಮಾಲೆಯನ್ನು ನಿರ್ಮಿಸಿದ್ದರೆಂದು

ಸ್ಪಷ್ಟವಾಗಿ ಸಿದ್ಧವಾಗುತ್ತದೆ. ಅಂದರೆ ವೈದಿಕ ಜನರಿಗೆ ತಮ್ಮ ಬ್ರಾಹ್ಮೀ ವರ್ಣಮಾಲೆಯನ್ನು ನಿರ್ಮಿಸಲು ಪಾಶ್ಚಾತ್ಯ ವಿದ್ವಾಂಸರು ಸೂಚಿಸಿದಂಥ ಯಾವುದೊಂದು ಸೆಮಿಟಿಕ್ ವರ್ಣಮಾಲೆಯ ನೆರವೂ ಬೇಕಾಗಿರಲಿಲ್ಲವೆಂತಲೂ, ಅವರು ತಮ್ಮ ವರ್ಣಮಾಲೆಯನ್ನು ನಿರ್ಮಿಸಲು ಪ್ರೊ. ಬ್ಯುಹ್ಲರರು ಮಾಡಿ ತೋರಿಸಿದಂಥ ರೂಪಾಂತರಗಳನ್ನು ಮಾಡಬೇಕಾಗಿರಲಿಲ್ಲವೆಂತಲೂ. ಬ್ರಾಹ್ಮೀವರ್ಣಮಾಲೆಯು ಹುಟ್ಟಿನ ಸಂಬಂಧದಲ್ಲಿ ಪಾಶ್ಚಾತ್ಯ ವಿದ್ವಾಂಸರು ಮುಂದೆ ತಂದಿದ್ದ ಎಲ್ಲ ವಾದಗಳು ಅವರ ಸೆಮಿಟಿಕ್ ಲಿಪಿಯು ಮೂಲವು ಬ್ರಾಹ್ಮೀ ಲಿಪಿಯಾಗಿದ್ದಿತೆಂಬ ಸತ್ಯವನ್ನು ಅಡಗಿಸುವ ಉದ್ದೇಶದಿಂದ ಮುಂದೆ ತಂದವುಗಳಾಗಿದ್ದು ಅಪ್ಪಟ ಮಿಥ್ಯಾ ಪ್ರಚಾರವಾಗಿದ್ದಿತೆಂತಲೂ ಸ್ಪಷ್ಟವಾಗಿ ಸಿದ್ಧವಾಗುತ್ತದೆ.

ಹಿಂದಿನ ವಿವರಗಳಿಂದ ಓಂಕಾರದ ಮತ್ತು ಬ್ರಾಹ್ಮೀವರ್ಣಮಾಲೆಯು ನಾಸ್ತಿಕ ಮೂಲವಾದುವೆಂಬುದು ಸ್ಪಷ್ಟವಾಗಿ ಸಿದ್ಧವಾಗಿದೆ. ಇನ್ನು ಓಂಕಾರದ ಚಿಹ್ನೆಯನ್ನು ಮತ್ತು ಬ್ರಾಹ್ಮೀ ವರ್ಣಮಾಲೆಯನ್ನು ಯಾರು ? ಮತ್ತು ಯಾವ ಕಾಲದಲ್ಲಿ ನಿರ್ಮಿಸಿದರು? ಎಂಬ ಪ್ರಶ್ನೆಗಳಿಗೆ ಉತ್ತರಗಳನ್ನು ಕಂಡುಕೊಂಡರೆ ಮತ್ತು ಪಾಶ್ಚಾತ್ಯ ವಿದ್ವಾಂಸರ ಮಿಥ್ಯಾ ಪ್ರಚಾರಕ್ಕೆ ಉತ್ತರವಾಗಿ ಬ್ರಾಹ್ಮೀ ವರ್ಣಮಾಲೆಯು ನಿರ್ಮಿಸಲ್ಪಡುವ ಕಾಲದಲ್ಲಿ ಯಾವುದೊಂದು ಸೆಮಿಟಿಕ್ ವರ್ಣಮಾಲೆಯೂ ಅಸ್ತಿತ್ವದಲ್ಲಿರಲಿಲ್ಲವೆಂತಲೂ, ಎಲ್ಲ ಸೆಮಿಟಿಕ್ ವರ್ಣಮಾಲೆಗಳೂ ಬ್ರಾಹ್ಮೀವರ್ಣಮಾಲೆಯು ನಿರ್ಮಿಸಲ್ಪಟ್ಟ ಬಹು ಕಾಲದ ತರುವಾಯ ನಿರ್ಮಿಸಲ್ಪಟ್ಟವುವೆಂತಲೂ ಪ್ರಮಾಣ ಸಹಿತವಾಗಿ ಸಿದ್ಧಪಡಿಸಿದರೆ ಬ್ರಾಹ್ಮೀ ವರ್ಣಮಾಲೆಯ ಇತಿಹಾಸವು ಮುಗಿಯುವುದು.

ಆದರೆ ಬ್ರಾಹ್ಮೀ ವರ್ಣಮಾಲೆಯ ನಿರ್ಮಾಣದ ಸಂಬಂಧದಲ್ಲಿ ನಮ್ಮನ್ನು ಎದುರಿಸುವ ಆ ಎರಡು ಪ್ರಶ್ನೆಗಳಿಗೆ ಇದು ಹೀಗೆಯೇ ಸರಿ! ಎಂಬ ಉತ್ತರವನ್ನು ಹೇಳಲು ಅಥವಾ ನಿರ್ಧರಿಸಲು ಹಿಂದಿನ ಕಾಲದ ಯಾವುದೊಂದು ಲಿಖಿತ ಪ್ರಮಾಣದ ಸಹಾಯವೂ ನಮಗೆ ದೊರೆಯುವುದಿಲ್ಲ. ಅರ್ವಾಚೀನವಾದ ನಾರದ ಸ್ಮೃತಿಯಲ್ಲಿ ಮತ್ತು ಕೆಲವು ಪುರಾಣಗಳಲ್ಲಿ ಬ್ರಹ್ಮನು ಲಿಪಿಯನ್ನು ನಿರ್ಮಿಸಿದ್ದನೆಂಬ ಉಲ್ಲೇಖಗಳಿವೆಯಾದರೂ ಆ ಉಲ್ಲೇಖಗಳನ್ನು ಸಮರ್ಥಿಸುವ ವೈದಿಕ ಉಲ್ಲೇಖವು ಒಂದಾದರೂ ಇಲ್ಲ. ಆದುದರಿಂದ ಆ ಪ್ರಶ್ನೆಗಳಿಗೆ ಪರೋಕ್ಷ ಪ್ರಮಾಣಗಳಿಂದ ಮತ್ತು ಅನುಮಾನಗಳಿಂದ ಮಾತ್ರ ಉತ್ತರಗಳನ್ನು ಕಂಡುಕೊಳ್ಳಬೇಕಾಗಿದೆ.

೧. ವೈದಿಕ ಸಾಹಿತ್ಯದಲ್ಲಿ ಓಂಕಾರಕ್ಕೆ ಪ್ರಾಪ್ತವಾಗಿರುವ ಮಹತ್ವದ ಹಾಗೂ ಪ್ರಾಧಾನ್ಯದ ದೆಸೆಯಿಂದ ಧ್ವನಿ ಚಿಹ್ನೆಗಳಲ್ಲಿ ಓಂಕಾರದ ಚಿಹ್ನೆಯೇ ಮೊತ್ತಮೊದಲು ನಿರ್ಮಿಸಲ್ಪಟ್ಟಿತೆಂದು ನಿರ್ಧರಿಸಬಹುದು. ಮತ್ತು ಅದರ ತರುವಾಯವೇ

ಬ್ರಾಹ್ಮೀ ವರ್ಣಮಾಲೆಯು ನಿರ್ಮಿಸಲ್ಪಟ್ಟು ಮೊದಲು ಚಿತ್ರ ಸಂಕೇತಗಳ ಆಧಾರದಿಂದ ಕಂಠಪಾಠವಾಗಿ ಮುಂದೆ ಸಾಗಿ ಬಂದಿದ್ದ ವೇದಮಂತ್ರಗಳು ಬ್ರಾಹ್ಮೀ ಲಿಪಿಯಿಂದ ಬರೆಯಲ್ಪಟ್ಟು ಗ್ರಂಥಸ್ಥವಾದುದರಿಂದ ವೇದಮಂತ್ರಗಳ ಅಧ್ಯಯನಾರಂಭದಲ್ಲಿಯೂ, ಅಂತದಲ್ಲಿಯೂ ಓಂಕಾರವನ್ನು ಉಚ್ಚರಿಸಬೇಕೆಂಬ ನಿಯಮವನ್ನು ಮಾಡಿದ್ದರೆನ್ನಬಹುದು.[1]

೨. ಋಗ್ವೇದದ ಮಂತ್ರಗಳಲ್ಲಿ "ಅಕ್ಷರ" ಎಂಬ ಶಬ್ದವು "ವರ್ಣ" ಎಂಬರ್ಥದಲ್ಲಿ ಪ್ರಯೋಗಿಸಲ್ಪಟ್ಟ ಹಲವು ಪ್ರಮಾಣಗಳೂ, ಅಷ್ಟ ಎಂಬ ಅಂಕೆಯ ಉಲ್ಲೇಖವೂ ಇರುವುದರಿಂದ ಆ ಮಂತ್ರಗಳು ಬರೆಯಲ್ಪಟ್ಟು ಗ್ರಂಥಸ್ಥವಾಗುವ ಮೊದಲೇ ಅಂಕೆಗಳ ಸಹಿತವಾದ ವರ್ಣಮಾಲೆಯು ಪ್ರಚಲಿತವಿದ್ದಿತೆಂದು ಸಿದ್ಧಪಡಿಸಿದೆ.

೩. ಸಿಂಧೂ ಬಿಲ್ಲೆಗಳ ಮೇಲಿರುವ ಚಿತ್ರ ಸಂಕೇತಗಳ ಯಥಾವತ್ತಾದ ವರ್ಣನೆಗಳು ಮತ್ತು ವಿವರಗಳು ಋಗ್ವೇದದಲ್ಲಿ ಮತ್ತು ಯಜುರ್ವೇದದಲ್ಲಿ ಇವೆಯಾದುದರಿಂದ, ಆ ಬಿಲ್ಲೆಗಳನ್ನು ಕಣ್ಣಾರೆ ಕಂಡವರೇ ಆ ಚಿತ್ರ ಸಂಕೇತಗಳಿಂದ ಸೂಚಿತವಾಗುವ ಮಂತ್ರಗಳನ್ನು ಬರೆದುಕೊಂಡಿದ್ದರೆಂದು, ಹಾಗೆ ಬರೆದುಕೊಳ್ಳುವಾಗ ಅವರು ಉಪಯೋಗಿಸಿದ ಲಿಪಿಯು ಬಿಲ್ಲೆಗಳ ಮೇಲಿನ ಲಿಪಿಯಿಂದ ಭಿನ್ನವಾಗಿದ್ದಿತೆಂದು, ಮತ್ತು ಆ ಲಿಪಿಯು ಬ್ರಾಹ್ಮಿಯೇ ಆಗಿದ್ದಿತೆಂದು, ಸಿಂಧೂಲಿಪಿಯು ತರುವಾಯ ಭಾರತವರ್ಷದಲ್ಲಿ ಪ್ರಚಲಿತವಾದ ಲಿಪಿಯು ಬ್ರಾಹ್ಮಿಯೇ ಆಗಿದ್ದುದರ ಮೇಲಿಂದ ಮತ್ತು ಸಿಂಧೂ ಲಿಪಿಯೊಳಗಿನ ಮತ್ತು ಬಿಲ್ಲೆಗಳ ಮೇಲಿನ ಕೆಲವು ಚಿಹ್ನೆಗಳು ಬ್ರಾಹ್ಮೀ ವರ್ಣಮಾಲೆಯಲ್ಲಿ ಇರುವುದರ ಮೇಲಿಂದ ಸಿದ್ಧವಾಗುತ್ತದೆ. ಅಂದರೆ ಸಿಂಧೂ ಪಟ್ಟಣಗಳು ಅಸ್ತಿತ್ವದಲ್ಲಿದ್ದಾಗಲೇ ಬ್ರಾಹ್ಮೀ ವರ್ಣಮಾಲೆಯು ನಿರ್ಮಿಸಲ್ಪಟ್ಟಿದ್ದಿತೆಂದು ಸಿದ್ಧವಾಗುತ್ತದೆ.

೪. ಶತಪಥ ಬ್ರಾಹ್ಮಣದಲ್ಲಿ ಕೃತ್ತಿಕಾ ನಕ್ಷತ್ರಪುಂಜವು ಪೂರ್ವದಿಕ್ಕಿನಿಂದ ಚಲಿಸುವುದೇ ಇಲ್ಲವೆಂದು ವರ್ತಮಾನಕಾಲಿಕ ಕ್ರಿಯೆಯಿಂದ ವರ್ಣಿಸಿರುವುದರಿಂದ, ಶತಪಥ ಬ್ರಾಹ್ಮಣದೊಳಗಿನ ಆ ಅಂಶವು ವಸಂತಸಂಪಾತ ಬಿಂದುವು ಕೃತ್ತಿಕಾ ನಕ್ಷತ್ರದಲ್ಲಿ ಬಂದ ಹಾಗೆಯೇ ರಚಿಸಲ್ಪಟ್ಟಿದ್ದಿತೆಂದು ಸಿದ್ಧವಾಗುತ್ತದೆ. ವಸಂತ ಸಂಪಾತ ಬಿಂದುವು ಕೃತ್ತಿಕೆಯಲ್ಲಿ ಬಂದ ಕಾಲವು ಶಕಪೂರ್ವ ೨೩೦೦ ವರ್ಷಗಳಾಗಿವೆ. ಆ ಬ್ರಾಹ್ಮಣದಲ್ಲಿ ವೈದಿಕ ಛಂದಸ್ಸುಗಳ ಹೆಸರುಗಳೊಂದಿಗೆ ಆಯಾ ಛಂದಸ್ಸಿನಲ್ಲಿರುವ ಅಕ್ಷರಗಳ ಸಂಖ್ಯೆಯ ಉಲ್ಲೇಖಗಳೂ ಇರುವುದರಿಂದ ಮತ್ತು ಛಂದಸ್ಸುಗಳು ಬ್ರಾಹ್ಮಣಗಳಿಗಿಂತ ಪ್ರಾಚೀನವಾಗಿರುವುದರಿಂದ, ಆ ಬ್ರಾಹ್ಮಣವು ಬರೆಯಲ್ಪಡುವ ಮೊದಲೇ ಬ್ರಾಹ್ಮೀ ವರ್ಣಮಾಲೆಯು ಪ್ರಚಲಿತವಿದ್ದಿತೆಂದು ಸಿದ್ಧವಾಗುತ್ತದೆ.

---

[1] ಓಂಕಾರ ಸ್ವಾಧ್ಯಾಯಾದೌ ॥ ಅಂತೇ ಚ ॥ ವಾ. ಪ್ರಾ. ೧-೧೬ ॥

೫. ವೈದಿಕ ಸಾಹಿತ್ಯದಲ್ಲಿ ವಸಂತಸಂಪಾತ ಬಿಂದುವು ಪುಷ್ಯ ನಕ್ಷತ್ರದಿಂದ ಮೊದಲುಗೊಂಡು ಒಂದೊಂದೇ ನಕ್ಷತ್ರದಾಂತೆ ಹಿಂದೆ ಸರಿಯುತ್ತ ಭರಣೀ ನಕ್ಷತ್ರದಲ್ಲಿ ಬಂದ ತನಕದ ಉಲ್ಲೇಖಗಳಿದ್ದರೂ ನಕ್ಷತ್ರಗಳ ಪಟ್ಟಿಯು ಬಂದಿರುವ ಪ್ರತಿಯೊಂದು ಗ್ರಂಥದಲ್ಲಿಯೂ ನಕ್ಷತ್ರಮಾಲೆಯು ಪ್ರಾರಂಭವು ಕೃತ್ತಿಕಾ ನಕ್ಷತ್ರದಿಂದ ಆಗಿದೆಯೇ ಹೊರತು ಪುಷ್ಯ ಮೊದಲಾದ ನಕ್ಷತ್ರಗಳಿಂದ ಆಗಿಲ್ಲ. ಋಗ್ವೇದವು ಕೂಡ "ಓಮ್ ಅಗ್ನಿಮೀಳೇ ಪುರೋಹಿತಮ್" ಎಂಬುದಾಗಿ ಕೃತ್ತಿಕಾ ನಕ್ಷತ್ರಪುಂಜದ ಅಧಿದೇವನಾದ ಅಗ್ನಿಯನ್ನು ಪುರೋಹಿತನನ್ನಾಗಿ ಮಾಡಿ ಪ್ರಾರಂಭವಾಗಿದೆ. ಆದುದರಿಂದ ಮೊದಲು ಚಿತ್ರ ಸಂಕೇತಗಳ ರೂಪದಿಂದಲೂ ಚಿತ್ರಮಿಶ್ರಿತ ಸಿಂಧೂ ಲಿಪಿಯಿಂದಲೂ ಬರೆಯಲ್ಪಟ್ಟಿದ್ದ ಪ್ರಾಚೀನ ವೈದಿಕ ಸಾಹಿತ್ಯವು ವಸಂತಸಂಪಾತ ಬಿಂದುವು ಕೃತ್ತಿಕೆಯಲ್ಲಿ ಬಂದಾಗ ಅದಕ್ಕಿಂತ ಮೊದಲೇ ನಿರ್ಮಿಸಲ್ಪಟ್ಟಿದ್ದ-ಬ್ರಾಹ್ಮೀ ಲಿಪಿಯಿಂದ ಬರೆದುಕೊಳ್ಳಲಾಯಿತೆಂದು, ಮತ್ತು ಆ ಕಾಲದಲ್ಲಿಯೇ "ಅಗ್ನಿಮೀಳೇ ಪುರೋಹಿತಮ್" ಎಂಬ ಋಚೆಯು ರಚಿಸಲ್ಪಟ್ಟು ಇತರ ಮಂತ್ರಗಳೊಂದಿಗೆ ಸೇರಿತೆಂದು ಸಿದ್ಧವಾಗುತ್ತದೆ. ಆದುದರಿಂದ ಬ್ರಾಹ್ಮೀ ವರ್ಣಮಾಲೆಯ ನಿರ್ಮಾಣ ಕಾಲವು ಎಷ್ಟು ಕಡಿಮೆಯೆಂದರೂ ಸಂಪಾತ ಬಿಂದುವು ಕೃತ್ತಿಕೆಯಲ್ಲಿ ಬರುವುದಕ್ಕಿಂತ ಮೊದಲೇ ಅಂದರೆ ಶಕಪೂರ್ವ ಎರಡು ಸಾವಿರದ ಆರುನೂರು ವರ್ಷಗಳೆಂದು ನಿರ್ಧರಿಸಬಹುದು. ಇನ್ನು ಬ್ರಾಹ್ಮೀ ಲಿಪಿಯ ನಿರ್ಮಾಪಕರಾರು? ಎಂಬುದರ ಸಂಬಂಧದಲ್ಲಿ ಮುಂದಿನಂತೆ ಅನುಮಾನಿಸಬಹುದು-

ಪ್ರಾಚೀನ ಕಾಲದಲ್ಲಿ ಭಾರತೀಯ ವಿದ್ಯಾರ್ಥಿಗಳಿಗೆ ಅಂದರೆ ಬ್ರಹ್ಮಚಾರಿಗಳಿಗೆ ವೈದಿಕ ಶಿಕ್ಷಣವನ್ನು ಕೊಡುವ ಸಲುವಾಗಿ ಸ್ಥಾಪಿಸಲ್ಪಟ್ಟ "ಚರಣ" ಎಂಬ ಹೆಸರಿನ ನೂರಾರು ವಿದ್ಯಾಪೀಠಗಳಿದ್ದುವು. ಆ ಚರಣಗಳು ಅವುಗಳ ಸ್ಥಾಪಕರಾದ ಆಚಾರ್ಯರ ಹೆಸರುಗಳಿಂದ ಕರೆಯಲ್ಪಡುತಿದ್ದುವು. ಬೇರೆ ಬೇರೆ ಚರಣಗಳಲ್ಲಿ ಬೇರೆ ಬೇರೆ ವೇದದ ಬೇರೆ ಬೇರೆ ಶಾಖೆಗಳ ಸಾಂಗ ಅಧ್ಯಾಪನವು ಸಾಗುತಿತ್ತು. ವೈದಿಕ ಸಾಹಿತ್ಯದ ವಿವಿಧ ಅಂಗಗಳ ವಿಕಾಸವು ಅಂಥ ಚರಣಗಳಲ್ಲಿಯೇ ಆಗಿತ್ತು.[1]

ಶಿಕ್ಷಣಕ್ಕೆ ಸಂಬಂಧಪಟ್ಟ ವಿಷಯಗಳನ್ನು ಚರ್ಚಿಸಲು ಎಲ್ಲ ಚರಣಗಳ ಆಚಾರ್ಯರು ಆಗಾಗ್ಗೆ ಸಭೆಗೂಡುತಿದ್ದರು. ಮತ್ತು ಮಂಡಲಾಕಾರದಲ್ಲಿ ಕುಳಿತು ವಿಚಾರವಿಮರ್ಶೆಯನ್ನು ನಡೆಸುತಿದ್ದರು. ಅಂಥ ಗೋಷ್ಠಿಗಳು "ಪರಿಷದ್" ಎನಿಸಿಕೊಳ್ಳುತಿದ್ದುವು. ಸಾಮಾನ್ಯವಾಗಿ ಯಾವುದೊಂದು ಹೊಸ ಶೋಧದ ಮತ್ತು ನಿರ್ಮಾಣದ ರೂಪ-ರೇಷೆಗಳು ಅಂಥ ಪರಿಷತ್ತಿನಲ್ಲಿಯೇ ನಿರ್ಧರಿಸಲ್ಪಡುತಿದ್ದುವು. ಅದೇ ರೀತಿಯಲ್ಲಿ ಓಂಕಾರದ ಮತ್ತು ಬ್ರಾಹ್ಮೀ ವರ್ಣಮಾಲೆಯ ಆವಿಷ್ಕಾರ-ಹಾಗೂ ನಿರ್ಮಾಣಗಳು ಎಲ್ಲ ಚರಣಗಳ ಆಚಾರ್ಯರ ಸಹಕಾರ ಮತ್ತು ಸಮ್ಮತಿ

---

1 ಪಾಣಿನಿ ಕಾಲೀನ ಭಾರತವರ್ಷ ಪುಟ ೨೮೦.


ಗಳಿಂದಲೇ ಆಗಿದ್ದಿತೆಂಬುದರಲ್ಲಿ ಸಂದೇಹವಿಲ್ಲ, ಆದುದರಿಂದ ಆ ನಿರ್ಮಾಣದ ಶ್ರೇಯಸ್ಸನ್ನು ಯಾವನಾದರೂ ಒಬ್ಬ ವ್ಯಕ್ತಿಗೆನೇ ಕೊಡಲು ಸಾಧ್ಯವಿಲ್ಲ. ಅಲ್ಲದೇ ಆ ನಿರ್ಮಾಣದ ಮೂಲ ಕಲ್ಪನೆಯು ಯಾವನಿಗೆ ಹೊಳೆದಿದ್ದಿತೆಂದು ಇಷ್ಟು ದೀರ್ಘ ಕಾಲದ ತರುವಾಯ ಕಂಡುಹಿಡಿಯಲಿಕ್ಕೂ ಸಾಧ್ಯವಿಲ್ಲ.

ಆ ಪ್ರಾಚೀನ ಕಾಲದ ಚರಣಗಳಲ್ಲಿ ಅಥವಾ ಗುರುಕುಲಗಳಲ್ಲಿ ವೈದಿಕ ಗ್ರಂಥಗಳ ಸಂಚಯನ ಹಾಗೂ ಸಂಗ್ರಹವು ಮಾಡಲಾಗುತಿತ್ತು. ಮತ್ತು ಮಾಡಲೇ ಬೇಕಾಗಿತ್ತು. ಕಾರಣವೇನೆಂದರೆ, ಕಾಗದ, ಮಸಿ, ಲೇಖನಿ ಮೊದಲಾದ ಲೇಖನ ಸಾಮುಗ್ರಿಗಳು ಲಭ್ಯವಿಲ್ಲದ ಆ ಕಾಲದಲ್ಲಿ ಗ್ರಂಥಗಳ ರಚನೆಯು ತುಂಬಾ ಶ್ರಮದ ಕಾರ್ಯವಾಗಿತ್ತು. ಅಂದರೆ ಆ ಕಾಲದ ಚರಣಗಳಲ್ಲಿ ವಾಸಿಸುತಿದ್ದ ನುರಿತ ಲೇಖಕರು ಭೂರ್ಜ ವೃಕ್ಷದ ತೆಳ್ಳನ ತೊಗಟೆಯ ಮೇಲೆ ಬಣ್ಣದಿಂದ ಅಲ್ಲವಿದ್ದರೆ ತಾಳೆ ಓಲೆಯ ಗರಿಗಳ ಮೇಲೆ ಮುಳ್ಳಿನಿಂದ ಸಾವಧಾನಪೂರ್ವಕವಾಗಿ ಒತ್ತಿ ಅಕ್ಷರ ಗಳನ್ನು ಮೂಡಿಸಬೇಕಾಗುತಿತ್ತು. ಅದು ತುಂಬಾ ಸಮಯ ತಗಲುವ ಕೆಲಸ ವಾಗಿತ್ತು. ಹಾಗೆ ಒಂದು ಚರಣದಲ್ಲಿ ಬರೆದು ಮುಗಿಸಿದ ಗ್ರಂಥದೊಳಗಿನ ವಿಷಯ ಗಳನ್ನು ಬೇರೊಂದು ಚರಣದ ಲೇಖಕನು ಪ್ರತಿಮಾಡುತಿದ್ದನು. ಆದುದರಿಂದ ಆ ಕಾಲದಲ್ಲಿ ಗುರುಕುಲಗಳಲ್ಲಿ ಕಲಿಯುತಿದ್ದ ಬ್ರಹ್ಮಚಾರಿಗಳು ಸ್ವಂತದ ಗ್ರಂಥಗಳನ್ನು ಇಟ್ಟುಕೊಳ್ಳುವುದಾಗಲೀ, ಬೆಲೆ ಕೊಟ್ಟು ಗ್ರಂಥಗಳನ್ನು ಪಡೆಯುವುದಾಗಲೀ ಸಾಧ್ಯ ವಿರಲಿಲ್ಲ. ಆದುದರಿಂದ ಆ ಕಾಲದ ಆಚಾರ್ಯರು ತಮ್ಮ ಚರಣಗಳಲ್ಲಿ ಕಲಿಯು ತಿದ್ದ ಬ್ರಹ್ಮಚಾರಿಗಳಿಗೆ ಅಕ್ಷರಾಭ್ಯಾಸವನ್ನು ಮಾಡಿಸುತಿದ್ದರಾದರೂ ವೇದ ಮಂತ್ರ ಗಳನ್ನು ತಮ್ಮ ಬಾಯಿಂದ ಉಚ್ಚರಿಸಿ ತೋರಿಸಿ ಬ್ರಹ್ಮಚಾರಿಗಳಿಂದ ಬಾಯಿಪಾಠ ಮಾಡಿಸುತಿದ್ದರು. ಆದರಿಂದಾಗಿ ಬ್ರಹ್ಮಚಾರಿಗಳ ಉಚ್ಚಾರವು ಶುದ್ಧವೂ ಸ್ಪಷ್ಟವೂ ಆಗಿರುತಿತ್ತು.

ಆ ಕಾಲದಲ್ಲ ಈಗಿನಂಥ ಸೀಮೆ ಸುಣ್ಣದ ಕಡ್ಡಿ ಮೊದಲಾದುವುಗಳು ಇರಲಿಲ್ಲ. ಆದುದರಿಂದ ಆ ಕಾಲದ ಆಚಾರ್ಯರು ಗಣಿತಕ್ಕೆ ಸಂಬಂಧಪಟ್ಟ ಸಂಕಲನ, ವ್ಯವಕಲನ, ಗುಣನ. ಭಾಗಹಾರ ಮೊದಲಾದುವುಗಳನ್ನು ಕವಡೆಗಳ ಇಲ್ಲದಿದ್ದರೆ ಗುಲಗಂಜಿಗಳ ರಾಶಿಗಳನ್ನು ಉಪಯೋಗಿಸಿ ಕಲಿಸುತಿದ್ದರು. ಹಾಗೆಯೇ ಅವರು ಯಜ್ಞಚಿತಿಗಳಿಗಾಗಿ ಉಪಯೋಗಿಸುತಿದ್ದ ಚೌಕದ ಇಟ್ಟಿಗೆಗಳನ್ನು ನೆಲದ ಮೇಲೆ ಹಾಸಿ ವರ್ಗ ಸಂಖ್ಯೆಗಳನ್ನೂ, ಕ್ಷೇತ್ರ ಗಣಿತವನ್ನೂ ಕಲಿಸುತಿದ್ದರು. ಮತ್ತು ನೆಲದ ಮೇಲೆ ಬಣ್ಣದ ಹುಡಿಯನ್ನು ಹರವಿ ಶಂಕು ಮತ್ತು ಶುಲ್ಬಗಳಿಂದ ನಾನಾ ರೇಖಾಕೃತಿಗಳನ್ನು ಎಳೆದು ರೇಖಾಗಣಿತವನ್ನೂ, ಬೀಜ ಗಣಿತವನ್ನೂ ಕಲಿಸು ತಿದ್ದರು.

ಹಿಂದೆ ವಿವರಿಸಿದಂತೆ ಪ್ರಾಚೀನ ಚರಣಗಳಲ್ಲಿ ನಿರ್ಮಿಸಲ್ಪಟ್ಟ ಬ್ರಾಹ್ಮೀ ವರ್ಣಮಾಲೆಯು ಸಾವಿರಾರು ಆಚಾರ್ಯರ ಹಾಗೂ ಲೇಖಕರ ಕೈಗಳನ್ನು ದಾಟ

ಮುಂದೆ ಸಾಗುತ್ತ ಭಗವಾನ್ ಬುದ್ಧನ ಕಾಲಕ್ಕೆ ಬಂದು ತಲಪುವಾಗ ಅವರೊಳಗಿನ ಹಲವು ವರ್ಣಗಳ ಮೂಲೆಗಳು ಸವೆದು ದುಂಡಗಾಗಿದ್ದುವು. ಹಲವು ವರ್ಣಗಳು ಒಂದಕ್ಕಿಂತ ಹೆಚ್ಚು ರೂಪಗಳನ್ನು ತಳೆದಿದ್ದುವು. ಇದನ್ನು ಮುಂದಿನ ಚಿತ್ರದಿಂದ ತಿಳಿದುಕೊಳ್ಳಬಹುದು.



ಈ ಚಿತ್ರದಲ್ಲಿ "ತ" ದ ನಾಲ್ಕನೆಯ ರೂಪವು ಬುಡಮೇಲಾಗಿ ಚಿತ್ರಿಸಲ್ಪಟ್ಟಿದೆ. ಅಂದರೆ ಅದರ ತಲೆಯು ಕೆಳಗಿನಿಂದಿರಬೇಕು.

ಅದರಲ್ಲಿ ಕಂಡು ಬರುವ ರೂಪಾಂತರಗಳು ಎಂದು ಪ್ರಾರಂಭವಾದುವೆಂದು ಹೇಳಲಾಗದಿದ್ದರೂ ಪ್ರಾಚೀನ ಯವನಾನೀ ಲೇಖಗಳಲ್ಲಿ ಮತ್ತು ಭಗವಾನ್ ಬುದ್ಧನಿಗೆ ಸಂಬಂಧಿಸಿದ ಒಂದು ಲೇಖದಲ್ಲಿ ಅಂಥ ರೂಪಾಂತರಿತ ವರ್ಣಗಳು ಇವೆಯಾದುದರಿಂದ ಅಂಥ ರೂಪಾಂತರಗಳು ಬುದ್ಧಪೂರ್ವ ಕಾಲದಿಂದಲೇ ಅಂದರೆ ಸಾಧಾರಣ ಶಕಪೂರ್ವ ಎಂಟನೆಯ ಶತಮಾನದಲ್ಲಿಯೇ ಪ್ರಚಲಿತವಿದ್ದುವೆನ್ನಬಹುದು.

ನಮಗೆ ಈ ತನಕ ದೂರೆತಿರುವ ಪ್ರಾಚೀನ ಬ್ರಾಹ್ಮೀ ಲೇಖಗಳು ಎರಡು ಮಾತ್ರ ಆಗಿವೆ. ಅವುಗಳಲ್ಲಿ ಒಂದು ನೇಪಾಳದ ತಪ್ಪಲಲ್ಲಿರುವ ಪಿಪ್ರಾವಾ ಎಂಬ ಹಳ್ಳಿಯಲ್ಲಿ ಬೌದ್ಧ ಸ್ತೂಪದೊಳಗೆ ಸ್ಥಾಪಿಸಿದ ಬುದ್ಧ ದೇವನ ಅಸ್ತಿಗಳಿರುವ ಕರಂಡಕದ ಮೇಲಿರುವುದಾಗಿದೆ. ಆ ಲೇಖದಿಂದ ಶಾಕ್ಯ ಜನರು ಒಟ್ಟುಗೂಡಿ ಬುದ್ಧ ದೇವನ ಅಸ್ಥಿಗಳನ್ನು ಆ ಕರಡಿಗೆಯಲ್ಲಿಟ್ಟು ಅದನ್ನು ಆ ಸ್ತೂಪದೊಳಗೆ ಸ್ಥಾಪಿಸಿದ್ದರೆಂದು ತಿಳಿದು ಬರುತ್ತದೆ. ಆ ಲೇಖದ ಕಾಲವು ಶಕಪೂರ್ವ ೫೬೭ನೆಯ ವರ್ಷವಾಗಿದೆ. ಎರಡನೆಯ ಲೇಖವು ಅಜಮೇರ್ ಜಿಲ್ಲೆಯ ಬಳಲಿ ಎಂಬ ಊರಲ್ಲಿ ಒಂದು ಕಂಭದ ಮೇಲಿರುವುದಾಗಿದೆ. ಅದರ ಕಾಲವು ಶಕಪೂರ್ವ ೫೭೧ನೆಯ ವರ್ಷವಾಗಿದೆ.[1]

ಬುದ್ಧ ಪೂರ್ವಕಾಲದ ವೈದಿಕ ಜನರು ತಾವು ಬರೆದ ಮಂತ್ರಗಳನ್ನು ಮತ್ತು ವೈದಿಕ ಸಾಹಿತ್ಯವನ್ನು ಜನಸಾಮಾನ್ಯರಿಗೆ ತೋರಿಸುತ್ತಿರಲಿಲ್ಲ. ಆದುದರಿಂದ ಸಾಮಾನ್ಯ ಜನರಿಗೆ ಬರಹದ ಪರಿಚಯವಿರಲಿಲ್ಲ. ಮುಂದೆ ಭಗವಾನ್ ಬುದ್ಧದೇವನ ಅಹಿಂಸಾ ಧರ್ಮದ ಬೋಧನೆಗೆ ಒಲಿದ ಹಲವು ಬ್ರಾಹ್ಮಣ ವಿದ್ವಾಂಸರು ಬುದ್ಧ ದೇವನ ಶಿಷ್ಯರಾದರು. ಮತ್ತು ಅವರು ಬುದ್ಧ ದೇವನ ಧರ್ಮವನ್ನು ಜನಸಾಮಾನ್ಯರಲ್ಲಿ ಪ್ರಚಾರ ಮಾಡುತ್ತಿರುವಾಗ ಎಲ್ಲರಿಗೂ ಅಕ್ಷರಾಭ್ಯಾಸವನ್ನು ಮಾಡಿಸತೊಡಗಿದರು. ಹಾಗಾಗಿ ಅಧಿಕಾಂಶ ಜನರಿಗೆ ಬ್ರಾಹ್ಮೀ ವರ್ಣಮಾಲೆಯ ಪರಿಚಯವಾಯಿತಲ್ಲದೇ ಜನಸಾಮಾನ್ಯರು ಕೂಡ ಅದನ್ನು ಉಪಯೋಗಿಸುವಂತಾಯಿತು.

ಹಿಂದೆ ವಿವರಿಸಿದ ಎರಡು ಲೇಖಗಳ ತರುವಾಯದ ಕಾಲದಲ್ಲಿ ಚಕ್ರವರ್ತಿ ಚಂದ್ರಗುಪ್ತನು ಅಚ್ಚು ಹಾಕಿಸಿದ ನಾಣ್ಯಗಳ ಮೇಲೆ ಕೆಲವು ಬ್ರಾಹ್ಮೀ ವರ್ಣಗಳು ಕಂಡು ಬರುತ್ತವಾದರೂ ಅವನ ಕಾಲದ ಬೇರೆ ಲೇಖಗಳಾವುವೂ ಈ ತನಕ ದೊರೆ

---

[1] ಭಾರತೀಯ ಪ್ರಾಚೀನ ಲಿಪಿಮಾಲಾ.

ಲ್ಲಿ. ನಮಗೆ ಈಗ ಹೆಚ್ಚಾಗಿ ದೊರೆಯುವ ಪ್ರಾಚೀನ ಬ್ರಾಹ್ಮೀ ಲಿಪಿ ಯೆಂದರೆ ಶಕಪೂರ್ವ ೩೫೧ನೆಯ ವರ್ಷದಿಂದ ೩೧೪ನೆಯ ವರ್ಷದ ತನಕ ಮಗಧ ಸಾಮ್ರಾಜ್ಯದ ಚಕ್ರವರ್ತಿಯಾಗಿ ಆಳಿದ ಅಶೋಕನು ಬರೆಯಿಸಿದ ಧರ್ಮ ಶಾಸನಗಳಾ ಗುತ್ತವೆ. ಆವನ ತರುವಾಯದಿಂದ ಬೇರೆ ಬೇರೆ ಅರಸರು ಬೇರೆ ಬೇರೆ ಕಾಲಗಳಲ್ಲಿ ಬರೆಯಿಸಿದ ನೂರಾರು ಶಾಸನಗಳು ಈಗಲೂ ಸಿಗುತ್ತವೆ. ಆ ಶಾಸನಗಳಲ್ಲಿ ಉಪ ಯೋಗಿಸಲ್ಪಟ್ಟಿರುವ ಬ್ರಾಹ್ಮೀ ವರ್ಣಗಳ ರೂಪಗಳಿಂದ ಬ್ರಾಹ್ಮೀ ವರ್ಣಮಾಲೆಯು ಕೊಂಚ ಕೊಂಚವೇ ರೂಪಾಂತರವಾಗುತ್ತ ಸಾಗಿ ಕೊನೆಗೆ ಈಗ ಪ್ರಚಲಿತವಿರುವ ಪ್ರಾದೇಶಿಕ ವರ್ಣಮಾಲೆಗಳಾಗಿ ಮಾರ್ಪಡುವ ತನಕದ ಎಲ್ಲ ಹಂತಗಳು ಗೊತ್ತಾ ಗುತ್ತವೆ. ಮತ್ತು ಆ ಹಂತಗಳ ಆಧಾರದಿಂದ ಆಯಾ ಶಾಸನದ ಕಾಲವನ್ನು ನಿರ್ಣ ಯಿಸಲು ಸಾಧ್ಯವಾಗುತ್ತದೆ.

ಪಾಶ್ಚಿಮಾತ್ಯ ವಿದ್ವಾಂಸರು ಬ್ರಾಹ್ಮೀ ವರ್ಣಮಾಲೆಯು ಸೆಮಿಟಿಕ್ ವರ್ಣಮಾಲೆಗಳಿಂದ ಹುಟ್ಟಿದುದೆಂದು ವಾದಿಸಿರುವುದರಿಂದ ಆ ವರ್ಣಮಾಲೆಗಳು ಬ್ರಾಹ್ಮೀ ವರ್ಣಮಾಲೆಗಿಂತ ಪ್ರಾಚೀನವಾದವುಗಳೆಂಬುದು ವಾಸ್ತವವೇ ಎಂಬು ದನ್ನೂ, ಅವುಗಳು ಸ್ವತಂತ್ರವಾಗಿ ಹುಟ್ಟಿದವುಗಳೇ ಎಂಬುದನ್ನೂ ವಿಮರ್ಶಿಸಬೇ ಕಾಗಿದೆ.


ಅಮೇರಿಕದ "ಜಾಗತಿಕ ಪುಸ್ತಕ ವಿಶ್ವಕೋಶ"[1] ದಲ್ಲಿ ಪ್ರತಿಯೊಂದು ವರ್ಣ ದಿಂದ ಪ್ರಾರಂಭವಾಗುವ ವಿಭಾಗದಲ್ಲಿ ಮೊತ್ತಮೊದಲು ೧. ಈಜಿಪ್ತದ ಚಿತ್ರ ಲಿಪಿಯ ರೂಪವನ್ನು, ೨. ಸೆಮಿಟಿಕ್ ವರ್ಣವನ್ನು; ೩. ಫಿನಿಶಿಯನ್ ವರ್ಣ ವನ್ನು; ೪. ಯವನಾನೀ (= ಗ್ರೀಕ್) ವರ್ಣವನ್ನು ಮತ್ತು ೫. ರೋಮನ್ ವರ್ಣವನ್ನು ಕೊಟ್ಟು ಅವುಗಳ ನಿರ್ಮಾಣ ಕಾಲವನ್ನು ಹೇಳಿದೆ. ಆ ಕಾಲವು ಅನುಕ್ರಮವಾಗಿ ಶಕಪೂರ್ವ ೩೦೭೮, ೧೫೭೮, ೧೦೭೮, ೭೭೮ ಮತ್ತು ಶಕದ ೩೬ ವರ್ಷಗಳಾಗಿವೆ. ಆ ವರ್ಣಚಿಹ್ನಗಳಲ್ಲಿ ಈಜಿಪ್ತದ ಚಿತ್ರಲಿಪಿಯೊಳಗಿನ ಮತ್ತು ಸೆಮಿಟಿಕ್ ವರ್ಣಮಾಲೆಯೊಳಗಿನ ನಾಲ್ಕು ನಾಲ್ಕು ವರ್ಣಗಳು ರೂಪದಿಂದ ಮತ್ತು ಧ್ವನಿಯಿಂದ ಬ್ರಾಹ್ಮಿಯವುಗಳೇ ಆಗಿವೆ. ಹಾಗಿದ್ದರೂ ಬ್ರಾಹ್ಮೀವರ್ಣಮಾಲೆಯು ಸೆಮಿಟಿಕ್ ವರ್ಣಮಾಲೆಗಳಿಂದ ಹುಟ್ಟಿದುದೆಂದು ವಾದಿಸಿದ ಜಾರ್ಜ್ ಬುಹ್ಲರರು ಆ ಮೂಲ ಸೆಮಿಟಿಕ್ ವರ್ಣಗಳನ್ನು ಮುಂದೆ ತರದೇ ಬೇರೆಯೇ ವರ್ಣಗಳನ್ನು ಮುಂದೆ ತಂದಿದ್ದಾರೆ. ಆ ನಾಲ್ಕು ವರ್ಣಗಳೊಳಗಿನ ಆ ಬಗೆಯ ರೂಪಸಾಮ್ಯವು ಮತ್ತು ಧ್ವನಿಸಾಮ್ಯವು – ಒಂದು ಆಕಸ್ಮಿಕ ಸಂಯೋಗವಾಗಿರಲು ಸಾಧ್ಯವಿಲ್ಲ. ಏಕೆಂದರೆ ಮೊದಲನೆಯದಾಗಿ ಬ್ರಾಹ್ಮೀ ವರ್ಣಮಾಲೆಯು ಪಾಶ್ಚಾತ್ಯ ವಿದ್ವಾಂಸರು

---


1. The World Book "Eucyclopedia" 50th Anniversary Edition. Chicago.

ಶಾಬಿಸಿರುವಂತೆ ಶಕಪೂರ್ವ ಎಂಟನೆಯ ಶತಮಾನದಷ್ಟು ಅರ್ವಾಚೀನವಾಗಿರದೇ ಋಗ್ವೇದ ಪೂರ್ವಕಾಲದ್ದಾಗಿದ್ದು ಎಲ್ಲ ಸೆಮಿಟಿಕ್ ವರ್ಣಮಾಲೆಗಳಿಗಿಂತ ಪ್ರಾಚೀನವಾಗಿದೆ. ಎರಡನೆಯದಾಗಿ ಸೆಮಿಟಿಕ್ ವರ್ಣಮಾಲೆಗಳಲ್ಲಿ ಹಿಂದೆ ಹೇಳಿದ ನಾಲ್ಕು ವರ್ಣಗಳು ಮಾತ್ರವಲ್ಲದೇ ಇನ್ನೂ ಹಲವು ಬ್ರಾಹ್ಮೀ ವರ್ಣಗಳಿವೆ. ಆದುದರಿಂದ ಬ್ರಾಹ್ಮೀ ವರ್ಣಮಾಲೆಯು ನಿರ್ಮಿಸಲ್ಪಟ್ಟ ಹಲವು ಶತಮಾನಗಳ ತರುವಾಯ ಬ್ರಾಹ್ಮೀ ವರ್ಣಮಾಲೆಯನ್ನು ಕಂಡ ಸೆಮಿಟಿಕ್ ಜನರು ಆದರೊಳಗಿನ ವರ್ಣಗಳಿಂದಲೇ ತಮ್ಮ ವರ್ಣಮಾಲೆಗಳನ್ನು ರೂಪಿಸಿದ್ದರೆಂದು ಸಿದ್ಧವಾಗುತ್ತದೆ. ಹಾಗಲ್ಲದಿದ್ದರೆ ಸೆಮಿಟಿಕ್ ವರ್ಣಮಾಲೆಗಳಲ್ಲಿ ಆರ್ಯಜನರ ಯಜ್ಞಚಿತಿಗಳ ಆಕೃತಿಗಳು ಇರುತ್ತಿರಲಿಲ್ಲ. ಅದನ್ನು ಮುಂದಿನ ವಿವರಗಳಿಂದ ಸರಿಯಾಗಿ ಸಿದ್ಧಪಡಿಸಬಹುದು.

ಈಜಿಪ್ತದ ಚಿತ್ರಲಿಪಿಯಲ್ಲಿ ಬ ವರ್ಣದ ಚಿತ್ರವು  ಹೀಗಿದೆ. ಅದು ಬ್ರಾಹ್ಮಿಯ ಬ ವರ್ಣದಿಂದ ಕೊಂಚ ಭಿನ್ನವಾಗಿದೆ. ಆದರೆ ಸೆಮಿಟಿಕ್ ಬ ವರ್ಣದ ಚಿಹ್ನೆಯು  ಹೀಗಿದೆ. ಅಂದರೆ ಅದು ಬ್ರಾಹ್ಮಿಯದೇ ಆಗಿದೆ. ಈಜಿಪ್ತದ ದ ವರ್ಣದ ಚಿತ್ರವು  ಹೀಗಿದೆಯಾದರೆ ಬ್ರಾಹ್ಮಿಯದು  ಹೀಗಿದೆ. ಮತ್ತು ಎರಡು ಚಿಹ್ನೆಗಳೂ "ದ್ವಾರವನ್ನು" ಅಂದರೆ ಬಾಗಿಲನ್ನು ಸೂಚಿಸುತ್ತವೆ. ಆದುದರಿಂದ ಈಜಿಪ್ತದ ಚಿತ್ರವು ಬ್ರಾಹ್ಮೀ ವರ್ಣದ ರೂಪಾಂತರವೆಂದು ಸ್ಪಷ್ಟವಾಗಿ ಸಿದ್ಧವಾಗುತ್ತದೆ. ಹಾಗೆಯೇ ಈಜಿಪ್ತದ ಗ ವರ್ಣದ ಚಿತ್ರವು  ಹೀಗಿದೆ. ಅದು ಬ್ರಾಹ್ಮಿಯ ಗ  ವರ್ಣವನ್ನು ಕೋನಾಗಿ ನಿಲ್ಲಿಸಿ ಅದರ ಒಂದು ಕಾಲನ್ನು ಕೊಂಚ ಉದ್ದ ಮಾಡಿದಂತಿದೆ. ಅದರಂತೆಯೇ ಈಜಿಪ್ತದ ಲ ವರ್ಣದ ಚಿತ್ರವು  ಹೀಗಿದ್ದರೆ ಸೆಮಿಟಿಕ್ ವರ್ಣವು  ಹೀಗಿದೆ. ಇವುಗಳು ಬ್ರಾಹ್ಮಿಯ ಲ ವರ್ಣದ ಪೂರ್ತಿಯನ್ನು ಕಳೆದು ಬುಡ ಮೇಲಾಗಿಯೂ, ಹಿಮ್ಮೊಗವಾಗಿಯೂ ಮಾಡಿದಂತಿವೆ. ಅಂದರೆ ಹಿಂದಿನ ನಾಲ್ಕು ವರ್ಣಚಿಹ್ನೆಗಳಲ್ಲಿ ಬ್ರಾಹ್ಮಿಯೊಂದಿಗೆ ಧ್ವನಿಸಾಮ್ಯವೂ, ರೂಪಸಾಮ್ಯವೂ ಪೂರ್ತಿಯಾಗಿದೆ. ಹಾಗೆಯೇ ಈಜಿಪ್ತದ ಘ ವರ್ಣದ ಚಿತ್ರವು  ಹೀಗಿದ್ದರೆ ಸೆಮಿಟಿಕ್ ಚಿಹ್ನೆಯು  ಹೀಗಿದೆ. ಅವುಗಳೆರಡೂ ಬ್ರಾಹ್ಮಿಯ ತ ವರ್ಣದ  ಈ ಚಿಹ್ನೆಗಳನ್ನು ಬುಡ ಮೇಲಾಗಿ ಮಾಡಿದವುಗಳಾಗಿವೆ. ಈಜಿಪ್ತದ ತ ವರ್ಣದ ಚಿತ್ರವು  ಹೀಗಿದೆ. ಅದು ಬ್ರಾಹ್ಮಿಯ ಕ ವರ್ಣವನ್ನು ಕೋನ ಮಾಡಿ ನಿಲ್ಲಿಸಿದಂತಿದೆ. ಆದರೆ ಸೆಮಿಟಿಕ್ ತ ವರ್ಣದ ಚಿಹ್ನೆಯು ಬ್ರಾಹ್ಮಿಯ ಕ ವರ್ಣವೇ ಆಗಿರುತ್ತದೆ.

ಹಾಗೆಯೇ ಜಾರ್ಜ್ ಬುಹ್ಲರರು ತನ್ನ ಪುಸ್ತಕದಲ್ಲಿ ಕೊಟ್ಟಿರುವ ಫಿನಿಶಿಯನ್ ಮತ್ತು ಮೋಆಬದ ಅರಸ ಮೇಶಾನ ಶಾಸನದ ವರ್ಣಮಾಲೆಯಲ್ಲಿ ಬ್ರಾಹ್ಮಿಯ  ಮೊದಲಾದ ಚಿಹ್ನೆಗಳೂ ಸೆಮಿಟಿಕ್ ವರ್ಗದ ಸೇಬಿಯನ್ ವರ್ಣಮಾಲೆಯಲ್ಲಿ ಬ್ರಾಹ್ಮಿಯ   ಮೊದಲಾದ ಚಿಹ್ನೆಗಳೂ ಇವೆ. ಪ್ರಾಚೀನ ಫಿನಿಶಿಯನ್ ವರ್ಣಮಾಲೆಯಲ್ಲಿ ಕ ವರ್ಣದ ಚಿಹ್ನೆಯು ಬ್ರಾಹ್ಮಿಯ ಯ ವರ್ಣವಾಗಿತ್ತು. ಆ ಚಿಹ್ನೆಗಳ ಧ್ವನಿಗಳು ಬೇರೆಯಾಗಿವೆಯೆಂಬುದು ಇಲ್ಲಿ ಮುಖ್ಯವಲ್ಲ. ಆ ಚಿಹ್ನೆಗಳು ಮೂಲದಲ್ಲಿ ಬ್ರಾಹ್ಮಿಯವುಗಳೇ ಆಗಿವೆಯೆಂಬುದು ಮಾತ್ರ ಮುಖ್ಯವಾಗಿದೆ. ಏಕೆಂದರೆ  ಎಂಬವುಗಳು ಆರ್ಯಜನರ ಯಜ್ಞಚಿತಿಗಳ ಮತ್ತು ಯಜ್ಞೋಪಕರಣಗಳ ಆಕೃತಿಗಳಾಗಿರುವುದರಿಂದ ಅವುಗಳನ್ನು ಸೆಮಿಟಿಕ್ ಜನರ ಚಿಹ್ನೆಗಳೆನ್ನಲಾಗುವುದಿಲ್ಲ. ಮತ್ತು ಅವರಲ್ಲಿ ಅಂಥ ಚಿಹ್ನೆಗಳಿರಲು ಕಾರಣವೂ ಇಲ್ಲ. ಆದುದರಿಂದ ಬ್ರಾಹ್ಮೀ ವರ್ಣಗಳ ಚಿಹ್ನೆಗಳು ಮೂಲ ರೂಪಗಳಲ್ಲಿಯೇ ಆಗಲೀ ವಿಕೃತ ರೂಪಗಳಲ್ಲಿಯೇ ಆಗಲೀ ಆರ್ಯೇತರ ಜನರ ವರ್ಣಮಾಲೆಗಳಲ್ಲಿ ಇದ್ದಲ್ಲಿ ಆ ವರ್ಣಮಾಲೆಗಳು ಬ್ರಾಹ್ಮೀವರ್ಣಮಾಲೆಯ ಅನುಕರಣದಿಂದಲೇ ನಿರ್ಮಿಸಲ್ಪಟ್ಟವುಗಳೆಂದು ಸಂದೇಹಪಡದೇ ನಿರ್ಧರಿಸಬಹುದಾಗಿದೆ,

ಸಾರಾಂಶವೇನೆಂದರೆ ಪಾಶ್ಚಾತ್ಯ ವಿದ್ವಾಂಸರು ಈ ತನಕ ಸೆಮಿಟಿಕ್ ವರ್ಣಮಾಲೆಗಳ ಮೂಲದ ಸಂಬಂಧದಲ್ಲಿ ಮತ್ತು ಪ್ರಾಚೀನತೆಯ ಸಂಬಂಧದಲ್ಲಿ ಸಿದ್ಧಾಂತದಂತೆ ಏಕಪಕ್ಷೀಯವಾಗಿ ಪ್ರಚಾರಮಾಡಿದ ಸಕಲ ಕಲ್ಪನೆಗಳನ್ನು ಆಮೂಲಾಗ್ರವಾಗಿ ಪರಿವರ್ತಿಸಬೇಕಾಗಿದೆ. ಅಂದರೆ ಆ ವರ್ಣಮಾಲೆಗಳ ಹುಟ್ಟಿನ ಕಲ್ಪನೆಗಳನ್ನು ಮತ್ತು ಕಾಲಮಾನಗಳನ್ನು ಸಿಂಧೂಲಿಪಿಯ ಮತ್ತು ಬ್ರಾಹ್ಮೀವರ್ಣಮಾಲೆಯ ನಿರ್ಮಾಣಕಾಲಗಳಿಗನುಸಾರವಾಗಿ ಪರಿವರ್ತಿಸಬೇಕಾಗಿದೆ. ಏಕೆಂದರೆ ಸಿಂಧೂ ಲಿಪಿಯು ಜಗತ್ತಿನ ಎಲ್ಲ ಲಿಪಿಗಳಿಗಿಂತ ಪ್ರಾಚೀನವಾಗಿದೆ, ಮತ್ತು ಅದರ ತರುವಾಯ ನಿರ್ಮಿಸಲ್ಪಟ್ಟ ಲಿಪಿಯು ಬ್ರಾಹ್ಮಿಯಾಗಿದೆಯೆಂಬುದು ಹಿಂದಿನ ವಿವರಗಳಿಂದ ಸ್ಪಷ್ಟವಾಗಿ ಸಿದ್ಧವಾಗಿದೆ.



ಯವನರ ಪ್ರಾಚೀನ ವರ್ಣಮಾಲೆ "ಯವನಾನೀ"

ಯವನಾನೀ

ಹಿಂದೆ ಬ್ರಾಹ್ಮೀ ವರ್ಣಮಾಲೆಯ ಉತ್ಪತ್ತಿಯ ಸಂಬಂಧದಲ್ಲಿ ಚರ್ಚೆ ಸಾಗುತಿದ್ದ ಕಾಲದಲ್ಲಿ ಒಟ್‌ಫ್ರೆಡ್ ಮುಲ್ಲರ್, ಡಾ. ಪ್ರಿನ್ಸೆಪ್. ಪ್ರೊ. ಸೆನಾರ್ಟ್ ಮೊದಲಾದ ಪಾಶ್ಚಾತ್ಯ ವಿದ್ವಾಂಸರು ಬ್ರಾಹ್ಮೀ ವರ್ಣಮಾಲೆಯು ಯವನಾನಿ

ಯಿಂದ ಹುಟ್ಟಿದ್ದಿತೆಂದು ವಾದಿಸಿದ್ದರು. ಅವರ ವಾದಕ್ಕೆ ಬಲವಾದ ಆಧಾರವೂ ಇತ್ತು. ಅಂದರೆ ಪ್ರಾಚೀನ ಯವನಾನಿಯು ಮೊದಲ ಎರಡು ವರ್ಣಗಳನ್ನು ಬಿಟ್ಟು ಉಳಿದ ಇಪ್ಪತ್ತೆರಡು ವರ್ಣಗಳು ಯಥಾವತ್ ಬ್ರಾಹ್ಮಿಯವುಗಳೇ ಆಗಿದ್ದುವು. ಅವುಗಳಲ್ಲಿ ಇಪ್ಪತ್ತು ವರ್ಣಸೂಚಕಗಳಾಗಿದ್ದು ಎರಡು ಸಂಖ್ಯಾಸೂಚಕ ಅಂಕೆಗಳಾಗಿದ್ದುವು. ಆದುದರಿಂದ ಅವರ ವಾದಕ್ಕೆ ದೃಢವಾದ ಪ್ರಮಾಣವಿದ್ದಿತು. ಹಾಗಾಗಿ ಅವರು ತಮ್ಮ ವಾದವನ್ನು ಮುಂದುವರಿಸಿ ಬ್ರಾಹ್ಮೀವರ್ಣಮಾಲೆಯು ಯವನಾನಿಯಿಂದ ಹುಟ್ಟಿದ್ದಿತೆಂದು ಸಿದ್ಧಪಡಿಸಬಹುದಾಗಿದ್ದಿತು. ಮತ್ತು ಹಾಗೆ ಮಾಡುವುದು ಅತ್ಯಂತ ಸರಳವೂ ಸುಗಮವೂ ಆಗಿತ್ತು. ಅದನ್ನು ಸಾಧಿಸಲು ಅವರು–ಪ್ರೊ. ಬುಹ್ಲರರು ಮಾಡಿದಂಥ ಯಾವ ಕಸರತ್ತನ್ನೂ ಮಾಡಬೇಕಾಗಿರಲಿಲ್ಲ. ಪರಂತು ಈ ವಾದವನ್ನು ಮುಂದೆ ತಂದಿದ್ದ ವಿದ್ವಾಂಸರಾಗಲೀ ಇತರ ಪಾಶ್ಚಾತ್ಯ ವಿದ್ವಾಂಸರಾಗಲೀ ಅಷ್ಟು ದೃಢವಾದ ಪ್ರಮಾಣವುಳ್ಳ ವಾದವನ್ನು ಮುಂದುವರಿಸಲಿಲ್ಲ. ಏಕೆ ಮುಂದುವರಿಸಲಿಲ್ಲ? ಎಂಬ ಈ ಪ್ರಶ್ನೆಯು ಅತ್ಯಂತ ಮುಖ್ಯವಾಗಿದೆ. ಏಕೆಂದರೆ ಅವರು ಆ ವಾದವನ್ನು ಮುಂದುವರಿಸುತಿದ್ದುದಾದರೆ ಭಾರತೀಯ ವಿದ್ವಾಂಸರಿಗೆ ಪ್ರಾಚೀನ ಯುವನಾನಿಯು ಪರಿಚಯವಾಗುತಿತ್ತು ಮತ್ತು ಪ್ರಾಚೀನ ಯವನಾನೀ ವರ್ಣಗಳೊಳಗೂ ಬ್ರಾಹ್ಮೀವರ್ಣಗಳೊಳಗೂ ಇರುವ ನಿಕಟ ಸಾಮ್ಯವು ಭಾರತೀಯ ವಿದ್ವಾಂಸರ ಲಕ್ಷ್ಯಕ್ಕೆ ಬರುತಿತ್ತು. ಮತ್ತು ಪಾಶ್ಚಾತ್ಯ ವಿದ್ವಾಂಸರ ಮುಖ್ಯ ಉದ್ದೇಶವು ಮೊದಲ ಹಂತವಲ್ಲಿಯೇ ಭಂಗವಾಗುತಿತ್ತು. ಅಂದರೆ ಬ್ರಾಹ್ಮೀ ಹಾಗೂ ಯವನಾನೀ ವರ್ಣಮಾಲೆಗಳು ಸೆಮಿಟಿಕ್ ವರ್ಗದ ಫಿನಿಶಿಯನ್ ವರ್ಣಮಾಲೆಯಿಂದ ಹುಟ್ಟಿದ್ದುವೆಂಬ ವಾದದ ಮೂಲಕ ಅವರು ಕಟ್ಟತೊಡಗಿದ ಉಸುಬಿನ ಕಟ್ಟಡವು ಮೂಲದಲ್ಲಿಯೇ ಕುಸಿದು ಬೀಳುತಿತ್ತು.

ಸಾಮಾನ್ಯವಾಗಿ ಅಧಿಕಾಂಶ ಪಾಶ್ಚಾತ್ಯ ವಿದ್ವಾಂಸರು ಯವನ ರಾಜಕುಮಾರ ಅಲೆಕ್ಸಾಂಡರನು ಸೈನ್ಯ ಸಹಿತನಾಗಿ ಭಾರತ ವರ್ಷಕ್ಕೆ ಬರುವ ಮೊದಲು ಭಾರತೀಯರಿಗೆ ಯವನರ ಪರಿಚಯವಿರಲಿಲ್ಲವೆಂದು ಮತ್ತು ಅಲೆಕ್ಸಾಂಡರನ ಆಗಮನ ಕಾಲದಿಂದಲೇ ಭಾರತವರ್ಷದ ವಾಸ್ತವಿಕ ಇತಿಹಾಸವು ಪ್ರಾರಂಭವಾಗುತ್ತದೆಂಬ ಅಭಿಪ್ರಾಯವನ್ನು ವ್ಯಕ್ತಗೊಳಿಸಿದ್ದಾರೆ, ಏಕೆಂದರೆ ಪಾಶ್ಚಾತ್ಯ ಸಂಸ್ಕೃತಿಯ ಜನಕರಾದ ಯವನರ ಪರಿಚಯವು ಭಾರತೀಯರಿಗೆ ಅಲೆಕ್ಸಾಂಡರನ ಆಗಮನಕಾಲಕ್ಕಿಂತ ಮೊದಲಿನಿಂದಲೂ ಇದ್ದಿತೆಂದು ಮತ್ತು ಪಾಇಥಾಗೊರಸನಂಥ ಪ್ರಖ್ಯಾತ ಯವನ ವಿದ್ವಾಂಸರು ವಿದ್ಯಾರ್ಥಿಗಳಾಗಿ ಭಾರತ ವರ್ಷಕ್ಕೆ ಬಂದು ವಿದ್ಯೆ ಕಲಿತಿದ್ದರೆಂದು ಒಪ್ಪುವುದು ಸಾಮ್ರಾಜ್ಯ ವಿಜೇತರಾದ ತಮ್ಮ ಗೌರವಕ್ಕೆ ಕುಂದೆಂದು ಪಾಶ್ಚಾತ್ಯ ವಿದ್ವಾಂಸರು ಭಾವಿಸತೊಡಗಿದ್ದರು. ಅದನ್ನು ಪ್ರೊ, ಫ್ರೆಡ್ರಿಕ್ ಮೆಕ್ಸ್‌ಮುಲ್ಲರರ "ಭಾಷಾ ವಿಜ್ಞಾನದ ಮೇಲಿನ ಉಪನ್ಯಾಸಗಳು" ಎಂಬ ಪುಸ್ತಕದಿಂದ ತಿಳಿದುಕೊಳ್ಳಬಹುದು.

ಹೇಗಿದ್ದರೂ ಆಚಾರ್ಯ ಪಾಣಿನಿಯು ರಚಿಸಿದ ಅಷ್ಟಾಧ್ಯಾಯಿ ಎಂಬ ವ್ಯಾಕರಣ ಗ್ರಂಥದೊಳಗಿನ ಒಂದು ಸೂತ್ರದಿಂದ ಆಚಾರ್ಯ ಪಾಣಿನಿಗೆ ಬರೇ ಯವನರ ಪರಿಚಯ ಮಾತ್ರವಲ್ಲ ಅವರ ಲಿಪಿಯ ಪರಿಚಯ ಕೂಡ ಇತ್ತೆಂದು ಸಿದ್ಧವಾಗುತ್ತದೆ. ಆದುದರಿಂದ ಆಚಾರ್ಯ ಪಾಣಿನಿಯ ಜನ್ಮಕಾಲಕ್ಕಿಂತ ಮೊದಲಿನಿಂದಲೂ ಭಾರತೀಯರಿಗೆ ಯವನರ ಪರಿಚಯವಿದ್ದಿತೆಂದು ಒಪ್ಪಲೇ ಬೇಕಾಗುತ್ತದೆ. ಅದಕ್ಕೆ ಬೇರೆ ಪ್ರಮಾಣಗಳೂ ಇವೆ.

ಪಾರಸದ ಚಕ್ರವರ್ತಿ ಮೊದಲನೆಯ ಕುರುಷನು (Cyrus) ಶಕಪೂರ್ವ ಏಳನೆಯ ಶತಮಾನದಲ್ಲಿ ಭಾರತವರ್ಷದ ವಾಯುವ್ಯ ಪ್ರಾಂತದ ಕಾಬೂಲ ಪ್ರದೇಶ ವನ್ನು ಅಂದರೆ ಗಂಧಾರವನ್ನು ಗೆದ್ದು ತನ್ನ ಸಾಮ್ರಾಜ್ಯವಲ್ಲಿ ಸೇರಿಸಿದ್ದನೆಂದು ಹಿಂದೆ ಹೇಳಿದೆ. ಪಾರಸೀಕರ ಸೈನ್ಯದಲ್ಲಿ ಯವನ ಯೋದ್ಧರೂ, ಸೇನಾಧಿಕಾರಿ ಗಳೂ ಇದ್ದರು. ಮತ್ತು ಅವರು ತಮ್ಮ ಪರಿವಾರ ಸಹಿತವಾಗಿ ಗಂಧಾರದಲ್ಲಿ ಅಫಗಾನಿಸ್ಥಾನದಲ್ಲಿ ಮತ್ತು ಬಾಹ್ಲೀಕ ಪ್ರಾಂತದಲ್ಲಿ ನೆಲಸಿದ್ದರು. ಹಾಗಾಗಿ ಭಾರತೀಯರಿಗೆ ಯವನರ ಮತ್ತು ಯವನರಿಗೆ ಭಾರತೀಯರ ಸರಿಯಾದ ಪರಿಚಯವಾಗಿತ್ತು.

ಅಷ್ಟಾಧ್ಯಾಯಿ ಎಂಬ ಹೆಸರನ್ನು ಪಡೆದಿರುವ ಸಂಸ್ಕೃತ ವ್ಯಾಕರಣ ಸೂತ್ರಗಳ ವಿಸ್ತೃತವಾದ ಗ್ರಂಥವನ್ನು ರಚಿಸಿ ಮಹರ್ಷಿ ಪದವನ್ನು ಪಡೆದು ಅಮರನಾದ ಆಚಾರ್ಯ ಪಾಣಿನಿಯು ಶಕಪೂರ್ವ ೫೬೭ನೆಯ ವರ್ಷದಲ್ಲಿ ಗಂಧಾರಪ್ರಾಂತದ ಶಲಾತುರ ಎಂಬ ಊರಿನಲ್ಲಿ ಜನ್ಮ ತಳೆದಿದ್ದ. ಅವನು ಹುಟ್ಟುವ ಒಂದು ಶತಮಾನಕ್ಕಿಂತ ಮೊದಲೇ ಗಂಧಾರ ಪ್ರಾಂತವು ಪಾರಸೀಕರ ಆಳ್ವಿಕೆಗೆ ಒಳಪಟ್ಟಿದ್ದುದರಿಂದ ಗಂಧಾರದಲ್ಲಿ ಯವನರು ಮತ್ತು ಪಾರಸೀಕರು ಗಣನೀಯ ಸಂಖ್ಯೆಯಲ್ಲಿ ನೆಲಸಿದ್ದರು. ಹಾಗಾಗಿ ಆಚಾರ್ಯ ಪಾಣಿನಿಗೆ ಯವನರ ಮತ್ತು ಪಾರಸೀಕರ ಸರಿಯಾದ ಪರಿಚಯವಾಗಿತ್ತು.

ಆಚಾರ್ಯ ಪಾಣಿನಿಯು ರಚಿಸಿದ **"ಪರ್ಶ್ವಾದಿಯೌಧೇಯಾದಿಭ್ಯೋऽಣಞೌ ॥ ೫-೩-೧೧೭॥** ಎಂಬ ಸೂತ್ರದಿಂದ ಸಿದ್ಧವಾಗುವ "ಪಾರ್ಶವ:" ಎಂಬ ಶಬ್ದದಿಂದ ಆಚಾರ್ಯ ಪಾಣಿನಿಗೆ ಪಾರಸೀಕರ ಪರಿಚಯವಿದ್ದಿತೆಂತಲೂ **"ಇಂದ್ರ ವರುಣ ಭವಶರ್ವರುದ್ರಮೃಡಹಿಮಾರಣ್ಯಯವ-ಯವನಮಾತುಲಾಚಾರ್ಯಾಣಾ ಮಾನುಕ್ ॥೪-೧-೪೯॥** ಎಂಬ ಸೂತ್ರದಿಂದ ಸಿದ್ಧವಾಗುವ ಯವನಾನೀ ಶಬ್ದ ದಿಂದ, ಆಚಾರ್ಯ ಪಾಣಿನಿಗೆ ಯವನರ ಮಾತ್ರವಲ್ಲ ಅವರ ಲಿಪಿಯ ಪರಿಚಯ ಕೂಡ ಇದ್ದಿತೆಂದೂ ಸಿದ್ಧವಾಗುತ್ತದೆ. ಆ ಸೂತ್ರದ ಪ್ರಕಾರ ಸಿದ್ಧವಾಗುವ ಇಂದ್ರಾಣೀ, ವರುಣಾನೀ ಭವಾನೀ ಮೊದಲಾದ ಶಬ್ದಗಳು ಆಯಾ ದೇವನ ಪತ್ನಿ ಎಂಬರ್ಥಗಳನ್ನು ಸೂಚಿಸುತ್ತವಾದರೂ "ಯವನಾನೀ" ಎಂಬುದರ ಅರ್ಥವು

"ಯವನಸನ ಪತ್ನಿ" ಅಲ್ಲ "ಯವನರ ಲಿಪಿ" ಆಗಿರುತ್ತದೆಂದು ಆ ಸೂತ್ರಕ್ಕೆ ಆಚಾರ್ಯ ಕಾತ್ಯಾಯನನು **"ಯವನಾಲ್ಲಿಪ್ಯಾಮ್"** ಎಂಬ ವಾರ್ತಿಕವನ್ನೂ ಆಚಾರ್ಯ ಪತಂಜಲಿಯು **"ಯವನಾಲ್ಲಿಪ್ಯಾಮಿತಿವಕ್ತವ್ಯಂ ಯವನಾನೀ ಲಿಪಿ:"** ಎಂಬ ಭಾಷ್ಯವನ್ನೂ ಹೇಳಿದ್ದಾರೆ.

ಆದರೆ ಆಚಾರ್ಯ ಪಾಣಿನಿಯು ಪಾರಸಿಗಳ ಲಿಪಿಯ ಉಲ್ಲೇಖವನ್ನು ಮಾಡದೇ ಯವನರ ಲಿಪಿಯನ್ನು ಮಾತ್ರ ಉಲ್ಲೇಖಿಸಿರುವುದರಲ್ಲಿ ಏನೋ ವಿಶೇಷ ಉದ್ದೇಶವಿದೆ ಎಂಬುದರಲ್ಲಿ ಸಂದೇಹವಿಲ್ಲ. ಅಂದರೆ ಪಾರಸೀ ಲಿಪಿಯು ಬ್ರಾಹ್ಮೀ ಲಿಪಿಯಿಂದ ಸಂಪೂರ್ಣ ಭಿನ್ನವಾಗಿತ್ತು. ಆದರೆ ಯವನಾನೀ ವರ್ಣಮಾಲೆಯು ಸಂಪೂರ್ಣ ಬ್ರಾಹ್ಮಿಯೇ ಆಗಿದ್ದು ಅದರೊಳಗಿನ ಹಲವು ವರ್ಣಗಳ ಧ್ವನಿಗಳು ಮಾತ್ರ ಬ್ರಾಹ್ಮಿಯಿಂದ ಭಿನ್ನವಾಗಿದ್ದುವು. ಆದುದರಿಂದ ಬ್ರಾಹ್ಮೀ ಧ್ವನಿಗಳ ನೆರವಿನಿಂದ ಯವನಾನಿಯ ಲೇಖಗಳನ್ನು ಓದಲು ಸಾಧ್ಯವಿರಲಿಲ್ಲ. ಅಂಥ ಭೇದ ವನ್ನು ಸೂಚಿಸುವುದೇ ಆಚಾರ್ಯ ಪಾಣಿನಿಯ ಉದ್ದೇಶವಾಗಿದ್ದಿತೆನ್ನಬಹುದು.

ಪೂರ್ವ ಗಂಧಾರದ ರಾಜಧಾನಿಯಾಗಿದ್ದ ತಕ್ಷಶಿಲೆಯಲ್ಲಿ ಆಚಾರ್ಯ ಪಾಣಿನಿಗಿಂತ ಹಲವು ಶತಮಾನಗಳ ಮೊದಲಿನಿಂದಲೂ ವಿಶಾಲವಾದ ವಿಶ್ವವಿದ್ಯಾ ಲಯವಿತ್ತು. ಮತ್ತು ಆಸ್ಯಖಂಡದ ಸಕಲ ದೇಶಗಳ ಜನರು ವಿದ್ಯಾರ್ಥಿಗಳಾಗಿ ಬಂದು ಆ ವಿಶ್ವವಿದ್ಯಾಲಯದಲ್ಲಿ ನೆಲಸುತಿದ್ದರು. ಆ ವಿಶ್ವವಿದ್ಯಾಲಯದಲ್ಲಿ ಕಲಿತ ಯವನರು ತಾವು ಅಲ್ಲಿ ಕಲಿಯುವಾಗ ಉಪಯೋಗಿಸುತಿದ್ದ ಬ್ರಾಹ್ಮೀವರ್ಣಮಾಲೆಯನ್ನು ತಮ್ಮ ಭಾಷೆಯನ್ನು ಬರೆಯಲಿಕ್ಕೂ ಉಪಯೋಗಿಸತೊಡಗಿದುದರಿಂದಲೇ ಬ್ರಾಹ್ಮೀ ಮತ್ತು ಯವನಾನಿಗಳೊಳಗೆ ಆ ಬಗೆಯ ಸಾಮ್ಯವಿರಲು ಕಾರಣವಾಗಿತ್ತೆಂಬುದರಲ್ಲಿ ಸಂದೇಹ ವಿಲ್ಲ. ಅವರೆ ಮುಂದೆ ಯವನರು ಕ್ರೈಸ್ತರಾಗಿ ಮಾರ್ಪಟ್ಟ ಬಹುಕಾಲದ ತರು ವಾಯ ಹಾಗೂ ಯೂರೋಪೀಯರು ಆಸ್ಯಖಂಡದ ಮೇಲೆ ತಮ್ಮ ಪ್ರಭಾವ ಬೀರಲು ಪ್ರಯತ್ನಿಸತೊಡಗಿದ ತರುವಾಯ ಅವರು ಪ್ರಾಚೀನ ಯವನಾನೀ ವರ್ಣ ಮಾಲೆಯೊಳಗಿನ ಕೆಲವು ವರ್ಣಗಳನ್ನು ಕೊಂಚ ಪರಿವರ್ತಿಸಿದರಲ್ಲದೇ ವರ್ಣಗಳಲ್ಲಿ ಚಿಕ್ಕದು (small) ಮತ್ತು ದೊಡ್ಡದು (capital) ಎಂಬ ಭೇದಗಳನ್ನು ಮಾಡಿದರು. ಹಾಗಾಗಿ ಈಗ ಬ್ರಾಹ್ಮೀ ಮತ್ತು ಯವನಾನಿಗಳೊಳಗಿನ ಸಾಮ್ಯವು ಥಕ್ಕನೇ ಲಕ್ಷ್ಯಕ್ಕೆ ಬರುವುದಿಲ್ಲ. ಹಾಗಿದ್ದರೂ ಪ್ರಾಚೀನ ಕಾಲದ ಯವನಾನೀ ಲೇಖಗಳನ್ನು ಬ್ರಾಹ್ಮಿಯ ಲೇಖಗಳೊಂದಿಗೆ ಹೋಲಿಸಿ ನೋಡಿದ್ದಲ್ಲಿ ಯವ ನಾನಿಯು ಬ್ರಾಹ್ಮಿಯ ಪರಿರೂಪವೆಂಬ ಸತ್ಯವನ್ನು ಒಡನೆಯೇ ಕಂಡುಕೊಳ್ಳ ಬಹುವಾಗಿದೆ.

ಯವನಾನಿಯು ಬ್ರಾಹ್ಮಿಯೊಂದಿಗೆ ಅಷ್ಟು ಸ್ಪಷ್ಟವಾದ ಸಾಮ್ಯವನ್ನೂ, ಸಂಬಂಧವನ್ನೂ ಸೂಚಿಸುತಿದ್ದರೂ ಬ್ರಿಟಿಷ್ ವಿದ್ವಾಂಸರು ಬರೆದ ಗ್ರೀಸ್ ದೇಶದ

ಇತಿಹಾಸ–ಗ್ರಂಥಗಳಲ್ಲಿ ಯವನರು ಫಿನಿಶಿಯನ್ ಜನರ ಸೆಮಿಟಿಕ್ ವರ್ಗದ ವರ್ಣಮಾಲೆಯನ್ನು ರೂಪಾಂತರಿಸಿ ತಮ್ಮ ವರ್ಣಮಾಲೆಯನ್ನಾಗಿ ಮಾಡಿಕೊಂಡರೆಂದು ಬಹಳ ಚೆಲೋ ರೀತಿಯಲ್ಲಿ ವರ್ಣಿಸಿದ್ದಾರೆ,[1] ಮತ್ತು ಅದರೊಳಗಿನ ವರ್ಣಗಳಿಗೆ ಆಲ್ಫಾ, ಬೀಟಾ ಮೊದಲಾದ ಉಚ್ಚಾರಗಳನ್ನು ಕಲ್ಪಿಸಿದ್ದಾರೆ. ಆದರೆ ಇವೆಲ್ಲವೂ ಅರ್ವಾಚೀನ ಪಾಶ್ಚಾತ್ಯ ಸಾಮ್ರಾಜ್ಯವಾದಿಗಳ ಕೃತ್ರಿಮ ಅಥವಾ ಕೈಕಂಡಗಳೆಂದು ಪ್ರಾಚೀನ ಕಾಲದ ಎರಡು ಲೇಖಗಳು ಸಿದ್ಧಪಡಿಸುತ್ತವೆ. ಅವುಗಳಲ್ಲೊಂದು ಶಕಪೂರ್ವ ೫೧೦ನೆಯ ವರ್ಷದಲ್ಲಿ ಪೊಟೀಡಿಯಾ ಎಂಬಲ್ಲಿ ನಡೆದ ಕಾಳಗವಲ್ಲಿ ಮಡಿದ ಯವನ ವೀರರ ಸ್ಮಾರಕವಾಗಿ ಬರೆದ ಸಮಾಧಿ ಲೇಖವಾಗಿದೆ.[2] ಎರಡನೆಯದು ಚಕ್ರವರ್ತಿ ಅಶೋಕನು ಬರೆಯಿಸಿದ ಕಂದಹಾರದ ದ್ವಿಭಾಷಾ ಧರ್ಮಶಾಸನವಾಗಿದೆ.[3] ಆ ಎರಡು ಲೇಖನಗಳಲ್ಲಿಯೂ ಉಪಯೋಗಿಸಲ್ಪಟ್ಟಿರುವ ಕೆಲವು ಯವನಾನೀ ವರ್ಣಗಳ ಧ್ವನಿಗಳು ಬ್ರಾಹ್ಮೀ ಧ್ವನಿಗಳಿಂದ ಭಿನ್ನವಾಗಿದ್ದರೂ ಆ ವರ್ಣಗಳು ಮಾತ್ರ ಬ್ರಾಹ್ಮಿಯವುಗಳೇ ಆಗಿವೆ. ಅಂದರೆ ಆ ವರ್ಣಗಳು, ಸೆಮಿಟಿಕ್ ಜನರು ಬ್ರಾಹ್ಮಿಯಿಂದ ರೂಪಾಂತರಿಸಿಕೊಂಡ ವರ್ಣಗಳಂತಿರದೇ ಮೂಲ ಬ್ರಾಹ್ಮೀ ರೂಪದಲ್ಲಿಯೇ ಇವೆ. ಅದನ್ನು ಕೆಳಗೆ ಕೊಟ್ಟಿರುವ ಫಿನಿಶಿಯನ್ ಮತ್ತು

---

1 The Phoenician Alphabet was moulded to the needs of the Greek language. In this adaptation the Greeks showed their genius. The alphabet of the Phoenicians and their brotheren is an alphabet of consonants, the Greeks added the vowels. They took some of the consonants for which their own language had no corresponding sounds, and used these superfluous sings to represent the vowels. Several alphabets differing in certain details were diffused in various parts of the Hellanic world, but they agreed in the main points and we may suppose that the original idea was worked out in Ionia. In Ionia at all events, writing was introduced at any early period, and perhaps used by the poets of the ninth century. Perhaps the earliest example of a Greek writing that we possess is on a Attic jar of the seventh century, it says the jar shall be the prize of the dancer who dances more gaily than all others.


A History of Greece: page 78. by J. B. Burry.

2 Epitaph on Athenians who fell at Potidæa Ibid page 393.


3 Bilingual Inscriptions of Asoka, from Kandahar Afganistan.
Indian Archaeology to day. page.109. plate VI.

ಮೇಶಾನ ಶಾಸನದ ವರ್ಣಮಾಲೆಗಳೊಂದಿಗೆ ಯವನಾನೀ ವರ್ಣಮಾಲೆಯನ್ನು ಹೋಲಿಸಿ ಮುಂದಟ್ಟು ಮಾಡಿಕೊಳ್ಳಬಹುದು.

ಫಿನಿಶಿಯನ್ ವರ್ಣಮಾಲೆ



ಮೋಅಬದ ಅರಸ ಮೇಶಾನ ಶಾಸನದಲ್ಲಿದರುವ ವರ್ಣಗಳು





ಹಿಂದಿನ ವರ್ಣಮಾಲೆಗಳ ತುಲನೆಯ ಮೇಲಿಂದ– ಯವನರು ತಮ್ಮ ವರ್ಣಮಾಲೆಯನ್ನು ಫಿನಿಶಿಯನ್ ವರ್ಣಮಾಲೆಯಿಂದ ರೂಪಾಂತರಿಸಿದ್ದರೆಂಬುದು ಅರ್ವಾಚೀನ ಸಾಮ್ರಾಜ್ಯವಾದೀ ಬ್ರಿಟಿಷ್ ವಿದ್ವಾಂಸರ ಮಿಥ್ಯಾ ಕಲ್ಪನೆಯಾಗಿದ್ದಿತೇ ಹೊರತು ಸತ್ಯವಾಗಿರಲಿಲ್ಲವೆಂದು ಸಿದ್ಧವಾಗುತ್ತದೆ.

ಅಷ್ಟು ಮಾತ್ರವಲ್ಲದೇ ಜಾತಿಯಿಂದ, ಧರ್ಮದಿಂದ ಮತ್ತು ಆಚಾರ ವಿಚಾರಗಳಿಂದ ಭಾರತೀಯ ಆರ್ಯವರ್ಗಕ್ಕೆ ಸೇರಿದವರಾಗಿದ್ದು ಭಾರತೀಯ

ರೊಂದಿಗೆ ಸತ್ಯ ನಿಕಟ ಸಂಬಂಧವನ್ನು ಹೊಂದಿದ್ದ ಯವನರು ತಮ್ಮ ಭಾಷೆಯನ್ನು ಬರೆಯಲು ಸರ್ವವಿಧದಿಂದಲೂ ಯೋಗ್ಯವೂ ಚಿರಪರಿಚಿತವೂ ಆವಶ್ಯಕ ಸ್ವರಗಳಿಂದ ಮತ್ತು ವ್ಯಂಜನಗಳಿಂದ ಯುಕ್ತವೂ ಆಗಿದ್ದ ಬ್ರಾಹ್ಮೀ ವರ್ಣಮಾಲೆಯು ಅನಾಯಾಸವಾಗಿ ದೊರೆಯುತ್ತಿರಲಾಗಿ ಅದನ್ನು ಬಿಟ್ಟು ಬಹಳ ಅರ್ವಾಚೀನವಾದ ಹಾಗೂ “ಅ” (ಅಲೆಫ್)ದ ಹೊರತು ಬೇರೆ ಸ್ವರವರ್ಣಗಳಿಲ್ಲದ ಮತ್ತು ಆವಶ್ಯಕ ವ್ಯಂಜನಗಳಿಲ್ಲದ ಪರಕೀಯ ಸೆಮಿಟಿಕ್ ಜನರು ಉಪಯೋಗಿಸುತಿದ್ದ ಅಪೂರ್ಣ ವರ್ಣಮಾಲೆಯನ್ನು ತೆಗೆದುಕೊಂಡು ಅದನ್ನು ತಿದ್ದಿ ಹೊಸ ವರ್ಣಗಳನ್ನು ನಿರ್ಮಿಸುವ ಶ್ರಮವನ್ನುವಹಿಸಿದರೆಂದು ಅರ್ವಾಚೀನ ಪಾಶ್ಚಾತ್ಯ ವಿದ್ವಾಂಸರು ಮುಂದೆ ತಂದಿರುವ ಪ್ರಮಾಣ ರಹಿತ ಕಲ್ಪನೆಯನ್ನು ವಾಸ್ತವವೆಂದು ಸ್ವೀಕರಿಸಲು ಸಾಧ್ಯವಿಲ್ಲ.

ಪ್ರಾಚೀನ ಯವನರು ತಮ್ಮ ಭಾಷೆಯನ್ನು ಬರೆಯಲು ಬ್ರಾಹ್ಮೀ ವರ್ಣಗಳನ್ನು ಆರಿಸುವುದರಲ್ಲಿ ಅವರು ತೋರಿದ ನೈಪುಣ್ಯವು ಪ್ರಶಂಸನೀಯವಾಗಿದೆ. ಅವರು ಬ್ರಾಹ್ಮೀ ವರ್ಣಮಾಲೆಯನ್ನು ತಮ್ಮ ಭಾಷೆಯನ್ನು ಬರೆಯುವ ಸಲುವಾಗಿ ಉಪಯೋಗಿಸತೊಡಗಿದ ಕಾಲದಲ್ಲಿ ಬ್ರಾಹ್ಮೀ ವರ್ಣಮಾಲೆಯೊಳಗಿನ ಓ, ಜ ಮತ್ತು ಯ ಎಂಬ ವರ್ಣ ಚಿಹ್ನೆಗಳು ಹಿಂದೆ ಕೊಟ್ಟಿರುವ ಪಟ್ಟಿಯಲ್ಲಿರುವಂಥ ಎರಡೆರಡು ರೂಪಗಳನ್ನು ತಳೆದಿದ್ದುವೆಂದು ಮತ್ತು ಯವನರಿಗೆ ಆ ಎಲ್ಲ ರೂಪಗಳ ಪರಿಚಯವಿದ್ದಿತೆಂದು ಯವನಾನೀ ವರ್ಣಮಾಲೆಯಿಂದ ಸಿದ್ಧವಾಗುತ್ತದೆ.

ಹಾಗಾಗಿ ಯವನರು ಬ್ರಾಹ್ಮೀವರ್ಣಮಾಲೆಯ ಕೇವಲ ಹದಿನಾರು ವರ್ಣ ಚಿಹ್ನೆಗಳನ್ನು ಮತ್ತು ಎರಡು ಅಂಕೆಗಳನ್ನು ತೆಗೆದುಕೊಂಡು ಇಪ್ಪತ್ತನಾಲ್ಕು ವರ್ಣಗಳನ್ನಾಗಿ ಮಾಡಿ ಉಪಯೋಗಿಸಿದ್ದರು. ಅಂದರೆ ಅವರು ಒಂದೇ ವರ್ಣ ಚಿಹ್ನೆಯ ಎರಡು ರೂಪಗಳನ್ನು ಎರಡು ಇಲ್ಲವೇ ಮೂರು ವರ್ಣಗಳಿಗಾಗಿ ಉಪಯೋಗಿಸಿದ್ದರು. ಉದಾಹರಣೆಗೆ–ಅವರು ಬ್ರಾಹ್ಮಿಯ ಜ ವರ್ಣದ ಮೂಲ ಚಿಹ್ನೆಯನ್ನು ಎಪ್ಸಿಲೊನ್ (ಎ) ವರ್ಣವನ್ನಾಗಿಯೂ, ಅದರ ರೂಪಾಂತರಿತ ಚಿಹ್ನೆಯನ್ನು ಸಿಗ್ಮಾ (ಸ) ವರ್ಣವನ್ನಾಗಿಯೂ ಅದೇ ರೂಪಾಂತರಿತ ಚಿಹ್ನೆಯನ್ನು ಅಡ್ಡಮಾಡಿ ಮು (ಮ) ವರ್ಣವನ್ನಾಗಿಯೂ ಮಾಡಿದ್ದರು: ಬ್ರಾಹ್ಮಿಯ ಏ  ವರ್ಣದ ಚಿಹ್ನೆಯನ್ನು ಡೆಲ್ಟಾ (ಡ) ವರ್ಣವನ್ನಾಗಿಯೂ, ಅದರ ಕೆಳಗಿನ ಭುಜದ ಬಲ ಮೂಲೆಯನ್ನು ಮುರಿದು ಆ ಭುಜವನ್ನು ಒಳಕ್ಕೆ ತಳ್ಳಿ  ಆಲ್ಫಾ (ಅ) ವರ್ಣವನ್ನಾಗಿಯೂ ಮಾಡಿದ್ದರು. ಬ  ವರ್ಣದ ಬಲಗಡೆಯ ಭುಜವನ್ನು ಒಳಕ್ಕೆ ತಳ್ಳಿ  ಬೀಟಾ ಅಂದರೆ ಬ ವರ್ಣವನ್ನಾಗಿಯೇ ಉಪಯೋಗಿಸಿದ್ದರು. ಗ  ವರ್ಣವನ್ನು ತಿರುಗಿಸಿ ನಿಲ್ಲಿಸಿ ಅದರ ಒಂದು ಕಾಲನ್ನು ಕೊಂಚ ಉದ್ದ ಮಾಡಿ

ಗಮ್ಮಾ ಅಂದರೆ ಗ ವರ್ಣವನ್ನಾಗಿಯೇ ಉಪಯೋಗಿಸಿದ್ದರು. ಮತ್ತು ಮೂಲ ರೂಪವನ್ನು ಲಂಬ್ಡಾ = ಲ ವರ್ಣವನ್ನಾಗಿ ಮಾಡಿದ್ದರು. ಐ ವರ್ಣವನ್ನು ಅಡ್ಡ ಮಾಡಿ H = ಏಟಾ = ಏ ಮಾಡಿದ್ದರು. ರ ವರ್ಣವನ್ನು ಐಯೋಟ = ಐ ಮಾಡಿದ್ದರು. ಕ ವರ್ಣವನ್ನು ಕೋಸಾಗಿಟ್ಟು X ಖಿ = ಖ ಮಾಡಿದ್ದರು. ಋ ವರ್ಣವನ್ನು Ψ ಪ್ಸ ಮಾಡಿದ್ದರು, ನ ವರ್ಣವನ್ನು ಬುಡಮೇಲು ಮಾಡಿ T ಟಾವ್ = ಟ ಮಾಡಿದ್ದರು. ಠ ವರ್ಣವನ್ನು O ಒಮಿಕ್ರೊನ್ = ಒ ಮಾಡಿದ್ದರು. ಅವಗ್ರಹದ ಚಿಹ್ನೆಯಾದ ಕುಂಭಾಕೃತಿಯನ್ನು ಬುಡಮೇಲು ಮಾಡಿ Ω ಓಮೇಗ = ಓ ಮಾಡಿದ್ದರು. ಚ ವರ್ಣವನ್ನು ಬುಡಮೇಲು ಮಾಡಿ ರ್ಹೋ = ರ ಮಾಡಿದ್ದರು. ಅ ವರ್ಣವನ್ನು ತಿರುಗಿಸಿಟ್ಟು K ಕ ಮಾಡಿದ್ದರು ಮತ್ತು ಥ ವರ್ಣವನ್ನು ⊙ ಥೇಟಾ ಅಂದರೆ ಥ ವರ್ಣವನ್ನಾಗಿಯೇ ಉಪಯೋಗಿಸಿದ್ದರು ಹಾಗೆಯೇ ಪ ⅃ ಮತ್ತು ಯ ⅄ ವರ್ಣಗಳನ್ನು ಬುಡಮೇಲು ಮಾಡಿ Π Υ ಮೂಲ ಧ್ವನಿಗಳಲ್ಲಿಯೇ ಉಪಯೋಗಿಸಿದ್ದರು. ಮೂರರ ಅಂಕೆಯನ್ನು ಅಂದರೆ ಮೂರು ಅಡ್ಡಗೆರೆಗಳನ್ನು ಕ್ಸಿ = ಕ್ಸ ಮಾಡಿದ್ದರು ಮತ್ತು ಎಂಭತ್ತರ ಅಂಕೆಯನ್ನು Φ ಪ್ಸ ಮಾಡಿದ್ದರು. ಹಾಗೆ ಅವರು ಹಲವು ವರ್ಣಚಿಹ್ನೆಗಳ ಧ್ವನಿಗಳನ್ನು ಪರಿವರ್ತಿಸಿದ್ದರಾದರೂ, ಏ ಮತ್ತು ಬ ದ ಹೊರತು ಬೇರೆ ಯಾವ ಚಿಹ್ನೆಯ ರೂಪವನ್ನೂ ಪರಿವರ್ತಿಸಿರಲಿಲ್ಲ. ಹಾಗೆ ಅವರು ಬ್ರಾಹ್ಮಿಯ ಹದಿನೆಂಟು ಚಿಹ್ನೆಗಳನ್ನು ಬೇರೆ ಬೇರೆ ರೀತಿಯಿಂದ ಇಪ್ಪತ್ತನಾಲ್ಕು ವರ್ಣಗಳನ್ನಾಗಿ ಉಪಯೋಗಿಸಿದ್ದರು. ಅವುಗಳಲ್ಲಿ ಇಪ್ಪತ್ತೆರಡು ಚಿಹ್ನೆಗಳು ಮೂಲ ರೂಪದಲ್ಲಿಯೇ ಇರುವುದರಿಂದ ಯವನರು ಬ್ರಾಹ್ಮೀವರ್ಣಮಾಲೆಯ ಚಿಹ್ನೆಗಳನ್ನೇ ತಮ್ಮ ವರ್ಣಮಾಲೆಗಾಗಿ ಸ್ವೀಕರಿಸಿದ್ದರೆಂದು ಸಿದ್ಧಪಡಿಸಲು ಬೇರೆ ಪ್ರಮಾಣಗಳ ಆವಶ್ಯಕತೆಯಿಲ್ಲ ಮತ್ತು ಅದನ್ನು ಅಲ್ಲಗಳೆಯಲಿಕ್ಕೂ ಸಾಧ್ಯವಿಲ್ಲ,

೧೦ ಸಿಂಧೂ ಸಂಸ್ಕೃತಿಯ ಇತಿಹಾಸ

ಬ್ರಿಟಿಷರು ಶಕವರ್ಷ ೧೮೪೨ರ ತರುವಾಯ ಪಂಜಾಬದ ರಾವೀನದಿಯ ತೀರದಲ್ಲಿನ "ಹಳಪ್ಪಾ"[1] (Harappa) ಮತ್ತು ಸಿಂಧಪ್ರಾಂತದ ಸಿಂಧೂನದದ ತೀರದಲ್ಲಿನ "ಮೊಹೆಂಜೋದಳೋ" (Mohenjo-daro) ಎಂಬಲ್ಲಿನ ಹಾಳು ದಿನ್ನೆಗಳ ಸಮೂಹಗಳನ್ನು ಅಗೆಯಿಸಿದಾಗ ಬೆಳಕಿಗೆ ಬಂದಿದ್ದ ಪ್ರಾಚೀನ ಪಟ್ಟಣಗಳ ಭಗ್ನಾವಶೇಷಗಳು ಮತ್ತು ನಾನಾ ಬಗೆಯ ಬಿಲ್ಲೆಗಳು ಮತ್ತು ವಸ್ತುಗಳು ಸುಮೇರವ ಅಗೆತಗಳಲ್ಲಿ ಕಂಡು ಬಂದಿದ್ದ ವಸ್ತುಗಳನ್ನು ಹೋಲುತ್ತವೆಂಬ ಕಾರಣ ದಿಂದ ಅವುಗಳಿಂದ ವ್ಯಕ್ತವಾಗುವ ಸಂಸ್ಕೃತಿಯನ್ನು ಮೊದಲು "ಭಾರತ-ಸುಮೇರೀ ಸಂಸ್ಕೃತಿ" (Indo-Sumerian Civilization) ಎಂದು ಹೆಸರಿಸಿದ್ದರು. ತರುವಾಯ ಅವರು ಕೆಲವು ಕುಂಟು ನೆಪಗಳನ್ನು ಮುಂದೆ ತಂದು ಆ ಹೆಸರನ್ನು ಪರಿವರ್ತಿಸಿ "ಸಿಂಧೂ ಕಣಿವೆಯ ಸಂಸ್ಕೃತಿ" ಇಲ್ಲವೇ "ಸಿಂಧೂ ಸಂಸ್ಕೃತಿ" ಎಂದು ಕರೆಯತೊಡಗಿದರು.

ಹಳಪ್ಪಾ ಎಂಬ ಹಳ್ಳಿಯು ಪಶ್ಚಿಮ ಪಂಜಾಬದ ಮಾಂಟ್ಗಮರಿ ಜಿಲ್ಲೆಯಲ್ಲಿ ರಾವೀನದಿಯ ಪೂರ್ವತೀರದಿಂದ ಒಂದೂವರೆ ಗಾವುದ ದೂರದಲ್ಲಿದೆ. ಮೊಹೆಂಜೋದಳೋ ಎಂಬುದು ಸಿಂಧೀ ಭಾಷೆಯ ಶಬ್ದವಾಗಿದ್ದು ಅದರ ಅರ್ಥವು "ಸತ್ತವರ ದಿನ್ನೆ" ಎಂದಿದೆ. ಅದು ಒಂದೇ ದಿನ್ನೆಯಾಗಿರದೇ ಹಲವು ಚಿಕ್ಕ-ದೊಡ್ಡ ದಿನ್ನೆಗಳ ಸಮೂಹವಾಗಿದೆ. ಮೊಹೆಂಜೋದಳೋ ಸನ್ನಿವೇಶವು ಹಳಪ್ಪಾದ ದಕ್ಷಿಣಕ್ಕೆ ಇನ್ನೂರು ಗಾವುದಗಳ ದೂರದಲ್ಲಿ ಸಿಂಧ ಪ್ರಾಂತದ ಲಾರ್ಖಾನಾ ಜಿಲ್ಲೆಯಿಂದ ಸಾಗುವ ಕರಾಚಿ-ದಾದೂ ಉಗಿಬಂಡಿಯ ಹಾದಿಯಲ್ಲಿರುವ ಡೋಕ್ರಿ ನಿಲ್ದಾಣದಿಂದ ಮೂರುವರೆ ಗಾವುದದ ದೂರದಲ್ಲಿ ಸಿಂಧೂನದದ ಪಶ್ಚಿಮ ತೀರದ ಸಮಿಪದಲ್ಲಿದೆ, ಹಳಪ್ಪಾ ಮತ್ತು ಮೊಹೇಂಜೊದಳೋ ಎಂಬ ಎರಡು ಸನ್ನಿವೇಶಗಳೂ ಈಗ ಪಾಕಿಸ್ಥಾನದಲ್ಲಿ ಸೇರಿವೆ.

ಹಳಪ್ಪಾದ ಅಗೆತಗಳು ಶ್ರೀಮಾನ್ ದಯಾರಾಮ್ ಸಾಹನಿ ಅವರ ನಾಯಕತ್ವದಲ್ಲಿ ಪ್ರಾರಂಭವಾಗಿದ್ದುವು, ಮತ್ತು ಮೊಹೆಂಜೊದಳೋದ ಅಗೆತಗಳು ಆ ಸನ್ನಿವೇಶವನ್ನು ಕಂಡು ಹಿಡಿದಿದ್ದ-ಶ್ರೀಮಾನ್ ರಾಖಾಲ್‌ದಾಸ ಬ್ಯಾನರ್ಜೀ (R. D, Banerjee) ಅವರ ನಾಯಕತ್ವದಲ್ಲಿ ಪ್ರಾರಂಭವಾಗಿದ್ದುವು. ಆ ಕಾಲದಲ್ಲಿ ಸರ್. ಜಾನ್ ಮಾರ್ಶಲ್ ಎಂಬವರು ಭಾರತವರ್ಷದ ಪುರಾತತ್ವ ವಿಭಾಗದ ವರಿಷ್ಠ ಸಂಚಾಲಕರಾಗಿದ್ದರು, ಆದುದರಿಂದ ಅಗೆತಗಳ ಅಧಿಕಾರಿಗಳು

---

1 ಅಲ್ಲಿ "ರ" ಕಾರವು "ಳ" ಕಾರದಂತೆ ಉಚ್ಚರಿಸಲ್ಪಡುತ್ತದೆ.

ಮತ್ತು ನಾಯಕರು ಅವರ ನಿರ್ದೇಶಗಳಿಗನುಸಾರವಾಗಿ ಕಾರ್ಯ ನಿರ್ವಹಿಸಬೇಕಾಗಿದ್ದಿತು, ಭಾರತೀಯರು ಆಗೆತಗಳ ನಾಯಕರಾಗಿರುವುದನ್ನು ಪ್ರೊ. ಲೆನಾರ್ಡ್ ವೂಲೀ ಅವರು ತೀವ್ರವಾಗಿ ವಿರೋಧಿಸಿದುದರಿಂದ ಸರ್ ಜಾನ್ ಮಾರ್ಶಲರು ಪ್ರತಿಯೊಂದು ಸನ್ನಿವೇಶದ ಭಾರತೀಯ ನಾಯಕರನ್ನು ಆಗಾಗ್ಗೆ ವರ್ಗಾಯಿಸ ತೊಡಗಿದ್ದರು.


ಶ್ರೀಮಾನ್ ದಯಾರಾಮ ಸಾಹನಿಯವರ ನಾಯಕತ್ವದಲ್ಲಿ ಪ್ರಾರಂಭವಾಗಿದ್ದ ಹಳಪ್ಪಾದ ಆಗೆತಗಳು ಶ್ರೀಮಾನ್ ಮಾಧೋಸರೂಪವತ್ಸರ ನಾಯಕತ್ವದಲ್ಲಿ ಮುಂದುವರಿದು ಶಕವರ್ಷ ೧೮೫೫ ರಲ್ಲಿ ಧನಾಭಾವದಿಂದಾಗಿ ನಿಂತು ಹೋದುವು. ಅದರ ತರುವಾಯ ಶ್ರೀಮಾನ್ ವತ್ಸ ಅವರು ಹಳಪ್ಪಾದ ದಿನ್ನೆಗಳ ಆಗೆತಗಳ ಸಂಬಂಧದಲ್ಲಿ ಬರೆದ "Excavations at Harappa" ಎಂಬ ಹೆಸರಿನ ಪುಸ್ತಕವು ಎರಡು ಭಾಗಗಳಲ್ಲಿ ಮುದ್ರಿಸಿ ಪ್ರಕಟವಾಯಿತು, ಅದರ ಮೊದಲನೆಯ ಭಾಗದಲ್ಲಿ ಆಗೆತಗಳ ವಿಸ್ತೃತವಾದ ವಿವರಗಳೂ ಎರಡನೆಯ ಭಾಗದಲ್ಲಿ ಅಲ್ಲಿನ ಸನ್ನಿವೇಶಗಳ ಮತ್ತು ಕಟ್ಟಡಗಳ ಛಾಯಾಚಿತ್ರಗಳು ಮತ್ತು ನಕಾಶೆಗಳೂ ಅಲ್ಲಿ ದೊರೆತ ಸಕಲ ವಸ್ತುಗಳ ಛಾಯಾಚಿತ್ರಗಳೂ ಇವೆ. ಮುಖ್ಯವಾಗಿ ಹಾಲುಗಲ್ಲಿನ ಬಿಲ್ಲೆಗಳ ಚಿತ್ರಗಳು ಅಧಿಕ ಸಂಖ್ಯೆಯಲ್ಲಿವೆ.

ಮೊಹೆಂಜೋದಳೋದ ಆಗೆತಗಳು ಶಕವರ್ಷ ೧೮೪೪ ರ ಮಧ್ಯಕಾಲದಿಂದ ೧೮೪೫ ರ ಮಧ್ಯಕಾಲದ ತನಕ ಶ್ರೀಮಾನ್ ರಾಖಾಲ್ ದಾಸ ಬ್ಯಾನರ್ಜೀ ಅವರ ನಾಯಕತ್ವದಲ್ಲಿ ಸಾಗಿತ್ತು. ಅವರ ತರುವಾಯ ಸರ್ ಜಾನ್ ಮಾರ್ಶಲರು ಅಲ್ಲಿನ ಎಲ್ಲ ಹೊಣೆಯನ್ನು ವಹಿಸಿಕೊಂಡರು. ಮತ್ತು ಬೇರೆ ಬೇರೆ ನಾಯಕರ ಮೇಲ್ವಿಚಾರಣೆಯಲ್ಲಿ ಶಕವರ್ಷ ೧೮೪೭ ರ ಮಧ್ಯಕಾಲದ ತನಕ ಅಲ್ಲಿನ ಆಗೆತಗಳ ಕೆಲಸಗಳನ್ನು ಸಾಗಿಸಿದ ತರುವಾಯ ಆ ಆಗೆತಗಳ ಸಂಬಂಧದಲ್ಲಿ "Mohenjo-daro and the Indus Valley Civilization" ಎಂಬ ಪುಸ್ತಕವನ್ನು ಬರೆಯ ತೊಡಗಿದರು. ಮತ್ತು ಮುಂದಿನ ಆಗೆತಗಳನ್ನು ಸಾಗಿಸಲು ಡಾಕ್ಟರ್ ಈ. ಜೆ. ಎಚ್. ಮೆಕ್ಕೇ ಎಂಬವರನ್ನು ನೇಮಿಸಿದರು. ಮೆಕ್ಕೇ ಅವರು ಶಕವರ್ಷ ೧೮೫೩ ರ ತನಕ ಆ ಆಗೆತಗಳ ಕೆಲಸವನ್ನು ಸಾಗಿಸಿ ಅವುಗಳ ಕುರಿತು "Further Excavations at Mohenjo-daro" ಎಂಬ ಪುಸ್ತಕವನ್ನು ಬರೆಯ ತೊಡಗಿದರು. ಅವರಿಬ್ಬರೂ. ತಮ್ಮ ಪುಸ್ತಕಗಳು ಮುದ್ರಿಸಿ ಪ್ರಕಟಿಸಲ್ಪಡುವ ಮೊದಲು ಸಾರ್ವಜನಿಕರ ತಿಳುವಳಿಕೆಗಾಗಿ ತಾವು ನಡೆಸಿದ ಆಗೆತಗಳಿಗೆ ಸಂಬಂಧಿಸಿದ ಎಲ್ಲ ವಿಷಯಗಳ ಸಂಕ್ಷಿಪ್ತ ವರ್ಣನೆಗಳಿರುವ ಒಂದೊಂದು ಲಿಖಿತ ಹೇಳಿಕೆಯನ್ನು ವರ್ತಮಾನ ಪತ್ರಿಕೆಗಳಲ್ಲಿ ಪ್ರಕಟಿಸಲು ಕೊಟ್ಟಿದ್ದರು. ಮುಂದೆ ಸರ್. ಜಾನ್ ಮಾರ್ಶಲರ ಪುಸ್ತಕವು ಇಂಗ್ಲಾಂಡಿನ ಒಂದು ಪುಸ್ತಕ ಸಂಸ್ಥೆಯ ಮೂಲಕ ಮೂರು

ಭಾಗಗಳಲ್ಲಿ ಪ್ರಕಟವಾಯಿತು. ಮತ್ತು ಮೆಕ್ಕೇಯವರ ಪುಸ್ತಕವು ಭಾರತ ವರ್ಷದ ಬ್ರಿಟಿಷ್ ಸರಕಾರದವರಿಂದ ಎರಡು ಭಾಗಗಳಲ್ಲಿ ಪ್ರಕಟಿಸಲ್ಪಟ್ಟಿತು. ಆದರೆ ಆ ಎರಡು ಸನ್ನಿವೇಶಗಳಲ್ಲಿ ಇನ್ನೂ ಹಲವು ದಿನ್ನೆಗಳು ಅಗೆಯಲ್ಪಡದೇ ಹಾಗೆಯೇ ಉಳಿದು ಕೊಂಡಿವೆ.

ಸಿಂಧೂ ಕಣಿವೆಯ ಅಗೆತಗಳಲ್ಲಿ ಬೆಳಕಿಗೆ ಬಂದಿರುವ ಪ್ರಾಚೀನ ಭಗ್ನಾವಶೇಷಗಳು ಮತ್ತು ವಸ್ತುಗಳು ಹಾಗೂ ಅವುಗಳಿಂದ ವ್ಯಕ್ತವಾಗುವ ಸಂಸ್ಕೃತಿಯು ಬ್ರಿಟಿಷ್ ವಿದ್ವಾಂಸರು ಸಾಧಾರಣ ನೂರೈವತ್ತು ವರ್ಷಗಳಿಂದ ಭಾರತ ವರ್ಷದ ಪ್ರಾಚೀನ ಸಂಸ್ಕೃತಿಯ ಹಾಗೂ ಇತಿಹಾಸದ ಸಂಬಂಧದಲ್ಲಿ ತಮ್ಮ ಪ್ರಚಾರದ ಬಲದಿಂದ ರೂಢಿಸಿಕೊಂಡು ಬಂದಿದ್ದ ಸಕಲ ಕಲ್ಪನೆಗಳನ್ನು ಬುಡ ಮೇಲು ಮಾಡಿವೆ. ಮತ್ತು ಜಾಗತಿಕ ಇತಿಹಾಸದ ಅಡಿಗಟ್ಟನ್ನು ಅಲುಗಾಡಿಸಿ ಬಿಟ್ಟಿವೆ. ಬ್ರಿಟಿಷ್ ರಾಜತಂತ್ರಜ್ಞರಾದ ಸೇನಾಧಿಕಾರಿಗಳಿಗೆ ಮತ್ತು ವಿದ್ವಾಂಸರಿಗೆ ಅಲ್ಲಿನ ಅಗೆತಗಳಲ್ಲಿ ಯಾವ ಕಾಲದ ಮತ್ತು ಯಾವ ಬಗೆಯ ಸಂಸ್ಕೃತಿಯು ಬೆಳಕಿಗೆ ಬರಲಿರುವುದೆಂಬುದರ ಸಾಮಾನ್ಯ ಅನುಮಾನವು ಮೊದಲಿನಿಂದಲೇ ಇದ್ದಿತಾದರೂ ಅವರು ಅಲ್ಲಿ ಅಷ್ಟು ಉನ್ನತ ಮಟ್ಟದ ಸಂಸ್ಕೃತಿಯನ್ನು ಪ್ರತೀಕ್ಷಿಸಿರಲಿಲ್ಲ. ಅಂದರೆ ಅಲ್ಲಿ ಬೆಳಕಿಗೆ ಬಂದಿರುವ ಸಂಸ್ಕೃತಿಯು ಕನಿಷ್ಟ ಪಕ್ಷದಲ್ಲಿ ಶಕಪೂರ್ವ ೩೫೦೦ ವರ್ಷಗಳಷ್ಟು ಪ್ರಾಚೀನವಾಗಿದ್ದು ಅತ್ಯುನ್ನತ ಮಟ್ಟದ್ದಾಗಿದೆ. ಅಲ್ಲಿನ ಪಟ್ಟಣಗಳ ಮತ್ತು ಕಟ್ಟಡಗಳ ನಿರ್ಮಾಣ ಕೌಶಲವು ಆಧುನಿಕ ವಾಸ್ತು ವಿಜ್ಞಾನಿಗಳನ್ನು ಕೂಡ ಬೆರಗುಗೊಳಿಸುವಂತಿದೆ. ಪಟ್ಟಣಗಳ ಹಾಗೂ ಕಟ್ಟಡಗಳ ನಿರ್ಮಾಣದಲ್ಲಿ ಶೌಚದ ಮತ್ತು ಆರೋಗ್ಯದ ಕಡೆಗೆ ಹೆಚ್ಚಿನ ಲಕ್ಷಕೊಡಲಾಗಿದೆ. ಪಟ್ಟಣದೊಳಗಿನ ಮಾರ್ಗಗಳು ಸಾಕಷ್ಟು ಅಗಲವಿದ್ದು ಇಬ್ಬದಿಗಳಿಂದಲೂ ಭೂಗತ ಚರಂಡಿಗಳಿಂದ ಕೂಡಿವೆ. ಎಲ್ಲ ಮನೆಗಳು ಇಟ್ಟಿಗೆಗಳಿಂದ ಕಟ್ಟಲ್ಪಟ್ಟಿದ್ದು ಸಕಲ ಸೌಕರ್ಯಗಳಿಂದ ಕೂಡಿವೆ. ಅಲ್ಲಿ ವ್ಯಾಪಾರದ ಅಂಗಡಿಗಳಿವೆ. ಭಂಡಸಾಲೆಗಳಿವೆ. ಧಾನ್ಯ ಸಂಗ್ರಹದ ಉಗ್ರಾಣಗಳಿವೆ. ಉದ್ಯಮ ಶಾಲೆಗಳಿವೆ. ದೊಡ್ಡ ದೊಡ್ಡ ತಟಾಕಗಳೊಂದಿಗೆ ಸಾರ್ವಜನಿಕ ಸ್ನಾನಾಗಾರಗಳಿವೆ. ಇಟ್ಟಿಗೆಗಳಿಂದ ಕಟ್ಟಿದ ಬಾವಿಗಳಿವೆ. ಚಿನ್ನದಿಂದ ಮತ್ತು ಬೆಳ್ಳಿಯಿಂದ ನಿರ್ಮಿಸಿದ ನಾನಾ ಬಗೆಯ ಹಾಗೂ ಚೆಲುವಾದ ಒಡವೆಗಳಿವೆ. ತಾಮ್ರದ ಮತ್ತು ಕಂಚಿನ ಪಾತ್ರೆಗಳು ಹಾಗೂ ಉಪಕರಣಗಳಿವೆ. ಪಿಂಗಾಣಿಯ ಭರಣಿಗಳು, ಹೂಜಿಗಳು, ಕುಂಭಗಳು, ಪರಾತಗಳು-ಮತ್ತು ಕುಡಿಕೆಗಳಿವೆ. ಹಾಗೂ ಅವುಗಳ ಮೇಲೆ ಬಗೆ ಬಗೆಯ ಚಿತ್ರಣವಿದೆ. ಹಾಗೆಯೇ ಗಟ್ಟಿ ಮಣ್ಣಿನ ಕುಂಭಗಳು, ಗಡಿಗೆಗಳು, ಕುಡಿಕೆಗಳು, ಗಾಜಿನ ಮಣಿಗಳು, ನಾನಾ ಬಗೆಯ ಆಟಿಗೆಗಳು ಗಂಡು_ಹೆಣ್ಣುಗಳ ಬೊಂಬೆಗಳು, ಆಭರಣಗಳಿಂದ ಸಿಂಗರಿಸಿದ ವಿಗ್ರಹಗಳು, ಎತ್ತಿನ ಗಾಡಿ, ಬಾಚಣಿಗೆ, ಸೂಜಿ, ದರ್ಪಣ ಮೊದಲಾದ ನಿತ್ಯೋಪಯೋಗೀ ವಸ್ತುಗಳು ದೊರೆತಿವೆ. ಅಲ್ಲಿ ದೊರೆತ

ವಸ್ತುಗಳಲ್ಲಿ ಅತ್ಯಂತ ಮುಖ್ಯವಾದುವುಗಳೆಂದರೆ ಸಾಂಕೇತಿಕ ಚಿತ್ರಗಳು ಮತ್ತು ಬರಹದ ಸಾಲುಗಳಿರುವ ಹಾಗೂ ಹಾಲುಗಲ್ಲಿನಲ್ಲಿ ನಿರ್ಮಿಸಿದ ಸಾಧಾರಣ ಎರಡು ಸಾವಿರದಷ್ಟು ಚಿಕ್ಕ ದೊಡ್ಡ ಬಿಲ್ಲೆಗಳಾಗಿವೆ. ಸರ್ ಜಾನ್ ಮಾರ್ಶಲರು ಆ ಬಿಲ್ಲೆಗಳಲ್ಲಿ ಕೆಲವು ವ್ಯಾಪಾರೀ ಸರಕಿನ ಮೂಟೆಗಳ ಮೇಲೆ ಗುರುತಿನ ಚಿಹ್ನೆಗಳನ್ನು ಮೂಡಿಸುವ ಮುದ್ರೆಗಳಾಗಿರಬಹುದೆಂದೂ ಕೆಲವು ತಾಯಿತಗಳಾಗಿರಬಹುದೆಂದೂ ಮೃಗಪ್ರಾಣಿಗಳ ಮತ್ತು ಮನುಷ್ಯನ ಚಿತ್ರಗಳಿರುವ ಬಿಲ್ಲೆಗಳು ಧಾರ್ಮಿಕ ವಿಷಯಗಳಿಗೆ ಸಂಬಂಧಪಟ್ಟವುಗಳಾಗಿರಬಹುದೆಂದೂ ಊಹಿಸಿದ್ದಾರೆ.

ಕೆಲವು ಬಿಲ್ಲೆಗಳ ಮೇಲೆ  ಈ ಆಕೃತಿಗಳು ಒಂಟಿಯಾಗಿ ಬಂದಿವೆ. ಮತ್ತು ಅಧಿಕಾಂಶ ಬಿಲ್ಲೆಗಳ ಮೇಲೆ ನಾನಾ ಭಾವ ಭಂಗಿಗಳನ್ನು ಸೂಚಿಸುವ ನಾನಾ ಶರೀರಾಕೃತಿಗಳ ಹೋರಿಗಳ ಚಿತ್ರಗಳಿವೆ. ಕೆಲವು ಬಿಲ್ಲೆಗಳ ಮೇಲೆ ಉದ್ದ ಕೊಂಬಿನ ಹೋತದ, ಕೋಣದ, ಹುಲಿಯ, ಆನೆಯ, ಖಡ್ಗಮೃಗದ, ಜಿಂಕೆಯ ಮತ್ತು ಮೊಸಳೆಯ ಒಂಟಿ ಚಿತ್ರಗಳಿವೆ. ಕೆಲವು ಬಿಲ್ಲೆಗಳ ಮೇಲೆ ಒಂದೇ ಶರೀರಕ್ಕೆ ಮೂರು ಬೇರೆ ಬೇರೆ ಪ್ರಾಣಿಗಳ ತಲೆಗಳಿರುವ ಚಿತ್ರಗಳಿವೆ. ಒಂದೆರಡು ಬಿಲ್ಲೆಗಳ ಮೇಲೆ ಅಶ್ವತ್ಥ ವೃಕ್ಷದ ಮತ್ತು ಶಮೀವೃಕ್ಷದ ಚಿತ್ರಗಳಿವೆ, ಕೆಲವು ಬಿಲ್ಲೆಗಳ ಮೇಲೆ ತಲೆಯಲ್ಲಿ ಹೋರಿಯ ಕೊಂಬುಗಳೂ, ಕೊಂಬುಗಳ ನಡುವೆ ಜಟಾಜೂಟವೂ ಇರುವ ಮನುಷ್ಯನ ಚಿತ್ರವಿದೆ. ಒಂದು ಮುದ್ರೆಯ ಮೇಲೆ ಅಂಥ ಮನುಷ್ಯನಿಗೆ ಮೂರು ಮೋರೆಗಳಿವೆ. ಮತ್ತು ಮೂರು ಮೋರೆಗಳಿರುವ ಆ ಮನುಷ್ಯನು ಸಕಲ ಅಲಂಕಾರಗಳಿಂದ ವಿಭೂಷಿತನಾಗಿ, ಪಾದಕ್ಕೆ ಪಾದವನ್ನು ಹತ್ತಿಸಿ, ಮೊಳಕಾಲುಗಳಲ್ಲಿ ಕೈಗಳನ್ನಿಟ್ಟು ಮಂಚದ ಮೇಲೆ ಕೂತಿದ್ದಾನೆ. ಮಂಚದ ಅಡಿಯಲ್ಲಿ ಎರಡು ಜಿಂಕೆಗಳು, ಮತ್ತು ಅವನ ಎಡ ಬಲಗಳಲ್ಲಿ ಕೋಣ, ಖಡ್ಗಮೃಗ, ಆನೆ, ಮನುಷ್ಯ ಮತ್ತು ಹುಲಿಯ ಚಿತ್ರಗಳಿವೆ. ಅದೇ ರೀತಿಯಲ್ಲಿ ತಲೆಯ ಮೇಲೆ ಕೊಂಬುಗಳಿರುವ ಒಂದೇ ಮೋರೆಯ ಮನುಷ್ಯನು ಮಂಚದ ಮೇಲೆ ಕೂತಿದ್ದು ಕೆಳಗೆ ನೆಲವಲ್ಲಿ ಇಬ್ಬರು ಮನುಷ್ಯರು ಅವನ ಮುಂದೆ ಮಂಡಿ ಬಗ್ಗಿಸಿ ನಮಸ್ಕರಿಸುವ ಹಾಗೂ ಅವರ ಬೆನ್ನ ಹಿಂದೆ ಹೆಡೆ ಎತ್ತಿದ ನಾಗಗಳ ಚಿತ್ರಗಳಿರುವ ಬಿಲ್ಲೆಗಳೂ ಇವೆ. ಹಾಗೆ ತಲೆಯಲ್ಲಿ ಕೊಂಬುಗಳಿರುವ ಮನುಷ್ಯನ ನಾನಾ ಬಗೆಯ ಚಿತ್ರಗಳಿರುವ ಹಲವು ಬಿಲ್ಲೆಗಳು ದೊರೆಕಿವೆ. ಒಂದು ಬಿಲ್ಲೆಯ ಮೇಲೆ ತಲೆಯಲ್ಲಿ ಕೊಂಬುಗಳಿರುವ ಮನುಷ್ಯನು ಮಂಡಲಾಕೃತಿಯ ಮಧ್ಯವಲ್ಲಿ ಅಶ್ವತ್ಥ ವೃಕ್ಷದ ಎರಡು ಕೊಂಬೆಗಳ ನಡುವೆ ನಿಂತಿದ್ದಾನೆ. ಅವನ ಎಡಗಡೆಯಲ್ಲಿ ಕೊಂಚ ದೂರದಲ್ಲಿ  ಚೌಕದ ಆಕೃತಿ ಇದೆ, ಅವನ ಬಲಗಡೆಯಲ್ಲಿ ತಲೆಯಲ್ಲಿ ಕೊಂಬುಗಳಿರುವ ಬೇರೊಬ್ಬ ಮನುಷ್ಯನು ಮಂಡಿಯನ್ನು ಬಗ್ಗಿಸಿ ಕೂತು ತನ್ನ ಕೈಗಳನ್ನು ಮುಂದಕ್ಕೆ ಚಾಚಿ ಮಂಡಲದ ಮಧ್ಯದಲ್ಲಿ ನಿಂತಿರುವ ಮನುಷ್ಯನನ್ನು

ವಥವಾ ದೇವನನ್ನು ಪ್ರಾರ್ಥಿಸುತಿದ್ದಾನೆ. ಅವನ ಹಿಂದೆ ಚೆನ್ನಾಗಿ ಕೊಬ್ಬಿದ ಒಂದು ಹೋತವು ನಿಂತಿದೆ. ಮಂಡಲದಲ್ಲಿ ನಿಂತಿರುವ ದೇವನ ಮುಂದೆ ಒಂದು ಆಸನವಿದ್ದು ಅದರ ಮೇಲೆ ಒಂದು ಪಾತ್ರೆ ಇರುವಂತಿದೆ. ಮತ್ತು ಆ ದೇವನ ಎದುರುಗಡೆಯಲ್ಲಿ ಏಳ್ವರು ಮನುಷ್ಯರು ಸಾಲಾಗಿ ನಿಂತಿರುವ ಚಿತ್ರಣವಿದೆ. ಪ್ರತಿಯೊಂದು ಬಿಲ್ಲೆಯ ಮೇಲೂ ಬರಹದ ಸಾಲಿದೆ.

ಹಳಪ್ಪಾದ ಅಗೆತಗಳಲ್ಲಿ ಬೆಳಕಿಗೆ ಬಂದ ಮನೆಗಳ ಒಂದು ಕೋಣೆಯ ಸಾಧಾರಣ ಮಧ್ಯದಲ್ಲಿ ಇಟ್ಟಿಗೆಗಳಿಂದ ಕಟ್ಟಿದ  ಮಂಡಲಾಕಾರದ ಚಿತಿಯೂ ಅದರಿಂದ ಕೊಂಚ ದೂರ  ಆಯತಾಕಾರದ ಚಿತಿಯೂ ಇವೆ. ಕೆಲವು ಮನೆಗಳ ಹೊರಗೆ ದೊಡ್ಡ ದೊಡ್ಡ ಚಿತಿಗಳು ಕಂಡುಬಂದಿದ್ದು ಅವುಗಳಲ್ಲಿ ಯಜ್ಞ ಜರುಗಿಸಿದ ಕುರುಹಾಗಿ ಪಶುಗಳ ಎಲುಬುಗಳೂ, ಸುಟ್ಟ ಗೋದಿಯು ಮತ್ತು ಜವೆ ಗೋದಿಯು ಕಾಳುಗಳೂ ದೊರಕಿವೆ. ಹಾಗೆಯೇ ಮೊಹೆಂಜೋದಳೋದ ಅಗೆತಗಳಲ್ಲಿಯೂ, ಯಜ್ಞಚಿತಿಗಳು ಕಂಡುಬಂದುದರಿಂದ ಅಲ್ಲಿನ ಅಗೆತಗಳನ್ನು ಪ್ರಾರಂಭಿಸಿದ ಶ್ರೀಮಾನ್ ರಾಖಾಲದಾಸ ಬ್ಯಾನರ್ಜಿ ಅವರು ಸಿಂಧೂ ಕಣಿವೆಯ ಜನರು ಅಗ್ನಿಯ ಆರಾಧಕರಾಗಿದ್ದರೆಂದು ಹೇಳಿದ್ದಾರೆ.

ಅಲ್ಲಿನ ಶ್ಮಶಾನಗಳಲ್ಲಿ ಸತ್ತವರ ಶವಗಳನ್ನು ಸುಟ್ಟ ಹಾಗೂ ಹೂಳಿಟ್ಟ ಕುರುಹುಗಳು ಕಂಡುಬಂದಿವೆ. ಮತ್ತು ಶವಗಳ ಎಲುಬುಗಳನ್ನು ತುಂಬಿಸಿ ಹೂಳಿದ ಕುಂಭಗಳೂ ದೊರೆತಿವೆ,

ಅಲ್ಲಿನ ಮನೆಗಳ ಸಮೀಪದಲ್ಲಿ ದೊರೆತ ಎಲುಬುಗಳ ಮೇಲಿಂದ ಸಿಂಧೂ ಕಣಿವೆಯ ಜನರು ಗೋವಿನ, ಆಡಿನ, ಹಂದಿಯ, ಆಮೆಯ, ಮೀನಿನ ಮತ್ತು ಕೆಲವು ಪಕ್ಷಿಗಳ ಮಾಂಸವನ್ನು ತಿನ್ನುತಿದ್ದರೆಂದು ಗೊತ್ತಾಗಿದೆ.

ಇಲ್ಲಿ ಸರಿಯಾಗಿ ಲಕ್ಷ್ಯದಲ್ಲಿಟ್ಟುಕೊಳ್ಳಬೇಕಾದ ವಿಷಯವೆಂದರೆ ಬ್ರಿಟಿಷ್ ರಾಜತಂತ್ರಜ್ಞರಾದ ಸೇನಾಧಿಕಾರಿಗಳು ಮತ್ತು ವಿದ್ವಾಂಸರು ಸಿಂಧೂ ಕಣಿವೆಯ ಅಗೆತಗಳಲ್ಲಿ ಬೆಳಕಿಗೆ ಬರಲಿರುವ ಸಂಸ್ಕೃತಿಯು ಆರ್ಯಜನರಿಗೆ ಸೇರಿದುದಲ್ಲವೆಂದು ಬಹಳ ವರ್ಷಗಳ ಮೊದಲೇ ನಿರ್ಣಯಿಸಿದ್ದರಾದುದರಿಂದ ತರುವಾಯದ ವಿದ್ವಾಂಸರು ಕೂಡ ಆ ಸಂಸ್ಕೃತಿಯನ್ನು ಆರ್ಯರದಲ್ಲವೆಂದು ಸಾಧಿಸಲು ಹೆಣಗಾಡಿದ್ದಾರೆಂಬುದಾಗಿದೆ. ಆದುದರಿಂದ ಸಿಂಧೂ ಕಣಿವೆಯ ಅಗೆತಗಳ ಸಂಬಂಧದಲ್ಲಿ ಪುಸ್ತಕಗಳನ್ನು ಮತ್ತು ಲೇಖನಗಳನ್ನು ಪ್ರಕಟಿಸಿದ ಅಧಿಕಾಂಶ ಪಾಶ್ಚಾತ್ಯ ವಿದ್ವಾಂಸರು ಸಿಂಧೂ ಸಂಸ್ಕೃತಿಯನ್ನು "ಆಯುಪೂರ್ವ ಸಂಸ್ಕೃತಿ" ಎಂದು ಕರೆದಿದ್ದಾರಲ್ಲದೇ ಆ ಸಂಸ್ಕೃತಿಯು ಏಕೆ ಆರ್ಯರದಲ್ಲವೆಂಬುದನ್ನು ವಿವರಿಸಲು ಹಲವು ನೆವಗಳನ್ನು ಮತ್ತು ಆಕ್ಷೇಪಗಳನ್ನು ಕಲ್ಪಿಸಿ ಅದನ್ನು ಆರ್ಯ ಸಂಸ್ಕೃತಿಯಲ್ಲ

ವೆಂದು ಸಾಧಿಸಲು ಬಹಳವಾಗಿ ಶ್ರಮಿಸಿದ್ದಾರೆ. ಮಾತ್ರವಲ್ಲ ಸಿಂಧೂ ಕಣಿವೆಯ ಜನರು ಅಗ್ನಿಯ ಆರಾಧಕರಾಗಿದ್ದರೆಂದು ಸ್ಪಷ್ಟವಾಗಿ ಸೂಚಿಸುವ ಹಲವು ಯಜ್ಞಚಿತಿಗಳು ಅಲ್ಲಿ ಕಂಡು ಬಂದಿದ್ದರೂ ಆ ಸತ್ಯವನ್ನು ಮರೆಮಾಜಿ ಅಲ್ಲಿ ಯಜ್ಞಚಿತಿಗಳು ಬಂದಿಲ್ಲವೆಂದು ಮಿಥ್ಯಾಪ್ರಚಾರವನ್ನು ಮಾಡಿದ್ದಾರೆ. ಅಷ್ಟೇ ಅಲ್ಲ ಸಿಂಧೂ ಜನರ ಧರ್ಮವು ಯಾವುದೆಂದು ಸ್ಪಷ್ಟವಾಗಿ ಸೂಚಿಸುವ ಹೆಚ್ಚು ಕುರುಹುಗಳು ದೊರೆತಿಲ್ಲವಾದರೂ ಹೆಣ್ಣು ಬೊಂಬೆಗಳು ಬಹಳವಾಗಿ ದೊರೆತಿರುವುದರಿಂದ ಮತ್ತು ಒಂದು ಬಿಲ್ಲೆಯ ಮೇಲೆ ತ್ರಿಮುಖ ಶಿವನ ಚಿತ್ರವಿರುವುದರಿಂದ ಸಿಂಧೂ ಜನರಲ್ಲಿ ಮಾತೃದೇವಿಯ ಮತ್ತು ಶಿವನ ಆರಾಧನೆಯು ಪ್ರಚಲಿತವಿದ್ದಿತೆಂದು ತೀರ್ಮಾನಿಸಿದ್ದಾರೆ. ಆದರೆ ಅವರೆಲ್ಲರ ಲೇಖನದ ಧೋರಣೆಯನ್ನು ಸೂಕ್ಷ್ಮವಾಗಿ ಪರಿಶೀಲಿಸಿದರೆ ಅವರ ಮುಖ್ಯ ಉದ್ದೇಶವು ಸಿಂಧೂ ಸಂಸ್ಕೃತಿಯು ದ್ರಾವಿಡರಿಗೆ ಇಲ್ಲವೇ ಇತರ ಅನಾರ್ಯ ಜನರಿಗೆ ಸೇರಿದುದೆಂದು ನಿರ್ಧರಿಸುವುದಾಗಿರದೇ ಆರ್ಯ ಜನರಿಗೆ ಸೇರಿದುದಲ್ಲವೆಂದು ಸಾಧಿಸುವುದಷ್ಟೇ ಆಗಿದ್ದಿತೆಂದು ಸ್ಪಷ್ಟವಾಗಿ ಗೊತ್ತಾಗುತ್ತದೆ, ಆದುದರಿಂದಲೇ ಅವರು ಬಹಳ ಹಿಂದಿನಿಂದ ಹಲವು ಪ್ರಮಾಣ ರಹಿತ ಕಲ್ಪನೆಗಳನ್ನು ಪ್ರಚಾರ ಮಾಡುತ್ತ ಬಂದಿದ್ದರೆನ್ನಬೇಕಾಗುತ್ತದೆ.

ಸಿಂಧೂ ಬಿಲ್ಲೆಗಳ ಮೇಲಿನ ಬರವಣಿಗೆಯನ್ನು ಓದಲು ಈ ತನಕ ಬಹಳ ಮಂದಿ ವಿದ್ವಾಂಸರು ಪ್ರಯತ್ನಿಸಿದ್ದಾರಾದರೂ ಅವರಲ್ಲೊಬ್ಬನಾದರೂ ಆ ಪ್ರಯತ್ನದಲ್ಲಿ ಜಯಶೀಲನಾಗಿಲ್ಲ. ಹಾಗಿದ್ದರೂ ಆ ವಿದ್ವಾಂಸರಲ್ಲಿ ಕೆಲವರು ಸಿಂಧೂ ಬರವಣಿಗೆಯ ಸಂಬಂಧವಲ್ಲಿ ವ್ಯಕ್ತಗೊಳಿಸಿದ ಅಭಿಪ್ರಾಯಗಳನ್ನು ಮತ್ತು ಕೆಲವು ವಿದ್ವಾಂಸರು ಆ ಬರವಣಿಗೆಯನ್ನು ಓದುವುದರಲ್ಲಿ ಅನುಸರಿಸಿದ ರೀತಿಯನ್ನು ಮತ್ತು ಪದ್ಧತಿಯನ್ನು ಹಾಗೂ ಅವರೊಳಗಿನ ಕೆಲವು ವಿದ್ವಾಂಸರ ಹೆಸರುಗಳನ್ನು ಇಲ್ಲಿ ತಿಳಿಸುವುದು ಅನುಚಿತವಾಗಲಾರದು.

ಅಧಿಕಾಂಶ ಪಾಶ್ಚಾತ್ಯ ವಿದ್ವಾಂಸರು ಮತ್ತು ಕೆಲವು ಮಂದಿ ಭಾರತೀಯ ವಿದ್ವಾಂಸರು ಸಿಂಧೂ ಬಿಲ್ಲೆಗಳ ಮೇಲಿನ ಬರವಣಿಗೆಯು ಬಲಗಡೆಯಲ್ಲಿ ಪ್ರಾರಂಭವಾಗಿ ಎಡಗಡೆಗೆ ಸಾಗುತ್ತದೆಂಬ ಅಭಿಪ್ರಾಯವನ್ನು ವ್ಯಕ್ತಗೊಳಿಸಿದ್ದಾರೆ. ಆದರೆ ಆ ಬಿಲ್ಲೆಗಳ ಮೇಲಿನ ಬರವಣಿಗೆಯನ್ನು ಸಮರ್ಪಕವಾಗಿ ಓದಲಾಗುವ ಮೊದಲು ಆ ಅಭಿಪ್ರಾಯವನ್ನು ಸರಿಯೋ ಅಲ್ಲವೋ ಎಂದು ಹೇಳಲು ಸಾಧ್ಯವಿಲ್ಲವಾದರೂ ಚಿತ್ರ ಲಿಪಿಯ ಬರೆವಣಿಗೆಯು ಎಡಗಡೆಯಿಂದ ಪ್ರಾರಂಭವಾಗಿ ಬಲಗಡೆಗೆ ಸಾಗುತ್ತದೆಂದು ನಿರ್ಧಾರವಾಗಿ ಹೇಳಬಹುದು. ಆದರೆ ಒಂದು ಉದಾಹರಣೆಯು ಮುಂದೆ ಬರಲಿರುವುದು.

ಅದು ಹೇಗೂ ಇರಲಿ ಸಿಂಧೂ ಸಂಸ್ಕೃತಿಯ ಸಂಬಂಧದಲ್ಲಿ ಪಾಶ್ಚಾತ್ಯ ವಿದ್ವಾಂಸರು ಯಾವ ಬಗೆಯ ಆಕ್ಷೇಪಗಳನ್ನು ಮತ್ತು ಮೊಂಡುವಾದಗಳನ್ನು

ಮುಂದೊಡ್ಡಿದರೂ ಆ ಸಂಸ್ಕೃತಿಯು ಆರ್ಯಜನರಿಗೆ ಸೇರಿದುದೆಂಬ ಸತ್ಯವನ್ನು ಅಡಗಿಸಲು ಸಾಧ್ಯವಿಲ್ಲ. ಅಂದರೆ ಸಿಂಧೂ ಸಂಸ್ಕೃತಿಯು ವಾಸ್ತವವಾಗಿ ಆರ್ಯ ಜನರಿಗೆ ಸೇರಿದುದಾಗಿದ್ದು ಅಲ್ಲಿನ ಬಿಲ್ಲೆಗಳ ಮೇಲಿನ ಚಿತ್ರಸಂಕೇತಗಳು ಆರ್ಯ ಜನರ ಉತ್ತರ ಧ್ರುವ ಪ್ರದೇಶದ ವಸತಿಗೆ ಸಂಬಂಧಿಸಿದ ಪ್ರಾಚೀನ ಐತಿಹ್ಯಗಳನ್ನು ಸ್ಪಷ್ಟವಾಗಿ ಸೂಚಿಸುತ್ತವೆ. ಮತ್ತು ಸಿಂಧೂ ಕಣಿವೆಯ ಅಗೆತಗಳಲ್ಲಿ ಆರ್ಯಜನರ ಅಗ್ನಿಯ ಆರಾಧನೆಯ ಕುರುಹುಗಳಾಗಿದ್ದ ಯಜ್ಞಚಿತಿಗಳೂ ಕಂಡುಬಂದಿವೆ. ಅಂಥ ಅನೇಕ ಬಿಲ್ಲೆಗಳು ಪಶ್ಚಿಮ ಆಸ್ಯದ ಸುಮೇರ, ಬೆಬಿಲೋನ ಮೊದಲಾದ ಪ್ರದೇಶ ಗಳಲ್ಲಿ ಕೂಡ ದೊರೆತಿರುವುದರಿಂದ ಒಂದೋ ಆರ್ಯಜನರು ಉತ್ತರಧ್ರುವ ಪ್ರದೇಶ ವನ್ನು ತೊರೆದು ಹೊರಟು ಬರುವಾಗ ಆ ಬಿಲ್ಲೆಗಳನ್ನು ತಮ್ಮೊಂದಿಗೆ ತಂದಿದ್ದಿರ ಬಹುದೆಂದು ಇಲ್ಲವೇ ಅವರು ಅಲ್ಲಿಂದ ಬಂದು ಪಶ್ಚಿಮ ಆಸ್ಯದಲ್ಲಿ ನೆಲಸಿದ ತರುವಾಯ ತಮ್ಮ ಪ್ರಾಚೀನ ಐತಿಹ್ಯಗಳನ್ನು ಮರೆತು ಹೋಗದಂತೆ ನೆನಪಿನಲ್ಲಿಡಲು ಅನುಕೂಲವಾಗುವಂತೆ ಅಂಥ ಚಿತ್ರಸಂಕೇತಗಳಿರುವ ಬಿಲ್ಲೆಗಳನ್ನು ನಿರ್ಮಿಸಿದ್ದಿರ ಬಹುದೆಂದು ಊಹಿಸಬೇಕಾಗುತ್ತದೆ. ಆದರೆ ಆ ಎರಡು ಅನುಮಾನಗಳಲ್ಲಿ ಯಾವುದು ಸರಿಯೆಂದು ಮುಂದಿನ ಅನ್ವೇಷಣಗಳಿಂದ ಗೊತ್ತಾಗಬೇಕಷ್ಟೇ ಅರ್ಥಾತ್ ಆರ್ಯಜನರ ಪ್ರಾಚೀನ ಐತಿಹ್ಯಗಳ ನೆರವಿನಿಂದ ಸಿಂಧೂ ಬಿಲ್ಲೆಗಳ ಮೇಲಿನ ಬರವಣಿಗೆಯನ್ನು ಓದಲು ಪ್ರಯತ್ನಿಸಿದ್ದಲ್ಲಿ ಜಯವು ದೊರೆಯಬಹುದೋ ಎಂಬ ಕಿಂಚಿನ್ಮಾತ್ರವಾದ ಆಶೆ ಇದೆ, ಆಶೆಯು ಕಿಂಚಿನ್ಮಾತ್ರ ಏಕೆಂದರೆ-ಆರ್ಯಜನರಲ್ಲಿ ಹಲವಾರು ಪಂಗಡಗಳು ಅಥವಾ ಗೋತ್ರಗಳಿದ್ದುವಲ್ಲದೇ ಪ್ರತಿಯೊಂದು ಗೋತ್ರ ದವರು ತಮ್ಮ ಕೆಲವು ಆಚರಣೆಗಳಲ್ಲಿ ಬೇರೊಂದು ಗೋತ್ರದವರ ಆಚರಣೆಯಿಂದ ಭಿನ್ನವಾದ ಕ್ರಮವನ್ನು ಅನುಸರಿಸುತಿದ್ದರು. ಆದುದರಿಂದ ಆ ಪಂಗಡಗಳ ಜನರು ತಮ್ಮ ಬರವಣಿಗೆಯಲ್ಲಿ ಕೂಡ ಭಿನ್ನ ಭಿನ್ನ ಕ್ರಮವನ್ನು ಅನುಸರಿಸಿರ ಬಹುದಾದರೆ ಆ ಬರವಣಿಗೆಯನ್ನು ಯಾವುದಾದರೂ ಒಂದೇ ಪದ್ಧತಿಯಿಂದ ಓದಲು ಸಾಧ್ಯವಾಗಲಾರದು.

ಸಿಂಧೂ ಬಿಲ್ಲೆಗಳ ಮೇಲಿನ ಬರವಣಿಗೆಯಲ್ಲಿ ಎರಡು ಬಗೆಯ ಲಿಪಿಗಳು ಉಪಯೋಗಿಸಲ್ಪಟ್ಟಿವೆಯೆಂಬುದು ಸ್ಪಷ್ಟವಾಗಿ ಗೊತ್ತಾಗುತ್ತದೆ, ಅವುಗಳ ಲ್ಲೊಂದು ಶುದ್ಧ ಚಿತ್ರಲಿಪಿಯಾಗಿದೆ. ಎರಡನೆಯದು ಧ್ವನಿಚಿಹ್ನೆಗಳ ಜೊತೆಯಲ್ಲಿ ಚಿತ್ರಗಳೂ ಇರುವಂಥದ್ದಾಗಿದೆ. ಶುದ್ಧ ಚಿತ್ರಲಿಪಿ ಇರುವ ಬಿಲ್ಲೆಗಳ ಸಂಖ್ಯೆಯು ಬಹಳ ಚಿಕ್ಕದಾಗಿದೆ. ಬಹಳ ಹೆಚ್ಚೆಂದರೆ ಐದುಮಾತ್ರ ಎನ್ನಬಹುದು. ಉಳಿದ ವುಗಳ ಮೇಲೆ ಮಿಶ್ರಲಿಪಿಯೇ ಉಪಯೋಗಿಸಲ್ಪಟ್ಟಿದೆ. ಆ ಮಿಶ್ರಲಿಪಿಯಲ್ಲಿ ಸಾಧಾರಣ ೩೫೦ ಚಿಹ್ನೆಗಳಿವೆಯೆಂದು ಗೊತ್ತಾಗಿದೆ. ಆದುದರಿಂದ ಅದು ಬ್ರಾಹ್ಮೀ ವರ್ಣಮಾಲೆಯಂತೆ ವರ್ಗಾತ್ಮಕ ವರ್ಣಮಾಲೆಯಲ್ಲವೆಂದು ತಿಳಿಯಬೇಕಾಗುತ್ತದೆ.

ಹೇಗಿದ್ದರೂ ಯಾವುದೊಂದು ಪದ್ಧತಿಯಿಂದಲೂ ಆ ಬರವಣಿಗೆಯನ್ನು ಈ ತನಕ ಸಮರ್ಪಕವಾದ ರೀತಿಯಲ್ಲಿ ಓದಲು ಸಾಧ್ಯವಾಗಿಲ್ಲ. ಆದರ ಉದಾಹರಣೆಯಾಗಿ ಆ ಬರವಣಿಗೆಯನ್ನು ಓದಲು ಪ್ರಯತ್ನಿಸಿದ ನೂರಾರು ಮಂದಿ ವಿದ್ವಾಂಸರಲ್ಲಿ ಇಬ್ಬರು ಪಾಶ್ಚಾತ್ಯ ಹಾಗೂ ಇಬ್ಬರು ಭಾರತೀಯ ವಿದ್ವಾಂಸರು ಆ ಬರವಣಿಗೆಯನ್ನು ಓದುವುದರಲ್ಲಿ ಅನುಸರಿಸಿದ ರೀತಿಯನ್ನು ಇಲ್ಲಿ ವಿವರಿಸಲಾಗುವುದು.

ಪ್ರೊ. ಎಲ್. ಏ. ವಾಡೆಲ್:- ಇವರು ಸಿಂಧೂ ಬಿಲ್ಲೆಗಳ ಮೇಲಿನ ಬರವಣಿಗೆಯ ಸಂಬಂಧದಲ್ಲಿ "Indo-Sumerian Seals Deciphered ಎಂಬ ಪುಸ್ತಕವನ್ನು ಬರೆದು ಪ್ರಕಟಿಸಿದ್ದಾರೆ. ಅವರ ಅಭಿಪ್ರಾಯವಲ್ಲಿ ಸುಮೇರೀ ಜನರು ಮತ್ತು ಪಾಶ್ಚಾತ್ಯ ವಿದ್ವಾಂಸರು ಸೆಮಿಟಿಕ್ ವರ್ಗಕ್ಕೆ ಸೇರಿಸಿದ ಫಿನಿಶಿಯನ್ ಜನರು (Phoenicians) ಆರ್ಯವರ್ಗದವರಾಗಿದ್ದಾರೆ. ಮತ್ತು ಸುಮೇರೀ ಭಾಷೆಯು ವೇದ ಭಾಷೆಯ ಪೂರ್ವರೂಪವಾಗಿದೆ. ಅವರು ಸಿಂಧೂ ಬಿಲ್ಲೆಗಳ ಬರವಣಿಗೆಯನ್ನು ಓದಲು ಬ್ರಿಟಿಷ್ ವಿದ್ವಾಂಸರು "ಸುಮೇರೀ" ಎಂದು ಕರೆದ ಯಾವುದೋ ಒಂದು ಭಾಷೆಯನ್ನು ಉಪಯೋಗಿಸಿದ್ದಾರೆ. ಮತ್ತು ಸಿಂಧೂ ಬಿಲ್ಲೆಗಳ ಮೇಲೆ–ಭೃಗು, ಕಣ್ವ, ಸುಷೇಣ ಮೊದಲಾದ ವೈದಿಕ ಶಬ್ದಗಳನ್ನು ಓದಿದ್ದಾರೆ. ಆದರೆ ಆ ಶಬ್ದಗಳ ಜೊತೆಯಲ್ಲಿ ಪೈತಿಸಿಗ್, ಏದಿನ್, ಅಗಡು ಮೊದಲಾದ ಅವೈದಿಕ ಶಬ್ದಗಳೂ ಇವೆ.

ಅವರು ಸಿಂಧೂ ಬರವಣಿಗೆಯನ್ನು ಓದುವುದರಲ್ಲಿ ವೈಜ್ಞಾನಿಕ ಪದ್ಧತಿಯನ್ನು ಅನುಸರಿಸಿದ್ದಾರಾದರೂ, – ಕೆಲವು ವರ್ಣಗಳನ್ನು ಸೂಚಿಸಲು ಬಿಲ್ಲೆಯ ಮೇಲಿನ ಚಿತ್ರ ಸಂಕೇತಗಳನ್ನು ತುಂಡು ತುಂಡುಗಳನ್ನಾಗಿ ಮಾಡಿದ್ದಾರೆ. ಹಾಗೆ ಮಾಡಿದರೆ ಸಿಂಧೂ ಬರವಣಿಗೆಯನ್ನು ಯಾವ ಭಾಷೆಯಲ್ಲಿ ಬೇಕಾದರೂ ಓದಬಹುದಾಗಿದೆ. ಆದರೆ ಅವರ ಆ ಪದ್ಧತಿಯು ಮೂಲದಲ್ಲಿಯೇ ದೋಷಯುಕ್ತವಾಗಿದೆ. ಹಾಗಾಗಿ ಅವರ ಪ್ರತಿಪಾದನೆಯು ಕೂಡ ಬಲಹೀನವಾಗಿದೆ. ಆದುದರಿಂದ ಅವರು ಸಿಂಧೂ ಬಿಲ್ಲೆಗಳ ಮೇಲಿನ ಬರವಣಿಗೆಯನ್ನು ಓದಿದುದು ಸರಿಯೆಂದು ಗ್ರಹಿಸುವುದು ತುಂಬಾ ಕಠಿನವಾಗಿದೆ.

೨. ಜೆಜುಇಟ್ ಪಾದ್ರಿ ಹೆನರೀ ಹೇರಾಸ್– ಇವರು ಸ್ಪೇನ್ ದೇಶದವರು. ಸ್ವಲ್ಪ ಕಾಲ ಇಂಗ್ಲಾಂಡಿನಲ್ಲಿದ್ದು ಸರಿಯಾದ ಅನುಭವ ಪಡೆದ ತರುವಾಯ ಭಾರತ ವರ್ಷಕ್ಕೆ ಬಂದವರು ಮುಂಬಯಿಯ ಸೈಂಟ್ ಜೇವಿಯರ್ ಕಾಲೇಜಿನಲ್ಲಿ ಇತಿಹಾಸದ ಪ್ರಾಧ್ಯಾಪಕರಾಗಿ ನಿಯುಕ್ತರಾದರು. ಅವರು ಕೆಲಸಕ್ಕೆ ಸೇರಿದ ಹಾಗೆಯೇ ಭಾರತೀಯ ಇತಿಹಾಸಕ್ಕೆ ಸಂಬಂಧ ಪಟ್ಟ ವಿಷಯಗಳಲ್ಲಿ ಮಾಡಿದ ಕೆಲವು ಸಂಶೋಧನೆಗಳಿಂದಾಗಿ ಬಹಳ ಪ್ರಖ್ಯಾತರಾದರು. ತರುವಾಯ ಅವರು ಸಿಂಧೂ ಕಣಿವೆಯ ಅಗೆತಗಳಲ್ಲಿ ಬೆಳಕಿಗೆ ಬಂದ ಪ್ರಾಚೀನ ಸಂಸ್ಕೃತಿಯ ಕಡೆಗೆ ತನ್ನ ಲಕ್ಷ್ಯವನ್ನು ಹರಿಸಿದರು. ಅವರು ಸಿಂಧೂ ಸಂಸ್ಕೃತಿಯ ಸಂಬಂಧದಲ್ಲಿ ತಾನು ಮಾಡಿದ

ಶೋಧಗಳಿಂದು ಹಲವು ಭಾಷಣಗಳನ್ನಿತ್ತಿದ್ದಾರಲ್ಲದೇ ನೂರಾರು ಲೇಖನಗಳನ್ನೂ ಪ್ರಕಟಿಸಿದ್ದಾರೆ. ಮತ್ತು ಸಿಂಧೂ ಕಣಿವೆಯ ಆಗೆತಗಳಲ್ಲಿ ದೊರಕಿದ ಸಾಧಾರಣ ಎರಡು ಸಾವಿರದ ಇನ್ನೂರು ಬಿಲ್ಲೆಗಳಲ್ಲಿ ತಾನು ಸಾವಿರದೆಂಟನೂರತೊಂಭತ್ತು ಬಿಲ್ಲೆಗಳನ್ನು ಓದಿರುವೆನಾಗಿ ಒಂದು ಲೇಖನದಲ್ಲಿ ಹೇಳಿದ್ದಾರೆ. ಅವರ ಓದಿನಲ್ಲಿ ಸಿಂಹಳದ ಗ್ನಾನಪ್ರಕಾಸರ್ ಎ.ಬ ತಮಿಳು ಪಾದ್ರಿಯೊಬ್ಬರು ಅವರಿಗೆ ಸಹಾಯಕ ರಾಗಿ ಕೆಲಸ ಮಾಡುತಿದ್ದರೆಂದು ತಿಳಿದು ಬಂದಿದೆ. ಪಾ. ಹೆರಾಸರ ಅಭಿಪ್ರಾಯ ದಲ್ಲಿ ಸಿಂಧೂ ಸಂಸ್ಕೃತಿಯು ಶಕಪೂರ್ವ ಐದು ಸಾವಿರದಿಂದ ಎಂಟುಸಾವಿರ ವರ್ಷಗಳಷ್ಟು ಪ್ರಾಚೀನವಾಗಿದೆ. ಮತ್ತು ಆ ಸಂಸ್ಕೃತಿಯು ದ್ರಾವಿಡ ಜನಾಂಗಕ್ಕೆ ಸೇರಿದುದಾಗಿದೆ. ಮತ್ತು ಸಿಂಧೂ ಬಿಲ್ಲೆಗಳ ಮೇಲಿನ ಬರ ವಣಿಗೆಯಲ್ಲಿ ದ್ರಾವಿಡ ವರ್ಗದ ಎಲ್ಲ ಪಂಗಡಗಳ ಉಲ್ಲೇಖವಿದೆ. ಆದುದರಿಂದ ಅವರು ಅಧಿಕಾಂಶ ಸಿಂಧೂ ಬಿಲ್ಲೆಗಳ ಮೇಲಿನ ಬರವಣಿಗೆಯನ್ನು ತಮಿಳು ಭಾಷೆ ಯಲ್ಲಿಯೂ ಕೆಲವು ಬಿಲ್ಲೆಗಳ ಮೇಲಿನ ಬರವಣಿಗೆಯನ್ನು ಕನ್ನಡದಲ್ಲಿಯೂ ಓದಿ ದ್ದಾರೆ. ಉದಾಹರಣೆಗಾಗಿ ಅವರು ಸಿಂಧೂ ಬಿಲ್ಲೆಗಳ ಮೇಲೆ ಓದಿದ ಮೂರು ತಮಿಳು ವಾಕ್ಯಗಳನ್ನು ಇಲ್ಲಿ ಕೊಡಲಾಗುವುದು–

೧. "ಮುನೂರ್ ಬಿಲವ ಆರೇಳ್ ಮೂನ್ ಇರೆ ಅಲು ಕಲಕುಲ ಆಟುಪ್ ಅಲರ್ ಊರಿಲ್ ಬಿಲವ" ಅಂದರೆ ಮುನೂರು (=ಮೂರು ಊರು?) ಗಳ ಬಿಲವರು ೧೨೬ (=ಆರು × ಏಳು × ಮೂರು) ಜನಗಳು ಇರಲು (ಇವನ್ನು) ಸಂಯುಕ್ತ ಜನ (ಕಲಕುಲ ಹಲಬೆರಕೆ)ರು ಅಲರೂರಿನ ಬಿಲವನಿಗೆ ಅರುಪಿದರು.


೨ "ಕಾಲರ್ ಮೀನವರ್ ಕಂಕದ ಏರ್‌ವಲ್ ವಿದದು ಕಲಕೂರರ್ ವಲ್ ಕುರಂಗರ್ ನಾಲ್" ಅಂದರೆ–ಕಾಲರ (ಜಾತಿ?) ಮೀನನ ಕಡೆಯುವರು ಕಂದಕದ ಏರಿಯೊಳಕ್ಕಿಳಿದು ಅದೇ ಕಲಕೂರರ ಕಡೆಯ ನಾಲ್ವರು ಕುರಂಗರನ್ನು ಸೆರೆ ಹಿಡಿದರು.

೩. ಕಾಲೂರ್ ಮೀನನ್ ಮೀನ್ ಕಾನ್‌ಕದ ಏರ್‌ವಲ್‌ವಿ ಅದು ಕಲಕೂರಿರ್‌ವಲ್ ಕಯ್ ಕುಡಗ ನಾಲ್" ಅಂದರೆ – ಕಾಲರ ಜಾತಿಯವನೂ, ಮೀನನ ಕುಲದವನೂ (ಆದ) ಮೀನನು ಕಂದಕದ ಏರಿಯನ್ನು ದಾಟಿದನು. ಕಲಕೂರರ (ಕಡೆಯ) ನಾಲ್ವರು ಕುಡಗರು ಕಯ್ ಒಳಗಾದರು (ಕೈಸೆರೆಯಾದರು)[1]

ಪಾದ್ರಿ ಹೆರಾಸರು ಬಿಲ್ಲೆಗಳ ಮೇಲಿನ ಬರವಣಿಗೆಯನ್ನು ಓದುವುದರಲ್ಲಿ ಇತರ ವಿದ್ವಾಂಸರಂತೆ ಯಾವುದೊಂದು ವೈಜ್ಞಾನಿಕ ಪದ್ಧತಿಯನ್ನು ಅನುಸರಿಸಿಲ್ಲ. ಅಂದರೆ ಬಿಲ್ಲೆಗಳ ಮೇಲಿನ ಯಾವ ಚಿಹ್ನೆಯು ಯಾವ ಧ್ವನಿಯನ್ನು ಇಲ್ಲವೇ ಶಬ್ದ

1 ಸಿರಿ ಭೂವಲಯ: ಪುಟ ೨೦.

ವನ್ನು ಸೂಚಿಸುತ್ತದೆಂದು ನಿರ್ಧರಿಸಿ ಹೇಳಿಲ್ಲ. ಆದಕ್ಕೆ ಪ್ರತಿಯಾಗಿ ಯಾವುದೊಂದು ಚಿಹ್ನೆಗೆ ತನಗೆ ಬೇಕಾದ ಯಾವುದೊಂದು ಶಬ್ದವನ್ನು ಕಲ್ಪಿಸಿ ವಾಕ್ಯಗಳನ್ನು ಕಟ್ಟುತ್ತ ಸಾಗಿದ್ದಾರೆ. ಅವರು ಸಿಂಧೂ ಬರೆವಣಿಗೆಯನ್ನು ಓದುವುದರಲ್ಲಿ ಅನುಸರಿಸಿದ ರೀತಿಯು ಹೇಗಿದ್ದಿತೆಂಬುದನ್ನು ತಿಳಿಯಲು ಅನುಕೂಲವಾಗುವಂತೆ ಅವರು ಓದಿದ ಒಂದು ಬಿಲ್ಲೆಯ ಪಡಿಯಚ್ಚು ಇಲ್ಲಿ ಕೊಡಲಾಗುವುದು–



ಪಾದ್ರಿ ಹೆರಾಸರು ಈ ಬಿಲ್ಲೆಯಲ್ಲಿರುವ ಬರಹದ ಸಾಲನ್ನು ಬಲಗಡೆಯಿಂದ ಎಡಗಡೆಗೆ – **"ವಾನ್, ತೇರ್, ಓರ್, ಮೀನ್, ಕಣ್, ವಾಳ್"** ಎಂಬುದಾಗಿ ತಮಿಳಿನಲ್ಲಿ ಓದಿದ್ದಾರೆ. ಮತ್ತು ಆದಕ್ಕೆ ಇಂಗ್ಲೀಷಿನಲ್ಲಿ "Let the one having fish eyes reaching heaven be happy" ಎಂಬುದಾಗಿ ವ್ಯಾಖ್ಯೆ ಹೇಳಿದ್ದಾರೆ. ಅವರು ಆ ಚಿತ್ರಲೇಖನವನ್ನು ಓದಿ ಪಡೆದ ಸ್ಫೂರ್ತಿಯಿಂದ ಇಂಗ್ಲೀಷಿನಲ್ಲಿ "Min Kan" (ಮೀನ್‌ಕಣ್) ಎಂಬ ಒಂದು ಆಧ್ಯಾತ್ಮಿಕ ವಿಚಾರಗಳನ್ನೊಳಗೊಂಡ ಚೆಲೋ ಗ್ರಂಥವನ್ನೂ ಬರೆದು ಪ್ರಕಟಿಸಿದ್ದಾರೆ. ಆದರೆ ಅವರು ಆ ಬಿಲ್ಲೆಯ ಮೇಲಿನ ಚಿತ್ರಲಿಪಿಯೊಳಗಿನ ಚೌಕವನ್ನು "ವಾನ್" ಅಂದರೆ ಬಾನು ಎಂದು ನಿರ್ಧರಿಸಲು ಆಧಾರವೇನೆಂದಾಗಲೀ "ತೇರು" ಚೌಕದ ಒಳಗಿರಲು ಕಾರಣವೇನಿರಬಹುದೆಂದಾಗಲೀ, ಎರಡು ಗೆರೆಗಳು "ಓರ್" (ಒಂದು, ಒಬ್ಬ) ಆದುದು ಹೇಗೆಂದಾಗಲೀ, ಎಲೆಯ ಚಿತ್ರವು "ಕಣ್" ಆಗಲು ಕಾರಣವೇನೆಂದಾಗಲೀ ವಿವರಿಸಿ ಹೇಳುವ ಶ್ರಮವನ್ನು ತೆಗೆದುಕೊಂಡಿಲ್ಲ.

ವಿಚಿತ್ರವೇನೆಂದರೆ ಅವರು ಶಕಪೂರ್ವ ಐದು ಸಾವಿರ ವರ್ಷಗಳಿಗಿಂತ ಪ್ರಾಚೀನವೆಂದು ಹೇಳಿದ ಆ ಸಿಂಧೂ ಬಿಲ್ಲೆಗಳ ಮೇಲಿನ ಬರವಣಿಗೆಯ ಭಾಷೆಯು ಶಕದ ಮೊದಲನೆಯ ಶತಮಾನದಲ್ಲಿ ಪ್ರಚಲಿತವಿದ್ದ ಅಥವಾ ಮಹಾಕವಿ ತಿರುವಳ್ಳುವರ್ ಅವರು ರಚಿಸಿದ "ಕುರಳ್" ಕಾವ್ಯದೊಳಗಿನ ತಮಿಳು ಭಾಷೆಯಾಗಿರುವುದಾಗಿದೆ. ಅಂದರೆ ಬಹಳ ಅರ್ವಾಚೀನವಾಗಿರುವುದಾಗಿದೆ. ಮತ್ತು ಅಷ್ಟು ಪ್ರಾಚೀನವಾದ ಆ ಬಿಲ್ಲೆಗಳ ಮೇಲೆ ಬಹಳ ಅರ್ವಾಚೀನ ಕಾಲದಲ್ಲಿ ಕವಲೊಡೆದ "ಕುಡಗ, ಇರುವ" ಮೊದಲಾದ ಒಳ ಪಂಗಡಗಳ ಉಲ್ಲೇಖಗಳಿವೆಯೆಂದು ಹೇಳಿದುದಾಗಿದೆ. ಅವರು ಆ ಬಿಲ್ಲೆಗಳ ಮೇಲಿನ ಬರವಣಿಗೆಯನ್ನು ಓದಿದ ಭಾಷೆಯು

ಸಂಬಂಧದಲ್ಲಿ ಆ ಕಾಲದ ಕೆಲವು ವರ್ತಮಾನ ಪತ್ರಿಕೆಗಳಲ್ಲಿ ಬಿರುಸಾದ ಚರ್ಚೆಯು ಜರುಗಿತ್ತು.[1]

ಪಾದ್ರಿ ಹೆರಾಸರು ಸಿಂಧೂ ಬರವಣಿಗೆಯನ್ನು ಓದಿದುದು ವಾಸ್ತವವೆಂದೇ ನಂಬಿದ ಕೆಲವು ವಿದ್ವಾಂಸರು ದ್ರಾವಿಡ ಜನಾಂಗದ ಕುರಿತು ಈ ತನಕ ಪ್ರಚಲಿತವಿದ್ದ ಇತಿಹಾಸವನ್ನು ಹೆರಾಸರ ಹೊಸ ಶೋಧಕ್ಕನುಸಾರವಾಗಿ ಪರಿವರ್ತಿಸುವ ಆವಶ್ಯಕತೆ ಇದೆ ಎಂದು ವಾದಿಸಿ ನಾನಾ ಬಗೆಯ ಲೇಖನಗಳನ್ನು ಪ್ರಕಟಿಸತೊಡಗಿದ್ದರು. ಅಂಥ ಲೇಖನಗಳನ್ನು ಓದಿದ ಹಾಗೂ ಮೊದಲು ಸಿಂಧೂ ಕಣಿವೆಯ ಅಗೆತಗಳಲ್ಲಿ ನಾಯಕನಾಗಿ ಕೆಲಸ ನಿರ್ವಹಿಸಿದ ಶ್ರೀಮಾನ್ ಕಾಶೀನಾಥ ದೀಕ್ಷಿತ (K. N. Dikshit) ಅವರು ತಾನು ಬರೆದ "Pre-historic Civilization of the Indus Valley" ಎಂಬ ಪುಸ್ತಕದಲ್ಲಿ ಆ ಲೇಖನಗಳ ಕುರಿತು ಮಾಡಿದ ಟೀಕೆಯ ಸಾರಾಂಶವು ಮದ್ರಾಸಿನ ಇಂಗ್ಲಿಷ್ ದೈನಿಕ "ಹಿಂದು" ಪತ್ರಿಕೆಯಲ್ಲಿ ಅವರ ಪುಸ್ತಕದ ವಿಮರ್ಶೆಯೊಂದಿಗೆ ಪ್ರಕಟವಾಗಿತ್ತು. ಅದರ ಭಾಷಾಂತರವು ಮುಂದಿನಂತಿದೆ-

"ಕೆಲವು ವಿದ್ವಾಂಸರು ಈಗ ಪ್ರಚಲಿತವಿರುವ ದ್ರಾವಿಡ ಭಾಷೆಗಳ

---

1. "Indus Valley Language"-writing on Fr. Herass article in the "News Review" headed "Light on the Mohenjo-daro Riddle" (Reformer, July 11, 1938) we observed- "The inscription on the Mohenjo-daro seal No. 321, which Fr. Heras transcribes, sounds like a verse taken from the oldest Tamil elassic extant, the Kural, both as regards words and metre." We reprinted last week an article from "The Ceylone Spectator' of November 11, by Rev. S. Gnana Prakasar, the Ceylonese collaborator with Fr. Heras in deciphering Mohenjo-daro inscriptions, headed - "Tamil Verse Seven Thousand Years Ago". Quoting the verse on the Mohenjo-daro seal the Rev. Gnana Prakasar writes- "It is a perfect distich in Vempa metre, the first line consisting four and the second of threefeet, the very metre used in the Kural. Mr. Gnana Prakasar, gives the date of Tiruvalluvar, the author of the Kural, as between the second and ninth centuries A. D., while Mr. V. V. S. Iyer in his preface to his English translation of the Kural, thinks that Tiruvalluvar flourished between the first and third century of the Chirstian era.

ಆಧಾರದಿಂದ ಸಿಂಧೂ ಬಿಲ್ಲೆಗಳ ಮೇಲಿನ ಭಾಷೆಯನ್ನು ವಿವರಿಸಲು ಪ್ರಯತ್ನಿಸುವುದು ಮತ್ತು ಸಿಂಧೂ ಬರಹವು ದ್ರಾವಿಡ ಬರಹವೆಂಬ ಕಲ್ಪಿತ ಓದಿನ ನೆವದಿಂದ ಸಿಂಧೂಸಂಸ್ಕೃತಿಯ ಸಂಪೂರ್ಣ ಗತಿಯನ್ನು ಅಳೆಯಲು ಪ್ರಯತ್ನಿಸುವುದು ಸರ್ವಥಾ ಅಕಾಲಿಕವಾಗಿದೆ. ಸಿಂಧೂ ಸಂಸ್ಕೃತಿಯ ಅಂತಿಮ ಹಂತದೊಂದಿಗೆ ದಕ್ಷಿಣ ಭಾರತದ ಸಂಸ್ಕೃತಿಯ ಉದಯ ಕಾಲೀನ ಕೊಂಡಿಯನ್ನು ದೃಢವಾಗಿ ಬೆಸೆಯಬೇಕಾದರೆ ಮೊತ್ತ ಮೊದಲು ದಕ್ಷಿಣ ಭಾರತದಲ್ಲಿ ವಿಶಾಲಪ್ರಮಾಣದ ಅನ್ವೇಷಣವನ್ನು ನಡಿಸುವ ಆವಶ್ಯಕತೆ ಇದೆ."[1]

ಶ್ರೀಮಾನ್ ದೀಕ್ಷಿತರು ಸೂಚಿಸಿರುವಂತೆ ದಕ್ಷಿಣ ಭಾರತದಲ್ಲಿ ನಡಿಸುವ ಅಗೆತಗಳಲ್ಲಿ ಸಿಂಧೂ ಕಣಿವೆಯಲ್ಲಿ ನಡೆಸಿದ ಅಗೆತಗಳಲ್ಲಿ ಬೆಳಕಿಗೆ ಬಂದಿರುವಂಥ ಬಿಲ್ಲೆಗಳು, ಆ ಬಗೆಯ ಇಟ್ಟಿಗೆಯ ಕಟ್ಟಡಗಳು ಆ ಬಗೆಯ ವಸ್ತುಗಳು ಮತ್ತು ಇತರ ಕುರುಹುಗಳು ಬೆಳಕಿಗೆ ಬರುವ ಮೊದಲು ಸಿಂಧೂ ಸಂಸ್ಕೃತಿಯನ್ನು ದ್ರಾವಿಡ ಸಂಸ್ಕೃತಿ ಎಂದು ವಾದಿಸುವುದು ಎಷ್ಟು ಮಾತ್ರಕ್ಕೂ ಸರಿಯಾಗದು. ಪಾಶ್ಚಾತ್ಯರು ಸಿಂಧೂ ಸಂಸ್ಕೃತಿಯನ್ನು ಆರ್ಯಜನರದ್ದಲ್ಲವೆಂದು ವಾದಿಸುವುದು ಅವರ ಒಂದು ರಾಜನೀತಿಯಾಗಿರುವಂತೆಯೇ ಅದನ್ನು ದ್ರಾವಿಡ ಜನರದ್ದೆಂದು ವಾದಿಸುವುದು ಕೂಡ ಒಂದು ರಾಜನೀತಿಯೇ ಆಗಿದೆ. ಹೇಗಿದ್ದರೂ ಪಾಶ್ಚಾತ್ಯ ವಿದ್ವಾಂಸರ ಪ್ರಮಾಣ ರಹಿತ ಕಲ್ಪನೆಗಳನ್ನು ವಾಸ್ತವವೆಂದು ನಂಬಿದ ಭಾರತೀಯ ವಿದ್ವಾಂಸರು ಸಿಂಧೂ ಜನರಲ್ಲಿ ಲಿಪಿಯು ಪ್ರಚಲಿತವಿದ್ದಿತೆಂಬ ಒಂದು ಮುಖ್ಯ ವಿಷಯವನ್ನು ಸಂಪೂರ್ಣವಾಗಿ ಕಡೆ ಗಣಿಸಿದ್ದಾರೆ. ಅಂದರೆ ಸಿಂಧೂ ಸಂಸ್ಕೃತಿಯು ದ್ರಾವಿಡ ಜನರಿಗೆ ಸೇರಿದುದೆಂಬುದು ವಾಸ್ತವವಾಗಿದ್ದುದಾದರೆ ದಕ್ಷಿಣ ಭಾರತದಲ್ಲಿ ನೆಲಸಿರುವ ದ್ರಾವಿಡ ಜನರಲ್ಲಿ ಸಿಂಧೂ ಲಿಪಿಯೇ ಆಗಲಿ, ಆದರಿಂದ ರೂಪಾಂತರ ಹೊಂದಿ ವಿಕಸಿತವಾದ ಬೇರೊಂದು ಲಿಪಿಯಾಗಲೀ ಪ್ರಚಲಿತವಿರಬೇಕಿತ್ತು. ಆ ಲಿಪಿಯಿಂದ ಬರೆದ ಪ್ರಾಚೀನ ಸಾಹಿತ್ಯವಿರಬೇಕಿತ್ತು. ಮತ್ತು ಆ ಸಾಹಿತ್ಯದಲ್ಲಿ ಸಿಂಧೂ ಸಂಸ್ಕೃತಿಗೆ ಸಂಬಂಧಪಟ್ಟ ಉಲ್ಲೇಖಗಳಿರಬೇಕಾಗಿದ್ದುವು ಮತ್ತು ದ್ರಾವಿಡ ಭಾಷೆಗಳಲ್ಲಿ ಸಿಂಧೂ ಕಣಿವೆಯ ಅಗೆತಗಳಲ್ಲಿ ಬೆಳಕಿಗೆ ಬಂದಿರುವ ಎಲ್ಲ ವಸ್ತುಗಳ ಮತ್ತು ಚಿಹ್ನೆಗಳ ಹೆಸರುಗಳಿರಬೇಕಾಗಿದ್ದುವೆಂಬುದನ್ನು ಸಂಪೂರ್ಣವಾಗಿ ಕಡೆಗಣಿಸಿದ್ದಾರೆ. ಇನ್ನೂ ಸ್ಪಷ್ಟವಾಗಿ

---

1. The attempt made by some scholars to explain the Indus language on the basis of present Dravidian languages, and find out the whole course of Indus civilization, by the supposed decipherment of "Dravidian Script" is wholly premature. Much more extensive research in South India would be necessary before definite links can be forged between the later stages of the Indus culture and the dawn of civilization in South India. (Review in the Hindu of Madras)

ಹೇಳುವುದಾದರೆ - ದ್ರಾವಿಡ ಭಾಷಾವರ್ಗದಲ್ಲಿ ಪ್ರಾಚೀನವಾದುದು ಹಾಗೂ ಹೆಚ್ಚು ವಿಕಸಿತವಾದುದು ಎಂದು ಹೇಳಲಾಗುವ ತಮಿಳು ಭಾಷೆಯಲ್ಲಿ ಸಿಂಧೂ ಬಿಲ್ಲೆಗಳ ಮೇಲಿರುವ  ಈ ಮೂರು ಆಕೃತಿಗಳ ಹೆಸರುಗಳಿಲ್ಲ. ಹಾಗೆಯೇ ಶಕಪೂರ್ವ ಮೊದಲನೆಯ ಶತಮಾನಕ್ಕಿಂತ ಪ್ರಾಚೀನವಾದ ಲಿಖಿತ ಸಾಹಿತ್ಯವೂ ಇಲ್ಲ.

೩. **ಡಾಕ್ಟರ್ ಪ್ರಾಣನಾಥ್, ಎಮ್. ಎ. ಪಿಎಚ್. ಡಿ.** ಇವರು ಬನಾರಸದ ಹಿಂದೂ ವಿಶ್ವವಿದ್ಯಾಲಯದಲ್ಲಿ ಪ್ರಾಧ್ಯಾಪಕರಾಗಿದ್ದರು. ಅವರು ಶಕವರ್ಷ ೧೮೫೭ರಲ್ಲಿ ಮುಂಬಾಯಿಯ "The Illustrated weekly of India" ಎಂಬ ಪತ್ರಿಕೆಯಲ್ಲಿ ಸಿಂಧೂ ಕಣಿವೆಯ ಸಂಸ್ಕೃತಿಯ ಸಂಬಂಧದಲ್ಲಿ ಒಂದು ಧಾರಾವಾಹೀ ಲೇಖನಮಾಲೆಯನ್ನು ಪ್ರಾರಂಭಿಸಿದ್ದರು. ಅವರ ಅಭಿಪ್ರಾಯದಲ್ಲಿ ಸುಮೇರೀ ಜನರು, ಫಿನಿಶ್ಯನ್ ಜನರು ಮತ್ತು ಆರ್ಯಜನರು ಒಂದೇ ಜನಾಂಗವಾಗಿದ್ದಾರೆ. ಮತ್ತು ಸುಮೇರೀ ಜನರು ಪಶ್ಚಿಮ ಆಸ್ಯಕ್ಕೆ ಬಂದಿದ್ದ ಆರ್ಯ ಜನರ ಮೊತ್ತ ಮೊದಲಿನ ಪಂಗಡದವರಾಗಿದ್ದಾರೆ.

ಹಾಗೆಯೇ ಶಕಪೂರ್ವ ೪೦೦೦ ಮತ್ತು ೩೦೦೦ ವರ್ಷಗಳ ಮಧ್ಯಕಾಲದಲ್ಲಿ ಕಿರಿಯ ಆಸ್ಯದಲ್ಲಿ ಫಿನೀಶಿಯಾದಲ್ಲಿ ಮತ್ತು ಹಿತ್ತೀ ಪ್ರದೇಶದಲ್ಲಿ ಸುಮೇರೀ ಜನರ ಮುಖ್ಯ ಠಾಣ್ಯಗಳಿದ್ದುವು. ಮತ್ತು ಸುಮೇರೀ ಜನರು ಉತ್ತರ ಭಾರತದಿಂದ ಮೊದಲುಗೊಂಡು ಸಮಸ್ತ ಪಶ್ಚಿಮ ಆಸ್ಯದಲ್ಲಿ, ಹಾಗೂ ಭೂಮಧ್ಯ ಸಮುದ್ರತೀರದಿಂದ ಈಜಿಪ್ತದ ಒಳಗಿನ ತನಕ ತಮ್ಮ ವಸತಿಗಳನ್ನು ಸ್ಥಾಪಿಸಿ ನೆಲಸಿದ್ದರು. ಅವರು ಬರಹವನ್ನು ಬಲ್ಲವರಾಗಿದ್ದರು ಮತ್ತು ಇತಿಹಾಸ ಪೂರ್ವ ಕಾಲದ ಈಜಿಪ್ತದ ಲಿಪಿಯನ್ನು ಉಪಯೋಗಿಸುತಿದ್ದರು. ಸುಮೇರೀ ಭಾಷೆಯು ವೇದ ಭಾಷೆಗಿಂತ ಪ್ರಾಚೀನವಾಗಿತ್ತು. ಮತ್ತು ಋಗ್ವೇದವು ಸುಮೇರೀ ಪಟ್ಟಣಗಳ ಕಾಲದ್ದಾಗಿತ್ತು. ಆದುದರಿಂದ ಋಗ್ವೇದವು ಒಂದು ರೀತಿಯಲ್ಲಿ ಸುಮೇರೀ ಜನರ ಲಿಖಿತ ಪ್ರಮಾಣಗಳ ಸಂಗ್ರಹವೆನ್ನಬಹುದು ಎಂಬುದು ಅವರ ಅಭಿಪ್ರಾಯವಾಗಿದೆ.

ಡಾ. ಪ್ರಾಣನಾಥ ಅವರು ಋಗ್ವೇದದ ಮಂತ್ರಗಳಲ್ಲಿ ಸುಮೇರೀ ಪಟ್ಟಣಗಳ ಹಾಗೂ ಅರಸರ ಹೆಸರುಗಳಿವೆಯೆಂದು ಮತ್ತು ಈಜಿಪ್ತಕ್ಕೆ ಸಂಬಂಧಪಟ್ಟ ಉಲ್ಲೇಖಗಳಿವೆಯೆಂದು ಪ್ರತಿಪಾದಿಸಿದ್ದರು. ಮತ್ತು ಆ ಪ್ರತಿಪಾದನೆಯನ್ನು ಸಮರ್ಥಿಸುವ ಸಲುವಾಗಿ ಋಗ್ವೇದದೊಳಗಿನ ಕೆಲವು ಮಂತ್ರಗಳನ್ನು ತನಗೆ ಬೇಕಾದ ರೀತಿಯಲ್ಲಿ ವಿಗ್ರಹಿಸಿದ್ದರು. ಆದರೆ ಅವರು ಮಾಡಿದ ಆ ವಿಗ್ರಹಗಳು ವ್ಯಾಕರಣ ನಿಯಮಗಳಿಗೆ ವಿರುದ್ಧವಾಗಿದ್ದುವು. ಆದುದರಿಂದ ಭಾರತೀಯ ಸಂಸ್ಕೃತ ವಿದ್ವಾಂ

ಕರು ಅವರ ಪ್ರತಿಪಾದನೆಯನ್ನು ಕಟುವಾಗಿ ಟೀಕಿಸಿ ಖಂಡಿಸಿದರು. ಡಾ. ಪ್ರಾಣನಾಥರ ವಿಚಾರಗಳಲ್ಲಿ ಕೊಂಚ ಹುರುಳಿದ್ದಿತಾದರೂ, ಅವರು ಆ ವಿಚಾರಗಳನ್ನು ಸಮರ್ಥಿಸಲು ಯೋಗ್ಯ ಪ್ರಮಾಣಗಳನ್ನು ಉದಹರಿಸಲು ಶಕ್ತರಾಗದುದರಿಂದ ಅವರ ಎಲ್ಲ ಶ್ರಮವು ವ್ಯರ್ಥವಾಯಿತು.


೪. **ಡಾಕ್ಟರ್ ಎಸ್. ಆರ್ ರಾವ್ :-** ಇವರು ಭಾರತ ಸರಕಾರದ ಪುರಾತತ್ವವಿಭಾಗದಲ್ಲಿ ಒಬ್ಬ ಅಧಿಕಾರಿಯಾಗಿದ್ದಾರೆ. ಮತ್ತು ಗುಜರಾತದ ಲೋಥಲ್ ಎಂಬಲ್ಲಿನ ಕೆಲವು ಹಾಳು ದಿನ್ನೆಗಳನ್ನು ಅಗೆದು ಸಿಂಧೂ ಸಂಸ್ಕೃತಿಗೆ ಸಂಬಂಧಪಟ್ಟಿರುವ ಒಂದು ಹೊಸ ಸನ್ನಿವೇಶವನ್ನು ಬೆಳಕಿಗೆ ತಂದಿದ್ದಾರೆ. ಮತ್ತು ಅಲ್ಲಿ ಕಂಡು ಬಂದ ಯಜ್ಞ ಚಿತಿಗಳ ಮತ್ತು ಯಜ್ಞವೇದಿಗಳ ಆಧಾರದಿಂದ ಸಿಂಧೂ ಜನರು ಅಗ್ನಿಯ ಆರಾಧಕರಾಗಿದ್ದರೆಂದು ಮತ್ತು ಪಶುಬಲಿ ಇರುವಂಥ ಯಜ್ಞಗಳನ್ನು ಜರಗಿಸುತ್ತಿದ್ದರೆಂದು ಮತ್ತು ಸಿಂಧೂ ಸಂಸ್ಕೃತಿಯನ್ನು ಆರ್ಯ ಜನರಿಗೆ ಸೇರಿದುದೆಂದು ಪ್ರತ್ಯಕ್ಷ ಪ್ರಮಾಣಗಳಿಂದ ಸಿದ್ಧಪಡಿಸಿದ್ದಾರೆ. ಹಾಗೂ ಸಿಂಧೂ ಜನರು ಶಿವನ ಲಿಂಗರೂಪದ ಆರಾಧಕರಾಗಿದ್ದರೆಂದು-ಸರ್ ಜಾನ್ ಮಾರ್ಶಲರು ಹೇಳಿದುದನ್ನು ಸಿದ್ಧಪಡಿಸುವ ಯಾವ ಕುರುಹುಗಳೂ ದೊರೆತಿಲ್ಲವೆಂದಿದ್ದಾರೆ.

ಡಾ. ರಾವ್ ಅವರು ಸಿಂಧೂ ಬಿಲ್ಲೆಗಳ ಮೇಲಿನ ಬರವಣಿಗೆಯು ಬಲಗಡೆಯಿಂದ ಎಡಗಡೆಗೆ ಸಾಗುತ್ತದೆಂದಿದ್ದಾರೆ. ಮತ್ತು ಸಿಂಧೂ ಲಿಪಿಯು ವರ್ಣಾತ್ಮಕವಾಗಿದ್ದು ಅದರಲ್ಲಿ ಇಪ್ಪತ್ತೊಂದು ವರ್ಣ ಚಿಹ್ನೆಗಳಿವೆಯೆಂದೂ, ಆ ಚಿಹ್ನೆಗಳಲ್ಲಿ ಹೆಚ್ಚಿನವುಗಳು ಉತ್ತರ ಸೆಮಿಟಿಕ್ ಚಿಹ್ನೆಗಳಾಗಿವೆಯೆಂದೂ ಅಂದಿದ್ದಾರೆ. ಹಾಗೆ ಅವರು ಉತ್ತರ ಸೆಮಿಟಿಕ್‌ಚಿಹ್ನೆಗಳ ನೆರವಿನಿಂದ ಹಲವು ಸಿಂಧೂ ಬಿಲ್ಲೆಗಳ ಮೇಲಿನ ಬರವಣಿಗೆಯನ್ನು ಓದಿರುವೆನಾಗಿ ಹಲವು ಭಾಷಣಗಳನ್ನು ಇತ್ತಿದ್ದರಲ್ಲದೇ ಸಿಂಧೂ ಬಿಲ್ಲೆಗಳ ಮೇಲಿನ ಹಲವು ವಾಕ್ಯಗಳ ಚಿತ್ರಗಳೊಂದಿಗೆ ಅವುಗಳನ್ನು ಓದಿದ ರೀತಿಯನ್ನು ವಿವರಿಸಿ ಮುಂಬಯಿಯ "The Illustrated Weekly of India" ಎಂಬ ಪತ್ರಿಕೆಯಲ್ಲಿ ಒಂದು ಚೆಲೋ ಲೇಖನವನ್ನು ಪ್ರಕಟಿಸಿದ್ದಾರೆ (12 December 1971) ಅವರು ಓದಿದ ರೀತಿಯು ವೈಜ್ಞಾನಿಕವಾಗಿದ್ದು ಅತ್ಯಂತ ಪ್ರಗತಿಶೀಲವಾಗಿದೆ. ಆದರೆ ಅವರ ಆ ಪರಿಶ್ರಮವು ಪ್ರಶಂಸನೀಯವಾಗಿದ್ದರೂ- ಅವರು ಆ ಬಿಲ್ಲೆಗಳ ಮೇಲಿನ ಬರವಣಿಗೆಯಲ್ಲಿ ಓದಿದ ಸಂಸ್ಕೃತ ಶಬ್ದಗಳು ಹೆಚ್ಚು ಪ್ರಾಚೀನವಾದವುಗಳಲ್ಲವಾದುದರಿಂದ-ಅವರು ಓದಿದುದು ಸರಿಯೋ ಅಲ್ಲವೋ ಎಂಬುದು ದೀರ್ಘ ಪರಿಶೀಲನದ ತರುವಾಯವೇ ಸಿದ್ಧವಾಗಬೇಕಾಗಿದೆ. ಆದುದರಿಂದ ಆ ಕುರಿತು ಈಗಲೇ ಏನನ್ನಾದರೂ ಹೇಳುವುದು ಸರಿಯಾದುದೂ ಅಲ್ಲ, ಉಚಿತವೂ ಅಲ್ಲ.

ಈ ನಡುವೆ ಅಂದರೆ ಶಕವರ್ಷ ೧೮೯೧ರಲ್ಲಿ ರಶ್ಯದ ಕೆಲವು ಸಂಶೋಧಕರು ಮತ್ತು ಸ್ಕ್ಯಾಂಡಿನೇವಿಯದ ಸಂಶೋಧನಾಲಯದಲ್ಲಿ ಅನ್ವೇಷಣವನ್ನು ಸಾಗಿಸುತ್ತಿದ್ದ

ನಾಲ್ವರು ಫಿನ್ ದೇಶದ ವಿಜ್ಞಾನಿಗಳು ಗಣಕಯಂತ್ರದ (Computer) ಸಹಾಯದಿಂದ ಸಿಂಧೂ ಬಿಲ್ಲೆಗಳ ಮೇಲಿನ ಬರವಣಿಗೆಯ ಭಾಷೆಯು ತಮಿಳು ಆಗಿದೆಯೆಂದು ಕಂಡುಹಿಡಿದು-ತಮಿಳು ಭಾಷೆಯಲ್ಲಿ ಸಿಂಧೂ ಬಿಲ್ಲೆಗಳ ಮೇಲಿನ ಬರವಣಿಗೆಯನ್ನು ಓದಿದರೆಂದು ಮದ್ರಾಸಿನ ಇಂಗ್ಲಿಷ್ ದೈನಿಕ "ಹಿಂದೂ ಪತ್ರಿಕೆಯಲ್ಲಿ (29 May 1969) ಒಂದು ವರದಿಯು ಪ್ರಕಟವಾಯಿತು. ಆ ವರದಿಯಲ್ಲಿ ಆ ನಾಲ್ವರು ಫಿನ್ ವಿಜ್ಞಾನಿಗಳಲ್ಲಿ ಒಬ್ಬರಾದ ಡಾ. ಆಸ್ಕೊ ಪಾರ್ಪೊಲಾ ಎಂಬವರು ಸಿಂಧೂ ಸಂಸ್ಕೃತಿಯ ಸಂಬಂಧದಲ್ಲಿ ವ್ಯಕ್ತಗೊಳಿಸಿದ ಅಭಿಪ್ರಾಯಗಳು ವಿವರಿಸಲ್ಪಟ್ಟಿದ್ದುವು. ಅವರ ಅಭಿಪ್ರಾಯದಲ್ಲಿ ಸಿಂಧೂ ಸಂಸ್ಕೃತಿಯು ಸಾಧಾರಣ ನಾಲ್ಕು ಸಾವಿರ ವರ್ಷಗಳ ಹಿಂದೆ ಪ್ರಾಕೃತಿಕ ಕಾರಣದಿಂದ, ಬಹುತರವಾಗಿ ಆರ್ಯಜನರ ಆಕ್ರಮಣದಿಂದ ನಾಶವಾಗಿರಬಹುದೆಂದಿದೆ. ಅವರು ವ್ಯಕ್ತಪಡಿಸಿದ ಕೆಲವು ಅಭಿಪ್ರಾಯಗಳು ಮುಂದಿನಂತಿವೆ:—

"ನಾನು ಸಿಂಧೂ ಕಣಿವೆಯ ಜನರು ದ್ರಾವಿಡರಾಗಿದ್ದರೆಂತಲೂ, ಅವರು ಸುಮೇರೀ ಜನರಿಗಿಂತ ಮೊದಲೇ ಜ್ಯೋತಿಷವನ್ನು ಅರಿತಿದ್ದರೆಂತಲೂ, ಅವರು ಶಿವ ಮತ್ತು ಕೃಷ್ಣ ಎಂಬ ನಕ್ಷತ್ರ ದೇವತೆಗಳನ್ನು ಆರಾಧಿಸುತಿದ್ದರೆಂತಲೂ ಕಂಡು ಹಿಡಿದಿರುವುದರಿಂದ ಪ್ರಬಲವಾದ ಘರ್ಷಣೆಗಳುಂಟಾಗುವುವೆಂದು ಸರಿಯಾಗಿ ಬಲ್ಲೆ. ಶಿವ ಮತ್ತು ಕೃಷ್ಣರು ಮಂಗಳ ಮತ್ತು ಶನಿಗ್ರಹಗಳೇದು ಸಿಂಧೂ ಬಿಲ್ಲೆಗಳ ಮೇಲಿನ ಬರವಣಿಗೆಯನ್ನು ಓದದೆನೇ, ಬರಿಯ ಭಾಷೆಯ ಸಂಬಂಧದಿಂದಲೇ ಕಂಡು ಹಿಡಿಯಲು ಸಾಧ್ಯವಿತ್ತು. ಹಿಂದುಗಳ ದೇವರಾದ ಶಿವ ಮತ್ತು ಕೃಷ್ಣರು ಸಿಂಧೂ ಸಂಸ್ಕೃತಿಯ ಮೂಲದವರೆಂದು ಅಲ್ಲಿನ ಬರವಣಿಗೆಗಳಿಂದ ಗೊತ್ತಾಗಿದೆ. ಹಿಂದುಗಳು ಆರಾಧಿಸುವ ಇಬ್ಬರು ಮುಖ್ಯ ದೇವತೆಗಳು ದ್ರಾವಿಡ ಮೂಲದವರೆಂದು ಅವರು ತಿಳಿದಾಗ ಕೊಂಚ ಗೊಂದಲವಾಗಬಹುದೆಂದು ನಾನು ಒಪ್ಪುತ್ತೇನೆ.[1]

ಅದರ ತರುವಾಯ ಅದೇ ವರ್ಷ ಜ್ಯೇಷ್ಠ ೧೧ರ (1 June 1969) ಹಿಂದೂ ಪತ್ರಿಕೆಯಲ್ಲಿ ಇನ್ನೊಬ್ಬ ಫಿನ್ ವಿಜ್ಞಾನಿ ಪೆಂಟಿ ಆಲ್ತೊ ಎಂಬವರ ಒಂದು ಲೇಖನವು ಪ್ರಕಟವಾಯಿತು. ಅವರು ಅದರಲ್ಲಿ ಸಿಧೂ ಬಿಲ್ಲೆಗಳ ಹಲವು ಬರವಣಿಗೆಗಳನ್ನು ಉದಹರಿಸಿ ಅವುಗಳಿಂದ ಸೂಚಿತವಾಗುವ ತಮಿಳು ಶಬ್ದಗಳಾವುವು ಎಂಬುದನ್ನು ವಿವರಿಸಿದ್ದರು. ಅವುಗಳಲ್ಲಿ ಮುಖ್ಯವಾದುದು ಈ  ವಾಕ್ಯವಾಗಿತ್ತು. ಆಲ್ತೊ ಅವರು ಆ ವಾಕ್ಯವನ್ನು ಬಲಗಡೆಯಿಂದ

1, Copenhagen, May 28. Dr. Asko Parpola said-yesterday that he was well aware that there might be strong repercussion from discoveries that the Indus people were Dravidians, who knew about astronomy long before the Mesapotamians, and


ಎಡಗಡೆಗೆ "ಆರುಮೀನ್" ಅಂದರೆ "ಆರು ನಕ್ಷತ್ರಗಳು" ಎಂದು ಓದಿ ಅದು ಕೃತ್ತಿಕಾ ನಕ್ಷತ್ರ ಪುಂಜವನ್ನು ಸೂಚಿಸುತ್ತದೆಂದು ವಾದಿಸಿದ್ದಾರೆ

ಆ ತರುವಾಯ ಅದೇ ವರ್ಷದ ಪೌಷ ಮಾಸದ ೧೪ರಂದು (4 January 1970) ಹಿಂದೂ ಪತ್ರಿಕೆಯು "Weekly Magazine"ದಲ್ಲಿ ರಶ್ಯದ ಯೂರೀಫ್ರ್ರೊಲೋವ್ ಎಂಬವರ ಒಂದು ಲೇಖವು ಪ್ರಕಟವಾಯಿತು. ಅವರು ಅದರಲ್ಲಿ ರಶ್ಯದ ಡಾಕ್ಟರ್ ಕ್ನೊರೊಜೋವ್ ಅವರ ಅಧ್ಯಕ್ಷತೆಯಲ್ಲಿ ಹಲವು ಮಂದಿ ರಶ್ಯನ್ ವಿಜ್ಞಾನಿಗಳು ಸಿಂಧೂ ಬಿಲ್ಲೆಗಳ ಮೇಲಿನ ಲೇಖನಗಳ ಅಧ್ಯಯನ ನಡೆಸುತ್ತಿದ್ದಾರೆಂದು ಮಾತ್ರವಲ್ಲದೇ ಆ ವಿಜ್ಞಾನಿಗಳು ಸಿಂಧೂ ಬಿಲ್ಲೆಗಳ ಮೇಲಿನ ಲೇಖಗಳು ಧಾರ್ಮಿಕ ಕ್ರಿಯೆಗಳಿಗೆ ಸಂಬಂಧಪಟ್ಟವೆಯೆಂಬುದರಲ್ಲಿ ಏಕಾಭಿಪ್ರಾಯವನ್ನು ಹೊಂದಿದ್ದಾರೆಂತಲೂ. ಧಾರ್ಮಿಕ ಕ್ರಿಯೆಗಳಿಗೆ ಸಂಬಂಧಪಟ್ಟ ಶಬ್ದಗಳು ಸಾಮಾನ್ಯವಾಗಿ ಸ್ಥಿರರೂಪದಿಂದ ಇರುತ್ತವಾದುದರಿಂದ ಅಂಥ ಶಬ್ದಗಳನ್ನು ಈಗಿನ ದ್ರಾವಿಡ ಭಾಷೆಗಳಲ್ಲಿ ಕಂಡು ಹಿಡಿಯಬಹುದೆಂತಲೂ, ಅವೇ ಶಬ್ದಗಳು ಸಂಸ್ಕೃತದ ಮಹಾ ಕಾವ್ಯಗಳಲ್ಲಿ ಮತ್ತು ಪುರಾಣಗಳಲ್ಲಿ ಕೂಡ ಇರಬಹುದೆಂತಲೂ ಹೇಳಿದ್ದರು.

ಹಾಗೆಯೇ ಆ ಲೇಖದಲ್ಲಿ ಪ್ರೊ. ಗುರೋವ್ ಅವರು ಆಕಾರ ಸಾಮ್ಯದ ಶಬ್ದಗಳನ್ನು ಒಂದರ ಬದಲಿಗೆ ಬೇರೊಂದನ್ನು ಉಪಯೋಗಿಸಿದರೆ ಸಿಂಧೂ ಬಿಲ್ಲೆಗಳ ಮೇಲಿನ ಬರವಣಿಗೆಯನ್ನು ಓದಲು ಸಾಧ್ಯವಿದೆಯೆಂಬುದನ್ನು ಕಂಡು ಹಿಡಿದಿದ್ದಾರೆಂತಲೂ, ಅವರು ಸಿಂಧೂ ಬಿಲ್ಲೆಗಳ ಮೇಲಿನ ಅಶ್ವತ್ಥ ವೃಕ್ಷದ  ಈ ಸಂಕೇತವನ್ನು ತಮಿಳಿನಲ್ಲಿ "ಅತ್ತಿಮರ" ಎಂದು ಗ್ರಹಿಸಿ ಅದನ್ನು ದ್ರಾವಿಡ ಭಾಷೆಗಳಿಗೆ ಸಾಮಾನ್ಯವಾಗಿರುವ ಷಷ್ಠೀ ವಿಭಕ್ತಿಯ "ತ" (ಕನ್ನಡ–ದ) ಪ್ರತ್ಯಯವನ್ನಾಗಿ ಮಾರ್ಪಡಿಸಿದ್ದರೆಂತಲೂ ಹಾಗೆ ಮಾಡಿದುದರಿಂದ ಶಬ್ದಗಳ ಗುಂಪನ್ನು ಮಾತ್ರವಲ್ಲ ಸಮಗ್ರ ಲೇಖವನ್ನೇ ಓದಲು ಸಾಧ್ಯವಾಯಿತೆಂತಲೂ ಹೇಳಿದೆ. ಮತ್ತು ಆ ಹೇಳಿಕೆಗೆ ಉದಾಹರಣೆಯಾಗಿ ಬೇರೆ ಬೇರೆ ಬಿಲ್ಲೆಗಳ ಮೇಲಿನ ಚಿಹ್ನೆಗಳನ್ನು

---


worshipped astral gods identical with the Hindu gods Siva and Krishna. Dr. Parpole added the identification through linguistic links of Siva and Krishna with planets Mars and Saturn could have been made even without deciphering the Indus script. The script also revealed that the prito-Dravidians practiced astro-religion and that the Hindu gods Siva and Krishna could be traced back to the Indus civilization, and the worship of planets Mars and Saturn He agreed that there may be ' sometrouble'' when Hindu realise that their two main gods are of Dravidian origin. The Hindu 29 May 1969.


ಮುಂದಿನಂತೆ  ಹೊಂದಿಸಿ ಅವುಗಳನ್ನು ಬಲಗಡೆಯಿಂದ ಎಡಗಡೆಗೆ ಓದಿದರೆ ಒಬ್ಬ ಮನುಷ್ಯನ ಇಲ್ಲವೇ ದ್ರಾವಿಡರ ದೇವನಾದ ಮುರುಗನ ಹೆಸರುಗಳಲ್ಲಿ ಒಂದಕ್ಕೆ ಸಮನಾದ "ಆರು ಮೀನ್ (ತ) ಕಾದಲನ್" ಅಂದರೆ "ಆರು ನಕ್ಷತ್ರಗಳ ಪ್ರೇಮದ ಪುತ್ರ" ಎಂಬುದನ್ನು ಸೂಚಿಸುತ್ತವೆಂತಲೂ ಹೇಳಿದೆ.[1] ಅಂದರೆ ಅವರ ಅಭಿಪ್ರಾಯದಲ್ಲಿ "ಆರುಮೀನ್" ಎಂಬುದರ ಅರ್ಥವು "ಕೃತ್ತಿಕಾ ಪುಂಜ" ಎಂದಿದೆ. ಆದುದರಿಂದ ಕೃತ್ತಿಕಾ ಪುಂಜದ ಪುತ್ರ ಎಂದರೆ ಸಂಸ್ಕೃತದಲ್ಲಿ ಕಾರ್ತಿಕೇಯ ಎಂದಾಗುವುದು.

ಆ ಪ್ರಕಾರವಾಗಿ ಹಿಂದೆ ಹೆಸರಿಸಿದ ಫಿನ್ ವಿದ್ವಾಂಸರ ಮತ್ತು ರಶ್ಯನ್ ವಿದ್ವಾಂಸರ ಲೇಖನಗಳಿಂದ ನಿಷ್ಪನ್ನವಾಗುವ ಮುಖ್ಯ ವಿಷಯಗಳನ್ನು ಮುಂದೆ ಕೊಟ್ಟಿರುವಂತೆ ವಿಭಜಿಸಬಹುದು.

೧. ಅವರು ಗಣಕಯಂತ್ರದ ನೆರವಿನಿಂದ ಸಿಂಧೂ ಬಿಲ್ಲೆಗಳ ಮೇಲಿನ ಬರವಣಿಗೆಯ ಭಾಷೆಯು "ತಮಿಳು" ಆಗಿದೆಯೆಂದು ಕಂಡು ಹಿಡಿದರು.

೨. ಶಿವ ಮತ್ತು ಕೃಷ್ಣ ಎಂಬ ದೇವರು ಸಿಂಧೂ ಸಂಸ್ಕೃತಿಯ ಕಾಲದವರಾಗಿದ್ದು ದ್ರಾವಿಡ ಜನರ ದೇವರಾಗಿದ್ದಾರೆ.

೩.  ಈ ಸಂಕೇತವು "ಆರುಮೀನ್" ಅಂದರೆ "ಆರು ನಕ್ಷತ್ರಗಳು ಅಥವಾ ಕೃತ್ತಿಕಾ ನಕ್ಷತ್ರ ಪುಂಜವನ್ನು ಸೂಚಿಸುತ್ತದೆ.

೪.  ಈ ನಾಲ್ಕು ಚಿಹ್ನೆಗಳ ಕೂಟವು ದ್ರಾವಿಡರ ದೇವನಾದ ಮುರುಗನ್ ಎಂಬವನ ಹೆಸರುಗಳಲ್ಲಿ ಒಂದಾಗಬಹುದಾದ "ಆರ ಮೀನ್ ಕಾದಲನ್" ಎಂಬುದನ್ನು ಸೂಚಿಸುತ್ತದೆ.

ಇನ್ನು ಅವರು ತಮ್ಮ ಅನ್ವೇಷಣದ ಫಲವೆಂದು ಹೇಳಿದ ಅಂಶಗಳಿಗೆ ಯಾವುದಾದರೂ ಐತಿಹಾಸಿಕ ಪ್ರಮಾಣವಿದೆಯೋ ? ಇಲ್ಲವೇ ಬರಿಯ ಕಲ್ಪನೆಯೋ ಎಂಬುದನ್ನು ವಿಮರ್ಶಿಸಲಾಗುವುದು.

---

1. In this way Prof. Gurov himself interpreted the sign "asvattha tree" (atti) as a denomination for the genitive case(-t-) so common in Dravidian languages. Prof. Gurov's investigation resulted in the reading of some blocks (group of signs) and even of a whole inscription. Take for instance the group of signs denoting accordingly "6" "fish" "asvattha tree" and "Man". It can be interpreted as a man's name (God or human comparable to one of the names of the God Murugn "aru minkatalan" (beloved) son of six stars.

೧. ಮೊತ್ತ ಮೊದಲು ಗಣಕ ಯಂತ್ರದ ನೆರವಿನಿಂದ ಯಾವುದೊಂದು ಲೇಖದಲ್ಲಿ ಉಪಯೋಗಿಸಿದ ಭಾಷೆ ಯಾವುದೆಂದು ಕಂಡು ಹಿಡಿಯಲು ಸಾಧ್ಯವಿದೆಯೇ? ಎಂಬ ಪ್ರಶ್ನೆ ಏಳುವುದು. ಆ ಪ್ರಶ್ನೆಗೆ ಒಂದೇ ಒಂದಾದ ಉತ್ತರವೆಂದರೆ "ಸಾಧ್ಯವಿಲ್ಲ" ಎಂಬುದಾಗಿದೆ. ಏಕೆಂದರೆ ಗಣಕ ಯಂತ್ರವು ತಾನಾಗಿ ಯಾವುದೊಂದು ಶೋಧವನ್ನು ಮಾಡುವುದಿಲ್ಲ. ಅದು ನಾವು ಅದರಲ್ಲಿ ತುಂಬಿದ ಸಂಖ್ಯೆಗಳ ಮೊತ್ತವು ಸರಿಯೋ ಅಲ್ಲವೋ ಎಂಬುದನ್ನು, ಅಥವಾ ನಾವು ಕಂಡು ಹಿಡಿದ ಉತ್ತರವು ಸರಿಯೋ ಅಲ್ಲವೋ ಎಂಬುದನ್ನು ಅಥವಾ ನಾವು ಗ್ರಹಿಸಿದ ಎಣಿಕೆಗಳು ತಾಳೆಯಾಗುತ್ತವೋ ಇಲ್ಲವೋ ಎಂಬುದನ್ನು ಮಾತ್ರ ಸೂಚಿಸಬಲ್ಲುದೇ ಹೊರತು ಅದರಲ್ಲಿ ತುಂಬಿದ ಲೇಖದ ಭಾಷೆ ಯಾವುದೆಂದು ಹೇಳಲಾರದು[1] ಎಂಬುದಾಗಿ ಗಣಕ ಯಂತ್ರತಜ್ಞರ ಅಭಿಪ್ರಾಯವಾಗಿದೆ. ಫಿನ್ ವಿದ್ವಾಂಸರು ಸಿಂಧೂ ಬಿಲ್ಲೆಗಳ ಮೇಲಿನ ಬರವಣಿಗೆಯನ್ನು ಗಣಕಯಂತ್ರದ ನೆರವಿನಿಂದ ಓದಿದೆವೆಂದು ಪ್ರಕಟಿಸಿದ ಪ್ರಬಂಧವನ್ನು ವಿಮರ್ಶಿಸಿದ ಗಣಕ ಯಂತ್ರತಜ್ಞ ಶ್ರೀಮಾನ್ ಟಿ. ವಿ. ಮಹಾಲಿಂಗಮ್ ಎಮ್. ಏ. ಡಿ. ಲಿಟ್. ಎಂಬ ಲಿಪಿ ತಜ್ಞರು ಕೂಡ ಅದೇ ಅಭಿಪ್ರಾಯವನ್ನು ವ್ಯಕ್ತಗೊಳಿಸಿದ್ದಾರೆ.

೨. ಶಿವನು ಮತ್ತು ಕೃಷ್ಣನು ದ್ರಾವಿಡರ ದೇವರು ಎಂಬ ಕಲ್ಪನೆಯು ಮೂಲದಲ್ಲಿಯೇ ಟೊಳ್ಳಾಗಿದೆ. ಏಕೆಂದರೆ ಆರ್ಯಜನರ ಸಂಪರ್ಕವಾಗುವ ಮೊದಲು ದ್ರಾವಿಡ ಜನರಲ್ಲಿ ದೇವರ ಆರಾಧನೆಯು ಪ್ರಚಲಿತವಿದ್ದಿತೆಂದು ಸಿದ್ಧಪಡಿಸುವ ಯಾವ ಲಿಖಿತ ಪ್ರಮಾಣವೂ ಇಲ್ಲ, ಶಿವನು ಆರ್ಯ ಜನರ ವೈದಿಕ ದೇವನೆಂದು ಹಿಂದೆ "ಶಿವಾರಾಧನೆ ಮತ್ತು ನಾಗಾರಾಧನೆ" ಎಂಬ ಅಧ್ಯಾಯದಲ್ಲಿ ಸಿದ್ಧಪಡಿಸಿದೆ. ಆದುದರಿಂದ ಇಲ್ಲಿ ಶ್ರೀ ಕೃಷ್ಣನ ವಿಷಯವು ಮಾತ್ರ ಚರ್ಚಿಸಲ್ಪಡುವುದು,

ಕೃಷ್ಣ ಶಬ್ದದ ಅರ್ಥವು "ಕಪ್ಪು" ಎಂದಿರುವುದರಿಂದ ಕೃಷ್ಣನು ಕರ್ರಗಿನ ದ್ರಾವಿಡ ಜನಾಂಗಕ್ಕೆ ಸೇರಿದವನೆಂದು ಸಿಂಧೂ ಕಣಿವೆಯ ಅಗೆತಗಳು ಪ್ರಾರಂಭ

---

1. The authors have depended on the computer in their study of the Indus script. The computer needs to be fed with some assumptions and on such feeding it will be able to say whether the data with which it has been fed are in contradiction to the assumptions or not. It helps one to see how the symbols are consistent, but it is not helpful in creating or supplying an idea or word or language. The authors themselves are concious of this difficulty of showing the consonance between a picture and an idea through a particular language. Book Review. The Hindu 19 November 1969.

ವಾಗುವುದಕ್ಕಿಂತ ಬಹುಕಾಲ ಮೊದಲಿನಿಂದಲೇ ಹಲವು ಮಂದಿ ಪಾಶ್ಚಾತ್ಯ ವಿದ್ವಾಂಸರು ಅನ್ನುತ್ತ ಬಂದಿದ್ದಾರೆ. ಆದುದರಿಂದ ಡಾ. ಪಾರ್ಪೋಲಾ ಅವರು ಶ್ರೀ ಕೃಷ್ಣನನ್ನು ದ್ರಾವಿಡರ ದೇವನೆಂದು ಹೇಳಿದುದರಲ್ಲಿ ಹೊಸದೇನೂ ಇಲ್ಲ. ಮತ್ತು ಅವರ ಹೇಳಿಕೆಯಿಂದ ಭಾರತ ವರ್ಷದಲ್ಲಿ ಯಾವ ಘರ್ಷಣೆಯೂ ಹುಟ್ಟಿಲ್ಲ. ಮತ್ತು ಹುಟ್ಟುವಂತೆಯೂ ಇಲ್ಲ. ಕಾರಣವೇನೆಂದರೆ ಸಾಏರಾರು ವರ್ಷಗಳ ಸಹ ವಾಸದ ಫಲವಾಗಿ ಭಾರತೀಯರೊಳಗಿನ ಆರ್ಯ ಮತ್ತು ದ್ರಾವಿಡ ಎಂಬ ಭೇದ ಭಾವವು ಎಂದೋ ಅಳಿದು ಹೋಗಿದೆ. ಆದರೆ ಶ್ರೀ ಕೃಷ್ಣನು ದ್ರಾವಿಡರ ದೇವನೆಂದು ವಾದಿಸಿದ ಯಾವನೊಬ್ಬ ಪಾಶ್ಚಾತ್ಯ ವಿದ್ವಾಂಸನಾದರೂ ತಮ್ಮ ವಾದವನ್ನು ವಿಶ್ವಾಸಾರ್ಹ ಪ್ರಮಾಣಗಳ ಆಧಾರದಿಂದ ಸಿದ್ಧ ಪಡಿಸಲು ಶಕ್ತನಾಗಿಲ್ಲ.

ಶ್ರೀ ಕೃಷ್ಣನನ್ನು ದ್ರಾವಿಡರ ದೇವನೆಂದು ವಾದಿಸಿದ ಪಾಶ್ಚಾತ್ಯ ವಿದ್ವಾಂಸರು ಶ್ರೀ ಕೃಷ್ಣನು ವೈದಿಕ ದೇವನಾದ ವಿಷ್ಣುವಿನ ಅವತಾರವೆಂಬುದನ್ನೂ. ಪುರಾಣಗಳಲ್ಲಿ ವಿಷ್ಣುವಿನ ಮೈಬಣ್ಣವು ನೀಲವಾಗಿರುವುದರಿಂದ, ಅವನ-ಅವತಾರ ನಾಗಿರುವ ಕೃಷ್ಣನು ಮಾತ್ರ ನೀಲಮೇಘಶಾಮನಾಗಿರದೇ ಶ್ರೀ ರಾಮಚಂದ್ರನು ಕೂಡಾ ನೀಲಮೇಘಶ್ಯಾಮನೆಂಬುದನ್ನೂ ಸಂಪೂರ್ಣವಾಗಿ ಕಡೆಗಣಿಸಿದ್ದಾರೆ. ಡಾ. ಪಾರ್ಪೋಲಾ ಅವರು ಹೇಳುವಂತೆ ಶ್ರೀ ಕೃಷ್ಣನು ಸಿಂಧೂ ಪಟ್ಟಣಗಳ ಕಾಲದವನಾಗಿದ್ದು ದ್ರಾವಿಡ ಜನರ ದೇವನಾಗಿದ್ದುದಾದರೆ ದ್ರಾವಿಡ ಜನರಲ್ಲಿ ಆ ಕುರಿತಾದ ಲಿಖಿತ ಸಾಹಿತ್ಯವಿರುತಿದ್ದಿತು. ಮತ್ತು ಅವರ ಸಾಹಿತ್ಯದಲ್ಲಿ ಶ್ರೀ ಕೃಷ್ಣನಜನ್ಮಕ್ಕೂ. ವಂಶಕ್ಕೂ ಸಂಬಂಧಪಟ್ಟ ವಿವರಗಳಿರುತಿದ್ದುವು, ಆದರೆ ದ್ರಾವಿಡ ಜನರಲ್ಲಿ ಪ್ರಚಲಿತವಿರುವ ಶ್ರೀ ಕೃಷ್ಣನ ಕಥೆಗಳೆಲ್ಲವೂ ಸಂಸ್ಕೃತ ಕಥೆಗಳ ಭಾಷಾಂತರಗಳು ಅಲ್ಲದಿದ್ದರೆ ರೂಪಾಂತರಗಳು ಮಾತ್ರ ಆಗಿವೆ.

ಶ್ರೀ ವಿಷ್ಣುವಿನ ಅವತಾರನಾಗಿ ದೇವರ ರೂಪದಲ್ಲಿ ಶ್ರೀ ಕೃಷ್ಣನ ಉಲ್ಲೇಖವು ಮೊತ್ತಮೊದಲು ನಮಗೆ ಮಹಾಭಾರತ-ಕಾವ್ಯದಲ್ಲಿ ಮಾತ್ರ ಕಂಡುಬರುತ್ತದೆ- ಆದರೆ ಮಹಾಭಾರತದೊಳಗಿನ ಎಲ್ಲ ಮುಖ್ಯ ನಾಯಕರ ಹೆಸರುಗಳು ವೇದಗಳಿಂದ ಮತ್ತು ಇತರ ವೈದಿಕಗಳಿಂದ ಎತ್ತಿಕೊಂಡಂಥವುಗಳಾಗಿವೆ. ಅಂದರೆ ಮಹಾ ಭಾರತ ಕಾರನು ವೈದಿಕ ಗ್ರಂಥಗಳೊಳಗಿನ ಹೆಸರುಗಳನ್ನು ಮತ್ತು ಕಥೆಗಳನ್ನು ಎತ್ತಿಕೊಂಡೇ ತನ್ನ ಇಡೀ ಕಾವ್ಯವನ್ನು ನಿರ್ಮಿಸಿದ್ದಾನೆ. ಆದುದರಿಂದಲೇ ಕೃಷ್ಣ, ಅರ್ಜುನ ಮೊದಲಾದ ಶಬ್ದಗಳು ಋಗ್ವೇದದಲ್ಲಿಯೂ ಇತರ ವೈದಿಕ ಗ್ರಂಥಗಳಲ್ಲಿಯೂ ಇರುವುದಾಗಿದೆ. ನಮಗೆ ಮೊತ್ತಮೊದಲು, ಕೃಷ್ಣ ಮತ್ತು ಅರ್ಜುನ ಎಂಬ ಶಬ್ದಗಳು ಕಪ್ಪು ಮತ್ತು ಬಿಳುಪು ಎಂಬ ಅರ್ಥದ ವಿಶೇಷಣಗಳಾಗಿ ಋಗ್ವೇದ ಒಂದು ಋಚೆಯಲ್ಲಿ ಜೊತೆಯಲ್ಲಿಯೇ ಕಾಣಸಿಗುತ್ತವೆ—

ಅಹಶ್ಚ ಕೃಷ್ಣಮಹರರ್ಜುನಂಚ
ವಿವರ್ತೇತೇ ರಜಸೀ ವೇದ್ಯಾಭಿಃ।

ವೈಶ್ವಾನರೋ ಜಾಯಮಾನೋ ನ ರಾಜಾ
ಅವಾತಿರಜ್ಜ್ಯೋತಿಷಾ ತಮಾಂಸಿ ॥ ಯು, ೬-೯-೧॥

ಅರ್ಥ:— ಕಪ್ಪುದಿನ ಮತ್ತು ಬಿಳುಪು ದಿನ ಎಂದು ಸ್ಪಷ್ಟವಾಗಿ ತಿಳಿಯಲಾಗು ವಂತೆ ಎರಡು ಮಂದ ಪ್ರಕಾಶಗಳು ಒಂದರ ತರುವಾಯ ಒಂದರಂತೆ (ಭೂಮಿ ಯನ್ನು) ಸುತ್ತಿ ಬರುತ್ತವೆ. ಅಂಥ (ಮಬ್ಬುಗತ್ತಲೆಯ) ಸಮಯದಲ್ಲಿ ವೈಶ್ವಾನರ ನಾಗಿ ಹುಟ್ಟುವ ಅಗ್ನಿಯು ರಾಜನಂತೆ ಅಂದರೆ ಚಂದ್ರನಂತೆ ತನ್ನ ಬೆಳಕಿನಿಂದ ಆ ಕತ್ತಲೆಗಳನ್ನು ಜಯಿಸುತ್ತಾನೆ.

ಹಿಂದಿನ ವರ್ಣನೆಯು ಉತ್ತರ ಧ್ರುವಪ್ರದೇಶದಲ್ಲಿ ದೀರ್ಘರಾತ್ರಿಯ ಕೊನೆಗೆ ಉಷೋದಯದ ತರುವಾಯ ಭೂಮಿಯನ್ನು ಸುತ್ತಿಬರುವ ನಸಿಕಿನ ಮತ್ತು ಮಬ್ಬುಗತ್ತಲೆಯ ಪರ್ಯಾಯಗಳಿಗೆ ಸಂಬಂಧಪಟ್ಟುದೆಂಬುದರಲ್ಲಿ ಏನೂ ಸಂದೇಹ ವಿಲ್ಲ.

ಋಗ್ವೇದದ ೧–೧೨೨–೫ರಲ್ಲಿ ಅರ್ಜುನ ಎಂಬ ಶಬ್ದವು ಒಬ್ಬ ಮನು ಷ್ಯನ ನಾಮರೂಪದಿಂದ ಬಂದಿದೆ. ಅಲ್ಲಿ ಆ ಅರ್ಜುನನು ಘೋಷಾ ಎಂಬ ಸ್ತ್ರೀಯ ಪತಿಯಾಗಿದ್ದಾನೆ.[1] ಹಾಗೆಯೇ ಋಗ್ವೇದದ ೮–೮೫-೩ರಲ್ಲಿ ಕೃಷ್ಣ ಎಂಬ ಶಬ್ದವು ನಾಮರೂಪದಿಂದ ಬಂದಿದೆ. ಮತ್ತು ಆ ಕೃಷ್ಣನು ಆಂಗಿರಸ ಗೋತ್ರದವನಾಗಿದ್ದು ಋಗ್ವೇದದ ಹಲವು ಸೂಕ್ತಗಳ ಋಷಿಯಾಗಿದ್ದಾನೆ.[2] ಶತಪಥ ಬ್ರಾಹ್ಮಣದ ೫-೪-೩–೭ರಲ್ಲಿ 'ಅರ್ಜುನ'–ಎಂಬುದು ಇಂದ್ರನ ಗುಹ್ಯನಾಮ ಎಂದು ಹೇಳಿದೆ.[3] ಮತ್ತು ಮಹಾಭಾರತಕಾರನು ಇಲ್ಲಿಂದಲೇ "ಅರ್ಜುನ" ಎಂಬ ಹೆಸರನ್ನು ಎತ್ತಿಕೊಂಡಿ ದ್ದಾನೆನ್ನಬಹುದು. ಹಾಗೆಯೇ ಅವನು ಕೃಷ್ಣ ಎಂಬ ಹೆಸರನ್ನು ಛಾಂದೋಗ್ಯ ಉಪನಿಷತ್ತಿನಿಂದ ಎತ್ತಿ ಕೊಂಡಿದ್ದಾನೆನ್ನಬಹುದು. ಹೇಗೆಂದರೆ ಛಾಂದೋಗ್ಯ ಉಪನಿಷತ್ತಿನಲ್ಲಿ ಘೋರ ಆಂಗಿರಸ ಎಂಬವನು ದೇವಕಿಯ ಪುತ್ರನಾದ ಕೃಷ್ಣನಿಗೆ ತತ್ತ್ವೋಪದೇಶ ಮಾಡಿದನೆಂಬ ಉಲ್ಲೇಖವಿದೆ.[4] ಆದರೆ ಛಾಂದೋಗ್ಯ ಉಪನಿಷತ್ತಿ

---

1 ಆ ವೋ ರುವಣ್ಯುಮೌಶಿಜೋ ಹುವಧ್ಯೈ
ಘೋಷೇವ ಶಂಸಮರ್ಜುನಸ್ಯ ನಂಶೇ ॥ಋ. ೧-೧೨೨-೫ ॥

2 ಅಯಂ ವಾಂ ಕೃಷ್ಣೋ ಅಶ್ವಿನಾ ವಾಜಿನೀವಸೂ ।
ಮಧ್ವಃ ಸೋಮಸ್ಯ ಪೀತಯೇ ॥ ಋ. ೮-೮೫-೩ ॥

3 ಅರ್ಜುನೋ ಅರ್ಜುನ, ಇತ್ಯರ್ಜುನೋ ಹಿ ವೈನಾಮೇಂದ್ರೋ
ಯದಸ್ಯ ಗುಹ್ಯಂ ನಾಮ ॥ಶ. ಬ್ರಾ. ೫-೪-೩_೭ ॥

4 ತದ್ಧೈತದ್ ಘೋರ ಆಂಗಿರಸಃ ಕೃಷ್ಣಾಯ ದೇವಕೀಪುತ್ರಾಯೋಕ್ತ್ವೋವಾಚ
॥೩–೧೭-೯॥

ನೊಳಗಿನ ಕೃಷ್ಣನು ದೇವಕಿಯ ಪುತ್ರನಾಗಿದ್ದರೂ ಅವನು ವಿಷ್ಣುವಿನ ಅವತಾರವಾಗಿಲ್ಲ. ಮತ್ತು ಅವನು ದೇವನೂ ಆಗಿಲ್ಲ. ಮತ್ತು ಆ ಉಪನಿಷತ್ತು ಸಿಂಧೂ ಕಣಿವೆಯ ಅಗೇತಗಳಲ್ಲಿ ಬೆಳಕಿಗೆ ಬಂದ ಪಟ್ಟಣಗಳ ಕಾಲದಷ್ಟು ಪ್ರಾಚೀನವೂ ಅಲ್ಲ.

ಛಾಂದೋಗ್ಯ ಉಪನಿಷತ್ತಿನೊಳಗಿನ ದೇವಕಿಯ ಪುತ್ರನಾದ ಕೃಷ್ಣನು ವಿಷ್ಣುವಿನ ಅವತಾರದ ರೂಪದಿಂದ ದೇವನಾಗಿ ಮಾರ್ಪಡುವುದು ಶಕದ ಐದನೆಯ ಶತಮಾನದ ಕೊನೆಯ ಭಾಗದಲ್ಲಿ ರಚಿಸಲ್ಪಟ್ಟ ಮಹಾ ಭಾರತವೆಂಬ ಕಾವ್ಯದಲ್ಲಿ ಮಾತ್ರವಾಗಿದೆ. ಅಂದರೆ ಮಹಾ ಭಾರತಕ್ಕಿಂತ ಪ್ರಾಚೀನವಾದ ಯಾವುದೊಂದು ಗ್ರಂಥದಲ್ಲಿಯೂ ವಿಷ್ಣುವಿನ ಅವತಾರದ ಕೃಷ್ಣನ ಉಲ್ಲೇಖವಿಲ್ಲ. ಮಹಾ ಭಾರತದಲ್ಲಿ ಛಾಂದೋಗ್ಯ ಉಪನಿಷತ್ತಿನೊಳಗಿನ ದೇವಕೀ ಪುತ್ರನಾದ ಕೃಷ್ಣನು ಮಾತ್ರವಲ್ಲದೇ ಘೋರ ಆಂಗಿರಸನೂ ಇದ್ದಾನೆ. ಮತ್ತು ಮಹಾ ಭಾರತ ಕಾವ್ಯವು ಶಕದ ಐದನೆಯ ಶತಮಾನದ ಕೊನೆಯ ಭಾಗದಲ್ಲಿಯೇ ರಚಿಸಲ್ಪಟ್ಟಿದ್ದಿತೆಂಬುದರ ಪ್ರಮಾಣಗಳು ಮಹಾಭಾರತದಲ್ಲಿಯೇ ಇವೆ[1]. ಅಂದರೆ ಕೃಷ್ಣನು ದೇವನಾಗಿ ಮಾರ್ಪಟ್ಟುದು ಶಕದ ಐದನೆಯ ಶತಮಾನದಲ್ಲೆಂದು ಸಿದ್ಧವಾಗುತ್ತದೆ. ಆದುದರಿಂದ ಶ್ರೀ ಕೃಷ್ಣನು ಸಿಂಧೂ ಪಟ್ಟಣಗಳ ಕಾಲದದನು ಮತ್ತು ದ್ರಾವಿಡ ಜನರ ದೇವನು ಎಂದು ಡಾ। ಪಾರ್ಪೋಲಾ ಅವರು ಮುಂದೆ ತಂದ ವಾದವು ಪ್ರಮಾಣಗಳಿಗೆ ವಿರುದ್ಧವಾದುದೆಂದು ಸಿದ್ಧವಾಗುತ್ತದೆ.

2. ಮೂರನೆಯದಾಗಿ ಫಿನ್ ಮತ್ತು ರಶ್ಯನ್ ವಿದ್ವಾಂಸರು 
ಈ ಸಂಕೇತವನ್ನು “ಆರುಮೀನ್” ಎಂದು ಓದಿ ಅದು ಆರು ತಾರಕೆಗಳುಳ್ಳ ಕೃತ್ತಿಕಾ ಪುಂಜವನ್ನು ಸೂಚಿಸುತ್ತದೆಂದು ವಾದಿಸಿದುದು ಕೂಡಾ ವಸ್ತುಸ್ಥಿತಿಗೆ ವಿರುದ್ಧವಾಗಿದೆಯೆಂದು ಹೇಳಬೇಕಾಗಿದೆ. ಏಕೆಂದರೆ ಕೃತ್ತಿಕಾ–ಪುಂಜದಲ್ಲಿ ಆರು ತಾರಕೆಗಳೆಂಬ ಕಲ್ಪನೆಯು ಶಕದ ಮೊದಲನೆಯ ಶತಮಾನದ ಪೂರ್ವಾರ್ಧದಲ್ಲಿ ಜೀವಿಸಿದ್ದ ಓವಿದ್ ಎಂಬ ಲತೀನ ಕವಿಯಿಂದಾಗಿ ಪ್ರಚಲಿತವಾಗಿದ್ದಿತೆಂದು ಹಿಂದೆ “ಭಾರತೀಯ ಜ್ಯೋತಿಷ” ಎಂಬ ಅಧ್ಯಾಯದಲ್ಲಿ ವಿವರಿಸಿದೆ.

ಪ್ರಾಚೀನ ವೈದಿಕ ಗ್ರಂಥಗಳಲ್ಲಿ ಮತ್ತು ಯವನವರ ಪುರಾ ಕಥೆಗಳಲ್ಲಿ ಹಾಗೂ ಜ್ಯೋತಿಷ ಗ್ರಂಥಗಳಲ್ಲಿ ಕೃತ್ತಿಕಾಪುಂಜದಲ್ಲಿ ಏಳು ನಕ್ಷತ್ರಗಳಿವೆಯೆಂದು ಹೇಳಿದೆಯಾದರೂ ವಾಸ್ತವವಾಗಿ ಕೃತ್ತಿಕಾಪುಂಜದಲ್ಲಿ ಏಳಕ್ಕಿಂತ ಹೆಚ್ಚು ನಕ್ಷತ್ರಗಳಿವೆಯೆಂದು ಅರ್ವಾಚೀನ ಅನ್ವೇಷಣಗಳಿಂದ ತಿಳಿದು ಬಂದಿದೆ. ಅಂದರೆ ಪ್ಯಾಟ್ರಿಕ್ ಮೂರ್ ಎಂಬ ಬ್ರಿಟಿಷ್ ವಿದ್ವಾಂಸರು ಬರೆದ ಒಂದು ಜ್ಯೋತಿಷ ಗ್ರಂಥದಲ್ಲಿ ಅವರು– “ಕತ್ತಲೆಯ ರಾತ್ರಿಯ ನಿರಭ್ರ ಆಕಾಶದಲ್ಲಿ ಸಾಮಾನ್ಯವಾಗಿ ಎಲ್ಲ ಜನ

[1] ಮಹಾಭಾರತದ ವಿಸ್ತೃತವಾದ ವಿಮರ್ಶೆಯು ಗ್ರಂಥದ ಕೊನೆಯಲ್ಲಿ ಪರಿಶಿಷ್ಟವಾಗಿ ಬರುವುದು.

ರಿಗೂ ಕೃತ್ತಿಕಾಪುಂಜದೊಳಗಿನ ಏಳು ನಕ್ಷತ್ರಗಳು ಬರಿಗಣ್ಣಿಗೆ ಕಾಣಿಸುತ್ತವಾದರೂ, ಸೂಕ್ಷ್ಮ ದೃಷ್ಟಿಯ ಜನರು ಹತ್ತೊಂಭತ್ತು ನಕ್ಷತ್ರಗಳ ತನಕ ಕಂಡಿದ್ದಾರೆ." [1] ಎಂದು ಹೇಳಿದ್ದಾರೆ. ಹೇಗಿದ್ದರೂ ಸಿಂಧೂ ಪಟ್ಟಣಗಳ ಜನರು ಕೂಡ ಇತರರಂತೆಯೇ ಕೃತ್ತಿಕಾಪುಂಜದಲ್ಲಿ ಏಳು ನಕ್ಷತ್ರಗಳನ್ನು ಕಾಣುತ್ತಿದ್ದರೆಂಬುದರಲ್ಲಿ ಸಂದೇಹವಿಲ್ಲ. ಆದುದರಿಂದ ಆರುಮೀನ್ ಎಂದರೆ ಕೃತ್ತಿಕಾಪುಂಜ ಎಂಬ ವಾದವನ್ನು ವಸ್ತುಸ್ಥಿತಿಗೆ ವಿರುದ್ಧವಾದುದೆಂದು ತ್ಯಜಿಸಬೇಕಾಗುತ್ತದೆ.

ಹಾಗೆಯೇ ರಶ್ಯನ್ ವಿದ್ವಾಂಸರು  ಈ ಸಂಕೇತದೊಂದಿಗೆ  ಈ ಸಂಕೇತವನ್ನು ಸೇರಿಸಿ ಅದನ್ನು ಆರುಮೀನ್ ಕಾದಲನ್ ಅಂದರೆ ಕೃತ್ತಿಕೆಯರ ಪ್ರೀತಿಯ ಪುತ್ರ ಅಥವಾ ದ್ರಾವಿಡರ ದೇವನಾದ "ಮುರುಗನ್" ಎಂದು ವಾದಿಸಿದುದು ಕೂಡ ಪ್ರಮಾಣಗಳಿಗೆ ವಿರುದ್ಧವೆನ್ನಬೇಕಾಗಿದೆ. ಏಕೆಂದರೆ ಮುರುಗನು ಮೂಲದಲ್ಲಿ ಮಹಾಭಾರತದೊಳಗಿನ "ಸ್ಕಂದ"ನಾಗಿದ್ದನೇ ಹೊರತು–ದ್ರಾವಿಡರ ಸ್ವತಂತ್ರನಾದ ದೇವನಾಗಿರಲಿಲ್ಲ, ಮತ್ತು ದ್ರಾವಿಡರ ದೇವನೆನ್ನಲು ಯೋಗ್ಯ ಲಿಖಿತ ಪ್ರಮಾಣಗಳೂ ಇಲ್ಲ. ಹಾಗೆಯೇ ಮಹಾಭಾರತದೊಳಗಿನ ಸ್ಕಂದನ ಕಥೆಗೂ ವೈದಿಕ ಗ್ರಂಥಗಳೊಳಗಿನ ಉಲ್ಲೇಖಗಳೇ ಮೂಲಾಧಾರವಾಗಿವೆ. ಮಹಾಭಾರತದಲ್ಲಿ ಸ್ಕಂದನನ್ನು ಕಾರ್ತಿಕೇಯ, ಷಡಾನನ, ಕುಮಾರ ಮೊದಲಾದ ಹಲವು ಹೆಸರುಗಳಿಂದ ಕರೆದಿದೆ. ಮತ್ತು ಅವನನ್ನು ಕಾರ್ತಿಕೇಯ ಮತ್ತು ಕುಮಾರನೆಂದು ಕರೆಯಲು ಶತಪಥ ಬ್ರಾಹ್ಮಣದೊಳಗಿನ ಉಲ್ಲೇಖಗಳೇ ಕಾರಣವಾಗಿವೆ. ಅಂದರೆ ಮಹಾ ಭಾರತದೊಳಗಿನ ಸ್ಕಂದನ ಕಥೆಯು ಬ್ರಾಹ್ಮಣ ಗ್ರಂಥದೊಳಗಿನ ಉಲ್ಲೇಖಗಳನ್ನು ಆಧರಿಸಿಯೇ ರಚಿಸಲ್ಪಟ್ಟಿದೆ.

ಶತಪಥ ಬ್ರಾಹ್ಮಣದ ೨-೧-೨-೧ರಲ್ಲಿ ಯಜ್ಞದ ಅಗ್ನಿಗಳನ್ನು ಕೃತ್ತಿಕಾ ನಕ್ಷತ್ರದಲ್ಲಿ ಆಧಾನ ಮಾಡಬೇಕೆಂತಲೂ ಕೃತ್ತಿಕೆಯರು ಅಗ್ನಿಯ ನಕ್ಷತ್ರಗಳೆಂತಲೂ ಹೇಳಿದ ತರುವಾಯ- "ಈ ಕೃತ್ತಿಕೆಯರು ಮೊದಲು ಕರಡಿಗಳ ಪತ್ನಿಯರಾಗಿದ್ದರೆಂತಲೂ, ಹಿಂದೆ ಸಪ್ತರ್ಷಿಗಳನ್ನೇ ಕರಡಿಗಳೆನ್ನುತ್ತಿದ್ದರೆಂತಲೂ, ಸಪ್ತರ್ಷಿಗಳು ಉತ್ತರ ದಿಕ್ಕಿನಲ್ಲಿಯೂ, ಕೃತ್ತಿಕೆಯರು ಪೂರ್ವ ದಿಕ್ಕಿನಲ್ಲಿಯೂ ಉದಯಿಸುತ್ತಿದ್ದುದರಿಂದ ಪತಿ ಪತ್ನಿಯರಲ್ಲಿ ಕೂಡಾಟ (= ಸಂಗ)

---

1 The constellation abounds in spectacular objects, the famous being the star cluster known as the Pleides or Seven Sisters surrounding the third magnitude star Alcyone (n Tauri). With the naked eye at least seven Pleides may be seen on a clear night, while keen sighted persons will count more, the record number is as said to be nineteen.

The Observer's Book of Astronomy page 73. by Patrick Moore.

ವಾಗುತ್ತಿರಲಿಲ್ಲವೆಂತಲೂ, ಪತಿ ಪತ್ನಿಯರಲ್ಲಿ ಕೂಡಾಟವಿಲ್ಲದಿರುವುದು ಅಶುಭವಾದುದರಿಂದ ಪತ್ನಿಯ ಸಂಗವು ತಪ್ಪಬಾರದೆಂದಿರುವವನು ಕೃತ್ತಿಕೆಯಲ್ಲಿ ಅಗ್ನಿಗಳನ್ನು ಆಧಾನ ಮಾಡಬಾರದೆಂದು ಹೇಳಿದ ತರುವಾಯ, ಅಗ್ನಿಯು ಕೃತ್ತಿಕೆಯರ ಕೂಡಾಟದವನೆಂತಲೂ ಅಗ್ನಿಯ ಸಂಗದಿಂದ ಕೃತ್ತಿಕೆಯರು ಸಮೃದ್ಧರಾದರೆಂತಲೂ, ಆದುದರಿಂದ ಕೃತ್ತಿಕೆಯಲ್ಲಿಯೇ ಅಗ್ನಿಗಳನ್ನು ಆಧಾನ ಮಾಡಬೇಕೆಂದು ಹೇಳಿದೆ[1] ಮುಂದೆ ೬-೧-೩-೮ರಲ್ಲಿ "ಭೂತಗಳ ಪತಿಯಾದ ಸಂವತ್ಸರ ಪ್ರಜಾಪತಿಯು ಉಷೆಯಲ್ಲಿ ರೇತಸ್ಸನ್ನು ಚಿಮುಕಿಸಿದನು. ಅದು ಸಂವತ್ಸರದಲ್ಲಿ ಕುಮಾರನಾಯಿತು ಎಂದು ಹೇಳಿದ. [2] ತೈತ್ತಿರೀಯ ಬ್ರಾಹ್ಮಣದ ೧-೫-೨-೬ ಮತ್ತು ೭ರಲ್ಲಿ "ಕೃತ್ತಿಕೆಯಿಂದ ವಿಶಾಖೆಯ ತನಕದ ನಕ್ಷತ್ರಗಳ ಗುಂಪನ್ನು ದೇವನ ನಕ್ಷತ್ರಗಳೆಂತಲೂ, ಅನುರಾಧೆಯಿಂದ ಭರಣೀಯ ತನಕದ ನಕ್ಷತ್ರಗಳ ಗುಂಪನ್ನು ಯಮ ನಕ್ಷತ್ರಗಳೆಂದು ಹೇಳಿದೆಯಲ್ಲದೇ ಯಜುರ್ವೇದದ ತೈತ್ತಿರೀಯ ಸಂಹಿತೆಯಲ್ಲಿ ಎಲ್ಲ ಚಾಂದ್ರನಕ್ಷತ್ರಗಳನ್ನು ಪ್ರಜಾಪತಿಯ ಹೆಣ್ಣು ಮಕ್ಕಳೆಂದು ಹೇಳಿದೆ. ಮಹಾಭಾರತಕಾರನು ಆದಿಪರ್ವದಲ್ಲಿ ಸ್ಕಂದನನ್ನು ಕೃತ್ತಿಕೆಗಳಿಂದ ಹುಟ್ಟಿದುದರಿಂದ ಕಾರ್ತಿಕೇಯ-ಎನ್ನುತ್ತಾರೆಂದು[3] ಹೇಳಿದರೂ ಮುಂದೆ ವೈದಿಕ ಗ್ರಂಥಗಳೊಳಗಿನ ಹೇಳಿಕೆಗಳನ್ನು ಪರಿವರ್ತಿಸಿ ಒಂದು ವಿಚಿತ್ರವಾದ ಕಥೆಯನ್ನು ಕಟ್ಟಿದ್ದಾರೆ.

ಹಿಂದೆ ವಸಂತಸಂಪಾತವು ಕೃತ್ತಿಕಾ ನಕ್ಷತ್ರದಲ್ಲಿ ಘಟಿಸುತಿದ್ದಾಗ ಆಗಿನ ಯಾಜ್ಞಿಕರು ಕೃತ್ತಿಕಾ ನಕ್ಷತ್ರದ ಉದಯಕ್ಕೆ ಸರಿಯಾಗಿ ಉತ್ಪಾದಿಸುತಿದ್ದ ಯಜ್ಞಾಗ್ನಿಯನ್ನೇ ಕುಮಾರನೆನ್ನುತಿದ್ದರು. ಆದರೆ ಮಹಾ ಭಾರತಕಾರನು ಆ ಅಗ್ನಿಯನ್ನು ಅಗ್ನಿಯ ಪುತ್ರನನ್ನಾಗಿ ಮಾರ್ಪಡಿಸಿ[4] ಅವನನ್ನು ಕುಮಾರ, ಸ್ಕಂದ, ಕಾರ್ತಿಕೇಯ, ಮೊದಲಾದ ಹಲವು ಹೆಸರುಗಳಿಂದ ಕರೆದಿದ್ದಾನೆ. ತೈತ್ತಿರೀಯ ಬ್ರಾಹ್ಮಣದೊಳಗಿನ ದೇವ ನಕ್ಷತ್ರಗಳ ಗುಂಪನ್ನು "ದೇವಸೇನೆ" ಎಂಬ ಕನ್ಯೆಯನ್ನಾಗಿಯೂ, ಯಮ ನಕ್ಷತ್ರಗಳ ಗುಂಪನ್ನು "ದೈತ್ಯಸೇನೆ" ಎಂಬ ಕನ್ಯೆಯನ್ನಾಗಿಯೂ ಮಾರ್ಪಡಿಸಿ ಅವ

---

1 ಋಕ್ಷಾಣಾಂ ಹ ವಾ ಏತಾ ಅಗ್ರೇ ಪತ್ನ್ಯ ಆಸುಃ। ಸಪ್ತರ್ಷೀನು ಹ ಸ್ಮ ವೈ ಪುರಕ್ಷಾ ಇತ್ಯಾಚಕ್ಷತೇ। ತಾ ಮಿಥುನೇನ ವ್ಯಾರ್ಧಂತಾಮಿ ಹ್ಯುತ್ತರಾಹಿ ಸಪ್ತರ್ಷಯ ಉದ್ಯಂತಿ ಪುರಏತಾ ಅಶಮಿವ ವೈತದ್ಯೋ ಮಿಥುನೇವ ವ್ಯೃದ್ಧಃ। ಸನೇನ್ಮಿಥುನೇನ ವ್ಯೃಧ್ಯಾಽಇತಿ ತಸ್ಮಾನ್ನಕೃತ್ತಿಕಾಸ್ವಾದಧೀತ। ತದ್ವೈದಧೀತ ಅಗ್ನಿರ್ವಾಏತಾಸಾಂ ಮಿಥುನ ಮಗ್ನಿನೈತಾ ಮಿಥುನೇನ ಸಮೃದ್ಧಾಸ್ತಸ್ಮಾದೇವ-ದಧೀತ॥ಶ. ಬ್ರಾ. ೨-೧-೨-೪ರಿಂದ ೫

2 ಭೂತನಾಂ ಪತಿಃ ಸಂವತ್ಸರ ಉಷಸಿರೇತೋಽಸಿಂಚತ್। ಸ ಸಂವತ್ಸರೇ ಕುಮಾರೋ ಅಜಾಯತ್ ॥ಶ. ಬ್ರಾ. ೬-೧-೩-೮॥

3 ಕೃತ್ತಿಕಾಭ್ಯುಪಪತ್ತೇಶ್ಚ ಕಾರ್ತಿಕೇಯ ಇತಿ ಸ್ಮೃತಃ ॥ ಮ. ಭಾ. ಆದಿ.೬೬-೨೪॥

4 ಅಗ್ನೇಃ ಪುತ್ರಃ ಕುಮಾರಸ್ತು ಶ್ರೀಮಾಞ್‌ಛರವಣಾಲಯಃ ॥ಆದಿಪರ್ವ-ಅಧ್ಯಾ. ೬೬ ಶ್ಲೋಕ೨೩॥

ರನ್ನು ಪ್ರಜಾಪತಿಯ ಪುತ್ರಿಯರೆಂದು ಹೇಳಿದ್ದಾನೆ. ಶತಪಥ ಬ್ರಾಹ್ಮಣದೊಳಗಿನ ಅಗ್ನಿಯ ಸಂಗದಿಂದ ಸಪ್ತರ್ಷಿಯರ ಪತ್ನಿಯರಾದ ಕೃತ್ತಿಕೆಯರು ಸಮೃದ್ಧರಾದರು" ಎಂಬ ಹೇಳಿಕೆಯನ್ನು-ಯಜ್ಞಕ್ಕೆ ಆಹ್ವಾನಿತನಾಗಿ ಸಪ್ತರ್ಷಿಯರಲ್ಲಿಗೆ ಬಂದಿದ್ದ ಅಗ್ನಿಯು ಅವರ ಪತ್ನಿಯರ ಸೌಂದರ್ಯದಿಂದ ಮೋಹಿತನಾಗಿ ಅವರ ಗಾರ್ಹಪತ್ಯ ಕುಂಡದಲ್ಲಿ ನೆಲಸಿದನೆಂತಲೂ ಮುಂದೆ ಅವರೊಳಗಿನ ಆರ್ವರ ಪತ್ನಿಯರ ಸಂಗ ಮಾಡಿದುದರಿಂದ ಕುಮಾರನು ಹುಟ್ಟಿದನೆಂತಲೂ ಮಾರ್ಪಡಿಸಿದ್ದಾನೆ. ಹಾಗೆ ಅವನು ಕಟ್ಟಿದ ಕಥೆಯ ಸಂಕ್ಷಿಪ್ತ ರೂಪವು ಮುಂದಿನಂತಿದೆ – (ವನಪರ್ವ-ಅಧ್ಯಾಯ–೨೨೩ರಿಂದ ೨೩೦).

ಪ್ರಜಾಪತಿಗೆ ದೇವಸೇನೆ ಮತ್ತು ದೈತ್ಯಸೇನೆ ಎಂಬಿಬ್ಬರು ಪುತ್ರಿಯರಿದ್ದರು, ಕೇಶಿ ಎಂಬ ದೈತ್ಯನು ಅವರನ್ನು ಕಾಮಿಸಿ ಅಪಹರಿಸಿ ಕೊಂಡೊಯ್ಯುವನು. ದೈತ್ಯಸೇನೆಯು ಮೊದಲಿನಿಂದ ಕೇಶಿಯಲ್ಲಿ ಅನುರಕ್ತಳಾಗಿದ್ದುದರಿಂದ ಅವಳು ಅವನನ್ನು ಪ್ರತಿಭಟಿಸುವುದಿಲ್ಲ. ಆದರೆ ದೇವಸೇನೆಯು ಅವನನ್ನು ಪ್ರೀತಿಸುತಿದ್ದಿಲ್ಲವಾದುದರಿಂದ ಅವನನ್ನು ಪ್ರತಿಭಟಿಸಿ ಸಹಾಯಕ್ಕಾಗಿ ಮೊರೆಯಿಡುವಳು. ಅವಳ ಮೊರೆಯನ್ನು ಕೇಳಿ ಅಲ್ಲಿಗೆ ಬಂದ ಇಂದ್ರನು ಅವಳನ್ನು ಕೇಶಿಯ ಕೈಯಿಂದ ಬಿಡಿಸುವನು. ಆಗ ಅವಳು ಇಂದ್ರನನ್ನು ನಿನ್ನೊಂದಿಗೆ ಕೂಡಿ ಈ ದೈತ್ಯರನ್ನು ಸಂಹರಿಸಲು ಶಕ್ತನಾದಂಥ ಒಬ್ಬ ಪತಿಯನ್ನು ನನಗೆ ಹುಡುಕಿಕೊಡಬೇಕೆಂದು–ಪ್ರಾರ್ಥಿಸುವಳು. ಆಗ ಇಂದ್ರನು ಅವಳನ್ನು ಕರೆದುಕೊಂಡು ಬ್ರಹ್ಮದೇವನ ಬಳಿಗೆ ಹೋಗಿ ಅವಳ ಬೇಡಿಕೆಯನ್ನು ತಿಳಿಸುವನು. ಅದಕ್ಕೆ ಬ್ರಹ್ಮನು–ಅಗ್ನಿಯ ಪುತ್ರನಾಗಿ ಹುಟ್ಟುವ ಕುಮಾರನು ಅವಳಿಗೆ ಯೋಗ್ಯನಾದ ಪತಿಯಾಗುವನೆಂದು ಹೇಳುವನು. ಹಾಗಾಗಿ ಇಂದ್ರನು ಅವಳೊಂದಿಗೆ ಅಗ್ನಿಯನ್ನು ಹುಡುಕುತ್ತ ಹೋಗುವನು.

ಇತ್ತ ಯಜ್ಞಕ್ಕೆ ಆಹೂತನಾಗಿ ಸಪ್ತರ್ಷಿಯರಲ್ಲಿಗೆ ಬಂದಿದ್ದ ಅಗ್ನಿಯು ಅವರ ಪತ್ನಿಯರ ರೂಪದಿಂದ ಮೋಹಿತನಾಗಿ ಅವರ ಗಾರ್ಹಪತ್ಯಕುಂಡದಲ್ಲಿ ನೆಲಸುವನು. ಆದರೆ ಬಹಳ ಕಾಲ ಕಳೆದರೂ ಋಷಿಪತ್ನಿಯರು ಅವನ ವಶರಾಗದಿರಲು ಅಗ್ನಿಯು ಬಹಳ ವ್ಯಥಿತನಾಗಿ ದೇಹಪರಿತ್ಯಾಗ ಮಾಡುವ ವಿಚಾರದಿಂದ ಕಾಡಿಗೆ ಹೋಗುವನು. ಆಗ ಅವನಲ್ಲಿ ಮೊದಲಿನಿಂದ ಅನುರಕ್ತಳಾಗಿದ್ದ ಸ್ವಾಹಾದೇವಿಯು ಅವನ ಮನಃಸ್ಥಿತಿಯನ್ನರಿತು ಅವನ ಹಿಂದೆಯೇ ಕಾಡಿಗೆ ಹೋಗುವಳು. ಮತ್ತು ಸಪ್ತರ್ಷಿಯರಲ್ಲಿ ಒಬ್ಬನ ಪತ್ನಿಯಾದ ಶಿವೆಯ ರೂಪವನ್ನು ಧರಿಸಿ ದೇಹಪರಿತ್ಯಾಗಕ್ಕೆ ಸಿದ್ಧನಾದ ಅಗ್ನಿಯ ಮುಂದೆ ಹೋಗಿ ನಿಲ್ಲುವಳು ಮತ್ತು ಚೆಲೋ ಮಾತುಗಳಿಂದ ಅವನನ್ನು ಒಲಿಸಿಕೊಂಡು ಅವನೊಂದಿಗೆ ರಮಿಸುವಳು. ಮತ್ತು ಅಗ್ನಿಯ ರೇತಸ್ಸನ್ನು ಕೈಯಲ್ಲಿ ತೆಗೆದುಕೊಂಡು ಗರುಡಿಯ ರೂಪದಿಂದ ಶ್ವೇತ ಪರ್ವತದ ಶಿಖರಕ್ಕೆ ಹಾರಿ ಹೋಗುವಳು. ಮತ್ತು ಅಲ್ಲಿ ಶರಸ್ತಂಭಗಳಿಂದ ಆವೃತ

ವಾದ ಕಾಂಚನ ಕುಂಡದಲ್ಲಿ ಆ ರೇತಸ್ಸನ್ನು ಎರೆಯುವಳು. ಆ ಪ್ರಕಾರವಾಗಿ ಅವಳು ಆರ್ವರು ಋಷಿಪತ್ನಿಯರ ರೂಪವನ್ನು ಧರಿಸಿ ಅಗ್ನಿಯನ್ನು ಕೂಡುವಳು ಮತ್ತು ಆರು ಸರ್ತಿ ರೇತಸ್ಸನ್ನು ಕೈಯಲ್ಲಿ ತೆಗೆದುಕೊಂಡು ಹೋಗಿ ಕಾಂಚನಕುಂಡ ದಲ್ಲಿ ಎರೆಯುವಳು. ಅವಳಿಂದ ಪರಮಪತಿವ್ರತೆಯಾದ ಅರುಂಧತಿಯ ರೂಪವನ್ನು ಧರಿಸಲಾಗುವುದಿಲ್ಲ.

ಹಾಗೆ ಕಾಂಚನ ಕುಂಡದಲ್ಲಿ ಎರೆದ ರೇತಸ್ಸಿನಿಂದ ಒಂದೇ ದಿನದಲ್ಲಿ ಆರು ಮೋರೆಗಳೂ, ಹದಿನೆರಡು ಕೈಗಳೂ ಒಂದೇ ಶರೀರವೂ ಇರುವಂಥ ಒಬ್ಬ ಕುಮಾರನು ಉಂಟಾಗುವನು.[1] ಮತ್ತು ಒಡನೆಯೇ ಬೆಳೆದು ಹಲವು ಅದ್ಭುತ ಕಾರ್ಯಗಳನ್ನು ಜರುಗಿಸಿ ಸಕಲರನ್ನು ಬೆರಗುಗೊಳಿಸುವನು. ಆಗ ಇಂದ್ರನು ದೇವ ಸೇನೆಯೊಂದಿಗೆ ಅಲ್ಲಿಗೆ ಬಂದು ಕುಮಾರನೊಂದಿಗೆ ದೇವಸೇನೆಯ ವಿವಾಹವನ್ನು ಜರುಗಿಸಿ ಅವನನ್ನು ದೇವತೆಗಳ ಸೇನಾನಿಯನ್ನಾಗಿ ಮಾಡುವನು.

ಅತ್ತ ತಮ್ಮ ಪತ್ನಿಯರೊಂದಿಗೆ ಅಗ್ನಿಯು ಮಾಡಿದ ಸಂಗದಿಂದ ಕುಮಾರನು ಹುಟ್ಟಿದ್ದಾನೆಂದು ಜನರು ಆಡುವುದನ್ನು ಕೇಳಿದ ಆರ್ವರು ಋಷಿಗಳು ತಮ್ಮ ಪತ್ನಿಯರನ್ನು ತ್ಯಜಿಸುವರು.[2] ಹಾಗೆ ಪರಿತ್ಯಕ್ತರಾದ ಆರ್ವರು ಸ್ತ್ರೀಯರು ಕುಮಾರನ ಬಳಿಗೆ ಬರುವರು ಮತ್ತು ಎಲೈ ಪುತ್ರನೇ ನೀನು ನಮ್ಮಲ್ಲಿ ಹುಟ್ಟಿದಿ ಯೆಂದು ಜನರು ಆಡುವುದನ್ನು ಕೇಳಿದ ನಮ್ಮ ಪತಿಗಳು ನಮ್ಮನ್ನು ಪರಿತ್ಯಜಿಸಿ ದ್ದಾರೆ;[3] ಈಗ ನೀನೇ ನಮ್ಮನ್ನು ಕಾಪಾಡಬೇಕು. ನೀನು ನಮ್ಮ ಪುತ್ರನಾಗಬೇಕೆಂದು ನಾವು ಬಯಸುತ್ತೇವೆ. ಆದುದರಿಂದ ನೀನು ನಮ್ಮ ಪುತ್ರನಾಗಿ ಋಣ ತೀರಿಸು ಎನ್ನುವರು[4] ಆಗ ಕುಮಾರನು- ನೀವು ಬಯಸಿ ದಂತೆ ನಾನು ನಿಮ್ಮ ಪುತ್ರನಾಗುವೆನು. ಮತ್ತು ನೀವು ನಿಶ್ಚಯವಾಗಿಯೂ ನನ್ನ ತಾಯಂದಿರಾಗುವಿರಿ. ಮತ್ತು ನಿಮ್ಮ ಸಕಲ ಬಯಕೆಗಳು ಕೈಗೂಡುವುವು ಎಂಬುದಾಗಿ ಆಶ್ವಾಸನ ನೀಡುವನು.[5] ಸ್ವಾಹಾದೇವಿಯಿಂದ ಕುಂಡದಲ್ಲಿ ರೇತಸ್ಸು ಸ್ಕನ್ನವಾಗಿ ಕುಮಾರನು ಹುಟ್ಟಿದುದರಿಂದ ಅವನ ಹೆಸರು "ಸ್ಕಂದ" ಎಂದಾಗುವುದು.

---

1 ಕುಮಾರಃ ಸಮಪದ್ಯತ॥ ಅಧ್ಯಾ. ೨೨೫; ಶ್ಲೋ. ೧೮॥

2 ತತ್ಯಜುಃ ಷಟ್ ತದಾ ಪತ್ನೀರ್ವಿನಾದೇವೀಮರುಂಧತೀಮ್॥

ವನ. ಅಧ್ಯಾ೨೨೬-ಶ್ಲೋ ೮॥

3 ವಯಂ ಪುತ್ರಪರಿತ್ಯಕ್ತಾ ಭರ್ತೃಭಿರ್ದೇವ ಸಮ್ಮಿತೈಃ॥ ಅ. ೨೩೦-೩॥

4 ತ್ವಾಂ ಪುತ್ರಂ ಚಾಪ್ಯಭೀಪ್ಸಾಮಃ ಕೃತ್ವೈತದನೃಣೋಭವ॥ ೨೩೦-೫॥

5 ಮಾತರೋಹಿ ಭವತ್ಯೋ ಮೇ ಸುತೋ ವೋsಹಮನಿಂದಿತಾಃ।
ಯದ್ವಾಪೀಚ್ಛತ ತತ್ಸರ್ವಂ ಸಂಭವಿಷ್ಯತಿ ವಸ್ತಥಾ ॥೨೩೦-೬॥

ಮುಂದೆ, ಇಂದ್ರನು ಮಾಡಿದ ವಜ್ರಪ್ರಹಾರದಿಂದ ಸ್ಕಂದನ ಬಲಪಾರ್ಶ್ವದಿಂದ ವಿಶಾಖನು ಹುಟ್ಟುವನು.[1]

ಇದರಲ್ಲಿ ಲಕ್ಷಿಸಬೇಕಾದ ಮುಖ್ಯ ವಿಷಯವೆಂದರೆ ಸ್ಕಂದನು ಅಗ್ನಿಯ ಪುತ್ರನಾಗಿದ್ದಾನೆಂಬುದಾಗಿದೆ. ಮತ್ತು ವೇದ ಮಂತ್ರಗಳ ಪ್ರಕಾರ ಅಗ್ನಿಯೇ ಶಿವನಾಗಿರುವುದರಿಂದ ಸ್ಕಂದನು ಶಿವನ ಪುತ್ರನೂ ಆಗಿದ್ದಾನೆಂಬುದಾಗಿದೆ.

ಹಿಂದಿನ ವಿವರಗಳಿಂದ ಸ್ಕಂದನ ಕಥೆಯು ಕೃತ್ತಿಕಾ ನಕ್ಷತ್ರಪುಂಜದಲ್ಲಿ ಆರುತಾರಕೆಗಳೆಂಬ ನಂಬಿಕೆಯು ರೂಢವಾದ ತರುವಾಯ, ವೈದಿಕ ಗ್ರಂಥಗಳೊಳಗಿನ ಉಲ್ಲೇಖಗಳನ್ನು ಬೇಕು ಬೇಕಾದಂತೆ ಪರಿವರ್ತಿಸಿ ರಚಿಸಲಾಗಿದ್ದಿತೆಂದು ಸ್ಪಷ್ಟವಾಗಿ ಸಿದ್ಧವಾಗುತ್ತದೆ. ಮತ್ತು ಸ್ಕಂದನ ಕಥೆಯು ಸಿಂಧೂ ಕಣಿವೆಯ ಅಗೆತಗಳಲ್ಲಿ ಬೆಳಕಿಗೆ ಬಂದಿರುವ ಪಟ್ಟಣಗಳ ಅವಶೇಷಗಳ ಕಾಲದಷ್ಟು ಪ್ರಾಚೀನವಲ್ಲವೆಂದು ಮತ್ತು ರಶ್ಯನ್ ವಿದ್ವಾಂಸರು ಎರಡು ಸಿಂಧೂ ಬಿಲ್ಲೆಗಳ ಮೇಲಿನ ಸಂಕೇತಗಳನ್ನು ಒಂದುಗೂಡಿಸಿ ಅವುಗಳನ್ನು "ಆರುಮೀನ್ ಕಾದಲನ್" ಎಂಬುದಾಗಿ ಓದಿದುದು ಮತ್ತು ಮುರುಗನು ಅಥವಾ ಸ್ಕಂದನು ದ್ರಾವಿಡರ ದೇವನೆಂದು ಹೇಳಿದುದು ಸರ್ವಥಾ ಸರಿಯಲ್ಲವೆಂದು ಸಿದ್ಧವಾಗುತ್ತದೆ. ಅರ್ಥಾತ್ ಫಿನ್ ವಿದ್ವಾಂಸರು ಸಿಂಧೂ ಬಿಲ್ಲೆಗಳ ಮೇಲಿನ ಬರಹದ ಸಾಲುಗಳನ್ನು ತಮಿಳಿನಿಂದ ಓದಿದುದು ಬರಿಯ ಕಲ್ಪನೆಯೆಂದು ಸಿದ್ಧವಾಗುತ್ತದೆ.

ಈಗ ನಮ್ಮ ಮುಂದಿರುವ ಮುಖ್ಯ ಪ್ರಶ್ನೆಯೆಂದರೆ ಸಮೀಪದ ಭವಿಷ್ಯ ಕಾಲದಲ್ಲಿ ಯಾವನೊಬ್ಬ ವಿದ್ವಾಂಸನಾದರೂ ಸಿಂಧೂ ಬಿಲ್ಲೆಗಳ ಮೇಲಿನ ಬರವಣಿಗೆಯನ್ನು ಓದಲು ಶಕ್ತನಾಗದಿದ್ದರೆ ಆ ಬರವಣಿಗೆಯನ್ನು ಹಾಗೆಯೇ ಬಿಟ್ಟು ಬಿಲ್ಲೆಗಳ ಮೇಲಿನ ಚಿತ್ರಸಂಕೇತಗಳ ಆಧಾರದಿಂದಲೇ ಸಿಂಧೂ ಸಂಸ್ಕೃತಿಯು ಯಾವ ಜನಾಂಗಕ್ಕೆ ಸೇರಿದುದೆಂದು ಸಂದೇಹಕ್ಕೆಡೆಯಿಲ್ಲದಂತೆ ನಿರ್ಣಯಿಸಲು ಸಾಧ್ಯವಿದೆಯೇ ಇಲ್ಲವೇ? ಎಂಬುದಾಗಿದೆ. ಆ ಪ್ರಶ್ನೆಗೆ ಉತ್ತರ ರೂಪವಾಗಿ–ಅಥವಾ ಹಾಗೆ ನಿರ್ಧರಿಸಲು ಸಾಧ್ಯವಿದೆಯೆಂಬುದನ್ನು ವಿಷಯ ಪರಿಚಯದಿಂದ ಪ್ರಾರಂಭಿಸಿ ತರುವಾಯದ ಪ್ರತಿಯೊಂದು ಅಧ್ಯಾಯದಲ್ಲಿ ಆ ಸಂಸ್ಕೃತಿಯು ಆರ್ಯಜನರದೆಂದು ಸೂಚಿಸಲಾಗಿದೆ. ಅಂದರೆ ಮೊತ್ತ ಮೊದಲು  ಈ ಮೂರು ಚಿಹ್ನೆಗಳು ಆರ್ಯಜನರಿಗೆ ಸೇರಿದವುಗಳೆಂದು ಸಿದ್ಧಪಡಿಸಿದೆ. ತರುವಾಯದ ಅಧ್ಯಾಯಗಳಲ್ಲಿ ಪಾಶ್ಚಾತ್ಯ ವಿದ್ವಾಂಸರು ಸಿಂಧೂಸಂಸ್ಕೃತಿಯನ್ನು ಆರ್ಯಜನರದ್ದಲ್ಲವೆಂದು ಸಾಧಿಸಲು ಅನುಕೂಲವಾಗುವಂತೆ ಪ್ರಚಾರಮಾಡುತ್ತ ಬಂದಿದ್ದ ಕಲ್ಪನೆಗಳಿಗೆ ಬುಡವೇ ಇಲ್ಲವೆಂದು

---

1 ವನಪರ್ವ ಅಧ್ಯಾಯ ೨೨೭-ಶ್ಲೋಕ ೧೪ರಿಂದ ೧೭॥

ಪ್ರಮಾಣಗಳನ್ನು ಕೊಟ್ಟು ಖಂಡಿಸಲಾಗಿದೆ. ಮತ್ತು ವೇದಮಂತ್ರಗಳನ್ನು ಮೊತ್ತ ಮೊದಲು ಬ್ರಾಹ್ಮೀ ಲಿಪಿಯಿಂದ ಬರೆದು ಕೊಂಡ ಜನರು ಎಲ್ಲ ಸಿಂಧೂ ಬಿಲ್ಲೆ ಗಳನ್ನು ಕಣ್ಣಾರೆ ಕಂಡಿರಬೇಕೆಂದು ಪ್ರತಿಪಾದಿಸಲಾಗಿದೆ. ಹಾಗೆ ಆ ಜನರು ಸಿಂಧೂ ಬಿಲ್ಲೆಗಳನ್ನು ಕಂಡುದರಿಂದಲೇ ವೇದಗಳಲ್ಲಿ ಬಿಲ್ಲೆಗಳ ಮೇಲಿನ ಚಿತ್ರ ಸಂಕೇತಗಳ ಯಥಾವತ್ತಾದ ವರ್ಣನೆಗಳಿಗರುವುದಾಗಿದೆಯೆಂದು ವಿವರಿಸಲಾಗಿದೆ. ಇನ್ನು ಆ ಚಿತ್ರ ಸಂಕೇತಗಳಲ್ಲಿ ಅತ್ಯಂತ ಮುಖ್ಯವಾದ ಹಾಗೂ ಸಂದೇಹಕ್ಕೂ ಪ್ರತಿವಾದಕ್ಕೂ ಎಡೆಕೊಡದಂಥ ಕೆಲವು ಚಿತ್ರಸಂಕೇತಗಳ ಪಡಿಯಚ್ಚುಗಳನ್ನು ಕೊಟ್ಟು ಅವುಗಳ ಸಂಬಂಧದಲ್ಲಿ ವೇದಗಳಲ್ಲಿ ಬಂದಿರುವ ವರ್ಣನೆಗಳನ್ನು ಉದಹರಿಸಿ ಸಿಂಧೂ ಸಂಸ್ಕೃತಿಯು ಸಂಪೂರ್ಣವಾಗಿ ಆರ್ಯ ಜನರಿಗೆ ಸೇರಿದುದೆಂದು ಸಿದ್ಧಪಡಿಸ ಲಾಗುವುದು.

ಆದರೆ ಹಾಗೆ ಮಾಡುವ ಮೊದಲು ಸಿಂಧೂ ಕಣಿವೆಯಲ್ಲಿ ಅಗೆತಗಳು ಪ್ರಾರಂಭವಾದೊಡನೆಯೇ ಅಲ್ಲಿ ಬೆಳಕಿಗೆ ಬಂದಿದ್ದ ಅವಶೇಷಗಳನ್ನು ಕಂಡು ದಿಗ್ಭ್ರಾಂತರಾದ ಬ್ರಿಟಿಷ್ ವಿದ್ವಾಂಸರು ಅವುಗಳ ಕುರಿತು ವ್ಯಕ್ತಗೊಳಿಸಿದ ಅಭಿ ಪ್ರಾಯಗಳನ್ನೂ, ಮೊಹೆಂಜೋದಳೋ ಎಂಬಲ್ಲಿನ ಅಗೆತಗಳ ಕಾಲದಲ್ಲಿ ಭಾರತ ಸರಕಾರದ ಪುರಾತತ್ವ ವಿಭಾಗದಲ್ಲಿ ಮುಖ್ಯ ಸಂಚಾಲಕರಾಗಿದ್ದ ಸರ್‌ಜಾನ್ ಮಾರ್ಶಲ್ ಅವರು ಅಲ್ಲಿನ ಅಗೆತಗಳ ಸಂಬಂಧದಲ್ಲಿ ವರ್ತಮಾನ ಪತ್ರಿಕೆಗಳಲ್ಲಿ ಪ್ರಕಟಿಸಲು ಕೊಟ್ಟಿದ್ದ ಹೇಳಿಕೆಯಲ್ಲಿ ಮತ್ತು ತರುವಾಯ ಅವರು ಬರೆದು ಪ್ರಕಟಿ ಸಿದ ಪುಸ್ತಕದಲ್ಲಿ ವ್ಯಕ್ತಗೊಳಿಸಿದ ಅಭಿಪ್ರಾಯಗಳನ್ನು ಉದಹರಿಸಿ ಅವುಗಳನ್ನು ಕೂಲಂಕಷವಾಗಿ ವಿಮರ್ಶಿಸುವುದು ಉಚಿತವೂ ಆವಶ್ಯಕವೂ ಆಗಿದೆ.

ಮೊಹೆಂಜೋದಳೋದ ಅಗೆತಗಳು ಪ್ರಾರಂಭವಾಗಿ ಮೇಲಿನ ಸ್ತರದಲ್ಲಿನ ಪಟ್ಟಣಗಳ ಅವಶೇಷಗಳು ಬೆಳಕಿಗೆ ಬಂದೊಡನೆ ಅಲ್ಲಿನ ಮಾರ್ಗಗಳಲ್ಲಿ ಅಸ್ತವ್ಯಸ್ತ ವಾಗಿ ಬಿದ್ದಿದ್ದ ಸಾಧಾರಣ ಮೂವತ್ತು ಜನರ ಅಸ್ಥಿಪಂಜರಗಳು ಕಂಡು ಬಂದುವು. ಅಲ್ಲಿನ ಅಗೆತಗಳು ಒಂದೇ ಸ್ತರದಲ್ಲಿ ಕೊನೆಗೊಳ್ಳಬಹುದೆಂದು ಭಾವಿಸಿದ್ದ ಬ್ರಿಟಿಷ್ ವಿದ್ವಾಂಸರು ಆ ಅಸ್ಥಿಪಂಜರಗಳು ಹಾಗೆ ಅಸ್ತವ್ಯಸ್ತವಾಗಿ ಬಿದ್ದಿರುವುದೊಂದನ್ನೇ ಆಧಾರವನ್ನಾಗಿ ಮಾಡಿ "ಶಕಪೂರ್ವ ೧೫೦೦ ವರ್ಷಗಳ ಸುಮಾರಿಗೆ ಭಾರತವರ್ಷ ದೊಳಗೆ ನುಗ್ಗಿದ ಆರ್ಯಜನರ ಪಡೆಗಳು ಆಕಸ್ಮಿಕವಾಗಿ ಸಿಂಧೂ ಪಟ್ಟಣಗಳ ಮೇಲೆ ದಾಳಿ ಮಾಡಿ ಅಲ್ಲಿನ ಶಸ್ತ್ರರಹಿತ ಜನರನ್ನು ಕ್ರೂರ ರೀತಿಯಿಂದ ಕೊಲೆ ಗೈದು ಸಿಂಧೂ ಜನರು ಬಹಳ ಚೆಲೋ ರೀತಿಯಿಂದ ಕಟ್ಟಿದ ಪಟ್ಟಣಗಳನ್ನು ಕೆಡವಿ ಅವರ ಸಂಸ್ಕೃತಿಯನ್ನು ಕುರುಹು ಕೂಡ ಉಳಿಯದಂತೆ ಅಳಿಸಿ ಬಿಟ್ಟರು" ಎಂಬು ದಾಗಿ ಏಕ ಕಂಠದಿಂದ ಘೋಷಿಸಿದರು. ಮತ್ತು ಜಗತ್ತಿನಾದ್ಯಂತ ಆ ಬಗೆಯ ಪ್ರಚಾರವನ್ನು ಮಾಡಿದರು. ಹಾಗಾಗಿ ಜನರು ಇಂದಿಗೂ ಆ ಅಸತ್ಯ ಪ್ರಚಾರವನ್ನು ಸತ್ಯವೆಂದೇ ನಂಬುವಂತಾಗಿದೆ.

ಸರ್ ಮಾರ್ಶಲರ ತರುವಾಯ ಅವರ ಸ್ಥಾನಕ್ಕೆ ಬಂದಿದ್ದ ಸರ್ ಮಾರ್ಟಿಮರ್ ವ್ಹೀಲರ್ ಎಂಬವರಾದರೋ "ವೈದಿಕ ದೇವನಾದ ಇಂದ್ರನನ್ನೂ ಆವನ ಆರ್ಯರ ಪಡೆಗಳನ್ನೂ ಸಿಂಧೂಜನರ ಹತ್ಯಾಕಾಂಡದ ಮತ್ತು ಸಿಂಧೂ ಸಂಸ್ಕೃತಿಯನ್ನು ನಾಶಗೊಳಿಸಿದ ಅಪರಾಧದಲ್ಲಿ ಆರೋಪಿಗಳೆಂದು ನಿರ್ಣಯಿಸಿದ್ದಾರೆ.

ಆದರೆ ತರುವಾಯ ಅಲ್ಲಿನ ಅಗೆತಗಳ ಕಾರ್ಯವು ಮುಂದುವರಿದು ಆಳಕ್ಕೆ ಇಳಿದಂತೆ ಒಂದು ಪಟ್ಟಣದ ಅವಶೇಷದ ಅಡಿಯ ಸ್ತರದಲ್ಲಿ ಇನ್ನೊಂದು ಪಟ್ಟಣದ ಅವಶೇಷದಂತೆ ಏಳು ಸ್ತರಗಳಲ್ಲಿ ಏಳು ಪಟ್ಟಣಗಳ ಅವಶೇಷಗಳು ಬೆಳಕಿಗೆ ಬಂದುವು. ಏಳನೆಯ ಸ್ತರದ ಅಡಿಯಲ್ಲಿ ಅಗೆಯ ತೊಡಗಿದಾಗ ಒಂದೇ ಸವನೆ ನೀರು ಒಸರ ತೊಡಗಿದುದರಿಂದ ಅಗೆತದ ಕೆಲಸವನ್ನು ಮುಂದುವರಿಸಲಾಗದೇ ಅಲ್ಲಿಗೇನೇ ನಿಲ್ಲಿಸಬೇಕಾಯಿತು.

ಹಾಗೆ ಬೆಳಕಿಗೆ ಬಂದ ಆ ಎಲ್ಲ ಸ್ತರಗಳ ಸರಿಯಾದ ಪರಿಶೀಲನ ಮಾಡಿದ ತರುವಾಯ ಆ ಎಲ್ಲ ಪಟ್ಟಣಗಳು ಸಮೀಪದ ನದಿಯಲ್ಲಿ ಏರಿದ ನೆರೆಯ ನೀರಿನಲ್ಲಿ ಮುಳುಗಿ ಮತ್ತು ನೆರೆಯ ನೀರಿನೊಂದಿಗೆ ಹರಿದು ಬಂದ ಕಲ್ಲು, ಮಣ್ಣು, ಮಳಲು ಮುಂತಾದವುಗಳ ಅಡಿಗೆ ಬಿದ್ದು ನಾಶ ಹೊಂದಿದ್ದುವೆಂದು ಮತ್ತು ಒಂದು ಪಟ್ಟಣವು ನಾಶವಾದ ಸಾಧಾರಣ ಮೂರು ಮೂರು ಶತಮಾನಗಳ ತರುವಾಯ ಅದೇ ಸ್ಥಳದಲ್ಲಿ ಮರಳಿ ಮರಳಿ ಹೊಸ ಪಟ್ಟಣಗಳನ್ನು ಕಟ್ಟಿದುದರಿಂದ ಅಲ್ಲಿ ಅಷ್ಟು ಸ್ತರಗಳಾಗಿದ್ದುವೆಂದು ಸಿದ್ಧವಾಯಿತು. ಹಾಗಾದರೂ ಬ್ರಿಟಿಷ್ ವಿದ್ವಾಂಸರು ತಮ್ಮ ಅಭಿಪ್ರಾಯವನ್ನು ಪರಿವರ್ತಿಸದೇ ಮೊದಲಿನ ಹೇಳಿಕೆಗಳಿಗೇನೇ ಅಂಟಿಕೊಂಡಿದ್ದಾರೆ.

ಕೆಲವು ವರ್ಷಗಳು ಕಳೆದ ತರುವಾಯ ಅಂದರೆ ಶಕವರ್ಷ ೧೮೮೬ರಲ್ಲಿ (1964ನೆಯ ಇಸವಿ) ಅಮೇರಿಕದ ಕೆಲವು ಅನ್ವೇಷಕರು ಮೊಹೆಂಜೋದಡೋದ ಬೇರೊಂದು ದಿನ್ನೆಯನ್ನು ಅಗೆದಾಗ ಅವರಿಗೆ ಭೂಪೃಷ್ಠದಿಂದ ಎರಡು–ಮೂರು ಅಡಿಗಳ ಆಳದಲ್ಲಿಯೇ ಒಂದು ಸಂಕೀರ್ಣವಾದ ಓಣಿಯಲ್ಲಿ ಮನುಷ್ಯರ ಐದು ಅಸ್ಥಿಪಂಜರಗಳು ಮನೆ ಕುಸಿದು ಬಿದ್ದ ಇಟ್ಟಿಗೆ, ಮಡಕೆ ಚೂರು, ಬೂದಿ ಮೊದಲಾದುವುಗಳ ರಾಶಿಯಲ್ಲಿ ದೊರಕಿದುವು. ಆ ಕುರಿತು ಜಾರ್ಜ್ ಎಫ್. ಡೇಲ್ ಅವರು "ಅಮೇರಿಕನ್ ರಿವ್ಯೂ" ಎಂಬ ತ್ರೈಮಾಸಿಕ ಪತ್ರಿಕೆಯಲ್ಲಿ ಪ್ರಕಟಿಸಿದ ಲೇಖನದಲ್ಲಿ ಮುಂದಿನ ಅಂಶವಿದೆ- "ಆ ಮೃತರ ಕಾಲವು ತರುವಾಯದ್ದೆಂಬುದು ಸ್ಪಷ್ಟವಿದ್ದರೂ ಅದು ಇನ್ನೂ ಸರಿಯಾಗಿ ನಿರ್ಧರಿಸಲ್ಪಟ್ಟಿಲ್ಲ. ಆ ಮೃತರು ಕಟ್ಟಳೆಯ ಪ್ರಕಾರ ಹೂಳಲ್ಪಡದಿರುವುದರಿಂದ ಅವರು ಯಾವುದೋ ಒಂದೇ ಬಗೆಯ ಅಪಘಾತಕ್ಕೆ ಬಲಿಯಾಗಿದ್ದರೆಂದು ಹೇಳಬೇಕಾಗುತ್ತದೆ. ಹೇಗಿದ್ದರೂ ಮೊದಲಿನ ಶೋಧಗಳಾಗಲೀ ನಮ್ಮ ಸ್ವಂತದ ಶೋಧಗಳಾಗಲೀ ಆರ್ಯಜನರ ಆಕ್ರಮಣದ ಕಲ್ಪನೆಯನ್ನು ಸಮರ್ಥಿಸುತ್ತವೆಂದು ನಂಬಲು ನಾವು ಒಡಂಬಡುವುದಿಲ್ಲ. ಏಕೆಂದರೆ ಆರ್ಯ

ಜನರು ಯಾವ ಕಾಲದಲ್ಲಿ ಸಿಂಧೂ ಕಣಿವೆಯನ್ನು ಪ್ರವೇಶಿಸಿದ್ದರೆಂಬುದರ ಸರಿಯಾದ ಅರಿವು ಯಾವನಿಗೂ ಇಲ್ಲ. ಮತ್ತು ಆರ್ಯಜನರನ್ನು ಪುರಾತತ್ವಕ್ಕನುಸಾರವಾಗಿ ಗುರುತಿಸಿದುದೂ ಇಲ್ಲ. ಆಕ್ರಮಣದ ಕಲ್ಪನೆಯು ನೆರವೇರಿಸಿದ ಒಂದು ಉದ್ದೇಶವೆಂದರೆ ಹಳಪ್ಪಾ ಸಂಸ್ಕೃತಿಯು ಹೇಗೆ ನಾಶವಾಯಿತು? ಎಂಬುದಕ್ಕೆ ಒಂದು ವಿವರಣೆ ನೀಡಿದುದು ಮಾತ್ರವಾಗಿದೆ ಆದುದರಿಂದ ಮೊಹೆಂಜೋದಳೋದ ನಾಶವು ಬೇರೆ ಕಾರಣಗಳಿಂದಾಯಿತು ಎಂಬ ಪ್ರಮಾಣವನ್ನು ನಾವು ಕಂಡುಕೊಳ್ಳಬಲ್ಲೆವಾದರೆ ಆರ್ಯಜನರ ಆಕ್ರಮಣದ ಕಲ್ಪನೆಯು ಮುಳುಗಿ ಪಾತಾಳ ಕಾಣುವುದು. ಅಂಥ ಪ್ರಮಾಣವು ಈಗ ವಿನಾಶಕಾರೀ ನೆರೆಗಳ ಕುರುಹುಗಳ ರೂಪದಿಂದ ಮುಂದೆ ಬಂದಿದೆ. ಮತ್ತು ಅದು ತೀಕ್ಷ್ಣವಾದ ಪರಿಶೀಲನೆಗೆ ಒಳಗಾಗಿದೆ.[1]

ಆದರೆ ಸಿಂಧೂ ಕಣಿವೆಯೊಳಗಿನ ಪ್ರಾಚೀನ ಪಟ್ಟಣಗಳು ನೆರೆಗಳಿಂದಾಗಿಯೇ ನಾಶವಾಗಿದ್ದುವೆಂಬುದನ್ನು ನಿರ್ಧರಿಸಲು ನಾವು ಅಮೇರಿಕೀ ವಿದ್ವಾಂಸರ ಪರಿಶೀಲನೆಯ ಫಲವನ್ನು ಕಾಯಬೇಕೆಂದೇನೂ ಇಲ್ಲ. ಏಕೆಂದರೆ ನೆರೆಗಳು ಸಿಂಧೂ ಕಣಿವೆಯಲ್ಲಿ ನಡೆಸಿದ ಹಾವಳಿಯ ಸ್ಪಷ್ಟ ಕುರುಹುಗಳು ಅಲ್ಲಿಯ ಪಟ್ಟಣಗಳ ಪ್ರತಿಯೊಂದು ಸ್ತರದಲ್ಲಿಯೂ ಕಂಡು ಬರುವಂಥವುಗಳಾಗಿವೆ. ಮತ್ತು ಅಂಥ ಕುರುಹು

---

1 In 1964 the poorly preserved remains of five more bodies were unearthed in the upper level of the excavations, only two or three feet below the surface of the mound. They lay in a narrow alley amid an accumulation of collapsed brick broken pottery, and ash. The period to which these dead belong is evidently late, but it has not yet precisely determined. The fact that they had not had any normal kind of burial, suggests that all the five were victims of some common disaster. Nonetheless, we are reluctant to believe that either the earlier discoveries or our own support the hypothesis of an Aryan invasion. For one thing, no one has any exact knowledge of the date when Aryans first entered the Indus Valley area; they have not yet been identified archaelogically. For another, the sole purpose served by the invasion hypothesis is to explain the demise of Harappan civilization. If evidence can be found that Mohenjodaro declined for other reasons, the invasion hypothesis goes by the board. Such evidence in the form of traces of catastrophical floods is now being subjected to close scrutiny.

American Review; October 1966. Decline of the Harappans. by George F. Dale.

ಗಳಿಂದಾಗಿ ಬ್ರಿಟಿಷ್ ವಿದ್ವಾಂಸರು ಮುಂದೆ ತಂದಿದ್ದ ಆರ್ಯ ಜನರ ಆಕ್ರಮಣದ ಕಲ್ಪನೆಯ ಏಕಮಾತ್ರ ಉದ್ದೇಶವು ಸಿಂಧೂ ಪಟ್ಟಣಗಳ ಮೂಲ ನಿವಾಸಿಗಳು ಆರ್ಯಜನರಾಗಿರಲಿಲ್ಲ ಮತ್ತು ಆ ಕಾರಣದಿಂದ ಸಿಂಧೂ ಸಂಸ್ಕೃತಿಯು ಆರ್ಯಜನರದ್ದಲ್ಲವೆಂದು ಸಾಧಿಸುವುದಾಗಿದ್ದಿತೆಂದು ಸ್ಪಷ್ಟವಾಗಿ ಸಿದ್ಧವಾಗುತ್ತದೆ.

ಬ್ರಿಟಿಷರು ಭಾರತ ವರ್ಷದ ಮೇಲಿನ ತಮ್ಮ ಅಧಿಕಾರವನ್ನು ಭಾರತೀಯರಿಗೆ ವಹಿಸಿಕೊಟ್ಟು ತೆರಳಿದ ತರುವಾಯ ಸ್ವತಂತ್ರ ಭಾರತ ಸರಕಾರವು ಭಾರತೀಯ ಪುರಾತತ್ವ ವಿಭಾಗದ ಮೂಲಕ ಉತ್ತರ ಪ್ರದೇಶದ ಆಲಮ್‌ಗೀರ್ ಪುರದಿಂದ ಮೊದಲುಗೊಂಡು, ಪೂರ್ವಪಂಜಾಬದ, ರಾಜಸ್ಥಾನದ, ಗುಜರಾತದ ಮತ್ತು ಸೌರಾಷ್ಟ್ರದ ಸಾಧಾರಣ ನೂರು ಸನ್ನಿವೇಶಗಳಲ್ಲಿ ಅಗೆತಗಳನ್ನು ನಡೆಸಿದೆ. ಮತ್ತು ಆ ಎಲ್ಲ ಸನ್ನಿವೇಶಗಳಲ್ಲಿ ಒಂದೇ ಬಗೆಯ ಅಂದರೆ ಹಳಪ್ಪಾ ಮತ್ತು ಮೊಹೆಂಜೋದಳೋ ಎಂಬಲ್ಲಿ ಬೆಳಕಿಗೆ ಬಂದಂಥ ಕುರುಹುಗಳು ಕಂಡು ಬಂದಿವೆ. ಎಲ್ಲೆಲ್ಲಿಯೂ ಅವೇ ಮಾದರಿಯ ಪಟ್ಟಣಗಳು, ಕಟ್ಟಡಗಳು, ಒಡವೆಗಳು, ಗಡಿಗೆಗಳು ಹಾಲುಗಲ್ಲಿನ ಬಿಲ್ಲೆಗಳು ಮತ್ತು ಇತರ ವಸ್ತುಗಳು ಕಂಡು ಬಂದಿವೆ. ಮತ್ತು ಅವುಗಳು ಶಕಪೂರ್ವ ಎರಡು ಸಾವಿರದೈನೂರು ವರ್ಷಗಳಿಂದ ಶಕಪೂರ್ವ ಒಂದು ಸಾವಿರ ವರ್ಷಗಳ ತನಕದವುಗಳೆಂದು ಸಿದ್ಧವಾಗಿವೆ. ಮತ್ತು ಆ ಪಟ್ಟಣಗಳು ಕೂಡ ನೆರೆಯ ಹಾವಳಿಯಿಂದಾಗಿಯೇ ನಾಶವಾಗಿದ್ದುವೆಂದು ಗೊತ್ತಾಗಿದೆ. ಹಾಗೂ ಆ ಅಗೆತಗಳಿಂದಾಗಿ ಸಿಂಧೂಸಂಸ್ಕೃತಿಯೆಂದು ಕರೆಯಲಾದ ಆ ಸಂಸ್ಕೃತಿಯು ಸಿಂಧೂ ಕಣಿವೆಯೊಳಗೆನೇ ಸೀಮಿತವಾಗಿರದೇ ಸಮಗ್ರ ಪಶ್ಚಿಮ ಭಾರತದಲ್ಲಿ ಪಸರಿಸಿದ್ದಿತೆಂದು ಮತ್ತು ಆ ಸಂಸ್ಕೃತಿಯು ಬ್ರಿಟಿಷ್ ವಿದ್ವಾಂಸರು ಪ್ರಚಾರಮಾಡಿದಂತೆ ಹಳಪ್ಪಾ ಮತ್ತು ಮೊಹೆಂಜೋದಳೋ ಪಟ್ಟಣಗಳ ನಾಶದೊಂದಿಗೆ ನಾಶ ಹೊಂದಿರಲಿಲ್ಲವೆಂತಲೂ- ಅದು ಮೊದಲಿನಂತೆಯೇ ಬೇರೆ ಬೇರೆ ಪ್ರದೇಶಗಳಲ್ಲಿ ಮುಂದುವರಿದಿದ್ದಿತೆಂತಲೂ ಸಿದ್ಧವಾಗಿದೆ. ಮಾತ್ರವಲ್ಲ ಬ್ರಿಟಿಷ್ ವಿದ್ವಾಂಸರು ಹಳಪ್ಪಾ ಮತ್ತು ಮೊಹೆಂಜೋದಳೋ ಪಟ್ಟಣಗಳಲ್ಲಿ ಕಂಡು ಬಂದಿದ್ದರೂ ಕಂಡು ಬಂದಿಲ್ಲವೆಂದು ಹೇಳಿ ಮರೆಮಾಜಿದ ವೈದಿಕ ಆರ್ಯರ ಮುಖ್ಯ ಕುರುಹುಗಳಾದ ಯಜ್ಞಚಿತಿಗಳು, ಕುದುರೆಯ ಅವಶೇಷಗಳು, ಮತ್ತು ಅಕ್ಕಿ ಮೊದಲಾದುವುಗಳು ಬೆಳಕಿಗೆ ಬಂದಿವೆ. ಹಾಗಾಗಿ ಈಗ ಸಿಂಧೂ ಸಂಸ್ಕೃತಿಯು ಆರ್ಯಜನರಿಗೆ ಸೇರಿದುದೆಂಬುದರಲ್ಲಿ ಯಾವ ಸಂದೇಹವೂ ಉಳಿದಿಲ್ಲ. ಹಾಗಿದ್ದರೂ ಮೊಹೆಂಜೋದಳೋದ ಅಗೆತಗಳ ಸಂಬಂಧದಲ್ಲಿ ಸರ್ ಮಾರ್ಶಲರು ವ್ಯಕ್ತಗೊಳಿಸಿದ ಅಭಿಪ್ರಾಯಗಳನ್ನು ವಿಮರ್ಶಿಸಲೇ ಬೇಕಾಗಿದೆ.

ಸರ್ ಮಾರ್ಶಲರ ಅಭಿಪ್ರಾಯಗಳನ್ನು– ೧. ಸಿಂಧೂ ಕಣಿವೆಯ ಅಗೆತಗಳಲ್ಲಿ ಬೆಳಕಿಗೆ ಬಂದಿದ್ದ ಪ್ರಾಚೀನ ಅವಶೇಷಗಳ ಸಂಬಂಧದಲ್ಲಿ ಅಧಿಕಾಂಶ ಬ್ರಿಟಿಷ್ ಮತ್ತು ಇತರ ಪಾಶ್ಚಾತ್ಯ ವಿದ್ವಾಂಸರ ಕಲ್ಪನೆಗಳೆಂದು ಮತ್ತು ೨. ಸಿಂಧೂ

ಸಂಸ್ಕೃತಿಯು ಏಕೆ ಆರ್ಯರದಲ್ಲವೆಂದು ಸಾಧಿಸಲು ಅವರು ಮುಂದೆ ತಂದಿರುವ ಆಕ್ಷೇಪಗಳೆಂದು ಎರಡು ವಿಭಾಗಗಳನ್ನಾಗಿ ಮಾಡಬಹುದು. ಏಕೆಂದರೆ ಆ ಅಭಿಪ್ರಾಯಗಳು ಸರ್ ಜಾನ್ ಮಾರ್ಶಲ್ ಅವರೊಬ್ಬರದೇ ಆಗಿರದೇ ಅಧಿಕಾಂಶ ಪಾಶ್ಚಾತ್ಯ ವಿದ್ವಾಂಸರದಾಗಿರುತ್ತವೆ. ಅವರಲ್ಲಿ ಅಮೇರಿಕದವರೂ ಸೇರಿದ್ದಾರೆ. ಸರ್ ಜಾನ್ ಮಾರ್ಶಲ್ ಅವರು ಬರೆದ "ಮೊಹೆಂಜೋದಳೋ ಮತ್ತು ಸಿಂಧೂ ಕಣಿವೆಯ ಸಂಸ್ಕೃತಿ" ಎಂಬ ಇಂಗ್ಲೀಷ್ ಪುಸ್ತಕದ ಮೊದಲನೆಯ ಭಾಗದ ನಾಲ್ವತ್ತೆಂಟನೆಯ ಪುಟದಿಂದ ಐವತ್ತನಾಲ್ಕನೆಯ ಪುಟದ ತನಕ ಏಳು ಪುಟಗಳಲ್ಲಿ ವ್ಯಕ್ತಗೊಳಿಸಿದ ಕಲ್ಪನೆಗಳ ಸಾರಾಂಶವು–ಅವರ ಮಾತುಗಳಲ್ಲಿಯೇ ಮುಂದಿನಂತಿದೆ–

ಹಳಪ್ಪಾದಲ್ಲಾಗಲೀ ಮೊಹೆಂಜೋದಳೋದಲ್ಲಾಗಲೀ ಸಿಂಧೂ ಜನರ ಧಾರ್ಮಿಕ ವಿಚಾರಗಳಿಗೆ ಸಂಬಂಧಪಟ್ಟ ಕುರುಹುಗಳು ಹೆಚ್ಚು ದೊರೆತಿಲ್ಲ. ಮತ್ತು ಅಲ್ಲಿ ಕಂಡು ಬಂದ ಕಟ್ಟಡಗಳೊಳಗೆ ಕೂಡ ಅಲ್ಲಿನ ಜನರ ಆರಾಧನಾ ಕ್ರಮವು ಯಾವ ಬಗೆಯದಾಗಿದ್ದಿತೆಂದು ಸೂಚಿಸುವಂಥ ಕುರುಹುಗಳಾವುವೂ ದೊರಕಿಲ್ಲ. ಅಲ್ಲಿನ ಜನರ ಧರ್ಮವು ಯಾವುದಿದ್ದಿತೆಂದು ಶ್ರಮಪೂರ್ವಕ ಕಂಡು ಹಿಡಿಯಲು ಸಾಧ್ಯವಾಗುವಂತೆ ಹೇರಳವಾಗಿ ದೊರಕಿರುವುದೆಂದರೆ ಹಾಲುಗಲ್ಲಿನ ಮೇಲೆ ಕೆತ್ತಿದ ಮುದ್ರೆಗಳು, ಮುದ್ರೆಗಳಂತೆ ಉಪಯೋಗಿಸಬಹುದಾದ ಆವೆ ಮಣ್ಣಿನ ಮತ್ತು ತಾಮ್ರದ ಬಿಲ್ಲೆಗಳು, ಸ್ತ್ರೀಯರ ಮತ್ತು ಪುರುಷರ ಅನೇಕ ಬೊಂಬೆಗಳು ಅಥವಾ ವಿಗ್ರಹಗಳು ಮಾತ್ರವಾಗಿವೆ.

ಆ ಸಾಮಾಗ್ರಿಗಳು ಸ್ವಲ್ಪವೇ ಆದರೂ ಭಾರತೀಯ ಧರ್ಮದ ಅಧ್ಯಯನ ನಡಿಸುವ ವಿದ್ಯಾರ್ಥಿಗಳಿಗೆ ಅವುಗಳು ಅತ್ಯಂತ ಮೌಲಿಕವಾಗಿವೆ. ಏಕೆಂದರೆ ಆರ್ಯ ಪೂರ್ವ ಕಾಲದ ಸಿಂಧೂ ಜನರ ಧಾರ್ಮಿಕ ವಿಶ್ವಾಸಗಳ ಸಂಬಂಧದಲ್ಲಿ ನಮ್ಮ ಬಳಿ ಯಲ್ಲಿರುವ ತತ್ಕಾಲೀನ ಪ್ರಮಾಣಗಳು ಅವು ಮಾತ್ರವಾಗಿವೆ. ಅಂಥ ವಿಶ್ವಾಸಗಳಿಗೆ ಸಂಬಂಧಿಸಿದ ವಿಸ್ತೃತವಾದ ವಿವರವು ಅಂತಿಮ ವೈದಿಕ ಸಾಹಿತ್ಯದಲ್ಲಿ ಮತ್ತು ವೈದಿ ಕೋತ್ತರ ಸಾಹಿತ್ಯದಲ್ಲಿದೆಯೆಂಬುದು ಸತ್ಯವಾದರೂ ಅದರಲ್ಲಿ ಆರ್ಯಜನರ ದಾವುದು ಆರ್ಯೇತರ ಜನರದಾವುದು- ಎಂಬುದನ್ನು ವಿವೇಚಿಸಿ ತಿಳಿದು ಕೊಳ್ಳಲು ಸಾಧ್ಯವಾದಾಗ ಆ ವಿಶಾಲವಾದ ಜ್ಞಾನದ ನಿಧಿಯು ಅಮೂಲ್ಯ ವಾದುದೆಂದು ಸಿದ್ಧವಾಗಬಹುದು.

ಆ ಸಾಮಾಗ್ರಿಗಳಲ್ಲಿ ಮೊತ್ತ ಮೊದಲು ನಮ್ಮ ಲಕ್ಷ್ಯವನ್ನು ಸೆಳೆಯುವ ವಸ್ತುಗಳೆಂದರೆ ದೊಡ್ಡ ಸಂಖ್ಯೆಯಲ್ಲಿ ದೊರೆತಿರುವ ಸ್ತ್ರೀ ವಿಗ್ರಹಗಳಾಗಿವೆ. ಅಂಥ ವಿಗ್ರಹಗಳು ಬಲೂಚೀ ಸ್ಥಾನದಲ್ಲಿಯೂ ದೊರೆತಿವೆ. ಅವುಗಳಲ್ಲಿ ಕೆಲವು ಆಟದ ಗೊಂಬೆಗಳಾಗಿರಬಹುದಾದರೂ ಹೆಚ್ಚಿನವುಗಳು ನಾನಾ ಆಭರಣಗಳಿಂದ ಅಲಂಕರಿಸ ಲ್ಪಟ್ಟ ನಗ್ನ ವಿಗ್ರಹಗಳಾಗಿವೆ.

ಸಿಂಧೂ ಕಣಿವೆಯಲ್ಲಿ ದೊರಕಿದಂಥ ವಿಗ್ರಹಗಳು ಭಾರತವರ್ಷದ ಹೊರಗೆ

ಪಾರಸದಿಂದ ಮೊದಲುಗೊಂಡು ಪಶ್ಚಿಮದಲ್ಲಿ ಗ್ರೀಸ್ ದೇಶದ ತನಕವೂ ಕಿರಿಯ ಆಸ್ಯದಿಂದ ಮೊದಲುಗೊಂಡು ಈಜಿಪ್ತದ ತನಕವೂ ವಿಸ್ತರಿಸಿರುವ ಸಕಲ ದೇಶಗಳಲ್ಲಿ ದೊರಕಿವೆ. ಮತ್ತು ಆ ದೇಶಗಳಲ್ಲಿ ಹಿಂದೆ ಮಾತೃದೇವಿಯ ಆರಾಧನೆಯು ಪ್ರಚಲಿತವಿದ್ದಿತೆಂದು ತಿಳಿದು ಬಂದಿದೆ. ಅಲ್ಲಿನ ವಿಗ್ರಹಗಳಲ್ಲಿ ಮತ್ತು ಸಿಂಧೂ ಕಣಿವೆಯಲ್ಲಿ ದೊರೆತ ವಿಗ್ರಹಗಳಲ್ಲಿರುವ ಸಾಮ್ಯವನ್ನು ಕಂಡರೆ ಸಿಂಧೂ ಜನರಲ್ಲಿ ಕೂಡ ಮಾತೃದೇವಿಯ ಆರಾಧನೆಯು ಪ್ರಚಲಿತವಿದ್ದಿತೆಂದು ಹೇಳಬೇಕಾಗುತ್ತದೆ. ಅಷ್ಟು ಮಾತ್ರವಲ್ಲದೇ ಪ್ರಾಚೀನ ಕಾಲದಿಂದಲೂ ಶಕ್ತಿ ಪೂಜೆಯು ಭಾರತದಲ್ಲಿ ರೂಢಮೂಲವಾದಷ್ಟು ಆಳವಾಗಿ ಬೇರೆಲ್ಲಿಯೂ ಆಗಿಲ್ಲ. ಭಾರತ ವರ್ಷದಲ್ಲಿ ಶಕ್ತಿಯ ದೇವಾಲಯವಿಲ್ಲದ ಒಂದೇ ಒಂದು ಪಟ್ಟಣವಾಗಲೀ ಹಳ್ಳಿಯಾಗಲೀ ಇಲ್ಲ. ಹಿಂಧೂ ಧರ್ಮದಲ್ಲಿ ಇನ್ನೂ ಪೂರ್ಣವಿಲಯನ ಹೊಂದದ ಮೂಲ ನಿವಾಸಿಗಳಲ್ಲಿಯೇ ಮಾತೃದೇವಿಯ ಆರಾಧನೆಯು ಅತ್ಯಧಿಕ ಪ್ರಚಲಿತವಿದೆ, ವಾಸ್ತವವಾಗಿ ಆರ್ಯಜನರಲ್ಲಿ ದೇವಿಯು ಅಂಥ ಪ್ರಧಾನ ಸ್ಥಾನವನ್ನು ಪಡೆದ ಉದಾಹರಣೆ ಇಲ್ಲ. ವೈದಿಕ ಪುರಾಕಥೆಗಳಲ್ಲಿ ಪುರುಷ ದೇವನ ಪಾತ್ರವು ಪ್ರಧಾನವಾಗಿದ್ದು ಸ್ತ್ರೀ ದೇವಿಯ ಪಾತ್ರವು ಗೌಣವಾಗಿದೆ. ಮತ್ತು ದೇವಿಯರು ಏನಾದರೂ ಮಹತ್ವವನ್ನು ಗಳಿಸಿದ್ದಾರಾದರೆ ಅದು ಪುರುಷ ದೇವರ ಪತ್ನಿಯರಾಗಿದ್ದುದರಿಂದಲೇ ಗಳಿಸಿದ್ದಾಗಿದೆ· ಋಗ್ವೇದದಲ್ಲಿ ಪೃಥ್ವಿಯು ದೇವೀ ಪದವನ್ನು ಪಡೆದಿದ್ದಾಳಾದರೂ ಆವಳು ಮೂಲ ನಿವಾಸಿಗಳ ಮಾತೃ ದೇವಿಯಿಂದ ಸಂಪೂರ್ಣ ಭಿನ್ನಳಾಗಿದ್ದಾಳೆ. ಮಾತ್ರವಲ್ಲ ಮೂಲ ನಿವಾಸಿಗಳ ಸಂಪರ್ಕದಿಂದಲೇ ಆರ್ಯಜನರಲ್ಲಿ ಪೃಥ್ವೀ ದೇವಿಯ ಆರಾಧನೆಯು ಮಾತೃದೇವಿಯ ಆರಾಧನೆಯನ್ನು ಹೋಲ ತೊಡಗಿತ್ತು.

ಸಿಂಧೂ ಕಣಿವೆಯಲ್ಲಿ ಮಾತೃ ದೇವಿಯು ಇದ್ದಂತೆಯೇ ಒಬ್ಬ ಪುರುಷ ದೇವನೂ ಇದ್ದಾನೆ. ಮತ್ತು ಅವನನ್ನು ಕಂಡೊಡನೆಯೇ ಆವನು ಇತಿಹಾಸ ಕಾಲದ ಶಿವನೆಂದು ಗೊತ್ತಾಗುತ್ತದೆ. ಚಿತ್ರದಲ್ಲಿ ಅವನಿಗೆ ಮೂರು ಮೋರೆಗಳಿವೆ, ಮತ್ತು ಅವನು ಪಾದಕ್ಕೆ ಪಾದವನ್ನುಹೊಂದಿಸಿ ಯೋಗಮುದ್ರೆಯಲ್ಲಿ ಕೂತಿದ್ದಾನೆ. ಹಾಗೂ ಕೈಗಳನ್ನು ಮೊಳಗಾಲಿನ ಗಂಟುಗಳಲ್ಲಿ ಇಟ್ಟಿದ್ದಾನೆ. ಕೈಯಮಣಿಗಂಟಿನಿಂದ ಭುಜದ ತನಕ ಬಳೆಗಳನ್ನು ತೊಟ್ಟಿದ್ದಾನೆ. ಎದೆಯ ಮೇಲೆ ತ್ರಿಕೋಣಾಕಾರದ ಪಟ್ಟಿಕೆ ಇದೆ. ನಡುವಿನಲ್ಲಿ ಎರಡೆಳೆಯ ಉಡುದಾರವಿದೆ. ನಡುವಿನ ಕೆಳಗಿನ ಶರೀರವು ನಗ್ನವಾಗಿದ್ದು ಶಿಶ್ನವು ಕಾಣಿಸುತ್ತದೆ. ಆದರೆ ಅದು ಶಿಶ್ನವಾಗಿರದೇ ಉಡುದಾರವನ್ನು ಗಂಟು ಹಾಕಿ ಬಿಟ್ಟ ಅದರ ತುದಿಗಳಾಗಿರಬಹುದಾಗಿದೆ· ತಲೆಯಲ್ಲಿ ಎರಡು ಕೋಂಬುಗಳಿರುವ ಕಿರೀಟವಿದೆ. ಮತ್ತು ಅವನ ಎರಡು ಪಾರ್ಶ್ವಗಳಲ್ಲಿಯೂ ನಾಲ್ಕು ಪ್ರಾಣಿಗಳಿವೆ. ಅಂದರೆ ಅವನ ಬಲ ಪಾರ್ಶ್ವದಲ್ಲಿ ಆನೆ ಮತ್ತು ಹುಲಿಯೂ, ಎಡಪಾರ್ಶ್ವದಲ್ಲಿ ಖಡ್ಗಮೃಗ ಮತ್ತು ಕೋಣವೂ ಇದೆ. ಮಂಚದ ಅಡಿಯಲ್ಲಿ ಹಿಂದೆ ತಿರುಗಿ ನೋಡುವ ಎರಡು ಜಿಂಕೆಗಳಿವೆ. ತಲೆಯ

ಮೇಲ್ಗಡೆಯಲ್ಲಿ ಬರಹದ ಸಾಲು ಇದೆ. ಮತ್ತು ಸಾಲಿನಲ್ಲಿ ಸ್ಥಳವಿಲ್ಲದುದರಿಂದ (ಮನುಷ್ಯರೂಪದ) ಒಂದು ಚಿಹ್ನೆಯು ಆನೆಯ ಮತ್ತು ಹುಲಿಯ ನಡುವೆ ಬರೆಯಲ್ಪಟ್ಟಿದೆ.

ಮುಂದೆ ಕೊಡಲಾಗುವ ವಿವರಗಳಿಂದ ಆವನ ಕೆಲವು ವೈಶಿಷ್ಟ್ಯಗಳು ಗೊತ್ತಾಗುವುವು. ಮೊದಲನೆಯದಾಗಿ ಆವನು ತ್ರಿಮುಖನಾಗಿದ್ದಾನೆ. ಮತ್ತು ಅವನನ್ನು ನೋಡಿದೊಡನೆಯೇ ಇತಿಹಾಸ ಕಾಲದಲ್ಲಿ ಶಿವನು ಏಕಮುಖನಾಗಿಯೂ ತ್ರಿಮುಖನಾಗಿಯೂ, ಚತುರ್ಮುಖನಾಗಿಯೂ, ಪಂಚಮುಖನಾಗಿಯೂ ಚಿತ್ರಿಸಲ್ಪಡುತಿದ್ದುದು ಮತ್ತು ಬ್ರಹ್ಮ, ವಿಷ್ಣು ಮಹೇಶ್ವರ ಎಂಬ ತ್ರಿಮೂರ್ತಿಗಳನ್ನು ತ್ರಿಮುಖ ಪ್ರತಿಮೆಯ ಮೂಲಕ ಸೂಚಿಸುತಿದ್ದುದು ನೆನಪಿಗೆ ಬರುತ್ತದೆ. ಬ್ರಹ್ಮ-ವಿಷ್ಣುಗಳು ಕೂಡಿರದೇ ಒಬ್ಬ ಶಿವನೇ ತ್ರಿಮುಖನಾಗಿರುವಂಥ ಒಂದು ಚೆಲೋ ಪ್ರತಿಮೆಯು ಆಬೂ ಬೆಟ್ಟದ ಸಮೀಪದಲ್ಲಿ ಹಾಳು ಬಿದ್ದಿರುವ ದೇವಾಲಯಗಳಲ್ಲಿದೆ. ಆದರೆ ಇತಿಹಾಸಕಾಲದಲ್ಲಿ ತ್ರಿಮುಖ ಶಿವನ ಪ್ರತಿಮೆಗಳು ವಿರಳವಾಗಿರುವುದರಿಂದ ತ್ರಿಮುಖ ಶಿವನ ಪ್ರತಿಮೆಯ ಪ್ರಭಾವದಿಂದಲೇ ತ್ರಿಮೂರ್ತಿಗಳ ಸಂಯುಕ್ತ ಪ್ರತಿಮೆಗಳು ನಿರ್ಮಿಸಲ್ಪಟ್ಟಿರಬಹುದಾಗಿದೆ. ಹಾಗಾಗಿ ಮೊಹೆಂಜೋದಳೋ ಮುದ್ರೆಯ ಮೇಲಿನ ತ್ರಿಮುಖ ಚಿತ್ರವು ಯಾವುವಾದರೂ ಮೂರು ದೇವತೆಗಳ ಸಂಯುಕ್ತ ರೂಪವಾಗಿರಲೊಲ್ಲದೇಕೆ? ಎಂಬ ಪ್ರಶ್ನೆಯು ಮುಂದೆ ಬರುತ್ತದೆ. ಹಾಗೆಂದೊಡನೆ ಅಷ್ಟು ಪ್ರಾಚೀನ ಕಾಲದಲ್ಲಿಯೇ ತ್ರಿಮೂರ್ತಿಗಳ ಏಕತ್ವದಲ್ಲಿ ಅಡಕವಾಗಿರುವ ಆಧ್ಯಾತ್ಮಿಕ ವಿಚಾರವನ್ನು ಪರ ಬ್ರಹ್ಮತತ್ವದೊಂದಿಗೆ ಮೇಳೈಸುವಂಥ ತತ್ವವು ರೂಪುಗೊಂಡಿದ್ದಿತೆಂದು ನನ್ನ ಅಭಿಪ್ರಾಯುವಲ್ಲ. ಪರಂತು ಆ ಚಿತ್ರವು ಶಿವನದಾಗಿರಲೀ ಬೇರೆ ದೇವನದಾಗಿರಲೀ ಆ ವಿಶಿಷ್ಟ ದೇವನ ಆರಾಧನಾ ಪದ್ಧತಿಯು ಇತರ ದೇವರ ಆರಾಧನಾ ಪದ್ಧತಿಯೊಂದಿಗೆ ಬೆರೆತು ಒಂದಾಗಿ ಅದನ್ನು ವ್ಯಕ್ತಗೊಳಿಸುವ ಸಲುವಾಗಿ ಒಂದು ಮುಖದ ಸ್ಥಾನದಲ್ಲಿ ಮೂರು ಮುಖಗಳಾಗಿರಬಹುದೇ ಎಂಬುದಾಗಿದೆ. ನನ್ನ ಆ ಊಹೆಯ ಸಮರ್ಥನೆಯಾಗಿ ಭಾರತವರ್ಷದ ತ್ರಿಮೂರ್ತಿಗಳ ಕಲ್ಪನೆಯು ಬಹಳ ಪ್ರಾಚೀನವಾಗಿರುವುದನ್ನೂ ಮೆಸಪೊಟೇಮಿಯಾದಲ್ಲಿ ಸಿನ್, ಶಮ್ಸ್ ಮತ್ತು ಇಶ್ತರ್ ಎಂಬ ಇಲ್ಲವೇ ಅನು, ಎನ್‌ಲಿಲ್ ಮತ್ತು ಇಯಾ ಎಂಬ ತ್ರಿಮೂರ್ತಿಗಳ ಕಲ್ಪನೆಯು ಇನ್ನೂ ಪ್ರಾಚೀನವಾಗಿರುವುದನ್ನೂ ನೆನಸಿಕೊಳ್ಳಬಹುದು. ಆದುದರಿಂದ ಮೊಹೆಂಜೋದಳೋದ ಈ ತ್ರಿಮುಖ ಚಿತ್ರದಲ್ಲಿಯೂ ಅಂಥ ಭಾವನೆಯು ಬೀಜರೂಪದಿಂದ ಅಡಗಿರಬಹುದಾಗಿದೆ.

ಈ ಆರ್ಯಪೂರ್ವಕಾಲದ ಚಿತ್ರದ ಎರಡನೆಯ ವೈಶಿಷ್ಟ್ಯವೆಂದರೆ ಆದರ ಯೋಗಮುದ್ರೆಯ ಆಸನವು ಅದನ್ನು ಇತಿಹಾಸಕಾಲದ ಶಿವನೊಂದಿಗೆ ಜೋಡಿಸುವುದಾಗಿದೆ. ಶೈವ ಮತದಂತೆಯೇ ಯೋಗಾಭ್ಯಾಸವು ಕೂಡ ಆರ್ಯಪೂರ್ವಕಾಲದ ಜನರಲ್ಲಿ ಪ್ರಚಲಿತವಿದ್ದುದಾಗಿದೆ. ಆ ಕಾರಣದಿಂದಲೇ ಮಹಾಕಾವ್ಯಗಳ ಕಾಲದ

ತನಕ ಆರ್ಯಜನರಲ್ಲಿ ಅವುಗಳು ಪ್ರಾಧಾನ್ಯ ಪಡೆದಿರಲಿಲ್ಲ. ಶಿವನು ಬರಿಯ ಯೋಗಿರಾಜಮಾತ್ರನಾಗಿರದೇ ಪಶುಪತಿಯೂ ಆಗಿದ್ದಾನೆ. ಅಂದರೆ ಪಶುಗಳ ಒಡೆಯನೂ ಆಗಿದ್ದಾನೆ. ಮತ್ತು ಅದನ್ನು ಸೂಚಿಸುವ ಸಲುವಾಗಿಯೇ ಆವನ ಸುತ್ತಲೂ ಹುಲಿ, ಆನೆ, ಖಡ್ಗಮೃಗ, ಕೋಣ ಮತ್ತು ಜಿಂಕೆಗಳನ್ನು ಗುಂಪು ಗೂಡಿಸಲಾಗಿದೆ.

ಮುದ್ರೆಯ ಮೇಲಿನ ಚಿತ್ರವನ್ನು ಶಿವನೊಂದಿಗೆ ಸಮೀಕರಿಸಲು ಆದರ ಇನ್ನೊಂದು ವೈಶಿಷ್ಟ್ಯವೆಂದರೆ – ಅದೊಂದು ಪ್ರಮಾಣವಾಗಲಾರದಾದರೂ–ಆ ಚಿತ್ರದ ತಲೆಯಲ್ಲಿ ಎರಡು ಕೊಂಬುಗಳಿರುವುದಾಗಿದೆ. ಅಂಥ ಕೊಂಬುಗಳು ಮೊಹೆಂಜೋದಳೋದಲ್ಲಿ ದೊರೆತ ಬೇರೆ ಮುದ್ರೆಗಳ ಮೇಲಿನ ಮನುಷ್ಯ ಚಿತ್ರಗಳ ತಲೆಗಳಲ್ಲಿಯೂ ಇವೆ. ಆದುದರಿಂದ ಆ ಕೊಂಬುಗಳಲ್ಲಿ ಯಾವುದೋ ವಿಶಿಷ್ಟ ಪೂಜ್ಯತೆ ಇದೆ ಎಂಬುದರಲ್ಲಿ ಸಂದೇಹವಿಲ್ಲ. ಕೆಲವು ಚಿತ್ರಗಳಲ್ಲಿ ಆ ಕೊಂಬುಗಳು ಪುರೋಹಿತನ ತಲೆಯಲ್ಲಿಯೂ ಇವೆ. ಅದರಂತೆಯೇ ಸುಮೇರದಲ್ಲಿ ಮತ್ತು ಬೆಬಿಲೋನದಲ್ಲಿ ದೇವತ್ವವನ್ನು ಸೂಚಿಸಲು ತಲೆಯಲ್ಲಿ ಕೊಂಬುಗಳನ್ನು ಧರಿಸುವ ಪರಿಪಾಟಿ ಇತ್ತು. ಅಲ್ಲಿನ ಅರಸರು ಮತ್ತು ಪುರೋಹಿತರು ತಲೆಯಲ್ಲಿ ಕೊಂಬು ಗಳನ್ನು ಧರಿಸುತಿದ್ದರು. ಏಕೆಂದರೆ ಅವರು ತಲೆಯಲ್ಲಿ ಕೊಂಬುಗಳಿರುವ ದೇವನ ಪ್ರತಿನಿಧಿಗಳೆಂದು ಎಣಿಸಲ್ಪಡುತಿದ್ದರು.

ಹಿಂದೆ ಉದಹರಿಸಿದ ಸರ್ ಮಾರ್ಶಲರ ಅಭಿಪ್ರಾಯಗಳು ಬರಿಯ ಊಹೆ ಗಳಾಗಿವೆಯಾದರೂ ಅವುಗಳು ಬಹಳ ಚೆಲೋದಾಗಿವೆ ಮಾತ್ರವಲ್ಲ ಅವರು ತನ್ನ ಕಲ್ಪನೆಗಳ ಸಮರ್ಥನಕ್ಕಾಗಿ ಮುಂದೆ ತಂದ ಬೆಬಿಲೋನದ ಮತ್ತು ಸುಮೇರದ ದೃಷ್ಟಾಂತಗಳು ಬಹುಮೂಲ್ಯವೂ ಪ್ರಯೋಜನಕಾರಿಗಳೂ ಆಗಿವೆಯೆಂದು ಹೇಳಬಹುದು. ಆದರೆ ಅವರ ಎಲ್ಲ ಕಲ್ಪನೆಗಳು ಪೂರ್ವಗೃಹೀತ ನಿರ್ಣಯದ ಸಾಧಕ ಗಳಾಗಿರುವುರಿಂದ ವಸ್ತುಸ್ಥಿತಿಗೆ ವಿರುದ್ಧವಾಗಿವೆ. ಹಾಗಾಗಿ ಅವುಗಳನ್ನು ನಿರಾ ಕರಿಸುವುದು ಬಹಳ ಸುಲಭವಾಗಿದೆ.

೧. ಅಂದರೆ–ಮೊದಲನೆಯದಾಗಿ ಸರ್ ಮಾರ್ಶಲರು ಸಿಂಧೂ ಸಂಸ್ಕೃತಿ ಯನ್ನು ಆರ್ಯಪೂರ್ವ ಸಂಸ್ಕೃತಿ ಎಂದು ಪದೇ ಪದೇ ಹೇಳುತ್ತಸಾಗಿದ್ದಾರೆಯೇ ಹೊರತು ಅದನ್ನು ಸಿದ್ಧಪಡಿಸಲು ಯಾವುದೊಂದು ದೃಢವಾದ ಪ್ರಮಾಣವನ್ನು ಉದಹರಿಸಿಲ್ಲ ಸಿಂಧೂ ಜನರಲ್ಲಿ ಲಿಪಿಯು ಪ್ರಚಲಿತವಿತ್ತು. ಆದುದರಿಂದ ಅವರು ತಮ್ಮ ಬಿಲ್ಲೆಗಳಲ್ಲಿ ಉಪಯೋಗಿಸಿದ ಲಿಪಿಯಿಂದಾಗಲೀ ಅದರಿಂದ ವಿಕಸಿತ ವಾದ ಬೇರೊಂದು ಲಿಪಿಯಿಂದಾಗಲೀ ಬರೆದಿಟ್ಟ ಪ್ರಮಾಣಗಳು ಇರಲೇ ಬೇಕಾಗಿ ದ್ದುವು. ಮತ್ತು ಅಂಥ ಪ್ರಮಾಣಗಳು ಇದ್ದುವೆಂಬುದರಲ್ಲಿಯೂ ಸಂದೇಹವಿಲ್ಲ. ಮತ್ತು ಅವುಗಳು ಈಗಲೂ ಇವೆಯೆಂಬುದರಲ್ಲಿಯೂ ಸಂದೇಹವಿಲ್ಲ. ಏಕೆಂದರೆ

ಸಿಂಧೂ ಕಣಿವೆಯಲ್ಲಿ ಅಗೆತಗಳು ಪ್ರಾರಂಭವಾದ ಹಾಗೆಯೇ ಬ್ರಿಟಿಷ್ ವಿದ್ವಾಂಸರು ಜಗತ್ತಿನಾದ್ಯಂತ ಪ್ರಚಾರ ಮಾಡಿದಂತೆ ಸಿಂಧೂ ಪಟ್ಟಣಗಳು ಮತ್ತು ಅವುಗಳೊಳಗಿನ ಜನರು ಆರ್ಯಜನರ ದಾಳಿಗೆ ತುತ್ತಾಗಿ ನಾಶಹೊಂದಿದ್ದರೆಂಬುದು ಬರಿಯ ಕಲ್ಪನೆಯಾಗಿದ್ದಿತೆಂದೂ, ಅಲ್ಲಿನ ಪಟ್ಟಣಗಳು ಸಮೀಪದ ನದಿಯಲ್ಲಿ ಬಂದ ನೆರೆಯ ನೀರಿನಲ್ಲಿ ಮುಳುಗಿ ಹಾಳಾಗಿದ್ದುವೆಂದೂ ಅಲ್ಲಿನ ಕಟ್ಟಡಗಳು ಕುಸಿದು ಬೀಳುವಾಗ ಅವುಗಳ ಅಡಿಗೆ ಬಿದ್ದು ಕೆಲವು ಜನರು ಸತ್ತಿದ್ದರಾದರೂ ಹೆಚ್ಚಿನ ಜನರು ಬದುಕಿ ಉಳಿದಿದ್ದರೆಂದೂ, ಆ ಸಂಸ್ಕೃತಿಯು ಹಳಪ್ಪಾ ಮತ್ತು ಮೊಹೆಂಜೋದಳೋ ಎಂಬ ಎರಡೇ ಸನ್ನಿವೇಶಗಳಲ್ಲಿ ಸೀಮಿತವಾಗಿರದೇ ಸಮಗ್ರ ಪಶ್ಚಿಮ ಭಾರತದಲ್ಲಿ ಹರಡಿದ್ದಿತೆಂದೂ ಆ ಎರಡು ಸನ್ನಿವೇಶಗಳ ಪಟ್ಟಣಗಳು ಹಾಳು ಬಿದ್ದ ತರುವಾಯವೂ ಆ ಸಂಸ್ಕೃತಿಯು ಯಾವ ಬಗೆಯ ಲೋಪವೂ ಇಲ್ಲದೇ ಮುಂದೆ ಸಾಗಿದ್ದಿತೆಂದೂ ಇತ್ತೀಚಿನ ಅಗೆತಗಳಿಂದ ಸಿದ್ಧವಾಗಿದೆ. ಮತ್ತು ಆ ಸಂಸ್ಕೃತಿಯ ಕೆಲವು ಅಂಶಗಳು ಈಗಲೂ ಉತ್ತರ ಭಾರತದ ಜನರ ಜೀವನದಲ್ಲಿ ಉಳಿದುಕೊಂಡಿವೆಯೆಂದೂ, ಹೆಚ್ಚಿನ ಅಂಶಗಳು ತರುವಾಯದ ಬೌದ್ಧಮತದ ಪ್ರಚಾರದಿಂದಾಗಿ ರೂಪಾಂತರವಾದುವೆಂದೂ ಗೊತ್ತಾಗಿದೆ.

೨ ಎರಡನೆಯದಾಗಿ ಸರ್ ಮಾರ್ಶಲರು ಸಿಂಧೂ ಜನರ ಧಾರ್ಮಿಕ ವಿಚಾರಗಳಿಗೆ ಸಂಬಂಧಿಸಿದ ವಿವರಗಳು ಆರ್ಯ ಜನರ ವೈದಿಕ ಹಾಗೂ ವೈದಿಕೋತ್ತರ ಸಾಹಿತ್ಯದಲ್ಲಿ ಇವೆಯೆಂದು ಹೇಳಿದ್ದಾರೆ. ಪರಂತು ಅವರು ಮಾದರಿಗಾಗಿಯಾದರೂ ಅದರೊಳಗಿನ ಅನಾರ್ಯರದೆಂದು ಹೇಳಬಹುದಾದ ಒಂದೇ ಒಂದು ಉದಾಹರಣೆಯನ್ನೂ ಕೊಟ್ಟಿಲ್ಲ. ಅಂಥ ಸಂದರ್ಭದಲ್ಲಿ ಸಹಜವಾಗಿಯೇ ಕೆಲವು ಪ್ರಶ್ನೆಗಳು ಉದ್ಭವಿಸುವುವು. ಅಂದರೆ–ಆರ್ಯೇತರ ಜನರ ಧಾರ್ಮಿಕ ವಿಚಾರಗಳಿಗೆ ಸಂಬಂಧಿಸಿದ ವಿವರಗಳು ಆರ್ಯೇತರ ಜನರ ಸಾಹಿತ್ಯದಲ್ಲಿರದೇ, ಆರ್ಯ ಜನರ ಸಾಹಿತ್ಯದಲ್ಲಿ ಮಾತ್ರ ಇರಲು ಕಾರಣವೇನು? ಅಥವಾ ಆರ್ಯರ ವೈದಿಕ ಸಾಹಿತ್ಯದಲ್ಲಿರುವ ಯಾವುದೊಂದು ಧಾರ್ಮಿಕ ವಿಚಾರವು ಮೂಲದಲ್ಲಿ ಆರ್ಯರದಾಗಿರಲಿಲ್ಲ; ಆರ್ಯೇತರ ಜನರದ್ದಾಗಿದ್ದಿತು–ಎಂಬುದನ್ನು ನಿರ್ಣಯಿಸುವುದು ಹೇಗೆ? ಹಾಗೆಂದು ನಿರ್ಣಯಿಸಲು ಆರ್ಯೇತರ ಜನರು ಬರೆದಿಟ್ಟ ಪ್ರಮಾಣಗಳೆಲ್ಲಿವೆ ? ನಾವು ಸರ್ ಜಾನ್ ಮಾರ್ಶಲರ ಬುಡವಿಲ್ಲದ ಕಲ್ಪನೆಗಳನ್ನೇ ಪ್ರಮಾಣಗಳೆಂದು ಸ್ವೀಕರಿಸಬೇಕೇ? ಸರ್ ಜಾನ್ ಮಾರ್ಶಲರ ಹೇಳಿಕೆಯಿಂದ – ಅಂದರೆ ಸಿಂಧೂ ಜನರ ಧಾರ್ಮಿಕ ವಿಚಾರಗಳಿಗೆ ಸಂಬಂಧಿಸಿದ ವಿವರಗಳು ಆರ್ಯಜನರ ವೈದಿಕ ಸಾಹಿತ್ಯದಲ್ಲಿ ಇವೆ- ಎಂದುದರ ಮೇಲಿಂದ ಸಿಂಧೂ ಸಂಸ್ಕೃತಿಯು ಆರ್ಯಜನರದ್ದೆಂದು ತಾನಾಗಿ ಸಿದ್ಧವಾಗುತ್ತದಲ್ಲವೇ ? ಸಿಂಧೂ ಸಂಸ್ಕೃತಿಯು ಆರ್ಯರದ್ದೆಂದು ಸಿದ್ಧಪಡಿಸಲು ಬೇರೆ ಪ್ರಮಾಣಗಳ ಆವಶ್ಯಕತೆ ಇದೆಯೇ?

ಪಕ್ಷಪಾತವಿಲ್ಲದೇ ವಿವರಿಸುವುದಾದರೆ ಆರ್ಯಜನರ ವೇದಗಳಲ್ಲಿ ಅಗ್ನಿಯ

ಮೂಲಕ ಜರಗಿಸಲಾಗುವ ಯಾಜ್ಞಿಕ ಧರ್ಮದ ಹೊರತು ಬೇರೆ ಯಾವ ಬಗೆಯ ಧರ್ಮದ ಆಚರಣೆಯೂ ಪ್ರತಿಪಾದಿಸಲ್ಪಟ್ಟಿಲ್ಲವೆನ್ನಬೇಕಾಗುವುದು. ಆರ್ಯ ಜನರು ತಮ್ಮ ಯಜ್ಞಗಳಲ್ಲಿ ಅಗ್ನಿಯ ಹಲವು ಹೆಸರುಗಳಿಗೆ ಒಪ್ಪುವಂಥ ಹಲವು ಪ್ರತಿಮಾರೂಪಗಳನ್ನೂ ಇಳಾ, ಭಾರತೀ, ಸರಸ್ವತೀ. ಉಷಾ. ಮೊದಲಾದ ಕೆಲವು ದೇವಿಯರ ಪ್ರತಿಮೆಗಳನ್ನೂ ಪಾರ್ವಣ ಶ್ರಾದ್ಧ ಮೊದಲಾದ ಪಿತೃಕಾರ್ಯಗಳಲ್ಲಿ ತಮ್ಮ ಪೂರ್ವ ಪಿತೃಗಳ ಪ್ರತೀಕಗಳನ್ನೂ ಯಜ್ಞವೇದಿಯಲ್ಲಿ ಹಾಸಿದ ದರ್ಭೆಗಳ ಮೇಲೆ ಇರಿಸುತಿದ್ದರು. ತರುವಾಯ ಅವುಗಳಿಗೆ ಆಹುತಿಗಳನ್ನು ಅರ್ಪಿಸುವಾಗ ಅವುಗಳನ್ನು ಮಂತ್ರಗಳಿಂದ ಸ್ತುತಿಸಿ ಆರಾಧಿಸುತಿದ್ದರು. ಅದರ ಹೊರತು ಬೇರೆ ಯಾವ ಬಗೆಯ ಆರಾಧನೆಯೂ ವೇದಗಳಲ್ಲಿ ಇಲ್ಲ. ಸರ್ ಜಾನ್ ಮಾರ್ಶಲರ ಅಭಿಪ್ರಾಯದಲ್ಲಿ - ವೇದಗಳೊಳಗಿನ ಆ ಬಗೆಯ ಆರಾಧನಾ ಕ್ರಮವು ಸಿಂಧೂ ಜನರಿಗೆ ಸೇರಿದುದೆಂದು–ಇರುವುದಾದರೆ–ಅದಕ್ಕೆ ನಮ್ಮ ಪ್ರತಿವಾದವಿಲ್ಲ.

೩. ಭಾರತವರ್ಷದಲ್ಲಿರುವ ಶಿವನ ಯಾವುದೊಂದು ಪ್ರತಿಮೆಯ ತಲೆಯಲ್ಲಿಯೂ ಹೋರಿಯ ಕೊಂಬುಗಳಿಲ್ಲ. ಮತ್ತು ಯಾವುದೊಂದು ಗ್ರಂಥದಲ್ಲಿಯೂ ಶಿವನ ತಲೆಯಲ್ಲಿ ಕೊಂಬುಗಳಿರುತ್ತವೆಂಬ ಉಲ್ಲೇಖವಿಲ್ಲ. ಹಾಗಿರಲಾಗಿ ಸರ್ ಮಾರ್ಶಲರು ಸಿಂಧೂ ಬಿಲ್ಲೆಯ ಮೇಲೆ ಕಂಡುಬರುವ ತಲೆಯಲ್ಲಿ ಹೋರಿಯ ಕೊಂಬುಗಳಿದ್ದ ತ್ರಿಮುಖ ದೇವನನ್ನು ಶಿವನೆಂದು ಮತ್ತು ಆರ್ಯೇತರ ಜನರ ದೇವನೆಂದು ಯಾವ ಪ್ರಮಾಣದ ಆಧಾರದಿಂದ ನಿರ್ಣಯಿಸಿದರು? ಇದನ್ನು ಪ್ರಮಾಣ ರಹಿತ ಹಾಗೂ ಅಪ್ಪಟ ವಿಪರ್ಯಸ್ತ ಕಲ್ಪನೆಯಾಗಿದೆ ಎನ್ನಬೇಕಾಗಿದೆ.

ಏಕೆಂದರೆ ಋಗ್ವೇದದಲ್ಲಿ ಅಗ್ನಿಯನ್ನೇ, ಶಿವನೆಂದು ಮತ್ತು ರುದ್ರನೆಂದು ಕರೆದ ಅಗ್ನಿಯ ತಲೆಯಲ್ಲಿ ಕೊಂಬುಗಳಿವೆಯೆಂದು ವರ್ಣಿಸಿದ, ಅಗ್ನಿಗೆ ಎರಡು ಮತ್ತು ಮೂರು ತಲೆಗಳಿವೆಯೆಂದು ಹೇಳಿದ, ಹಾಗೂ ಅಗ್ನಿಯನ್ನು "ವೃಷಭ" ಅಂದರೆ ಹೋರಿ, "ಉಕ್ಷಾ ಮಹಾನ್" ಅಂದರೆ ಬಹಳ ದೊಡ್ಡ ಎತ್ತು, 'ಕಕುದ್ಮಾನ್' ಅಂದರೆ "ಹಿಣಿಲುಳ್ಳವನು" ಮುಂತಾಗಿ ವರ್ಣಿಸಿದ ಹಲವು ಪ್ರಮಾಣಗಳಿವೆ. ಋಗ್ವೇದದ ೫-೨-೯ರಲ್ಲಿ "ಅಗ್ನಿಯು ರಕ್ಷಸ್ಸುಗಳನ್ನು ತಿವಿಯಲು ಕೊಂಬುಗಳನ್ನು ಮಸೆಯುತ್ತಾನೆಂತಲೂ,"[1] ೮-೬೦-೧೩ರಲ್ಲಿ "ಅಗ್ನಿಯು ವೃಷಭನಂತೆ ತನ್ನ ಕೊಂಬುಗಳನ್ನು ಮಸೆದು ಝಳಪಿಸುತ್ತಾನೆಂತಲೂ"[2] ಸ್ಪಷ್ಟವಾಗಿ ವರ್ಣಿಸಿದೆ. ಮಾತ್ರವಲ್ಲದೇ ಸಿಂಧೂ ಕಣಿವೆಯ ಅಗೆತಗಳು ಪ್ರಾರಂಭವಾಗುವುದಕ್ಕಿಂತ ಹಲವು ವರ್ಷಗಳ ಮೊದಲು ಮುದ್ರಿತವಾದ ಚಿತ್ರಗಳಲ್ಲಿ ಮನುಷ್ಯರೂಪದ ಅಗ್ನಿಯ ತಲೆಯಲ್ಲಿ ಹೋರಿಯ ಕೊಂಬುಗಳಿರುವ ಪ್ರತ್ಯಕ್ಷ ಪ್ರಮಾಣವೂ ಇದೆ.

---

1 ಶಿಶೀತೇ ಶೃಂಗೇ ರಕ್ಷಸೇ ವಿನಿಕ್ಷೇ ॥ ಋ. ೫-೨-೯॥

2 ಶಿಶಾನೋ ವೃಷಭೋ ಯಥಾಗ್ನಿಃ ಶೃಂಗೇ ದವಿಧ್ವತ್ ॥ ಋ. ೮-೬೦-೧೩॥

ಆದುದರಿಂದ ಬ್ರಿಟಿಷ್ ವಿದ್ವಾಂಸರು ಶಿವನ ಸಂಬಂಧದಲ್ಲಿ ಉದ್ದೇಶ ಪೂರ್ವಕ ಮಿಥ್ಯಾಪ್ರಚಾರ ಮಾಡುತಿದ್ದರೆನ್ನಬೇಕಾಗುತ್ತದೆ.

೪. ಸರ್ ಮಾರ್ಶಲರು ಸಿಂಧೂ ಕಣಿವೆಯಲ್ಲಿನ ಕೆಲವು ಹೆಣ್ಣು ಬೊಂಬೆಗಳನ್ನು ಕಂಡು ಸಿಂಧೂ ಕಣಿವೆಯ ಜನರು ಮಾತೃದೇವಿಯ ಅಥವಾ ಶಕ್ತಿಯ ಆರಾಧಕರಾಗಿದ್ದರೆಂದು ತೀರ್ಮಾನಿಸಿದ್ದಾರೆ. ಆದರೆ ಭಾರತ ವರ್ಷದಲ್ಲಿ ಶಕದ ಆರನೆಯ ಶತಮಾನಕ್ಕಿಂತ ಮೊದಲು ಈಗ ಪ್ರಚಲಿತವಿರುವಂಥ ಶಕ್ತಿಯ ಆರಾಧನೆಯು ಪ್ರಚಲಿತವಿದ್ದಿತೆಂದು ಸಿದ್ಧಪಡಿಸುವ ಪ್ರಮಾಣಗಳು ಈ ತನಕ ಬೆಳಕಿಗೆ ಬಂದಿಲ್ಲ. ಮತ್ತು ಸಿಂಧೂ ಕಣಿವೆಯ ಜನರಲ್ಲಿ ಸರ್ ಮಾರ್ಶಲರು ಸೂಚಿಸಿದಂಥ ಮಾತೃದೇವಿಯ ಆರಾಧನೆಯು ಪ್ರಚಲಿತವಿದ್ದಿತೆಂದು ಸಿದ್ಧಪಡಿಸಲು ಅವರು ಸೂಚಿಸಿದ ಆ ಹೆಣ್ಣು ಬೊಂಬೆಗಳ ಪ್ರಮಾಣವು ಎಷ್ಟು ಮಾತ್ರಕ್ಕೂ ಸಾಲದು. ಏಕೆಂದರೆ ಸಿಂಧೂ ಬಿಲ್ಲೆಗಳ ಮೇಲೆ ಪುರುಷದೇವನ ಮುಂದೆ ಜನರು ಮಂಡಿ ಬಗ್ಗಿಸಿ ನಮಸ್ಕರಿಸುವ ಚಿತ್ರಣಗಳಿದ್ದರೂ ಸ್ತ್ರೀ ದೇವಿಯನ್ನು ಹಾಗೆ ನಮಸ್ಕರಿಸಿದ ಚಿತ್ರಣವು ಒಂದಾದರೂ ಇಲ್ಲ, ಆದುದರಿಂದ ಆರ್ಯಪೂರ್ವಕಾಲದ ಸಿಂಧೂ ಜನರಲ್ಲಿ ಈಗಿನಂಥ ಶಕ್ತಿಯ ಆರಾಧನೆಯು ಪ್ರಚಲಿತವಿದ್ದಿತೆಂಬ ಸರ್ ಮಾರ್ಶಲರ ವಾದವು ಬಲವಿಲ್ಲದೇ ಬಿದ್ದು ಹೋಗುತ್ತದೆ.

ಆದರೆ ಆರ್ಯ ಜನರು ತಮ್ಮ ಯಜ್ಞಗಳಲ್ಲಿ ದೇವಿಯರ ಪ್ರತಿಮೆಗಳನ್ನು ಉಪಯೋಗಿಸುತಿದ್ದರೆಂಬ ಉಲ್ಲೇಖಗಳು ವೈದಿಕ ಗ್ರಂಥಗಳಲ್ಲಿ ಇವೆಯಾದುದರಿಂದ ಸಿಂಧೂ ಕಣಿವೆಯ ಜನರಲ್ಲಿ ಮಾತೃದೇವಿಯ ಯಾವ ಪ್ರಕಾರದ ಆರಾಧನೆಯು ಪ್ರಚಲಿತವಿದ್ದಿತೆಂದು ಅರಿತು ಕೊಳ್ಳಲು ಸಾಧ್ಯವಿದೆ. ಅಂದರೆ ಸಿಂಧೂ ಕಣಿವೆಯ ನಿವಾಸಿಗಳು ಆರ್ಯರಾಗಿದ್ದರೇ ಹೊರತು ಆರ್ಯೇತರರಾಗಿರಲಿಲ್ಲ.

ಸರ್ ಮಾರ್ಶಲರು ವಾದಿಸಿರುವಂತೆ ಋಗ್ವೇದದಲ್ಲಿ ಪೃಥ್ವಿಯೊಬ್ಬಳೇ ಪ್ರಧಾನ ದೇವಿಯಲ್ಲ. ಅವಳಿಗಿಂತ ಪ್ರಧಾನರಾದ ಹಾಗೂ ವಿವಾಹವಾಗದೇ ಕನ್ಯೆಯರಾಗಿದ್ದುಕೊಂಡೇ– ಅಂದರೆ ಪತಿಯರ ಹೊರತಾಗಿಯೇ ಮಹತ್ವವನ್ನು ಪಡೆದ, ಅದಿತಿ. ಉಷಾ, ಭಾರತೀ, ಸರಸ್ವತೀ ಮೊದಲಾದ ಹಲವು ದೇವಿಯರಿದ್ದಾರೆ ಮತ್ತು ಸರಸ್ವತಿಯು ಅವರಲ್ಲಿ ಶ್ರೇಷ್ಠಳೂ, ಗರಿಷ್ಠಳೂ ಆಗಿದ್ದಾಳೆ. ಋಗ್ವೇದದ ಪ್ರಕಾರ ಸರಸ್ವತಿಯು ಮೂಲದಲ್ಲಿ ದಿವ್ಯ ನದಿಯಾಗಿದ್ದು ತರುವಾಯ ಮೂರ್ತ ರೂಪವನ್ನು ಪಡೆದು ದೇವಿತಮೆಯೂ ಮಾತೃತಮೆಯೂ ಆಗಿ ಮಾರ್ಪಟ್ಟಿದ್ದಾಳೆ. ಅಂದರೆ ಅವಳು ಋಗ್ವೇದಬಲ್ಲಿ – ಮಾತೃಶ್ರೇಷ್ಠಳೆಂದೂ, ನದೀಶ್ರೇಷ್ಠಳೆಂದೂ ಸಂಬೋಧಿಸಲ್ಪಟ್ಟಿದ್ದಾಳೆ-

ಅಂಬಿತಮೇ, ನದೀತಮೇ, ದೇವಿತಮೇ ಸರಸ್ವತಿ ।
ಅಪ್ರಶಸ್ತಾ ಇವ ಸ್ಮಸಿ ಪ್ರಶಸ್ತಿಮಂಬ ನಸ್ಕೃಧಿ ॥ಋ. ೨-೪೧-೧೬॥

ಅರ್ಥ- ಹೇ ಮಾತೃ ಶ್ರೇಷ್ಠಳೇ, ಹೇ ನದೀ ಶ್ರೇಷ್ಠಳೇ, ದೇವಿಯರಲ್ಲಿ ಶ್ರೇಷ್ಠಳಾದ ಹೇ ಸರಸ್ವತಿಯೇ, (ನಿನ್ನ ಮಕ್ಕಳಾಗಿರುವ) ನಾವು ಯಾವುದೊಂದು ಪ್ರಶಸ್ತಿಯೂ ಇಲ್ಲದವರಾಗಿ ದೀನರಂತಿದ್ದೇವೆ. ಆದುದರಿಂದ ಹೇ ಅಂಬೆಯೇ, ನೀನು ನಮಗೆ ಪ್ರಶಸ್ತಿಯನ್ನು ಕರುಣಿಸಿ ನಮ್ಮನ್ನು ಪ್ರಶಸ್ತರನ್ನಾಗಿ ಮಾಡು.

ಹಿಂದಿನ ಉದಾಹರಣೆಯಲ್ಲಿ ಸರಸ್ವತಿಯು ಸಾಮಾನ್ಯಮಾತೆಯಾಗಿರದೇ ಮಾತೃಶ್ರೇಷ್ಠಳಾಗಿದ್ದಾಳೆ. ಮತ್ತು ಋಗ್ವೇದದಲ್ಲಿ ಅವಳು ಯಾವನೊಬ್ಬ ಪುರುಷ ದೇವನ ಪತ್ನಿಯಾಗಿರದೇ ಏಕಾಕಿನಿಯಾಗಿಯೇ ದೇವೀ ಶ್ರೇಷ್ಠಳೆನಿಸಿ ಕೊಂಡಿದ್ದಾಳೆ. ಆರ್ಯಜನರು ಸರಸ್ವತಿಯನ್ನು ಮಾತೃದೇವಿಯನ್ನಾಗಿ ಅಥವಾ ಸರ್ ಜಾನ್ ಮಾರ್ಶಲರ ನುಡಿಯಲ್ಲಿ "Mother Goddess" ಆಗಿ ಆರಾಧಿಸು ತಿದ್ದರೆಂಬುದಕ್ಕೆ ಹಿಂದೆ ಉದಹರಿಸಿದ ಒಂದು ಪ್ರಮಾಣವು ಯಥೇಷ್ಟವೂ, ಪರ್ಯಾಪ್ತವೂ ಆಗಿದೆ. ಏಕೆಂದರೆ ಅದು ಅತ್ಯಂತ ಸ್ಪಷ್ಟವಿದೆ. ಆದರೆ ಆರ್ಯ ಪೂರ್ವಕಾಲದಿಂದಲೇ ಆರ್ಯೇತರ ಜನರಲ್ಲಿ ಮಾತೃದೇವಿಯ ಆರಾಧನೆಯು ಪ್ರಚಲಿತವಿದ್ದಿತೆಂದು ವಾದಿಸಿದ ಸರ್ ಮಾರ್ಶಲರಾಗಲೀ, ಇತರ ಪಾಶ್ಚಾತ್ಯ ವಿದ್ವಾಂ ಸರಾಗಲೀ ಅವರಲ್ಲಿ ಪ್ರಕೃತ ಪ್ರಚಲಿತವಿರುವ ದೇವಿಯ ಆರಾಧನೆಯ ಹೊರತು ಬೇರೆ ಯಾವುದೊಂದು ಲಿಖಿತ ಅಥವಾ ಬೇರೆ ಬಗೆಯ ಪ್ರಮಾಣವನ್ನು ಉದ ಹರಿಸಿಲ್ಲ. ಮತ್ತು ಅಂಥ ಪ್ರಮಾಣವನ್ನು ಉದಹರಿಸುವ ಆವಶ್ಯಕತೆ ಇದೆಯೆಂಬು ದನ್ನೂ ಕಂಡುಕೊಂಡಿಲ್ಲ. ಪರಂತು ಆರ್ಯೇತರ ಜನರಲ್ಲಿ ಈಗ ದೇವಿಯ ಆರಾಧನೆಯು ಪ್ರಚಲಿತವಿದೆ ಎಂದೊಡನೆ ಅದು ಅವರಲ್ಲಿ ಪ್ರಾಚೀನ ಕಾಲದಿಂದಲೂ ಪ್ರಚಲಿತವಿದ್ದಿತೆಂದು ಸಿದ್ಧವಾಗುವುದಿಲ್ಲ. ಅಂದರೆ ಆರ್ಯ ಜನರು ಬಂದು ಭಾರತ ವರ್ಷದಲ್ಲಿ ನೆಲಸುವ ಮೊದಲು ಭಾರತವರ್ಷದ ಮೂಲ ನಿವಾಸಿಗಳಲ್ಲಿ ಮಾತೃ ದೇವಿಯ ಆರಾಧನೆಯಾಗಲೀ, ಇತರ ದೇವತೆಗಳ ಆರಾಧನೆಯಾಗಲೀ ಪ್ರಚಲಿತ ವಿದ್ದಿತೆಂದು ಸಿದ್ಧಪಡಿಸುವ ಯಾವ ಬಗೆಯ ಪ್ರಮಾಣವೂ ಇಂದಿನ ತನಕ ಬೆಳಕಿಗೆ ಬಂದಿಲ್ಲ. ಹೆಚ್ಚೇಕೆ ಸರ್‌ಮಾರ್ಶಲರು ಭಾರತವರ್ಷದ ಆದಿವಾಸಿಗಳಲ್ಲಿ ಯಾವ ದೇವಿಯ ಆರಾಧನೆಯು ಪ್ರಾಚೀನ ಕಾಲದಿಂದ ಪ್ರಚಲಿತವಿದ್ದಿತೆಂದಿದ್ದಾರೋ ಆ ದೇವಿಯ ಹೆಸರುಗಳು ಆರ್ಯೇತರ ಭಾಷಾವರ್ಗದವುಗಳಾಗಿರದೇ ಆರ್ಯ ಭಾಷಾ ವರ್ಗದವುಗಳಾಗಿವೆ. ದಕ್ಷಿಣ ಭಾರತದಲ್ಲಿ ಹೆಚ್ಚು ಪ್ರಚಲಿತವಿರುವ "ಮಾರಿ" ಎಂಬ ಶಬ್ದವು ಸಂಸ್ಕೃತ ಭಾಷೆಯದಾಗಿದೆ. ಮತ್ತು ಅಮ್ಮ, ಅವ್ವ ಮೊದಲಾದ ಶಬ್ದಗಳು ಸಂಸ್ಕೃತದ "ಅಂಬ" ಶಬ್ದದ ರೂಪಾಂತರಗಳಾಗಿವೆ. ಆದುದರಿಂದ ಸರ್ ಮಾರ್ಶಲರು ಆರ್ಯಜನರಲ್ಲಿ ಸ್ತ್ರೀಯರಿಗೆ ಮತ್ತು ಸ್ತ್ರೀ ದೇವಿಯರಿಗೆ ಪ್ರಾಧಾನ್ಯ ವಿರಲಿಲ್ಲ. ಮತ್ತು ದೇವಿಯರಿಗೆ ಪ್ರಾಧಾನ್ಯ ಬಂದಿರುವುದಾದರೆ ಅದು ಪುರುಷ ದೇವರ ಪತ್ನಿಯರಾಗಿರುವುದರಿಂದ ಬಂದುದಾಗಿದೆ ಹಾಗೂ ಆರ್ಯಜನರಲ್ಲಿ ಮಾತೃ

ದೇವಿಯ ಆರಾಧನೆಯು ಇರಲಿಲ್ಲ ಮುಂತಾಗಿ ವಾದಿಸಿದುದು ಪ್ರಮಾಣ ವಿರುದ್ಧ ವಾದುದೆನ್ನಬೇಕಾಗಿದೆ.

೫. ಸರ್ ಜಾನ್ ಮಾರ್ಶಲ್ ಅವರು ಸಿಂಧೂ ಬಿಲ್ಲೆಯ ಮೇಲಿನ ತ್ರಿಮುಖ ದೇವನ ಸಂಬಂಧದಲ್ಲಿ ಹಲವು ಚಿಲೋ ವಿವರಗಳನ್ನು ಕೊಟ್ಟು ಶಿವನೂ, ಶೈವಮತವೂ ಆರ್ಯ ಪೂರ್ವಕಾಲದವುಗಳೆಂದಿದ್ದಾರೆ. ಆದರೆ ಅವರು ತನ್ನ ವಾದ ವನ್ನು ಸಿದ್ಧಪಡಿಸಲು ಯಾವುದೊಂದು ಲಿಖಿತ ಪ್ರಮಾಣವನ್ನಾಗಲೀ, ಬೇರೆ ಬಗೆಯ ಪ್ರಮಾಣವನ್ನಾಗಲೀ ಉದಹರಿಸಿಲ್ಲ. ಅಂದರೆ ಅವರ ಆ ವಾದವು ಬರಿಯ ಕಲ್ಪನೆ ಮಾತ್ರವಾಗಿದೆ. ಋಗ್ವೇದದಲ್ಲಿ ಅಗ್ನಿಯು ಶಿವನೆಂದು ಕರೆಯಲ್ಪಟ್ಟುದರಿಂದ ತರುವಾಯದ ಕಾಲದಲ್ಲಿ ಅಗ್ನಿಯು ಶಿವನ ರೂಪದಿಂದಲೇ ಆರಾಧಿಸಲ್ಪಡತೊಡಗಿದ ನೆಂದು ಹಿಂದೆ "ಶಿವಾರಾಧನೆ ಮತ್ತು ನಾಗಾರಾಧನೆ" ಎಂಬ ಅಧ್ಯಾಯದಲ್ಲಿ ಸಿದ್ಧ ಪಡಿಸಿರುವುದರಿಂದ ಅದೇ ವಿಷಯವನ್ನು ಮರಳಿ ಇಲ್ಲಿ ಚರ್ಚಿಸುವ ಆವಶ್ಯಕತೆ ಉಳಿದಿಲ್ಲ.

೬. ಸರ್ ಮಾರ್ಶಲರು ತ್ರಿಮುಖದೇವನ ಮೂರು ಮುಖಗಳ ಮತ್ತು ಕೊಂಬುಗಳ ಸಂಬಂಧದಲ್ಲಿ ಬೆಬಿಲೋನ, ಸುಮೇರ ಮೊದಲಾದ ದೇಶಗಳಲ್ಲಿ ಪ್ರಚಲಿತವಿದ್ದ ತ್ರಿಮೂರ್ತಿಗಳ ಹಾಗೂ ಅಲ್ಲಿನ ಅರಸರು ಮತ್ತು ಪುರೋಹಿತರು ತಲೆ ಯಲ್ಲಿ ಕೊಂಬುಗಳನ್ನು ಧರಿಸುತಿದ್ದರೆಂಬ ವಿವರಗಳನ್ನು ಕೊಟ್ಟಿದ್ದಾರೆ. ಮತ್ತು ಆ ಕೊಂಬುಗಳು ದೇವತ್ವವನ್ನು ಸೂಚಿಸುತ್ತವೆಂದಿದ್ದಾರೆ. ಆದರೆ ಹೋರಿಯ ಕೊಂಬುಗಳು ದೇವತ್ವವನ್ನು ಸೂಚಿಸಲು ಕಾರಣವೇನೆಂದಾಗಲೀ, ಶಿವನ ತಲೆಯಲ್ಲಿ ಕೊಂಬುಗಳಿರಲು ಕಾರಣವೇನೆಂದಾಗಲೀ ಅವರು ವಿವರಿಸಿಲ್ಲ.

ಹಾಗೆಯೇ ಶಿವನನ್ನು ಪಶುಪತಿಯೆಂದು ಸೂಚಿಸಲು ಅವನ ಸುತ್ತಲೂ ಹುಲಿ, ಆನೆ, ಖಡ್ಗಮೃಗ, ಕೋಣ ಮತ್ತು ಜಿಂಕೆಗಳನ್ನು ಚಿತ್ರಿಸಲಾಗಿದೆಯೆಂದಿ ದ್ದಾರೆ. ಆದರೆ ಅಲ್ಲಿ ಆಕಳು, ಹೋರಿ, ಹೋತ ಮೊದಲಾದುವುಗಳನ್ನು ಚಿತ್ರಿಸದೇ ಅವೇ ಐದು ಪ್ರಾಣಿಗಳನ್ನು ಚಿತ್ರಿಸಲು ಕಾರಣವೇನೆಂದು ಅವರು ವಿವರಿಸಿಲ್ಲ. ಅಂತೆಯೇ ಅವರು ಬರಹದ ಸಾಲಿನಲ್ಲಿ ಸ್ಥಳಾವಕಾಶವಿಲ್ಲದುದರಿಂದ ಮನುಷ್ಯನ ಚಿಹ್ನೆ ಯನ್ನು ಹುಲಿಯ ಮತ್ತು ಆನೆಯ ಮಧ್ಯದಲ್ಲಿ ಬರೆಯಲಾಗಿದೆ ಎಂದಿದ್ದಾರೆ. ಆದರೆ ಮನುಷ್ಯನ ಚಿತ್ರವು ಅಲ್ಲಿ ಬರಹದ ಚಿಹ್ನೆಯಾಗಿದ್ದಿತಾದರೆ ಚಿತ್ರಕಾರನು ಅದನ್ನು ಆನೆಯ ತಲೆಯ ಮೇಲ್ಗಡೆಯಲ್ಲಿಗುವ ಸ್ಥಳದಲ್ಲಿ ಚಿತ್ರಿಸುತಿದ್ದನು ಅಲ್ಲದಿದ್ದರೆ ಆನೆಯನ್ನು ಕೊಂಚ ಕೆಳಗೆ ಚಿತ್ರಿಸುತಿದ್ದನೆಂಬುದನ್ನು ಅವರು ವಿಚಾರಿಸಿಲ್ಲ.

ಅದೇ ರೀತಿಯಲ್ಲಿ ಅವರು ಶಿವನು ಯೋಗಿರಾಜನೆಂದೂ, ಆದುದರಿಂದ ಅವನು ಯೋಗಾಸನದಲ್ಲಿ ಕೂತಿದ್ದಾನೆಂದೂ ಅಂದಿದ್ದಾರೆ. ಆದರೆ ಆ ತ್ರಿಮುಖ ದೇವನು ಯೋಗಿಯಂತಿರದೇ ಮದುವಣಿಗನಂತೆ ಸಕಲ ಅಲಂಕಾರಗಳಿಂದ ಭೂಷಿತ ನಾಗಿರುವುದೇಕೆಂದು ಅವರು ವಿವರಿಸಿಲ್ಲ. ಅಲ್ಲದೇ ಅವರು ಯೋಗಾಭ್ಯಾಸವು

ಕೂಡ ಬಹಳ ಪ್ರಾಚೀನವೆಂದುದಕ್ಕೆ ಯೋಗ್ಯ ಪ್ರಮಾಣವನ್ನು ಉದಹರಿಸಿಲ್ಲ. ಅಂದರೆ ಶಿವನು ವೇದಕಾಲದಲ್ಲಿ ಯೋಗಿಯಾಗಿರಲಿಲ್ಲವೆಂಬುದನ್ನು ಮತ್ತು ಅವನು ಮೈಗೆ ಬೂದಿಯನ್ನು ಬಳಿದು ಕೊಂಡು ಯೋಗಿಯಾದುದು ಬಹಳ ಅರ್ವಾಚೀನ ಕಾಲದ ಪುರಾಣಗಳಲ್ಲಿ ಎಂಬುದನ್ನು ಕೂಡ ಲಕ್ಷಿಸಲಿಲ್ಲ. ಅರ್ಥಾತ್ ಶಿವನು ಯೋಗಿರಾಜನೆಂದು ಸಿದ್ಧಪಡಿಸುವ ಪ್ರಾಚೀನ ಪ್ರಮಾಣಗಳು ಇಲ್ಲವೇ ಇಲ್ಲ.

ಆರ್ಯ ಜನರು ತಮ್ಮ ಆರಾಧ್ಯ ದೇವನಾದ ಅಗ್ನಿಯನ್ನು ಬರೆದು ಸೂಚಿಸಲು ಮೊತ್ತ ಮೊದಲು ಹೋರಿಯ ಚಿತ್ರವನ್ನು ಉಪಯೋಗಿಸಿದ್ದರೆಂದೂ ಮುಂದೆ ಅವರು ಅಗ್ನಿಯನ್ನು ಮನುಷ್ಯರೂಪದಿಂದ ಸೂಚಿಸತೊಡಗಿದಾಗ ಮನುಷ್ಯ ಚಿತ್ರದ ತಲೆಯಲ್ಲಿ ಹೋರಿಯ ಕೊಂಬುಗಳನ್ನು ಚಿತ್ರಿಸತೊಡಗಿದ್ದರೆಂದೂ ಹಿಂದೆ ವಿವರಿಸಿದೆ. ಆದುದರಿಂದ ಸಿಂಧೂ ಬಿಲ್ಲೆಗಳ ಮೇಲಿರುವ ಹೋರಿಯ ಚಿತ್ರಗಳು ಮತ್ತು ತಲೆಯಲ್ಲಿ ಕೊಂಬುಗಳಿರುವ ಮನುಷ್ಯನ ಚಿತ್ರಗಳು ಆರ್ಯಜನರ ಪ್ರಧಾನ ದೇವನಾದ ಅಗ್ನಿಯ ಪ್ರತೀಕಗಳಾಗಿರುತ್ತವೆಂಬುದರಲ್ಲಿ ಸಂದೇಹ ಉಳಿಯುವುದಿಲ್ಲ. ಅಂಥ ಚಿತ್ರವಿರುವ ಅಥವಾ ಸರ್ ಮಾರ್ಶಲ್ ಅವರು ತ್ರಿಮುಖ ಶಿವ ಎಂದು ಹೆಸರಿಸಲು ಆರಿಸಿದ ಬಿಲ್ಲೆಯ ಪಡಿಯಚ್ಚು ಇಲ್ಲಿ ಮುಂದೆ ಕೊಡಲಾಗುವುದು. ಮತ್ತು ಅದಕ್ಕೆ ಸಂಬಂಧಪಟ್ಟ ವೈದಿಕ ಗ್ರಂಥಗಳೊಳಗಿನ ವರ್ಣನೆಗಳೂ ಕೊಡಲಾಗುವುವು–



ಈ ಚಿತ್ರಕ್ಕೆ ಸಂಬಂಧಿಸಿದ ಒಂದು ಮುಖ್ಯ ವರ್ಣನೆಯು ಋಗ್ವೇದದಲ್ಲಿದ್ದು

ಇತರ ವರ್ಣನೆಗಳು ಯಜುರ್ವೇದದ ತೈತ್ತಿರೀಯ ಸಂಹಿತೆಯಲ್ಲಿವೆ. ಋಗ್ವೇದ ದೊಳಗಿನ ವರ್ಣನೆಯು ಮುಂದಿನಂತಿದೆ–

ತ್ರಿಮೂರ್ಧಾನಂ ಸಪ್ತರಶ್ಮಿಂ ಗೃಣೀಷೇ
ಅನೂನಮಗ್ನಿಂ ಪಿತ್ರೋರುಪಸ್ಥೇ ।
ನಿಷತ್ತಮಸ್ಯ ಚರತೋ ಧ್ರುವಸ್ಯ
ವಿಶ್ವಾದಿವೋ ರೋಚನಾ ಪಪ್ರಿವಾಂಸಮ್ ॥ ಋ. ೧–೧೪೬–೧ ॥

ಅರ್ಥ–ಮೂರು ತಲೆಗಳುಳ್ಳವನೂ, ಏಳು ರಶ್ಮಿಗಳುಳ್ಳವನೂ ಏನೊಂದು ಕುಂದಿಲ್ಲದವನೂ, ತಂದೆ ತಾಯಿಗಳ ಮಧ್ಯದಲ್ಲಿ ಅಥವಾ ಉಡಿಯಲ್ಲಿ ಕುಳಿತಿರುವವನೂ ಚಲಿಸುತ್ತಿದ್ದರೂ ಸ್ಥಿರವಾಗಿರುವ ದಿವದ ಸಕಲ ಪ್ರಕಾಶಮಯ ಪ್ರದೇಶವನ್ನು ತುಂಬಿ ಬಿಡುವವನೂ ಆಗಿರುವ ಅಗ್ನಿದೇವನನ್ನು ನಾನು ಭಕ್ತಿ ಭಾವದಿಂದ ಸ್ತುತಿಸುತ್ತೇನೆ.

ಇದರ ತರುವಾಯದ ಋಚೆಯಲ್ಲಿ ಅಗ್ನಿಯನ್ನು **'ಉಕ್ಷಾಮಹಾನ್'** ಅಂದರೆ **"ದೊಡ್ಡ ಎತ್ತು"** ಎಂದು ಕರೆದಿದೆ.

ಹಿಂದೆ ಉದಹರಿಸಿದ ಋಚೆಯಲ್ಲಿ ಮೂರು ತಲೆಗಳುಳ್ಳ ಮತ್ತು ಏಳು ರಶ್ಮಿಗಳುಳ್ಳ ಅಗ್ನಿಯ ವರ್ಣನೆ ಇದೆ. ಮತ್ತು ಬಿಲ್ಲೆಯ ಮೇಲಿನ ಚಿತ್ರಣವು ಆ ಋಚೆಯ ಸಾಂಕೇತಿಕ ನಿರೂಪಣವಾಗಿದೆ. ಅರ್ಥಾತ್ ಋಚೆಯೊಳಗಿನ ವರ್ಣನೆಗೆ ಅನುಸಾರವಾಗಿ ಚಿತ್ರದ ಪುರುಷನಿಗೆ ಮೂರು ತಲೆಗಳಿವೆಯೆಂದು ಸೂಚಿಸಲು ಮೂರು ಮೋರೆಗಳಿವೆ. ಏಳು ರಶ್ಮಿಗಳನ್ನು ಸೂಚಿಸಲು ಜ್ವಾಲೆಗಳೇ ಕೂದಲಾಗಿರುವ[1] ಅವನ ಜಟಾ ಜೂಟದಲ್ಲಿ (ತ್ರಿಕೋಣಗಳನ್ನು ಬಿಟ್ಟು) ಏಳು ರೇಖೆಗಳಿವೆ. ಅನೂನ ಅಂದರೆ ಏನೂ ಕುಂದು ಅಥವಾ ಕೊರತೆಯಿಲ್ಲದವನು ಎಂಬುದನ್ನು ಚಿತ್ರದ ಮೂಲಕ ವ್ಯಕ್ತಮಾಡುವುದಾದರೆ ಅವನನ್ನು ಸಕಲ ಅಲಂಕರಣಗಳಿಂದ ಭೂಷಿತನನ್ನಾಗಿ ಮಾಡಬೇಕಾಗುತ್ತದೆ. ಹಾಗಾಗಿ ಚಿತ್ರದಲ್ಲಿರುವ ಪುರುಷನು ಸರ್ವಾಲಂಕಾರ ಭೂಷಿತನಾಗಿದ್ದಾನೆ. ಪೃಥ್ವಿ ಮತ್ತು ದಿವಗಳು ಅಗ್ನಿಯ ತಾಯಿ-ತಂದೆಗಳಾಗಿದ್ದಾರೆ. ಅವರ ಮಧ್ಯದಲ್ಲಿ ಅಥವಾ ಉಡಿಯಲ್ಲಿ ಕೂತಿರುವವನು ಎಂಬುದನ್ನು ಸೂಚಿಸಲು ಅವನನ್ನು ಪೃಥ್ವಿಯ ಮತ್ತು ದಿವದ ಮಧ್ಯದಲ್ಲಿ ಅಂದರೆ ಅಂತರಿಕ್ಷದಲ್ಲಿ ತಾಯಿಯ ಸಂಬಂಧವು ತಪ್ಪದಂತೆ ಮಂಚದಲ್ಲಿ ಕುಳ್ಳಿರಿಸಲಾಗಿದೆ. ಅಗ್ನಿಯನ್ನು ವೃಷಭ, ಉಕ್ಷಾಮಹಾನ್, ಮಹಿಷ ಮುಂತಾಗಿ ಕರೆದಿರುವುದರಿಂದ ಅವನ ಆ ರೂಪಗಳನ್ನು ಸೂಚಿಸಲು ತಲೆಯಲ್ಲಿ ದೊಡ್ಡ ದೊಡ್ಡ ಕೊಂಬುಗಳನ್ನು ಚಿತ್ರಿಸಲಾಗಿದೆ. ಯಜುರ್ವೇದದ ರುದ್ರಾಧ್ಯಾಯದಲ್ಲಿ ರುದ್ರರೂಪದ ಅಗ್ನಿ

---

1 ಕೇಶೀಸೂಕ್ತ–ಋಗ್ವೇದ ೮–೪೬–೬. ೧–೧೬೪–೨ ಇತ್ಯಾದಿ.

ಯನ್ನು– **“ನಮೋಹಿರಣ್ಯ ಬಾಹವೇ” ॥ ತೈ. ಸಂ. ೪–೫–೨-೧ ॥** ಅಂದರೆ ಹೇ ಚಿನ್ನದ ತೋಳುಗಳುಳ್ಳವನೇ ನಿನಗೆ ನಮಸ್ಕಾರ” ಎಂದಿದೆ. ಹಾಗಾಗಿ ಅವನ ತೋಳುಗಳು ಚಿನ್ನದವುಗಳೆಂದು ಸೂಚಿಸಲು ತೋಳುಗಳ ತುಂಬ ಚಿನ್ನದ ಬಳೆಗಳನ್ನು ಚಿತ್ರಿಸಲಾಗಿದೆ. ಹಾಗೆಯೇ ಅಗ್ನಿಯನ್ನು **“ನಮೋವರ್ಮಿಣೇ ॥ ತೈ. ಸಂ. ೪-೫-೬-೧೩ ॥** ಅಂದರೆ- “ಹೇ ಕವಚ ತೊಟ್ಟಿರುವವನೇ ನಿನಗೆ ನಮಸ್ಕಾರ” ಎಂದಿದೆ. ಆದುದರಿಂದ ಅವನ ಎದೆಯ ಮೇಲೆ ತ್ರಿಕೋಣಾಕಾರದ ಕವಚವನ್ನು ಚಿತ್ರಿಸಲಾಗಿದೆ. ಯಜ್ಞಾಧಿಕಾರಿಗಳು ಮತ್ತು ಪುರೋಹಿತರು ತಮ್ಮ ನಡುವಿನಲ್ಲಿ ಮೇಖಲೆಯನ್ನು ಅಂದರೆ ಉಡುದಾರವನ್ನು ಧರಿಸ ಬೇಕಾಗಿರುವುದರಿಂದ, ಮತ್ತು ಅಗ್ನಿಯೇ ಮೊತ್ತ ಮೊದಲಿನ ಹೋತೃವೂ, ಪುರೋಹಿತನೂ[1] ಆಗಿರುವುದರಿಂದ ಅವನ ನಡುವಿನಲ್ಲಿ ಮೇಖಲೆಯನ್ನು ಚಿತ್ರಿಸಿದೆ. ವಸ್ತ್ರವನ್ನು ಉಟ್ಟ ತರುವಾಯ ಅದರ ಮೇಲೆ ಮೇಖಲೆಯನ್ನು ಸುತ್ತುವುದಾಗಿರುವುದರಿಂದ ಚಿತ್ರದ ಪುರುಷನು ಸರ್ ಮಾರ್ಶಲರು ಭಾವಿಸಿದಂತೆ ನಗ್ನನಲ್ಲ. ಅವನು ನಗ್ನನಾಗಿದ್ದುದಾದರೆ ಮೇಖಲೆ ಇರುತ್ತಿರಲಿಲ್ಲ. ಹಿಂದೆ ಉದಹರಿಸಿದ ಋಚೆಯಲ್ಲಿ ಅಗ್ನಿಯು ದಿವದ ಸಕಲ ಪ್ರಕಾಶಮಯ ಪ್ರದೇಶವನ್ನು ತುಂಬಿ ಬಿಡುವವನು ಎಂದು ವರ್ಣಿಸಿರುವುದರಿಂದ ಅವನ ಸುತ್ತಲಿನ ಅಂತರಿಕ್ಷ ಪ್ರದೇಶವನ್ನು ಅವನ ಪ್ರತೀಕಗಳಾದ ಜಿಂಕೆ, ಹುಲಿ, ಮನುಷ್ಯ, ಆನೆ, ಖಡ್ಗಮೃಗ ಮತ್ತು ಕೋಣಗಳಿಂದ ತುಂಬಿಸಿ ಬಿಡಲಾಗಿದೆ.

ಚಿತ್ರದೊಳಗಿನ ಹುಲಿಯು ಸಿಟ್ಟಿನಿಂದ ಕೆರಳಿ ಮೇಲಕ್ಕೆ ನೆಗೆಯುವಂತೆ ನಿಂತಿದೆ. ಅದನ್ನು ಯಜುರ್ವೇದದಲ್ಲಿ– **“ರುದ್ರೋ ವಾ ಏಷಯದಗ್ನಿಃ ಸ ಯಥಾ ವ್ಯಾಘ್ರಃ ಕ್ರುದ್ಧಸ್ತಿಷ್ಠತಿ ॥ ತೈ. ಸಂ. ೫ ೫–೭–೯ ॥** ಅಂದರೆ ರುದ್ರ ರೂಪದ ಈ ಅಗ್ನಿಯೇ ಸಿಟ್ಟಿಗೆದ್ದ ಹುಲಿಯಂತೆ ನಿಂತಿದ್ದಾನೆ” ಎಂದು ವರ್ಣಿಸಿದೆ. ಹಾಗೆಯೇ ಋಗ್ವೇದದಲ್ಲಿ ಅಗ್ನಿಯನ್ನು ಮತ್ತು ಅವನ ಬೇರೊಂದು ರೂಪವಾದ ಇಂದ್ರನನ್ನು “ನರ” ಮತ್ತು “ನರಶ್ರೇಷ್ಠ”[2] ಎಂತಲೂ “ದಕ್ಷನಾದ ಮನುಷ್ಯ” ಎಂತಲೂ “ಆನೆ”[3] ಎಂತಲೂ, “ಪರ್ವತಗಳಲ್ಲಿ ಅಲೆದಾಡುವ ಭಯಂಕರ ಮೃಗ”[4] ಅಥವಾ ಖಡ್ಗ

---

1 ಯಜ್ಞಸ್ಯ ಕೇತುಂ ಪ್ರಥಮಂ ಪುರೋಹಿತಮಗ್ನಿಂ ನರಸ್ತ್ರಿಷದಸ್ಥೇ ಸಮೀಧಿರೇ ॥ ಋ. ೫-೩೧-೨ ॥

ಅಗ್ನಿರ್ಹೋತಾಪುರೋಹಿತೋಽಧ್ವರಸ್ಯ ವಿಚರ್ಷಣಿಃ ॥ ಋ. ೩-೧೧-೧॥

2 ಅರಂಗಮಾಯ ಜಗ್ಮಯೇಽಪಶ್ಚಾದ್ದಧ್ವನೇ ನರೇ ॥ ೬–೪೨-೧॥

ನೃತಮ ॥೭-೧೮-೧೦॥ ಹೋತಾ ಮನುಷೋನ ದಕ್ಷಃ ॥ ೧-೫೯–೪॥

3 ಮೃಗೋ ನ ಹಸ್ತೀ ॥೪-೧೬–೪॥ ದಾನಾಮೃಗೋ ನ ವಾರಣಃ ॥೮–೩೩-೮॥

4 ಮೃಗೋ ನ ಭೀಮಃ ಕುಚರೋ ಗಿರಿಷ್ಠಾಃ ಪರಾವತ ಆ ಜಗಂಥಾ ಪರಸ್ಯಾಃ।

ಮೃಗ ಎಂತಲೂ "ಕೋಣ"[1] ಎಂತಲೂ "ಕಾಡಿನಲ್ಲಿ ಸಂಚರಿಸುವ ಜಿಂಕೆ"[2] ಎಂತಲೂ ಕರೆದ ಪ್ರಮಾಣಗಳಿವೆ. ಅಂದರೆ ಆ ಪ್ರಮಾಣಗಳಿಂದಾಗಿ ಹಿಂದೆ ಕೊಟ್ಟಿರುವ ಬಿಲ್ಲೆಯ ಪಡಿಯಚ್ಚಿನಲ್ಲಿ ತ್ರಿಮುಖದೇವನ ಸುತ್ತಲೂ ಇರುವ ಮೃಗಗಳು ಸಾಮಾನ್ಯ ಪಶುಗಳಾಗಿರದೇ ಅಗ್ನಿದೇವನ ಬೇರೆ ಬೇರೆ ರೂಪಗಳಾಗಿವೆಯೆಂದು ಸಿದ್ಧವಾಗುತ್ತದೆ. ಅದನ್ನು ಬೇರೊಂದು ರೀತಿಯಿಂದ ವಿವರಿಸಬಹುದಾಗಿದೆ.

ಋಗ್ವೇದದ ಎರಡನೆಯ ಮಂಡಲದ ಮೊದಲನೆಯ ಸೂಕ್ತದ ಪ್ರಕಾರ ಮತ್ತು ೧-೧೬೪-೪೬ನೆಯ ಋಚೆಯ ಪ್ರಕಾರ ಋಗ್ವೇದದೊಳಗೆ ಸ್ತುತಿಸಲ್ಪಟ್ಟಿರುವ ಎಲ್ಲ ದೇವತೆಗಳು ಅಗ್ನಿಯ ಬೇರೆ ಬೇರೆ ರೂಪಗಳಾಗಿವೆ. ಅಥವಾ ಋಗ್ವೇದದಲ್ಲಿ ಅಗ್ನಿಯನ್ನೇ ಬೇರೆ ಬೇರೆ ಹೆಸರುಗಳಿಂದ ಸ್ತುತಿಸಲಾಗಿದೆ. ಅಂದರೆ ಅಗ್ನಿಯೊಬ್ಬನೇ ಆರ್ಯಜನರ ಪ್ರಧಾನ ದೇವನಾಗಿದ್ದಾನೆ. ಆರ್ಯಜನರು ಮೊತ್ತಮೊದಲು ಹೋರಿಯನ್ನು ಅಗ್ನಿಯ ಪ್ರತೀಕವನ್ನಾಗಿ ಸ್ವೀಕರಿಸಿದ್ದರು. ಹಾಗಾಗಿ ಋಗ್ವೇದದಲ್ಲಿ ಅಗ್ನಿಯನ್ನು ಮತ್ತು ಅವನ ಬೇರೊಂದು ರೂಪವಾದ ಇಂದ್ರನನ್ನು ನೂರಾರು ಸರ್ತಿ "ವೃಷಭ" ಎಂದು ಕರೆಯಲಾಗಿದೆ. ಆದುದರಿಂದಲೇ ಸಿಂಧೂ ಕಣಿವೆಯಲ್ಲಿ ದೊರಕಿದ ಅಧಿಕಾಂಶ ಬಿಲ್ಲೆಗಳ ಮೇಲೆ ಹೋರಿಯ ಚಿತ್ರಗಳಿರುವುದಾಗಿದೆ. ಹಾಗೆಯೇ ಆ ಬಿಲ್ಲೆಗಳ ಮೇಲೆ ಕಾಣ ಬರುವ ನಾನಾ ಭಾವ ಭಂಗಿಗಳ ಹೋರಿಯ ಚಿತ್ರಗಳು ಋಗ್ವೇದದ ಮಂತ್ರಗಳಲ್ಲಿ ಬಂದಿರುವ ವರ್ಣನೆಗಳಿಗನುಸಾರವಾಗಿ ನಿರ್ಮಿಸಲ್ಪಟ್ಟಿವೆಯೆಂದು ಅಥವಾ ಆ ಬಿಲ್ಲೆಗಳ ಮೇಲಿನ ಚಿತ್ರಸಂಕೇತಗಳಿಗನುಸಾರವಾಗಿ ಋಗ್ವೇದದ ಮಂತ್ರಗಳು ರಚಿಸಲ್ಪಟ್ಟಿವೆಯೆಂದು ಹೇಳಬಹುದಾಗಿದೆ. ಸಿಂಧೂ ಕಣಿವೆಯಲ್ಲಿ ದೊರೆತ ಅಧಿಕಾಂಶ ಬಿಲ್ಲೆಗಳ ಮೇಲೆ ಹೋರಿಯ ಚಿತ್ರವಿರುವಂತೆಯೇ ಬೇರೆ ಹಲವು ಬಿಲ್ಲೆಗಳ ಮೇಲೆ ಅಗ್ನಿಯ ಇತರ ಪ್ರತೀಕಗಳಾಗಿರುವ ಆನೆ, ಕೋಣ, ಹುಲಿ, ಖಡ್ಗಮೃಗ, ಜಿಂಕೆ, ಹೋತ, ಮೊದಲಾದ ಪ್ರಾಣಿಗಳು ಒಂಟಿಯಾಗಿ ಚಿತ್ರಿಸಲ್ಪಟ್ಟಿವೆ. ಕೆಲವು ಬಿಲ್ಲೆಗಳ ಮೇಲೆ ಯಾವುದಾದರೂ ಒಂದೇ ಪ್ರಾಣಿಯ ಶರೀರಕ್ಕೆ ಬೇರೆ ಬೇರೆ ಮೂರು ಪ್ರಾಣಿಗಳ ತಲೆಗಳಿರುವಂತೆ ಚಿತ್ರಿಸಿದುದೂ ಇದೆ. ಮತ್ತು ಆ ಎಲ್ಲ ಸಂಕೇತಗಳ ಯಥಾವತ್ತಾದ ವರ್ಣನೆಯು ಋಗ್ವೇದದಲ್ಲಿದೆ.

ಸರ್ ಜಾನ್ ಮಾರ್ಶಲರು ಕೆಲವು ಬಿಲ್ಲೆಗಳ ಮೇಲಿನ ಚಿತ್ರಗಳಲ್ಲಿ ಪುರೋಹಿತನ ತಲೆಯಲ್ಲಿಯೂ ಕೊಂಬುಗಳಿವೆ ಎಂದಿದ್ದಾರೆ. ತಲೆಯ ಮೇಲೆ

ಸೃಕಂ ಸಂಶಾಯ ಪವಿಮಿಂದ್ರ ತಿಗ್ಮಂ ವಿಶತ್ರೂನ್ ತಾಳ್ಹಿ ವಿಮೃಧೋನುದಸ್ವ ॥೧೦-೧೮೦-೨॥

1 ಮಹಿಷಃ ॥೧೦-೫೪-೯॥

2 ಮೃಗೋ ನ ಭೀಮಃ ॥ ೧-೧೫೪-೨॥

ಕೊಂಬುಗಳಿರುವ ದೇವನು "ಅಗ್ನಿ" ಎಂಬುದು ಹಿಂದೆ ಉದಹರಿಸಿದ ಪ್ರಮಾಣಗಳಿಂದ ಸ್ಪಷ್ಟವಾಗಿ ಸಿದ್ಧವಾಗಿದೆ. ಋಗ್ವೇದದ ಪ್ರಕಾರ ಅಗ್ನಿಯೇ ಮೊತ್ತ ಮೊದಲಿನ ಪುರೋಹಿತನೂ, ಗೃಹಪತಿಯೂ (=ಯಜಮಾನನೂ) ಹೋತೃ, ನೇಷ್ಟೃ, ಪೋತೃ ಮೊದಲಾದವನೂ ಆಗಿದ್ದಾನೆ. ಆದುದರಿಂದಲೇ ಸಿಂಧೂ ಬಿಲ್ಲೆಗಳ ಮೇಲೆ ಕಂಡು ಬರುವ ಪುರೋಹಿತನ ತಲೆಯಲ್ಲಿ ಕೊಂಬುಗಳಿರುವುದಾಗಿದೆ- ಋಗ್ವೇದವು ಮುಂದೆ ಕೊಡಲಾಗುವ ಋಚೆಯಿಂದ ಪ್ರಾರಂಭವಾಗಿದೆ—

ಓಮ್। ಅಗ್ನಿಮೀಳೇ ಪುರೋಹಿತಂ ಯಜ್ಞಸ್ಯ ದೇವಮೃತ್ವಿಜಮ್।
ಹೋತಾರಂ ರತ್ನಧಾತಮಮ್ ॥ ಋ. ೧-೧-೧ ॥ ಓಮ್ ॥

ಅರ್ಥ– ನಾನು ಯಜ್ಞದ ಪುರೋಹಿತನೂ, ಯಜ್ಞದ ಅಧಿಷ್ಠಾತೃ ದೇವನೂ ಹೋತೃ ಎಂಬ ಹೆಸರಿನ ಋತ್ವಿಜನೂ, ಧಾರಾಳವಾದ ರತ್ನ ಸಂಪತ್ತನ್ನು ಕೊಡುವವನೂ ಆಗಿರುವ ಅಗ್ನಿಯನ್ನು ಸ್ತುತಿಸುತ್ತೇನೆ.

ಅಗ್ನಿಯನ್ನು ಮೊತ್ತ ಮೊದಲಿನ ಪುರೋಹಿತನೆಂದು ಕರೆದ ಪ್ರಮಾಣವು ಮುಂದಿನ ಋಚೆಯಲ್ಲಿದೆ-

ಯಜ್ಞಸ್ಯ ಕೇತುಂ ಪ್ರಥಮಂ ಪುರೋಹಿತಮ್
ಅಗ್ನಿಂ ನರಸ್ತ್ರಿಷಧಸ್ಥೇ ಸಮೀಧಿರೇ।
ಇಂದ್ರೇಣ ದೇವೈಃ ಸರಥಂ ಸ ಬರ್ಹಿಷಿ
ಸೀದನ್ನಿ ಹೋತಾ ಯಜಥಾಯ ಸುಕ್ರತುಃ ॥ ಋ. ೫-೧೧-೨ ॥

ಅರ್ಥ- ಜನರು ಯಜ್ಞದ ಧ್ವಜಸ್ವರೂಪನೂ, ಮೊತ್ತ ಮೊದಲಿನ ಪುರೋಹಿತನೂ ಆಗಿರುವ ಅಗ್ನಿಯನ್ನು ಅವನ ಮೂರು ಸ್ಥಾನಗಳಲ್ಲಿ (=ಕುಂಡಗಳಲ್ಲಿ) ಚೆನ್ನಾಗಿ ಹೊತ್ತಿಸಿದರು. ಇಂದ್ರ ಹಾಗೂ ಇತರ ದೇವತೆಗಳೊಂದಿಗೆ ಒಂದೇ ರಥದಲ್ಲಿ ಬರುವಂಥ ಮತ್ತು ಚೆಲೋ ಕೃತ್ಯಗಳನ್ನು ಎಸಗುವಂಥ ಆ ಅಗ್ನಿಯು ನಮ್ಮ ಯಜ್ಞ ನಿರ್ವಹಣಕ್ಕಾಗಿ ಹೋತೃವಾಗಿ ಕುಶಾಸನದಲ್ಲಿ ಕುಳಿತುಕೊಳ್ಳಲಿ.

ಅಗ್ನಿಯನ್ನು ಬ್ರಹ್ಮಾ, ಗೃಹಪತಿ ಮುಂತಾಗಿ ಕರೆದ ಪ್ರಮಾಣವು ಮುಂದಿನ ಋಚೆಯಲ್ಲಿದೆ-

ತವಾಗ್ನೇ ಹೋತ್ರಂ ತವ ಪೋತ್ರಮೃತ್ವಿಯಂ
ತವ ನೇಷ್ಟ್ರಂ ತ್ವಮಗ್ನಿದೃತಾಯತಃ।
ತವ ಪ್ರಶಾಸ್ತ್ರಂ ತ್ವಮಧ್ವರೀಯಸಿ,
ಬ್ರಹ್ಮಾ ಚಾಸಿ ಗೃಹಪತಿಶ್ಚ ನೋ ದಮೇ ॥ ಋ. ೨-೧-೨॥

ಅರ್ಥ– ಹೇ ಅಗ್ನಿದೇವನೇ. ಶಸ್ತ್ರಯಾಜ್ಯಾದಿಗಳನ್ನು ಪಠಿಸುವ

ಹೋತೃವಿನ ಕೆಲಸವೂ ಪ್ರೋತೃವಿನ ಕೆಲಸವೂ ಋತ್ವಿಜರ ಕೆಲಸವೊ ನೇಷ್ಟ್ರವಿನ ಕೆಲಸವೂ ಪ್ರಶಾಸ್ತೃವಿನ ಕೆಲಸವೂ ನಿನ್ನದೇ ಆಗಿರುತ್ತದೆ. ನೀನು ಯಜ್ಞದ ಯಜಮಾನನಿಗೆ ಅಗ್ನೀಧ್ರನಾಗುತ್ತೀ ಅಧ್ವರ್ಯುವಿನ ಕೆಲಸವನ್ನೂ ಮಾಡುತ್ತೀ ಮತ್ತು ನಮ್ಮ ಮನೆಯಲ್ಲಿ ಯಜ್ಞ ಜರುಗುವಾಗ ನೀನು ಬ್ರಹ್ಮನೂ, ಯಜ್ಞದ ಯಜಮಾನನೂ ಆಗುತ್ತೀ.

ಹಿಂದಿನ ವಿವರಗಳಿಂದ ಸಿಂಧೂ ಬಿಲ್ಲೆಗಳ ಮೇಲಿನ ತಲೆಯಲ್ಲಿ ಕೊಂಬುಗಳಿರುವ ತ್ರಿಮುಖ ಮತ್ತು ಏಕಮುಖ ದೇವನು ಆರ್ಯ ಜನರ ಪ್ರಧಾನ ದೇವನಾದ ಅಗ್ನಿಯಾಗಿದ್ದಾನೆಂತಲೂ, ಪ್ರಾಚೀನ ಆರ್ಯಜನರು, ಅಗ್ನಿಯನ್ನು ಸೂಚಿಸಲು ಹೋರಿಯನ್ನು ಉಪಯೋಗಿಸಿದುದರಿಂದ ಮತ್ತು ಅಗ್ನಿಯನ್ನು ವೃಷಭ ಉಕ್ಷಾ ಮಹಾನ್ ಮುಂತಾಗಿ ಕರೆದುದರಿಂದ ಅಗ್ನಿದೇವನ ಮನುಷ್ಯರೂಪದ ಚಿತ್ರದಲ್ಲಿ ಕೂಡ ಮನುಷ್ಯನ ತಲೆಯಲ್ಲಿ ಕೊಂಬುಗಳನ್ನು ಚಿತ್ರಿಸುತಿದ್ದರೆಂತಲೂ ಸ್ಪಷ್ಟವಾಗಿ ಸಿದ್ಧವಾಗುತ್ತದೆ. ಅಷ್ಟು ಮಾತ್ರವಲ್ಲದೇ ಸರ್ ಜಾನ್ ಮಾರ್ಶಲರು ಸುಮೇರದ ಹಾಗೂ ಬೆಬಿಲೋನದ ಅರಸರು ಮತ್ತು ಪುರೋಹಿತರು ತಮ್ಮ ದೇವತ್ವವನ್ನು ಸೂಚಿಸಲು ತಲೆಯಲ್ಲಿ ಕೊಂಬುಗಳನ್ನು ಧರಿಸುತಿದ್ದರೆಂದು ಹೇಳಿರುವುದರಿಂದ ಹಿಂದೆ ಆ ದೇಶಗಳಲ್ಲಿ ಆರ್ಯಜನರು ನೆಲಸಿದ್ದರೆಂದು. ಅಲ್ಲಿನ ಅರಸರು ಆರ್ಯರಾಗಿದ್ದರೆಂದು ಮತ್ತು ಅಲ್ಲಿ ವೈದಿಕ ಧರ್ಮವು ಪ್ರಚಲಿತವಿದ್ದಿತೆಂದು ಸಿದ್ಧವಾಗುತ್ತದೆ. ಯಜ್ಞಕಾಲದಲ್ಲಿ ಯಜಮಾನನೂ, ಪುರೋಹಿತರೂ ಅಗ್ನಿದೇವನ ಪ್ರತಿನಿಧಿಗಳು ಅಥವಾ ಅಗ್ನಿದೇವನೇ ಆಗುತ್ತಾರೆಂಬುದನ್ನು ಇಲ್ಲಿ ಸ್ಮರಿಸಬೇಕು.

ಸರ್ ಮಾರ್ಶಲರು ತನ್ನ ಪುಸ್ತಕದ ೧೧೧ನೆಯ ಪುಟದಲ್ಲಿ ಸಿಂಧೂ ಸಂಸ್ಕೃತಿಯು ಏಕೆ ಆರ್ಯರದಲ್ಲವೆಂಬುದನ್ನು ಸಿದ್ಧಪಡಿಸಲು ತನ್ನದೇ ಆದ ಹಲವು ಆಕ್ಷೇಪಗಳನ್ನು ಮುಂದೊಡ್ಡಿದ್ದಾರೆ. ಅವುಗಳಲ್ಲಿ ಮುಖ್ಯವಾದ ಕೆಲವು ಆಕ್ಷೇಪಗಳನ್ನು ಇಲ್ಲಿ ಮುಂದೆ ಉದಹರಿಸಿ ಒಂದೊಂದನ್ನೇ ವಿಮರ್ಶಿಸಲಾಗುವುದು.

೧. 'ವೇದಗಳಲ್ಲಿ ಮೀನು ಹಿಡಿಯುವುದರ ಕುರಿತು ಸ್ಪಷ್ಟ ಉಲ್ಲೇಖಗಳಿಲ್ಲ. ಆದುದರಿಂದ ವೈದಿಕ ಜನರು ಮೀನನ್ನು ಹೇವರಿಸುತಿದ್ದರೆಂದು ಮತ್ತು ಅವರು ಸಾಮಾನ್ಯವಾಗಿ ಭೂಚರ ಪ್ರಾಣಿಗಳ ಮಾಂಸವನ್ನು ತಿನ್ನುತಿದ್ದರೆಂದು ಹೇಳಬಹುದು. ಸಿಂಧೂ ಜನರಿಗಾದರೋ ಮೀನು ಆಮೆ ಮೊದಲಾದ ಜಲಚರ ಪ್ರಾಣಿಗಳ ಮಾಂಸವು ಸಾಮಾನ್ಯ ವ್ಯಂಜನವಾಗಿತ್ತು"

ಉತ್ತರ— ವೇದಗಳಲ್ಲಿ ಮೀನು ಹಿಡಿಯುವ ಉಲ್ಲೇಖವಿಲ್ಲವೆಂಬುದು ಸತ್ಯವಾಗಿದೆ. ಆದರೆ ಆರ್ಯಜನರು ಮೀನನ್ನು ಹೇವರಿಸುತಿದ್ದರು ಇಲ್ಲವೇ ಜಲಚರ ಪ್ರಾಣಿಗಳ ಮಾಂಸವನ್ನು ತಿನ್ನುತ್ತಿರಲಿಲ್ಲವೆಂಬುದು ಪ್ರಮಾಣಗಳಿಗೆ ವಿರುದ್ಧ

ವಾದ ಕಲ್ಪನೆಯಾಗಿದೆ. ಋಗ್ವೇದದೊಳಗಿನ ಮಂತ್ರಗಳೆಲ್ಲವೂ ದೇವತೆಗಳ ಸ್ತುತಿಗಳಾಗಿರುವುದರಿಂದ ಮತ್ತು ಯಜುರ್ವೇದದ ಮಂತ್ರಗಳು ಯಜ್ಞಕ್ಕೆ ಸಂಬಂಧಪಟ್ಟವುಗಳಾದುದರಿಂದ ಅವುಗಳಲ್ಲಿ ಮೀನು ಹಿಡಿಯುವುದರ ಉಲ್ಲೇಖವು ಬರಬೇಕಾದ ಪ್ರಸಂಗವೇ ಇಲ್ಲ. ಆದರೆ ಆರ್ಯ ಜನರ ಖಾದಿರ ಮತ್ತು ಪಾರಸ್ಕರ ಗೃಹ್ಯಸೂತ್ರಗಳಲ್ಲಿ ಉಲ್ಲೇಖಿಸಲ್ಪಟ್ಟಿರುವ ಮಗುವಿನ ಅನ್ನ ಪ್ರಾಶನ ಸಂಸ್ಕಾರದಲ್ಲಿ ಮಗುವಿಗೆ ಅನ್ನದೊಂದಿಗೆ ಮೀನಿನ ಮಾಂಸವನ್ನು ತಿನ್ನಿಸಬೇಕೆಂದು ವಿಧಿಸಿದೆ. ಮತ್ತು ಧರ್ಮಸೂತ್ರಗಳಲ್ಲಿ ಯಾವ ಯಾವ ಮೀನಿನ ಮಾಂಸವನ್ನು ತಿನ್ನಬಹುದೆಂದು ಸ್ಪಷ್ಟಪಡಿಸಿದೆ. ಆ ಪ್ರಮಾಣಗಳಿಂದ ಆರ್ಯಜನರು ಆದಿ ಕಾಲದಿಂದಲೂ, ಆಮೆ, ಮೀನು ಮೊದಲಾದ ಜಲಚರ ಪ್ರಾಣಿಗಳ ಮಾಂಸವನ್ನು ತಿನ್ನುತಿದ್ದರೆಂದು ಸ್ಪಷ್ಟವಾಗಿ ಸಿದ್ಧವಾಗುತ್ತದೆ.

ಅದಲ್ಲದೇ ಸರ್ ಜಾನ್ ಮಾರ್ಶಲರು -"ಸಿಂಧೂ ಜನರಿಗೆ ಮೀನು ಚಿಪ್ಪು, ಆಮೆ ಮೊದಲಾದ ಜಲಚರ ಪ್ರಾಣಿಗಳ ಮಾಂಸವು ಸಾಮಾನ್ಯ ವ್ಯಂಜನವಾಗಿದ್ದಿತೆಂದು ಹೇಳಿದುದು – ಅವರು ಅದಕ್ಕಿಂತ ಮೊದಲು ವರ್ತಮಾನ ಪತ್ರಿಕೆಗಳಲ್ಲಿ ಪ್ರಕಟನೆಗೆ ಕೊಟ್ಟ ಹೇಳಿಕೆಗೆ ವಿರುದ್ಧವಾಗಿದೆ. ಅಂದರೆ ಅವರು ಮೊದಲು "ಸಿಂಧೂ ಜನರ ಆಹಾರದಲ್ಲಿ ಗೋವಿನ, ಆಡಿನ, ಹಂದಿಯ, ಆಮೆಯ ಹಾಗೂ ನಾನಾ ಬಗೆಯ ಮೀನಿನ ಮಾಂಸವು ಸೇರಿದ್ದಿತು।" ಎಂದು ಹೇಳಿದ್ದಾರೆ. ಹಾಗೆಯೇ ಹಳಪ್ಪಾದ ಅಗೆತಗಳಲ್ಲಿ ಬೆಳಕಿಗೆ ಬಂದಿದ್ದ ಪಶುಗಳ ಎಲುಬಿನ ದೊಡ್ಡಗುಡ್ಡೆಯನ್ನು ಕಣ್ಣಾರೆ ಕಂಡವರು ಸಿಂಧೂ ಜನರು ಜಲಚರ ಪ್ರಾಣಿಗಳ ಮಾಂಸಕ್ಕಿಂತ ಹೆಚ್ಚಾಗಿ ಪಶುಗಳ ಮಾಂಸವನ್ನು ತಿನ್ನುತಿದ್ದರೆಂದು ಹೇಳಲೇ ಬೇಕಾಗುವುದು.[2]

೨. ಹೆಚ್ಚು ಹುಲ್ಲು ಬೆಳೆಯುವಂಥ ಉತ್ತರ ದೇಶದ ಜನರ ಜೀವನದಲ್ಲಿ ಕುದುರೆಗೆ ಪ್ರಮುಖ ಪಾತ್ರವಿರುತಿದ್ದಂತೆಯೇ ವೈದಿಕ ಆರ್ಯ ಜನರ ಜೀವನದಲ್ಲಿ ಕೂಡ ಕುದುರೆಗೆ ಪ್ರಮುಖ ಪಾತ್ರವಿದ್ದಿತು. ಪರಂತು ಮೊಹೆಂಜೋದಳೋದ ಮೇಲಿನ ಸ್ತರದಲ್ಲಿ ಕುದುರೆಯ ಕೆಲವು ಎಲುಬುಗಳು ದೊರೆತಿವೆಯಾದರೂ ಮೊಹೆಂಜೋದಳೋದ ಮತ್ತು ಹಳಪ್ಪಾದ ಚಿತ್ರಿತ ಪ್ರಾಣಿಗಳಲ್ಲಿ ಕುದುರೆಗೆ ಸ್ಥಾನ

---

1. Besides bread and milk, the food of the Indus people appears to have included beaf, mutton, pork, the flesh of tortoise, turtle and gharial fresh fish from the Indus and dried fish imported from the sea-coast. Evidence of these various articles of diet is furnished by bones some times in a half burnt condition found among the houses.

The Forward January 3rd 1928.

2 Excavations at Harappa Vol. II Plate xxx (c)

ದೊರೆತಿಲ್ಲವಾದುದರಿಂದ ಅಲ್ಲಿನ ಜನರಿಗೆ ಕುದುರೆಯ ಪರಿಚಯವಿರಲಿಲ್ಲವೆಂತಲೂ, ಅಲ್ಲಿ ಕುದುರೆಯು ಬಹಳ ತರುವಾಯ ಬಂದುದೆಂತಲೂ ಹೇಳಬೇಕಾಗುತ್ತದೆ.

ಉತ್ತರ– ಸರ್ ಮಾರ್ಶಲರು– "ಸಿಂಧೂ ಕಣಿವೆಯಲ್ಲಿ ಕುದುರೆಯು ಬಹಳ ತರುವಾಯ ಬಂದುದಾದುರಿಂದ ಸಿಂಧೂ ಜನರಿಗೆ ಕುದುರೆಯ ಪರಿಚಯ ವಿರಲಿಲ್ಲವೆಂದು ಹೇಳಿದ ಬಗೆಗೆ ಏನೆನ್ನಬೇಕೋ ತಿಳಿದುದಾಗಿದೆ. ಏಕೆಂದರೆ ಸಿಂಧೂ ಕಣಿವೆಯ ಕುದುರೆಯ ಸಂಬಂಧವಲ್ಲಿ ಅವರು ಪರಸ್ಪರ ಅಸಂಗತವಾದ ಮೂರು ಹೇಳಿಕೆಗಳನ್ನಿತ್ತಿದ್ದಾರೆ. ಅವರು ಮೊದಲು ವರ್ತಮಾನ ಪತ್ರಿಕೆಗಳಲ್ಲಿ ಪ್ರಕಟಿಸಲು ಕೊಟ್ಟ ಹೇಳಿಕೆಯಲ್ಲಿ– **"ಸಿಂಧೂ ಜನರು ಪಳಗಿಸಿದ ಪ್ರಾಣಿಗಳಲ್ಲಿ ಹಿಣಿಲುಳ್ಳ ಹಾಗೂ ಉದ್ದ ಕೊಂಬಿನ ಹೋರಿ, ಗಿಡ್ಡ ಕೊಂಬಿನ ಹೋರಿ, ಕೋಣ, ಕುರಿ, ಹಂದಿ, ನಾಯಿ ಕುದುರೆ ಮತ್ತು ಆನೆ ಇದ್ದುವು. ಒಂಟೆ ಮತ್ತು ಬೆಕ್ಕಿನ ಕುರುಹು ಕೂಡ ಕಾಣಸಿಗಲಿಲ್ಲ. ಸಿಂಧೂ ಕುದುರೆಯು ಚಿಕ್ಕದಾಗಿದ್ದು ಭಾರತೀಯ ತಳಿಯ ತಬ್ಬು ಆಗಿತ್ತು"**[1] ಅಂದಿದ್ದಾರೆ. ಆದರೆ ಅವರು ಆ ಹೇಳಿಕೆಯಲ್ಲಿ ಕುದುರೆಯು ಅವಶೇಷಗಳು ಅಗೆತದ ಯಾವ ಸ್ತರದಲ್ಲಿ ದೊರೆತಿದ್ದುವೆಂದು ಹೇಳಿರಲಿಲ್ಲ. ಹಾಗಾಗಿ ಅವರು ತರುವಾಯ ಪ್ರಕಟಿಸಿದ ಪುಸ್ತಕದಲ್ಲಿ – ಸಿಂಧೂ ಜನರಿಗೆ ಕುದುರೆಯ ಪರಿಚಯವಿರಲಿಲ್ಲವೆಂದು ಸಾಧಿಸಲು – ಕುದುರೆಯ ಎಲುಬುಗಳು ಮೇಲಿನ ಸ್ತರದಲ್ಲಿ ಕಂಡು ಬಂದಿದ್ದುವೆಂದಿದ್ದಾರೆಂಬುದರಲ್ಲಿ ಸಂದೇಹವಿಲ್ಲ. ಇನ್ನೂ ವಿಚಿತ್ರವಾದುದೆಂದರೆ ಅವರು ತನ್ನ ಮೊದಲನೆಯ ಹೇಳಿಕೆಯಲ್ಲಿ– ಒಂಟೆಯ ಕುರುಹು ಕೂಡ ಕಾಣಸಿಗಲಿಲ್ಲವೆಂದು ಹೇಳಿದ್ದರೂ ತರುವಾಯ ಪ್ರಕಟಿಸಿದ ಪುಸ್ತಕದಲ್ಲಿ ಒಂಟೆಯ ಎಲುಬು ಹದಿನೈದು ಅಡಿಗಳ ಆಳದಲ್ಲಿ ದೊರೆತಿದ್ದಿತೆಂದು ಹೇಳಿದುದಾಗಿದೆ. ಅಂದರೆ ಅವರು ತನ್ನ ಪುಸ್ತಕದಲ್ಲಿ ಮುಂದಿನಂತೆ ಬರೆದಿದ್ದಾರೆ–

"ಕುದುರೆಯ ಜಾತಿಯ ವಿಷಯದಲ್ಲಿ ಹೇಳುವುದಾದರೆ ಮೊಹೆಂಜೋದಳೋದಲ್ಲಿ ದೊರೆತ ಕುದುರೆಯು ಅಲ್ಲಿ ಪ್ರತೀಕ್ಷಿಸಬಹುದಾದುದೇ ಆಗಿತ್ತು. ಆದರೆ ಸಿಂಧೂ ಮುದ್ರೆಗಳ ಮೇಲೆ ಬೇರೆ ಹಲವು ಪ್ರಾಣಿಗಳ ಚಿತ್ರಗಳಿದ್ದರೂ

---

1. Among the domesticated animals were - The humped Indian long horned bull (Bos Indicus) (of which to judge by the frequency of the remains large herds must have been maintained) the sheep, pig (sus-eristatus) dog. horse and elephant. No. trace has been found either of the camel or of cat. The horse in the Indus Valley was small "equis cabalus" near akin to the Indian countrybred." The Forward January 3rd 1928.

ಕುದುರೆಯ ಚಿತ್ರವಿಲ್ಲದಿರುವುದು ಮತ್ತು ಕುದುರೆಯ ಎಲುಬುಗಳು ಭೂಪೃಷ್ಠದ ಸಮೀಪದಲ್ಲಿಯೇ ದೊರೆತುದು, ಅವುಗಳು ತರುವಾಯದ ಕಾಲದವುಗಳೆಂಬುದನ್ನು ಸೂಚಿಸುತ್ತದೆ. ಹಾಗಿದ್ದರೂ ಈ "ನಾಸ್ತಿ"ವಾದವು ಪೂರ್ಣ ನಿರ್ಣಾಯಕವಲ್ಲ. ಏಕೆಂದರೆ ಒಂಟೆಯ ಎಲುಬು ಹದಿನೈದು ಅಡಿಗಳ ಆಳದಲ್ಲಿ ದೊರಕಿದ್ದರೂ ಸಿಂಧೂ ಮುದ್ರೆಗಳ ಮೇಲೆ ಒಂಟೆಯ ಚಿತ್ರವೂ ಇಲ್ಲ. ಅಲ್ಲದೇ ಶಕಪೂರ್ವ ನಾಲ್ಕನೆಯ ಸಹಸ್ರಾಬ್ದಿಯ ಮಧ್ಯಕಾಲಕ್ಕಿಂತ ಮೊದಲೇ ಮೆಸಪೊಟೇಮಿಯಾದಲ್ಲಿ ಕುದುರೆಯು ಪರಿಚಿತವಾಗಿದ್ದಿತೆಂಬ ಪ್ರೊ. ಲ್ಯಾಂಗ್ಡನರ ಊಹೆಯು ಸರಿಯೆಂದಾದರೆ ಆ ಕುದುರೆಯು ಅಲ್ಲಿಂದ ಸಿಂಧೂ ಕಣಿವೆಗೂ ಬಂದಿರುವ ಸಂಭವವಿದೆ."

ಒಂದಿನ ಹೇಳಿಕೆಯನ್ನು ಸ್ವಲ್ಪ ಆಳವಾಗಿ ಪರಿಶೀಲಿಸಿದರೆ ಮೊಹೆಂಜೋದಡೋದ ಅಗೆತಗಳ ಮೇಲ ಸ್ತರದಲ್ಲಿ ಕುದುರೆಯ ಅವಶೇಷಗಳು ದೊರಕಿದ್ದುವೆಂಬುದು ಸರ್ ಮಾರ್ಶಲರಿಗೆ ಗೊತ್ತಿರಲಿಲ್ಲವೆಂದು ಮತ್ತು ಬೇರೆಯವರ ಹೇಳಿಕೆಯ ಮೇಲಿಂದ ಅವರು ತನ್ನ ಮೊದಲಿನ ಹೇಳಿಕೆಯನ್ನು ಪರಿವರ್ತಿಸಿದ್ದರೆಂದು ಹೇಳಬೇಕಾಗುತ್ತದೆ. ಹೇಗಿದ್ದರೂ ಕೆಲವು ವರ್ಷಗಳ ಹಿಂದೆ ಸ್ವತಂತ್ರ ಭಾರತದ ಸರಕಾರವು ಸೌರಾಷ್ಟ್ರದ ಲೋಥಲ್ ಎಂಬಲ್ಲಿ ಡಾ. ಎಸ್. ಆರ್. ರಾವ್ ಅವರ ನಾಯಕತ್ವದಲ್ಲಿ ನಡೆಸಿದ ಅಗೆತಗಳಲ್ಲಿ ಸಿಂಧೂ ಸಂಸ್ಕೃತಿಯ ಇತರ ಎಲ್ಲ ಕುರುಹುಗಳೊಂದಿಗೆ ಕುದುರೆಯ ಅವಶೇಷಗಳೂ, ಇಟ್ಟಿಗೆಯ ಕುದುರೆಗಳೂ, ಸರ್ ಮಾರ್ಶಲ್ ಮತ್ತು ಇತರ ಬ್ರಿಟಿಷ್ ವಿದ್ವಾಂಸರು ಸಿಂಧೂ ಕಣಿವೆಯಲ್ಲಿ ಕಂಡು ಬಂದಿಲ್ಲವೆಂದು ಹೇಳಿ ಮರೆಮಾಜಿದ ಹಾಗೂ ಆರ್ಯ ಜನರ ಮುಖ್ಯ ಕುರುಹಾದ ಯಜ್ಞಚಿತಿಗಳೂ ಕಂಡು ಬಂದಿವೆ. ಆದುದರಿಂದ ಸರ್ ಮಾರ್ಶಲರು ಸಿಂಧೂ ಕಣಿವೆಯ ನಿವಾಸಿಗಳಿಗೆ ಕುದುರೆಯ ಪರಿಚಯವಿರಲಿಲ್ಲವೆಂಬುದು ವಸ್ತುಸ್ಥಿತಿಗೆ ವಿರುದ್ಧವಾದುದೆನ್ನಬೇಕಾಗುತ್ತದೆ.

೩. ವೈದಿಕ ಆರ್ಯಜನರಲ್ಲಿ ಆಕಳು ಇತರ ಪ್ರಾಣಿಗಳಿಗಿಂತ ಮೌಲಿಕವಾಗಿದ್ದಿತು. ಮತ್ತು ಪೂಜ್ಯವಾಗಿದ್ದಿತು. ಸಿಂಧೂ ಜನರಲ್ಲಿ ಆಕಳು ವಿಶೇಷ ಗಣನೀಯವಾಗಿರಲಿಲ್ಲ. ಅವರಲ್ಲಿ ಹೋರಿಯು ಆಕಳಿನ ಸ್ಥಾನವನ್ನು ಪಡೆದಿದ್ದಿತು.

ಸರ್ ಮಾರ್ಶಲರು ಮುಂದೆ ತಂದಿರುವ ಈ ಆಕ್ಷೇಪಕ್ಕೆ ಮುಖ್ಯ ಆಧಾರವು ಸಿಂಧೂ ಕಣಿವೆಯ ಅಗೆತಗಳಲ್ಲಿ ದೊರಕಿದ ಅಧಿಕಾಂಶ ಬಿಲ್ಲೆಗಳ ಮೇಲೆ ಹೋರಿಯ ಚಿತ್ರವಿರುವುದೇ ಆಗಿದೆ. ಆದರೆ ಆ ಮುದ್ರೆಗಳಿಂದಾಗಿ ಸಿಂಧೂ ಜನರಲ್ಲಿ ಗೋವು ಗಣನೀಯವಾಗಿರಲಿಲ್ಲವೆಂದು ಹೇಳಲಾಗುವುದಿಲ್ಲ. ಪರಂತು ಸಿಂಧೂ ಕಣಿವೆಯಲ್ಲಿ ದೊರೆತ ಅಧಿಕಾಂಶ ಬಿಲ್ಲೆಗಳ ಮೇಲೆ ನಾನಾ ಭಾವಭಂಗಿಗಳ ಹೋರಿಯ ಚಿತ್ರವಿರುವುದರ ಏಕಮಾತ್ರ ಕಾರಣವು ಅಥವಾ ಸಿಂಧೂ ಜನರಲ್ಲಿ ಹೋರಿಗೆ ಅಂಥ

ಪ್ರಾಧಾನ್ಯ ದೊರೆತುದರ ಏಕಮಾತ್ರಕಾರಣವು ಹೋರಿಯು ಆರ್ಯಜನರ ಪ್ರಧಾನ ದೇವನಾದ ಅಗ್ನಿಯ ಪ್ರತೀಕವಾಗಿದ್ದುದೇ ಆಗಿದೆ. ಅಂದರೆ ಸಿಂಧೂ ಕಣಿವೆಯ ನಿವಾಸಿಗಳು ಆರ್ಯಜನರಾಗಿದ್ದುದೇ ಆಗಿದೆ.

೪. ಋಗ್ವೇದದಲ್ಲಿ ಹುಲಿಯ ಅಂದರೆ "ವ್ಯಾಘ್ರ" ಶಬ್ದದ ಉಲ್ಲೇಖ ವಿಲ್ಲ. ಆನೆಯ ಉಲ್ಲೇಖವಾದರೂ ಬಹಳ ಕಡಿಮೆಯೇ. ಆದರೆ ಸಿಂಧೂ ಕಣಿವೆಯ ಜನರಿಗೆ ಆ ಎರಡು ಪ್ರಾಣಿಗಳೂ ತುಂಬಾ ಪರಿಚಿತವಾದವುಗಳಾಗಿವೆ.

ಸರ್ ಮಾರ್ಶಲರು–ಸಿಂಧೂ ಸಂಸ್ಕೃತಿಯು ಆರ್ಯ ಜನರಿಗೆ ಸೇರಿದುದಲ್ಲ ವೆಂದು ಸಾಧಿಸಲು ಮುಂದೆ ತಂದಿರುವ ಈ ಆಕ್ಷೇಪವು ಅತ್ಯಂತ ಬಲಹೀನವಾಗಿದೆ. ಏಕೆಂದರೆ ಋಗ್ವೇದದಲ್ಲಿ ವ್ಯಾಘ್ರ ಅಂದರೆ ಹುಲಿ ಎಂಬ ಶಬ್ದ ಮಾತ್ರವಲ್ಲ. ಬೇರೆ ಹಲವು ನಿತ್ಯೋಪಯೋಗೀ ವಸ್ತುಗಳ ಮತ್ತು ಪ್ರಾಣಿಗಳ ಹೆಸರುಗಳು ಕೂಡ ಇಲ್ಲ. ಮತ್ತು ಆ ಎಲ್ಲ ಹೆಸರುಗಳು ಹಾಗೂ ಇತರ ಎಲ್ಲ ವಿಷಯಗಳು ಋಗ್ವೇದದಲ್ಲಿ ಇರಬೇಕೆಂದು ಅಪೇಕ್ಷಿಸಲು ಋಗ್ವೇದವು ಶಬ್ದಕೋಶವಾಗಲೀ, ವಿಶ್ವಕೋಶವಾಗಲೀ ಅಲ್ಲ. ಆದುದರಿಂದ ಋಗ್ವೇದದಲ್ಲಿ ವ್ಯಾಘ್ರ ಶಬ್ದವಾಗಲೀ ಇತರ ಶಬ್ದಗಳಾಗಲೀ ಬಂದಿಲ್ಲ ವೆಂದೊಡನೆ ಋಗ್ವೇದ ಕಾಲದ ಆರ್ಯಜನರಿಗೆ ವ್ಯಾಘ್ರದ ಪರಿಚಯವಿರಲಿಲ್ಲ ವೆಂದಾಗಲೀ, ಆ ಕಾಲದ ಆರ್ಯಜನರ ಭಾಷೆಯಲ್ಲಿ ವ್ಯಾಘ್ರ ಮತ್ತು ಇತರ ಶಬ್ದ ಗಳು ಪ್ರಚಲಿತವಿರಲಿಲ್ಲವೆಂದಾಗಲೀ ಸಿದ್ಧವಾಗುವುದಿಲ್ಲ. ವ್ಯಾಘ್ರ ಶಬ್ದವು ಋಗ್ವೇದದಲ್ಲಿ ಬಂದಿಲ್ಲವಾದರೆ ಋಗ್ವೇದದಷ್ಟೇ ಅಥವಾ ಹಲವು ಅಂಶಗಳಲ್ಲಿ ಋಗ್ವೇದಕ್ಕಿಂತಲೂ ಪ್ರಾಚೀನ ವಾಗಿರುವ ಯಜುರ್ವೇದದ ತೈತ್ತಿರೀಯ ಸಂಹಿತೆ ಯಲ್ಲಿ ವ್ಯಾಘ್ರ ಶಬ್ದವು ಬಂದಿದೆಯಷ್ಟೇ ಅಲ್ಲ ಅದು ಅಲ್ಲಿ ಸಿಂಧೂ ಬಿಲ್ಲೆಯ ಮೇಲಿನ ವ್ಯಾಘ್ರವನ್ನು ವರ್ಣಿಸುವುದಕ್ಕಾಗಿಯೇ ಬಂದಿರುವಂತಿದೆ. ಅದನ್ನು ಹಿಂದೆ ಉದಹರಿಸಿದೆ.

೫. ವೈದಿಕ ಧರ್ಮದಲ್ಲಿ ಸ್ತ್ರೀತ್ವವು ಪುರುಷತ್ವಕ್ಕೆ ಅಧೀನವಾಗಿದೆ. ತರುವಾಯದ ವೈದಿಕ ರುದ್ರನನ್ನು ಶಿವನೆಂದು ತಿಳಿದರೂ ಮಾತೃದೇವಿಯಾಗಲೀ ಶಿವನಾಗಲೀ ವೈದಿಕ ದೇವತೆಗಳೆನ್ನಲಾಗುವುದಿಲ್ಲ. ಸಿಂಧೂ ಜನರಲ್ಲಾದರೋ ಮಾತೃ ದೇವಿ ಮತ್ತು ಶಿವನು ಪ್ರಮುಖರಾಗಿದ್ದಾರೆ. ಮತ್ತು ಸ್ತ್ರೀತ್ವವು ಪುರುಷತ್ವ ಕ್ಕಿಂತ ಶ್ರೇಷ್ಠತೆಯನ್ನು ಪಡೆದಿದ್ದಿತೆನ್ನಲಾಗದಿದ್ದರೂ ಸಮಾನತೆಯನ್ನು ಪಡೆದಿದ್ದಿ ತೆನ್ನಬಹುದು.

ಸರ್ ಮಾರ್ಶಲರ ಈ ಆಕ್ಷೇಪವು ಆದಿಯಿಂದ- ಅಂತ್ಯದ ತನಕ ಕಲ್ಪಿತ ವಾಗಿದ್ದು – ವೈದಿಕ ಪ್ರಮಾಣಗಳಿಗೆ ವಿರುದ್ಧವಾಗಿದೆ. ಮಾತೃದೇವಿ ಮತ್ತು ಶಿವನು ಆರ್ಯೇತರ ಜನರ ದೇವತೆಗಳೆಂಬ ಅವರ ವಾದಕ್ಕೆ ಒಂದೇ ಒಂದಾದರೂ ಲಿಖಿತ ಪ್ರಮಾಣದ ಆಧಾರವಿಲ್ಲವೆಂದು ಹಿಂದೆ ವಿವರಿಸಿದೆ. ಆದುದರಿಂದ ಇಲ್ಲಿ ಸ್ತ್ರೀತ್ವದ ಮಹತ್ವದ ಕುರಿತು ಮಾತ್ರ ಚರ್ಚಿಸಲಾಗುವುದು.

ಸರ್ ಮಾರ್ಶಲರು ವೈದಿಕ ಧರ್ಮದಲ್ಲಿ ಸ್ತ್ರೀತ್ವವು ಸಂಪೂರ್ಣವಾಗಿ ಪುರುಷತ್ವಕ್ಕೆ ಅಧೀನವಾಗಿದೆ ಎಂದುದು ವೇದಗಳ ಕಾಲಕ್ಕಾಗಲೀ, ವೇದಪೂರ್ವ ಕಾಲಕ್ಕಾಗಲೀ ಅನ್ವಯಿಸುವುದಿಲ್ಲ. ಅಂದರೆ ಅರ್ವಾಚೀನರಾದ ಕೆಲವು ಸ್ಮೃತಿ ಕಾರರು ಅಥವಾ ಧರ್ಮಶಾಸ್ತ್ರಕಾರರು ಸ್ತ್ರೀಯರ ಸ್ವಾತಂತ್ರ್ಯವನ್ನು ಮತ್ತು ಅಧಿಕಾರಗಳನ್ನು ಕಸಿದುಕೊಂಡು ಅವರನ್ನು ಜನ್ಮದಿಂದ ಮರಣದ ತನಕ ಪರಾಧೀನ ರಾಗಿರುವಂತೆ ಮಾಡಿದ್ದಾರೆಂಬುದು ಸತ್ಯವಾದರೂ ವೇದಕಾಲದಲ್ಲಿ ಅಥವಾ ಅದ ಕ್ಕಿಂತ ಪೂರ್ವಕಾಲದಲ್ಲಿ ಸ್ತ್ರೀಯರ ಸ್ಥಾನಮಾನಗಳು ಪುರುಷರಿಗಿಂತ ಕೀಳಾಗಿರಲಿಲ್ಲ. ಕೀಳಾಗಿದ್ದುದಾದರೆ- ಘೋಷಾ, ಅಪಾಲಾ, ವಿಶ್ವವಾರಾ ಮೊದಲಾದ ಮಂತ್ರಕರ್ತ್ರಿ ಯರು ಋಗ್ವೇದದಲ್ಲಿ ಇರುತ್ತಿರಲಿಲ್ಲ. ಸರಸ್ವತೀ, ಭಾರತೀ ಮೊದಲಾದ ಸರ್ವತಂತ್ರ ಸ್ವತಂತ್ರರೂ, ಸರ್ವಶ್ರೇಷ್ಠರೂ ಆದ ದೇವಿಯರು ಹುಟ್ಟುತ್ತಿರಲಿಲ್ಲ. ಪ್ರಾಚೀನ ಆರ್ಯ ಜನರಲ್ಲಿ ಪತ್ನಿಯಿಂದಾಗಿಯೇ ಪತಿಗೆ ಯಜ್ಞದ ಅಧಿಕಾರವು ಪ್ರಾಪ್ತವಾಗು ತಿದ್ದಿತು. ಪತ್ನಿಯ ಸಮ್ಮತಿ ಮತ್ತು ಸಹಕಾರಗಳಿಲ್ಲದೇ ಯಾವನೊಬ್ಬ ಪುರುಷನೂ ಯಾವುದೊಂದು ಗೃಹ್ಯಕರ್ಮವನ್ನಾಗಲೀ, ಶ್ರೌತಯಜ್ಞವನ್ನಾಗಲೀ ಜರಗಿಸುವಂತಿರ ಲಿಲ್ಲ. ಅಷ್ಟೇಕೆ ಪತ್ನಿಯು ಪ್ರೇಮವಶಳಾಗಿ ಜಾರನನ್ನು ಕೂಡಿದರೂ- ಪತಿಯು ಅವಳನ್ನು ಏನೂ ಮಾಡುವಂತಿರಲಿಲ್ಲ. ಆದುದರಿಂದ ವೈದಿಕ ಧರ್ಮದಲ್ಲಿ ಸ್ತ್ರೀತ್ವಕ್ಕೆ ಪ್ರಾಧಾನ್ಯವಿರಲಿಲ್ಲವೆಂಬ ಸರ್ ಮಾರ್ಶಲರ ಆಕ್ಷೇಪದಲ್ಲಿ ಹುರು ಳಿಲ್ಲವೆನ್ನಬೇಕಾಗಿದೆ.

೬. ವೈದಿಕ ಧರ್ಮವು ವಿಗ್ರಹ ರಹಿತವಾದುದು. ಸಿಂಧೂ ಕಣಿವೆಯ ಲ್ಲಾದರೋ ಎಲ್ಲೆಲ್ಲಿಯೂ ಪ್ರತಿಮೆಗಳು ಕಂಡು ಬಂದಿವೆ.

ಸರ್ ಮಾರ್ಶಲರ ಈ ಆಕ್ಷೇಪವು ಕೂಡ ಬರಿಯ ಕಲ್ಪನೆಯಾಗಿದೆ. ಮತ್ತು ಶುದ್ಧ ಪೊಳ್ಳಾಗಿದೆ. ಆರ್ಯ ಜನರು ಯಜ್ಞಕಾಲದಲ್ಲಿ ದೇವತೆಗಳಿಗೆ ಆಹುತಿಗಳನ್ನು ಅರ್ಪಿಸುವಾಗ ಆಯಾ ದೇವತೆಯ ಪ್ರತೀಕವನ್ನು ಅಥವಾ ಪ್ರತಿಮೆ ಯನ್ನು ತಂದು ಯಜ್ಞಕುಂಡದ ಬಳಿಯಲ್ಲಿ ಹಾಸಿದ ದರ್ಭೆಗಳ ಮೇಲೆ ಇರಿಸುತಿದ್ದ ರೆಂದು ಹಿಂದೆ "ಆರ್ಯ ಜನರ ವೈದಿಕ ಸಂಸ್ಕೃತಿ" ಎಂಬ ಅಧ್ಯಾಯದಲ್ಲಿಯೂ ತರುವಾಯದ ಅಧ್ಯಾಯಗಳಲ್ಲಿಯೂ ವಿವರಿಸಿದೆ. ಆರ್ಯ ಜನರು ತಮ್ಮ ಯಜ್ಞ ಗಳಲ್ಲಿ ದೇವತೆಗಳ ಪ್ರತಿಮೆಗಳನ್ನು ಉಪಯೋಗಿಸುತ್ತಿದ್ದುದರಿಂದಲೇ ಸಿಂಧೂ ಕಣಿವೆಯಲ್ಲಿ ದೇವತೆಗಳ ಪ್ರತಿಮೆಗಳೂ ಚಿತ್ರಸಂಕೇತಗಳಿರುವ ಬಿಲ್ಲೆಗಳೂ ದೊರಕಿ ರುವುದಾಗಿದೆ. ಋಗ್ವೇದದೊಳಗಿನ ಆಪ್ರೀ ಸೂಕ್ತಗಳು ಮತ್ತು ತೈತ್ತಿರೀಯ ಬ್ರಾಹ್ಮಣದೊಳಗಿನ ೨-೬-೭ರಿಂದ ೧೭ರ ತನಕದ ಅನುವಾಕಗಳು ಪ್ರಾಚೀನ ಕಾಲದ ಆರ್ಯಜನರು ತಮ್ಮ ಯಜ್ಞಗಳಲ್ಲಿ ದೇವತೆಗಳ ಪ್ರತೀಕಗಳನ್ನು ಅಥವಾ ಪ್ರತಿಮಾ ರೂಪಗಳನ್ನು ಉಪಯೋಗಿಸುತಿದ್ದರೆಂಬುದನ್ನು ಲಿಖಿತ ಪ್ರಮಾಣ ಗಳಿಂದ ಸಿದ್ಧಪಡಿಸುತ್ತವೆ. ಆದರೆ ಭಾರತ ವರ್ಷದ ಮೂಲನಿವಾಸಿಗಳು ಆರ್ಯ

ಜನರು ಬರುವ ಮೊದಲು ಪ್ರತಿಮೆಗಳನ್ನು ಪೂಜಿಸುತಿದ್ದರೆಂದು ಸಿದ್ಧಪಡಿಸುವಂಥ ಪ್ರಮಾಣಗಳು ಇಂದಿನ ತನಕ ಮುಂದೆ ಬಂದಿಲ್ಲ.

೭. ಪ್ರಮುಖ ವೈದಿಕ ದೇವತೆಗಳಲ್ಲಿ ಅಗ್ನಿಯು ಕೂಡ ಸೇರಿದ್ದಾನೆ. ಮತ್ತು ಗಾರ್ಹಪತ್ಯ ಯಜ್ಞಕುಂಡವು ಪ್ರತಿಯೊಂದು ಆರ್ಯ ಗೃಹದ ವೈಶಿಷ್ಟ್ಯವಾಗಿದೆ. ಪರಂತು ಮೊಹೆಂಜೋದಳೋದ ಮನೆಗಳಲ್ಲಿ ಅಗ್ನಿಕುಂಡಗಳು ಇರಲಿಲ್ಲ.

ಈ ಆಕ್ಷೇಪವು ಮೂಲದಲ್ಲಿಯೇ ವಿಪರ್ಯಸ್ತವಾಗಿದೆ. ಮೊದಲನೆಯದಾಗಿ ಅಗ್ನಿಯು ಪ್ರಮುಖ ವೈದಿಕ ದೇವತೆಗಳಲ್ಲಿ ಒಬ್ಬನಲ್ಲ. ಅವನೇ ವೈದಿಕ ದೇವತೆಗಳಲ್ಲಿ ಪ್ರಮುಖ ಅಥವಾ ಪ್ರಧಾನ ದೇವನಾಗಿದ್ದಾನೆ. ಎರಡನೆಯದಾಗಿ ಮೊಹೆಂಜೋದಳೋದ ಮನೆಗಳಲ್ಲಿ ಅಗ್ನಿಕುಂಡಗಳು ಇರಲಿಲ್ಲವೆಂದುದು ಮಿಥ್ಯಾಕಥನವಾಗಿದೆ. ಏಕೆಂದರೆ ಹಳಪ್ಪಾದ ಮನೆಗಳಲ್ಲಿ ಗಾರ್ಹಪತ್ಯ ಚಿತಿಯಿರುವ ಛಾಯಾ ಚಿತ್ರವಿದೆ. ಆದುದರಿಂದ ಮೊಹೆಂಜೋದಳೋದ ಮನೆಗಳಲ್ಲಿಯೂ ಗಾರ್ಹಪತ್ಯ ಚಿತಿಗಳಿದ್ದುವೆಂಬುದರಲ್ಲಿ ಸಂದೇಹವಿಲ್ಲ. ಆದುದರಿಂದ ಬ್ರಿಟಿಷ್ ವಿದ್ವಾಂಸರು- ಸಿಂಧೂ ಸಂಸ್ಕೃತಿಯು ಆರ್ಯಜನರಿಗೆ ಸೇರಿದುದಲ್ಲವೆಂದು ಸಾಧಿಸುವ ಸಲುವಾಗಿಯೇ ಸಿಂಧೂ ಕಣಿವೆಯಲ್ಲಿ ಯಜ್ಞಕುಂಡಗಳು ಮತ್ತು ಯಜ್ಞಚಿತಿಗಳು ಕಂಡು ಬಂದಿದ್ದರೂ ಕಂಡು ಬಂದಿಲ್ಲವೆಂದು ಮರೆಮಾಜಿದ್ದಾರೆನ್ನ ಬೇಕಾಗುತ್ತದೆ. ಮತ್ತು ಹಾಗೆನ್ನಲು ದೃಢವಾದ ಪ್ರಮಾಣವೂ ಇದೆ.

ಅದೇಂದರೆ- ಮೊಹೆಂಜೋದಳೋದ ಸನ್ನಿವೇಶವನ್ನು ಪ್ರಾಚೀನ ವಸತಿಯ ಭಗ್ನಾವಶೇಷವೆಂದು ಕಂಡು ಹಿಡಿದು ಅಲ್ಲಿನ ಅಗೆತಗಳಲ್ಲಿ ನಾಯಕನಾಗಿ ಕಾರ್ಯ ನಿರ್ವಹಿಸಿದ ಪ್ರೊ. ರಾಖಾಲ ದಾಸ ಬ್ಯಾನರ್ಜೀ ಅವರು ಮತ್ತು ಅವರ ತರುವಾಯದ ಇತರ ಭಾರತೀಯ ನಾಯಕರು ಮೊಹೆಂಜೋದಳೋದಲ್ಲಿ ಬೆಳಕಿಗೆ ಬಂದಿದ್ದ ಯಜ್ಞಚಿತಿಗಳನ್ನು ಕಂಡು ಸಿಂಧೂ ಜನರು ಅಗ್ನಿಯ ಆರಾಧಕರಾಗಿದ್ದರೆಂದು ನಿರ್ಧರಿಸಿದ್ದರು. ಅವರು ತಮ್ಮ ಆ ಶೋಧವನ್ನು ತಮ್ಮ ಮೇಲಧಿಕಾರಿಗಳಾಗಿದ್ದ ಸರ್ ಜಾನ್ ಮಾರ್ಶಲರಿಗೆ ತಿಳಿಸಿದ್ದರೆಂಬುದರಲ್ಲಿ ಸಂದೇಹವಿಲ್ಲ. ಹಾಗಿದ್ದರೂ ಸರ್ ಮಾರ್ಶಲರು ಶಕವರ್ಷ ೧೮೫೩ರಲ್ಲಿ ವರ್ತಮಾನ ಪತ್ರಿಕೆಗಳಲ್ಲಿ ಪ್ರಕಟಿಸಲು ಕೊಟ್ಟ ಹೇಳಿಕೆಯಲ್ಲಿ-ಯಜ್ಞಚಿತಿಗಳು ಕಂಡು ಬಂದಿದ್ದ ವಿಷಯವನ್ನು ಸೇರಿಸಲಿಲ್ಲ. ಆದರೆ ಶ್ರೀಮಾನ್ ಬ್ಯಾನರ್ಜೀ ಅವರು ಅದೇ ವರ್ಷದ “Search Light” ಎಂಬ ಪತ್ರಿಕೆಯ ವಾರ್ಷಿಕ ಸಂಚಿಕೆಯಲ್ಲಿ- ಮೊಹೆಂಜೋದಳೋದ ಅಗೆತಗಳ ಕುರಿತು ಬರೆದ ಒಂದು ಪ್ರಬಂಧದಲ್ಲಿ ಅಗ್ನಿಚಿತಿಗಳು ಕಂಡು ಬಂದಿದ್ದ ವಿಷಯವನ್ನು ಸರ್ ಮಾರ್ಶಲರು ಕುಪಿತರಾಗದಂತೆ ಪರಿಮಾರ್ಜಿಸಿ ಪ್ರಕಟಿಸಿದರು. ಆ ಪ್ರಬಂಧದಲ್ಲಿ ಅಗ್ನಿ ಚಿತಿಗಳ ಕುರಿತು ಬಂದಿರುವ ಅಂಶವು ಮುಂದಿನಂತಿದೆ—

"ತಾಮ್ರಯುಗದ ಸಿಂಧೂ ಜನರಲ್ಲಿ ಮತ್ತು ವೈದಿಕ ಆರ್ಯ ಜನರಲ್ಲಿ ಯಾವ ಬಗೆಯ ಸಾಮ್ಯವೂ ಇರಲಿಲ್ಲವೆಂಬ ಸಾಕಷ್ಟು ಸೂಚನೆಗಳು ದೊರೆತಿವೆ. ನನ್ನ ಮತ್ತು ನನ್ನ ತರುವಾಯದ ನಾಯಕರ ಶೋಧಗಳು ಸಿಂಧೂ ಕಣಿವೆಯ ಜನರಲ್ಲಿ ಅಗ್ನಿಯ ಆರಾಧನೆಯು ಪ್ರಚಲಿತವಿದ್ದಿತೆಂಬುದನ್ನು ಸೂಚಿಸುತ್ತವೆ. ಆದರೆ ಆ ಆರಾಧನೆಯು ಭಾರತೀಯ ಆರ್ಯರ ಮತ್ತು ಪಾರಸೀ ಆರ್ಯರ ಆರಾಧನಾ ಕ್ರಮದಿಂದ ಭಿನ್ನವಾಗಿತ್ತು. ಅಲ್ಲಿನ ಅಗ್ನಿಚಿತಿಯು ಸುಣ್ಣದ ಕಲ್ಲಿನಿಂದ ಹಲವು ಸುತ್ತುಗಳಲ್ಲಿ ಅಂದರೆ ಬಳೆಯ ಒಳಗೆ ಬಳೆ ಇರುವಂತೆ ಕಟ್ಟಲ್ಪಟ್ಟಿತ್ತು. ಮತ್ತು ಬೇರೆ ಬೇರೆ ಆಹುತಿಗಳನ್ನು ಅರ್ಪಿಸಲು ಅನುಕೂಲವಾಗುವಂತೆ ಮತ್ತು ಅವುಗಳು ಅಗ್ನಿಗೆ ತಲುಪುವಂತೆ ಹಲವು ನಾಲೆಗಳೂ ಆ ಚಿತಿಯೊಳಗೆ ಇದ್ದುವು. ಚಿತಿಯೊಳಗಿನ ಅಗ್ನಿಯು ಕಮಲದ ಮೊಗ್ಗುಗಳ ಆಕೃತಿಯ ಜ್ವಾಲಕಗಳಿಂದ ಹೊರ ಹೊಮ್ಮುತಿತ್ತು.[1]

ಶ್ರೀ ಬ್ಯಾನರ್ಜೀ ಅವರು ವರ್ಣಿಸಿದ ಯಜ್ಞಚಿತಿಯು ಯಜುರ್ವೇದದ ತೈತ್ತಿರೀಯ ಸಂಹಿತೆಯಲ್ಲಿ ಉಲ್ಲೇಖಿಸಲ್ಪಟ್ಟಿರುವ ಕಾಮ್ಯಚಿತಿಗಳಲ್ಲಿ ಒಂದಾದ "ರಥಚಕ್ರಚಿತಿ"ಯಾಗಿದ್ದಿತೆಂಬುವದರಲ್ಲಿ ಸಂದೇಹವಿಲ್ಲ. ಶ್ರೀ ಬ್ಯಾನರ್ಜೀ ಅವರು ಸಿಂಧೂ ಜನರ ಅಗ್ನಿಯ ಆರಾಧನಾ ಕ್ರಮವು ಆರ್ಯಜನರ ಆರಾಧನಾ ಕ್ರಮದಿಂದ ಭಿನ್ನವಾಗಿದ್ದಿತೆಂದು ಯಾವ ಆಧಾರದಿಂದ ಹೇಳಿದರೆಂದು ತಿಳಿಯದಿದ್ದರೂ-ಸಿಂಧೂ ಜನರು ಅಗ್ನಿಯ ಆರಾಧಕರಾಗಿದ್ದರೆಂದು ಅವರು ಹೇಳಿದುದು ಅತ್ಯಂತ ಮುಖ್ಯವಾಗಿದೆ. ಏಕೆಂದರೆ ಅವರ ಹೇಳಿಕೆಯಂತೆ ಸಿಂಧೂ ಕಣಿವೆಯ ನಿವಾಸಿಗಳು ಅಗ್ನಿಯ

---

1 Sufficient indications have been discovered at Mohenjo-daro and Harappa to show that there was nothing in common between the Vedic Aryans and the inhabitants of the Indus Valley in the copper age. The discoveries made by me at Mohenjo-daro and my successors indicate that the worship of fire was prevalent among these inhabitants of the Indus Valley, but this worship of fire was quite different from that of the Indo Aryans and Irano-Aryans or the ancient Persians. An elaborate altar of small and large rings of marble was built, in which there were many channels also of marble. These channels indicate that different oblationns were offered which passed though small channels into larger channels and finally either into fire or outside. The fire issued out of large and small burners shaped as lotus buds. "The Search Light" Anniversary Number 1928. 1928.

ಆರಾಧಕರಾಗಿದ್ದರೆಂದು ಮತ್ತು ಅವರು ಯಜ್ಞಚಿತಿಗಳನ್ನು ಕಟ್ಟಿ ಅಗ್ನಿಯನ್ನು ಆರಾಧಿಸುತ್ತಿದ್ದರೆಂದು ಸ್ಪಷ್ಟವಾಗಿ ಸಿದ್ಧವಾಗುತ್ತದೆ. ಮಾತ್ರವಲ್ಲ ಜಗತ್ತಿನಲ್ಲಿ ಅಗ್ನಿಯ ಆರಾಧನೆಯು ಆರ್ಯವರ್ಗದ ಜನರಲ್ಲಿ ಹೊರತು ಅನ್ಯ ಜನರಲ್ಲಿ ಪ್ರಚಲಿತ ವಿರಲಿಲ್ಲವಾದುದರಿಂದ ಸಿಂಧೂ ಕಣಿವೆಯ ಜನರು ಆರ್ಯರೇ ಆಗಿದ್ದರೆಂಬುದು ಕೂಡ ಸಂದೇಹಕ್ಕೆಡೆಯಿಲ್ಲದಂತೆ ಸಿದ್ಧವಾಗುತ್ತದೆ.

ಶ್ರೀ ಬ್ಯಾನರ್ಜೀ ಅವರು ವರ್ಣಿಸಿದ ಚಿತಿಯಿಂದ ತುಸುವೇ ಭಿನ್ನ ಪ್ರಕಾರದ ಮತ್ತು ಇಟ್ಟಿಗೆಗಳಿಂದಲೇ ಶುದ್ಧ ಚಕ್ರಾಕಾರದಲ್ಲಿ ಕಟ್ಟಿದ ಸುತ್ತಿನ ಒಳಗೆ ಸುತ್ತುಗಳಿರುವ ಹಾಗೂ ಮಧ್ಯದಲ್ಲಿ ಮೂರು ಇಟ್ಟಿಗೆಗಳಷ್ಟು ಉದ್ದ ವ್ಯಾಸದ ಗುಳಿ ಇರುವ ಸಾಲಿಗೆ ಆರರಂತೆ ಎರಡು ಸಾಲುಗಳಲ್ಲಿ ಹದಿನೆರಡು ಚಿತಿಗಳು ಹಳಪ್ಪಾದ ಅಗೆತಗಳಲ್ಲಿಯೂ ಬೆಳಕಿಗೆ ಬಂದಿದ್ದುವು. ಅವುಗಳಲ್ಲಿ ಎಂಟನೆಯ ಚಿತಿಯ ಗುಳಿ ಯಲ್ಲಿ ಅಗೆದಾಗ ಸುಟ್ಟಗೋದಿಯ ಮತ್ತು ಸುಲಿದ ಜವೆಗೋದಿಯ ಕಾಳುಗಳೂ. ಸಾಧಾರಣ ಎರಡು ರಾತಲುಗಳಷ್ಟು ಪಶುಗಳ ಎಲುಬುಗಳೂ ದೊರೆತಿದ್ದುವು. ಬೇರೆ ಎರಡು ಮೂರು ಚಿತಿಗಳಲ್ಲಿಯೂ ಎಲುಬಿನ ತುಂಡುಗಳು ದೊರೆತಿದ್ದುವು. ಸುಟ್ಟಗೋದಿ ಮತ್ತು ಆ ಎಲುಬುಗಳು ಆ ಚಿತಿಗಳಲ್ಲಿ ಯಜ್ಞಗಳು ಜರಗುತಿದ್ದುವು ಎಂಬುದರ ಪ್ರತ್ಯಕ್ಷಪ್ರಮಾಣಗಳಾಗಿದ್ದುವು. ಆದರೆ ಅಲ್ಲಿನ ಅಗೆತಗಳ ನಾಯಕ ನಾಗಿದ್ದ ಶ್ರೀ ಮಾಧೋಸರೂಪವತ್ಸ ಅವರು ಆ ಚಿತಿಗಳ ಉದ್ದೇಶವು ಸ್ಪಷ್ಟವಿಲ್ಲ ವೆಂತಲೂ, ಎಲುಬಿನ ತುಂಡುಗಳು ಅಲ್ಲಿನ ಕಟ್ಟಡಗಳು ಕುಸಿದು ಬೀಳುವಾಗ ಆ ಗುಳಿ ಗಳಲ್ಲಿ ಬಿದ್ದವುಗಳೇ ಹೊರತು ಗುಳಿಗಳಲ್ಲಿಯೇ ಇದ್ದವುಗಳಲ್ಲವೆಂತಲೂ ಹೇಳಿ ದ್ದಾರೆ.[1] ಆದರೆ ಅವರ ಆ ವಿವರಣೆಯು ಬರಿಯ ಕಲ್ಪನೆಯಾಗಿದೆಯೇ ಹೊರತು ವಾಸ್ತವವಲ್ಲವೆನ್ನಲು ಹಲವು ಪ್ರಮಾಣಗಳಿವೆ.

---

1. We now come to the III stratum in connection with which may be mentioned first a scheme of twelve circular platforms occuring in a double row from east to west. Each platform is 11 ft. in diametre and consists of a single course of four concentric rings of bricks on-edge masonary with a hollow at the centre equal to the length of three bricks. The mortar used in them is of mud, but pointing is of gypsum (Plate XII C). Their purpose is not clear. While digging at the hollow of P. S. there was found a small quantity of burnt wheat and husked barley and about two pounds of animal bones. Some bits of bones were also found in two or three others. As however the bones etc., lay about a foot below the central hollow that is to say distinctly below the brick work of these platforms and similar fragments

ಸಿಂಧೂ ಸಂಸ್ಕೃತಿಯು ಆರ್ಯಜನರದ್ದಲ್ಲವೆಂದು ಸಾಧಿಸಲು ಆರ್ಯಜನರೇ ಆ ಸಂಸ್ಕೃತಿಯನ್ನು ನಾಶಗೊಳಿಸಿದ್ದರೆಂಬ ವಾದವನ್ನು ಬಲವಾಗಿ ಪ್ರತಿಪಾದಿಸಿದ ಸರ್ ಮಾರ್ಟಿಮರ್ ವ್ಹೀಲರ್ ಎಂಬವರಾದರೋ ಹರಪ್ಪಾದಲ್ಲಿ ಕಂಡುಬಂದಿದ್ದ ಆ ಹದಿನೆರಡು ಇಟ್ಟಿಗೆಯ ಚಿತಿಗಳು ಉದ್ದದ ಒನಕೆಗಳಿಂದ ಧಾನ್ಯವನ್ನು ಕುಟ್ಟುವ ಒರಳುಗಳ ಸುತ್ತಲೂ ಕಟ್ಟಲ್ಪಟ್ಟಿದ್ದುವೆಂದಿದ್ದಾರೆ. ಅವರು ಆ ಚಿತಿಗಳ ಗುಳಿಯಲ್ಲಿ ಸುಟ್ಟಗೋದಿ ಮತ್ತು ಸುಲಿದ ಜವೆಗೋದಿ ದೊರಕಿದೆಯೆಂದು ಹೇಳಿದ್ದಾರಾದರೂ ಪಶುಗಳ ಎಲುಬುಗಳು ದೊರೆತಿದ್ದುವೆಂಬುದನ್ನು ಅಡಗಿಸಿದ್ದಾರೆ. ಪ್ರತಿಯಾಗಿ ಹುಲ್ಲು ಕಡ್ಡಿ, ಹೊಟ್ಟಿನ ಚೂರು ಮೊದಲಾದುವುಗಳು ಕಂಡುಬಂದಿವೆಯೆಂದಿದ್ದಾರೆ. ವಿಚಿತ್ರವೆಂದರೆ ಆ ಚಿತಿಗಳ ಮಧ್ಯದಲ್ಲಿ ಸರ್ ವ್ಹೀಲರರು ಕಲ್ಪಿಸಿದ ಒರಳುಗಳು ಇಲ್ಲದಿರುವುದಾಗಿದೆ. ಮಾತ್ರವಲ್ಲ ಶ್ರೀ ವತ್ಸರಾಗಲೀ, ಸರ್ ವ್ಹೀಲರರಾಗಲೀ, ಗೋದಿಕಾಳು ಸುಟ್ಟಿರಲು ಕಾರಣವೇನೆಂದು ವಿವರಿಸದಿರುವುದಾಗಿದೆ.

ಹರಪ್ಪಾದ ಅಗೆತಗಳಲ್ಲಿ ಹಿಂದೆ ವಿವರಿಸಿದ ಹದಿನೆರಡು ಚಿತಿಗಳು ಮಾತ್ರವಲ್ಲದೇ ಅಲ್ಲಿ ಬೆಳಕಿಗೆ ಬಂದಿದ್ದ ಪ್ರತಿಯೊಂದು ಮನೆಯಲ್ಲಿಯೂ ಒಂದು ಕೋಣೆಯ ಮಧ್ಯದಲ್ಲಿ ಇಟ್ಟಿಗೆಗಳಿಂದ ಕಟ್ಟಿದ ಮಂಡಲಾಕಾರದ ಚಿತಿಯು ಕಂಡುಬಂದಿದೆ. ಆದರೆ ಶ್ರೀ ಮಾಧೋಸರೂಪವತ್ಸ ಅವರು ಆ ಮಂಡಲಾಕಾರದ ಚಿತಿಯನ್ನು ಗೋವುಗಳಿಗೆ ಮೇವು ಹಾಕುವ ಗೋದಣಿ (Manger) ಅಂದಿದ್ದಾರೆ. ಕೆಲವು ಮನೆಗಳಲ್ಲಿ ಅಂಥ ಮಂಡಲಾಕಾರದ ಚಿತಿಯಿಂದ ಸಾಧಾರಣ ಎಂಟು ಅಡಿದೂರದಲ್ಲಿ ಆಯತಾಕಾರದ ಚಿತಿಯೂ ಕಂಡುಬಂದಿದೆ. ಶ್ರೀಮಾನ್ ವತ್ಸ ಅವರು ಆ ಆಯತಾಕಾರದ ಚಿತಿಯನ್ನು ಅಗ್ನಿಷ್ಟಿಕೆ (Hearth) ಅಂದಿದ್ದಾರೆ. ಆದರೆ ಅವರು ಹಾಗೆನ್ನುವಾಗ–ಅವರ ಹೇಳಿಕೆಯಿಂದ ಉದ್ಭೂತವಾಗುವ ಪ್ರಶ್ನೆಗಳನ್ನು ಪ್ರತೀಕ್ಷಿಸಿಲ್ಲವೆನ್ನಬಹುದು. ಅಂದರೆ–ಆಯತಾಕಾರದ ಚಿತಿಯು ಅಗ್ನಿಷ್ಟಿಕೆಯಾಗಬಹುದಾದರೆ ಮಂಡಲಾಕಾರದ ಚಿತಿಯೂ ಅಗ್ನಿಷ್ಟಿಕೆ ಏಕಾಗಬಾರದು ? ಮಂಡಲಾಕಾರದ ಚಿತಿಯನ್ನು ಗೋದಣಿ ಎನ್ನಲು ಪ್ರಮಾಣವೇನು? ಗೋದಣಿಯನ್ನು ಮನೆಯೊಳಗಿನ

---

were also found sticking at the same level along edges of platforms it appears certain that they were merely a part of debris and by no means the contents of the hollows : Vol I page 74.

1. Fragments of straw or husk were found about the centre and burnt wheat and husked barley were noted in the central hollow of one of the other specimens There can be little doubt therefore that the platforms surrounded mortars for the pounding of grain with long wooden pestles as in Kashmir and other parts of India. Indus civilization p. 32-33.

ಕೋಣೆಯ ಮಧ್ಯದಲ್ಲಿ ಕಟ್ಟುತ್ತಾರೆಯೇ? ಮುಂತಾದ ಪ್ರಶ್ನೆಗಳನ್ನು ಶ್ರೀ ವತ್ಸ ಅವರು ಪ್ರತೀಕ್ಷಿಸಿಲ್ಲವೆನ್ನಬಹುದು.

ಹಳಪ್ಪಾದ ಮನೆಗಳಲ್ಲಿ ಕಂಡು ಬಂದ ಮಂಡಲಾಕಾರದ ಚಿತಿಗಳು ಗಾರ್ಹಪತ್ಯ ಚಿತಿಗಳಾಗಿದ್ದುವೆಂಬುದರಲ್ಲಿ ಮತ್ತು ಆಯತಾಕಾರದ ಚಿತಿಗಳು ದರ್ಶಪೂರ್ಣಿಮಾಸೇಷ್ಟಿಯ ಚಿತಿಗಳಾಗಿದ್ದುವೆಂಬುದರಲ್ಲಿ ಸಂದೇಹವೇ ಇಲ್ಲ. ಶ್ರೀಮಾನ್ ವತ್ಸ ಅವರು ಪ್ರಕಟಿಸಿದ "Excavations at Harappa" ಎಂಬ ಪುಸ್ತಕದ ಎರಡನೆಯ ಭಾಗದ XIನೆಯ ಪತ್ರದ ಮೇಲಿನ ಮನೆಗಳ ನಕಾಶೆಗಳಲ್ಲಿ ಮಂಡಲಾಕಾರದ ಹಾಗೂ ಆಯತಾಕಾರದ ಚಿತಿಗಳನ್ನು ಕಾಣಬಹುದು. ಮತ್ತು XXIIIನೆಯ ಪತ್ರದ (C) ವಿಭಾಗದಲ್ಲಿರುವ ಮನೆಯ ಛಾಯಾ ಚಿತ್ರದಲ್ಲಿ ಮನೆಯ ಕೋಣೆಯ ನಡುವೆ ಇಟ್ಟಿಗೆಯಿಂದ ಮಂಡಲಾಕಾರದಲ್ಲಿ ಕಟ್ಟಿದ ಗಾರ್ಹಪತ್ಯಚಿತಿಯನ್ನು ಕಾಣಬಹುದು.

ಭಾರತವರ್ಷವು ಬ್ರಿಟಿಷರ ಆಳ್ವಿಕೆಯಲ್ಲಿರುವ ತನಕ ಬ್ರಿಟಿಷರು ಸಿಂಧೂ ಸನ್ನಿವೇಶಗಳಲ್ಲಿ ಆರ್ಯಜನರ ಮುಖ್ಯ ಕುರುಹುಗಳಾದ ಯಜ್ಞಚಿತಿ, ಕುದುರೆಯ ಅವಶೇಷ, ಬ್ರಹ್ಮೌದನಕ್ಕೆ ಬೇಕಾದ ಅಕ್ಕಿ ಮೊದಲಾದುವುಗಳು ಕಂಡು ಬಂದಿಲ್ಲವೆಂದು ಪ್ರಚಾರ ಮಾಡುತ್ತ ಬಂದಿದ್ದರು. ಆದರೆ ಭಾರತವರ್ಷವು ಸ್ವತಂತ್ರವಾದ ತರುವಾಯ ಭಾರತವರ್ಷದ ಪುರಾತತ್ತ್ವ ವಿಭಾಗದ ಉಪಸಂಚಾಲಕರಾದ ಡಾಕ್ಟರ್ ಎಸ್. ಆರ್. ರಾವ್ ಅವರು ಸೌರಾಷ್ಟ್ರದ ಲೋಥಲ್ ಎಂಬಲ್ಲಿಯೂ, ರಂಗಪುರ ಮೊದಲಾದ ಸನ್ನಿವೇಶಗಳಲ್ಲಿಯೂ ನಡೆಸಿದ ಅಗೆತಗಳಲ್ಲಿ ಹಳಪ್ಪಾದಲ್ಲಿ ದೊರಕಿದಂಥ ಹಾಲುಗಲ್ಲಿನ ಬಿಲ್ಲೆ ಮೊದಲಾದುವುಗಳೊಂದಿಗೆ ಆರ್ಯಜನರ ಯಜ್ಞಚಿತಿಗಳೂ, ಅವುಗಳಲ್ಲಿ ಯಜ್ಞಗಳನ್ನು ಜರುಗಿಸಿದ ಕುರುಹುಗಳಾಗಿ ಪಶುಗಳ ಎಲುಬುಗಳೂ. ಕುದುರೆಯ ಅವಶೇಷಗಳು ಮಾತ್ರವಲ್ಲದೆ ಇಟ್ಟಿಗೆಯ ಕುದುರೆಗಳೂ ಅಕ್ಕಿ ಮೊದಲಾದುವುಗಳೂ ದೊರೆತಿವೆಯೆಂದು ಅವರು ತನ್ನ ಭಾಷಣದಲ್ಲಿ ವಿವರಿಸಿದ್ದಾರೆ[1]

ಹಿಂದಿನ ವಿವರಗಳಿಂದ ಸರ್ ಮಾರ್ಶಲ್, ಸರ್ ಮಾರ್ಟಿಮರ್ ವ್ಹೀಲರ್

---

1 Among the newly discovered sites the most important is Lothal where typical Indus objects such as seals, sealings, stone weights, copper implements, ornaments of gold and semi-precious stones have been found in large numbers. Many scholars believe that the Indus people were Dravidians. But a careful study of the skeletal remains and religious structures indicate that there was also an Aryan element in the population.

ಮೊದಲಾದ ಬ್ರಿಟಿಷ್ ವಿದ್ವಾಂಸರು ಸಿಂಧೂ ಕಣಿವೆಯ ಅಗೆತಗಳಲ್ಲಿ ಆರ್ಯ ಜನರ ಮುಖ್ಯ ಕುರುಹುಗಳಾದ ಯಜ್ಞಚಿತಿಗಳು ಕಂಡು ಬಂದಿಲ್ಲವೆಂದುದು ಉದ್ದೇಶಪೂರ್ವಕವಾದ ಮಿಥ್ಯಾಪ್ರಚಾರವೆಂದು ಸಿದ್ಧವಾಗುತ್ತದೆ.

೮. ವೈದಿಕ ಆರ್ಯರು ಲಿಂಗಪೂಜೆಯನ್ನು ಹೇಸುತಿದ್ದರು. ಸಿಂಧೂ ಜನರಲ್ಲಿ ಲಿಂಗಪೂಜೆಯು ಪ್ರಚಲಿತವಿದ್ದಿತೆಂಬುದರ ಹಲವು ಪ್ರಮಾಣಗಳಿವೆ. ಎಂಬುದು ಸರ್ ಮಾರ್ಶಲರ ಹೇಳಿಕೆ–

ಉತ್ತರ–ಸರ್ ಮಾರ್ಶಲರ ಈ ಆಕ್ಷೇಪವು ಅಪ್ಪಟ ಕಲ್ಪನೆಯಾಗಿದೆ. ವೇದಗಳ ಕಾಲದಲ್ಲಿ ಲಿಂಗಾರಾಧನೆಯು ಪ್ರಚಲಿತವಿದ್ದಿತೆಂದು ಸೂಚಿಸುವ ಒಂದೇ ಒಂದು ಉಲ್ಲೇಖವಾದರೂ ವೈದಿಕ ಸಾಹಿತ್ಯದಲ್ಲಿ ಇಲ್ಲ. ಆದುದರಿಂದ ವೈದಿಕ ಆರ್ಯರು ಲಿಂಗಪೂಜೆಯನ್ನು ಹೇಸುತಿದ್ದರೆಂಬ ವಾದಕ್ಕೆ ಆಧಾರವೇ ಇಲ್ಲ. ಎರಡನೆಯದಾಗಿ ಈ ತನಕ ಅಗೆತಗಳು ನಡೆದ ನೂರಾರು ಸಿಂಧೂ ಸನ್ನಿವೇಶಗಳಲ್ಲಿ ಒಂದರಲ್ಲಾದರೂ, ಸಿಂಧೂ ಜನರು ಲಿಂಗಾರಾಧಕರಾಗಿದ್ದರೆಂದು ಸಿದ್ಧಪಡಿಸುವ ಕುರುಹುಗಳು ದೊರೆತಿಲ್ಲ. ಆದುದರಿಂದ ಸರ್ ಮಾರ್ಶಲರು ಮೊಹೆಂಜೋದಳೋದ ಅಗೆತಗಳಲ್ಲಿ ದೊರೆತವುಗಳೆಂದು ಯಾವ ಎರಡು ಶಿವಲಿಂಗಗಳ ಚಿತ್ರಗಳನ್ನು ಪ್ರಕಟಿಸಿದ್ದಾರೋ ಅವುಗಳನ್ನು ಸಿಂಧೂ ಸಂಸ್ಕೃತಿಯ ಕಾಲದಷ್ಟು ಪ್ರಾಚೀನಗಳೆಂದಾಗಲೀ ಅವುಗಳು ಸಿಂಧೂ ಕಣಿವೆಯ ಅಗೆತಗಳಲ್ಲಿ ದೊರಕಿದವುಗಳೆಂದಾಗಲೀ ಒಪ್ಪಲಾಗುವು

The rectangular mudbrick enclosures built in houses and streets at Lothal were used for fire worship. An enclosure built on an alter containing charred animal remains, gold bangles etc., uncoverred at Lothal suggests that animal sacrifice was performed here. Fire worship and animal sacrifice are reminiscent of Aryan religion. The lack of knowledge of the horse and rice was another reason adduced in favour of the Dravidian theory. But at Lothal bones of the horse have been found besides terracotta models of the animal. Rice also has been found at Lothal and Rangapur. These evidences are very significant in context of the theory of Dravidian authorship of the Indus civilization. As regards the evidence of human skeletal remains it may be noted that the population consisted of two racial groups which are normally identified with Aryan and Dravidian-Lecture delivered by Sri S. R. Rao, Dy. Director General of Archaeology in India on the 16th February 1966, in the Constitutional Club New Delhi.

ದಿಲ್ಲ. ಏಕೆಂದರೆ ಆರ್ಯಪೂರ್ವಕಾಲದ ಜನರಲ್ಲಿ ಲಿಂಗಾರಾಧನೆಯು ಪ್ರಚಲಿತ ವಿದ್ದಿತೆಂಬುದು ಸಿಂಧೂ ಕಣಿವೆಯ ಅಗೆತಗಳು ಪ್ರಾರಂಭವಾಗುವ ಬಹುಕಾಲ ಮೊದಲೇ ಬ್ರಿಟಿಷ್ ವಿದ್ವಾಂಸರು ಸಿದ್ಧಗೊಳಿಸಿಟ್ಟಿದ್ದ ಮಿಥ್ಯಾ ಕಲ್ಪನೆಯಾಗಿದೆ. ಮತ್ತು ಹಾಗೆನ್ನಲು ಪ್ರಮಾಣಗಳೂ ಇವೆ. [1]

೯. ಋಗ್ವೇದದಲ್ಲಿ ಕಬ್ಬಿಣ, ಕಬ್ಬಿಣದ ಕವಚ ಮೊದಲಾದುವುಗಳ ಉಲ್ಲೇಖಗಳಿವೆ. ಆದರೆ ಸಿಂಧೂ ಕಣಿವೆಯಲ್ಲಿ ಕಬ್ಬಿಣ ಕಂಡು ಬಂದಿಲ್ಲ. ಆದು ದರಿಂದ ಸಿಂಧೂ ಜನರಿಗೆ ಕಬ್ಬಿಣದ ಪರಿಚಯವಿದ್ದಿತೆನ್ನಲಾಗುವುದಿಲ್ಲ.

ಉತ್ತರ–ಈ ಆಕ್ಷೇಪವು ಅತ್ಯಂತ ಬಾಲಿಶವಾಗಿದೆ– ಮೊದಲನೆಯದಾಗಿ ಋಗ್ವೇದದಲ್ಲಿ ಕವಚವನ್ನು ಕಬ್ಬಿಣದ್ದೆಂದು ಸೂಚಿಸುವ ಉಲ್ಲೇಖಗಳೇ ಇಲ್ಲ. ಎರಡನೆಯದಾಗಿ ಋಗ್ವೇದದಲ್ಲಿ ಸಾಧಾರಣ ಒಂಭತ್ತು ಸಾವಿರ ವರ್ಷಗಳ ಹಿಂದಿನ ಐತಿಹ್ಯಗಳಿಂದ ಮೊದಲುಗೊಂಡು ಎರಡು ಸಾವಿರದೆಂಟುನೂರು ವರ್ಷಗಳ ಹಿಂದಿನ ತನಕದ ಐತಿಹ್ಯಗಳು ಒಳಗೂಡಿವೆ. ಆದುದರಿಂದ ಅದರಲ್ಲಿ ಶಿಲಾಯುಗದ, ತಾಮ್ರಯುಗದ ಮತ್ತು ಶ್ಯಾಮ (ಕಬ್ಬಿಣ) ಯುಗದ ಇತಿಹಾಸವು ಅಡಕವಾಗಿದೆ. ಅರ್ಥಾತ್ ಅದರಲ್ಲಿ ಕಬ್ಬಿಣದ ಉಲ್ಲೇಖವು ಇರಕೂಡದೆಂದೇನೂ ಇಲ್ಲ. ಆದರೆ ವಾಸ್ತವಾಗಿ ಋಗ್ವೇದದಲ್ಲಿ ಕಬ್ಬಿಣದ ಉಲ್ಲೇಖವೇ ಇಲ್ಲ. ಕಬ್ಬಿಣದ ಉಲ್ಲೇಖ ವಿದೆಯೆಂಬುದು ಸರ್ ಮಾರ್ಶಲರ ಮತ್ತು ಬೇರೆ ಕೆಲವು ಬ್ರಿಟಿಷ್ ವಿದ್ವಾಂಸರ ಕಲ್ಪನೆ ಮಾತ್ರವಾಗಿದೆ.

ಅಂದರೆ ಋಗ್ವೇದದಲ್ಲಿ ಬಂದಿರುವ "ಆಯಸ್" ಎಂಬ ಶಬ್ದಕ್ಕೆ ಅರ್ವಾಚೀನ ವಿದ್ವಾಂಸರು-ವಿಚಾರ ಮಾಡದೆನೇ "ಕಬ್ಬಿಣ" ಎಂದು ಅರ್ಥ ಮಾಡಿದುದೇ ಋಗ್ವೇದದಲ್ಲಿ ಕಬ್ಬಿಣದ ಉಲ್ಲೇಖವಿದೆಯೆನ್ನಲು ಕಾರಣವಾಗಿದೆ. ನಿಘಂಟು ಎಂಬ ಪ್ರಾಚೀನ "ವೈದಿಕ ಶಬ್ದಕೋಶದಲ್ಲಿ" ಆಯಸ್ ಶಬ್ದವು ಹಿರಣ್ಯ ಶಬ್ದದ ಅಂದರೆ ಅರಸಿನ ಬಣ್ಣದ ಧಾತುವಿನ ಇಲ್ಲವೇ ಚಿನ್ನದ ಪರ್ಯಾಯವಾಚಿ ಯಾಗಿ ಬಂದಿದೆ. **"ಹೇಮ, ಚಂದ್ರಮ್, ಆಯಸ್, ರುಕ್ಮಂ, ಹಿರಣ್ಯಂ, ಕೃಶನಂ, ಪೇಶಸ್, ಲೋಹಂ, ಮರುತ್, ಭರ್ಮ, ಕನಕಂ, ಕಾಂಚನಂ, ಜಾತರೂಪಂ, ದತ್ರಮ್, ಅಮೃತಮ್ ॥ ಇತಿ ಪಂಚದಶ ಹಿರಣ್ಯನಾಮಾನಿ ॥** ಅದರ ಮೇಲಿಂದ ಋಗ್ವೇದದಲ್ಲಿ ಆಯಸ್ ಶಬ್ದವು ಕಬ್ಬಿಣ ಎಂಬರ್ಥದಲ್ಲಿ ಪ್ರಯೋಗಿಸಲ್ಪಟ್ಟಿಲ್ಲ ವೆಂದು ಸಿದ್ಧವಾಗುತ್ತದೆ. ಆದುದರಿಂದಲೇ ಬೋಡೆನ್ ವಿದ್ವಾಂಸ ಪ್ರೊ. ಮೆಕ್‌ಡೊನೆಲ್ ಅವರು ತನ್ನ ವೇದಿಕ್ ಇಂಡೆಕ್ಸ್ ಎಂಬ ಗ್ರಂಥದಲ್ಲಿ ಆಯಸ್ ಎಂದರೆ ತಾಮ್ರ ಅಲ್ಲದಿದ್ದರೆ ಕಂಚು ಆಗಿರಬೇಕೆಂದು ಹೇಳಿದ್ದಾರೆ. ಆದುದರಿಂದ ಸರ್

---

1 ಶಿಶ್ನದೇವ ಎಂಬ ಶಬ್ದಕ್ಕೆ ಪ್ರೊ. ವಿಲ್ಸನ್ ಮತ್ತು ಮೆಕ್‌ಡೊನೆಲ್ ಅವರು ಮಾಡಿದ ಅರ್ಥ.

ಮಾರ್ಶಲರು ಋಗ್ವೇದದಲ್ಲಿ ಕಬ್ಬಿಣದ ಉಲ್ಲೇಖವಿದೆಯೆಂದುದು ಸರಿಯಲ್ಲವೆನ್ನಬೇಕಾಗುತ್ತದೆ.

ಎರಡನೆಯದಾಗಿ ಋಗ್ವೇದ ಕಾಲದಲ್ಲಿ "ಲೋಹ" ಎಂಬುದರ ಅರ್ಥವು "ಕೆಂಪು" ಎಂದಿದ್ದಿತಾದುದರಿಂದ ತರುವಾಯದ ವೈದಿಕ ಸಾಹಿತ್ಯದಲ್ಲಿ ತಾಮ್ರವನ್ನು **"ಲೋಹಾಯಸ್"**[1] ಎಂತಲೂ ಕಬ್ಬಿಣವನ್ನು **"ಕೃಷ್ಣಾಯಸ್"**[2] (=ಕರ್+ಪೊನ್) ಕರ್ಬೊನ್ ಎಂತಲೂ ಕರೆದಿದೆ. ಅಥರ್ವವೇದದಲ್ಲಿ ಕಬ್ಬಿಣವನ್ನು **"ಶ್ಯಾಮ"**[3] ಎಂದಿದೆ.

ಮೂರನೆಯದಾಗಿ ಸರ್ ಮಾರ್ಶಲರು ಆಕ್ಷೇಪಿಸಿರುವಂತೆ ಋಗ್ವೇದದಲ್ಲಿ ಉಲ್ಲೇಖಿಸಲ್ಪಟ್ಟಿರುವ ಕವಚಗಳು ಕಬ್ಬಿಣದವುಗಳಾಗಿವೆಯೆಂದು ತಿಳಿಯಲು ಸಾಧ್ಯವೇ ಇಲ್ಲ. ಏಕೆಂದರೆ ಋಗ್ವೇದದಲ್ಲಿ ಕವಚಗಳು ಹೊಲಿಯಲ್ಪಡುತಿದ್ದುವೆಂದು ಸೂಚಿಸುವ ಸ್ಪಷ್ಟವಾದ ಉಲ್ಲೇಖಗಳಿವೆ. ಅಂದರೆ ಋಗ್ವೇದದಲ್ಲಿ **"ವರ್ಮೇವ ಸ್ಯೂತಮ್** ॥ ೧-೩೧-೫॥ ಅಂದರೆ ॥ ಕವಚದಂತೆ ಹೊಲಿದ ಅಥವಾ "ಹೊಲಿದ ಕವಚದಂತೆ" ಎಂಬ ಉಲ್ಲೇಖವೂ ॥ **ವರ್ಮಸೀಯಧ್ವಮ್** ॥ ೧೦-೧೦೧-೮ ॥ ಅಂದರೆ "ಕವಚವನ್ನು ಹೊಲಿಯಿರಿ" ಎಂಬ ಉಲ್ಲೇಖವೂ ಇದೆ. ಆದುದರಿಂದ ಋಗ್ವೇದದಲ್ಲಿ ಕಬ್ಬಿಣದ ಮತ್ತು ಕಬ್ಬಿಣದ ಕವಚದ, ಇಲ್ಲವೇ ಕಬ್ಬಿಣದಿಂದ ನಿರ್ಮಿಸಿದ ಆಯುಧಗಳ ಉಲ್ಲೇಖಗಳಿವೆಯೆಂಬ ವಾದವು ವ್ಯರ್ಥವಾಗುತ್ತದೆ.

ಇನ್ನು ಸಿಂಧೂ ಬಿಲ್ಲೆಗಳ ಮೇಲೆ ಕಾಣಬರುವ ಪಶು–ಪ್ರಾಣಿಗಳ ಕುರಿತು ಹೇಳುವುದಾದರೆ ಹೋರಿಯು ಆರ್ಯಜನರ ಪ್ರಧಾನ ದೇವನಾದ ಅಗ್ನಿಯ ಪ್ರತೀಕವಾಗಿದ್ದುದರಿಂದ ಋಗ್ವೇದದಲ್ಲಿ ಅಗ್ನಿಯನ್ನು ಮತ್ತು ಅವನ ಇತರ ರೂಪಗಳಾದ ಇಂದ್ರ, ರುದ್ರ ಮೊದಲಾದವರನ್ನು ಹಲವು ಸರ್ತಿ, ವೃಷಭ, ಉಕ್ಷಾ, ಕಕುದ್ಮಾನ್, ತಿಗ್ಮಶೃಂಗ, ತುವಿಗ್ರೀವ ಮೊದಲಾದ ಹೆಸರುಗಳಿಂದ ಕರೆಯಲಾಗಿದೆಯೆಂದು ಹಿಂದೆ ವಿವರಿಸಿದೆ. ಶತಪಥ ಬ್ರಾಹ್ಮಣದಲ್ಲಾದರೋ "ಅಗ್ನಿಯೇ ಎತ್ತು" ಎಂದು ಅತ್ಯಂತ ಸ್ಪಷ್ಟವಾಗಿ ಹೇಳಿದೆ– ॥ **ಅಗ್ನಿರೇಷ ಯದನಡ್ವಾನ್** ॥ ೭-೩-೨-೧ ॥ **ಆಗ್ನೇಯೋ ವಾ ಯದನಡ್ವಾನ್** ॥

ಋಗ್ವೇದದ ಮಂತ್ರಗಳ ಪ್ರಕಾರ ಸಿಂಹ, ವರಾಹ, ಖಡ್ಗಮೃಗ ಆನೆ, ಕೋಣ, ಹೋತ, ಕೃಷ್ಣಮೃಗ ಮೊದಲಾದುವುಗಳು ಅಗ್ನಿಯ ಸಂಕೇತಗಳಾಗಿರು

1 ಲೋಹಾಯಸಮಾಸ್ಯ ॥ ಶ. ಬ್ರಾ. ೫-೪-೧-೧ ॥

2 ಕೃಷ್ಣಾಯಸಮ್; ಕಾರ್ಷ್ಣಾಯಸಮ್; ॥ ಛಾಂ. ಉಪ. ೬-೧-೬॥

3 ಶ್ಯಾಮೇನ–ಅಸಿನಾ ॥ ಅಥರ್ವ. ೯-೫-೪ ॥

ವಂತೆಯೇ ರುದ್ರನ ಮಕ್ಕಳೆಂದು [1] ಕರೆಯಲ್ಪಟ್ಟಿರುವ ಹಾಗೂ ವೃತ್ರನೊಂದಿಗೆ ನಡೆಯುವ ಯುದ್ಧದಲ್ಲಿ ಇಂದ್ರನ ಸಹಾಯಕರಾಗುವ ಮರುತ್ತುಗಳ [2] (=ಜ್ವಾಲೆಗಳ) ಸಂಕೇತಗಳೂ ಆಗಿವೆ.

ಅಷ್ಟೇ ಅಲ್ಲ ಹೋತ, ಮೇಕೆ, ಕುರಿ, ಎತ್ತು, ಹೋರಿ, ಆಕಳು ಕುದುರೆ, ಖಡ್ಗಮೃಗ, ಜಿಂಕೆ, ಒಂಟೆ, ಆನೆ ಮೊದಲಾದ ಭೂಚರ ಪ್ರಾಣಿಗಳೂ, ನೆಗಳೆ, ಮೊಸಳೆ, ಮೀನು, ಕಪ್ಪೆ ಮೊದಲಾದ ಜಲಚರ ಪ್ರಾಣಿಗಳೂ, ಹಂಸ, ನವಿಲು, ಕೋಳಿ, ಪಾರಿವಾಳ, ಕೊಕ್ಕರೆ ಮೊದಲಾದ ಪಕ್ಷಿಗಳೂ ಅಶ್ವಮೇಧದಲ್ಲಿ ಬಲಿಪ್ರಾಣಿಗಳಾಗಿವೆ. ಆದುದರಿಂದಲೇ ಸಿಂಧೂ ಬಿಲ್ಲೆಗಳ ಮೇಲೆ ಅವುಗಳ ಚಿತ್ರಗಳಿರುವುದಾಗಿದೆ. ಆ ಬಲಿಪಶುಗಳ ಪೂರ್ಣ ವಿವರಗಳು ಯಜುರ್ವೇದದ ತೈತ್ತಿರೀಯ ಸಂಹಿತೆಯ ೫-೫-೧೧ರಿಂದ ೨೪ರ ತನಕವೂ ವಾಜಸನೇಯಿ ಸಂಹಿತೆಯ ಇಪ್ಪತ್ತ ನಾಲ್ಕನೆಯ ಅಧ್ಯಾಯದಲ್ಲಿಯೂ ಇವೆ.

ಸಿಂಧೂ ಬಿಲ್ಲೆಗಳ ಮೇಲೆ ಅಶ್ವತ್ಥವೃಕ್ಷದ ಮತ್ತು ಶಮೀವೃಕ್ಷದ ಚಿತ್ರಗಳಿವೆ. ಅದರ ಕಾರಣವೂ ಆ ಎರಡು ವೃಕ್ಷಗಳು ಆರ್ಯಜನರಿಗೆ ಅತ್ಯಂತ ಪೂಜ್ಯವಾಗಿದ್ದುದೇ ಆಗಿದೆ. ಆರ್ಯ ವರ್ಗದ ಕೆಲವು ಪಂಗಡಗಳ ಜನರು ಯಜ್ಞದ ಅಗ್ನಿಯನ್ನು ಕಡೆಯಲು ಅಶ್ವತ್ಥವೃಕ್ಷದ ಅರಣಿಗಳನ್ನು ಉಪಯೋಗಿಸುತಿದ್ದರಾದರೆ ಬೇರೆ ಕೆಲವು ಪಂಗಡಗಳ ಜನರು ಶಮೀವೃಕ್ಷದ ಅಧರಾರಣಿಯನ್ನೂ, ಅಶ್ವತ್ಥ ವೃಕ್ಷದ ಉತ್ತರಾರಣಿಯನ್ನೂ ಉಪಯೋಗಿಸುತಿದ್ದರು. ಆದುದರಿಂದಲೇ ಆರ್ಯ ಜನರು ಆ ಎರಡು ವೃಕ್ಷಗಳನ್ನು ಇತರ ವೃಕ್ಷಗಳಿಂತ ಶ್ರೇಷ್ಠವೆಂದು ಭಾವಿಸುತಿದ್ದರು. ಅದರ ಪ್ರಮಾಣಗಳು ವೈದಿಕ ಸಾಹಿತ್ಯದಲ್ಲಿ ಹೇರಳವಾಗಿ ದೊರೆಯುತ್ತವೆ. ವೇದಕಾಲೀನ ಆರ್ಯಜನರು ಅಶ್ವತ್ಥವೃಕ್ಷದಲ್ಲಿ ದೇವತೆಗಳು ಕುಳಿತು ಕೊಳ್ಳುತ್ತಾರೆಂದು ಮತ್ತು ಪಲಾಶವೃಕ್ಷದಲ್ಲಿ ದೇವತೆಗಳು ವಾಸಿಸುತ್ತಾರೆಂದು ನಂಬುತಿದ್ದರೆಂಬ ಪ್ರಮಾಣವು ಋಗ್ವೇದದಲ್ಲಿದೆ–

ಅಶ್ವತ್ಥೇ ವೋ ನಿಷದನಂ ಪರ್ಣೇ ವೋ ವಸತಿಷ್ಕೃತಾ ।
ಗೋಭಾಜ ಇತ್ ಕಿಲಾಸಥ ಯತ್ ಸನ್ನವಥ ಪೂರುಷಮ್ ॥೧೦-೯೭-೫॥

ಅರ್ಥ– (ಎಲೈ ದೇವತೆಗಳೇ) ನೀವು ಅಶ್ವತ್ಥ ವೃಕ್ಷದಲ್ಲಿ ಕುಳಿತು

---

1 ಪ್ರಯೇ ಶುಂಭಂತೇ ಜನಯೋನಸಪ್ತಯೋಯಾಮನ್‌ರುದ್ರಸ್ಯಸೂನವಃ
॥ ೧-೮೫-೧ ॥

2 ಮಹಿಷಾಸೋಮಾಯಿನಶ್ಚಿತ್ರಭಾನವೋಗಿರಯೋನ ಸ್ವತವಸೋರಘುಸ್ಯದಃ।
ಮೃಗಾ ಇವ ಹಸ್ತಿನಃ ಖಾದಥಾವನಾ ಯದಾರುಣೀಷುತವಿಷೀರಯುಗ್‌ಧ್ವಮ್
॥ ೩-೬೦-೨ ॥

ಕೊಳ್ಳುತ್ತೀರಿ ಮತ್ತು ಪಲಾಶವೃಕ್ಷದಲ್ಲಿ ವಾಸಿಸುತ್ತೀರಿ. ನೀವು ಈ ಮನುಷ್ಯನನ್ನು ಬದುಕಿಸಿದಿರೆಂದಾದರೆ ಗೋವುಗಳನ್ನು ಪಡೆಯಲು ಅರ್ಹರಾಗುವಿರಿ.

ಅಥರ್ವವೇದದಲ್ಲಿ ಅಶ್ವತ್ಥವೃಕ್ಷದ ಕುರಿತು ಮುಂದೆ ಕೊಡಲಾಗುವ ಉಲ್ಲೇಖವಿದೆ-

ಅಶ್ವತ್ಥೋ ದೇವಸದನಂ ತೃತೀಯಸ್ಯಾಮಿತೋ ದಿವಿ।
ತತ್ರಾಮೃತಸ್ಯ ಚಕ್ಷಣಂ ದೇವಾಃ ಕುಷ್ಠಮವನ್ವತ ॥ ೫-೪-೩ ॥

ಅರ್ಥ-ಇಲ್ಲಿಂದ ಮೂರನೆಯ ದಿವದಲ್ಲಿ ದೇವತೆಗಳು ಕುಳಿತುಕೊಳ್ಳುವ ಅಶ್ವತ್ಥವೃಕ್ಷವಿದೆ. ಅಲ್ಲಿ ದೇವತೆಗಳು ಅಮೃತವ ರೂಪವಾಗಿರುವ ಕುಷ್ಠವನ್ನು ಹುಡುಕಿದರು.

ಅವರ ತರುವಾಯ ಅಥರ್ವ ವೇದದಲ್ಲಿ ಶಮೀವೃಕ್ಷವನ್ನು ಮುಂದೆ ಕೊಟ್ಟಿರುವಂತೆ ಪ್ರಾರ್ಥಿಸಲಾಗಿದೆ—

ಬೃಹತ್ ಪಲಾಶೇ ಸುಭಗೇ ವರ್ಷವೃದ್ಧ ಋತಾವರಿ।
ಮಾತೇವ ಪುತ್ರೇಭ್ಯೋ ಮೃಡ ಕೇಶೇಭ್ಯಃ ಶಮಿ ॥ ೬-೩೦-೩ ॥

ಅರ್ಥ-ದೊಡ್ಡ ಎಲೆಯುವಳೂ, ಸೌಭಾಗ್ಯದಾಯಕಳೂ, ಪವಿತ್ರಳೂ ಮಳೆಗಾಲದಲ್ಲಿ ಬೆಳೆಯುವವಳೂ ಆಗಿರುವ ಪವಿತ್ರ ಶಮೀಯೇ ನೀನು ತಾಯಿಯು ಮಕ್ಕಳಿಗೆ ಹೇಗೋ ಹಾಗೆ ನಮ್ಮ ಕೂದಲುಗಳಿಗೆ ಅನುಗ್ರಹದೋರು. (ಬೆಳೆಯುವಂತೆ ಮಾಡು)

ಭಾರತವರ್ಷದ ಮೂಲನಿವಾಸಿಗಳು ಆರ್ಯಜನರ ಸಂಪರ್ಕವನ್ನು ಹೊಂದುವ ಮೊದಲು ವೃಕ್ಷಗಳನ್ನು ಪೂಜ್ಯವೆಂದೆಣಿಸಿ ಅವುಗಳನ್ನು ಸ್ತುತಿಸುತ್ತಿದ್ದರೋ ಇಲ್ಲವೋ ಎಂಬುದನ್ನು ನಿರ್ಧರಿಸಲು ಆ ಜನರಿಗೆ ಸಂಬಂಧಪಟ್ಟ ಯಾವ ಬಗೆಯ ಪ್ರಾಚೀನ ಸಾಹಿತ್ಯವೂ ನಮ್ಮ ಬಳಿಯಲ್ಲಿ ಇಲ್ಲ. ಆದುದರಿಂದ ಡಾ. ಫ್ಲೀಟ್, ಫರ್ಗುಸನ್, ಬೆಲಫರ್ ಮೊದಲಾದ ವಿದ್ವಾಂಸರು ವೃಕ್ಷಗಳ ಮತ್ತು ನಾಗಗಳ ಆರಾಧನೆಯ ಸಂಬಂಧದಲ್ಲಿ ವ್ಯಕ್ತಗೊಳಿಸಿದ ಕಲ್ಪನೆಗಳನ್ನು ವಾಸ್ತವವೆಂದು ಗ್ರಹಿಸಲು ಸಾಧ್ಯವಿಲ್ಲ. ತಾತ್ಪರ್ಯವೇನೆಂದರೆ ಸಿಂಧೂ ಬಿಲ್ಲೆಗಳ ಮೇಲೆ ಕಂಡು ಬರುವ ಅಶ್ವತ್ಥ ಮತ್ತು ಶಮೀ ವೃಕ್ಷಗಳ ಚಿತ್ರಗಳಿಂದ ಸೂಚಿತವಾಗುವ ಪೂಜ್ಯಭಾವದ ಕಲ್ಪನೆಗೆ ಯೋಗ್ಯವಾದ ಲಿಖಿತ ಪ್ರಮಾಣಗಳು ವೈದಿಕ ಸಾಹಿತ್ಯದಲ್ಲಿ ಇರುವುದರಿಂದ ಸಿಂಧೂ ಸಂಸ್ಕೃತಿಯು ಆರ್ಯ ಜನರಿಗೆ ಸೇರಿದುದೆಂದು ಸ್ಪಷ್ಟವಾಗಿ ಸಿದ್ಧವಾಗುತ್ತದೆ.

ಇನ್ನು ಅತ್ಯಂತ ಸ್ಪಷ್ಟವೂ ಮುಖ್ಯವೂ ಆಗಿರುವ ಒಂದೆರಡು ಸಿಂಧೂ

ಬಿಲ್ಲೆಗಳ ಮೇಲಿನ ಚಿತ್ರ ಸಂಕೇತಗಳ ಪಡಿಯಚ್ಚುಗಳನ್ನು ಕೊಟ್ಟು ಅವುಗಳಿಗೆ ಸಂಬಂಧಪಟ್ಟ ವೇದಮಂತ್ರಗಳನ್ನು ಉದಹರಿಸಲಾಗುವುದು. ಮತ್ತು ಸಿಂಧೂ-ಸಂಸ್ಕೃತಿಯು ಆರ್ಯ ಜನರಿಗೆ ಸೇರಿದುದೆಂಬುದರಲ್ಲಿ ಕಿಂಚಿತ್ತಾದರೂ ಸಂದೇಹವುಳಿದಿದ್ದರೆ ಅದನ್ನು ಕೂಡ ನಿವಾರಿಸಲಾಗುವುದು.

ಹಿಂದೆ ಆರ್ಯ ಜನರ ವೈದಿಕ ಸಂಸ್ಕೃತಿ ಎಂಬ ಅಧ್ಯಾಯದಲ್ಲಿ ಪ್ರಾಚೀನ ಆರ್ಯಜನರು ತಮ್ಮ ಯಜ್ಞಗಳಲ್ಲಿ ದೇವತೆಗಳ ಪ್ರತಿಮಾರೂಪಗಳನ್ನು ಉಪಯೋಗಿಸುತಿದ್ದರೆಂಬುದನ್ನು ವಿವರಿಸುವಾಗ "ಅಗ್ನಿಯನ್ನು ಮನುಷ್ಯರೊಂದಿಗೆ ಬಾ" ಎಂದು ಆಹ್ವಾನಿಸಿದ ಮಂತ್ರವು ಉದಹರಿಸಲ್ಪಟ್ಟಿದೆ. ಹಾಗೆಯೇ ಉತ್ತರ ಧ್ರುವಪ್ರದೇಶದಲ್ಲಿ ನೆಲಸಿದ್ದ ಆರ್ಯ ಜನರು ಅಲ್ಲಿ ಸೂರ್ಯನು ಕಾಣಿಸುತಿದ್ದ ಏಳು ತಿಂಗಳ ಕಾಲದ ಯಜ್ಞಾಗ್ನಿಯನ್ನು "ಸಪ್ತಮಾನುಷ ಅಗ್ನಿ" ಅಂದರೆ "ಏಳ್ವರು ಮನುಷ್ಯರಲ್ಲಿರುವ ಅಗ್ನಿ'' ಎನ್ನುತಿದ್ದರೆಂದು ಹೇಳಿದೆ. ಅದಕ್ಕನುಸಾರವಾಗಿ ಅಗ್ನಿ ದೇವನ ಪ್ರತೀಕದೊಂದಿಗೆ ಏಳ್ವರು ಮನುಷ್ಯರ ಪ್ರತೀಕಗಳೂ ಇರಬೇಕೆಂಬುದು ಸ್ವತಃ ಸಿದ್ಧವಿದೆ. ಮುಂದೆ ಕೊಡಲಾಗುವ ಸಿಂಧೂ ಬಿಲ್ಲೆಯ ಪಡಿಯಚ್ಚು ಆ ಮಂತ್ರದೊಳಗಿನ ವರ್ಣನೆಯನ್ನು ಸ್ಪಷ್ಟವಾಗಿ ಸೂಚಿಸುತ್ತದೆ–



ಈ ಚಿತ್ರದಲ್ಲಿ ತಲೆಯಲ್ಲಿ ಕೊಂಬುಗಳಿರುವ ಮತ್ತು ಕೊಂಬುಗಳ ನಡುವೆ ಜಟಾಜೂಟದ ಚಿಪ್ಪೆ ಇರುವ ಮನುಷ್ಯನು ಅಶ್ವತ್ಥದ ಎರಡು ಕೊಂಬೆಗಳ ನಡುವೆ ಮಂಡಲಾಕೃತಿಯ ಕುಂಡದಲ್ಲಿ ನಿಂತಿದ್ದಾನೆ. ಆ ಎರಡು ಕೊಂಬೆಗಳು ಎರಡು ಅರಣಿಗಳೆಂದೂ ಅವುಗಳ ನಡುವೆ ನಿಂತಿರುವ ಮನುಷ್ಯನು ಅರಣಿಗಳಿಂದ ಹುಟ್ಟಿದ ಅಗ್ನಿ

ಯೆಂದೂ ಹಾಗೆ ಹುಟ್ಟಿದ ಅಗ್ನಿಯನ್ನು ಗಾರ್ಹಪತ್ಯಕುಂಡದಲ್ಲಿ ಸ್ಥಾಪಿಸಲಾಗಿದೆ ಯೆಂದೂ ತಿಳಿಯಲು ಏನೂ ಕಷ್ಟವಿಲ್ಲ. ಏಕೆಂದರೆ ಅರಣಿಗಳಿಂದ ಉತ್ಪಾದಿಸಿದ ಅಗ್ನಿಯನ್ನು ಮೊತ್ತಮೊದಲು ಗಾರ್ಹಪತ್ಯಕುಂಡದಲ್ಲಿ ಆಧಾನ ಮಾಡಲಾಗುತ್ತ ದೆಂದು ಹಿಂದೆ ಹೇಳಿದೆ.

ಬಿಲ್ಲೆಯ ಮೇಲಿನ ಆ ಚಿತ್ರ ಸಂಕೇತವು ಅರಣಿಗಳಿಂದ ಉತ್ಪಾದಿಸಿದ ಅಗ್ನಿಯನ್ನು ಗಾರ್ಹಪತ್ಯಕುಂಡದಲ್ಲಿ ಆಧಾನಮಾಡಿರುವುದನ್ನು ಮತ್ತು ಯಜ್ಞದ ಪ್ರಾರಂಭವನ್ನು ಸೂಚಿಸುತ್ತದೆ. ಗಾರ್ಹಪತ್ಯಕುಂಡದಿಂದ ತುಸು ದೂರದಲ್ಲಿ ಚೌಕಾಕೃತಿಯ ಆಹವನೀಯ ಕುಂಡವಿದೆ. ಅಗ್ನಿಯ ಮುಂದುಗಡೆಯಲ್ಲಿರುವ ಪೀಠದ ಮೇಲೆ ಚರುಪಾತ್ರವಿದೆ. ಅಗ್ನಿಯ ಬಲಪಾರ್ಶ್ವದಲ್ಲಿ ಅಧ್ವರ್ಯುವು (=ಪುರೋಹಿತನು) ಮಂಡಿಯನ್ನು ಬಗ್ಗಿಸಿ ಕೈಗಳನ್ನು ಮುಂದಕ್ಕೆ ಚಾಚಿ ಅಗ್ನಿ ದೇವನನ್ನು ಸ್ತುತಿಸುತಿದ್ದಾನೆ. ಅವನ ಹಿಂದೆ ಚೆನ್ನಾಗಿ ಕೊಬ್ಬಿದ ಒಂದು ಹೋತ ವಿದೆ. ಅಗ್ನಿ ದೇವನ ಎದುರುಗಡೆಯಲ್ಲಿ ಏಳ್ವರು ಮನುಷ್ಯರು ಸಾಲಾಗಿ ನಿಂತಿದ್ದಾರೆ. ಅವರು ಉತ್ತರ ಧ್ರುವ ಪ್ರದೇಶದಲ್ಲಿ ಸೂರ್ಯನು ಕಾಣಿಸುವ ಏಳು ತಿಂಗಳನ್ನು ಅಥವಾ ಏಳ್ವರು ಆದಿತ್ಯರನ್ನು ಸೂಚಿಸುತ್ತಾರೆ. ಅಂದರೆ ಆ ಎಲ್ಲ ಸಂಕೇತಗಳು ಸೂರ್ಯನ ಉತ್ತರಾಯಣವು ಆರಂಭವಾಗಿ ಉತ್ತರ ಧ್ರುವಪ್ರದೇಶದಲ್ಲಿ ಸೂರ್ಯೋದಯವಾದುದನ್ನು ಮತ್ತು ಯಜ್ಞವು ಪ್ರಾರಂಭವಾದುದನ್ನು ಸೂಚಿಸುತ್ತವೆ. ಅಗ್ನಿಯು ಗಾರ್ಹಪತ್ಯಕುಂಡದಲ್ಲಿ ಆಧಾನ ಮಾಡಲ್ಪಟ್ಟಿದ್ದಾನೆಯೇ ಹೊರತು– ಅವನಿಗೆ ಆಹುತಿಯನ್ನು ಅರ್ಪಿಸಿದುದಾಗಲೀ, ಆಹವನೀಯ ಕುಂಡದಲ್ಲಿ ಆಧಾನ ಮಾಡಿದುದಾಗಲೀ ಇಲ್ಲ. ಆದುದರಿಂದ ಅಧ್ವರ್ಯುವು ಆಹುತಿಗಳನ್ನು ಅರ್ಪಿಸುವ ಮೊದಲಿನ ಪೀಠಿಕೆಯಾಗಿ ಅಗ್ನಿಯ ಮುಂದೆ ಮಂಡಿ ಬಗ್ಗಿಸಿ ಅವನನ್ನು ಮುಂದಿನಂತೆ ಸ್ತುತಿಸುತ್ತಾನೆ–

ಯೋ ऽಗ್ನಿಃ ಸಪ್ತಮಾನುಷಃ ಶ್ರಿತೋ ವಿಶ್ವೇಷು ಸಿಂಧುಷು ।
ತಮಾಗನ್ಮ ತ್ರಿಪಸ್ತ್ಯಂ ಮಂಧಾತುರ್ದಸ್ಯುಹಂತಮಮ್
ಅಗ್ನಿಂ ಯಜ್ಞೇಷು ಪೂರ್ವ್ಯಂ ನಭಂತಾಮನ್ಯಕೇಸಮೇ ॥ಋ. ೮-೩೯-೮


ಅರ್ಥ- ಯಾವ ಅಗ್ನಿಯು ಏಳ್ವರು ಮನುಷ್ಯರಲ್ಲಿರುವವನೋ, ಸಕಲ ನದಿ ಗಳಲ್ಲಿ ಆಶ್ರಯಿಸಿರುವವನೋ, ಮೂರುಮನೆಗಳುಳ್ಳವನೋ, ಯಾವನು ಮಂಧಾತನ ವಸ್ತುಗಳನ್ನು ಕೊಲ್ಲುವವನೋ, ಯಾವನು ಯಜ್ಞಗಳಲ್ಲಿ ಮೊದಲಿ ಗನೋ ಅಂಥ ಆ ಅಗ್ನಿದೇವನನ್ನು ನಾವು ಶರಣು ಹೋಗೋಣ. ಅನ್ಯ ದುರ್ಜನರು ನಾಶವಾಗಲಿ.

ಹಿಂದಿನ ಬಿಲ್ಲೆಯ ಮೇಲಿನ ಚಿತ್ರಸಂಕೇತಗಳು ಆರ್ಯಜನರ ಉತ್ತರ- ಧ್ರುವ ಪ್ರದೇಶದ ವಸತಿಗೆ ಸಂಬಂಧಿಸಿದ ಐತಿಹ್ಯವನ್ನು ಸೂಚಿಸುವುದರೊಂದಿಗೆ

ಆವರ ಅಗ್ನಿಯ ಆರಾಧನಾ ಕ್ರಮವನ್ನೂ, ಯಾಜ್ಞಿಕ ಧರ್ಮವನ್ನೂ ಅತ್ಯಂತ ಸ್ಪಷ್ಟವಾಗಿ ಸೂಚಿಸುತ್ತವೆ. ಮತ್ತು ಸಿಂಧೂ ಸಂಸ್ಕೃತಿಯು ಆರ್ಯ ಜನರಿಗೆ ಸೇರಿದುದೆಂಬ ಸತ್ಯವನ್ನು ದೃಢವಾದ ಹಾಗೂ ಪ್ರತ್ಯಕ್ಷ ಪ್ರಮಾಣಗಳ ಮೂಲಕ ಸಿದ್ಧಪಡಿಸುತ್ತವೆ.

ಅಧಿಕಾಂಶ ಸಿಂಧೂ ಬಿಲ್ಲೆಗಳ ಮೇಲೆ ಒಂದೇ ಬಗೆಯ ವಿಶಿಷ್ಟ ಲಿಪಿ ಇದೆಯಾದರೂ ಕೆಲವು ಬಿಲ್ಲೆಗಳ ಮೇಲೆ ಶುದ್ಧ ಚಿತ್ರಲಿಪಿಯೂ ಇದೆ. ಅದರ ಉದಾಹರಣೆಯಾಗಿ ಪಾದ್ರಿ ಹೆರಾಸರು ಓದಿದುದೆಂದು ಹಿಂದೆ ಕೊಟ್ಟಿದ್ದ ಬಿಲ್ಲೆಯ ಪಡಿಯಚ್ಚನ್ನು ಇಲ್ಲಿ ಮರಳಿ ಕೊಡಲಾಗುವುದು.

ಈ ಬಿಲ್ಲೆಯ ಮೇಲಿರುವ ಬರಹದ ಸಾಲಿನಲ್ಲಿ ಒಟ್ಟು ಐದು ಚಿತ್ರ ಸಂಕೇತಗಳಿವೆ. ಆ ಬರವಣಿಗೆಯು ಎಡಗಡೆಯಿಂದ ಪ್ರಾರಂಭವಾಗಿ ಬಲಗಡೆಗೆ ಸಾಗಿದೆ. ಮತ್ತು ಅದರ ಭಾಷೆಯು ಋಗ್ವೇದದಲ್ಲಿ ಉಪಯೋಗಿಸಲ್ಪಟ್ಟುದಾಗಿದೆ. ಅದರಲ್ಲಿರುವ ಐದು ಚಿತ್ರಸಂಕೇತಗಳಲ್ಲಿ ಒಂದರಿಂದ ನಾಲ್ಕರ ತನಕದ ಚಿತ್ರಗಳು



ವರ್ಣಸೂಚಕ ನಾಮಪದಗಳಾಗಿದ್ದು ಐದನೆಯ ಚಿತ್ರವು ಬಿಲ್ಲೆಯ ಮೇಲಿನ ಮುಖ್ಯ ಚಿತ್ರಸಂಕೇತವನ್ನು ನಿರ್ಮಿಸಿದ ಮನುಷ್ಯನ ಕುಲದ ಚಿಹ್ನೆಯಾಗಿದೆ. ಅಥವಾ ಕುಲದ ಧ್ವಜವಾಗಿದೆ. ಮತ್ತು ಎರಡು ಚಿತ್ರಗಳನ್ನು ಸಂಯೋಜಿಸಿ ನಿರ್ಮಿಸಿದ ಸಂಕೇತವಾಗಿದೆ, ಹಾಗೆಯೇ ಬಿಲ್ಲೆಯ ಮೇಲಿನ ಅಶ್ವತ್ಥ ವೃಕ್ಷವು ಮತ್ತು ಅದನ್ನು ಬಳಸಿ ಕೂತಿರುವ ಎರಡು ತಿಗ್ಮಶೃಂಗ ಪ್ರಾಣಿಗಳು ಅಂದರೆ ಮೊನಚಾದ ಕೊಂಬುಳ್ಳ ಪ್ರಾಣಿಗಳು ಕೂಡಿ ಋಗ್ವೇದದೊಳಗಿನ ಒಂದು ಋಚೆಯನ್ನು ಸೂಚಿಸುವ ಸಂಕೇತಗಳಾಗಿವೆ. ಅಥವಾ ಆ ಋಚೆಯ ಸಾಂಕೇತಿಕ ನಿರೂಪಣಗಳಾಗಿವೆ.

ಆ ಬಿಲ್ಲೆಯ ಮೇಲಿನ ಬರಹದ ಸಾಲಿನೊಳಗಿನ ಪ್ರತಿಯೊಂದು ಚಿತ್ರವು ಒಂದಕ್ಕಿಂತ ಹೆಚ್ಚು ಪದಗಳನ್ನು ಸೂಚಿಸುತ್ತದಾದರೂ ಅಂಥ ಪದಗಳಲ್ಲಿ ವಾಕ್ಯ ರಚನೆಗೆ ಯಾವ ಪದವು ಅನುಕೂಲವೋ ಅದನ್ನೇ ಆರಿಸಬೇಕಾಗುತ್ತದೆ. ಅದನ್ನು ಮುಂದಿನಂತೆ ವಿವರಿಸಬಹುದು–

ಬರಹದ ಸಾಲಿನಲ್ಲಿ ಮೊದಲನೆಯದಾಗಿರುವ ಚಿತ್ರವು ಮನೆಯ ನಕಾಶೆ ಎಂಬುದರಲ್ಲಿ ಸಂದೇಹವಿಲ್ಲ. ಋಗ್ವೇದದಲ್ಲಿ "ಮನೆ" ಎಂಬ ಅರ್ಥದ "ಅಸ್ತ, ಕ್ಷಯ, ಗೃಹ, ದಮ, ಪಸ್ತ್ಯ ಮೊದಲಾದ ಹಲವು ಶಬ್ದಗಳು ಬಂದಿವೆ. ಆದರೆ ಆ ಶಬ್ದಗಳಲ್ಲಿ "ಗೃಹ" ಎಂಬ ಶಬ್ದದಿಂದ ಹೊರತು ಬೇರೆ ಶಬ್ದದ ನೆರವಿನಿಂದ ಆ ಬರಹದ ಸಾಲನ್ನು ಓದಲು ಸಾಧ್ಯವಿಲ್ಲ. ಎರಡನೆಯದು ಎಲೆಯ ಚಿತ್ರವಾಗಿದೆ. ಎಲೆಯು ವೇದಭಾಷೆಯಲ್ಲಿ "ಪರ್ಣ" ಆಗುತ್ತದೆ. ಆದರೆ ಪರ್ಣಶಬ್ದದಿಂದ ಇಲ್ಲಿ ವಾಕ್ಯರಚನೆ ಸಾಧ್ಯವಿಲ್ಲ, ಆದುದರಿಂದ ಆ ಎಲೆಯ ದಂಟನ್ನು ಗ್ರಹಿಸಬೇಕಾಗಿದೆ. ಏಕೆಂದರೆ ಎಲೆಯನ್ನು ದಂಟಿಲ್ಲದೆಯೂ ಚಿತ್ರಿಸಬಹುದು. ಆದರೆ ದಂಟು ಸಹಿತವಾದ ಎಲೆಯನ್ನು ಚಿತ್ರಿಸದೇ ದಂಟನ್ನು ಸೂಚಿಸಲು ಸಾಧ್ಯವಿಲ್ಲ. ಎಲೆಯ ದಂಟು ಅಲ್ಲದಿದ್ದರೆ ಯಾವುದೊಂದು ಉಪಕರಣದ ಹಿಡಿಕೆಯು ವೇದಭಾಷೆಯಲ್ಲಿ "ತ್ಸರು" ಎಂದಾಗುತ್ತದೆ. ಅದನ್ನೇ ಇಲ್ಲಿ ಗ್ರಹಿಸಬೇಕಾಗಿದೆ. ಮೂರನೆಯದು ಮೀನಿನ ಚಿತ್ರವಾಗಿದೆ. ಮೀನು ವೇದ ಭಾಷೆಯಲ್ಲಿ "ಮತ್ಸ್ಯ" ಆಗುತ್ತದೆ. ನಾಲ್ಕನೆಯದು ಸಂಯುಕ್ತ ಚಿತ್ರವಾಗಿದೆ, ಅದರೊಳಗಿನ ಈ | ನೆಟ್ಟನೆ ಗೆರೆಯು ವೇದಭಾಷೆಯಲ್ಲಿ "ದಂಡ" ಎಂದಾಗುತ್ತದೆ, ಮತ್ತು ಆ ದಂಡದ ಅಡಿಯಲ್ಲಿ ಅದಕ್ಕೆ ಜೊತೆಯಾಗಿ ಒಂದು / ಕೋಸಾದ ಗೆರೆಯಿದೆ. ಅಂದರೆ ಅದು ಜೊತೆಯಲ್ಲಿರುವುದನ್ನೂ, ಕೋಸುತನವನ್ನೂ ಸೂಚಿಸುತ್ತದೆ. ವೇದಭಾಷೆಯಲ್ಲಿ ಜೊತೆಯಲ್ಲಿರುವುದನ್ನು ಸೂಚಿಸಲು "ಸಚ್" ಎಂಬ ಶಬ್ದವಿದೆ. ಅದರಿಂದ ಹುಟ್ಟಿದ ಸಾಚಿ ಎಂಬ ಶಬ್ದವು "ಕೋಸಾಗಿ" ಎಂಬ ಅರ್ಥವನ್ನು ಕೊಡುತ್ತದೆ. ಆದುದರಿಂದ "ಸಚ್" ಶಬ್ದದ ಅರ್ಥವು "ಕೋಸುತನ" ಎಂದಾಗಲೇಬೇಕು. ವೇದ ಭಾಷೆಯಲ್ಲಿ ಕೋಸುತನವನ್ನು ಸೂಚಿಸಲು "ತಿರ್ಯಂಚ್" ಎಂಬ ಶಬ್ದವೂ ಇದೆ. ಆದರೆ ಇಲ್ಲಿ ತಿರ್ಯಂಚ್ ಶಬ್ದದಿಂದ ವಾಕ್ಯರಚನೆಯಾಗುವುದಿಲ್ಲ. ಆದುದರಿಂದ ಹಿಂದೆ ಹೇಳಿದ–"ಗೃಹ, ತ್ಸರು, ಮತ್ಸ್ಯ, ದಂಡ, ಸಚ್" ಎಂಬ ಐದು ಶಬ್ದಗಳ ಮೊದಲಿನ ಅಕ್ಷರಗಳನ್ನು ಮಾತ್ರ ಹೊಂದಿಸಿಕೊಂಡು ವಾಕ್ಯವನ್ನು ಮಾಡಬೇಕಾಗಿದೆ. ಹಾಗೆ ಮಾಡಿದರೆ ನಮಗೆ "ಗೃತ್ಸಮದಸ್" ಎಂಬ ವೈದಿಕ ಋಷಿಯ ಹೆಸರು ಸಿಗುತ್ತದೆ. ಗೃತ್ಸಮದಃ ಋಷಿಯು ಋಗ್ವೇದದ ಎರಡನೆಯ ಮಂಡಲದೊಳಗಿನ ಹಲವು ಸೂಕ್ತಗಳ ಕರ್ತನಾಗಿದ್ದಾನೆ.

ಆ ಬರಹದ ಸಾಲಿನಲ್ಲಿ ಕಟ್ಟಕಡೆಯಲ್ಲಿರುವ ಚೌಕ ಮತ್ತು ಅದರ ಒಳಗಡೆ

ಯಲ್ಲಿರುವ ಚಕ್ರವು ಆಹವನೀಯಾಗ್ನಿಯ ಚಿತಿಯನ್ನು ಮತ್ತು ರಥವನ್ನು ಸೂಚಿಸುತ್ತವೆಂಬುದು ಸ್ಪಷ್ಟವಿದೆ. ಗೃತ್ಸಮದನು ಭೃಗು ಕುಲದವನಾಗಿದ್ದಾನೆ. ಭೃಗುಗಳು ಕೂಡ ಅಂಗಿರಸರಂತೆಯೇ ಅಗ್ನಿಯನ್ನು ಕಂಡು ಹಿಡಿದಿದ್ದರೆಂದು ಹಿಂದೆ "ಆರ್ಯ ಜನರ ವೈದಿಕ ಸಂಸ್ಕೃತಿ" ಎಂಬ ಅಧ್ಯಾಯದಲ್ಲಿ ಹೇಳಿದೆ. ಹಾಗೆಯೇ ಭೃಗುಗಳು ರಥಗಳನ್ನು ನಿರ್ಮಿಸುತ್ತಿದ್ದರೆಂಬ ಉಲ್ಲೇಖವು ಋಗ್ವೇದದ ಹಲವು ಮಂತ್ರಗಳಲ್ಲಿ ಇದೆ. ಅವರು ಅಗ್ನಿಯನ್ನು ಕಂಡು ಹಿಡಿದಿದ್ದರೆಂಬ ಉಲ್ಲೇಖವಿರುವ ಒಂದು ಮಂತ್ರವು ಮುಂದಿನಂತಿದೆ–

ಇಮಂ ವಿಧಂತೋ ಅಪಾಂ ಸಧಸ್ಥೇ
ಪಶುಂ ನ ನಷ್ಟಂ ಪದೈರನು ಗ್ಮನ್ ।
ಗುಹಾ ಚತಂತಮುಶಿಜೋ ನಮೋಭಿರ್
ಇಚ್ಛಂತೋ ಧೀರಾ ಭೃಗವೋಽವಿಂದನ್ ॥ ಋ. ೧೦–೪೬–೨ ॥

ಅರ್ಥ– ಕಳೆದು ಹೋದ ಪಶುವನ್ನು ಮರಳಿ ಪಡೆಯುವ ಸಲುವಾಗಿ ಅದರ ಒಡೆಯನು ಅದರ ಹೆಜ್ಜೆಯ ಗುರುತುಗಳಿಂದ ಅದನ್ನು ಹಿಂಬಾಲಿಸಿ ಹೋಗಿ ಕಂಡು ಹಿಡಿಯುವಂತೆ ಅಗ್ನಿಯನ್ನು ಪಡೆಯಲು ಬಹಳವಾಗಿ ಇಚ್ಛಿಸುತಿದ್ದಂಥವರೂ ಧೀಮಂತರೂ ಆದ ಭೃಗುಗಳು ನಮಸ್ಕಾರಗಳೊಂದಿಗೆ ಅವನನ್ನು ಸ್ತುತಿಸುತ್ತ ದಿವ್ಯ ಜಲಗಳ ಸಮೂಹದಲ್ಲಿ ಅಡಗಿಕೊಂಡಿದ್ದ ಈ ಅಗ್ನಿಯನ್ನು ಕಂಡು ಹಿಡಿದರು ಅಥವಾ ಪಡೆದರು.

ಭೃಗುಗಳು ರಥಗಳನ್ನು ನಿರ್ಮಿಸುತಿದ್ದರೆಂಬ ಉಲ್ಲೇಖವಿರುವ ಒಂದು ಮಂತ್ರವು ಮುಂದಿನಂತಿದೆ–

ಏವೇದಿಂದ್ರಾಯ ವೃಷಭಾಯ ವೃಷ್ಣೇ
ಬ್ರಹ್ಮಾಕರ್ಮ ಭೃಗವೋ ನ ರಥಮ್ ।
ನೂಚಿದ್ ಯಥಾ ನಃ ಸಖ್ಯಾ ವಿಯೋಷದ್*
ಅಸನ್ನ ಉಗ್ರೋಽವಿತಾ ತನೂಪಾಃ ॥ ಋ. ೪-೧೬-೨೦॥

ಅರ್ಥ-ಯಾವ ರೀತಿಯಲ್ಲಿ ಹಿಂದೆ ಭೃಗುಗಳು ವೃಷಭನೂ, ವೃಷ್ಣಿಯೂ ಆಗಿದ್ದ ಇಂದ್ರನಿಗಾಗಿ ರಥವನ್ನು ನಿರ್ಮಿಸಿದ್ದರೋ ಅದೇ ರೀತಿಯಲ್ಲಿ ನಾವು ಅವನಿಗಾಗಿ ಚೆಲೋ ಸ್ತೋತ್ರಗಳನ್ನು ರಚಿಸಿದ್ದೇವೆ. ಅವನು ಎಷ್ಟು ಮಾತ್ರಕ್ಕೂ ನಮ್ಮ ಗೆಳೆತನವನ್ನು ತೊರೆಯದಿರಲಿ; ಅವನು ನಮ್ಮ ರಕ್ಷಕನೂ, ಶರೀರಗಳನ್ನು ಕಾಪಾಡುವವನೂ ಆಗಿರಲಿ.

ಹಿಂದಿನ ಉಲ್ಲೇಖಗಳಂತೆ ಭೃಗುಗಳು ಅಗ್ನಿಯನ್ನು ಕಂಡು ಹಿಡಿದಿದ್ದರು ಮತ್ತು ರಥಗಳನ್ನು ನಿರ್ಮಿಸುತಿದ್ದರು ಎಂಬುದನ್ನು ಸೂಚಿಸಲು ಭೃಗುಕುಲ

ದವನಾದ ಗೃತ್ಸಮದನು ತಾನು ನಿರ್ಮಿಸಿದ ಚಿತ್ರಸಂಕೇತವಿರುವ ಬಿಲ್ಲೆಯ ಮೇಲೆ ಅಗ್ನಿಯ ಸಂಕೇತವಾಗಿ ಆಹವನೀಯಾಗ್ನಿಚಿತಿಯ ಆಕೃತಿಯನ್ನೂ, ರಥದ ಸಂಕೇತವಾಗಿ ಚಕ್ರವನ್ನೂ ಚಿತ್ರಿಸಿ ತನ್ನ ಕುಲದ ಧ್ವಜವನ್ನು ಅಥವಾ ಚಿಹ್ನೆಯನ್ನು ಸೂಚಿಸಿದ್ದಾನೆಂಬುದರಲ್ಲಿ ಸಂದೇಹವಿಲ್ಲ. ಆದರೆ ಗೃತ್ಸಮದ ಋಷಿಯ ಉದ್ದೇಶವು ಆ ಚಿಹ್ನೆಯ ಮೂಲಕ ತನ್ನ ಕುಲವನ್ನು ಮಾತ್ರ ಸೂಚಿಸುವುದಾಗಿರದೇ ಆ ಬಿಲ್ಲೆಯ ಮೇಲಿನ ಅಶ್ವತ್ಥ ವೃಕ್ಷವನ್ನು "ದೇವಸದನ"ವೆಂದು ಮತ್ತು ಅದನ್ನು ಬಳಸಿಕೊಂಡು ಕೂತಿರುವ ಎರಡು ತಿಗ್ಮಶೃಂಗಿಗಳು-ಅಗ್ನಿಯ ಮತ್ತು ಚಂದ್ರನ ಸಂಕೇತಗಳಾಗಿವೆಯೆಂದು ಸೂಚಿಸುವುದೂ ಆಗಿದೆಯೆಂದು ಆ ಚಿತ್ರಕ್ಕೆ ಸಂಬಂಧಪಟ್ಟ ಋಗ್ವೇದದ ಮಂತ್ರದಿಂದ ಗೊತ್ತಾಗುತ್ತದೆ. ಅಂದರೆ ಗೃತ್ಸಮದ ಋಷಿಯು ಆ ಸಂಯುಕ್ತ ಚಿಹ್ನೆಯನ್ನು ದ್ವಯಾರ್ಥದಲ್ಲಿ ನಿರ್ಮಿಸಿದ್ದಾನೆಂದು ತಿಳಿದುಬರುತ್ತದೆ. ಆ ಮಂತ್ರವು ಮುಂದೆ ಕೊಡಲ್ಪಟ್ಟಿದೆ-

ದ್ವಾಸುಪರ್ಣಾ ಸಯುಜಾ ಸಖಾಯಾ
ಸಮಾನಂ ವೃಕ್ಷಂ ಪರಿಷಸ್ವಜಾತೇ।
ತಯೋರನ್ಯಃ ಪಿಪ್ಪಲಂ ಸ್ವಾದ್ವತ್ತಿ
ಅನಶ್ನನ್ನನ್ಯೋಽಭಿಚಾಕಶೀತಿ ॥ ಋ. ೧-೧೬೪-೨೦ ॥

ಅರ್ಥ- ಗೆಳೆತನದಿಂದ ಕೂಡಿದ ಇಬ್ಬರು ಸುಪರ್ಣರು (ಅಗ್ನಿ ಮತ್ತು ಚಂದ್ರರು) ಒಂದೇ ಅರಳಿಮರವನ್ನು ಅಪ್ಪಿಕೊಳ್ಳುತ್ತಾರೆ. ಅವರಲ್ಲಿ ಒಬ್ಬನು (=ಅಗ್ನಿಯು) ಅರಳಿಯನ್ನು (ಸಮಿತ್ತಿನ ರೂಪದಿಂದ) ಬಹಳ ರುಚಿಯಿಂದ ತಿನ್ನುತ್ತಾನೆ ಮತ್ತು ಬೆಳಗುತ್ತಾನೆ. ಆದರೆ ಇನ್ನೊಬ್ಬನು (=ಚಂದ್ರನು) ತಿನ್ನದೇನೇ ಬೆಳಗುತ್ತಾನೆ.

ಹಿಂದಿನ ಮಂತ್ರ ಬಂದಿರುವ ಸೂಕ್ತದ ನಾಲ್ವತ್ತಾರನೆಯ ಋಚೆಯಲ್ಲಿ ಅಗ್ನಿಯನ್ನು "ಸುಪರ್ಣ" ಎಂದು ಸ್ಪಷ್ಟಪಡಿಸಿದೆ. ಆದರೆ ವೇದಮಂತ್ರಗಳಲ್ಲಿ ಕೇವಲ ಆಧ್ಯಾತ್ಮಿಕ ಜ್ಞಾನವನ್ನೇ ಅರಸುತಿದ್ದ ಉಪನಿಷತ್ಕಾರರು ಋಗ್ವೇದದ ಮಂತ್ರಗಳಲ್ಲಿ ಅಗ್ನಿಯನ್ನು,[1] ಚಂದ್ರನನ್ನು[2] ಮತ್ತು ಸೂರ್ಯನನ್ನು[3] "ಸುಪರ್ಣ" ಅಂದರೆ "ಚೆಲೋ ರೆಕ್ಕೆಯ ಹಕ್ಕಿ" ಎಂದು ಕರೆಯಲಾಗಿದೆಯೆಂಬುವನ್ನು ಪರಿಶೀಲಿಸುವ ಗೋಜಿಗೆ ಹೋಗದೆ "ಸುಪರ್ಣಾ" ಎಂಬುದರ "ಚೆಲೋ ರೆಕ್ಕೆಯ ಎರಡು

---

1 ಇಂದ್ರಂ ಮಿತ್ರಂ ವರುಣಮಗ್ನಿಮಾಹುರಥೋ ದಿವ್ಯಃ ಸ ಸುಪರ್ಣೋ ಗರುತ್ಮಾನ್।
ಏಕಂ ಸದ್ವಿಪ್ರಾ ಬಹುದಾವದಂತ್ಯಗ್ನಿಂಯಮಂ ಮಾತರಿ ಶ್ವಾನಮಾಹುಃ ॥೧-೧೬೪-೪೬॥

2 ಚಂದ್ರಮಾ ಅಪ್ಸ್ವ ಅಂತರಾ ಸುಪರ್ಣೋ ಧಾವತೇ ದಿವಿ ॥೧-೧೦೫-೧॥

3 ವಿಸುಪರ್ಣೋ ಅಂತರಿಕ್ಷಾಣ್ಯಖ್ಯದ್ ಗಭೀರವೇಪಾ ಅಸುರಃ ಸುನೀಥಃ।
ಕ್ವೇತಿದಾನೀಂ ಸೂರ್ಯಃ ಕಶ್ಚಿಕೇತ ಕತಮಾಂ ದ್ಯಾಂರಶ್ಮಿರಸ್ಯಾ ತತಾನ ॥೧-೩೫-೭॥

ಹಕ್ಕಿಗಳು" ಎಂಬ ವಾಚ್ಯಾರ್ಥವನ್ನು ಮಾತ್ರ ಗ್ರಹಿಸಿ ಆ ಎರಡು ಹಕ್ಕಿಗಳನ್ನು ಜೀವಾತ್ಮನ ಮತ್ತು ಪರಮಾತ್ಮನ ಸಂಕೇತಗಳೆಂದು ಸೂಚಿಸಿದ್ದಾರೆ. ಮತ್ತು "ಅಭಿಕಾಶ್" ಎಂಬ ಕ್ರಿಯೆಯ ಅರ್ಥವು "ಪ್ರಕಾಶ್" ಎಂದರೆ "ಸುತ್ತಲೂ ಬೆಳಕನ್ನು ಚೆಲ್ಲು" ಎಂದಿದ್ದರೂ ಅದಕ್ಕೆ ಇಲ್ಲದ "ನೋಡುತ್ತಿರು" ಎಂಬರ್ಥವನ್ನು ಕಲ್ಪಿಸಿದ್ದಾರೆ. ಮತ್ತು ಆ ಋಚೆಯನ್ನು ಮುಂಡಕೋಪನಿಷತ್ತಿನಲ್ಲಿ (೩-೧-೧) ಹಾಗೂ ಶ್ವೇತಾಶ್ವತರೋಪನಿಷತ್ತಿನಲ್ಲಿ (೪-೬) ಸೇರಿಸಿ ಅರಳಿಯನ್ನು ತಿನ್ನುವ ಹಕ್ಕಿಯು ಸಂಸಾರದ ಮಾಯಾಮೋಹಗಳಿಗೊಳಗಾಗಿ ಸುಖದುಃಖಗಳನ್ನು ಅನುಭವಿಸುವ ಜೀವಾತ್ಮನೆಂದೂ,ಅರಳಿಯನ್ನು ತಿನ್ನದೇ ನೋಡುತ್ತಿರುವ ಪಕ್ಕಿಯು ಸರ್ವಾಂತರ್ಯಾಮಿಯಾಗಿದ್ದು ಎಲ್ಲರ ಶರೀರದಲ್ಲಿದ್ದರೂ ಮಾಯಾಮೋಹಗಳಿಗೆ ಸಗ್ಗದ ಪರಮಾತ್ಮನೆಂದೂ ವ್ಯಾಖ್ಯಾನಿಸಿದ್ದಾರೆ. ಮತ್ತು ದ್ವೈತಮತವಾದಿ ಗಳಿಗೊಂದು ಚೆಲೋ ವೈದಿಕ ಪ್ರಮಾಣವನ್ನು ಒದಗಿಸಿ ಕೊಟ್ಟಿದ್ದಾರೆ.

ಹಿಂದೆ ಉದಹರಿಸಲಾದ ಋಚೆಯು ಸಿಂಧೂ ಬಿಲ್ಲೆಯ ಮೇಲಿನ ಚಿತ್ರ ಸಂಕೇತದ ಆಧಾರದಿಂದಲೇ ಬರೆಯಲ್ಪಟ್ಟಿದ್ದಿತೆಂದು ಹೇಳಲು ಆಧಾರಗಳಿವೆ. ಮೊದಲನೆಯದಾಗಿ ಋಗ್ವೇದದಲ್ಲಿ ಅಶ್ವತ್ಥವೃಕ್ಷವನ್ನು ದೇವಸದನ–ಎಂದು ಸೂಚಿಸಿದೆ. ಎರಡನೆಯದಾಗಿ ಅಗ್ನಿಯನ್ನು [1] ಮತ್ತು ಚಂದ್ರನನ್ನು [2] "ತಿಗ್ಮಶೃಂಗ" ಅಂದರೆ "ಮೊನಚಾದ ಕೊಂಬಿರುವ ಪ್ರಾಣಿ" ಎಂದು ಕರೆದಿದೆ. ಆದುದರಿಂದ ಬಿಲ್ಲೆಯ ಮೇಲಿನ ಅಶ್ವತ್ಥ ವೃಕ್ಷವನ್ನು ಬಳಸಿ ಕೂತಿರುವ ಪ್ರಾಣಿ ಗಳು ಅಗ್ನಿಯ ಮತ್ತು ಸೋಮನ ಸಂಕೇತಗಳೆಂದು ಸಿದ್ಧವಾಗುತ್ತದೆ. ಹಾಗೆಯೇ ಬಿಲ್ಲೆಯ ಮೇಲಿನ ಚೌಕದ ಆಕೃತಿಯು ಆಹವನೀಯ ಚಿತಿಯ ಸೂಚಕವಾಗಿರುವು ದರಿಂದ ಅದು ಅಗ್ನಿಯ ಸಂಕೇತವಾಗಿರುವಂತೆ ಅದರೊಳಗಿನ ಚಕ್ರದ ಚಿತ್ರವು ರಥದ ಸಂಕೇತವಾಗಿದೆ. ಮತ್ತು ಋಗ್ವೇದದಲ್ಲಿ ಸೋಮನನ್ನು "ಚೆಲೋದಿವ್ಯ ರಥ [3] ಎಂದು ಕರೆದಿದೆ. ಅಂದರೆ ಆ ಬಿಲ್ಲೆಯ ಮೇಲಿನ ಚಿತ್ರಣವು ಹಿಂದೆ ಉದಹರಿಸಿದ ಋಚೆಯ ಸಾಂಕೇತಿಕ ನಿರೂಪಣವಾಗಿದೆಯೆಂಬುದರಲ್ಲಿ ಯಾವ ಬಗೆಯ ಸಂದೇಹವೂ ಇಲ್ಲ.

---

1 ಯ ಉಗ್ರ ಇವ ಶರ್ಯಹಾ ತಿಗ್ಮಶೃಂಗೋ ನ ವಂಸಗಃ।
ಅಗ್ನೇ ಪುರೋ ರುರೋಜಿಥ ॥ ಋ. ೬-೧೬-೩೯ ॥

2 ಸ ರಂಹತ ಉರುಗಾಯಸ್ಯ ಜೂತಿಂವೃಥಾ ಕ್ರೀಳಂತಂ ಮಿಮತೇ ನ ಗಾವಃ।
ಪರೀಣಸಂ ಕೃಣತೇ ತಿಗ್ಮ ಶೃಂಗೋ ದಿವಾ ಹರಿರ್ದದೃಶೇ ನಕ್ತಮೃಜ್ರಃ॥ಋ.೯-೯೭-೯॥

3 ಪೂರ್ವಾಮನು ಪ್ರದಿಶಂ ಯಾತಿ ಚೇಕಿತತ್ ಸಂ ರಶ್ಮಿಭಿರ್ಯತತೇ।
ದರ್ಶತೋ ರಥೋ ದೈವ್ಯೋ ದರ್ಶತೋ ರಥಃ ॥ ಋ. ೮-೧೧೧-೩ ॥

ಹಿಂದೆ ವಿವರಿಸಿದ ಅರ್ಥದ ಪ್ರಕಾರ ಪಿಪ್ಪಲವನ್ನು ಅಂದರೆ ಅಶ್ವತ್ಥವನ್ನು ಅಥವಾ ಅಶ್ವತ್ಥದ ಸಮಿತ್ತುಗಳನ್ನು ತಿಂದು ಬೆಳಕನ್ನು ಬೀರುವವನು ಅಗ್ನಿಯಾಗಿದ್ದು ತಿನ್ನದೇ ಬೆಳಕನ್ನು ಬೀರುವವನು ಚಂದ್ರನಾಗಿದ್ದಾನೆ. ಆದುದರಿಂದ ಆ ಚಿತ್ರಸಂಕೇತವನ್ನು ನಿರ್ಮಿಸಿದ ಭೃಗುಕುಲದ ಗೃತ್ಸಮದನು ಬಿಲ್ಲೆಯ ಮೇಲಿನ ಬರಹದ ಸಾಲಿನ ಕೊನೆಯಲ್ಲಿ ಚೌಕದೊಳಗೆ ಚಕ್ರವಿರುವ ಸಂಕೇತವನ್ನು ದ್ವಂದ್ವಾರ್ಥದಲ್ಲಿ ಅಂದರೆ ತನ್ನ ಕುಲವನ್ನು ಮತ್ತು ಅಶ್ವತ್ಥವೃಕ್ಷವನ್ನು ಬಳಸಿ ಕೂತಿರುವ ತಿಗ್ಮಶೃಂಗ ಪ್ರಾಣಿಗಳು ಅಗ್ನಿ ಮತ್ತು ಚಂದ್ರರೆಂದು ಸೂಚಿಸುವಂತೆ ನಿರ್ಮಿಸಿದ್ದನೆಂದು ಸಿದ್ಧವಾಗುತ್ತದೆ.

ಹಲವು ಸಿಂಧೂ ಬಿಲ್ಲೆಗಳ ಮೇಲೆ ತಲೆಯಲ್ಲಿ ಕೊಂಬುಗಳಿರುವ ಮನುಷ್ಯನು ಅಂದರೆ ಆರ್ಯಜನರ ದೇವನಾದ ಅಗ್ನಿಯು ಮರವನ್ನು ಹತ್ತುತಿರುವಂತೆಯೂ, ಮರಕ್ಕೆ ಅಂಟಿಕೊಂಡಂತೆಯೂ, ಮರದ ಗೆಲ್ಲಿನಲ್ಲಿ ಕೂತಂತೆಯೂ, ಮರದ ಗೆಲ್ಲಿನಲ್ಲಿ ನಡೆಯುವಂತೆಯೂ ಚಿತ್ರಿಸಲ್ಪಟ್ಟಿದ್ದಾನೆ. ಮತ್ತು ಆ ಚಿತ್ರಗಳ ವರ್ಣನೆಯು ಋಗ್ವೇದದ ಸೂಕ್ತಗಳಲ್ಲಿದೆ. ಅವರ ಉದಾಹರಣೆಯಾಗಿ ಋಗ್ವೇದ ಮಂತ್ರಗಳ ಮೂರು ಚಿಕ್ಕ ಅಂಶಗಳು ಇಲ್ಲಿ ಕೊಡಲಾಗುವುವು–

ತಕ್ವಾ ನ ಭೂರ್ಣಿರ್ವನಾ ಸಿಷಕ್ತಿ ॥ ಋ. ೧-೬೬-೫ ॥ ಅಂದರೆ ತುಂಬಾ ಚಟುವಟಿಕೆಯುಳ್ಳ ಹಕ್ಕಿಯಂತೆ ಮರಕ್ಕೆ ಅಂಟಿಕೊಳ್ಳುತ್ತಾನೆ.

ವೇರ್ನ ದ್ರುಷದ್ವಾ ರಘುಪತ್ಮಜಂಹಾ ॥ ಋ. ೬-೧-೫॥ ಅಂದರೆ-ಲಘುವಾದ ರೆಕ್ಕೆಗಳ ಹಕ್ಕಿಯಂತೆ ಮರದಲ್ಲಿ ಕೂತವ.

ತಕ್ವವೀರಿವ ವನೇ ವನೇ ಶಿಶ್ರಿಯೇ ॥ ಋ. ೧೦-೬೧-೨॥ ಅಂದರೆ- ವೇಗದಿಂದ ಹಾರುವ ಹಕ್ಕಿಯಂತೆ ಪ್ರತಿಯೊಂದು ಮರವನ್ನು ಆಶ್ರಯಿಸುತ್ತಾನೆ.

ಹಾಗೆಯೇ ಸಿಂಧೂ ಬಿಲ್ಲೆಗಳ ಮೇಲಿರುವ ನಾನಾ ಭಾವ ಭಂಗಿಗಳನ್ನು ತೋರುವ ಹಾಗೂ ನಾನಾ ಬಗೆಯ ಹೋರಿಗಳ ವರ್ಣನೆಗಳೂ ಋಗ್ವೇದದ ಅಗ್ನಿಸೂಕ್ತಗಳಲ್ಲಿ ಮತ್ತು ಇಂದ್ರ ಸೂಕ್ತಗಳಲ್ಲಿ ಇವೆ. ಅಂದರೆ ಭಾರತೀಯ ಆರ್ಯಜನರು ಬ್ರಾಹ್ಮೀವರ್ಣಮಾಲೆಯನ್ನು ನಿರ್ಮಿಸಿ ಆ ಬಿಲ್ಲೆಗಳ ಮೇಲಿನ ಚಿತ್ರಸಂಕೇತಗಳಿಂದ ಸೂಚಿತವಾಗುವ ಪ್ರಾಚೀನ ಐತಿಹ್ಯಗಳಿಂದ ಕೂಡಿದ ಮಂತ್ರಗಳನ್ನು ಬರೆದುಕೊಳ್ಳುವ ತನಕ ಅವರಿಗೆ ಆ ಮಂತ್ರಗಳನ್ನು ನೆನಪಿನಲ್ಲಿಡಲು ಮತ್ತು ಆ ಬಿಲ್ಲೆಗಳನ್ನು ಯಜ್ಞಕಾಲದಲ್ಲಿ ಅಗ್ನಿದೇವನ ಪ್ರತೀಕಗಳನ್ನಾಗಿ ಉಪಯೋಗಿಸಲು ಆ ಬಿಲ್ಲೆಗಳ ಆವಶ್ಯಕತೆ ಇದ್ದೇ ಇತ್ತು. ಆದರೆ ಮುಂದೆ ಆ ಚಿತ್ರ ಸಂಕೇತಗಳಿಂದ ಸೂಚಿತವಾಗುತಿದ್ದ ಮಂತ್ರಗಳನ್ನು ಬ್ರಾಹ್ಮಿಲಿಪಿಯಿಂದ ಬರೆದುಕೊಂಡ ತರುವಾಯ ಅವರಿಗೆ ಅಧಿಕಾಂಶ ಬಿಲ್ಲೆಗಳ ಆವಶ್ಯಕತೆ ಇಲ್ಲವಾಗಿರಬಹುದಾದರೂ ಅವುಗಳು

ಅವರ ಹಿರಿಯರ ಕಾಲದಿಂದ ಉಪಯೋಗಿಸಲ್ಪಡುತ್ತ ಬಂದವುಗಳಾಗಿದ್ದುದರಿಂದ ಅವರು ಬ್ರಾಹ್ಮೀ ಲಿಪಿಯು ನಿರ್ಮಿಸಲ್ಪಟ್ಟ ಬಹಳ ಕಾಲ ತರುವಾಯದ ತನಕವೂ ಆ ಬಿಲ್ಲೆಗಳನ್ನು ಉಪಯೋಗಿಸುತಿದ್ದಿರಬಹುದು. ಆದರೆ ಬ್ರಾಹ್ಮೀಲಿಪಿಯು ನಿರ್ಮಿಸಲ್ಪಟ್ಟ ತರುವಾಯ ವೈದಿಕ ಸಾಹಿತ್ಯವು ಬೆಳೆಯುತ್ತ ಸಾಗಿ ಅವರ ಆಚಾರ ವಿಚಾರಗಳಲ್ಲಿಯೂ ಯಜ್ಞಗಳ ನಿರ್ವಹಣ ಕ್ರಮದಲ್ಲಿಯೂ ಪರಿವರ್ತನಗಳಾಗುತ್ತ ಸಾಗಿದಂತೆ ಆ ಬಿಲ್ಲೆಗಳ ಉಪಯೋಗವು ಕೂಡ ಕಡಿಮೆಯಾಗುತ್ತ ಸಾಗಿ ಕೊನೆಗೆ ಅವುಗಳ ಉಪಯೋಗವು ಸಂಪೂರ್ಣವಾಗಿ ನಿಂತುಹೋಯಿತೆನ್ನಬಹುದು. ಮತ್ತು ಆ ಕಾರಣದಿಂದಲೇ ಮುಂದೆ ಆ ಬಿಲ್ಲೆಗಳು ಕಾಣದಂತಾಗಿದ್ದುವೆನ್ನಬಹುದು.

ಹೇಗಿದ್ದರೂ ಹಿಂದಿನ ವಿವರಗಳಿಂದ ಬ್ರಾಹ್ಮೀ ಲಿಪಿಯು ವಾಸ್ತವಿಕ ಮೂಲವಾವುದೆಂದು ಮತ್ತು ಸಿಂಧೂ ಸಂಸ್ಕೃತಿಯು ಯಾರಿಗೆ ಸೇರಿದುದೆಂದು ಅಥವಾ ಬ್ರಾಹ್ಮೀಲಿಪಿಯನ್ನು ಭಾರತೀಯ ಆರ್ಯಜನರು— ಬ್ರಹ್ಮವೆಂದು ಕರೆಯಲ್ಪಡುತಿದ್ದ ಪ್ರಜಾಪತಿಯು ಪ್ರತೀಕದಿಂದ, ಮತ್ತು ಯಜ್ಞಚಿತಿಗಳ ಹಾಗೂ ಯಜ್ಞೋಪಕರಣಗಳ ಆಕೃತಿಗಳಿಂದ ನಿರ್ಮಿಸಿದ್ದರೆಂದು ಮತ್ತು ಸಿಂಧೂ ಸಂಸ್ಕೃತಿಯು ಸಂಪೂರ್ಣವಾಗಿ ಆರ್ಯ ಜನರಿಗೆ ಸೇರಿದುದೆಂದು ಸಂದೇಹಕ್ಕೆಡೆಯಿಲ್ಲದಂತೆ ಸಿದ್ಧವಾಗಿದೆ. ಆದುದರಿಂದ ಈ ಲೇಖನವನ್ನು ಇನ್ನೂ ವಿಸ್ತರಿಸುವ ಆವಶ್ಯಕತೆ ಉಳಿದಿಲ್ಲ. ಇತಿ ಶಮ್॥

ಪರಿಶಿಷ್ಟ ೧

"ಭಾರತೀಯ ಜ್ಯೋತಿಷ ಶಾಸ್ತ್ರ" ಎಂಬ ಅಧ್ಯಾಯದ ಕೊನೆಯಲ್ಲಿ ಅಂದರೆ ಪುಟ 250ರಲ್ಲಿ ನಕ್ಷತ್ರಗಳಿಗಾಗಿ ನಿರ್ಧರಿಸಿದ ದೇವತೆಗಳ ಹೆಸರುಗಳಲ್ಲಿ ಅಗ್ನಿಯ ಪರ್ಯಾಯ ನಾಮಗಳನ್ನು ಬಿಟ್ಟರೆ-"ಅಗ್ನಿ, ಅದಿತಿ, ಅಶ್ವಿನೌ, ಆಪಃ, ನಿರ್ಋತಿ:, ಪಿತರ:, ಸರ್ಪಾ:, ಸವಿತಾ ಮತ್ತು ಸೋಮ ಎಂಬ ಒಂಭತ್ತು ಹೆಸರುಗಳು ಮಾತ್ರ ಉಳಿಯುತ್ತವೆಂದು ಹೇಳಿದೆ. ಆದರೆ ಋಗ್ವೇದದ ಎರಡನೆಯ ಮಂಡಲದ ಮೊದಲನೆಯ ಸೂಕ್ತದೊಳಗಿನ ಕೆಲವು ಋಚೆಗಳ ಪ್ರಕಾರ-ಸವಿತಾ, ಅದಿತಿ, ಭಾರತೀ, ಇಳಾ, ಸರಸ್ವತೀ, ಮೊದಲಾದವರು ಕೂಡ ಅಗ್ನಿಯೇ ಎಂದು ಗೊತ್ತಾಗುತ್ತದೆ–

ತ್ವಮಗ್ನ ಇಂದ್ರೋ. ವೃಷಭಃ ಸತಾಮಸಿ,
ತ್ವಂವಿಷ್ಣುರುರುಗಾಯೋ ನಮಸ್ಯಃ।
ತ್ವಂ ಬ್ರಹ್ಮಾರಯಿವಿದ್ ಬ್ರಹ್ಮಣಸ್ಪತೇ
ತ್ವಂ ವಿಧರ್ತಃ ಸಚಸೇಪುರಂಧ್ಯಾ ॥೨-೧-೩॥

ತ್ವಮಗ್ನೇ ರಾಜಾವರುಣೋ ಧೃತವ್ರತಸ್
ತ್ವಂ ಮಿತ್ರೋ ಭವಸಿ ದಸ್ಮ ಈಡ್ಯಃ।
ತ್ವಮರ್ಯಮಾ ಸತ್ಪತಿರ್ಯಸ್ಯ ಸಂಭುಜಂ
ತ್ವಮಂಶೋ ವಿದಥೇ ದೇವ ಭಾಜಯುಃ ॥ ೪ ॥

ತ್ವಮಗ್ನೇ ತ್ವಷ್ಟಾ. ವಿಧತೇ ಸುವೀರ್ಯಂ
ತವ ಗ್ನಾವೋ ಮಿತ್ರಮಹಃ ಸಜಾತ್ಯಮ್ ।
ತ್ವಮಾಶುಹೇಮಾ ರರಿಷೇ ಸ್ವಶ್ವ್ಯಂ
ತ್ವಂ ನರಾಂ ಶರ್ಧೋ ಅಸಿ ಪುರೂವಸು: ॥ ೫ ॥

ತ್ವಮಗ್ನೇ ರುದ್ರೋ ಅಸುರೋ ಮಹೋ ದಿವಸ್
ತ್ವಂ ಶರ್ಧೋ ಮಾರುತಂ ಪೃಕ್ಷ ಈಶಿಷೇ॥
ತ್ವಂ ವಾತೈರರುಣೈರ್ಯಾಸಿ ಶಂಗಯಸ್
ತ್ವಂ ಪೂಷಾ ವಿಧತಃ ಪಾಸಿ ಮತ್ಮನಾ ॥ ೬ ॥

ತ್ವಮಗ್ನೇ ದ್ರವಿಣೋದಾ ಅರಂಕೃತೇ
ತ್ವಂ ದೇವಃಸವಿತಾ ರತ್ನಧಾ ಅಸಿ ।

ತ್ವಂ ಭಗೋ ನೃಪತೇ ವಸ್ವ ಈಶಿಷೇ
ತ್ವಂ ಪಾಯುರ್ದಮೇ ಯಸ್ತೇಽವಿಧತ್ ॥ ೭ ॥

ತ್ವಮಗ್ನೇ ಅದಿತಿರ್ದೇವ ದಾಶುಷೇ
ತ್ವಂ ಹೋತ್ರಾ ಭಾರತೀ ವರ್ಧಸೇ ಗಿರಾ

ತ್ವಮಿಳಾ ಶತಹಿಮಾಸಿ ದಕ್ಷಸೇ
ತ್ವಂ ವೃತ್ರಹಾ ವಸುಪತೇ ಸರಸ್ವತೀ ॥ ೧೧ ॥

ವೇದಮಂತ್ರಗಳ ಪ್ರಾಚೀನತೆ ಎಂಬ ಅಧ್ಯಾಯದಲ್ಲಿ ಅಂದರೆ ಪುಟ 264ರಲ್ಲಿ ಋಗ್ವೇದವು ಕೃತ್ತಿಕಾ ನಕ್ಷತ್ರದ ದೇವಸಾದ ಅಗ್ನಿಯಿಂದ, ಅಗ್ನಿಯನ್ನು ಪುರೋಹಿತನನ್ನಾಗಿ ಮಾಡಿ, ಅವನನ್ನು ಯಜ್ಞದ ದೇವನೆಂದು ಕರೆದು ಪ್ರಾರಂಭ ವಾಗಿದೆ. ಆದುದರಿಂದ ಆ ಕಾಲದಲ್ಲಿ ವಸಂತ ಸಂಪಾತವು ಕೃತ್ತಿಕಾ ನಕ್ಷತ್ರದಲ್ಲಿ ಘಟಿಸುತಿದ್ದಿತು–ಎಂಬುದಾಗಿ ಸೂಚಿಸಿದೆ. ವಸಂತ ಸಂಪಾತವು ಕೃತ್ತಿಕಾ ನಕ್ಷತ್ರ ದಲ್ಲಿ ಘಟಿಸುತಿದ್ದಿತೆಂದು ಸ್ಪಷ್ಟವಾಗಿ ಸೂಚಿಸುವ ಉಲ್ಲೇಖಗಳು ಅಂದರೆ– "ಅಗ್ನಿಯು ದೇವತೆಗಳ ಪುರೋಹಿತನಾದನು ಅಥವಾ ದೇವತೆಗಳ ಮುಂದಾ ಳಾದನು" ಎಂಬ ಉಲ್ಲೇಖಗಳು ಋಗ್ವೇದದಲ್ಲಿಯೇ ಇವೆ-

ನಮಸ್ಯತ ಹವ್ಯದಾತಿಂ ಸ್ವಧ್ವರಂ
ದುವಸ್ಯತ ದಮ್ಯಂ ಜಾತವೇದಸಮ್।
ರಥೀರ್ಋತಸ್ಯ ಬೃಹತೋ ವಿಚರ್ಷಣಿರ್
ಅಗ್ನಿರ್ದೇವಾನಾಮಭವತ್ ಪುರೋಹಿತಃ ॥ ಋ. ೩ ೨–೮ ॥
ಅಗ್ನಿರ್ದೇವೋ ದೇವಾನಾಮಭವತ್ ಪುರೋಹಿತೋ
ಅಗ್ನಿಂ ಮನುಷ್ಯಾ ಋಷಯಃ ಸಮೀಧಿರೇ ।
ಅಗ್ನಿಂ ಮಹೋ ಧನಸಾತಾವಹಂಹುವೇ
ಮೃಳೀಕಂ ಧನಸಾತಯೇ ॥ ಋ. ೧೦-೧೫೦-೪॥

ದೇವತೆಗಳ ಪುರೋಹಿತನಾಗುವುದು ಅಂದರೆ-"ನಕ್ಷತ್ರಗಳ ಅಥವಾ ನಕ್ಷತ್ರ ದೇವತೆಗಳ ಗಣನೆಯಲ್ಲಿ ಮೊದಲನೆಯವನಾಗುವುದು" ಎಂಬುದಾಗಿ ಹಿಂದೆ ವಿವರಿಸಿದೆ-ಆದುದರಿಂದ ಅದನ್ನು ಇಲ್ಲಿ ಮರಳಿ ವಿವರಿಸುವ ಆವಶ್ಯಕತೆ ಇಲ್ಲ. ಅರ್ಥಾತ್ ಬ್ರಾಹ್ಮೀಲಿಪಿಯಿಂದ ಋಗ್ವೇದದ ಋಚೆಗಳನ್ನು ಬರೆಯುತಿದ್ದ ಕಾಲದಲ್ಲಿ ವಸಂತಸಂಪಾತವು ಕೃತ್ತಿಕಾ ನಕ್ಷತ್ರದಲ್ಲಿ ಘಟಿಸುತಿತ್ತೆಂದು ಆದರಿಂದ ಸ್ಪಷ್ಟವಾಗಿ ಸಿದ್ಧವಾಗುತ್ತದೆ.

ಪರಿಶಿಷ್ಟ ೨

ಮಹಾಭಾರತ ಕಾವ್ಯ

ಮಹಾಭಾರತ ಕಾವ್ಯದ ಅಥವಾ ಅದರಲ್ಲಿ ವರ್ಣಿಸಲ್ಪಟ್ಟಿರುವ ಕೌರವ ಪಾಂಡವರ ಯುದ್ಧದ ಐತಿಹಾಸಿಕತೆಯ ಸಂಬಂಧದಲ್ಲಿ ಸಾಧಾರಣ ನೂರು ವರ್ಷಗಳಿಂದ ವಿದ್ವಾಂಸರೊಳಗೆ ವಾದ–ಪ್ರತಿವಾದಗಳು ಸಾಗುತ್ತಲಿವೆ. ಹಿಂದೆ ಡಾಕ್ಟರ್ ಅಲ್ಬರ್ಟ್ ವೇಬರ್ ಎಂಬ ಜರ್ಮನ್ ವಿದ್ವಾಂಸರು ಶ್ರೀ ಕೃಷ್ಣನ ವಾಸ್ತವಿಕ ವ್ಯಕ್ತಿತ್ವವನ್ನು ಅಲ್ಲಗಳೆದಾಗ ಖ್ಯಾತ ಬಂಗಾಳಿ ಉಪನ್ಯಾಸ ಲೇಖಕ ದಿ. ಬಂಕಿಮ ಚಂದ್ರ ಚತರ್ಜೀ ಅವರು ಡಾ. ವೇಬರರ ಅಭಿಪ್ರಾಯವನ್ನು ಖಂಡಿಸಿ ಶ್ರೀ ಕೃಷ್ಣ ಚರಿತ ಎಂಬ ಗ್ರಂಥವನ್ನು ಬರೆದು ಪ್ರಕಟಿಸಿದ್ದರು. ಅದರ ಕನ್ನಡ ಭಾಷಾಂತರವೂ ಪ್ರಕಟವಾಗಿತ್ತು ಮತ್ತು ಆ ಗ್ರಂಥದಿಂದಾಗಿ ಭಾವುಕರಾದ ಜನಸಾಮಾನ್ಯರಿಗೆ ತುಂಬಾ ಸಮಾಧಾನವೂ ಆಗಿತ್ತು. ಆದರೆ ಇತ್ತೀಚೆಗೆ ಪ್ರಖ್ಯಾತ ಇತಿಹಾಸಜ್ಞ ಡಾಕ್ಟರ್ ಡಿ. ಸಿ. ಸರ್ಕಾರ್ ಅವರು ಮಹಾಭಾರತ ಯುದ್ಧವೆಂಬುದು ವಾಸ್ತವಿಕ ಘಟನೆಯಲ್ಲ, ಅದು ಶುದ್ಧ ಕಟ್ಟುಕಥೆಯೆಂದು ಹೇಳಿದುದರಿಂದ ಹಿಂದೆ ಮುಗಿದು ಹೋದ ವಾದ ಪ್ರತಿವಾದಗಳು ಮರಳಿ ಪ್ರಾರಂಭವಾಗಿವೆ. ಪುರಾತತ್ವವಿದರಾದ ಡಾಕ್ಟರ್ ಎಚ್. ಡಿ. ಸಂಕಾಲಿಯ ಅವರು ಭಾರತವರ್ಷದಲ್ಲಿ ಈ ತನಕ ನಡೆಸಿದ ಯಾವುದೊಂದು ಪ್ರಾಚೀನ ಹಾಳು ದಿನ್ನೆಯ ಅಗೆತದಲ್ಲಿಯೂ ಮಹಾಭಾರತ ಕಾವ್ಯದೊಳಗೆ ವರ್ಣಿಸಿದ ಯುದ್ಧಕ್ಕೆ ಸಂಬಂಧಪಟ್ಟ ಸನ್ನಿವೇಶಗಳ ಅವಶೇಷಗಳು ಅಥವಾ ಕುರುಹುಗಳು ಕಾಣಸಿಗಲಿಲ್ಲವೆಂದು ಹೇಳಿದುದರಿಂದ ಡಾ. ಸರ್ಕಾರ್ ಅವರ ಹೇಳಿಕೆಗೆ ಪುಷ್ಟಿ ದೊರೆತಿದೆ. ಪರಂತು, ಡಾ. ದೇಶಪಾಂಡೇ, ಡಾ। ಅಸೀಮ ಕುಮಾರ ಚತರ್ಜೀ, ಶ್ರೀಮಾನ್ ಎಸ್. ಬಿ. ರಾಯ್ ಮೊದಲಾದ ಕೆಲವು ಪುರಾಣ ಮತವಾದಿ ವಿದ್ವಾಂಸರು ಡಾ. ಸರ್ಕಾರ್ ಹಾಗೂ ಡಾ. ಸಂಕಾಲಿಯ ಅವರ ಹೇಳಿಕೆಯನ್ನು ಕಟುವಾಗಿ ಟೀಕಿಸಿ, ಮಹಾಭಾರತ ಯುದ್ಧವು ವಾಸ್ತವಿಕ ಘಟನೆಯೆಂದೂ ಆ ಯುದ್ಧವು ನಂದ ಮಹಾಪದ್ಮನ ಪಟ್ಟಾಭಿಷೇಕದ ಒಂದು ಸಾವಿರ ವರ್ಷಗಳ ಮೊದಲು ನಡೆದಿದ್ದಿತೆಂದೂ ವಾದಿಸಿದ್ದಾರೆ. ಹಾಗೆಯೇ ಪುರಾತತ್ವವಿದ ಪ್ರೊ. ಬಿ. ಬಿ. ಲಾಲ್ ಅವರು ಕೂಡ ಮಹಾಭಾರತ ಯುದ್ಧವು ವಾಸ್ತವಿಕ ಘಟನೆಯೆಂದೂ ಅದರ ಕಾಲವು ಶಕಪೂರ್ವ ಒಂದು ಸಾವಿರ ವರ್ಷಗಳೆಂದೂ ಹೇಳಿದ್ದಾರೆ. ಆದರೆ ಮಹಾಭಾರತ ಯುದ್ಧವು ನಡೆದ ಕಾಲದ ಸಂಬಂಧದಲ್ಲಿ ತಮ್ಮ ಅಭಿಪ್ರಾಯವನ್ನು ವ್ಯಕ್ತಗೊಳಿಸಿದವರಲ್ಲಿ ಒಬ್ಬನಾದರೂ-ಮಹಾಭಾರತ ಕಾವ್ಯದ ಆದಿಪರ್ವದ ಎರಡನೆಯ ಅಧ್ಯಾಯದೊಳಗಿನ ಉಲ್ಲೇಖವನ್ನು ಪರಿಶೀಲಿಸಿಲ್ಲವೆನ್ನಬೇಕಾಗಿದೆ.

ಆ ಉಲ್ಲೇಖವು ಮುಂದಿನಂತಿದೆ– **ಅಂತರೇ ಚೈವ ಸಂಪ್ರಾಪ್ತೇ ಕಲಿದ್ವಾಪರಯೋರಭೂತ್। ಸಮಂತಪಂಚಕೇ ಯುದ್ಧಂ ಕುರುಪಾಂಡವಸೇನಯೋಃ ॥೧೩॥** ಅಂದರೆ- ಕಲಿ-ಮತ್ತು ದ್ವಾಪರ ಯುಗಗಳ ಸಂಧಿಕಾಲವು ಪ್ರಾಪ್ತವಾದಾಗ ಕುರು-ಪಾಂಡವ ಸೈನ್ಯಗಳೊಳಗೆ ಸಮಂತಪಂಚಕ (=ಕುರುಕ್ಷೇತ್ರ)ದಲ್ಲಿ ಯುದ್ಧವು ನಡೆಯಿತು. ಆ ಶ್ಲೋಕದ ಮತ್ತು ಅರ್ವಾಚೀನ ಜ್ಯೋತಿಷ ಸಿದ್ಧಾಂತಗಳ ಗಣನೆಯ ಪ್ರಕಾರ ಆ ಕಾಲವು ಶಕಪೂರ್ವ ೩೨೦೦ ವರ್ಷಗಳೆಂದಾಗುತ್ತದೆ. ಮತ್ತು ಅದು ಅಧಿಕಾಂಶ ಋಗ್ವೇದ ಮಂತ್ರಗಳ ರಚನಾ ಕಾಲವಾಗಿದೆ. ಹಾಗೆಯೇ ಹಿಂದೆ ಹೆಸರಿಸಿದ ವಿದ್ವಾಂಸರು ಸೂಚಿಸಿದ ಕಾಲವು ಅಧಿಕಾಂಶ ವೈದಿಕ ಸಾಹಿತ್ಯದ ರಚನಾ ಕಾಲವಾಗಿದೆ. ಆದುದರಿಂದ ಮಹಾಭಾರತ ಯುದ್ಧದ ವಿವರಗಳು ಮತ್ತು ಮಹಾಭಾರತದ ಮಹಾನಾಯಕನಾದ ವಾಸುದೇವನ ಉಲ್ಲೇಖವು ವೇದಗಳಲ್ಲಿ ಅಲ್ಲದಿದ್ದರೆ ತರುವಾಯದ ಬ್ರಾಹ್ಮಣ ಮೊದಲಾದ ವೈದಿಕ ಸಾಹಿತ್ಯದಲ್ಲಿ ಇರಲೇಬೇಕಾಗುತ್ತದೆ. ವೈದಿಕ ಸಾಹಿತ್ಯದಲ್ಲಿ ಅಂಥ ಉಲ್ಲೇಖಗಳಿವೆಯೇ? ಎಂಬುದನ್ನು ಮುಂದೆ ಚರ್ಚಿಸಲಾಗುವುದು.

ಅದರ ಮೊದಲು ಹಿಂದಿನ ಒಂದು ಘಟನೆಯನ್ನು ಇಲ್ಲಿ ಸ್ಮರಿಸುವುದು ಉಚಿತವಾಗಿದೆ. ಹಿಂದೆ ಒಬ್ಬ ಮಹನೀಯರು ಮಹಾತ್ಮಾ ಗಾಂಧೀಜಿಯವರೊಡನೆ ಬಾಪೂಜೀ, ರಾಮಾಯಣ ಮತ್ತು ಮಹಾಭಾರತ ಕಾವ್ಯಗಳು ಸತ್ಯವಾಗಿ ನಡೆದ ಕಥೆಗಳೇ? ಎಂದು ಪ್ರಶ್ನಿಸಲಾಗಿ ಮಹಾತ್ಮರು ಅರ್ಥಪೂರ್ಣವಾಗಿ ನಕ್ಕು "ಅವುಗಳು ಬರಿಯ ಸತ್ಯಗಳಲ್ಲ, ಶಾಶ್ವತ ಸತ್ಯಗಳು" ಎಂಬುದಾಗಿ ಉತ್ತರಿಸಿದ್ದರು. ಅವರ ಉತ್ತರದ ಆಶಯವು "ಆ ಗ್ರಂಥಗಳೊಳಗಿನ ಕಥೆಗಳು ಅಕ್ಷರಶಃ ಸತ್ಯವಾಗಿರಲೀ, ಅಲ್ಲದಿರಲೀ, ಅವುಗಳಲ್ಲಿ ಯಾವ ಧರ್ಮವು, ಮತ್ತು ಆಧ್ಯಾತ್ಮಿಕ ತತ್ವವು ಅಡಕವಾಗಿದೆಯೋ ಅದು ಶಾಶ್ವತವಾದುದಾಗಿದೆ. ಅಥವಾ "ಮಹಾಭಾರತ ಯುದ್ಧವು ಒಮ್ಮೆಗೆ ವಾಸ್ತವಿಕ ಘಟನೆಯಲ್ಲವೆಂದು ಸಿದ್ಧವಾದರೂ ಮಹಾಭಾರತಕಾವ್ಯದೊಳಗೆ ಬಂದಿರುವ ಭಗವದ್ಗೀತೆಯಲ್ಲಿ ಬೋಧಿಸಲಾದ ಮಹೋನ್ನತವಾದ ಆಧ್ಯಾತ್ಮಿಕ ತತ್ವಗಳಿಗೆ" ಹಾಗೂ "ರಾಮಾಯಣದೊಳಗೆ ವರ್ಣಿಸಲಾದ ಶ್ರೀರಾಮನ ಮತ್ತು ಸೀತೆಯ" ಆದರ್ಶ ಚರಿತಗಳಿಗೆ" ಯಾವ ಬಗೆಯ ಹಾನಿಯೂ ಆಗುವಂತಿಲ್ಲ– ಎಂಬುದಾಗಿದ್ದಿತೆಂಬುದರಲ್ಲಿ ಸಂದೇಹವಿಲ್ಲ.

ಮಹಾಭಾರತ ಕಾವ್ಯವು ಸಾಧಾರಣ ಹದಿನಾಲ್ಕು ಶತಮಾನಗಳಿಂದ ಹಿಂದೂ ಜನರ ಭಾವನೆಗಳ ಹಾಗೂ ಆಚಾರ–ವಿಚಾರಗಳ ಮೇಲೆ ತನ್ನ ಆಧಿಪತ್ಯವನ್ನು ಸಾಗಿಸುತ್ತ ಬಂದಿದೆ. ಭಾರತೀಯ ಮಹಾಕವಿಗಳು ಅದರೊಳಗಿನ ಕಥಾವಸ್ತುವನ್ನು ಆಯ್ದುಕೊಂಡು ಅದನ್ನು ತಮ್ಮ ಪ್ರತಿಭೆಯಿಂದ ವಿಸ್ತರಿಸಿ ರಸಭರಿತವಾದ ಕಾವ್ಯರತ್ನಗಳನ್ನಾಗಿ ಮಾರ್ಪಡಿಸಿದ್ದಾರೆ. ಭಕ್ತಶ್ರೇಷ್ಠರಾದ ರಾಜ ಮಹಾರಾಜರು ಹಾಗೂ ಧನಿಕ ಜನರು ಮಹಾಭಾರತದೊಳಗಿನ ಮತ್ತು ರಾಮಾಯಣ

ದೊಳಗಿನ ದೇವತೆಗಳಿಗಾಗಿ ಸಾವಿರಾರು ಭವ್ಯ ದೇವಾಲಯುಗಳನ್ನು ಕಟ್ಟಿಸಿದ್ದಾರೆ. ಸಾಪಿರಾರು ಶಿಲ್ಪಿಶಿರೋಮಣಿಗಳು ಆ ದೇವಾಲಯುಗಳ ಮತ್ತು ದೇವತೆಗಳ ಪ್ರತಿಮೆಗಳ ನಿರ್ಮಾಣದಲ್ಲಿ ಹಾಗೂ ಆ ಕಾವ್ಯಗಳೊಳಗಿನ ಕಥೆಗಳನ್ನು ಶಿಲಾಖಂಡ ಗಳಲ್ಲಿ ಮೂಡಿಸುವಲ್ಲಿ ತಮ್ಮ ಶಿಲ್ಪಚಾತುರ್ಯವೆಲ್ಲವನ್ನು ಪ್ರದರ್ಶಿಸಿದ್ದಾರೆ. ಹೆಚ್ಚೇಕೆ ಇಂದಿನ ಭಾರತೀಯ ಸಂಸ್ಕೃತಿಯು ಬಹುಮಟ್ಟಿಗೆ ಮಹಾಭಾರತದೊಳಗಿನ ಮತ್ತು ರಾಮಾಯಣದೊಳಗಿನ ನಾಯಕ–ನಾಯಕಿಯರ ಆದರ್ಶ ಚರಿತಗಳಿಂದ ಮತ್ತು ಕಥೆಗಳಲ್ಲಿ ಬೋಧಿಸಲಾದ ನೀತಿಧರ್ಮಗಳಿಂದ ಪ್ರಭಾವಿತವಾಗಿ ರೂಪು ಗೊಂಡಿದೆ-ಎಂದರೆ ತಪ್ಪಾಗಲಾರದು.

ಅಂಥ ಪರಿಸ್ಥಿತಿಯಲ್ಲಿ ಆ ಗ್ರಂಥಗಳಲ್ಲಿ ವರ್ಣಿಸಲಾದ ಕಥೆಗಳನ್ನು ವಾಸ್ತವಿಕ ಘಟನೆಗಳೇ? ಅಲ್ಲವೇ? ಎಂಬುದಾಗಿ ವಿಮರ್ಶಿಸುವುದೆಂದರೆ ಹೃದಯ ವನ್ನು ಹಿಡಿದು ಹಿಂಡಿದಂತಾಗುತ್ತದೆ. ಹಾಗಿದ್ದರೂ ಸತ್ಯದ ದರ್ಶನಕ್ಕಾಗಿ, ಮತ್ತು "ಸತ್ಯಮೇವ ಜಯತೇ" ಎಂಬ ನುಡಿಯನ್ನು ಸತ್ಯವೆಂದು ಸಾಧಿಸುವ ಸಲುವಾಗಿ ಅವುಗಳನ್ನು ವಿಮರ್ಶಿಸಲೇಬೇಕಾಗುತ್ತದೆ. ಏಕೆಂದರೆ ಇತಿಹಾಸ ಮತ್ತು ವಿಶ್ವಾಸ ಎಂಬವುಗಳು ಒಂದೇ ಆಗಿರುವುದಿಲ್ಲ. ಇತಿಹಾಸವು ಸತ್ಯದ ಬೇರೊಂದು ರೂಪ ವಾಗಿರುತ್ತದೆ. ಅದರಲ್ಲಿ ಅಸತ್ಯಕ್ಕೆ ಸ್ಥಾನವಿಲ್ಲ. ಮತ್ತು ಇರಬಾರದು. ಆದರೆ ವಿಶ್ವಾಸವು ಎಲ್ಲ ಸಂದರ್ಭಗಳಲ್ಲಿ ಸತ್ಯವಾಗಿರುವುದಿಲ್ಲ-ಅಂದರೆ ಹೆಚ್ಚಿನ ಸಂದರ್ಭ ಗಳಲ್ಲಿ ವಿಶ್ವಾಸವೆಂಬುದು ಶುದ್ಧ ಮಿಥ್ಯಾಕಲ್ಪನೆಯಾಗಿದ್ದಿತೆಂದು ಅಥವಾ ಬುಡ ವಿಲ್ಲದೇ ಬೆಳೆದು ಬಂದಿದ್ದಿತೆಂದು ಕಂಡು ಬಂದಿದೆ. ಆದುದರಿಂದ ವಿಶ್ವಾಸಾರ್ಹ ವಾದ ಐತಿಹಾಸಿಕ ಘಟನೆಗಳ ಹಾಗೂ ಪ್ರಾಚೀನ ವೈದಿಕಗ್ರಂಥಗಳ ಆಧಾರದಿಂದ ಮತ್ತು ಪಕ್ಷಪಾತವಿಲ್ಲದ ಶುದ್ಧಮನೋಭಾವದಿಂದ ವಿಮರ್ಶಿಸಿದುದರ ಫಲವಾಗಿ ಮಹಾಭಾರತ ಕಾವ್ಯದಲ್ಲಿ ವರ್ಣಿಸಲ್ಪಟ್ಟಿರುವ ಕೌರವ–ಪಾಂಡವರ ಯುದ್ಧದ ಕಥೆಯು ವಾಸ್ತವಿಕ-ಸತ್ಯ - ಘಟನೆಯಲ್ಲವೆಂದು ಅಥವಾ ವಾಸ್ತವಿಕ ಚರಿತ್ರೆಯಲ್ಲ ವೆಂದು ಸಿದ್ಧವಾಗುವುದಾದರೆ ಅಂಥ ಸಿದ್ಧಾಂತವನ್ನು ಸ್ವೀಕರಿಸಲು ಏಕೆ ಹಿಂಜರಿಯ ಬೇಕು? ಅಂಥ ಸಿದ್ಧಾಂತವನ್ನು ಸರಿಯೆಂದು ಸ್ವೀಕರಿಸಿದುದರಿಂದ ಹಿಂದೂ ಧರ್ಮಕ್ಕೆ ಯಾವ ಬಗೆಯ ಹಾನಿಯೂ ಆಗುವಂತಿಲ್ಲ. ಏಕೆಂದರೆ ಹಿಂದೂ ಧರ್ಮವು ಮಹಾಭಾರತ–ಕಾಲಕ್ಕಿಂತ ಪ್ರಾಚೀನವಾಗಿದ್ದು ವೇದಗಳನ್ನು ಮತ್ತು ಜ್ಞಾನದ ಮಹಾಸ್ರೋತಗಳಾದ ಉಪನಿಷತ್ತುಗಳನ್ನು ಆಧರಿಸಿಕೊಂಡಿದೆಯೇ ಹೊರತು ಅರ್ವಾಚೀನವಾದ ಪುರಾಣಗಳನ್ನಲ್ಲ,

ಮಹಾಭಾರತ ಕಾವ್ಯದ ಐತಿಹಾಸಿಕತೆಯನ್ನು ಅಥವಾ ಅದರೊಳಗೆ ವರ್ಣಿಸಲ್ಪಟ್ಟಿರುವ ಕೌರವ–ಪಾಂಡವರ ಯುದ್ಧದ ಕಥೆಯನ್ನು ವಾಸ್ತವಿಕ ಘಟನೆಯೇ? ಬರಿಯ ಕಲ್ಪನೆಯೇ ಎಂಬುದನ್ನು ವಿಮರ್ಶಿಸಲು ಅನುಕೂಲ ವಾಗುವಂತೆ ಆ ಕಾವ್ಯದಲ್ಲಿ ವರ್ಣಿಸಲ್ಪಟ್ಟಿರುವ ವಿಷಯಗಳನ್ನು ವೇದಕಾಲೀನ

ಇತಿಹಾಸಕ್ಕೆ ಸಂಬಂಧಪಟ್ಟವುಗಳೆಂದು ಮತ್ತು ವೈದಿಕೋತ್ತರಕಾಲೀನ ಇತಿಹಾಸಕ್ಕೆ ಸಂಬಂಧಪಟ್ಟವುಗಳೆಂದು ಎರಡು ವರ್ಗಗಳನ್ನಾಗಿ ವಿಭಜಿಸಬೇಕಾಗುತ್ತದೆ. ಹಾಗೂ ವೇದಕಾಲೀನ ವಿಷಯುಗಳನ್ನು ವೈದಿಕಗ್ರಂಥಗಳ ಆಧಾರದಿಂದಲೂ, ವೈದಿಕೋತ್ತರ ಕಾಲೀನ ವಿಷಯುಗಳನ್ನು ವೈದಿಕೋತ್ತರ ಕಾಲದಲ್ಲಿ ಬರೆಯಲ್ಪಟ್ಟ ಇತಿಹಾಸ ಗ್ರಂಥಗಳ ಆಧಾರದಿಂದಲೂ ವಿಮರ್ಶಿಸಬೇಕಾಗುತ್ತದೆ, ಏಕೆಂದರೆ ಮಹಾಭಾರತ ಕಾವ್ಯದಲ್ಲಿ ಸಮಗ್ರ ವೈದಿಕ ಸಾಹಿತ್ಯದೊಳಗಿನ ಕಥೆಗಳು ಬಂದಿವೆಯಲ್ಲದೇ, ವೇದಗಳಲ್ಲಿ ಶರೀರಧಾರಿಗಳಲ್ಲದ ದೇವತೆಗಳು ಮತ್ತು ಅಸುರರು ಶರೀರಧಾರಿಗಳಾಗಿ ಬಂದು ಮಹಾಭಾರತದೊಳಗಿನ ನಾಯಕರೊಡನೆ ವ್ಯವಹರಿಸಿದ ವರ್ಣನೆಗಳೂ, ವೇದಪೂರ್ವಕಾಲದ ಅಂದರೆ ವೇದಮಂತ್ರಗಳಲ್ಲಿ ಹೆಸರುಗಳು ಮಾತ್ರ ಉಲ್ಲೇಖಿಸ ಲ್ಪಟ್ಟಿರುವ ಹಾಗೂ ಮಾತಾಪಿತೃಗಳು ಯಾರೆಂದು ಹೇಳಿರದ ಹಲವು ಋಷಿಗಳು ಮಾತಾ-ಪಿತೃಗಳು ಹಾಗೂ ಪತ್ನೀ-ಪುತ್ರರು ಉಳ್ಳವರಾಗಿ ಮಹಾಭಾರತದೊಳಗಿನ ನಾಯಕರೊಂದಿಗೆ ವ್ಯವಹರಿಸದ ವರ್ಣನೆಗಳೂ ಇವೆ. ಹಾಗೆಯೇ ಶಕಪೂರ್ವ ಐದನೆಯ ಶತಮಾನದಿಂದ ಮೊದಲುಗೊಂಡು ಶಕದ ಐದನೆಯ ಶತಮಾನದ ಅಂತದ ತನಕ ಜರುಗಿದ ಹಲವು ಘಟನೆಗಳ ವರ್ಣನೆಗಳೂ ಇವೆ. ಹಾಗಾಗಿ ಅಂಥ ವರ್ಣನೆಗಳ ಆಧಾರದಿಂದ ಮಹಾಭಾರತ ಕಾವ್ಯದ ಐತಿಹಾಸಿಕತೆಯನ್ನು ಮತ್ತು ಆ ಕಾವ್ಯದ ರಚನಾಕಾಲವನ್ನು ನಿರ್ಧರಿಸುವುದು ಅತ್ಯಂತ ಸರಳವೂ ಸುಗಮವೂ ಆಗಿದೆ.

ಮಹಾಭಾರತ ಕಾವ್ಯವು "**ನಾರಾಯಣಂ ನಮಸ್ಕೃತ್ಯ ನರಂ ಚೈವನರೋತ್ತಮಮ್। ದೇವೀಂ ಸರಸ್ವತೀಂ ವ್ಯಾಸಂ ತತೋ ಜಯಮುದೀರಯೇತ್॥ ಓಂ ನಮೋ ಭಗವತೇ ವಾಸುದೇವಾಯ ॥ ಓಂ ನಮಃ ಕೃಷ್ಣದ್ವೈಪಾಯನಾಯ॥** ಎಂಬುದಾಗಿ ಮಹಾಭಾರತಕ್ಕಿಂತ ಪ್ರಾಚೀನವಾದ ಯಾವುದೊಂದು ವೈದಿಕ ಗ್ರಂಥ ದಲ್ಲಿಯೂ ಇಲ್ಲದ "ನಾರಾಯಣ ಮತ್ತು ವಾಸುದೇವ ಹಾಗೂ ನರ ಎಂಬ ಹೊಸ ದೇವತೆಗಳನ್ನೂ, ಕೃಷ್ಣದ್ವೈಪಾಯನ ವ್ಯಾಸ ಎಂಬವನನ್ನೂ ನಮಸ್ಕರಿಸುತ್ತ ಪ್ರಾರಂಭವಾಗಿದೆ. ಮತ್ತು ಮುಂದೆ ಶಾಂತಿಪರ್ವದ ೩೩೪ನೆಯ ಅಧ್ಯಾಯದಲ್ಲಿ "ಸ್ವಾಯಂಭುವ ಮನ್ವಂತರದ ಕೃತಯುಗದಲ್ಲಿ ವಿಶ್ವಾತ್ಮನಾದ ನಾರಾಯಣನು– ನಾರಾಯಣ, ನರ, ಹರಿ ಮತ್ತು ಕೃಷ್ಣ ಎಂಬ ನಾಲ್ಕು ರೂಪಗಳಲ್ಲಿ "ಧರ್ಮನ" ಪುತ್ರರಾಗಿ ಜನಿಸಿದನು ಎಂತಲೂ ಕೃಷ್ಣನೇ ಹರಿ ಎಂತಲೂ ವರ್ಣಿಸುತ್ತದೆ.[1] ಮತ್ತು

---

[1] ನಾರಾಯಣೋ ಹಿ ವಿಶ್ವಾತ್ಮಾ ಚತುರ್ಮೂರ್ತಿಃ ಸನಾತನ।
ಧರ್ಮಾತ್ಮಜಃ ಸಂಬಭೂವ ಪಿತೈವಂ ಮೇಽಭ್ಯಭಾಷತ ॥ ೮ ॥
ಕೃತೇಯುಗೇ ಮಹಾರಾಜ ಪುರಾ ಸ್ವಾಯಂಭುವೇಽಂತರೇ।
ನರೋ ನಾರಾಯಣಶ್ಚೈವ ಹರಿಃ ಕೃಷ್ಣಃ ಸ್ವಯಂ ಭುವಃ ॥೯॥
ನರನಾರಾಯಣಾಭ್ಯಾಂಚ ಕೃಷ್ಣೇನ ಹರಿಣಾ ತಥಾ।

ಮಹಾಭಾರತದಲ್ಲಿ ಆದಿಯಿಂದ ಅಂತದ ತನಕ ಅಲ್ಲಲ್ಲಿ ಕೃಷ್ಣನ ರೂಪದಿಂದ ನಾರಾಯಣನ ಮಹಿಮೆಯು ವರ್ಣಿಸಲ್ಪಟ್ಟಿದೆ. ಮಹಾಭಾರತದ ಪ್ರಕಾರ ವಿಷ್ಣುವೇ ನಾರಾಯಣನಾಗಿದ್ದಾನೆ. ಮತ್ತು ಋಗ್ವೇದದ ಪ್ರಕಾರ ಸೂರ್ಯನೇ ವಿಷ್ಣುವಾಗಿದ್ದಾನೆ. ಪ್ರಖ್ಯಾತ ಜ್ಯೋತಿಷಿ ಆಚಾರ್ಯ ವರಾಹಮಿಹಿರನು ತನ್ನ ಬೃಹತ್ಸಂಹಿತೆಯ ಪಾರಂಭಿಕ ಶ್ಲೋಕದಲ್ಲಿ ಸೂರ್ಯದೇವನನ್ನು ವಿಶ್ವಾತ್ಮನೆಂದು ಸ್ತುತಿಸಿದ್ದಾನೆ. ಮತ್ತು ತೈತ್ತಿರೀಯಾರಣ್ಯಕದೊಳಗಿನ ನಾರಾಯಣೀಯ ಉಪನಿಷತ್ತಿನಲ್ಲಿ ಸೂರ್ಯನನ್ನು–ವಿಶ್ವಾತ್ಮನೆಂದೂ, ನಾರಾಯಣನೆಂದೂ ವರ್ಣಿಸಿದೆ.[1] ಹಾಗೆಯೇ ಮಹಾಭಾರತದಲ್ಲಿ ಕೃಷ್ಣನು ವಸುದೇವನ ಪುತ್ರನಾದುದರಿಂದ ವಾಸುದೇವನೂ ಆಗಿದ್ದಾನೆ. ಮತ್ತು ಈ ವಾಸುದೇವ ಎಂಬ ಶಬ್ದದಲ್ಲಿಯೇ ಮಹಾಭಾರತ ಕಾವ್ಯದ ರಹಸ್ಯವು ಅಡಗಿದೆ. ಅಂದರೆ ವಾಸುದೇವನ ಆರಾಧನೆಯು ಪ್ರಧಾನವಾಗಿದ್ದ ಭಾಗವತ ಧರ್ಮವು ಭಾರತ ವರ್ಷದಲ್ಲಿ ಪ್ರಚಲಿತವಾದ ತರುವಾಯವೇ ಮಹಾಭಾರತ ಕಾವ್ಯವು ರಚಿಸಲ್ಪಟ್ಟಿದ್ದಿತೆಂದು ಗೊತ್ತಾಗುತ್ತದೆ. ಅದನ್ನು ಮುಂದೆ ಕೊಡಲಾಗುವ ವಿವರಗಳಿಂದ ಸರಿಯಾಗಿ ಅರಿತುಕೊಳ್ಳಬಹುದು.

ಭಗವಾನ್ ಬುದ್ಧ ದೇವನ ಅಹಿಂಸಾಧರ್ಮದ ಪ್ರಚಾರದಿಂದ ವೈದಿಕ ಯಜ್ಞಗಳು ವಿರಳವಾಗುತ್ತ ಸಾಗಿದ್ದುವು. ಮತ್ತು ವೈದಿಕ ಜನರು ತಮ್ಮ ದೇವನಾದ ಅಗ್ನಿಯನ್ನು ಆರಾಧಿಸಲು ಯಜ್ಞಗಳಿಗೆ ಪ್ರತಿಯಾಗಿ ಹೊಸ ರೀತಿಯನ್ನು ಹುಡುಕ ತೊಡಗಿದ್ದರು. ಕೆಲವರು ತಮ್ಮ ಅಗ್ನಿಹೋತ್ರ ಅಲ್ಲದಿದ್ದರೆ ಅಗ್ನಿ ಕಾರ್ಯವನ್ನು ಜರಗಿಸುತಿದ್ದರಾದರೂ ಬೇರೆ ಕೆಲವರು ಯಜ್ಞಗಳಿಗೆ ಪ್ರತಿಯಾಗಿ ಯಜ್ಞಗಳಲ್ಲಿ ಉಪಯೋಗಿಸಲ್ಪಡುತಿದ್ದ ಅಗ್ನಿಯ ಪ್ರತೀಕವನ್ನು "ಶಿವ"ನೆಂದು ಕರೆದು ಆರಾಧಿಸತೊಡಗಿದ್ದರು. ಆಗ ಆರ್ಯವರ್ಗದ ಯವನರು ಮತ್ತು ಶಕರು ದೊಡ್ಡ ಸಂಖ್ಯೆಯಲ್ಲಿ ಬಂದು ಭಾರತವರ್ಷದೊಳಗೆ ನೆಲಸತೊಡಗಿದ್ದರು. ಅವರೆಲ್ಲರೂ ಸೂರ್ಯನ ಆರಾಧಕರಾಗಿದ್ದರು. ಭಾರತೀಯರು ಅಗ್ನಿಯನ್ನು ಶಿವನ ರೂಪದಿಂದ ಆರಾಧಿಸುವುದನ್ನು ಕಂಡ ಯವನರು ತಮ್ಮ ಆರಾಧ್ಯದೇವನಾದ ಸೂರ್ಯನನ್ನು "ದೇವದೇವನಾದ ವಾಸುದೇವ" ಎಂಬ ಹೆಸರಿನಿಂದ ಆರಾಧಿಸ ತೊಡಗಿದ್ದರು. ಇದು ಇತಿಹಾಸದಿಂದ ತಿಳಿದು ಬರುವ ಸತ್ಯವಾಗಿದೆ. ಆಗ ವಾಸುದೇವನ ಆರಾಧಕರು "ಭಾಗವತ"ರೆನಿಸಿಕೊಂಡಿದ್ದರು. ಅದರ ತರುವಾಯದಿಂದ ಶಿವನ ಮತ್ತು ವಾಸುದೇವನ ಸಂಬಂಧದಲ್ಲಿ ಹಲವು ಕಥೆಗಳು ಪ್ರಚಲಿತವಾಗಿದ್ದುವು. ಇದರ ಎಲ್ಲ ವಿವರಗಳು ಪ್ರಮಾಣಗಳೊಂದಿಗೆ ಮುಂದೆ ಬರುವುವು.

ಭಾಗವತಧರ್ಮದೊಳಗಿನ "ವಾಸುದೇವ" ಎಂಬ ಹೆಸರು ವೈದಿಕ ಮೂಲದ್ದಾಗಿರಲಿಲ್ಲ. ಅಂದರೆ ವಾಸುದೇವ ಎಂಬ ಶಬ್ದವಾಗಲೀ ಅದರ ಮೂಲವಾಗ

---

[1] ಅತ್ರ ಕೃಷ್ಣೋ ಹರಶ್ಚೈವ ಕಸ್ಮಿಂಶ್ಚಿತ್ ಕಾರಣಾಂತರೇ ॥೧೮॥

ಬಹುದಾದ ವಸುದೇವ ಎಂಬ ಶಬ್ದವಾಗಲೀ ವೇದಗಳಲ್ಲಿ ಮತ್ತು ವೈದಿಕ ಸಾಹಿತ್ಯದಲ್ಲಿ ಇರಲಿಲ್ಲ. ಅಲ್ಲದೇ ಸೂರ್ಯನ ಆರಾಧನೆಯು ಕೂಡ ಮೂಲದಲ್ಲಿ ಭಾರತೀಯವಾಗಿರಲಿಲ್ಲ. ಅದು ಭಾರತ ವರ್ಷದಲ್ಲಿ ನೆಲಸಿದ್ದ ಯವನರಿಂದ ಪ್ರಚಲಿತವಾಗಿತ್ತು. ಹಾಗಾಗಿ ಭಾಗವತಧರ್ಮವನ್ನು ಭಾರತೀಯ-ವೇದಮೂಲದ ಧರ್ಮವನ್ನಾಗಿ ಪರಿವರ್ತಿಸಲು ನಿರ್ಧರಿಸಿದ ಯಾವನೋ ಮಹಾಮೇಧಾವಿಯಾದ ಹಾಗೂ ವೇದವೇದಾಂಗಪಾರಂಗತನಾದ ವಿದ್ವಾಂಸಕವಿಯು ಯವನರ ವಾಸುದೇವನಿಗೆ "ದೇವಕೀ ಕೃಷ್ಣ'' ಎಂಬ ವೈದಿಕ ಹೆಸರನ್ನು ಕೊಟ್ಟನಲ್ಲದೇ, ಭಾಗವತಧರ್ಮವನ್ನು ಸರ್ವಜನಪ್ರಿಯವಾಗುವಂತೆ ಮಾಡಲು ಸಕಲ ವೈದಿಕ ಕಥೆಗಳನ್ನೂ, ಇತರ ಗ್ರಂಥಗಳೊಳಗಿನ ಬೇರೆ ಬೇರೆ ವಿಷಯಗಳನ್ನೂ ಸಂಗ್ರಹಿಸಿ, ಅವುಗಳನ್ನು ಒಂದೇ ಮಾಲೆಯಲ್ಲಿ ಪೋಣಿಸಲಾಗುವಂತೆ ''ಕೌರವ-ಪಾಂಡವರ ಯುದ್ಧದ ಕಥೆ'' ಎಂಬ ದಾರವನ್ನು ನಿರ್ಮಿಸಿದನು. ಮತ್ತು ಭಾಗವತ ಧರ್ಮಕ್ಕೆ ದೃಢವಾದ ವೈದಿಕ ಅಡಿಗಟ್ಟನ್ನು ನಿರ್ಮಿಸಿ ಅದನ್ನು ಸಂಪೂರ್ಣ ಭಾರತೀಯ ಧರ್ಮವನ್ನಾಗಿ ಪರಿವರ್ತಿಸಿದನೆಂಬುದರಲ್ಲಿ ಸಂದೇಹವಿಲ್ಲ.

ಅಂದರೆ ಮಹಾಭಾರತ ಕಾವ್ಯವು ವೈದಿಕ ಕಥೆಗಳ, ಮತ್ತು ಶಕಪೂರ್ವ ಐದನೆಯ ಶತಮಾನದ ಈಚೆ ಕಡೆಯಲ್ಲಿ ಪ್ರಚಲಿತವಾದ ಸಕಲ ಜಾನಪದ ಕಥೆಗಳ ಹಾಗೂ ಬೇರೆ ಹಲವು ವಿಷಯಗಳ ಸಂಗ್ರಹ ಅಥವಾ ಭಾಂಡಾಗಾರವಾಗಿದೆ. ಆದರೊಳಗಿನ ಅಧಿಕಾಂಶ ಕಥೆಗಳ ಮೂಲ ಹಾಗೂ ಸಂಕ್ಷಿಪ್ತರೂಪಗಳು ವೈದಿಕ ಬ್ರಾಹ್ಮಣಗಳಲ್ಲಿ ಮತ್ತು ತರುವಾಯದ ವೈದಿಕ ಗ್ರಂಥಗಳಲ್ಲಿವೆ. ಕೆಲವು ಕಥೆಗಳ ಮೂಲವು ವೇದಗಳಲ್ಲಿದೆ. ಸಾಧಾರಣ ನಾಲ್ವತ್ತು ಕಥೆಗಳ ಸಂಕ್ಷಿಪ್ತರೂಪಗಳು ಶಕಪೂರ್ವ ಮೂರನೆಯ ಶತಮಾನದಲ್ಲಿ ರಚಿಸಲ್ಪಟ್ಟ ಬೃಹದ್ದೇವತಾ ಎಂಬ ಗ್ರಂಥದಲ್ಲಿವೆ. ಹಾಗೆಯೇ ಮಹಾಭಾರತ ಕಾವ್ಯದೊಳಗಿನ ಕಥೆಗಳಲ್ಲಿ ಬರುವ ಅಧಿಕಾಂಶ ದೇವತೆಗಳು, ಅಸುರರು, ಋಷಿಗಳು ಮತ್ತು ಪ್ರಧಾನ ನಾಯಕರು ವೇದಗಳಲ್ಲಿ, ಬ್ರಾಹ್ಮಣಗಳಲ್ಲಿ ಮತ್ತು ವೈದಿಕ ಸಾಹಿತ್ಯದಲ್ಲಿ ಇರುವವರೇ ಆಗಿದ್ದಾರೆ. ಆದರೆ ಮಹಾಭಾರತದೊಳಗಿನ ಅಷ್ಟೆಲ್ಲ ಅಂಶಗಳು ವೈದಿಕ ಸಾಹಿತ್ಯದಲ್ಲಿ ಇದ್ದರೂ ವಸುದೇವ, ವಾಸುದೇವ, ಪಾಂಡು, ಪಾಂಡವ, ಭೀಷ್ಮ, ಕೃಷ್ಣದ್ವೈಪಾಯನ ವೇದವ್ಯಾಸ ಮುಂತಾದ ಹೆಸರುಗಳಾಗಲಿ, ಕೌರವ-ಪಾಂಡವರ ಯುದ್ಧದ ಉಲ್ಲೇಖಗಳಾಗಲಿ ವೈದಿಕ ಸಾಹಿತ್ಯದಲ್ಲಿ ಇಲ್ಲ.

ಹಿಂದೆ ಹೆಸರಿಸಿದ ವಿದ್ವಾಂಸರು ವಾದಿಸಿರುವಂತೆ ಮಹಾಭಾರತದ ಯುದ್ಧವು ಶಕಪೂರ್ವ ಒಂದು ಸಾವಿರ ವರ್ಷಗಳ ಸುಮಾರಿಗೆ ಅಲ್ಲದಿದ್ದರೆ ನಂದ ಮಹಾಪದ್ಮನ ಪಟ್ಟಾಭಿಷೇಕದ ಒಂದು ಸಾವಿರ ವರ್ಷಗಳ ಮೊದಲು ಅಲ್ಲದಿದ್ದರೆ ಮಹಾಭಾರತದಲ್ಲಿಯೇ ಹೇಳಿರುವಂತೆ ಕಲಿ ಮತ್ತು ದ್ವಾಪರ ಯುಗಗಳ ಸಂಧಿಕಾಲದಲ್ಲಿ ನಡೆದಿದ್ದಿತಾದರೆ ಆ ಯುದ್ಧದ ಉಲ್ಲೇಖವು ವೈದಿಕ ಸಾಹಿತ್ಯದಲ್ಲಿ ಇರುತಿದ್ದಿತು.

ವೈದಿಕ ಸಾಹಿತ್ಯದಲ್ಲಿ ಅದರ ಉಲ್ಲೇಖವು ಇಲ್ಲದಿರುವುದರಿಂದ ಶಕೋತ್ತರ ಕಾಲದ ಯಾವನೋ ಕವಿಯು ಕೃಷ್ಣದ್ವೈಪಾಯನ ವೇದವ್ಯಾಸ ಎಂಬ ಕಲ್ಪಿತ ಹೆಸರಿನಲ್ಲಿ ಭಾಗವತ ಧರ್ಮದ ಪ್ರಚಾರ ಮಾಡುವ ಸಲುವಾಗಿ ವೈದಿಕ ಗ್ರಂಥಗಳೊಳಗಿನ ಕಥೆಗಳನ್ನೂ, ಅವನ ಕಾಲದಲ್ಲಿ ಪ್ರಚಲಿತವಿದ್ದ ಜಾನಪದ ಕಥೆಗಳನ್ನೂ ಸಂಗ್ರಹಿಸಿದ ತರುವಾಯ ಅವುಗಳನ್ನು ತನಗೆ ಬೇಕಾದಂತೆ ಪರಿವರ್ತಿಸಿ ಮತ್ತು ಹಲವು ಹೊಸ ಪಾತ್ರಗಳನ್ನೂ ಕೌರವ-ಪಾಂಡವರ ಯುದ್ಧದ ಕಥೆಯನ್ನೂ ನಿರ್ಮಿಸಿ ಜನಪ್ರಿಯವಾಗುವಂಥ ಮಹಾಭಾರತ ಕಾವ್ಯವನ್ನು ರಚಿಸಿದ್ದನೆಂದು ಸಂದೇಹವಿಲ್ಲದೇ ಹೇಳಬಹುದು.

ಅವನು ನಿರ್ಮಿಸಿದ ಹೊಸ ಪಾತ್ರಗಳ ಸಂಬಂಧದಲ್ಲಿ ಮತ್ತು ಕಥೆಗಳ ಸಂಬಂಧದಲ್ಲಿ ಮುಂದಿನಂತೆ ವಿವರಿಸಬಹುದು. ಆ ವಿವರಗಳಿಂದ ಮಹಾಭಾರತದ ರಚನಾ ಕಾಲದ ಮೇಲೂ ಕವಿಯ ವಿದ್ವತ್ತಿನ ಮೇಲೂ ಸರಿಯಾದ ಬೆಳಕು ಬೀಳುವುದು. ಋಗ್ವೇದದಲ್ಲಿ ಭೃಗು, ಅಂಗಿರಸ, ಜಮದಗ್ನಿ, ವಿಶ್ವಾಮಿತ್ರ, ವಸಿಷ್ಠ, ಅತ್ರಿ, ಭರದ್ವಾಜ, ಕಣ್ವ, ಗೋತಮ ಮೊದಲಾದ ಹಲವು ಋಷಿಗಳ ಹೆಸರುಗಳಿವೆಯಾದರೂ ಅವರಲ್ಲಿ ಹೆಚ್ಚಿನವರ ಮಾತಾ-ಪಿತೃಗಳ ಮತ್ತು ಪತ್ನೀಪುತ್ರರ ಹೆಸರುಗಳಿಲ್ಲ. ಕಾರಣವೇನೆಂದರೆ ಆ ಋಷಿಗಳು ಅವರ ಹೆಸರುಗಳಿರುವ ಮಂತ್ರಗಳಿಗಿಂತ ಪ್ರಾಚೀನರಾಗಿದ್ದಾರೆ. ಅವರ ಹೆಸರುಗಳಿರುವ ಮಂತ್ರಗಳು ಅವರ ಸ್ವಂತದ ರಚನೆಗಳಾಗಿವೆಯಾದರೂ ಅವರು ಆ ಮಂತ್ರಗಳಲ್ಲಿ ತಮ್ಮ ಪರಿವಾರಿಕ ಪರಿಚಯವನ್ನು ಹೇಳಿಲ್ಲ. ಹಾಗಿದ್ದರೂ ಮಹಾಭಾರತದಲ್ಲಿ–ಋಗ್ವೇದದೊಳಗಿನ ಹಲವು ಋಷಿಗಳ ಮಾತಾ–ಪಿತೃಗಳ ಮತ್ತು ಪತ್ನೀಪುತ್ರರ ಹೆಸರುಗಳಿವೆ. ಉದಾಹರಣೆಗೆ-ಋಗ್ವೇದದ ಮಂತ್ರಗಳಲ್ಲಿ ಜಮದಗ್ನಿಯ ಹೆಸರು ಬಂದಿದ್ದರೂ ಅವನ ಮಾತಾಪಿತೃಗಳ ಮತ್ತು ಪತ್ನಿ-ಪುತ್ರರ ಹೆಸರುಗಳು ಬಂದಿಲ್ಲ; ಹಾಗೆಯೇ ಜಮದಗ್ನಿಯ ಹೆಸರು ಯಜುರ್ವೇದದ ತೈತ್ತಿರೀಯ ಸಂಹಿತೆಯಲ್ಲಿ, ತೈತ್ತಿರೀಯ ಆರಣ್ಯಕದಲ್ಲಿ, ಅಥರ್ವವೇದದಲ್ಲಿ, ಪಂಚವಿಂಶ ಬ್ರಾಹ್ಮಣದಲ್ಲಿ, ಐತರೇಯ ಬ್ರಾಹ್ಮಣದಲ್ಲಿ ಮತ್ತು ಬೇರೆ ಹಲವು ವೈದಿಕ ಗ್ರಂಥಗಳಲ್ಲಿ ಬಂದಿದ್ದರೂ ಅವುಗಳಲ್ಲೊಂದರಲ್ಲಾದರೂ ಜಮದಗ್ನಿಯ ಮಾತಾಪಿತೃಗಳ ಮತ್ತು ಪತ್ನೀ ಪುತ್ರರ ಉಲ್ಲೇಖಗಳಿಲ್ಲ; ಮಹಾಭಾರತದಲ್ಲಾದರೋ ಋಚೀಕ ಎಂಬವನು ಜಮದಗ್ನಿಯ ಪಿತನಾಗಿದ್ದು ಸತ್ಯವತಿಯು ಮಾತೆಯಾಗಿದ್ದಾಳೆ. ಮತ್ತು ರೇಣುಕೆಯು ಜಮದಗ್ನಿಯ ಪತ್ನಿಯಾಗಿದ್ದು ಪರಶುರಾಮನು ಪುತ್ರನಾಗಿದ್ದಾನೆ.

ಆ ಪ್ರಕಾರವಾಗಿ ಋಗ್ವೇದದೊಳಗಿನ ಹಲವು ಋಷಿಗಳು, ದೇವತೆಗಳು ಮತ್ತು ಅಸುರರು ತರುವಾಯದ ಬ್ರಾಹ್ಮಣಗಳಲ್ಲಿ, ಮತ್ತು ನಿರುಕ್ತ, ಬೃಹದ್ದೇವತಾ ಮೊದಲಾದ ಗ್ರಂಥಗಳಲ್ಲಿ ಮಾತಾ–ಪಿತೃಗಳನ್ನೂ, ಪತ್ನೀ–ಪುತ್ರರನ್ನೂ ಪಡೆದು

ಮುಂದೆ ಮಹಾಭಾರತ ಕಾವ್ಯದಲ್ಲಿ ಅವರು ದೊಡ್ಡ ದೊಡ್ಡ ಪರಿವಾರವುಳ್ಳವರಾಗಿ ಬಗೆ ಬಗೆಯ ಕಥೆಗಳಿಗೆ ಕಾರಣರಾಗಿದ್ದಾರೆ ಎಂಬುದರ ಮೇಲಿಂದ ಮಹಾಭಾರತ ಕಾವ್ಯದ ರಚನಾ ಕಾಲದಲ್ಲಿ ಆ ಋಷಿಗಳ, ದೇವತೆಗಳ ಮತ್ತು ಅಸುರರ ಸಂಬಂಧ ದಲ್ಲಿ ಅಂಥ ಕಲ್ಪಿತ ಕಥೆಗಳು ಪ್ರಚಲಿತವಿದ್ದುವೆಂದು ಇಲ್ಲವೇ ಮಹಾಭಾರತಕಾರನು ಆ ಕಥೆಗಳನ್ನು ಸ್ವತಂತ್ರವಾಗಿ ನಿರ್ಮಿಸಿದ್ದನೆಂದು ಹೇಳಬೇಕಾಗುತ್ತದೆ. ಏಕೆಂದರೆ ವೈದಿಕ ಸಾಹಿತ್ಯದಲ್ಲಿ ಮುಖ್ಯವಾಗಿ-ಋಗ್ವೇದದಲ್ಲಿ ಅಂಥ ಕಥೆಗಳಿಗೆ ಯಾವ ಬಗೆಯ ಪ್ರಮಾಣವೂ ದೊರೆಯುವುದಿಲ್ಲ.

ಇನ್ನೊಂದು ಉದಾಹರಣೆ ಎಂದರೆ- ವಿಶ್ವಾಮಿತ್ರನು ಋಗ್ವೇದದೊಳಗಿನ ಋಷಿಯಾಗಿದ್ದಾನೆ. ಮತ್ತು ಅನೇಕ ಸೂಕ್ತಗಳ ಕರ್ತನಾಗಿದ್ದಾನೆ. ಅವನು ಋಗ್ವೇದದ ೩-೩೩-೫ನೆಯ ಋಚೆಯಲ್ಲಿ ತನ್ನನ್ನು **"ಕುಶಿಕಸ್ಯಸೂನುಃ"** ಅಂದರೆ "ಕುಶಿಕನ ಪುತ್ರ" ಎಂದು ಸ್ಪಷ್ಟವಾಗಿ ಹೇಳಿದ್ದಾನೆ. ಆದರೆ ಋಗ್ವೇದದಲ್ಲಿ ಕುಶಿಕ ನಿಗೆ ಸಂಬಂಧಪಟ್ಟ ಬೇರೆ ಯಾವ ವಿವರವೂ ದೊರೆಯುವುದಿಲ್ಲ. ಋಗ್ವೇದದ ಕೆಲವು ಮಂತ್ರಗಳಲ್ಲಿ ಕುಶಿಕನ ವಂಶಜರನ್ನು ''ಕುಶಿಕಾಸಃ" ಅಂದರೆ ''ಕುಶಿಕರು" ಎಂದಿದೆ. ಕುಶಿಕರು ಇಂದ್ರನ ಉಪಾಸಕರಾಗಿದ್ದುದರಿಂದ ಋಗ್ವೇದದ ೧-೧೦-೧೧ ನೆಯ ಋಚೆಯಲ್ಲಿ ಅವರು ಇಂದ್ರನನ್ನು ''ಕೌಶಿಕ" ಎಂದು ಸಂಬೋಧಿಸಿದ್ದಾರೆ.

ಆದರೆ ಐತರೇಯ ಬ್ರಾಹ್ಮಣದ ೮-೧೩ರಲ್ಲಿ ಬಂದಿರುವ ರಾಜಾ ಹರಿಶ್ಚಂದ್ರನ ಮತ್ತು ಶುನಃಶೇಪನ ಆಖ್ಯಾನದಲ್ಲಿ ಶುನಃಶೇಪನು ವಿಶ್ವಾಮಿತ್ರನನ್ನು ''ರಾಜಪುತ್ರ'' ಎಂದು ಸಂಬೋಧಿಸಿದ ಉಲ್ಲೇಖವಿದೆ. ಹಾಗೆಯೇ ಶಕಪೂರ್ವ ಏಳನೆಯ ಶತಮಾನದ್ದೆನ್ನಬಹುದಾದ ನಿರುಕ್ತದ ಎರಡನೆಯ ಅಧ್ಯಾಯದಲ್ಲಿ ಯಾಸ್ಕನು ಋಗ್ವೇದದೊಳಗಿನ ''ಕುಶಿಕಸ್ಯಸೂನುಃ'' ಎಂಬುದರ ವ್ಯಾಖ್ಯೆಯಲ್ಲಿ ''ಕುಶಿಕೋ ರಾಜಾ ಬಭೂವ'' ಅಂದರೆ ''ಕುಶಿಕನು ರಾಜನಾಗಿದ್ದನು'' ಅಂದಿದ್ದಾನೆ. ಯಾಸ್ಕನು ಐತರೇಯ ಬ್ರಾಹ್ಮಣದೊಳಗಿನ ''ರಾಜಪುತ್ರ" ಎಂಬುದರ ಆಧಾರದಿಂದ ಕುಶಿಕನನ್ನು ರಾಜನೆಂದನೋ ಇಲ್ಲವೇ ನಿರುಕ್ತದೊಳಗಿನ ''ಕುಶಿಕನು ರಾಜ ನಾಗಿದ್ದನು" ಎಂಬುದನ್ನು ಓದಿದ ತರುವಾಯದ ಕಾಲದವನು ಐತರೇಯ ಬ್ರಾಹ್ಮಣದಲ್ಲಿ "ರಾಜಪುತ್ರ" ಎಂಬ ಪ್ರಕ್ಷೇಪವನ್ನು ಮಾಡಿದನೋ ಎಂದು ಹೇಳುವುದು ಬಹಳ ಕಠಿನವಾಗಿದೆ.

ಹಾಗಿದ್ದರೂ ಮಹಾಭಾರತಕಾರನು ಪಂಚವಿಂಶ ಬ್ರಾಹ್ಮಣದ ೨೧-೧೨-೨ ರಲ್ಲಿ ''ವಿಶ್ವಾಮಿತ್ರೋ ಜಾಹ್ನವೋ ರಾಜಾ" ಅಂದರೆ "ವಿಶ್ವಾಮಿತ್ತನು ಜಹ್ನುಗಳ ರಾಜ" ಎಂದು ಹೇಳಿದುದರ ಆಧಾರದಿಂದ ಮತ್ತು ಋಗ್ವೇದದ ಮಂತ್ರಸೂಕ್ತಗಳಿಗೆ ಋಷಿಗಳನ್ನು ನಿರ್ಧರಿಸಿದ ಆಚಾರ್ಯರು ಮೂರನೆಯ ಮಂಡಲದೊಳಗಿನ ಅಧಿಕಾಂಶ ಸೂಕ್ತಗಳಿಗೆ ''ಗಾಥಿನೋ ವಿಶ್ವಾಮಿತ್ರ ಋಷಿ:" ಎಂತಲೂ ಕೆಲವು ಸೂಕ್ತಗಳಿಗೆ

"ಗಾಥೀ ಕೌಶಿಕ ಋಷಿಃ" ಎಂತಲೂ ಹೇಳಿರುವುದರ ಆಧಾರದಿಂದ ಮಹಾಭಾರತದ ಆನುಶಾಸನಿಕ ಪರ್ವದ ನಾಲ್ಕನೆಯ ಅಧ್ಯಾಯದಲ್ಲಿ ವಿಶ್ವಾಮಿತ್ರನನ್ನು ಜಹ್ನುವಂಶದವನೆಂದೂ ಕುಶಿಕನ ಪುತ್ರನಾದ ಗಾಧಿರಾಜನ ಪುತ್ರನೆಂತಲೂ ಹೇಳಿದ್ದಾನೆ. ಅಂದರೆ ಋಗ್ವೇದದಲ್ಲಿ ಕುಶಿಕನ ಪುತ್ರನಾಗಿದ್ದ ವಿಶ್ವಾಮಿತ್ರನು ಮಹಾಭಾರತದಲ್ಲಿ ಕುಶಿಕನಪೌತ್ರನಾಗಿ ಮಾರ್ಪಟ್ಟಿದ್ದಾನೆ. ಮತ್ತು ಜಮದಗ್ನಿಯ ಮಾತೆಯಾದ ಸತ್ಯವತಿಯು ವಿಶ್ವಾಮಿತ್ರನ ಸೋದರಿಯಾಗಿದ್ದಾಳೆ.

ವೈದಿಕ ಸಾಹಿತ್ಯದಲ್ಲಿ ಗಾಥಿನ್ (=ಗಾಥೀ) ಎಂಬ ಶಬ್ದವು "ಯಜ್ಞಕಾಲದಲ್ಲಿ ಗಾಥೆಗಳನ್ನು ಹಾಡುವವನು" ಎಂಬರ್ಥದ ವೃತ್ತಿವಾಚಕ ನಾಮವಾಗಿರುವುದರಿಂದ ಅದು ಯಾವನೊಬ್ಬನ ಅಂಕಿತನಾಮವಾಗಲು ಸಾಧ್ಯವಿಲ್ಲ. ಹಾಗಿದ್ದರೂ ಮಹಾಭಾರತಕಾರನು ಗಾಥೀ ಇದ್ದುದನ್ನು ಗಾಧೀ ಎಂದು ಮಾರ್ಪಡಿಸಿ ಕುಶಿಕನ ಪುತ್ರನ ಅಂಕಿತನಾಮವನ್ನಾಗಿ ಮಾಡಿದ್ದಾನೆ. ಅಲ್ಲದೇ ಮಹಾಭಾರತದೊಳಗಿನ ಆ ಕಲ್ಪನೆಯು ಋಗ್ವೇದದೊಳಗಿನ ಹೇಳಿಕೆಗೆ ಸಂಪೂರ್ಣ ವಿರುದ್ಧವಾಗಿದೆ ಮತ್ತು ಪ್ರಮಾಣ ರಹಿತವೂ ಆಗಿದೆ. ಮಹಾಭಾರತದಲ್ಲಿ ಅಂಥ ಅನರ್ಥಗಳು ಹೇರಳವಾಗಿವೆ. ಅದಕ್ಕೆ ಇನ್ನೊಂದು ಉದಾಹರಣೆಯೆಂದರೆ—

ಋಗ್ವೇದದ ೧–೧೭೯-೮ನೆಯ ಋಚೆಯಲ್ಲಿ ಅಗಸ್ತ್ಯನು ತನ್ನನ್ನು "ಮಾನಸ್ಯಸೂನುಃ" ಅಂದರೆ "ಮಾನನ ಪುತ್ರ" ಎಂದು ಸ್ಪಷ್ಟವಾಗಿ ಹೇಳಿದ್ದಾನೆ. ಹಾಗೆ ಅಗಸ್ತ್ಯನು ಮಾನನ ಪುತ್ರನಾಗಿದ್ದುದರಿಂದ ಋಗ್ವೇದದ ಕೆಲವು ಮಂತ್ರಗಳಲ್ಲಿ ಅವನನ್ನು "ಮಾನ್ಯ" ಎಂದು ಕರೆದಿದೆ. ಮತ್ತು ಋಗ್ವೇದದಲ್ಲಿ "ವಸಿಷ್ಠ" ಎಂಬ ಶಬ್ದವು "ವಸುಗಳಲ್ಲಿ ಅಂದರೆ ಪ್ರಕಾಶಗಳಲ್ಲಿ ಶ್ರೇಷ್ಠನಾದವನು" ಎಂಬರ್ಥದಲ್ಲಿ ಆಕಾಶದಲ್ಲಿನ ವಿದ್ಯುತ್ತಿನಿಂದ ಸಿಡಿದ ಸಿಡಿಲಿನ ಹೆಸರಾಗಿಯೂ, ಆ ಸಿಡಿಲಿನಿಂದ ಹುಟ್ಟಿದ ಅಗ್ನಿಯ ಹೆಸರಾಗಿಯೂ, ೭ನೆಯ ಮಂಡಲದ ೩೩ನೆಯ ಸೂಕ್ತದಲ್ಲಿ ಪ್ರಯುಕ್ತವಾಗಿದೆ. ಹಾಗೆಯೇ ವಸಿಷ್ಠ ಎಂಬುದು ಒಬ್ಬ ಋಷಿಯ ಹೆಸರು ಕೂಡ ಆಗಿದೆ. ಆ ರಹಸ್ಯವನ್ನು ಅರಿತು ಕೊಳ್ಳಲಾಗದ ವೇದ ಭಾಷ್ಯಕಾರರು-ಅಗ್ನಿಯ ಹುಟ್ಟಿಗೆ ಸಂಬಂಧಪಟ್ಟ ಋಗ್ವೇದ ಮಂತ್ರಗಳನ್ನು ವಸಿಷ್ಠ ಋಷಿಗೆ ಸಂಬಂಧ ಪಟ್ಟವುಗಳೆಂದು ಭಾವಿಸಿ ವಸಿಷ್ಠ ಋಷಿಯ ಕುರಿತು ಒಂದು ವಿಚಿತ್ರ ಕಥೆಯನ್ನು ಕಟ್ಟಿದ್ದಾರೆ. ಋಗ್ವೇದದಲ್ಲಿ ಅಗ್ನಿಯು "ಋಷಿ" ಕೂಡ ಆಗಿದ್ದಾನೆಂಬುದನ್ನು ಅವರು ಕಡೆಗಣಿಸಿದ್ದಾರೆ.

ಹಿಂದೆ ಹೇಳಿದ ೩೩ನೆಯ ಸೂಕ್ತದ ೧೦ನೆಯ ಋಚೆಯಲ್ಲಿ" ಮಿತ್ರ ಮತ್ತು ವರುಣ" ಎಂಬವರು ನೋಡುತ್ತಿದ್ದಾಗ ವಸಿಷ್ಠನು ವಿದ್ಯುತ್ತಿನಿಂದ ಸಿಡಿಯುತ್ತಿದ್ದ ಸಿಡಿಲಾಗಿದ್ದನೆಂದೂ, ಅಗಸ್ತ್ಯನು (ಸಿಡಿಲೆರಗಿದ ಸ್ಥಳಕ್ಕೆ ಹೋಗಿ ಅಲ್ಲಿ ಮರಗಳನ್ನು ಸುಟ್ಟು ಅಗ್ನಿಯಾಗಿ ಮಾರ್ಪಟ್ಟಿದ್ದ) ವಸಿಷ್ಠನನ್ನು ಅಲ್ಲಿಂದ ತರುವಾಗ ವಸಿಷ್ಠನ

(=ಅಗ್ನಿಯ) ಒಂದು ಜನ್ಮವಾಗಿತ್ತೆಂದೂ ಹೇಳಿದೆ. ಮಿತ್ರ ಮತ್ತು ವರುಣರು ವಸಿಷ್ಠನ ಜನನವನ್ನು ಕಂಡವರಾದುದರಿಂದ ವಸಿಷ್ಠನಿಗೆ "ಮೈತ್ರಾವರುಣ" ಎಂಬ ಹೆಸರು ಬಂದಿತ್ತು. ಆದುದರಿಂದಲೇ ಹಿಂದೆ ಹೇಳಿದ ಸೂಕ್ತದ ೧೧ನೆಯ ಋಚೆಯಲ್ಲಿ ವಸಿಷ್ಠನನ್ನು ಮೈತ್ರಾವರುಣನೆಂದು ಕರೆದಿದೆಯಲ್ಲದೇ, ಅವನನ್ನು ಉರ್ವಶಿಯ ಮನಸ್ಸಿನೊಳಗಿಂವ ಹುಟ್ಟಿದವನೆಂದೂ, ದಿವ್ಯಬ್ರಹ್ಮದಿಂದ ಅಂದರೆ ಆಕಾಶವಲ್ಲಿನ ಅಗ್ನಿಯಿಂದ ಸಿಡಿದ ಕಿಡಿಯನ್ನು ವಿಶ್ವೇದೇವತೆಗಳು ಪುಷ್ಕರದಲ್ಲಿ ಇರಿಸಿದರೆಂದೂ ಹೇಳಿದೆ.

ಬ್ರಾಹ್ಮಣಗಳಲ್ಲಿ ಉರ್ವಶಿಯನ್ನು ಅಪ್ಸರೆ (=ಅಪ್ಸರಾ) ಎಂದು ಹೇಳಿದೆ. ಮತ್ತು ನಿರುಕ್ತಕಾರನಾದ ಯಾಸ್ಕನಿಗಿಂತ ಪ್ರಾಚೀನನಾದ ಆಚಾರ್ಯ ಶಾಕಪೂಣಿಯು "ಉರ್ವಶೀ" ಎಂಬುದರ ಅರ್ಥವು "ವಿಶಾಲವಾಗಿ ವ್ಯಾಪಿಸುವವಳು "ಎಂತಲೂ "ಅಪ್ಸರಾ" ಎಂಬುದರ ಅರ್ಥವು "ದಿವ್ಯ ಜಲಗಳಲ್ಲಿ ಸರಿದಾಡುವವಳು" ಎಂತಲೂ ಇರುವುದರಿಂದ ಆ ಅರ್ಥಗಳು ‹ವಿದ್ಯುತ್ತನ್ನು' ಸೂಚಿಸುತ್ತವೆಂದು ಹೇಳಿದ್ದಾನೆ. ಯಾಸ್ಕನು ಶಾಕಪೂಣಿಯ ಮತವನ್ನು ಒಪ್ಪಿದ್ದಾನಾದರೂ-ಉರ್ವಶಿಯು ವಿದ್ಯುತ್ತೂ ಆಗಿದ್ದಾಳೆ ಸ್ತ್ರೀಯೂ ಆಗಿದ್ದಾಳೆ ಎಂದಿದ್ದಾನೆ. ಹಾಗಾಗಿ ತರುವಾಯದ ಆಚಾರ್ಯರು ಉರ್ವಶೀ ಅಂದರೆ ದೇವಲೋಕಸ್ತ್ರೀ ಎಂಬ ಅರ್ಥವನ್ನು ಮಾತ್ರ ಗ್ರಹಿಸಿ-ಮಿತ್ರ ಮತ್ತು ವರುಣರು ಉರ್ವಶಿಯನ್ನು ಕಂಡೊಡನೆ ಅವರ ರೇತಸ್ಸು ಸ್ಕನ್ನವಾಗಿ ಉರ್ವಶಿಯಿಂದ ವಸಿಷ್ಠ ಋಷಿಯು ಹುಟ್ಟಿದನೆಂದು ಹೇಳಿದ್ದಾರೆ. ಮತ್ತು ಆ ಸೂಕ್ತದೊಳಗಿನ ೧೩ನೆಯ ಋಚೆಯ ಅರ್ಥವನ್ನು ಮುಂದಿನಂತೆ ಹೇಳಿದ್ದಾರೆ-"ಯಜ್ಞದೀಕ್ಷಿತರಾದ ಮಿತ್ರಾ ವರುಣರು ಸ್ಥಾಪಿಸಿದ ವಸತೀವರೀಜಲದ ಕಲಶದಲ್ಲಿ ತಮ್ಮ ರೇತಸ್ಸನ್ನು ಸಮಾನವಾಗಿ ಸೇಚನಮಾಡಿದಾಗ ಆ ಕಲಶದ ಮಧ್ಯದಿಂದ (ಮಾನನ ಅಥವಾ) ಅಗಸ್ತ್ಯನ ಉತ್ಪತ್ತಿಯೂ ತರುವಾಯ ಅದೇ ಕಲಶದಿಂದ ವಸಿಷ್ಠ ಋಷಿಯ ಉತ್ಪತ್ತಿಯೂ ಆಯಿತೆಂದು ಹೇಳಿದ್ದಾರೆ. ಅಂದರೆ ಆ ಋಚೆಯಲ್ಲಿ ಬಂದಿರುವ "ಮಾನ" ಶಬ್ದಕ್ಕೆ ಅವರು "ಅಗಸ್ತ್ಯ" ಎಂಬ ಅರ್ಥವನ್ನು ಕಟ್ಟಿದ್ದಾರೆ.

ಆದರೆ ಅವರು ಆ ಅರ್ಥವನ್ನು ಹೇಳುವಾಗ ೧೦ನೆಯ ಋಚೆಯಲ್ಲಿ ‹ಮಿತ್ರ ಮತ್ತು ವರುಣರು ವಸಿಷ್ಠನನ್ನು-ವಿದ್ಯುತ್ತಿನಿಂದ ಸಿಡಿಯುತಿದ್ದ ಸಿಡಿಲಿನ ರೂಪದಲ್ಲಿ ಕಂಡಿದ್ದರೆಂದು ಮತ್ತು ಅಗಸ್ತ್ಯನು ವಸಿಷ್ಠನನ್ನು ಅವನಿದ್ದ ಸ್ಥಳದಿಂದ ತಂದಿದ್ದನೆಂದುದು ಹೇಳಿರುವುದನ್ನೂ ಋಗ್ವೇದ ೧-೧೮೯-೮ನೆಯ ಋಚೆಯಲ್ಲಿ ಅಗಸ್ತ್ಯನು ತನ್ನನ್ನು ಮಾನನ ಪುತ್ರನೆಂದು ಹೇಳಿರುವುದನ್ನೂ ಸಂಪೂರ್ಣವಾಗಿ ಕಡೆಗಣಿಸಿದ್ದಾರೆ. ಹಾಗಾಗಿ ಮಹಾಭಾರತದಲ್ಲಿ ವಸಿಷ್ಠನ ಹುಟ್ಟಿನ ಸಂಬಂಧದಲ್ಲಿ ವಿಚಿತ್ರವಾದ ಕಥೆಗಳು ಹೆಣೆಯಲ್ಪಟ್ಟಿವೆ.

ಋಗ್ವೇದದಲ್ಲಿ ಅಗ್ನಿಯು ಅಂದರೆ ಉರಿಯುತ್ತಿರುವ ಯಜ್ಞಾಗ್ನಿಯು ಇಂದ್ರ, ಮಿತ್ರ, ವರುಣ, ಬೃಹಸ್ಪತಿ, ಶಿವ, ರುದ್ರ ಮುಂತಾದ ಹಲವು ಹೆಸರುಗಳಿಂದ ಕರೆಯಲ್ಪಟ್ಟಿದ್ದಾನೆ. ಅಂದರೆ ಅವುಗಳು ಬೇರೆ ಬೇರೆ ದೇವರ ಹೆಸರುಗಳಲ್ಲ. ಹಾಗಿದ್ದರೂ ಕೆಲವು ಬ್ರಾಹ್ಮಣಗಳಲ್ಲಿ ಮತ್ತು ಮಹಾಭಾರತದಲ್ಲಿ ಅವುಗಳು ಬೇರೆ ಬೇರೆ ದೇವರ ಹೆಸರುಗಳಾಗಿವೆ. ಮತ್ತು ಅವರಲ್ಲಿ ಇಂದ್ರ, ಮಿತ್ರ ಮತ್ತು ವರುಣ ಎಂಬವರು ಕಶ್ಯಪ ಮತ್ತು ಅದಿತಿಯ ಪುತ್ರರಾಗಿದ್ದಾರೆ. ಅಂದರೆ ಋಗ್ವೇದದಲ್ಲಿ ಶರೀರಧಾರಿಗಳಲ್ಲದ ದೇವತೆಗಳು ಮತ್ತು ಅಸುರರು ಕೆಲವು ಬ್ರಾಹ್ಮಣಗಳ ಅರ್ವಾಚೀನ ಅಂಶಗಳಲ್ಲಿ ಮತ್ತು ಮಹಾಭಾರತದಲ್ಲಿ ಶರೀರಧಾರಿಗಳಾಗಿ ವರ್ಣಿಸಲ್ಪಟ್ಟಿದ್ದಾರೆ. ಮಹಾಭಾರತದಲ್ಲಾದರೋ ಅವರು ಅರ್ಜುನ ಮೊದಲಾದ ನಾಯಕರೊಡನೆ ಹಲವು ಬಗೆಗಳಿಂದ ವ್ಯವಹರಿಸುತ್ತಾರೆ. ವಿಚಿತ್ರವೆಂದರೆ ಋಗ್ವೇದದೊಳಗಿನ ದೇವತೆಗಳು ಮತ್ತು ಋಷಿಗಳು ಮಹಾ ಭಾರತದಲ್ಲಿ ಪಾಂಡವರ ಸಮಕಾಲಿಕರಾಗಿ ವ್ಯವಹರಿಸಿದ ವರ್ಣನೆಗಳಿದ್ದರೂ ಋಗ್ವೇದದಲ್ಲಾಗಲೀ ಇತರ ವೈದಿಕ ಸಾಹಿತ್ಯದಲ್ಲಾಗಲೀ ಪಾಂಡವರ ಮತ್ತು ಅವರ ಯುದ್ಧದ ವರ್ಣನೆಗಳು ಇಲ್ಲದಿರುವುದಾಗಿದೆ.

ಮಹಾಭಾರತ ಕಾವ್ಯವನ್ನು ರಚಿಸಿದ ಕವಿಯು ಸಾಮಾನ್ಯ ವಿದ್ವಾಂಸನಾಗಿರದೇ ಅಧಿಕಾಂಶ ವೈದಿಕ ಸಾಹಿತ್ಯವನ್ನು ವಿವರವಾಗಿ ಅಧ್ಯಯನ ಮಾಡಿದ ಮಹಾಮೇಧಾವಿಯೂ, ಭಾಗವತ ಶ್ರೇಷ್ಠನೂ ಆಗಿದ್ದಾನೆ. ಅವನ ಕಾಲದಲ್ಲಿ ಭಾಗವತ ಧರ್ಮವು ಅಂದರೆ ಯವನರಿಂದ ಪ್ರಚಲಿತವಾದ ವಾಸುದೇವನ ಆರಾಧನೆಯು ಜನಪ್ರಿಯವಾಗಿ ಪಶ್ಚಿಮ ಭಾರತದಿಂದ ಪೂರ್ವ ಭಾರತಕ್ಕೆ ಹರಡ ತೊಡಗಿದ್ದಿರಬಹುದು. ಆದರೆ ಭಾಗವತ ಧರ್ಮದೊಳಗಿನ ವಾಸುದೇವನು ವೈದಿಕ ದೇವನಾಗಿರಲಿಲ್ಲ. ಆದುದರಿಂದ ಮಹಾಭಾರತಕಾರನು ವಾಸುದೇವನನ್ನು ವೈದಿಕ ದೇವನನ್ನಾಗಿ ಮಾರ್ಪಡಿಸಲು ಋಗ್ವೇದದ ಹತ್ತನೆಯ ಮಂಡಲದೊಳಗಿನ ಪುರುಷಸೂಕ್ತಕ್ಕೆ ಅರ್ವಾಚೀನ ಆಚಾರ್ಯರು ಋಷಿ ಎಂದು ನಿರ್ಧರಿಸಿದ "ನಾರಾಯಣ" ಎಂಬ ಹೆಸರನ್ನೆತ್ತಿಕೊಂಡು ಆ ನಾರಾಯಣನನ್ನು ವಿಶ್ವಾತ್ಮನೆಂದು ಕರೆದು ತನ್ನ ಕಾವ್ಯದ ಆತ್ಮನನ್ನಾಗಿ ಮಾಡಿದ್ದಾನೆ. ಮತ್ತು ವಾಸುದೇವ ಎಂಬುದನ್ನು ಅವನ ಪೈತೃಕ ನಾಮವನ್ನಾಗಿ ಮಾಡಲಾಗುವಂತೆ, ಪಿತನ ನಾಮವು ಯಾವ ಗ್ರಂಥದಲ್ಲಿಯೂ ಉಲ್ಲೇಖಿಸಲ್ಪಟ್ಟಿರದ "ದೇವಕೀ ಪುತ್ರ ಕೃಷ್ಣ" ಎಂಬ ಹೆಸರನ್ನು ಛಾಂದೋಗ್ಯ ಉಪನಿಷತ್ತಿನಿಂದ ಆರಿಸಿಕೊಂಡಿದ್ದಾನೆ. ಮತ್ತು ವಾಸುದೇವ ಎಂಬುದನ್ನು ಆ ಕೃಷ್ಣನ ಪೈತೃಕ ನಾಮವೆಂದು ಸಾಧಿಸಲು "ವಸುದೇವ" ಎಂಬ ಶಬ್ದವನ್ನು ಸೃಷ್ಟಿಸಿದ್ದಾನೆ. ಮತ್ತು ಆ ವಸುದೇವನನ್ನು ಕೃಷ್ಣನ ಮಾತೆಯಾದ ದೇವಕಿಯ ಪತಿಯನ್ನಾಗಿ ಮಾಡಿದ್ದಾನೆ. ಹಾಗೂ ಕೃಷ್ಣನು ವಸುದೇವನ ಪುತ್ರನಾದುದರಿಂದ ಅವನಿಗೆ ವಾಸುದೇವ ಎಂಬ ಹೆಸರು ಬಂದಿತೆಂದು ಸಾಧಿಸಿದ್ದಾನೆ.

ಅರ್ಥಾತ್ ಯವನರಿಂದ ಪ್ರಚಲಿತವಾಗಿದ್ದ ಭಾಗವತ ಧರ್ಮದೊಳಗಿನ ವಾಸುದೇವ ನನ್ನು ಮಹಾಭಾರತದೊಳಗಿನ ಕೃಷ್ಣನನ್ನಾಗಿ ಮಾರ್ಪಡಿಸಿ ವಾಸುದೇವ ಎಂಬುದನ್ನು ಕೃಷ್ಣನ ಪೈತೃಕನಾಮವನ್ನಾಗಿ ಮಾಡಿದ್ದಾನೆ. ಆ ಪ್ರಕಾರವಾಗಿ ಮಹಾಭಾರತಕಾರನು ತಾನು ಪ್ರತಿಪಾದಿಸಲಿರುವ ನಾರಾಯಣೀಯ ಅಥವಾ ಮೂಲದಲ್ಲಿ ಭಾಗವತ ಎಂದು ಹೆಸರಾಗಿದ್ದ ಧರ್ಮಕ್ಕೊಂದು ವೈದಿಕ ಅಡಿಗಟ್ಟನ್ನು ಸಿದ್ಧಪಡಿಸಿ ಯವನ ರಿಂದ ಪ್ರಚಲಿತವಾಗಿದ್ದ ಭಾಗವತ ಧರ್ಮವನ್ನು ಸಂಪೂರ್ಣವಾಗಿ ಭಾರತೀಯ ವೈದಿಕ ಮೂಲದ ಧರ್ಮವನ್ನಾಗಿ ಮಾರ್ಪಡಿಸಿದ್ದಾನೆ. ಅದನ್ನು ಮುಂದೆ ಕೊಡಲಾಗುವ ವಿವರಗಳಿಂದ ಸರಿಯಾಗಿ ಅರಿತುಕೊಳ್ಳಬಹುದು.

ಮಹಾಭಾರತ ಕಾವ್ಯದ ಪ್ರಧಾನ ನಾಯಕರಿಬ್ಬರ ಹೆಸರುಗಳಾಗಿರುವ ಕೃಷ್ಣ ಮತ್ತು ಅರ್ಜುನ ಎಂಬ ಶಬ್ದಗಳು ಅಹರ್ ಶಬ್ದದ ವಿಶೇಷಣಗಳಾಗಿ ಮುಂದೆ ಕೊಡಲಾಗುವ ಋಗ್ವೇದದ ಮಂತ್ರದಲ್ಲಿ ಜೊತೆಯಾಗಿಯೇ ಬಂದಿವೆ–

ಅಹಶ್ಚ ಕೃಷ್ಣಮ್ ಅಹರ್ ಅರ್ಜುನಂ ಚ
ವಿವರ್ತೇತೇ ರಜಸೀ ವೇದ್ಯಾಭಿಃ ।
ವೈಶ್ವಾನರೋ ಜಾಯಮಾನೋ ನ ರಾಜಾ
ಅವಾತಿರಜ್ಜ್ಯೋತಿಷಾ ತಮಾಂಸಿ ॥ಋ. ೬–೯–೧॥

ಅರ್ಥ-ಕಪ್ಪು ದಿನ ಮತ್ತು ಬಿಳುಪು ದಿನ ಎಂದು ಸ್ಪಷ್ಟವಾಗಿ ತಿಳಿಯ ಲಾಗುವಂತೆ ಎರಡು ಮಂದ ಪ್ರಕಾಶಗಳು ಒಂದರ ತರುವಾಯ ಒಂದರಂತೆ (ಭೂಮಿಯನ್ನು) ಸುತ್ತಿ ಬರುತ್ತವೆ. ಅಂಥ ಸಮಯದಲ್ಲಿ ವೈಶ್ವಾನರನ್ನಾಗಿ ಹುಟ್ಟುವ ಯಜ್ಞಾಗ್ನಿಯು ರಾಜನಂತೆ ಅಂದರೆ ಚಂದ್ರನಂತೆ ತನ್ನ ಬೆಳಕಿನಿಂದ ಆ ಕತ್ತಲೆಗಳನ್ನು ಜಯಿಸುತ್ತಾನೆ.

ತರುವಾಯ ಕೃಷ್ಣ ಶಬ್ದವು ಋಗ್ವೇದದ ೮-೮೫-೩ನೆಯ ಋಚೆಯಲ್ಲಿ ಒಬ್ಬ ಮನುಷ್ಯನ ಹೆಸರಾಗಿ ಬಂದಿದೆ.[1] ಆದರೆ ಆ ಕೃಷ್ಣನು ಆಂಗಿರಸನಾಗಿದ್ದು ಋಗ್ವೇದದ ಹಲವು ಸೂಕ್ತಗಳ ಕರ್ತೃವಾಗಿದ್ದಾನೆ. ಆದುದರಿಂದ ಅವನು ಮಹಾ ಭಾರತದ ಕೃಷ್ಣನಾಗಲು ಸಾಧ್ಯವಿಲ್ಲ, ಏಕೆಂದರೆ ಮಹಾಭಾರತದೊಳಗಿನ ಕೃಷ್ಣನು ದೇವಕಿಯ ಪುತ್ರನಾಗಿದ್ದಾನೆ. ಮತ್ತು ದೇವಕೀ ಪುತ್ರ ಕೃಷ್ಣನು ಸಾಮವೇದದ ಒಂದು ಶಾಖೆಯ ಬ್ರಾಹ್ಮಣದೊಳಗಿನ ಛಾಂದೋಗ್ಯೋಪನಿಷತ್ತಿನ ಒಂದು ವಾಕ್ಯ ದಲ್ಲಿ ಮುಂದಿನಂತೆ ಉಲ್ಲೇಖಿಸಲ್ಪಟ್ಟಿದ್ದಾನೆ – **'ತದ್ಧೈತದ್ ಘೋರ ಆಂಗಿರಸಃ ಕೃಷ್ಣಾಯ ದೇವಕೀಪುತ್ರಾಯ–ಉಕ್ತ್ವೋವಾಚ ॥** ೩–೧೭–೬॥ ಅಂದರೆ-ಘೋರ ಆಂಗಿರಸನು ಅದನ್ನೇ ಅಂದರೆ ಆಯಜ್ಞದರ್ಶನವನ್ನೇ ದೇವಕಿಯ ಪುತ್ರನಾದ

---

[1] ಅಯಂ ವಾಂ ಕೃಷ್ಣೋಽಶ್ವಿನಾ ವಾಜಿನೀವಸೋ ಮಧ್ವಃಸೋಮಸ್ಯಪೀತಯೋ ।

ಕೃಷ್ಣನಿಗೆ ಉಪದೇಶಿಸಿ ಹೇಳಿದನು. ಮಹಾಭಾರತಕಾರನು ಛಾಂದೋಗ್ಯೋಪನಿಷತ್ತಿನಿಂದಲೇ ತನ್ನ ಕಾವ್ಯದ ಆತ್ಮನಾಗಿರುವ ಕೃಷ್ಣನನ್ನು ಎತ್ತಿಕೊಂಡಿದ್ದಾನೆಂಬುದರಲ್ಲಿ ಸಂದೇಹವಿಲ್ಲ. ಏಕೆಂದರೆ ಛಾಂದೋಗ್ಯೋಪನಿಷತ್ತಿನಲ್ಲಿ ಕೃಷ್ಣನ ಪಿತನ ಉಲ್ಲೇಖವೂ ಇಲ್ಲ ದೇವಕಿಯ ಪತಿಯ ಉಲ್ಲೇಖವೂ ಇಲ್ಲ. ಆದುದರಿಂದ ಮಹಾಭಾರತಕಾರನಿಗೆ ತಾನು ಸೃಷ್ಟಿಸಿದ ವಸುದೇವನನ್ನು ದೇವಕಿಯ ಪತಿಯನ್ನಾಗಿಯೂ ಕೃಷ್ಣನ ಪಿತನನ್ನಾಗಿಯೂ ಮಾಡಲು ಯಾವ ಅಭ್ಯಂತರವೂ ಇರಲಿಲ್ಲ. ಮಹಾಭಾರತದಲ್ಲಿ ಛಾಂದೋಗ್ಯೋಪನಿಷತ್ತಿನೊಳಗಿನ ದೇವಕೀ ಪುತ್ರ ಕೃಷ್ಣನು ಮಾತ್ರವಲ್ಲದೇ ಅನುಶಾಸನಿಕ ಪರ್ವದ ೧೮೫ನೆಯ ಅಧ್ಯಾಯದಲ್ಲಿ ಇತರ ಆಂಗಿರಸರೊಂದಿಗೆ ಘೋರ ಆಂಗಿರಸನೂ ಇದ್ದಾನೆ.

ಅರ್ಜುನ ಎಂಬ ಶಬ್ದವು ಒಬ್ಬ ಮನುಷ್ಯನ ಹೆಸರಾಗಿ ಋಗ್ವೇದದ ೧-೧೨೨-೫ನೆಯ ಋಚೆಯಲ್ಲಿ ಬಂದಿದೆ. ಆದರೆ ಆ ಅರ್ಜುನನು ಘೋಷಾ ಎಂಬ ಸ್ತ್ರೀಯ ಪತಿಯಾಗಿದ್ದಾನೆ, [1] ಅವನು ಇಂದ್ರನಾಗಲೀ ಇಂದ್ರನ ಪುತ್ರನಾಗಲೀ ಅಲ್ಲ. ಆದುದರಿಂದ ಅವನು ಮಹಾಭಾರತದೊಳಗಿನ ಅರ್ಜುನನಾಗಲು ಸಾಧ್ಯವಿಲ್ಲ. ಏಕೆಂದರೆ ಮಹಾಭಾರತದೊಳಗಿನ ಅರ್ಜುನನು ಇಂದ್ರನ ಅಂಶವಾಗಿದ್ದಾನೆ ಅಥವಾ ಇಂದ್ರನೇ ಆಗಿದ್ದಾನೆ. ಆ ಅರ್ಜುನನು ಶುಕ್ಲಯಜುರ್ವೇದದ ಶತಪಥ ಬ್ರಾಹ್ಮಣದಲ್ಲಿದ್ದಾನೆ. ಅಂದರೆ ಶತಪಥ ಬ್ರಾಹ್ಮಣದ ೫-೪-೩-೬ನೆಯ ಕಂಡಿಕೆಯಲ್ಲಿ ಅರ್ಜುನ ಎಂಬುದು ಇಂದ್ರನ ಗುಹ್ಯನಾಮವೆಂದು ಹೇಳಿದೆ. [2] ಮಹಾಭಾರತಕಾರನು ಆದಿಪರ್ವದ ೧೨೨ನೆಯ ಅಧ್ಯಾಯದಲ್ಲಿ ಕುಂತಿಯು ಇಂದ್ರನನ್ನು ಆರಾಧಿಸಿದುದರಿಂದ ಇಂದ್ರನು ಕುಂತಿಯಲ್ಲಿ ಅರ್ಜುನನನ್ನು ಹುಟ್ಟಿಸಿದನೆಂದು ಹೇಳಿದ್ದರೂ[3] ಮುಂದೆ ೧೯೬ನೆಯ ಅಧ್ಯಾಯದಲ್ಲಿ ದೇವತೆಗಳ ಮೇಲೆ ಕ್ರುದ್ಧನಾದ ಶಿವನು ದೇವತೆಗಳನ್ನು ಭೂಲೋಕದಲ್ಲಿ ಮನುಷ್ಯರಾಗಿ ಹುಟ್ಟಿರೆಂದು ಆದೇಶಿಸಿದಂತೆ ಇಂದ್ರನು ಅರ್ಜುನನಾಗಿ ಹುಟ್ಟಿದನೆಂದು ವರ್ಣಿಸಿದ್ದಾನೆ, [4] ಅರ್ಥಾತ್ ಮಹಾಭಾರತದೊಳಗಿನ ಪ್ರಧಾನ ನಾಯಕರಿಬ್ಬರೂ ವೈದಿಕ ಸಾಹಿತ್ಯದಲ್ಲಿ ಇದ್ದವರಾಗಿದ್ದಾರೆ.

---

1 ಆ ಘೋ ರುವಣ್ಯಮಾಶಿಜೋ ಹುವಧ್ಯೈ ಘೋಷೇವ ಶಂಸಮರ್ಜುನಸ್ಯ ನಂ ಶೇ ॥

2 ಅರಿಷ್ಟೋಽರ್ಜುನ ಇತ್ಯರ್ಜುನೋ ಹ ವೈ ನಾಮೇಂದ್ರೋಯದಸ್ಯ ಗುಹ್ಯಂ
ನಾಮ ॥೫-೪-೩-೬ ॥

3 ಪುತ್ರಂಜನಯ ಸುಶ್ರೋಣಿ ಧಾಮ ಕ್ಷತ್ರಿಯ ತೇಜಸಾಮ್।
ಲಬ್ಧಃ ಪ್ರಸಾದೋ ದೇವೇಂದ್ರಾತ್ ತಮಾಹ್ವಯ ಶುಚಿ ಸ್ಮಿತೇ ॥ ೧೨೨-೩೪॥
ಏವಮುಕ್ತಾ ತತಃ ಶಕ್ರಮಾಜುಹಾವ ಯಶಸ್ವಿನೀ।
ಅಥಾ ಜಗಾಮ ದೇವೇಂದ್ರೋ ಜನಯಾಮಾಸ ಚಾರ್ಜುನಮ್ ॥೩೫॥

4 ಶಕ್ರಸ್ಯಾಂಶಃ ಪಾಂಡವಃ ಸವ್ಯಸಾಚೀ ॥ ೧೯೬-೩೪ ॥

ನಮಗೆ ಮಹಾಭಾರತದ ಕಥೆಗಳನ್ನು ಹೇಳುವವನು ಲೋಮಹರ್ಷಣ ಎಂಬ ಸೂತನ ಪುತ್ರ ಉಗ್ರಶ್ರವ ಎಂಬವನಾಗಿದ್ದಾನೆ. ಅವನು ಪರಿಕ್ಷಿತನ ಪುತ್ರನಾದ ಜನಮೇಜಯನು ಜರುಗಿಸುತಿದ್ದ ಸರ್ಪಸತ್ರಕ್ಕೆ ಹೋಗಿದ್ದನು. ಅಲ್ಲಿ ಕೃಷ್ಣದ್ವೈಪಾಯನನ ಶಿಷ್ಯ ವೈಶಂಪಾಯನನು ಕೃಷ್ಣದ್ವೈಪಾಯನನ ಆಜ್ಞೆಯಂತೆ ಕೃಷ್ಣದ್ವೈಪಾಯನನಿಂದ ರಚಿಸಲ್ಪಟ್ಟ ಮಹಾಭಾರತದ ವಿಚಿತ್ರ-ಅರ್ಥಗಳುಳ್ಳ ಕಥೆಗಳನ್ನು ಹೇಳುತಿದ್ದಾಗ ಕೇಳಿದ್ದನು. ಹಾಗೆಯೇ ಆ ಸರ್ಪಯಾಗವು ಮುಗಿದ ತರುವಾಯ ಅವನು ಅಲ್ಲಿಂದ ಹಿಂದಿರುಗಿ ಬರುತಿದ್ದಾಗ ನೈಮಿಷಾರಣ್ಯದಲ್ಲಿ ಶೌನಕನು ಹದಿನೆರಡು ವರ್ಷಗಳ ಯಜ್ಞವನ್ನು ಜರುಗಿಸುವಲ್ಲಿಗೆ ತಲುಪಿದ್ದನು. ಮತ್ತು ಅಲ್ಲಿ ಯಜ್ಞಕ್ಕಾಗಿ ನೆರೆದ ಋಷಿಗಳು ತಮಗೂ ಸರ್ಪಸತ್ರದ ವೃತ್ತಾಂತವನ್ನು ತಿಳಿಸಬೇಕೆಂದು ಪ್ರಾರ್ಥಿಸಲಾಗಿ ಅವನು ತಾನು ವೈಶಂಪಾಯನನಿಂದ ಕೇಳಿದ ಮಹಾಭಾರತದ ಕಥೆಗಳನ್ನು ಅವರಿಗೆ ಹೇಳಿದ್ದನು ಎಂಬುದಾಗಿ ಮಹಾಭಾರತದ ಪೀಠಿಕೆ ಇದೆ.[1]

ಮಹಾಭಾರತದಲ್ಲಿ ಜನಮೇಜಯನ ತಂದೆಯ ಹೆಸರಾಗಿರುವ ಪರಿಕ್ಷಿತ್ ಎಂಬ ಶಬ್ದವು ನಮಗೆ ಮೊತ್ತಮೊದಲು ಅಥರ್ವವೇದದ ೨೦-೧೨೭ನೆಯ ಅನುವಾಕದಲ್ಲಿ ಕಾಣ ಸಿಗುತ್ತದೆ. ಅಲ್ಲಿ ಅವನು ಕೌರವ್ಯ ಜನರ ರಾಜನೆಂದು ತಿಳಿಸುವ ಉಲ್ಲೇಖವಿದ್ದರೂ, ಅವನು ಪಾಂಡುಪುತ್ರ ಅರ್ಜುನನ ಮೊಮ್ಮಗನೆಂದಾಗಲೀ, ಅಭಿಮನ್ಯುವಿನ ಮಗನೆಂದಾಗಲೀ ಸೂಚಿಸುವ ಉಲ್ಲೇಖಗಳಿಲ್ಲ. ಅಂದರೆ ಕೌರವ್ಯನೊಬ್ಬನು ತನ್ನ ಮನೆವಾರ್ತೆ ಮಾಡುತಿದ್ದಾಗ ತನ್ನ ಪತ್ನಿಯ ಮುಂದೆ—ಸರ್ವಶ್ರೇಷ್ಠನಾದ ಪರಿಕ್ಷಿತನು ಸಿಂಹಾಸನವೇರಿ ರಾಜ್ಯವಾಳತೊಡಗಿ ನಮಗೆ ಎಲ್ಲ ಬಗೆಯ ಸುಖಶಾಂತಿಗಳನ್ನು ಕರುಣಿಸಿದ್ದಾನೆಂದು ಪರಿಕ್ಷಿತನನ್ನು[2] ಹೊಗಳಿದ ಉಲ್ಲೇಖ ಮಾತ್ರವಿದೆ.

ಪರಿಕ್ಷಿತನ ಪುತ್ರನಾದ ಜನಮೇಜಯನು ಮಹಾಭಾರತದೊಳಗಿನ ಕಥೆಗಳಿಗೆ ಕೇಂದ್ರವಾಗಿದ್ದಾನೆ. ಅಂದರೆ ಆ ಕಥೆಗಳನ್ನು ಕೇಳುವವನು ಅವನೇ ಆಗಿದ್ದಾನೆ. ವೈದಿಕ ಬ್ರಾಹ್ಮಣಗಳೊಳಗಿನ ಉಲ್ಲೇಖಗಳಿಂದ ಜನಮೇಜಯನು ಪರಿಕ್ಷಿತನ ಪುತ್ರನೆಂದು ತಿಳಿಯುತ್ತದಾದರೂ ಅವನೊಬ್ಬ ಕುರುವೆಂದಾಗಲೀ

---

1 ಆದಿ ಪರ್ವ ಅಧ್ಯಾಯ ೧

2 ರಾಜ್ಞೋ ವಿಶ್ವಜನೀನಸ್ಯ ಯೋದೇವೋಮರ್ತ್ಯಾ೦ ಅತೀವೈಶ್ವಾನರಸ್ಯಸುಷ್ಟುತಿಮಾಸುನೋತಾ ಪರಿಕ್ಷಿತಃ ॥ಅಥರ್ವ. ೨೦-೧೨೭-೭॥ ಪರಿಚ್ಛಿನ್ನಃ ಕ್ಷೇಮಮಕರೋತ್ತಮ ಆಸನಮಾಚರತ್। ಕುಲಾಯನ್ ಕೃಣ್ವನ್ ಕೌರವ್ಯಃ ಪತಿರ್ವದತಿ ಜಾಯಯಾ ॥೮॥ ಕತರತ್ತ ಆಹರಾಣಿ ದಧಿಮಂಥೀ ಪರಿಶ್ರುತಮ್। ಜಾಯಾಃ ಪತಿಂ ವಿಪೃಚ್ಛತಿ ರಾಷ್ಟ್ರೇ ರಾಜ್ಞಃ ಪರಿಕ್ಷಿತಃ ॥ ೯ ॥

ಪಾಂಡವನಾದ ಅರ್ಜುನನ ಪೌತ್ರನೆಂದಾಗಲೀ ತಿಳಿಯುವುದಿಲ್ಲ. ಶತಪಥ ಬ್ರಾಹ್ಮಣದಲ್ಲಿ ಇಂದ್ರೋತ ದೈವಾಪ ಶೌನಕ ಎಂಬ ಅಧ್ವರ್ಯುವು ಪಾರಿಕ್ಷಿತ ಜನಮೇಜಯನಿಂದ ಅಶ್ವಮೇಧವನ್ನು ಮಾಡಿಸಿ ಅವನ ಬ್ರಹ್ಮಹತ್ಯೆ ಮೊದಲಾದ ಸಕಲ ಪಾಪಗಳನ್ನು ನಿವಾರಿಸಿದನೆಂತಲೂ ಜನಮೇಜಯನು ತನ್ನ ಯಜ್ಞಾಶ್ವವನ್ನು ಆಸಂದೀವತ್ ನಗರದಲ್ಲಿ ಕಟ್ಟಿದ್ದ[1]ನೆಂತಲೂ ಹೇಳಿದೆ. ಮತ್ತುಅದೇ ಅಧ್ವರ್ಯುವು ಜನಮೇಜಯನ ತಮ್ಮಂದಿರಾದ ಭೀಮಸೇನ, ಉಗ್ರಸೇನ ಮತ್ತು ಶ್ರುತಸೇನ ಎಂಬವರಿಂದ ಆನುಕ್ರಮವಾಗಿ, ಜ್ಯೋತಿಷ್, ಗೌಃ ಮತ್ತುಆಯುಃ ಎಂಬ ಅತಿರಾತ್ರ ಯಜ್ಞಗಳನ್ನು ಮಾಡಿಸಿದ್ದನೆಂತಲೂ ಹೇಳಿದೆ.[2]

ಹಾಗೆಯೇ ಶತಪಥ ಬ್ರಾಹ್ಮಣದಲ್ಲಿ "ಬಲ್ಹಿಕ ಪ್ರಾತಿಪೀಯ ಕೌರವ್ಯ ರಾಜನು, ಸೃಂಜಯರು ದುಷ್ಟರೀತು ಪೌಂಸಾಯನ ಎಂಬ ರಾಜನನ್ನು ಅವನ ಹತ್ತು ತಲೆಮಾರುಗಳಿಂದ ಸಾಗಿ ಬಂದ ರಾಜ್ಯದಿಂದ ಹೊರಗೆ ಹಾಕಿದರೆಂಬ ವರ್ತಮಾನವನ್ನು ಕೇಳಿದನೆಂಬ ಉಲ್ಲೇಖವಿದೆ.[3] ಆದರ ಮೇಲಿಂದ ಬಲ್ಹಿಕ ದೇಶದ ಕೌರವ್ಯರಾಜನು ಪ್ರತೀಪ ಎಂಬವನ ಪುತ್ರನೆಂದು ಗೊತ್ತಾಗುತ್ತದೆ. ಮತ್ತು ಮಹಾಭಾರತದೊಳಗೆ ಬರುವ ಪರಿಕ್ಷಿತ, ಜನಮೇಜಯ, ಪ್ರತೀಪ, ಬಾಹ್ಲೀಕ ಮೊದಲಾದ ಹೆಸರುಗಳ ಮೂಲವು ಶತಪಥ ಬ್ರಾಹ್ಮಣದಲ್ಲಿದೆಯೆಂದು ಗೊತ್ತಾಗುತ್ತದೆ. ಆದರೆ ಶತಪಥ ಬ್ರಾಹ್ಮಣದಲ್ಲಿ ಜನಮೇಜಯ ಮೊದಲಾದ ಹೆಸರುಗಳಿದ್ದರೂ ಪಾಂಡು, ಪಾಂಡವ, ವಾಸುದೇವ ಮೊದಲಾದ ಹೆಸರುಗಳಾಗಲೀ, ಕೌರವ ಪಾಂಡವರ ಯುದ್ಧದ ಉಲ್ಲೇಖವಾಗಲೀ ಇಲ್ಲ.

ಐತರೇಯ ಬ್ರಾಹ್ಮಣದ ೭-೩೪ರಲ್ಲಿ ತುರಕಾವಷೇಯ ಎಂಬ

---

1 ಏತೇನ ಹೇಂದ್ರೋತೋ ದೈವಾಪಃ ಶೌನಕಃ । ಜನಮೇಜಯಂಪಾರಿಕ್ಷಿತಂ ಯಾಜಯಾಂ ಚಕಾರ।ತೇನೇಷ್ಟ್ವಾ ಸರ್ವಾಂ ಪಾಪಕೃತ್ಯಾಂ ಸರ್ವಾಂಬ್ರಹ್ಮಹತ್ಯಾಮಪಜಘಾನ। ಸರ್ವಾಂಹ ವೈ ಪಾಪಕೃತ್ಯಾಂ ಸರ್ವಾಂಬ್ರಹ್ಮಹತ್ಯಾಮಪಹಂತಿ ಯೋऽಶ್ವಮೇಧೇನಯಜತೇ ॥೧೩-೫-೪-೧॥ ತದೇತ ದ್ಗಾಥಯಾऽಭಿಗೀತಮ್। ಆಸಂದೀವತಿ ಧಾನ್ಯಾದಂ ರುಕ್ಮಿಣಂ ಹರಿತಸ್ರಜಮಬಧ್ನಾದಶ್ವಂ ಸಾರಂಗಂ ದೇವೇಭ್ಯೋ ಜನಮೇಜಯಃ ॥೨॥

2 ಜ್ಯೋತಿರತಿ ರಾತ್ರಸ್ತೇನ ಭೀಮಸೇನಮ್ ॥ ಶ. ಬ್ರಾ. ೧೩-೫-೪-೩ ॥ ಗೌರತಿ ರಾತ್ರಸ್ತೇನೋಗ್ರಸೇನಮ್ ॥ ೪ ॥ ಆಯುರತಿರಾತ್ರಸ್ತೇನ ಶ್ರುತಸೇನಮ್ ॥ ಪಾರಿಕ್ಷಿತಾಃ ಯಜಮಾನಾಃ ॥೫॥

3 ತದುಹ ಬಲ್ಹಿಕಃ ಪ್ರಾತಿಪೀಯಃ ಶುಶ್ರಾವಃ। ಕೌರವ್ಯೋ ರಾಜಾ ಯೋ ಹ ವಾऽಆಯಂ ದುಷ್ಟರೀತುಃ ಪೌಂಸಾಯನೋ ದಶಪುರುಷಂ ರಾಜ್ಯಾದಪರುದ್ಧೋऽಭೂತ್ತಮಯಂ ಚಾಕ್ರಸ್ಥಪತಿಃ ಸೌತ್ರಾಮಣ್ಯಾ ಯಾಜಯಿಷ್ಯತಿ ಯದಿದಂ ಸಂಜಯೇಷು ರಾಷ್ಟ್ರಂ ತದ್ಧಾಸ್ಮಿನ್ ಧಾಸ್ಯತೀತಿ ॥ ಶ. ಬ್ರಾ. ೧೨-೯-೩-೩॥

ಅಧ್ವರ್ಯುವು ಜನಮೇಜಯ ಪಾರಿಕ್ಷಿತನಿಗೆ ಪ್ರತ್ಯಭಿಮರ್ಷ ವಿಧಿಯನ್ನು ತಿಳಿಸಿದ ನೆಂತಲೂ ೮-೨೧ರಲ್ಲಿ ತುರಕಾವಷೇಯನು ಜನಮೇಜಯ ಪಾರಿಕ್ಷಿತನಿಗೆ ದೇವತೆಗಳು ಇಂದ್ರನಿಗೆ ಮಾಡಿದಂಥ ಮಹಾಭಿಷೇಕವನ್ನು ಮಾಡಿದುದರಿಂದ ಅವನು ಸರ್ವತ್ರ ವಿಜಯಿಯಾಗುತ್ತ ಸಮಂತ ಪ್ರಥ್ವಿಯನ್ನು ಜಯಿಸಿ ಅಶ್ವಮೇಧವನ್ನು ಜರುಗಿಸಿದನೆಂತಲೂ, ಅವನು ತನ್ನ ಯಜ್ಞದ ಅಶ್ವವನ್ನು ಆಸಂದೀವತ್ ನಗರದಲ್ಲಿ ಕಟ್ಟಿದ್ದನೆಂತಲೂ ಹೇಳಿದೆ.[1] ಆ ಪ್ರಕಾರವಾಗಿ ಐತರೇಯ ಬ್ರಾಹ್ಮಣದಲ್ಲಿ ಕೂಡ ಜನಮೇಜಯ ಪಾರಿಕ್ಷಿತನ ಉಲ್ಲೇಖಗಳಿದ್ದರೂ ಪಾಂಡವರ, ವಾಸುದೇವನ, ಹಾಗೂ ಕೌರವ–ಪಾಂಡವರ ಯುದ್ಧದ ಉಲ್ಲೇಖಗಳಿಲ್ಲ. ಮತ್ತು ಜನಮೇಜಯ ಪಾರಿಕ್ಷಿತನು ಕುರುವಂಶದವನೆಂದೂ ಸೂಚಿಸುವ ಉಲ್ಲೇಖಗಳೂ ಇಲ್ಲ.

ಮಹಾಭಾರತ ಕಾವ್ಯದ ಆದಿಪರ್ವದ ಮೂರನೆಯ ಅಧ್ಯಾಯವು ಪಾರಿಕ್ಷಿತನಾದ ಜನಮೇಜಯನು ತನ್ನ ತಮ್ಮಂದಿರಾದ ಶ್ರುತಸೇನ, ಉಗ್ರಸೇನ ಮತ್ತು ಭೀಮಸೇನ ಎಂಬವರೊಂದಿಗೆ ಕುರುಕ್ಷೇತ್ರದಲ್ಲಿ ದೀರ್ಘ ಸತ್ರವನ್ನು ಕೈಗೊಂಡಿದ್ದನೆಂದು ಪ್ರಾರಂಭವಾಗುತ್ತದೆ. ಹಾಗೆ ಅವರು ಯಜ್ಞಕ್ಕೆ ಕೂತಿದ್ದಾಗ ಸಾರಮೇಯವು ಅಂದರೆ ದೇವಲೋಕದ ನಾಯಿಯಾದ ಸರಮಾ ಎಂಬುದರ ಮರಿಯು ಅವರ ಯಜ್ಞಸ್ಥಳಕ್ಕೆ ಬರುವುದು. ಆಗ ಜನಮೇಜಯನ ತಮ್ಮಂದಿರು ಸಾರಮೇಯವನ್ನು ಯಜ್ಞಸ್ಥಳದಿಂದ ಹೊಡೆದಟ್ಟುವರು. ಅದು ಕೂಗಾಡುತ್ತ ತನ್ನ ತಾಯಿಯ ಬಳಿಗೆ ಹೋಗುವುದು. ಆಗ ತಾಯಿಯು ನೀನು ಅಳುವುದೇಕೆ? ಎಂದು ಕೇಳಲಾಗಿ, ಅದು ಜನಮೇಜಯನ ತಮ್ಮಂದಿರು ತನ್ನನ್ನು ಹೊಡೆದರೆಂದು ಹೇಳುವುದು. ಆಗ ಸರಮೆಯು – ನೀನೇನೋ ಅಪರಾಧವೆಸಗಿರಬೇಕು. ಆದುದರಿಂದಲೇ ಅವರು ನಿನ್ನನ್ನು ಹೊಡೆದರೆನ್ನುವುದು. ಅದಕ್ಕೆ ಸಾರಮೇಯವು ನಾನಾವ ಅಪರಾಧವನ್ನೂ ಎಸಗಿಲ್ಲ. ಏನನ್ನೂ ನೋಡಿಲ್ಲ. ಹವಿಸ್ಸುಗಳನ್ನೂ ನೆಕ್ಕಲಿಲ್ಲ–ಎನ್ನುವುದು. ತನ್ನ ಮರಿಯ ಮಾತುಗಳಿಂದ ದುಃಖಿತಳಾದ ಸರಮೆಯು–ಜನಮೇಜಯನ ಯಜ್ಞಸ್ಥಳಕ್ಕೆ ಹೋಗಿ ಬಹಳ ಸಿಟ್ಟಿನಿಂದ_ ನಿರಪರಾಧಿಯಾದ ನನ್ನ ಮರಿಯನ್ನು ಏಕೆ ಹೊಡೆದಿರಿ? ಎಂದು ಕೇಳಿದಾಗ ಅವರು ಉತ್ತರವನ್ನೇ ಕೊಡದಿರಲು ಸರಮೆಯು ನಿರಪರಾಧಿಯಾದ ನನ್ನ ಮರಿಯನ್ನು

---

[1] ಏತೇನ ಹ ವಾ ಇಂದ್ರೇಣ ಮಹಾಭಿಷೇಕೇಣ ತುರಃ ಕಾವಷೇಯೋ ಜನಮೇಜಯಂ ಪಾರಿಕ್ಷಿತಮಭಿಷಿಷೇಚ । ತಸ್ಮಾದು ಜನಮೇಜಯಃ ಪಾರಿಕ್ಷಿತಃ ಸಮಂತಂ ಸರ್ವಾತಃ ಪೃಥಿವೀಂ ಜಯನ್ ಪರೀಯಾಯಾಶ್ವಮೇಧೇನೇಜೇ ತದೇಷಾಭಿಯಜ್ಞಗಾಥಾ ಗೀಯತೇ। ಆಸಂದೀವತಿ ಧಾನ್ಯಾದಂ ರುಕ್ಮಿಣಂ ಹರಿತಸೃಜಮ್। ಅಶ್ವಂ ಬಬಂಧ ಸಾರಂಗಂ ದೇವೇಭ್ಯೋ ಜನಮೇಜಯಃ।
॥ಐ. ಬ್ರಾ. ೮–೨೧॥

ಹೊಡೆದುದರಿಂದ ನಿನಗೆ ಕಣ್ಣಿಗೆ ಕಾಣಿಸದ ಭಯವು ಬರುವುದು-ಎಂದು ನುಡಿಯುವುದು. ದೇವಶುನಿ ಸರಮೆಯ ಮಾತುಗಳಿಂದ ಜನಮೇಜಯನು ಸಂಭ್ರಾಂತನೂ, ವಿಷಣ್ಣನೂ ಆಗುವನು. ಹಾಗೆಯೇ ಅವನು ಕೈಗೊಂಡ ಯಜ್ಞವು ಪರಿಸಮಾಪ್ತವಾದ ತರುವಾಯ ಅಲ್ಲಿಂದ ಹಸ್ತಿನಪುರಕ್ಕೆ ತೆರಳುವನು. ಮತ್ತು ಅಲ್ಲಿಗೆ ತಲುಪಿ ತನ್ನ ಪಾಪಕೃತ್ಯೆಯನ್ನು ನಿವಾರಿಸಬಲ್ಲಂಥ ಅಧ್ವರ್ಯುವನ್ನು ಹುಡುಕತೊಡಗುವನು.

ಹಿಂದಿನ ಕಥೆಯಲ್ಲಿ ಸರಿಯಾಗಿ ಲಕ್ಷಿಸಬೇಕಾದ ಮುಖ್ಯ ವಿಷಯಗಳೆಂದರೆ- ಮೊದಲನೆಯದಾಗಿ ಆದರೊಳಗೆ ಹೆಸರಿಸಿರುವ ಪಾರಿಕ್ಷಿತರು ಶತಪಥ ಬ್ರಾಹ್ಮಣದೊಳಗಿನ ಪಾರಿಕ್ಷಿತರಿಂದ ಭಿನ್ನರಲ್ಲವಾದುದರಿಂದ ಮಹಾಭಾರತಕಾರನು ಪಾರಿಕ್ಷಿತರ ಹೆಸರುಗಳನ್ನು ಶತಪಥ ಬ್ರಾಹ್ಮಣದಿಂದಲೇ ಎತ್ತಿಕೊಂಡಿದ್ದಾನೆಂಬುದಾಗಿದೆ. ಎರಡನೆಯದಾಗಿ ಆ ಕಥೆಯೊಳಗಿನ ಸರಮಾ ಮತ್ತು ಸಾರಮೇಯ ಎಂಬವುಗಳು ವಾಸ್ತವವಾಗಿ ಋಗ್ವೇದದಲ್ಲಿ ಉಲ್ಲೇಖಿಸಲ್ಪಟ್ಟಿರುವ ಎರಡು ನಕ್ಷತ್ರಪುಂಜಗಳ ಹೆಸರುಗಳಾಗಿರುವುದರಿಂದ ಅವುಗಳು ಆಕಾಶದಿಂದ ಇಳಿದು ಜನಮೇಜಯನ ಯಜ್ಞಸ್ಥಳಕ್ಕೆ ಬರಲು ಸಾಧ್ಯವಿಲ್ಲವೆಂಬುದಾಗಿದೆ. ಅರ್ಥಾತ್ ಮಹಾಭಾರತದ ಕಥೆಗಳಿಗೆ ಮೂಲವಾಗಿರುವ ಮೊದಲ ಕಥೆಯೇ ಸಂಪೂರ್ಣ ಕಲ್ಪಿತವಾಗಿದೆ.

ಮಹಾಭಾರತದೊಳಗಿನ ಕಥೆಯ ಪ್ರಕಾರ ಶಾಂತನು ಎಂಬವನು ಕೌರವರ ಮತ್ತು ಪಾಂಡವರ ಮೂಲಪುರುಷನಾಗಿದ್ದಾನೆ. ಮತ್ತು ಅವನು ಕೌರವ್ಯನೂ ಆಗಿದ್ದಾನೆ. ಮಹಾಭಾರತದ ಆದಿಪರ್ವದ ೯೪–೯೫ರಲ್ಲಿ ಕುರುವಂಶದ ಧೃತರಾಷ್ಟ್ರನಿಗೆ ಧರ್ಮನೇತ್ರ, ಸುನೇತ್ರ ಮತ್ತು ಪ್ರತೀಪ ಎಂಬ ಮೂವರು ಪುತ್ರರಿದ್ದರು. ಅವರೊಳಗಿನ ಪ್ರತೀಪನಿಗೆ ದೇವಾಪಿ, ಶಾಂತನು ಮತ್ತು ಬಾಹ್ಲೀಕ ಎಂಬ ಮೂವರು ಪುತ್ರರಾದರೆಂತಲೂ, ಅವರಲ್ಲಿ ಹಿರಿಯನಾದ ದೇವಾಪಿಯು ಧರ್ಮಾಪೇಕ್ಷೆಯಿಂದ ತಪಸ್ಸು ಮಾಡಲು ಕಾಡಿಗೆ ಹೋದುದರಿಂದ ಶಾಂತನುವು ರಾಜನಾದನೆಂತಲೂ ಹೇಳಿದ ತರುವಾಯ ಅದೇ ಕಥೆಯು ಉದ್ಯೋಗ ಪರ್ವದ ೧೪೭ನೆಯ ಅಧ್ಯಾಯದಲ್ಲಿ ಧೃತರಾಷ್ಟ್ರನು ತನ್ನ ಪುತ್ರ ದುರ್ಯೋಧನನಿಗೆ ಹೇಳಿದನೆಂದು ಕೊಂಚ ವಿಸ್ತಾರವಾಗಿ ಮುಂದಿನಂತೆ ಬಂದಿದೆ. ಪ್ರತೀಪನ ಮೂವರು ಪುತ್ರರಲ್ಲಿ ದೇವಾಪಿಯು ಹಿರಿಯನಾಗಿದ್ದು ಬಾಹ್ಲೀಕನು ಎರಡನೆಯವನೂ ಶಾಂತನುವು ಮೂರನೆಯವನೂ ಆಗಿದ್ದರು. ದೇವಾಪಿಯು ಚರ್ಮರೋಗಿಯಾಗಿದ್ದನು. ಮುಂದೆ ತಂದೆಯು ದೇವಾಪಿಯ ಪಟ್ಟಾಭಿಷೇಕಕ್ಕೆ ಸಿದ್ಧತೆಗಳನ್ನು ಮಾಡತೊಡಗಿದಾಗ_ಪುರಜನರೂ, ಬ್ರಾಹ್ಮಣರೂ ಕೂಡಿ, ರೋಗಿಯು ರಾಜನಾಗುವುದು ತರವಲ್ಲವೆಂದು ವಿರೋಧಿಸಿದುದರಿಂದ ದೇವಾಪಿಯು ತಪಸ್ಸು ಮಾಡಲು ಕಾಡಿಗೆ ಹೋಗುವನು. ಬಾಹ್ಲೀಕನು ತನಗೆ ರಾಜ್ಯ ಬೇಡವೆಂದು ಸೋದರ ಮಾವನ ಮನೆಯನ್ನು ಸೇರುವನು. ಹಾಗಾಗಿ

ಶಾಂತನುವು ತಂದೆಯ ತರುವಾಯ ಕುರುಗಳ ರಾಜನಾಗುವನು.[1]

ಹಿಂದೆ ಉದಹರಿಸಿದ ಕಥೆಯ ವಾಸ್ತವಿಕ ಮೂಲವು ಋಗ್ವೇದದಲ್ಲಿದ್ದು ತರುವಾಯ ಅದು ಶಕಪೂರ್ವ ಏಳನೆಯ ಶತಮಾನದಲ್ಲಿ ರಚಿಸಲ್ಪಟ್ಟ ನಿರುಕ್ತದಲ್ಲಿ ಹಾಗೂ ಶಕಪೂರ್ವ ಮೂರನೆಯ ಅಲ್ಲದಿದ್ದರೆ ನಾಲ್ಕನೆಯ ಶತಮಾನದಲ್ಲಿ ರಚಿಸಲ್ಪಟ್ಟ ಬೃಹದ್ದೇವತಾ ಎಂಬ ಗ್ರಂಥದಲ್ಲಿ ವಿಕಸಿತವಾಗಿದೆ. ಮಹಾಭಾರತಕಾರನು ಬೃಹದ್ದೇವತಾಗ್ರಂಥದಿಂದ ದೇವಾಪಿಯ ಹಾಗೂ ಶಂತನುವಿನ ಕಥೆಯನ್ನೆತ್ತಿಕೊಂಡು ಶತಪಥ ಬ್ರಾಹ್ಮಣದೊಳಗಿನ ಬಲ್ಹಿಕ ಪ್ರಾತಿಪೀಯ ಕೌರವ್ಯ ರಾಜ ಎಂಬ ಅಂಶವನ್ನು ಅದರೊಂದಿಗೆ ಕೂಡಿಸಿ ಆ ಕಥೆಗೆ ಹೊಸ ರೂಪವನ್ನು ಕೊಟ್ಟಿದ್ದಾನೆ.

ಅಂದರೆ ದೇವಾಪಿ ಮತ್ತು ಶಂತನು ಎಂಬ ಹೆಸರುಗಳ ಉಲ್ಲೇಖವು ಮೊತ್ತ ಮೊದಲು ಋಗ್ವೇದದ ಹತ್ತನೆಯ ಮಂಡಲದೊಳಗಿನ ಒಂದು ಸೂಕ್ತದಲ್ಲಿ ಬರುತ್ತದೆ. ಮತ್ತು ಪ್ರತೀಪ ಎಂಬ ಹೆಸರು ಅಥರ್ವ ವೇದದ ೨೦–೧೨೯–೧ರಲ್ಲಿದೆ. ತರುವಾಯ ಪ್ರತೀಪನು ಶತಪಥ ಬ್ರಾಹ್ಮಣದಲ್ಲಿ ಕೌರವ್ಯ ರಾಜನಾದ ಬಲ್ಹಿಕನ ತಂದೆಯ ರೂಪದಲ್ಲಿ ಕಾಣಿಸುತ್ತಾನೆ. ಮಹಾಭಾರತಕಾರನು ಹಿಂದೆ ಹೇಳಿದ ಹೆಸರುಗಳನ್ನೆತ್ತಿಕೊಂಡು ಅವುಗಳಲ್ಲಿ ಕೆಲವು ಪರಿವರ್ತನಗಳನ್ನು ಮಾಡಿ ಬೃಹದ್ದೇವತಾ ಗ್ರಂಥದೊಳಗಿನ ಕಥೆಯ ಆಧಾರದಿಂದ ಮಹಾಭಾರತದ ಕಥೆಯನ್ನು ಕಟ್ಟಿದ್ದಾನೆ. ಆ ಕಥೆಯು ಯಾವ ರೀತಿಯಲ್ಲಿ ವಿಕಸಿತವಾಗುತ್ತ ಮುಂದೆ ಸಾಗಿ ಬಂದಿತ್ತೆಂಬುದನ್ನು ಮುಂದೆ ಕೊಡಲಾಗುವ ವಿವರಗಳಿಂದ ಸರಿಯಾಗಿ ಅರಿತುಕೊಳ್ಳಬಹುದು.

ಋಗ್ವೇದದ ಹತ್ತನೆಯ ಮಂಡಲದ ೬೮ನೆಯ ಸೂಕ್ತದ ಋಷಿಯು ದೇವಾಪಿ ಎಂಬವನಾಗಿದ್ದಾನೆ. ಆ ಸೂಕ್ತದಲ್ಲಿ ದೇವಾಪಿಯನ್ನು ಆರ್ಷ್ಟಿಷೇಣ ಎಂದಿರುವುದರಿಂದ ದೇವಾಪಿಯು ಋಷ್ಟಿಷೇಣನ ಪುತ್ರನೆಂದು ಗೊತ್ತಾಗುತ್ತದೆ. ದೇವಾಪಿಯು ಆ ಸೂಕ್ತದಲ್ಲಿ ಮೊದಲನೆಯ ಋಚೆಯ ಶಂತನುವಿಗಾಗಿ ಮಳೆ

---

[1] ದೇವಾಪಿರಭವ ಜ್ಜ್ಯೇಷ್ಠೋ ಬಾಹ್ಲೀಕಸ್ತದನಂತರಮ್। ತೃತೀಯಃ ಶಾಂತನುಸ್ತಾತ ಧೃತಿಮಾನ್ ಮೇ ಪಿತಾಮಹಃ ॥೧೮॥ ದೇವಾಪಿಸ್ತುಮಹಾತೇಜಾಸ್ತ್ವಗ್ದೋಷೀ ರಾಜಸತ್ತಮ ॥ ೧೯ ॥ ಅಥ ಕಾಲಸ್ಯ ಪರ್ಯಾಯೇ ವೃದ್ಧೋ ನೃಪತಿ ಸತ್ತಮಃ ಸಂಭಾರಾನಭಿಷೇಕಾರ್ಥಂ ಕಾರಯಾಮಾಸ ಶಾಸ್ತ್ರತಃ ॥ ೨೧ ॥ ತಂ ಬ್ರಾಹ್ಮಣಾಶ್ಚವೃದ್ಧಾಶ್ಚಪೌರಜಾನಪದೈಃ ಸಹ ॥ ೨೨ ॥ ಸರ್ವೇ ನಿವಾರಯಾಮಾಸುರ್ದೇವಾಪೇರಭಿಷೇಚನಮ್ ॥ ೨೩ ॥ ನಿವಾರಿತಂ ನೃಪಂದೃಷ್ಟ್ವಾ ದೇವಾಪಿಃ ಸಂಶ್ರಿತೋವನಮ್। ಬಾಹ್ಲೀಕೋ ಮಾತುಲಕುಲಂ ತ್ಯಕ್ತ್ವಾರಾಜ್ಯಂ ಸಮಾಶ್ರಿತಃ। ಬಾಹ್ಲೀಕೇನ ತ್ವನುಜ್ಞಾತಃ । ಶಾಂತನುರ್ಲೋಕ ವಿಶ್ರುತಃ ಪಿತರ್ಯುಪರತೇ ರಾಜನ್ ರಾಜ್ಯಮಕಾರಯತ್॥

ಬರುವಂತೆ ಮಾಡೆಂದು ಪ್ರಾರ್ಥಿಸಿರುವುದರ[1] ಮೇಲಿಂದಲೂ ಏಳನೆಯ ಋಚೆಯಲ್ಲಿ ಶಂತನುವು ದೇವಾಪಿಯುನ್ನು ಹೋತೃವಾಗಿ ವರಿಸಿದ್ದನೆಂಬ ಉಲ್ಲೇಖ ವಿರುವುದರ ಮೇಲಿಂದಲೂ, ದೇವಾಪಿಯು ಶಂತನುವು ಜರುಗಿಸತೊಡಗಿದ ವೃಷ್ಟಿಕಾಮ್ಯೇಷ್ಟಿಯಲ್ಲಿ ಶಂತನುವಿನ ಹೋತೃವಾಗಿದ್ದನೆಂದು ಸ್ಪಷ್ಟವಾಗುತ್ತದೆ. ಹಾಗೆಯೇ ಏಳನೆಯ ಋಚೆಯಲ್ಲಿ ಬೃಹಸ್ಪತಿಯು ದೇವಾಪಿಗೆ, ತನ್ನ ಸ್ತುತಿಯ ಮೂಲಕ ಮಳೆಗರಿಸುವಂಥ ವಾಕ್ ಶಕ್ತಿಯನ್ನು ಕರುಣಿಸಿದ್ದನೆಂಬ ಉಲ್ಲೇಖವೂ-[2] ಎಂಟನೆಯ ಋಚೆಯಲ್ಲಿ "ಆರ್ಷ್ಟಿಷೇಣ ದೇವಾಪಿಯು ಪ್ರದೀಪ್ತನನ್ನಾಗಿ ಮಾಡಿದ ಹೇ ಅಗ್ನಿ ದೇವನೇ ನೀನು ವಿಶ್ವೇದೇವತೆಗಳೊಂದಿಗೆ ಸಂತುಷ್ಟನಾಗಿ ಪರ್ಜನ್ಯನನ್ನು ಮಳೆಗರಿಸುವಂತೆ ಪ್ರೇರೇಪಿಸು-ಎಂಬುದಾಗಿ ಪ್ರಾರ್ಥಿಸಿದ ಉಲ್ಲೇಖವೂ- ಇದೆ.[3]

ಆಚಾರ್ಯಯಾಸ್ಕನು ತನ್ನ ನಿರುಕ್ತದಲ್ಲಿ "ಸಮುದ್ರ" ಶಬ್ದದ ವ್ಯಾಖ್ಯೆ ಮಾಡುವಾಗ ಇತಿಹಾಸವೆಂದು ಹೇಳಿ ದೇವಾಪಿಯ ಮತ್ತು ಶಂತನುವಿನ ಸಂಬಂಧ ದಲ್ಲಿ ಮುಂದಿನ ಕಥೆಯನ್ನು ಹೇಳಿದ್ದಾನೆ- "ಆರ್ಷ್ಟಿಷೇಣ ದೇವಾಪಿ ಮತ್ತು ಕೌರವ್ಯ ಶಂತನು ಎಂಬ ಅಣ್ಣ ತಮ್ಮಂದಿರಿದ್ದರು. ಅವರಲ್ಲಿ ಕಿರಿಯನಾದ ಶಂತನುವು ಪಟ್ಟಾಭಿಷಿಕ್ತನಾಗಿ ರಾಜನಾದನು. ಮತ್ತು ದೇವಾಪಿಯು ತಪಸ್ಸು ಮಾಡಲು ಹೋದನು. ಮುಂದೆ ಶಂತನುವಿನ ರಾಜ್ಯದಲ್ಲಿ ಹದಿನೆರಡು ವರ್ಷ ಮಳೆ ಬರಲಿಲ್ಲ. ಆಗ ಬ್ರಾಹ್ಮಣರು– ಶಂತನುವಿಗೆ- ನೀನು ಅಣ್ಣನನ್ನು ದೂರ ಮಾಡಿ ರಾಜನಾದುದು ಅಧರ್ಮವಾಯಿತು. ಆದುದರಿಂದ ದೇವನು ನಿನಗೆ ಮಳೆಗರೆಯುವುದಿಲ್ಲ ಅಂದರು. ಆಗ ಶಂತನುವು ದೇವಾಪಿಯ ಬಳಿಗೆ ಹೋಗಿ ನಿನ್ನ ರಾಜ್ಯವನ್ನು ನೀನೇ ಆಳು ಎಂಬುದಾಗಿ ಪ್ರಾರ್ಥಿಸಿದನು. ಆದಕ್ಕೆ ದೇವಾಪಿಯು ಬೇಡ, ನಾನು ಪುರೋಹಿತ ನಾಗುವೆನು ಮತ್ತು ನಿನ್ನಿಂದ ಯಜ್ಞಮಾಡಿಸುವೆನು ಅಂದನು[4]

ಹಿಂದಿನ ಕಥೆಯಲ್ಲಿ ಆಚಾರ್ಯಯಾಸ್ಕನು ಋಗ್ವೇದದೊಳಗಿನ ದೇವಾಪಿ

---

[1] ಬೃಹಸ್ಪತೇ ಪ್ರತಿಮೇ ದೇವತಾಮಿಹಿ ಮಿತ್ರೋವಾ ಯದ್ವರುಣೋ ವಾಸಿ ಪೂಷಾ।
ಆದಿತ್ಯೈರ್ವಾ ಯದ್ವಸುಭಿರ್ಮರುತ್ವಾನ್ ತ್ಸ ಪರ್ಜನ್ಯಂ ಶಂತನವೇ ವೃಷಾಯ ॥ ೧ ॥

[2] ಯದ್ದೇವಾಪಿಃ ಶಂತನವೇ ಪುರೋಹಿತೋ ಹೋತ್ರಾಯ ವೃತಃ ಕೃಪಯನ್ನ ದೀಧೇತ್ ।
ದೇವಶ್ರುತಂ ವೃಷ್ಟಿವನಿಂರರಾಣೋ ಬೃಹಸ್ಪತಿರ್ವಾಚಮಸ್ಮಾ ಅಯಚ್ಛತ್ ॥ ೭ ॥

[3] ಯಂ ತ್ವಾ ದೇವಾಪಿಃ ಶುಶುಚಾನೋ ಅಗ್ನ ಆರ್ಷ್ಟಿಷೇಣೋ ಮನುಷ್ಯಃ ಸಮೀಧೇ॥
ವಿಶ್ವೇಭಿರ್ದೇವೈರನುಮದ್ಯಮಾನಃ ಪರ್ಜನ್ಯಮೀರಯಾವೃಷ್ಟಿಮಂತಮ್ ॥ ೮ ।

[4] ದೇವಾಪಿಶ್ಚಾರ್ಷ್ಟಿಷೇಣಃ ಶಂತನುಶ್ಚ ಕೌರವ್ಯೋ ಭ್ರಾತರೌ। ಬಭೂವತುಃ। ಶಂತನುಃ ಕನೀಯಾನಭಿಷೇಚಯಾಂ ಚಕ್ರೇ। ದೇವಾಪಿಸ್ತಪಃ ಪ್ರತಿಪೇದೇ । ತತಃ ಶಂತನೋ ರಾಜ್ಯೇ ದ್ವಾದಶ ವರ್ಷಾಣಿ ದೇವೋ ನ ವವರ್ಷ । ತಮೂಚುರ್ಬ್ರಾಹ್ಮಣಾ-ಅಧರ್ಮಸ್ತ್ವಯಾ

ಯನ್ನು ಮತ್ತು ಶಂತನುವನ್ನು ಅಣ್ಣತಮ್ಮಂದಿರನ್ನಾಗಿ ಮಾಡಿದ್ದಾನಲ್ಲದೇ ಶಂತನು ವನ್ನು ಕೌರವ್ಯನನ್ನಾಗಿಯೂ ಮಾಡಿದ್ದಾನೆ ಮಾತ್ರವಲ್ಲ ಆ ಕಟ್ಟುಕಥೆಯನ್ನು ಇತಿಹಾಸವೆಂದೂ ಹೇಳಿದ್ದಾನೆ. ಆದರೆ ಋಗ್ವೇದದಲ್ಲಿ ಅವರಿಬ್ಬರು ಅಣ್ಣ ತಮ್ಮಂದಿ ರೆಂದಾಗಲೀ, ಕುರುವಂಶದವರೆಂದಾಗಲೀ ಸೂಚಿಸುವಂಥ ಉಲ್ಲೇಖಗಳು ಇಲ್ಲವೇ ಇಲ್ಲ. ಅಂದರೆ ಅದು ಯಾಸ್ಕನ ಸ್ವಂತದ ಕಲ್ಪನೆಯಾಗಿದೆ.

ಆಚಾರ್ಯಯಾಸ್ಕನ ತರುವಾಯದವನಾದ ಆಚಾರ್ಯ ಶೌನಕನು ತಾನು ರಚಿಸಿದ ಬೃಹದ್ದೇವತಾಗ್ರಂಥದಲ್ಲಿ ಆ ಋಚೆಗಳ ವಿನಿಯೋಗವನ್ನು ವಿವರಿಸುವಾಗ ಯಾಸ್ಕನು ಹೇಳಿದ ಕಥೆಯನ್ನು ಕೊಂಚ ವಿಸ್ತರಿಸುತ್ತಾನಲ್ಲದೇ, ದೇವಾಪಿಯು ರಾಜನಾಗದಿರಲು ಕಾರಣವೇನು? ಎಂಬುದನ್ನು ವಿವರಿಸುತ್ತಾನೆ. ಅಂದರೆ ಶೌನಕನು ಹೇಳುವ ಕಥೆಯು ಮುಂದಿನಂತಿದೆ – "ಕುರುವಂಶದಲ್ಲಿ ಆರ್ಷ್ಟಿಷೇಣ ದೇವಾಪಿ ಮತ್ತು ಕೌರವ್ಯಶಂತನು ಎಂಬ ರಾಜಪುತ್ರರು ಅಣ್ಣ ತಮ್ಮಂದಿರಾಗಿದ್ದರು. ಋಷ್ಟಿಷೇಣನ ಪುತ್ರನಾದ ದೇವಾಪಿಯು ಚರ್ಮರೋಗಿಯಾಗಿದ್ದನು. ಅವನ ತಂದೆಯು ನಿಧನ ಹೊಂದಲಾಗಿ ಪ್ರಜೆಗಳು ಅವನ ಬಳಿಗೆ ಬಂದು ಅವನನ್ನು ರಾಜ ನಾಗೆಂದು ಆಗ್ರಹಪಡಿಸಲಾಗಿ ಅವನು ಕ್ಷಣಕಾಲ ಯೋಚಿಸಿ ನಾನು ರಾಜನಾಗಲು ಅರ್ಹನಲ್ಲ. ಶಂತನುವು ನಿಮ್ಮ ರಾಜನಾಗಲಿ ಅನ್ನುವನು. ಹಾಗಾಗಿ ಪ್ರಜೆಗಳು ಶಂತನುವಿಗೆ ರಾಜ್ಯಾಭಿಷೇಕ ಮಾಡುವರು. ತರುವಾಯ ದೇವಾಪಿಯು ಕಾಡಿಗೆ ಹೋಗುವನು. ಮುಂದೆ ಶಂತನುವಿನ ರಾಜ್ಯದಲ್ಲಿ ಹದಿನೆರಡು ವರ್ಷ ಮಳೆ ಬರುವುದಿಲ್ಲ. ಆದುದರಿಂದ ಶಂತನುವು ಪ್ರಜೆಗಳ ಸಹಿತವಾಗಿ ದೇವಾಪಿಯ ಬಳಿಗೆ ಹೋಗಿ ತನ್ನಿಂದ ಧರ್ಮವ್ಯತಿಕ್ರಮವಾಯಿತೆಂದೂ ನೀನು ನನ್ನ ತಪ್ಪನ್ನು ಕ್ಷಮಿಸಿ ನಿನ್ನ ರಾಜ್ಯವನ್ನು ನೀನೇ ಆಳ ಬೇಕೆಂದೂ ಕೈಮುಗಿದು ಪ್ರಾರ್ಥಿಸುವನು. ಅದಕ್ಕೆದೇವಾಪಿಯು ಚರ್ಮ ರೋಗದಿಂದ ಇಂದ್ರಿಯ ಶಕ್ತಿಯಿಲ್ಲದವನಾದ ನಾನು ರಾಜನಾಗಲು ಅರ್ಹನಲ್ಲ. ಆದರೆ ನಾನು ಪುರೋಹಿತನಾಗಿ ನಿನ್ನಿಂದ ವೃಷ್ಟಿಕಾಮ್ಯ ಯಜ್ಞ ಮಾಡಿಸುವೆನು ಎನ್ನಲಾಗಿ ಶಂತನುವು ದೇವಾಪಿಯನ್ನು ಋತ್ವಿಜಕ್ಕಾಗಿ ಪುರೋಹಿತನನ್ನಾಗಿ ವರಿಸುವನು.[1]

ಚರಿತೋ ಜ್ಯೇಷ್ಠಂ ಭ್ರಾತರಮಂತರಿತ್ಯಾಭಿಷೇಚಿತಮ್। ತಸ್ಮಾತ್ತೇ ದೇವ್ರೋ ನ ವರ್ಷ ತೀತಿ। ಸ ಶಂತನುರ್ದೇವಾಪಿಂ ಶಿಶಿಕ್ಷ ರಾಜ್ಯೇನ ತಮುವಾಚ ದೇವಾಪಿಃ ಪುರೋಹಿತ ಸ್ತೇ ಅಸಾನಿ; ಯಾಜಯಾನಿ ಚ ತ್ವೇತಿ ॥ ನಿರು. ೨-೩ ॥

[1] ಆರ್ಷ್ಟಿಷೇಣಸ್ತು ದೇವಾಪಿಃ ಕೌರವ್ಯಶ್ಚ ಶಂತನುಃ । ಭ್ರಾತರೌ ಕುರುಷ್ವೇತೌ ರಾಜ ಪುತ್ರೌ ಬಭೂವತುಃ ॥ ೭-೧೫೫ ॥ ಜ್ಯೇಷ್ಠಸ್ತಯೋಸ್ತು ದೇವಾಪಿಃ ಕನೀಯಾಂಶ್ಚೈವ ಶಂತನುಃ। ತ್ವ ಗ್ದೋಷೀ ರಾಜಪುತ್ರಸ್ತು ಋಷ್ಟಿಷೇಣ ಸುತೋಽಭವತ್ ॥ ೧೫೬ ॥ ರಾಜ್ಯೇನ ಛಂದಯಾಮಾಸುಃ ಪ್ರಜಾಃ ಸ್ವರ್ಗಂ ಗತೇ ಗುರೌ । ಸುಮುಹೂರ್ತಮಿವಧ್ಯಾತ್ವಾಪ್ರಜಾಸ್ತಾಃ ಪ್ರತ್ಯಭಾಷತ ॥ ೧೫೭ ॥ ನರಾಜ್ಯಮರ್ಹಾಮಿ ನೃಪತಿರ್ವೋಃಸ್ತುಶಂತನುಃ। ತಥೇತ್ಯುಕ್ತ್ವಾಭ್ಯಸಿಂಚಸ್ತಾಃ ಪ್ರಜಾ ರಾಜ್ಯಾಯ ಶಂತನುಮ್ ॥ ೮-೧ ॥

ಹಿಂದಿನ ಉದಾಹರಣೆಗಳಿಂದ ಮಹಾಭಾರತಕಾರನು ಬೃಹದ್ದೇವತಾ ಗ್ರಂಥದೊಳಗಿನ ಕಥೆಯನ್ನೆತ್ತಿಕೊಂಡು ಅದರೊಂದಿಗೆ ಶತಪಥ ಬ್ರಾಹ್ಮಣದೊಳಗಿನ ಪ್ರಾತಿಪೀಯ ಬಲ್ಹಿಕನನ್ನು ಸೇರಿಸಿದ್ದಾನೆಂದು ಮತ್ತು ಕೆಲವು ಪರಿವರ್ತನಗಳನ್ನು ಮಾಡಿ ಅದನ್ನು ಕೌರವ-ಪಾಂಡವರ ಕಥೆಯ ಮೂಲವನ್ನಾಗಿ ಮಾಡಿದ್ದಾನೆಂದು ಸ್ಪಷ್ಟವಾಗಿ ಗೊತ್ತಾಗುತ್ತದೆ. ಅವನು ಮಾಡಿದ ಮುಖ್ಯ ಪರಿವರ್ತನಗಳು ಯಾವುವೆಂದರೆ-

೧. ಮೂಲದಲ್ಲಿ ಶಂತನು ಎಂದಿದ್ದ ಶಬ್ದವನ್ನು ಶಾಂತನು ಎಂಬುದಾಗಿ ರೂಪಾಂತರಿಸಿದ್ದಾನೆ.

೨. ದೇವಾಪಿಯ ಪೈತೃಕ ನಾಮವಾಗಿದ್ದ ಆರ್ಷ್ಟಿಷೇಣ ಎಂಬುದನ್ನು ಅವನಿಂದ ಬೇರ್ಪಡಿಸಿ ಆರ್ಷ್ಟಿಷೇಣ ಎಂಬ ಹೆಸರಿನ ಬೇರೆಯೇ ಒಬ್ಬ ರಾಜರ್ಷಿಯನ್ನು ಸೃಷ್ಟಿಸಿದ್ದಾನೆ.[1] ಮತ್ತು ಋಷ್ಟಿಷೇಣನ ಪುತ್ರನಾದ ದೇವಾಪಿಯನ್ನೂ, ಅಜ್ಞಾತಪಿತೃವಾದ ಶಂತನುವನ್ನೂ ಶತಪಥ ಬ್ರಾಹ್ಮಣದೊಳಗಿನ ಪ್ರತೀಪನ ಪುತ್ರರನ್ನಾಗಿ ಮಾಡಿದ್ದಾನೆ.

೩. ಶತಪಥ ಬ್ರಾಹ್ಮಣದೊಳಗಿನ ಬಲ್ಹಿಕನನ್ನು ಬಾಹ್ಲೀಕನನ್ನಾಗಿ ಮಾಡಿ ಅವನ ಕೌರವ್ಯರಾಜಪದವನ್ನು ಕಸಿದು ಕೊಂಡಿದ್ದಾನೆ.

೪. ದೇವಾಪಿ ಮತ್ತು ಆರ್ಷ್ಟಿಷೇಣ ಎಂಬಿಬ್ಬರೂ ಪೃಥೂದಕ ಎಂಬ ತೀರ್ಥಕ್ಷೇತ್ರದಲ್ಲಿ ತಪಸ್ಸು ಮಾಡಿ ಬ್ರಾಹ್ಮಣ್ಯವನ್ನು ಪಡೆದರೆಂಬ ಕಥೆಯನ್ನು ಕಟ್ಟಿದ್ದಾನೆ (ಶಲ್ಯಪರ್ವ-ಅಧ್ಯಾಯ ೪೯. ಶ್ಲೋಕಗಳು ೧ರಿಂದ ೩ ಮತ್ತು ೧೨)

ಹಿಂದಿನ ಉದಾಹರಣೆಗಳಿಂದ ಮಹಾಭಾರತದ ಕಥೆಗಳ ಮೂಲ ಅಂಶವು ವೈದಿಕ ಗ್ರಂಥಗಳಲ್ಲಿ ಇದ್ದುದೇ ಎಂದು ಸ್ಪಷ್ಟವಾಗಿ ಸಿದ್ಧವಾಗುತ್ತದೆ. ಅಂದರೆ ಅರ್ವಾಚೀನ ಸಾಹಿತಿಗಳು ಇತಿಹಾಸ ಗ್ರಂಥಗಳೊಳಗಿನ ವ್ಯಕ್ತಿನಾಮಗಳನ್ನು ಮತ್ತು ಘಟನೆಗಳನ್ನು ಆಯ್ದುಕೊಂಡು ಚೆಲೋ ಉಪನ್ಯಾಸಗಳನ್ನು ರಚಿಸುವಂತೆಯೇ ಮಹಾಭಾರತಕಾರನು ವೈದಿಕ ಗ್ರಂಥಗಳೊಳಗಿನ ಕಥೆಗಳನ್ನು ಆಯ್ದುಕೊಂಡು ಮಹಾಭಾರತವೆಂಬ ಕಾವ್ಯವನ್ನು ರಚಿಸಿದ್ದನೆಂದು ಸ್ಪಷ್ಟವಾಗಿ ಗೊತ್ತಾಗುತ್ತದೆ.

ತತೋಽಭಿಷಿಕ್ತೇ ಕೌರವ್ಯೇ ವನಂ ದೇವಾಪಿರಾವಿಶತ್। ನ ವವರ್ಷಾಥ ಪರ್ಜನ್ಯೋ ರಾಷ್ಟ್ರೇ ದ್ವಾದಶ ವೈ ಸಮಾಃ ॥ ೨ ॥ ತತೋಽಭ್ಯಗಚ್ಛದ್ದೇವಾಪಿಂ ಪ್ರಜಾಭಿಃ ಸಹ ಶಂತನುಃ ಪ್ರಸಾದಯಾಮಾಸ ಚೈನಂ ತಸ್ಮಿನ್ ಧರ್ಮವ್ಯತಿಕ್ರಮೇ। ॥೩॥ ಶಿಶಿಕ್ಷ ಚೈನಂ ರಾಜ್ಯೇನ ಪ್ರಜಾಭಿಃ ಸಹಿತಸ್ತದಾ। ತಮುವಾಚ ದೇವಾಪಿಃ ಪ್ರಹ್ವಂತು ಪ್ರಾಂಜಲಿಂ ಸ್ಥಿತಮ್ ॥ ೪ ॥ ನ ರಾಜ್ಯಮರ್ಹಾಮಿ ತ್ವಗ್ದೋಷೋಪಹತೇಂದ್ರಿಯಃ। ಯಾಜಯಿಷ್ಯಾಮಿ ತೇ ರಾಜನ್ವೃಷ್ಟಿಕಾಮೇಜ್ಯಯಾ ಸ್ವಯಮ್ ॥೫॥ ತತಸ್ತಂ ಪುರೋಧತ್ತ ಆರ್ತ್ವಿಜಾಯ ಸ ಶಂತನುಃ ॥೬॥

[1] ವನಪರ್ವ. ಅಧ್ಯಾಯ-೧೫೭-೬ ಮತ್ತು ೧೫೮-೧೦೩.

ಮಹಾಭಾರತದೊಳಗಿನ ಶಾಂತನುವಿನ ಪುತ್ರನಾದ ವಿಚಿತ್ರವೀರ್ಯನು ಸತ್ತುದರಿಂದ ಅವನ ಪತ್ನಿಯಲ್ಲಿ ಕೃಷ್ಣದ್ವೈಪಾಯನನಿಂದ ಹುಟ್ಟಿದ ಧೃತರಾಷ್ಟ್ರನ ಹೆಸರು ಕೂಡ- ಅಂದರೆ "ಧೃತರಾಷ್ಟ್ರವೈಚಿತ್ರ ವೀರ್ಯ" ಎಂಬ ಶಬ್ದವು ಕೂಡ ಯಜುರ್ವೇದದ ಕಾಠಕ ಸಂಹಿತೆಯಲ್ಲಿ (೧೦-೬) ಇದ್ದುದೇ ಆಗಿದೆ. ಅದರಲ್ಲಿ ಧೃತರಾಷ್ಟ್ರವೈಚಿತ್ರವೀರ್ಯನಿಗೂ ವಕದಾಲ್ಭ ಎಂಬವನಿಗೂ ವಾದ-ಪ್ರತಿವಾದ ನಡೆದ ವಿವರವಿದೆ. ಅದರೊಳಗಿನ ವಕದಾಲ್ಭಿಯು ಮಹಾಭಾರತ ಕಾವ್ಯದಲ್ಲಿ ವಕದಾಲ್ಭ್ಯನಾಗಿ ಮಾರ್ಪಟ್ಟಿದ್ದಾನೆ. ಮತ್ತು ಆ ವಕದಾಲ್ಭ್ಯನು ಧೃತರಾಷ್ಟ್ರನಲ್ಲಿ ದಕ್ಷಿಣೆಯ ರೂಪದಿಂದ ಪಶುಗಳನ್ನು ಯಾಚಿಸಿದಾಗ ಧೃತರಾಷ್ಟ್ರನು ಅವನನ್ನು ಬ್ರಹ್ಮ ಬಂಧುವೆಂದು ಹೀಯಾಳಿಸಿ ಅಲ್ಲಿ ಸತ್ತು ಬಿದ್ದಿರುವ ಗೋವುಗಳನ್ನು ಒಯ್ದು ಅವುಗಳ ಮಾಂಸದಿಂದ ಯಜ್ಞಮಾಡೆಂದು ಹೇಳಿದುದರಿಂದ ವಕದಾಲ್ಭ್ಯನು ಕ್ರುದ್ಧನಾಗಿ ಧೃತರಾಷ್ಟ್ರನ ರಾಷ್ಟ್ರವು ನಾಶವಾಗಲಿ ಎಂದುಚ್ಚರಿಸುತ್ತ ಪ್ರದೀಪ್ತನಾದ ಅಗ್ನಿಯಲ್ಲಿ ಸತ್ತಗೋವುಗಳ ಮಾಂಸವನ್ನು ಆಹುತಿಯಾಗಿ ಅರ್ಪಿಸಿದುದರಿಂದ ಧೃತರಾಷ್ಟ್ರನ ರಾಷ್ಟ್ರವು ಕ್ಷೀಣಿಸತೊಡಗಿತೆಂದು ವರ್ಣಿಸಿದೆ.[1]

ಮಹಾಭಾರತದಲ್ಲಿ ಪರಾಶರನು ವಸಿಷ್ಠ ಋಷಿಯ ಪುತ್ರನಾದ ಶಕ್ತಿಯ ಪುತ್ರನಾಗಿದ್ದಾನೆ. ಅಂದರೆ ವಸಿಷ್ಠನ ಪೌತ್ರನಾಗಿದ್ದಾನೆ. ಆದರೆ ಇದು ಅಪ್ಪಟ ಕಲ್ಪನೆಯಾಗಿದೆ. ವಸಿಷ್ಠನು ಋಗ್ವೇದದೊಳಗಿನ ಋಷಿಯಾಗಿದ್ದಾನೆ. ಮತ್ತು ಋಗ್ವೇದದಲ್ಲಿ ವಸಿಷ್ಠನ ಪಿತನಾರು, ಪತ್ನಿಯಾವಳು, ಪುತ್ರಯಾವನು- ಎಂಬುದನ್ನು ತಿಳಿಸುವ ಯಾವ ವಿವರಗಳೂ ಇಲ್ಲ. ಅಲ್ಲದೇ ಋಗ್ವೇದದಲ್ಲಿ ವಸಿಷ್ಠ ಎಂಬ ಶಬ್ದವು ಅಪ್ಸರೆಯಾದ ಉರ್ವಶಿಯಿಂದ ಅಂದರೆ ದಿವ್ಯಜಲಗಳಲ್ಲಿ ಸರಿದಾಡುವ ವಿದ್ಯುತ್ತಿನಿಂದ ಸಿಡಿದ ಸಿಡಿಲಿನ ಮತ್ತು ಸಿಡಿಲು ಬಡಿದು ಉಂಟಾದ ಅಗ್ನಿಯ ಹೆಸರಾಗಿಯೂ ಒಬ್ಬ ಋಷಿಯ ಹೆಸರಾಗಿಯೂ ಪ್ರಯುಕ್ತವಾಗಿದೆ. ಮತ್ತು ಮಿತ್ರ ಹಾಗೂ ವರುಣ ಎಂಬಿಬ್ಬರು ವಿದ್ಯುತ್ತಿನಿಂದ ಸಿಡಿದ ಸಿಡಿಲನ್ನು ಕಂಡವರಾದುದರಿಂದ ಸಿಡಿಲಿನಿಂದ ಹುಟ್ಟಿದ ವಸಿಷ್ಠನಿಗೆ ಅಥವಾ ಅಗ್ನಿಗೆ ಮೈತ್ರಾವರುಣ ಎಂಬ ಹೆಸರು ಬಂದಿದೆ. ಅದನ್ನು ತಿಳಿದುಕೊಳ್ಳಲಾರದ ತರುವಾಯದ ಆಚಾರ್ಯರು ವಸಿಷ್ಠ ಋಷಿಯ ಹುಟ್ಟಿನ ಸಂಬಂಧದಲ್ಲಿ ಹಲವು ಕಥೆಗಳನ್ನು ಕಟ್ಟಿದ್ದಾರೆ. ಹೇಗಿದ್ದರೂ ಋಗ್ವೇದದಲ್ಲಿ ವಸಿಷ್ಠಋಷಿಯ ಪಾರಿವಾರಿಕ ಉಲ್ಲೇಖವು "ವಸಿಷ್ಠಾಃ" ಎಂಬ ಬಹುವಚನದ ಹೊರತು ಬೇರಾವುದೂ ಇಲ್ಲ.

ಋಗ್ವೇದದ ೭-೧೮-೨೧ನೆಯ ಋಚೆಯಲ್ಲಿ "ಪರಾಶರ, ಶತಾಯು ಮತ್ತು ವಸಿಷ್ಠ"[2] ಎಂಬ ಮೂರು ಹೆಸರುಗಳು ಒಟ್ಟಿಗೆ ಬಂದಿವೆ. ಆದರೆ ಅಲ್ಲಿ

---

[1] ಶಲ್ಯ ಪರ್ವ ಅಧ್ಯಾಯ ೪೧.

[2] ಪ್ರಯೇಗೃಹಾದಮಮದುಸ್ತ್ವಾಯಾ ಪರಾಶರಃ ಶತಯಾತುರ್ವಸಿಷ್ಠಃ॥

ಪರಾಶರನು ಯಾರೆಂದು ತಿಳಿಸುವ ಯಾವ ಸೂಚನೆಯೂ ಇಲ್ಲ. ಮತ್ತು ಋಗ್ವೇದದಲ್ಲಿ ಶಕ್ತಿ ಎಂಬ ಮನುಷ್ಯನ ಉಲ್ಲೇಖವೂ ಇಲ್ಲ. ಹಾಗಿದ್ದರೂ ನಿರುಕ್ತಕಾರನಾದ ಯಾಸ್ಕನು ಆ ಋಚೆಯ ವ್ಯಾಖ್ಯೆ ಮಾಡುವ ಸಂದರ್ಭದಲ್ಲಿ **"ಪರಾಶರಃ ಪರಾಶೀರ್ಣಸ್ಯ ಸ್ಥವಿರಸ್ಯಜಜ್ಞೇ ॥ ೬-೬ ॥** ಅಂದರೆ "ಪರಾಶರನು ದುರ್ಗುಣನಾಶಕನಾದ ಮುದುಕ ವಸಿಷ್ಠನಿಗೆ ಹುಟ್ಟಿದ್ದನು" ಎಂದು ಹೇಳಿದ್ದಾನೆ. ಅದರ ಪ್ರಕಾರ ಪರಾಶರನು ವಸಿಷ್ಠನ ಪುತ್ರನಾಗಿದ್ದಾನೆ. ಯಾಸ್ಕನ ತರುವಾಯದವನಾದ ಆಚಾರ್ಯ ಶೌನಕನು ತನ್ನ "ಬೃಹದ್ದೇವತಾ ಗ್ರಂಥದಲ್ಲಿ "ಸುದಾಸನ ಮಹಾಯಜ್ಞದಲ್ಲಿ ಶಕ್ತಿಯು ವಿಶ್ವಾಮಿತ್ರನನ್ನು ಪ್ರಜ್ಞಾಹೀನನಾಗುವಂತೆ ಮಾಡಿದನು"[1] ಎಂಬುದಾಗಿ ಒಂದು ಕಥೆ ಹೇಳಿದ್ದಾನೆ. ಆದರೆ ಅದರಲ್ಲಿ ಶಕ್ತಿಯು ಯಾರು? ಎಂಬ ವಿವರವಿಲ್ಲ. ಅಂದರೆ "ಶಕ್ತಿ" ಎಂಬ ಹೆಸರಿನ ಮೊತ್ತ ಮೊದಲಿನ ಉಲ್ಲೇಖವು ಬೃಹದ್ದೇವತಾ ಗ್ರಂಥದಲ್ಲಿದೆ. ಅದರ ತರುವಾಯದ ಜೈಮಿನೀಯ ಬ್ರಾಹ್ಮಣದಲ್ಲಿ ಶಕ್ತಿಯು ವಸಿಷ್ಠನ ಪುತ್ರನಾಗಿ ಮಾರ್ಪಟ್ಟಿದ್ದಾನೆ. ಮತ್ತು ನಿರುಕ್ತದಲ್ಲಿ ವಸಿಷ್ಠನ ಪುತ್ರನಾಗಿದ್ದ ಪರಾಶರನು ಮಹಾಭಾರತದಲ್ಲಿ ಸೇರುವಾಗ ಜೈಮಿನೀಯ ಬ್ರಾಹ್ಮಣದೊಳಗಿನ ವಸಿಷ್ಠನ ಪುತ್ರನಾದ ಶಕ್ತಿಯ ಪುತ್ರನಾಗಿ ಮಾರ್ಪಡುತ್ತಾನೆ. ಹಿಂದಿನ ವಿವರಗಳಿಂದ ಯಾವುದೊಂದು ವೇದ ಮೂಲದ ಕಥೆಯು ಮಹಾಭಾರತದಲ್ಲಿ ಸೇರಬೇಕಾದರೆ ಎಷ್ಟು ಹಂತಗಳನ್ನು ದಾಟಿತ್ತು ಅಥವಾ ಎಂಥೆಂಥ ರೂಪಾಂತರಗಳನ್ನು ಹೊಂದಿತ್ತು ಎಂಬುದು ಸ್ಪಷ್ಟವಾಗುತ್ತದೆ. ಅರ್ಥಾತ್ ಹಿಂದೆ ವಿವರಿಸಿದ ಅಂಶಗಳು ವೈದಿಕ ಗ್ರಂಥಗಳ ಅಧ್ಯಯನದಿಂದ ತಿಳಿದು ಬರುವಂಥವುಗಳಾಗಿವೆ. ಮತ್ತು ಅವುಗಳು ಮಹಾಭಾರತ ಕಾವ್ಯದೊಳಗೆ ಅಡಕವಾಗಿರುವ ಕಥಾಸಮುದ್ರದೊಳಗಿನ ಒಂದು ಬಿಂದುವಿನಷ್ಟು ಮಾತ್ರ ಆಗಿವೆ. ಮುಂದೆ ವೈದಿಕೋತ್ತರ ಕಾಲದ ಇತಿಹಾಸಕ್ಕೆ ಸಂಬಂಧಪಟ್ಟ ವಿಷಯಗಳು ಚರ್ಚಿಸಲ್ಪಡುವುವು–

೧. ಮಹಾಭಾರತದ ಆದಿಪರ್ವದ ೧೩೮ನೆಯ ಅಧ್ಯಾಯದಲ್ಲಿ 'ಅರ್ಜುನನು ವೀರನಾದ ಪಾಂಡುವಿನಿಂದ ಕೂಡ ವಶಕ್ಕೆ ತರಲಾಗದಿದ್ದ ಯವನರಾಜನನ್ನು ವಶಕ್ಕೆ ತಂದನು"[2] ಎಂಬ ವರ್ಣನೆ ಇದೆ.

೨. ಮುಂದೆ ೧೭೪ನೆಯ ಅಧ್ಯಾಯದಲ್ಲಿ ಬಂದಿರುವ ವಸಿಷ್ಠ ಮತ್ತು ವಿಶ್ವಾಮಿತ್ರರೊಳಗೆ ಜರುಗಿದ ಕಲಹದ ಕಥೆಯಲ್ಲಿ ವಸಿಷ್ಠನ ಕಾಮಧೇನುವಾಗಿದ್ದ ನಂದಿನಿಯು ಶರೀರದ ಬೇರೆ ಬೇರೆ ಅವಯವಗಳಿಂದ ಮತ್ತು ಇಂದ್ರಿಯಗಳಿಂದ

---

[1] ಸುದಾಸಸ್ಯಮಹಾಯಜ್ಞೇ ಶಕ್ತಿನಾ ಗಾಥಿಸೂನವೇ। ನಿಗೃಹೀತಂಬಲಾಚ್ಚೇತಃ ಸೋऽವಸಿದದ್ವಿಚೇತಸಃ ॥೪-೧೧೨॥

[2] ಸ ಶ ಶಾಕ ವಶೇ ಕರ್ತುಂ ಯಂ ಪಾಂಡುರಪಿ ವೀರ್ಯವಾನ್ ।
ಸೋऽರ್ಜುನೇನ ವಶಂ ನೀತೋ ರಾಜಾऽऽಸೀದ್ ಯವನಾಧಿಪ ॥ ೧೩೮–೨೧ ॥

ಯವನರು ಶಕರು, ದ್ರವಿಡರು, ಶಬರರು ಪುಲಿಂದರು, ಚೀನೀಯರು ಮತ್ತು ಹೂಣ ಮೊದಲಾದ ಜನರು ಹುಟ್ಟಿದರೆಂದು ವರ್ಣಿಸಿದೆ[1]

೩. ಮುಂದೆ ಸಭಾಪರ್ವದ ೩೨ನೆಯ ಅಧ್ಯಾಯದಲ್ಲಿ – ಯುಧಿಷ್ಠಿರನು ರಾಜಸೂಯ ಯಜ್ಞ ಜರಗಿಸುವುದೆಂದು ನಿರ್ಧರಿಸಿದಾಗ ಆ ಯಜ್ಞದ ಅಂಗವಾಗಿ ದಿಗ್ವಿಜಯಕ್ಕೆ ಹೊರಟ ನಕುಲನು – ಪಶ್ಚಿಮ ದಿಕ್ಕಿನಲ್ಲಿ ಆಳುತ್ತಿದ್ದ ಹಾರಹೂಣ ಮೊದಲಾದ ರಾಜರನ್ನು ಜಯಿಸಿದನೆಂಬ ವರ್ಣನೆ ಇದೆ.[2]

೪. ಮುಂದೆ ಭೀಷ್ಮಪರ್ವದ ಒಂಭತ್ತನೆಯ ಅಧ್ಯಾಯದಲ್ಲಿ ಕೂಡ ಭಾರತ ವರ್ಷದೊಳಗಿನ ದೇಶ ಮತ್ತು ಜನಪದಗಳ ವರ್ಣನೆಯಲ್ಲಿ ಯವನರ ಮತ್ತು ಹೂಣರ ಉಲ್ಲೇಖಗಳಿವೆ.[3] ಆ ಉಲ್ಲೇಖಗಳಿಂದ ಯವನರ ಮತ್ತು ಹೂಣರ ರಾಜ್ಯಗಳು ಭಾರತವರ್ಷದಲ್ಲಿಯೇ ಇದ್ದುವೆಂದು ಸಿದ್ಧವಾಗುತ್ತದೆ.

೫. ಮಹಾಭಾರತದ ಆದಿಪರ್ವದ ಮೊದಲನೆಯ ಅಧ್ಯಾಯದಲ್ಲಿ **"ಗ್ರಹ ನಕ್ಷತ್ರತಾರಾಣಾಂ ಪ್ರಮಾಣಂ ಚ ಯುಗೈಃ ಸಹ ॥೬೬॥** ಎಂಬ ಶ್ಲೋಕವಿದೆ· ಮತ್ತು ಅದಕ್ಕನುಸಾರವಾಗಿ ಮುಂದೆ ಸಭಾಪರ್ವದ ೧೧ನೆಯ ಅಧ್ಯಾಯದಲ್ಲಿ "ಶುಕ್ರ, ಬೃಹಸ್ಪತಿ, ಬುಧ, ಅಂಗಾರಕ, ಶನಿ ಮತ್ತು ರಾಹು ಎಂಬ ಗ್ರಹಗಳ ಹೆಸರುಗಳೂ (ಶ್ಲೋಕ ೨೯) ವನಪರ್ವದ ೧೮೮ನೆಯ ಅಧ್ಯಾಯದಲ್ಲಿ ೫ನೆಯ ಶ್ಲೋಕದಿಂದ ಕೃತ, ತ್ರೇತಾ, ದ್ವಾಪರ ಮತ್ತು ಕಲಿ ಎಂಬ ಹೆಸರಿನ ನಾಲ್ಕು ಯುಗ ಗಳ ಉಲ್ಲೇಖಗಳೂ ಆ ಯುಗಗಳಿಗೆ ಅನುಕ್ರಮವಾಗಿ ಸಂಧಿ ಮತ್ತು ಸಂಧ್ಯಾಂಶಗಳು ಕೂಡಿ ೪೮೦೦; ೩೬೦೦; ೨೪೦೦ಮತ್ತು ೧೨೦೦ ವರ್ಷಗಳೆಂಬ ಹಾಗೂ ಅಂಥ ಒಂದು ಸಹಸ್ರಚತುರ್ಯುಗಗಳಿಗೆ ಬ್ರಹ್ಮನ ಒಂದು ದಿನ ಎಂಬ ಕಾಲಮಾನಗಳ ಉಲ್ಲೇಖವೂ ಮುಂದೆ ಬೇರೆ ಬೇರೆ ಪರ್ವಗಳಲ್ಲಿ ಮನ್ವಂತರಗಳೆಂಬ ಮತ್ತು ಕಲ್ಪ ಎಂಬ ಕಾಲ ಮಾನಗಳ ಉಲ್ಲೇಖಗಳೂ ಇವೆ· ಹಾಗೆಯೇ ಬೇರೆ ಬೇರೆ ಪರ್ವಗಳಲ್ಲಿ ಕೆಲವು ಗ್ರಹಗಳ ತಾಯಿ–ತಂದೆಗಳ ಹೆಸರುಗಳೂ. ಅವುಗಳು ಹುಟ್ಟಿದ ರೀತಿಯೂ ವರ್ಣಿಸಲ್ಪಟ್ಟಿದೆ.

೬. ಆದಿಪರ್ವದ ೭೧ನೆಯ ಅಧ್ಯಾಯದ ೩೪ನೆಯ ಶ್ಲೋಕದಲ್ಲಿ ಇಂದ್ರನು

---

[1] ಅಸೃಜತ್‌ಪಹ್ಲವಾನ್ ಪ್ರಚ್ಛಾತ್ ಪ್ರಸ್ರವಾದ್ ದ್ರವಿಡಾಞ್‌ಛಕಾನ್।
ಯೋನಿದೇಶಾಚ್ಚ ಯವನಾಞ್‌ಛಕೃತಃ ಶಬರಾನ್ ಬಹೂನ್ ॥೧೭೪-೩೬॥
ಚಿಬುಕಾಂಶ್ಚ ಪುಲಿಂದಾಶ್ಚ ಚೀನಾನ್ ಹೂಣಾನ್ ಸ ಕೇರಲಾನ್ ॥ ೩೮ ॥

[2] ರಾಮಠಾನ್ ಹಾರ ಹೂಣಾಂಶ್ಚ ಪ್ರತೀಚ್ಯಾಶ್ಚೈವ ಯೇ ನೃಪಾಃ ॥ಸಭಾ. ೩೨-೧೨॥

[3] ಯವನಾಶ್ಚೀನ ಕಾಂಭೋಜಾ ದಾರುಣಾಮ್ಲೇಚ್ಛಜಾತಯಃ ॥ ೯–೬೫॥
ಸಕೃದ್ ಗ್ರಹಾಃ ಕುಲತ್ಥಾಶ್ಚ ಹೂಣಾಃ ಪಾರಸಿಕೈಃ ಸಹ ॥೯-೬೬॥

ತ್ರಿಶಂಕುವಿಗೆ ಸ್ವರ್ಗದಲ್ಲಿ ಸ್ಥಾನ ಕೊಡಲಿಲ್ಲವೆಂದು ಕುಪಿತನಾದ. ವಿಶ್ವಾಮಿತ್ರನು ತ್ರಿಶಂಕುವಿಗಾಗಿ ಬೇರೆಯೇ ಒಂದು ಸ್ವರ್ಗಲೋಕವನ್ನೂ ಶ್ರವಣಾದಿಂದ ಪ್ರಾರಂಭವಾಗುವ ನಕ್ಷತ್ರಮಾಲೆಯನ್ನೂ ಸೃಷ್ಟಿಸಿದನೆಂದು ಹೇಳಿದೆಯಲ್ಲದೇ ಅಶ್ವಮೇಧ ಪರ್ವದ ೪೪ನೆಯ ಅಧ್ಯಾಯದಲ್ಲಿ ದಿನದಲ್ಲಿ ಹಗಲು ಮೊದಲು ಇರುಳು ತರುವಾಯವೆಂತಲೂ ತಿಂಗಳಲ್ಲಿ ಶುಕ್ಲಪಕ್ಷ ಮೊದಲೆಂತಲೂ ಋತುಗಳಲ್ಲಿ ಶಿಶಿರ ಮೊದಲೆಂತಲೂ ನಕ್ಷತ್ರಗಳಲ್ಲಿ ಶ್ರವಣಾ ಮೊದಲೆಂತಲೂ ಹೇಳಿದೆ. (ಶ್ಲೋಕ ೨)

೭. ಹಾಗೆಯೇ ಆದಿಪರ್ವದ ಮೊದಲನೆಯ ಅಧ್ಯಾಯದಲ್ಲಿ ವೇದವ್ಯಾಸನು ಮನಸ್ಸಿನಲ್ಲಿ ಕಲ್ಪಿಸಿ ಹೇಳುತಿದ್ದ ಮಹಾಭಾರತಕಾವ್ಯದ ಶ್ಲೋಕಗಳನ್ನು ಗಣನಾಯಕನಾದ ಗಣೇಶನು ಅರ್ಥಮಾಡಿ ಬರೆದುಕೊಳ್ಳುತಿದ್ದನೆಂದು ಹೇಳಿದೆ.

ಹಿಂದೆ ಉದಹರಿಸಿದ ಏಳು ಅಂಶಗಳು ಐತಿಹಾಸಿಕ ಘಟನೆಗಳಿಗೆ ಸಂಬಂಧಿಸಿದವುಗಳಾಗಿರುವುದರಿಂದ ಐತಿಹಾಸಿಕ ಪ್ರಮಾಣಗಳ ಆಧಾರದಿಂದ ಮಹಾಭಾರತ ಕಾವ್ಯದ ರಚನಾಕಾಲವನ್ನು ನಿರ್ಧರಿಸುವಲ್ಲಿ ತುಂಬಾ ಸಹಾಯ ಮಾಡುತ್ತವೆ. ಆದುದರಿಂದ ಆ ಉಲ್ಲೇಖಗಳಿಗೆ ಸಂಬಂಧಿಸಿದ ಐತಿಹಾಸಿಕ ವಿವರಗಳು ಮುಂದೆ ಕೊಡಲಾಗುವವು.

ಶಕರು, ಪಾರಸೀಕರು, ಪಹ್ಲವರು ಮತ್ತು ಯವನರು ಭಾರತೀಯರಿಗೆ ಬಹಳ ಪ್ರಾಚೀನ ಕಾಲದಿಂದಲೇ ಪರಿಚಿತರಾಗಿದ್ದರಾದರೂ ಶಕಪೂರ್ವ ಮೂರನೆಯ ಶತಮಾನಕ್ಕಿಂತ ಮೊದಲು ಭಾರತವರ್ಷದಲ್ಲಿ ಯಾವನೊಬ್ಬ ಯವನನೂ ರಾಜನಾಗಿ ಆಳಿರಲಿಲ್ಲ. ಶಕಪೂರ್ವ ೪೦೪ರಲ್ಲಿ ಯವನರಾಜಕುಮಾರ ಅಲೆಕ್ಸಾಂಡರನು-ತಕ್ಷಶಿಲೆಯ ಅರಸನಾಗಿದ್ದ ಆಂಭಿಯೂ ಮತ್ತುವಾಯುವ್ಯ ಸೀಮಾಪ್ರಾಂತದ ಮೌರ್ಯ ರಾಜಕುಮಾರ ಚಂದ್ರಗುಪ್ತನು ಕೂಡಿ ಪಂಜಾಬದ ಅರಸನಾಗಿದ್ದ ಪೌರವನ ಸೇನಾಬಲವನ್ನು ಮುರಿಯಲು ಹೂಡಿದ ಸಂಚಿಗೆ ಸೇರಿ ತನ್ನ ಸೈನ್ಯದೊಂದಿಗೆ ಭಾರತವರ್ಷದೊಳಗೆ ಬಂದಿದ್ದಾಗ ಅವನಿಗೆ ಸಿಂಧೂನಗರದ ಪಶ್ಚಿಮ ದಂಡೆಯಲ್ಲಿನ ಎರಡು ಪ್ರದೇಶಗಳು ದೊರಕಿದ್ದುವು. ಆದರೆ ಅಲೆಕ್ಸಾಂಡರನು ಆ ಪ್ರದೇಶಗಳನ್ನು ಆಳಲು ಭಾರತ ವರ್ಷದಲ್ಲಿ ನೆಲಸದೇ ಅವುಗಳನ್ನು ಆಳಲು ಇಬ್ಬರು ಸೇನಾಧಿಕಾರಿಗಳನ್ನು ನೇಮಿಸಿ ಹೊರಟು ಹೋಗಿದ್ದನು. ಮತ್ತು ಅವನು ಹೊರಟು ಹೋದ ಮೂರೇ ವರ್ಷಗಳೊಳಗೆ–ಮಗಧ ಚಕ್ರವರ್ತಿಯಾಗಿದ್ದ ಚಂದ್ರಗುಪ್ತನು ಆ ಎರಡು ಪ್ರದೇಶಗಳನ್ನೂ ಯವನ ಸೇನಾಧಿಕಾರಿಗಳಿಂದ ಕಸಿದುಕೊಂಡು ತನ್ನ ಸಾಮ್ರಾಜ್ಯದಲ್ಲಿ ಸೇರಿಸಿದ್ದನು. ಆ ಪ್ರಕಾರವಾಗಿ ಭಾರತವರ್ಷದ ಎರಡು ಪ್ರದೇಶಗಳ ಮೇಲಿದ್ದ ಯವನರ ಅಧಿಕಾರವು ಅಲ್ಪಕಾಲದಲ್ಲಿಯೇ ಕೊನೆಗೊಂಡಿತ್ತು.

ಅದರ ತರುವಾಯ ಅಂದರೆ ಶಕಪೂರ್ವ ೨೫೦ನೆಯ ವರ್ಷದಲ್ಲಿ ಬಾಹ್ಲೀಕ

ದೇಶದ ಯವನರಾಜನಾಗಿದ್ದ ದೇಮೇತ್ರಿಯುಸ್ ಎಂಬವನು ತನ್ನ ಸೈನ್ಯದೊಂದಿಗೆ ಬಂದು ಭಾರತವರ್ಷವನ್ನು ಆಕ್ರಮಿಸಿ ಪಂಜಾಬವನ್ನೂ ಸೌವೀರ ಪ್ರಾಂತವನ್ನೂ ಜಯಿಸಿ ಅಲ್ಲಿ ರಾಜನಾಗಿ ಆಳಿದ್ದನು. ಮತ್ತು ಅವನೇ ಭಾರತವರ್ಷದಲ್ಲಿ ಆಳಿದ ಮೊತ್ತಮೊದಲಿನ ಯವನ ರಾಜನಾಗಿದ್ದನು.[1] ಅವನು ಚಲಾಯಿಸಿದ ನಾಣ್ಯಗಳ ಮೇಲೆ ಯವನಾನೀ ಲಿಪಿಯಿಂದ "ಬೆಸಿಲಿಯೋಸ್ ಅನಿಕೇತೋಯ್ ದೇಮೇತ್ರಿಯುಸ" ಎಂತಲೂ ಖರೋಷ್ಠೀಲಿಪಿಯಿಂದ "ಮಹರಜಸ ಅಪರಜಿತಸ ದೇಮೇತ್ರಿಯುಸ" ಎಂತಲೂ ಬರವಣಿಗೆ ಇದೆ. ಅವನ ತರುವಾಯ ಸಾಧಾರಣ ಮೂವತ್ತು ಮಂದಿ ಯವನರಾಜರು ಪಶ್ಚಿಮ ಭಾರತದಲ್ಲಿ ಆಳಿದ್ದರೆಂಬುದರ ಪ್ರಮಾಣವಾಗಿ ಅವರ ಹೆಸರುಗಳಿರುವ ನಾಣ್ಯಗಳು ದೊರಕಿವೆಯಾದರೂ[2] ಅವರ ಸರಿಯಾದ ಇತಿಹಾಸ ತಿಳಿದುಬಂದಿಲ್ಲ. ಹಾಗಿದ್ದರೂ ಶಕಪೂರ್ವ ೧೭೫ನೆಯ ವರ್ಷದಿಂದ ತಕ್ಷಶಿಲೆಯಲ್ಲಿ ಆಳತೊಡಗಿದ ಯವನರಾಜ ಅಂತಿಯಾಲ್ಕಿಡಸ್ ಎಂಬವನ ಕೆಲವು ವಿವರಗಳು ತಿಳಿದು ಬಂದಿವೆ. ಮತ್ತು ಅವುಗಳು ಅತ್ಯಂತ ಮುಖ್ಯವಾಗಿವೆ. ಅವನ ಆಸ್ಥಾನದಲ್ಲಿ ಹೆಲಿಯೋಡೊರಸ್ ಎಂಬ ವಿದ್ವಾಂಸನಿದ್ದನು. ಅವನು ವಿಷ್ಣುವಿನ ಮಹಾಭಕ್ತನಾಗಿದ್ದನು ಅಥವಾ ಭಾಗವತನಾಗಿದ್ದನು. ಅವನು ಶಕಪೂರ್ವ ೧೬೮ನೆಯ ವರ್ಷದಲ್ಲಿ ತನ್ನ ಅರಸನ ದೂತನಾಗಿ ವಿದಿಶೆಯ ಅರಸನಾದ ಶುಂಗವಂಶದ ಕೌತ್ಸೀಪುತ್ರ ಭಾಗಭದ್ರನ ಆಸ್ಥಾನಕ್ಕೆ ಬಂದಿದ್ದನು. ಅವನು ತನ್ನ ಆರಾಧ್ಯ ದೇವನಾದ ವಾಸುದೇವನ ಸಮ್ಮಾನಾರ್ಥವಾಗಿ ವಿದಿಶೆಯಲ್ಲಿ ಒಂದು ಗರುಡಧ್ವಜವನ್ನು ಅಂದರೆ ತಲೆಯ ಮೇಲೆ ಗರುಡಪಕ್ಷಿಯ (Eagle) ಪ್ರತಿಕೃತಿಯಿರುವ ದೊಡ್ಡ ಶಿಲಾಸ್ತಂಭವನ್ನು ನಿಲ್ಲಿಸಿದ್ದನು. ಆ ಕಂಭದಲ್ಲಿರುವ ಬ್ರಾಹ್ಮೀಲೇಖದಲ್ಲಿ ಮುಂದಿನ ವಿವರಗಳಿವೆ—

"ದೇವದೇವಸ ವಾಸುದೇವಸ ಗರುಡಧ್ವಜೇ ಅಯಂ ಕಾರಿತೇ ಇ ಅ ಹೇಲಿಯೋದೋರೇಣ ಭಾಗವತೇನ ದಿಯಸ ಪುತ್ರೇಣ ತಖ್ಖಸಿಲಾಕೇನ ಯೋನ

---

1. Demetrius, the fourth king of Bactria, and son of Euthydemons became so powerful that he was able to subdue all Arian or Afghanistan and even to annex considerable territories in the Panjab and western India. Hence he was known as king of Indians. Oxford History of India page 123.

Demetrius I made raids into Kabul and upper Indus Valleys and was the first Yavana king to strike square coins on the Indian model. A History of Indian page 116 by K. A. N. Sastri M. A.

[1] Ancient India p. 222 by V. D. Mahajan M. A.

ದೂತೇನ ಆಗತೇನ ಮಹಾ ರಾಜಸ ಅಂತಿಲಿಕಿತಸ ಉಪಂತಾ ಸಕಾಸಂ ರಞೋ ಕೋಸೀಪುತ್ರಸ ಭಾಗಭದ್ರಸ ತ್ರಾತಾರಸ ವಸೇನ ಚತುದಸೇನ ರಾಜೇನ ವಧ ಮಾನಸ ॥ ತ್ರಿನಿ ಅಮುತಪದಾನಿ ಇ ಅ ಸು ಅನುಠಿತಾನಿ ನೇಯಂತಿ ಸ್ವಗಂ ದಮ, ಚಾಗ, ಅಪ್ರಮಾದ ॥[1]

ಆ ಲೇಖದ ಮೇಲಿಂದ ಭಾರತವರ್ಷದಲ್ಲಿ ವಾಸುದೇವನ ಆರಾಧನೆಯು ಅಥವಾ ಭಕ್ತಿಪ್ರಧಾನವಾದ ಭಾಗವತ ಧರ್ಮವು ಸೂರ್ಯಾರಾಧಕರಾಗಿದ್ದ ಯುವನ ರಿಂದಲೇ ಪ್ರಚಲಿತವಾಗಿದ್ದಿತೆಂದು ಸ್ಪಷ್ಟವಾಗಿ ಸಿದ್ಧವಾಗುತ್ತದೆ. ಮತ್ತು ಭಾರತ ವರ್ಷದಲ್ಲಿ "ವಾಸುದೇವ" ಎಂಬ ಶಬ್ದದ ಮೊತ್ತಮೊದಲಿನ ಉಲ್ಲೇಖವು ಆ ಶಿಲಾಸ್ತಂಭದಲ್ಲಿನ ಲೇಖದಲ್ಲಿ ಮಾತ್ರ ಕಾಣ ಬರುವುದಾಗಿದೆ. ಹೇಗಿದ್ದರೂ ಶಕ ಪೂರ್ವ ಮೊದಲನೆಯ ಶತಮಾನದ ಆದಿ ಭಾಗದಲ್ಲಿ ಭಾರತವರ್ಷದೊಳಗಿನ ಯುವನರ ಆಳ್ವಿಕೆಯು ಕೊನೆಗೊಂಡಿತ್ತು.

ಹೆಲಿಯೋಡೊರೊಸನ ಪ್ರಭಾವದಿಂದ ವಿದಿಶೆಯ ರಾಜನ ಆಸ್ಥಾನದಲ್ಲಿ ಭಾಗವತ ಧರ್ಮವು ಮಾನ್ಯತೆ ಪಡೆಯಿತು. ಮತ್ತು ವಿದಿಶೆಯ ರಾಜನಾದ ಭಾಗ ಭದ್ರನು ತನ್ನ ರಾಜ್ಯದಲ್ಲಿ ಭಾಗವತಧರ್ಮದ ಪ್ರಚಾರಕ್ಕೆ ಪ್ರೋತ್ಸಾಹ ನೀಡಿದುದ

---

[1] Archaeological Survery of India, Annval Reports 1907-8 p. 126

The name Antialcidas has been found on an Indian monument. The inscription is on the Garuda Pillar at Besnagar near Bhilsa in the former Gwalior State. It was stated there that the columm was erected in honour of Vasudeva by the Yavana ambassador Helidorus, son of Dion, an inhabitant of Takshasila who had come from the Greek King Antialcidas, to King Kasiputra Bhagabhadra. Heliodorus is described in the inscription as a follower of Vishnu.

Ancient India p. 326 by V. D. Mahajan M. A.

The last king but one Bhaga or Bhagavata the Puranas was doubtless the Kasiputra Bhagabhadra, King of Vidisa, in the fourteenth year of whose reign the Garuda column of Besnagar was erected, by Meliodorus (son of Dion) the Yavana ambassador representing Antialcidas King of Takshasila at the Court of Vidisa The incription which would fall about 93 Bc. furnishes a valuable link between Sunga History and that of the Yavanas in India. A History of India p 107 byK A. N. Sastri M.A.

ರಿಂದ ಆ ಧರ್ಮವು ಅತ್ಯಂತ ಜನಪ್ರಿಯವಾಗಿ ಅವನ ಪ್ರಜೆಗಳು ಅವನನ್ನು ಕೂಡ ಭಾಗವತನೆಂದು ಕರೆಯತೊಡಗಿದರೆಂದೂ, ದೇವದೇವನಾದ ವಾಸುದೇವನ ಸಂಬಂಧದಲ್ಲಿ ಬಗೆಬಗೆಯ ಕಥೆಗಳು ಜನರಲ್ಲಿ ಪ್ರಚಲಿತವಾಗತೊಡಗಿದ್ದುವೆಂದೂ, ಜನರು ತಮ್ಮ ಮಕ್ಕಳಿಗೆ ವಾಸುದೇವ ಎಂಬ ಹೆಸರನ್ನಿಡತೊಡಗಿದ್ದರೆಂದೂ ಸಂದೇಹ ವಿಲ್ಲದೇ ಹೇಳಬಹುದು.

ಉದಾಹರಣೆಗೆ ಪೇಳುವುದಾದರೆ–ವಿದಿಶೆಯ ರಾಜನಾದ ಭಾಗಭದ್ರನ ಪುತ್ರನಾದ ದೇವಭೂತಿಯು ರಾಜ್ಯವನ್ನು ಆಳುತಿದ್ದಾಗ–ಅವನ ಮಂತ್ರಿಯು "ವಾಸುದೇವ" ಎಂಬ ಹೆಸರಿನ ಬ್ರಾಹ್ಮಣನಾಗಿದ್ದನು. ಹಾಗೆಯೇ ಶಕದ ಎರಡನೆಯ ಶತಮಾನದಲ್ಲಿ ಉತ್ತರ ಪ್ರದೇಶದ ಮಥುರೆಯಲ್ಲಿ ಆಳುತಿದ್ದ ಕುಷಾಣ ವಂಶದ ಶಕರಾಜನ ಹೆಸರು ಕೂಡ ವಾಸುದೇವನೆಂದಿತ್ತು. ಆದರ ಮೇಲಿಂದ ಆ ಕಾಲದ ರಾಜಕುಲದ ಜನರು ಭಾಗವತಧರ್ಮವನ್ನು ಸ್ವೀಕರಿಸಿ ಆ ಧರ್ಮದ ಪ್ರಚಾರಕ್ಕೆ ನೆರವು ನೀಡುತಿದ್ದರೆಂದು ಮತ್ತು ಅವರ ನೆರವಿನಿಂದ ಹಾಗೂ ಪ್ರೋತ್ಸಾಹದಿಂದ ಮಥುರಾ ಪಟ್ಟಣವು ಭಾಗವತ ಧರ್ಮದ ಕೇಂದ್ರವಾಗಿದ್ದಿತೆಂದು ಹೇಳಬಹುದು. ಮತ್ತು ಭಾಗವತ ಧರ್ಮವು ಜನಪ್ರಿಯವಾಗುತ್ತ ಸಾಗಿದಂತೆ ವಿಷ್ಣುವಿನ ಅವ ತಾರದ ಕಥೆಗಳೂ ರೂಪುಗೊಳ್ಳತೊಡಗಿದ್ದುವೆಂದು ಹೇಳಬಹುದು. ಹಿಂದಿನ ವಿವರ ಗಳಿಂದ ಭಾರತ ವರ್ಷದಲ್ಲಿ ಮೊತ್ತಮೊದಲು ರಾಜ್ಯವನ್ನು ಸ್ಥಾಪಿಸಿ ಆಳಿದ ಯವನ ರಾಜನಾರು, ಮತ್ತು ವಾಸುದೇವ ಎಂಬ ಹೆಸರು ಮತ್ತು ಆ ಹೆಸರಿನ ದೇವನ ಆರಾಧನೆಯು ಎಂದಿನಿಂದ ಪ್ರಚಲಿತವಾಯಿತು ಎಂಬುದು ಸ್ಪಷ್ಟವಾಗಿದೆ.

ಮಹಾಭಾರತದಲ್ಲಿ ಹೂಣ ಜನರ ಹಾಗೂ ಹೂಣ ರಾಜರ ಉಲ್ಲೇಖಗಳಿರು ವುದರಿಂದ ಭಾರತ ವರ್ಷದೊಳಗೆ ಹೂಣರ ರಾಜ್ಯವು ಸ್ಥಾಪಿತವಾದ ತರುವಾಯವೇ ಮಹಾಭಾರತ ಕಾವ್ಯವು ರಚಿಸಲ್ಪಟ್ಟಿದ್ದಿತೆಂಬುದರಲ್ಲಿ ಸಂದೇಹ ಉಳಿಯುವು ದಿಲ್ಲ. ಹೂಣರು ಮೂಲದಲ್ಲಿ ಭಾರತ ವರ್ಷದ ನಿವಾಸಿಗಳಲ್ಲ, ಮತ್ತು ಭಾರತೀಯರಿಗೆ ಶಕದ ನಾಲ್ಕನೆಯ ಶತಮಾನದ ಮಧ್ಯಕಾಲದ ತನಕ ಹೂಣರ ಪರಿಚಯವಿದ್ದಿತೆನ್ನಲಾಗುವುದಿಲ್ಲ. ಅಲ್ಲದೇ ಹೂಣರು ಯಾವ ವರ್ಗದ ಜನರೆಂದು ಕೂಡ ಈ ತನಕ ಸರಿಯಾಗಿ ತಿಳಿದು ಬಂದಿಲ್ಲ. ಈಗಿನ ಮಟ್ಟಿಗೆ–ಚೀನ ದೇಶದ ಉತ್ತರದಲ್ಲಿ ನೆಲಸಿದ್ದ ಹೂಣರು ಅಲ್ಲಿಂದ ಪಶ್ಚಿಮ ಪ್ರದೇಶಗಳಿಗೆ ಮುಂದು ವರಿದವರು ಶಕವರ್ಷ ೩೪೭ರಲ್ಲಿ ಬಾಹ್ಲೀಕದೇಶವನ್ನೂ, ಕಾಬೂಲ ಹಾಗೂ ಕಪಿಶಾ ಗಳ ಹಾದಿಯಿಂದ ಒಳನುಗ್ಗಿ ಭಾರತವರ್ಷದೊಳಗಿನ ಗಂಧಾರಪ್ರಾಂತವನ್ನೂ ಜಯಿಸಿ ಅಲ್ಲಿ ನೆಲಸಿದ್ದರೆಂದು ತಿಳಿದು ಬಂದಿದೆ. ತರುವಾಯ ಅವರು ಅಲ್ಲಿಂದ ಪೂರ್ವಕ್ಕೆ ಮುಂದುವರಿದು ಶಕವರ್ಷ ೩೭೨ರಲ್ಲಿ– ಚನಾಬ್ ನದಿಯ ತನಕ ಹರಡಿದ್ದ ಗುಪ್ತ ಸಾಮ್ರಾಜ್ಯದ ಮೇಲೆ ಆಕ್ರಮಣ ನಡೆಸಿ ಮಾಳವದ ಗಡಿಯ ತನಕ ಬಂದಿ

ದ್ದರು. ಆಗ ಗುಪ್ತಚಕ್ರವರ್ತಿಯಾಗಿದ್ದ ಕುಮಾರಗುಪ್ತನು ಮುದುಕನಾಗಿದ್ದನು. ಮತ್ತು ಯುವರಾಜನಾಗಿದ್ದ ಸ್ಕಂದಗುಪ್ತನು ನಿರಂತರವಾಗಿ ಹೋರಾಡಿ ಶಕವರ್ಷ ೩೭೭ರಲ್ಲಿ ಹೂಣರನ್ನು ಸೋಲಿಸಿ ಮರಳಿ ಗಂಧಾರಕ್ಕೆ ಅಟ್ಟಿದ್ದನು.[1] ಆದರೆ ಗುಪ್ತ ಸಾಮ್ರಾಜ್ಯದ ಮೇಲೆ ಹೂಣರ ಆಕ್ರಮಣಗಳು ಮರಳಿ ಮರಳಿ ಆಗುತ್ತಲೇ ಇದ್ದುವು. ಅಂಥ ಆಕ್ರಮಣಗಳಿಂದ ಹೂಣರು ಗುಪ್ತ ಸಾಮ್ರಾಜ್ಯಕ್ಕೆ ಸೇರಿದ ಕೆಲವು ಪ್ರದೇಶಗಳನ್ನು ಜಯಿಸಿ ಆಳ ತೊಡಗಿದ್ದರು. ಮೊತ್ತಮೊದಲು ಭಾರತ ವರ್ಷದ ಗಂಧಾರ ಪ್ರಾಂತವನ್ನು ಜಯಿಸಿದ ಹೂಣನಾಯಕನ ಪೆಸರು ತಿಳಿದು ಬಂದಿಲ್ಲ. ಚೀನೀಯರು ಆ ನಾಯಕನ ಪೆಸರನ್ನು "ಲಾಯೆ–ಲಿಃ" ಎಂದಿದ್ದಾರೆ. ಆವನು ಚಲಾಯಿಸಿದ ನಾಣ್ಯದ ಮೇಲಿನ ಹೆಸರನ್ನು ಕೆಲವರು "ಲಮತ" ಎಂತಲೂ, ಕೆಲವರು "ಲತೋನ" ಎಂತಲೂ ಬೇರೆ ಕೆಲವರು "ಲನೋನ" ಎಂತಲೂ ಓದಿದ್ದಾರೆ. ಲಮತನ ತರುವಾಯ ಅವನ ಪುತ್ರನಾದ ತೋರಮಾಣನು ಗುಪ್ತಸಾಮ್ರಾಜ್ಯ ವನ್ನು ಆಕ್ರಮಿಸಿ ಸಿಂಧೂನದದ ಪಶ್ಚಿಮ ಪ್ರದೇಶವನ್ನು ಮತ್ತು ಪಶ್ಚಿಮ ರಾಜ ಸ್ಥಾನವನ್ನು ಜಯಿಸಿ ಆ ಪ್ರದೇಶವನ್ನು ಶಕವರ್ಷ ೪೩೭ರ ಮಧ್ಯಕಾಲದ ತನಕ ಆಳಿದ್ದನು. ಅವನ ತರುವಾಯ ಅವನ ಪುತ್ರ ಮಿಹಿರಗುಲನು ತನ್ನ ರಾಜ್ಯವನ್ನು ಗ್ವಾಲಿಯರದ ತನಕ ವಿಸ್ತರಿಸಿ ಶಕವರ್ಷ ೪೬೭ರ ತನಕ ಆಳಿದ್ದನು. ಆವನ ತರು ವಾಯದ ಹೂಣರ ಇತಿಹಾಸವು ಸ್ಪಷ್ಟವಿಲ್ಲವಾದುದರಿಂದ ಅವರು ಇತರ ಭಾರತೀಯ ರಲ್ಲಿ ಸೇರಿ ಒಂದಾಗಿದ್ದರೆಂದು ಅನುಮಾನಿಸಬೇಕಾಗುತ್ತದೆ. ಕೆಲವರ ಅಭಿಪ್ರಾಯ ದಲ್ಲಿ ಹಿಂದೂ ಧರ್ಮಾಧಿಕಾರಿಗಳು ಹೂಣರನ್ನು ಮತಾಂತರಿಸಿದರೆಂದೂ, ಅಪರೇ ರಾಜಸ್ಥಾನದ ಅಗ್ನಿಕುಲಕ್ಷತ್ರಿಯರೆಂದೂ ಇದೆ. ಹಿಂದೆ ಹೆಸರಿಸಿದ ಮೂವರು ಹೂಣರು ರಾಜರಾಗಿ ಭಾರತವರ್ಷದಲ್ಲಿ ಆಳಿದ್ದರೆಂಬುದರ ಪ್ರಮಾಣವಾಗಿ ಅವರು ಚಲಾಯಿಸಿದ ನಾಣ್ಯಗಳು ಮತ್ತು ಬರೆಯಿಸಿದ ಶಾಸನಗಳು ದೊರೆತಿವೆ. ಅವು ಗಳಲ್ಲಿ ಮಿಹಿರಗುಲನು ಬರೆಯಿಸಿದ ಗ್ವಾಲಿಯರದ ಶಾಸನವು ಶಕವರ್ಷ ೪೫೨ ರದ್ದಾಗಿದೆ. ಮಹಾಭಾರತದಲ್ಲಿ ಹೂಣ ರಾಜರ ಹೆಸರುಗಳಿಲ್ಲವಾದುದರಿಂದ,

---

1. The Ephtalites or white Huns, cousins of the barbabarian Huns who invaded Europe in A.D. 375 settled in Bactria in 425 A. D. after sweeping off the remnants of Kushana power in that area. They soon crossed over to the Kabul-Kapisa region and descended on Gandhaar, all the time keeping up a war against the Sassnian rulers of Persia. Their first attack on the Gupta Empire occured about 450 A. D. when Kumar Gupta was alive though rather old. A History of India p. 147. by **K. A. N. Sastri M. A.**

ಮಹಾಭಾರತಕಾರನಿಗೆ ಅವರ ಹೆಸರುಗಳು ಗೊತ್ತಿರಲಿಲ್ಲವೆಂದು ಮತ್ತು ಹೂಣರ ಆಳ್ವಿಕೆಯ ವಿಷಯವು ಆವನಿಗೆ ಬರಿಯ ಶ್ರುತಿಯಾಗಿದ್ದಿತೇ ಹೊರತು ಪ್ರತ್ಯಕ್ಷ ಅನುಭವದ ವಿಷಯವಾಗಿರಲಿಲ್ಲವೆಂದು ಹೇಳಬೇಕಾಗುತ್ತದೆ. ಮತ್ತು ಆ ಕಾರಣ ದಿಂದ ಮಹಾಭಾರತಕಾವ್ಯವು- ಭಾರತ ವರ್ಷದಲ್ಲಿ ಹೂಣರ ರಾಜ್ಯವು ಕೊನೆಗೊಂಡ ಬಹಳ ಕಾಲದ ತರುವಾಯ ರಚಿಸಲ್ಪಟ್ಟಿದ್ದಿತೆಂದು ಹೇಳ ಬೇಕಾಗುತ್ತದೆ.

ಮಹಾಭಾರತದೊಳಗೆ ಬಂದಿರುವ ನವಗ್ರಹಗಳ ಹಾಗೂ ಕೃತಾದಿ ಚತುರ್ಯುಗಗಳ ವರ್ಷಮಾನಗಳ ಉಲ್ಲೇಖಗಳ ಸಂಬಂಧದಲ್ಲಿ ಮುಂದಿನಂತೆ ವಿವರಿಸಬಹುದು. ಭಾರತ ವರ್ಷದಲ್ಲಿ ಶಕದ ಮೂರನೆಯ ಶತಮಾನದ ಅಂತದ ತನಕ ನವಗ್ರಹಗಳ ಗತಿಗೆ ಸಂಬಂಧಿಸಿದ ಜ್ಯೋತಿಷ ಶಾಸ್ತ್ರವಾಗಲೀ ಕೃತಾದಿ ಚತುರ್ಯುಗಗಳ ವರ್ಷಮಾನಗಳಿಗನುಸಾರವಾದ ಕಾಲಗಣನೆಯಾಗಲೀ ಪ್ರಚಲಿತ ವಿರಲಿಲ್ಲ. ಆಗ ವೇದಾಂಗ ಜ್ಯೋತಿಷವೊಂದೇ ಪ್ರಚಲಿತವಿತ್ತು. ಹಾಗಾಗಿ ಆ ಕಾಲದ ರಾಜಕೀಯ ಲೇಖಗಳಲ್ಲಿ ವೇದಾಂಗ ಜ್ಯೋತಿಷಕ್ಕನುಸಾರವಾದ ಕಾಲಮಾನ ಗಳೇ ಪ್ರಯುಕ್ತವಾಗಿವೆ. ವೇದಾಂಗ ಜ್ಯೋತಿಷದಲ್ಲಿ ಚಂದ್ರ ಮತ್ತು ಸೂರ್ಯರ ಗತಿಯಿಂದ ತಿಳಿದುಕೊಳ್ಳಲಾಗುವ ದಿನ, ಪರ್ವ, ಮಾಸ, ಋತು ಮತ್ತು ಅಯನಗಳ ಹಾಗೂ ಸೂರ್ಯನ ಆರುವತ್ತು ಮಾಸಗಳಲ್ಲಿ ಚಂದ್ರನ ಆರುವತ್ತೆರಡು ಮಾಸಗಳು ಬರುವಂಥ ಐದು ವರ್ಷಗಳ ಒಂದು ಯುಗದ ಗಣನೆ ಮಾತ್ರ ಇದೆ.

ಆಚಾರ್ಯ ವರಾಹ ಮಿಹಿರನು ತನ್ನ ಪಂಚ ಸಿದ್ಧಾಂತಿಕೆಯಲ್ಲಿ ಸಂಗ್ರ ಹಿಸಿದ ಪಿತಾಮಹ ಸಿದ್ಧಾಂತವೆಂಬುದು ವೇದಾಂಗ ಜ್ಯೋತಿಷವೇ ಆಗಿರಬೇಕು. ಏಕೆಂದರೆ ಅದರೊಳಗಿನ ವಿಷಯಗಳು ವೇದಾಂಗ ಜ್ಯೋತಿಷದಿಂದ ಭಿನ್ನವಲ್ಲ. ಪಂಚ ಸಿದ್ಧಾಂತಿಕೆಯಲ್ಲಿ ಪಿತಾಮಹ ಸಿದ್ಧಾಂತದ ತರುವಾಯ ವಸಿಷ್ಠ ಎಂಬ ಸಿದ್ಧಾಂತದ ಉಲ್ಲೇಖವಿದ್ದರೂ ಆದರ ವಿವರಗಳಿಲ್ಲ. ಆದರ ತರುವಾಯ ರೋಮಕ ಸಿದ್ಧಾಂತ ಬರುತ್ತದೆ. ಆದರಲ್ಲಿ ಕೂಡ ಸೂರ್ಯ–ಚಂದ್ರರ ಹೊರತು ಇತರ ಗ್ರಹಗಳ ಉಲ್ಲೇಖವಿಲ್ಲ. ಆದರೊಳಗಿನ ಸೂರ್ಯ-ಚಂದ್ರರ ಗತಿಗಳ ಹಾಗೂ ವರ್ಷಗಳ ದಿನಮಾನಗಳು ವೇದಾಂಗ ಜ್ಯೋತಿಷದೊಳಗಿನ ಮಾನಗಳಿಗಿಂತ ಹೆಚ್ಚು ಶುದ್ಧವಾಗಿವೆ. ಮತ್ತು ಆದರಲ್ಲಿ ಸೂರ್ಯಚಂದ್ರರ ಮಾನಗಳನ್ನು ಹೊಂದಿಸಿ ಕೊಳ್ಳಲು ೨೮೫೦ ವರ್ಷಗಳ ಒಂದು ಯುಗವು ನಿರ್ಧರಿಸಲ್ಪಟ್ಟಿದೆ. ಆದರ ತರು ವಾಯದ ಅಂದರೆ ಶಕದ ನಾಲ್ಕನೆಯ ಶತಮಾನದ ಆದಿಯಲ್ಲಿ ರಚಿಸಲ್ಪಟ್ಟಿರಬಹು ದಾದ ಪುಲಿಶ ಮತ್ತು ಸೂರ್ಯ ಎಂಬ ಎರಡು ಸಿದ್ಧಾಂತಗಳಲ್ಲಿ ನವಗ್ರಹಗಳ ಗತಿಗಳನ್ನು ನಿರ್ಧರಿಸುವ ಗಣಿತವೂ ಮೇಷಾದಿ ಹದಿನೆರಡು ರಾಶಿಗಳೂ, ವಾರ ನಾಮಗಳೂ ಇವೆಯಾದರೂ ಕೃತಾದಿ ಚತುರ್ಯುಗಗಳ ಉಲ್ಲೇಖಗಳಿಲ್ಲ. ಅವುಗಳ ತರುವಾಯ ಕೆಲವು ಜ್ಯೋತಿಷ ಸಿದ್ಧಾಂತಗಳು ರಚಿಸಲ್ಪಟ್ಟಿದ್ದುವೆಂದು ತಿಳಿದು

ಬರುತ್ತದಾದರೂ ಅವುಗಳು ಈಗ ಉಪಲಬ್ಧವಿಲ್ಲದಿರುವುದರೀದ ಅವುಗಳ ಸಂಬಂಧ ದಲ್ಲಿ ಏನನ್ನೂ ಹೇಳಲು ಸಾಧ್ಯವಿಲ್ಲ.

ಅವುಗಳ ತರುವಾಯದ್ದಾಗಿದ್ದು ಈಗ ಉಪಲಬ್ಧವಿರುವ ಹಾಗೂ ಆಚಾರ್ಯ ಆರ್ಯ ಭಟನೆಂಬ ಮಹಾಪ್ರತಿಭಾಶಾಲಿ ಜ್ಯೋತಿಷಿಯು ಶಕವರ್ಷ ೪೨೧ರಲ್ಲಿ ರಚಿಸಿದ "ಆರ್ಯಭಟೀಯ" ಎಂಬ ಜ್ಯೋತಿಷ ಗ್ರಂಥದಲ್ಲಿ ನವಗ್ರಹಗಳ ಗತಿಗೆ ಸಂಬಂಧಪಟ್ಟ ಗಣಿತವೂ ಮೇಷಾದಿ ರಾಶಿಗಳೂ, ವಾರನಾಮಗಳೂ ಇವೆ. ಆದರಲ್ಲಿ ಕೃತಾದಿ ನಾಲ್ಕು ಯುಗಗಳಿದ್ದರೂ—ಅವುಗಳ ವರ್ಷಮಾನವು ಸಮಾನ ವಾಗಿದೆ. ಆದುದರಿಂದ ಅವನು ಅವುಗಳನ್ನು "ಯುಗಪಾದ"ವೆಂದಿದ್ದಾನೆ. ಆದುದ ರಿಂದ ಈಗ ಭಾರತ ವರ್ಷದಲ್ಲಿ ಪ್ರಚಲಿತವಿರುವ ಹಾಗೂ ಮಹಾಭಾರತದಲ್ಲಿ ಉಲ್ಲೇಖಿಸಲ್ಪಟ್ಟಿರುವ ಕಲಿಯ ಎರಡರಷ್ಟು ದ್ವಾಪರ, ಮೂರರಷ್ಟು ತ್ರೇತಾ ಮತ್ತು ನಾಲ್ಕರಷ್ಟು ಕೃತ ಎಂಬ ಮಾನವು ಆಚಾರ್ಯ ಆರ್ಯ ಭಟನ ತರುವಾಯವೇ ಪ್ರಚಲಿತವಾದುದೆಂದು ಸಿದ್ಧವಾಗುತ್ತದೆ. ಅರ್ಥಾತ್ ಮಹಾಭಾರತ ಕಾವ್ಯವು ತರುವಾಯದ ಯುಗಮಾನಗಳು ಪ್ರಚಲಿತವಾದ ತರುವಾಯವೇ ರಚಿಸಲ್ಪಟ್ಟಿದ್ದಿ ತೆಂದು ಸಿದ್ಧವಾಗುತ್ತದೆ. ಅದಕ್ಕೆ ಬೇರೊಂದು ದೃಢವಾದ ಪ್ರಮಾಣವೂ ಇದೆ. ಅದು ಆಚಾರ್ಯ ವರಾಮಿಹಿರನು ಸಂಪಾದಿಸಿದ "ಪಂಚಸಿದ್ಧಾಂತಿಕಾ" ಎಂಬ ಗ್ರಂಥದ ಹದಿನೈದನೆಯ ಅಧ್ಯಾಯದೊಳಗಿನ ಒಂದು ಶ್ಲೋಕವಾಗಿದೆ—

ಮಧ್ಯಾಹ್ನಂ ಭದ್ರಾಶ್ವೇಷ್ವಸ್ತಮಯಂ ಕುರುಷು ಕೇತುಮಾಲಾನಾಮ್ ।
ಕುರುತೇಽರ್ಧರಾತ್ರಮುದ್ಯನ್ ಭಾರತವರ್ಷೇಯುಗಪದರ್ಕಃ ॥೧೫-೨೨॥

ಹಿಂದಿನ ಶ್ಲೋಕದಲ್ಲಿ ಬಂದಿರುವ ಭದ್ರಾಶ್ವ ಮತ್ತು ಕೇತುಮಾಲ ಶಬ್ದಗಳು ಆಚಾರ್ಯ ವರಾಹಮಿಹಿರನಿಗಿಂತ ಪ್ರಾಚೀನವಾದ ಯಾವುದೊಂದು ಗ್ರಂಥದಲ್ಲಿಯೂ ಇಲ್ಲ. ಆದರೆ ಆ ಶಬ್ದಗಳು ಮಹಾಭಾರತದ ಭೀಷ್ಮಪರ್ವದ ಆರನೆಯ ಅಧ್ಯಾಯದ ಒಂದು ಶ್ಲೋಕದಲ್ಲಿ ಬಂದಿದೆ—

ಭದ್ರಾಶ್ವಃ ಕೇತುಮಾಲಶ್ಚ ಜಂಬೂದ್ವೀಪಶ್ಚ ಭಾರತ ।
ಉತ್ತರಾಶ್ಚೈವ ಕುರವಃ ಕೃತಪುಣ್ಯ ಪ್ರತಿಶ್ರಯಾಃ ॥ ೬-೧೩ ॥

ಅವರ ಮೇಲಿಂದ ಮಹಾಭಾರತ ಕಾವ್ಯವು ಆಚಾರ್ಯ ವರಾಹಮಿಹಿರನ ಪಂಚಸಿದ್ಧಾಂತಿಕಾ ಗ್ರಂಥವು ಪ್ರಕಟವಾದ ತರುವಾಯವೇ ರಚಿಸಲ್ಪಟ್ಟಿದ್ದಿತೆಂದು ಸಿದ್ಧವಾಗುತ್ತದೆ. ಪಂಚಸಿದ್ಧಾಂತಿಕೆಯೊಳಗಿನ ಶ್ಲೋಕವು ಜ್ಯೋತಿಷ ಶಾಸ್ತ್ರಕ್ಕೆ ಸಂಬಂಧಪಟ್ಟುದಾದುರಿಂದ, ಆಚಾರ್ಯ ವರಾಹಮಿಹಿರನು ತನ್ನ ಶೋಧದ ಫಲವಾಗಿ ಭದ್ರಾಶ್ವ ಮತ್ತು ಕೇತುಮಾಲ ಎಂಬ ಶಬ್ದಗಳನ್ನು ತನ್ನ ಗ್ರಂಥದಲ್ಲಿ ಉಪಯೋಗಿಸಿದ್ದನೆನ್ನಬಹುದೇ ಹೊರತು ಅವನು ಆ ಶಬ್ದಗಳನ್ನು ಮಹಾಭಾರತ ದಿಂದ ಎತ್ತಿಕೊಂಡಿದ್ದಿರಬಹುದೆಂದು ವಾದಿಸುವುದು ಸರಿಯಾಗಲಾರದು ಏಕೆಂದರೆ

ಮಹಾಭಾರತ ಕಾವ್ಯವು ಆಚಾರ್ಯ ವರಾಹಮಿಹಿರನ ಬಹುಕಾಲದ ತರುವಾಯ ರಚಿಸಲ್ಪಟ್ಟಿದ್ದಿತೆಂದು ಸಿದ್ಧಪಡಿಸುವ ಬೇರೆ ಪ್ರಮಾಣಗಳೂ ಇವೆ. ಆದುದರಿಂದ ಮಹಾಭಾರತಕಾರನು ಆ ಶಬ್ದಗಳನ್ನು ಪಂಚ ಸಿದ್ಧಾಂತಿಕಾ ಗ್ರಂಥದಿಂದಲೇ ಎತ್ತಿ ಕೊಂಡಿದ್ದನೆನ್ನಬೇಕಾಗುತ್ತದೆ.

ವಿಶ್ವಾಮಿತ್ರನು ಶ್ರವಣಾದಿ ನಕ್ಷತ್ರಗಳನ್ನು ನಿರ್ಮಿಸಿದನು ಎಂಬುದನ್ನು ಹಿಂದೆ ಉದಹರಿಸಿದೆ. ಶ್ರವಣಾ ನಕ್ಷತ್ರವು ಗಣನೆಯಲ್ಲಿ ಮೊದಲನೆಯದಾಗಿರು ವುದು ಎಂಬುದರ ಅರ್ಥವು ಸೂರ್ಯನ ಉತ್ತರಾಯಣವು ಶ್ರವಣಾನಕ್ಷತ್ರದಲ್ಲಿ ಪ್ರಾರಂಭವಾಗುವುದೆಂದು ಅಥವಾ ವಸಂತ ಸಂಪಾತವು ಅಶ್ವಿನೀ ನಕ್ಷತ್ರದಲ್ಲಿ ಘಟಿಸುವುದೆಂದು ಇರುತ್ತದೆ. ಆ ಕಾಲವು ಶಕಪೂರ್ವ ೫೪೪ನೆಯ ವರ್ಷದಿಂದ ಶಕದ ೪೧೨ನೆಯ ವರ್ಷದ ತನಕವಾಗಿರುತ್ತದೆ. ಆದರೆ ಸಂಪಾತ ಬಿಂದುವು ಅಶ್ವಿನಿ ಯಿಂದ ಹಿಂದೆ ಸರಿದು ರೇವತೀ ನಕ್ಷತ್ರದಲ್ಲಿ ಬಂದಿದ್ದ ಕಾಲದ ಭಾರತೀಯ ಜ್ಯೋತಿಷಿಗಳು ಸಂಪಾತ ಚಲನವನ್ನು ಕಡೆಗಣಿಸಿದುದರ ಫಲವಾಗಿ ಅಶ್ವಿನೀನಕ್ಷತ್ರವು ಇಂದಿಗೂ ಮೊದಲನೆಯದಾಗಿಯೇ ಉಳಿದಿದೆ. ಹೇಗಿದ್ದರೂ ಶ್ರವಣಾದಿಗಣನೆಯ ಉಲ್ಲೇಖವು ಮಹಾಭಾರತದಲ್ಲಿಯೇ ಇರುವುದರಿಂದ ಮತ್ತು ಮಹಾಭಾರತ ದಲ್ಲಿ ಉಲ್ಲೇಖಿಸಲ್ಪಟ್ಟಿರುವ ಕೃತಾದಿ ಚತುರ್ಯುಗಗಳ ವರ್ಷಮಾನವು ಆಚಾರ್ಯ ಆರ್ಯಭಟನ ಬಹಳ ತರುವಾಯ ಪ್ರಚಲಿತವಾದುದೆಂದು ಸಿದ್ಧವಾಗುವುದರಿಂದ ಮಹಾಭಾರತ ಕಾವ್ಯವು ಆ ಕಾಲಕ್ಕಿಂತ ಮೊದಲು ರಚಿಸಲ್ಪಟ್ಟುದೆಂದು ಯಾರೂ ವಾದಿಸಲು ಸಾಧ್ಯವಿಲ್ಲ. ಅರ್ಥಾತ್ ಮಹಾಭಾರತ ಯುದ್ಧವು ಕಲಿ ಮತ್ತು ದ್ವಾಪರ ಯುಗಗಳ ಸಂಧಿಕಾಲದಲ್ಲಿ ನಡೆದಿತ್ತೆಂದು ಮಹಾಭಾರತದಲ್ಲಿ ಹೇಳಿದುದು ಕೂಡ ತರುವಾಯದ ಕಾಲದ್ದೇ ಕಲ್ಪನೆ ಎಂದು ಸಿದ್ಧವಾಗುತ್ತದೆ.

ಇನ್ನು ಕೊನೆಯದಾಗಿ ಕೃಷ್ಣದ್ವೈಪಾಯನನು ರಚಿಸಿ ಹೇಳುತಿದ್ದ ಮಹಾ ಭಾರತದ ಶ್ಲೋಕಗಳನ್ನು ಗಣನಾಯಕನಾದ ಗಣೇಶನು ಅರ್ಥಮಾಡಿ ಬರೆದು ಕೊಳ್ಳುತಿದ್ದನೆಂದು ಮಹಾಭಾರತದಲ್ಲಿ ಹೇಳಿರುವುದನ್ನು ವಿಮರ್ಶಿಸಿದರೆ ಐತಿಹಾಸಿಕ ಪ್ರಮಾಣಗಳ ಆಧಾರದಿಂದ ವಿಮರ್ಶಿಸುವ ಸಲುವಾಗಿ ಆರಿಸಿಕೊಂಡ ಅಂಶಗಳ ವಿಮರ್ಶೆಯು ಮುಗಿಯುವುದು.

ವಾಸ್ತವವಾಗಿ ಶಕದ ಐದನೆಯ ಶತಮಾನಕ್ಕಿಂತ ಮೊದಲು ಭಾರತ ವರ್ಷದಲ್ಲಿ, "ಹೇರಂಬ, ವಿನಾಯಕ, ವಿಘ್ನೇಶ, ಗಣಪತಿ, ಗಜಾನನ" ಮುಂತಾದ ಹೆಸರುಗಳಿಂದ ಕರೆಯಲ್ಪಡುವ ಆನೆತಲೆಯ ದೇವನು ಇರಲಿಲ್ಲ. ಆದುದರಿಂದ ಯಾವುದೊಂದು ಪ್ರಾಚೀನ ಗ್ರಂಥದಲ್ಲಿ ಆ ದೇವನ ಉಲ್ಲೇಖಗಳು ದೊರೆಯುವು ದಿಲ್ಲ. ಶಕದ ಐದನೆಯ ಶತಮಾನದಲ್ಲಿ ಹುಟ್ಟಿದ ಆ ಗಣೇಶನು ಹುಟ್ಟಿದ ಬಹಳ ಅಲ್ಪ ಕಾಲದೊಳಗೆ ಇತರ ದೇವತೆಗಳಿಗಿಂತ ಹೆಚ್ಚು ಪ್ರಾಶಸ್ತ್ಯವನ್ನು ಪಡೆದು

ಭಾರತವರ್ಷದಲ್ಲಿ ಮಾತ್ರವಲ್ಲದೇ ಹೊರಗಿನ ದೇಶಗಳಲ್ಲಿ ಕೂಡ ಪ್ರಖ್ಯಾತನಾಗಿ ಆರಾಧಿಸಲ್ಪಡತೊಡಗಿದನೆಂದು ಶ್ರೀಮಾನ್ ಎಮ್. ಕೇ. ಧವಲೀಕರ್ ಎಂಬ ವಿದ್ವಾಂಸರು ಬರೆದ ಒಂದು ಚಿಲೋ ಪ್ರಬಂಧವು ಗಣೇಶನ ನಾನಾ ಭಾವಭಂಗಿಗಳ ಚಿತ್ರಗಳೊಂದಿಗೆ "ಸ್ವಾಮಿ ವಿವೇಕಾನಂದ ಶಿಲಾಸ್ಮಾರಕ ಸಮಿತಿ"ಯವರು ಪ್ರಕಟಿಸಿದ "Indias Contribution to World Thought and Culture" ಎಂಬ ಗ್ರಂಥದಲ್ಲಿ "Ganesha Beyond the Indian Frontiers [1]. ಎಂಬ ಹೆಸರಿನಲ್ಲಿ ಮುದ್ರಿಸಲ್ಪಟ್ಟಿದೆ.

ಅದರ ಮೇಲಿಂದ ಭಾರತವರ್ಷದ ಜನರಲ್ಲಿ ಗಣೇಶನ ಆರಾಧನೆಯು ಪ್ರಚಲಿತವಾದ ತರುವಾಯವೇ ಅಂದರೆ ಶಕದ ಐದನೆಯ ಶತಮಾನದ ಅಂತಿಮ ವರ್ಷಗಳಲ್ಲಿ ಅಲ್ಲದಿದ್ದರೆ ಆರನೆಯ ಶತಮಾನದ ಆದಿಭಾಗದಲ್ಲಿ ಮಹಾಭಾರತ ಕಾವ್ಯವು ರಚಿಸಲ್ಪಟ್ಟಿದ್ದಿತೆಂದು ಸಂದೇಹವಿಲ್ಲದೇ ನಿರ್ಧರಿಸಬಹುದು.

ಕೆಲವರು ಗಣಪತಿಯ ಆರಾಧನೆಯು ಪ್ರಾಚೀನ ಕಾಲದಿಂದಲೂ ಇದ್ದಿತೆಂದು ಸಾಧಿಸಲು ಋಗ್ವೇದದೊಳಗಿನ **"ಗಣಾನಾಂ ತ್ವಾ ಗಣಪತಿಂ ಹವಾಮಹೇ ॥ ೨-೨೩-೧ ॥** ಎಂಬ ಋಚೆಯನ್ನು ಉದಹರಿಸುತ್ತಾರೆ. ಆದರೆ ಆ ಋಚೆಯು ಬೃಹಸ್ಪತಿ ಸೂಕ್ತದೊಳಗಿನದಾಗಿದ್ದು ಬೃಹಸ್ಪತಿಯನ್ನು ಅಂದರೆ ವೇದಮಂತ್ರಗಳ ಒಡೆಯನಾದ ಅಗ್ನಿಯನ್ನು ಸ್ತುತಿಸುತ್ತದೆಯೇ ಹೊರತು ಗಣೇಶನೆಂಬ ಸೊಂಡಿಲ ದೇವನನ್ನಲ್ಲ.

---

1. Of all the gods and goddesses of the Hindu Pantheon Ganesha is the most interesting, not only on account of his importance, but also because of his ieonograhic peculiarities· He is depicted with an elephant head, a bulging belley and in a variety of poses. In point of time the god appears to be a late addition to the heirarchy of Hindu deities; but at the same time it is noteworthy that he achieved a very exalted position in the heirarchy of gods and goddesses within a very short time. The general opinion seems to favour the view that his worship began sometime in the 6th century A. D.. and during the following two or three centuries we witness his rapid rise to prominence so much so that by the 10th century an independent sect-of course within the fold of Hinduism-commonly known as Ganapatya-comes into being.

ಬೇರೆ ಕೆಲವರು ಆಚಾರ್ಯ ಪಾಣಿನಿಗಿಂತ ಮೊದಲೇ "ಮಹಾಭಾರತ" ಎಂಬ ಕಾವ್ಯವು ಪ್ರಚಲಿತವಿದ್ದಿತೆಂದು ಸಾಧಿಸಲು ಅವನ ವ್ಯಾಕರಣ ಗ್ರಂಥದಿಂದ ಆವನದೆಂದು ಹೇಳಿ ಕೆಲವು ಸೂತ್ರಗಳನ್ನು ಉದಹರಿಸುತ್ತಾರೆ. ಅವುಗಳಲ್ಲಿ ಮುಖ್ಯ ವಾದವುಗಳು ಮುಂದಿನಂತಿವೆ—

೧: **ವಾಸುದೇವಾರ್ಜುನಾಭ್ಯಾಂ ವುನ್ ॥ ೪–೩–೯೮ ॥**

೨. **ಮಹಾನ್ ವ್ರೀಹ್ಯಪರಾಹ್ಣಗೃಷ್ಟೀಷ್ವಾಸಜಾಬಾಲ ಹೈಲಿ ಹಿಲರೌರವ ಪ್ರವೃದ್ಧೇಷು ॥ ೬–೨–೨೮ ॥**

೩. **ಗವಿಯುಧಿಭ್ಯಾಂಸ್ಥಿರಃ ॥ ೮–೩–೯೫ ॥**

ಆದರೆ ಆ ಸೂತ್ರಗಳು ಪಾಣಿನಿಯ ರಚನೆಗಳಾಗಿರದೇ ತರುವಾಯದವರು ಅಷ್ಟಾಧ್ಯಾಯಿಯಲ್ಲಿ ಮಾಡಿದ ಪ್ರಕ್ಷೇಪಗಳೆಂದು ಸಿದ್ಧಪಡಿಸುವ ಹಲವು ಪ್ರಮಾಣಗಳಿವೆ.

೧. ಮೊಲನೆಯದಾಗಿ ಆಚಾರ್ಯ ಪಾಣಿನಿಯ ಜೀವಿತ ಕಾಲವು ಶಕಪೂರ್ವ ೫೬೮ನೆಯ ವರ್ಷದಿಂದ ೪೮೮ನೆಯ ವರ್ಷದ ತನಕ ಎಂಭತ್ತು ವರ್ಷಗಳಾಗಿದೆ. ಮತ್ತು ವಾಸುದೇವ ಎಂಬ ಶಬ್ದವು ಹುಟ್ಟಿದುದು ಆಚಾರ್ಯ ಪಾಣಿನಿಯು ಸ್ವರ್ಗ ವಾಸಿಯಾದ ೩೨೦ ವರ್ಷಗಳ ತರುವಾಯವಾಗಿದೆ. ಪಾಣಿನಿಗಿಂತ ಪ್ರಾಚೀನವಾದ ಯಾವ ಗ್ರಂಥದಲ್ಲಿಯೂ ವಾಸುದೇವ ಶಬ್ದವಿಲ್ಲ.

೨, ಹಿಂದೆ ಉದಹರಿಸಿದ ಎರಡನೆಯ ಮತ್ತು ಮೂರನೆಯ ಸೂತ್ರಗಳಿಂದ ಸಿದ್ಧವಾಗುವ ಶಬ್ದಗಳಲ್ಲಿ "ಮಹಾವ್ರೀಹಿ" ಮತ್ತು "ಗವಿಷ್ಠಿರ" ಎಂಬ ಎರಡು ಶಬ್ದಗಳ ಹೊರತು ಬೇರೆ ಯಾವುದೊಂದು ಶಬ್ದವೂ ಆಚಾರ್ಯ ಪಾಣಿನಿಗಿಂತ ಪ್ರಾಚೀನವಾದ ಗ್ರಂಥಗಳಲ್ಲಿ ಪ್ರಯುಕ್ತವಾಗಿಲ್ಲ. ಅಲ್ಲದೇ ಆ ಸೂತ್ರಗಳಿಂದ ಸಿದ್ಧಿ ಸುವ ರೂಪಗಳು ಬೇರೆ ಕೆಲವು ಸೂತ್ರಗಳಿಂದಲೂ ಸಿದ್ಧಿಸುವುದರಿಂದ ಆ ಸೂತ್ರಗಳ ಆವಶ್ಯಕತೆಯೂ ಇಲ್ಲ. ಮಹಾವ್ರೀಹಿ ಶಬ್ದವು ತೈತ್ತಿರೀಯ ಸಂಹಿತೆಯಲ್ಲಿ ಮತ್ತು ಬ್ರಾಹ್ಮಣಗಳಲ್ಲಿ ಪ್ರಯುಕ್ತವಾಗಿದ್ದು ಗವಿಷ್ಠಿರ ಶಬ್ದವು ಋಗ್ವೇದದಲ್ಲಿ ಪ್ರಯುಕ್ತ ವಾಗಿದೆ.

೩. "ವಾಸುದೇವಾರ್ಜುನಾಭ್ಯಾಂ ವುನ್" ಎಂಬ ಸೂತ್ರದಿಂದ ಸಿದ್ಧಿಸುವ "ವಾಸುದೇವಕ" ಅಂದರೆ "ವಾಸುದೇವನ ಆರಾಧಕ" ಮತ್ತು ಅರ್ಜುನಕ" ಅಂದರೆ "ಅರ್ಜುನನ ಆರಾಧಕ" ಎಂಬ ಶಬ್ದಗಳಲ್ಲಿ "ವಾಸುದೇವಕ" ಎಂಬ ಶಬ್ದವು ಪ್ರಾಚೀನ ಗ್ರಂಥಗಳಲ್ಲಿ ಹಾಗಿರಲಿ, ಸ್ವಯಂ ಮಹಾಭಾರತದಲ್ಲಿಯೇ ಬಂದಿಲ್ಲ ಮತ್ತು "ಅರ್ಜುನಕ" ಎಂಬ ಶಬ್ದವು ಮಹಾಭಾರತದ ಅನುಶಾಸನಿಕ ಪರ್ವದ ಮೊದಲನೆಯ ಅಧ್ಯಾಯದಲ್ಲಿ ಬಂದಿದ್ದರೂ ಅದು ಅದರಲ್ಲಿ ಒಬ್ಬ ಬೇಡನ ಹೆಸರಾಗಿ ಬಂದಿದೆಯೇ ಹೊರತು "ಅರ್ಜುನನ ಆರಾಧಕ ಎಂಬರ್ಥದಲ್ಲಿ ಅಲ್ಲ.

ಆದುದರಿಂದ "ಮಹಾಭಾರತ" ಎಂಬ ಹೆಸರಿಗೆ ಮತ್ತು ಮಹಾಭಾರತ ಕಾವ್ಯದೊಳಗಿನ ಹೆಸರುಗಳಿಗೆ ಸಂಬಂಧಿಸಿದ ವ್ಯಾಕರಣ ಸೂತ್ರಗಳು ತರುವಾಯದ ವ್ಯಾಕರಣಕಾರರು ಆಚಾರ್ಯ ಪಾಣಿನಿಯ ಅಷ್ಟಾಧ್ಯಾಯಿಯಲ್ಲಿ ಮಾಡಿದ ಪ್ರಕ್ಷೇಪಗಳಾಗಿವೆಯೆಂಬುದರಲ್ಲಿ ಸಂದೇಹವುಳಿಯುವುದಿಲ್ಲ. ಮಾತ್ರವಲ್ಲ ಇತ್ತೀಚಿನ ಶೋಧಗಳಿಂದ ಅಷ್ಟಾಧ್ಯಾಯಿಯ ಗಣಪಾಠಗಳಲ್ಲಿ ಹಲವು ಹೊಸ ಸಂಜ್ಞೆಗಳೂ ಸೂತ್ರಪಾಠಗಳಲ್ಲಿ ಹಲವು ಹೊಸ ಸೂತ್ರಗಳೂ ಧಾತುಪಾಠಗಳಲ್ಲಿ ಹಲವು ಹೊಸ ಧಾತುಗಳೂ ಸೇರಿಸಲ್ಪಟ್ಟಿವೆಯೆಂದು ಸಿದ್ಧವಾಗಿದೆ.

ಹಾಗೆಯೇ ಆಶ್ವಲಾಯನನ ಗೃಹ್ಯಸೂತ್ರಗಳಲ್ಲಿ ತರ್ಪಣ ಕಾಲದಲ್ಲಿ ಹೇಳುವ "ಭಾರತ ಮಹಾಭಾರತಾಚಾರ್ಯಾಃ" ಎಂಬುದು ಕೂಡ ಅಪ್ಪಟ ಪ್ರಕ್ಷೇಪವಾಗಿದೆ. ಅಂದರೆ ಹಿಂದಿನ ಸೂತ್ರಗಳಿಂದ ಈಗಿನ "ಮಹಾಭಾರತ" ಎಂಬ ಗ್ರಂಥಕ್ಕಿಂತ ಮೊದಲು "ಭಾರತ" ಎಂಬ ಒಂದು ಗ್ರಂಥವಿದ್ದಿತೆಂದು ಸೂಚಿತವಾಗುತ್ತದೆ. ಆದರೆ 'ಭಾರತ' ಎಂಬ ಹೆಸರಿನ ಗ್ರಂಥವಿದ್ದಿತೆಂಬುದಕ್ಕೆ – ಹಿಂದೆ ಉದಹರಿಸಿದ ಪ್ರಕ್ಷಿಪ್ತ ಸೂತ್ರಗಳ ಹೊರತು ಬೇರೆ ಯಾವುದೊಂದು ಪ್ರಮಾಣದ ಆಧಾರವೂ ಇಲ್ಲ.

ಮಹಾಭಾರತ ಕಾವ್ಯವು ಪ್ರಾಚೀನವೆಂದು ಸಾಧಿಸಲು ಆಚಾರ್ಯ ಪಾಣಿನಿಯ ಸೂತ್ರಗಳಲ್ಲಿ ಹೊಸ ಸೂತ್ರಗಳನ್ನು ಸೇರಿಸಿದಂತೆಯೇ ತೈತ್ತಿರೀಯ ಆರಣ್ಯಕದ ೧–೯–೨ರಲ್ಲಿ- ಯಜ್ಞಚಿತಿಗಳಿಗಾಗಿ ಇಟ್ಟಿಗೆಗಳನ್ನು ಇಡಲು ಹೇಳಿದ ಮಂತ್ರಗಳಲ್ಲಿ **"ಸ ಹೋವಾಚ ವ್ಯಾಸಃ ಪಾರಾಶರ್ಯಃ । ವಿದ್ಯುದ್ವಧಮೇವಾಹಂ ಮೃತ್ಯುಮೈಚ್ಛಮಿತಿ । ನ ತ್ವಕಾಮಂ ಹಂತಿ॥** ಎಂಬ ಅಂಶವು ಬಂದಿದೆ. ಮತ್ತು ಅದು ಅಲ್ಲಿ ಸರ್ವಥಾ ಅಸಂಗತವಾಗಿದೆ. ಅಂದರೆ- "ಪರಾಶರನ ಪುತ್ರನಾದ ವ್ಯಾಸ" ಎಂಬ ಒಬ್ಬ ವ್ಯಕ್ತಿ ಇದ್ದನೆಂದು ಸಾಧಿಸುವ ಸಲುವಾಗಿಯೇ ಆ ಅಂಶವು ಆ ಕಂಡಿಕೆಯಲ್ಲಿ ಸೇರಿಸಲ್ಪಟ್ಟಿದೆ.

ಮದ್ರಾಸಿನ ವಾವಿಳ್ಲ ರಾಮಸ್ವಾಮಿ ಶಾಸ್ತ್ರುಲು ಅಂಡ್ ಸನ್ಸ್ ಎಂಬವರು ಮುದ್ರಿಸಿ ಪ್ರಕಟಿಸಿದ ಕೃಷ್ಣ ಯಜುರ್ವೇದದ ತೈತ್ತಿರೀಯಾರಣ್ಯಕ ಭಾಗ ಎಂಬ ಗ್ರಂಥದಲ್ಲಿ ಹಿಂದೆ ಉದಹರಿಸಿದ ಅಂಶವು ಬಂದಿದೆ. ಮತ್ತು ಅದರಲ್ಲಿ, ಏಳನೆಯ, ಎಂಟನೆಯ ಮತ್ತು ಒಂಭತ್ತನೆಯ ಪ್ರಪಾಠಕಗಳು ಅನುಕ್ರಮವಾಗಿ ಪ್ರಥಮ ಪ್ರಶ್ನ, ದ್ವಿತೀಯ ಪ್ರಶ್ನ, ಮತ್ತು ತೃತೀಯ ಪ್ರಶ್ನಗಳೆಂದು ಉಲ್ಲೇಖಿಸಲ್ಪಟ್ಟಿದ್ದರೂ ತೈತ್ತಿರೀಯೋಪನಿಷತ್ತಿನಲ್ಲಿ ಅವೇ ಮೂರು ಪ್ರಶ್ನಗಳು ಶಿಕ್ಷಾವಲ್ಲೀ ಬ್ರಹ್ಮಾನಂದವಲ್ಲೀ ಮತ್ತು ಭೃಗುವಲ್ಲೀ ಎಂದು ಹೆಸರಾಗಿವೆ. ತೈತ್ತಿರೀಯಾರಣ್ಯಕದ ಹತ್ತನೆಯ ಪ್ರಪಾಠಕವು ಚತುರ್ಥ ಪ್ರಶ್ನ ಎಂದು ಉಲ್ಲೇಖಿಸಲ್ಪಟ್ಟಿದ್ದರೂ ಅದರ ಅಡಿಯಲ್ಲಿ ಅದನ್ನು "ನಾರಾಣೀಯೋಪನಿಷತ್" ಎಂದು ಹೆಸರಿಸಿದೆ. ಮತ್ತು ಅದು ದ್ರಾವಿಡ ಪಾಠ ಮತ್ತು ಆಂಧ್ರಪಾಠ ಎಂಬುದಾಗಿ ಎರಡು ಪಾಠಭೇದಗಳನ್ನು

ಹೊಂದಿದೆ. ಅದರಲ್ಲಿ – ಸೂರ್ಯನೇ ನಾರಾಯಣ ಎಂಬ ಉಲ್ಲೇಖವೂ, ನಾರಾಯಣನೇ ಹರಿ ಎಂಬ ಉಲ್ಲೇಖವೂ – ಇದ್ದು ಸೂರ್ಯನ ಮಹಿಮೆಯು ವಿಸ್ತಾರವಾಗಿ ವರ್ಣಿಸಲ್ಪಟ್ಟಿದೆ. ಅದರ ದ್ರಾವಿಡ ಪಾಠದಲ್ಲಿ ಮುಂದೆ ಕೊಡ ಲಾಗುವ ಅಂಶಗಳಿವೆ–

ತನ್ನೋ ಗರುಡಃ ಪ್ರಚೋದಯಾತ್ । ಕಾತ್ಯಾಯನಾಯ ವಿದ್ಮಹೇ, ಕನ್ಯಕುಮಾರೀ ಧೀಮಹಿ। ತನ್ನೋ ದುರ್ಗಿಃ ಪ್ರಚೋದಯಾತ್। ನಾರಾಯಣಾಯ ವಿದ್ಮಹೇ, ವಾಸುದೇವಾಯ ಧೀಮಹಿ: ॥೧೦–೧–೬॥

ಸಹಸ್ರಶೀರ್ಷಂ ದೇವಂ ವಿಶ್ವಾಕ್ಷಂ ವಿಶ್ವಶಂಭುವಮ್ । ವಿಶ್ವಂ ನಾರಾಯಣಂ ದೇವಮಕ್ಷರಂ ಪರಮಂ ಪ್ರಭುಮ್॥ ವಿಶ್ವತಃ ಪರಮಂ ನಿತ್ಯಂ ವಿಶ್ವಂ ನಾರಾಯಣಂ ಹರಿಮ್। ವಿಶ್ವಮೇವೇದಂ ಪುರುಷಸ್ತದ್ವಿಶ್ವಮುಪಜೀವತಿ। ಪತಿಂ ವಿಶ್ವಸ್ಯಾತ್ಮೇಶ್ವರಂ ಶಾಶ್ವತಂ ಶಿವಮಚ್ಯುತಮ್। ನಾರಾಯಣಂ ಮಹಾಜ್ಞೇ ಯಂ ವಿಶ್ವಾತ್ಮಾನಂ ಪರಾಯಣಂ। ನಾರಾಯಣಃ ಪರಂಬ್ರಹ್ಮ ತತ್ವಂ ನಾರಾಯಣಃ ಪರಃ। ನಾರಾಯಣಃ ಪರೋ ಜ್ಯೋತಿರಾತ್ಮಾ ನಾರಾಯಣಃ ಪರಃ। ಯಚ್ಚ ಕಿಂಚಿ ಜ್ಜಗತ್ಯಸ್ಮಿನ್ ದೃಶ್ಯತೇ ಶ್ರೂಯತೇಽಪಿವಾ। ಅಂತರ್ಬಹಿಶ್ಚತತ್ಸರ್ವಂ ವ್ಯಾಪ್ಯ ನಾರಾಯಣಃ ಸ್ಥಿತಃ ॥೧೦–೧೧॥

ಹಾಗೆಯೇ ಆಂಧ್ರಪಾಠದಲ್ಲಿ ಮುಂದೆ ಕೊಡಲಾಗುವ ಅಂಶಗಳಿವೆ–

ತನ್ನೋ ನಂದಿಃ ಪ್ರಚೋದಯಾತ್ । ತತ್ಪುರುಷಾಯ ವಿದ್ಮಹೇ ಮಹಾಸೇನಾಯ ಧೀಮಹಿ। ತನ್ನಃ ಷಣ್ಮುಖಃ ಪ್ರಚೋದಯಾತ್। ತತ್ಪುರುಷಾ ಯ ವಿದ್ಮಹೇ, ಸುವರ್ಣಪಕ್ಷಾಯ ಧೀಮಹಿ। ತನ್ನೋ ಗರುಡಃ ಪ್ರಚೋದಯಾತ್। ವೇದಾತ್ಮನಾಯ ವಿದ್ಮಹೇ ಹಿರಣ್ಯಗರ್ಭಾಯ ಧೀಮಹಿ । ತನ್ನೋ ಬ್ರಹ್ಮ ಪ್ರಚೋದಯಾತ್। ನಾರಾಯಣಾಯ ವಿದ್ಮಹೇ ವಾಸುದೇವಾಯ ಧೀಮಹಿ ॥೧೦-೧–೬॥

ತನ್ನೋನಾರಸಿಂಹಃ ಪ್ರಚೋದಯಾತ್। . . . . ಕಾತ್ಯಾಯನಾಯ ವಿದ್ಮ ಹೇ ಕನ್ಯಕುಮಾರಿ ಧೀಮಹಿ। ತನ್ನೋ ದುರ್ಗಿಃ ಪ್ರಚೋದಯಾತ್।.....॥೧೦-೧-೭॥

ಹಿಂದಿನ ಅಂಶಗಳಲ್ಲಿ ಬಂದಿರುವ ನಾರಾಯಣ, ದುರ್ಗಿ, ಕನ್ಯಕುಮಾರಿ, ಷಣ್ಮುಖ, ನಾರಸಿಂಹ, ನಂದಿ ಮೊದಲಾದ ಶಬ್ದಗಳು ಇತರ ಯಾವುದೊಂದು ವೈದಿಕ ಗ್ರಂಥದಲ್ಲಿಯೂ ಇಲ್ಲದಿರುವುದರಿಂದ ಅವುಗಳು ತೈತ್ತಿರೀಯ ಆರಣ್ಯಕದಲ್ಲಿ ಅರ್ವಾಚೀನರು ಮಾಡಿದ ಪ್ರಕ್ಷೇಪಗಳೆಂದು ಸಂದೇಹವಿಲ್ಲದೇ ಹೇಳಬಹುದು.

ಸಾಮಾನ್ಯವಾಗಿ ಯಾವನೊಬ್ಬ ನಾಯಕನ ಶ್ರೇಷ್ಠತೆಯನ್ನು ಮತ್ತು ಮಹತ್ವವನ್ನು ಪ್ರತಿಪಾದಿಸುವಲ್ಲಿ - ಅವನು ಅತಿಮಾನುಷ ಶಕ್ತಿಯುಳ್ಳವನೆಂದೂ,

ಅದ್ಭುತಕಾರ್ಯಗಳನ್ನು ಎಸಗುವವನೆಂದೂ, ಪವಾಡ ಪುರುಷನೆಂದೂ ವರ್ಣಿಸುವುದು ಪ್ರಾಚೀನ ಕಾಲದಿಂದ ಸಾಗಿ ಬಂದಿದೆ. ಮತ್ತು ಅದು ಎಲ್ಲ ಕಾಲಗಳಲ್ಲಿ ಮತ್ತು ದೇಶಗಳಲ್ಲಿ ಇದ್ದುದು ಹಾಗು ಇರುವಂಥದೇ ಆಗಿದೆ. ಹಾಗೆಯೇ ಜನರು ಕೂಡ- ಜ್ಞಾನಿಗಳು ಮತ್ತು ಅಜ್ಞಾನಿಗಳು ಎಂಬ ಭೇದವಿಲ್ಲದೇ- ಅಂಥ ಅದ್ಭುತ ವರ್ಣನೆಗಳನ್ನು ಪ್ರತಿವಾದ ಮಾಡದೇ ನಂಬುತ್ತ ಬಂದಿದ್ದಾರೆ. ಮತ್ತು ಇಂದಿಗೂ ನಂಬುತಲಿದ್ದಾರೆ. ಅದಕ್ಕನುಸಾರವಾಗಿ ಮಹಾಭಾರತದಲ್ಲಿ ಪ್ರಕೃತಿನಿಯಮಕ್ಕೆ ವಿರುದ್ಧವಾದ ಮತ್ತು ಸತ್ಯಕ್ಕೆ ದೂರವಾದ ಅನೇಕಾನೇಕ ಅದ್ಭುತ ಘಟನೆಗಳ ವರ್ಣನೆಗಳಿವೆ.

ಅಂಥ ವರ್ಣನೆಗಳಲ್ಲಿ ಪರಾಶರ ಎಂಬವನು ಯಮುನಾ ನದಿಯನ್ನು ದಾಟುವ ಸಲುವಾಗಿ ಹತ್ತಿದ ದೋಣಿಯನ್ನು ನಡಿಸುತಿದ್ದ ಯುವತಿಯಾದ ಅಂಬಿಗಳನ್ನು ಮೋಹಿಸಿ ಅವಳನ್ನು ಸಂಭೋಗಿಸುವುದು, ಒಡನೆಯೇ ಅವಳು ಗರ್ಭ ಧರಿಸಿ ಗಂಡುಮಗುವನ್ನು ಹೆರುವುದು, ಜನಿಸಿದ ಆ ಮಗುವು ಕ್ಷಣಮಾತ್ರದಲ್ಲಿ ಬೆಳೆದು ಯುವಕನಾಗುವುದು. ಮತ್ತು ಆ ಯುವಕನು ತಾಯಿಯನ್ನು ನಮಿಸಿ ಸ್ಮರಿಸಿದಾಗ ಬರುವನೆಂದು ಹೇಳಿ ತಪಸ್ಸು ಮಾಡಲು ಹಿಮಾಲಯಕ್ಕೆ ತೆರಳುವುದು ನದೀ ಮಧ್ಯದಲ್ಲಿ ಜನಿಸಿದುದರಿಂದ ಅವನಿಗೆ ಕೃಷ್ಣದ್ವೈಪಾಯನ ಎಂಬ ಹೆಸರು ಬರುವುದು, ಆ ಅಂಬಿಗಳು ಏನೂ ನಡೆಯಲೇ ಇಲ್ಲವೆಂಬಂತೆ ಸಂಜೆಗೆ ಮನೆಗೆ ಮರುಳುವುದು--ಎಂಬುದು ಅದ್ಭುತಗಳಲ್ಲಿ ಅದ್ಭುತವೂ ಪ್ರಕೃತಿ ನಿಯಮಕ್ಕೆ ವಿರುದ್ಧವಾದುದೂ ಆಗಿದೆ.

ಹಾಗೆಯೇ ಮನುಷ್ಯನಾದ ಅರ್ಜುನನು ದೇವರಾದ ಇಂದ್ರ ಮೊದಲಾದವರನ್ನು ಯುದ್ಧದಲ್ಲಿ ಸೋಲಿಸುವುದು–ಇಂದ್ರನು ಕಳುಹಿಸಿದ ರಥದಲ್ಲಿ ಕುಳಿತು ಸ್ವರ್ಗಲೋಕಕ್ಕೆ ಹೋಗುವುದು. ಅಲ್ಲಿ ಇಂದ್ರನ ಅತಿಥ್ಯ ಹಾಗೂ ಸತ್ಕಾರಗಳನ್ನು ಭೋಗಿಸಿ ಮರಳಿ ಭೂಲೋಕಕ್ಕೆ ಬರುವುದು–ಎಂಬುದೆಲ್ಲ ಸಾಮಾನ್ಯ ಅದ್ಭುತಗಳಲ್ಲ. ಅಂದರೆ ಇವುಗಳೆಲ್ಲ ಅತ್ಯಂತ ವಿಚಿತ್ರ ಹಾಗೂ ಪರಮಾದ್ಭುತ ವರ್ಣನೆಗಳಾಗಿವೆ. ಅಂಥ ಅದ್ಭುತವರ್ಣನೆಗಳು ಮಹಾಭಾರತದಲ್ಲಿ ಶತಕಗಳ ಸಂಖ್ಯೆಯಲ್ಲಿವೆ. ಮತ್ತು ಅವುಗಳು ಮಹಾಭಾರತಕಾರನ ಕಲ್ಪನಾಶಕ್ತಿಯ ಮಟ್ಟವನ್ನು ಸೂಚಿಸುತ್ತವೆ. ಅರ್ಥಾತ್ ಮಹಾಭಾರತ ಕಾವ್ಯವನ್ನು ಕಲ್ಪಿತ ಕಥೆಗಳ ಸಂಗ್ರಹವೆನ್ನಬಹುದೇ ಹೊರತು ವಾಸ್ತವಿಕ ಘಟನೆಗಳ ವರ್ಣನೆಯಿರುವ ಇತಿಹಾಸ ಗ್ರಂಥವೆನ್ನಲು ಸಾಧ್ಯವಿಲ್ಲ.

ಇನ್ನು ನಾರಾಯಣೀಯ ಅಥವಾ ಭಾಗವತ ಧರ್ಮವು ಪ್ರಧಾನವಾಗಿರುವ ಮಹಾಭಾರತ ಕಾವ್ಯವನ್ನು ರಚಿಸಿದ ಕವಿ ಅಥವಾ ಕವಿಗಳು ಯಾರಾಗಿರಬಹುದು ಎಂಬುದನ್ನು ಮುಂದೆ ಕೊಡಲಾಗುವ ಕೆಲವು ಉದಾಹರಣೆಗಳ ಆಧಾರದಿಂದ ಅನುಮಾನಿಸಲು ಸಾಧ್ಯವಿದೆ—

೧. ಮಹಾಭಾರತದಲ್ಲಿ ನವಗ್ರಹಗಳ ಹೆಸರುಗಳು ಮಾತ್ರವಲ್ಲದೇ ಕೆಲವು ಗ್ರಹಗಳ ಹುಟ್ಟಿನ ಕಥೆಗಳೂ ಸ್ಥಿತಿ-ಗತಿಗಳ ಉಲ್ಲೇಖಗಳೂ ಕೃತ್ತಿಕಾ ನಕ್ಷತ್ರ ಪುಂಜ ದಲ್ಲಿ ಆರು ತಾರಕೆಗಳೆಂಬ ಸೂಚನೆಯೂ ಇದೆ.

೨. ಭಾರತವರ್ಷದಲ್ಲಿ ನವಗ್ರಹಗಳ ಗತಿಗೆ ಸಂಬಂಧಿಸಿದ ಫಲಜ್ಯೋತಿಷ ವನ್ನು ಪ್ರಚಾರಕ್ಕೆ ತಂದಿದ್ದ ಅಧಿಕಾಂಶ ಜ್ಯೋತಿಷಿಗಳು ಶಕವರ್ಗದ ಮಗ ಬ್ರಾಹ್ಮಣ ರಾಗಿದ್ದರು. ಅವರು ಸೂರ್ಯಾರಾಧಕರಾಗಿದ್ದರಲ್ಲದೇ ಸೂರ್ಯನ ಆಲಯಗಳಲ್ಲಿ ಅರ್ಚಕರಾಗಿರುತಿದ್ದರು. ಅವರನ್ನು ಶಾಕದ್ವೀಪೀ ಬ್ರಾಹ್ಮಣರೆಂದು ಕೂಡ ಕರೆಯ ಲಾಗುತಿತ್ತು. ಅವರು ಬಹುತರವಾಗಿ ಮಗಧದಲ್ಲಿ ನೆಲಸಿದ್ದರು.

೩. ಮಗಧದಲ್ಲಿ, ನೇಪಾಳದ ತಪ್ಪಲಲ್ಲಿ ಮತ್ತು ತಿಬ್ಬತದಲ್ಲಿ ನೆಲಸಿದ್ದ ಶಕಜನರ ಕೆಲವು ಪಂಗಡಗಳಲ್ಲಿ ಹಲವು ಮಂದಿ ಸೋದರರಿಗೆ ಏಕಕಾಲದಲ್ಲಿ ಒಬ್ಬಳೇ ಸ್ತ್ರೀಯು ಪತ್ನಿಯಾಗುವ ರೂಢಿ ಇತ್ತು. ಮತ್ತು ಅದು ಈಗಲೂ ಇದೆಯೆಂದು ತಿಳಿದುಬರುತ್ತದೆ.

೪. ಹಾಗೆಯೇ ಶಕಜನರ ಕೆಲವು ಪಂಗಡಗಳಲ್ಲಿ ಸತ್ತವರ ಶವವನ್ನು ಊರಿನ ಹೊರಗೆ ಶಮೀವೃಕ್ಷದಲ್ಲಿ ತೂಗಹಾಗುವ ಕ್ರಮವಿತ್ತು.

ಮಹಾಭಾರತಕಾರನು ದ್ರುಪದರಾಜನ ಪುತ್ರಿಯಾದ ದ್ರೌಪದಿಗೆ ಐವರು ಪಾಂಡು ಪುತ್ರರನ್ನು ಪತಿಗಳನ್ನಾಗಿ ಮಾಡಿದ್ದಾನೆ.

ಹಾಗೆಯೇ ಪಾಂಡವರು ವನವಾಸದ ಅವಧಿಯನ್ನು ಮುಗಿಸಿ ಅಜ್ಞಾತ ವಾಸಕ್ಕಾಗಿ ವಿರಾಟನಗರವನ್ನು ಪ್ರವೇಶಿಸುವ ಮೊದಲು ತಮ್ಮ ಅಸ್ತ್ರಶಸ್ತ್ರಗಳನ್ನು ಊರ ಹೊರಗಿನ ಶಮೀವೃಕ್ಷದಲ್ಲಿ ಬಚ್ಚಿಟ್ಟು ದುರ್ಗಂಧದಿಂದಾಗಿ ಆ ಮರದ ಬಳಿಗೆ ಯಾರೂ ಸುಳಿಯದಂತೆ ಮಾಡಲು ಒಬ್ಬ ಮುದುಕಿಯ ಶವವನ್ನು ನೇತಾಡಿಸಿದ ರೆಂದು ವರ್ಣಿಸಿದ್ದಾನಲ್ಲದೇ ಯುಧಿಷ್ಠಿರನ ಬಾಯಿಯಿಂದ — **"ಕುಲಧರ್ಮೋಽಯ ಮಸ್ಮಾಕಂ ಪೂರ್ವೈರಾಚರಿತೋಽಪಿ ವಾ ॥ ವಿರಾ. ೫–೩೩ ॥** ಅಂದರೆ– (ಆ ಶವ ವನ್ನು ಕಂಡ ಜನರು) "ಇದು ನಮ್ಮ ಹಿರಿಯರ ಕಾಲದಿಂದ ಆಚರಿಸಲ್ಪಡುತ್ತ ಸಾಗಿ ಬಂದ ಕುಲಧರ್ಮ" ಎಂದು ಬಗೆದು ಮರದ ಸನಿಯಕ್ಕೆ ಬರದೇ ದೂರದಿಂದಲೇ ಸಾಗುವರೆಂದು ನುಡಿಸಿದ್ದಾನೆ.

ಅಂಥ ಉಲ್ಲೇಖಗಳ ಮೇಲಿಂದ ಮಹಾಭಾರತ ಕಾವ್ಯವನ್ನು ರಚಿಸಿದ ಕವಿಗಳು ಶಕವರ್ಗದ ಮಗ ಬ್ರಾಹ್ಮಣರಾಗಿದ್ದರೆಂದು ಅನುಮಾನಿಸಬೇಕಾಗುತ್ತ ದಲ್ಲದೇ–ಮಹಾಭಾರತದಲ್ಲಿ ಸಮಗ್ರ ವೈದಿಕ ಸಾಹಿತ್ಯದೊಳಗಿನ ಹಲವು ನೂರು ಕಥೆಗಳು ವಿಸ್ತರಿಸಿ ವರ್ಣಿಸಲ್ಪಟ್ಟಿರುವುದರಿಂದ ಆ ಕಾವ್ಯವು ಒಬ್ಬ ಕವಿಯ ರಚನೆ ಯಾಗಿರದೇ–ಅದರ ರಚನೆಯಲ್ಲಿ ಹಲವು ಕವಿಗಳು ಸೇರಿದ್ದಾರೆನ್ನಬೇಕಾಗುತ್ತದೆ.

ಉಪಸಂಹಾರ

ಹಿಂದಿನ ವಿವರಗಳಿಂದ ಮಹಾಭಾರತ ಕಾವ್ಯವು ಭಾರತ ವರ್ಷದಲ್ಲಿ ಹೂಣ ಜನರ ಆಗಮನವಾದ ಸಾಧಾರಣ ಎರಡು ಶತಮಾನಗಳ ತರುವಾಯು, ನವಗ್ರಹಗಳ ಗತಿಗೆ ಸಂಬಂಧಿಸಿದ ಗಣಿತವುಳ್ಳ ಜ್ಯೋತಿಷ ಶಾಸ್ತ್ರವೂ, ಅನುಕ್ರಮವಾಗಿ ೪೮೦೦, ೩೬೦೦, ೨೪೦೦ಮತ್ತು ೧೨೦೦ ದಿವ್ಯ ವರ್ಷಮಾನಗಳಿದ್ದ ಕೃತ, ತ್ರೇತಾ, ದ್ವಾಪರ ಮತ್ತು ಕಲಿ ಎಂಬ ಹೆಸರಿನ ಯುಗಗಳಿಗನುಸಾರವಾದ ಕಾಲಗಣನೆಯೂ, ಉತ್ತರ ಭಾರತದಲ್ಲಿ ಸರ್ವತ್ರ ಪ್ರಚಲಿತವಾದ ತರುವಾಯ ವೈಷ್ಣವ ಧರ್ಮವು ಪೂರ್ಣ ವಿಕಸಿತವಾಗಿ ಯವನರಿಂದ ಪ್ರಚಲಿತವಾದ ಭಾಗವತ ಧರ್ಮದೊಳಗಿನ ವಾಸುದೇವನು ಕೃಷ್ಣನಾಗಿ ಮಾರ್ಪಟ್ಟು ಪಂಚರಾತ್ರ ವಿಧಿಗನುಸಾರವಾದ ಪೂಜಾ ಕ್ರಮವು ಪ್ರಚಲಿತವಾದ ತರುವಾಯ ಅಂದರೆ ಪ್ರಸಿದ್ಧ ಜ್ಯೋತಿಷಿ ಆಚಾರ್ಯ ವರಾಹಮಿಹಿರನು ಗತಿಸಿದ ತರುವಾಯ ಶಕದ ಆರನೆಯ ಶತಮಾನದ ಆದಿ ಭಾಗದಲ್ಲಿ ರಚಿಸಲ್ಪಟ್ಟಿದ್ದಿತೆಂದು ಸಂದೇಹವಿಲ್ಲದೇ ನಿರ್ಧರಿಸಬಹುದಾಗಿದೆ.

ಹಾಗೆಯೇ ಮಹಾಭಾರತದೊಳಗಿನ ಕಥೆಗಳ ಮೂಲವು ಮತ್ತು ನಾಯಕರ ಹೆಸರುಗಳು ವೈದಿಕ ಸಾಹಿತ್ಯದಲ್ಲಿ ಇದ್ದುವುಗಳೇ ಆಗಿದ್ದು ಮಹಾಭಾರತಕಾರನು ಅವುಗಳ ಆಧಾರದಿಂದ ಹಲವು ಕಥೆಗಳನ್ನು ಕಟ್ಟಿದ್ದನೆಂದು ಮತ್ತು ಅವನ ಕಾಲದಲ್ಲಿ ಪ್ರಚಲಿತವಿದ್ದ ಸಕಲ ಜಾನಪದ ಕಥೆಗಳನ್ನು, ಮತ್ತು ಸಕಲ ಗ್ರಂಥಗಳೊಳಗಿನ ಮುಖ್ಯ ವಿಷಯಗಳನ್ನು ಅದರಲ್ಲಿ ಸಂಗ್ರಹಿಸಿ ಅದಕ್ಕೆ ವಿಶ್ವಕೋಶದ ರೂಪವನ್ನು ಕೊಟ್ಟಿದ್ದನೆಂದು ಮತ್ತು ಕೌರವ-ಪಾಂಡವರ ಯುದ್ಧವೆಂಬುದು ಅಪ್ಪಟ ಕಲ್ಪನೆಯೆಂದು ಅಥವಾ ಮಹಾಭಾರತ ಕಾವ್ಯವು ವಾಸ್ತವಿಕ ಇತಿಹಾಸವಲ್ಲವೆಂದು ನಿರ್ಧರಿಸಲು ಯಾವ ಅಭ್ಯಂತರವೂ ಇಲ್ಲ.

ಆದರೆ ದೇವ ದೇವನಾದ ವಾಸುದೇವನು ಮಹಾಭಾರತ ಕಾವ್ಯದ ರಚನೆಗಿಂತ ಮೊದಲಿನಿಂದಲೂ ಇದ್ದವನಾದುದರಿಂದ ಅವನನ್ನು ಮಾತ್ರ ಕಲ್ಪಿತನೆನ್ನಲಾಗುವುದಿಲ್ಲ. ಅವನು ಪ್ರತ್ಯಕ್ಷನೂ, ಸತ್ಯ ಸ್ವರೂಪನೂ ಶಾಶ್ವತನೂ, ಆಗಿದ್ದಾನೆ. ಅಂದರೆ ಋಗ್ವೇದದಲ್ಲಿ ಅಗ್ನಿಯೇ ಅನೇಕ ಸರ್ತಿ "ವಸು"[1] ಎಂದು ಕರೆಯಲ್ಪಟ್ಟ

---

1 ಅಚ್ಛಾ ನೋ ಅಗ್ನಿಮವಸೇ ದೇವಂ ಗಾಸಿ ಸ ನೋ ವಸುಃ।
ರಾಸತ್ ಪುತ್ರ ಋಷೂಣಾಮೃತಾವಾ ಪರ್ಷತಿ ದ್ವಿಷಃ ॥ಋ. ೫-೨೫-೧॥

2 ತ್ವಮಗ್ನೆ ಇಂದ್ರೋ ವೃಷಭಃ ಸತಾಮಸಿ
ತ್ವಂ ವಿಷ್ಣುರುರುಗಾಯೋ ನಮಸ್ಯಃ।
ತ್ವಂ ಬ್ರಹ್ಮಾ ರಯಿವಿದ್ ಬ್ರಹ್ಮಣಸ್ಪತೇ
ತ್ವಂ ವಿಧರ್ತಃ ಸಚಸೇ ಪುರಂಧ್ಯಾ ॥ ಋ. ೨-೧-೩॥

"ದೇವನಾಗಿದ್ದಾನೆ" ಮತ್ತು ಋಗ್ವೇದದ ಪ್ರಕಾರ **"ಸೂರ್ಯನು"** ಅಥವಾ "ವಿಷ್ಣುವು"[3] ಅಗ್ನಿಯು ಬೇರೊಂದು ರೂಪವಾಗಿದ್ದಾನೆ. ಅರ್ಥಾತ್ **"ಅಗ್ನಿಯು ವಸುದೇವನಾಗಿದ್ದು ಸೂರ್ಯನು ವಾಸುದೇವನಾಗಿದ್ದಾನೆ."** ಆದುದರಿಂದ ಮಹಾಭಾರತ ಕಾವ್ಯವು ವಾಸ್ತವಿಕ ಇತಿಹಾಸವಲ್ಲ ಕಲ್ಪಿತ ಕಥೆಗಳ ಸಂಗ್ರಹ ಎಂಬ ಕಾರಣದಿಂದ ಹಲವು ಶತಮಾನಗಳ ಹಿಂದಿನಿಂದ ಸಾಗಿ ಬಂದಿರುವ ವಾಸುದೇವನ ಅಥವಾ ಕೃಷ್ಣನ ಆರಾಧನೆಯನ್ನು ನಾವು ತ್ಯಜಿಸಬೇಕಾಗಿಲ್ಲ. ಮತ್ತು ಆ ಕಾವ್ಯದೊಳಗೆ ಬೋಧಿಸಲ್ಪಟ್ಟಿರುವ ನೀತಿ ಮತ್ತು ಧರ್ಮಗಳನ್ನು ಕಡೆಗಣಿಸಬೇಕಾಗಿಲ್ಲ ಮತ್ತು ಹಾಗೆ ಮಾಡುವುದು ಉಚಿತವೂ ಅಲ್ಲ.

ಸಹಾಯಕ ಗ್ರಂಥಗಳು

1. ಭಾರತೀಯ ಪ್ರಾಚೀನ ಲಿಪಿಮಾಲಾ -ಶ್ರೀ ಗೌರೀಶಂಕರ ಹಿರಾಚಂದ ಓಝಾ
2. Inscription of Asoka -Sri R. D. Bhandarkar M. A.
3. Elements of South Indian Palaeography -Dr. A. C. Burnell
4. Indian Palaeography -Prof. George Buhler
5. On the Origin of Indian Bhrahma Alphabet -do
6. Indian Palaeography -Dr. Rajbali Pandey M. A. D. Litt
7. History and Palaeography of the Mauryan Bhrahma Alphabet -Dr. Chandrika Singh Upasak M. A. Ph. D.
8. Early South Indian Palaeography -T. V. Mahalingam M. A. D. Litt
9. Pre-Asokam Brahmi -A. B. Walawalker
10. ಕನ್ನಡ ಲಿಪಿಯ ಉಗಮ ಮತ್ತು ವಿಕಾಸ -ಏ. ವಿ. ನರಸಿಂಹ ಮೂರ್ತಿ
11. Story of Alphabet -Edward Clodd
12. Indus Script-My Method of Study -Sudhanshu Kumar Ray
13. Numerical Signs of the Mohenjo-daro-Script -Allan, S. C. Ross
14. ಹರಪ್ಪಾ -ಡಾಕ್ಟರ್ ಶೇಷಾದ್ರಿ
15. ಹಳಪ್ಪಾ (ಹಿಂದಿ) -ಕೇದಾರನಾಥ ಶಾಸ್ತ್ರೀ
16 Excavations at Harappa -Madho Sarup Vats
17. Mohenjo-daro and Indus Valley Civilization -Sir John Marshall
18. Further excavations at Mohenjo-daro -Dr. E. J. H. Mackay
19. Indus-Civilization -Sir Mortimer Wheeler
20. Excavations at Ur -Sir Leonard Wooley
21. Indian Archaeology-to day -H. D. Sankalai
22. Expansion of Indo-Aryan Culture -Dr. B. Ch. Chhabra M. A. M. O. L.
23. The Swastika and Other Symbols -Carroline Koffel

24. Real History of the Swastika -Rev. Norman Walker B. D. Hons
25. Arctic Home in the Vadas -B. G. Tilak
26. Polar Exploration -William S. Bruce
27. Day-light, Twilight, Darkness and Time -Lucia Harrison
28. Aryan Mythology -George W. Cox M. A.
29. Oxford History of India -Vincent A. Smith M. A.
30. India at the time of Panini -V. S. Agarwal M. A.
31. India in the time of Patanjali -B. N. Puri
32. Ancient India -V. D. Mahajan M. A.
33. A History of Pre-Musalman India -V. Rangacharya M. A.
34. Pre-Historic, Ancient and Hindu India -R. D. Banerjee M. A.
35. A History of India K. A. Nilakanta Sastri M. A.
36. A History of South India do
37. Age of the Nandas and Mauryas do
38. A Survey of Indian History -K. M. Panikkar
39. Early History of the Deccan -Sir R. G. Bhandarkar M. A.
40. A History of Greece -J, B. Bury
41. History of Rome -M. A. Candeth
42. Civilizations of the Ancient World -B. M. Ichlangod
43. A History of Indian Literature -Dr. Albert weber
44. A History of Sanskrit Literature -Prof. A. B. Rieth
45. A History of Sanskrit Literature -A. A. Mac Donnel
46. Sanskrit and Culture -Theodor Goldstuker
47. Religious Quest of India Mrs. Sinclair Slevenson M. A.
48. The Grion -B. G. Tilak
49. Vedic Chronology do
50. Indian Chronology D. S. Triveda M. A. Ph. D.
51. Vedanga Jyautisha -Dr. Sham Sastri B. A.
52. Popular Hindu Astronomy -Kalinatha Mukerji
53. Observer's Book of Astronomy -Patrick Moore F. R. A. S.

54. The Report of the Calendar Reform Committee
Government of India
55. ಜ್ಯೋತಿರ್ವಿನೋದಿನೀ -ನಂಗಪುರಂ ವೆಂಕಟೇಶ ಅಯ್ಯಂಗಾರ್ ಬಿ. ಎ.
56. ಭಾರತೀಯ ಜ್ಯೋತಿಷ–ಅಥವಾ ಭಾರತೀಯ ಜ್ಯೋತಿಷಾಚಾ
ಪ್ರಾಚೀನ ಆಣಿ ಅರ್ವಾಚೀನ ಇತಿಹಾಸ
–ಶಂಕರ ಬಾಳಕೃಷ್ಣ ದೀಕ್ಷಿತ
57. ಸಿದ್ಧಾಂತ ಶಿರೋಮಣಿ -ಆಚಾರ್ಯ ಭಾಸ್ಕರ
58. ಪಂಚ ಸಿದ್ಧಾಂತಿಕಾ -ಆಚಾರ್ಯ ವರಾಹಮಿಹಿರ
59. ಬೃಹತ್ ಸಂಹಿತಾ " "
60. The History of Hindu Mathematics
-Dutt and Singh
61. ಗಣಿತ ಶಾಸ್ತ್ರದ ಚರಿತ್ರೆ
-ಸಿ. ಎನ್. ಶ್ರೀನಿವಾಸಯ್ಯಾಂಗಾರ್ಯ ಮೈಸೂರು
62. Scientists of Ancient India -Dr. G. P. Jaggy
63. The Story of Language -C. L. Baker
64. ಭಾರತೀಯ ಆರ್ಯ ಭಾಷಾ (ಹಿಂದಿ)
(ಮೂಲ-ಫ್ರೆಂಚ್ ಜೂಲ್ ಬ್ಲಾಖ್)
65. ಭಾಷಾ ವಿಜ್ಞಾನ (ಹಿಂದಿ) -ಡಾ. ಶ್ಯಾಮಸುಂದರ ದಾಸ್ ಎಮ್ ಎ.
66. ದ್ರಾವಿಡ ಭಾಷಾ ವಿಜ್ಞಾನ -ಹಂಪನಾಗರಾಜಯ್ಯ
67. Lectures on the Science of Language
-Prof. Fr. Max Muller
68. ಭಾಷಾ ವಿಜ್ಞಾನ —(ಮೆಕ್ಸ್‌ಮುಲ್ಲರರ ಪುಸ್ತಕದ ಹಿಂದೀ ಅನುವಾದ)
69. ಅಷ್ಟಾಧ್ಯಾಯಿ ಸೂತ್ರಪಾಠ –ಮಹರ್ಷಿ ಪಾಣಿನಿ
70. ಸಂಸ್ಕೃತ ವ್ಯಾಕರಣ ಮೇಂಗಣ ಪಾಠಕೀ ಪರಂಪರಾ
-ಡಾ. ಕಪಿಲದೇವ ಶಾಸ್ತ್ರೀ
71. ಮಹಾಭಾಷ್ಯ -ಆಚಾರ್ಯ ಪತಂಜಲಿ
72. ಸಿದ್ಧಾಂತ ಕೌಮುದೀ -ಭಟ್ಟೋಜೀ ದೀಕ್ಷಿತ್
73. A Comparative Grammar of Dravidian
or South Indian Family of Languages
-Rev. Robert Caldwell D. D. LL. D.
74. History of Kannada Language
-Dr. R. Narasimhachar M. A.
75. ಕನ್ನಡ ಭಾಷಾ ಶಾಸ್ತ್ರ –ಪ್ರ ರಾ. ಯ. ಧಾರವಾಡಕರ್

76. ಋಗ್ವೇದ ಸಂಹಿತಾ (ಬಾಷ್ಕಲ ಶಾಖೆ) -ನಿರ್ಣಯ ಸಾಗರ ಮುದ್ರಾಲಯ
77. ಋಗ್ವೇದ ಸಂಹಿತಾ (do)
-ಆಚಾರ್ಯ ಶ್ರೀಪಾದ ದಾಮೋದರ ಸಾತವಳೇಕರ್
78. ಋಗ್ವೇದ ಸಂಹಿತಾ (20 ಭಾಗಗಳು) ಸಾಯಣ ಭಾಷ್ಯ-ಕನ್ನಡ ಅರ್ಥ ಸಹಿತ
-ಆಸ್ಥಾನ ಮಹಾವಿದ್ವಾನ್ ಎಚ್. ಪಿ. ವೆಂಕಟರಾವ್
79. Rigveda, Samhita (in 4 volumes) together with the commentary of Sayana
-Prof. Fr. Max Muller
80. Rig-Veda Samhita (5 Vols) English translaticn only
-Prof. H. H. Wilson
81. Hymns of Rig-Veda (2 Vols) English translation only
-Prof. Relf T. H. Griffith
82. ಋಗ್ವೇದ ಸಂಹಿತಾ (ಶಾಕಲ ಶಾಖೆ) ಮರಾಠಿ ಅರ್ಥ ಸಹಿತ
-ರಾಮಚಂದ್ರ ವಿನಾಯಕ ಪಟವರ್ಧನ
83. ಐತರೇಯ ಬ್ರಾಹ್ಮಣಮ್ –ನಿರ್ಣಯಸಾಗರ ಮುದ್ರಾಲಯ
84. ಐತರೇಯ ಬ್ರಾಹ್ಮಣ (ಹಿಂದೀ ಭಾಷಾಂತರ)
-ಪಂ. ಗಂಗಾಸಿಂಹ ಉಪಾಧ್ಯಾಯ, ಎಮ್. ಏ.
85. The Aitareya Brahman (ಇಂಗ್ಲೀಷ್ ಭಾಷಾಂತರ)
-Prof. A. B. Keith
86. The Aitareya Aranyaka (ಮೂಲ ಮತ್ತು ಇಂಗ್ಲಿಷ್ ಭಾಷಾಂತರ)
–A. B. Keith
87. The Kausitaki Brahmana (ಇಂಗ್ಲಿಷ್ ಭಾಷಾಂತರ ಮಾತ್ರ) "
88. ತೈತ್ತಿರೀಯ ಸಂಹಿತಾ
-ಆಚಾರ್ಯ ಶ್ರೀಪಾದ ದಾಮೋದರ ಸಾತವಳೇಕರ
89. ತೈತ್ತಿರೀಯ ಬ್ರಾಹ್ಮಣಮ್ (2 ಭಾಗಗಳು)
-ಆನಂದಾಶ್ರಮ ಮುದ್ರಣಾಲಯ ಪೂನ
90. ತೈತ್ತಿರೀಯ ಆರಣ್ಯಕಮ್
-ನಾವಿಳ್ಳ ರಾಮಸ್ವಾಮಿ ಶಾಸ್ತ್ರುಲು ಮದ್ರಾಸ್
91. ವಾಜಸನೇಯಿೞ ಸಂಹಿತಾ
--ಆಚಾರ್ಯ ಶ್ರೀಪಾದ ದಾಮೋದರ ಸಾತವಳೇಕರ್
92. The Text of White Yagurveda
-Prof. Rolph T. H. Griffith
93. ಶತಪಥ ಬ್ರಾಹ್ಮಣಮ್ ಸಾಯಣ ಭಾಷ್ಯ ಸಹಿತ -Dr Albert Weber

94. Satapatha Brahmana (5 Vols English translation)
-Prof: Julius Eggeling

95. ಸಾಮವೇದ ಹಿಂದೀ ಭಾಷಾಂತರ ಸಹಿತ ·ಸ್ವಾಮಿೂ ತುಲಸಿರಾವ್ ವಿೂರತ್

96. ಸಾಮವೇದ –ಆಚಾರ್ಯ ಶ್ರೀಪಾದ ದಾಮೋದರ ಸಾತವಳೇಕರ್

97. ಪಂಚವಿಂಶ (ಅಥವಾ ತಾಂಡ್ಯ) ಬ್ರಾಹ್ಮಣವ್
-ಚೌಖಂಬಾ ಸಂಸ್ಕೃತ ಸಿರೀಜ್ ಬನಾರಸ್

98. ಆರ್ಷೇಯ ಬ್ರಾಹ್ಮಣವ್ -Dr. A. C. Burnell

99. do ಜೈಮಿನೀಯ do

100. ಸಂಹಿತೋಪನಿಷದ್ ಬ್ರಾಹ್ಮಣವ್ do

101. ಅಥರ್ವವೇದ -ಆಚಾರ್ಯ ಶ್ರೀಪಾದ ದಾಮೋದರ ಸಾತವಳೇಕರ್

102. Hymns of Atharva Veda (2 Vols)
-Prof. Relph T. H. Griffith

103. ಅಥರ್ವವೇದ ಔರ್ ಗೋಪಥ ಬ್ರಾಹ್ಮಣ -ಸೂರ್ಯಕಾಂತ

104. ಋಗನುಕ್ರಮಣಿಕಾ ·University of Madras

105. ಋಗ್ವೇದಾನುಕ್ರಮಣಿ –ಮಾಧವ ಭಟ್ಟ

106. Contributions to the interpretation of the Rig-Veda
-A. Venkatasubbiah

107. ವಾಜಸನೇಯಿ ಪ್ರಾತಿಶಾಖ್ಯವ್ -University of Madras

108. ಶುಕ್ಲ ಯಜುಃ ಪ್ರಾತಿಶಾಖ್ಯವ್ -ಶ್ರೀಮತಿ ಇಂದು ರಸ್ತೋಗಿ M. A.

109. ಶಿಕ್ಷಾದಿ ವೇದಷಡಂಗಾನಿ -ನಿರ್ಣಯಸಾಗರ ಮುದ್ರಾಲಯ

110. ಶ್ರೌತಕೋಶ (ಮೊದಲನೆಯ ಭಾಗ)-ವೈದಿಕ ಸಂಶೋಧನ ಮಂಡಲ ಪೂನ

111. ಅಶ್ವಲಾಯನ ಗೃಹ್ಯಸೂತ್ರವ್
-ಮ. ಟಿ. ಕೆ. ಗಣಪತಿ ಶಾಸ್ತ್ರಿ ತ್ರಿವಂದ್ರವ್

112. ಗೌತಮ ಧರ್ಮ ಸೂತ್ರಾಣಿ (ಹಿಂದೀ ಭಾಷಾಂತರ ಸಹಿತ)
–ಚೌಖಂಬಾ ಸಂಸ್ಕೃತ ಸಿರೀಜ್

113. ಆಪಸ್ತಂಬ ಧರ್ಮ ಸೂತ್ರವ್
-ಪಂಡಿತ ಆರ್. ಹಲಾಸ್ಯನಾಥ ಶಾಸ್ತ್ರೀ ಕುಂಭಕೋಣವ್

114 ಆಪಸ್ತಂಬ ಗೃಹ್ಯ ಸೂತ್ರವ್ ವಾವಿಳ್ಲ ರಾಮಸ್ವಾಮಿ ಶಾಸ್ತ್ರುಲು ಮದ್ರಾಸು

115. ಆಪಸ್ತಂಬ ಶುಲ್ಬಸೂತ್ರವ್ -D. Srinivasachar M, A,

116. The Grihya Sutras P. I. -Hermann Oldenberg

117 do Part II do

118. ಬೃಹದ್ದೇವತಾ (2 ಭಾಗಗಳು) ಇಂಗ್ಲಿಷ್ ಭಾಷಾಂತರ ಸಹಿತ
-Prof, A. A. Mac Donnel

119. ನಿಘಂಟು-ನಿರುಕ್ತವ್-ಸಂಸ್ಕೃತ ಟೀಕೆ-ಹಿಂದೀ ಭಾಷಾಂತರ ಸಹಿತ

120. ಚರಣ ವ್ಯೂಹ -ಚೌಖಂಬಾ ಸಂಸ್ಕೃತ ಸಿರೀಜ್

121. ಕರ್ಮ ಪ್ರದೀಪ -Calcutta Printing Press

122. ಖಾದಿರ ಗೃಹ್ಯಸೂತ್ರ

123. ಪಾರಸ್ಕರ ಗೃಹ್ಯ ಸೂತ್ರ

124. ಗೋಭಿಲಿಗೃಸೂತ್ರ

125. ಸಮಂತ್ರಕ ಪ್ರಯೋಗ ರತ್ನಮ್ -ಭಟ್ಟ ನಾರಾಯಣ

126. ಷೋಡಷ ಸಂಸ್ಕಾರ ರತ್ನಮಾಲಾ
–ಬಾಲಶಾಸ್ತ್ರೀ ರಾವಜೀಶಾಸ್ತ್ರಿ ಕ್ಷೀರಸಾಗರ

127. ಪ್ರತಿಮಾ ಲಕ್ಷಣಮ್ –ಡಾ. ದ್ವಿಜೇಂದ್ರನಾಥ ಶುಕ್ಲ

128. ಪ್ರತಿಮಾ ವಿಜ್ಞಾನ "

129. ವಿಮಾನಾರ್ಚನಾಕಲ್ಪ (ವೈಖಾನಸಾಗಮ)
ಶ್ರೀ ವೆಂಕಟೇಶ್ವರ ಮುದ್ರಣಾಲಯ

130. ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ –ಡಾ। ಚಿದಾನಂದ ಮೂರ್ತಿ

131. ಮಹಾಭಾರತ (ನಾಗರೀ ಲಿಪಿ) ಔತ್ತರೇಯ ಪಾಠ

132. ಮಹಾಭಾರತ (ತೆಲುಗು ಲಿಪಿ) ದಾಕ್ಷಿಣಾತ್ಯ ಪಾಠ

ಆರು ವೇದಾಂಗಗಳು

133. ಶಿಕ್ಷಾ 134. ಕಲ್ಪ 135. ಜ್ಯೋತಿಷ 136. ವ್ಯಾಕರಣ

137. ಛಂದಸ್ಸು 138. ನಿರುಕ್ತ

ಆರು ಉಪಾಂಗಗಳು

139. ನ್ಯಾಯ 140. ವೈಶೇಷಿಕ 141. ಸಾಂಖ್ಯ

142. ಯೋಗ 143. ಮೀಮಾಂಸ 144. ವೇದಾಂತ (ಬ್ರಹ್ಮಸೂತ್ರ)


145. Somanatha the Shrine Eternal -K. M. Munshi

146. Encyclopaedia Britanica

147. World Book Encyclopedia

148. A Sanskrit English Dictionary
-Sir Monier M. Williams

ಬ್ರಾಹ್ಮೀ ವರ್ಣಮಾಲೆ



ಮುದ್ರಕರು: ಶ್ರೀ ಗಣೇಶ್ ಪ್ರಿಂಟರ್ಸ್, ಆಳಕೆ, ಮಂಗಳೂರು-575 003.